ಗ್ರಂಥಾಲಯ
Acc.No 1933
037
1/87

ಶಿವಾನುಭವ.

The Vijay College
LIBRARY,
VIJAY COLLEGE,
BIJAPUR.

ವರ್ಷ ೧೦] ಜೂನ ೧೯೩೫ [ಸಂಚಿಕೆ ೧

ಮಹಾದೇವಿಯಕ್ಕ.

(ಪ್ರೊ|| ಕೆ. ಜಿ. ಕುಂಟಣಗಾರ ಎಮ್. ಎ. ಕನ್ನಡ ಪ್ರಾಧ್ಯಾಪಕರು
ರಾಜಾರಾಮ ಕಾಲೇಜ ಕೊಲ್ಹಾಪುರ.)

ಮಹಾದೇವಿಯಕ್ಕನ ಚರಿತ್ರವು ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಅಡಕವಾಗಿದೆ. ಅದನ್ನೇ ಅನುಸರಿಸಿ ರಾವಸಾಹೇಬ ಹಳಕಟ್ಟಿಯವರು ತಮ್ಮ ಮಹಾದೇವಿಯಕ್ಕನ ವಚನಗಳೆಂಬ ಚಿಕ್ಕ ಪುಸ್ತಕದ ಪ್ರಸ್ತಾವನೆಯಲ್ಲಿ ಅಕ್ಕನವರ ಚರಿತ್ರವನ್ನು ಬರೆದಿದ್ದಾರೆ. ಮಹಾವ.ಹೋ ಪಾಧ್ಯಾಯ ಆರ್. ನರಸಿಂಹಾಚಾರ್ಯರವರೂ ಇದೇ ಆಧಾರದ ಮೇಲಿಂದ ಅವರ ಚರಿತ್ರವನ್ನು ಬರೆದಿರುವಂತೆ ತೋರುತ್ತದೆ. ಚನ್ನಬಸವಾಂಕನ ಮಹಾದೇವಿಯಕ್ಕನ ಪುರಾಣವು ಪ್ರಕಟವಾಗಿಲ್ಲ. ಹರಿಹರಾಚಾರ್ಯನ ಮಹಾದೇವಿಯಕ್ಕನ ರಗಳೆಯೂ ಪ್ರಕಟವಾಗಿಲ್ಲ. ಆದುದರಿಂದ ಅಕ್ಕನವರ ಚರಿತ್ರವು ಅಪೂರ್ಣವಾಗಿ ಈ ವರೆಗೆ ಉಳಿಯಬೇಕಾಯಿತು. ಇದು ಬಾಹ್ಯ ಪ್ರಮಾಣಗಳ ಮೇಲಿಂದ ಆಗಬೇಕಾದ ಸಂಶೋಧನೆ. ಅಂತರ ಪ್ರಮಾಣಗಳು ಎರಡು ಮಾತ್ರ ದೊರೆಯುತ್ತವೆ. "ಅರಿಸಿನವಸೆ ವಿಂದು" ಎಂದು ಅವರು ಹೇಳಿರುವಾಗ ಅವರು ಮೈಸೂರು ಪ್ರಾಂತದವರಾಗಿರಬೇಕೆಂದು ತೋರುತ್ತದೆ. ಯಾಕಂದರೆ ಮೈಸೂರು ಪ್ರಾಂತದಲ್ಲಿ ಅರಿಸಿನ ವೀಯುವ ಪದ್ಧತಿ (ಅರಸಿನ ಲೇಪನ ಪದ್ಧತಿ) ಯಿದೆ. ಮತ್ತೊಂದು ಆಧಾರವೆಂದರೆ ಅವರು ಉದಹರಿಸಿದ ಆಗಮವಾಕ್ಯಗಳು, ಮತ್ತು ಕನ್ನಡ ವಾಙ್ಮಯದಲ್ಲಿನ ಪದ್ಯಗಳಿಗೆ ಸರಿಹೋಗುವ ವಿಚಾರಗಳು. ಇವುಗಳ ಮೇಲಿಂದ ಅವರು ವಿದ್ಯಾಭ್ಯಾಸ ಮಾಡಿದವರಾಗಿ ಪಂಡಿತೆಯರಾಗಿದ್ದರೆಂದು ಹೇಳಬೇಕಾಗುತ್ತದೆ. ಇಷ್ಟರ ಮೇಲಿಂದ ಅವರ ಚರಿತ್ರೆಯನ್ನು

ಹೆಚ್ಚು ತಿಳಿದುಕೊಳ್ಳಬೇಕೆಂಬ ಲವಲವಿಕೆಯುಳ್ಳ ಜನರ ಸಮಾಧಾನ ವಾಗುವುದಿಲ್ಲ. ಆದುದರಿಂದ ಉಡುತಡಿಯಲ್ಲಿ ಆಳುತ್ತಿರುವ ಅರಸು ಕೌಸಿ ಕನು ಯಾರು? ಯಾವ ವಂಶಕ್ಕೆ ಸೇರಿದವನು? ಎಂದು ಅಳಿದನು? ಅಕ್ಕನವರು ಹುಟ್ಟಿದುದು ಎಂದು? ಅವರ ವಿದ್ಯಾಭ್ಯಾಸವೆಲ್ಲಿಯಾಯಿತು? ಕಲ್ಯಾಣಕ್ಕೆ ಎಂದು ಬಂದರು? ಬಸವಣ್ಣನವರ ಗುರುತು ಹೇಗಾ ಯಿತು? ಶಿವಶರಣರು ಅಕ್ಕನವರನ್ನು ಹೇಗೆ ಪರೀಕ್ಷಿಸಿದರು? ಇವೇ ಮುಂತಾದ ಸಂಗತಿಗಳು ತಿಳಿಯಬೇಕಾಗಿವೆ. ಈ ವಿಷಯದಲ್ಲಿ ಸಂಶೋ ಧನವು ಸಂಪೂರ್ಣವಾಗಿ ನಡೆಯಬೇಕು. ಕನ್ನಡ ಸಾಹಿತ್ಯದಲ್ಲಿ ಅಕ್ಕನ ವರಂತಹ ಉಜ್ವಲ ಸಾಹಿತಿಗಳನ್ನು ಕಡೆಗಾಣಿಸಿ ಮುಂದೆ ಹೋಗು ವಂತಿಲ್ಲ. ನಮ್ಮ ಕಾರ್ಯವನ್ನು ಅಕ್ಕನವರ ಭಾಷೆಯಿಂದಲೇ ಹೇಳಬೇ ಕಾಗಿದೆ.

"ಅಮ್ಮಾ ಸಂಶೋಧನಗಳು ಸಾಗಿದರೆ ಸಾಗುಗೆ, ಸಾಗದಿದ್ದೋಡೆ ಮಾಣುಗೆ. ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನವ್ವಾ ಅವ್ವಾ ನೀ ಬುದ್ಧಿಯನ್ನು ಕೊಟ್ಟರೆ ಕೊಡು, ಕೊಡದಿದ್ದರೆ ಮಾಣು. ನಾ ನಿನ್ನ ವಚ ನಗಳನ್ನೋದಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನವ್ವಾ ಅವ್ವಾ ನಾ ನಿನ್ನ ನುತಿಸಿ ಹರುಷದೊಳೋಲಾಡುವೆನವ್ವಾ"

ಇನ್ನು ಮೇಲೆ ಅಕ್ಕನವರ ವಚನಗಳ ಕಡೆಗೆ ತೆರಳುವ.

ಸಾಹಿತ್ಯದ ಏಳ್ಗೆಗೆ ಜನಜೀವನವು ಆಧಾರವಾಗಿದ್ದಂತೆ ರಾಷ್ಟ್ರದ ಏಳ್ಗೆಗೆ ಸಾಹಿತ್ಯವೂ ಆಧಾರವಾಗಿರುತ್ತದೆಂಬ ಸಂಗತಿಯನ್ನು ಮರೆಯ ಲಾಗದು. ಇದು ಸರ್ವಸಾಮಾನ್ಯವಾದ ತತ್ವವು. ಎಲ್ಲ ರಾಷ್ಟ್ರಗಳಿಗೆ ಸರಿಯಾಗಿ ಅನ್ವಯಿಸುವುದು. ಮಾತ್ರ ಏಳ್ಗೆಯ ವಿಚಾರವು ಎಲ್ಲ ರಾಷ್ಟ್ರ ಗಳಲ್ಲಿ ಒಂದೇ ಎಂದು ಹೇಳಲಾಗುವುದಿಲ್ಲ. ಕೆಲವು ರಾಷ್ಟ್ರಗಳಲ್ಲಿ ಭೌತಿಕಜ್ಞಾನಕ್ಕೆ ಹೆಚ್ಚು ಮಹತ್ವವು ದೊರೆತು ಜನರೆಲ್ಲರು ಸಂಸಾರ ಸುಖಕ್ಕೆ ಮೆಟ್ಟಿ ಭವಿಗಳಾಗಿರಬಹುದು. ಮತ್ತೊಂದು ರಾಷ್ಟ್ರದಲ್ಲಿ ಒಂದು ಬದಿಯಲ್ಲಿ ಭೌತಿಕಜ್ಞಾನಕ್ಕೆ ಕೆಲಮಟ್ಟಿಗೆ ಗಮನಕೊಟ್ಟು ಪಾರಮಾರ್ಥಿಕ ಸುಖ ಅಥವಾ ಮೋಕ್ಷಸುಖಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿರಬಹುದು. ಹಿಂದುಸ್ತಾನವು ಇವುಗಳಲ್ಲಿ ಎರಡನೆಯ ಮಾರ್ಗವನ್ನು ಅನ್ವಯಿಸುತ್ತದೆ. ಹಿಂದುಸ್ತಾನದೊಳಗಿನ ಯಾವುದೇ ಭಾಷೆಯ ಸಾಹಿತ್ಯವನ್ನು ತೆಗೆದು ಕೊಂಡರೆ ಅಹರ ತಳಹದಿಯು ಧರ್ಮವೆಂದು ಕಂಡುಬರುತ್ತದೆ. ಅನರ

ಲ್ಲಿಯೂ ಕರ್ನಾಟಕದಲ್ಲಿ ಧರ್ಮಸ್ಥಾಪಕರೂ ಧರ್ಮಸಂಧಾರಕರೂ ಬಹಳ ಜನರಾಗಿ ಹೋಗಿರುವುದರಿಂದ ಕನ್ನಡ ಸಾಹಿತ್ಯವು ಬೇರೆ ಬೇರೆ ಧರ್ಮ ಗಳನ್ನು ಸುತ್ತಿಕೊಂಡಿದೆ. ಈ ಕಾರಣದಿಂದಲೇ ಕನ್ನಡ ಸಾಹಿತ್ಯದಲ್ಲಿ ಜೈನಯುಗ, ವೀರಶೈವಯುಗ, ಬ್ರಾಹ್ಮಣಯುಗ ಮುಂತಾಗಿ ಆ ಸಾಹಿ ತ್ಯವನ್ನು ವಿಂಗಡಿಸುವುದುಂಟು.

ಗೌತಮಬುದ್ಧಪ್ರಣೀತವಾದ ಧರ್ಮದಲ್ಲಿ ಕಟ್ಟು ಶಿಥಿಲವಾಗಿದ್ದುದ ದರಿಂದ ಹಿಂದುಸ್ತಾನದಲ್ಲಿ ಅದರ ಅಸ್ತಿತ್ವವೇ ಉಳಿಯಲಿಲ್ಲ. ಜೈನಧ ರ್ಮದಲ್ಲಿ ವರ್ಣಾಶ್ರಮಗಳುಂಟಾದುದರಿಂದ ಭಿನ್ನ ಭಿನ್ನ ವಿಚಾರಗಳುಂ ಟಾದುದರಿಂದ ಅದರಲ್ಲಿನ ಕಟ್ಟು ಸಡಿಲಿತು. ಶಂಕರಾಚಾರ್ಯರ ಅದ್ವೈತ ಮತದಲ್ಲಿ ಭಕ್ತಿಗೆ ಸಾಕಷ್ಟು ಸ್ಥಲ ದೊರೆಯದಿದ್ದುದರಿಂದ ಮತ್ತು ವರ್ಣಾಶ್ರಮ ಧರ್ಮಗಳಿಗೆ ಪ್ರಾಧಾನ್ಯವಿದ್ದುದರಿಂದ ಜನರಲ್ಲಿ ಒಡಕು ಹುಟ್ಟಹತ್ತಿತು. ರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತದಲ್ಲಿ ದೇವವೈಶಿಷ್ಟ್ಯವು ಕಂಡುಬಂದುದರಿಂದ ಜನರಿಗೆ ಅದು ರುಚಿ ಸಲಿಲ್ಲ. ಆದರೆ ಬಸವಣ್ಣನವರು ಜೀರ್ಣೋದ್ಧಾರಗೊಳಿಸಿದ ವೀರಶೈವ ಮತದಲ್ಲಿ ಆ ಕಟ್ಟು ಎರಡು ರೀತಿಯಿಂದ ಬಿಗಿಯಾಗುವಂತಿತ್ತು. ಒಂದು ರೀತಿಯಲ್ಲಿ ಭಕ್ತಿಯು ಮುಖ್ಯವಾಗಿತ್ತು. ಮತ್ತೊಂದು ರೀತಿಯಲ್ಲಿ ಒಂದೇ ಒಂದು ಜಾತಿಯೆಂಬ ತತ್ವವು ಜನೈಕ್ಯಕ್ಕೆ ಸಹಾಯವಾಗುತ್ತಿತ್ತು. ವೀರ ಶೈವ ಷಟ್‌ಸ್ಥಲಶಾಸ್ತ್ರದ ಮೊದಲಿನ ಮೂರು ಸ್ಥಲಗಳಲ್ಲಿ ಸೇವ್ಯಸೇವಕ ಭೇದ ಅಥವಾ ದ್ವೈತಭಾವವಿರುವುದರಿಂದ ಭಕ್ತಿಗೆ ಸ್ವಾಭಾವಿಕವಾಗಿ ಸ್ಥಾನವು ದೊರೆಯಿತು ಕಡೆಯ ಮೂರು ಸ್ಥಲಗಳಲ್ಲಿ ಸಾಮರಸ್ಯವು ಮುಖ್ಯವಾಗಿದ್ದುದರಿಂದ ಅದ್ವೈತಮತಕ್ಕೆ ಪ್ರಾಧಾನ್ಯವಿದ್ದಿತು. ಸಾಂಖ್ಯ ಮತ್ತು ಯೋಗಮಾರ್ಗಗಳು ಇದರಲ್ಲಿ ತಾವಾಗಿಯೇ ಬಂದುಹೋಗು ತ್ತವೆ. ಇದು ವೀರಶೈವ ಧರ್ಮದ ಆಧ್ಯಾತ್ಮಿಕ ಭಾಗವು. ವ್ಯವಹಾ ರಿಕ ಅಥವಾ ಭೌತಿಕ ಭಾಗದಲ್ಲಿ ಬಸವಣ್ಣನವರು ಆ ಧರ್ಮವನ್ನು ಜೀರ್ಣೋದ್ಧಾರಗೊಳಿಸುವಾಗ ವರ್ಣಾಶ್ರಮಗಳನ್ನು ಅಥವಾ ಹದಿನೆಂಟು ಜಾತಿಗಳನ್ನಿಟ್ಟುಕೊಳ್ಳದೆ ಒಂದೇ ಒಂದು ಜಾತಿಯನ್ನು ಇಟ್ಟುಕೊಂಡು ದಕ್ಕೆ ಮತ್ತೊಂದು ಕಾರಣವಿದೆಯೆಂದು ಕಂಡುಬಂದಿದೆ. ಒಂದೇ ಒಂದು ಜಾತಿಯಿರುವುದರಿಂದ ರಾಷ್ಟ್ರದ ಏಳ್ಗೆಗೆ ಸಹಾಯವಾಗುತ್ತದೆಯೆಂದು ಅವರ ಕಲ್ಪನೆ. ಅವರ ಗುರಿಯು ಮಾತ್ರ ಸಾಧ್ಯವಾಗಲಿಲ್ಲ. ಇರಲಿ. ಬಸವ

ನವರ ವೀರಶೈವ ಧರ್ಮವು ಉಪನಿಷತ್ತುಗಳನ್ನು ಸರಿಗಟ್ಟುವ ವಚ
ಗ್ರಂಥಗಳನ್ನು ಕನ್ನಡಿಗರಿಗೆ ಒದಗಿಸಿಕೊಟ್ಟಿತೆಂಬ ಮಾತು ನಿರ್ವಿವಾದ
ಾಗಿದೆ. ಈ ವಚನವಾಙ್ಮಯದಲ್ಲಿ ಮಹಾದೇವಿಯಕ್ಕನವರ ವಚನಗಳು
ತ್ಯುಚ್ಚಪದವಿಯನ್ನು ಪಡೆದುಕೊಂಡಿವೆ. ಅದನ್ನೇ ಈಗ ಪರಿಶೀಲಿಸ
ೇಕಾಗಿದೆ.

ಅಕ್ಕನವರ ವಚನಗಳು ಗದ್ಯರೂಪವಾಗಿದ್ದರೂ ಪದ್ಯಗಳಿಗಿಂತ
ೇಲಾಗಿವೆ. ಪದ್ಯಗಳಲ್ಲಿ ಅಡಕವಾಗಿರಬಹುದಾದ ಭಾವೋದ್ದೀಪನವೂ
ಆವೇಶವೂ ಸ್ವಯಂಸ್ಫೂರ್ತಿಯಿಂದ ಇವುಗಳಲ್ಲಿ ಬಂದುಬಿಟ್ಟಿವೆ. ಊಹೆಗೆ
ಅವಕಾಶವಿಲ್ಲದೆ ಅಂತಃಕರಣದಲ್ಲಿ ಒಡಮೂಡಿ ಒತ್ತಿಬರುವ ಬಿಡಿನುಡಿ
ಗಳು ತಡೆಯಿಲ್ಲದ ವಾತಾವರಣದಲ್ಲಿ ಪಕ್ಷಿಗಳು ಆಕಾಶದವರೆಗೆ ಹಾರು
ತ್ತಿರುವಂತೆ ವೇಗವಾಗಿ ಸಾಗುತ್ತ ಹೋಗಿ ವಚನರೂಪಗಳನ್ನು ಧರಿಸು
ತ್ತವೆ. ಅಕ್ಕನವರ ವಚನಗಳಲ್ಲಿ ಮತ್ತು ಸುಕವಿಗಳ ಪದ್ಯಗಳಲ್ಲಿ ಅಂತ
ರವಿಷ್ಟೇ. ವಿಷಯವು ಎಂತಹದಿದ್ದರೂ ಕವಿಯು ಅದರಲ್ಲಿ ತಲ್ಲೀನನಾ
ಗುತ್ತಾನೆ. ಅಕ್ಕನವರ ವಿಷಯವು ಸಾಮರಸ್ಯವು. ಅದನ್ನು ಪಡೆಯ
ೇಕೆಂಬ, ಪಡೆದು ಆನಂದಿಸಬೇಕೆಂಬ ಉತ್ಕಟವಾದ ಬಯಕೆ; ಮತ್ತು
ಸಾಮರಸ್ಯದಿಂದ ಪಡೆದಿರುವ ಸಚ್ಚಿದಾನಂದ ಆ ಬಯಕೆಯನ್ನು ಹೊರ
ಪಡಿಸಲು, ಮತ್ತು ಆ ಆನಂದವನ್ನು ನಿವೇದಿಸಲು ಉತ್ಸುಕವಾದ ಮನವು
ಶಬ್ದಸಾಮಗ್ರಿಗಳನ್ನು ಹುಡುಕಬೇಕಾಗಿಲ್ಲ.

"ನಚ್ಚುಗೆ ಮನ ನಿಮ್ಮಲ್ಲಿ. ಮೆಚ್ಚುಗೆ ಮನ ನಿಮ್ಮಲ್ಲಿ. ಸಲು
ಗುಗೆ ಮನ ನಿಮ್ಮಲ್ಲಿ ಸೋಲುಗೆ ಮನ ನಿಮ್ಮಲ್ಲಿ. ಆಳಲುಗೆ ಮನ
ನಿಮ್ಮಲ್ಲಿ. ಬಳಲುಗೆ ಮನ ನಿಮ್ಮಲ್ಲಿ. ಕರಗುಗೆ ಮನ ನಿಮ್ಮಲ್ಲಿ. ಕೊರ
ಗುಗೆ ಮನ ನಿಮ್ಮಲ್ಲಿ. ಎನ್ನ ಪಂಚೇಂದ್ರಿಯಗಳು ಕಬ್ಬುನ ಉಂಡ
ನೀರಿನಂತೆ ನಿಮ್ಮಲ್ಲಿ ಬೆರಸುಗೆ ಚನ್ನಮಲ್ಲಿಕಾರ್ಜುನಯ್ಯ."

"ಉದಯದಲೆದ್ದು ನಿಮ್ಮ ನೆನೆವೆನಯ್ಯ. ನಿಮ್ಮ ಬರವ ಹಾರುತ್ತಿ
ರ್ಪೆನಯ್ಯ. ಹಸಿ ಹಂದರವನಿಕ್ಕಿ. ನಿಮ್ಮಡಿಗಳಿಗೆಡೆಮಾಡಿಕೊಂಡಿಪ್ಪೆ
ನ್ನಯಾ! ಚೆನ್ನಮಲ್ಲಿಕಾರ್ಜುನಾ. ನೀನಾವಾಗಬರ್ಪೆಯೆಂದು."

"ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು? ಕೊಳ
ನಲ್ಲದೆ ಕಿರಿವಳ್ಳಕ್ಕೆಳಸುವುದೇ ಹಂಸೆ? ಮಾಮರ ತಳಿತಲ್ಲದೆ ಸ್ಪರಸೈ

ವುದೇ ಕೋಗಿಲೆ? ಪರಿಮಳವಿಲ್ಲದ ಪುಷ್ಪಕ್ಕೆಳಿಸುವುದೇ ಭ್ರಮರ? ಎನ
ದೇವ ಚೆನ್ನಮಲ್ಲಿಕಾರ್ಜುನನಲ್ಲದೆ ಅನ್ಯಕ್ಕೆಳಸುವುದೇ ಎನ್ನ ಮನ ಕೇಳಿರೆ
ಕೆಳದಿಯರಿರಾ?

ಮಹಾದೇವಿಯಕ್ಕನವರು ಯೋಗಿಣಿಯರಾದರೂ ಪ್ರೌಢಸಂಸಾರಿಗ
ಳಾದ ಕವಯಿತ್ರಿ. ಶರಣಸತಿ ಲಿಂಗಪತಿಯೆಂದು ಹೇಳುವಾಗ ಪ್ರಪಂಚದ
ಉಪಮೆಯನ್ನಿಟ್ಟುಕೊಂಡು ಉದ್ದಾಮಕವಿಗೆ ವರ್ಣಿಸಲಸಾಧ್ಯವಾದ ಪರ
ಮಾನಂದವನ್ನು ಕಾವ್ಯರೂಪದಿಂದ ಅವರು ವರ್ಣಿಸಿದ್ದಾರೆ. ಸತಿಪತಿ
ಭಾವವು ವಚನಶಾಸ್ತ್ರದಲ್ಲಿ ಶಿವಶರಣರಿಗೆ ಅಸಹ್ಯವಲ್ಲ. ಎಲ್ಲ ವಚನಕಾ
ರರು ಈ ಭಾವವನ್ನು ವರ್ಣಿಸಿದ್ದಾರೆ. ಶರಣನು ಗಂಡುರೂಪಿಯಾಗಿ
ದ್ದರೂ ಲಿಂಗದೃಷ್ಟಿಯಿಂದ ಸತಿಯಾಗಲು ಆತುರನು.

"ಎಲೆ ಗಂಡುಸೇ, ನೀ ಕೇಳಾ. ನಿನಿಗೊಬ್ಬಗೆಂದುಟ್ಟಿ ಗಂಡುಡಿ
ಗೆಯನು. ಮತ್ತೊಮ್ಮೆ ಅನು ಗಂಡಪ್ಪೆನಯ್ಯ. ಮತ್ತೊಮ್ಮೆ ಅನು ಹೆಣ್ಣಪ್ಪೆನಯ್ಯ. ಕೂಡಲಸಂಗಮದೇವ, ನಿನಗೆ ವೀರನಪ್ಪೆ ನಿಮ್ಮ ಶರಣರಿಗೆ ವಧುವಪ್ಪೆ."

ಎಂದು ಬಸವಣ್ಣನವರು ತಮ್ಮ ವಚನಗಳಲ್ಲಿ (ವಚನ ೧೩. ಪುಟ ೧೦೭) ಹೇಳಿದ್ದಾರೆ.

ಸತಿಯ ಅಧಿಕಾರವು ತನಗೆ ಪ್ರಾಪ್ತವಾಗಬೇಕಾದರೆ ಗುರುವು ತನಗೆ ದೀಕ್ಷೆ ಕೊಟ್ಟುದರಿಂದ ಜನ್ಮನೆತ್ತಿ, ಶಿವಶರಣರು ಹಾಲು ಜೇನ್ನೆಯಿಕ್ಕಿದುದರಿಂದ ಸಂರಕ್ಷಿತಳಾಗಿ, ಬೆಳೆದು ವಯಸ್ಕರಾದ ಮೇಲೆ ಮಲ್ಲಿಕಾರ್ಜುನನಿಗೆ ತನ್ನನ್ನು ಕೊಟ್ಟು ಮದುವೆ ಮಾಡಿದರು; ಮತ್ತು ತಾವು ಪಾತಿವ್ರತ್ಯದಿಂದ ಬಾಳ್ವೆ ಮಾಡುವೆವೆಂದು ಪ್ರಾಕೃತ ವಧುವು ತನ್ನ ತುಂಬ ತಾಯಿ ಆಪ್ತೇಷ್ಟರುಗಳು ಆನಂದಪಡುವಂತೆ ತನ್ನ ಗಂಡನ ಮನೆಗೆ ಹೋಗುವಾಗ ಹೇಳುವ ಹಾಗೆ ಅಕ್ಕನವರು ಹೇಳುವುದು ಬಹಳ ಸ್ವಾಭಾವಿಕವಾಗಿದೆ. ಕಾವ್ಯವು ಜೀವನವಿಮರ್ಶೆಯೆಂದು ವಿಮರ್ಶಕಾರರು ಹೇಳುವುದು ಈ ಕಾರಣದಿಂದಲೇ ಅಲ್ಲವೇ?

"ಹುಟ್ಟಿಸಿ ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣದೊಳಗೆ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ! ಇಂತಪ್ಪ ತ್ರಿವಿಧಾಮೃತವ

ದಣಿಯಲೆರೆದು ಸಲಹಿದರೆನ್ನ ವಿವಾಹವಾಡಿದಿರಿ. ಸ್ವಯವಪ್ಪಗಂಡಗೆ ಕೊಟ್ಟಿರಿ. ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ. ಆ ಜೆನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮಂಡೆಗೆ ಹುವ್ವ ತಾಹೆನಲ್ಲದೆ ಹುಲ್ಲ ತಾರೆನು. ಅವಧರಿಸಿ ನಿಮ್ಮಡಿಗಳೆಲ್ಲರು. ಮರಳಿ ಬಿಜಯಂಗೈವುದು ಶರಣಾರ್ಥಿ.”

ಮದುವೆಯೆಂದರೆ ಹೆಣ್ಣುಮಕ್ಕಳಿಗೆ ಅಚ್ಚುಮೆಚ್ಚು. ತಾಯಂದಿರಿಗೆ ತಮ್ಮ ಮಕ್ಕಳ ಮದುವೆಯನ್ನು ಕಣ್ಣುತುಂಬಾ ನೋಡಬೇಕೆಂಬ ಉತ್ಕಟವಾದ ಬಯಕೆ. ಯುವತಿಯರಿಗೆ ಮದುಮಕ್ಕಳನ್ನು ಅಡಿಸಿ ನೋಡುವ ಪ್ರೀತಿ. ಅಕ್ಕನ ಮದುವೆಯಲ್ಲಿ ಭಾವನನ್ನು ವಿನೋದದಿಂದ ಪೀಡಿಸುವ ಪ್ರೀತಿ ತಂಗಿಗೆ. ಈ ಪ್ರೀತಿಯು ಮಹಾದೇವಿಯಕ್ಕನ ಶರಣಾವಸ್ಥೆಯಲ್ಲಿ ಸಹ ಹಾಗೇ ಉಳಿದಿದೆ. ಅಕ್ಕನವರು ಲಿಂಗದ ಸತಿಯಾಗುವ ಪೂರ್ವದಲ್ಲಿ ಮತ್ತು ತಮ್ಮ ಲಗ್ನವಾಗುವಾಗ ಆ ಮದುವೆಯ ವರ್ಣನೆಯನ್ನು ಮಾಡುವುದು ಸ್ತ್ರೀಭಾವಕ್ಕೆ ಒಪ್ಪುವಂತಿದೆ.

೧ “ಹರನೇ, ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ. ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು ಭಸ್ಮವನೆ ಹೂಸಿ, ಕಂಕಣವನೇ ಕಟ್ಟಿದರು. ಜೆನ್ನಮಲ್ಲಿಕಾರ್ಜುನಯ್ಯ, ನನಗೆ ನೀನಾಗಬೇಕೆಂದು.”

೨ “ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ ಮುತ್ತು ಮಾಣಿಕದ ಮೇಲುಕಟ್ಟು ಕಟ್ಟಿ, ಮದುವೆಯ ಮಾಡಿದರು. ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ ಧಾರೆಯ ಸ್ಥಿರಸೆಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.”

೩ “ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ, ಆನು ಮದುವಳಿಗೆಯಾದೆನು. ವಸುಧೆಯ ಭಕ್ತರೆಲ್ಲರು ನಿಬ್ಬಣಿಗರಾದರು. ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ.”

೪ ಮಂಗಳವೇ ಮಜ್ಜನವೆನಗೆ, ವಿಭೂತಿಯೇ ಒಳುಗುಂದದರಿಸಿನವೆನಗೆ, ದಿಗಂಬರವೇ ದಿವ್ಯಾಂಬರವೆನಗೆ, ಶಿವಪಾದ ರೇಣುವೆ ಅನುಲೇಪನವೆನಗೆ, ರುದ್ರಾಕ್ಷಿಯೇ ಮೈದೊಡಿಗೆಯೆನಗೆ, ಶರಣರ ಪಾದಂಗಳೇ ತೊಂಡಿಲ ಬಾಸಿಂಗವೆನಗೆ, ಚನ್ನಮಲ್ಲಿಕಾರ್ಜುನನೇ ಗಂಡನೆನಗೆ, ಅನು ಚನ್ನಮಲ್ಲಿಕಾರ್ಜುನಂಗೆ ಮದುವಳಿಗೆ, ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ?”

(ಎರಡನೆಯ ನಂಬರಿನ ವಚನವನ್ನು ಅನುಕರಿಸುವ ಚನ್ನಬಸವ ಪುರಾಣ ೧ನೆಯ ಕಾಂಡ ೫ನೆಯ ಸಂಧಿ ಪದ್ಯ ೩೨ನ್ನು ನೋಡಿರಿ.
ಪಚ್ಚೆಗಳ ಕಂಬಂಗಳಿಂ ಪವಳವಲಗೆಗಳ
ಮುಚ್ಚಟ್ಟಳಿಂ ನೀಲಮಣಿಯ ತೋವೆಗಳಿಂ ವಿ
ಯಚ್ಚರಾಂಗಣಕಡರ್ದ ವಜ್ರಪೈಡೂರ್ಯ ಮಾಣಿಕ್ಯದೊಳ್ ನೆಲೆನೆಲೆಗಳ॥
ಅಚ್ಚಮುತ್ತಿನ ಗುದಿಗಳಿಂ ರುಂಬಲ್ಲಿ ಪೆಟ್ಟಿಗಳ
ಕಚ್ಚುಗಳ ಸಂದಣಿಗಳಿಂ ಕೇರಿಕೇರಿಯೋಳ್
ಪೆಚ್ಚಿದುವು ನೃಹಗೃಹದ್ವಾರಂಗಳೊಳ್ ಮಹಾಮೇರುವೆಗಳೇನೆಂಬೆನು॥)

ಮೇಲಿನ ೨ನೆಯ ೩ನೆಯ ಮತ್ತು ನಾಲ್ಕನೆಯ ವಚನಗಳಲ್ಲಿ ಅಕ್ಕನವರ ಪತಿವಿಷಯಕವಾದ ಅಕ್ಕರತೆ, ಅಭಿಮಾನ ಮತ್ತು ಆತನ ಕೂಡ ಮದುವೆಯಾದುದರಿಂದ ತಾವು ಪಡುತ್ತಿರುವ ಆನಂದವು ಹೃದಯದಲ್ಲಿ ಉಕ್ಕೇರಿ ಯಾವಾಗ ಗೆಳತಿಯರಿಗೆ ಹೇಳಿ ಸಮಾಧಾನಗೊಳ್ಳುವೆನೆಂಬ ಆತುರತೆ ಮುಂತಾದ ಪ್ರಾಕೃತ ಸ್ತ್ರೀಯರಲ್ಲಿ ಕಂಡುಬರುವ ಭಾವಗಳು ಅವರಲ್ಲಿಯೂ ಒಡೆದು ಕಂಡು ಹೃದಯಂಗಮವಾಗಿವೆ. ಮತ್ತು ೧ನೆಯ ವಚನದಲ್ಲಿ ಇಂಥವನೇ ಗಂಡನಾಗಬೇಕೆಂದು ತಪಿಸಿ ಆತನನ್ನು ಪಡೆದ ಪತಿವ್ರತೆಯರ ಸ್ವಾಭಾವಿಕವಾದ ಅಭಿಮಾನವನ್ನು ಸ್ತ್ರೀಯಾಗಿರುವುದರಿಂದ ಅಕ್ಕನವರು ಸುಕವಿಗಳಿಗಿಂತ ಮೇಲಾಗಿ ವರ್ಣಿಸಿರುವರು. ಮಾನಿನಿಯರಿಗೆ ಇದು ಅಸಾಧ್ಯವಲ್ಲ.

“ಅಕ್ಕಯ್ಯ, ನಾನೊಂದು ಕನಸು ಕಂಡೆ.....ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ. ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು. ಜನ್ನಮಲ್ಲಿಕಾರ್ಜುನನ ಕಂಡು ಕಣ್ಣ ತೆರೆದೆನು.”

ಈ ವಚನವು ಕನಸನ್ನು ಹೇಳದೆ ಪಾರ್ವತಿಗೆ ದರ್ಶನ ಕೊಡಲು ಬ್ರಹ್ಮಚಾರಿಯ ರೂಪದಿಂದ ಬಂದ ಶಿವನ ಕತೆಯನ್ನು ಸೂಚಿಸುವಂತಿದೆ.

ಪರಮಾತ್ಮನಲ್ಲಿನ (ಗಂಡನ ಮೇಲಿನ) ಅವರ ಅಭಿಮಾನ, ಸಾಮರಸ್ಯದ ಬಗ್ಗೆ ಅವರ ಆತ್ಮವಿಶ್ವಾಸ, ಮತ್ತು ಸಾಮರಸ್ಯದಿಂದುಂಟಾಗುವ ಪರಮಾನಂದಗಳು ಕೆಳಗಣ ವಚನಗಳಲ್ಲಿ ನಿರೂಪಿತವಾಗಿವೆ.

"ಕಾಮಬಲ್ಲಿದನೆಂದರೆ ಉರುಹಿ ಭಸ್ಮವ ಮಾಡಿದ. ಬ್ರಹ್ಮ ಬಲ್ಲಿದವನೆಂದರೆ ಶಿರವ ಚಿವುಟಿಯಾಡಿದ.....ವಿಷ್ಣು ಬಲ್ಲಿದನೆಂದರೆ ಆಕಳ ಕಾಯ್ದುರಿಸಿದ.....ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡನೆನಗೆ. ಜನನಮರಣಕ್ಕೊಳಗಾಗದ ಬಲುಹನೇನ ಬಣ್ಣಿಪೆನವ್ವಾ?"

"ಎನ್ನ ತನುವ ಮಾರುಗೊಂಡನವ್ವಾ! ಎನ್ನ ತನುವ ಸೂರೆಗೊಂಡನವ್ವಾ! ಎನ್ನ ಸುಖವನೊಪ್ಪುಗೊಂಡನವ್ವಾ! ಎನ್ನಿರವನಿಂಬುಗೊಂಡನವ್ವಾ! ಚನ್ನಮಲ್ಲಿಕಾರ್ಜುನನ ಒಲುಮೆಯವಳಾದೆನು."

"ಸಾವಿಲ್ಲವ, ಕೇಡಿಲ್ಲದ, ರೂಹಿಲ್ಲದ ಚಲುವಂಗಾನೊಲಿದೆನವ್ವ. ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವಂಗಾನೊಲಿದೆ, ಎಲೆ ಅವ್ವಾ ನೀನು ಕೇಳಾ, ತಾಯೆ.....ಕುಲ, ಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ ಇದು ಕಾರಣ ಚನ್ನಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು"

ಅಕ್ಕನವರ ಇಂತಹ ಶೃಂಗಾರರಸವು ತಡೆಯಿಲ್ಲದೆ ಹಾಗೆಯೇ ಹರಿದದು ವಿರಹದಲ್ಲಿ ಮಡುವಾಗಿ ನಿಂತುದು ಪ್ರಾಕೃತ ಸ್ತ್ರೀವಿರಹದಂತೆ ಇವರಲ್ಲಿಯೂ ಅನುಭವಕ್ಕೆ ಬರುತ್ತದೆ. ಇವರ ಸಂದರ್ಭದಲ್ಲಿ ಅದು ಪತಿಯಾದ ಲಿಂಗದ ವಿರಹ.

"ಹೊಳೆವ ಜಡೆಯ ಮೇಲೆ ಎಳೆವೆಳದಿಂಗಳು
ಫಣಿಮಣಿ, ಕರ್ಣಕುಂಡಲವ ನೋಡವ್ವ! ರುಂಡಮಾಲೆಯ
ಕೊರಳವನ ಕಂಡರೆ ಒಮ್ಮೆ ಬರ ಹೇಳವ್ವಾ!

ಎಂದು ಹೇಳುವಾಗ ಅವಳು ಹೇಳುವ ವಿರಹವು ಸಹಿಸಲಸಾಧ್ಯವಾಗಿ ಹೀಗೆ ಪರಿಣಮಿಸುತ್ತಿದೆ.

"ಕಳವಳದ ಮನವು ತಲೆ ಕೆಳಗಾದುದವ್ವಾ! ಸುಳಿದು ಬೀಸುವ ಗಾಳಿ ಉರಿಯಾಯಿತ್ತವ್ವಾ! ಬೆಳದಿಂಗಳು ಬಿಸಿಲಾಯಿತ್ತು, ಕೆಳದಿ. ಹೊಳಲು ಸುಂಕಿಗನಂತೆ ತೊಳಲುತ್ತಿದ್ದೆನವ್ವಾ! ತಿಳುಹಾ ಬುದ್ಧಿಯ.

ಹೇಳಿ ಕರತಾರೆಲೆಗನ್ವಾ ತೊಳಲುತ್ತಿದೆನವ್ವಾ! ಚನ್ನಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವಾ."

ಈ ವಚನವು "ಚಂದ್ರಶ್ಚಂಡಕರಾಯತೆ ಮೃದುಗತಿರ್ವಾತೋಪಿ ವಜ್ರಾಯತೆ" ಎಂಬ ಋತುಸಂಹಾರದೊಳಗಣ ಕಾಲಿದಾಸನ ಪದ್ಯವನ್ನು ನೆನಪಿಗೆ ತಂದುಕೊಡುತ್ತಿದೆ. ಅಕ್ಕನವರ ವಿರಹವು ಇಲ್ಲಿಗೆ ತೀರಿತೆಂದು ತಿಳಿಯಲಾಗದು. ಅವರು ವಾಸಕಸಜ್ಜಿಕೆಯಂತೆ ನಟಿಸಿದ ಸಂಗತಿಯನ್ನೂ ಹೇಳಿದ್ದಾರೆ.

"ಅರಿಸಿನವನೆ ಮಿಂದು, ಹೊಂದುಡಿಗೆಯನೆ ತೊಟ್ಟು, ದೇವಾಂಗವನುಟ್ಟು, ಪುರುಷ ಬಾರಾ! ನಿನ್ನ ಬರವೆನ್ನಸುವಿನ ಬರವು ಬಾರಯ್ಯ! ಚನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತ್ತಿಹೆನು."

ಆ ತರುವಾಯ ರಾಮಚಂದ್ರನು ಸೀತೆಯನ್ನು ವನದಲ್ಲಿ ಹುಡುಕುತ್ತ ಅಲೆಯುತ್ತಿರವ ಹಾಗೆ ಅಕ್ಕನವರು ಚನ್ನಮಲ್ಲಿಕಾರ್ಜುನನನ್ನು ಅರಸುತ್ತ ವನದಲ್ಲಿ ಹೋದುದನ್ನು ಹೇಳುವರು.

"ಅಳಿಸಂಕುಳವೇ, ಮಾಮರವೇ, ಬೆಳದಿಂಗಳೇ, ಕೋಗಿಲೆಯೇ, ನಿಮ್ಮನಿಮ್ಮನೆಲ್ಲರನು ಒಂದು ಬೇಡುವೆನು. ಎಸ್ಮೊಡೆಯ ಚನ್ನಮಲ್ಲಿಕಾರ್ಜುನದೇವರ ಕಂಡಿರೆ? ಕರೆದು ತೋರಿರೆ."

"ಜಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ. ಸರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ.....ಚನ್ನಮಲ್ಲಿಕಾರ್ಜುನನೆಲ್ಲಿರ್ದಿಹನೆಂದು ನೀವು ಹೇಳಿರೆ, ನೀವು ಹೇಳಿರೆ."

ಈ ಸಂದರ್ಭದಲ್ಲಿ ರಾಮಚಂದ್ರಚರಿತ ಪುರಾಣದೊಳಗಿನ
ಕಳಹಂಸಾಳದಯಾನೆಯಂ ವ್ಯಗಮದಾವೋದಾಸ್ಯ ನಿಶ್ವಾಸೆಯಂ।
ತಳಿರೆ, ತಾವರೆಯೇ, ಮದಾಳಿಕುಳಮೇ, ಕೆನ್ನೆಯ್ದಿಲೇ ಮತ್ತ ಕೋ॥
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗಕುಂ।
ತಳಿಯಂ ಕೈರವನೇತ್ರೆಯಂ ಪಿಕರವ-ಪ್ರಖ್ಯಾತೆಯಂ ಸೀತೆಯಂ॥

ಎಂಬ ಪದ್ಯವನ್ನು ಹೋಲಿಸಿ ನೋಡಬಹುದಾಗಿದೆ.

"ಒಮ್ಮೆ ಕಾಮನ ಕಾಲ ಹಿಡಿವೆ. ಮತ್ತೊಮ್ಮೆ ಚಂದ್ರಮಂಗೆ ಸೆರಗೊಡ್ಡಿ ಬೇಡುವೆ. ಸುಡಲೀ ವಿರಹವ. ನಾನಾರಿಗೆ ಧೃತಿಗೆಡುವೆ? ಚನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ ಎಲ್ಲರಿಗೆ ಹಂಗಿತಿಯಾದೆನವ್ವಾ."

ಎಂಬ ವಚನದಲ್ಲಿ ಸಾಮರಸ್ಯ ನಿರಾಶೆಯೂ ಅದಕ್ಕೆ ಸರಿಯಾಗಿ ಪ್ರಾಕೃತ ಸ್ತ್ರೀಯ ರಣರಣಕಾವಸ್ಥೆಯೂ ಏಕಕಾಲದಲ್ಲಿ ಮನಸ್ಸನ್ನು ಆವರಿಸುವುವು. ಹೀಗೆ ಅತ್ಯವಸ್ಥೆಯಾದ ನವ ತರುಣಿಯ ಮುಂದೆ ಒಮ್ಮೆಲೆ ಗಂಡನು ಬಂದು ನಿಂತರೆ ಅವಳು ಮೊದಲು ಭ್ರಮೆಗೊಂಡು ಆ ಮೇಲೆ ಆನಂದದಿಂದ ಉಬ್ಬಿ ಹೊರಸೂಸುತ್ತಿರುವ ಆ ಆನಂದ ಭಾವವು ತನ್ನಲ್ಲಿ ಹಿಡಿಸದೆ ತನ್ನ ಗೆಳತಿಯರಿಗೆ ಹೇಳಿ ಅವರನ್ನು ಪಾಲುಗಾರರನ್ನು ಮಾಡಿಕೊಂಡು ಸಮಾಧಾನಗೊಳ್ಳುವಂತೆ ಮುಂದಿನ ವಚನವನ್ನು ಅಕ್ಕನವರು ಹೇಳುತ್ತಾರೆ.

"ಇಂದೆನ್ನ ಮನೆಗೆ ಗಂಡ ಬಂದನವ್ವಾ ನಿಮು ನಿಮುಗೆಲ್ಲಾ ತೃಂಗಾರವ ಮಾಡಿಕೊಳ್ಳಿ. ಚನ್ನಮಲ್ಲಿಕಾರ್ಜುನನೀಗಳೆ ಬಂದಿಹನು. ಇದಿರುಗೊಳ್ಳ ಬನ್ನಿರೆ, ಅವ್ವಗಳಿರಾ."

ಸ್ತ್ರೀಯರಿಗೆ ಸ್ವಾಭಾವಿಕವಾಗಿ ಮಾತಾಡುವದು ಬಹಳ ಬೇಕು. ಗಂಡಂದಿರನ್ನು ಅವರು ಮಾತುಗಳಿಂದ ಬೇಜಾರುಗೊಳಿಸುವದುಂಟು. ಈ ಸಂದರ್ಭದಲ್ಲಿ ಅಕ್ಕನವರೇನು ಕಡಿಮೆಯವರಲ್ಲ. ಅವರು ತಮ್ಮನ್ನು ತಾವು ಈ ರೀತಿಯಾಗಿ ಹೇಳಿಕೊಂಡಿದ್ದಾರೆ.

"ನೀನು ದಂಡಮುಂಡಲಕ್ಕೆ ಹೋದೆನೆಂದೊಡೆ ನಾನು ಸುಮ್ಮನಿಹೆನು. ನೀನು ಎನ್ನ ಕೈಯೊಳಗಿರ್ದು ಎನ್ನ ಮನದೊಳಗಿರ್ದು ನುಡಿಯ ದಿರ್ದೊಡಾನು ಎಂತು ಸೈರಿಸುವೆನಯ್ಯ! ನೇಹವೆಂಬ ಕುಂಟಣಿ ಚನ್ನಮಲ್ಲಿಕಾರ್ಜುನನೊಲಿಸದಿದ್ದರೆ ಇನ್ನೇವೆ ಸಖಿಯೆ?"

ಸಾಮರಸ್ಯದ ಬಗ್ಗೆ ತನ್ನ ಆತುರತೆಯನ್ನು ಅಕ್ಕನವರು ಹೀಗೆ ತೋರಿಸಿದ್ದಾರೆ.

"ಇಂದ್ರನೀಲಗಿರಿಗಳನೇರಿಕೊಂಡು, ಚಂದ್ರಶಿಲೆಗಳ ಮೆಟ್ಟಿಕೊಂಡು, ಕೊಂಬ ಬಾರಿಸುತ, ಹರನೇ ಎನ್ನ ಕುಂಭಕುಚದ ಮೇಲೆ ನಿಮ್ಮನ್ನೈದಪ್ಪಿಕೊಂಬೆನಯ್ಯ! ಅಂಗಭಂಗ ಮನಭಂಗವಳಿದು ನಿಮ್ಮನೆಂದಿಗೊಮ್ಮೆ ನೆರೆವೆನೋ ಚನ್ನಮಲ್ಲಿಕಾರ್ಜುನಾ."

"ಸತಿಯು ತನ್ನ ಪತಿಯನ್ನು ಸೇರಿದ ಮೇಲೆ ಪತಿಯ ಹೊರ್ತು ತನಗೆ ಬೇರೆ ಅಸ್ತಿತ್ವವಿಲ್ಲ ಇಬ್ಬರೂ ಒಂದೇ ಎಂದು ಭಾವಿಸುವಂತೆ ಸಾಮರಸ್ಯ ಹೊಂದಿದ ಮೇಲೆ ಅಕ್ಕನವರು ತಾವೂ ಲಿಂಗವೂ ಬೇರೆಯಲ್ಲವೆಂದು ಹೇಳುವ ಅವರ ಭಾವನೆಯು ಅಸದೃಶವಾಗಿದೆ.

"ನಾನು ನಿನಗೊಲಿದೆ ನೀನು ಎನಗೊಲಿದೆ. ನೀನೆನ್ನನಗಲದಿಪ್ಪೆ ನಾನಿನ್ನನಗಲದಿಪ್ಪೆನಯ್ಯ. ನಿನಗೆ ನನಗೆ ಬೇರೊಂದು ಠಾವುಂಟೆ? ನೀನು ಕರುಣೆ ಎಂಬದ ನಾನು ಬಲ್ಲೆನು. ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ. ನೀನೇ ಬಲ್ಲೆ ಚನ್ನಮಲ್ಲಿಕಾರ್ಜುನಾ."

ಈರೀತಿಯಾಗಿ ಪ್ರಪಂಚದಲ್ಲಿ ನಾನಾ ಅವಸ್ಥೆಯಲ್ಲಿ ಅನುಭವಿಸುವ ಭಿನ್ನ ಭಿನ್ನ ಭಾವಗಳನ್ನು ಹೊರದೂಡುವಾಗ ಅವರು ಸ್ವಾಭಾವಿಕವಾಗಿ ಉಪಯೋಗಿಸಿದ ರೂಢಿಯ ಉಪಮೆಗಳು ಕಾಲಿದಾಸನನ್ನು ಮರೆಯಿಸುವಂತಿವೆ. ಜನರು ಮಾತಾಡುವಾಗ ಉಪಮೆಗಳನ್ನು ಉಪಯೋಗಿಸುವುದುಂಟು; ಆದರೆ ಉಪಮೆಗಳನ್ನು ಉಪಯೋಗಿಸುತ್ತೇವೆಂಬ ಕಲ್ಪನೆಯು ಅವರ ಕನಸು ಮನಸಿನಲ್ಲಿರುವುದಿಲ್ಲ. ಅದರಂತೆ ಅಕ್ಕನವರಾದರೂ ಆ ಕಲ್ಪನೆಯಿಲ್ಲದೆ ಸ್ವಾಭಾವಿಕವಾಗಿ ಅವುಗಳನ್ನು ಉಪಯೋಗಿಸಿರುವುದರಿಂದ ವಚನಗಳ ಸೌಂದರ್ಯವು ಹೆಚ್ಚಾಗಿದೆ. ಕೆಳಗಿನ ವಚನಗಳು ಇದಕ್ಕೆ ಸಾಕ್ಷಿ:

"ನೆಲದ ಮರೆಯ ನಿಧಾನದಂತೆ, ಸಿಲೆಯ ಮರೆಯ ಕನಕದಂತೆ, ತಿಲದ ಮರೆಯ ತೈಲದಂತೆ, ಮರದ ಮರೆಯ ತೇಜದಂತೆ, ಭಾವದ ಮರೆಯ ಬ್ರಹ್ಮವಾಗಿಪ್ಪ ಚನ್ನಮಲ್ಲಿಕಾರ್ಜುನನ ನಿಲವನರಿಯಬಾರದು."

"ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯ! ಸಮುದ್ರದ ತಡಿಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿದಡೆಂತಯ್ಯ! ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯ!"

"ಲೋಕದ ಜೀವಿಗೆ ರವಿ ಬೀಜವಾದಂತೆ, ಕಾರಣಂಗಳ ಜೀವಿಗೆ ಮನವೇ ಬೀಜ.

"ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯ! ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವನೆನೆವಂತೆ ನೆನೆವೆನಯ್ಯ!"

"ಗರಿಯಲ್ಲದೆ ಹುಲ್ಲು ಸೊರಡಿಯಲ್ಲಾಡುವುದೇ ನವಿಲು? ಕೊಳ ನಲ್ಲದೆ ಕಿರಿವಳ್ಳಕ್ಕೆಳಸುವುದೇ ಹಂಸೆ? ಮಾಮರ ತಳಿತಲ್ಲದೆ ಸ್ವರಗೈ ವುದೇ ಕೋಗಿಲೆ? ಪರಿಮಳವಿಲ್ಲದೆ ಪುಷ್ಪಕ್ಕೆಳಿಸುವದೇ ಭ್ರಮರ?

"ಚಂದನವ ಕಡಿದು ಕೊರೆದು ತೇದೊಡೆ ನೊಂದೆನೆಂದು ಕಂಪ ಬಿಟ್ಟಪ್ಪತ್ತೆ? ತಂದು ಸುವರ್ಣವ, ಕಡಿದೊರೆದೊಡೆ ಬೆಂದು ಕಳಂಕ ಹಿಡಿ ದಿತ್ತೆ? ಸಂದು ಸಂದು ಕಡಿದ ಕಬ್ಬನು ಗಾಣದಲಿಕ್ಕಿ ಬೆಂದು ಪಾಕಾ ಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಪ್ಪತ್ತೆ?

"ಎನ್ನ ನಾನರಿಯದಂದು ಮುನ್ನ ನೀನೆಲ್ಲಿರ್ದೆ ಹೇಳಯ್ಯ! ಚಿನ್ನ ದೊಳಗಣ ಬಣ್ಣದಂತೆ ಎನ್ನೊಳಗಿರ್ದೆಯಯ್ಯ!

"ಬಂಜೆ ಬೇನೆಯನರಿಯಳು. ಬಲದಾಯಿ ಮುದ್ದಬಲ್ಲಳೆ? ನೊಂದ ನೋವ ನೋಯದವರೆತ್ತ ಬಲ್ಲರು?

"ಕೆಂಡದ ಶವದಂತೆ, ಸೂತ್ರ ತಪ್ಪಿದ ಬೊಂಬೆಯಂತೆ, ಜಲವ ರತ ತಟಾಕದಂತೆ, ಬೆಂದ ನುಲಿಯಂತೆ ಮತ್ತೆ ಹಿಂದಣ ಹಂಗುಂಟೆ?

"ಹೆಣ್ಣ ಮೆದ್ದ ಬಳಿಕ ಆ ಮರವನಾರು ತರಿದರೇನು?..... ಮಣ್ಣ ಬಿಟ್ಟ ಬಳಿಕ ಆ ಕೆಯ್ಯಯನಾರುತ್ತರೇನು? ಚನ್ನಮಲ್ಲಿಕಾರ್ಜು ನನರಿದ ಬಳಿಕ ಆ ಕಾಯವ ನಾಯಿ ತಿಂದರೇನು?"

ಅಕ್ಕನವರು ಹೀಗೆ ಮೂಲಾಕಾರವಾಗಿ ಉಪಮೆಗಳನ್ನು ಹೇಳುವಾಗ ಉಪಮಾ ಕಾಲಿದಾಸಸ್ಯ ಎಂದು ಹೇಳುವುದನ್ನು ಬಿಟ್ಟು ಉಪಮಾ ಮಹಾ ದೇವಿಯಕ್ಕಾಯಾಃ ಎಂದು ಹೇಳಬೇಕಾಗುತ್ತಿದೆ. ಈ ಉಪಮೆಗಳಲ್ಲಿ, ಮಾತುಗಾರಿಕೆಯಲ್ಲಿ, ಭಾವಗಳಲ್ಲಿ, ಸಾಮಾಜಿಕ ಸಂಗತಿಗಳಲ್ಲಿ ಅಕ್ಕನ ವರು ತಮ್ಮ ಸ್ತ್ರೀತ್ವ ವೈಶಿಷ್ಟ್ಯವನ್ನು ಓದುಗರು ಮರೆಯದಂತೆ ಕಾದಿಟ್ಟ ದ್ದಾರೆ.

"ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು ಭಾವಿಸಲು ಗಂಡು ರೂಪು." ಎಂದು ಹೇಳುವಾಗಲೂ ತಾವು ಸ್ತ್ರೀಯೆಂಬ ಭಾವನೆಯು ಮರೆತು ಹೋಗಿಲ್ಲ. "ಗಂಡಗಂಡರೆಲ್ಲ ಹೆಂಡಹೆಂಡರಾಗಿ" ಅಂಗ ಲಿಂಗ ಸಾಮರಸ್ಯವನ್ನು ಅನುಭವಿಸುವಾಗ, ಬಸವಣ್ಣನವರು, "ಎಲೆ ಗಂಡುಸೇ, ನೀ ಕೇಳಾ. ನಿನಗೊಬ್ಬ ಗಂಡುಟ್ಟಿ ಗಂಡುಡಿಗೆಯನು. ಮತ್ತೊಮ್ಮೆ ಅನು ಗಂಡಪ್ಪೆನಯ್ಯಾ. ಮತ್ತೊಮ್ಮೆ ಅನು ಹೆಣ್ಣಪೆ

ನಯ್ಯಾ. ಕೂಡಲಸಂಗಮದೇವ ನಿನಗೆ ವೀರನಪ್ಪೆ. ನಿಮ್ಮ ಶರಣರ ವಧುವಪ್ಪೆ." (ಬಸವೇಶ್ವರನ ವಚನಗಳು ವ. ೧೩ ಪುಟ ೧೦೭.) ಹೀಗೆ ಹೇಳುತ್ತಿರವಾಗ ಅಕ್ಕನವರಿಗೆ ಸ್ವಾಭಾವಿಕವಾದ ಸ್ತ್ರೀತ್ವವಿರಲು ಗಂಡುಸಾಗುವ ಹುಚ್ಚು ಎಲ್ಲಿಂದ ಬಂದಿತೆಂದು ಮೇಲೆ ಮೇಲೆ ನೋಡುವವರಿಗೆ ತೋರಬಹುದು. ತುಸು ವಿಚಾರ ಮಾಡಿದರೆ ಗೂಢಾ ರ್ಥವು ಹೊಳೆಯುವದು.

ಸ್ತ್ರೀಯರಿಗೆ ಮಾತಾಡುವುದು ಬಹಳ ಬೇಕೆಂದು ಮೇಲೆ ಹೇಳ ಲಾಗಿದೆ. ಅಕ್ಕನವರಾದರೂ ಈ ಉಕ್ತಿಗೆ ವಿಕಲ್ಪವನ್ನು ತರುವಂತಿಲ್ಲ. ಅವರಿಗೂ ಮಾತು ಬಹಳ ಬೇಕು. ವಾಕ್ಕೋವಿದನಂತೆ ತಡೆಯಿಲ್ಲದೆ ಗಂಭೀರವಾಗಿ ಮಾತಾಡುತ್ತಾರೆ.

"ಆಡುವದು, ಪಾಡುವುದು, ಕೇಳುವುದು, ಹೇಳುವುದು, ನಡೆವುದು, ನುಡಿವುದು, ಸರಸ ಸಮ್ಮೇಳವಾಗಿಪ್ಪುದಯ್ಯ ಶರಣರೊಡನೆ. ಚೆನ್ನಮಲ್ಲಿಕಾ ರ್ಜುನಯ್ಯ, ನೀ ಕೊಟ್ಟ ಆಯುಷ್ಯವುಳ್ಳನಕ್ಕರ ಲಿಂಗಸಂಬಿಗಳ ಸಂಗ ದಲ್ಲಿ ವಿನಂಗಳ ಕಳೆವೆನು."

"ನಚ್ಚಿಗೆ ಮನ ನಿಮ್ಮಲ್ಲಿ. ಮಚ್ಚಿಗೆ ಮನ ನಿಮ್ಮಲ್ಲಿ. ಸಲು ಗುಗೆ ಮನ ನಿಮ್ಮಲ್ಲಿ. ಸೋಲುಗೆ ಮನ ನಿಮ್ಮಲ್ಲಿ. ಅಳಲುಗೆ ಮನ ನಿಮ್ಮಲ್ಲಿ. ಕರಗುಗೆ ಮನ ನಿಮ್ಮಲ್ಲಿ. ಕೊರಗುಗೆ ಮನ ನಿಮ್ಮಲ್ಲಿ. ಎನ್ನ ಪಂಚೇಂದ್ರಿಯಗಳು ಕಬ್ಬುನ ಉಂಡ ನೀರಿನಂತೆ ನಿಮ್ಮಲ್ಲಿ ಬೆರ ಸುಗೆ ಚನ್ನಮಲ್ಲಿಕಾರ್ಜುನಯ್ಯ.

"ಹಿತವಿದೆ. ಸಕಲ ಲೋಕದ ಜನಕ್ಕೆ ಮತವಿದೆ. ಶ್ರುತಿಪುರಾ ಣದ ಗತಿ ಇದೆ. ಭಕುತಿಯ ಬೆಳಗಿನುನ್ನತಿ ಇದೆ. ಶ್ರೀವಿಭೂತಿಯ ನೊಲಿದು ಧರಿಸಿದರೆ, ಭವವನು ಪರಿವುದು. ದುರಿತಸಂಕುಳವನೊರಸು ವುದು. ಹರನ ಸಾಲೋಕ್ಯ ಸಾಮೀಪ್ಯದಲ್ಲಿರಿಸುವುದು. ನಿರುತವಿದನೇ ನಂಬು, ನುನುಜಾ, ಜವನಭೀತಿ, ಮರಣಭಯದಿಂದ ಈ ವಿಭೂತಿಯ ಅಗಸ್ತ್ಯ, ಕಶ್ಯಪ, ಜಮದಗ್ನಿಗಳು ಧರಿಸುವರು ನೋಡಾ! ಶ್ರೀಶೈಲ ಮಲ್ಲಿಕಾರ್ಜುನನೊಲಿಸುವ ಶ್ರೀವಿಭೂತಿ."

ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚಲುವಂಗಾನೊಲಿದೆನವ್ವ. ಎಡೆ ಇಲ್ಲದ ಕಡೆ ಇಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವಂಗಾನೊಲಿದೆ ಎಲೆ ಅವ್ವಾ. ನೀನು ಕೇಳಾ ತಾಯೆ. ಭವವಿಲ್ಲದ ಭಯವಿಲ್ಲದ ನಿರ್ಭಯ

ಚಲುವಂಗೊಲಿನೆ ನಾನು. ಕುಲಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ ಚೆನ್ನಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವಕೆಯುನ ಗಂಡರನೊಯ್ದು ಒಲೆಯೊಳಗಿಕ್ಕು.

ಅಕ್ಕನವರು ಉದಹರಿಸಿದ ಆಗಮಗಳಲ್ಲಿನ ಆಧಾರಗಳೂ, ಪೂರ್ವ ಕವಿಗಳ ಪದ್ಯಗಳಿಗೆ ಸವಾನವಾದ ಅವರ ಉಕ್ತಿಗಳೂ, ಮುಂದಿನ ಕವಿಗಳು ಅನುಸರಿಸಿದ ಅವರ ವಿಚಾರಗಳೂ ಅವರ ಪಾಂಡಿತ್ಯಕ್ಕೂ ಕಾವ್ಯ ಶಕ್ತಿಗೂ ಉದಾಹರಣೆಗಳಾಗಿವೆ.

"ಪಚ್ಚೆಯ ನೆಲಗಟ್ಟು ಕನಕದ ತೋರಣ" ಎಂಬ ವಚನಕ್ಕೆ ಸರೆಯಾದ ಪದ್ಯವು ಚೆನ್ನಬಸವಪುರಾಣದಲ್ಲಿ ("ನೀಲರತ್ನಂಗಳಾ ನೆಲಗಟ್ಟು" ಎಂಬ) ಇದೆಯೆಂದು ಹಿಂದೆಯೇ ತೋರಿಸಿದುದಾಯಿತು.

"ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ! ಎಂಬ ವಚನಭಾಗವನ್ನು ಹೋಲುವ "ರಾಮನಾಮ ಪಾಯಸ ಕೃಷ್ಣನಾಮ ಸಕ್ಕರೆ ವಿಠ್ಠಲನಾಮ ತುಪ್ಪ ಕಾಸಿ ಸುರಿದುಣ್ಣು ಬಾಯಿ ಚಪ್ಪರಿಸಿ" ಎಂಬ ಪದವು ಪುರಂದರದಾಸರ ಕೀರ್ತನೆಗಳಲ್ಲಿದೆ.

"ಕಡೆಗೆ ಮಾಡದ ಭಕ್ತಿ ದೃಢವಿಲ್ಲದಾಳುತನ ಮೃಡನೊಲಿಯ ಹೇಳಿದರೆ ಎಂತೊಲಿವನಯ್ಯ? ಮಾಡಲಾಗದು, ಅಳಿಮನವ ಮಾಡಿ ದೊಡೆ ಮನದೊಡೆಯ ಬಲ್ಲಿನೈಸೆ" ಎಂಬ ಅಕ್ಕನವರ ವಚನಕ್ಕೆ ಸರಿಯಾದ

"ಬಿಡು ಬಾಹ್ಯದೊಳು ಡಂಭವ। ಮಾನಸದೊಳಗೆಡವೆಡದಿರು
ಶಂಭವ ॥ಪಲ್ಲ॥

ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ। ಪಡೆದರೆ ಶಿವ
ನಿನಗೊಲಿವನೆ ಮರುಳೆ ॥ಅನು॥

ಜನಮೆಚ್ಚಿ ನಡಕೊಂಡರೇನುಂಟು ಲೋಕದಿ।
ಮನಮೆಚ್ಚಿ ನಡಕೊಂಬುವುದೆ ಚಂದವು।
ಜನರೇನು ಬಲ್ಲರು ಒಳಗಾಗೋ ಕೃತ್ಯವ।
ಮನವರಿಯದ ಕಳ್ಳತನವಿಲ್ಲವಲ್ಲಾ ॥೧॥
ಜನರು ಮೆಚ್ಚಲು ನಿನ್ನ ಕೈಲಾಸಕೊಯ್ವರೆ।
ಜನಮೆಚ್ಚದಿರೆ ಶಿವ ಬಿಡುತಿಹನೆ।
ಜನರಿಲ್ಲಿ ನಿನ್ನನು ದೊಡ್ಡಾತನೆಂದರೆ।

ಚಿನುಮಯ ಶಿವನೇನೆಲ್ಲರಿಯನೆ ಮರುಳೆ ॥೨॥
ಮನದೋಳು ಶಿವತಾನೆ ಮನೆ ಮಾಡಿಕೊಂಡಿಹ।
ಮನಮೆಚ್ಚಿ ನಡೆದರೆ ಶಿವ ಮೆಚ್ಚುವ।
ಮನಕಂಜಿ ನಡೆಯದೆ ಜನಕಂಜಿ ನಡೆದರೆ।
ಮನದಾಣ್ಮ ಗುರುಸಿದ್ಧ ಮರೆಯಾಗೊನಲ್ಲ ॥೩॥

ಎಂಬ ಪದವು ಸರ್ಪಭೂಷಣ ಕವಿಗಳ ಕಲ್ಪವಲ್ಲರಿಯಲ್ಲಿದೆ. ಪೂರ್ವ ಕವಿಗಳ ಪದ್ಯಗಳನ್ನು ಹೋಲುವ ಕೆಲವು ವಚನಗಳನ್ನು ಹಿಂದೆಯೇ ತೋರಿಸಿದ್ದೇವೆ. ಸಾರಾಂಶವೇನೆಂದರೆ ಮಹಾಕವಿಗಳಲ್ಲಿ ಕಂಡುಬರುವ ಗುಣಗಳು ಮಹಾದೇವಿಯಕ್ಕನವರಲ್ಲಿ ಕಂಡುಬರುತ್ತಿರುವುವಾದರೂ ಅವುಗಳನ್ನೆಲ್ಲ ಇಲ್ಲಿ ತೋರಿಸಲಾಗುವುದಿಲ್ಲ.

ಅಕ್ಕನವರು ತಮ್ಮ ವಚನಗಳಲ್ಲಿ ಕೆಲವು ಸಾಮಾಜಿಕ ಸಂಗತಿಗಳನ್ನು ಹೇಳಿದ್ದಾರೆ. ಅವೆಲ್ಲ ಧರ್ಮನೀತಿಗಳನ್ನು ಅನುಸರಿಸಿವೆ. ಮತ್ತೆ ಕೆಲವು ಜನಸಾಮಾನ್ಯದ ಅಂಧಪರಂಪರೆಯನ್ನು ತಿಳಿಸುತ್ತವೆ. ವಿವಾಹದ ವಿಷಯವಂತೂ ಈ ಮೊದಲೇ ಬಂದುಬಿಟ್ಟಿತು. ಆ ವಿಷಯವನ್ನು ಮತ್ತೊಮ್ಮೆ ಇಲ್ಲಿ ಎತ್ತಿದರೆ ಚರ್ವಿತ ಚರ್ವಣವಾಗುತ್ತದೆ.

"ಅರಿಸಿನವನೆ ಮಿಂದು" ಎಂದು ಹೇಳುವ ವಚನದಲ್ಲಿ ಸ್ತ್ರೀಯರ ಅನುಲೇಪನವು ಉಕ್ತವಾಗಿದೆ. ಉತ್ತರಕರ್ನಾಟಕದಲ್ಲಿ ಈಗ ಸ್ತ್ರೀಯರು ನಿತ್ಯವೂ ವೀಳ್ಯ ಮೆಲ್ಲುವುದಿಲ್ಲ. ಇದರಿಂದ ವೀಳ್ಯವು ಅವರಿಗೆ ಸೇರುವದಿಲ್ಲವೆಂದಲ್ಲ. ಸ್ತ್ರೀಯರಿಗೆ ವೀಳ್ಯವು ಬಹಳ ಸೇರುತ್ತದೆ. ಆದರೆ ಕೊಂಕಣ ಮೈಸೂರ ಮದ್ರಾಸ ಪ್ರಾಂತಗಳಲ್ಲಿ ಸಾಮಾನ್ಯವಾಗಿ ಎಲ್ಲ ಸ್ತ್ರೀಯರು ನಿತ್ಯ ವೀಳ್ಯ ಮೆಲ್ಲುತ್ತಾರೆ. ಈ ಸಂಗತಿಯು ಕೆಳಗಿನ ವಚನ ಭಾಗದಲ್ಲಿ ಬಂದಿದೆ.

"ನಾನು ವೀಳೆಯವ ಮಾಡುವುದಕ್ಕೆ ಮುನ್ನವೆ, ಜಂಗಮಕ್ಕೆ ತಾಂಬೂಲವ ಕೊಡುವೆ."

ಈ ವಚನದಲ್ಲಿ ವೀಳ್ಯದ ವಿಷಯವೊಂದೇ ಅಲ್ಲದೆ ಅನೇಕ ಸಾಮಾಜಿಕ ಸಂಗತಿಗಳು ಬಂದಿವೆ. ಓದುಗರು ಅವುಗಳನ್ನು ಕಂಡುಕೊಳ್ಳಬೇಕು.

ವರ್ಣಾಶ್ರಮ ಧರ್ಮದ ಹುಚ್ಚು ೧೨ ನೆಯ ಶತಮಾನದಲ್ಲಿ ಜನ ಸಾಮಾನ್ಯದಲ್ಲಿ ಬಹಳವಾಗಿದ್ದಿತೆಂದು ತೋರುತ್ತದೆ. ಅದನ್ನು ಬಸವಣ್ಣನವರು

"ಹೊಲೆಯೊಳಗೆ ಹುಟ್ಟಿ ಕುಲವನರಿಸುವೆ. ಎಲವೋ ಮಾತಂಗಿಯ ಮಗ ನೀನು. ಸತ್ತುದನೆಳೆವನೆತ್ತಣ ಹೊಲೆಯ? ಹೋತ ತಂದು ನೀವು ಕೊಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗಮದೇವನ ಶರಣರು ಕರ್ಮವಿರಹಿತರು, ಶರಣಸನ್ನಿಹಿತರು, ಅನುಪಮಚರಿತ್ರರು ಅವರಿಂಗೆ ತೋರಲು ಪ್ರತಿ ಇಲ್ಲವೋ.

(ಬಸವೇಶ್ವರನ ವಚನಗಳು ವ. ೪೯ ಪುಟ ೬೬.)

ಎಂಬ ತಮ್ಮ ವಚನದಲ್ಲಿ ನಿರಾಕರಿಸಿದ್ದಾರೆ. ಇದನ್ನೇ ಅಕ್ಕನವರು "ಕುಲಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ," "ಗಂಡು ಹೆಣ್ಣೆಂಬ ಜಾತಿ" ಎಂಬ ಉಕ್ತಿಗಳಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ.

ರೂಢವಾದ ತೀರ್ಥಯಾತ್ರೆಗಳನ್ನು ಅವರು ಹಳಿದಿದ್ದಾರೆ.

"ಹಾಲ ಹಿಡಿದು ಬೆಣ್ಣೆಯನರಸಲುಂಟೆ? ಲಿಂಗವ ಹಿಡಿದು ಪುಣ್ಯ ತೀರ್ಥಕ್ಕೆ ಹೋಗಲುಂಟೇ?..... ಗುರುಕೊಟ್ಟ ಲಿಂಗದಲ್ಲಿಯೇ ಎಲ್ಲ ತೀರ್ಥಂಗಳು, ಎಲ್ಲ ಕ್ಷೇತ್ರಂಗಳು ಇಹವೆಂದು ಭಾವಿಸಿ ಮುಕ್ತರಪ್ಪುದಯ್ಯಾ!

ತೀರ್ಥಯಾತ್ರೆಗಳ ಉದ್ದೇಶವು ಆಯಾ ದೇಶಗಳಲ್ಲಿನ ನಡೆನುಡಿ, ಸಂಸ್ಕಾರ, ಬೆಳವಣಿಗೆ ಮುಂತಾದ ಸಂಗತಿಗಳನ್ನು ಕಂಡುಕೊಳ್ಳುವಲ್ಲಿದ್ದಿತು. ಅದನ್ನು ಮರೆಮಾಡಿ ಧಾರ್ಮಿಕ ಭಾವವು ಅದರಲ್ಲಿ ಬಂದಿದ್ದಿತಾದುದರಿಂದ ಅಕ್ಕನವರ ನಿರಾಕರಣೆ.

೧೨ನೆಯ ಶತಮಾನದಲ್ಲಿ ದುರುಳ ವೇದಾಂತಿಗಳು ಜನರನ್ನು ಈಗಿನಂತೆ ಬಹಳವಾಗಿ ಆಕರ್ಷಿಸುತ್ತಿದ್ದಂತೆ ಈ ವಚನದಿಂದ ಕಂಡು ಬರುತ್ತಿದೆ.

"ಅಯ್ಯಾ, ಆದಿ ಅನಾದಿಯಿಂದತತ್ತ ನೀವಿರಿ ತೋರುವ ನಿತ್ಯನಿರಂಜನ ಗುರುಲಿಂಗಜಂಗಮರ ಶಿವಶರಣರ ಸತ್ಯ ಸನ್ಮಾರ್ಗದ ಗೊತ್ತಿನ ಮರಿಯಾದೆಯನರಿಯದೆ ಮರ್ತ್ಯದ ಜಡಜೀವಿ ಭವಿ ಪ್ರಾಣಿಗಳ ಹಾ ಗುಹ್ಯಾಲಂಪಟಕಿಚ್ಛಿಸಿ, ದಾಸಿವೇಶಿಯರ ಕೂಡಿಕೊಂಡು ಭುಂಜಿಸಿ ಪಟ್ಟಸ್ಥಲ ಬ್ರಹ್ಮಾನುಭಾವವ ಕೇಳಿ ಹೇಳುವ ಮೂಳ ಚುಕ್ಕೆಯರ ಕಂಡು ಎನ್ನ ಮನ ನಾಚಿತ್ತು ಕಾಣಾ, ಅವ್ವ ನೀಲಮ್ಮನ ಮೋಹದ ಮಗಳೆ, ಅಪ್ಪ ಬಸವಣ್ಣನ ಚಿತ್ತದ ಪುತ್ಥಳಿ, ನಿಃಕಳಂಕ ಸದ್ಗುರು ಪ್ರಭುದೇವರ

ಸತ್ಯದ ಸೊಸೆಯೇ, ಚನ್ನಮಲ್ಲಿಕಾರ್ಜುನನರ್ಧಾಂಗಿನಿಯೆ, ಚಿಕ್ಕಯ್ಯಪ್ರಿಯ ಸಿದ್ಧಲಿಂಗನೊಡಹುಟ್ಟಿದಳೆ, ಕೇಳವ್ವ ಇದು ಮರ್ತ್ಯದ ಜಡಜೀವಿ ಭ್ರಷ್ಟರ ಬಾಳುವೆ ಎಂದೆ."

ಹಿಂದುಗಳಲ್ಲಿ ಧಾರ್ಮಿಕಭಾವವು ವೃಥವಾಗಿ ಬೇರೂರಿ ನಿಂತಿದೆ. ಆ ಕಾರಣದಿಂದ ಅನುಭವವಿಲ್ಲದೆ ವೇದಾಂತ ಹೇಳುವ ಜನರ ಸುತ್ತಲು ಅನೇಕರು ಈಗಲೂ ಉತ್ಸುಕತೆಯಿಂದ ನೆರೆಯುತ್ತಾರೆ. ೧೨ನೆಯ ಶತಮಾನದಲ್ಲಿ ಹೀಗಾಗುತ್ತಿದ್ದುದು ಆಶ್ಚರ್ಯದ ಸಂಗತಿಯಲ್ಲ. ಈ ದುರುಳ ವೇದಾಂತಿಗಳು ಅನೀತಿವಂತರೂ ಸ್ವೈರಿಣಿಯರೂ ಕಪಟಿಗಳು ಆಗಿ ಈಗ ಕಂಡುಬರುತ್ತಿರುವಂತೆ ಪೂರ್ವದಲ್ಲಿಯೂ ಇದ್ದಿರಬಹುದು. ಆದುದರಿಂದಲೇ ಅಕ್ಕನವರು ಸತ್ಯವನ್ನು ಮರೆಮಾಡದೆ ಹೀಗೆ ಹೇಳಿದುದು.

"ಈ ಸಾವ ಕೊಡುವ ಗಂಡರನೊಯ್ದು ಒಲೆಯೊಳಗಿಕ್ಕು" ಎಂದು ಹೇಳುವ ಅವರ ಉಕ್ತಿಯು ಎಷ್ಟು ಅರ್ಥಗರ್ಭಿತವಾಗಿದೆ? ಅದರಲ್ಲಿಯೂ "ಕೊಡುವ" ಎಂಬ ಶಬ್ದವಂತೂ ಗೂಢತರವಾಗಿದೆ. ಪತಿವ್ರತಾ ಸ್ತ್ರೀಯರಿಗೆ ಅದು ಹೃದಯಶಲ್ಯವಾಗಿದೆ. ಅದು ರೋಗಗಳಿಗೆ ತವರುಮನೆಯಾದಂತಿದೆ; ಅನೀತಿ-ಅನಾಚಾರ-ಅತ್ಯಾಚಾರಗಳಿಗೆ ಆಸರವಾಗಿದೆ.

"ದೃಢವಿಲ್ಲದ ಅಳುತನ" ಎಂಬ ಅವರ ಉಕ್ತಿಯು ಹೊಯ್ಸಳರಾದವರ ಕಾಲದಲ್ಲಿ ಅರಸನು ಮಡಿಯಲು ರಾಜಭಕ್ತಿಯಿಂದ ಅನೇಕರು ಆತ್ಮಹತ್ಯಮಾಡಿಕೊಂಡ ಐತಿಹಾಸಿಕ ಸಂಗತಿಯನ್ನು ನಮ್ಮೆದುರಿಗೆ ನಿಲ್ಲಿಸುತ್ತದೆ.

"ಸದ್ಭಕ್ತಿ ಭಿಕ್ಷ", ಭಿಕ್ಷಾನ್ನಂಗಳುಂಟು," ಮನೆಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ" ಎಂಬ ಉಕ್ತಿಗಳು ಆ ಕಾಲದ ಭಿಕ್ಷಾಟನೆಗೆ ಕುರುಹುಗಳಾಗಿವೆ. ಶರಣರ ಭಿಕ್ಷೆ ಬೇರೆ; ಶಠರ ಭಿಕ್ಷೆ ಬೇರೆ. ಧರ್ಮದ ಹೆಸರಿನಿಂದ ಭಿಕ್ಷೆಬೇಡುವದೊಂದು ಈಗ ವೈಭವಗಳ ವಾಗಿದೆ. ಅದು ಅವರ ಪರಂಪರೆಯಿಂದ ಬಂದ ಉದ್ಯೋಗ ಅಥವಾ ಧಾರ್ಮಿಕ ಅಧಿಕಾರವೆಂದು ಹೇಳಿಕೊಳ್ಳುತ್ತಾರೆ.

ಅಕ್ಕನವರ ವಚನಗಳಲ್ಲಿ ಇನ್ನೂ ಎಷ್ಟೋ ಸಾಮಾಜಿಕ ಸಂಗತಿಗಳು ಅಧಿಕವಾಗಿರಬಹುದು. ಅವುಗಳನ್ನೆಲ್ಲ ಇಲ್ಲಿ ತೋರಿಸಿಕೊಡಲು ಅವಕಾಶವಿಲ್ಲ. ಮತ್ತೆ: ಅವರ ವಚನಗಳೆಲ್ಲ ಒಂದೇ ಕಡೆಗೆ ಸಿಕ್ಕುತ್ತಿಲ್ಲ.

ಆದುದರಿಂದ ಒಮ್ಮೆಲೇ ದೊರೆಯಬಹುದಾದ ಸಂಗತಿಗಳು ದೊರೆಯುವದು ಕಷ್ಟಸಾಧ್ಯವಾಗಿದೆ.

ಸಮಾಜಕ್ಕೆ ನೀತಿಯೇ ತಳಹದಿ. ಅದು ಹೇಗೆ ಶುದ್ಧವಾಗಿರಬೇಕೆಂಬುದನ್ನು ಅವರು ಇಲ್ಲಿ ತೋರಿಸಿಕೊಟ್ಟಿದ್ದಾರೆ.

೧. ಸ್ತ್ರೀಯರಿಗೆ ಪಾತಿವ್ರತ್ಯವು ಭೂಷಣ—

"ನಿಮ್ಮ ಮಂಡೆಗೆ ಹೂವ ತಾಹೆನಲ್ಲದೆ ಹುಲ್ಲತಾರೆನು."

೧. ಸಾಮಾನ್ಯ ನೀತಿ ಮಾರ್ಗವು—

"ಅಯ್ಯಾ, ಸದಾಚಾರ, ಸದ್ಭಕ್ತಿ, ಸತ್‌ಕ್ರಿಯೆ, ಸಮ್ಯಜ್ಞಾನ, ಸದ್ವರ್ತನೆ, ಸಗುಣ, ನಿರ್ಗುಣ, ನಿಜಗುಣ, ಸಚ್ಚರಿತ, ಸದ್ಭಾವ, ಅಕ್ರೋಧ, ಸತ್ಯವಚನ, ಕ್ಷಮೆ, ದಮೆ, ಭವಭಕ್ತಭೇದ, ಸತ್ಪಾತ್ರ ದ್ರವ್ಯಾರ್ಪಣ, ಗೌರವಬುದ್ಧಿ, ಲಿಂಗಲೀಯ,..... ತಾ ಮಾಡುವ ಸತ್ಯಕಾಯಕ, ತಾ ಬೇಡುವ ಸದ್ಭಕ್ತಿ ಭಿಕ್ಷ, ತಾ ಕೊಟ್ಟುಕೊಂಬುವ ಭೇದ, ತಾನಾಚರಿಸುವ ಸತ್ಯ ನಡೆನುಡಿ, ಇಂತೀ ಮೂವತ್ತೆರಡು ಕಲೆಗಳ ಸದ್ಗುರು ಮುಖದಿಂದರಿದ ಬಸವ ಮೊದಲಾದ ಸಮಸ್ತ ಪ್ರಮಥಗಣಂಗಳೆಲ್ಲ ನಿರಾಭಾರಿ ವೀರಶೈವ ಸನ್ಮಾರ್ಗವಿಡಿದಾಚರಿಸಿದರು ನೋಡಾ.

ಇದು ಉಳಿದ ಆವ ಧರ್ಮದಲ್ಲಿ ಹೇಳಿದ ನೀತಿಮಾರ್ಗಕ್ಕೂ ಕಡಿಮೆಯದಾಗಿಲ್ಲ.

೨. ನೀತಿಮಾರ್ಗದಲ್ಲಿ ಆತ್ಮಶುದ್ಧಿಗೆ ಮಹತ್ವದ ಸ್ಥಾನವು ದೊರೆತಿದೆ.

"ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು. ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಿಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು. ಭಾವಶುದ್ಧವಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು.....ತ್ರಿಕರಣಶುದ್ಧವಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಹೃದಯಕಮಲ ಶುದ್ಧವಲ್ಲದವರಲ್ಲಿ ಇರಲೊಲ್ಲೆಯಯ್ಯ ನೀನು."

ಎಂಬ ವಚನವು ಮನೋಹರವಾಗಿ ಹೃದಯಸ್ಪರ್ಶಿಯಾಗಿರುವದರಿಂದ ಕಾಂತಾಸಮ್ಮಿತ ಉಕ್ತಿಯಾಗಿದೆ. ಎಲ್ಲ ಹಿಂದೂ ಧರ್ಮಗಳಿಗೆ ದಯೆ ಅಹಿಂಸೆಗಳು ಬೀಜವಾಗಿವೆ. ಅದನ್ನೇ ಅಕ್ಕನವರು ಹೀಗೆ ಹೇಳಿದ್ದಾರೆ.

"ಜಾಲಗಾರನೊಬ್ಬ ಜಲವ ಹೊಕ್ಕು, ಶೋಧಿಸಿ, ಹಲವು ಪ್ರಾಣಿಯ ಕೊಂದು ನಲಿನಲಿದಾಡುವ. ತನ್ನ ಮನೆಯಲೊಂದು ಶಿಶು ಸತ್ತಡೆ ಅದಕ್ಕೆ ಮರಗುವಂತೆ ಅವಕ್ಕೇಕೆ ಮರುಗನು?..... ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ. ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವಹಿಂಸೆಯ ನೂಡುವ ಮಾದಿಗರನೇನೆಂಬೆನಯ್ಯಾ?"

೪. ಜ್ಞಾನಿಗಳೂ ನೀತಿಪರರಾಗಿರಬೇಕು.

"ಅರಿವು ಸಾಧ್ಯವಾಯಿತ್ತೆಂದು ಗುರುಲಿಂಗಜಂಗಮವ ಬಿಡಬಹುದೆ? ಸಂದು ಸಂಶಯವಳಿದು ಅಖಂಡಜ್ಞಾನವಾಯಿತ್ತೆಂದು ಪರಧನ ಪರಸ್ತ್ರೀಗಳುಪಬಹುದೆ? "ಯತ್ರ ಜೀವಸ್ತತ್ರ ಶಿವಃ" ಎಂಬ ಅಭಿನ್ನ ಜ್ಞಾನವಾಯಿತ್ತೆಂದು ಶುನಕಸೂಕಾರ ಕುಕ್ಕುಟ ಮಾರ್ಜಾಲಗಳ ಕೂಡಿ ಭುಂಜಿಸಬಹುದೆ? ಭಾವದಲ್ಲಿ ತನ್ನ ನಿಜದ ನೆಲೆಯನರಿವುತ್ತಿಹುದು. ಸುಜ್ಞಾನ ಸತ್ಕ್ರಿಯಾ ಸುನೀತಿ ಸುಮಾರ್ಗದಲ್ಲಿ ವರ್ತಿಸುವುದು. ಹೀಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದ ಹಾಗೆ ವೀರಿ ನುಡಿದು ನಡೆದನಾದೊಡೆ ಶ್ವಾನನಗರ್ಭದಲ್ಲಿ ಹುಟ್ಟಿಸದೆ ಬಿಡುವನೇ ಚನ್ನಮಲ್ಲಿಕಾರ್ಜುನಯ್ಯನು?"

ಜ್ಞಾನಿಗಳು ಅನೀತಿಪರರಾದರೆ ಉಳಿದವರ ಪಾಡೇನು? ಮತ್ತು ಸ್ಪಚ್ಛವಾದ ಬಿಳಿಯ ವಸ್ತ್ರದ ಮೇಲೆ ಸಣ್ಣ ಕಲೆಯು ಸಹ ಎದ್ದು ಕಾಣುವದು. ಜ್ಞಾನಿಗಳು ಜನಸಾಮಾನ್ಯಕ್ಕೆ ಮಾರ್ಗದರ್ಶಕರು. ಸಮಾಜದ ಕಟ್ಟುಗಳ ಸಂರಕ್ಷಕರು ಉದ್ಯಾನದ ಬೇಲಿಯಂತಹರು. ಅವರು ಈ ನೀತಿಗೆ ತಪ್ಪಿದರೆ ಬೇಲಿಯೇ ಹೊಲವನ್ನು ಮೇಯಹತ್ತಿದಂತಾಗುತ್ತದೆ.

ಶಿವಯೋಗದ ವಿಷಯಕವಾದ ಅಕ್ಕನವರ ಆದರ, ಅಭಿಮಾನ, ವಿಶ್ವಾಸಗಳು ವರ್ಣಿಸಲಸಾಧ್ಯವಾಗಿವೆ. ಇವು ಅವರ ವಚನಗಳಲ್ಲಿ ಆರಂಭದಿಂದ ಅಂತ್ಯದ ವರೆಗೆ ತುಂಬಿಕೊಂಡಿವೆ. ಅವರ ಶಿವಾನುಭವವೂ ಪರಮಾನಂದವೂ ವರ್ಣನಾತೀತವಾಗಿವೆ. ಆ ಆನಂದವನ್ನು ವರ್ಣಿಸಲಾಗದೆಂದು ತಾವೇ ಹೇಳುತ್ತಾರೆ.

"ಅಯ್ಯಾ, ನಿಮ್ಮ ಮಹಂತರ ಕೂಡಿದ ಸುಖವನು ಉಪಮೆಗೆ ತರಬಾರದಯ್ಯಾ."

"ಲಿಂಗವೆನ್ನೆ, ಲಿಂಗೈಕ್ಯವೆನ್ನೆ, ಸಂಗವೆನ್ನೆ, ಸಮರಸವೆನ್ನೆ, ಆಯಿತೆನ್ನೆ, ಆಗದೆನ್ನೆ. ನೀನೆನ್ನೆ, ನಾನೆನ್ನೆ. ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವಾದ ಬಳಿಕ ಏನೂ ಎನ್ನೆ."

"ಕನಸಿನಲ್ಲಿ ಮನಸಂಗವಾಗಿ, ಮನಸಿನಲ್ಲಿ ಮೈಮರೆದು, ಸಂಗವಾಗಿದೇ, ಚೆನ್ನಮಲ್ಲಿಕಾರ್ಜುನನ ಕೂಡಿ ಕಣ್ಣೆರೆದೆನು."

"ಕದಳಿಯ ಬನದಲ್ಲಿ ಭವಹರನ ಕಂಡೆನು. ಭವಗೆಟ್ಟ ಮಗಳೆಂದು ಕರುಣದಿಂ ತೆಗೆದು ಬಿಗಿದಪ್ಪಿದರೆ, ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು."

ಬಸವ, ಚೆನ್ನಬಸವ, ಪ್ರಭುದೇವ ಮುಂತಾದ ಶಿವಶರಣರು ಪುರಾತನರಲ್ಲಿ ಗಣನೆಗೊಂಡಿದ್ದಾರೆ. ಪುರಾತನರು ಅವತಾರಿಗಳೆಂದು ಪರಂಪರೆಯಿಂದ ನಂಬುತ್ತಬಂದಂತೆ ಬಸವಾದಿ ಪ್ರಮಥರು ಅವತಾರಿಗಳೆಂದು ಅಕ್ಕನವರ ನಂಬುಗೆ. ಹರಿಹರಾಚಾರ್ಯರ ಅಭಿಪ್ರಾಯವೂ ಹಾಗೆಯೇ ಇದೆ. ಅವರು ಲಿಂಗದಿಂದುದಿಸಿ ಲಿಂಗದಲ್ಲಿಯೇ ಐಕ್ಯವಾಗುವರು.

"ಲಿಂಗದಿಂದುದಿಸಿ ಅಂಗವಿಡಿದಿಪ್ಪ ಪುರಾತನರ ಇಂಗಿತವನೇನೆಂದು ಬೆಸಗೊಂಬಿರಯ್ಯಾ? ಅವರ ನಡೆಯೇ ಆಗಮ, ಅವರ ನುಡಿಯೇ ವೇದ, ಅವರು ಲೋಕದ ಮಾನವರೆಂದೆನ್ನಬಹುದೇ?.....ಲಿಂಗದೊಳಗಿದ್ದ ಪುರಾತನರು ಉದ್ಭವಿಸಿದರು. ಮರಳಿ ಆ ಪುರಾತನರು ಲಿಂಗದೊಳಗೆ ಬೆರಸುವರು ನೋಡಿರಯ್ಯಾ. ಇಂತಪ್ಪ ಪುರಾತನರಿಗೆ ನಾನು ಶರಣೆಂದು ಹುಟ್ಟುಗೆಟ್ಟೆನಯ್ಯಾ ಚನ್ನಮಲ್ಲಿಕಾರ್ಜುನಾ."

ಸತ್ಪುರುಷರು ಅವತಾರಿಗಳೆಂದು ಬಗೆಯುವ ರೂಢಿಯು ಹಿಂದುಗಳಲ್ಲಿ ಈಗಲೂ ಕಂಡುಬರುತ್ತಿದೆ. ಅವರ ಇಂತಹ ಭ್ರಮೆಯಿಂದ ಧೂತರರು ಅವರನ್ನು ಮೋಸಗೊಳಿಸುತ್ತ ಬಂದಿದ್ದಾರೆ, ಮತ್ತು ಮೋಸಗೊಳಿಸುತ್ತಾರೆ.

ಶರಣರಿಗೆ ಶರಣೆಂದು ತಾವು ಮುಕ್ತಿ ಪಡೆದುದನ್ನು ಅಕ್ಕನವರು ಮೇಲಿನ ವಚನದ ಅಂತ್ಯದಲ್ಲಿ ಹೇಳಿದ್ದಾರೆ. ಅದೇ ಸಂಗತಿಯು ಮತ್ತೆ ಕೆಲವು ವಚನಗಳಲ್ಲಿ ಕಂಡುಬರುತ್ತಿದೆ.

"ಬಸವಣ್ಣ, ನಿಮ್ಮಂಗದಾಚಾರವ ಕಂಡು ಎನಗೆ ಲಿಂಗಸಂಗವಾಯಿತ್ತು. ಅಯ್ಯ ಬಸವಣ್ಣ, ನಿಮ್ಮ ಮನದ ಸುಜ್ಞಾನವ ಕಂಡು ಎನಗೆ

ಜಂಗಮ ಸಂಬಂಧವಾಯಿತ್ತು. ಅಯ್ಯ ಬಸವಣ್ಣ, ನಿಮ್ಮ ಸದ್ಭಕ್ತಿಯ ತಿಳಿದು ಎನಗೆ ನಿಜವು ಸಾಧ್ಯವಾಯಿತ್ತು.

"ಕಾಮನ ಗೆಲಿದೆನು, ಬಸವಾ, ನಿಮ್ಮ ದಯದಿಂದ. ಸೋಮಧರನ ಹಿಡಿತಪ್ಪೆನು, ಬಸವಾ, ನಿಮ್ಮ ಕೃಪೆಯಿಂದ.....ಬಸವಾ, ನಿಮ್ಮ ದಯದಿಂದ ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡಕನಿಕ್ಕಿ ಎರಡುವರಿಯದೆ ಕೂಡಿದೆನು, ಬಸವಾ, ನಿಮ್ಮ ಕೃಪೆಯಿಂದ.

"ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ, ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢಸ್ಥಲ, ಸಿದ್ಧರಾಮಯ್ಯನ ಸಮಾಧಿಸ್ಥಲ, ಇಂತಿವರ ಕರುಣ ಪ್ರಸಾದವೆನಗಾಯಿತ್ತು. ಚೆನ್ನಮಲ್ಲಿಕಾರ್ಜುನಯ್ಯ."

"ಮಾಟಕೂಟ ಬಸವಣ್ಣಂಗಾಯಿತ್ತ. ನೋಟಕೂಟ ಪ್ರಭುದೇವರಿಗಾಯಿತ್ತು. ಭಾವಕೂಟ ಅಜಗಣ್ಣಂಗಾಯಿತ್ತು. ಸ್ನೇಹಕೂಟ ಬಾಚಿರಾಜಂಗಾಯಿತ್ತು. ಇವರೆಲ್ಲರ ಕೂಟ ಚೆನ್ನಬಸವಣ್ಣಂಗಾಯಿತ್ತು. ಎನಗಿನ್ನಾವ ಕೂಟವಿಲ್ಲಯ್ಯ ಚೆನ್ನಮಲ್ಲಿಕಾರ್ಜುನಯ್ಯ.

"ಮಾಟಕೂಟದಲ್ಲಿ ಬಸವಣ್ಣನಿಲ್ಲ. ನೋಟಕೂಟದಲ್ಲಿ ಪ್ರಭುದೇವರಿಲ್ಲ. ಭಾವಕೂಟದಲ್ಲಿ ಅಜಗಣ್ಣನಿಲ್ಲ. ಸ್ನೇಹಕೂಟದಲ್ಲಿ ಬಾಚಿರಾಜನಿಲ್ಲ. ಇವರೆಲ್ಲರ ಕೂಟದಲ್ಲಿ ಚೆನ್ನಬಸವಣ್ಣನಿಲ್ಲ. ಎನಗಿನ್ನಿದೇನಯ್ಯ ಚೆನ್ನಮಲ್ಲಿಕಾರ್ಜುನಯ್ಯ?

ಶಿವಭಕ್ತರೂ ಶಿವಶರಣರೂ ತಮ್ಮ ಬಂಧುಬಳಗದವರೆಂದು ಅಭಿಮಾನದಿಂದ ಹೇಳುವ ವಚನವಿದು.

"ಎನ್ನಂತೆ ಪುಣ್ಯೈವವರುಂಟೇ? ಎನ್ನಂತೆ ಭಾಗ್ಯೈವ್ದವರುಂಟೇ? ಕಿನ್ನರರಂತಪ್ಪ ಸಹೋದರರೆನಗೆ. ಏಳೇಳು ಜನ್ಮದಲಿ ಶಿವಭಕ್ತರೇ ಬಂಧುಗಳೆನಗೆ." ಇವರೆಲ್ಲರಲ್ಲಿ ಚೆನ್ನಬಸವಣ್ಣನಿಗೆ ಅಗ್ರಸ್ಥಾನವನ್ನು ಕೊಟ್ಟಿರುವದರಿಂದ "ಇವರೆಲ್ಲರ ಕೂಟ ಚೆನ್ನಬಸವಣ್ಣಂಗಾಯ್ತು;" ಇವರೆಲ್ಲರ ಕೂಟದಲ್ಲಿ ಚೆನ್ನಬಸವಣ್ಣನಿಲ್ಲ;"

ಮತ್ತು ಚೆನ್ನಬಸವಣ್ಣನವರು ಎಲ್ಲ ಶರಣರ ವಚನಗಳನ್ನು ತೂಗಿ ಅವುಗಳಿಗೆ ಯೋಗ್ಯಸ್ಥಾನವನ್ನು ಕೊಡುವ ಸಂದರ್ಭದಲ್ಲಿ

"ಅಯ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ, ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ, ಪ್ರಭು ದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ, ಅಜಗಣ್ಣನ ಐದು ವಚನಕ್ಕೆ ಕೂಡಲಚೆನ್ನಸಂಗಯ್ಯನಲ್ಲಿ ಮಹಾದೇವಿಯಕ್ಕಳ ಒಂದು ವಚನ ಕಾಣಾ ಸಿದ್ಧರಾಮಯ್ಯ"

ಎಂದಿರುವಾಗ ಒಪ್ಪೆಲೆ ಯಾರೂ "ಅಹೋ ರೂಪಂ ಅಹೋ ಧ್ವನಿಃ" ಎಂದು ನಿಷ್ಕರ್ಷೆ ಮಾಡಬಾರದು. ನಿಜವಾಗಿಯೂ ಪ್ರತಿ ಯೊಂದು ವಚನದಲ್ಲಿ ಅನುಭವವಿಲ್ಲದೆ ಅಕ್ಕನವರು ಮಾತಾಡುವದಿಲ್ಲ. ಅನುಭವದ ಸಂಗತಿಗಳನ್ನು ಹೇಳುತ್ತಾರೆಯೇ ಹೊರ್ತು ವ್ಯವಹಾರವನ್ನಲ್ಲ. ಅದುದರಿಂದ ಅವರ ಉಕ್ತಿಗಳು ಬಹಳ ಗೂಢವಾಗಿವೆ; ಗಾಢವಾಗಿವೆ. ಇಪ್ಪೊಂದೇ ಒಂದು ಸಂಗತಿಯಿಂದ ಅತ್ಯುಚ್ಚ ಸ್ಥಾನವು ದೊರೆತುದು. ಅದಾದರೂ ಚೆನ್ನಬಸವಣ್ಣನವರಂತಹ ಜ್ಞಾನಿಗಳಿಂದ ಅದನ್ನು ಯಾರಿಗೂ ನಿರಾಕರಿಸಲು ಬರುವಂತಿಲ್ಲ.

ಅಕ್ಕನವರಿಗೆ ಶಿವಶರಣರ ಸಹಾಯವಾದುದನ್ನು ಅವರು ತಾವೇ ಹೇಳಿಕೊಂಡು ವ್ಯವಹಾರದೃಷ್ಟಿಯಿಂದ ತಮ್ಮ ಕೃತಜ್ಞತೆಯನ್ನು ತೋರಿ ಸಿದಂತೆ (ಶರಣರಿಗೆ ಕೃತಜ್ಞತೆಯ ಬಯಕೆಯಿಲ್ಲ, ವ್ಯವಹಾರವಿಲ್ಲ.) ಅಕ್ಕ ನವರು ಅನ್ಯರಿಗೆ ಸಹಾಯವಾದುದನ್ನು ಅವರು ಹೇಳಿಕೊಂಡಿಲ್ಲ. ಅಥವಾ ಉಳಿದ ವಚನಕಾರರಾರೂ ಇದನ್ನು ತೋರಿಸಿಕೊಟ್ಟಿಲ್ಲ. ಅದುದರಿಂದ ವ್ಯವಹಾರ ದೃಷ್ಟಿಯಿಂದ ಅಕ್ಕನವರ ಮೇಲೆ ಸ್ವಾರ್ಥಿಗಳೆಂದೊಂದು ಆರೋಪವನ್ನು ಹೊರಿಸಲು ಬರುವಂತಿದೆ. ಅವರಲ್ಲಿ ಅದನ್ನು ತಪ್ಪಿಸ ಬೇಕಾದರೆ ಸಂಶೋಧಕರು ಮುಂದೆ ಸರಿದು ಟೊಂಕಕಟ್ಟಿ ಸಂಶೋಧನ ಕಾರ್ಯಕ್ಕೆ ಸಿದ್ಧರಾಗಿ, ಆ ಆರೋಪದಿಂದ ಅಕ್ಕನವರನ್ನು ಮುಕ್ತಗೊ ಳಿಸಬೇಕು. ಅಕ್ಕನವರ ಅಗಾಧಜ್ಞಾನ, ದೃಢಭಕ್ತಿ, ಅನುಭವ ಮುಂತಾದ ಪಾರಲೌಕಿಕ ಸಾಧನಸಾಮುಗ್ರಿಗಳ ಸಹಾಯವು ಇತರರಿಗೆ ಆಗಿರದೆ ಹೋಗದು. ಇಂತಿ. ಶ.

ಟೀಪುಃ—ಮೇಲ್ಕಂಡ ಲೇಖವು "ದಿ ರಾಜಾರಾಮಿಯನ್" ಈ ಪತ್ರಿ ಕೆಯಲ್ಲಿ ಪ್ರಸಿದ್ಧವಾಗಿದ್ದು ಅದನ್ನು ಲೇಖಕರ ಒಪ್ಪಿಗೆಯಿಂದ ಇದರಲ್ಲಿ ಪ್ರಸಿದ್ಧವಾಡಿದೆ.

ಶೂನ್ಯಸಂಪಾದನೆಯ ರಹಸ್ಯ.

(ಲೇ— ಕಲ್ಯಾಣಪ್ಪ ಬ್ಯಾಳಿ, ಬಿ. ಏ. ವಿಜಾಪುರ.)

೧೦. ಸಿದ್ಧರಾಮಯ್ಯನ ಗುರುಕರುಣೆ.

ಶಿವಯೋಗಿ ಸಿದ್ಧರಾಮಗೆ
ಅವಿರಳ ಶಿವಲಿಂಗದೀಕ್ಷೆಯಂ ಸಂತಸದಿಂ।
ಭುವಿಯರಿಯೆ ಚೆನ್ನಬಸವಂ
ತವೆಗೆಯ್ದುದ ಪೇಳ್ವೆ ಶರಣಜನಮುದವೊಂದಲ್ ॥

ಈ ಸಂವಾದನೆಯಲ್ಲಿ ಶ್ರೀ ಸಿದ್ಧರಾಮಯ್ಯದೇವರಿಗೆ ಗುರುವಾದ ಚೆನ್ನಬಸವಣ್ಣನವರು ಶಿವಲಿಂಗ ದೀಕ್ಷೆಯನ್ನು ಮಾಡಿದ್ದರಿಂದ ಅದಕ್ಕೆ ಮೇಲಿನ ಹೆಸರು ಕೊಡಲ್ಪಟ್ಟಿದೆ. ಹಿಂದೆ ಪ್ರಭುದೇವರು "ಕರಸ್ಥಲದ ಲಿಂಗದ ನಿಜವನ್ನು ಬಸವರಾಜ ದೇವರಿಂದ ಹೇಳಿಸಿಹೆನೆಂದು" ಸಿದ್ಧ ರಾಮೇಶ್ವರನನ್ನು ಕಲ್ಯಾಣಕ್ಕೆ ಕರೆದುಕೊಂಡು ಬಂದುದು ಇನೆಯ ಸಂಪಾ ದನೆಯಲ್ಲಿ ವರ್ಣಿತವಾಗಿರುವದಷ್ಟೇ. ಈಗ ಸಿದ್ಧರಾಮಯ್ಯ ದೇವರು ಪ್ರಭುದೇವರಿಗೆ ಹಿಂದಿನ ಪ್ರಸ್ತಾಪವನ್ನು ನೆನಪು ಮಾಡಿಕೊಟ್ಟರು. ಆ ವಿಷಯವನ್ನು ಪ್ರಭುದೇವರು ಬಸವಾದಿ ಪ್ರಮಥರ ಮುಂದಿಟ್ಟರು. ಸಿದ್ಧರಾಮಯ್ಯ ದೇವರಿಗೆ ಇಷ್ಟಲಿಂಗವಿಲ್ಲದ್ದನ್ನು ಕಂಡು ಬಸವಣ್ಣನ ವರು "ಅಂಗ ಲಿಂಗ ಸಂಬಂಧವಿಲ್ಲದಿದ್ದರೆ ಎನ್ನ ಮನ ಸೋಗಸದಯ್ಯಾ" ಎಂದು ಅಪ್ಪಣೆ ಕೊಡಿಸಿದರು. ಅಲ್ಲಿ ನೆರೆದ ಏಳುನೂರೆಪ್ಪತ್ತು ಗಣಂ ಗಳೆಲ್ಲ ಬಸವೇಶ್ವರನ ಮಾತನ್ನೇ ಎತ್ತಿ ಹಿಡಿದು ಮಾತನಾಡಿದರು. ಸಿದ್ಧ ರಾಮೇಶ್ವರನೇನೂ ಸಾಮಾನ್ಯ ಮನುಷ್ಯನಿದ್ದಿಲ್ಲ. ಆತನು ಪೊದಲು ಶುದ್ಧ ಶೈವನಾಗಿದ್ದನು. ಯೋಗಸಾಧನೆಯ ಕೊನೆಯ ತುದಿಯನ್ನು ಮುಟ್ಟಿದ್ದನು. ಯೋಗಸಮಾಧಿಯಿಂದ ಚಿದಾನಂದವನ್ನು ಹೊಂದಿ ಸುಖಿ ಸಿದ್ದನು. ಇಂಥ ಸಿದ್ಧರಾಮ ಶಿವಯೋಗಿಯು ಈಗ ಯೋಗಿಗೂ ಜ್ಞಾನಿಗೂ ಇಷ್ಟಲಿಂಗ ಸಂಬಂಧವೇ ಜೇಡವೆಂದು ಅನೇಕ ವಚನಗ ಳಿಂದ ಸುಸಂಗತವಾಗಿ ನಿಶ್ಚಯ ಪಡಿಸಿದನು. ಆದರೆ ಷಟಸ್ಥಲ ಜ್ಞಾನಿ ಯಾದ ಚೆನ್ನಬಸವಣ್ಣನೆದುರಿಗೆ ಆತನ ಆಟ ನಡೆಯಲಿಲ್ಲ ಕಡೆಗೆ ವಾದದಲ್ಲಿ ಸೋತು ಬಸವಾದಿ ಪ್ರಮಥರ ಭಕ್ತಿ ಮಾರ್ಗಕ್ಕೆ ಆತನು

ತಲೆಬಾಗಲೇ ಬೇಕಾಯಿತು. ಆಗ ಪ್ರಭುವಿನ ಅಪ್ಪಣೆಯ ಮೇರೆಗೆ ಚನ್ನಬಸವೇಶ್ವರನು ಸಿದ್ಧರಾಮ ಶಿವಯೋಗಿಗೆ ೨೧ ದೀಕ್ಷೆಗಳಿಂದ ಇಷ್ಟ ಲಿಂಗಧಾರಣ ಮಾಡಿ ಅತನನ್ನು ವೀರಶೈವನನ್ನಾಗಿ ಮಾಡಿದನು. ಈಗಿನ ಸೊಲ್ಲಾಪುರದ ಸಿದ್ಧರಾಮೇಶ್ವರನ ದೇವಾಲಯವು ಆ ಮಹಿಮನ ಘನ ತೆಯನ್ನೂ ಪೂಜ್ಯತೆಯನ್ನೂ ತೋರಿಸುವ ಕುರುಹಾಗಿದೆ.

ಎಲ್ಲ ಸಂಪಾದನೆಗಳಲ್ಲಿ ಈ ಸಂಪಾದನೆಯು ಅತ್ಯಂತ ಮಹತ್ವ ದ್ದಾಗಿದೆ. ಇದರಲ್ಲಿ ವೀರಶೈವ ಧರ್ಮದ ರಹಸ್ಯವೇ ಅಡಕವಾಗಿದೆ. ನಮ್ಮ ಶಿವಶರಣರು ಯೋಗ ಸಾಂಖ್ಯ ಮಾರ್ಗಗಳನ್ನು ನಿರಾಕರಿಸಿ ಭಕ್ತಿ ಮಾರ್ಗಕ್ಕೇನೇ ಹೆಚ್ಚು ಮಹತ್ವಕೊಟ್ಟದ್ದು ಈ ಸಂಪಾದನೆಯಲ್ಲಿ ಸ್ಪಷ್ಟ ವ್ಯಕ್ತವಾಗುತ್ತದೆ. ವೀರಶೈವರಿಗೆ ಭಕ್ತಿಯೇ ಪ್ರಾಮುಖ್ಯ. ಯೋಗ ಜ್ಞಾನಗಳು ಗೌಣವಾದವುಗಳು. ಭಕ್ತಿಯಲ್ಲಿಯೇ ನಮ್ಮವರು ಯೋಗ ಜ್ಞಾನಗಳನ್ನು ಅಡಗಿಸಿಬಿಟ್ಟಿದ್ದಾರೆ. ಭಕ್ತಿಯ ಕುರುಹೇ ಕಾಯದ ಕರ ಸ್ಥಲದಲ್ಲಿದ್ದ ಇಷ್ಟಲಿಂಗವು. ಸಾಕಾರದಲ್ಲಿ ಭಕ್ತಿಯನ್ನಿರಿಸದೆ ನಿರಾಕಾರ ವಾದ ಜ್ಞಾನವು ಲಭಿಸದು. ಭಕ್ತಿಯಿಲ್ಲದೆ ಯಮನಿಯಮಾದಿ ಅಷ್ಟಾಂಗ ಯೋಗಗಳ ಬಲದಿಂದ ರಸಭರಿತವಾದ ಆನಂದವು ದೊರಕೊಳ್ಳದು. ನಮ್ಮಲ್ಲಿ ಭಕ್ತಿಯೇ ಯೋಗಜ್ಞಾನಗಳ ತಳಹದಿಯು. ನಮ್ಮವರ ಯೋಗವು ಯೋಗಾಭ್ಯಾಸದಿಂದುಂಟಾದುದಲ್ಲ; ಇಷ್ಟಲಿಂಗದಲ್ಲಿರಿಸಿದ ಭಕ್ತಿಯಿಂ ದುಂಟಾದ ಸಮರಸಭಾವವು. ಇದಕ್ಕೇ ಶಿವಯೋಗವೆಂದೆನ್ನುವರು. ಶಿವಯೋಗವೆಂದರೆ ಲಿಂಗದಲ್ಲಿ ತಲ್ಲೀನತೆ, ತಾದಾತ್ಮ್ಯಭಾವ, ಅಥವಾ ಪರವಶತೆಯನ್ನು ಹೊಂದುವಿಕೆಯು. ನಮ್ಮವರ ಜ್ಞಾನವು ಬುದ್ಧಿಯ ಒರೆಗಲ್ಲಿಗೆ ಹಚ್ಚಿ ಪ್ರಮಾಣಗಳಿಂದ ಸಿದ್ಧವಾದುದಲ್ಲ. ಅಂಥ ಜ್ಞಾನವು ಅದ್ವೈತ ಮತಕ್ಕೆ ಸಂಬಂಧಿಸಿದ್ದಾಗಿದೆ. ನಮ್ಮವರ ಜ್ಞಾನವು ವರಕವಿಗೆ ಸ್ಫುರಣವಾದ ಪ್ರತಿಭೆಯಂತೆ. ಭಕ್ತಿಯ ಅತಿರೇಕದಿಂದ ಸ್ವಯಂಸ್ಫೂರ್ತಿ ಹೊಂದಿದ ದಿವ್ಯಶಕ್ತಿಯಾಗಿರುತ್ತದೆ. ನಮ್ಮ ಇಷ್ಟ ಪ್ರಾಣ ಭಾವಲಿಂಗ ಗಳು ಕ್ರಮವಾಗಿ ಭಕ್ತಿಯೋಗ ಜ್ಞಾನಗಳ ಕುರುಹುಗಳಾಗಿವೆ. ಸಾಕಾ ರವಾದ ಇಷ್ಟಲಿಂಗವಿಡಿದೇ ಮನೋರ್ಲಯವಾಗುವದು. ಪ್ರಾಣಲಿಂಗಾ ನುಸಂಧಾನವು. ಇದೇ ಯೋಗವು. ಆ ಪ್ರಾಣಲಿಂಗಾನುಸಂಧಾನದಿಂದ ನಮ್ಮ ಮನಸ್ಸಿಗೆ ಹೊಳೆದ ದಿವ್ಯ ಜ್ಯೋತಿಯೇ ಜ್ಞಾನವು. ಇದೇ ಭಾವಲಿಂಗವು.

ಸಿದ್ಧರಾಮಶಿವಯೋಗಿಯು ಮೊದಲು ಯೋಗಮಾರ್ಗದವನು. ಅದರಂತೆ ಪ್ರಭುವು ಶುದ್ಧ ಸಾಂಖ್ಯಮಾರ್ಗದವನು. ಇಬ್ಬರೂ ಭಕ್ತಿ ಮಾರ್ಗದವರಾಗಿದ್ದಿಲ್ಲ. ಅನಿಮಿಷದೇವರಿಂದ ಪ್ರಭುವಿಗೆ ಇಷ್ಟಲಿಂಗಧಾ ರಣೆಯಾಗಿದ್ದರೂ ಭಕ್ತಿಯ ಗುಟ್ಟು ಅವರಲ್ಲಿ ಚನ್ನಾಗಿ ಅಳವಟ್ಟಿದ್ದಿಲ್ಲ. ಅಂತೆಯೇ ಅವರು ಸಿದ್ಧರಾಮಯ್ಯನೊಂದಿಗೆ ಭಕ್ತಿಯ ಭಿಕ್ಷೆಯನ್ನು ಹೊಂದು ವದಕ್ಕಾಗಿ ಶ್ರೀ ಬಸವೇಶ್ವರನ ಬಳಿಗೆ ಕಲ್ಯಾಣಕ್ಕೆ ಬಿಜಯಂಗೈದರು. ಹಿಂದಕ್ಕೆ ಸಿದ್ಧರಾಮಯ್ಯನಿಗೂ ಪ್ರಭುವಿಗೂ ವಾದ ನಡೆದಾಗ ಪ್ರಭುವು ಯೋಗಮಾರ್ಗವನ್ನು ಧಿಕ್ಕರಿಸಿ ಜ್ಞಾನಮಾರ್ಗದ ರಹಸ್ಯವನ್ನು ಸಿದ್ಧರಾ ಮಯ್ಯ ದೇವರಿಗೆ ತೋರಿಸಿಕೊಟ್ಟನು. ಜ್ಞಾನಮಾರ್ಗದಲ್ಲಿ ಬಲ್ಲಿದನಾದ ಪ್ರಭುವು ಯೋಗಮಾರ್ಗಾವಲಂಬಿಯಾಡ ಸಿದ್ಧರಾಮಯ್ಯದೇವರನ್ನು ವಾದದಲ್ಲಿ ಸೋಲಿಸಿದನೇನೋ ನಿಜ. ಆದರೆ ಆದೇ ಸಿದ್ಧರಾಮಯ್ಯದೇ ವರು ಪ್ರಭುವಿಗೆ "ನಿಮ್ಮ ಕಾಯವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ ಪ್ರಭುವೇ, ಕಪಿಲಸಿದ್ಧ ಮಲ್ಲಿಕಾರ್ಜುನಾ" ಎಂದು ಪ್ರಶ್ನೆಮಾಡಲು ಪ್ರಭುವು ಅದನ್ನು ಹೇಳಲಸಮರ್ಥನಾಗಿ "ಈ ಕಾಯದ ಕರಸ್ಥಲದ ಅನುವನು ಗುಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ. ಬೆಸಗೊಂಬ ಬಾರಾ ಸಿದ್ಧರಾಮಯ್ಯ" ಎಂದು ಅತನನ್ನು ಕಲ್ಯಾಣಕ್ಕೆ ಕರೆದೊಯ್ದನು. ನಮ್ಮಲ್ಲಿ ಸಿದ್ಧರಾಮೇಶ್ವರ ಹಾಗೂ ಅಕ್ಕಮಹಾದೇವಿಯು ಯೋಗಮಾ ರ್ಗದವರು. ಪ್ರಭುದೇವ ಚನ್ನಬಸವಣ್ಣನವರು ಜ್ಞಾನಮಾರ್ಗದವರು. ಬಸವೇಶನೂ ಅತನ ಅನುಯಾಯಿಗಳಾದ ಅಸಂಖ್ಯಾತ ಪ್ರಮಥರೂ ಭಕ್ತಿಮಾರ್ಗದವರು. ಬಸವೇಶ್ವರನಿಂದ ಭಕ್ತಿಯ ಭಿಕ್ಷೆಯನ್ನು ಹೊಂದಿದ ಬಳಿಕ ಅವರೆಲ್ಲ ತಮ್ಮ ಯೋಗ ಹಾಗೂ ಜ್ಞಾನದ ದಿಶೆಯನ್ನು ಭಕ್ತಿಯ ಕಡೆಗೆ ಹೊರಳಿಸಿ ಭಕ್ತಿಯೆಂಬ ಬೆಂಕಿಯಲ್ಲಿ ತಮ್ಮ ಯೋಗ ಜ್ಞಾನಗ ಳನ್ನು ಪುಟಹಾಕಿದರು.

ನಮ್ಮ ಅಸಂಖ್ಯಾತ ಪ್ರಮಥರೆಲ್ಲ ಯಮ, ನಿಯಮ, ಆಸನ, ಪ್ರಾಣಾಯಾಮಾದಿಗಳಿಂದ ಸಾಧಿಸುವ ಯೋಗಮಾರ್ಗವನ್ನು ನಿರಸನ ಗೊಳಿಸಿದರು. 'ಶ್ರುತಿ ಚಕಿತಮಭದತ್ತೇ' ಎಂದು ಹೇಳಿ ಸಾಂಖ್ಯಮಾ ರ್ಗವವನ್ನು ಅರ್ಥಾತ್ ಶುದ್ಧಾದ್ವೈತದ ಜ್ಞಾನಮಾರ್ಗವನ್ನು ನಿರಾಕರಿ ಸಿದರು. ಆದರೆ ಭಕ್ತಿಯ ಉಪಾಸನೆಗೆ ಸಾಧನವಾದ ಇಷ್ಟಲಿಂಗದ ಮಹತ್ವವನ್ನು ಅನೇಕ ತರಹದ ಉಪಮೆಗಳಿಂದಲೂ, ವಚನ ಪ್ರತ್ಯಕ್ಷ ರ್ಯದಿಂದಲೂ ಸಮರ್ಥನಗೊಳಿಸಿದರು. ಇಷ್ಟಲಿಂಗವನ್ನು ಯಾಕೆ

ಧರಿಸಬೇಕು, ಅದರ ಮಹತ್ವವೇನು, ಎಂದು ಅಡ್ಡತಿಡ್ಡ ಪ್ರಶ್ನೆಮಾಡು ವವರು ಈ ಸಂಪಾದನೆಯನ್ನು ಅವಶ್ಯವಾಗಿ ಓದಬೇಕು. ಅಂದರೆ ಅವರ ಶಂಕೆಗಳನ್ನೆಲ್ಲಾ ಬಹು ಸುಲಭವಾಗಿ ಬಿಡಿಸುವವು. ಈ ಸಂಪಾ ದನೆಯ ಸಾರವನ್ನು ಇದರಡಿಯಲ್ಲಿ ಸಂಕ್ಷಿಪ್ತವಾಗಿ ಕೊಡಲೆಳಸುತ್ತೇವೆ.

ಸಿದ್ಧರಾಮಯ್ಯ ದೇವರು ಪ್ರಭುದೇವರನ್ನು ಕುರಿತು "ಪ್ರಭುವೇ, ಕರಸ್ಥಲದ ಲಿಂಗದ ನಿಜವನ್ನು ಬಸವರಾಜದೇವರಿಂದ ಹೇಳಿಸಿಹೆನೆಂದು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿರಿ. ಅಯ್ಯಾ, ಕಾಯ ಲಿಂಗವೋ? ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೋ? ಪ್ರಾಣ ಲಿಂಗವೋ? ಪ್ರಾಣ ದಲ್ಲಿ ಸಾರಿಪ್ಪ ಲಿಂಗ ಲಿಂಗವೋ? ಜ್ಞಾನ ಲಿಂಗವೋ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೋ? ಲಿಂಗ ಪ್ರಾಣ ಪ್ರಾಣ ಲಿಂಗವೆಂತೆಂಬುದನರಿಯೆನು. ನಿಮ್ಮ ಕಾಯದ ಕರಸ್ಥಲವ ಸಾರಿದ ಲಿಂಗ ಪ್ರಾಣದೊಳಗೆ ವೇದ್ಯವಾದ ಪರಿಯನುಪದೇಶಿಸಿ ಕೃಪೆಯ ಮಾಡಾ ಕಪಿ ಲಸಿದ್ಧಮಲ್ಲಿಕಾರ್ಜುನಾ" ಎಂದು ಬೆಸಗೊಂಡರು.

ಈ ಮಾತಿಗೆ ಪ್ರಭುದೇವರು ಬಸವರಾಜದೇವರ ಕಡೆಗೆ ತಿರುಗಿ ಸಿದ್ಧರಾಮಯ್ಯನಿಗೆ ಉಪದೇಶ ಮಾಡಬೇಕೆಂದು ಬೇಡಿಕೊಳ್ಳಲು ಬಸ ವೇಶ್ವರರು "ಅಯ್ಯಾ ಪ್ರಭುವೇ, ಸಿದ್ಧರಾಮಯ್ಯದೇವರ ಅಂಗಲಿಂಗ ಸಂಬಂಧವಿಲ್ಲದಿದ್ದರೆ ಎನ್ನ ಮನ ಒಪ್ಪದು ನೋಡಾ. ಸಮಯ ವಿರು ದ್ಧಕ್ಕಂಜಿ ವಿನಯವನುಡಿಯೆ. ಕೊಂದರೆ ಕೊಲ್ಲು. ಕಾಯಿದರೆ ಕಾಯಿ. ಸಿದ್ಧ ರಾಮಯ್ಯದೇವರು ಇಷ್ಟಲಿಂಗವಿಲ್ಲದೆ ಎನ್ನವರೆಂದರೆ ಎನ್ನ ಮನ ಸೊಗ ಸದು ನೋಡಾ ಕೂಡಲ ಸಂಗಮದೇವಾ" ಎಂದು ಅಪ್ಪಣೆ ಕೊಡಿಸಿದರು.

ಚನ್ನಬಸವದೇವರು ಅದೇ ಸಮಯಕ್ಕೆ ಅಂಗದ ಮೇಲೆ ಲಿಂಗ ವಿಲ್ಲದಿದ್ದರೆ ಪ್ರಾಣಲಿಂಗ ಸಂಬಂಧವಾಗದೆಂಬ ಮಾತನ್ನು ಈ ಪರಿಯಾಗಿ ಹೇಳಿದರು. "ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ ಪ್ರಾಣಲಿಂಗದಲ್ಲಿ ಪರಿಣಾಮವನೆಯ್ದುವ ಪರಿಎಂತಯ್ಯಾ? ಅಂಗತ್ರಯವುಳ್ಳವರು ಲಿಂಗ ತ್ರಯ ಸಂಪನ್ನರಾಗಬೇಕು. ಒಂದಂಗ ವಿರಹಿತವಾದವರುಂಟೆ ಸಿದ್ಧ ರಾಮಯ್ಯ," ಎಂದುಸುರಿದರು.

ಅದಕ್ಕೆ ಸಿದ್ಧರಾಮಯ್ಯ ದೇವರು "ತನು ಮನ ಭಾವಗಳೆಂಬ ಅಂಗತ್ರಯಗಳು ಭಿನ್ನವೆಂದು ತಿಳಿದವರು ಲಿಂಗತ್ರಯ ಸಂಪನ್ನರಾಗ ಬೇಕೇನೋ ನಿಜ. ಆದರೆ ನನಗೆ ತನುಮನ ಭಾವಗಳು ಏಕಾರ್ಥ

ವಾಗಿರಲು ಯಾವ ತನುವಿನ ಮೇಲೆ ಇಷ್ಟಲಿಂಗವ ಧರಿಸಲಿ, ಎನ್ನ ಕಾಯವೇ ಬಸವಣ್ಣಾ, ಎನ್ನ ಪ್ರಾಣವೇ ಪ್ರಭುದೇವರು. ತನುವಿದ್ದು ತನುವಿಲ್ಲ. ಮನವಿದ್ದು ಮನವಿಲ್ಲ. ಭಾವವಿದ್ದು ಭಾವವಿಲ್ಲ. ನಾನು ಲಿಂಗನಿರ್ದೇಪನೆಂದು ನಿಮ್ಮೆದುರಿಗೆ ನುಡಿದು ಹೇಳಬಾರದು ನೋಡಾ. ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಹೊರಗು ಒಳಗು ಎಂಬುದಿಲ್ಲ ಕಾಣಾ ಚೆನ್ನಬಸವಣ್ಣಾ ಎಂದು ಹೇಳಿದರು.

ಶ್ರೀಪ್ರಭುದೇವರು ಬುದ್ಧಿಪೂರ್ವಕವಾಗಿ ಸಿದ್ಧರಾಮಯ್ಯನ ಮಾತನ್ನೇ ಎತ್ತಿಹಿಡಿದು ನುಡಿದುದೇನೆಂದರೆ— "ಪರಬೊಮ್ಮನನರಿದ ಶರಣಂಗೆ ಶಿವ ಪೂಜೆಯ ಮಾಡುವ ದಂದುಗವೇಕೋ? ಒಲುಮೆಯ ಕೂಟಕ್ಕೆ ಹಾಸಿ ಗೆಯ ಹಂಗೇಕೋ? ಬೇಟದ ಮರುಳಿಂಗೆ ಲಜ್ಜೆಯಿನ್ನೇಕೋ? ಮಿಸು ನಿಯ ಚಿನ್ನಕ್ಕ ಒರೆಗಲ್ಲಿನ ಹಂಗೇಕೋ? ಗುಹೇಶ್ವರ ಲಿಂಗವು ಪ್ರಾಣ ವಾಗಿಪ್ಪ ಸಿದ್ಧರಾಮಯ್ಯ ದೇವರಿಗೆ ಕುರುಹು ಮತ್ತೇಕೋ? ಅಕಾ ಶವನಡರುವಂಗೆ ಅಟ್ಟಗೋಲ ಹಂಗೇಕೋ? ಸಮುದ್ರವ ಹಾರು ವಂಗೆ ಹರಗೋಲ ಹಂಗೇಕೋ? ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೋ, ಗುಹೇಶ್ವರ ಲಿಂಗವಲ್ಲಿ ನಿಸ್ಸೀಮನಾದ ಸಿದ್ಧ ರಾಮಯ್ಯಂಗೆ ಲಿಂಗದ ಹಂಗೇಕೆ ಹೇಳಾ ಚನ್ನಬಸವಣ್ಣಾ?"

ಚನ್ನಬಸವಣ್ಣನು ಈ ಪ್ರಶ್ನೆಗೆ ಸರಿಯಾಗಿ ಈ ಪ್ರಕಾರ ಉತ್ತರ ಕೊಟ್ಟನು. "ಆಕಾಶದಲ್ಲಾಡುವ ಪಟಕ್ಕಾದರೂ ಸೂತ್ರವಿರಬೇಕು. ಕಲಿ ಯಾದರೂ ಕೈದುವಿಲ್ಲದಾಗದು. ಭೂಮಿಯಿಲ್ಲದೆ ಬಂಡಿ ನಡೆಯುವ ದುಂಟೆ? ಅಂಗಕ್ಕೆ ಲಿಂಗ ಸಂಬಂಧವಿಲ್ಲದೆ ನಿಸ್ಸಂಗವಾಗಬಾರದು. ಕೂಡಲ ಚನ್ನಸಂಗಮದೇವರಲ್ಲಿ ಸಂಗವಿಲ್ಲದೆ ನಿಸ್ಸಂಗಿಯೆಂದು ನುಡಿಯ ಬಹುದೇ ಪ್ರಭುವೇ? ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂಗೆ ಆ ವ್ಯೋ ಮದಲ್ಲಿ ನಿಲುವದಕ್ಕೆ ಎಡೆಯುಂಟೆ? ಮಣ್ಣಿಮರವನುಳಿದು ತೋರುವ ಹಣ್ಣಿ ರುಚಿಯುಂಟೆ? ಪ್ರತ್ಯಕ್ಷ ನಮ್ಮ ಕೂಡಲಚನ್ನಸಂಗನ ಶರಣರೊ ಳಗಿರ್ದು ಸೀಮೆಯ ಮೀರಿದ ನಿಸ್ಸೀಮನೆಂಬ ಮಾತು ಒತ್ತಟ್ಟಿಗಿರಲಯ್ಯಾ ಪ್ರಭುವೇ?

ಅದಕ್ಕೆ ಪುನಃ ಪ್ರಭುವು ಸಿದ್ಧರಾಮಯ್ಯನ ಪಕ್ಷದಿಂದ "ಕಾಯವೇ ಸಕಲ, ಪ್ರಾಣವೇ ಸಕಲ ನಿಃಕಲ. ಭಾವವೇ ನಿಃಕಲ ಲಿಂಗವಾಗಿರು

ವಾಗ ಮತ್ತೆ ಬೇರೆ ಆಯತ, ಸ್ವಾಯತ, ಸನ್ನಿಹಿತವೆಂಬುದಿಲ್ಲ ನೋಡಾ. ಶಿವಶಕ್ತಿ ಸಂಬಂಧವೇ ದೇಹದೇಹಿಗಳಾಗಿರ್ದ ಬಳಿಕ ಗುಹೇಶ್ವರ ಲಿಂಗದಲ್ಲಿ ಬೇರೊಂದು ಕುರುಹ ಹಿಡಿದು ಅರಿಯಲೇಕಯ್ಯ ಚನ್ನಬಸವಣ್ಣಾ?" ಎಂದುಸುರಿದನು.

ಚನ್ನಬಸವೇಶ್ವರನು ಆ ಮಾತಿಗೆ "ಪ್ರಭುವೇ, ಬರೇ ಕಾಯವಷ್ಟೇ ಸಕಲ ಲಿಂಗವಲ್ಲ. ಆದರೆ ಆಚಾರವು ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ. ಆ ಇಷ್ಟಲಿಂಗವಿಡಿದಿಹುದೇ ಪ್ರಾಣಲಿಂಗಸ್ವಾಯತ. ಪ್ರಾಣಲಿಂಗ ಉದಯಿಸಿದಲ್ಲದೆ ಭಾವಲಿಂಗವ ಕಾಣಬಾರದು. ತಿಳಿದುಪ್ಪಕ್ಕೆ ಗಟ್ಟಿದುಪ್ಪಕ್ಕೆ ಭೇದವುಂಟೆ? ದೀಪಕ್ಕೆ ದೀಪ್ತಿಗೆ ಭಿನ್ನವುಂಟೇ? ಆತ್ಮಕ್ಕೂ ದೇಹಕ್ಕೂ ಭೇದವಿರುವದೇ? ಕ್ಷೀರಕ್ಕೂ ಸ್ವಾದಕ್ಕೂ ಭಿನ್ನವಿಹುದೇ? ಅದು ಕಾರಣ ಸಾಕಾರವೇ ನಿರಾಕಾರವೆಂದರಿತು ಅಂಗಲಿಂಗಸಂಬಂಧ ವಿಲ್ಲದವರ ಸಂಗ ಭಂಗವೆಂದು ಕೂಡಲಸಂಗನ ಶರಣರು ಮೆಚ್ಚರಯ್ಯಾ ಪ್ರಭುವೇ" ಎಂದು ಅಪ್ಪಣೆಕೊಡಿಸಿದರು.

ಇದಲ್ಲದೆ ಅಲ್ಲಿ ನೆರೆದ ಸಮಸ್ತ ಗಣಂಗಳ ಕಡೆಗೆ ನೋಡಿ ಚನ್ನಬಸವಣ್ಣನವರು ಶ್ರುತಪಡಿಸಿದ್ದೇನಂದರೆ "ಪತಿಯ ಸಂಗವತಿಸುಖವೆಂದರಿದೊಡೇನು ಗಣಸಾಕ್ಷಿಯಾಗಿ ವಿವಾಹವಾಗದನ್ನಕ್ಕರ? ಕಣ್ಣು ಕಾಂಬುದೆಂದೊಡೆ, ಕತ್ತಲೆಯಲ್ಲಿ ಕಾಂಬುದೆ ದೀಪವಿಲ್ಲದನ್ನಕ್ಕರ? ಅಂಗವ ಬಿಟ್ಟು ಆತ್ಮವುಂಟೆ? ಶಕ್ತಿಯ ಬಿಟ್ಟು ಶಿವನುಂಟೆ? ಇದು ಕಾರಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯವಿರಲು ಇಷ್ಟ ಪ್ರಾಣ ಭಾವಗಳೆಂಬ ತ್ರಿವಿಧ ಲಿಂಗಸಂಬಂಧ ಬೇಡವೆಂದರೆ ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೇ? ಇದು ಕಾರಣ ಕೂಡಲಚನ್ನಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ ನೋಡಲಾಗದಯ್ಯಾ ಪ್ರಭುವೇ"

ಇಷ್ಟಾದ ಮೇಲೆ ಅಲ್ಲಿ ಕೂಡಿದ ಪ್ರಮಥಗಣಂಗಳು ಒಬ್ಬೊಬ್ಬರೇ ಮುಂದೆ ಬಂದು ಈ ರೀತಿಯಾಗಿ ಇಷ್ಟಲಿಂಗದ ಮಹತ್ವವನ್ನು ಕುರಿತು ಮಾತನಾಡಿದರು.

೧ ಮೋಳಿಗೆಯ ಮಾರಯ್ಯಃ— "ಗರಳವಿಲ್ಲದುರಗಂಗೆ ಹಲಬರಂಜಿದವರುಂಟೆ? ಕೈದುವಿಲ್ಲದ ಬಂಟ ಗರ್ಜಿಸಿದರೆ ಅಂಜಿದವರುಂಟೆ? ಇಷ್ಟಲಿಂಗವಿಲ್ಲದೆ ಪರವಸ್ತುವ ನೋಡಿಹೆನೆಂದರೆ ಪ್ರಾಣಲಿಂಗಿಯಪ್ಪನೆ? ತಿಲದ ಮರೆಯ ತೈಲವನರಿದು ಕಾಂಬುವಂತೆ, ಫಲದ ಮರೆಯ ರಸವ ಹಿಳಿದು

ರುಚಿಸುವಂತೆ, ಇಷ್ಟದ ಮರೆಯಲ್ಲಿರ್ದ ಪರವಸ್ತುವ ನಿಶ್ಚಯಿಸಿದಲ್ಲಿ ಪ್ರಾಣಲಿಂಗಿ ಸಂಬಂಧಿ ನೋಡಾ ನಿಃಕಳಂಕ ಮಲ್ಲಿಕಾರ್ಜುನಾ."

೨ ದೇವರಬಾಸಿಮಯ್ಯಗಳುಃ— "ಕರಸ್ಥಲದ ಜ್ಯೋತಿಯದು. ಕುರುಹಿಟ್ಟ ಎರಕವದು. ಅದರ ನೆಲೆ ತಿಳಿದರೆ ನಿಜಾನಂದವು ಕಾಣಾ ರಾಮನಾಥಾ."

೩ ಮೆರೆಯಿಂಡದೇವರುಃ— ಅಲಗು ಇರಿವಡೆ ಕರದಲ್ಲಿ ಪಿಡಿದಲ್ಲಾಗದು. ಮನವರಿವಡೆ ಕುರುಹಿನ ನೆರುಗೆಯಲ್ಲಿ ಸಲೆಸಂದು ನಿಂದಲ್ಲದಾಗದು. ಕ್ರಿಯಾನುಭಾವ ಶುದ್ಧವಾದಲ್ಲದೆ ರಾಮೇಶ್ವರ ಲಿಂಗವ ಕೂಡಬಾರದು.

೪ ಉರಿಲಿಂಗ ಪೆದ್ದಿಗಳು:— "ಸಾಕಾರವಿಡಿದು ಅರ್ಚನೆ ಪೂಜೆಯ ಮಾಡಬೇಕಲ್ಲದೆ ನಿರಾಕಾರವ ನಂಬಲಾಗದು. ಶ್ರೀಗುರುವು ಪ್ರಾಣಲಿಂಗವನು ಕರಸ್ಥಲಕೆ ಬಿಜಂಗೈಸಿ ಕೊಟ್ಟ ಬಳಿಕ ಬಯಲಲ್ಲಿ ಬೊಮ್ಮ ನರಸಲುಂಟೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ".

೫ ರಾಯಸದ ಮಂಚಣ್ಣಃ— "ಅರಿಕೆಯನರಿಯೆಂದು ಕುರುಹ ಕೊಟ್ಟರೆ ಆ ಕುರುಹ ಮರೆದು ಅರಿದೆನೆಂಬ ಕುರುಬನ ನೋಡಾ ಜಾಂಬೇಶ್ವರಾ".

೬ ಅಮುಗಿ ದೇವಯ್ಯಗಳುಃ—"ಜ್ಞಾನದಲ್ಲಿ ಅರಿದರೇನಯ್ಯಾ ಸತ್ಕ್ರಿಯಾಚಾರಿಯಾಗದನ್ನಕ್ಕರ? ನೆನೆದ ಮಾತ್ರದಲ್ಲಿ ಕಾಂಬುದೆ ಕಾಯದಲ್ಲಿಲ್ಲದೆ? ಕುರುಡ ಕಾಣ ಪಥವ. ಹೆಳವ ನಡಿಯಲರಿಯ. ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿ ಜಡವು. ಕ್ರಿ ಇಲ್ಲದ ಜ್ಞಾನ ಭ್ರಾಂತಿ. ಇದುಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು".

೭ ತೆಲಗು ಜೊಮ್ಮಯ್ಯಃ— "ಗುರು ಕಾರುಣ್ಯವ ಪಡೆದುವಕ್ಕೆ ಚಿಹ್ನವಾವುದೆಂದರೆ ಅಂಗದ ಮೇಲೆ ಲಿಂಗ ಸ್ವಾಯತವಾಗಿರಬೇಕು. ಅಂಗದ ಮೇಲೆ ಲಿಂಗಸ್ವಾಯತವಿಲ್ಲದೆ ಬರಿದೆ ಗುರುಕಾರುಣ್ಯವಾಯಿತ್ತೆಂದೊಡೆ ಅದೆಂತೊ? ಲಿಂಗಹೀನವಾಗಿ ಗುರುಕಾರುಣ್ಯವುಂಟೆ? ಇದು ಕಾರಣ ಲಿಂಗಧಾರಣವುಳ್ಳುದೇ ಸದಾಚಾರ. ಇಲ್ಲದಿದ್ದರೆ ಅನಾಚಾರವೆಂಬೆನಯ್ಯಾ ತೆಲುಗೇಶ್ವರಾ".

ಆ ಬಳಿಕ ಚನ್ನಬಸವಣ್ಣನವರು ಲಿಂಗವಿಲ್ಲದ ಭವಿಯಾದ ಸಿದ್ಧರಾಮಯ್ಯನೊಡಗೂಡಿ ಬರಬಹುದೇ ಎಂದು ಪ್ರಭುದೇವರಿಗೆ ಸಿಟ್ಟಿನಿಂದ ಹೀಗೆ ನುಡಿದರು. "ಸಿದ್ಧರಾಮಯ್ಯನು ನೊಸಲಲ್ಲೊಂದು ಕಣ್ಣುಳ್ಳವನಾದರೂ ಅವನಂಗದ ಮೇಲೆ ಲಿಂಗಸ್ಪಾಯತವಿಲ್ಲದಿದ್ದರೆ ಅವನ ಮನೆಯಲ್ಲಿ ಮಾಡಿದ ಪಾಕ ಶ್ವಾನನ ಮಾಂಸ ತಪ್ಪದಾಗಿ ಬಲ್ಲವರೊಲ್ಲರು. ಶಿವಭಕ್ತರಾದವರ ಮನೆಯಲ್ಲಿ ಉಂಡರೆ ಜನ್ಮಜನ್ಮಾಂತರದಲ್ಲಿ ಶ್ವಾನನ ಯೋನಿಯಲ್ಲಿ ಬಪ್ಪುದು ತಪ್ಪದು. ಎಲೆ ಶಿವನೆ, ನೀವಿಲ್ಲದವರ ಮನೆಯಲ್ಲಿ ತಿಂಬುವರ ಕಂಡರೆ ಎನ್ನ ಮನ ಸೊಗಸದಯ್ಯಾ ಕೂಡಲ ಚನ್ನಸಂಗಮದೇವಾ."

ಬಸವರಾಜದೇವರೂ ಸಿದ್ಧರಾಮಯ್ಯದೇವರ ಯೋಗಸಾಮರ್ಥ್ಯವನ್ನು ಧಿಕ್ಕರಿಸಿ ಇಷ್ಟಲಿಂಗದ ಮಹತ್ವವನ್ನೇ ಎತ್ತಿ ಹಿಡಿದರು. ಅದು ಹೇಗೆಂದರೆ—" ಗುರು ತೋರಿದ ಲಿಂಗವು ಮನ ಸಾಹಿತ್ಯವಾಗಿರಲು ಪವನ ಭೇದದಿಂದ ಅರಿದಿಹೆನೆಂದರೆ ಕೂಡಲಸಂಗಮದೇವರು ಮೂಗ ಕೊಯ್ಯದೆ ಬಿಡುವನೇ? ಅದರಂತೆಯೇ ಚನ್ನಬಸವಣ್ಣನವರು ಅಪ್ಪಣೆ ಕೊಡಿಸಿದ್ದೇನಂದರೆ—" ಕಾಯಾನುಭಾವಿಗಳು ಕಾಯದಲ್ಲಿ ಮುಕ್ತರು. ಪವನಾನುಭಾವಿಗಳು ಪವನದಲ್ಲಿ ಮುಕ್ತರು. ಜೀವಾನುಭಾವಿಗಳು ಜೀವದಲ್ಲಿ ಮುಕ್ತರು. ಲಿಂಗಾನುಭಾವಿಗಳಿಗೆಂತು ಸರಿಯೆಂಬೆ? ನಿರವಯ ಸ್ವಯಂ ಜ್ಯೋತಿ ಪ್ರಕಾಶವಾಗಿಪ್ಪರು ಲಿಂಗದಲ್ಲಿ ಕೂಡಲಚನ್ನಸಂಗಮದೇವಾ ನಿಮ್ಮ ಶರಣರು".

ಕೊನೆಗೆ ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಇಷ್ಟಲಿಂಗಸಂಬಂಧವಿಲ್ಲದೆ ಪ್ರಾಣಲಿಂಗಸಂಬಂಧಿಯಾಗದೆಂದು ಶ್ರುತಪಡಿಸಲು ಅವರು ತಮ್ಮ ಅಷ್ಟಾಂಗಯೋಗಗಳನ್ನು ತಾವೇ ನಿಂದಿಸಿಕೊಂಡು ಪ್ರಭುದೇವರ ಪೊರೆ ಹೊಕ್ಕು ಇಷ್ಟಲಿಂಗವ ಕರುಣಿಸಿಕೊಟ್ಟು ಶರಣರ ಕೃಪೆಗೆ ತಮ್ಮನ್ನು ಪಾತ್ರವಾಡಬೇಕೆಂದು ಪ್ರಭುದೇವರಿಗೆ ಈ ರೀತಿಯಾಗಿ ಪ್ರಾರ್ಥಿಸಿದರು. "ಅಯ್ಯಾ, ಪುಣ್ಯಪಾಪಂಗಳನರಿಯದ ಮುನ್ನ ಅನೇಕ ಭವಂಗಳಲ್ಲಿ ಬಂದು ನಿಮ್ಮ ನಿಲವನರಿಯದೆ ಕೆಟ್ಟಿನಯ್ಯ. ಇನ್ನು ನಿಮ್ಮ ಶರಣು ಪೊಕ್ಕೆನಾಗಿ ನಾ ನಿಮ್ಮನೆಂದೂ ಅಗಲದಂತಿರಿಸಯ್ಯಾ ನಿಮ್ಮ ಧರ್ಮ, ನಿಮ್ಮ ಧರ್ಮ. ಎಂದಿಪ್ಪೆನಯ್ಯಾ ನಿಮ್ಮ ಶರಣರ ಕಿಂಕರರ ಕಿಂಕರನಾಗಿ? ಎಂದಿಪ್ಪೆನಯ್ಯಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಯೆಂದೆನಿಸಿ?

ಎಂದಿಪ್ಪೆನಯ್ಯಾ ಭಕ್ತಿ ಜ್ಞಾನ ವೈರಾಗ್ಯ ಸಂಪನ್ನನಾಗಿ? ಎಂದಿಪ್ಪೆನಯ್ಯಾ ಲಿಂಗತ್ರಯದಲ್ಲಿ ಸಂಪನ್ನನಾಗಿ ಪ್ರಭುವೇ ಕಪಿಲಸಿದ್ಧಮಲ್ಲಿಕಾರ್ಜುನಾ"?

ಹೀಗೆಂದು ಸಿದ್ಧರಾಮಯ್ಯದೇವರು ಬೆಸಸಲು ಅದಕ್ಕೆ ಪ್ರಭುದೇವರು "ಸಿದ್ಧರಾಮಯ್ಯಾ, ಅಂತರ್ಲಕ್ಷಾನುಸಂಧಾನ ಧ್ಯಾನಯೋಗದಿಂದ ಆ ಪರವಸ್ತುವ ಕಂಡಿಹೆನೆಂದರೆ ಸಾಧ್ಯವಾಗದು. ಕರಸ್ಥಲದಲ್ಲಿ ಲಿಂಗವ ಧರಿಸಿ ಭಕ್ತಿಸಂಪನ್ನನಾಗಿ ಬದುಕಾ. ಶ್ರುತಿಯು ನಂಬದಿರೋ. "ಶ್ರುತಿ ಚಕಿತಮಭಿದತ್ತೇ" ಎಂಬಂತೆ ಶ್ರುತಿಗಳು ಶಿವನ ಪಾದವ ಕಾಣದೆ ತೊಳಲಿ ಬಳಲುತ್ತೈದಾವೆ. ವಸ್ತುಹೃದಯದಲುಂಟೆಂದು ನೆನೆಯದಿರೋ. ವಸ್ತು ಭ್ರೂಮಧ್ಯದಲುಂಟೆಂದು ಭ್ರಮಿಸದಿರೋ. ವಸ್ತು ಬ್ರಹ್ಮರಂಧ್ರದಲ್ಲುಂಟೆಂದು ಹೊಲಬುಗೆಡದಿರೋ. ಆ ಪರವಸ್ತುವಿನ ನಿಶ್ಚಯವ ಕಾಂಬಂಡೆ ಎನ್ನ ಗುರು ಅನಿಮಿಷದೇವರಂತೆ ಕರಸ್ಥಲದಲ್ಲಿ ಲಿಂಗವ ಧರಿಸಿ ನಿಬ್ಬೆರಗಾಗೋ." ಎಂದು ಆಜ್ಞಾಪಿಸಿದರು.

ಯೋಗಮಾರ್ಗ ಸಾಂಖ್ಯಮಾರ್ಗಗಳಿಂದ ಪರಮಾತ್ಮನ ಸಾಕ್ಷಾತ್ಕಾರವಾಗದೆ ಭಕ್ತಿಮಾರ್ಗದಿಂದಲೇ ಅದು ಸಿದ್ಧಿಸುವದೆಂಬ ಮಾತನ್ನು ಅದೇ ಸಮಯದಲ್ಲಿ ಅಮುಗಿದೇವಯ್ಯಗಳು ಒಳ್ಳೆ ಸುಗಮವಾಗಿ ವಿವೇಚಿಸಿದರು. ಅದು ಹ್ಯಾಗೆಂದರೆ "ಕ್ಷುತ್ಪಿಪಾಸೆ ಹಿಂಗಿದೊಡೇನು? ಸ್ವೇಚ್ಛಾಗಮನಿಯಾದೊಡೇನು? ಅಷ್ಟಮಹಾಸಿದ್ಧಿಯು ಪಡೆದರೇನು? ಹಲವು ಮಹತ್ವವ ತೋರಿ ಮೆರೆದೊಡೇನು? ಭಕ್ತನಪ್ಪನೆ? ಅಲ್ಲಲ್ಲ. ಭಕ್ತಿಯ ಪರಿಯೆಂತೆಂದೊಡೆ ಅಂಗತ್ರಯದಲ್ಲಿ ಲಿಂಗತ್ರಯ ಸಂಪನ್ನರಾಗಿ ಗುರುಲಿಂಗಜಂಗಮವನಾರಾಧಿಸಬಲ್ಲಡೆ ಭಕ್ತನಪ್ಪನೆಂದು ಸಿದ್ಧಸೋಮನಾಥನ ಶರಣರು ನುಡಿವರಯ್ಯಾ ಪ್ರಭುವೇ. ಗುರುಕಾರುಣ್ಯವ ಪಡೆದು, ಇಷ್ಟಲಿಂಗಸಂಬಂಧಿಯಾಗದೆ, ಇಷ್ಟಪ್ರಾಣಭಾವಗಳ ರಹಸ್ಯವನ್ನರಿಯದೆ ಬರೇ ಜ್ಞಾನಯೋಗವೆಂಬ ಶೂನ್ಯದನುಭಾವಿಗೆ ಗುರುಭಕ್ತಿಯಿಲ್ಲ; ಲಿಂಗಭಕ್ತಿಯಿಲ್ಲ; ಜಂಗನುಭಕ್ತಿಯಿಲ್ಲ. ಇದು ಕಾರಣ ಸಿದ್ಧಸೋಮನಾಥನಲ್ಲಿ ಗುರುಕರಜಾತರಾದ ಲಿಂಗಾಂಗಿಗಳು ಅಪೂರ್ವರಯ್ಯಾ. ಪ್ರಭುವೇ."

ಇದನ್ನು ಕೇಳಿ ಸಿದ್ಧರಾಮಯ್ಯದೇವರು ಬಸವಾದಿ ಪ್ರಮಥರೆದುರಿಗೆ ಕೈಮುಗಿದು ಚನ್ನಬಸವದೇವರ ಕೈಯಿಂದ ಅನುಗ್ರಹವ ಕರುಣಿಸಿ ಕೊಡಬೇಕೆಂದು ಪ್ರಭುದೇವರಿಗೆ ಭಕ್ತಿಜ್ಞಾನಾತುರದಿಂದ ವಿನ್ನೈಸಿಕೊಂಡರು.

ಅದೆಂತೆಂದೊಡೆ "ಇನನುಂಡಲದೊಳಗೆ ಕಿರಣವಡಗಿಪ್ಪಂತೆ, ಫಲವಹಬೀ ಜದಲ್ಲಿ ವೃಕ್ಷವಡಗಿಪ್ಪಂತೆ, ಇಂದುಕಾಂತ ರವಿಕಾಂತವಲ್ಲಿ ಜಲಬಿಂದು ಅಗ್ನಿ ಇಪ್ಪಂತೆ, ಸಂದಕ್ಷೀರದಲ್ಲಿ ದಧಿ, ತಕ್ರ, ನವನೀತ ಘೃತವಿಪ್ಪಂತೆ, ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ತನ್ನೊಳಗೆ ಆ ಲಿಂಗವ ಕಂಡು, ಲಿಂಗ ದೊಳಗೆ ತನ್ನ ಕಂಡು, ತನ್ನೊಳಗೆ ಸಮಸ್ತವಿಸ್ತಾರವೆಲ್ಲವ ಕಂಡು, ಜಂಗಮ ಮುಖಲಿಂಗವೆಂಬ ಭೇದವನು, ಲಿಂಗಕ್ಕೆ ಜಂಗಮವೇ ಪ್ರಾಣವಾಗಿಪ್ಪ ಭೇದವನು, ಅಂಗದೊಳಗೆ ಲಿಂಗವೇ ಆಚಾರವಾಗಿ ಅಳವಟ್ಟ ವಿವರವನು, ಲಿಂಗಾಂಗ ಸಂಬಂಧ ಸ್ಥಳಕುಳಂಗಳು ವಿರಳವಾಗಿದ್ದವೆಂಬುದನು, ಕಂಗಳ ನೋಟಕ್ಕೆ ಗುರಿಯಾದ ಲಿಂಗವೇ ಅಂಗವನೊಳಕೊಂಬ ಭೇದವನು, ಚನ್ನಬಸವಣ್ಣನಿಂದೆ ಕೃಪೆಮಾಡಿಸಿ ಎನ್ನನುಳುಹಾ ಪ್ರಭುವೇ, ಕಪಿಲ ಸಿದ್ಧ ಮಲ್ಲಿಕಾರ್ಜುನಾ."

ಅದಕ್ಕೆ ಪ್ರಭುದೇವರು ಅಪ್ಪಣೆಕೊಡಿಸಿದುದೇನಂದರೆ "ರತ್ನ ದೀಪ್ತಿಯಾ ದೊಡೇನು? ಬಂಧಿಸಿದ ಕುಂದಣದಲ್ಲಿ ಸಂದಿರಬೇಕು. ಸ್ವಾದುರಸವೀವ ಫಲವೆಂದಡೇನು? ವೃಕ್ಷವಿಲ್ಲದನ್ನಕ್ಕ? ಅದು ಕಾರಣ ಕಾಯದ ಕರಸ್ಥಲಕ್ಕೆ ಇಷ್ಟಲಿಂಗ ಸಾಹಿತ್ಯವಿಲ್ಲದಿದ್ದರೆ ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು. ಇಷ್ಟಲಿಂಗ ಸಂಬಂಧವೇ ಭಕ್ತಂಗೆ ಮತವು. ಅದೇ ಮಹಾಸೌಖ್ಯವು. ನಮ್ಮ ಗುಹೇಶ್ವರನ ಶರಣನ ಮನ ಒಪ್ಪುವಂತೆ ಸಿದ್ಧರಾಮಯ್ಯರಿಗೆ ಲಿಂಗ ಸಾಹಿತ್ಯವ ಮಾಡಾ ಚನ್ನಬಸವಣ್ಣಾ.

ಆ ಬಳಿಕ ಚನ್ನಬಸವಣ್ಣನವರು ೨೧ ದೀಕ್ಷೆಗಳನ್ನು ವಿವರಿಸಿ ಸಿದ್ಧರಾಮಯ್ಯದೇವರಿಗೆ ಇಷ್ಟಲಿಂಗಧಾರಣೆಯನ್ನು ಮಾಡಿದರು. ಅದು ಹ್ಯಾಗಂದರೆ "ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲ ತ್ರಯಂಗಳನಳಿದು, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ, ಕಲಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತ, ಈ ಏಳನು ಕಾಯಕ್ಕೆ ಉಪದೇಶಮಾಡುವದು. ಸಮಯ, ನಿಸ್ಸಂಸಾರ, ನಿರ್ವಾಣ ತತ್ವದೀಕ್ಷೆ, ಅಧ್ಯಾತ್ಮ, ಅನುಗ್ರಹ, ಸತ್ಯಶುದ್ಧ ಈ ಏಳನು ಪ್ರಾಣಕ್ಕೆ ಉಪದೇಶ ಮಾಡುವದು. ಏಕಾಗ್ರಚಿತ್ತ, ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಮನೋರ್ಲಯ, ಲಿಂಗನಿಜ, ಸದ್ಯೋನ್ಮುಕ್ತಿ, ಈ ಏಳನು ಮನಕ್ಕೆ ಉಪದೇಶ ಮಾಡುವದು. ಈ ಕ್ರಮವನರಿದು ಮಾಡುವದು ಕೂಡಲ ಚನ್ನಸಂಗಯ್ಯನಲ್ಲಿ ಸಹಜ ದೀಕ್ಷೆಯಯ್ಯ."

ಶಿವದೀಕ್ಷೆ ಕೊಂಡಿದ ಬಳಿಕ ಸಿದ್ಧರಾಮಯ್ಯದೇವರು ಭಯಭಕ್ತಿಯುತರಾಗಿ ನುಡಿದುದೇನಂದರೆ "ಶ್ರೀಗುರು ಚನ್ನಬಸವೇಶನು ಎನ್ನ ಕರಸ್ಥಲಕ್ಕೆ ಇಷ್ಟಲಿಂಗವ ಕರುಣಿಸಿಕೊಟ್ಟ ಬಳಿಕ ಬೇರೆ ಯೋಗವುಂಟೆ? ತನ್ನ ಹಸ್ತವನೆನ್ನ ಮಸ್ತಕದ ಮೇಲಿಟ್ಟು ವಾಯುಪ್ರಾಣಿಯಾಗಿದ್ದುದ ನಾಶ ಮಾಡಿ ಲಿಂಗಪ್ರಾಣಿಯ ಮಾಡಿದ ಬಳಿಕ ಮರಳಿ ಯೋಗವುಂಟೆ? ಅನು ಚನ್ನಬಸವಣ್ಣನ ಕರುಣದಿಂದ ಅಭ್ಯಾಸ ಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ. ಶರಣ, ಐಕ್ಯವೆಂಬ ಷಟ್‌ಸ್ಥಲಕ್ಕಧಿಕಾರಿಯಾದೆ. ನಿಮ್ಮ ಶರಣರ ಸಲಿಗೆಗೆ ಸಂದೆ. ನನ್ನ ಭವಿತನವ ನೀಗಿ ಶಿವಯೋಗಿಯನ್ನಾಗಿ ಮಾಡಿದ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ ಪ್ರಭುವೇ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

ಆ ಬಳಿಕ ಸಿದ್ಧರಾಮಯ್ಯದೇವರು ಬಸವೇಶನ ಮಹಿಮೆಯನ್ನು ಕಲ್ಯಾಣದ ಪುಣ್ಯಪ್ರಭೆಯನ್ನು ಮನವಾರೆ ಕೊಂಡಾಡಿ ತಣಿದರು.

"ಸರ್ವಜ್ಞ ಮೂರ್ತಿಗೆ ಕಾಣಿಕೆ."

(ಬರೆದವರು—ಕೀರ್ತನಕೇಸರಿ ಬಿ. ಶಿವಮೂರ್ತಿಶಾಸ್ತ್ರಿ ಹುಲ್ಕುಂಟೆ ಮಠ ತುಮಕೂರು)

ಸರ್ವಜ್ಞ ವಚನಗಳನುರ್ವರೆಯೊಳೋದುತ್ತೆ ।
ಗರ್ವ ಮಾತ್ಸರ್ಯ ದುರ್ಗುಣಂಗಳ ತೊರೆದು
ಸರ್ವರುಂ ಬಾಳ್ಗೆ ಸರ್ವಜ್ಞ ॥ ೧ ॥
ವೇದಶಾಸ್ತ್ರಂಗಳನು ಸಾಧಿಸುವ ಶ್ರಮವೇಕೆ ।
ಸಾಧು ಸರ್ವಜ್ಞ ಮೂರುತಿಯ ವಚನಗಳ ।
ನಾದರಿಸಿ ಕೇಳ್ ಸರ್ವಜ್ಞ ॥ ೨ ॥
ಕನ್ನಡಿಗರೆಲ್ಲರೂ ಜಿನ್ನಾಗಿ ಕೇಳಿರ್ರೈ ।
ಕನ್ನಡರ ಜಾಣ ಸರ್ವಜ್ಞನೊರೆದ ಈ ।
ಚನ್ನೆನಿಪ ನುಡಿಯ ಸರ್ವಜ್ಞ ॥ ೩ ॥
ಅವ ಭಾಷೆಯೊಳುಂಟು ಈ ವಿದದ ವಚನಗಳು
ಕೋವಿದರೆ ಪೇಳಿ ಭಾಗ್ಯವಲ್ಲವೆ ನಮ್ಮ
ಭೂವಿನುತ ನುಡಿಯ ಸರ್ವಜ್ಞ ॥ ೪ ॥

(ಪ್ರಜ್ಞೋಪೆ)

ಕನ್ನಡತಿಯೆಂಬುವಳು ಮನ್ನಣೆಯು ಇಲ್ಲದಲೆ ।
ತನ್ನ ಗೆಳತಿಯರ ಸರಿದೊರೆಗೆ ಬಾರದೆ ।
ಕಣ್ಣೀರೊಳಿಹಳು ಸರ್ವಜ್ಞ ॥ ೫ ॥

ಜಾತಿ ಜಾತಿಗಳಲ್ಲಿ ಜಾತಿ ದ್ವೇಷವೆ ಉಂಟು।
ಮಾತಿನೊಳಗುಂಟು ವೈರಾಗ್ಯ ಬಹು ಜನಕೆ।
ನೀ ತಿಳಿಸು ನೋಡು ಸರ್ವಜ್ಞ ॥ ೬ ॥

ನಿನ್ನ ಕಾಲದ ಜೆಲುವು ಇನ್ನಿರುವುದೆಂಬೆಯಾ।
ಕುನ್ನಿ ಮಾನಿಷರು ತುಂಬಿಹರು ನಾಡಿನೊಳು।
ಅನ್ನೆಯಪೆ ಹಿರಿದು ಸರ್ವಜ್ಞ ॥ ೭ ॥

ಲಿಂಗವಂತರ ಮತವು ಭಂಗಕೊಳಗಾಗಿಹುದು।
ಮಂಗ ಮಾನವರು ಅರಿವರೇ ಲೋಕದೊಳು।
ಲಿಂಗಾಂಗದಿರವ ಸರ್ವಜ್ಞ ॥ ೮ ॥

ವೀರಶೈವರ ಮತವು ಘೋರ ದುರ್ಗಡದೊಳಿಹುದು।
ಆರಿದಕೆ ದಾರಿ ತೋರುವರು ಲೋಕದೊಳು।
ಧೀರ ನೀ ಬಾರೋ ಸರ್ವಜ್ಞ ॥ ೯ ॥

ಭಾರತೀಯರಿಗೆಲ್ಲ ಭೂರಿ ಬಡತನ ಬಂತು।
ಸಾರತಂವಾದ ಬಂಗಾರವೆಲ್ಲವೂ।
ಸೂರೆ ಪೋಗಿಹುದು ಸರ್ವಜ್ಞ ॥ ೧೦ ॥

ಗುಡಿಗಳನು ಕಟ್ಟುವರು ಮಡಗುವರು ಗೊಂಬೆಗಳ
ಬಡವರನು ಮರೆತು ಶಿಲೆಯ ಪೂಜಿಸುವರಿಗೆ।
ಮೃಡನು ಮೆಚ್ಚುವನೆ ಸರ್ವಜ್ಞ ॥ ೧೧ ॥

ಬಸವಾದಿ ಪ್ರಮಥರನು ರಸೆಯೊಳಗೆ ನಿಂದಿಸರು।
ಅಸಮಾಕ್ಷನಡಿಯ ಮರೆತಿಹರು ಖೋಡಿಗಳು।
ಮಸಿವರ್ಣವಕ್ಕು ಸರ್ವಜ್ಞ ॥ ೧೨ ॥

ಗುರುಗಳೊಳಗೆ ನೀ ಬಾರೋ ಬರಿಯ ಡಂಭದೊಳಿಹರು।
ಹರಿಸೋಲು ತೂತು ಬಿದ್ದಂತೆ ಅವರಿರವು।
ಧರೆಗೆ ಕೇಡಕ್ಕು ಸರ್ವಜ್ಞ ॥ ೧೩ ॥

(ಹೃದ್ಗತ)

ಕನ್ನಡದ ಸೌಭಾಗ್ಯವಿನ್ನೊಮ್ಮೆ ಮೆರೆಯಲೈ।
ಕನ್ನೈದಲೆನೆ ಚಂದ್ರನುದಯಮುಂ ಕಂಡಂತೆ।
ಇನ್ನೊಮ್ಮೆ ಬಾರ ಸರ್ವಜ್ಞ ॥ ೧೪ ॥

ಶಿವಮೂರ್ತಿಯೆಂಬುವನು ಕವಿಕುಲದ ಕಿಂಕರನು।
ಭುವಿಯೊಳಗೆ ನಿನ್ನ ಕೃಪೆಯ ಬೇಡುತ್ತಿಹನು।
ಶಿವರೂಪಿ ಕೇಳು ಸರ್ವಜ್ಞ ॥ ೧೫ ॥

ಶಿವಯೋಗ.

(ವೀರಶೈವ)

[ಕೆಳಗೆ ಕಾಣಿಸಿದ ಲೇಖಗಳು 'ನವಕರ್ನಾಟಕ' ಪತ್ರಿಕೆಯು ಏಪ್ರೆಲ್ ಮತ್ತು ಮೇ ಸಂಚಿಕೆಗಳಲ್ಲಿ ಪ್ರಸಿದ್ಧವಾಗಿದ್ದು ಅವುಗಳಲ್ಲಿ ಶಿವಯೋಗದ ಸ್ವರೂಪವು ಟೀಕಾತ್ಮಕ ರೀತಿಯಿಂದ ವಿವೇಚಿಸಲ್ಪಟ್ಟಿದೆ. ಶಿವಾನುಭವ ಪತ್ರಿಕೆಯ ವಾಚಕರ ವಿಚಾರಕ್ಕೋಸ್ಕರ ನಾವು ಅವುಗಳನ್ನು ಕೆಳಗೆ ಕ್ರಮವಾಗಿ ಅಚ್ಚುಹಾಕಿದ್ದೇವೆ:— [ಸಂಪಾದಕ.]

೧
ಯೋಗಾಭ್ಯಾಸ.

ತಾ. ೨೮-೩-೩೫ ನೆಯ 'ನವಕರ್ನಾಟಕ' ಪತ್ರಿಕೆಯಲ್ಲಿ ಬೆಳಗಾವಿಯ "ಸಾಧಕ" ಎಂಬ ಹೆಸರನ್ನಿಟ್ಟುಕೊಂಡ ಲೇಖಕರೊಬ್ಬರು ವೀರಶೈವರು ಯೋಗಶಾಸ್ತ್ರದ ಸಂಬಂಧವಾಗಿ ತಪ್ಪು ತಿಳುವಳಿಕೆಯುಳ್ಳವರಾಗಿರುವರೆಂದೂ ಆ ಶಾಸ್ತ್ರವನ್ನು ಆಧಾರಪ್ರಮಾಣ ಸಹಿತವಾಗಿ ಖಂಡಿಸಿ ತಮ್ಮ ಮತಗಳನ್ನು ಸ್ಥಾಪಿಸಬೇಕೆಂದೂ ಸೂಚಿಸಿದ್ದಾರೆ. ಈ ವಿಷಯದ ಬಗ್ಗೆ ವಾಚಕರು ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸಬಹುದೆಂದೂ ಪತ್ರಿಕಾ ಸಂಪಾದಕರೂ ಸೂಚನೆ ಕೊಟ್ಟಿದ್ದಾರೆ. ಅದಕ್ಕನುಸಾರವಾಗಿ ನನಗೆ ಹೊಳೆದ ಪ್ರಾಮಾಣಿಕವಾದ ಸ್ಪಷ್ಟಾಭಿಪ್ರಾಯಗಳನ್ನು ಇದರಡಿಯಲ್ಲಿ ಮಂಡಿಸಲು ಪ್ರಯತ್ನಿಸುತ್ತೇನೆ. ಈ ಮೊದಲು ನಮ್ಮ ಲೇಖಕರ ಆಕ್ಷೇಪಗಳಾವವೆಂಬುದನ್ನಷ್ಟು ವಿವೇಚಿಸೋಣ. ಅವರು ಹೇಳುವದೇನಂದರೆ "ವೀರಶೈವರು ಅರ್ವಾಚೀನ ವಚನಕಾರರು ಯೋಗಾಭ್ಯಾಸ ಸಂಬಂಧವಾಗಿ ತಪ್ಪು ತಿಳುವಳಿಕೆಯುಳ್ಳವರಾಗಿದ್ದಾರೆ. ಯೋಗಾಭ್ಯಾಸದ ಬಗ್ಗೆ ನಿಷ್ಕಾರಣವಾಗಿ ಆರೋಪ ಮಾಡುವದು ಅನುಚಿತವೆಂದೇ ನಮ್ಮ ಅಭಿಪ್ರಾಯವು. ವೀರಶೈವರ ಉದ್ದೇಶವು ವೈದಿಕ ಸಂಸ್ಕೃತಿಯ ತಪ್ಪುಗಳನ್ನು ಬೈಲಿಗೆಳೆಯುವದಾಗಿರುವಂತೆ ಕಂಡುಬರುತ್ತದೆ. ಇತ್ಯಾದಿ."

ವೀರಶೈವ ವಚನಕಾರರು ಯೋಗಾಭ್ಯಾಸವನ್ನು ಅಲ್ಲಗಳೆದಿದ್ದೇನೋ ನಿಜ. ಅದರೆ ವೈದಿಕ ಧರ್ಮದ ಮೇಲಿನ ಅಸೂಯೆಯಿಂದೇನೂ ಅವರು ಹಾಗೆ ಮಾಡಿರುವದಿಲ್ಲ. ಯೋಗವಾರ್ಗಕ್ಕಿಂತಲೂ ಅಧಿಕವಾದ ಭಕ್ತಿ

ಮಾರ್ಗವನ್ನು ಪ್ರಸ್ಥಾಪಿಸುವದಕ್ಕಾಗಿಯೂ ಪಂಡಿತಪಾಮರರಲ್ಲಿ ಸುಲಭವಾದ ಭಕ್ತಿಮಾರ್ಗವನ್ನು ನೆಲೆಗೊಳಿಸುವದಕ್ಕಾಗಿಯೂ ದುಸ್ತರವಾದ ಯೋಗಮಾರ್ಗವನ್ನು ಅಲ್ಲಗಳೆದಿರುವರು. ಸುಲಭ ಮಾರ್ಗವು ಕೈಸಾರಿರುವಾಗ ದುಸ್ತರ ಮಾರ್ಗವನ್ನು ಹುಡುಕುವದೇನೂ ಜಾಣತನದ ಲಕ್ಷಣವಲ್ಲ. ಆದರೆ ಯೋಗಾಭ್ಯಾಸಕ್ಕೆ ಸ್ವಲ್ಪೂ ಯೋಗ್ಯತೆಯೇ ಇಲ್ಲವೆಂತಲ್ಲ. ಯೋಗದಿಂದಲೇನೂ ಸಾಧಿಸುವದಿಲ್ಲವೆಂತಲೂ ಅಲ್ಲ. ಆದರೆ ಭಕ್ತಿಮಾರ್ಗವು ಯೋಗಮಾರ್ಗಕ್ಕಿಂತ ಹೆಚ್ಚು ಯೋಗ್ಯತೆಯುಳ್ಳದ್ದೂ ಸುಲಭವಾದದ್ದೂ ಇದ್ದು ಅದನ್ನು ಬಿಟ್ಟು ಬಿರುಸಾದ ಯೋಗಮಾರ್ಗವನ್ನೇಕೆ ಅವಲಂಬಿಸಬೇಕೆಂಬುದೇ ಅವರ ಉದ್ದೇಶವು. ಇದಲ್ಲದೆ ಭಕ್ತಿಯಿಲ್ಲದ ಯೋಗವು ಬಹು ವಿರಸವಾದುದೆಂದು ಅವರು ಪ್ರಸ್ತಾಪಿಸಿರುವರು. ಯೋಗದಿಂದ ಮನುಷ್ಯನು ಚಿರಾಯುಳ್ಳವನೂ ಬಲಶಾಲಿಯೂ ಸಮಾಧಿಸ್ಥನೂ ಆಗಬಹುದು. ಎಷ್ಟೋ ಸಿದ್ಧಿಗಳನ್ನು ಪಡೆಬಹುದು. ಆದರೆ ಪರವಸ್ತುವಿನ ನೆಲೆಯು ಭಕ್ತಿಮಾರ್ಗಕ್ಕಲ್ಲದೆ ಯೋಗಮಾರ್ಗಕ್ಕೆಂದಿಗೂ ಸಾಧ್ಯವಲ್ಲವೆಂಬದನ್ನು ನಮ್ಮ ಶಿವಶರಣರು ವಿಶದಪಡಿಸಿದ್ದಾರೆ.

ವಚನಕಾರರು ಯೋಗಮಾರ್ಗವನ್ನು ನಿರಾಕರಿಸಿ ಭಕ್ತಿಮಾರ್ಗವನ್ನು ಎತ್ತಿಹಿಡಿದ ಪ್ರಸ್ತಾಪವು ಶೂನ್ಯಸಂಪಾದನೆಯಲ್ಲಿ ಬಂದಿದೆ. ನಮ್ಮಲ್ಲಿ ಸಿದ್ಧರಾಮಯ್ಯನೆಂಬ ಶಿವಯೋಗಿಯು ಯೋಗಾಭ್ಯಾಸದಲ್ಲಿ ಬಹು ಬಲ್ಲಿದನಾಗಿದ್ದನು. ಶ್ರೀ ಅಕ್ಕಮಹಾದೇವಿಯೂ ಸಹ ಯೋಗಮಾರ್ಗದಲ್ಲಿ ಮುಂದುವರಿದಿದ್ದಳು. ಮುಂದೆ ಅವರೀರ್ವರು ಬಸವೇಶ್ವರನಿಂದ ಭಕ್ತಿಯ ಭಿಕ್ಷೆಯನ್ನು ಹೊಂದಿ ಭಕ್ತ್ಯಾವಲಂಬಿಗಳಾಗಿ ತಮ್ಮ ಯೋಗಸಾಧನೆಯನ್ನು ಭಕ್ತಿಯ ತಳಹದಿಯ ಮೇಲೆ ಕಟ್ಟಲಾರಂಭಿಸಿದರು. ಶೂನ್ಯಸಂಪಾದನೆಯ ೩ನೆಯ ಸಂಪಾದನೆಯಲ್ಲಿ ಶ್ರೀ ಪ್ರಭುದೇವರು ಸಿದ್ಧರಾಮ ಶಿವಯೋಗಿಗಳ ಯೋಗಮಾರ್ಗವನ್ನು ಖಂಡಿಸಿ ಜ್ಞಾನಮಾರ್ಗವನ್ನುಪದೇಶಿಸಿದ್ದಾರೆ. ಆದರೆ ೧೦ನೆಯ ಸಂಪಾದನೆಯಲ್ಲಿ ಬಸವಣ್ಣ ಚನ್ನಬಸವಣ್ಣನವರು ಯೋಗಜ್ಞಾನಗಳಿಗಿಂತಲೂ ಅಧಿಕವಾದ ಭಕ್ತಿಮಾರ್ಗವನ್ನು ಅರ್ಥಾತ್ ಇಷ್ಟಲಿಂಗದ ಮಹತ್ವವನ್ನು ಸಿದ್ಧರಾಮೇಶ್ವರರಿಗೆ ಅರುಹಿ ಅವರಿಗೆ ಲಿಂಗಧಾರಣವನ್ನು ಮಾಡಿದ್ದಾರೆ. ವಾಚಕರು ಆ ಸಂಗತಿಗಳನ್ನು ಓದಿ ತಿಳಿದುಕೊಳ್ಳಬಹುದು. ಉದಾಹರಣೆಗಾಗಿ ಇಲ್ಲಿ ಕೆಲವು ವಚನಗಳನ್ನು ಕೊಡಲಾಗಿದೆ.

'ನವನಾಳದ ಸುಳುಹ ತಿಳಿದೆನೆಂಬುದು ಯೋಗವಲ್ಲ. ಐವತ್ತೆರಡಕ್ಷರದ ಶಾಸನವ ತಿಳಿದು ನೋಡಿ ಹೃದಯ ಕಮಲದ ಕರ್ಣಿಕೆಯಲ್ಲಿ ಸಿಕ್ಕಿದೆನೆಂಬುದು ಯೋಗವಲ್ಲ. ಬಹಿರಂಗವೆಂಬರೆ ಕ್ರಿಯಾರಹಿತ, ಅಂತರಂಗವೆಂಬರೆ ವಾಙ್ಮನಾತೀತ. ಗುಹೇಶ್ವರನೆಂಬ ಲಿಂಗವು ಪಡುಚಕ್ರದ ಮೇಲಿಲ್ಲ ಕಾಣಾ ಸಿದ್ಧರಾಮಯ್ಯ " (ಶೂನ್ಯಸಂಪಾದನೆಯ ಪುಟ ೬೩)

ಸ್ವಸ್ಥ ಹದ್ಮಾಸನದಲ್ಲಿ ಕುಳ್ಳಿರ್ದು ನೆಟ್ಟಿಲುವ ಮುರಿದು ನಿಷ್ಠೆಯಿಂದ ಹಿಂದಣ ಒಟ್ಟೆಯ ತೆಗೆದು ಅಮೃತವನುಂಡಿಹೆನೆಂಬವರ ಕೇಡಿಂಗೆ ಕಡೆಯಿಲ್ಲ. ಅತ್ಯತಿಷ್ಠದ್ದಶಾಂಗುಲವೆಂಬ ಶ್ರುತಿಯ ನೋಡಲು ಮುಟ್ಟಿ ನೆಲೆಗೊಳಿಸುವ ತಾವುಂಟೇ? ಸ್ಥಾನವಮಾನವೆಂಬ ಮಾತಿಂಗೆ ದೂರವಾದ ಘನವ ಬ್ರಹ್ಮರಂಧ್ರದಲ್ಲಿ ಕಂಡೆನೆಂದರೆ ಕಾಣಬಹುದೇ? ನಮ್ಮ ಗುಹೇಶ್ವರ ಲಿಂಗವು ಕಲ್ಪಿತಕ್ಕೆ ದೂರಕೇಳಾ ಸಿದ್ಧರಾಮಯ್ಯ " (ಶೂನ್ಯಸಂಪಾದನೆಯ ಪುಟ ೬೩).

" ಗುರು ತೋರಿದ ಲಿಂಗವು ಮನಸಾಹಿತ್ಯವಾಗಿರಲು, ಪವನಭೇದದಿಂದ ಅರಿವೆನೆಂದರೆ ಅದೇ ದ್ರೋಹ. ಈಡಾ, ಪಿಂಗಳ, ಸುಷುಮ್ನಾನಾಳದಿಂದ ಅರಿದಿಹೆನೆಂದರೆ ಕೂಡಲಸಂಗಮದೇವರು ಮೂಗ ಕೊಯ್ಯದೆ ಬಿಡುವನೇ? " (ಶೂನ್ಯಸಂಪಾದನೆ ಪುಟ ೧೪೯)

" ಕಾಯಾನುಭಾವಿಗಳು ಕಾಯದಲ್ಲಿ ಮುಕ್ತರು. ಜೀವಾನುಭಾವಿಗಳು ಜೀವದಲ್ಲಿ ಮುಕ್ತರು. ಪ್ರಾಣಾನುಭಾವಿಗಳು ಪ್ರಾಣದಲ್ಲಿ ಮುಕ್ತರು. ಪವನಾನುಭಾವಿಗಳು ಪವನದಲ್ಲಿ ಮುಕ್ತರು. ಲಿಂಗಾನುಭಾವಿಗಳಿಗೆಂತು ಸರಿಯೆಂಬೆ? ನಿರವಯ ಸ್ವಯಂಜ್ಯೋತಿಯಾಗಿಪ್ಪರು ಲಿಂಗದಲ್ಲಿ ಕೂಡಲಚೆನ್ನಸಂಗಮದೇವಾ ನಿಮ್ಮ ಶರಣರು. " (ಶೂನ್ಯಸಂಪಾದನೆ ಪುಟ ೧೪೯)

ಈ ವಚನಗಳಿಂದ ಯೋಗಕ್ಕಿಂತಲೂ ಭಕ್ತಿಮಾರ್ಗವು ಅಥವಾ ಇಷ್ಟಲಿಂಗದ ಮಹತ್ವವು ಹೆಚ್ಚಾಗಿರುತ್ತದೆಂದೂ ಪರವಸ್ತುವು ಭಕ್ತಿಮಾರ್ಗಕ್ಕಷ್ಟೇ ಸಾಧ್ಯವಲ್ಲದೆ ಯೋಗಮಾರ್ಗಕ್ಕೆ ಸಾಧ್ಯವಲ್ಲವೆಂದೂ ಹೇಳಿಕೊಟ್ಟಂತಾಯಿತು. ಭಗವದ್ಗೀತೆಯಲ್ಲಾದರೂ ಭಕ್ತಿಮಾರ್ಗವು ಸರ್ವೋತೃಷ್ಟವಾದುದೆಂದೇ ಪರಿಗಣಿಸಲ್ಪಟ್ಟಿರುವದಲ್ಲವೇ? ಆಸನ ಪ್ರಾಣಾಯಾಮಾದಿಗಳಿಂದ ದೇಹಬಲ ಆಯುರಾರೋಗ್ಯಗಳು ವರ್ಧಿಸುವದೇನೋ ನಿಜ. ಆದರೆ ಪರವಸ್ತುವಿನ ನೆಲೆಯು ಭಕ್ತಿಮಾರ್ಗಕ್ಕಲ್ಲದೆ ಯೋಗಮಾರ್ಗಕ್ಕೆಂ

ದಿಗೂ ಸಾಧ್ಯವಲ್ಲವೆಂಬುದೇ ನಮ್ಮ ಶಿವಶರಣರ ಶಿವಾನುಭವ ಸಿದ್ಧಾಂತವು. ಈ ವಿಷಯವಾಗಿ ಹೆಚ್ಚಿಗೆ ತಿಳಿದುಕೊಳ್ಳಬೇಕೆಂದಪೇಕ್ಷಿಸುವವರು ಶೂನ್ಯಸಂಪಾದನೆಯ ೧೦ನೆಯ 'ಶ್ರೀ ಸಿದ್ಧರಾಮೇಶ್ವರ ಗುರುಕರುಣೆ' ಎಂಬ ಭಾಗವನ್ನು ಅವಶ್ಯವಾಗಿ ಓದಬೇಕು.

ಶರೀರವು ಯಂತ್ರವಿದ್ದು ಕೆಲವು ನಿಯಮಗಳಿಗೆ ಬದ್ಧವಾಗಿರುವದರಿಂದ ಯೋಗಶಾಸ್ತ್ರವು ಇಂದ್ರಿಯ ವ್ಯಾಪಾರಗಳನ್ನು ನಿಯಂತ್ರಿಸುತ್ತದೆಂದು ನಮ್ಮ ಲೇಖಕರು ಹೇಳಿದ್ದಾರೆ. ಶರೀರವು ಯಂತ್ರವಾಗಿದ್ದರೂ ಶರೀರಿಯು ಯಂತ್ರವಲ್ಲ. ಅತನಲ್ಲಿ ಜೀವಕಳೆಯಿದೆ, ಮನಸ್ಸಿದೆ, ಆತ್ಮವಿದೆ. ಯಂತ್ರದಂತೆ ಶರೀರದ ಇಂದ್ರಿಯಗಳನ್ನು ದುಡಿಸುವದಷ್ಟೆ ಅವನ ಅಂತಿಮಧ್ಯೇಯವಲ್ಲ. ಯಂತ್ರದ ದುಡಿತದಿಂದುಂಟಾದ ಯಾಂತ್ರಿಕಾನಂದದಲ್ಲಿ ಸೊಬಗು ಸೌಂದರ್ಯವಿಲ್ಲ. ಆ ಆನಂದವು ರಸಭರಿತವಾದುದಲ್ಲ. ಆಸನ ಪ್ರಾಣಾಯಾಮಗಳಿಂದ ಸಮಾಧಿಸ್ಥಿತಿಗೇರಿ ಆನಂದ ಪಡೆದರೆ ಅದು ಬರೇ ಕಷ್ಟಕರವಾದ ಆನಂದವು. ಸುಖಕರವಾದ ಆನಂದವಲ್ಲ. ಯಂತ್ರಕ್ಕಿಂತಲೂ ಎಷ್ಟೋ ಪಟ್ಟು ಮಿಗಿಲಾದ ಜೀವನಸೌಂದರ್ಯ, ಭಕ್ತಿ, ಆಧ್ಯಾತ್ಮಜ್ಞಾನ ಮುಂತಾದವುಗಳಲ್ಲಿ ಆನಂದವು ಪರಿಪೂರ್ಣವಾಗಿರುವದು; ರಸಭರಿತವಾಗಿರುವದು.

ವ್ಯಾಯಾಮ ಮಾಡಿದ ಮನುಷ್ಯನ ಅವಯವಗಳು ಕೋಣನಂತೆ ಕೊಬ್ಬಿ ಆತನು ತನ್ನ ತುಂಬಿದ ವೈ ಕೈಗಳನ್ನು ನೋಡಿ ಆನಂದಿಸಬಹುದು. ಆದರೆ ಈ ಆನಂದವು ತಾಮಸೀ ಆನಂದವಲ್ಲದೆ ಸಾತ್ವಿಕಾನಂದವಲ್ಲ. ಅದೇ ಮೇರೆಗೆ ಹಠಯೋಗಸಾಧನೆಯಿಂದ ಕಷ್ಟತರವಾದ ಸುಖವು ಲಭಿಸಿದರೂ ಅದು ಕಷ್ಟವೇ ಹೊರತು ನಿಜಸುಖವಲ್ಲ. ಇಂದ್ರಿಯಗಳನ್ನು ಬಲಾತ್ಕಾರದಿಂದ ನಿಗ್ರಹಿಸಿ ಪ್ರಾಣಾಯಾಮವನ್ನು ಅಭ್ಯಾಸಿಸಿ ಆಯುಷ್ಯವನ್ನು ಬೆಳೆಯಿಸಿಕೊಳ್ಳಬಹುದು, ರೋಗವನ್ನು ಕಳೆದುಕೊಳ್ಳಬಹುದು, ದಿವ್ಯ ತೇಜವನ್ನು ಪಡೆಯಬಹುದು. ಮನುಷ್ಯನ ಜೀವಸಗುರಿಯು ಇಷ್ಟೇ ಅಲ್ಲ. ಚಿದಾನಂದವನ್ನು ಹೊಂದುವದೇ ಅಂತಿಮ ಧ್ಯೇಯವು.

ಕಟುತರವಾದ ಔಷಧದಿಂದ ಒಬ್ಬನ ರೋಗವು ಗುಣವಾಗುತ್ತದೆಂದು ತಿಳಿಯಿರಿ. ಅದೇ ರೋಗವು ಅಮೃತದಂಥ ಮಧುರವಾದ ಬೇರೊಂದು ಔಷಧದಿಂದ ಗುಣವಾಗುತ್ತಿದ್ದ ಪಕ್ಷದಲ್ಲಿ ಜಾಣರಾದವರು

ಕಟುತರವಾದ ಔಷಧವನ್ನು ಬಿಟ್ಟು ಮಧುರವಾದ ಔಷಧವನ್ನಾಶಿಸುವದು ಸ್ವಾಭಾವಿಕವಾಗಿದೆ. ಅದರಂತೆ ಕಹಿಯಾದ ಔಷಧವನ್ನು ಅಲ್ಲಗಳೆಯುವದೂ ಸಹಜವು. ಅದೇ ಮೇರೆಗೆ ಯೋಗಾಭ್ಯಾಸದಿಂದ ಕೊನೆಗೆ ಆನಂದ ದೊರೆಯುತ್ತಿದ್ದರೆ ಅದು ಕಹಿ ಔಷಧದಿಂದ ದೊರೆತ ಹಾಗೆ. ಭಕ್ತಿಯಿಂದ ಆನಂದವು ಲಭಿಸುತ್ತಿದ್ದರೆ ಅದು ಸಿಹಿ ಔಷಧದಿಂದುಂಟಾದ ಸುಖದ ಹಾಗೆ. ವೀರಶೈವರು ಭಕ್ತಿಮಾರ್ಗದವರಾದುದರಿಂದ ಆರಂಭದಲ್ಲಿಯೂ ಪರ್ಯವಸಾನದಲ್ಲಿಯೂ ಸರಸವಾಗಿರುವ ಭಕ್ತಿಗೇನೇ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು ಆರಂಭದಲ್ಲಿ ಕಷ್ಟಕರವಾಗಿ ಅಂತ್ಯದಲ್ಲಿ ಸುಖಕರವಾಗಿರುವ ಯೋಗಮಾರ್ಗಕ್ಕೆ ಅಷ್ಟೇನೂ ಮಹತ್ವ ಕೊಡದಿದ್ದುದು ಆಶ್ಚರ್ಯವಲ್ಲ. ಇದರಿಂದ ವೈದಿಕ ಮತದ ಬಗ್ಗೆ ವೀರಶೈವ ವಚನಕಾರರು ತಪ್ಪು ತಿಳುವಳಿಕೆಯುಳ್ಳವರಾಗಿದ್ದರೆಂದು ಸಿದ್ಧವಾಗುವದಿಲ್ಲ. ಅವರು ತಮ್ಮ ಸದಸದ್ವಿವೇಕಕ್ಕೆ ಸತ್ಯವೆನಿಸಿದ ತತ್ವಗಳನ್ನು ಅನುಭವಿಸಿ ನುಡಿದಿದ್ದಾರೆ. ಅವರ ಮೇಲೆ ನಿಷ್ಕಾರಣವಾಗಿ ಆರೋಪ ಮಾಡುವದು ಅನುಚಿತವೆಂದೇ ನಮ್ಮ ಅಭಿಪ್ರಾಯವು.

ಯೋಗಕ್ಕಿಂತಲೂ ಭಕ್ತಿಯು ಸುಲಭವಾದ ಮಾರ್ಗವಾದುದರಿಂದ ಅವರು ಅದರ ಕಡೆಗೆ ಪಂಡಿತ-ಪಾಮರರ ದೃಷ್ಟಿಯನ್ನು ತಿರುಗಿಸಿದರು. ಯೋಗಜ್ಞಾನ ಮಾರ್ಗಗಳಿಗಿಂತಲೂ ಭಕ್ತಿಮಾರ್ಗವೇ ಅಧಿಕವಾಗಿರುವದೆಂಬ ಬಗ್ಗೆ ಶೂನ್ಯಸಂಪಾದನೆಯಲ್ಲಿ "ಶ್ರೀ ಸಿದ್ಧರಾಮಯ್ಯನ ಗುರುಕರುಣೆ" ಎಂಬ ಭಾಗದಲ್ಲಿ ಬಹು ಸುಯುಕ್ತಿಕವಾಗಿ ವಿವೇಚಿಸಿದ್ದಾರೆ. ವಾಚಕರು ಬೇಕಾದರೆ ಅದನ್ನು ನೋಡಬಹುದು. ಯೋಗಮಾರ್ಗವು ಅಲ್ಪ ಸಂಖ್ಯಾಕ ಜನರಿಗೆ ಬಹು ಪ್ರಯಾಸದಿಂದ ಸಾಧ್ಯವಾಗುವಂತಹದು. ಯೋಗಮಾರ್ಗವು ಜಗತ್ತಿನಲ್ಲಿಯೇ ಮಸ್ತರವಾದ ಮಾರ್ಗವಾಗಿರುವದೆಂದು ನಮ್ಮ ಲೇಖಕರೇ ಒಪ್ಪಿಗೆಯನ್ನು ಕೊಟ್ಟಿರುವರು. ಆದರೆ ಭಕ್ತಿಮಾರ್ಗವು ಬಹು ಜನರಿಗೆ ಸುಲಭಸಾಧ್ಯವಾದಂತಹದು. ಯೋಗವೃಕ್ಷದ ಫಲಗಳಿಗಿಂತಲೂ ಭಕ್ತಿವೃಕ್ಷದ ಫಲಗಳು ಹೆಚ್ಚು ಮಧುರತರವಾಗಿವೆ.

ವೀರಶೈವರು ಭಕ್ತಿಯ ತಳಹದಿಯ ಮೇಲೆ ಶಿವಯೋಗ ಸಾಮ್ರಾಜ್ಯವನ್ನು ಸ್ಥಾಪಿಸಿರುವರು. ಭಕ್ತಿಯ ಮಂಥನದಿಂದಲೇ ಜ್ಞಾನವೆಂಬ ನವನೀತವನ್ನು ತೆಗೆದಿರುವರು. ಇಷ್ಟಲಿಂಗವೆಂಬುವದೇ ಭಕ್ತಿಯ ಕುರುಹು. ಪ್ರಾಣಲಿಂಗವೇ ಯೋಗದ ಚಿಹ್ನ. ಭಾವಲಿಂಗವೇ ಜ್ಞಾನದ ತಿರುಳು.

ಭಕ್ತಿಯಿಲ್ಲದ ಯೋಗ ಯಂತ್ರದ ದುಡಿತದಂತೆ ನೀರಸವಾದುದು. ಆದರಂತೆ ಭಕ್ತಿಯಿಲ್ಲದ ಜ್ಞಾನವು ಮಾತಿನ ಬ್ರಹ್ಮವು; ಸುಮ್ಮನೆ ತಲೆಯನ್ನು ಕೆರಕೊಂಡು ಚಟಪಟಿಸುವ ಬುದ್ಧಿವಂತಿಕೆಯು. ಆದರೆ ಭಕ್ತಿಯುಕ್ತವಾದ ಜ್ಞಾನದಲ್ಲಿ ಒಂದು ತರಹದ ಕಳೆಯಿದೆ; ಜೀವಾಳವಿದೆ, ಸ್ವಾರಸ್ಯವಿದೆ. ವೀರಶೈವರ ಯೋಗವು ಶಿವಯೋಗವು. ಅರ್ಥಾತ್ ಇಷ್ಟಲಿಂಗವಲ್ಲಿ ಸಮರಸ ಭಾವವನ್ನು ಹೊಂದುವಿಕೆಯು. ಆದರೆ ಅಷ್ಟಾಂಗ ಯೋಗಗಳ ಅಭ್ಯಾಸವಲ್ಲ. ಆದುದರಿಂದ ವಚನಕಾರರು ಶಿವಯೋಗವನ್ನು ಹೊಗಳಿ ಅಷ್ಟಾಂಗಯೋಗವನ್ನು ತೆಗಳಿದ್ದಾರೆ.

೨

ಹಠಯೋಗವೋ ಶಿವಯೋಗವೊ ?

ಮೇಲಿನ ವಿಚಾರಗಳಿಗೆ ಕೆಲವರು ಹೀಗೆ ಪ್ರಶ್ನವಾಡಬಹುದು? "ವೀರಶೈವರು" ಹಠಯೋಗ ಸಾಧನವನ್ನೇಕೆ ಮಾಡಬಾರದು? ಹಠಯೋಗಕ್ಕೂ ಶಿವಯೋಗಕ್ಕೂ ಏನು ಭೇದವಿದೆ? ಶಿವಯೋಗವೆಂದರೆ ಹಠಯೋಗದ ಒಂದು ಪರ್ಯಾಯದ ಶಬ್ದವಲ್ಲವೇ? ಪ್ರಾಣಲಿಂಗಾನು ಸಂಧಾನವೆಂದರೆ ಯೋಗಾಭ್ಯಾಸವಲ್ಲದೆ ಮತ್ತೇನು? ಪ್ರಾಣಲಿಂಗಿ ಸ್ಥಳದಲ್ಲಿ ಯೋಗವು ಸಮಾವೇಶವಾಗುವದಿಲ್ಲವೇ ಹೇಗೆ?" ಈ ಪ್ರಶ್ನೆಗಳಿಗೆ ಸರಿಯಾದ ಉತ್ತರವು ಮೇಲೆ ಧ್ವನಿತವಾಗುತ್ತಿದ್ದರೂ ಅದನ್ನು ಇನ್ನಿಷ್ಟು ವಿಸ್ತಾರವಾಗಿ ಸ್ಪಷ್ಟೀಕರಿಸುವದು ಯುಕ್ತವಾಗಿ ತೋರಿದ್ದರಿಂದ ಹಾಗೆ ಮಾಡಲು ಪ್ರಯತ್ನಿಸುತ್ತೇನೆ.

ವೀರಶೈವರು ಹಠಯೋಗಿಗಳಲ್ಲ, ಶಿವಯೋಗಿಗಳು. ಹಠಯೋಗ ಮಾಡೇತೀರುತ್ತೇವೆಂದು ಹಠ ಸಾಧಿಸುವವರಿಗೆ ಬೇಡವೆಂದು ಯಾರೂ ಆಗ್ರಹ ಮಾಡುವದಿಲ್ಲ. ಹಠಯೋಗವು ವೀರಶೈವರಿಗೆ ಗ್ರಾಹ್ಯವೇ, ಅಗ್ರಾಹ್ಯವೇ? ಎಂಬದಿಷ್ಟೇ ಪ್ರಶ್ನೆ. ಅಗ್ರಾಹ್ಯವೆಂಬುದೇ ಅದಕ್ಕೆ ಉತ್ತರ. ಅದು ಹ್ಯಾಗಂದರೇ:- ಹಠಯೋಗವು ಈಗಿನ ಹೊಸ ಪದ್ಧತಿಯ ಡ್ರಿಲ್ಲಿನ ಮಾದರಿಯದಾಗಿರುತ್ತದೆ. ಬೆನ್ನು ಹುರಿಯು ಮಣಿಯೋಣ (*Curvature of the spine*) ಎದೆಯು ಮುದುಡೋಣ (*Contraction of the Chest*) ತೋಳುಗಳು ವಕ್ರವಾಗೋಣ (*Roundess of the arms*) ಮುಂತಾದವುಗಳು ಸಂಭವಿಸಬಾರದೆಂದು ಡ್ರಿಲ್ ಶಿಕ್ಷಕರು ವಿದ್ಯಾರ್ಥಿಗಳಿಗೆ ಸೆಟೆಸಿಸಿಲ್ಲುವದಕ್ಕೂ ಕೂಡ್ರುವದಕ್ಕೂ ಕಲಿಸುವದುಂಟು. ಈ ಮಾದರಿಯ

ವ್ಯಾಯಾಮ ಪಾಠಗಳನ್ನು ಹಠಯೋಗದ ಆಸನಗಳಿಗೆ ಹೋಲಿಸಬಹುದು. ಉಸುರಾಡಿಸುವ ವ್ಯಾಯಾಮ (*Brathing Exercise*) ವನ್ನು ಪ್ರಾಣಾಯಾಮಕ್ಕೆ ಹೋಲಿಸಬಹುದು. ಬಾಲಕರು ಕಣ್ಣಗಳನ್ನು ಅರಳಿಸಿ ಮೇಲೆ ಕೆಳಗೆ ಎಡಬಲಕ್ಕೆ ನೋಡಿ ದೃಷ್ಟಿಯನ್ನು ತೀಕ್ಷ್ಣಗೊಳಿಸುವಂತೆ ಹಠಯೋಗದಲ್ಲಿ ನಾಸಿಕಾಗ್ರದಲ್ಲಿ ದೃಷ್ಟಿಯನ್ನಿರಿಸಿ ಏಕಾಗ್ರತೆಯನ್ನು ಪಡೆಯಬಹುದು. ಒಟ್ಟಿನ ಮೇಲೆ ಹಠಯೋಗವು ಡ್ರಿಲ್ಲಿನಂತೆ ಇಂದ್ರಿಯಗಳನ್ನು ಒಂದು ವ್ಯವಸ್ಥಿತ ಸ್ವರೂಪದಲ್ಲಿಟ್ಟುಕೊಳ್ಳುವ ಸಾಧನವು. ಅದರಿಂದ ಶರೀರ ಇಂದ್ರಿಯಗಳಲ್ಲಿ ಒಂದು ಪ್ರಕಾರದ ಶಿಸ್ತು (*Discipline*) ಕ್ರಮಬದ್ಧತೆಯೂ ಉಂಟಾಗಬಹುದು. ಆದರೆ ವೀರಶೈವರಿಗೆ ಈ ಪ್ರಕಾರದ ಸಾಧನವೇನೂ ಮುಖ್ಯವಲ್ಲ. ಗೌಣವು. ಗೌಣವಾದದ್ದನ್ನು ಬಿಟ್ಟರೂ ನಡೆಯುತ್ತದೆ. ಆದರೆ ಮುಖ್ಯವಾದದ್ದನ್ನು ಬಿಟ್ಟರೆಂದಿಗೂ ನಡೆಯಲಾರದು. ಹಾಗಾದರೆ ಆ ಮುಖ್ಯವಾದ ಸಾಧನವಾವುದು?

ವೀರಶೈವರು ಇಷ್ಟಲಿಂಗ ಪೂಜೆ ಮಾಡುವಾಗ ಆಸನ ಹಾಕಿಕೊಂಡು ಸೆಟೆದು ಕುಳಿತು ಶ್ವಾಸ ಬಿಗಿ ಹಿಡಿದು ಏಕಾಗ್ರತೆಯಿಂದ ಲಿಂಗ ನಿರೀಕ್ಷಣೆ ಮಾಡುತ್ತಿರುವದರಿಂದ ಅದು ಯೋಗವಲ್ಲವೇ? ಎಂದು ಕೆಲವರು ಕೇಳಬಹುದು. ಅದು ಯೋಗದ ಛಾಯೆಯೇನೋ ನಿಜ. ಆದರೆ ಬರೇ ಹಾಗೆ ಕೂಡ್ರುವದಷ್ಟೇ ವೀರಶೈವ ಧರ್ಮದ ಲಕ್ಷಣವಲ್ಲ. ನಮ್ಮಲ್ಲಿ ಕಣ್ಣು ಅರಳುವದು ಮುಖ್ಯವಲ್ಲ. ಹೃದಯವರಳಬೇಕು. ಅಂತಃಕರಣ ಕರಗಬೇಕು. ಆನಂದಾಶ್ರುಗಳುದುರಬೇಕು. ಪರಮಾತ್ಮನಲ್ಲಿ ತಾದಾತ್ಮ್ಯ, ತಲ್ಲೀನತೆ ಪರವಶತೆ ಅಥವಾ ಸಮರಸ ಭಾವವನ್ನು ಹೊಂದಿ ಸುಖಿಸಬೇಕು. ಇದೇ ಶಿವಯೋಗವು. ಇದೇ ಮುಖ್ಯ. ಇದು ನಮಗೆ ಸಾಧಿಸಿದರೆ ಸಾಕು. ನಾವು ಹೇಗೆ ಕುಳಿತರೂ ಸರಿಯೇ. ಹೇಗೆ ನೋಡಿದರೂ ಸರಿಯೇ. ಆಸನ ಏಕಾಗ್ರ ದೃಷ್ಟಿಗಳು ಲಿಂಗದಲ್ಲಿ ಈ ತರಹದ ಭಾವನೆಯನ್ನು ಹುಟ್ಟಿಸಲು ಸಹಾಯಕಾರಿಗಳಾಗುತ್ತಿದ್ದರೆ ಅವು ನಮಗೆ ಬೇಕು. ಲಿಂಗಕ್ಕೆ ಪತ್ರಿ ಪುಷ್ಪಗಳನ್ನೇರಿಸುವದಷ್ಟೇ ನಮ್ಮ ಅರ್ಚನೆಯಲ್ಲ. ಆ ಪತ್ರಿಪುಷ್ಪಗಳಿಂದ ಲಿಂಗವನ್ನು ಅಂದಚಂದ ಮಾಡುವದಷ್ಟೇ ಅಲ್ಲ; ಅದರಲ್ಲಿ ಎದೆಯು ಅರಳಿ ನಲಿದಾಡುವದೇ ಮುಖ್ಯ ಅರ್ಚನೆಯು. ಆದರೆ ಬರೇ ಲಿಂಗವನ್ನು ನೋಡಿ ನಾವು ಆನಂದಪರವಶರಾಗುತ್ತಿದ್ದರೆ ನಮಗೆ ಪತ್ರಿಪುಷ್ಪಗಳ ಹಂಗು ಬೇಡ. ಅದರಂತೆ ಆಸನ ಏಕಾಗ್ರ ದೃಷ್ಟಿಗಳಿಲ್ಲದೆ ನಮ್ಮ ಮನಸ್ಸು ಇಷ್ಟಲಿಂಗದಲ್ಲಿ ಸಮರಸ ಹೊಂದುತ್ತಿದ್ದರೆ

ನಮಗೆ ಆಸನ ದೃಷ್ಟಿಗಳ ಹಂಗು ಬೇಡ. ಇದೇ ಶಿವಯೋಗದ ರಹಸ್ಯವು. ಶಿವಯೋಗಕ್ಕೆ ಆಸನ ಪ್ರಾಣಾಯಾಮಾದಿಗಳು ಗೌಣವಾದವುಗಳೇ ಹೊರತು ಮುಖ್ಯವಲ್ಲ. ಆದರೆ ಹಠಯೋಗಕ್ಕೆ ಅವು ಮುಖ್ಯವಾದವುಗಳು. ಇದೇ ಹಠಯೋಗ ಶಿವಯೋಗಗಳಲ್ಲಿರುವ ವ್ಯತ್ಯಾಸವು.

ಹಠಯೋಗವು ಬಾಹ್ಯ ಇಂದ್ರಿಯಗಳ ಸಹಾಯದಿಂದ ಸಿದ್ಧಿಯನ್ನು ಪಡೆಯುವ ಸಶಾಸ್ತ್ರೀಯ ಕ್ರಮವು. ಆದರೆ ಶಿವಯೋಗವು ಅಂತರಂಗವನ್ನುಕ್ಕಿಸುವ ಕಲೆಯು. ಸಶಾಸ್ತ್ರೀಯವಾಗಿ ಮಾಡುವದೆಲ್ಲವೂ ಯಂತ್ರದ ಕೆಲಸದಂತೆ ವಿರಸವಾಗಿರುತ್ತದೆ. ಆದರೆ ಕಲಾಯುಕ್ತವಾಗಿ ಮಾಡುವ ಕಾರ್ಯದಲ್ಲಿ ಸೌಂದರ್ಯಸ್ವಾರಸ್ಯಗಳು ತುಂಬಿತುಳುಕುತ್ತವೆ. ಆದುದರಿಂದ ಶಿವಯೋಗವು ಹಠಯೋಗದ ಪರ್ಯಾಯ ಶಬ್ದವೆಂದು ಯಾರೂ ಭಾವಿಸಲಾಗದು.

ಪ್ರಾಣಲಿಂಗಾನು ಸಂಧಾನವು ಯೋಗಾಭ್ಯಾಸವಲ್ಲ. ಹಠಯೋಗವು ಮನುಷ್ಯನ ನಾಭಿಯ ಕೆಳಗೆ ಮೂಲಾಧಾರ ಚಕ್ರದಲ್ಲಿ ಸರ್ಪದಂತೆ ಸುತ್ತಿಕೊಂಡು ಕುಳಿತಿರುವ ಕುಂಡಲಿನಿ ಶಕ್ತಿಯನ್ನು ಆಸನ ಪ್ರಾಣಾಯಾಮಾದಿಗಳಿಂದ ಹೊಡೆದೆಬ್ಬಿಸಿ ಅದನ್ನು ಷಟ್ಚಕ್ರಗಳೊಳಗಿಂದ ಹಾಯಿಸಿ ಶಿರಸ್ಸಿನಲ್ಲಿರುವ ಸಹಸ್ರದಲ ಕಮಲಕ್ಕೆ ಅಡರಿಸಿ ಸಮಾಧಿಸ್ಥಿತಿಯನ್ನು ಪಡೆಯಬೇಕೆಂಬ ಹಟವುಳ್ಳದ್ದಾಗಿದೆ. ಪ್ರಾಣಲಿಂಗಾನುಸಂಧಾನವು ಇಂಥ ಕಷ್ಟಕರವಾದ ಹಟವನ್ನೇನೂ ಸಾಧಿಸಲಿಕ್ಕೆ ಹೋಗುವದಿಲ್ಲ. ಆದರೆ ಇಷ್ಟಲಿಂಗದ ಮೂಲಕ ಮಾಟ ನೋಟ ಕೂಟ ಭಕ್ತಿಯಿಂದ ಮನವೆಲ್ಲ ಲಿಂಗದಲ್ಲಿ ತಲ್ಲೀನವಾಗಿರುವುದೇ ಪ್ರಾಣಲಿಂಗಾನುಸಂಧಾನವು. ರಸಭರಿತವಾದ ಕಾವ್ಯವನ್ನೋದುವ ಸಹೃದಯನೊಬ್ಬನು ಆ ರಸವು ತನ್ನಂತರಂಗಕ್ಕೆ ಮುಟ್ಟಲು ತನ್ನನ್ನು ತಾನು ಮರೆತು ತದೇಕಧ್ಯಾನಾಸಕ್ತನಾಗುವಂತೆ ಸಾಕಾರವಾದ ಇಷ್ಟಲಿಂಗದಲ್ಲಿ ಭಕ್ತಿಯನ್ನಳವಡಿಸಿ ವೀರಶೈವನು ನಿರಾಕಾರವಾದ ಆನಂದಲಹರಿಯಲ್ಲಿ ತೇಲಾಡುವನು. ಇದೇ ಪ್ರಾಣಲಿಂಗಾನು ಸಂಧಾನವು. ಹಠಯೋಗದಂತೆ ಪ್ರಾಣಲಿಂಗಾನು ಸಂಧಾನವು ಶಾಸ್ತ್ರ ಸಿದ್ಧಾಂತವಲ್ಲ. ಅನುಭಾವಿಗಳುಂಡ ಸೊಗಸಿನ ಸವಿಯೂಟವಿದು.

ಷಟ್‌ಸ್ಥಲಗಳಲ್ಲಿ ಪ್ರಾಣಲಿಂಗಿಸ್ಥಳವಿರುವದೇನೋ ನಿಜ. ಆದರೆ ಈ ಸ್ಥಳವು ಯೋಗವಾರ್ಗಕ್ಕೇನೂ ಸಂಬಂಧಪಟ್ಟಿರುವದಿಲ್ಲ. "ಸಾವಧಾನದೊಳಗಣ ಸ್ವಾನುಭವದಿಂ ಪ್ರಾಣಲಿಂಗಿಯಾಗಿ" ಎಂದು ಪ್ರಭುದೇವರು ಪ್ರಾಣಲಿಂಗಿಸ್ಥಳದ ಲಕ್ಷಣವನ್ನು ಹೇಳಿದ್ದಾರೆ. ಸ್ವಾನುಭವವು ಷಡ್ವಿಧಭಕ್ತಿಗಳಲ್ಲೊಂದಾಗಿದೆ. ಈ ಭಕ್ತಿಯ ಸಹಾಯದಿಂದ ಪ್ರಾಣವೇ ಲಿಂಗ, ಲಿಂಗವೇ ಪ್ರಾಣವೆಂಬ ಅನುಭಾವ ಉಂಟಾಗುವದೇ ಪ್ರಾಣಲಿಂಗಿ ಸ್ಥಳದ ಮುಖ್ಯ ಲಕ್ಷಣವು. ಈ ಪ್ರಾಣಲಿಂಗಿ ಸ್ಥಿತಿಯು ರೇಚಕ, ಪೂರಕ, ಕುಂಭಕ ಇತ್ಯಾದಿಗಳಿಂದುಂಟಾಗಿರುವದಿಲ್ಲ. ಆದರೆ ಅನುಕ್ರಮವಾಗಿ ಭಕ್ತಿಗೆ ಸಂಬಂಧಪಟ್ಟ ವಿಶ್ವಾಸ, ನಿಷ್ಠೆ, ಸಾವಧಾನಗಳಿಂದುದ್ಭವಿಸಿರುತ್ತದೆ. ಆದುದರಿಂದ ಪ್ರಾಣಲಿಂಗಿ ಸ್ಥಳವು ಯೋಗಾಭ್ಯಾಸಕ್ಕೆ ಸಂಬಂಧಿಸಿದ್ದೆಂದು ತಿಳಿಯುವದು ಶುದ್ಧ ತಪ್ಪು.

ಇಷ್ಟಲಿಂಗವಿಲ್ಲದೆ ಬರೇ ಯೋಗಾಭ್ಯಾಸದ ಬಲದಿಂದ ಪ್ರಾಣಲಿಂಗನರಿವು ನನಗಾಯಿತೆಂದು ಸಿದ್ಧರಾಮಯ್ಯದೇವರು ನುಡಿದ ಕಾಲಕ್ಕೆ ಪ್ರಭುದೇವರು ಆ ಮಾತಿಗೆ ಉತ್ತರ ಕೊಟ್ಟಿದ್ದೇನೆಂದರೆ "ಶೂನ್ಯಕ್ಕೆ ತಲೆವಾರನಿಕ್ಕದಿರೋ. ವಸ್ತು ಭ್ರೂಮಧ್ಯವಲುಂಟೆಂದು ಭ್ರಮಿಸದಿರೋ. ವಸ್ತು ಬ್ರಹ್ಮರಂಧ್ರದಲ್ಲುಂಟೆಂದು ಹಲಬುಗೆಡದಿರೋ. ವಸ್ತುವಿನ ನಿಜವ ಕಾಣಬಡೆ ಎನ್ನ ಸಮ್ಮುಖ ಅನಿಮಿಷ ದೇವರಂತೆ ನಿನ್ನ ಕರಸ್ಥಲದಲ್ಲಿ ಲಿಂಗವ ನಿಶ್ಚಯಿಸಿಕೊಂಡು ನಮ್ಮ ಗುಹೇಶ್ವರಲಿಂಗದಲ್ಲಿ ನಿಚ್ಚಿರಗಾಗೋ ಸಿದ್ಧರಾಮಯ್ಯ. ನಿನಗೆ ಅಂತರ್ಲಕ್ಷಾನು ಸಂಧಾನ ಧ್ಯಾನದಿಂದ ವಸ್ತುವ ಕಂಡಿಹೆನೆಂದರೆ ಸಾಧ್ಯವಾಗದು ನೋಡಾ" ಆದುದರಿಂದ ಪ್ರಾಣಲಿಂಗಿಗೆ ಭಕ್ತಿಯೇ ಮುಖ್ಯವಲ್ಲದೆ ಹಠಯೋಗವೇನೂ ಕಾರಣವಲ್ಲ ವೀರಶೈವರ ಯೋಗವು ಶಿವಯೋಗವು ಅಷ್ಟಾಂಗಯುಕ್ತವಾದ ಹಠಯೋಗವಲ್ಲ.

೩

ಶಿವಯೋಗವು ಚಿತ್ತವೃತ್ತಿ ನಿರೋಧವೇ?

"ಯೋಗಶ್ಚಿತ್ತವೃತ್ತಿನಿರೋಧಃ" ಎಂದು ಅಷ್ಟಾಂಗಯೋಗವನ್ನು ಪರಾಮರ್ಶಿಸುವವರು ಹೇಳಿದ್ದಾರೆ. ಆದರೆ ವೀರಶೈವರ ಶಿವಯೋಗವು ಚಿತ್ತವೃತ್ತಿನಿರೋಧವಲ್ಲ; ಇಂದ್ರಿಯನಿಗ್ರಹವಲ್ಲ; ಆದರೆ ಅದು ಮನಸ್ಸಿನ ಸ್ವವೃತ್ತಿಗಳನ್ನು ಸದ್ವಿಷಯಗಳ ಕಡೆಗೆ ಹೊರಳಿಸುವದು ಇದೆ. ಮಾನಸ ಶಾಸ್ತ್ರದಲ್ಲಿ *Subli mation* (ಸ್ವಭಾವವನ್ನು ಉದಾತ್ತಗೊಳಿಸೋಣ) ಎಂದು ಯಾವುದಕ್ಕೆ ಕರೆಯುತ್ತಾರೆಯೋ ಅದೇ ಶಿವಯೋಗವೆಂದು ನಾವು

ಹೇಳಬಹುದು. ಅವರಂತೆಯೇ *Repression* ಅಥವಾ *Suppression* (ಮನಪ್ರವೃತ್ತಿಯನ್ನು ಕುಗ್ಗಿಸೋಣ) ವೆಂದು ಯಾವುದಕ್ಕೆ ಹೇಳುವರೋ ಅದೇ ಅಷ್ಟಾಂಗಯೋಗವೆಂದು ಹೇಳಬಹುದು. ಮನಸ್ಸಿನ ಪ್ರವೃತ್ತಿಯನ್ನು ಬಲಾತ್ಕಾರದಿಂದ ಕುಗ್ಗಿಸಿ ಅಟಕಿಸಲ್ಲಿಟ್ಟರೆ ಅದು ನಮ್ಮ ಮೇಲೆ ಸಿಟ್ಟಿಗೆದ್ದು ಒಂದಿಲ್ಲೊಂದು ದಿನ ಸೇಡುತೀರಿಸಿಕೊಳ್ಳದೆ ಬಿಡುವದಿಲ್ಲ. ಅಡವಿಯಲ್ಲಿರುವ ಒಂದು ಹುಲಿಯನ್ನು ಹಿಡಿದು ತಂದು ಅದಕ್ಕೆ ಹೊಡೆದು ಬಡೆದು ಬೆದರಿಕೆ ಹಾಕಿ ಅದು ನಮಗೆ ಕಡಿಯದಂತೆ ಹತೋಟಿಯಲ್ಲಿಟ್ಟುಕೊಳ್ಳಬಹುದು. ಆದರೆ ಆ ಹುಲಿಯು ಬೆದರಿಕೆಯಿಂದ ಮಾತ್ರ ನಮ್ಮ ಸ್ವಾಧೀನವಾಗಿರುವದೇ ಹೊರತು ತಪೋವನದ ಹುಲಿಯಂತೆ ಅಂತರಂಗದ ಪ್ರೇಮದಿಂದಲ್ಲ. ಒಂದಾನೊಂದು ದಿನ ನಾವು ಮೈಮರೆತು ನಿಂತಾಗ ಆ ಹುಲಿಯು ನಮ್ಮನ್ನು ಹಿಚುಕಿ ಹಾಕಬಹುದು. ಕಾಮುವಾಸನೆಗೆಳಿಸುವ ಮನಸ್ಸನ್ನು ಬಗ್ಗುಬಡಿಯಬೇಕೆಂದು ಅಡವಿಗೆ ಓಡಿಹೋದರೇನು? ಸ್ತ್ರೀಯರ ಮುಖಾವಲೋಕನ ಮಾಡದಿದ್ದರೇನು? ಆಸನ ಪ್ರಾಣಾಯಾಮಾದಿಗಳ ಸಹಾಯದಿಂದ ಹರಿದಾಡುವ ಮನವನ್ನು ತಡೆದರೇನು? ನದಿಗೆ ಒಡ್ಡುಹಾಕಿ ಗಟ್ಟಿ ಮಾಡಿದರೂ ಅದು ಒಂದಿಲ್ಲೊಂದು ದಿನ ತನ್ನ ಬಲವಾದ ಪ್ರವಾಹದ ಸೆಳವಿನಿಂದ ಒಡ್ಡನ್ನು ಹಾರಿ ಹೊಡೆದು ಪುನಃ ಮುಂದಕ್ಕೆ ಸಾಗುವದೇ ಅದರ ಧರ್ಮವು ಹೇಗೋ ಹಾಗೆಯೇ ತಪಸ್ಸು, ಆತ್ಮಸಂಯಮನ ಸ್ತ್ರೀಪುರುಷರ ಸಮಾಜದಿಂದ ದೂರಾಗಿರೋಣ ಮುಂತಾದ ನಾನಾ ತರದ ಕಷ್ಟಕರವಾದ ವ್ರತಗಳನ್ನಾಚರಿಸಿ ಮನಸ್ಸಿನ ಓಘವನ್ನು ತಡೆದರೂ ಒಂದಿಲ್ಲೊಂದು ದಿನ ಅದು ತನ್ನ ಸ್ವಭಾವದಂತೆ ವಿಷಯಾದಿಗಳ ಕಡೆಗೆ ಹರಿದುಹೋಗಲೇಬೇಕು. ಇದಕ್ಕೆ ಉದಾಹರಣೆಗಳೇನೂ ಕಡಿಮೆಯಿಲ್ಲ. ಗಡ್ಡ ಜಟೆಗಳನ್ನು ಬಿಟ್ಟು ಮಹಾ ಉಗ್ರತಪವನ್ನಾಚರಿಸಿದ ಯೋಗಿಯ ಮನವೆಲ್ಲ ಯಾತರ ಮೇಲೆ ಇದೆ ಎಂಬದನ್ನು ಸರ್ವಜ್ಞ ಹೇಳಿದ ಮಾತು ಸುಳ್ಳಲ್ಲ. ಅಭ್ಯಾಸದಿಂದ ಇಂದ್ರಿಯನಿಗ್ರಹ ಮಾಡಿ ಮನಸ್ಸಿನಿಂದ ಪವಿತ್ರರಾಗಿರುವೆವೆಂದು ಹೇಳುವ ಡಂಭಕರಿಗೆ ಅವರು ಮನಸಾ ಎಷ್ಟು ಪವಿತ್ರರಾಗಿರುವರೆಂಬದಕ್ಕೆ ಕೊನೆಗೆ ಅವರ ಮನವೇ ಸಾಕ್ಷಿ. 'ಜನರೇನು ಬಲ್ಲರು ಒಳಗಾಗೋ ಕೃತ್ಯವ ಮನವರಿಯದ ಕಳ್ಳತನವಿಲ್ಲವಲ್ಲ' ಎಂಬ ಸರ್ವಭೂಷಣ ಶಿವಯೋಗಿಗಳ ಪದವು ಅವರ ಸ್ಮೃತಿಪಥಕ್ಕೆ ಬರಲಿ.

ಇಂದ್ರಿಯ ಪ್ರವೃತ್ತಿಯನ್ನು ತಡೆಯುವದರಿಂದ ನಮಗೆ ನಿಜ ಸುಖ ದೊರೆಯಲಾರದು. ಅದರಂತೆಯೇ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಯಥೇಚ್ಛವಾಗಿ ಹರಿಬಿಟ್ಟರೂ ಪರಸುಖವು ದೊರೆಯದು. ಅಂದಮೇಲೆ ನಾವು ನಿಜಸುಖವನ್ನು ಸಾಧಿಸಬೇಕಾದರೆ ಹೇಗೆ ಮಾಡಬೇಕು? ಇಂದ್ರಿಯ ಪ್ರವೃತ್ತಿಯನ್ನು ಅಲ್ಲದ ವಿಷಯಗಳ ಕಡೆಗೆ ಎಳೆಸದಂತೆ ಸದ್ವಿಷಯಗಳ ಕಡೆಗೆ ಹರಿಯಗೊಡಬೇಕು. ಹಾಗೆ ಮಾಡಿದರೆ ಇಂದ್ರಿಯ ನಿಗ್ರಹ ಮಾಡಿದಂತಾಗಲಿಲ್ಲ. ಮನಸ್ಸನ್ನು ಕುಗ್ಗಿಸಿದಂತಾಗಲಿಲ್ಲ. ಹರಿದಾಡುವ ಪ್ರವಾಹಕ್ಕೆ ಮಲದಿಂದ ಕೂಡಿದ ಕೆಡಕು ಸ್ಥಳದ ಕಡೆಗೆ ದಾರಿಯನ್ನು ಕೊಡದೆ ಶುಚಿಭೂತವಾದ ಭೂಮಿಯ ಕಡೆಗೆ ಅದರ ದಿಶೆಯನ್ನು ತಿರುಗಿಸಿದಂತೆ ಪರಧನ, ಪರಸ್ತ್ರೀ, ಅಭಕ್ಷ್ಯಭಕ್ಷಣ, ಅಪಾನಪೇಯ ಮುಂತಾದವುಗಳ ಕಡೆಗೆ ಹರಿದು ಹೋಗುವ ಮನವನ್ನು ಸದ್ವಿಷಯಗಳ ಕಡೆಗೆ ಹೊರಳಿಸುವದೇ ಶಿವಯೋಗವು. ಹಾಗೆ ಮಾಡುವವರೇ ಶಿವಯೋಗಿಗಳು. ಅನ್ನ ಧನಗಳ ಕಡೆಗೆ ಮನಸ್ಸಾಗುವದೇನೋ ದೇಹದ ಸಹಜ ಸ್ವಭಾವವು. ಆದರೆ ಆ ಆಶೆಗಳನ್ನು ತಡೆಯಬೇಕೆಂದು ನಾವು ಉಪವಾಸ, ವೈರಾಗ್ಯ ವ್ರತಗಳನ್ನಾಚರಿಸಬಾರದು. ಪರಾನ್ನ ಪರದ್ರವ್ಯಗಳಿಗೆ ತಿರುಕರಂತೆ ಆಶೆಮಾಡಬಾರದು. ನಾಗರಿಕ ಸಮಾಜದಲ್ಲಿ ಹಾಗೆ ಮಾಡುವದು ಹ್ಯೇಯವು. ಆದುದರಿಂದ ಅನ್ನ ದ್ರವ್ಯಗಳನ್ನು ನಾವು ಸತ್ಕಾರ್ಯಕದಿಂದ ಗಳಿಸಿ ಸುಖಿಸಬೇಕು. ಕಾಯಕವೇ ಕೈಲಾಸ. ನಮ್ಮ ಶಿವಶರಣರು ತಿರುಕರಂತೆ ಒಬ್ಬರ ಮನೆಯ ಅನ್ನಕ್ಕಾಗಲಿ ದುಡ್ಡಿಗಾಗಲಿ ಆಶೆ ಮಾಡಲಿಲ್ಲ. ಸ್ವಂತ ಪರಿಶ್ರಮದಿಂದ ದುಡಿದು ದುಡ್ಡು ಗಳಿಸಿ ಉಂಡುಟ್ಟು ಸುಖಿಸುತ್ತಿದ್ದರು. ಸತ್ಕಾರ್ಯಕ್ಕೆ ದಾನಧರ್ಮಗಳನ್ನು ಮಾಡುತ್ತಿದ್ದರು. ಇದೇ ಶಿವಯೋಗವು. ಸ್ತ್ರೀಯರ ಕೂಟಕ್ಕೆ ಮನಸ್ಸಾಗುವದೇನೋ ಮಾನವ ಸ್ವಭಾವವು ತುರಗ ಬ್ರಹ್ಮಚಾರಿಗಳಂತೆ 'ಇಲ್ಲದಕೆ ಒಲ್ಲ ಸರ್ವಜ್ಞ' ಎಂಬಂತೆ ಇಂದ್ರಿಯ ನಿಗ್ರಹಿಯಾದರು ಒಳಗೊಳಗೆ ಕೊರಗುತ್ತ ಬಹಿರಂಗದಲ್ಲಿ ಮಹಾವಿರತಿಯುಳ್ಳವನೆಂದು ಹೇಳುವದೇನೂ ತಕ್ಕುದಲ್ಲ. ತನಗೆ ಯೋಗ್ಯಳಾದ ಪತ್ನಿಯನ್ನು ಲಗ್ನಮಾಡಿಕೊಂಡು ಸುಖಿಸಬೇಕು. ಇಲ್ಲವೆ ಸ್ತ್ರೀಕೂಟವನ್ನು ತ್ಯಜಿಸಿ ಇಷ್ಟಲಿಂಗದಲ್ಲಿ ಮನಃಕೂಟವುಳ್ಳವನಾಗಬೇಕು. ಲಿಂಗಧ್ಯಾನವುಳ್ಳವನಾಗಿ ಅದರಲ್ಲಿಯೇ ತನ್ನ ಪ್ರೇಮವನ್ನಳವಡಿಸಿ ತಾನೇ ಸತಿಯಾಗಿ ಲಿಂಗವೇ ಪತಿಯೆಂದು ಸಮರತಿಸುಖವನ್ನು ಪಡೆಯಬೇಕು. ಕಾಮುವಾಸನೆಯನ್ನಳಿಯಲಿಕ್ಕೆ 'ಶರಣಸತಿ

ಲಿಂಗಪತಿ' ಭಾವವು ಸರ್ವೋತ್ಕೃಷ್ಟವಾದದು. ಇಷ್ಟಲಿಂಗ ಪೂಜೆಯು ಅದಕ್ಕಾಗಿಯೇ ಏರ್ಪಟ್ಟಿದೆ ನಮ್ಮ ಶಿವಶರಣರು ಕುಟುಂಬಿಗಳಾಗಿದ್ದರೂ "ಶರಣಸತಿ ಲಿಂಗಪತಿ" ಯೆಂಬ ಪವಿತ್ರ ಭಾವನೆಯಿಂದಲೇ ಸುಖವನ್ನು ಹೊಂದಿದರು. ಇದೇ ಅಲ್ಲವೇ ನಿಜವಾದ ಶಿವಯೋಗವು? ಅಥವಾ ಅನ್ಯರ ಹೆಣ್ಣುಮಕ್ಕಳನ್ನು ಕಾಮುಭಾವದಿಂದ ನೋಡದೆ ಪೂಜಾ ಭಾವನೆಯಿಂದ ಕಾಣಬೇಕು. ಕೆಲವರು ಹೆಣ್ಣು ಮಾಯೆಯೆಂದೂ ರಕ್ಕಸಿಯೆಂದೂ ಕರೆದಿರುವರು. ಹೆಣ್ಣಿಗೆ ಅಂಜಿ ಕಾನನವನ್ನು ಸೇರಿರುವರು. ಆದರೆ ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನನೆಂದು ನಮ್ಮ ಶಿವಶರಣರು ಭಾವಿಸಿರುವರು. ನಾಗರಿಕರಾಗಿದ್ದುಕೊಂಡು ಇಂಥ ಶಿವಯೋಗವನ್ನು ಅನುಭವಿಸುವದನ್ನು ಬಿಟ್ಟು ಅಂಜಿ ಅರಣ್ಯಕ್ಕೇಕೆ ಓಡಿಹೋಗಬೇಕು?

ಅಭಕ್ಷ್ಯಭಕ್ಷಣ ಅಪಾನಪೇಯಗಳ ಕಡೆಗೆ ನಮ್ಮ ಮನಸ್ಸುಂಟಾಗುತ್ತಿದ್ದರೆ ಆ ಮನಸ್ಸನ್ನು ಪ್ರಸಾದ ಪಾದೋದಕಗಳೆಂಬ ಪವಿತ್ರ ವಿಷಯಗಳ ಕಡೆಗೆ ತಿರುಗಿಸಬೇಕು. ಅವುಗಳನ್ನು ಮಾಡುವದಿಲ್ಲೆಂದು ಶಪಥಗಳನ್ನೇಕೆ ಮಾಡಬೇಕು? ಮಾಡಿದ್ದರೆ ಮಾಡಿದ್ದು ತಪ್ಪಾಯಿತೆಂದು ಪ್ರಾಯಶ್ಚಿತ್ತಗಳನ್ನೇಕೆ ತೆಗೆದುಕೊಳ್ಳಬೇಕು? ನಮ್ಮ ಶಿವಶರಣರು ಶುದ್ಧ ಶಾಕಾಹಾರಿಗಳಾದುದರಿಂದಲೇ ಅನ್ಯ ಸಂಸರ್ಗದಿಂದ ಮಾಂಸಾಹಾರ, ಮಾದಕ ವಸ್ತುಗಳ ಸೇವನೆ, ಮುಂತಾದವುಗಳಿಂದ ದೂರಾಗಿ ಪ್ರಸಾದ ಪಾದೋದಕಗಳ ಕಡೆಗೇ ತಮ್ಮ ಮನಸ್ಸನ್ನು ತಿರುಗಿಸಿದರು ಇದೇ ಶಿವಯೋಗವು.

ಶಿವಯೋಗವು ನಿಷೇಧ ನಿವೃತ್ತಿಗಳಿಂದ ಕೂಡಿದುದಲ್ಲ. ವಿಧಿ ಪ್ರವೃತ್ತಿಮಾರ್ಗಗಳೇ ಅದಕ್ಕೆ ಮೂಲಾಧಾರಗಳು ವೀರಶೈವ ಧರ್ಮವು ಭಕ್ತಿಯ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆ. ಭಕ್ತಿಯು ಪ್ರವೃತ್ತಿಯ ದ್ಯೋತಕವು. ಭಕ್ತಿಗೆ ಬೇಕೆಂಬ ದುರಾಶೆಯಿಲ್ಲ. ಬೇಡೆಂಬ ಹಟವಿಲ್ಲ. ಪರಿಶುದ್ಧ ಹಾಗು ನಿಷ್ಕಾಮ ಭಕ್ತಿಯದು. ನಿಷ್ಕಾಮ ಭಕ್ತಿಯಿಂದ ಜಗತ್ತಿನ ಸದ್ವ್ಯವಹಾರಗಳನ್ನೆಲ್ಲ ನಮ್ಮ ಶಿವಶರಣರು ಜರಗಿಸಿದರೂ ಅವರ ಅಂತರಾತ್ಮವು ಯಾವಾಗಲೂ ಪರಶಿವನ ಪರಂಧಾಮದಲ್ಲಿ ನೆಲಿಸಿರುತ್ತದೆ. ನಮ್ಮ ಶಿವಯೋಗಿಗಳು "ಲೋಕದೊಳಗಿದ್ದೂ ಇಲ್ಲದ ಮಹಿಮರು." ನಮ್ಮವರು ಉದಾಸೀನ (*Passive*) ಸ್ವಭಾವದವರಲ್ಲ. ಆದರೆ ಚಟುವಟಿಕೆಯುಳ್ಳವರೂ (*Active*) ಉತ್ಪಾದಕ ಶಕ್ತಿಯುಳ್ಳವರೂ (*Creative*) ಆಗಿರುವರು ಶಿವಯೋಗವು ಚಿತ್ತವೃತ್ತಿ ನಿರೋಧವಲ್ಲ; ಚಿತ್ತವೃತ್ತಿ ಪವಿತ್ರೀಕರಣವು.

೪

ಶಿವಯೋಗವು ಮನುಷ್ಯತ್ವವೋ ದೇವತ್ವವೋ?

ಶಿವಯೋಗಿಗಳು ನಿಜವಾಗಿ ಮನುಷ್ಯರೇ ಆಹುದು. ಆದರೂ ಅವರು ತಮ್ಮ ಅಲೌಕಿಕವಾದ ಗುಣಧರ್ಮಗಳಿಂದ ದೇವರಂತೆ ಮನ್ನಿಸಲ್ಪಡುತ್ತಾರೆ. ಅದ್ವಿತೀಯರಾದ ವಿಭೂತಿಗಳನ್ನು ದೇವರೆಂದು ಭಾವಿಸುವದು ನಮ್ಮ ದೇಶದ ಸಾಂಪ್ರದಾಯವಾಗಿದೆ. ಆದರೆ ಅಸಂಬದ್ಧವಾದ ಗುಣಾರೋಪಣ ಮಾಡಿ ಅವರನ್ನು ದೇವರೆಂದು ತಿಳಿಯುವದು ಮಾತ್ರ ಶುದ್ಧ ತಪ್ಪು. ಶಿವಯೋಗಿಗಳೆಂಬವರು ಮುಗಿಲಮೇಲಿಂದಿಳಿದು ಬಂದಿಲ್ಲ. ಕಲ್ಲು ಮಣ್ಣು, ಕಿವಿ, ಮೂಗು, ತೊಡೆಗಳಲ್ಲಿ ಹುಟ್ಟಿಬಂದಿಲ್ಲ. ಅದರಂತೆಯೇ ಶಿವಯೋಗಿಗಳು ಶಿವನಲ್ಲಿ ಐಕ್ಯತೆ ಹೊಂದಿಲ್ಲ. ಪರಶಿವನೇ ಶಿವಯೋಗಿಗಳಾಗಿ ಭೂಮಿಗವತರಿಸಿಲ್ಲ. ಅವರ ಜನನ ಜೀವನ ಮರಣಗಳೇನೂ ಪ್ರಕೃತಿವಿರುದ್ಧವಾಗಿರುವದಿಲ್ಲ. ಶಿವಯೋಗಿಗಳು ನಮ್ಮಂತೆ ಮನುಷ್ಯರೇ ಆಹುದು. ನಮ್ಮಂತೆ ಅವರಿಗೆ ಹಸಿವೆ ನೀರಡಿಕೆಗಳಾಗುವದುಂಟು. ಕಾಮಕ್ರೋಧಾದಿ ವಿಕಾರಗಳೂ ಉಂಟು. ಸಾಮಾನ್ಯ ಮನುಷ್ಯರು ಆಚರಿಸುವ ನಿತ್ಯ ವ್ಯವಹಾರಗಳನ್ನು ಅವರೂ ಆಚರಿಸುವರು. ಮನುಷ್ಯರಾಗಿ ಹುಟ್ಟಿದ ಬಳಿಕ ಮನುಷ್ಯತ್ವದ ಸಾಮಾನ್ಯ ಧರ್ಮಗಳು ಅವರಲ್ಲಿ ಉಂಟೇಉಂಟು. ಅವು ಅವರಲ್ಲಿಲ್ಲವೆನ್ನುವದು ಮೂರ್ಖತನವು. ಅವು ಇಲ್ಲದಿದ್ದರೆ ಅವರು ಮನುಷ್ಯರಾಗಿಯೇ ಹುಟ್ಟುತ್ತಿರಲಿಲ್ಲ. ಅವರೇನೂ ಪಿಶಾಚಿಗಳಂತೆ ಒಮ್ಮೆ ಕಣ್ಣಿಗೆ ತೋರಿ ಮತ್ತೊಮ್ಮೆ ಕಣ್ಮರೆಯಾಗಿ ಹೋಗುವವರಲ್ಲ. ಆದುದರಿಂದ ಶಿವಯೋಗಿಗಳು ಭೂತಗಳಲ್ಲಿ, ಭೂತೇಶರೂ ಅಲ್ಲ. ಆದರೆ ಮನುಷ್ಯರೆಂಬ ಮಾತನ್ನು ಎಲ್ಲರೂ ಒಪ್ಪಬೇಕಾದ ಸಂಗತಿಯು.

ಶಿವಯೋಗಿಗಳು ಜನ್ಮತಃ ಮನುಷ್ಯರಾದರೂ ತಮ್ಮಲ್ಲಿರುವ ಲೋಕೋತ್ತರ ಗುಣಗಳ ಮೂಲಕ ಜನರಿಂದ ದೇವರಂತೆ ತಿಳಿಯಲ್ಪಡುತ್ತಾರೆ. ಆದರೆ ಅವರು ತಮಗೆ ಜನರು ಶಿವಯೋಗಿಗಳೆನ್ನಬೇಕೆಂದು ನಿಶಾನೆಯನ್ನೇರಿಸಿಕೊಂಡು ಹೊರಟಿಲ್ಲ. ಜನರು ಅವರ ಗುಣಧರ್ಮಗಳಿಗೆ ಅಚ್ಚರಿಗೊಂಡು ಅವರ ಬಗ್ಗೆ ಭಕ್ತಿಯು ಹೆಚ್ಚಾಗಿ "ಶಿವಯೋಗಿಗಳು ದೇವರಂತೆ ಇದ್ದಾರೆ. ಪರಶಿವನಂತೆ ಇದ್ದಾರೆ" ಎಂಬ ಉಪಮೆಯ ವಾಕ್ಯಗಳನ್ನು ಹೊರಲು ಸುಡಿಯಹತ್ತಿದರು. ಬರಬರುತ್ತ ಈ ಉಪಮೆಯು ಸೀಮೆಯನ್ನು ಮೀರಿ ರೂಪಕವಾಗಿ "ಶಿವಯೋಗಿಗಳು ಸಾಕ್ಷಾತ್

ಪರಶಿವನೇ" ಆಗಿದ್ದಾರೆ. ಅದರಂತೆಯೇ ಅವರು ಮಾಡಿದ ಲೋಕೋತ್ತರ ಕಾರ್ಯಗಳು ಮೊದಲು ಉತ್ಪ್ರೇಕ್ಷೆಯಾಗಿದ್ದು ಕೊನೆಗೆ ಅತಿಶಯೋಕ್ತಿಗಳಾದವು ಈ ಅತಿಶಯೋಕ್ತಿಗಳಿಗೇ ಜನರು ಪವಾಡಗಳೆಂದು ಹೆಸರಿಟ್ಟಿದ್ದಾರೆ. ಉದಾಹರಣಾರ್ಥ "ಶಿವಯೋಗಿಗಳು" ಆ ದುಷ್ಟ ಮನುಷ್ಯನನ್ನು ನೋಡಿದಾಕ್ಷಣವೇ ಅತನು ಸುಟ್ಟು ಬೂದಿಯಾದನು." ಈ ವಾಕ್ಯವು ಮೊದಲು "ಶಿವಯೋಗಿಗಳು ಆ ದುಷ್ಟ ಮನುಷ್ಯನನ್ನು ನೋಡಿದ ಕೂಡಲೆ ಅತನು ಸುಟ್ಟು ಭಸ್ಮವಾದನೋ ಏನೋ ಎಂಬಂತೆ ಕಾಂತಿಹೀನನಾದನು." ಎಂಬರ್ಥದ ಉತ್ಪ್ರೇಕ್ಷೆಯಿದ್ದು ಬರಬರುತ್ತ ಮೇಲೆ ಕಾಣಿಸಿದ ಅತಿಶಯೋಕ್ತಿಯಾಗಿದೆ. ಇದು ನಿಜವೆಂದೇ ತಿಳಿದು ಜನರು "ಅಹಾ! ಶಿವಯೋಗಿಗಳು ಎಂಥ ಮಹಿಮರಪ್ಪಾ! ಆ ದುಷ್ಟನನ್ನು ದೃಷ್ಟಿಮಾತ್ರದಿಂದ ಸುಟ್ಟು ಬೂದಿ ಮಾಡಿದರಂತೆ! ನಿಜವಾಗಿಯೂ ಅವರು ಪವಾಡ ಪುರುಷರು" ಎಂದು ನುಡಿಯಲಾರಂಭಿಸಿದರು. ಈ ಮೇರೆಗೆ ಅತಿಶಯೋಕ್ತಿಯು ಪವಾಡವಾಗಿದೆ.

ದೇವರು ಎಂಥವನು? ಎಲ್ಲಿರುವನು? ಎಂಬುದೇ ತಿಳಿಯದಂಥ ಪಾಮರರಾದ ನಾವು ಮೊದಮೊದಲು ನಿಸರ್ಗರೂಪಗಳನ್ನು ಅನಂತರ ಕಲ್ಲುಧಾತುಗಳ ಮೂರ್ತಿಗಳನ್ನು ಬರಬರುತ್ತ ಮನುಷ್ಯವರ್ಗದ ಗುಣ ಧರ್ಮಗಳನ್ನು ಮೀರಿದ ಮಹಾಪುರುಷರನ್ನು ದೇವರೆಂದು ಭಾವಿಸಿ ಪೂಜಿಸಹತ್ತಿದ್ದೇವೆ. ಹೀಗಾಗಿ ಶಿವಯೋಗಿಗಳು ನಮಗೆ ಮನುಷ್ಯರಾಗಿ ಕಾಣದೆ ದೇವರಾಗಿ ಕಾಣಹತ್ತಿದ್ದಾರೆ. ಶಿವಯೋಗವು ಮನುಷ್ಯತ್ವವಾಗದೆ ದೇವತ್ವವಾಗಿದೆ

ಶಿವಯೋಗಿಗಳನ್ನು ನಾವು ಹೆಚ್ಚಿನವರೆಂದು ಕರೆದರೂ ಅವರೇನೂ ಸ್ವತಃ ಹೆಚ್ಚಿನವರೆಂದು ತಮ್ಮಷ್ಟಕ್ಕೆ ತಾವೇ ಹೊಗಳಿಕೊಂಡಿಲ್ಲ. ಹಾಗೆ ಹೊಗಳಿಕೊಂಡಿದ್ದರೆ ಅವರು ನಮ್ಮ ಪಾಲಿಗೆ ದೇವರಾಗುತ್ತಿದ್ದಿಲ್ಲ. ಮನುಷ್ಯರೇ ಆಗುತ್ತಿದ್ದರು. ಬಸವಣ್ಣನವರು "ಎನಗಿಂತ ಕಿರಿಯರಾರಿಲ್ಲ, ಶಿವಭಕ್ತರಿಗಿಂತ ಹಿರಿಯರಾರಿಲ್ಲ." ಎಂದು ವಿನಯೋಕ್ತಿಗಳನ್ನಾಡಿ ಆಚರಿಸಿ ತೋರಿಸಿದ್ದರಿಂದಲೇ ಅವರು ನಮಗೆ ದೇವರಾಗಿದ್ದಾರೆ. ದೇವರೆಂದರೆ ವಿಶ್ವವನ್ನು ನಿರ್ಮಾಣ ಮಾಡಿ ಅದನ್ನು ಆಳುವ ದಿವ್ಯಶಕ್ತಿ ಎಂಬರ್ಥದಿಂದ ನಾವು ಶಿವಯೋಗಿಗಳನ್ನಾಗಲಿ, ಬಸವಾದಿ ಪ್ರಮಥರನ್ನಾಗಲಿ ಕರೆಯುವದಿಲ್ಲ. ದೇವರೆಂದರೆ ಮಹಾವಿಭೂತಿಗಳು. ಸಾಮಾನ್ಯ ಮನುಷ್ಯವರ್ಗಕ್ಕೆ ಮೀರಿದವರು ಇಷ್ಟೇ ಅರ್ಥ.

ಈಗ ನಮ್ಮ ಸಮಾಜದಲ್ಲಿ ಯಾವ ಯೋಗ್ಯತೆಯು ಇಲ್ಲದ ಅನೇಕ ವ್ಯಕ್ತಿಗಳು ತಮ್ಮಷ್ಟಕ್ಕೆ ತಾವೇ ಹೆಚ್ಚಿನವರೆಂದು ತಮ್ಮ ಬೆನ್ನು ಚಪ್ಪರಿಸಿಕೊಳ್ಳುವದು ವಿಷಾದದ ಸಂಗತಿಯಾಗಿದೆ. ಅವರು ತಮ್ಮ ಸ್ವರೂಪ ಹಾಸ್ಯಿಯನ್ನು ಮಾಡಿಕೊಳ್ಳುವದಲ್ಲದೆ ಶಿವಯೋಗಿ ಶಿವಶರಣರೆಂಬ ಹೆಸರುಗಳಿಗೆ ಕಲಂಕ ಹಚ್ಚುವರು. ಇಂಥವರು ಮನುಷ್ಯವರ್ಗದ ಸಾದಾ ಪ್ರಾಣಿಗಳೇ ಹೊರತು ದೇವಾಂಶ ಸಂಭೂತರಲ್ಲ. ನಾ ಹೆಚ್ಚು ನೀ ಹೆಚ್ಚೆಂದು ಹೊಗಳಿಸಿಕೊಳ್ಳುವಂಥ ಅತಿರಥ ಮಹಾರಥರು ಶಿವಯೋಗಿಗಳೇ? ಜಗದ್ಗುರು ಜಗದಾಚಾರ್ಯರೆಂದು ಜಯಭೇರಿಯನ್ನು ಹೊಯ್ಸುವವರು ಶಿವಯೋಗಿಗಳೇ? ಸ್ವಾರ್ಥಕ್ಕಾಗಿ ಮಠಪೀಠಾಧಿಕಾರಗಳಿಗೆ ಹಂಬಲಿಸುವವರು ಶಿವಯೋಗಿಗಳೇ, ಛೇ ಅಲ್ಲ. ಆದರೆ "ಸರ್ವಲೋಕೋಪಕಾರಾಯಯೋ ದೇವಃ ಪರಮೇಶ್ವರಃ। ಚರತ್ಯತಿಥಿ ರೂಪೇಣ ನಮಸ್ತೇ ಶಿವಯೋಗಿನೇ"॥ ಎಂಬಂತೆ ಯಾವಾತನು ಸರ್ವಲೋಕದ ಉಪಕಾರಾರ್ಥನಾಗಿ ಜಗತ್ತಿನಲ್ಲಿ ಅತಿಥಿಯಾಗಿ ಸಂಚರಿಸುವನೋ ಅತನೇ ಶಿವಯೋಗಿಯು. ಅತನು ವಿಶ್ವಕುಟುಂಬಿಯು. ಅತನಿಗೆ ಯಾವ ಮಠಾಧಿಕಾರದ ಹಂಗೂ ಇರುವದಿಲ್ಲ.

ಮಠಪೀಠಾದಿಗಳು ಮುನಸಿಪಾಲ್ಟಿ ಲೋಕಲ್‌ಬೋರ್ಡುಗಳಂತೆ ಸಂಸ್ಥೆಗಳು ಹಿಂದಕ್ಕೆ ಈ ಮಠಪೀಠಗಳ ಅಧೀನದಲ್ಲಿ ಶಿಕ್ಷಣ, ಧರ್ಮವಿಧಾನ, ನ್ಯಾಯತೀರಿಸೋಣ, ಸಮಾಜದಲ್ಲಿ ಸ್ವಚ್ಛತೆ ಆರೋಗ್ಯಗಳನ್ನು ಪೋಷಣ, ಅನಾಥಾಲಯ ಉಚಿತ ಶಿಕ್ಷಣಗಳ ಏರ್ಪಾಟು ಮುಂತಾದ ಉಪಯುಕ್ತ ಕಾರ್ಯಗಳಿದ್ದವು. ಆದರೆ ಈ ಕಾರ್ಯಗಳನ್ನೆಲ್ಲ ಈಗ ಬೇರೆ ಬೇರೆ ಸಂಸ್ಥೆಗಳು ಆಕ್ರಮಿಸಿಬಿಟ್ಟಿರುತ್ತವೆ. ಉದಾಹರಣಾರ್ಥ ಶಿಕ್ಷಣವನ್ನು ಶಾಲಾ ಸಂಸ್ಥೆಗಳೂ ಬೋರ್ಡುಗಳೂ ಆಕ್ರಮಿಸಿರುತ್ತವೆ. ಸ್ವಚ್ಛತೆ ಆರೋಗ್ಯಗಳನ್ನು ಮುನಸಿಪಾಲ್ಟಿಗಳು ನೋಡಿಕೊಳ್ಳುತ್ತವೆ. ನ್ಯಾಯತೀರಿಸುವ ಕೆಲಸವು ಸರಕಾರದ ಅಧೀನವಾಗಿದೆ. ಸಮಾಜಸುಧಾರಣೆಯ ಆಲೋಚನಾ ಕಾರ್ಯಗಳನ್ನು ಮಹಾಸಭೆಯು ಮಾಡುತ್ತದೆ. ಅನಾಥಾಲಯ ಉಚಿತ ಶಿಕ್ಷಣಗಳ ವ್ಯವಸ್ಥೆಯನ್ನು ತರುಣಸಂಘ, ಸ್ಕೌಟಿಂಗ ಮೊದಲಾದ ಸಂಸ್ಥೆಗಳು ಕೈಕೊಂಡಿವೆ. ಈಗ ಪದ್ಯಕ್ಕೆ ಮಠಪೀಠಗಳ ಸ್ವಾಧೀನದಲ್ಲಿ ಉಳಿದದ್ದೆಂದರೆ ಧಾರ್ಮಿಕ ವಿಧಾನವೊಂದೇ ಉದಾಹರಣಾರ್ಥ ದೀಕ್ಷೆ, ಲಿಂಗಧಾರಣ, ಶುದ್ಧೀಕರಣ, ಜನನ, ಮರಣ,

ವಿವಾಹಾದಿ ಸಂಸ್ಕಾರ, ಇವೇ ಮೊದಲಾದ ಧಾರ್ಮಿಕ ಕಾರ್ಯಗಳಷ್ಟೇ ಅವುಗಳ ವಶದಲ್ಲಿರುವವು. ಆದರೆ ಈಗಿನ ಶಾಸ್ತ್ರೀಯ ಯುಗದಲ್ಲಿ ಅವುಗಳಿಗೆ ಅಷ್ಟು ಪ್ರಾಶಸ್ತ್ಯವಿಲ್ಲ. ಸುಶಿಕ್ಷಿತರು ಅವುಗಳಿಗೆ ಹಾಸ್ಯ ಮಾಡುತ್ತಾರೆ. ಅಶಿಕ್ಷಿತರು ಮಾತ್ರ ಅವುಗಳಿಗೆ ದಾಸರಾಗಿರುತ್ತಾರೆ. ಅಶಿಕ್ಷಿತರು ಸುಶಿಕ್ಷಿತರಾದರೆ ಮತ್ತು ಈ ಧಾರ್ಮಿಕ ವಿಧಾನಗಳು ಸಮಾಜಕ್ಕೆ ಅವಶ್ಯವೆಂದೆನಿಸಿದರೆ ಬೇರೆ ಸಂಸ್ಥೆಗಳು ಹುಟ್ಟಿ ಈ ವಿಧಾನಗಳನ್ನು ತಮ್ಮ ವಶಪಡಿಸಿಕೊಳ್ಳಬಹುದು. ಅವು ಅವಶ್ಯ ಕಾಣದಿದ್ದರೆ ಕ್ರಮೇಣ ಅವು ಲೋಪವನ್ನು ಹೊಂದಬಹುದು. ಇಲ್ಲವೆ ಯಂತ್ರದಂತೆ ನಡೆಯಬಹುದು. ಆದರೆ ಪರಸ್ಪರ ಸೋರಾಡಿ ಸಮಾಜದಲ್ಲಿ ದೊಡ್ಡದೊಂದು ಕಲಹಾಗ್ನಿಯನ್ನು ಹೊತ್ತಿಸಿದ ಮಠಪೀಠಾಧಿಕಾರಿಗಳ ವಶದಲ್ಲಿ ಮಾತ್ರ ಅವು ಉಳಿಯಲಿಕ್ಕಿಲ್ಲ.

ಮಠಪೀಠಗಳು ಲೌಕಿಕ ಸಂಸ್ಥೆಯಾಗಿರುವಂತೆ ಮಠಪೀಠಾಧಿಕಾರಿಗಳು ಇಹಲೋಕದ ಕಾರ್ಯ ಮಾಡುವವರಾದ್ದರಿಂದ ಅವರಾದರೂ ಲೌಕಿಕರೇ. ಶಿವಯೋಗಿ ಶಿವಶರಣರಂತೆ ಅವರು ಶಿವಲೋಕದವರಲ್ಲ. ಶಿವಯೋಗಿಗಳು ನಿರಂಜನ ಮೂರ್ತಿಗಳು ಅವರು ಸ್ವಾನುಭಾವಿಗಳೂ ಲಿಂಗಾನುಸಂಧಾನಿಗಳೂ, ಷಟ್‌ಸ್ಥಲಜ್ಞಾನಿಗಳೂ, ಲೋಕಸಂಗ್ರಹತತ್ಪರರೂ ಆಗಿದ್ದಾರೆ. ನುಡಿದಂತೆ ನಡೆಯುವ ಇಂಥ ಮಹಾ ವಿಭೂತಿಗಳು ಕಾಲಕಾಲಕ್ಕೆ ಭಕ್ತರಲ್ಲಿಯೂ, ಗುರುಗಳಲ್ಲಿಯೂ, ವಿರಕ್ತರಲ್ಲಿಯೂ ಹುಟ್ಟಿದ್ದಾರೆ. ಅವರನ್ನ ಎಲ್ಲ ಮನುಷ್ಯರು ಜಾತಿಮತಭೇದವಿಲ್ಲದೆ ಮಹಾ ವಿಭೂತಿಗಳೆಂದು ಮನ್ನಿಸುತ್ತಿದ್ದಾರೆ. ಅವರೇ ಜಗದ್ಗುರುಗಳು ಅವರೇ ಜಗದಾಚಾರ್ಯರು; ಅವರೇ ಶಿವಶರಣ ಶಿವಯೋಗಿಗಳು, ಆದರೆ ಈಗಿನ ಕೆಲವು ನಾಮಧಾರಿ ಜಗದ್ಗುರು, ಜಗದಾಚಾರ್ಯ, ಶಿವಶರಣ ಶಿವಯೋಗಿಗಳು ಸ್ವಾರ್ಥಪರಾಯಣತೆ, ಅಧಿಕಾರದ ಹೆಮ್ಮೆಗಳಿಂದ ನಿಜವಾದ ಶಿವಯೋಗಿಗಳಂತೆ ಸಮಾಜದಲ್ಲಿ ಸೋಗುಹಾಕಿಕೊಂಡು ನಡೆಯುತ್ತಿದ್ದಾರೆ. ತಾವೇ ಮೂರ್ತಿಮಂತಪರ ಶಿವನೆಂದು ಹೊಗಳಿಕೊಳ್ಳುತ್ತಿದ್ದಾರೆ. ತಮ್ಮ ಬಿರುದಾವಳಿಗಳನ್ನು ಕಾಡು ಜನರಂತೆ ಸಾರಿಕೊಳ್ಳುತ್ತಿದ್ದಾರೆ. ಇದನ್ನು ನೋಡಿ ನಮಗೆ ಫಕ್ಕನೆ ಸೂಆರ್ಟ್ ಮನೆತನದ ಜೇಮ್ಸ್ ನೆಂಬ ಇಂಗ್ಲಿಷ್ ರಾಜನ ನೆನಪಾಗುತ್ತದೆ. ಆತನು ಹೇಳುತ್ತಿದ್ದುದೇನಂದರೆ "ಅರಸನು ದೇವಾಂಶ ಸಂಭೂತನು ದೇವರೇ ಅರಸನನ್ನು ಭೂಲೋ

ಕವನ್ನಾಳಲು ಕಳಿಸುತ್ತಾನೆ. ಮನುಷ್ಯರು ಅರಸನನ್ನು ಮಾಡುವದಿಲ್ಲ. ಅರಸನ ಮಾತೇ ಕಾಯಿದೆಯು. ಬೇರೆ ಕಾಯಿದೆಯೆಂಬುದಿಲ್ಲ." ಈ ಮೇರೆಗೆ 'ನಾ ವಿಷ್ಣುಃ ಪೃಥ್ವಿಪತಿಃ" ಎಂಬ ತತ್ವವನ್ನು ಸಾರಿದ ಆ ರಾಜನನ್ನು ಕೂನೆಗೆ ಪ್ರಜೆಗಳು ಕಿತ್ತೊಗೆದು ಬೇರೆ ರಾಜನನ್ನು ಗಾದೆಯ ಮೇಲೆ ಕೂಡ್ರಿಸಿ ಮನುಷ್ಯರೇ ಅರಸನನ್ನು ಮಾಡುತ್ತಾರೆಂಬ ಮಾತನ್ನು ನಿದರ್ಶನ ಮಾಡಿಕೊಟ್ಟರು. ಅದರಂತೆಯೇ ಮಠಪೀಠಾಧಿಕಾರಿಗಳನ್ನು ದೈವದವರೇ ಮಾಡುತ್ತಾರೆಂಬ ಮಾತು ನಮ್ಮ ಮಠಪೀಠಾಧಿಕಾರಿಗಳಿಗೆ ಹೊಳೆದರೆ ಸಾಕು. ಅವರು ಪರಶಿವನ ಅವತಾರಿಗಳೆಂಬ ಮಾತು ಅಲ್ಲಿಗೇ ನಿಂತು ಹೋಗುತ್ತದೆ. ಮಹಾಮಹಿಮರಾದ ಶಿವಯೋಗಿ ಶಿವಶರಣರಿಗೆ ನಾವು ಪರಶಿವನ ಸ್ವರೂಪಿಗಳೆಂದು ಕರೆಯುತ್ತಿರುವೆವೆಂದು ತಿಳಿದು ಈ ಮಠಪೀಠಾಧಿಕಾರಿಗಳಿಗೂ ಸುಮ್ಮ ಸುಮ್ಮನೆ ಹಾಗೆ ಕರೆಯಲೇಬೇಕೆಂಬ ನಿಯಮವೇನೂ ಇಲ್ಲ. ಮಠಪೀಠಾಧಿಕಾರಿಗಳನ್ನು ಸಮಾಜದವರು ಮಾಡುತ್ತಾರೆ. ಆದುದರಿಂದ ಅವರು ಮನುಷ್ಯರು. ಶಿವಯೋಗಿಗಳು ತಮ್ಮ ತಮ್ಮ ಬಲದಿಂದ ಆಗುತ್ತಾರೆ. ಆದುದರಿಂದ ಅವರು ದೇವರು. ಮಠಪೀಠಾಧಿಕಾರಿತ್ವವು ಲೌಕಿಕತ್ವವು. ಶಿವಯೋಗವು ದೇವತ್ವವು.

ಪಾಶ್ಚಾತ್ಯರ ತತ್ವಶಾಸ್ತ್ರ.

ಲೇಖಕ:— ವೀರಪ್ಪ ಯಂಗಟಿ ಬಿ. ಎ. ಎಲ್. ಎಲ್. ಬಿ. ಹಾವೇರಿ.

(ಮುಂದೆ ಸಾಗಿದ್ದು.)

ಪ್ಲೇಟೋ:— ಈತನು ಕ್ರಿ. ಪೂ. ೪೨೭ ರಿಂದ ೩೪೭ ರ ವರೆಗೆ ಇದ್ದನು. ಇವನು ಇಪ್ಪತ್ತು ವರ್ಷದವನಿರುವಾಗ ಸಾಕ್ರೆಟಿಸನ ಪರಿಚಯವಾಯಿತು. ಇವನು ೪೦ ವರ್ಷಗಳ ಕಾಲ ತನ್ನ ಪ್ರಖ್ಯಾತವಾದ ಪ್ರವಚನಗಳನ್ನು ಬರೆಯುವದರಲ್ಲಿ ನಿರತನಾಗಿದ್ದನು. ಇವನು ತನ್ನ ಪೂರ್ವಾರ್ಧದ ನಾಲ್ವತ್ತು ವರ್ಷಗಳನ್ನು ಸಿಸಿಲಿ, ಮೆಗಾರಾ, ಸೈರೀನ್, ಮತ್ತು ಇಜಿಪ್ತ ದೇಶಗಳ ಸಂಚಾರ ಮಾಡಿದನು. ಇವನ ಕಾಲದಲ್ಲಿ ಗುಲಾಮರನ್ನು ಮಾರುವ ಪದ್ಧತಿ ಇದ್ದದರಿಂದ ಇವನು ಇಟಲಿಯಲ್ಲಿ ಸಂಚರಿಸುವಾಗ ಡಾಯನೀಸಿಯಸ್ ಎಂಬವನು ಇವನನ್ನು ಗುಲಾಮನಂತೆ ವಿಕ್ರಿಗೆ ಕೊಟ್ಟನು. ಇವನ ಸ್ನೇಹಿತನು ಇವನನ್ನು ಮುಕ್ತ ಮಾಡಿದ್ದರಿಂದ ಇವನು ಅಥೆನ್ಸ ಪಟ್ಟಣಕ್ಕೆ ಕ್ರಿ. ಪೂ. ೩೯೭ ರಲ್ಲಿ ತಿರುಗಿ ಬಂದನು. ಇವನು ಅಥೆನ್ಸನ ಉಪನಗರದ ಒಂದು ತೋಟದಲ್ಲಿ ತತ್ವಜ್ಞಾನದ ಒಂದು ಸಂಸ್ಥೆಯನ್ನು (*Academy.*) ಸ್ಥಾಪಿಸಿದನು. ಈ ಸ್ಥಳವು ಸಾರ್ವಜನಿಕ ವ್ಯಾಯಾಮಕ್ಕಾಗಿ ಒಬ್ಬ ಗೃಹಸ್ಥನಿಂದ ಕೊಡಲ್ಪಟ್ಟಿತ್ತು. ಇದರ ಸಮೀಪದಲ್ಲಿಯೇ ಪ್ಲೇಟೋನ ಪೂರ್ವಾರ್ಜಿತ ಆಸ್ತಿಯಿದ್ದದರಿಂದ ಅಲ್ಲಿಯೇ ಸಂಸ್ಥೆಯನ್ನು ಏರ್ಪಡಿಸಿದನು. ಈ ಆಸ್ತಿಯನ್ನು ಪ್ಲೇಟೋನು ಈ ಸಂಸ್ಥೆಗೆ ಅರ್ಪಿಸಿದನು. ಡೆಮಾಕ್ರಿಟಸ್, ಪ್ಲೇಟೋ, ಅರಿಸ್ಟಾಟಲ ಇವರು ತತ್ವಬೋಧೆ ಪ್ರಾರಂಭಿಸಿದಾಗ ನಾಲ್ವತ್ತು ವಯಸ್ಸಿನವರಿದ್ದರು. ಆದರೆ ಭರತಖಂಡದ ತತ್ವವೇತ್ತರಾದ ಶಂಕರ, ಬಸವ ಮೊದಲಾದವರು ತಮ್ಮ ಇಪ್ಪತ್ತು ವಯಸ್ಸಿನ ಪೂರ್ವದಲ್ಲಿಯೇ ಪ್ರಾರಂಭಿಸಿದರು. ಭರತಖಂಡವು ತತ್ವಜ್ಞಾನದ ಸ್ವಾಭಾವಿಕವಾದ ಆಗರವಾಗಿದೆ.

ಪ್ಲೇಟೋನ ತತ್ವಸಂಸ್ಥೆಯು ಬಸವನು ಕಲ್ಯಾಣ ಪಟ್ಟಣದಲ್ಲಿ ಸ್ಥಾಪಿಸಿದ ಅನುಭವ ಮಂಟಪನ್ನು ಹೋಲುತ್ತದೆ. ಬಸವನು ಅನೇಕ ಶರಣರ ಸಮೂಹದಲ್ಲಿದ್ದು ಅಪೂರ್ವವಾದ ವಚನಗಳನ್ನು ಪ್ಲೇಟೋ

ನಂತೆಯೇ ರಚಿಸಿದನು. ಬಸವನು ಅಲ್ಲಮನನ್ನು ಗುರುವಾಗಿ ತಿಳಿದಿದ್ದಂತೆ ಪ್ಲೇಟೋನು ಸಾಕ್ರೆಟಿಸನನ್ನು ಗುರುವಾಗಿ ತಿಳಿದಿದ್ದನು. ಪ್ಲೇಟೋನ ತತ್ವಜ್ಞಾನವು ಬಹಳ ಗಹನವಾಗಿರುವದು; ಆದರೆ ಬಸವನ ತತ್ವವು ಸರಳವಾದದ್ದೂ ತಿಳಿಯಾದದ್ದೂ ನೈಜಸ್ಥಿತಿಗನುಗುಣವಾದದ್ದೂ ಇದೆ. ಪ್ಲೇಟೋನು ಜಗತ್ತು ಅಸತ್ಯವಾದದ್ದೆಂದು ಹೇಳಿದನು. ಬಸವನು ಜಗತ್ತು ನಿಜವಾದದ್ದೆಂದು ಹೇಳಿದನು ಪ್ಲೇಟೋನ ತತ್ವವು ರುದ್ರಾದ್ವೈತವು ಬಸವನ ತತ್ವವು ಶಕ್ತಿವಿಶಿಷ್ಟಾದ್ವೈತ (ಶಿವಾದ್ವೈತ *energy-qualified monism*) ಅಥವಾ ವೀರಶೈವ ಸಿದ್ಧಾಂತವು. ಈಶ್ವರ, ಜೀವ, ಜಗತ್ತುಗಳು ಕೇವಲ ಒಂದೇ ಆಗಿದ್ದು ಶಕ್ತಿವಿಶೇಷದಿಂದ ರೂಪಾಂತರವಾಗಿ ಕಾಣುವವು. ಈಶ್ವರನ ಶಕ್ತಿಯ ಕ್ರಿಯೆಯಿಂದ ಅನೇಕ ವಿಧವಾದ ಸೃಷ್ಟಿಯುತ್ಪನ್ನವಾಗುವದು. ಪ್ರತಿಯೊಂದು ವಸ್ತುವೂ ಈಶ್ವರಮಯವಾಗಿದೆ ಈ ಸಿದ್ಧಾಂತದಿಂದ ವೀರಶೈವ ತತ್ವವನ್ನು (*Seepra-pantheism*) ವಿಶಿಷ್ಟ ಜಗದೀಶ್ವರವಾದ ಅಥವಾ ವಿಶೇಷಾದ್ವೈತವೆಂದು ಕರೆಯಬಹುದು.

ಇದು ಶಕ್ತಿವಿಶಿಷ್ಟವಾದ ಶಿವಜೀವರ ಏಕತ್ವವನ್ನು ಬೋಧಿಸುವದರಿಂದ ಶಕ್ತಿವಿಶಿಷ್ಟಾದ್ವೈತವೆಂತಲೂ, ಲಿಂಗ-ಅಂಗ (ಜೀವ) ಗಳ ಸಮರಸ ಭಾವವನ್ನು ಪ್ರತಿಪಾದಿಸುವದರಿಂದ ಶಿವಾದ್ವೈತವೆಂತಲೂ ಕರೆಯಲ್ಪಡುತ್ತದೆ. ಈ ಸಿದ್ಧಾಂತವು ಜೀವ ಶಿವರಲ್ಲಿ ಭೇದವನ್ನಾಗಲಿ ಅಭೇದಗಳನ್ನಾಗಲಿ ಹೇಳದೆ ಒಂಗಾರ, ಆಭರಣಗಳಲ್ಲಿರುವ ರೂಪ ಭೇದದಂತೆ ಶಿವಜೀವರಲ್ಲಿ ಭೇದಾಭೇದಗಳೆರಡೂ ಇರುವದಾಗಿ ಮನ್ನಿಸುವದು. ಹೀಗೆ ವೀರಶೈವ ಸಿದ್ಧಾಂತವು ದ್ವೈತಾದ್ವೈತಗಳ ಸಮನ್ವಯ ಮಾಡುವದರಿಂದ ಇದಕ್ಕೆ ದ್ವೈತಾದ್ವೈತವೆಂತಲೂ ಹೆಸರಿಡಬಹುದು. ಬೀಜದಲ್ಲಿ ವೃಕ್ಷವಾಗುವ ಶಕ್ತಿಯು ಅಡಗಿರುವಂತೆ ಜೀವನಲ್ಲಿ ಶಿವನಾಗುವ ಶಕ್ತಿಯು ಅಡಗಿರುವದು. ಬೀಜವು ವೃಕ್ಷವಾಗಿ ಪರಿಣಮಿಸುವವಕ್ಕೆ ಸ್ಥಲ, ಜಲ, ಕಾಲಗಳ ಸಾಧನ ಬೇಕಾದಂತೆ ಜೀವವು ಶಿವನಾಗುವದಕ್ಕೆ ವೀರಶೈವ ದೀಕ್ಷೆಯು ಸಾಧನವು. ಜೀವನ ಸಂಕೋಚ ಭಾವವು ಬಂಧವು, ವಿಕಾಸವು ಮೋಕ್ಷವು. ವೀರಶೈವವು ಪುನರ್ಜನ್ಮವನ್ನು ಒಪ್ಪುವದಿಲ್ಲ. ಪ್ಲೇಟೋ, ಶಂಕರ, ರಾಮಾನುಜ ಮೊದಲಾದವರು ಪುನರ್ಜನ್ಮದಲ್ಲಿ ನಂಬಿಕೆಯುಳ್ಳವರಾಗಿರುವರು. ಶಂಕರ, ಮಾಧ್ವ, ರಾಮಾನುಜರು ಪ್ರಾಕೃತ ಸೃಷ್ಟಿಯಲ್ಲಿ ನಂಬಿಕೆಯುಳ್ಳವರು. ಪ್ರಕೃತಿ

ಯಿಂದ ಮಹತ್ತ್ವ, ಮಹತ್ತಿನಿಂದ ಅಹಂಕಾರವು, ಅಹಂಕಾರದಿಂದ ಮನಸ್ಸು, ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು, ತನ್ಮಾತ್ರಗಳು, ಪಂಚಭೂತಗಳು ಉತ್ಪನ್ನವಾಗುವವು. ಅಹಂಕಾರದಿಂದ ಆತ್ಮವು ಸುಖ ದುಃಖಕ್ಕೊಳಗಾಗಿ ಬದ್ಧನಾಗುವನು. ಇದರಿಂದ ವಿಮೋಚನೆ ಹೊಂದಲು ಚತುರಾಶ್ರಮಿಗಳು ಆಶ್ರಮ ಧರ್ಮವನ್ನು ಪಾಲಿಸುತ್ತ ಚಿತ್ತಶುದ್ಧಿಯನ್ನು ಹೊಂದಲು ಪುನರ್ಜನ್ಮವನ್ನು ಧರಿಸಬೇಕಾಗುವದು. ವೀರಶೈವನು ಪೂರ್ವ ಪುಣ್ಯದ ಬಲದಿಂದ ವೀರಶೈವನಾಗಿ ಜನಿಸಿ ಶಿವದೀಕ್ಷೆಯ ಬಲದಿಂದ ಪುನರ್ಜನ್ಮ ರಹಿತನಾಗುವನು. ಇವನಿಗೆ ಆಶ್ರಮ ಧರ್ಮವು ಸಂಬಂಧವಿಲ್ಲ. ಆದ್ದರಿಂದ ವೀರಶೈವನಿಗೆ ಅತ್ಯಾಶ್ರಮಿಯೆಂದು ಹೇಳಲ್ಪಡುತ್ತದೆ ಇವನು ನಾಲ್ಕು ವರ್ಣಗಳ ಕ್ರಮಕ್ಕೆ ಬದ್ಧನಿಲ್ಲದಿರುವದರಿಂದ ಇವನಿಗೆ ವರ್ಣಾತೀತನೆಂತಲೂ ಹೆಸರು. ಶಿವದೀಕ್ಷೆಯನ್ನು ಹೊಂದುವದರಿಂದ ಇವನಿಗೆ ಸೂತಕ ದೋಷಗಳಿಲ್ಲ. ಯಾವಾಗಲೂ ಲಿಂಗದೇಹಿಯಾಗಿ ಸದಾಶುಚಿಯಾಗಿರುವದರಿಂದ ಅಪ್ರಾಕೃತನೆಂದು ಹೇಳಿಸಿಕೊಳ್ಳುತ್ತಾನೆ. ವೀರಶೈವ ಧರ್ಮವು ಪೂರ್ವಜನ್ಮವನ್ನು ಒಪ್ಪುತ್ತದೆ. ಆದರೆ ಪುನರ್ಜನ್ಮವನ್ನು ಒಪ್ಪುವದಿಲ್ಲ. ಶಿವಾಗಮಗಳಲ್ಲಿ ಹೇಳಿದ ತತ್ವವೇ ವೀರಶೈವ ಸಿದ್ಧಾಂತವು. ಪತಿ, ಪಶು, ಪಾಶ ಎಂದು ಮೂರು ತತ್ವಗಳು ಮುಖ್ಯವಾದವು. ಈ ಮೂರರಿಂದ ಪೃಥಿವಿ ಮೊದಲಾಗಿ ಶಿವತತ್ವಾಂತವಾಗಿ ೩೬ ತತ್ವಗಳುಂಟು. ಆದರೆ ವೀರಶೈವವು ಅಧಃಸೃಷ್ಟಿ ಊರ್ಧ್ವಸೃಷ್ಟಿ ಎಂಬ ಎರಡು ಸೃಷ್ಟಿಗಳ ವಿಭಾಗ ಮಾಡುವದು.

ಪ್ರಕೃತಿಯಿಂದಾದ ಸೃಷ್ಟಿ ಅಂದರೆ ಆಶ್ರಮಧರ್ಮ, ಯಜ್ಞಕರ್ಮ, ಸ್ಥಾವರಲಿಂಗಪೂಜೆ ಮೊದಲಾದದ್ದು. ಅಧಃಸೃಷ್ಟಿ ಅಥವಾ ಪ್ರಾಕೃತ ಸೃಷ್ಟಿ ಅಥವಾ ಬ್ರಹ್ಮ ಸೃಷ್ಟಿಯು. ಅಹಂಕಾರದಿಂದ ಆತ್ಮನು ಸುಖ ದುಃಖಗಳಿಗೊಳಗಾಗಿ ಬದ್ಧನಾಗುವನು. ಶಿವನು ಬದ್ಧ ಜೀವಿಗಳ ಮೋಕ್ಷಕ್ಕಾಗಿ ಊರ್ಧ್ವಸೃಷ್ಟಿಯನ್ನುಂಟು ಮಾಡಿದನು. ಊರ್ಧ್ವಸೃಷ್ಟಿಯೋಗಿನ ಜೀವರು ಪೂರ್ವ ಪುಣ್ಯದಿಂದ ಲಭಿಸಿದ ಶಿವಭಕ್ತಿಯಿಂದ ಶಿವದೀಕ್ಷೆಯನ್ನು ಹೊಂದಿ ಶಿವ ಸಾಯುಜ್ಯವನ್ನು ಹೊಂದುವರು. ಶಿವನು ತನ್ನಲ್ಲಿ ಅವಿನಾಭಾವ ಸಂಬಂಧದಿಂದಿರುವ ವಿಮರ್ಶ ಶಕ್ತಿಯಿಂದ ವಿವಿಧ ರೂಪವನ್ನು ಹೊಂದಿದನು. ಶಿವನ ಶ್ರೇಷ್ಠವಾದ ಶಕ್ತಿಯು ಲಿಂಗವಾಗಿಯೂ ಅಕುಂಚಿತವಾದ ಶಕ್ತಿಯು ಅಂಗ (ಜೀವ) ವಾಗಿಯೂ ಪರಿ

ಣಮಿಸಿತು. ಅಂಗದ ಇಂದ್ರಿಯಾದಿ ಪದಾರ್ಥಗಳು ಶಿವನ ಚಿಚ್ಛಕ್ತಿಯಿಂದಾಗಿವೆ. ಜೀವನು ಗುರುವಿನಿಂದ ಮಂತ್ರ, ಕ್ರಿಯಾ, ವೇಧಾ ದೀಕ್ಷೆಗಳನ್ನು ಹೊಂದಿ ಆಣವಮಲ, ಮಾಯಾಮಲ, ಕಾರ್ಮಿಕಮಲಗಳಿಂದ ಮುಕ್ತನಾಗಿ ಶುದ್ಧಜೀವಿಯೆನಿಸುವನು. ದೀಕ್ಷಾ ಕಾಲಕ್ಕೆ ಗುರುವು ಶಿಷ್ಯನ ದೃಷ್ಟಿಯಲ್ಲಿ ದೃಷ್ಟಿಯನ್ನು, ಮನಸ್ಸಿನಲ್ಲಿ ಮನಸ್ಸನ್ನು, ಭಾವದಲ್ಲಿ ಭಾವವನ್ನು ಇರಿಸಿ ಶಿಷ್ಯನ ಶಿಖಾಚಕ್ರದಲ್ಲಿರುವ ಶಿವಕಳೆಯನ್ನು ಹೊರಗೆ ತೆಗೆದು ಶಿಷ್ಯನ ಕರದಲ್ಲಿರುವ ಇಷ್ಟಲಿಂಗದಲ್ಲಿ (*personal God*) ಸ್ಥಾಪಿಸುವನು. ಗುರುವು ಶಿಷ್ಯನ ದೇಹದಲ್ಲಿ ಇಷ್ಟಲಿಂಗವನ್ನೂ ಮನಸ್ಸಿನಲ್ಲಿ ಪ್ರಾಣಲಿಂಗವನ್ನೂ ಭಾವದಲ್ಲಿ ಭಾವಲಿಂಗವನ್ನೂ ಸ್ಥಾಪಿಸುವನು. ಶಿಷ್ಯನು ಭಸ್ಮ, ರುದ್ರಾಕ್ಷಿ, ಮಂತ್ರ, ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದಗಳೆಂಬ ಅಷ್ಟಾವರಣಗಳಿಂದ ಯುಕ್ತನಾಗಿ, ಲಿಂಗಾಚಾರ ಮೊದಲಾದ ಪಂಚಾಚಾರ ಸಕ್ತನಾಗಿ, ಭಕ್ತಸ್ಥಲ ಮೊದಲಾದ ಷಟ್‌ಸ್ಥಲಗಳಲ್ಲಿ ಉನ್ನತಿ ಹೊಂದಿ ತಾನು ಶಿವನೆಂದು ಅರಿತುಕೊಂಡು ಕೇವಲ ಶಿವನೇ ಆಗುವನು.

ಷಟ್‌ಸ್ಥಲವು ಜಗತ್ತಿನಲ್ಲಿರುವ ಯಾವ ಧರ್ಮಗಳಲ್ಲಿಯೂ ಕಂಡು ಬರದಿರುವ ಒಂದು ವಿಶಿಷ್ಟ ತತ್ವವಾಗಿದೆ. (೧) ಭಕ್ತಸ್ಥಲದಲ್ಲಿ ದೀಕ್ಷೆ ಹೊಂದಿದ ಜೀವನು ಶ್ರದ್ಧಾಭಕ್ತಿಯಿಂದ ಕ್ರಿಯಾಶಕ್ತಿಯುಕ್ತವಾದ ಆಚಾರಲಿಂಗವನ್ನು ಪೂಜಿಸಿ ಸದ್ಭಕ್ತಿ ಫಲವನ್ನು ಹೊಂದುತ್ತಾನೆ. (೨) ಮಹೇಶ್ವರಃ— ಜೀವನು ನಿಷ್ಠಾಭಕ್ತಿಯಿಂದ ಜ್ಞಾನಶಕ್ತಿಯುಕ್ತವಾದ ಗುರುಲಿಂಗವನ್ನು ಪೂಜಿಸಿ ಕರ್ಮಕ್ಷಯವನ್ನು ಹೊಂದುವನು. (೩) ಪ್ರಸಾದಿಃ— ಅವಧಾನಭಕ್ತಿಯಿಂದ ಇಚ್ಛಾಶಕ್ತಿಯುಕ್ತವಾದ ಶಿವಲಿಂಗವನ್ನು ಪೂಜಿಸಿ ನಿರ್ಮಲಜ್ಞಾನಿಯಾಗುವನು. (೪) ಪ್ರಾಣಲಿಂಗಿಃ — ಅನುಭವ ಭಕ್ತಿಯಿಂದ ಆದಿಶಕ್ತಿಯುಕ್ತವಾದ ಜಂಗಮ ಲಿಂಗವನ್ನು ಪೂಜಿಸಿ ಸುಜ್ಞಾನಿಯಾಗುವನು. (೫) ಶರಣಃ— ಅನಂದಭಕ್ತಿಯಿಂದ ಪರಾಶಕ್ತಿಯುಕ್ತವಾದ ಪ್ರಸಾದಲಿಂಗವನ್ನು ಪೂಜಿಸಿ ಪೂರ್ಣನಾಶವಾಡಿಕೊಳ್ಳುವನು. (೬) ಐಕ್ಯಃ — ಸಮರಸಭಕ್ತಿಯಿಂದ ಚಿಚ್ಛಕ್ತಿಯುಕ್ತವಾದ ಮಹಾಲಿಂಗವನ್ನು ಪೂಜಿಸಿ ಸಮ್ಯಜ್ಞಾನಹೊಂದಿ ಅವಿರಳ ಶಿವೈಕ್ಯನಾಗುವನು. ಇದೇ ಲಿಂಗಾಂಗ ಸಾಮರಸ್ಯವು. ಷಟ್‌ಸ್ಥಲಗಳು ಈ ಸಾಮರಸ್ಯಕ್ಕೆ ಒಯ್ಯುವ ಸೋಪಾನಗಳು ಜಗತ್ತು ಮತ್ತು ಭೋಗ್ಯ ವಸ್ತುಗಳು ಮಿಥ್ಯವಾಗಿರದೆ ಸತ್ಯವಾಗಿದ್ದು

ಅವನ್ನು ಲಿಂಗಕ್ಕೆ ಅರ್ಪಿಸಿ ತಾನು ಪ್ರಸಾದ ರೂಪವಾಗಿ ಭೋಗಿಸುವನು. ಅವನ ದೇಹವು ಲಿಂಗರೂಪವಾಗುವದು. ಮೊದಲು ತಾನು ಎಲ್ಲ ಕ್ರಿಯೆಗಳನ್ನು ಭಕ್ತಿಯಿಂದ ಅಂದರೆ ದಾಸೋಹಂ ಭಾವದಿಂದ ಮಾಡುವನು. ನಂತರ ತಾನೇ ಶಿವನೆಂದು ಸವ್ಯಜ್ಞಾನಹೊಂದಿ ತಾನು ಮನುಷ್ಯನೆಂಬ ಭಾವವಳದು ಶಿವನಾಗಿಯೇ ವರ್ತಿಸುವನು. ಈ ಭಾವನೆಯಿಂದ ವೀರಶೈವಕ್ಕೆ ದ್ವೈತಾದ್ವೈತವೆಂದು ಹೆಸರುಂಟಾಗಿದೆ. ಮಲತ್ರಯಗಳಿಂದ ಜೀವನು ಬದ್ಧನಾಗಿರುವದರಿಂದ ಅವುಗಳನ್ನು ಹೋಗಲಾಡಿಸಲು ದ್ವೈತಭಾವದಿಂದ ಮೊದಲು ಆರಂಭಿಸಿ ನಂತರ ಅದ್ವೈತ ಅಂದರೆ ಕೇವಲ ಶಿವತ್ವವನ್ನ ಹೊಂದುವನು. ಈ ಕೇವಲತ್ವ ಅಥವಾ ಲಿಂಗಾಂಗ ಸಾಮರಸ್ಯವು ವೀರಶೈವರ ಕೊನೆಯ ಧ್ಯೇಯವಾಗಿದೆ. ಈ ಸಾಮರಸ್ಯವು ವೀರಶೈವದಲ್ಲಿ ಉಂಡು ಉಂಡ ಕರ್ಪೂರದಂತೆ, ಅಲಿನುಂಗಿದ ನೋಟದಂತೆ, ಬಯಲು ನುಂಗಿದ ಬ್ರಹ್ಮಾಂಡದಂತೆ, ಮುತ್ತು ನುಂಗಿದ ಉದಕದಂತೆ. ಪುಷ್ಪವು ನುಂಗಿದ ಪರಿಮಳದಂತೆ ಎಂಬ ಅನೇಕ ವಿಧವಾದ ಉಪಮೆಗಳಿಂದ ಬೋಧಿಸಲ್ಪಟ್ಟಿರುವದು. ವೇದಾಂತವು ಸಾಯುಜ್ಯ ಮೋಕ್ಷವನ್ನಷ್ಟೇ ಬೋಧಿಸುವದು. ಇದರಿಂದ ಸಂಪೂರ್ಣ ಐಕ್ಯವು ಘಟಿಸುವದಿಲ್ಲ. ಸಕ್ಕರೆಯಲ್ಲಿ ಹಿಟ್ಟು ಕೂಡಿಸಿದಂತೆ ಈ ಸಾಯುಜ್ಯವು ಘಟಿಸುವದು. ಆದರೆ ವೀರಶೈವವು ವೇದಾಂತಕ್ಕಿಂತಲೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಬಯಲಿನಲ್ಲಿ ಬಯಲು ಬೆರವಂತೆ ಕೇವಲ ಸಾಮರಸ್ಯವನ್ನೇ ಬೋಧಿಸುವದು. ವೇದಾಂತವು ಜಗತ್ತು ಅಸತ್ಯವೆಂದು 'ಸರ್ವಂ ಖಲ್ವಿದಂ ಬ್ರಹ್ಮ' ಎಂಬ ಶ್ರುತಿವಾಕ್ಯದ ವಿರೋಧವಾಗಿ ಹೇಳುತ್ತದೆ. ಆದರೆ ಪರಮಾತ್ಮನು ಜಗತ್ತಿನಲ್ಲಿ ವ್ಯಾಪಿಸಿರುವದರಿಂದ ಜಗತ್ತು ಸತ್ಯವೆಂದು ವೀರಶೈವವು ಹೇಳುತ್ತದೆ. ವೇದಾಂತವು ತಾನು ಶಿವನಾದ್ದರಿಂದ ತಾನು ಮಾಡತಕ್ಕ ಕ್ರಿಯೆ ಇಲ್ಲವೆಂದು ಹೇಳುತ್ತದೆ. ತಾನು ಸಾಕಾರನಿರುವದರಿಂದ ನಿರಾಕಾರನಾಗಲು ಕ್ರಿಯೆ ಬೇಕೆಂದು ವೀರಶೈವವು ಪ್ರತಿವಾದಿಸುತ್ತದೆ. ವೇದಾಂತ ತತ್ವದಂತೆ ಜಗತ್ತು ಅಸತ್ಯವೆಂದು ಹೇಳಿದ ಪ್ಲೇಟೋನ ತತ್ವವು ವೀರಶೈವ ತತ್ವಕ್ಕೆ ವಿರೋಧವಾಗಿದೆ. ಜಗತ್ತಿನಲ್ಲಿಯೇ ದೇವರಿದ್ದಾನೆ ಎಂದು ಹೇಳಿದ ಅರಿಷ್ಟಾಟಲನ ತತ್ವವು ವೀರಶೈವ ತತ್ವಕ್ಕೆ ಸದೃಶವಾಗಿದೆ.

ಪ್ಲೇಟೋನು ಹಲ ಪ್ರವಚನಗಳನ್ನು ಬರೆದಿದ್ದಾನೆ. ಅವೆಲ್ಲವೂ ಇಂದಿನ ವರೆಗೆ ಲಭ್ಯವಾಗಿವೆ. ರಿಪಬ್ಲಿಕ್ ಎಂಬದು ಅವನ ಶ್ರೇಷ್ಠ

ವಾದ ಮತ್ತು ಪರಿಪಕ್ವವಾದ ರಾಜಕಾರಣ ವಿಷಯದ ಗ್ರಂಥವು ಫಿಲಿಬಸ್ ಎಂಬದು ಸುಶೀಲತ್ವವನ್ನು (*Idea of goodness*) ಬೋಧಿಸುವ ಗ್ರಂಥವು ಅವನ ಎಲ್ಲ ಪ್ರವಚನಗಳು ಮನೋಹರವಾಗಿಯೂ ಸರಳ ಶೈಲಿಯುಳ್ಳವೂ ಆಗಿವೆ. ಈ ಪ್ರವಚನಗಳನ್ನು ಪ್ಲೇಟೋನು ಸಾಕ್ರೆಟಿಸನ ಬಾಯಿಂದಲೇ ನುಡಿಯುವಂತೆ ಮಾಡಿದ್ದಾನೆ. ಪ್ಲೇಟೋನು ತನ್ನ ಬೋಧೆಯನ್ನು ಪುಷ್ಟೀಕರಿಸುವದಕ್ಕೆ ಕಟ್ಟು ಕತೆಗಳ ಸಾದೃಶ್ಯವನ್ನು ಬೇರಳವಾಗಿ ಉಪಯೋಗಿಸಿದ್ದಾನೆ. ಇವನು ಅಥೆನ್ಸ ಪಟ್ಟಣದಲ್ಲಿ ಪ್ರಸಿದ್ಧನಾದ ಮನೆತನದವನು ಇವನು ಶ್ರೀಮಂತಿಕೆಯ ಮದದಿಂದ ಬೆಳೆದವನಾದ್ದರಿಂದ ಯಾವಾಗಲೂ ಉಚ್ಚ ಜನರ ಸಹವಾಸದಲ್ಲಿರುತ್ತಿದ್ದನು. ಪ್ರಜಾರಾಜ್ಯವನ್ನು ತಿರಸ್ಕರಿಸಿದನು. ಇವನ ನೈತಿಕ ವರ್ತನವು ಅನುಕರಣೀಯವಾಗಿತ್ತು. ಇವನು ಬಹು ಸುಂದರನೂ ಬಲವಾದ ಮೈಕಟ್ಟಿನವನೂ ಆಗಿದ್ದನು. ಪ್ಲೇಟೋನ ತತ್ವಜ್ಞಾನ ಬೆಳವಣಿಗೆಗೆ ಸಾಕ್ರೆಟಿಸ್, ಪಾರ್ಮೆನಿಡಿಸ್, ಪ್ರೊಟ್ಯಾಗೋರಾಸ, ಅನೆಕ್ಸಿಗೊರಾಸ, ಹೆವಾಕ್ರಿಟನ್, ಪೈಥೆಗೋರಾಸ ಪಂಥಿಗಳ ಪ್ರೇರಣೆಯು ಕಾರಣವಾಯಿತು. ಗಣಿತದ ತತ್ವಗಳು ಪ್ರತ್ಯಕ್ಷಜ್ಞಾನ (*perception*) ದಿಂದ ಭಿನ್ನವಾಗಿದ್ದು ಸಹಜವಾದ ಮನೋಭಾವನೆಗಳಾಗಿವೆ. (*Innate ideas*) ದೃಶ್ಯ ಜಗತ್ತು ಅಸ್ಥಿರವಾದದ್ದೆಂದು ಪ್ಲೇಟೋನು ಹೆರಾಕ್ಲೈಟಸನೊಡನೆ ಒಪ್ಪಿದನು ಮತ್ತು ಈ ಜಗತ್ತಿನ ಇಂದ್ರಿಯ ಜ್ಞಾನವು (*Sensation*) ಸಂಬಂಧಾತ್ಮಕ ಸತ್ಯವನ್ನು (*relative truth*) ಕೊಡುವದೆಂದು ಪ್ರೊಟ್ಯಾಗೊರಾಸನ ತತ್ವಕ್ಕೆ ಅನುಮತಿಸಿದನು. ಆದರೆ ಸಾಕ್ರೆಟಿಸನ ಪ್ರೇರಣೆಯಿಂದ ತನ್ನ ತತ್ವಶಾಸ್ತ್ರವನ್ನು ಭಾವನಾಜ್ಞಾನ (*conception*) ದ ಮೇಲೆ ರಚಿಸಿದನು.

ತತ್ವಶಾಸ್ತ್ರ ರಚನೆ— ಸಪ್ಪಿಣವೇ ಜ್ಞಾನವು. ಜ್ಞಾನವೆಂದರೆ ಇಂದ್ರಿಯ ಜ್ಞಾನವಲ್ಲ ಎಂಬು ಪ್ಲೇಟೋನ ಸಿದ್ಧಾಂತವುಂಟು. ಜಗತ್ತು ಎರಡು ವಿಧವಾದದ್ದೆಂದು ಇವನು ಗ್ರಹಿಸಿದನು. ನಿಜವಾದ ಜಗತ್ತು. (*Being*) ಮತ್ತು ಅಸ್ಥಿರವಾದ ದೃಶ್ಯ ಜಗತ್ತು. (*Becoming*). ಮೊದಲನೆಯದು ಬುದ್ಧಿಗೋಚರವೂ ಎರಡನೆಯದು ಇಂದ್ರಿಗೋಚರವೂ ಆಗಿದೆ. ಇದು ವೀರಶೈವದ ಬ್ರಹ್ಮಸೃಷ್ಟಿ ಮತ್ತು ಶಿವಸೃಷ್ಟಿಗಳ ವರ್ಗೀಕರಣವನ್ನು ಹೋಲುತ್ತದೆ. ಆದರೆ ವೀರಶೈವ ಸಿದ್ಧಾಂತವು ಅವುಗಳಲ್ಲಿ ಶ್ರೇಷ್ಠ ಕನಿಷ್ಠ

ವರ್ಜಿಗಳನ್ನಷ್ಟೇ ಮಾನ್ಯ ಮಾಡಿ ಎರಡೂ ಸತ್ಯಸೃಷ್ಟಿಗಳೆಂದು ಒಪ್ಪುತ್ತದೆ. ಆದರೆ ಪ್ಲೇಟೋನು ದೃಶ್ಯ ಜಗತ್ತು ಅಸತ್ಯವಾದದ್ದೆಂದು ಶಂಕರಾಚಾರ್ಯರಂತೆ ಹೇಳುವದರಿಂದ ಇವನಿಗೆ ಗ್ರೀಸಿನ ಶಂಕರಾಚಾರ್ಯನೆಂದು ಕರೆಯಬಹುದು. ನಿಜವಾದ ಭಾವನಾ ಜ್ಞಾನವು ಪ್ರತ್ಯಕ್ಷ ಜ್ಞಾನವನ್ನು ಅವಲಂಬಿಸಿರದೆ ಪರಲೋಕದಲ್ಲಿದೆ. ಅದರ ಸತ್ಯವು ಸ್ವಯಂಸಿದ್ಧವಾದದ್ದು. ಈ ಭಾವನಾಜ್ಞಾನಕ್ಕೇನೇ ಪ್ಲೇಟೋನು *Idea or Form* (ಭಾವನೆ) ರೂಪ ಅಥವಾ ಕಲಾ ಎಂದು ಕರೆದಿದ್ದಾನೆ. ಭಾವನಾ ಜ್ಞಾನವು ಸತ್ಯವಾಗಿದ್ದು ಪ್ರತ್ಯಕ್ಷ ಜ್ಞಾನವು ಭಾವನಾ ಜ್ಞಾನದ ಛಾಯೆ ಅಥವಾ ಪ್ರತಿಬಿಂಬವು. ಭೌತಿಕ ವಸ್ತುಗಳು ಭಾವನಾಜ್ಞಾನದ ಅಸ್ತಿತ್ವವನ್ನು ಆತ್ಮಕ್ಕೆ ನಿವೇದಿಸುವದನ್ನು ಮಾತ್ರ ಮಾಡುತ್ತವೆ. ಮನಸ್ಸು ಸಹ ದೃಶ್ಯ ಜಗತ್ತಿಗೆ ಸಂಬಂಧಪಟ್ಟಿದ್ದು. ಇವನು ಅಧುನಿಕರ ಗ್ರಹಿಕೆಯಂತೆ ಪ್ರಕೃತಿ ಮತ್ತು ಮನಸ್ಸು ಎಂದು ಪ್ರತ್ಯೇಕ ವಿಭಾಗವನ್ನು ಮಾಡುವದಿಲ್ಲ. ದೃಶ್ಯ ಜಗತ್ತಿನಲ್ಲಿ ಎಷ್ಟು ವಸ್ತುಗಳಿವೆಯೋ ಅಷ್ಟು ಭಾವನೆಗಳುಂಟು. ದೃಶ್ಯ ಜಗತ್ತು ನಿಜವಸ್ತುವಿನ ಪ್ರತಿರೂಪವು. ಪೈಥಾಗೋರಾಸನ ಪಂಥದವರು ವಸ್ತುಗಳು ಸಂಖೆಯ ಪ್ರತಿರೂಪಗಳೆಂದು ಹೇಳಿದರು. ಇದರ ಪ್ರೇರಣೆಯೇ ಪ್ಲೇಟೋನ ಮೇಲೆ ಆಯಿತು. ಭಾವನೆಯು ಅಥವಾ ಕಲೆಯು (*Idea*) ವಸ್ತುವಿನಲ್ಲಿ ಭಾವನೆಯ ಗುಣವಿರುವ ವರೆಗೆ ವಸ್ತುವಿನಲ್ಲಿ ಇರುವದು. ಭಾವನೆಯು ವಸ್ತುಗಳಿಂದ ಪ್ರತ್ಯೇಕವಾದಾಗ ಪ್ರತ್ಯಕ್ಷ ಜ್ಞಾನವು ಬದಲಾವಣೆ ಹೊಂದುವದು. ಭಾವನೆಗಳು ಶಾಶ್ವತವಾಗಿದ್ದು ದೃಶ್ಯ ಜಗತ್ತು ಬದಲಾವಣೆ ಹೊಂದತಕ್ಕದ್ದಾಗಿದೆ. ಕಲೆಗಳು ದೃಶ್ಯಜಗತ್ತಿನ ಅಂತಿಮಕಾರಣಗಳಾಗಿವೆ. (*teleotogical causes*) ಸತ್ಕಲೆಯು (*Idea of the Good*) ಎಲ್ಲ ಕಲೆಗಳ ಅಂತಿಮಧೇಯವಾಗಿದೆ. ಸತ್ಕಲೆಯು ಎಲ್ಲ ಕಲೆಗಳ ನೈತಿಕಧೇಯವಾಗಿದ್ದು ಅವುಗಳಿಗೆ ನಿಜತ್ವವನ್ನೂ ಬೆಲೆಯನ್ನೂ ಉಂಟುಮಾಡುತ್ತದೆ. ಪ್ಲೇಟೋನು ಸತ್ಕಲೆಯನ್ನು ದೇವರೆಂದೂ ಜಗತ್ತಿನ ಮೂಲಬುದ್ಧಿಯೆಂದೂ (*World reason*) ಕರೆಯುತ್ತಾನೆ. ಸತ್ಕಲೆಯು ಪಾರಮಾರ್ಥಿಕ ಪುರುಷನಾಗಿರದೆ ಜಗತ್ತಿನ ನೈತಿಕ ಧೇಯವಾಗಿದೆ. ಕಲೆಯು ಮನುಷ್ಯನ ಮನಸ್ಸಿನಲ್ಲಿಯ ಭಾವನೆ ಮಾತ್ರವೇ ಆಗಿರದೆ ಮನುಷ್ಯನ ಅಥವಾ ದೇವರ ಮನಸ್ಸಿನ ಬಾಹ್ಯವಾದ ನಿಜವಸ್ತುವಾಗಿದೆ. ಮನಸ್ಸಿನಲ್ಲಿಯ ವಿಚಾರವು ಮನೋಬಾಹ್ಯವಾದ ವಸ್ತುವಿನ ಪ್ರತಿರೂಪವಾಗಿದೆ. ಇಂದ್ರಿಯ ಗೋಚರವಾದ ಕುದುರೆಯು ನಿಜವಾಗಿರದೆ ಕುದುರೆಯ ಸಾಮಾನ್ಯ ಭಾವನೆಯು (*Idea of the horse in general*) ನಿಜವಾದದ್ದಾಗಿದೆ. ಸೌಂದರ್ಯವು ಮನೋಬಾಹ್ಯವಾದ ವಸ್ತುವಿದ್ದು ಸುಂದರ ವಸ್ತುಗಳಿಂದ ಭಿನ್ನವಾಗಿದೆ.

ಕಲೆಯ ಗುಣಗಳು— (೧) ಕಲೆಗಳು ಸ್ವಯಂಭೂತವಾದ ನಿಜವಸ್ತುಗಳು. (೨) ಕಲೆಗಳು ಸಾರ್ವತ್ರಿಕವಾದ ವಿಚಾರಗಳು. (೩) ಪ್ರತಿಯೊಂದು ಕಲೆಯು ಅನೇಕತ್ವದಲ್ಲಿ ಏಕತ್ವವಾಗಿದೆ. (೪) ಕಲೆಗಳು ಶಾಶ್ವತವೂ ಜವಿನಾತಿಗಳೂ ಆಗಿವೆ. (೫) ಕಲೆಗಳು ಎಲ್ಲ ವಸ್ತುಗಳ ಮೂಲ ಸ್ವಾರಸ್ಯವಾಗಿವೆ. (೬) ಪ್ರತಿಯೊಂದು ಕಲೆಯು ಪರಿಪೂರ್ಣವಾದದ್ದು. (೭) ಕಲೆಗಳು ದೇಶ, ಕಾಲಾತೀತವಾಗಿವೆ. (೮) ಕಲೆಗಳು ಚಿತ್ಸ್ವರೂಪಗಳು. ಅವು ಬುದ್ಧಿಗೆ ಮಾತ್ರವೇ ಗಮ್ಯವಾಗಿವೆ. (೯) ಕಲೆಗಳು ಇಹಪರಗಳೆರಡರಲ್ಲಿಯೂ ಇವೆ. (೧೦) ಕಲೆಗಳ ಸಂಖ್ಯೆಯು ಅನಂತವಾಗಿದೆ. ಪ್ಲೇಟೋನು ಭಾವನಾವಾದಿಯು. (*Idealist*). ಭಾವನೆಗಳು ವಸ್ತುಗಳನ್ನು ಸೃಷ್ಟಿಸಲು ಅಸಮರ್ಥವಾಗಿವೆ. ಆದ್ದರಿಂದ ಪ್ಲೇಟೋನು ದೇವರ ಕಲ್ಪನೆಯನ್ನು ನಿರ್ಮಿಸಿದ್ದಾನೆ. ದೇವರು ಪ್ರಕೃತಿಯನ್ನು ಭಾವನೆಗಳ ಪ್ರತಿರೂಪದಲ್ಲಿ ಸೃಷ್ಟಿಸುವಂತೆ ಪ್ಲೇಟೋನು ಕೃತ್ರಿಮ ರೀತಿಯನ್ನು ಕಲ್ಪಿಸಿದ್ದಾನೆ. ಇದರಿಂದ ಭಾವನೆಗಳಲ್ಲಿ ಸ್ವಯಂ ಶಕ್ತಿಯ ಅಭಾವವು ಕಂಡುಬರುತ್ತದೆ. ಪ್ಲೇಟೋನ ತತ್ವದಲ್ಲಿ ಇದೊಂದು ದೊಡ್ಡ ಕೊರತೆಯು. ಇದರೆ ವೀರಶೈವವು ನೈಜವಾದವಿದ್ದು (*Realism*) ಸ್ವಯಂ ಶಕ್ತಿಯುಳ್ಳ ನಿತ್ಯ ಪರಿಪೂರ್ಣವಾದ ಪರಮಾತ್ಮನ ಅಸ್ತಿತ್ವವನ್ನು ಒಪ್ಪುವದು. ಆತನು ಜಗತ್ತಿನಲ್ಲಿಯೇ ಇದ್ದಾನೆಂದು ಹೇಳುವದು. ಜಗತ್ತು ಆತನಿಂದಲೇ ನಿರ್ಮಿತವಾಗಿದ್ದು ಆತನಲ್ಲಿಯೇ ಲಯವಾಗವದೆಂದು ಹೇಳುವದು. ಕಲ್ಪಿತವಾದ ವಸ್ತುಗಳ ಅಸ್ತಿತ್ವವನ್ನು ನಿರ್ಮಿಸಿ ತತ್ವಶಾಸ್ತ್ರಕ್ಕೆ ವಿರೋಧವನ್ನು ವೀರಶೈವವು ತಂದುಕೊಂಡಿಲ್ಲ. ಸತ್ಕಲೆಯು ದೇವರಿಗೆ ಅಧೀನವಾಗಿದೆಯೆಂದು ಹೇಳವಲ್ಲಿ ಪ್ಲೇಟೋನ ಸಿದ್ಧಾಂತಕ್ಕೆಲ್ಲ ವಿರೋಧಾಭಾಸವುಂಟಾಗುವದು. ಆದರೆ ದೇವರು ಮತ್ತು ಸತ್ಕಲೆಯು ಒಂದಕ್ಕೊಂದು ಭಿನ್ನವಾಗಿರುವದಾದರೆ ಈ ದ್ವೈತವನ್ನು ಹೋಗಲಾಡಿಸುವದು ಹೇಗೆ? ಇದರಂತೆಯೇ ಕಲೆಗಳು ಮತ್ತು ಪ್ರಕೃತಿಗಳಲ್ಲಿ ದ್ವೈತಭಾವವು ಪ್ಲೇಟೋನ ತತ್ವದಲ್ಲಿ ಕಂಡುಬರುತ್ತದೆ. ಪರಮಾತ್ಮನು ಸ್ವಯಂಸಿದ್ಧನಿರಬೇಕು.

ಅವನಿಂದ ಜಗತ್ತಿನ ಸೃಷ್ಟಿಯ ಕಾರಣವು ಜೋಧವಾಗುವಂತಿರಬೇಕು. ಅದರೆ ಪ್ಲೇಟೋನ ಭಾವನೆಗಳು ಸ್ವಯಂಸಿದ್ಧತೆಯನ್ನಾಗಲಿ ಅಥವಾ ಜಗತ್ತಿನ ಸೃಷ್ಟಿಯನ್ನಾಗಲೀ ಸೃಷ್ಟೀಕರಿಸಲು ಅಸಮರ್ಥವಾಗಿವೆ. ಇಂದ್ರಿಯಗೋಚರವಾದ ಕುದುರೆಯು ನಿಜವಾದದ್ದಲ್ಲ (ಪ್ಲೇಟೋನ ಹೇಳಿಕೆಯಂತೆ). ಅದರೂ ಅದು ಅಸ್ತಿತ್ವದಲ್ಲಿದೆ. ಕುದುರೆಯ ಭಾವನೆಯು ನಿಜವಾದದ್ದಿದ್ದರೂ ಅದರ ಅಸ್ತಿತ್ವವು ಗೋಚರವಿಲ್ಲ. ಅವನು ಭಾವನೆಯನ್ನು ಒಂದು ವಸ್ತುವಾಗಿ ತಿಳಿದದ್ದೇ ಪ್ರಮಾದವಾಗಿದೆ.

ಜ್ಞಾನಸಿದ್ಧಾಂತ— (೧) ಪ್ರತ್ಯಕ್ಷ ಇಂದ್ರಿಯಾನುಭವವು ಜ್ಞಾನವು (*Knowledge is porception*). ಎಂಬದು ಪ್ರೊಟ್ಯಾಗೋರಾಸನ ಸಿದ್ಧಾಂತವು. ಭವಿಷ್ಯ ಸಂಗತಿಗಳನ್ನು ನಿರ್ಧರಿಸುವದರಲ್ಲಿ ಈ ಸಿದ್ಧಾಂತವು ಸಟಿಯಾದದ್ದೆಂದು ಪ್ಲೇಟೋನ ಮತವು. ಯಾಕೆಂದರೆ ಮುಂದಿನ ವರ್ಷ ನಾನು ಮುಖ್ಯ ಮಂತ್ರಿಯಾಗಬಹುದೆಂದು ನಂಬಬಹುದು. ಆದರೆ ಅದರ ಬದಲು ನಾನು ಮುಂದಿನ ವರ್ಷ ಕಾರಾಗ್ರಹದಲ್ಲಿ ಬೀಳಬಹುದು. (೨) ಪ್ರತ್ಯಕ್ಷ ಇಂದ್ರಿಯಾನುಭವವು ವಿರೋಧಾತ್ಮಕವಾದ ನೋಟಗಳನ್ನು ಕೊಡುವದು. ಒಂದೇ ವಸ್ತುವು ಸಮೀಪವಿದ್ದಾಗ ದೊಡ್ಡದಾಗಿಯೂ ದೂರದಲ್ಲಿರುವಾಗ ಸಣ್ಣದಾಗಿಯೂ ಕಾಣುವದು. ಯಾವದು ನಿಜವೆಂದು ನಿರ್ಧರಿಸಲು ಬುದ್ಧಿಯನ್ನು ಉಪಯೋಗಿಸಬೇಕಾಗುವದು. ಎಲ್ಲ ಇಂದ್ರಿಯಾನುಭವವು ನಿಜವಾಗಿಲ್ಲ. ಮತ್ತು ಎಲ್ಲವೂ ಜ್ಞಾನಕೊಡುವಂಥವುಗಳಾಗಿಲ್ಲ. (೩) ಎಲ್ಲ ಪ್ರತ್ಯಕ್ಷ ಇಂದ್ರಿಯಾನುಭವಗಳು ನಿಜವಿರುವದಾದರೆ ಬಾಲಕನ ಇಂದ್ರಿಯಾನುಭವಗಳು ಸಹ ನಿಜವಾಗಿರಬೇಕು. ಪ್ರೊಟ್ಯಾಗೊರಾಸನ ಈ ಸಿದ್ಧಾಂತದಿಂದ ಎಲ್ಲ ಪುರಾವೆಗಳೂ ಖಂಡನೆಗಳೂ ಅಸಂಭವವಾಗುವವು. (೪) ಮನುಷ್ಯನು ಎಲ್ಲ ವಸ್ತುಗಳಿಗೆ ಪ್ರಮಾಣನಲ್ಲ. ಹಾಗಿದ್ದಲ್ಲಿ ಪಶು ಮೊದಲಾದ ಪ್ರಾಣಿಗಳೂ ಸಹ ಎಲ್ಲ ವಸ್ತುಗಳ ಪ್ರಮಾಣವಾಗುವವು. (೫) ಪ್ರೊಟ್ಯಾಗೋರಾಸನ ಸಿದ್ಧಾಂತವು ಆತ್ಮವಿರೋಧವಾಗಿದೆ. ನನಗೆ ಸತ್ಯವಾಗಿ ಕಾಣುವದು ನನ್ನ ಮಟ್ಟಿಗೆ ಸತ್ಯವಾದದ್ದು. ಪ್ರೊಟ್ಯಾಗೊರಾಸನ ಸಿದ್ಧಾಂತವು ನನಗೆ ತಪ್ಪೆಂದು ಕಂಡರೆ ಪ್ರೊಟ್ಯಾಗೊರಾಸನು ಅದು ತಪ್ಪೆಂದು ನನ್ನ ಮುಂದೆ ಒಪ್ಪಬೇಕಾಗುವದು. ಆದ್ದರಿಂದ ಅವನ ಸಿದ್ಧಾಂತವು ಸತ್ಯಾಸತ್ಯಗಳ ಭೇದವನ್ನು ತೆಗೆದು ಹಾಕುವದು. (೬) ಪ್ರತ್ಯಕ್ಷ ಇಂದ್ರಿಯಾನುಭವದಲ್ಲಿ ಇಂದ್ರಿಯಗಳಿಂದ

ಉತ್ಪನ್ನವಾಗದ ಅಂಶಗಳೂ ಉಂಟು. 'ಈ ಕಾಗದವು ಬೆಳ್ಳಗಿದೆ' ಎಂದು ಹೇಳಿದರೆ ಅದರಲ್ಲಿ ಕೇವಲ ಇಂದ್ರಿಯಾನುಭವವಿಲ್ಲ. ಬೆಳ್ಳಗಿದೆ ಎಂದು ಹೇಳುವಲ್ಲಿ ನಾನು ಕಾಗದವನ್ನು ಉಳಿದ ಬಿಳೇ ವಸ್ತುಗಳೊಡನೆ ಹೋಲಿಸಿದಾಗ ಮತ್ತು ಉಳಿದ ಬಣ್ಣಗಳ ವಸ್ತುಗಳಿಂದ ಭಿನ್ನ ಮಾಡಿದಾಗ ಕಾಗದವು ಬೆಳ್ಳಗಿದೆ ಎಂಬ ಜ್ಞಾನವುಂಟಾಗುವದು. ಹೋಲಿಸುವ ಮತ್ತು ಭಿನ್ನಮಾಡುವ ಕ್ರಿಯೆಯು ಇಂದ್ರಿಯಗಳಿಗೆ ಸಾಧ್ಯವಿಲ್ಲ. ಈ ಕ್ರಿಯೆಯು ಮನಸ್ಸಿನದು. ಕೈಯಿಂದ ಒಂದು ಚಂಡನ್ನು ಮುಟ್ಟಿದಾಗ ಅದು ದುಂಡಗಿದೆ ಎಂದು ಗೊತ್ತಾಗುವದು. ಕಣ್ಣಿನಿಂದ ನೋಡಿದಾಗ ಅದರ ದುಂಡಾಕೃತಿಯು ಗೊತ್ತಾಗುವದು. ಸ್ಪರ್ಶಕ್ಕೂ ನೋಟಕ್ಕೂ ಭೇದವಿದೆ. ಕಣ್ಣುಗಳು ಮುಟ್ಟಲಾರವು. ಕೈಗಳು ನೋಡಲಾರವು. ಆದರೆ ಮನಸ್ಸು ಇವೆರಡು ಇಂದ್ರಿಯಾನುಭವಗಳನ್ನು ಕೂಡಿಸಿ ಆ ವಸ್ತು ಯಾವದೆಂಬದನ್ನು ನಿರ್ಧರಿಸುತ್ತದೆ. ಭೇದಾಭೇದಭಾವನೆಗಳು ಇಂದ್ರಿಯಗಳಿಂದ ಜನ್ಯವಾಗಲಾರವು. ಆದ್ದರಿಂದ ಪ್ರತ್ಯಕ್ಷ ಇಂದ್ರಿಯಾನುಭವಗಳಿಂದ ಜ್ಞಾನವುತ್ಪನ್ನವಾಗಲಾರದು. (೭) ಅಭಿಪ್ರಾಯವಾದರೂ ಜ್ಞಾನವಾಗಿರಲಾರದು. ವಿಮರ್ಶಾತ್ಮಕ ಬುದ್ಧಿಯ ಆಶ್ರಯವುಳ್ಳದ್ದೇ ಜ್ಞಾನವು.

ಆತ್ಮದ ಅಮರತ್ವ— ಮನುಷ್ಯನ ಆತ್ಮವು ಇಹಪರಲೋಕಗಳೆರಡಕ್ಕೂ ಸಂಬಂಧಿಸಿರುವದು. ಆತ್ಮವು ಪ್ರತ್ಯಕ್ಷ ಇಂದ್ರಿಯಾನುಭವದಿಂದಲೂ ಆತೆಗಳಿಂದಲೂ ಇಹಕ್ಕೆ ಸಂಬಂಧಿಸಿದೆ. ಅಂತಜ್ಞಾನದಿಂದ ಪರಲೋಕಕ್ಕೆ ಸಂಬಂಧಿಸಿದ್ದು ಅಮರತ್ವವುಳ್ಳದ್ದಾಗಿದೆ. ಮನುಷ್ಯನಲ್ಲಿ ಬುದ್ಧಿಪುರಸ್ಸರವಾದ ಮತ್ತು ಬುದ್ಧಿ ವಿರಹಿತವಾದ ಎರಡು ಸ್ವಭಾವಗಳುಂಟೆಂದು ಪ್ಲೇಟೋನು ಹೇಳುತ್ತಾನೆ. ಬುದ್ಧಿ ವಿರಹಿತವಾದ ಸ್ವಭಾವವನ್ನು ಚಿತ್ತ (*Will*) ಮತ್ತು ಅಹಂಕಾರ (*Sensuous appetites*) ಎಂದು ಎರಡು ನಿಧವಾಗಿ ವಿಭಾಗಿಸಿದ್ದಾನೆ. ಪ್ರಾಣಿಗಳಲ್ಲಿ ಕಡೆಯ ಎರಡು ಸ್ವಭಾವಗಳುಂಟು. ಪಶ್ಯಗಳಲ್ಲಿ ಅಹಂಕಾರವೊಂದೇ ಉಂಟು. ಆತ್ಮವು ಅವಿನಾಶಿಯಾಗಿದೆ ಇಹಲೋಕದ ಕರ್ಮಾನುಸಾರ ಆತ್ಮವು ಪುನರ್ಜನ್ಮದಲ್ಲಿ ಸುಖದುಃಖಗಳನ್ನು ಅನುಭೋಗಿಸುತ್ತದೆ. ಬುದ್ಧಿವಂತನು ದೇಹೇಚ್ಛೆಗಳನ್ನು ಜಯಿಸಿ ಪಾರಲೌಕಿಕದ ಕಡೆಗೆ ದೃಷ್ಟಿಯನ್ನು ತಿರುಗಿಸಬೇಕು. ಪುಣ್ಯಶಾಲಿಗಳು ಭಾವನಾಲೋಕ (ಪರ)ಕ್ಕೆ ತೆರಳುವರು. ಪಾಪಿಗಳು ಹೀನ ಪ್ರಾಣಿಗಳಾಗಿ ಹುಟ್ಟುವರು. ಆತ್ಮವು ಕ್ರಿಯಾರಹಿತವಾದದ್ದೆಂದು ಪ್ಲೇಟೋನು ಸಾಂಖ್ಯರಂತೆ ಹೇಳುತ್ತಾನೆ. ಆಧುನಿಕ ಮಾನಸಶಾಸ್ತ್ರಜ್ಞರು ಆತ್ಮವು ಕ್ರಿಯಾ

ಶಕ್ತಿಯುಳ್ಳವನೆಂದು ಹೇಳುತ್ತಾರೆ. ಹಿಂದಿನ ಜನ್ಮದಲ್ಲಿ ಆತ್ಮವು ಭಾವನೆ (*Ideas*) ಗಳಿಂದ ಕೂಡಿತ್ತು. ಈ ಜನ್ಮದಲ್ಲಿ ಅವು ಮರೆತು ಹೋಗಿವೆ. ಆದರೆ ಪ್ರಪಂಚದಲ್ಲಿಯ ವಸ್ತುಗಳ ಸಂದರ್ಶನದಿಂದ ಭಾವನೆಗಳು ಆತ್ಮಕ್ಕೆ ನೆನಪಾಗುವವು. ಹೀಗೆ ಪ್ಲೇಟೋನು ನೆನಪಿನ ಸಹಾಯದಿಂದ ಹಿಂದಿನ ಜನ್ಮದ ಅಸ್ತಿತ್ವವನ್ನು ಸಿದ್ಧಗೊಳಿಸಲು ಪ್ರಯತ್ನಿಸಿದ್ದಾನೆ. ಆತ್ಮವು ಭಾವನಾ ಲೋಕಕ್ಕೆ ಸಂಬಂಧಿಸಿದ ಕಾರಣ ಮತ್ತು ಅವಿನಾಶಿಯಾದ ಕಾರಣ ಅದಕ್ಕೆ ಪುನರ್ಜನ್ಮವುಂಟೆಂದು ಪ್ಲೇಟೋನ ಮತವು.

ಭೌತಿಕ ಶಾಸ್ತ್ರವು— ದೃಶ್ಯಸೃಷ್ಟಿಗೆ ಸಂಬಂಧಿಸಿದೆ. ಅಂದರೆ ದೇಶ ಕಾಲಗಳಲ್ಲಿರುವ ವಸ್ತುಗಳಿಗೆ ಸಂಬಂಧಿಸಿದೆ. ದೃಶ್ಯಸೃಷ್ಟಿಯು ನಿರಂತರ ಬದಲಾವಣೆ ಹೊಂದುತ್ತಿರುವದರಿಂದ ಸಾಯುವ ವರೆಗೆ ನಿಜವಾದ ಜ್ಞಾನ ವುಂಟಾಗುವದು ಶಕ್ಯವಿಲ್ಲ. ದೇವರು ಜಗತ್ತನ್ನು ಬರಿದಾದ ಸ್ಥಳ ಅಥವಾ ಪ್ರಕೃತಿಯಿಂದ ಮಾಡಿದನು. ಪ್ರಕೃತಿಯಲ್ಲಿ ಭಾವನೆಗಳ ಪ್ರತಿಬಿಂಬಗ ಳನ್ನು ಮುದ್ರಿಸಿದ್ದರಿಂದ ಜಗತ್ತುಂಟಾಯಿತು. ಜಗತ್ತಿನ ವಸ್ತುಗಳು ಇಹಪರಲೋಕಗಳೆರಡರಲ್ಲಿಯೂ ಭಾಗಿಗಳಾಗಿವೆ. ಇವನು ಜಗತ್ತು ಜೀವ ಮಯವಾದದ್ದೆಂದು ಭಾವಿಸಿದನು. ಇದು ಆಧುನಿಕ ಸೃಷ್ಟಿಸ್ವಭಾವ ನಿಯಮ (*Mechanical theory*)ಕ್ಕೆ ವಿರೋಧವಾಗಿದೆ. ಪ್ರಕೃತಿಯಲ್ಲಿ ಭಾವನೆಗಳು ಬೆರೆಯುವದರಿಂದ ಜಗತ್ತಿನ ಅಭಿನ್ನತ್ವಕ್ಕೆ ಕಾರಣವಾಯಿ ತೆಂದು ಪ್ಲೇಟೋನು ಹೇಳುತ್ತಾನೆ. ಭೂಮಿಯು ಜಗತ್ತಿನ ಕೇಂದ್ರವು. ನಕ್ಷತ್ರಗಳು ಭೂಮಿಯ ಸುತ್ತಲೂ ಚಕ್ರಾಕಾರವಾಗಿ ಸುತ್ತುತ್ತವೆ. ಜಗ ದಾತ್ಮವು (ದೇವರು) ಜಗತ್ತಿನಲ್ಲಿಯ ಚಲನೆಯ ಕಾರಣವು.

ನೀತಿಶಾಸ್ತ್ರ— ಆತ್ಮವು ಪರಲೋಕಕ್ಕೆ ಸಂಬಂಧಿಸಿರುವದು. ಇಹ ಜನ್ಮವು ಪಾಪಮಯವಾದ್ದರಿಂದ ಆತ್ಮವು ದೇವಸನ್ನಿಧಿಗೆ ತಿರುಗಬೇಕು. ಪಾರಮಾರ್ಥ ಜ್ಞಾನವನ್ನು ಹೊಂದುವದೇ ಸದ್ಗುಣವು. ಕಾಲಾಂತರದಲ್ಲಿ ಪ್ಲೇಟೋನು ತನ್ನ ಅಭಿಪ್ರಾಯವನ್ನು ಬದಲಾಯಿಸಿ ನೈತಿಕ ವರ್ತನವು ಇಹಪರಗಳೆರಡರಲ್ಲಿಯೂ ಸುಖವನ್ನುಂಟು ಮಾಡುವದೆಂದು ಹೇಳಿದನು. ಭಾವನಾಲೋಕದಲ್ಲಿ ಭಾಗಿಯಾಗಿರುವದು ಮಿಗಿಲಾದ ಶ್ರೇಯವೆಂದು ಹೇಳಿದನು. ಸುಖವು ಶ್ರೇಯಸ್ಸಿನ (*Good*) ಮುಖ್ಯ ಫಲವಲ್ಲವೆಂದು ಹೇಳಿದನು. (೧) ಶ್ರೇಯಸ್ಸಿಗಾಗಿಯೇ ಶ್ರೇಯಸ್ಸನ್ನು ಅವಲಂಬಿಸಬೇಕು. (೨) ಸುಖವು ಶ್ರೇಯಸ್ಸಾಗಿಲ್ಲ. ಯಾಕೆಂದರೆ ನಾನಾ ಸುಖಗಳು ಪರಸ್ಪರ

ವಿರೋಧವಾಗಿವೆ. (೩) ಸುಖವು ಅನೇಕ ಸಾರೆ ಮೊದಲು ವ್ಯತ್ಯಸ್ತವಾದ ಶರೀರ ಸ್ಥಿತಿಯ ಸುವ್ಯವಸ್ಥೆಗೊಳಿಸತಕ್ಕದ್ದಾಗಿದೆ. ಸುಖ ಮತ್ತು ಮಾನಸಿಕ ವೃತ್ತಿಗಳೆರಡೂ ಶ್ರೇಯಸ್ಸಿಗೆ ಅವಶ್ಯವಾದವುಗಳು. ಮತ್ತು ಅವೆರಡೂ ಜ್ಞಾನದಿಂದ ನಿರ್ಣಯಿಸಲ್ಪಡಬೇಕು. ಮಾನಸಿಕ ಮತ್ತು ಸುಂದರ ವಸ್ತು ಗಳಿಂದಾದ ಸುಖವು ಇಂದ್ರಿಯ ಸುಖಕ್ಕಿಂತ ಮಿಗಿಲಾದದ್ದು. ಯಾಕೆಂದರೆ ಇಂದ್ರಿಯ ಸುಖದ ಪೂರ್ವದಲ್ಲಿ ಆಶೆಯುಂಟು, ಪರಿಣಾಮದಲ್ಲಿ ದುಃಖ ವುಂಟು. ಮನುಷ್ಯನ ಶ್ರೇಯಸ್ಸು ಸುಖಕ್ಕಿಂತ ಜ್ಞಾನಕ್ಕೆ ಹೆಚ್ಚು ಸಂಬಂಧ ಪಟ್ಟಿದೆ. ಅಜ್ಞಾನವು ದುಷ್ಕೃತಿಯ ಮೂಲವು.

ಮುಖ್ಯ ಸದ್ಗುಣಗಳು ಆತ್ಮದ ನಾಲ್ಕು ಅಂಗಗಳಾಗಿವೆ. ಆತ್ಮವು ಬುದ್ಧಿ ಪುರಸ್ಸರವಾದದ್ದು, ಬುದ್ಧಿ ವಿರಹಿತವಾದದ್ದು ಎಂದು ಪ್ಲೇಟೋನು ಎರಡು ವಿಧವಾಗಿ ವಿಂಗಡಿಸಿದ್ದು ಈ ಮೊದಲು ಹೇಳಿದ್ದಾಗಿದೆ. (೧) ಬುದ್ಧಿ ಪುರಸ್ಸರವಾದ ಆತ್ಮದ ಸದ್ಗುಣವು ಜ್ಞಾನವಾಗಿದೆ. ಬುದ್ಧಿ ವಿರಹಿತವಾದ ಆತ್ಮವು ಪುನಃ ಹೃದಯದಲ್ಲಿರುವ ಉದಾರವಾದ ಬುದ್ಧಿ ವಿರಹಿತ ಭಾಗ ವೆಂತಲೂ ಇದರ (೨) ಸದ್ಗುಣವು ಧೈರ್ಯವೆಂತಲೂ ಮತ್ತು ಯಕೃತ್ತಿ ನಲ್ಲಿ (*Liver*) ರುವ ಸಂಕುಚಿತವಾದ ಬುದ್ಧಿವಿರಹಿತವಾದ ಭಾಗವೆಂತಲೂ ಇದರಲ್ಲಿರುವ ಸದ್ಗುಣವು (೩) (*Temperance*) ಮಿತವೃತ್ತಿಯೆಂತಲೂ (೪) ನ್ಯಾಯಗುಣವು (*Justice*) ಮೇಲಿನ ಮೂರು ಸದ್ಗುಣಗಳ ಸಹಕಾ ರದಿಂದ ಪರಿಣಮಿಸುವದೆಂತಲೂ ಪ್ಲೇಟೋನ ಮತವು. ಜ್ಞಾನವು ವಿಚಾರ ಪ್ರವೃತ್ತಿಯುಳ್ಳದ್ದೂ ಮಾರ್ಗದರ್ಶಕವಾದದ್ದೂ ಇದೆ. ಮಿತವೃತ್ತಿಯು ಸುಖದ ಆಶೆಯನ್ನು ನಿಗ್ರಹಿಸತಕ್ಕದ್ದಾಗಿದೆ. ಧೈರ್ಯವು ದುಃಖದ ಭಯವನ್ನು ನಿವಾರಣೆಗೊಳಿಸುವದು. ನ್ಯಾಯ ಗುಣದ ಉದ್ದೇಶವು ಸಾರ್ವತ್ರಿಕ ಸುಸ್ಥಿ ತಿಯನ್ನುಂಟು ಮಾಡುವದಾಗಿದೆ. ಆತ್ಮವು ರಥಿಯಾಗಿಯೂ ಬುದ್ಧಿಯು ಸಾರಥಿಯಾಗಿಯೂ ಇಂದ್ರಿಯಗಳು ಕುದುರೆಗಳಾಗಿಯೂ, ಶರೀರವು ರಥ ವಾಗಿಯೂ ಮನಸ್ಸು ಲಗಾಮಾಗಿಯೂ ಇರುವದು. ಸಾರಥಿಯು ಬಲಿ ಷ್ಠನಾಗಿರದಿದ್ದರೆ ಇಂದ್ರಿಯಗಳೆಂಬ ಕುದುರೆಗಳು ಅಡ್ಡದಾರಿಯನ್ನು ಹಿಡಿ ಯುವವೆಂದು ಪ್ಲೇಟೋನು ಹೇಳುತ್ತಾನೆ. ಪ್ಲೇಟೋನ ಈ ನೈತಿಕ ವಿವ ರಣೆಯನ್ನು ಹೋಲುವ ವಿಚಾರವು ಕಠೋಪನಿಷತ್ತಿನಲ್ಲಿ ನಮ್ಮ ಪೂರ್ವದ ಋಷಿಗಳಿಂದ ಬಹು ಸಾರಸ್ಯವಾಗಿ ಹೇಳಲ್ಪಟ್ಟಿದೆ.—

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವಚ।
ಬುದ್ಧಿಂತು ಸಾರಥಿಂ ವಿದ್ಧಿ ಮನಃಪ್ರಗ್ರಹಮೇವಚ ॥ ಶೋ. ೩ ಅ. ೩

ಶರೀರವೆಂಬುದೇ ರಥ, ಆತ್ಮನೇ ರಥಿಯು (ರಥದಲ್ಲಿ ಕುಳಿತವನು), ಬುದ್ಧಿಯು ಸಾರಥಿಯು ಮನಸ್ಸೇ ಲಗಾಮು.

ಇಂದ್ರಿಯಾಣಿ ಹಯಾನಾಹುರ್ವಿಷಯಾಂ ಸ್ತೇಷು ಗೋಚರಾನ್ ।
ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ ॥
ಶ್ಲೋ. ೪ ಅ. ೩.

ಇಂದ್ರಿಯಗಳು ಕುದುರೆಗಳು, ವಿಷಯಗಳೇ ಅವು ಸಂಚರಿಸುವ ಮಾರ್ಗಗಳು. ಶರೀರ, ಮನಸ್ಸು ಇಂದ್ರಿಯಗಳೊಡನೆ ಕೂಡಿದಾಗ ಆತ್ಮವು ಭೋಕ್ತೃವೆಂದು ಜ್ಞಾನಿಗಳು ಹೇಳುತ್ತಾರೆ.

ಯಸ್ತ್ವವಿಜ್ಞಾನವಾನ್ ಭವತ್ಯಯುಕ್ತೇನ ಮನಸಾಸದಾ ।
ತಸ್ಯೇಂದ್ರಿಯಾಣ್ಯವಶ್ಯಾನಿ ದುಷ್ಟಾಶ್ವಾ ಇವಸಾರಥೇಃ ॥ ಶ್ಲೋ ೫ ಅ.೩

ಯಾವನು ಅಜ್ಞಾನಿಯಾಗಿರುವನೋ ಯಾವನ ಮನಸ್ಸು ಯಾವಾಗಲೂ ಕಲುಷಿತವಾಗಿರುವದೋ ಅಂಥ ಸಾರಥಿಯ ಇಂದ್ರಿಯಗಳು ದುಷ್ಟ ಕುದುರೆಗಳಂತೆ ಸಾರಥಿಯ ಕೈವಶವಾಗಿರಲಾರವು. ಪ್ಲೇಟೋನು ಆತ್ಮ, ಬುದ್ಧಿ, ಮನಸ್ಸು, ಇಂದ್ರಿಯಗಳ ವ್ಯಾಪಾರವನ್ನು ಸೂಚಿಸಲು ರಥಾಶ್ವಗಳ ಉಪಮಾನೋಪಮೇಯಗಳನ್ನು ಉಪನಿಷತ್ತಿನಲ್ಲಿರುವಂತೆಯೇ ವರ್ಣಿಸಿದ್ದು ಮನೋರಂಜಕವಾಗಿದೆ

ಪ್ಲೇಟೋನು ಸೈರನೈಯಿಕರ ಮತ್ತು ಸೋಫಿಷ್ಟರ 'ಸದ್ಗುಣವು ವ್ಯಕ್ತಿಯ ಸುಖವು' ಎಂಬ ವ್ಯಾಖ್ಯೆಯನ್ನು ಖಂಡಿಸಿರುವನು.

(೧) ಸದ್ಗುಣವು ವ್ಯಕ್ತಿಯ ಸುಖನಾಗಿರುವದಾದರೆ ಅದು ಶ್ರೇಯದ ವಿಷಯ ಸಂಬಂಧವನ್ನು (*Objectivity of the good*) ನಾಶಗೊಳಿಸುತ್ತದೆ. ವ್ಯಕ್ತಿಗೆ ಶ್ರೇಯವಾಗಿಲ್ಲದ್ದು ಸ್ವಯಂ ಶ್ರೇಯವಾಗಿ ಉಳಿಯುವದಿಲ್ಲ. ರೋಗಿಗೆ ಅನ್ನವು ವಿಷವೆನಿಸಿದರೆ ಅನ್ನವು ಶ್ರೇಯ ವಸ್ತುವಲ್ಲವೆಂದು ಹೇಳಲಾಗುವದಿಲ್ಲ. (೨) ಇದು ಒಳ್ಳೇದು ಕೆಟ್ಟದು ಇವುಗಳ ಭೇದವನ್ನು ಕಲ್ಲಗೆಯುತ್ತದೆ. ಒಬ್ಬ ವ್ಯಕ್ತಿಯ ಸುಖವು ಇನ್ನೊಬ್ಬ ವ್ಯಕ್ತಿಗೆ ದುಃಖವಾಗಿ ತೋರುವದಾದರೆ ಒಂದೇ ವಸ್ತುವು ಏಕಕಾಲದಲ್ಲಿ ಒಳ್ಳೇದು ಕೆಟ್ಟದು ಅಂದರೆ ಒಬ್ಬನಿಗೆ ಒಳ್ಳೇದಾಗಿಯೂ ಇನ್ನೊಬ್ಬನಿಗೆ ಕೆಟ್ಟದಾಗಿಯೂ ಇರಬೇಕಾಗುವದು. (೩) ಈ ವ್ಯಾಖ್ಯೆಯು ಭಾವದ (*Feeling*) ಆಧಾರದ ಮೇಲೆ ನೀತಿಯನ್ನು ನಿರ್ಮಿಸುತ್ತದೆ. ನಮ್ಮ ಆಶೆಗಳ ತೃಪ್ತಿಯೇ ಸುಖವು. ಆಶೆಗಳು ಭಾವ ಮಾತ್ರವೇ ಆಗಿವೆ. ವಿಷಯಗತ ನೀತಿಯು (*Objective*

morality) ವ್ಯಕ್ತಿಗೆ ವಿಶಿಷ್ಟವಾದದ್ದರ ಮೇಲೆ ಅವಲಂಬಿಸಿರಲಾರದು. ಅದು ಸಾರ್ವತ್ರಿಕವಾದ ಬುದ್ಧಿಯನ್ನವಲಂಬಿಸಿರಬೇಕು. (೪) ನೀತಿಗೆ ಸ್ವಯಂಬೆಲೆಯಿರಬೇಕೇ ಹೊರತು ಅದರ ಬೆಲೆಯನ್ನು ಮತ್ತೊಂದು ವಸ್ತುವಿನಲ್ಲಿ ಹುಡುಕಬಾರದು. ನಾವು ಸತ್ಕಾರ್ಯವನ್ನು ಸತ್ಕಾರ್ಯಕ್ಕಾಗಿಯೇ ಮಾಡಬೇಕು. ಫಲಾಪೇಕ್ಷೆಗಾಗಿ ಮಾಡಬಾರದು. 'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಗೀತಾ ವಾಕ್ಯವೂ ಇದೇ ತತ್ವವನ್ನು ಬೋಧಿಸುತ್ತದೆ. ಸದ್ಗುಣವೇ ಸದ್ಗುಣದ ಪ್ರತಿಫಲವೆಂದು ತಿಳಿದಿರಬೇಕು. ಯಾವನು ನ್ಯಾಯವಂತನೂ, ನೀತಿವಂತನೂ, ಸದ್ಗುಣಿಯು ಇರುವನೋ ಅವನೇ ಸುಖಿಯು. ಜೀವಿತದ ಸರ್ವ ವಿಧವಾದ ಸುಸ್ಥಿತಿಯೇ ಸೌಖ್ಯವು. ಇದೇ ಉತ್ತಮವಾದ ಧ್ಯೇಯವು.

ಪ್ಲೇಟೋನ ಪ್ರೇಮ ಅಥವಾ ಭಕ್ತಿ— ಮನುಷ್ಯನು ತನ್ನ ಅಪರಿಪೂರ್ಣತೆಯಿಂದ ಪರಿಪೂರ್ಣತೆಯನ್ನು ಹೊಂದುವ ಇಚ್ಛೆಯೇ ಪ್ರೇಮವಾಗಿದೆ. ಭಕ್ತಿಯ ಬಾಹ್ಯ ಲಕ್ಷಣವು ಸೌಂದರ್ಯವಾಗಿದೆ. ಪ್ರೇಮವು ಅನೇಕ ವಿಧವಾಗಿದೆ. ಸುಂದರ ವಸ್ತುವಿನ ಪ್ರೇಮ, ರತಿಪ್ರೇಮ, ಆತ್ಮಪ್ರೇಮ, ಕಲಾ ಪ್ರೇಮ ಮುಂತಾದ್ದು. ಪ್ರೇಮವು ಕ್ರಮದಿಂದ ಬೆಳೆಯುತ್ತ ಕೊನೆಗೆ ಧರ್ಮ ಕ್ಷೇತ್ರದಲ್ಲಿ ಸದ್ವಸ್ತುವಿನ ಪ್ರೇಮ ಲಾಭವಾಗಿ (*Love of the good*) ಮನುಷ್ಯನು ಅಮರತ್ವವನ್ನು ಹೊಂದುವನು. ಪ್ಲೇಟೋನ ಪ್ರೇಮವು ಪಾರಮಾರ್ಥಿಕವಿದ್ದು (*philosophical*) ಅಂತಿಮಧ್ಯೇಯವಾದ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳತಕ್ಕದ್ದಾಗಿರುವದು

ರಾಜನೀತಿ— ವ್ಯಕ್ತಿಯ ಸುಖಕ್ಕಿಂತಲೂ ಯಾವತ್ತು ಸಮಾಜದ ಸುಖವೇ ಧ್ಯೇಯವು. ನ್ಯಾಯ ಗುಣವು (*justice*) ಪರಿಪೂರ್ಣವಾದ ಸಮಾಜದಲ್ಲಿ ಮಾತ್ರವೇ ಕಂಡುಬರುತ್ತದೆ. ಮತ್ತು ಅದು ಜ್ಞಾನ, ಧೈರ್ಯ ಮತ್ತು ಮಿತವೃತ್ತಿಗಳನ್ನು ಸಫಲಗೊಳಿಸುವದು. ರಾಜ್ಯ ಪದ್ಧತಿಯು ನ್ಯಾಯವನ್ನು ಸಂಸ್ಥಾಪಿಸತಕ್ಕದ್ದು. ಆಗಿನ ಕಾಲದ ಅನಾಯಕವಾದ ಪ್ರಜಾರಾಜ್ಯದಿಂದ ಅವನಿಗೆ ತೃಪ್ತಿಯಾಗದ್ದರಿಂದ ಏಕಪ್ರಭುತ್ವವೇ ಒಳ್ಳೇದೆಂದು ತನ್ನ ರಿಪಬ್ಲಿಕ್ (*Republic*) ಗ್ರಂಥದಲ್ಲಿ ಪ್ರತಿಪಾದಿಸಿದನು. ಪ್ರಭುತ್ವದ ಮೊದಲನೇ ಕರ್ತವ್ಯವೆಂದರೆ ವಿದ್ಯಾ ಪ್ರಸಾರವು. ಬುದ್ಧಿವಂತರೇ ರಾಜ್ಯಭಾರ ನಡಿಸಲು ಸಮರ್ಥರು. ಉಳಿ

ದವರು ಕಾಯಿದೆಗಳಿಗೆ ಅಧೀನರಾಗಿರತಕ್ಕದ್ದು. ಸಮಾಜದಲ್ಲಿ ಬೇರೆ ಬೇರೆ ಜನರು ಬೇರೆ ಬೇರೆ ಕಾರ್ಯಗಳನ್ನು ಮಾಡಬೇಕು. (೧) ಬುದ್ಧಿವಂತರು ರಾಜ್ಯಸೂತ್ರ ನಡಿಸಬೇಕು. (೨) ಶೂರರು ರಾಜ್ಯವನ್ನು ಸಂರಕ್ಷಿಸಬೇಕು. (೩) ಸಾಮಾನ್ಯ ಜನರು ವ್ಯಾಪಾರ ಮಾಡಬೇಕು ಮತ್ತು ಸೇವಾ ವೃತ್ತಿಯನ್ನು ಅನುಸರಿಸಬೇಕು. ಈ ವಿಧವಾದ ಸಾಮಾಜಿಕ ವಿಭಾಗವನ್ನು ಪ್ಲೇಟೋನು ಆತ್ಮದ ಮೂರು ವಿಧವಾದ ಅಂಗಗಳ ಆಧಾರದ ಮೇಲೆ ನಿರ್ಮಿಸಿದನು. ಈ ವಿಭಾಗವು ಮನುವಿನ ಚಾತುರ್ವರ್ಣ್ಯವನ್ನು ಹೋಲುತ್ತಿದ್ದರೂ ಮನುವು ಪ್ರತಿಯೊಂದು ವೃತ್ತಿಯನ್ನು ಜಾತಿಗೆ ತಳಕು ಹಾಕಿ ಒಂದು ವರ್ಣದವನು ಮತ್ತೊಂದು ವರ್ಣದ ವೃತ್ತಿಯನ್ನು ಮಾಡಲು ಶಕ್ತನಿದ್ದರೂ ಅದನ್ನು ಮಾಡದಂತೆ ನಿರ್ಬಂಧಿಸಿದನು. ಆದರೆ ಪ್ಲೇಟೋನು ಶ್ರಮ ವಿಭಾಗದ (*Division of labour*) ತತ್ವದ ಮೇಲೆ ಈ ವಿಭಾಗವನ್ನು ಮಾಡಿದ್ದರಿಂದ ಒಬ್ಬನು ಮತ್ತೊಂದು ವರ್ಗದ ವೃತ್ತಿಯನ್ನು ಮಾಡಲು ಶಕ್ತನಿದ್ದರಿಂದ ಪ್ಲೇಟೋನ ಸಮಾಜ ವಿಭಜನೆಯು ಮನುವಿನಂತೆ ಸಂಕುಚಿತವಾಗಿರದೆ ಔದಾರ್ಯ ಗರ್ಭಿತವಾಗಿತ್ತು. ಪ್ಲೇಟೋನ ಅಭಿಪ್ರಾಯ ಪ್ರಕಾರ ಯಾವ ವ್ಯಕ್ತಿಯೂ ತನ್ನ ಉದ್ಯೋಗವನ್ನು ಸ್ವಯಂ ಹುಡುಕಿಕೊಳ್ಳಲಾರನು. ಸರಕಾರದ ಅಧಿಕಾರಿಗಳು ವ್ಯಕ್ತಿಯ ಸ್ಥಿತಿಯನ್ನು ಪರೀಕ್ಷಿಸಿ ಅವನ ಉದ್ಯೋಗವನ್ನು ನಿರ್ಧರಿಸುವರು, ಮತ್ತು ಮಕ್ಕಳ ಉತ್ಪತ್ತಿ ಮಾಡುವಾಗ ಪರವಾನಿಗೆಯನ್ನು ಕೊಡುವರು; ಮತ್ತು ಅಶಕ್ತ ಕೂಸುಗಳನ್ನು ನಾಶ ಮಾಡುವರು. ಕೂಸುಗಳು ಸರಕಾರದ ಸಂರಕ್ಷಣೆಯಲ್ಲಿಯೇ ಇರಬೇಕಲ್ಲದೆ ತಂದೆತಾಯಿಗಳಲ್ಲಿರಲಾರವು. ಪ್ರಜೆಗಳಿಗೆ ಏನೂ ಆಸ್ತಿ ಇರತಕ್ಕದ್ದಲ್ಲ. ಪತಿಪತಿಗಳ ನಡುವೆ ವಿವಾಹ ಬಂಧನವಿರದೆ ಸ್ವೇಚ್ಛಾ ವಿಹಾರವಿರಬೇಕು. ಹೀಗೆ ಪ್ಲೇಟೋನ ಸಮಾನತ್ವ ವಾದದ (*communism*) ಮೂಲ ಕರ್ತೃವಾಗಿದ್ದಾನೆ. ಈಗ ರಷಿಯಾದಲ್ಲಿ ಕೆಲ ರೂಪಾಂತರದಲ್ಲಿ ಈ ವಾದವು ಪ್ರಸಾರದಲ್ಲಿದೆ. ಪ್ಲೇಟೋನು ಮನುವಿನಂತೆ "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ತತ್ವವನ್ನೇ ಎತ್ತಿ ಹಿಡಿದಿದ್ದಾನೆ. ಆಗಿನ ಕಾಲದ ಸ್ತ್ರೀಯರು ಸುಧಾರಿಸಿದ್ದಿಲ್ಲವಾದ ಕಾರಣ ಸಾಮಾನ್ಯ ಜನರ ಅಭಿಪ್ರಾಯವನ್ನೇ ಪ್ಲೇಟೋನು ಪ್ರತಿಧ್ವನಿಸಿಗೊಳಿಸಿದ್ದಾನೆ. ಇದರಲ್ಲಿ ಪ್ಲೇಟೋನ ವೈಶಿಷ್ಟ್ಯವೇನೂ ಕಂಡು ಬರುವದಿಲ್ಲ. ಇವನ ಕಾಲದಲ್ಲಿ ಗುಲಾಮರನ್ನು ಮಾಡುವ ಪಂ

ಪಾತವು ವಿಶೇಷವಾಗಿತ್ತು. ಗುಲಾಮಗಿರಿಯನ್ನು ಇವನು ನಿಷೇಧಿಸಲಿಲ್ಲ. ಆದರೆ ಗುಲಾಮರನ್ನು ದಯೆಯಿಂದ ಕಾಣಬೇಕೆಂದು ಹೇಳಿದನು.

ಕಲಾಃ— ಕಲೆಯ ಬೆಲೆಯನ್ನು ಕಲೆಯಲ್ಲಿಯೇ ಕಾಣಬೇಕು. ನೈತಿಕ ದೃಷ್ಟಿಯಿಂದ ಅದರ ಬೆಲೆಯನ್ನು ನಿರ್ಣಯಿಸಬಾರದು. ಹೀಗೆಂದು ಆಧುನಿಕ ವಿಚಾರವು ಕಲೆಯ ವಿಷಯವಾಗಿರುವದು. ಆದರೆ ಪ್ಲೇಟೋನು ಕಲೆಯನ್ನು (*Art*) ನೀತಿ ಮತ್ತು ತತ್ವಜ್ಞಾನಗಳಿಗೆ ಅಧೀನವಾಗಿ ಗಣಿಸಿದನು. ಪ್ಲೇಟೋನು ತತ್ವಜ್ಞಾನಿಯಿದ್ದಂತೆಯೇ ದೊಡ್ಡ ಕವಿಯೂ ಆಗಿದ್ದನು. ಕವಿತೆಯು ನೈತಿಕವಿರದಿದ್ದರೆ ಅದು ಎಷ್ಟು ಸುಂದರವಾಗಿದ್ದರೂ ಅದಕ್ಕೆ ಬೆಲೆಯಿಲ್ಲವೆಂದು ಹೇಳಿದನು. ಹೀಗೆ ಪ್ಲೇಟೋನು ಕಲೆಯ ಕೊಲೆಯನ್ನೇ ಮಾಡಿದ್ದಾನೆ. ಕಲೆಯು ಒಂದು ವಸ್ತುವಿನ ಹೋಲಿಕೆಯನ್ನುಂಟುಮಾಡುವದೆಂದು ಪ್ಲೇಟೋನ ಹೇಳಿಕೆ. ಕಲೆಯು ಹೊಸ ಸೃಷ್ಟಿಯನ್ನುಂಟುಮಾಡಬಲ್ಲದೆಂಬದನ್ನು (*Creativeness of art*) ಪ್ಲೇಟೋನು ಒಪ್ಪಲಿಲ್ಲ. ಕಲೆಗಾರನು ವಸ್ತುವಿನ ಪ್ರತಿಚಿತ್ರವನ್ನಷ್ಟೇ ಹುಟ್ಟಿಸದೆ ತನ್ನ ಜಾತುರ್ಯದಿಂದ ಹೊಸ ಭಾವವು ಅಂಕುರವಾಗುವಂತೆ ಮಾಡುವನು. ಸ್ಫೂರ್ತಿಯಿಂದಲೇ ಅವನ ಕಲೆಯು ಒಡಮೂಡುವದು. ಅವನು ಒಂದು ವಸ್ತುವನ್ನು ಸಾಧಾರಣ ವಸ್ತುವಾಗಿ ತಿಳಿಯದೆ ಭಾವನೆಯ ಪ್ರಾದುರ್ಭಾವವೆಂದು ತಿಳಿಯುತ್ತಾನೆ. ಕಲೆಯ ಮತ್ತು ತತ್ವಜ್ಞಾನದ ಧ್ಯೇಯ ಒಂದೇ ಆಗಿದೆ. ಆ ಧ್ಯೇಯವು ಪರಿಪೂರ್ಣತೆಯನ್ನು ಅಥವಾ ಭಾವನೆಯನ್ನು (*Idea*) ಹೊಂದುವದಾಗಿದೆ.

ವಿದ್ಯಾಃ— ವಿದ್ಯೆಯ ಕಾರ್ಯವು ಅಶಾಶ್ವತ ವಸ್ತುವನ್ನು ಬಿಟ್ಟು ಶಾಶ್ವತ ವಸ್ತುವಿನ ಧ್ಯಾನಮಗ್ನನಾಗುವಂತೆ ಆತ್ಮವನ್ನು ಪರಿವರ್ತನೆಗೊಳಿಸತಕ್ಕದ್ದಾಗಿದೆ. ಸರಕಾರವೇ ಬಾಲಕರಿಗೆ ವಿದ್ಯೆ ಕಲಿಸಬೇಕು. ಆರು ವರ್ಷಗಳ ವರೆಗೆ ಒಳ್ಳೇ ಆಹಾರ ಕೊಟ್ಟು ಅವರನ್ನು ಧಾರ್ಮಿಕ ಸಮಾರಂಭಗಳಿಗೆ ಕರದೊಯ್ಯುತ್ತಿರಬೇಕು. ಆರು ವರ್ಷದಿಂದ ಬಾಲಕ ಬಾಲಿಕೆಯರ ವಿದ್ಯಾಭ್ಯಾಸವು ಪ್ರತ್ಯೇಕವಾಗಿರಬೇಕು. ಕುದುರೆ ಸವಾರಿ, ಬಿಲ್ಲು, ಗಾಯನ, ಅಂಗಸಾಧನೆ, ಮೊದಲಾದವು ಒತ್ತಾಯದ ಶಿಕ್ಷಣವಾಗಿ ಇಡತಕ್ಕದ್ದು. ಮೂವತ್ತು ವಯಸ್ಸಿನ ತರುವಾಯ ತತ್ವಾಭ್ಯಾಸವು ಪ್ರಾರಂಭವಾಗಬೇಕು. ಈ ವಿಷಯವು ಬುದ್ಧಿವಂತರಿಗೆ ಮಾತ್ರವೇ ಸಲ್ಲತಕ್ಕದ್ದು.

ಪ್ಲೇಟೋನು ತನ್ನ ಭಾವನಾಲೋಕದ ವಿಚಾರ ಪ್ರತಿಪಾದನೆಯಲ್ಲಿ ಡೆಮಾಕ್ರಿಟಸನ ಅನುಕರಣ ಮಾಡಿದನೆಂದು ಈ ಮೊದಲು ಹೇಳಿದ್ದಾಗಿದೆ. ಡೆಮಾಕ್ರಿಟಸನು ತನ್ನ ಭಾವನೆಗಳನ್ನು ದೃಷ್ಟ ವಸ್ತುಗಳಿಂದಲೇ ತೆಗೆದಿದ್ದಾನೆ. ಇವೇ ಅಣುಗಳು. ಇವಕ್ಕೂ ಪ್ಲೇಟೋನ ಭಾವನೆಗಳಿಗೂ ಏನೂ ಸಾಮ್ಯವಿಲ್ಲ. ಅಣುಗಳು ದೃಶ್ಯ ಸೃಷ್ಟಿಯ ನಿಜವಸ್ತುಗಳು. ಪ್ಲೇಟೋನ ಭಾವನೆಗಳು ಪರಲೋಕದ ನಿಜವಸ್ತುಗಳು. ಆದರೆ ಈರ್ವರೂ ಪ್ರೊಟ್ಯಾಗೋರಾಸನ ಪ್ರತ್ಯಕ್ಷ ಜ್ಞಾನದ ಸಿದ್ಧಾಂತವನ್ನು ಖಂಡಿಸಿ ಬುದ್ಧಿ ಪ್ರಾಮಾಣ್ಯವಾದವನ್ನು (*Rationalism*) ಸ್ಥಾಪಿಸಿದ್ದಾರೆ. ಈರ್ವರೂ ಪ್ರತ್ಯಕ್ಷ ಜ್ಞಾನಕ್ಕೆ ನಿಯಮಿತ ಸತ್ಯವನ್ನೂ ಬುದ್ಧಿಗೆ ಪೂರ್ಣ ಸತ್ಯವನ್ನೂ ಕಲ್ಪಿಸಿದ್ದಾರೆ. ಈರ್ವರೂ ಜಗಜ್ಜೀವವಾದಿಗಳಾದ (*Hylozoist*) ಗ್ರೀಕರ ದೈವೃತವನ್ನು ಹೋಗಲಾಡಿಸಲು ಯತ್ನಿಸಿದ್ದಾರೆ. ಆದರೆ ಡೆಮಾಕ್ರಿಟಸನು ಭೌತಿಕವಾದಿಯು (*Materialist*). ಪ್ಲೇಟೋನು ಮಾಯಾವಾದಿಯು ಅಥವಾ ಪಾರಲೌಕಿಕವಾದಿಯು (*Idealist*).

ಬಸವರಾಜದೇವರಗಳೆಯೂ, ಬಸವನ ಚರಿತ್ರೆಯೂ.

(ಬಸವನ ಬಳಗದಿಂದ)

ಲೇಖಕಃ— ಎಸ್. ಎಸ್. ಮಾಳವಾಡ ಬಿ. ಏ. ಆನರ್ಸ.

ಚಾರಿತ್ರ ದೃಷ್ಟಿಯಿಂದ ಬಸವರಾಜದೇವ ರಗಳೆಯು ಮಹತ್ವದ್ದಾಗಿದೆ. ಆದುದರಿಂದ ಅದರಲ್ಲಿ ನಿರೂಪಿತವಾದ ಬಸವನ ಚರಿತ್ರವನ್ನು ಇನ್ನುಳಿದ ಪುರಾಣಗ್ರಂಥಗಳೊಡನೆ ತುಲನೆಮಾಡಿ ನೋಡುವದು ಅವಶ್ಯವಾಗಿದೆ. ಅದಕ್ಕನುಸರಿಸಿ ಈಗ ಭೀಮಕವಿ (೧೩೬೯) ಯ ಬಸವ ಪುರಾಣದ ಕಥಾಸಾರಾಂಶವನ್ನು ಇಲ್ಲಿ ಸಂಕ್ಷೇಪವಾಗಿ ನಿರೂಪಿಸಬೇಕಾಗಿದೆ.

ಬಸವಪುರಾಣ ಕಥಾಸಾರಾಂಶಃ— ಭೂಲೋಕದಲ್ಲಿ ಶೈವಾಚಾರವು ನಷ್ಟವಾಗಿ ನಾಸ್ತಿಕವಾದವು ಪ್ರಬಲವಾಯಿತು. ಇದನ್ನು ನಾರದನ ಮುಖದಿಂದ ಕೇಳಿದ ಪರಮೇಶ್ವರನು ಶೈವಮತದ ಜೀರ್ಣೋದ್ಧಾರಕ್ಕಾಗಿ ಭೂಲೋಕದಲ್ಲಿ ಜನ್ಮವೆತ್ತುವಂತೆ ನಂದಿಗೆ ಆಜ್ಞಾಪಿಸಿದನು. (೧) ಬಾಗೇವಾಡಿ ಗ್ರಾಮದಲ್ಲಿ 'ಪರಮಶೈವಾಂಬುರುಹ ತರಣಿ' ಯಾದ ಮಾದಿರಾಜನಿದ್ದನು. ಆತನೂ ಆತನ ಪತ್ನಿ ಮಾದಲಾಂಬಿಕೆಯೂ ಸಂತಾನಾಪೇಕ್ಷೆಯಿಂದ ನಂದಿ ವ್ರತವನ್ನು ಮಾಡುತ್ತಿದ್ದರು. ಅವರಿಗೆ ಪ್ರಸನ್ನನಾದ ನಂದಿಯು ಅವರ ಗರ್ಭದಲ್ಲಿ ಜನ್ಮವನ್ನು ತಳೆದನು. ಇದರಿಂದ ಆತನಿಗೆ ತನ್ನ ಉದ್ದಿಶ್ಯ ಕಾರ್ಯವನ್ನು ನೆರವೇರಿಸಲಿಕ್ಕೂ ಅಪ್ಪದ ದೊರೆಯಿತು. ಜನ್ಮವಾದ ಕೂಡಲೆ ಕೂಸಿಗೆ ಸಂಗಮನಾಥನಿಂದ ಲಿಂಗಧಾರಣೆ ನಡೆಯಿತು. ಬಾಲಕನು ಎಂಟು ವರುಷದವನಾದ ಕೂಡಲೆ ತಂದೆಯು ಪದ್ಧತಿಯಂತೆ ಆತನಿಗೆ ಉಪನಯನ ಸಂಸ್ಕಾರವನ್ನು ಮೊದಲು ಯೋಚಿಸಿದನು. ತಂದೆಯ ಈ ಏರ್ಪಾಟನ್ನು ಒಪ್ಪದೆ ಬಸವನು ಆತನನ್ನು ಪ್ರತಿಭಟಿಸುತ್ತಾನೆ. ಜನಿಸಿದ ಕೂಡಲೇ ಸಂಗಮನಾಥನಿಂದ ಲಿಂಗದೀಕ್ಷೆ ಪಡೆದ ತನಗೆ ಇನ್ನುಳಿದ ಸಂಸ್ಕಾರಗಳು ಬೇಕಿಲ್ಲವೆಂದು ವಾದಿಸಿ (೨) ತನ್ನ ತಂದೆತಾಯಿಗಳನ್ನು ತೊರೆದು ಬಾಗೇವಾಡಿಯಿಂದ ಹೊರಟು ಹೋಗುತ್ತಾನೆ. ಜೊತೆಯಲ್ಲಿ ಸಹೋದರಿ ನಾಗಲಾಂಬಿಕೆಯನ್ನೂ ಕರೆದುಕೊಂಡು ಸಂಗಮೇಶ್ವರ ಕ್ಷೇತ್ರಕ್ಕೆ ಹೋಗುತ್ತಾನೆ. ಬಸವನ ಈ ವೀರಶೈವ ಭಕ್ತಿಯನ್ನು ಕಂಡು ಬಲದೇವ ಮಂತ್ರಿಯು ಹರುಷಿತನಾಗಿ

ಬಸವನು ಅಲೌಕಿಕ ಪುರುಷನೆಂಬದನ್ನು ಕಂಡುಕೊಂಡು ಅತನಿಗೆ ತನ್ನ ಮಗಳಾದ ಗಂಗಾಬಿಕೆಯನ್ನು ಕೊಟ್ಟು ವಿವಾಹವನ್ನು ಜರಗಿಸುತ್ತಾನೆ. ಬಸವನು ತನ್ನ ಪತ್ನಿ, ಸಹೋದರಿಯರೊಡಗೂಡಿ ಸಂಗಮೇಶ್ವರನಲ್ಲಿ ಉಪದೇಶ ಪಡೆಯುತ್ತಾನೆ. (೩) ಕೆಲವು ದಿವಸಗಳು ಕಳೆದ ನಂತರ ಬಸವನ ಮಾವನಾದ ಬಲದೇವ ಮಂತ್ರಿಯು ಸತ್ತುಹೋಗಲು ಅತನ 'ಬಲುನಿಯೋಗವನೆಲ್ಲವಂ' ಪಾಲಿಸಲಿಕ್ಕೆ ಬಸವನೇ ಸಮರ್ಥನೆಂಬದನ್ನರಿತು ಬಿಜ್ಜಳನು ಅತನನ್ನು ಬರಮಾಡಿಕೊಂಡು ಮಂತ್ರಿಪದದ ಭಾರವನ್ನು ಅವನಿಗೆ ಒಪ್ಪಿಸುತ್ತಾನೆ. (೪) ಬಸವನು ಓಲಗದಲ್ಲಿರುವಾಗ ಒಂದು ಅಲೌಕಿಕ ಘಟನೆ ನಡೆಯುತ್ತದೆ. ಎಲ್ಲರೂ ಆಸ್ಥಾನದಲ್ಲಿ ಕೂತಿರುವಾಗ ಆಕಾಶದತ್ತಣಿಂ ಓಲೆಯೊಂದು ಬಂದು ಸಭಾಮಧ್ಯದಲ್ಲಿ ಬೀಳುತ್ತದೆ. ಆ ಲಿಖಿತವನ್ನು ಓದಲು ಇನ್ನಾರಿಗೂ ಸಾಧ್ಯವಾಗದೆ ಬಸವನೊಬ್ಬನು ಮಾತ್ರ ಅದನ್ನು ಓದುತ್ತಾನೆ. ಆ ಲಿಖಿತದಿಂದ ಬಿಜ್ಜಳನಿಗೆ ಅಪಾರವಾದ ಧಾಂಡಾರವು ದೊರೆಯುತ್ತದೆ. ಈ ಘಟನೆಯು ನಡೆದುದರಿಂದ ಬಸವನಲ್ಲಿ ಬಿಜ್ಜಳನ ಶ್ರದ್ಧೆ ಹೆಚ್ಚು. ಅತನನ್ನು ಅಲೌಕಿಕ ಪುರುಷನೆಂಬದಾಗಿ ಗ್ರಹಿಕೆಯಾಗುತ್ತದೆ. ಬಸವನು ತನ್ನ ವೀರಶೈವ ಆಚಾರದಲ್ಲಿ ವಿಶೇಷ ಮಗ್ನವಾಗುತ್ತಾನೆ. ಅತನ ಸಹೋದರಿ ನಾಗಲಾಂಬಿಕೆಯ ಗರ್ಭದಲ್ಲಿ ಈಶ್ವರನ ಚಿತ್ಕಳಾಂಶವು ಚನ್ನಬಸವನಾಗಿ ಹುಟ್ಟುತ್ತದೆ. ಬಸವಣ್ಣನವರ ಘನತೆಯು ಏಳ್ದೆಸೆಗಳಲ್ಲಿಯೂ ಪಸರಿಸುತ್ತದೆ. ಅದನ್ನು ಕೇಳಿದ ಶ್ರೀ ಅಲ್ಲಮಪ್ರಭುವು ಬಸವನನ್ನು ಕಾಣಲೆಂದು ಸಿದ್ಧರಾಮನೊಡನೆ ಕಲ್ಯಾಣಕ್ಕೆ ಬರುತ್ತಾನೆ. ಬಸವನು ಅತನನ್ನು ಸತ್ಕರಿಸಿ ಪೂಜಿಸುತ್ತಾನೆ. ಬಸವನು ಕೆಲವು ಅಲೌಕಿಕ ಕಾರ್ಯ (ಪವಾಡ) ಗಳನ್ನು ಎಸಗುತ್ತಾನೆ. ದಿನದಿನಕ್ಕೆ ಜಂಗಮರಲ್ಲಿ ಅತನ ಭಕ್ತಿ, ಆದರಗಳು ಹೆಚ್ಚುತ್ತವೆ. ಈ ಸಂಧಿಯ ದುರುಪಯೋಗ ಮಾಡಿಕೊಳ್ಳುವ ಅನೇಕ ಬಗೆಯ ಜಂಗಮರು ಬಸವನ ಆಶ್ರಯವನ್ನು ಪಡೆದು ಅತಿಸಂವ ಪುರಸ್ಕಾರವನ್ನು ಹೊಂದುತ್ತಾರೆ. ಆಸ್ಥಾನದಲ್ಲಿ ಬಸವನ ಘನತೆಯು ಹೆಚ್ಚುತ್ತಿರುವುದನ್ನು ಕಂಡು ಇನ್ನಿತರರು ಅಸೂಯೆ ಪಟ್ಟುಕೊಳ್ಳುತ್ತಾರೆ. ರಾಜ್ಯದ ಭಂಡಾರವನ್ನು ಬಸವನು ಜಂಗಮರಿಗಾಗಿ ಸೂರೆಗೈಯ್ಯುವನೆಂಬದಾಗಿ ಬಿಜ್ಜಳನ ಕಡೆಗೆ ದೂರು ಒಯ್ಯುತ್ತಾರೆ. ಬಸವನು ತನ್ನ ಅಲೌಕಿಕ ಶಕ್ತಿಯಿಂದ ಆ ಅಪವಾದವನ್ನು ಅಲ್ಲಗಳೆಯುತ್ತಾನೆ. ಬಸವನ ಸುತ್ತ ಜಂಗಮ ಸಂದೋಹ ದಿನೇ ದಿನೇ ಹೆಚ್ಚುತ್ತದೆ. ನಾಡು

ಪರನಾಡುಗಳಿಂದ ಎಷ್ಟೋ ಜನರು ಬಂದು ಅತನನ್ನು ಪೂಜಿಸುತ್ತಾರೆ. ಬಸವನ ಬಳಿಯಲ್ಲಿದ್ದ ಜನರಲ್ಲಿ ಎಷ್ಟೋ ಜನರು ಮಹಿಮಾಶಾಲಿಗಳಾಗಿದ್ದರು. ಬಸವನ ಪಕ್ಷದ ಜನರಿಗೂ ಬಿಜ್ಜಳನಿಗೂ ವಿರೋಧವು ಉಂಟಾಗುತ್ತದೆ. ತನ್ನ ಮಂತ್ರಿಯಿಂದ ತನ್ನ ತೇಜೋಭಂಗವಾಗುವ ಸಂದರ್ಭಗಳು ಬಿಜ್ಜಳನಿಗೆ ಬರುತ್ತವೆ. ಮಡಿವಾಳ ಮಾಚಿದೇವನ ಮೂಲಕ ಬಿಜ್ಜಳನ ರಾಜ್ಯಮದದ ಸೊಕ್ಕು ಅಡಗುತ್ತದೆ. ಇಂತಹ ಇನ್ನೂ ಕೆಲವು ಘಟನೆಗಳು ನಡೆಯುತ್ತವೆ. ಬಸವನ ಮಹಿಮಾ ವಿಶೇಷದಿಂದ ವೀರಶೈವ ಮತವು ಪ್ರಬಲಿಸುತ್ತದೆ. ಅವರ ಫಲವಾಗಿಯೇ ಜೈನ, ಬ್ರಾಹ್ಮಣ ಧರ್ಮಗಳು ಕಳೆಗುಂದುತ್ತವೆ. ಆದ್ದರಿಂದ ಪರವಾದಿಗಳು ಬಿಜ್ಜಳನಲ್ಲಿಗೆ ತಮ್ಮ ದೂರನ್ನು ಒಯ್ದು ಬಸವನ ವಿಷಯವಾಗಿ ಅತನ ಮನಸ್ಸನ್ನು ಕಲುಷಿತಮಾಡುತ್ತಾರೆ. ಬಸವನು ಬಿಜ್ಜಳನೆದುರು ಶೈವ ಭಕ್ತರ ಘನತೆಯನ್ನು ಪ್ರದರ್ಶಿಸುತ್ತಾನೆ. ಮುಂದೆ ಶಿವಭಕ್ತರು ಬ್ರಾಹ್ಮಣನಾದ ಮಧುವಯ್ಯ ಹೊಲೆಯರ ಹರಳಯ್ಯ ಇವರಲ್ಲಿ ಶರೀರ ಸಂಬಂಧವನ್ನು ಉಂಟುಮಾಡುತ್ತಾರೆ. ಆಗ ರೋಷದಿಂದ ಬಿಜ್ಜಳನು ಅವರ ಕಣ್ಣುಗಳನ್ನು ಕೀಳಿಸುತ್ತಾನೆ. ಈ ಶೈವ ದ್ರೋಹಕ್ಕಾಗಿ ಜಗದೇವನು ಬಸವನ ಆಜ್ಞೆಯನ್ನು ಅನುಸರಿಸಿ ಬಿಜ್ಜಳನ ಕೊಲೆಮಾಡುತ್ತಾನೆ. (೫) ಆಗ ಬಸವನು ಸಂಗಮೇಶ್ವರನಲ್ಲಿಗೆ ಹೋಗಿ ಲಿಂಗದಲ್ಲಿ ಐಕ್ಯವಾಗುತ್ತಾನೆ.

ಬಸವನ ವಿಷಯವಾಗಿರುವ ಗ್ರಂಥಗಳಲ್ಲಿ ಸಿಂಗಿರಾಜ ಪುರಾಣವು ಕೆಲವೊಂದು ದೃಷ್ಟಿಯಿಂದ ಮಹತ್ವದ್ದಾಗಿದೆ. ಯಾಕೆಂದರೆ ಇದರಲ್ಲಿ ಬಸವಪುರಾಣಕ್ಕೆ ವ್ಯತಿರಿಕ್ತವಾದ ಸಂಗತಿಗಳಿವೆ. ಮೇಲೆ ನಿರ್ದೇಶಿಸಿದ ಬಸವಪುರಾಣದ ಘಟನೆಗಳಿಗೆ ಅನುಕ್ರಮವಾಗಿ ೧, ೨, ೩, ೪, ೫, ೬ ಹೀಗೆ ನಂಬರು ಹಾಕಿದೆಯಷ್ಟೇ. ಆ ನಂಬರಿನ ಘಟನೆಗಳಿಗೆ ಸಿಂಗಿರಾಜ ಪುರಾಣದಲ್ಲಿ ವ್ಯತಿರಿಕ್ತವಾಗಿರುವ ಮಾತುಗಳಿಗೆ ಅವೇ ನಂಬರುಗಳನ್ನು ಹಾಕಿ ಎಂ. ಆರ್. ಶ್ರೀಯವರ ಗ್ರಂಥವನ್ನು ಅನುಸರಿಸಿ ಕೆಳಗೆ ನಿರ್ದೇಶಿಸುತ್ತೇನೆ.

೧ ಬಸವನ ಅವತಾರದ ಕಾರಣವು ಹೀಗಿದೆ:— ಕಾರಣಾಂತರದಿಂದ ಭೂಮಿಗೆ ಬಂದಿದ್ದ ವೃಷಭೇಶ್ವರನು ಲಿಂಗವನ್ನು ಪಟ್ಟದಕಲ್ಲಿನ ಅನಿಮಿಷಯ್ಯನಿಗೆ ಕೊಡುತ್ತಾನೆ. ಲಿಂಗವಿಲ್ಲದ ವೃಷಭೇಶ್ವರನನ್ನು ದ್ವಾರಪಾಲಕರು ಕೈಲಾಸದಲ್ಲಿ ತಡೆಯುವರು. ಈ ವಿಚಾರವು ಈಶ್ವರನಿಗೆ ಮುಟ್ಟುವದು. ಲಿಂಗ ಪಡೆಯಲು ಭೂಮಿಯಲ್ಲಿ ಅವತರಿಸೆಂದು ವೃಷ

ಭೇಶ್ವರನಿಗೂ ಬಿಜ್ಜಳ ಕರ್ಮದೇವರಾಗಿ ಹುಟ್ಟಿರೆಂದು ದ್ವಾರಪಾಲಕರಿಗೂ ಈಶ್ವರನು ಆಜ್ಞೆ ಮಾಡುತ್ತಾನೆ.

೨ ....

೩ ಬಸವಣ್ಣನವರಿಗೆ ಉಪದೇಶ ಕೊಟ್ಟವರು ಜಾತವೇದಿಮುನಿಗಳು. ಸಂಗಮೇಶ್ವರನಲ್ಲ.

೪ ಲಿಖಿತವನ್ನು ಓದುವದಕ್ಕೆ ಮೊದಲು ಬಸವನು ಸಾಧಾರಣ ಕರಣಿಕನಾಗಿದ್ದನು. ಓಲೆಯನ್ನು ಓದಿದ ಮೇಲೆಯೇ ಮಂತ್ರಿಪದವನ್ನು ಪಡೆದನು.

೫ ಸಿಂಗಿರಾಜ ಪುರಾಣದಲ್ಲಿ ಬಿಜ್ಜಳನ ಕೊಲೆಯ ವಿಚಾರವಿಲ್ಲ. ಬಿಜ್ಜಳನು ಬಸವಣ್ಣನವರ ಅಪ್ಪಣೆಯಂತೆ ಚನ್ನಬಸವೇಶನನ್ನು ಮಂತ್ರಿಯನ್ನು ಮಾಡಿಕೊಂಡನು.

ಅರ್ಥಾತ್ ಜಗದೇವೋಪಾಖ್ಯಾನವು ಸಿಂಗಿರಾಜ ಪುರಾಣದಲ್ಲಿ ಇಲ್ಲ.

ಮೇಲೆ ನಿರ್ದೇಶಿಸಿದ ಎರಡೂ ಪುರಾಣಗಳ ಹೇಳಿಕೆಗಳಿಗೆ ಭಿನ್ನವಾದ ಹೇಳಿಕೆಗಳು ಬಸವದೇವರಾಜ ರಗಳೆಯಲ್ಲಿ ಇವೆ. ಬಸವನ ತರ್ಕಶುದ್ಧ ವಿಚಾರಬದ್ಧ ಚರಿತ್ರೆಯನ್ನು ಕಂಡುಕೊಳ್ಳುವದಕ್ಕೆ ಅವು ಹೆಚ್ಚಾಗಿ ಸಹಾಯಕಾರಿಯಾಗುತ್ತವೆ. ಆದುದರಿಂದ ಆ ಹೇಳಿಕೆಗಳನ್ನು ಇಲ್ಲಿ ನಿರೂಪಿಸುವದು ಅವಶ್ಯ. ಮೇಲಿನಂತೆ ಅನುಕ್ರಮ ನಂಬರುಗಳನ್ನೇ ಹಾಕಿ ಬಸವದೇವರಾಜ ರಗಳೆಯ ವ್ಯತ್ಯಾಸಗಳನ್ನು ಕೆಳಗೆ ಕೊಡುತ್ತೇನೆ.

೧ ವೃಷಭಮುಖನು ಷಣ್ಮುಖನಿಗೆ ಪ್ರಸಾದವನ್ನು ಕೊಡದೆ ಕೊಟ್ಟಿನೆಂದು ಸುಳ್ಳು ಹೇಳುತ್ತಾನೆ. ಹೀಗೆ ಸುಳ್ಳು ಹೇಳಿದ್ದಕ್ಕಾಗಿ ಈಶ್ವರನು ಸಿಟ್ಟಾಗಿ ಭೂಮಿಯಲ್ಲಿ ಅವತರಿಸೆಂದು ವೃಷಭಮುಖನಿಗೆ ಆಜ್ಞಾಪಿಸುತ್ತಾನೆ.

೨ ಉಪನಯನದ ಸಲುವಾಗಿ ಬಸವನು ತಂದೆಯನ್ನು ಪ್ರತಿಭಟಿಸಲಿಲ್ಲ. ಯಾಕೆಂದರೆ ಚಿಕ್ಕಂದಿನಲ್ಲಿಯೇ ತಂದೆತಾಯಿಗಳು ತೀರಿ ಹೋಗಿದ್ದರು. ಬಸವನಿಗೆ ಉಪನಯನವಾಗಿ ಹೋಗಿತ್ತು. ಮುಂದೆ ಕರ್ಮಠತೆಯಂತಿರ್ದ ಜನ್ನಿವಾರವು ಅನವಶ್ಯಕವೆಂದು ಕಂಡುಕೊಂಡು ಅದನ್ನು ಕಿತ್ತೊಗೆದರು.

೩ ಬಸವನಿಗೆ ಉಪದೇಶ ಕೊಟ್ಟವರು ಈಶಾನ್ಯ ಗುರುಗಳು.

೪ ಬಿಜ್ಜಳನ ಮಂತ್ರಿ ಬಲದೇವನಲ್ಲ. ಸಿದ್ಧರಸನು. ಬಸವನು ಮೊದಲು ಸಿದ್ಧರಸನಲ್ಲಿ ಸಾಧಾರಣ ಕರಣಿಕನಾಗಿದ್ದನು. ಕುಲಗೋತ್ರಗಳು ಒಂದಾಗಿರಲು ಸಿದ್ಧರಸನು ತನ್ನ ಮಗಳು ಗಂಗಾಂಬಿಕೆಯನ್ನು ಕೊಟ್ಟು ವಿವಾಹ ಮಾಡಿದನು. ಹಾಗೂ ಬಸವನನ್ನು ತನ್ನ ಮನೆಯಲ್ಲಿ ಇಟ್ಟುಕೊಂಡನು. ಸಿದ್ಧರಸನು ಕಾಲವಾದ ಮೇಲೆ ಬಸವನು ಮಂತ್ರಿಯಾದನು. ಅರ್ಥಾತ್ ಓಲೆಯ ಅಲೌಕಿಕ ಘಟನೆಯ ಪ್ರಸ್ತಾಪವು ಬಸವದೇವರಾಜ ರಗಳೆಯಲ್ಲಿಲ್ಲ.

೫ ಜಗದೇವೋಪಾಖ್ಯಾನವು ಬಸವದೇವರಾಜ ರಗಳೆಯಲ್ಲಿಲ್ಲ. ಪ್ರೊ. ಪೆಂಕಣ್ಣಯ್ಯನವರು ಪ್ರಕಟಿಸಿದ ಪುಸ್ತಕದಲ್ಲಿ ಬಿಜ್ಜಳನ ಕೊಲೆಯ ಪ್ರಸ್ತಾಪವಿಲ್ಲ. ಆದರೆ ಆ ಪುಸ್ತಕವು ಸಂಪೂರ್ಣವಾಗಿ ಪ್ರಕಟವಾಗಿಲ್ಲ. ೧೩ನೆಯ ಸ್ಥಲವು ಅರ್ಧಮಾತ್ರ ಮುದ್ರಿತವಾಗಿದೆ. ಆ ಸ್ಥಲದ ಇನ್ನುಳಿದ ಕೆಲಭಾಗವು ರಾ॥ ಸಾ॥ ಹಳಕಟ್ಟಿಯವರಿಂದ ಶಿವಾನುಭವದಲ್ಲಿ ಪ್ರಕಟಿಸಲ್ಪಟ್ಟಿದೆ (೧೯೩೦ ಆಗಷ್ಟ ಸಂಚಿಕೆ). ಅದರಲ್ಲಿ "ಶಿವದ್ರೋಹಮುಂ ಗೈದ ಬಿಜ್ಜಳನ ಕೊಲಿಸುತಂ" ಎಂದಿದೆ.

ಮೇಲೆ ಹೇಳಿದ ಐದು ಮಹತ್ವದ ವ್ಯತ್ಯಾಸಗಳಲ್ಲಿ ೧ನೆಯದು ಪೌರಾಣಿಕವಾದುದರಿಂದ ಚರಿತ್ರ ದೃಷ್ಟಿಯಿಂದ ನಮಗೆ ಆದರ ಮಹತ್ವವಿಲ್ಲ. ೩ನೆಯದರಲ್ಲಿ ಕೇವಲ ಹೆಸರಿನ ವ್ಯತ್ಯಾಸ. ಆದುದರಿಂದ ಇನ್ನುಳಿದ ಮೂರು ವ್ಯತ್ಯಾಸಗಳನ್ನು ಮಾತ್ರ ನಾವು ಗಮನಿಸಬಹುದು. ಬಸವನ ಚರಿತ್ರದ ದೃಷ್ಟಿಯಿಂದ ಅವು ಅರ್ಥವತ್ತಾಗಿವೆ. ಹುರಳುಳ್ಳ ಆ ವ್ಯತ್ಯಾಸಗಳನ್ನೀಗ ಚರ್ಚಿಸುವ.

ಉಪನಯನಃ— ಭೀಮ ಕವಿಯ ಅಭಿಪ್ರಾಯದ ಪ್ರಕಾರ ಬಸವನು ತನ್ನ ಎಂಟನೆಯ ವರ್ಷಕ್ಕೇ ಜ್ಞಾನವನ್ನು ಪಡೆದು ಉಪನಯನ ಸಂಸ್ಕಾರದಲ್ಲಿ ಹುರಳಿಲ್ಲವೆಂದರಿತು ತನ್ನ ತಂದೆಯೊಡನೆ ವಾದಿಸಿದನು. ವೀರಶೈವ ದೀಕ್ಷೆಯನ್ನು ಪಡೆದುಕೊಂಡ ತನಗೆ ಅನ್ಯ ಕರ್ಮಗಳು ಅನಾವಶ್ಯಕವೆಂದು ಹೇಳಿ ತಂದೆಯೊಡನೆ ಪ್ರತಿಭಟಿಸಿ ಹೊರಟು ಹೋದನು. ಹಾಗೆಂದ ಮೇಲೆ ಎಂಟು ವರುಷದ ಬಾಲಕನಿಗೆ ಇಷ್ಟು ಜ್ಞಾನವೂ ಧೈರ್ಯವೂ ಬಂದಿದ್ದವೆಂದ ಹಾಗಾಯಿತು. ಇದು ಸರ್ವ ಸಾಮಾನ್ಯ ಜನರ ದೃಷ್ಟಿಯಲ್ಲಿ ಅಸಂಭಾವ್ಯವೇ ಸರಿ. ಎಂಟನೆಯ ವರ್ಷಕ್ಕೆ ಸರಿಯಾಗಿ ವಸ್ತ್ರವನ್ನೂ ಧರಿ

ಕೊಳ್ಳದ ಬಾಲಕರನ್ನು ನಾವು ನೋಡುತ್ತೇವೆ ಆದರೆ ಜಗತ್ತಿನ ವಸ್ತು ದ್ವಿಭೂತಿಗಳನ್ನು ಇದೇ ಅಳತೆಗೋಲಿನಿಂದ ಅಳೆಯುವದು ಸರಿಯಾಗಲಾರದು. ಸರ್ವ ಸಾಮಾನ್ಯವಲ್ಲದ ದಿವ್ಯಶಕ್ತಿಯು ಅಂತಹ ವ್ಯಕ್ತಿಗಳಲ್ಲಿ ಇರುತ್ತದೆ. ಆ ದೃಷ್ಟಿಯಿಂದ ನಾವು ಬಸವನ ಚರಿತೆಯನ್ನು ಅಸಂಭಾವ್ಯವೆಂದು ತಿರಸ್ಕರಿಸುವ ಸಾಹಸ ಮಾಡಲಾಗದು. ಆದರೆ ವಿವಿಧವಾದ ಹೇಳಿಕೆಗಳಲ್ಲಿ ಹೆಚ್ಚು ಸಮಂಜಸವಾದದ್ದನ್ನು ಹೆಚ್ಚು ಬಲವತ್ತರವಾದುದೆಂದು ತೋರುವದನ್ನು ಆರಿಸುವದು ಮಾತ್ರ ಸರಿಯಾಗುವದು. ಹಾಗೆ ಸರಿಯೆಂದು ತೋರುವ ಅಭಿಪ್ರಾಯಕ್ಕೆ ಬೇರೆ ಸಾಧನಗಳ ಪುಷ್ಟಿ ದೊರೆತರಂತೂ ಆ ಅಭಿಪ್ರಾಯವನ್ನು ಗ್ರಾಹ್ಯವೆಂದೇ ಭಾವಿಸಬೇಕಾಗುವದು. ಆದುದರಿಂದ ಬಸವರಾಜ ರಗಳೆಯಲ್ಲಿ ಉಪನಯನದ ವಿಷಯವಾಗಿ ಹೇಳಿದ ಮಾತುಗಳು ಹೆಚ್ಚು ಸತ್ಯವಾದವು ಎಂದು ನಾವು ನಂಬಬೇಕಾಗುತ್ತದೆ. ಬಸವರಾಜ ರಗಳೆಯಲ್ಲಿ ಎರಡನೆಯ ಸ್ಥಲ. ೪ನೆಯ ಸಾಲು

ಪರಮ ವೈರಾಗ್ಯಯುಕ್ತಂ ಶಿವಲಿಂಗಾರ್ಚನಾಯತ್ತಚಿತ್ತಂ
ಕರ್ಮಲತೆಯಂತಿರ್ದ ಜನ್ಮವಾರಮಂ ಕಳೆದು ಬಿಸುಟಿ
ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪ
ರಿದು ಬಿಸುಟು ..... ಬಾಗೇವಾಡಿಯಿಂ ಪೊರಮಟ್ಟು

ಎಂದು ಹೇಳಿದೆ. ಇದರಿಂದ ಬಸವನಿಗೆ ಉಪನಯನವಾಗಿತ್ತು. ಬುದ್ಧಿಯು ಬೆಳೆದ ಮೇಲೆ ಅದು ಅರ್ಥ ರಹಿತವೆಂದು ತೋರಿತು. ನಿಜವಾದ ಜ್ಞಾನದ ಹಂಬಲದಲ್ಲಿರುವಾಗ ಬಾಹ್ಯ ಆಚಾರಗಳು ಅನವಶ್ಯಕವೆಂದು ಅನಿಸುವದು. ಸ್ವಾಭಾವಿಕ, ಸಮಂಜಸ. ವಿಚಾರ ಪ್ರಧಾನರು ಈ ಮಾತನ್ನು ಅಲ್ಲಗಳೆಯಲಾರರು. ತನ್ನ ಸುತ್ತಲೂ ಜೇಡನ ಬಲೆಯಂತೆ ಹಬ್ಬಿಕೊಂಡಿದ್ದ ಕರ್ಮಕಾಂಡದ ಅರ್ಥವಿಹೀನತೆಯನ್ನು ಕಂಡು ಬಸವನು ಬೇಜಾರುಪಟ್ಟುಕೊಂಡಿರಬೇಕು. ಅಂತೆಯೇ ಕರ್ಮಲತೆಯಂತಿರ್ದ ಜನ್ಮವಾರವನ್ನು ಬಿಸುಟಿರಬೇಕು. ಬಸವದೇವರಾಜ ರಗಳೆಯ ಈ ಹೇಳಿಕೆಯು ಸಯುಕ್ತಿಕವಾಗಿದೆ. ಆದುದರಿಂದ ಈ ಮಾತನ್ನು ನಾವು ಒಪ್ಪಿ ಬಸವನಿಗೆ ಉಪನಯನವಾಗಿತ್ತೆಂದು ಗ್ರಹಿಸಬೇಕಾಗುವದು. ಈ ಗ್ರಹಿಕೆಯನ್ನು ಸಮರ್ಥಿಸುವದಕ್ಕೆ ಅನುಕೂಲವಾಗುವಂತೆ ಬಸವನ ವಚನಗಳ ಆಧಾರ ದೊರೆಯುತ್ತದೆ. ಬುದ್ಧನಂತೆ ಬಸವನಾದರೂ ಜ್ಞಾನತೃಷೆಯಿಂದ ಕೊರಗುತ್ತಿದ್ದಂತೆ ಕಂಡು ಬರುತ್ತದೆ. ತನ್ನ ಸುತ್ತಲಿರುವ ಅಜ್ಞಾನದ ಪರೆಯನ್ನು

ಪೂರ್ಣವಾಗಿ ಶುದ್ಧ ಜ್ಞಾನದ ಬೆಳಕನ್ನು ಕಾಣುವದಕ್ಕೆ ಅತನು ಕೆಲವು ದಿವಸಗಳನ್ನು ಕಳೆದಿರಬೇಕು. ಜ್ಞಾನವು ದೊರೆತ ಮೇಲೆ ತನ್ನ ಪೂರ್ವದ ಜೀವನ ಹಾಗೂ ಈಗಿನ ಇರುವಿಕೆಯಲ್ಲಿಯ ವ್ಯತ್ಯಾಸವನ್ನು ಕುರಿತು ತನ್ನ ವಚನಗಳಲ್ಲಿ ಒಡನುಡಿದಿರಬೇಕು. ಅಂತೆಯೇ ಆ ರೀತಿಯ ಉಕ್ತಿಗಳು ಬಸವೇಶ್ವರನ ವಚನದಲ್ಲಿ ಕಂಡುಬರುತ್ತವೆ.

೧೬ ಮತಿವಾಂಧ್ಯನಾಗಿ ಗತಿಯ ಕಾಣದೆ ಇದ್ದೆನಯ್ಯ.

೨೦ ಪುರುಷನ ಒಲವಿಲ್ಲದ ಲಲನೆಯಂತಿದ್ದೆನಯ್ಯ.

೨೨ ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ.

೪೫ ಭಕ್ತಿಯ ಕಳವ ನಾನರಿಯದೆ ಮತಿಗೆಟ್ಟ ಪರಿಯ ನಾನರಿಯೆನಯ್ಯ.

೪೦ ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು ಬೇರೆ ಬಾವಿಯ ತೋಡಿ ಉಪ್ಪು ನೀರುಂಬುವನ ವಿಧಿಯಂತೆ. ಅಯಿತ್ತೆನ್ನ ಮತಿ.

೪೬ ಏನನೋದಿ (ವೇದ) ಏನಕೇಳಿ (ಪುರಾಣ) ಏನಮಾಡಿ (ವೈದಿಕ ಕರ್ಮಗಳು) ಫಲವೇನು? ನಿಮ್ಮವರೊಲಿಯದನ್ನಕ್ಕರ? ಶಿವ ಶಿವ ಮಹಾದೇವ ಬಾಯಿಲ್ಲದವನ ಮಾತಿನಂತಾಯಿತ್ತೆನ್ನ ಬಾಳುವೆ.

೫೦ ಹಗರಣಿಗನಂತೆ ನೆಗೆನೆಗೆದೆಯಾಯಿತ್ತು.

೫೩ ನೆತ್ತಿಯಲ್ಲಿ ಅಲಗು ತಿರುಹುವಂತಪ್ಪ ವೇದನೆಯಾಯಿತ್ತೆನಗೆ.

ಎಂದು ಮುಂತಾದ ದೈನ್ಯದ ಹಂಬಲದಲ್ಲಿ ಬಸವನ ಹೃದಯದ ಅಂತರಾಳವು ಹೊರಟಿದೆ. ಶಿವಭಕ್ತಿ ಶಿವಾಚಾರವನ್ನರಿಯದ ಮುನ್ನಿನ ಆತನ ಮನಸ್ಸಿನ ಸ್ಥಿತಿಯೇ ಇಲ್ಲಿ ಚಿತ್ರಿತವಾಗಿರುವದು. ನಿರರ್ಥಕವಾದ ಕರ್ಮಗಳಲ್ಲಿ ಬಸವನು ಕೆಲವು ದಿವಸಗಳವರೆಗೆ ತೊಳಲಾಡಿದನೆಂದು ಇದರಿಂದ ಸಿದ್ಧವಾಗುತ್ತದೆ. ಅವನ ತ್ವೇಷ, ಅಸಮಾಧಾನಗಳೇ ಈ ಮೇಲಿನ ಉಕ್ತಿಗಳಲ್ಲಿ ವರ್ಣಿಸಲ್ಪಟ್ಟಿವೆ. ಕರ್ಮಕಾಂಡದ ಬಾಹ್ಯ ನಾಟಕವನ್ನು ಕಿತ್ತೊಗೆಯುವದಕ್ಕೆ ಬಸವನಿಗೆ ಕೆಲವು ಕಾಲ ಹತ್ತಿರಬೇಕು. ಒಮ್ಮೆ ಅವುಗಳಿಂದ ಮುಕ್ತನಾಗಿ ವಿಶುದ್ಧ ಭಕ್ತಿಯನ್ನು ಕಂಡುಕೊಂಡಮೇಲೆ ಆತನಿಗೆ ಅನ್ಯಾದೃಶವಾದ ಆನಂದವಾಗಿರಬೇಕು. ಅದಕ್ಕೆ ಮೊದಲು ಆತನು "ಹೊಲಬುಗೆಟ್ಟ ಶಿಸುವು ತನ್ನ ತಾಯ ಬಯಸುವಂತೆ" "ಬಟ್ಟೆದಪ್ಪಿದ ಕರ

ತನ್ನ ಹಿಂಡ ತಾನರಸುವಂತೆ" ಶಿವಶರಣರ ಬರವನ್ನು ಬಯಸುತ್ತಿದ್ದನು. (೧೧೪) ದಿನಕರನ ಉದಯಕ್ಕೆ ಕಮಲ ವಿಕಸಿತವಾದಂತೆ ಶರಣರ ಬರಿವು ಬಸವನ ಹೃದಯ ಕಮಲವನ್ನು ವಿಕಸಿತಗೊಳಿಸಿರಬೇಕು. (೧೨೪) ಅಡವಿಯಲೊಬ್ಬ ಕಡು ನೀರಡಿಸಿ ಕಡೆಯಲ್ಲಿ ನೀರ ಕಂಡಂತೆ ಆಯಿತ್ತಯ್ಯ. ಕುರುಡ ಕಣ್ಣ ಹಡೆದಂತೆ ಬಿಡವ ನಿಧಾನವ ಕಂಡಂತೆ ಬಸವನ ಸ್ಥಿತಿಯಾಯಿತು. ಅದುದರಿಂದಲೇ ಅತನು (೧೨೬) "..... ಅನಂದದಿಂದ ನಲಿದಾಡಿದೆನಯ್ಯಾ, ಅನಂದದಿಂದ ಕುಣಿಕುಣಿದಾಡುವೆ ಎಂದು ಉಬ್ಬಿರಬೇಕು. ಇದರಿಂದ ಬಸವನಿಗೆ ತೀವ್ರವಾದ ಜ್ಞಾನತೃಷೆಯಿತ್ತೆಂದೂ ಅದು ನಂತರ ಹಿಂಗಿತೆಂದೂ, ತಿಳಿಯಬಹುದು. ಆ ಜ್ಞಾನ ತೃಷೆಯ ಹಿಂಗುವ ಮೊದಲು ಅತನು ಕರ್ಮಲತೆಯಂತಿದ್ದ ಜನ್ನಿವಾರವನ್ನು ಧರಿಸಿರಬೇಕು. (ಮಹೇಶ್ವರ ಸ್ಥಳ ೪೬) ಹೋಮದ ನೆವದಿಂ ಹೋತನೇ ಕೊಂದು ತಿಂಬ ಅನಾವಿಕರ ಮಧ್ಯದಲ್ಲಿ ಇರಬೇಕು. (೪೪) ಅಷ್ಟವಿ, ನವವಿ ಎಂಬ ಕಲ್ಪಿತದಲ್ಲಿ ತೊಳಲಾಡಿರಬೇಕು. (ಪ್ರಾಣಲಿಂಗೀ ಪ್ರಸಾದ ೯) ಜ್ಞಾನದ ಬಲದಿಂದ ಅಜ್ಞಾನ ಓಡುವಂತೆ, ಜ್ಯೋತಿಯ ಬಲದಿಂದ ತಮವು ತೆರಳುವಂತೆ, ಸತ್ಯದ ಬಲದಿಂದ ಅಸತ್ಯವು ತಿಳಿಯುವಂತೆ, ಕೂಡಲಸಂಗನ ಶರಣರ ಅನುಭಾವದಿಂದ ಬಸವನಿಗೆ ಕರ್ಮಕಾಂಡದ ತೊಡಕು ಬಿಟ್ಟಿರಬೇಕು. ಇದಕ್ಕೆ ಮುಂಜೆ (ಐಕ್ಯನ ಭಕ್ತ ೨) "ಜಲವ ನುಂಗಿತ್ತಯ್ಯ ಎನ್ನ ಕರವು, ಪತ್ರಿಯ ನುಂಗಿತ್ತಯ್ಯಯೆನ್ನ ಶಿವಿ"— ಹೀಗೆ ಬಸವನ ಸ್ಥಿತಿಯಿದ್ದಿತು. ಈ ವಚನದಿಂದ ಬಸವನು ಮೊದಲು ವೈದಿಕ ಕರ್ಮಕಾಂಡದ ಗುರುತುಗಳನ್ನು ಧರಿಸಿದ್ದನೆಂದೇ ಸಿದ್ಧವಾಗುವದಿಲ್ಲವೇ? ಅದುದರಿಂದ ಬಸವರಾಜ ರಗಳೆಯಲ್ಲಿಯ ಹೇಳಿಕೆಯಂತೆ ಬಸವನ ಉಪನಯನವಾಗಿತ್ತೆಂದೇ ಊಹಿಸಬೇಕಾಗಿದೆ.

"ಉಪನಯನ ವಿಚಾರದಲ್ಲಿ ಚಾಮರಸನು ಹೆರಿಹರನನ್ನೇ ಅನುಸರಿಸಿದ್ದಾನೆ. ಪ್ರಭುಲಿಂಗ ಲೀಲೆಯಲ್ಲಿ "ಬಸವರಾಜಂಗೆ ಉಪನಯನವಾಯಿತ್ತು." (ಪ್ರ. ಲೀ. ಸಂಗ್ರಹ ಪು. ೫೫) ಎಂದು ಸ್ಪಷ್ಟವಾಗಿ ಚಾಮರಸನು ಹೇಳುತ್ತಾನೆ. ಇದೇ ಅಭಿಪ್ರಾಯವನ್ನು ಸಿಂಗಿರಾಜನೂ ಅನುಮೋದಿಸುತ್ತಾನೆ. ಬಸವನ ವಿಷಯವಾಗಿ ಅದಿ ಗ್ರಂಥವಾದ ಬಸವದೇವರಾಜ ರಗಳೆಯ ಆಧಾರ, ಚಾಮರಸ ಸಿಂಗಿರಾಜರ ಅನುಮೋದನ ಬಸವನ ವಚನಗಳ ಪುಷ್ಟಿ ಇವೆಲ್ಲವುಗಳ ಫಲವಾಗಿ ಬಸವನಿಗೆ ಉಪನಯನವಾಗಿತ್ತೆಂದು ತಿಳಿಯಬೇಕಾಗುತ್ತದೆ." §

ಇನ್ನು ನಾಲ್ಕನೇ ನಂಬರಿನ ವ್ಯತ್ಯಾಸ— ಬಸವನಿಗೆ ಮಂತ್ರಿಪದವು ದೊರಕಿದುದು ಹೇಗೆ?— ದೇವಲೋಕದಿಂದ ಬಿದ್ದ ಓಲೆಯೊಂದನ್ನು ಓದಿದುದರಿಂದ ಬಸವನ ಘನತೆಯು ಬಿಜ್ಜಳನಿಗೆ ಮನವರಿಕೆಯಾಯಿತೆಂದು ಭೀಮ ಕವಿಯು ಹೇಳುತ್ತಾನೆ. ಪೌರಾಣಿಕರ ಕಲ್ಪನಾ ಸೃಷ್ಟಿಯನ್ನು ಒಪ್ಪದವರು ಇದರಿಂದ ಸಮಾಧಾನ ಹೊಂದಲಾರರು. ಬುದ್ಧಿಯನ್ನು ಮಂಕುಗೊಳಿಸಿ, ಶ್ರದ್ಧೆಯನ್ನು ಹೆಚ್ಚಿಸುವ ಯುಗವು ಇಂದಿನದಲ್ಲ. ಘಟನೆಗಳಲ್ಲಿ ಸ್ವಾಭಾವಿಕತೆ, ಸುಸಂಬದ್ಧತೆಗಳನ್ನು ಇಂದಿನವರು ಅಪೇಕ್ಷಿಸುತ್ತಾರೆ. ಅಂತಹವುಗಳು ವಿಶ್ವಸನೀಯೆಂದು ತೋರುತ್ತವೆ. ಆದ್ದರಿಂದ ಬಸವರಾಜ ರಗಳೆಯಲ್ಲಿಯ ಹೇಳಿಕೆಯು ಹೆಚ್ಚು ಸಮಂಜಸವೆಂದು ನಾವು ಒಪ್ಪಲೇಬೇಕು. ಇಲ್ಲಿ ದೇವಲೋಕವೂ ಇಲ್ಲ ಅಲೌಕಿಕ ಓಲೆಯೂ ಇಲ್ಲ. ಸಿದ್ಧರಸನ ಹತ್ತಿರ ಸರ್ವಸಾಧಾರಣ ಕರ್ಣಿಕನಾಗಿದ್ದನು ಬಸವ.

"ಸಿದ್ಧ ದಂಡಾಧಿಪಂ.....ತನ್ನ ಲೆಕ್ಕಂಗಳಂ ಕೇಳುತ್ತಿರೆ..... ಗಣಕರ್ ತಪ್ಪಿಪೇಳೆ ಭರದಿಂದಂದು ತಪ್ಪಿದುದನರಿದನಾ ಬಸವರಾಜಂ ಐದನೇ ಸ್ಥಳ)— ಎಂದು ಬಸವದೇವರಾಜರಗಳೆ ಹೇಳಿದೆ. ಗಣಕರು ತಪ್ಪು ಲೆಕ್ಕವನ್ನು ಹೇಳುವದನ್ನು ಕಂಡು ಬಸವನು ಅದು ತಪ್ಪೆಂದು ಸಿದ್ಧರಸನಿಗೆ ತೋರಿಸಿ ಕೊಟ್ಟದ್ದರಿಂದ ಸಿದ್ಧರಸನು ಬಸವನ ಕೌಶಲ್ಯವನ್ನು ಕಂಡು ಮೆಚ್ಚಿದನು. ಹಾಗೂ ಹರುಷಿತನಾಗಿ ಅತನನ್ನು ಬಿಜ್ಜಳನ ಕಡೆಗೆ ಕರೆದುಕೊಂಡು ಹೋಗಿ ಅವನಿಗೆ ಬಸವನ ಕೌಶಲ್ಯವನ್ನು ನಿವೇದಿಸಿ ಅತನನ್ನು ತನ್ನ ಭಾಂಡಾರದಲ್ಲಿಟ್ಟುಕೊಳ್ಳಲು ಆಗ್ರಹ ಪಡಿಸಿದನು. ಈ ಘಟನೆಯು ಕೇವಲ ಸ್ವಾಭಾವಿಕವಾಗಿದೆ. ಬಸವನ ಕೌಶಲ್ಯವು ಅತನಿಗೆ ಸಿದ್ದರಸನಲ್ಲಿ ಕರ್ಣಿಕನ ಕೆಲಸ ಕೊಡಿಸಿತು. ಸಿದ್ಧರಸನಿಗೆ ಬಸವನ ವಿಷಯವಾಗಿ ಆಸ್ಥೆಯುಂಟಾಯಿತು. ಅದುದರಿಂದ ಅತನನ್ನು ತನ್ನ ಮನೆಗೆ ಕರೆದುಕೊಂಡು ಹೋದನು. "ಕುಲಪ್ಪೊಂದು ಕುಲವಾಗೆ ನೆಲೆ ವಿಚಾರಿಸೆ ತನ್ನ ಸಂಬಂಧ ಒಂದಾಗೆ ಸಿದ್ಧದಂಡಾಧಿಪಂ

§ ಈ ಊಹೆಯು ಹಾಗೂ ಮುಂದೆ ಹೇಳುವ ಸಂಗತಿಗಳು ಪುರಾಣಪ್ರಿಯರಿಗೆ ರುಚಿಸಲಿಕ್ಕಿಲ್ಲ. ಆದರೆ ಬಲವತ್ತರವಾದ ಪ್ರಮಾಣಗಳಿಂದ ನನ್ನ ಊಹೆಗಳು ಸರಿಯಲ್ಲವೆಂದು ತಿಳಿಸಿಕೊಟ್ಟರೆ ನಾನು ತಿದ್ದಿಕೊಳ್ಳಲು ಸಿದ್ಧನಿದ್ದೇನೆ. —ಲೇಖಕ.

ಹೆಚ್ಚುತಂ ಹಿಗ್ಗುತಂ" ತನ್ನ ಮನೆಯ ಅಡಳಿತವನ್ನೆಲ್ಲ ಅವನಿಗೆ ಒಪ್ಪಿಸಿದನು. ಕೆಲಕಾಲದ ಮೇಲೆ ಸಿದ್ಧರಸನು ಕಾಲವಾದನು. ಆಗ ಬಿಜ್ಜಳನು ಅತನ ಅಸ್ಥಿಯನ್ನು ಅಧಿಕಾರವನ್ನು ಬಸವನಿಗೆ ಕೊಟ್ಟನು. ತನ್ನ ಕೌಶಲ್ಯದಿಂದ ರಾಜನ ಆಸ್ಥಾನದಲ್ಲಿ ಪ್ರವೇಶ ಪಡೆದು ಮುಂದೆ ತನ್ನ ಯೋಗ್ಯತೆ ಗುಣಗಳ ಬಲದಿಂದ ಬಸವನು ಹೆಚ್ಚಿನ ಸ್ಥಾನವನ್ನು ಪಡೆದದ್ದು ಎಲ್ಲ ರೀತಿಯಿಂದಲೂ ಸಮಂಜಸವಾದದ್ದು, ಸಂಯುಕ್ತವಾದದ್ದು. ಸರ್ವ ಸಾಧಾರಣ ಕರ್ಣಿಕನಾಗಿದ್ದವನು ತನ್ನ ಯೋಗ್ಯತೆಯ ಬಲದಿಂದ ಕ್ರಮಶಃ ಭಾಂಡಾರಿಯಾದನೆಂದು ಹೇಳುವದು ಸಯುಕ್ತಿಕವೇ ಸರಿ. ಸಿಂಗಿರಾಜ ನಾದರೂ ಕೂಡ ಬಸವನು ಮೊದಲು ಕರ್ಣಿಕನಾಗಿದ್ದನೆಂದು ಒಪ್ಪುತ್ತಾನೆ. ಭಂಡಾರಿಯ ಅಧಿಕಾರವನ್ನು ಪಡೆದ ನಂತರ ಬಸವನ ವಿವಾಹವಾಯಿತು. ಬಸವ ಪುರಾಣವನ್ನು ಅನುಸರಿಸುವದಾದರೆ ಬಸವನು ತನ್ನ ಎಂಟನೇ ವರ್ಷಕ್ಕೆ ಮನೆ ತೊರೆಯಲು ಆಗಲೇ ಬಲದೇವನು ಅತನ ವಿವಾಹವನ್ನು ಜರುಗಿಸಿದನೆಂದು ನಂಬಬೇಕಾಗುತ್ತದೆ. ಎಂಟು ವರ್ಷಕ್ಕೆ ಮದುವೆಯಾಗುವು ರೂಢಿಯು ಆಗಿರಲಿಲ್ಲ. ಬಸವನಿಗೆ ಆಗ್ಗೆ ಮದುವೆಯ ಅವಶ್ಯಕತೆಯು ಇರಲಿಲ್ಲ. ತಾನು ಪ್ರೌಢನಾದ ಮೇಲೆ, ರಾಜನ ಆಸ್ಥಾನದಲ್ಲಿ ಅಧಿಕಾರ ಪಡೆದ ಮೇಲೆ ಮದುವೆಯಾದುದು ಉಚಿತವೇ ಸರಿ. ಈ ದೃಷ್ಟಿಯಿಂದಲೂ ಕೂಡ ನಾವು ಹರಿಹರನ ಹೇಳಿಕೆಯನ್ನು ಸಮರ್ಥಿಸಬೇಕಾಗಿದೆ.

ಇನ್ನು ಐದನೇ ನಂಬರಿನ ವ್ಯತ್ಯಾಸಃ— ಅದು ಜಗದೇವ ಉಪಾಖ್ಯಾನ— ಬಸವದೇವರಾಜ ರಗಳೆಯಲ್ಲಿ ಅದರ ಪ್ರಸ್ತಾಪವಿಲ್ಲನೆಂದಮೇಲೆ ಬಿಜ್ಜಳನ ಕೊಲೆಯ ಪ್ರಸ್ತಾಪವು ಅದರಲ್ಲಿಲ್ಲವೆಂದು ಊಹಿಸಬಹುದಾಗಿತ್ತು ಪ್ರೋ॥ ವೆಂಕಣ್ಣಯ್ಯನವರು ಪ್ರಕಟಿಸಿದ ಗ್ರಂಥದ ಮಟ್ಟಿಗೆ ಹೇಳಬೇಕಾಗಿದ್ದರೆ ಈ ಊಹೆಯು ನಿಜವೆಂದು ನಾವು ನಂಬಬಹುದಾಗಿತ್ತು. ಭೀಮಕವಿಯು ಹಾಗೂ ಇನ್ನಿತರರು ಹೇಳುವಂತೆ ಜಗದೇವನಿಂದ ಬಿಜ್ಜಳನು ಕೊಲ್ಲಲ್ಪಡಲಿಲ್ಲವೆಂದು ನಂಬಬಹುದಾಗಿತ್ತು. ಆದರೆ ಈ ವಾದವು ಇಷ್ಟು ಸುಲಭವಾಗಿ ಮುಗಿಯುವಂತಿಲ್ಲ.

ಪನ್ನೀರು ಗಂಧಾಕ್ಷತೆಯು ಪರಿಮಳದಪಾದ, ಪರಿಪರಿಯ ಪುಷ್ಪ ಸಂಪ್ರಮದ ಪಾದ, ದೀಪ ಬೆಳಗುವ ಪಾದ ಉಪಕರಣ ಸ್ತೋತ್ರ ಒಪ್ಪಿರ್ಪಪಾದ ॥೬॥

ನಾದ ಬಿಂದು ಕಳಿ ಅಧಿಕವೋಹದ ಪಾದ ವೇದ ಭೇದಕ್ಕೆ ಸೂತ್ರವಡಿದ ಪಾದ, ಸಾಧಿಸುತ ಲಿಂಗಾಂಗ ತೃಪ್ತಿ ಅರುಹಿದ ಪಾದ, ಸದಮಲ ಜ್ಞಾನದೊಳು ಗಡೆದ ಪಾದ ॥೯॥

ಕರುಣ ಪ್ರಸಾದವನು ರುಚಿಯುಗೊಂಬುವ ಪಾದ, ವರವಪ್ರದಾಭರಣ ಸಂಪೂರ್ಣ ಪಾದ ನಿರುತದಿಂದಲಿ ವೀಕ್ಷ್ಯ ಸವಿಗೊಂಬ ಶ್ರೀಪಾದ ಪರುಷಾಬ್ಧಿಯೆಂಬ ಮನಮುಳುಗಿದಂಥ ಪಾದ ॥೧೦॥

ಈ ಪಾದದರ್ಥವನು ಹೇಳಿ ಕೇಳಿದವರ್ಗೆ ಬೇಡಿದಿಷ್ಟಾರ್ಥಮಂ ದೊರೆಕೊಂಬುದು ಪತಿಯೆಂದು ನಂಬಿದವರ್ಗೆ ಮಹದೇವ ತನ್ನೊಳಗೆ ಏಕಾರ್ಥವು ॥೧೧॥

೩೧

ಮಂಗಳಾರತಿಯೆತ್ತಿರಂಗನೆಯರೆಲ್ಲ ಸಂಗನಬಸವಣ್ಣನಿಗೆ ಚೆನ್ನನಿಗೆ ॥ಪಲ್ಲ॥

ಓದುವ ಮಠದಿ ಮೊದಲಾಗಿ ಪವಾಡವ ಮೇದಿನಿಯೊಳಗೆ ಹೋದವಗೆ ॥೧॥

ಗಂಗೆಯ ಧರಿಸುತ ಲಿಂಗವ ತೋರಿದ ಸಂಗಯ್ಯನೊಳಗಾದವಗೆ ಹೋದವಗೆ ॥೨॥

ಕುಂಗನೆಯರಿಗೆ ಲಿಂಗವ ಧರಿಸುತ ಜಂಗಮರೂಪುವಾಡಿದಗೆ ನೀಡಿದವಗೆ ॥೩॥

ಕರವಪ್ಪುಗಿಯ ಅಲ್ಲಿ ಮೆರೆವ ಗದ್ದುಗೆಯನ್ನು ಉರುಹಿಬಿಟ್ಟ ದಿಟ್ಟನಿಗೆ ಶ್ರೇಷ್ಠನಿಗೆ ॥೪॥

ಬರೆದ ಲಿಪಿಯನೋದಿ ಮೆರೆವ ದ್ರವ್ಯವ ತಾನು ಫೊರೆಯು ಬಿಜ್ಜಳಗೆ ತೋರಿದಗೆ ಸಾರಿದವಗೆ ॥೫॥

ಲಕ್ಷದನೇಲೆ ತೊಂಭತ್ತಾರುಸಾವಿರ ನಿತ್ಯ ಜಂಗಮಕಿಕ್ಕಿದವಗೆ ಸಿಕ್ಕುದವಗೆ ॥೬॥

ಕಲ್ಯಾಣ ಪಟ್ಟಣದಲ್ಲಿ ಪವಾಡನಿಲ್ಲದೆ ಗೆಲಿದಂಥವಗೆ ಮಹಾಂತನಿಗೆ ॥೬॥
ಮುಕ್ಕಣ್ಣ ಪುತ್ರನ ಬೆನ್ನೊಳು ಹೊತ್ತು ಚರಿಸುವ ಅಕ್ಕ ನಾಗಲೆ ಅಣ್ಣನಿಗೆ ತಮ್ಮನಿಗೆ ॥೮॥
ಕರಿಯಲೆ ಮಡುಪಿಗೋಸ್ಕರ ರೇಚಣ್ಣನ ಧರೆಯೊಳು ಬಿಟ್ಟು ಹೋದವಗೆ ಹೋದವಗೆ ॥೯॥
ಹಾಲುತರುತ ನರಿ ಕಾಲು ಜಾರಲು ಅಲ್ಲಿ ಬಾಲೆ ಕೊಡ ಪಿಡಿದವಗೆ ಹಿಡಿದವಗೆ ॥೧೦॥
ಧರೆಯೊಳು ಗುಬ್ಬಿಯ ಪುರವಾಸವಾಗಿರ್ಪ ಗುರುಚನ್ನಬಸವಣ್ಣನಿಗೆ ಚಿಣ್ಣನಿಗೆ ॥೧೧॥

೩೨

ಎನ್ನ ಗುಣವ ನೋಡಬೇಡ ಲಿಂಗಯ್ಯ
ನಾನು ನಿಮ್ಮ ಪಾದ ನಂಬಿದವನು ಲಿಂಗಯ್ಯ ॥ಪ॥

ಅರೆ ಅರೆ ಆಗಲಾರೆ ಲಿಂಗಯ್ಯ ಮಾರಗೆಡದೆ ಮನ್ನಿಸೆನ್ನ ಲಿಂಗಯ್ಯ ॥೧॥
ಹಿಂದೆ ಭವ ಭವದಲ್ಲಿ ಲಿಂಗಯ್ಯ ನಾನು ಬಂದು ಬಂದು ನರಳುತಿಹೆನು ಲಿಂಗಯ್ಯ ॥೨॥
ಮುಂದೆ ಭವದಿ ಬಾರದಂತೆ ಲಿಂಗಯ್ಯ ನಿಮ್ಮ ಕಂದನೆಂದು ರಕ್ಷಿಸೆನ್ನ ಲಿಂಗಯ್ಯ ॥೩॥
ಗಿಳಿಯು ಓದಿ ತನ್ನ ಮುಲಪ ಲಿಂಗಯ್ಯ ತಿಂದು ತಿಂದು ಓಡಿ ನಲಿದಾಡುವಂತೆ ಲಿಂಗಯ್ಯ ॥೪॥
ಹಲವನೋದಿ ಎನ್ನ ಮನವು ಲಿಂಗಯ್ಯ ತ್ರಿವಿಧಮಲಕೆ ಮೆಚ್ಚಿ ಬೀಳುತೈತೆ ಲಿಂಗಯ್ಯ ॥೫॥
ಮರ್ತ್ಯಲೋಕದೊಳಗೆ ಹುಟ್ಟಿ ಲಿಂಗಯ್ಯ ನಾನು ವ್ಯರ್ಥವಾಗಿ ಹೋಗುತಿದ್ದೆ ಲಿಂಗಯ್ಯ ॥೬॥
ಸತ್ತು ಹುಟ್ಟುವುದ ಬಿಡಿಸೊ ಲಿಂಗಯ್ಯ ನೀಡಿ ನಿತ್ಯವೆಂದು ಎನಿಸೊ ಲಿಂಗಯ್ಯಾ ॥೭॥

ಎಷ್ಟು ಪರಿಯಲಿ ತನುವ ಹೊರೆದ ಲಿಂಗಯ್ಯ ಇಂದು ನಷ್ಟವಾಗಿ ಹೋಗುತೈತೆ ಲಿಂಗಯ್ಯ ॥೮॥
ಕಟ್ಟಿನಳಿಂದೆನಿಸಬೇಡ ಲಿಂಗಯ್ಯ ಸ್ವಾಮಿಪಟ್ಟದ ಕೈಲಾಸ ಪ್ರಭುವೆ ಲಿಂಗಯ್ಯ ॥೯॥

೩೩

ಆರು ಬಲ್ಲರಯ್ಯ ಸ್ವಾಮಿ ನಿಮ್ಮ ಮಹಿಮೆಗಳ ಶಿವನೆ
ಮೂರು ಲೋಕದ ಕರ್ತೃ ನೀನೆಂದಾಡೊ ಆಟಗಳ ಶಿವನೆ ॥ಪ॥

ನಂಬಿಗೊಲಿದು ಹಡಪವ ಹೊತ್ತು ಕುಂಟಿಣಿಯಾಗಿದ್ದೆ ಶಿವನೆ।
ಕುಂಬಾರನ ಮಡಕೆಯ ಗದುಕಿಗೆ ಕುಣಿಯುತ ನೀ ಬಂದೆ ಶಿವನೆ॥
ರಂಭೆಯೋರ್ವಳ ಸ್ಥಳದೊಳು ಮೂಡಿ ಪೂಜೆಗೊಳುತಿದ್ದೆ ಶಿವನೆ।
ಕುಂಭಿಣಿಯೊಳು ಗಣಪತಿರಾಯನ ಬದುಕ ನೀ ಕದ್ದೆ ಶಿವನೆ ॥೧॥

ಕಾಳಿದಾಸಂಗೊಲಿದು ಮೇಲಣ ಕಣ್ಣ ನೀ ಕೊಟ್ಟೆ ಶಿವನೆ
ಸೋಳೆಗೈಯ್ಯನ ಕಟ್ಟಿಗೆ ಹೊರಿ ಸುವರ್ಣವ ಮಾಡಿದೆ ಶಿವನೆ॥
ಚೋಳ ಅಕ್ಕ ಕಳುಹಿಸಿದಂಥ ತಳಿಗೆಯ ಬಚ್ಚಿಟ್ಟೆ ಶಿವನೆ ॥೨॥

ಕುರಿಯ ಹಿಕ್ಕೆಲಿ ಜೆರೆದ ಕುರುಬನ ಕೈಲಾಸಕೊಯ್ದೆ ಶಿವನೆ
ಹರಿಯ ಮಗನ ಫಣಿಗಣ್ಣಿಂದ ಉರುಹಿ ನೀ ಸುಟ್ಟೆ ಶಿವನೆ॥
ಧರೆಯ ಮೇಲೆ ಭಿಕ್ಷವ ಬೇಡುತ ತಿರುಗುತ ನೀ ಬಂದೆ ಶಿವನೆ
ಕರುವ ಕಾಯುತ ತುರುಪೆ ಗುದ್ದಿದ ನಡುವೆ ನೀ ನಿಂದೆ ಶಿವನೆ ॥೩॥

೩೪

ಬೆಳಗಿನ್ನೆಲ್ಲಿ ಹುಡೊ ಲಿಂಗದ ಸುಳುಹಿನ್ನೆಲ್ಲಿ ಹುದೊ। ಬೆಳಗಿನ ಸುಳುಹನು ತಿಳಿಯದೆ ಬರಿದೆ ಆಡಿಕೊಂಬ ಕುರಿ ಮನುಜರಿಗೆ ॥ಪ॥

ಮಾತಿನ ಬಣಬೆಯ ಮುಂದಿಟ್ಟುಕೊಂಡು ನೀತಿಶಾಸ್ತ್ರ ಓದುತ ಕೇಳುತ ಆತ್ಮದೊಳಗಣ ಅರುಹನು ತಿಳಿಯದೆ ಮೂತ್ರದ ಕುಳಿಯೊಳು ಮುಳುಗಾಡುವರಿಗೆ ॥೧॥

ತವ್ಮೊಳಗಿನ ಗುರುಲಿಂಗಜಂಗವು ಕಣ್ಣಲಿ ನೋಡುತ ಕಡೆಯಲ್ಲಿ ರಸುತ ಹೊನ್ನು ಹೆಣ್ಣು ಮೂರರೊಳು ಸಿಲುಕಿ ಸಣ್ಣನಾಗಿ ಬಂದು ಮುಳುಗಾಡುವರಿಗೆ ॥೨॥

ಆರು ಓದಿದೊಡೇನು ಅರುವತ್ತಾರ ಕೇಳಿದೊಡೇನು ಕಾಯುವ ಕಳೆಯದೆ। ಕ್ರೋಧವ ಮರೆಯದೆ ಹೋರಾಡಿ ಮುಳುಗುವ ಹೊಲಸ ತೊರೆಯದೆ ॥೩॥

ಕಾಯದೊಳಿರುವ ಮಾಯದ ಲಿಂಗವ ಅದರಾಯನನರಿಯದೆ ಅದ ಮರೆತು ತಾವು। ಬಾಯಿ ಕೊಬ್ಬಿನಿಂದ ಒಂದೊಂದ ಹೇಳುವ ಮಾಯೆಯ ಮೋಹದಿ ಮುಳುಗಾಡುವರಿಗೆ ॥೪॥

ಅಂಗದ ಹೊಲಬನು ಲಿಂಗಕೆ ತೋರಿಸಿ ಲಿಂಗದ ಹೊಲಬಿನಲಾಡುತಲಿ ಕಣ್ಗಳ ಬೆಳಗಿನ ಬೆಳಗಿತ್ತು ಸಂಗನಬಸವನಿಗರುಹಿಲ್ಲದೆ ॥೫॥

೩೫

ಶ್ರೀಗುರುದೇವಗೆ ಮಂಗಳಂ ಗಣಸಾಗರ ಪೂರ್ಣ ಶಶಾಂಕಗೆ ಮಂಗಳಂ ॥೧॥

ಕಮಲ ಕಮಲ ಪಹ್ನಿನೇತ್ರಗೆ ವರಕಮಲನಾಭನೇತ್ರ ಪಾದಗೆ ॥೨॥

ಮೂರು ಆಲಯದೊಳಗೆ ತೋರುವಗೆ ಭಕ್ತಪಾರಿಜಾತಗೆ ಪಾಪ ಲೋಪಗೆ ॥೩॥

ಕಂತುಹರನ ಭಕ್ತರಂತಹವ ತಿಳಿದ ಸ್ವತಂತ್ರ ಗವಿಯ ಸಿದ್ಧಲಿಂಗಗೆ ॥೪॥

ಮಲ್ಲೇನ ಹಳ್ಳಿ ಚನ್ನ ಬಸವ ದೇವರ

ಮತ್ತು

ಹೊನ್ನುಡಿಕೆ ಗಂಗಾಧರ ಸ್ವಾಮಿಗಳ ಪದ್ಯಗಳು.

ಚನ್ನಬಸವದೇವರು ತುಮಕೂರು ಜಿಲ್ಲಾ ಗುಬ್ಬೀ ತಾಲೂಕು ಮಲ್ಲೇನಹಳ್ಳಿ ಗ್ರಾಮದಲ್ಲಿ ಜನ್ಮತಾಳಿ, ಲೌಕಿಕ ಪಾರಮಾರ್ಥಿಕ ಚತುರರಾದ ಶರಣರೂ, ಶಿವಾನುಭವಿಗಳೂ ಆಗಿದ್ದರು. ಇವರು ಶ್ರೀ ಕರಿವೃಷಭೇಂದ್ರ ಸ್ವಾಮಿಗಳ ಸಮಕಾಲೀನರು ಮತ್ತು ಶ್ರೀಗಳ ಅನುಗ್ರಹದಿಂದ ಕವಿತಾ ಶಕ್ತಿಯನ್ನು ಪಡೆದು ಈ ಪದ್ಯಗಳನ್ನು ಹಾಡಿದ್ದಾರೆ. ಇಲ್ಲಿನ.ವರೆಗೆ ಸಿಕ್ಕಿದ ಪದ್ಯಗಳನ್ನೆಲ್ಲ ಸಂಗ್ರಹಿಸಲಾಗಿದೆ. ಇವರು ತಮ್ಮ ಪ್ರತಿಪದ್ಯದ ಅಂತ್ಯ ಪಾದದಲ್ಲಿ ತಮ್ಮ ಜನ್ಮಸ್ಥಳವಾದ "ಮಲ್ಲನಪುರ" ದ ಮತ್ತು ತಮ್ಮ ಗುರುವಾದ "ಸೋಮೆಕಟ್ಟೆ" ಶ್ರೀಗಳ ಅಂಕಿತವನ್ನಿಟ್ಟು ರಚಿಸಿದ್ದಾರೆ. ಪದ್ಯಗಳು ಬಹಳ ಸ್ಫೂರ್ತಿದಾಯಕವಾದುವೂ ಶಿವಾನುಭವಜನ್ಯವಾದುವೂ ಆಗಿವೆಯೆಂಬುದು ಅವರ ಈ ಪದ್ಯಗಳನ್ನು ಓದುವುದರಿಂದ ಮನವರಿಕೆಯಾಗದಿರಲಾರದು.

ಗಂಗಾಧರಸ್ವಾಮಿಗಳು ಗುಬ್ಬಿ ತಾಲೂಕು ನಿಟ್ಟೂರು ಗ್ರಾಮದಲ್ಲಿ ಚಿಕ್ಕಣ್ಣನವರು ಮತ್ತು ಭದ್ರಮ್ಮನವರು ಇವರ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೂ ತುಮಕೂರು ಜಿಲ್ಲಾ ತುಮಕೂರು ತಾಲೂಕು ಹೊನ್ನುಡಿಕೆ ಗ್ರಾಮದಲ್ಲಿ ವಾಸವಾಗಿದ್ದರು. ಚಿಕ್ಕಂದಿನಿಂದಲೂ ಬಹಳಕಾಲ ಗುರುಕುಲವಾಸಮಾಡಿ ವೇದಾಂತ ಸಿದ್ಧಾಂತ ಶಿವಾನುಭವ ಶಾಸ್ತ್ರಗಳನ್ನು ಅಭ್ಯಾಸಮಾಡಿದರು. ಇವರು ಶ್ರೀಗಳ ಸಮಕಾಲೀನರು; ಶ್ರೀಗಳಿಂದ ಇವರಿಗೆ "ಪೂರ್ಣಾನುಗ್ರಹ" ಪ್ರಾಪ್ತಿಯಾಗಿತ್ತು. ಇವರು ಕೆಲವು ಕಾಲ ಶಂಭುಲಿಂಗನ ಬೆಟ್ಟದಲ್ಲಿ ತಪಶ್ಚರ್ಯೆಯಿಂದಿದ್ದರು. ಇವರು ಮಹಾ ತತ್ವವೇತ್ತರೂ, ತಾರ್ಕಿಕರೂ, ಬೋಧಾಕುಶಲರೂ ಆಗಿದ್ದರು. ತಮ್ಮ ಉಪದೇಶಾಮೃತದಿಂದ ಅನೇಕ ಶಿಷ್ಯರನ್ನುದ್ಧಾರಮಾಡಿ ಕ್ರಿ. ಶ. ೧೯೧೫ ನೇ ರಾಕ್ಷಸ ಸಂವತ್ಸರದಲ್ಲಿ ಲಿಂಗೈಕ್ಯರಾದರು. ಇವರ ಪದ್ಯಗಳು ಅನುಭವವನ್ನು ಹೊರಸೂಸುತ್ತವೆ.

ನನ್ನ ತೀರ್ಥರೂಪರಾದ ಯಜಮಾನ್ ರುದ್ರಯ್ಯ ಹೊನ್ನುಡಿಕೆ ಇವರು ಸಂಗ್ರಹಿಸಿಟ್ಟಿದ್ದ ಪ್ರತಿ೧, ಶ್ರೀ ಮಾಗಡಿ ಸೋಮೇಕಟ್ಟೆ ಮಠಾಧ್ಯಕ್ಷರಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಶ್ರೀ ರುದ್ರಮುನಿಸ್ವಾಮಿಗಳವರು ಕೃಪೆಮಾಡಿ ಕಳುಹಿಸಿಕೊಟ್ಟ ಪ್ರತಿ೧, ಮತ್ತು ಅಲ್ಲಲ್ಲಿ ಶ್ರೀಗಳ ಶಿಷ್ಯರು ಹಾಡುತ್ತಿದ್ದ ಪದ್ಯಗಳನ್ನು ಸಂಗ್ರಹಿಸಿ ಬರೆದುಕೊಂಡದ್ದು, ಇವುಗಳ ಆಧಾರದ ಮೇಲೆ ಈ ಪದ್ಯಗಳನ್ನು ಸಿದ್ಧಮಾಡಲಾಗಿದೆ. ವಿಪುಲವಾಗಿದ್ದ ಕೈತಪ್ಪುಗಳನ್ನು ಯಥಾಮತಿ ತಿದ್ದಲಾಗಿದೆ. ದೋಷಗಳು ನಿಶ್ಶೇಷವಾಗಿ ಹೋಗಿವೆ ಎಂದು ನನ್ನ ನಂಬುಗೆ ಇಲ್ಲ. ಪ್ರಾಜ್ಞರು ಕೇವಲ ಗುಣಗ್ರಹಣವನ್ನೇ ಮಾಡಿ ಪ್ರಮಾದಗಳನ್ನು ತೋರಿಸಿಕೊಟ್ಟರೆ ಮುಂದಾದರೂ ಪೂರ್ತಿಯಾಗಿ ತಿದ್ದಲಾದೀತೆಂದು ಆಶೆ.

ಯುವಸಂವತ್ಸರದ ಯುಗಾದಿ
ತುಮಕೂರು

ಇತಿ ಶಿವಾನುಭವಿಗಳ ಪಾದಸೇವಕ,
ಹೊ. ರು. ಮಹಾಂತಯ್ಯ.

ನಾದ ನಾಮಕ್ರಿಯೆ ಆದಿತಾಳ.

ಇಂತು ಪೇಳುವುದೆನ್ನಳವೆ ಗುರುಕರುಣದ ಬಲವೆ ॥ಪಲ್ಲ॥

ಮೊದಲಾಧಾರವೆ ಅದು ಭೂಧರವೆ। ಪದುಮದ ಚಂದಜೌದಳದಂ
ದವೆ। ಅದರಕ್ಷರವೆ "ವಾದಿಸಾಂತ" ದುವೆ ಇದು ತಳ ಧೌತವರ್ಣದ ಇರವೆ।
ಸಿದ್ಧಿನಿನಾಯಕನಿದ್ದ ಪನಿಜವೆ । ಸಾದರದಲ್ಲಿ ಸುಸ್ವರಮುಂತ್ರಂಗಳಿ ।
ಪೋದದಿ ನೂರಾರತಿಬಲಗೊಂಡಿವೆ। ಬಾಧಕ ಹರಿಸನತಾರಲ್ಲಿಹುದು।
ಬೋಧದ ಪೆಣ್ಣಾಂಬಿಯ ಸ್ವರವಹುದು। ಆದಿಯ ಆಚಾರದ ಲಿಂಗಹುದು।
ಸದ್ಯೋಜಾತದ। ಮುಖವದು ಆದುದು। ಇದ್ದಳು ಕ್ರಿಯಾಶಕ್ತಿ ಒಲವಿಂದ।
ಬದ್ಧವಾದ ಪೀತದು ಬಹು ಚಂದ। ಸಿದ್ಧ ಸುಚಿತ್ತದ ಹಸ್ತಗಳಿಂದದು।
ಶುದ್ಧನಿವೃತ್ತಿ ಕಲೆ ಋಗ್ವೇದ ನಿರ್ಧರವನಾದಿ ಸಂಜ್ಞೆಯ ಘ್ರಾಣದ। ಸದು
ಣಗಂಧದ ವಿಷಯಮುಖದ। ಚಿಪ್ಪನತಾರಕಾಕೃತಿರೂಪಿಂದದದ। ಮುದ್ಗರು
ಭಕ್ತಾಂಗದ ಸೊಬಗೆಂದಿದ। ನಿರ್ಧರ ಬಿಡದಲೆ ತಿಳಿಮೊದಲೆಂದ ॥೧॥

ಸಲಿಲಕಳೇವರದನುವಿನಗತಿಯೋಳ್। ಸಲೆಸ್ವಾಧಿಷ್ಠಾನ ಜಲಜದು
ಪಸುರೋಳ್। ದಳ"ಬಾದಿಲಾಂತ" ಕ್ಷರನಿಲಯದಿ ಬ್ರಹ್ಮಷಟ್ಕೋಸಿರವ। ಪುಳ
ಕದ ಮಂತ್ರ ಬಲಗೊಂಡೆಸೆಯಲ್ಲಲ್ಲಿ ಮಕಾರವು ರತ್ನದ ಕಾಂತಿಯೋಲ್ಗ
ಲಿಸುವ ವೀಣಾಸ್ವರ ಗುರು ಲಿಂಗೆಲ್ವಲಿ ವಾಮದೇವಾಶ್ಚಪ್ರತಿಷ್ಠದಾತಲೆ।
ಸಲೆಸಾಮದಿಧವಳಾಕಾರ। ಲಲಿತದಿ ಒಪ್ಪುವ ಜ್ಞಾನ ಶಕ್ತಿ ಕೇಳೊಲವಿಂ
ಸುಬುದ್ಧಿಹಸ್ತಂಗಳೊಳು ಸುಲಲಿತ ರಸದ್ರವ್ಯವ ಜಿಹ್ವೆಗೆಲವಿಂ ನೈಷ್ಠಿಕ
ಭಕ್ತಿಲಿ ನೀಡುತ ಸೊಲ್ಲಿಸುತಲ್ಲಿ ಯಜುರ್ವೇದವ ತಾ ನಿಲ್ಲುತ ಲಿಂಗಕ್ಷೇತ್ರ
ಸಂಜ್ಞೆಯಲಿ ಎಲ್ಲ ಕರ್ತೃಸಾದಾಖ್ಯದಿ ಬೆರೆಯುತ ಬಲ್ಲಿವರಿಂ ತಿಳಿದಂಡ
ಕಾಕೃತಿಯಿಂತೆಲ್ಲ ಮಹೇಶಾಂಗದ ಪರಿ ತಿಳಿ ನೀನೆಲ್ಲರಿಯಲು ಅಘನಿಲ್ಲದು
ಇಂತಿವೆಲ್ಲವನೊರೆದನು ಗುರುದಯ ಬಂದು ॥೨॥

ಮಣಿಪೂರಕದೊಳು ಅಗ್ನಿಯ ಕಾಯ। ಎಣಿಸಲ್ ದಶದಳಪದ್ಮದ
ಗೇಯ। ಮಣಿನೀಲದ ವಿಕ್ಕು ಮಾಯದುಗೊಪ್ಪಿ। ಗಣಿಸಲು "ಡಾದಿ
ಫಾಂತ್ಯ" ಕ್ಷರದಾಯ। ಫಣಿಶಯನನವಾಸಕ್ಕಿದು ನ್ಯಾಯ। ಕ್ಷಣ ಭಜಿಸುವ
ಪಟ್ಟಾವಿರ ಮಂತ್ರ। ಬಣಗ್ಪರಿಪ ಇಕಾರ ಸ್ವತಂತ್ರ। ಗಣಗಣ ಗಂಟೆಯ
ನಾದದ ವಾಂತ್ರ। ತೃಣಜಗವೆಂಬ ಅಘೋರಾನನದ। ತ್ರಿಣಯನಂತೆ
ಶಿವಲಿಂಗ ಶರೀರ। ದಾರುಣ ಕಾಂತಿಯೊಳಜ್ಞೆಯ ಶಕ್ತಿಸದಾ। ಘೃಣಿ
ಯಾಗುತ ವಿದ್ಯಾಕಲೆಮುದದ। ಶೋಣಿತ ವರ್ಣಾಂಬರ ಮುಖಕಲ್ಲಿ।

ಮಾಣದೆ ನಿರಹಂಭಾವ ಕರದಲ್ಲಿ। ಪೂಣಯವಿರದೆ ಸ್ವರೂಪಿಕ್ಕುತಲಿ। ಜಾಣತ್ವದಿ ಸಾಮಪಠಿಸುತಲಿ। ಕೇಣಗೊಂಡು ಕುಂಡಲಾಕೃತಿಯಿಂತಿದು। ತ್ರಾಣವು ಪ್ರಸಾದಸ್ಥಲವಿಂತಹುದು। ಕಾಣದನರಂದ್ಯಾ ಕುಸುರುವುದು. ನೇಣಾಳ್ವಳಿದರೆ ಇದು ತಿಳಿಯುವುದು ॥೩॥

ವಾಯುವೆ ಭೂತ ಮಾಂಜಿಷ್ಠವರ್ಣದ। ರಾಯತ ಷಟ್ಕೋಣನಾಹತ ಚಕ್ರದ। ಛಾಯ ಕುಂಕುಮದಳ ಪನ್ನೆರಡದ। ಶ್ರೇಯದ "ಕಾದಿ ಟಾಂತ್ಯ" ಸ್ವರ ಮಧ್ಯದ। ಲಾಯದಿ ಸಾವಿರ ಅಜಪಮಂತ್ರದ। ಸ್ತೋಯವಿಡಿದು ಶ್ರೀರುದ್ರನು ಒಪ್ಪಿದ। ಕಾಯರಹಿತವಕಾರಲ್ಲಿಹುದು । ಜೀಯ ಶಬ್ದ ಘೇರಿಯ ಬಿಳಿರೂಪದ ಮಾಯವಿರದೆ ಜಂಗಮಲಿಂಗೊಪ್ಪಿದ ನಿಯತ ಕೆಂಪು ತತ್ಪುರುಷಾನನದ ಪ್ರಿಯತ ಶಾಂತ್ಯಕಾಲದಿ ಶಕ್ತಿ ಸದಾ ಆಯವಾದ ಮೂರುತಿಯ ಸಾದಾಖ್ಯದದಾಯವರಿತು ಸಂಜ್ಞೆಲಿ ಗೂಢದ ನ್ಯಾಯ ಉತ್ತರದಿಕ್ಕಸರ್ವಣದ ಹಸ್ತದಿ ಸ್ಪರ್ಶನದವಾಯದಿ ತ್ವಕ್ಕುಖ ಕಾಲನು ಭಾವದ। ಬೀಯ್ಯವಿಲ್ಲದರ್ಪಿಸುವದೆ ಭಕ್ತ್ಯದ। ಸ್ವಾಯದೆ ಅರ್ಧ ಚಂದಿರನಾಕಾರದ ನೋಯವಳಿದ ಪ್ರಾಣಲಿಂಗಿಜಾಗದ । ಬಾಯಮಾತಿರದು ಸಾಧಿಸಿ ತಿಳಿಯೆಂದ ॥೪॥

ಅಸಮಾಂಬರವು ಕಪ್ಪಿನ ವರ್ಣವು। ವಿಶುದ್ಧಿಚಕ್ರದುವರ್ತುಳಾಕಾರವು। ಬಿಸಜದೆಸಳ್ಗಳ್ಪದಿನಾರಿರ್ಪವು। ವಸುಸ್ವರ ಆದ್ಯಂತಕ್ಷರ ತೋರ್ಪುವು। ಕುಸುಮದೀಪ್ತಿಯು ಧವಳಾಕಾರವು। ಒಸೆದುಸುರುವ ಸಾವಿರದ ಮಂತ್ರವು। ಪಸರಿಸಿ ಈಶ್ವರನಿರ್ಪುದಾತಾವು। ಎಸೆವ ಯಕಾರ ಸ್ಫಟಿಕ ವರ್ಣವು। ಉಸುರಲ್ಕುಸದಳ ಮೇಘನಾದವು। ಪ್ರಸಾದ ಲಿಂಗ ಶಾಸನ ನಾಮವು। ಅಸಮಾನವಾದ ಶ್ವೇತವಕ್ತ್ರವು। ಮಸಳಿಸಿದಂಥ ಶಾಂತಿಯ ಕಲೆಯು। ಮಿಸುಪ ಕಪೋತ ಮಾಯದ ಶಕ್ತಿಯು। ಭಾಸಮಾನದ ಶಿವನ ಸಾದಾಖ್ಯವು। ನಾಶವಿರದ ಗಾಯತ್ರಿಯ ಮಂತ್ರವು। ದೋಷರಹಿತ ಸುಜ್ಞಾನದ ಹಸ್ತವು। ಮೋಸವಿರದೆ ಶಬ್ದವ ಶ್ರೋತ್ರಕೆಯು। ಮೀಸಲಾಗಿ ಅರ್ಪಿಸುವುದೆ ಭಕ್ತಿಯು। ಲೇಸುವಡೆದ ದರ್ಪಣದಾಕಾರವು। ಇಂತೆಸೆಗೊಳೆ ಶರಣನಸ್ಥಲವೆಂದ ॥೫॥

ಮನವದು ಮೂರ್ತಿ ತಮಾಂಧಕಾರವು। ಕೊನೆಯ ದ್ವಿದಳವು ಅಜ್ಞಾಸ್ಥಾನವು। ಅನಂತ ವಿದ್ಯುತವರ್ಣದೊಳಿಪ್ಪವು। ಮಿನುಗುವ ಹಂಸಂ ಅಕ್ಷರ ಮಧ್ಯದಿ। ಘನಲಾವಣ್ಯದ ಗುರು ತಾನಿರ್ಪನು। ಕೊನರುವ ಈ

ತನ ಅಕಾರವನ್ನು ಬಹಿಸಿ ಬಿಡುತ್ತದೆ. ಅಂಗದ ಮೇಲಿನ ಲಿಂಗದ ಸ್ವರೂಪವು ಹೀಗೆ ಪ್ರಕಟವಾಗಲು ಅವನ ಅಂಗದ ಸ್ಥಿತಿಯು ನಷ್ಟವಾಗಿ ಅಂಗದ ಮೂಲಕ ಪ್ರಾಣಕ್ಕೆ ಒದಗುವ ಭೋಗನಾದರೂ ನಷ್ಟವಾಗುವದು. ಹೀಗೆ ಇಬ್ಬರೂ ನಷ್ಟವಾಗಲು ಜ್ಞಾನವೆಂಬ ಪ್ರಕಾರವು ಅವನಲ್ಲಿ ಕಂಗೊಳಿಸ ಹತ್ತುವದು. ಹೀಗೆ ಪೂಜಿಸುವಂಥ ಶರಣನು ಮರ್ತ್ಯನೆಂದರೆ ನಾಯಕ ನರಕವೆಂದು ವಚನಕಾರನು ಹೇಳಿದ್ದಾನೆ.

ವಚನ:— ಳಗೆ ದೇವಾ ಮಂಗಳ ಮಜ್ಜನಮಂ ಮಾಡಲು ಶಿವಗಂಧೋದಕದಿಂದ ಪಾದಾರ್ಚನೆಯುಂ ಮಾಡಿ ಹೊಂಗಳಸದೊಳಗರ್ಘ್ಯಂಗಳಂ ತುಂಬಿ ಮಧುಪರ್ಕವಂ ಮಾಡಿ ದೇವಾಂಗ ವಸ್ತ್ರಂಗಳನುಡಿಸಿ ಷೋಡಶಾಭರಣಂಗಳಂ ತೊಡಿಸಿ, ದೇವಗಂಗೆ ಗಂಧಾಕ್ಷತೆ ಪುಷ್ಪಂಗಳಂ ಪೂಜೆಯು ಮಾಡಿ ಅಗರು ಧೂಪಂಗಳಂ ಧೂಪಿಸಿ ಮಂಗಳಾಚರಣೆಯಾರೋಗಣೆವೀಳೆಯವನಳವಡಿಸಿ ಉರಿಲಿಂಗಪೆನ್ದಿ ಪ್ರಿಯ: ವಿಶ್ವೇಶ್ವರಂಗೆ ಗೀತ ವಾದ್ಯ ನೃತ್ಯವನಾಡಿ ಮೆಚ್ಚಿಸುವ ಗಣಂಗಳಿಗೆ ನಮೋ ನಮೋ ಎಂಬೆನು.

ಭಾವ:— ಈ ವಚನದಲ್ಲಿ ವಚನಕಾರನು ಇಷ್ಟವಿಧಾರ್ಚನೆ ಷೋಡಶೋಪಚಾರಗಳನ್ನು ಯಾವ ಬಗೆಯಾಗಿ ಮಾಡಬೇಕೆಂಬುದನ್ನು ಹೇಳಿರುವನು. ಇವನಿಗೆ ಮಂಗಳವೇ ಮಜ್ಜನವಾಗಿದೆ. ಶಿವಗಂಧೋದಕದಿಂದಲೇ ಪಾದಾರ್ಚನೆಯನ್ನು ಮಾಡಬೇಕು ಇದೇ ಬಗೆಯಾಗಿಯೇ ಅರ್ಘ್ಯ ಮಧುಪರ್ಕಾದಿಗಳನ್ನು ಅರ್ಪಿಸಬೇಕು. ದೇವಾಂಗ ಎಂದರೆ ವಸ್ತ್ರಗಳನ್ನು ಉಡಿಸಬೇಕು. ಷೋಡಶಾಭರಣಗಳನ್ನು ತೊಡಿಸಬೇಕು. ದೇವಗಂಗೆ ಗಂಧಾಕ್ಷತ ಪುಷ್ಪಗಳಿಂದ ಪೂಜೆಯು ಮಾಡಬೇಕು ಅಗರು ಧೂಪಗಳನ್ನು ಧೂಪಿಸಬೇಕು. ಹಾಗೂ ಮಂಗಳಾಚಾರವೆಂಬ ಆರೋಗಣೆ ವೀಳೆಯಗಳನ್ನು ಅಳವಡಿಸಬೇಕು, ಗೀತ ವಾದ್ಯ ನೃತ್ಯಗಳನ್ನು ಆಡಿಸಬೇಕು. ಹೀಗೆ ಮೆಚ್ಚಿಸುವವರೇ ನಿಜವಾದ ಗಣಗಳು. ಇವರಿಗೆ ನಾನು ನಮೋ ನಮೋ ಎಂದು ನಮಿಸುವೆನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನ:— ಳಂ ದೇವದಾನವಮಾನವಋಷಿಜನಂಗಳೆಲ್ಲರು ಮಹಾಲಿಂಗವ ಕಂಡಿಹೆವೇ ಎಂದು ಅನೇಕ ಕಾಲಂಗಳಲ್ಲಿ ಜಪತಪ ಧ್ಯಾನವ ಮಾಡಿ ಸಮಾಧಿಯಲ್ಲಿದ್ದು ಕಾಣಲರಿಯದೆ ಬಳಲುತ್ತಿದಾರೆ. ಅವರಲ್ಲಿ ಸಾಮರ್ಥ್ಯ ಪುರುಷರಂಗಿ ಕಂಡಡೆಯೂ, ಕಂಡೇನು ಫಲ? ಘನಲಿಂಗಕ್ಕೆ

ಒಲಿಯರು. ಲಿಂಗವನೊಲಿಸಿಕೊಳಲರಿಯರು ಕೂಡಲರಿಯರು. ಅಲ್ಪ ಭೋಗಂಗಳ ನಿಚ್ಚೈಸಿ ಭೋಗಪದವ ಪಡೆದು ಪುಣ್ಯ ಪಾಪಂಗಳ ಬಲೆಯಲ್ಲಿ ಬೀಳುತ್ತಿರಲು ಅವರುಗಳ ಪರಿಯಂತಲ್ಲ. ಶಿವಶಿವ ಮಹಾದೇವ ಮಹಾಲಿಂಗದ ಕರುಣವನೇನೆಂದುಪಮಿಸಬಹುದು? ಶ್ರೀಗುರುವಾಗಿ ಕರುಣಿಸಿ ತಮ್ಮ ಪ್ರಸನ್ನ ಹಸ್ತದಿಂದೆನಗೆ ಜನನ ಮಾಡಿದ ಮಾತಾ ಪಿತನು ತಾನೆಯಾದನು. ಮಹಾದೀಕ್ಷೆಯಂ ಮಾಡಿ ಶ್ರೀಗುರುವಾದನು. ಮಂತ್ರೋಪದೇಶವ ಮಾಡಿ ಮಂತ್ರರೂಪಾಗಿ ಕರ್ಣದಲ್ಲಿ ಭರಿತವಾದನು. ಪ್ರಸಾದರೂಪಾಗಿ ಜಿಹ್ವೆಯಲ್ಲಿ ಭರಿತನಾದನು. ಮಹಾ ವಿಭೂತಿಯಾಗಿ ಭಾಳದಲ್ಲಿ ಭರಿತನಾದನು. ಇಂತು ಸರ್ವಾಂಗದಲ್ಲಿ ಭರಿತವಾದನು. ಮತ್ತೆ ಮತ್ತೆ ಮಹಾ ಜ್ಯೋತಿ. ಶ್ರೀ ಗುರುಲಿಂಗಮೂರ್ತಿಯನು ಪ್ರಾಣವನು ಏಕೀಭವಿಸಿ ಪ್ರಾಣಲಿಂಗವಾದಾತನಾಗಿ ಅಂಗದ ಮೇಲೆ ಬಿಜಯಂಗೈದು ಅಂಗಲಿಂಗವಾದನು. ಮಹಾಲಿಂಗವಾಗಿ ಕರಸ್ಥಲದಲ್ಲಿ ನಿರಂತರ ಪೂಜೆಗೊಳುತಿದ್ದನು. ಇಂತಹ ವಿದಿತವಹ ಸುಜ್ಞಾನವ ಕರುಣಿಸಲೆಂದು ಶರಣ ಭರಿತನಾಗಿ ಬಂದು ಕರುಣಿಸಿದನು. ಇಂತೀ ಶ್ರೀ ಗುರುಲಿಂಗಜಂಗಮರೂಪಾಗಿ ಕರುಣಿಸಿ, ಪ್ರಸನ್ನವಾಗಿ ಪ್ರಸಾದವ ಕರುಣಿಸಿ, ಪ್ರಸಾದರೂಪಾಗಿ ಸಲಹಿದನು. ಸಾಲೋಕ್ಯ, ಸಾಮೀಪ್ಯ, ಸಾಯುಜ್ಯವೆನಿಪ ಚತುರ್ವಿಧ ಪದಕ್ಕೆ ಘನತರ ಪದ ದಾಸೋಹಪದದಲ್ಲಿ ನಿಲಿಸಿದನು. ಶಿವಶಿವಾ ಮಹಾಪದವನೇನೆಂದುಪಮಿಸಲರಿಯೆ. ಸದ್ಗುರುವಿನ ಕೃಪೆ. ವಾಙ್ಮನಾತೀತ ಮಹಾ ಘನ ಪರಿಣಾಮ ಸುಖವು. ಇಂತೀ ಸುಖವನು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರ ತಾನೇ ಬಲ್ಲ.

ಭಾವಃ—ಬಹುಜನರು ಪರಮಾತ್ಮನನ್ನು ಕಾಣಬೇಕೆಂದು ಜಪತಪ ಧ್ಯಾನ ಮಾಡುವರು ಮತ್ತು ಯೋಗಾಭ್ಯಾಸವನ್ನು ಮಾಡುವರು. ಆದರೆ ಅವರಿಗೆ ಲಿಂಗವು ಸಾಧಿಸದು. ಅವರು ಕೇವಲ ಸಿದ್ಧಿಗಳನ್ನು ಒಂದು ವೇಳೆ ಸಂಪಾದಿಸಬಹುದು. ಆದರೆ ಅದರಿಂದ ಫಲವಿಲ್ಲ. ಅವರು ಶ್ರೇಷ್ಠವಾದ ಲಿಂಗಕ್ಕೆ ಒಲಿಯಬೇಕು. ಆದರೆ ಹಾಗೆ ಒಲಿಯಲಾರರು. ಇವರು ಕರ್ಮದ ಜಾಲದಲ್ಲಿ ಸಿಕ್ಕು ಬಳಲುತ್ತಾರೆ.

ಆದರೆ ಲಿಂಗವನ್ನು ಸಾಧಿಸಬೇಕಾದರೆ ಗುರುವಿನ ಹಸ್ತದಿಂದ ದೀಕ್ಷೆಯನ್ನು ಹೊಂದಬೇಕು. ಮಂತ್ರೋಪದೇಶವನ್ನು ಹೊಂದಿ ಮಂತ್ರರೂಪನಾಗಬೇಕು. ಪ್ರಸಾದವನ್ನು ಸ್ವೀಕರಿಸಿ ಜಿಹ್ವೆಯಲ್ಲಿ, ವಿಭೂತಿಯನ್ನು

ಧಾರಣಮಾಡಿ ಭಾಳದಲ್ಲಿ, ಲಿಂಗಭರಿತನಾಗಬೇಕು. ಮಹಾ ಲಿಂಗವೂ ತೀಯನ್ನೂ ಪ್ರಾಣವನ್ನೂ ಏಕೀಭವಿಸಬೇಕು ಮಹಾಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಳ್ಳಬೇಕು. ಹೀಗೆ ಗುರುಲಿಂಗಜಂಗಮರೂಪಾಗಿ ಲಿಂಗವು ಭಕ್ತನ ಕರ ಮನ ಭಾವಗಳಲ್ಲಿ ತುಂಬಿಕೊಂಡು ಪ್ರಸಾದರೂಪಾಗಿ ಭಕ್ತನು ವ್ಯವಹರಿಸಿದರೆ ಅವನು ದಾಸೋಹ ಪದವನ್ನು ಹೊಂದುವನು. ಇದು ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯಪದಕ್ಕಿಂತಲೂ ಘನತರವಾದದ್ದು. ಇದು ವಾಙ್ಮನಾತೀತವಾದ ಮಹಾಘನ ಪರಿಣಾಮ ಸುಖವಿರುತ್ತದೆ.

ವಚನಃ— ಋಕ್. ವೇದವಾಕ್ಯ ವಿಚಾರಕ್ಕೆ ಬೀಜ, ಶಾಸ್ತ್ರವಾಕ್ಯ ಸಂದೇಹಕ್ಕೆ ಬೀಜ, ಪುರಾಣವಾಕ್ಯ ಪುಣ್ಯಕ್ಕೆ ಬೀಜ, ಭಕ್ತಿಯ ಫಲ ಭವಕ್ಕೆ ಬೀಜ, ಏಕೋಭಾವದ ನಿಷ್ಠೆ ಸಮ್ಯಜ್ಞಾನಕ್ಕೆ ಬೀಜ, ಸಮ್ಯಜ್ಞಾನ ಅದ್ವೈತಕ್ಕೆ ಬೀಜ, ಅದ್ವೈತ ಅರಿವಿಂಗೆ ಬೀಜ, ಅರಿವನಾರಡಿಗೊಂಡು ಕುರುಹಿಲ್ಲದ ಲಿಂಗದಲ್ಲಿ ತೆರಹಿಲ್ಲದಿಪ್ಪುದನರಿಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?

ಭಾವಃ— ಇದರಲ್ಲಿ ಭಕ್ತನು ಲಿಂಗದಲ್ಲಿ ಸಮರಸಭಾವವುಳ್ಳವನಾಗಿ ವರ್ತಿಸಬೇಕೆಂದು ಹೇಳಿದ್ದಾನೆ. ಇದೇ ಮೋಕ್ಷಕ್ಕೆ ಸಾಧನವು. ಬರೀ ವೇದ, ಶಾಸ್ತ್ರ, ಪುರಾಣ ಇವುಗಳನ್ನು ಓದುವದರಿಂದ ಪ್ರಯೋಜನವಿಲ್ಲ. ಕೇವಲ ಭಕ್ತಿಮಾರ್ಗದಿಂದಲೂ ಪ್ರಯೋಜನವಿಲ್ಲ. ಏಕೋಭಾವನಿಷ್ಠೆ ಅಥವಾ ಸಮ್ಯಜ್ಞಾನ ಅಥವಾ ಅದ್ವೈತಾಚರಣೆ ಇವಾವೂ ಉಪಯೋಗವಾದವುಗಳಲ್ಲ. ಆದರೆ ಲಿಂಗದಲ್ಲಿ ಭಿನ್ನಭಾವವಿಲ್ಲದೆ ಇರಬೇಕೆಂದು ವಚನಕಾರರು ಹೇಳಿದ್ದಾನೆ.

ಇಷ್ಟಲಿಂಗ ಹೋದರೆ ಆತ್ಮಘಾತ ಮಾಡಕೂಡದು.

ವಿವರಣೆ:— ಅನೇಕರು ಲಿಂಗದ ವಿಷಯವಾಗಿ ವಿಪರೀತ ಕಲ್ಪನೆಗಳನ್ನು ಮಾಡಿಕೊಂಡು ಅದು ಕಳೆದರೆ ಅಥವಾ ಭಗ್ನವಾದರೆ ಆತ್ಮಘಾತ ಮಾಡಿಕೊಳ್ಳುವದುಂಟು. ಇದು ಪಾಪಿಷ್ಠರ ವರ್ತನೆ ಎಂದು ವಚನಕಾರರ ಮತವಿದೆ. ಇವರಿಗೆ ಇಷ್ಟಲಿಂಗದ ಮರ್ಮವೇ ತಿಳಿಯುವದಿಲ್ಲೆಂದು ಇವರು ಅನೇಕ ವಚನಗಳಲ್ಲಿ ಹೇಳಿರುವರು. ಇದನ್ನೇ ಉರಿಲಿಂಗ ಪೆದ್ದಿಯು ಸಮರ್ಥಿಸಿ ಕೆಲವು ಉಕ್ತಿಗಳನ್ನು ನುಡಿದಿರುವನು.

ವಚನಃ— ಳಳ. ಅರುಹೆಂಬ ಗುರುವಿನ ಕೈಯಲ್ಲಿ, ವಿರಕ್ತಿ ಎಂಬ ಶಿವಧಾರಮಂ ಕೊಟ್ಟು, ಸುಮತಿ ಎಂಬ ಸೆಜ್ಜೆಯಂ ಪವಣಿಸಿ, ಸಮತೆ ಎಂಬ ಲಿಂಗಸಾಹಿತ್ಯವ ಬಿಜಯಂಗೈಸಿಕೊಂಡು, ಸರ್ವಜೀವದಯಾ ಪರನೆಂದು, ಲಿಂಗಾರ್ಚನೆಯಂ ಮಾಡುವ ಭಕ್ತನ ಕರಾಧಾರದ ಲಿಂಗವು ತಪ್ಪಿ ಆಧಾರ ಸ್ಥಾಪ್ಯವಾದರೇನು? ಶಂಕೆಗೊಳಲಿಲ್ಲ. ತೆಗೆದುಕೊಂಡು ಮಜ್ಜನಕ್ಕೆರೆವುದೇ ಸದಾಚಾರ. ಶ್ರೀ ಗುರು ಷಟ್‌ಸ್ಥಲವನು ಅಂತರಂಗದಲ್ಲಿ ನಿಕ್ಷೇಪಿಸಿದನಾಗಿ, ದೃಶ್ಯಕ್ಕೆ ತ್ಯಾಗವಲ್ಲದೆ ಅದೃಶ್ಯಕ್ಕೆ ತ್ಯಾಗ ಉಂಟೇ? ಇಲ್ಲ. ಉಂಟೆಂದನಾದಡೆ ಗುರುದ್ರೋಹ. ಆ ಭಕ್ತನಿಂತವನಂತವನೆಂದು ದೂಷಿಸಿ ನುಡಿದವರಿಗೆ ಅಘೋರ ನರಕ ತಪ್ಪದಯ್ಯಾ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ವಚನಕಾರನು ಈ ವಚನದಲ್ಲಿ ಲಿಂಗವು ಕೈತಪ್ಪಿ ಕೆಳಗೆ ಬಿದ್ದರೆ ಏನೂ ಶಂಕೆ ಪಡಬಾರದು. ಅದನ್ನು ಎತ್ತಿ ತೆಗೆದುಕೊಂಡು ಪೂಜಾದಿ ಕಾರ್ಯಗಳನ್ನು ಮಾಡಬೇಕೆಂದು ಹೇಳಿರುವನು. ಯಾಕಂದರೆ ಇದು ಕೇವಲ ಬಾಹ್ಯಲಿಂಗವಿದ್ದು, ನಿಜವಾದ ಲಿಂಗವು ಅವನ ಪ್ರಾಣದಲ್ಲಿ ನೆಲೆಗೊಂಡಿರುತ್ತದೆ. ಈ ಲಿಂಗವು ಹೋಗಲಾರದು. ದೃಶ್ಯ ಪದಾರ್ಥಕ್ಕೆ ತ್ಯಾಗವಲ್ಲದೆ ಅದೃಶ್ಯಕ್ಕೆ ತ್ಯಾಗವಿರುವದಿಲ್ಲ. ಈ ಅದೃಶ್ಯ ಲಿಂಗವು ಭಕ್ತನ ಅರುಹು, ಸುಮತಿ, ಸಮತೆ, ನಡೆನುಡಿಗಳಲ್ಲಿ ಕೂಡಿಕೊಂಡು ಏಕಾಕಾರವಾಗಿರುತ್ತದೆ. ಇದನ್ನು ಭಕ್ತನು ಬಿಟ್ಟಿರಲಾರನು. ಆದ್ದರಿಂದ ಬಾಹ್ಯಲಿಂಗವು ತಪ್ಪಿ ಬಿದ್ದರೆ ಅದನ್ನು ಎತ್ತಿ ತೆಗೆದುಕೊಂಡು ಪೂಜಿಸಬೇಕೆಂದು ವಚನಕಾರನು ಇಲ್ಲಿ ಹೇಳಿರುವನು.

ವಚನಃ— ಳಳ. ಶ್ರೀಗುರು ಶಿಷ್ಯಂಗೆ ಮಂತ್ರವ ಮೂರ್ತಿಗೊಳಿಸಬೇಕಾಗಿ ಸಪ್ತಪೃಥ್ವಿಯ ಮೇಲಣ ಕಣಿಯ ತಂದು ಇಷ್ಟಲಿಂಗಮಂ ಮಾಡಿ ಶಿಷ್ಯನ ತನುವಿನ ಮೇಲೆ ಅವಧರಿಸಿದ ಲಿಂಗವು ಅವದಳವಾಗಿ ಭೂಮಿಯಲ್ಲಿ ಸಿಂಹಾಸನಂಗೊಂಡಿತ್ತೆಂದು ಸಮಾಧಿಯ ಹೊಗುವರಯ್ಯ. ಲಿಂಗಕ್ಕೆ ಅವದಳವಾದರೆ ಭೂಮಿ ತಾಳಬಲ್ಲುದೆ ಅಯ್ಯ? ಮಾರಾಂತನ ಗೆಲಿವೆನೆಂದು ಗರುಡಿಯ ಹೊಕ್ಕು ಕತಾರಿಯ ಕೋಲ ಕಳೆದುಕೊಂಡು ಸಾಧನೆಯ ಮಾಡುವಲ್ಲಿ ಕೈ ತಪ್ಪಿ ಕೋಲು ನೆಲಕ್ಕೆ ಬಿದ್ದರೆ, ಆ ಕೋಲ ಬಿಟ್ಟು, ಸಾಧನೆಯ ಬಿಟ್ಟು ಕಳೆವರೆ ಅಯ್ಯ? ತಟ್ಟು ಮುಟ್ಟು ಹಂಚುವಲ್ಲಿ ಅಲಗು ಬಿದ್ದರೆ ಭಂಗವಲ್ಲದೆ ಕೋಲು ಬಿದ್ದರೆ ಭಂಗವೇ ಅಯ್ಯ? ಆ ಕೋಲ ಕಳೆದುಕೊಂಡು ಸಾಧನೆಯಂ ಮಾಡುವದೇ ಕರ್ತವ್ಯ. ಆ ಲಿಂಗವು ಎಂದಡೇನಯ್ಯ? ಶ್ರೀವಿಭೂತಿ ಏಳೆಯಕ್ಕೆ ಸಾಕ್ಷಿಯಾಗಿ ಬಂದ ಶಿವಗಣಂಗಳು ಹುಸಿಯೇ? ಆ ಗಣಂಗಳು ಹುಸಿಯಾದಡೆ ಕರ್ಣ ಮಂತ್ರ ಹುಸಿಯೇ? ಆ ಕರ್ಣ ಮಂತ್ರ ಹುಸಿಯಾದಡೆ, ಶ್ರೀಗುರುಲಿಂಗವು ಹುಸಿಯೇ? ಶ್ರೀಗುರುಲಿಂಗವು ಹುಸಿಯಾದಡೆ ಜಂಗಮಲಿಂಗ ಹುಸಿಯೇ? ಆ ಜಂಗಮಲಿಂಗ ಹುಸಿಯಾದಡೆ ಪಾದತೀರ್ಥ ಪ್ರಸಾದ ಹುಸಿಯೇ? ಇಂತೀ ಷಟ್‌ಸ್ಥಲವ ತುಚ್ಛವ ಮಾಡಿ ಗುರೂಪದೇಶವ ಹೀನ ಮಾಡಿ ಸಮಾಧಿಯ ಹೊಗುವ ಪಂಚಮಹಾಪಾತಕರ ಮುಖವ ನೋಡಲಾಗದು ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಲಿಂಗವು ಭಿನ್ನವಾದರೆ ಆತ್ಮಹತ್ಯ ಮಾಡಬಾರದೆಂದು ವಚನಕಾರನು ಹೇಳಿರುವನು. ಇಷ್ಟಲಿಂಗವು ಸಾಧಕನ ಕಯ್ಯ ಕೋಲಿನಂತೆ ಇದೆ. ಆ ಕೋಲು ಕೈ ತಪ್ಪಿ ಕೆಳಗೆ ಬಿದ್ದರೆ, ಸಾಧಕನು ಅದನ್ನು ಪುನಃ ಎತ್ತಿ ತನ್ನ ಸಾಧನೆಯನ್ನು ನಡಿಸುವನು. ಹಾಗೆಯೇ ಲಿಂಗವು ತಪ್ಪಿಹೋದರೆ, ಇನ್ನೊಂದನ್ನು ಧಾರಣಮಾಡಿ ತನ್ನ ಲಿಂಗಸಾಧನೆಯನ್ನು ಜರಗಿಸಬೇಕೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಲಿಂಗವು ಕಳೆದಾಕ್ಷಣವೇ ಅದನ್ನು ದಯಪಾಲಿಸಿದ ಶಿವಗಣಂಗಳೂ ಉಪದೇಶಿಸಿದ ಮಂತ್ರವೂ ಹುಸಿಯಾಗಲಾರವು. ಜಂಗಮಲಿಂಗ ಪಾದತೀರ್ಥ ಪ್ರಸಾದ ಇವುಗಳ ಮೇಲೆಯೂ ಲಿಂಗವು ಅವಲಂಬಿಸಿದ್ದು ಇವೂ ಹುಸಿಯಾಗಲಾರವು. ಆದ್ದರಿಂದ ಆತ್ಮಘಾತಮಾಡಿಕೊಂಡು ಸಮಾಧಿಯನ್ನು ಹೊಗಬಾರದೆಂದು ವಚನಕಾರನ ಅಭಿಪ್ರಾಯವು.

ಲಿಂಗವೊಂದನ್ನೇ ನಂಬು.

ವಿವರಣೆಃ— ಲಿಂಗಧಾರಣೆಯಾವ ಬಳಿಕ ಲಿಂಗ ಒಂದನ್ನೇ ನಂಬ ಬೇಕೆಂದು ವೀರಶೈವ ಧರ್ಮದ ಮುಖ್ಯ ತತ್ವವದೆ. ಅದನ್ನೇ ವಚನ ಕಾರರು ಯಾವಾಗಲೂ ಸಮರ್ಥಿಸಿ ನುಡಿಯುತ್ತಾರೆ. ಉರಿಲಿಂಗಪೆ ದ್ದಿಯು ಈ ತತ್ವವನ್ನು ಕೆಳಗಿನ ವಚನಗಳಲ್ಲಿ ಹೇಳಿರುವನು.

ವಚನಃ— ೪೬. ಪರುಷದ ಗೃಹದೊಳಗಿರ್ದು ತಿರಿವನೇ ಮನೆ ಮನೆಯ? ತೊರೆಯೊಳಗಿದ್ದವನು ತೃಷೆಯಾಗಲು ಅರಸುವನೇ ಕೆರೆ ಯುದಕವ? ಮಂಗಳ ಲಿಂಗವಂಗದ ಮೇಲೆ ಇದ್ದು ಅನ್ಯಲಿಂಗಂಗಳ ನೆನೆವನೇ ನಿಮ್ಮ ಭಕ್ತನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಭಾವಃ— ಪರಮಾತ್ಮನ ಕಳೆಯು ತನ್ನಲ್ಲಿ ಒಡಮೂಡಿದ ಬಳಿಕ ಅದರ ಪ್ರಾಬಲ್ಯವನ್ನು ತನ್ನಲ್ಲಿ ಹೆಚ್ಚಿಸಬೇಕೇ ಹೊರ್ತು ಅದನ್ನು ಬಿಟ್ಟು ಮತ್ತೊಂದರ ಕಡೆಗೆ ಭಕ್ತನಾದವನು ತನ್ನ ಲಕ್ಷವನ್ನು ಹತ್ತಿಸಕೂಡದು. ಅವನು ಇತರ ದೇವತೆಗಳನ್ನು ಪೂಜಿಸಬಾರದು. ಒಂದು ವೇಳೆ ಪೂಜಿ ಸಿದರೆ ಪರುಷದ ಕಣಿಯು ತನ್ನಲ್ಲಿ ಇದ್ದ ಬಳಿಕ ಅದರ ಉಪಯೋಗ ವನ್ನು ಮಾಡಿಕೊಳ್ಳುವದನ್ನು ಬಿಟ್ಟುಕೊಟ್ಟು ಮನೆಮನೆ ಭಿಕ್ಷೆ ಬೇಡಿ ದಂತೆಯೇ ಸರಿ. ಅಥವಾ ಹರಿಯುವ ನದಿಯಲ್ಲಿರಲು ಅದನ್ನು ಬಿಟ್ಟು ಕೊಟ್ಟು ಕೆರೆಯುದಕವನ್ನು ಬಯಸಿದಂತೆ. ಈ ಉದಾಹರಣೆಗಳ ಮೇಲಿಂದ ಲಿಂಗ ಮತ್ತು ಇತರ ಸ್ಥಾವರಲಿಂಗ ಇವುಗಳಲ್ಲಿರುವ ಭೇದವನ್ನು ತಿಳಿಯಬಹುದು. ಇಷ್ಟಲಿಂಗದ ಪರಿಣಾಮಗಳು ಬಹು ವ್ಯಾಪಕವಾಗಿವೆ. ಆದರೆ ಸ್ಥಾವರಲಿಂಗದ ಪರಿಣಾಮಗಳು ಸಂಕುಚಿತವಾಗಿರುತ್ತವೆಂದು ವಚನಕಾರನ ಭಾವವು.

ವಚನಃ— ೪೭. ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ ಮರಳಿ ಅನ್ಯದೈವಂಗಳನಾರಾಧಿಸುವ ಕುನ್ನಿಗಳು ನೀವು ಕೇಳಿರೋ. ವಿಷ್ಣುವೇ ದೈವವೆಂದು ಆರಾಧಿಸಿದ ಬಲಿಗೆ ಬಂಧನವಾಯಿತ್ತು. ವಿಷ್ಣುವೇ ದೈವವೆಂದು ಆರಾಧಿಸಿದ ಕರ್ಣನ ಕವಚ ಹೋಯಿತ್ತು; ವಿಷ್ಣುವೇ ದೈವವೆಂದು ಆರಾಧಿಸಿದ ನಾಗಾರ್ಜುನನ ಶಿರ ಹೋಯಿತ್ತು. ಅದಂತಿರಲಿ.

ಪ್ರಾಣನೇ ದೈವವೆಂದು ಆರಾಧಿಸಿದ ದಕ್ಷನಿಗೆ ಕುರಿದಲೆಯಾಯಿತ್ತು. ಮೈಲಾರನೇ ದೇವರೆಂದಾರಾಧಿಸಿದಾತನು ಕೊರಳಿನಲ್ಲಿ ಕವಡೆಯ ಕಟ್ಟಿ ನಾಯಾಗಿ ಬೊಗುಳುತ್ತಿರ್ಪ. ಭೈರವನೇ ದೇವರೆಂದಾರಾಧಿಸಿದವನು ಕೊರಳಿನಲ್ಲಿ ಕವಡೆಯ ಕಟ್ಟಿ ಕುರುಳ ಬೆರಳ ಕಡಿದಿಕ್ಕಿ ಬಾಹಿರರಾದರು. ಪಾಯಿರಾಣಿಯೇ ದೈವವೆಂದಾರಾಧಿಸಿದಾತನು ಕೊರಳಿಗೆ ಕವಡೆಯ ಕಟ್ಟಿ ತಲೆಯಲ್ಲಿ ಕೆರಹ ಹೊತ್ತು ಬೇವಿನ ಸೊಪ್ಪನುಟ್ಟು, ಲಜ್ಜೆಯ ನೀಗಿದ. ಇನ್ನು ಬಿನುಗು ದೈವಂಗಳ ಭಕ್ತಿ ಬಣಗುನಾಯಿ ಒಣಗಿದೆಲುವ ಕಚ್ಚಿಕೊಂಡು ಕಂಡಕಂಡೆಡೆಗೆ ಹರಿದಂತಾಯಿತ್ತು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಬಲಿಚಕ್ರವರ್ತಿ, ಕರ್ಣ, ನಾಗಾರ್ಜುನ, ದಕ್ಷ ಮೊದಲಾದವರು ಒಬ್ಬನೇ ದೇವರೆಂದು ಭಾವಿಸದೆ ಬೇರೆ ದೈವಗಳನ್ನು ಭಜಿಸಿದ್ದರಿಂದ ಯಾವ ದುಃಸ್ಥಿತಿಯು ಅವರಿಗೆ ಪ್ರಾಪ್ತವಾಯಿತೆಂಬದನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಹಾಗೆಯೇ ಮೈಲಾರ, ಭೈರವ, ಪಾಯಿರಾಣಿ ಮೊದಲಾದ ಕಿರುಕುಳ ದೈವಗಳನ್ನು ಭಜಿಸಿದಲ್ಲಿ ಎಂಥ ಅವಹೇಲನವು ಪ್ರಾಪ್ತವಾಗುತ್ತದೆಂಬದನ್ನು ಇಲ್ಲಿ ವಿವರಿಸಿರುವನು.

ಗುರುಲಿಂಗಜಂಗಮ.

ವಿವರಣೆಃ— ಮುಂದಿನ ವಚನಗಳಲ್ಲಿ ವಚನಕಾರನು ಗುರುಲಿಂಗಜಂಗಮದ ಸ್ವರೂಪ, ಅವುಗಳ ಕಾರ್ಯಗಳು, ಅವುಗಳ ಪರಸ್ಪರ ಸಂಬಂಧ, ಶಿವಯೋಗ ಇವುಗಳ ಮರ್ಮವನ್ನು ವಿಶದಪಡಿಸಿರುವನು. ಗುರುಲಿಂಗಜಂಗಮವನ್ನು ತನ್ನಲ್ಲಿ ಬರಮಾಡಿಕೊಳ್ಳುವದೇ ಶಿವಯೋಗ ಪೆನಿಸುವದು. ಈ ಶಿವಯೋಗಸಾಧನೆಯಲ್ಲಿ ಗುರುವಿನಲ್ಲಿ ಪೂರ್ಣ ಸಾಮ್ಯಭಾವವನ್ನು ಹೊಂದಿ ಅವನ ಗುಣಗಳನ್ನು ತನ್ನಲ್ಲಿ ಬರಮಾಡಿಕೊಂಡು ಆಚರಿಸಬೇಕು. ಇದರಿಂದ ಲಿಂಗಜಂಗಮಗಳು ತನ್ನಲ್ಲಿ ಒಡಮೂಡುವವು. ಮತ್ತು ಕಡೆಗೆ ಶಿವಯೋಗವನ್ನು ಹೊಂದಿ ಮೋಕ್ಷವನ್ನೈದುವನು.

ವಚನಃ—ಳಲ. ಅನಂತ ಜನ್ಮಂಗಳ ಪಾಪಂಗಳು ಸವೆದು ಹೋಗಿ ಶ್ರೀ ಗುರುವಿನ ಕರುಣಾಕಟಾಕ್ಷದಿಂದ ಪ್ರಾಣಲಿಂಗೋಪದೇಶವ ಪಡೆದು, ಸದ್ಭಕ್ತರಾಗಿ ಶಿವಲಿಂಗ ದರ್ಶನ ಸ್ಪರ್ಶನವ ಮಾಡಿ, ಆ ಲಿಂಗವನಂಗದಲ್ಲಿ ಧರಿಸಿಕೊಂಡು, ಅಂಗವೇ ಲಿಂಗ, ಲಿಂಗವೇ ಅಂಗ, ಪ್ರಾಣವೇ ಲಿಂಗ, ಲಿಂಗವೇ ಪ್ರಾಣವಾಗಿ, ಅಂತರಂಗ ಬಹಿರಂಗ ಸರ್ವಾಂಗವೆಲ್ಲವೂ ಲಿಂಗವಾದ ಬಳಿಕ, ಇಂತೀ ಶ್ರೀಗುರು ಕೊಟ್ಟ ಲಿಂಗವ ಬಿಟ್ಟು ಬೇರೆ ವಸ್ತ್ತೆ ಅತ್ಯತತ್ವವ ವಿಚಾರಿಸಿ ನೋಡಬೇಕೆಂದು, ಪರಮಾತ್ಮನಲ್ಲಿ ಯೋಗವ ಮಾಡಿ ಯೋಗಿಗಳಾಗಿ ಮುಕ್ತರಾದೆವೆಂಬಿರಿ! ಶಿವಶಿವಾ! ಆತ್ಮನಸು ಪರಮಾತ್ಮನನು ಶ್ರೀ ಗುರುಸ್ವಾಮಿ ಒಂದು ಮಾಡಿ, ಇದೇ ನಿನ್ನ ನಿಜತ್ವವೆಂದು ಅರುಹ ಹೇಳಿ ತೋರಿಕೊಟ್ಟ ಬಳಿಕ, ಇಂತಹ ಗುರುವಾಜ್ಞೆಯ ಮೀರಿ ಲಿಂಗವನರಿಯದೆ, ಲಿಂಗಬಾಹಿರರಾದ ದ್ವಿಜನನು, ಯೋಗಿಯನು, ಸನ್ಯಾಸಿಯನು ಗುರುವೆಂದು ಭಾವಿಸಬಹುದೆ? ಶಿವಶಿವಾ! ಅದು ಗುರುದ್ರೋಹ ಪರಶಿವಮೂರ್ತಿಯಾದ ಗುರುಸ್ವಾಮಿಯು ಷಡ್ದರ್ಶನಗಳಿಗೂ ಸಮಸ್ತ ಮತಂಗಳಿಗೂ ಸಕಲಾಗಮಂಗಳಿಗೂ ಶಿವನೊಬ್ಬನೇ ಕರ್ತನೆಂದು, ಶಿವದರ್ಶನವೇ ವಿಶೇಷವೆಂದು ಅಧಿಕನೆಂದು ಹೇಳಿ ತೋರಿಕೊಟ್ಟ ಬಳಿಕ, ಶೈವವೆಂದು, ಶಾಕ್ತೇಯವೆಂದು, ವೈಷ್ಣವವೆಂದು, ಗಾಣಾಪತ್ಯವೆಂದು, ಸೌರವೆಂದು, ಕಾಪಾಲಿಕವೆಂದು, ಇಂತೀ ಷಡ್ದರ್ಶನಂಗಳಿಗೂ ಶಿವನೊಬ್ಬನೇ ಕರ್ತ, ಇಂತೀ ಷಡ್ದರ್ಶನಕ್ಕೆ ಶಿವದರ್ಶನವೇ ಅಧಿ

ಕವೆಂದು ಇಂತೀ ಶಿವದರ್ಶನ ಮಾರ್ಗವಲ್ಲದೆ ಮುಕ್ತಿ ಇಲ್ಲವೆಂದು, ಆ ಪರಶಿವನೆಂಬ ಗುರುಮೂರ್ತಿ ಅರುಹಿ ಕಾಣಿಸಿ ಹೇಳಿ ತೋರಿಕೊಟ್ಟ ಬಳಿಕ. ಅದೆಂತೆಂದಡೆ, ಶಿವಧರ್ಮೆ ॥ ಶ್ಲೋ॥ ದರ್ಶನಂ ಷಡ್ವಿಧಂ ಪ್ರೋಕ್ತಂ ಶೈವ ಶಾಕ್ತೇಯ ವೈಷ್ಣವಂ । ಗಾಣಾಪತ್ಯಂಚ ಸೌಂಚ ಕಾಪಾಲಿಕ ಇತಿ ಸ್ಮೃತಃ ॥ ಮತ್ತಂ॥ ಷಡ್ದರ್ಶನಾದಿ ದೇವೋ ಹಿ ಮಹಾದೇವೋ ನ ಸಂಶಯಃ । ಮಂತ್ರಪೂಜಾದಿ ಭಿನ್ನಾನಾಂ ಮೂಲಂ ಪರಶಿವ ಸ್ಮೃಥಾ ॥ ಎಂದುದಾಗಿ ಇನ್ನು ವೈಷ್ಣವವೆಂದು, ಆತ್ಮಯೋಗವೆಂದು, ಶಾಕ್ತಿಕವೆಂದು, ವೈದಿಕವೆಂದು, ಇಂತೀ ಭ್ರಾಂತಿನ ದರ್ಶನ ಮತಂಗಳನು ಕೇಳಿ, ಅಲ್ಲಿಯ ಧರ್ಮಾಧರ್ಮವನು ಕೇಳಿ, ಅಲ್ಲಿ ಉಪದೇಶವ ಮಾಡಿಸಿಕೊಳಬಹುದೆ? ಶಿವಶಿವಾ! ಅದು ಗುರುದ್ರೋಹ. ಆ ಶ್ರೀಗುರುವಿನಾಜ್ಞೆಯ ಮೀರದಿರಿ. ಆ ಪರಶಿವ ಮೂರ್ತಿ ತತ್ವನೇ ಗುರುಸ್ವಾಮಿಯಾಗಿ ಬಂದನ್ನಾಗಿ ಅರಿಯಿಸಿ ತೋರಿ ಹೇಳಿ ಕೊಟ್ಟನಲ್ಲದೆ ಆ ಶ್ರೀಗುರುಸ್ವಾಮಿ ಏನು ತಪ್ಪಿ ಹೇಳಿದುದಿಲ್ಲ. "ಏಕೋ ದೇವೋ ನ ದ್ವಿತೀಯಾಯ ತಸ್ಥೆ" ಎಂದುದಾಗಿ, ಶಿವನೊಬ್ಬನೇ ದೈವವೆಂದು ತೋರಿಕೊಟ್ಟ ಶ್ರೀ ಗುರು. ॥ಶ್ರುತಿ॥ "ಏಕೋಧ್ಯೇಯಃ" ಎಂದು ಶಿವನೊಬ್ಬನನ್ನೇ ಧ್ಯಾನಿಸಿ ಪೂಜಿಸಿ ಎಂದು ಹೇಳಿ ತೋರಿಕೊಟ್ಟನು ಶ್ರೀ ಗುರು. ॥ಶ್ರುತಿ॥ "ನಿರ್ಮಾಲ್ಯಮೇವ ಸಹ ಭಕ್ಷಯಂತಿ" ಎಂದುದಾಗಿ, ಶಿವಪ್ರಸಾದವನೆ ಗ್ರಹಿಸಿ ಎಂದು ಪ್ರಸಾದವ ಕರುಣಿಸಿದ ಶ್ರೀ ಗುರುವು. ಇಂತಹ ಶ್ರೀಗುರು ಮರುಳನು, ನೀ ಬುದ್ಧಿವಂತನೇ? ಕೇಳಾ! ನಿಮ್ಮ ಗುರುವ ಮರುಳನ ಮಾಡಿದಿರಿ. ಅದೆಂತೆಂದೊಡೆ ನಿಮ್ಮಜ್ಞೆಯಲ್ಲಿಯೇ ಬಂದನಾಗಿ. ಅದಲ್ಲದೆ ಮತ್ತೆ ಕೇಳು. ಪೂರ್ವದ ಪುರುಷರು ಮರುಳರು, ನೀ ಒಬ್ಬನೇ ಬುದ್ಧಿವಂತನೇ? ಕೇಳೊ. ದೂರ್ವಾಸ, ಉಪಮನ್ಯು, ದಧೀಚಿ, ಜಮದಗ್ನಿ, ಮಾರ್ಕಂಡೇಯ, ಪಾರಾಶರ ಮೊದಲಾದ ಋಷಿಜನಂಗಳೆಲ್ಲ ಶಿವಾರ್ಚನೆಯ ಮಾಡಿದರು. ಬ್ರಹ್ಮ ವಿಷ್ಣು ಮೊದಲಾದವರೆಲ್ಲರೂ ಶಿವಲಿಂಗಾರ್ಚನೆಯ ಮಾಡಿದರು. ಕೇಳಿರೇ, ನೋಡಿರೇ ದೃಷ್ಟವನು. ಮತ್ಸ್ಯಕೇಶ್ವರ, ಕೂರ್ಮೇಶ್ವರ, ವರಾಹೇಶ್ವರ, ನಾರಸಿಂಹೇಶ್ವರ, ರಾಮೇಶ್ವರ ಎಂದು ದಶಾವತಾರಂಗಳಲ್ಲಿ ಶಿವಲಿಂಗ ಪ್ರತಿಷ್ಠೆಯಂ ಮಾಡಿ, ಶಿವಲಿಂಗಾರ್ಚನೆಯಂ ಮಾಡಿದರು. ಅನೇಕ ವೇದಶಾಸ್ತ್ರಾಗಮ ಪುರಾಣಂಗಳ ಕೇಳಿರೇ, ನೋಡಿರೇ. ಅದೆಂತೆಂದೊಡೆ ॥ ಯಂ ಯಂ ಕಾಮಯತೆ ಕಾಮಂ ತಂ ತಂ ಲಿಂಗಾರ್ಚನಾಲ್ಲಭೇತ್ । ನ ಲಿಂಗೇನ ವಿನಾ ಸಿದ್ಧಿರ್ದುರ್ಲಭಂ ಪರಮಂ ಪದಂ ॥ಮತ್ತಂ॥

ಅಸುರೈರ್ದಾನವೈಶ್ಚೈವ ಪಿಶಾಚೋರಗ ರಾಕ್ಷಸೈಃ । ಆರಾಧ್ಯ ತತ್ಪರಂ ಲಿಂಗಂ ಪ್ರಾಪುಸ್ತೇ ಸಿದ್ಧಿಮುತ್ತಮಾಂ ॥ ಮತ್ತಂ ॥ಅಗ್ನಿಹೋತ್ರಶ್ಚ ವೇದಶ್ಚ ಯಜ್ಞಶ್ಚ ಬಹು ದಕ್ಷಿಣಾಂ । ಶಿವಲಿಂಗಾರ್ಚನಸ್ಯ ಕೋಟ್ಯಂಶೇನಾಪಿ ನೋ ಸಮಃ ॥ ಎಂದುದಾಗಿ. ಇಂತು ಇಂದ್ರ ಮೊದಲಾದ ದೇವಜಾತಿಗಳೆಲ್ಲಾ ಶಿವಲಿಂಗಾರ್ಚನೆಯ ಮಾಡಿದುದಕ್ಕೆ ದೃಷ್ಟ ನೋಡಿರೇ. ಕಾಶೀ ಕ್ಷೇತ್ರದಲ್ಲಿ ಬ್ರಹ್ಮೇಶ್ವರ, ಇಂದ್ರೇಶ್ವರ, ಯಕ್ಷಸಿದ್ಧೇಶ್ವರ ಎಂಬ ಲಿಂಗಂಗಳಂ ಪ್ರತಿಷ್ಠಿಸಿ ಶಿವಲಿಂಗಾರ್ಚನೆಯ ಮಾಡಿದರು. ತಾರಕ ರಾವಣಾದಿಗಳೆಲ್ಲ ಶಿವಲಿಂಗಾರ್ಚನೆಯ ಮಾಡಿದರು ಇಂತಿವರೆಲ್ಲರೂ ಮರುಳರು. ನೀನೊಬ್ಬನೇ ಬುದ್ಧಿವಂತನೇ? ಅದು ಕಾರಣ ಆ ಶ್ರೀ ಗುರುವಿನಾಜ್ಞೆಯ ಮೀರಿ ಕೆಡದಿರಿ ಕೆಡದಿರಿ. ಆ ಮಹಾ ಶ್ರೀ ಗುರುವಿನ ವಾಕ್ಯವನೆ ನಂಬಿ ಗುರುಲಿಂಗಜಂಗಮವನೊಂದೇ ಎಂದು ನಿಶ್ಚೈಸಿ, ಇದೇ ಅಧಿಕ, ಇದರಿಂದ ಬಿಟ್ಟು ಮತ್ತಿನ್ನಾವುದು ಅಧಿಕವಿಲ್ಲ. ಅಂತು ಗುರುಲಿಂಗಜಂಗಮದಲ್ಲಿಯ ಭಕ್ತಿಯೇ ಭಕ್ತಿ, ಅರ್ಚನೆಯೇ ಅರ್ಚನೆ, ಆ ಸಂಗವೇ ಶಿವಯೋಗ. ಇದು ಸತ್ಯ ಶಿವಸಾಣೆ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಲಿಂಗಸಂಯುತನಾದ ಬಳಿಕ ಶಿವಯೋಗವನೊಂದನ್ನೇ ಮಾಡಬೇಕು. ಇತರ ಯೋಗಗಳನ್ನು ಮಾಡಕೂಡದೆಂದು ವಚನಕಾರನ ಅಭಿಪ್ರಾಯವಿದೆ. ಯೋಗಗಳ ಉದ್ದೇಶವು ಆತ್ಮತತ್ವವನ್ನು ಕಾಣುವದು ಇದೆ. ಲಿಂಗಾಂಗಿಯಾದ ಬಳಿಕ ಷಟ್‌ಸ್ಥಲ ಅಷ್ಟಾವರಣಗಳ ತತ್ವಗಳನ್ನು ತಿಳಿದುಕೊಂಡು ಅವುಗಳಂತೆ ಆಚರಿಸಿ ಶಿವಯೋಗವನ್ನು ಸಾಧಿಸಬೇಕು. ಶೈವ, ಶಾಕ್ತ, ವೈಷ್ಣವ, ಗಾಣಾಪತ್ಯ, ಸೌರ, ಕಾಪಾಲಿಕ ಮೊದಲಾದ ಯಾವ ಮತಗಳನ್ನೂ ವಿಶ್ವಾಸಿಸಬಾರದು. ಇದಕ್ಕೆ ಶಿವಧರ್ಮಪುರಾಣದಲ್ಲಿಯ ಆಧಾರಗಳನ್ನು ಹೇಳಿರುವನು. ಶಿವಯೋಗಕ್ಕೆ ಅಂಗವೇ ಲಿಂಗವು, ಲಿಂಗವೇ ಅಂಗವು, ಪ್ರಾಣವೇ ಲಿಂಗ, ಲಿಂಗವೇ ಪ್ರಾಣ ಎಂಬ ತಿಳುವಳಿಕೆಯು ನೆಲೆಯಾಗಿ ನಿಲ್ಲಬೇಕು. ಆದರೆ ಅನೇಕ ವೈವಗಳಲ್ಲಿ ವಿಶ್ವಾಸವಸ್ಸಿಟ್ಟು ಹರಿದಾಡಿದರೆ ಈ ತಿಳುವಳಿಕೆಯು ಉತ್ಪನ್ನವಾಗದು. ಶಿವನೊಬ್ಬನನ್ನೇ ನಂಬಿ, ಧ್ಯಾನಿಸಿ ಪೂಜಿಸಬೇಕು. ಶಿವಪ್ರಸಾದವೊಂದನ್ನೇ ಗ್ರಹಿಸಬೇಕು. ಹೀಗೆ ಹಿಂದೆ ಆಚರಿಸಿದವರ ಹೆಸರುಗಳನ್ನು ಹೇಳಿರುವನು. ಅವರು ದೂರ್ವಾಸ, ಉಪಮನ್ಯು, ದಧೀಚಿ, ಜಮದಗ್ನಿ, ಮಾರ್ಕಂಡೇಯ ಪಾರಾಶರ ಇವರೇ ಇದ್ದಾರೆ. ವಿಷ್ಣುವು

ಸಹ ದಶಾವತಾರಗಳಲ್ಲಿ ಹೀಗೆಯೇ ಆಚರಿಸಿರುವನು. ಇದಕ್ಕೆ ಕೆಲವು ವೇದಾಗಮಗಳ ಆಧಾರಗಳನ್ನು ಕೊಟ್ಟಿರುವನು. ಹೀಗೆ ಶಿವಯೋಗಾಚಾರವನ್ನು ಕೈಕೊಂಡು ಗುರುಲಿಂಗಜಂಗಮವನ್ನು ಸಾಧಿಸಿ, ಅವುಗಳನ್ನು ತನ್ನಲ್ಲಿ ಏಕೀಭವಿಸಬೇಕು. ಹೀಗೆ ಏಕೀಭವಿಸುವದೇ ಶಿವಯೋಗವೆನಿಸುವದು.

ವಚನಃ— ೪೯. ಸತ್ತುರೂಪು ಲಿಂಗ, ಚಿತ್ತುರೂಪು ಜಂಗಮ, ಆನಂದರೂಪು ಪ್ರಸಾದ, ಇಂತೀ ತ್ರಿವಿಧದರಿವನು ಶ್ರೀಗುರು ಇಷ್ಟಲಿಂಗದಲ್ಲಿ ತೋರಿ ಬಿಜಯಂಗೈಸಿ ಕೊಟ್ಟ ಬಳಿಕ ಸತ್ತು ಚಿತ್ತು ಆನಂದವೆಂಬ ಬಟ್ಟಬಯಲ ಮಾತೇಕಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?

ಭಾವಃ— ಶಿವಯೋಗಕ್ಕೂ ಇತರ ಯೋಗಗಳಿಗೂ ಇರುವ ಭೇದವನ್ನು ವಚನಕಾರನು ಇಲ್ಲಿ ಹೇಳಿರುವನು. ಇತರ ಯೋಗಗಳು ಬಟ್ಟಬಯಲು. ಅವು ನಿಜಸ್ವರೂಪವನ್ನು ತೋರಿಸಿಕೊಡಲಾರವು. ಅವು ಸತ್ತು ಚಿತ್ತು, ಆನಂದವೆಂಬುದರ ತಿಳಿವನ್ನು ಹೇಳಿಕೊಡಲಾರವು. ಆದರೆ ಷಟ್‌ಸ್ಥಲವು ಅವುಗಳನ್ನು ಗುರುಲಿಂಗಜಂಗಮದ ದ್ವಾರಾ ಪ್ರತ್ಯಕ್ಷಮಾಡಿ ನಿದರ್ಶನಕ್ಕೆ ತಂದುಕೊಡುವದು. ಗುರುವಿನ ಮೂಲಕ ಉಂಟಾದ ಲಿಂಗವು ಸತ್ತು ರೂಪು, ಆ ಲಿಂಗವನ್ನು ತನ್ನಲ್ಲಿ ಒಳಗು ಮಾಡಿ ಲಿಂಗೈತನ್ಯವೇ ತಾನಾದವನಿಗೆ ಅದು ಜಂಗಮರೂಪಾಗಿರುವದರಿಂದ ಇಂಥ ಜಂಗಮವೇ ಚಿತ್ತು ರೂಪು, ಲಿಂಗ ಜಂಗಮ ಇವುಗಳನ್ನು ಮೇಲೆ ಹೇಳಿದ ಪ್ರಕಾರ ತನ್ನಲ್ಲಿ ಉಂಟುಮಾಡಿಕೊಂಡು ಅವುಗಳನ್ನು ಏಕೀಭವಿಸಿದ ಬಳಿಕ ಒದಗುವ ಪರಿಣಾಮಸುಖವನ್ನು ಅನುಭವಿಸುವದೇ ಪ್ರಸಾದವಾದ್ದರಿಂದ ಆ ಪ್ರಸಾದವೇ ಆನಂದರೂಪು. ಹೀಗೆ ಗುರುಲಿಂಗಜಂಗಮದಿಂದ ಶಿವಯೋಗವನ್ನು ಒದಗಿಸಿಕೊಳ್ಳಬೇಕೆಂಬುದನ್ನು ಇಲ್ಲಿ ಹೇಳಿರುವನು.

ವಚನಃ— ೫೦. ಸದ್ಗುರುವೇ ಪ್ರಸಾದ ಲಿಂಗವು, ಸದ್ಗುರುವೇ ಸಚ್ಚಕ್ತಿನು ಎಂದೆಂಬ ಮಹಾಜ್ಞಾನ ಜ್ಯೋತಿ ಪ್ರಕಾಶವಾದ ಜ್ಯೋತಿರ್ಮಯ ಲಿಂಗವೇ ಗುರುವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಹಿಂದಿನ ವಚನಗಳಲ್ಲಿ ಗುರುವಿನಿಂದ ಹ್ಯಾಗೆ ಗುರುಲಿಂಗಜಂಗಮಗಳು ತನ್ನಲ್ಲಿ ಉದ್ಭವಿಸುತ್ತವೆ, ಅವುಗಳ ವ್ಯಾಪಾರಗಳು ತನ್ನಲ್ಲಿ ಆವವು ಎಂಬದನ್ನು ಹೇಳಿ, ವಚನಕಾರನು ಇಲ್ಲಿ ಹೇಳುವದೇ

ನಂದರೆ, ಗುರುವನ್ನು ಒಳಕೊಂಡವನಿಗೆ ಗುರುವೇ ಪ್ರಸಾದ ಸ್ವರೂಪನಾಗುವನು. ಅವನು ಹೀಗೆ ಪ್ರಸಾದಸ್ವರೂಪನಾದ ಬಳಿಕ ಭಕ್ತ ಮತ್ತು ಗುರು ಇವರಲ್ಲಿ ಭಿನ್ನಭಾವವಿರಲಾರದು. ಅಂದರೆ ಭಕ್ತನು ಸಹ ಗುರುವಾಗುವನು. ಭಕ್ತನ ಲಿಂಗಾಚಾರದ ಮೂಲಕವಾಗಿಯೇ ಭಕ್ತನು ಹೀಗೆ ಗುರುಸ್ವರೂಪನಾಗುವನು. ಅಂದರೆ ಗುರುವಿನ ಕಾರ್ಯವು ಲಿಂಗಧಾರಣವಾದ ಬಳಿಕ ಬೇರೆ ವಿಧವಾಗಿರುವದು. ಭಕ್ತನು ಪ್ರತಿ ಹೆಜ್ಜೆಗೆ ಗುರುವನ್ನವಲಂಬಿಸಕೂಡದು. ಗುರುವು ದಯಪಾಲಿಸಿದ ಉಪದೇಶದಂತೆ ಅವನು ನಡೆದು ಸ್ವಾವಲಂಬಿಯಾಗಿರತಕ್ಕದ್ದು. ಇಂಥ ಭಕ್ತನಲ್ಲಿ ಆ ಲಿಂಗವು ಜ್ಞಾನಜ್ಯೋತಿಯಾಗಿ ಪರಿಣಮಿಸುವದು. ಇಲ್ಲದಿದ್ದರೆ ಅದು ಕೇವಲ ಚೈತನ್ಯರಹಿತವಾದ ಜಡ ವಸ್ತುವಾಗುವದು.

ವಚನ:— ೫೧. ಜ್ಯೋತಿಯ ಸಂಗದಿಂದ ಕರ್ಪೂರವು ಜ್ಯೋತಿಯಪ್ಪಂತೆ, ಉಪ್ಪಿನ ಸಂಗದಿಂದ ಲವಣವು ಉಪ್ಪುವಪ್ಪಂತೆ, ಶ್ರೀಗುರುವಿನ ಸಂಗದಿಂದ ಶಿಷ್ಯನು ಶ್ರೀಗುರುವಪ್ಪದು ತಪ್ಪದು. "ಯಥಾ ಬೀಜಂ ತಥಾಂಕುರಂ" ಎಂಬುದು ತಪ್ಪದು, ದಿಟವಿಟ ನೋಡಾ. ಕಲ್ಪವೃಕ್ಷದ ಬೀಜದಿಂದಾದ ಸಸಿಯು, ಕಲ್ಪವೃಕ್ಷವಪ್ಪದು ತಪ್ಪದು ನೋಡಾ. ಕಾಮಧೇನುವಿನ ಶಿಸು ಕಾಮಧೇನುವಪ್ಪದು ತಪ್ಪದು ದಿಟದಿಟ ನೋಡಾ. ಸದ್ಗುರುವಿನಿಂದಾದ ಶಿಷ್ಯನು ಸದ್ಗುರುವಪ್ಪದು ದಿಟದಿಟ ನೋಡಾ. "ಯಥಾ ಬೀಜಂ ತಥಾಂಕುರಂ" ಎಂಬ ವಾಕ್ಯ ತಪ್ಪದು, ಶಿವಬಲ್ಲನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಗುರು ಮತ್ತು ಭಕ್ತ ಇವರಲ್ಲಿ ಅಭೇದವಿದೆಂಬದನ್ನು ವಚನಕಾರನು ಈ ಉಕ್ತಿಯಲ್ಲಿ ಮತ್ತಿಷ್ಟು ಬಲಪಡಿಸಿರುವನು. ಸದ್ಗುರೂಪದೇಶಹೊಂದಿದ ಶಿಷ್ಯನು ಗುರುವಾಗುವದು ತಪ್ಪದು. ಇದು ದಿಟವೆಂದು ಹೇಳಿ ಕೆಲವು ಉದಾಹರಣೆಗಳನ್ನು ಕೊಟ್ಟಿರುವನು. ಜ್ಯೋತಿಯು ಸಂಗದಿಂದ ಕರ್ಪೂರವು ಜ್ಯೋತಿಯೇ ಆಗುವದು. ನೀರಿನ ಸಂಗದಿಂದ ಉಪ್ಪು ನೀರಾಗುವದು. ಕಲ್ಪವೃಕ್ಷದಿಂದಾದ ಸಸಿಯು ಕಲ್ಪವೃಕ್ಷವೇ ಆಗುವದು. ಕಾಮಧೇನುವಿನ ಶಿಸು ಕಾಮಧೇನುವೇ ಆಗುವದು. ಅದೇ ಪ್ರಕಾರ ಗುರುವಿನಿಂದಾದ ಶಿಷ್ಯನು ಗುರುವೇ ಆಗುವನೆಂದು ವಚನಕಾರನು ಹೇಳಿರುವನು.

ವಚನಃ— ೫೨. ಶಿಷ್ಯನ ಗುರುತ್ವವನು, ಗುರುವಿನ ಮಹತ್ವವನು ಅರಯ್ಯ ಬಲ್ಲವರು ಗುರುಶಿಷ್ಯನಾದ ಪರಿಯನು? ಶ್ರೀಪಂಚಾಕ್ಷರಿಯ

ಉಚ್ಚಾರಣೆಯ ವಿಶ್ವಾಸದ ಸಾಧನದಿಂದ ವಶಿಷ್ಠ ಮಾಮದೇವ ಮೊದಲಾದ ಸಮಸ್ತ ಋಷಿಗಳಿಗೆ ಹಿರಿದಪ್ಪ ಶಿಷ್ಯ ಗುರುವಾದ ಪರಿಯನು ಅರಯ್ಯ ಬಲ್ಲವರು? ವಾಙ್ಮನಾತೀತ ಉಸುವಿಸಚಾರದ ಘನವು. ಭಕ್ತಿಯಿಂದ ಗುರುಭಕ್ತವತ್ಸಲನಾಗಿ ಶಿಷ್ಯನಾದ ಪರಿಯು ಆ ಬೀಜ ವೃಕ್ಷ ನ್ಯಾಯದಂತೆ ಅವಿನಾಭಾವವಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಷಟ್‌ಸ್ಥಲ ಶಾಸ್ತ್ರದ ಪ್ರಕಾರ ಗುರು ಮತ್ತು ಭಕ್ತ ಇವರಲ್ಲಿ ಅವಿನಾಭಾವವಿದೆ. ಒಬ್ಬರನ್ನೊಬ್ಬರು ಬಿಟ್ಟು ಇರಲಾಗದು. ಗುರುವನ್ನು ಬಿಟ್ಟು ಶಿಷ್ಯನಿರಲಾರನು. ಶಿಷ್ಯನನ್ನು ಬಿಟ್ಟು ಗುರುವು ಇರಲಾರನು. ಉಭಯತರ ಹೆಚ್ಚುವಿಕೆಯು ಪರಸ್ಪರಾವಲಂಬಿಯಾಗಿರುತ್ತದೆ. ಈ ರೀತಿಯನ್ನು ತಿಳಿದವರು ಬಹು ಕೊಂಚ ಜನರು. ಇದು ಹೇಳಿಕ್ಕೂ ನೆನೆಯಲಿಕ್ಕೂ ಬಾರದು. ಗುರುವು ಭಕ್ತನಲ್ಲಿ ಪ್ರೇಮವನ್ನು ವಹಿಸಿ ಅವನಿಗೆ ಶಿಷ್ಯನಾದಲ್ಲಿ ಉಭಯತರ ಗುಣಗಳು ಉನ್ನತವಾಗುತ್ತ ಹೋಗುವವು. ಅವರಲ್ಲಿ ಈ ರೀತಿಯಾಗಿ ಅವಿನಾಭಾವವಿದೆ.

ವಚನ:— ೫೩. ಶ್ರೀಗುರು ಮಾಡಿದ ಗುರುತ್ವವು ಉಪಮಾತೀತವಯ್ಯಾ. ನೇತ್ರದಲ್ಲಿ ತನ್ನ ರೂಪ ತುಂಬಿ ನೇತ್ರವನು ಗುರುವ ಮಾಡಿದ. ಶ್ರೋತ್ರದಲ್ಲಿ ಮಹಾಮಂತ್ರವ ತುಂಬಿ ಶ್ರೋತ್ರವ ಗುರುವ ಮಾಡಿದ. ಘ್ರಾಣದಲ್ಲಿ ಗುರುಪಾದ ಪದ್ಮದಲ್ಲಿಯ ಮಹಾಗಂಧವನು ತುಂಬಿ ಘ್ರಾಣವನು ಗುರುವ ಮಾಡಿದ. ಜಿಹ್ವೆಯಲ್ಲಿ ತನ್ನ ಕರುಣ ಪ್ರಸಾದವ ತುಂಬಿ ಜಿಹ್ವೆಯನ್ನು ಗುರುವ ಮಾಡಿದ. ಕಾಯವನು ಭಕ್ತಕಾಯ ಮಮ ಕಾಯವೆಂದು ಪ್ರಸಾದಕಾಯವೆಂದೆನಿಸಿ ಕಾಯವನು ಗುರುವ ಮಾಡಿದ. ಅಂತು ಅಂತರಂಗ ಬಹಿರಂಗವನು ಗುರುವ ಮಾಡಿ ಸರ್ವಾಂಗವನು ಪ್ರಾಣವನ್ನು ಲಿಂಗಪ್ರಾಣ ಸಂಬಂಧವ ಮಾಡಿ ಪ್ರಾಣವನು ಗುರುವ ಮಾಡಿದ. ಗುಪ್ತವ ಮಾಡಿದ ಮಹಾ ಗುರುವಿಂಗೆ ನಾನಿನ್ನೇನ ಮಾಡುವೆನಯ್ಯಾ? ಗುರುಪೂಜೆಯಂ ಮಾಡಲು ಅವಾವ ದ್ರವ್ಯಂಗಳನು, ಅವಾವ ಪದಾರ್ಥಂಗಳನು, ಅವಾವ ಪುಷ್ಪಫಲಾದಿಗಳನು, ವಿಚಾರಿಸಿ ನೋಡಿದಡೆ ಅವಾವೂ ಗುರುತ್ವವಿಲ್ಲ. ಸರ್ವ ದ್ರವ್ಯ ಮೂಲವು, ಸರ್ವ ಪದಾರ್ಥ ಮೂಲವು, ಸರ್ವ ರಸ ಪುಷ್ಪ ಫಲಾದಿಗಳನು ವಿಚಾರಿಸಿ ನೋಡಿದಡೆ ಅವಾವೂ ಗುರುತ್ವವಿಲ್ಲ. ಸರ್ವ ದ್ರವ್ಯ ಮೂಲವು ಸರ್ವ ಪದಾರ್ಥ ಮೂಲವು, ಸರ್ವ ರಸ ಪುಷ್ಪ ಫಲಾದಿಗಳೆಲ್ಲಕ್ಕೆಯು ಮೂಲಿಗ ಮನವು

ಗುರುತ್ವವುಳ್ಳದ್ದು ನನ್ನ ಮನೋವಾಕ್ಕಾಯ ಸಹಿತ ಕಾಯವನು ಗುರು
ವಿಂಗಿತ್ತು ಎನ್ನ ಶಿರವನು ಶ್ರೀಗುರುವಿನ ದರ್ಶನ ಸ್ಪರ್ಶನವ ಮಾಡಿ
ಸುಖಿಯಪ್ಪೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ಗುರುವು ತನ್ನ ಶಿಷ್ಯನನ್ನು ಗುರುವಾಗಿ ಹ್ಯಾಗೆ
ಮಾಡುವನೆಂಬದನ್ನು ವಿವರಿಸಿ ಹೇಳಿರುವನು. ಗುರುವು ತನ್ನ ವಿಶಿಷ್ಟ
ಗುಣಗಳನ್ನು ಶಿಷ್ಯನಲ್ಲಿ ತುಂಬುವದರಿಂದ ಈ ಸ್ಥಿತಿಯು ಪ್ರಾಪ್ತನಾಗು
ತ್ತದೆ. ಗುರುಪೂಜೆ ಎಂದರೆ ಬರೇ ಪುಷ್ಪಫಲಾದಿಗಳನ್ನು ಗುರುವಿಗೆ
ಅರ್ಪಿಸುವದಷ್ಟೇ ಅಲ್ಲ, ಗುರುವಿನ ಗುಣಗಳನ್ನು ತನ್ನಲ್ಲಿ ಬರಮಾಡಿ
ಕೊಳ್ಳುವದೇ ಇರುತ್ತದೆ. ಹೀಗೆ ಬರಮಾಡಿಕೊಳ್ಳುವದು ಶಿಷ್ಯನ ಮನ
ಸ್ಸಿನ ಮೇಲೆ ಅವಲಂಬಿಸಿರುತ್ತದೆ. ಗುರುತ್ವವನ್ನು ಆಕರ್ಷಣಮಾಡ.ವ
ಶಕ್ತಿ ಭಕ್ತನಲ್ಲಿ ಇದೆ. ಹೀಗೆ ಯಾವ ಶಿಷ್ಯನು ತನ್ನಲ್ಲಿ ಗುರುವನ್ನು
ಬರಮಾಡಿಕೊಳ್ಳುವನೋ ಅವನೇ ಸುಖಿಯು.

ವಚನಃ— ೫೪. ಯೋಗಾಭ್ಯಾಸ ಯೋಗಾಭ್ಯಾಸವೆಂದೆಂಬಿರಿ.
ಯೋಗವು ಅಭ್ಯಾಸವೇ? ಅಭ್ಯಾಸವು ಯೋಗವೇ? ಯೋಗಾಭ್ಯಾಸ
ವೆಂಬನ್ನಕ್ಕರ ಆನು ಯೋಗಿಯೇ? ಶ್ರೀಗುರುಕಾರುಣ್ಯದಿಂದೆ ಸರ್ವವು
ಪರಬ್ರಹ್ಮವೆಂದರಿವುದು. ಶ್ರೀ ಗುರುವಿನ ಶ್ರೀಪಾದಧ್ಯಾನವೇ ಯೋಗಾಭ್ಯಾ
ಸವಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಜನರು ಯೋಗಾಭ್ಯಾಸ, ಯೋಗಾಭ್ಯಾಸವೆಂದು ಮನ
ದಲ್ಲಿ ವಿಶೇಷವಾಗಿ ಆಶೆಬಡುವರು. ಆದರೆ ಅವರಿಗೆ ನಿಜವಾದ ಯೋಗಾ
ಭ್ಯಾಸದ ಸ್ವರೂಪು ತಿಳಿಯದು. ಯೋಗವು ಬರೇ ಅಭ್ಯಾಸವಲ್ಲ. ಅಂ
ದರೆ ಬರೇ ಕಷ್ಟಪಟ್ಟು ಆಯಾಸ ಮಾಡಿಕೊಳ್ಳುವಂಥಾದ್ದಲ್ಲ. ಹೀಗೆ
ಕಷ್ಟ ಪಡುವವನು ಯೋಗಿಯಲ್ಲ. ಆದರೆ ಶ್ರೀ ಗುರು ಕಾರುಣ್ಯದಿಂದ
ಜಗತ್ತೆಲ್ಲ ಪರಬ್ರಹ್ಮವೆಂದರಿಯಬೇಕು. ಮತ್ತು ಗುರುವನ್ನು ತನ್ನಲ್ಲಿ ಒಳ
ಕೊಳ್ಳಬೇಕು. ಇದೇ ನಿಜವಾದ ಯೋಗಾಭ್ಯಾಸವಿರುತ್ತದೆ.

ವಚನಃ— ೫೫. ಶಿವನು ನರಕಾಯವ ತೊಟ್ಟು ಗುರುರೂಪಾಗಿ
ಮರ್ತ್ಯಕ್ಕೆ ಬಂದು ಅಷ್ಟಾದಶ ಜಾತಿಯೊಳಗಿದ್ದಡೇನು? ಮರ್ತ್ಯನೇ?
ಅಲ್ಲ. ಅದೆಂತೆಂದಡೆ? ಶಿವ ರಹಸ್ಯೆ ॥೮೬॥ ಗುರುರ್ದೇವೋ ಮಹಾ
ದೇವೋ ಗುರುರ್ದೇವಸ್ಸದಾಶಿವಃ। ಗುರುರ್ದೈವಾತ್ಪರಂನಾಸ್ತಿ। ತಸ್ಮೈ ಶ್ರೀ
ಶ್ರೀಗುರವೇ ನಮಃ॥ ಎಂದುದಾಗಿ ಮಹಾದೇವನು ತಾನೇ ಲಲಾಟ

ಲೋಚನಂ ಚಾಂದ್ರೀಕಲಾಮಪಿಚದೋರ್ಧ್ವಯಂ। ಅಂತರ್ನಿಧಾಯ
ವರ್ತೇಹಂ ಗುರುರೂಪೋಮಹೇಶ್ವರಿ॥ ಎಂದುದಾಗಿ ಶಿವನು ಗುರು
ರೂಪಾಗಿ ವರ್ತಿಸುತ್ತಿದ್ದನು. "ಪರಶಿವ ಗುರೋರ್ಮೂರ್ತಿಶ್ಶಿಷ್ಯದೀಕ್ಷಾದಿಕಾ
ರಣಾತ್॥ ಶಿಷ್ಯಾತೀತಂ ಮಹಜ್ಜ್ಯೋತ್ಯಂ ಜ್ಞೋದ್ಯರೂಪಾಯ ತೈನಮಃ"
ಎಂದುದಾಗಿ ಶಿಷ್ಯಂಗೆ ದೀಕ್ಷೆಯಂ ಕರುಣಿಸಿ ಮಾಡಬೇಕೆಂದು ಬಂದ
ನಯ್ಯಾ ಮಹಾಕಾರುಣ್ಯಮೂರ್ತಿ ಪರಶಿವನು ತಾನೇ ಉರಿಲಿಂಗಪೆದ್ದಿ
ಪ್ರಿಯ ವಿಶ್ವೇಶ್ವರಾ

ಭಾವಃ— ಇಲ್ಲಿ ವಚನಕಾರನು ಗುರುವಿನ ಮಹತ್ವವನ್ನು ವರ್ಣಿ
ಸಿರುವನು. ಮತ್ತು ಇದಕ್ಕೆ ಆಧಾರ ಗ್ರಂಥಗಳನ್ನೂ ಹೇಳಿರುವನು.
ಪಟ್‌ಸ್ಥಲದಲ್ಲಿ ಗುರುವಿನ ಕಾರ್ಯಗಳ ವಿಷಯದಲ್ಲಿ ವಿಶೇಷಾಭಿಪ್ರಾಯ
ಗಳಿರುವದರಿಂದ ವಚನಕಾರನು ಆ ದೃಷ್ಟಿಯಿಂದ ಗುರುವು ಶಿವಸ್ವರೂಪ
ನೆಂದು ಇಲ್ಲಿ ಹೇಳಿರುವನು.

ವಚನಃ— ೫೬. ಪುತ್ರ ಮಿತ್ರ ಕಳತ್ರಕ್ಕೆ ಮೋಹಿಸುವಂತೆ ಗುರು
ಲಿಂಗಜಂಗಮಕ್ಕೆ ಮೋಹಿಸಬೇಕು ಕಾಣಿರೋ. ಕನ್ನಪ್ಪ, ಚನ್ನಯ್ಯ,
ಜೋಳೆಯಕ್ಕನ ಮೋಹವ ನೋಡಿರೇ. ಮೋಹವೇ ಭಕ್ತಿ, ಭಕ್ತಿಯೇ
ಮುಕ್ತಿ, ಮುಕ್ತಿಯೇ ಸುಖ, ಸುಖವೇ ನಮ್ಮ ಉರಿಲಿಂಗಪೆದ್ದಿ ಪ್ರಿಯ
ವಿಶ್ವೇಶ್ವರಯ್ಯ ತಾನೇ ಕಾಣಿರೋ.

ಭಾವಃ— ಶಿವಯೋಗವಾವುದು, ಗುರು ಶಿಷ್ಯ ಸಂಬಂಧವೇನು
ಎಂಬುದನ್ನು ವಚನಕಾರನು ಹಿಂದೆ ಹೇಳಿ ಭಕ್ತಿಯ ಪರಿಣಾಮಗಳನ್ನು
ಇಲ್ಲಿ ವಿವರಿಸಿರುವನು. ಅವುಗಳ ಬಗ್ಗೆ ಮೊದಲು ಮೋಹವನ್ನು ತಾಳ
ಬೇಕು. ಮೋಹ ತಾಳಿದ್ದಾದರೆ ಭಕ್ತಿಯುತ್ಪನ್ನವಾಗುವದು. ಈ ಭಕ್ತಿಯೇ
ಮುಕ್ತಿ, ಈ ಮುಕ್ತಿಯೇ ಸುಖ, ಈ ಸುಖವೇ ಪರಮಾತ್ಮಸ್ವರೂಪು ಎಂದು
ಇಲ್ಲಿ ಹೇಳಿರುವನು.

ವಚನಃ— ೫೭. ಒಳ್ಳೆ ಜೀವಿನ ಕೊರಡು ಆಡಿನ ಹಿಕ್ಕಿ ಲಿಂಗವೇ?
ಅಲ್ಲ. ಅದು ಸಟಿ. ಸದ್ಭಾವದಿಂದ ಭಾವಿಸಿ ಲಿಂಗವ ಮಾಡಿ ಸದ್ಭಕ್ತರಾ
ದರು ಪುರಾತನರು. ಕೇವಲ ಪರಶಿವಮೂರ್ತಿ ತಾನೇ ಶ್ರೀಗುರುಲಿಂಗ
ಜಂಗಮವಾದ. ಆ ಶ್ರೀಗುರುಲಿಂಗ ಜಂಗಮವನು ವಿಶ್ವಾಸಿಸಿ ಮುಕ್ತರಾಗ
ಲರಿಯದೆ ಅವಿಶ್ವಾಸದಿಂದ ಸಟೆಯ ಮಾಡಿ ನರಕಕ್ಕಿಳಿವವರ ನೋಡಾ!

ಅಕಟಕಟಾ, ಅವರು ತಮ್ಮ ಆದಂತಾಗಲಿ. ಮನವೇ ನಾ ನಿನ್ನ ಬೇಡಿ ಕೊಂಬೆನು. ನಂಬು ಕಂಡೆಯಾ ಸಹಜವೆಂದು. ಶ್ರೀಗುರು ಲಿಂಗಜಂಗಮವ ನಂಬಿದೆಯಾದಡೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ ಕೂಡಿ ಕೊಂಬನು.

ಭಾವಃ— ವಚನಕಾರನು ಮಹತ್ತರ ವಸ್ತುವಾದ ಗುರುಲಿಂಗ ಜಂಗಮವನ್ನು ವಿಶ್ವಾಸದಿಂದ ನಂಬಿ ಸಂಯಮಿಯಾಗಿ ನಡೆಯಬೇಕೆಂದು ತನ್ನ ಮನಸ್ಸಿಗೆ ತಾನೇ ಇಲ್ಲಿ ಹೇಳಿಕೊಳ್ಳುತ್ತಲಿರುವನು.

ಗುರುವಿನ ಮಹತ್ವ.

ವಿವರಣೆ:— ಗುರುವಿನಿಂದಲೇ ಮನುಷ್ಯನ ಪ್ರವೃತ್ತಿಯು ಇರುವದರಿಂದ ವಚನಕಾರರು ಗುರುವಿಗೆ ಬಹು ಮಹತ್ವ ಕೊಟ್ಟಿರುತ್ತಾರೆ. ಆದ್ದರಿಂದ ಅವರು ಅವನನ್ನು ವಿಶೇಷವಾಗಿ ಪ್ರಶಂಸಿಸುವದುಂಟು. ಮುಂದಿನ ವಚನಗಳಲ್ಲಿ ಈ ಬಗೆಯ ಪ್ರಶಂಸೆಗಳು ಬಂದಿರುತ್ತವೆ.

ವಚನಃ— ಶಲ ಸದ್ಗುರುವಿನಿಂದ ಮಹತ್ತಪ್ಪ ಲಿಂಗೋತ್ಪತ್ತಿ. ಲಿಂಗದಿಂದ ಜಂಗವೋತ್ಪತ್ತಿ. ಜಂಗಮದಿಂದ ಪ್ರಸಾದೋತ್ಪತ್ತಿ. ಪ್ರಸಾದದಿಂದ ಭಕ್ತ್ಯುತ್ಪತ್ತಿ. ಭಕ್ತಿಯಿಂದ ಸಕಲೋತ್ಪತ್ತಿ. ॥ಸಾಕ್ಷಿ॥ ಯತೋವಾಜೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ। ನಾದಬಿಂದು ಕಲಾತೀತಂ ಗುರುಣಾ ಲಿಂಗಮುದ್ಭವಂ ॥ ಎಂದುದಾಗಿ ಇದು ಕಾರಣ ಪ್ರಸಾದವುಳ್ಳವಂಗೆ ಭಕ್ತಿಯುಂಟು. ಭಕ್ತಿಯುಳ್ಳವಂಗೆ ಲಿಂಗವುಂಟು. ಲಿಂಗವುಳ್ಳವಂಗೆ ಜಂಗಮವುಂಟು. ಜಂಗಮವುಳ್ಳವಂಗೆ ಗುರುವುಂಟು. ಇದು ಕಾರಣ ಸದ್ಗುರುವೇ ಕಾರಣ. ಅದೆಂತೆಂದಡೆ, "ಗುರುಣಾ ದೀಯತೆ ಲಿಂಗಂ ಗುರುಣಾ ದೀಯತೆ ಕ್ರಿಯಾ ಗುರುಣಾ ದೀಯತೆ ಮಂತ್ರಂ ಸದ್ಗುರುಸ್ಸರ್ವ ಕಾರಣಂ" ಎಂದುದಾಗಿ ಸದ್ಗುರುವೇ ಸರ್ವ ಶ್ರೇಷ್ಠನು, ಸದ್ಗುರುವೇ ಸರ್ವ ಪೂಜ್ಯನು, ಸದ್ಗುರುವೇ ಸರ್ವ ಕಾರಣನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ವಚನಕಾರನು ಗುರುವಿನಿಂದ ಲಿಂಗ, ಲಿಂಗದಿಂದ ಚೈತನ್ಯಸ್ವರೂಪವಾದ ಜಂಗಮ, ಈ ಚೈತನ್ಯದಿಂದ ಪ್ರಸಾದ, ಇಂಥ ಪ್ರಸಾದದಿಂದ ದುರ್ವ್ಯಾಪಾರಗಳ ಕಡೆಗೆ ಹರಿಯುವ ಮನಸ್ಸನ್ನು ತಡೆಯುವಂಥ ಭಕ್ತಿ, ಇಂಥ ಭಕ್ತಿಯಿಂದ ಸಕಲ ವಿಷಯಗಳನ್ನು ಸಾಧಿಸುವ ಶಕ್ತಿ ಇವೆಲ್ಲವೂ ಉಂಟಾಗುತ್ತವೆಂದು ಹೇಳಿರುವನು. ಇವೆಲ್ಲಕ್ಕೂ ಗುರುವೇ ಕಾರಣನಾದ್ದರಿಂದ ಅವನೇ ಶ್ರೇಷ್ಠನೆಂದು ವಚನಕಾರನು ಇಲ್ಲಿ ಹೊಗಳಿರುವನು.

ವಚನಃ— ೫೯. ಶಿವಶಿವ ಮಹಾದೇವ ಮಹಾದೇವ! ಮಹೇಶ್ವರರ ಮಹಾತ್ಮೆಯನು ಏನೆಂದುಪಮಿಸಬಹುದಯ್ಯಾ? ವಾಙ್ಮನಾತೀತರು. ಅದೆಂತೆಂದಡೆ ॥ ಶ್ಲೋ ॥ ಕೋಟಿ ಕೋಟ್ಯಾಯುಷಾ ಕೋಟಿ ಕೋಟಿ

ಜಿಹ್ವೇನ ಸರ್ವದಾ। ಕೇನಾಪಿ ಶಕ್ಯತೆ ವಕ್ತುಂ ಶಂಭೋರ್ಮಹಾತ್ಮ್ಯಮು
ಷ್ಯಣು ॥ ಎಂದುದಾಗಿ ಲಿಂಗದ ಮಹಾತ್ಮೆಯಣುವಾಶ್ರವರಿಯಬಾರದೆಂ
ಬಲ್ಲಿ ಸದ್ಭಕ್ತರ ಮಹಾತ್ಮೆಯನೆಂತರಿಯಬಹುದಯ್ಯಾ! ಅದೆಂತೆಂದರೆ
॥ ಶ್ಲೋ ॥ "ಲಿಂಗಾಲಿಂಗೀ ಮನೋಜ್ಞೀವೀ ಲಿಂಗಾಲಿಂಗೀ ಚ ರಕ್ಷಕಃ।
ಲಿಂಗಾಲಿಂಗೀ ಮನು ಸ್ವಾಮೀ ಲಿಂಗಾಲಿಂಗೀ ಮನೋದ್ಧರಃ" ಎಂದು
ದಾಗಿ ಈ ಪರಿಯಲ್ಲಿ ಲಿಂಗಕ್ಕೆ ದೇಹ, ಲಿಂಗಕ್ಕೆ ಪ್ರಾಣ, ಲಿಂಗಕ್ಕೆ ರಕ್ಷಕ
ಲಿಂಗಕ್ಕೆ ಒಡೆಯರಾಗಿರ್ಪ ಆ ಸದ್ಭಕ್ತರ ಮಹಾತ್ಮೆಯನು ಶಿವನೇ ಬಲ್ಲ.
ಅದೆಂತೆಂದಡೆ ॥ ಶ್ಲೋ ॥ ಮದ್ಭಕ್ತಜನ ಮಹಾತ್ಮ್ಯಂ ಕೋಪಿ ಜಾನಾತಿ
ತತ್ವತಃ। ಜಾನೇಹಂ ತ್ವಂ ತು ಜಾನಾಸಿ ನಂದೀ ಜಾನಾತಿ ವಾ ಗುಹಃ॥
ಹೀಗೆಂದುದಾಗಿ ಶಿವನು ನಂದೀಶ್ವರನು ಗುಹನು ಇವರು ಬಲ್ಲರು. ಸಜ್ಜ
ನರುದ್ಧ ಶಿವಾಚಾರಸಂಪನ್ನರಪ್ಪ ಸದ್ಭಕ್ತರೇ ಬಲ್ಲರು. ಸಾಮಾನ್ಯತರ
ವಪ್ಪ ದೇವದಾನವ ಮಾನವರಿಗೆ ಅರಿಯಬಾರದು, ಋಷಿಜನಂಗಳಿಗೆಯೂ
ಅರಿಯಬಾರದು, ಲೋಕಲೌಕಿಕರಿಗೆಯೂ ಅರಿಯಬಾರದು. ಅದೆಂತೆಂ
ದಡೆ ಕೇಳಿರೇ! ಬ್ರಹ್ಮ, ವಿಷ್ಣು, ಇಂದ್ರ, ಚಂದ್ರ, ರವಿ, ಕಾಲ, ಕಾನಃ,
ದಕ್ಷ ಇಂತಿವರು ಮೊದಲಾದ ದೇವ ಜಾತಿಗಳು, ತಾರಕ, ರಾವಣಾದಿ
ದಾನವರು, ವ್ಯಾಸಾದಿ ಋಷಿಗಳು, ದಕ್ಷಾಧ್ವರಕ್ಕೆ ಬಂದವರನೇಕರು,
ವೇದ ಶಾಸ್ತ್ರ ಪುರಾಣಾಗಮಾದಿ ಅಷ್ಟಾದಶ ವಿದ್ಯಂಗಳನೋದಿ, ಕೇಳಿದ
ವರಿಗೆ ಹೇಳಿ, ಸರ್ವಜ್ಞರೆನಿಸಿಕೊಂಡು, ಮಹದೈಶ್ವರ್ಯಸಂಪನ್ನರಾಗಿ, ಮದಂ
ಗಳು ಹೆಚ್ಚಿ, ಶಿವನ ಮರೆದರು. ಅಹಂಬ್ರಹ್ಮವೆಂದರು. ಪರಧನ ಪರಸ್ತ್ರೀ
ಯರುಗಳಿಗೆ ಆಳುಪಿದರು. ಶಿವಮಾಹೇಶ್ವರರ ನಿಂದೆಯ ಮಾಡಿದರು. ಈ
ಪರಿಯಲ್ಲಿ ತಪ್ಪಿ ನಡೆದು, ಹಸ್ತಚ್ಛೇದನ ಶಿರಚ್ಛೇದನಂಗಳ ಮಾಡಿಸಿ
ಕೊಂಡು ಹೋದರು. ಕೋಪಾಗ್ನಿಯಿಂದುರಿದು ಹೋದರು. ಅನೇಕ
ಪರಿಯಲ್ಲಿ ಭಂಗಿತರಾದರು. ಕಷ್ಟಜನ್ಮಂಗಳಲಿ ಜನಿಸಿದರು. ಮರಳಿ
ಮತ್ತೆಯುರಿದು ಶಿವಾರಾಧನೆಯಂ ಮಾಡಿ, ಶಿವಸ್ತೋತ್ರಮಂ ಮಾಡಿ,
ಮಾಹೇಶ್ವರರ ಪೂಜಿಸಿ, ಮರಳಿ ನಿಜಪದಂಗಳಂ ಪಡೆದರು. ಈ ಪರಿಯ
ಅರಿವು ಮರವೆಯುಳ್ಳ ದ್ವಂದ್ವ ಗ್ರಸ್ತರು ಬಲ್ಲರೇ ಎಮ್ಮ ಮಾಹೇಶ್ವರರ
ಮಹಿಮೆಯ? ನಮ್ಮ ಸದ್ಭಕ್ತರೇ ಬಲ್ಲರು. ಅದೆಂತೆನಲು ಕೇಳಿರೇ.
ವೇದಾದಿ ಅಷ್ಟಾದಶ ವಿದ್ಯಾಪರಿಚಿತರು, ತಾತ್ಪರ್ಯ ಕಳಾಗ್ರಹಿಗಳು, ವಿಶ್ವ
ಧಿಕರು ಅಂತಾಗಿ ಎಮ್ಮ ಮಾಹೇಶ್ವರರೇ ಬಲ್ಲರು ಉಳಿದಾದ ದೇವದಾನವ
ಮಾನವ ಋಷಿಗಳಿಗೆಯೂ ಅರಿಯಬಾರದು ಅಂತವರಿಗಾ ವಿಧಿ. ಇನ್ನು

ಮನುಷ್ಯರು ಅಲ್ಪಾಯುಷ್ಯರು. ವೇದಶಾಸ್ತ್ರಪುರಾಣಾಗಮಂಗಳು ಅಲ್ಪಾ
ಯುಷ್ಯಂಗೆ ಓದಲಿಕ್ಕೆ ತೆರಹಿಲ್ಲ. ಕಿಂಚಿತ್ ಓದಿದಡೆಯೂ ಕೇಳುವರೆ
ಕೇಳೆ ಇಲ್ಲ. ಇಂತಹ ಅಜ್ಞಾನಿಗಳಿಗೆ ಮಹಾಜ್ಞಾನಿಗಳ ಸಂಗವಿಲ್ಲ. ಜ್ಞಾನ
ಮುನ್ನವೇ ಇಲ್ಲ. ಅಹಂಕಾರಿಗಳು, ಮದಾಂಧರು, ಶಾಪಹತರು, ಜಡದೇ
ಹಿಗಳು ಅವಂಗೆಂತರಿಯಬಹುದಯ್ಯಾ. ಶಿವಮಾಹೇಶ್ವರರ ಮಹಿಮೆಯನ
ರಿಯದ ದ್ರೋಹಿಗಳ ಕೂಡೆ ಸಂವಾದಿಸಲುಂಟೆ? ಅವರುಗಳ ಮನವ
ನಂದು ಅರಿವಿನ ಹವಣಿಕೆ ಇದೆಂದರಿದು ಅವಾಚಕನಾಗಿಪ್ಪುದಲ್ಲದೆ ಆ
ಪಾಪಿಗಳ ನೋಡಲಾಗದು, ನುಡಿಸಲಾಗದು, ಸಮಾನರಲ್ಲಿ ಕುಳ್ಳಿರ್ದು
ತರ್ಕಿಸಲಾಗದು. ಶಿವಜ್ಞಾನಿಗಳಲ್ಲದವರ ಕೂಡೆ ನುಡಿಯ ತೆರಹುಂಟೆ?
ಶಿವಮಾಹೇಶ್ವರನು ಲಿಂಗಾರ್ಚನೆಯಂ ಮಾಡಿ ಮಹಾನುಭಾವರ ಸಂಗ
ಸುಖದಲ್ಲಿಪ್ಪನಲ್ಲದೆ? ಕೇಳಿರಣ್ಣಾ. ಆ ದೇವದಾನವ ಮಾನವರ ಪರಿಯಂ
ತಲ್ಲ ಎಮ್ಮ ಮಾಹೇಶ್ವರರು ಶಿವಾಚಾರಸಂಪನ್ನರು ಸರ್ವವಿದ್ಯಾಪರಿ
ಚಿತರು ಪರಧರ್ಮ ಪರಸ್ತ್ರೀಯರನೊಲ್ಲರು. ಸತ್ಯಸಿತ್ಯರು ನಿರುಪಾಧಿ
ಕರು ನಿರಾಶಾಸಂಪನ್ನರು ಪರಮ ಪರಿಣಾಮಿಗಳು ಎಮ್ಮ ಮಾಹೇಶ್ವ
ರರು. ಅವರ ಸಂಗದಿಂದ ಗುರುಸಿದ್ಧಿ, ಲಿಂಗಸಿದ್ಧಿ, ಜಂಗಮಸಿದ್ಧಿ, ಪ್ರಸಾ
ದಸಿದ್ಧಿ, ಇಹಸಿದ್ಧಿ, ಪರಸಿದ್ಧಿ, ಸರ್ವಸಿದ್ಧಿ. ಇಂತಹ ಸದ್ಭಕ್ತರ ಮಹಿಮೆಗೆ
ನಾನು ನವೋ ನವೋ ಎಂದು ಬದುಕಿದೆನಯ್ಯಾ ಉರಿಲಿಂಗಪೆದ್ದಿ
ಪ್ರಿಯ ವಿಶ್ವೇಶ್ವರಾ.

ಭಾವಃ— ಇದರಲ್ಲಿ ವಚನಕಾರನು ಗುರು, ಲಿಂಗ, ಭಕ್ತಿ ಮೊದ
ಲಾದವುಗಳ ಮಹಾತ್ಮ್ಯವನ್ನು ಹೊಗಳಿ, ಅದಕ್ಕೆ ಅನೇಕ ಪ್ರಮಾಣ
ಗ್ರಂಥಗಳನ್ನು ಕೊಟ್ಟಿರುವನು. ಮಾಹೇಶ್ವರರ ಮಹತ್ವವನ್ನು ಭಕ್ತರೇ ಬಲ್ಲರು.
ದೇವತೆಗಳು ಸಹ ಅರಿಯರು ಎಂದು ಹೇಳಿರುವನು. ಮನುಷ್ಯರು ಅಹಂ
ಕಾರಿಗಳು, ಮದಾಂಧರು, ಜಡದೇಹಿಗಳು ಇವರಂತೂ ಈ ವಿಷಯ
ವನ್ನು ಏನೂ ಅರಿಯರು. ಇಂಥವರೊಡನೆ ಈ ವಿಷಯಗಳನ್ನು ಸಹ
ಆಲೋಚಿಸಕೂಡದೆಂದು ವಚನಕಾರನ ಅಭಿಪ್ರಾಯವದೆ.

ವಚನಃ— ೬೦. ಶಿವನೇ ನಿಮ್ಮ ನಾ ಬಲ್ಲೆನು. ಗುರುದೇವೋ
ಮಹಾದೇವೋ ಎಂದುದಾಗಿ, ಶ್ರೀಗುರುರೂಪಾಗಿ ಬಂದು ದೀಕ್ಷೆಯ
ಮಾಡಿ ಶಿವಲಿಂಗವ ಬಿಜಯಂಗೆಯಿಸಿ ಕೊಟ್ಟಿರಿ, ಜಂಗಮವ ತೋರಿ
ದಿರಿ. ಇದು ಕಾರಣ ನಿಮ್ಮ ನಾ ಬಲ್ಲೆನು. ಎನ್ನ ನೀವೆ ಬಲ್ಲಿರಿ. ನಿಮ್ಮ

ಶಿಸುವೆಂದು ಪ್ರಸಾದವನಿಕ್ಕಿ ರಕ್ಷಿಸಿದಿರಿ. ಇದು ಕಾರಣದಿಂದಲಿ ನಿಮ್ಮ ನಾ ಬಲ್ಲೆನು. ಎನ್ನನು ನೀವೆ ಬಲ್ಲಿರಿ. ಮತ್ತೆ ಮರೆಯ ಮಾಡಿ ಜ್ಞಾನವನು ಅಜ್ಞಾನವನು ಭಕ್ತಿಯನು ಅಭಕ್ತಿಯನು ಸುಖವನು ದುಃಖವನು ಒಡ್ಡಿ ಕಾಡದಿರಯ್ಯ. ಇವೆಲ್ಲವಕ್ಕೆಯು ನೀವೇ ಕಾರಣ. ಇದು ಕಾರಣ ನಿಮ್ಮ ಬೇರ ಬಲ್ಲವರಿಗೆ ಎಲೆಯ ತೋರಿ ಅಳಿವಾಡಿ ಕಾಡುವಿರಿ. ಕಾಡದಿರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇಲ್ಲಿ ವಚನಕಾರನು ಗುರುವಿನನ್ನು ಕುರಿತು ಒಂದು ಬಗೆಯಾಗಿ ಸ್ತುತಿಸಿರುವನು. ಗುರು ಮತ್ತು ಭಕ್ತ ಇವರಲ್ಲಿ ಸಮರಸ ಭಾವವಿರುತ್ತದೆ. ಆದ್ದರಿಂದ ಗುರುವಿನನ್ನು ಭಕ್ತನು ಬಲ್ಲನು, ಭಕ್ತನನ್ನು ಗುರುವು ಬಲ್ಲನು. ಹೀಗೆ ಭಕ್ತನು ಗುರುವಿನ ಮೂಲವನ್ನು ಕಂಡ ಬಳಿಕ ಗುರುವು ಆ ಮೂಲದ ರೀತಿಯನ್ನು ತಿಳಿಸಬೇಕೇ ಹೊರ್ತು ಕೇವಲ ಬಾಹ್ಯ ಸೌಂದರ್ಯವುಳ್ಳ ಎಲೆಗಳನ್ನು ತೋರಿ ಭಕ್ತನನ್ನು ರಂಜಿಸಬಾರದು. ಆದ್ದರಿಂದ ಜ್ಞಾನ, ಅಜ್ಞಾನ, ಭಕ್ತಿ, ಅಭಕ್ತಿ, ಸುಖ, ದುಃಖ ಹೀಗೆ ನಾನಾವಿಧ ತೊಂದರೆಗಳಿಗೆ ತನ್ನನ್ನು ಒಳಗು ಮಾಡಿ ಕಾಡಬೇಡವೆಂದು ಗುರುವನ್ನು ವಚನಕಾರನು ಬೇಡಿಕೊಳ್ಳುತ್ತಲಿರುವನು.

ವಚನಃ— ೬೧. "ನ ಗುರೋರಧಿಕಂ ನ ಗುರೋರಧಿಕಂ ನ ಗುರೋರಧಿಕಂ। ವಿದಿತಂ ವಿದಿತಂ ವಿದಿತಂ। ಶಿವಶಾಸನತಃ ಶಿವಶಾಸನತಃ॥" ಶ್ರೀಗುರು ಮರ್ತ್ಯಕ್ಕೆ ಬಂದು ಅಷ್ಟಾದಶ ಜಾತಿಗಳೊಳಗಿದ್ದರೇನು? ಮನುಷ್ಯನೇ? ಅಲ್ಲ. ಸಾಕ್ಷಿ॥ ಗುರುದೇವೋ ಮಹಾದೇವೋ ಗುರುದೇವೋ ಸದಾಶಿವಃ। ಗುರುದೇವೋ ಪರಂ ನಾಸ್ತಿ ತಸ್ಮೈ ಶ್ರೀಗುರವೆ ನಮಃ॥ ಎಂದುದಾಗಿ, ಲಲಾಟಲೋಚನಂ ಚಾಂದ್ರಿಕಲಾಮಪಿಚ ತೂರ್ದ್ವಯಂ। ಅಂತರ್ನಿಧಾಯ ವರ್ತತೆ ಗುರುರೂಪಾಯ ಮಹೇಶ್ವರೀ ಗುರು ರೂಪಾಗಿ ವರ್ತಿಸುತ್ತಿರ್ದ್ದನು ಪರಶಿವಗುರುಮೂರ್ತಿ. ಪರಶಿವಃ ಗುರುಮೂರ್ತಿಃ ಶಿಷ್ಯದೀಕ್ಷಾದಿಕಾರಣಾತ್। ಶಿಷ್ಯಾತೀತ ಮಹಾಜೋದ್ಯಂ ಜೋದ್ಯರೂಪಾಯ ವೈ ನಮಃ॥ ಎಂದುದಾಗಿ ಶಿಷ್ಯಂಗೆ ದೀಕ್ಷೆಯ ಮಾಡಿ ಕರುಣಿಸಬಂದ ಮಹಾಕರುಣ ಮೂರ್ತಿ ಪರಶಿವ ತಾನೇ ಗುರು. ರತ್ನಂಗಳೊಳಗೆ ಚಿಂತಾಮಣಿ ಮಹಾರತ್ನವೆಂತು ಪೂಜ್ಯವಾಗಿಪ್ಪುದೋ, ಧೇನುಗಳೊಳಗೆ ಕಾಮಧೇನುವೆಂತು ಪೂಜ್ಯವಾಗಿಪ್ಪುದೋ, ವೃಕ್ಷಂಗಳೊಳಗೆ ಕಲ್ಪವೃಕ್ಷವೆಂತು ಪೂಜ್ಯವಾಗಿಪ್ಪುದೊ, ಅಂತೆಯೇ ಕಾಣಿರೋ.

ಶಪ್ತಂಗಳೊಳಗೆ ಶ್ರೀಗುರು ತತ್ವವೇ ಪೂಜ್ಯವು. ಶ್ರೀಗುರು ತತ್ವವೇ ಒಪ್ಪುವದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಗುರುವು ಪರಶಿವಮೂರ್ತಿ ಎಂದು ಭಾವಿಸಿ ಭಕ್ತಿಯುಳ್ಳವನಾಗಿರಬೇಕೆಂದು ವಚನಕಾರನು ಇದರಲ್ಲಿ ಹೇಳುತ್ತಿರುವನು. ಈ ಬಗ್ಗೆ ಆಧಾರ ಶ್ಲೋಕಗಳನ್ನೂ ಕೊಟ್ಟಿರುವನು.

ವಚನಃ— ೬೨. ಇನ್ನು ಮುಕ್ತನೆಂಬನ್ನಬರ ಮುನ್ನಲೇನು ಬದ್ಧನೆ? ಮುನ್ನ ಮುನ್ನವೇ ಮುಕ್ತನು. ಒಂದು ಕಾರಣದಿಂದ ಬದ್ಧನಾದರೆ ಗುರು ಕರುಣದಿಂದ ಗುರುವಾದ ಬಳಿಕ, ಬದ್ಧಮುಕ್ತನೆಂಬ ದಂದುಗದ ನುಡಿ ಹೊದ್ದಲುಂಟೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಭಾವಃ— ಇದರಲ್ಲಿಯೂ ವಚನಕಾರನು ಬೇರೊಂದು ಬಗೆಯಿಂದ ಗುರುವಿನ ಸ್ತೋತ್ರವನ್ನು ಮಾಡಿರುವನು. ಗುರುಕರುಣದಿಂದ ಭಕ್ತನು ಗುರುವಾದ ಬಳಿಕ ಭಕ್ತನಿಗೆ ದಂದುಗಗಳು ಇಲ್ಲೆಂದು ಹೇಳುತ್ತಾನೆ.

ಶರಣರ ಸ್ವರೂಪು.

ವಿವರಣೆ— ಮುಂದಿನ ವಚನಗಳಲ್ಲಿ ವಚನಕಾರನು ಶರಣನ ವರ್ತನೆ, ಅವನ ಸ್ವರೂಪ, ಅವನ ರೀತಿ ನಡತೆಗಳನ್ನು ಹೇಳಿರುವನು. ಶರಣನು ಸ್ವತಂತ್ರನು, ಪರಾವಲಂಬಿಯಲ್ಲ ಅವನು ತನ್ನ ಯೋಗ್ಯತೆಯನ್ನು ಹೆಚ್ಚಿಸಿಕೊಂಡಿರುವದರಿಂದ ಅವನು ಹೀಗೆ ಸ್ವತಂತ್ರನಾಗಿ ವ್ಯವಹರಿಸಲು ಸಮರ್ಥನು. ಲಿಂಗದ ಶಕ್ತಿಯು ಅವನಲ್ಲಿ ದೃಢವಾಗಿ ವಾಸಿಸಿರುತ್ತದೆ. ಇದಕ್ಕೆ ಅವನ ಅರಿವೇ ಮುಖ್ಯ ಕಾರಣವು. ಈ ಅರಿವು ಬರೇ ಅವನ ಮಾತಿನಲ್ಲಿರದೆ ನಡೆಯಲ್ಲಿ ತೋರುವದರಿಂದ ಆ ಅರಿವನ್ನು ಅವನು ಎಂದಿಗೂ ಮರೆಯನು. ಶರಣನು ಜಗತ್ತಿನೊಳಗಿದ್ದರೂ ಅದರ ವ್ಯಾಪಾರಗಳಲ್ಲಿ ಸಿಲುಕಿಕೊಂಡಿರುವದಿಲ್ಲ. ಅದರಿಂದ ಜಗತ್ತಿನಲ್ಲಿ ಅವನು ಇದ್ದರೂ ಇರದಂತೆ ಇರುತ್ತಾನೆ. ಅವನು ಭಿಕ್ಷುಕನಲ್ಲ. ತಿರಿದುಂಡು ಹೊಟ್ಟೆ ಹೊರೆಯುವವನಲ್ಲ ಇವೇ ಶರಣರ ಲಕ್ಷಣಗಳು. ಈ ಪ್ರಕಾರ ವಚನಕಾರರ ಅಭಿಪ್ರಾಯಗಳಿದ್ದು ಉರಿಲಿಂಗಪೆದ್ದಿಯು ಇವುಗಳನ್ನೇ ಮುಂದಿನ ವಚನಗಳಲ್ಲಿ ಸಮರ್ಥಿಸಿ ನುಡಿದಿರುತ್ತಾನೆ.

ವಚನಃ— ೬೩. ಅಮೃತದೊಳಗೆ ಜನಿಸಿ, ಅಮೃತದೊಳಗೆ ವರ್ತಿಸುವ, ಅಮೃತದೇಹಿಗೆ ಹಸಿವು ತೃಷೆಯೇ? ಆ ಅಮೃತವೇ ಆಧಾರ, ಆ ಅಮೃತವೇ ಸೇವನೆ. ಬೇರೊಂದು ವಸ್ತು ಉಂಟಿ? ಇಲ್ಲ. ಆ ಅಮೃತವೆ ಸರ್ವಪ್ರಯೋಗಕ್ಕೆ. ಇದಕ್ಕೆ ಕಟ್ಟಳೆಯುಂಟೇ? ಕಾಲವುಂಟೇ? ಆಜ್ಞೆಯುಂಟೇ? ಬೇರೆ ಕರ್ಮ ಉಂಟೇ? ಇಲ್ಲ. ಮನವೇ ಮೇರೆ ಪರಿಣಾಮವೇ ಅವಧಿ ನೋಡಾ. ಶ್ರೀಗುರುಲಿಂಗದಲ್ಲಿ ಜನಿಸಿ ಶಿವಲಿಂಗದಲ್ಲಿ ಬೆಳೆದು ಜಂಗಮಲಿಂಗದಲ್ಲಿ ವರ್ತಿಸಿ, ಪ್ರಸಾದಲಿಂಗದಲ್ಲಿ ಪರಿಣಾಮಿಸಿ, ಆ ಚತುರ್ವಿಧವೇಕವಾಗಿ ಲಿಂಗವೇ ಪ್ರಾಣ, ಪ್ರಾಣವೇ ಲಿಂಗ, ಆ ಲಿಂಗವೇ ಅಂಗ, ಅಂಗವೇ ಲಿಂಗವಾಗಿ ಲಿಂಗಸ್ವಾಯತವಾದ ಲಿಂಗೈಕ್ಯಂಗೆ ಜಪ, ತಪ, ಅರ್ಚನೆ, ಪೂಜೆಗೆ ಆಗಮ ಉಂಟಿ? ಕಾಲ ಉಂಟಿ? ಕರ್ಮ ಉಂಟಿ? ಕಲ್ಪಿತ ಉಂಟಿ? ಇಲ್ಲ. ಸರ್ವವು ಲಿಂಗಮಯವಾದ ಆ ಲಿಂಗವಂತಂಗೆ ನಡೆವುದೆ ಆಗಮ, ಪೂಜಿಸುವುದೆ ಕಾಲ, ಮಾಡಿದ್ದೆ ಕ್ರಿಯೆ, ನುಡಿದುದೆ ಜಪ, ನೆನೆದುದೆ ಧ್ಯಾನ, ವರ್ತಿಸಿದುದೆ ತಪಸ್ಸು, ಇದಕ್ಕೆ ಅವಧಿಯುಂಟಿ?

ಮೇರೆಯುಂಟಿ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ರವಿ, ಶಶಿ, ಆತ್ಮ, ಮನೋವಾಕ್ಕಾಯ, ಹೊನ್ನು, ಹೆಣ್ಣು, ಮಣ್ಣು, ಸರ್ವಪದಾರ್ಥವನರ್ಪಿಸಿ ಗುರುಲಿಂಗಜಂಗಮದ ಪ್ರಸನ್ನತೆಯ ಪಡೆದ ಮಹಾಪ್ರಸಾದಿಗೆ ಸರ್ವವು ಪ್ರಸಾದವಲ್ಲದೆ ಮತ್ತೊಂದಿಲ್ಲ. ಆ ಪ್ರಸಾದಿಗೆ ಪದಾರ್ಥ ಪ್ರಸಾದವೆಂದು ಬೇರುಂಟಿ? ಅರ್ಪಿತ ಅನರ್ಪಿತವೆಂಬ ಸಂದೇಹ ಉಂಟಿ? ಕೊಂಬಲ್ಲಿ ಕೊಡುವಲ್ಲಿ ಸೀಮೆಯುಂಟಿ? ನಿಸ್ಸೀಮ ಪ್ರಸಾದಿಗೆ ಸರ್ವವೂ ಪ್ರಸಾದ. ಆ ಭೋಗಕ್ಕೆ ಅವಧಿಯುಂಟಿ? ಮೇರೆಯುಂಟಿ? ಮನವೇ ಮೇರೆ, ಪರಿಣಾಮವೇ ಅವಧಿ ನೋಡಾ! ವೇದ ಶಾಸ್ತ್ರ ಪುರಾಣಾಗಮಂಗಳು ಸರ್ವವಿದ್ಯಂಗಳ ತಾತ್ಪರ್ಯ ಮರ್ಮ ಕಳೆಗಳನರಿದ ಮಹಾ ಜ್ಞಾತೃವಿಂಗೆ ಆ ಮಹಾಜ್ಞಾನವೇ ದೇಹ, ಆ ಜ್ಞಾನವೇ ಪ್ರಾಣ. ಈ ಮಹತ್ತಪ್ಪ ಜ್ಞಾತೃ ಜ್ಞಾನ ಜ್ಞೇಯ ಒಂದಾದ ಮಹಾ ಬೆಳಗಿನ ಸುಖಸ್ವರೂಪಂಗೆ ಮರ್ತ್ಯ, ಸ್ವರ್ಗ, ದೇವಲೋಕವೆಂಬ ಫಲಪದವಾಸೆಯುಂಟಿ? ಇಲ್ಲ. ನಿರಂತರ ತೇಜೋಮಯ ಸುಖಸ್ವರೂಪನು ನಿತ್ಯಾನಂದಮಯನು. ಈ ಮಹಾಮಹಿಮನ ಸುಖಕ್ಕೆ ಅವಧಿಯುಂಟಿ? ಮೇರೆಯುಂಟಿ? ಇಲ್ಲ. ಮನವೇ ಮೇರೆ ಪರಿಣಾಮವೇ ಅವಧಿ ನೋಡಾ! ಆ ಮಹಾಮಹಿಮನು ಅನುಭಾವಿ ತಾನೇ ನಿರುಪಮ ಜ್ಯೋತಿರ್ಲಿಂಗವಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

ಭಾವಃ— ಯಾವನು ಸ್ವಯಂ ಸ್ಫೂರ್ತಿಯುಳ್ಳವನಾಗಿ ಲಿಂಗಾಣತಿಯಿಂದ ನಡೆಯುತ್ತಾನೋ ಅವನಿಗೆ ಮೇರೆ ಇಲ್ಲ, ಕಟ್ಟಳೆ ಇಲ್ಲ, ಕರ್ಮವಿಲ್ಲ. ಅವನ ಮನಸ್ಸೇ ಅವನಿಗೆ ಮೇರೆ. ಅವನಿಗೆ ಜಪತಪಾದಿಗಳಿಲ್ಲ. ಅವನು ಗುರುವಿನಲ್ಲಿ ಪುನರ್ಜಾತನಾಗಿ, ಶಿವಲಿಂಗವನ್ನೇ ತನ್ನ ಆಧಾರವಾಗಿಟ್ಟುಕೊಂಡು ಬೆಳೆದು, ಜಂಗಮಲಿಂಗವೇ ತನ್ನ ಜ್ಞೇತನ್ಯವಾಗಿ ವರ್ತಿಸಿ, ಅದರ ಪರಿಣಾಮಸುಖವನ್ನುಂಡು ಸುಖಿಸುವನಾದ್ದರಿಂದ ಅವನಿಗೆ ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಗಿರುವದು ಇವನಿಗೆ ಅರ್ಚನೆ, ಪೂಜೆ, ಆಗಮ, ಶಾಸ್ತ್ರ ಮೊದಲಾದವುಗಳು ಯಾವವೂ ಇಲ್ಲ. ಅವನಿಗೆ ಅವಧಿ ಇಲ್ಲ. ಮೇರೆ ಇಲ್ಲ. ಅವನು ಕಾಣುವ, ಸುಖಿಸುವ, ಅನುಭವಿಸುವ ಎಲ್ಲ ಪದಾರ್ಥಗಳನ್ನು ಲಿಂಗಾರ್ಪಿತ ಮಾಡಿ ಉಪಭೋಗಿಸುವದರಿಂದ ಎಲ್ಲವೂ ಅವನಿಗೆ ಪ್ರಸಾದಮಯವಾಗಿದೆ. ಅವನಲ್ಲಿ ಇದು

ಪದಾರ್ಥ ಇದು ಪ್ರಸಾದ ಎಂಬ ಭೇದಭಾವವಿಲ್ಲ. ಅವನು ಮಹಾ ಜ್ಞಾನವನ್ನು ತನ್ನಲ್ಲಿ ಒಳಪಡಿಸಿಕೊಂಡು ವರ್ತಿಸುವವನಾಗಿರುವನು. ಅದ ರಿಂದ ತಿಳಿಯುವವನೂ, ತಿಳಿಯತಕ್ಕಂಥ ವಸ್ತುವೂ, ಜ್ಞಾನವೂ ಇವೆ ಲ್ಲವೂ ತನ್ನಲ್ಲಿ ಸಮರಸವಾಗಿರುತ್ತವೆ. ಈ ಬಗೆಯ ಸಮರಸದಿಂದ ಬಂಟಾದ ಸುಖವನ್ನು ಆಸ್ವಾದಿಸುವವನಾದ್ದರಿಂದ ಅವನಲ್ಲಿ ಇಹಲೋಕ, ಪರಲೋಕ ಸುಖದ ಆಸೆಯು ಇರಲಾರದು. ಅವನು ಸುಖಸ್ವರೂಪ ನಾಗಿರುವನು, ನಿತ್ಯಾನಂದಮಯನಾಗಿರುವನು ಅವನು ಜ್ಯೋತಿರ್ಲಿಂಗವು ಎಂದು ವಚನಕಾರನು ಇಲ್ಲಿ ನುಡಿದಿದ್ದಾನೆ.

ವಚನ:— ೬೪. ಲಿಂಗಭರಿತಶರಣ, ಶರಣಭರಿತಲಿಂಗವು. ಅದೆಂ ತೆಂದರೆ ಶರಣಮುಖ್ಯೇ ಲಿಂಗಸ್ಯ। ಲಿಂಗಮುಖ್ಯೇ ಶರಣ್ಯತಾಂ। ಎಂದು ಪಾಗಿ, ಶರಣ ಬೇರೆ, ಲಿಂಗ ಬೇರೆಯೇ? ಶಿವಶಿವಾ ಒಂದೇ ಕಾಣಿರಣ್ಣಾ. ಅಂತು ಶರಣಕ್ರಿ ಎಲ್ಲವು ಲಿಂಗಕ್ರಿ, ಲಿಂಗಕ್ರಿ ಎಲ್ಲವು ಶರಣಕ್ರಿ. ಅದು ಕಾರಣ ಶರಣ ಪ್ರಸಾದವು ಲಿಂಗಕ್ಕೆ ನೈವೇದ್ಯ ಕಾಣಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವ:— ಇಲ್ಲಿ ವಚನಕಾರನು ಲಿಂಗ ಮತ್ತು ಶರಣ ಇವರು ಬೇರೆ ಬೇರೆ ಎಂದು ಭಾವಿಸಕೂಡದೆಂದು ಹೇಳಿದ್ದಾನೆ. ಶರಣನ ಕ್ರಿಯೆ ಗಳೇ ಲಿಂಗದ ಕ್ರಿಯೆಗಳಾಗಿರುವವು. ಮತ್ತು ಲಿಂಗದ ಕ್ರಿಯೆಗಳೇ ಶರ ಣನ ಕ್ರಿಯೆಗಳು. ಆದ್ದರಿಂದ ಶರಣನು ಅರ್ಪಿಸಿದ್ದು ಲಿಂಗಕ್ಕೂ ಸಲ್ಲುವದು.

ವಚನ:— ೬೫. ಪ್ರಾಣಲಿಂಗ ಸ್ವಾಯತವಾದ ಸದ್ಭಕ್ತಂಗೆ ಸದ್ಭಕ್ತಿ ಮಾರ್ಗವೇ ಕ್ರಿಯೆ: ನೋಡಾ! ಲೋಕಾಚಾರ ಮಾಡಲಾಗದು. ಲೋಕದ ಬಳಕೆಯ ಬಳಸಲಾಗದು. ಲೋಕ ಲೌಕಿಕರಲ್ಲಿ ವರ್ತಿಸಲಾಗದು. ಲೋಕಾಚಾರ ಮಾರ್ಗವನೆಲ್ಲವನು ಬಿಡಬೇಕು. ಲೋಕಾಚಾರವನು ಬಿಟ್ಟು ಶಿವಾಚಾರ ಸನ್ಮಾರ್ಗದಲ್ಲಿ ಪಂಚಾಚಾರ ನಿಯತಾತ್ಮನಾದ ಸದ್ಭ ಕ್ತನೇ ಪ್ರಾಣಲಿಂಗಿ, ಅತನೇ ಕಾಯಲಿಂಗಿ ಆ ಸದಾಚಾರಿಯೇ ಸರ್ವಾಂ ಗಲಿಂಗಿಯಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವ:— ಪ್ರಾಣಲಿಂಗಸ್ವಾಯತವಾದವನು ಶಿವಾಚಾರ ಸನ್ಮಾರ್ಗ ದಲ್ಲಿ ನಡೆಯಬೇಕು. ಪಂಚಾಚಾರಕ್ಕನುಸರಿಸಿ ವರ್ತಿಸಬೇಕು. ಲೌಕಿಕ ದಲ್ಲಿ ವರ್ತಿಸಲಾಗದು ಅತನು ಕಾಯಲಿಂಗಿಯಾಗುವನು. ಅವನೇ ನಿಜ ವಾದ ಸರ್ವಾಂಗಲಿಂಗಿಯು.

ಹರಿಹರನ ರಗಳೆಗಳು.

ಭಾಗ ೬.

ವಿಕಾಂತರಾಮ ತಂದೆಗಳ ರಗಳೆ.

ಕಂದ॥ ನತಜನ ಸಮೀಪನಭವಂ।
ಶ್ರುತಿ ದೂರಂ ಸಕಲದೇವಸೇವ್ಯಂ ಪೆರಿದಂ॥
ಕ್ಷಿತಿಯೊಳಗೇಕಾಂತರಾಮ।
ನತಿಶಯದಿಂ ಕರುಣಿ ಹಂಪೆಯ ವಿರೂಪಾಕ್ಷಂ॥

ರಗಳೆ.

ಶ್ರೀಮೇರುವಿಂಗೆ ತೆಂಕಣ ದಿಶಾಭಾಗದೊಳು
ಭೂಮಿಗೆ ವಿಭೂಷಣನೆನಿಪ್ಪುದತಿ ರಾಗದೊಳು
ಹೆಸರೆನಿಪ್ಪಬ್ಬಲೂರೆಂಬ ಪೆರ್ಮೆಯ ಪುರಂ
ಪಸುಳೆಗೆಸೆದಿಪ್ಪವರ ಕೀರ್ತಿ ವಿುಗೆ ಸಡಗರಂ
ಮುಗಿಲನಳ್ಳಿರುವ ಕೋಂಟೆಯ ಸೀಳ್ದ ತೆಸೆಗಳಿಂ
ಗಗನದೊಳ್ಪಸರಿಸುವ ಬಿರಿದಿನಟ್ಟೆಗಳಿಂ
ಜಗಿದು ಪಾತಾಳಮುಂ ಮುಟ್ಟುವಗಳುದ್ದದಿಂ
ಸೆಗಳ್ದಂಬರದೊಳಿಸಿವ ಹಳವಿಗೆಗಳೊಪ್ಪದಿಂ
ಪೊಳಿಪೊಳಿವ ಹೊಸ ಪರಿಯ ಸೋಮವೀಥಿಗಳಿಂದ
ನಳನಳಿಸುತಿಪ್ಪ ಜಿನಭವನ ಕೋಟಿಗಳಿಂದ
ಪೆಸಪೆಸಪೆಸೆ ಸಂಭ್ರಮಿಪ ಜೈನರೊತ್ಸೊತ್ತೆಯಿಂ

ಎಸೆವುದಾ ಪುರವದರೊಳಗೆ ಮಾನ್ಯವೃತ್ತಿಯಿಂ
ಕತ್ತಲೆಯ ನಡುವೆ ಮಿನುಮಿನುಪ ಜ್ಯೋತಿಯ ತೆರದಿ

ಸುತ್ತಿರ್ದ ಬಕದ ನಡುವಣ ಮರಾಳನ ತೆರದಿ
ತರುಗುಲ್ಮಲತೆಗಳೊಳಗಿರ್ದ ಚಂದನದಂತೆ
ನೆರೆದ ಕಬ್ಬನದೊಳಗೆ ಸಿಕ್ಕಿದ ಪರುಷದಂತೆ
ಬಸದಿಗಳ ನಡುವಿರ್ದುದೊಂದು ಶಿವನಾಲಯಂ
ಮಿಸುಪ ಬ್ರಹ್ಮೇಶ್ವರಂ ನೆಲಸಿದ ಶಿವಾಲಯಂ
ಆ ಶಿವಾಲಯದೊಳಗೆ ಒಡವಾಗಿ ಶಂಕರಂ
ದೇಶಿಗರ ತೆರದಿ ಸರ್ವೇಶ ತಾನಿರೆ ಕರಂ
ಜೈನರುಂ ಮಾಡುವ ನಿರೋಧಮುಂ ನೋಡುತುಂ
ತನತನಗೆ ನುಡಿದ ದುಶ್ಶ್ರುತಿಗಳಂ ಕೇಳುತುಂ
ಪೂಜೆ ಇಲ್ಲದೆ ಮಜ್ಜನಕ್ಕೆರೆವರಿಲ್ಲದಿರೆ
ಓಜೆಗೆಟ್ಟರುಹನನರೆಲ್ಲರುಂ ಬಗೆಯದಿರೆ
ಎನ್ನಯ ನಿರೋಧಮುಂ ಕೇಳರೆನ್ನವರೆಂದು
ಇನ್ನುದಾಸೀನವ ಮಾಡರೆನ್ನವರೆಂದು
ಇಂದು ಉದಯವ ಚಕೋರಿಗಳು ಹಾರೈಪಂತೆ
ತಂದೆ ಪುತ್ರನ ಬರವ ಮೋಹದಿಂ ನೋಲ್ಪಂತೆ
ಬಯಸುತಿರ್ದಂ ತನ್ನೊಳಿಂದಿರ್ದ ವೀರನಂ
ಬಯಸುತಿರ್ದಂ ನಿಷ್ಠೆ ಬೇರ್ವರಿವ ಧೀರನಂ

ಇರಲಿತ್ತಲತ್ತಲುತ್ತರ ದಿಶಾಭಾಗದೊಳು
ಹರಭಕ್ತನೇಕಾಂತ ರಾಮೈಯ್ಯನೊಪ್ಪದೊಳು
ಇಪ್ಪನಾತನ ನಿಲವನೇನೆಂದು ಬಣ್ಣಿಪೇಂ
ಸರ್ವಭೂಷಣಸೊಲ್ಮೆಯವನ ತಾನೆಂದಪೇಂ
ನುಡಿಯುಂ ನುಡಿದ ಬಳಿಕ ತಪ್ಪನಚಳಿತ ವಚನ
ಹಿಡಿದ ಧಾಷೆಯ ಬಿಡದೆ ಕಡೆಗಣಿಪ ದೃಢದ ಮನ
ಎಡೆಗೊಡಂ ಕೊಟ್ಟು ಹಿಮ್ಮೆಟ್ಟನಂತಹಹ ಕಲಿ
ತೊಡಕಮುಂ ತೊಡಕಿ ಬಿಡಿಸಲ್ಬಾರದಂತು ಛಲಿ
ಇಂತೆನಿಪ ಶಿವನ ಭಕ್ತಿಯ ನಿಷ್ಠೆಯಿಂ ನಿಂದು
ಚಿಂತಿಸಿದನಿರ್ದಿರ್ದು ತನ್ನ ಮನದೊಳಗಂದು
ಅರೆಬಿರಿವರಂ ವೀರರಂ ಸತ್ಯ ಭಕ್ತರಂ
ಹರಪರಿಸುವಪ್ರತಿಮ ಶಿವಭಕ್ತಿಯುಕ್ತರಂ

ದಿವ್ಯ ಶಿವಲಿಂಗಂಗಳಂ ಶಿವಕ್ಷೇತ್ರಮುಂ
ಸೇವ್ಯರೆನಿಸಿರ್ದ ಹರಶರಣಸಂಕುಲಮುಮುಂ
ನೋಡುವುದ್ಯೋಗಮನನಾಗಿ ಚಿಂತಿಸತೊಡಗೆ
ನೋಡಬ್ಬಲೂರ ಜಿನನ ಪ್ರತುಮೆ ನಡನಡುಗೆ

ಪೊರಮಟ್ಟನಪ್ರತಿಮನತುಳಬಲನುರವಣಿಸಿ
ನೆರೆ ಮನದಿ ಶಿವಭಕ್ತನಾನಂದಮುಂ ಧರಿಸಿ
ಸಕಳ ಭವಿಗಳ ಪಾಪಮುಂ ನೋದಿ ಕಳೆವುತಂ
ಸಕಳ ದೇಶಂಗಳಂ ಪಾವನಂ ಮಾಡುತಂ
ದುರಿತಕುಲಮೇಘವಾರುತಮೂರ್ತಿ ಬರುತಿರ್ದ
ಉರವಣಿಪ ನಿಂದಕಥ್ವಾಂತರವಿ ಬರುತಿರ್ದ
ಇಂತು ಪಲವೆಡೆಗೈದಿ ನಲಿನಲಿದು ಬರುತಮಿರೆ

ಮುಂತೆ ದೂರದೊಳಬ್ಬಲೂರಲ್ಲಿ ತೋರುತಿರೆ
ನೆರೆದಿರ್ದ ಬಸದಿಗಳು ಕಣ್ಗೆ ಬಿಳಿದಾಗಿರಲು
ಹರಭವನವೆಂದು ಕೈಯ್ಯೆತ್ತಿ ಪೊಡವಮಡುತಿರಲು
ನಡುಗುತುಂ ಬೆಮರುತಲ್ಲಿಯ ಜಿನಪ್ರತಿಮೆಗಳು
ಘುಡುಘುಡಿಸಿ ಕಣ್ಣನೀರಿಕ್ಕುತಂ ಪ್ರತಿಮೆಗಳು
ಮುಂದಿಂಗೆ ಮೂಗೂರಿದವು ಜಿನಪ್ರತಿಮೆಗಳು
ಒಡನೆದ್ದವಾ ಬಾಗಿಲೊಳ್ಕೆಂಪಿರುಂಪೆಗಳು
ನಿಡುಸರಂಗೊಂಡು ಕರೆದುವು ಪಗಲ ಬಳ್ಳಗಳು
ಈ ತೆರದೊಳುತ್ಪಾತವಾಗುತಿರೆ ನಡೆತಂದು
ನೀತಿ ಇಲ್ಲದ ಸವಣರೂರಹತ್ತಿರೆ ಬಂದು
ಕೂಡೆ ಪುರದೊಳ್ಪೊಕ್ಕು ಬಾಗಿಲುಗಳೊಳ್ನಿಂದು
ನೋಡೆ ಬೆತ್ತಲೆಯ ಜೊಂಬೆಗಳಿರಲ್ಕಳವಳಿದು
ತಿರುಗಿದಂ ಹರಹಹ ನಮಃಶಿವಾಯೆಂದೆನುತೆ
ಪರಮ ಭಕ್ತಂ ಹೇಸಿದಂ ಸುಡುಸುಡೆಂದೆನುತೆ
ಎಲ್ಲವುಂ ಜಿನಭವನವಾಗೆ ಸುರ್ರನೆ ಸುಯ್ದು
ಪೊಲ್ಲವಾಯ್ತೆನುತೆ ಮಿಗೆ ಮರುಗಿ ಮುಮ್ಮಳವಾಯ್ದು
ತಲೆಗೊಡಹಿ ಸಿಡಿಮಿಡಿಗೊಳುತ್ತೆ ಛೀ, ಛೀ ಎನುತೆ

ಸಿಲನವೊಯ್ದು ತನ್ನಂ ಬೈದುಕೊಳುತುಂ ಬರುತೆ
ಹುಟ್ಟಿದಂದಿಂದವಿಂ ಪ್ರತಿಮೆಯಂ ಬಲ್ಲೆನೇ
ಕಟ್ಟಿನಿಂತೇಕಾಯ್ತು ತಾಂ ಭಕ್ತನಲ್ಲೆನೇ
ಸೋಸೊಡಿರುಳಾಯ್ತಿರಲ್ಬಾರದೇವೇಂ ಶಿವನೆ
ಆಪತ್ತಿನಗಿದರಿಂದಧಿಕವಿಲ್ಲೆಲೆ ಶಿವನೆ

ಎನುತಿರಲ್ಬ್ರಹ್ಮೇಶ್ವರಂ ಕರುಣದಿಂ ಬಂದು
ತನಗೆ ಸೊಗಸುವ ಭಕ್ತವೇಷಮಾರ್ಗದಿ ನಿಂದು
ರಾಮಿತಂದೆಗಳ ಕೆಲಬಲದಲ್ಲಿ ಸುಳಿವುತಿರೆ
ಕಾಮಹರನಲ್ಲಿ ತನ್ನಂ ಮರಿಸಿ ನಿಲುತವಿರೆ
ಕಂಡಿದೇನೀ ಪುರದೊಳಿರ್ಪವರ ಪರಿಯಲ್ಲ
ಖಂಡೇಂದುವೌಳಿಯ ಶರಣರೋರ್ವರೂ ಇಲ್ಲ
ಶಿವನ ಭಕ್ತರ ವೇಷಮಾರ್ಗದಂತಿರ್ದಪುದು
ಹವಣಿಸದೆ ಎನ್ನ ಮುಂದೆಡೆಯಾಡುತಿರ್ದಪುದು
ನೆರೆದ ಕಲ್ಲಳ ನಡುವೆ ಪರುಷದ ಕಣಿಯು ಕಂಡೆ
ಸರ ಹರಿದ ಮಣಿಗಳೊಳ್ಪಂತಾಮಣಿಯ ಕಂಡೆ
ಗುಣಹೀನ ಧೇನುಗಳೊಳಿಗೆ ಕಾಮಧೇನುವಿದೆ
ಕಣಿಗಿಲೆಯ ತೋಪಿನೊಳು ಸಲೆ ಕಲ್ಪವೃಕ್ಷವಿದೆ
ನುಡಿಸಿ ನೋಡುವೆನಾದುದಕ್ಕೆಂದು ಸಾರ್ತಂದು
ನಿಡು ಸುಯ್ವುತುಮ್ಮಳಿಸುತೆಂತಕ್ಕೆ ಎಯ್ತಂದು
ಶರಣಾರ್ಥಿ ನಿಮ್ಮ ಮತವಾವುದೆಂದೆನುತಿರಗೆ
ಪುರದೊಳಗೆ ಬ್ರಹ್ಮೇಶನಾಲಯವೆನುತೆ ಪೋಗೆ
ಎಲ್ಲಿ ಬ್ರಹ್ಮೇಶ್ವರಂ ಎನುತ್ತಿ ಕಣ್ಬಂದಂತೆ
ನಿಲ್ಲದುರವಣಿಸುತಲ್ಲಿಯದಿ ಗುರುಗಳ್ಪಿಂತೆ
ನಡೆದೊಡೆ ನಡೆದು ಪರಿದೊಡೊಡನೊಡನೆ ನಡೆತಂದು
ಮೃಡನಾಲಯಂಬುಗಲ್ದೆನ್ನಲ್ಲಿ ಪುಗುತಂದು
ಘೊಪ್ಪೆನಲ್ಶಂಕರನ ಚರಣತಳದೊಳು ಬಿರ್ದು
ಕುಪ್ಪಳಿಸಿ ಕಣ್ಣನೀರೊಡೆಯಲಳಲುತ್ತಿರ್ದು
ಏನೈಯ್ಯ ಶಿವನೆ ಉಮ್ಮಳಿಸುತಿರ್ಪೈ ತಂದೆ
ಏನೈಯ್ಯ ಕರನಿರೋಧದೊಳಿರ್ದೆ ಎಲೆ ತಂದೆ

ಎಂದೆನುತ್ತಪ್ಪಿಕೊಂಡಡಿಗಡಿಗೆ ಮುಂಡಾಡಿ
ಬಂದಾಯಸಮನುಸುರ್ದು ಕಡು ಮೋಹದಿಂ ನೋಡಿ
ದೇವ ಇಂತಿರತಕ್ಕುದೇ ದೂಷಕರ ನಡುವೆ
ದೇವ ಇಂತಿರ್ಪರೆ ಶಿವದ್ರೋಹಿಗಳ ನಡುವೆ

ಎನೆ ಶಶಿಧರಂ ರಾಮತಂದೆಯಂ ಬಿಗಿದಪ್ಪಿ
ಎನಗೊಡೆಯರಿನಿತು ದಿನವಿಲ್ಲೆನುತಮರ್ದಪ್ಪಿ
ನಿನ್ನ ಬರವಂ ಪಾರುತಿರ್ದೆನೆಲೆ ರಾವೈಯ್ಯ
ಎನ್ನೊಲವು ಬರ್ಪಂದದಿಂ ಬಂದೆ ರಾವೈಯ್ಯ
ಅರುಹನರ ಪ್ರತಿವಾದಿಗಳನೆತ್ತಿ ಬಿಸುಟು ಕಳೆ
ನೆರೆದಿರ್ದ ಜೈನಸಂಕುಳವನೆಚ್ಚೆಟ್ಟೆ ಕಳೆ
ಎಂದು ಬೆಸಿಸಲು ರಾಮತಂದೆ ಹರುಷಂದಳೆದು
ಅಂದಿನಿರುಳಂ ಹರನೊಳೇಕಾಂತವಂ ಕಳೆದು
ವಸುಧೆಗಿನಕಿರಣ ಶಿವಭಕ್ತಿ ಪಸರಿಸುವಂತೆ
ದೆಸೆದಿಕ್ಕನಾವರಿಸಿ ತೊಳಗಿ ಬೆಳಗುತ್ತಿಂತೆ

ಬೆಳಗಾಗೆ ಶಿವನ ಪೂಜೆಗೆ ಪೂವ ತರಲೆಂದು
ಗಳಗಳನೆ ಬರೆ ರಂಗಮಂಟಪದ ನಡುವಂದು
ಹರನತ್ತ ಕಾಲಾಗಿ ಪಟ್ಟಿರೆ ಸವಣಗುನ್ನಿ
ಹರನಣುಗನೀಕ್ಷಿಸುತ್ತೀಳಿಲೆ ಹುಳಿತಗುನ್ನಿ
ಹರನಿರ್ದ ದೆಸೆಯೊಳೀ ಪರಿ ಇರಲ್ತಕ್ಕುದೇ
ನರಕಿ ಏಳೇಳು ಶಿವದ್ರೋಹಿ ಇರತಕ್ಕುದೇ

ಎಂದ ನುಡಿಗೇಳಿ ಸವಣಂ ಕರಂ ಘುಡುಘುಡಿಸಿ
ಡಂಬಿನ ಗೊರವ ಗಳಹದಿರು ನಿನ್ನ ಮಾತು ಪುಸಿ
ಶಿವನೆಂದಡಾರೆಲ್ಲಿಯಾರ್ಗಿತ್ತನೆಲೆ ಗೊರವ
ಹವಣರಿಯದೆನ್ನೊಡನೆ ನುಡಿವರೆ ಮರುಳ್ಗೊರವ
ಎನೆ ರಾಮತಂದೆ ಘುಡುಘುಡಿಸಿ ಮುಸಗಿದನಂದು
ಕೊನೆ ಮೀಸೆ ಕೆತ್ತಿ ಸಿಡಿಲೇಳೆ ಎಳ್ದಂ ನಿಂದು

ಕೇಳ್ದಿಲವೊ ಮೂರುಂಪುರಂಗಳುರುಪಿದುದನರಿಯ
ಕಾಲನಂ ಭಸ್ಮೀಕೃತವ ಮಾಡಿದುದನರಿಯ
ಕಾಮನಂ ನೋಸಲಗಣ್ಣಿಂದುರುಪಿದುದನರಿಯ

ಸೋಮನಂ ಸಿರಿಮುಡಿಯೊಳಗೆ ಸೂಡಿದುದನರಿಯ
ಹರಿಯಜರ ನಡುವೆ ಉರಿಲಿಂಗವಾದುದನರಿಯ
ಅರಿಯಬ್ಬ ಬಸ್ಪ ವಿಷಮಂ ಧರಿಸಿದನನರಿಯ
ಹುಲಿಗೆರೆಯೊಳುದಯಿಸಿದ ಸೋಮನಾಥನನರಿಯ
ಎಲೆ ಮರುಳೆ ಬಾಣಂಗೆ ಕಯ್ಯನಿತ್ತುದನರಿಯ
ಎಲೆಲೆ ಮಯ್ಯೂರಂಗೆ ವೈಯ್ಯನಿತ್ತುದನರಿಯ
ಎಲೆ ಕಾಳಿದಾಸಂಗೆ ಕಣ್ಣನಿತ್ತುದನರಿಯ
ಎಲೆಲೆ ನಂಬಿಣ್ಣಂಗೆ ತನ್ನನಿತ್ತನನರಿಯ
ಎಲವೊ ದಾಸಂಗೆ ತವನಿಧಿಯನಿತ್ತುದನರಿಯ
ಓಹಿಲನನಿಳೆಯರಿಯೆ ಒಯ್ದ ದೇವನನರಿಯ
ಆಹ ಉದ್ಭಟನ ಪುರವೆರಸಿ ಒಯ್ದನನರಿಯ
ಎಲವೊ ಕರುಕುಚಿಕಂಗೆ ತಂದೆ ಇತ್ತನನರಿಯ
ಎಲವೋ ಕೊಡಗೂಸಿಯ ಹಾಲ ಸವಿದನನರಿಯ
ಎಂದು ಪೂರ್ಜಿಸಿ ರಾಮತಂದೆಗಳ್ಮೂದಲಿಸಿ
ಸಂದ ಭಕ್ತಂಗೆ ಸವಣ ನುಡಿದನಗ್ಗಲಿಸಿ

ಎಲೆ ಭಕ್ತ ತೆಗೆ ಪುರಾಣದ ಮಾತು ನಿನಗೇಕೆ
ಎಲೆ ಭಕ್ತ ಹಿಂದಾದ ಹಳೆಯ ಮಾತುಗಳೇಕೆ
ಇಂದೆಮ್ಮ ಮುಂದೆ ನಿನ್ನಯ ತಲೆಯನರಿದು ಪಡೆ
ಸಂದುದು ಬಳಿಕ್ಕ ನುಡಿಯಾವೆಲ್ಲರುಂ ನೋಡೆ
ಪಡೆಯಲ್ಜಿನಪ್ರತಿಮೆಗಳನೆತ್ತಿ ಬಿಸುಡುವೆವು
ನಡುವೆ ಶಿವಲಿಂಗಪ್ರತಿಷ್ಠೆಯುಂ ಮಾಡುವೆವು
ಎನುತಿವನೋಡಂಬಟ್ಟೆನೆಂದು ಸವಣನ್ರ್ಮಡಿಯೆ
ತನಗಿಜ್ಜೆಯಂತಿರ್ದುದಂತವರದಂ ನುಡಿಯೆ

ಆ ರಾಮತಂದೆ ಪುಳುಕಿತನಾಗಿ ಹಿಗ್ಗುತುಂ
ಘೋರೆಂದು ಗುಡಿಗಟ್ಟಿ ಮತ್ತೆ ಮೈವೆಚ್ಚುತುಂ
ಇದು ಭಾಷೆ ಭಾಷೆ ಬರೆ ಬರೆ ಇದನೊಡಂಬಟ್ಟಿ
ಇದನಾರದೊಡೆ ಬಳಿಕ ಬಹುದೇ ಶಿವನ ಬಟ್ಟೆ
ಎಂದು ಭಾಷಾಪತ್ರಮಂ ಬರೆಯಿಸಿದನಂದು
ತಂದು ನೆರಹಿರೆ ಸಿನ್ನ ಸವಣರನೆನುತ್ತಂದು

ಕರೆಯವೇಳ್ಪಂ ಜಗದೊಳುಳ್ಳ ಶಿವಭಕ್ತರಂ
ಒರುತಲಿರ್ದುದು ಹರನ ಗಣ ಸಮಿತಿಯೊತ್ತರಂ
ಅಗ್ನಿಯ ಹೊನ್ನಿತಂದೆಗಳವರ್ಮುಂತಾಗಿ
ಅಗ್ನಳೆಯ ದೇವರಸರವರ್ಗಳುಂ ಸಹಿತಾಗಿ
ಬೆಸ ನೂರು ಗಾವುದದೊಳುಳ್ಳ ಶರಣರ ಮೊತ್ತ
ಎಸೆಯೆ ನೆರೆದುದು ಲಕ್ಕಲೆಕ್ಕದಿಂದತ್ತತ್ತ
ರಜತಗಿರಿ ಜಯಸಿ ಭಕ್ತರ ರೂಪುಗೊಂಡಂತೆ
ನಿಜಭಸಿತಕಾಂತಿಯುಂ ಚಂದ್ರಿಕೆಯೊಳಳ್ದಂತೆ
ಮಕುಟದ ಮಹಾಮಹಿಮರಪ್ರತಿಮರಲ್ಲಲ್ಲಿ
ಅಕಳಂಕಚರಿತರನುಪಮ ಕೃಪಾಕರರಲ್ಲಿ
ಒಪ್ಪುವ ಕರಸ್ಥಲ ಉರಸ್ಥಲದಚಲರಲ್ಲಿ
ನಿಪ್ಪಸರದಚ್ಚ ಶಿವಲಿಂಗವ್ರತಿಗಳಲ್ಲಿ
ಪಂಚಾಕ್ಷರಿಯೆ ರೂಪುಗೊಂಡಂವದಿಂ ಕೆಲರು
ಪಂಚಭೌತಿಕವಿಲ್ಲದೊಡಲೊಳಿರ್ಪರ್ಕೆಲರು
ಶಾಂತರುಗ್ರರು ಸತ್ಯರನುಪಮರ್ತ್ಯಾಗಿಗಳು
ಸಂತೋಷಿಗಳ್ಪುಬಿಗಳಸಮಶಿವಯೋಗಿಗಳು
ನೀಡಿ ನೆಗಪಿದ ಕೋಟಿವೃಷಭಧ್ವಜದ ನಡುವೆ
ಕೂಡೆ ಕೇಳಿಸುವ ಶರಣರ ಸಂದಣಿಯ ನಡುವೆ
ಗಿರುಘಟೆಯ ಮದ್ದಳೆಯ ಕರಡೆಗಳ ಧ್ವನಿಯೊಳಗೆ
ತುಯ್ಗಿದವುಜೆ ತಾಳ ಕವುಸಾಳದ ರವದೊಳಗೆ
ಕೊಂಬುಗಳ ಚಿರುಲುಗಳ ಕಹಳೆಗಳ ಧ್ವನಿಯೊಳಗೆ
ಜೊಂಬುಳಿಯ ಕಿನ್ನರಿಯ ಶಂಖಧ್ವನಿಗಳೊಳಗೆ
ಅರರೆ ನಡೆತಪ್ಪ ಸಿಂಹದ ಜಂಗುಳಿಗಳಂತೆ
ಉರವಣಿಸಿ ಘುಳುಘುಳಿಪ ಶರಭನ ನೆರವಿಯಂತೆ
ಪೊಳಗಿ ಮಿಂಚುತೆ ಬರ್ಪ ಸಿಡಿಲಬಳಗದ ತೆರದಿ
ತೊಳಗುತ್ತೆ ಜೆಳಗುತ್ತೆ ಬರ್ಪ ಕವಿಗಳ ತೆರದಿ
ಬಂದು ನೆರೆದುದು ಭೂಮಿಯೆಗಲಕ್ಕೆ ಹರಗಣಂ
ಸಿಂದುಘೇ ಚಾಂಗು ಜೊಲ್ಲಿನುತಿರೆ ಶಿವನ ಗಣಂ
ಇಂತು ನೆರೆದಿರ್ದುದೊಂದೆಸೆಯೊಳಭವನ ಗಣಂ

ಮುಂತೆ ಮತ್ತೊಂದೆಸೆಗೆ ಸಾರ್ದು ಜೈನರ ಗಣಂ
ನೆರೆದು ಬರುತಿರ್ದುದು ಜಿನವ್ರತಿಗಳಲ್ಲಲ್ಲಿ
ಹರಿದು ಸಡಗಂಬಿ ಸಾಲ್ವಿಡಿದು ಬರುತಲ್ಲಲ್ಲಿ
ಕೆಯ್ಯಗುಂಡಿಗೆ ಮೋಟ ಕುಂಚದ ಪರಿದ ತಟ್ಟು
ಮೆಯ್ಯಗೇಣುದ್ದದ ಮಲಂ ಹರಿದ ತಲೆಕಟ್ಟು
ಮಿಂಚುವಲೆ ಪಡಿಕೆವಾಯಿ ಹಗೆ ಹಲ್ಲುಗಳ ಮೊರೆ
ಸಂಚಿಸಿದ ಹಲವು ಮಲವೆತ್ತು ಹೊಲಸು ನಾರೆ
ಕುರುಡರುಂ ಕುಂಟರುಂ ಡಂಭರುಂ ಸೀತರುಂ
ಬರಡರುಂ ನೀಕರಡರುಂ ನಿಜದ ಹುಸಿಕರುಂ
ಪ್ಲುದ್ರರುಂ ವಾಚಾಳರುಂ ಕಟ್ಟ ಸವಣರುಂ
ನಿದ್ರೆಯಿಂದೆದ್ದು ಬಂದಂತಿಪ್ಪ ಜಾಡ್ಯರುಂ
ಬತ್ತಲಿಗರುಂ ಬಡಕರುಂ ವೀತರಾಗರುಂ
ಕತ್ತಲಿಪ ಮುಖದ ಧಾನ್ಯದ ಭೋಗಹೀನರುಂ
ಮುತ್ತ ಮುದುನರಿಯಂತೆ ಬಳ್ಳುಗರೆವರ್ಕೆಲರು
ಕತ್ತಯಂತರಿಚಿಕಾಳ್ಗೆಡೆವುತಿರ್ಪರ್ಕೆಲರು
ಗೂಗೆಯಂತಿರೆ ಮಿಗೆ ಪಲುಂಬುತಿರ್ಪರ್ಕೆಲರು
ಕಾಗೆಯಂತಿರೆ ಕಾಕುಗೆಡೆಯುತಿರ್ಪರ್ಕೆಲರು
ಉಮ್ಮಳಿಪ ಕಪಿಯಂತೆ ಸುಮ್ಮನಿರ್ಪರ್ಕೆಲರು
ತಮ್ಮೊಳಗೆ ತಾವು ಗುಜುಗುಜುಗುಟ್ಟುವರ್ಕೆಲರು
ವಾದದಿಂ ವಸಿಷ್ಠನಂ ಗೆಲೆವ ಪಂಡಿತರಲ್ಲಿ
ಸಾಧಿಸಿ ಸಕಲ ಮಂತ್ರ ಶಕ್ತಿಯಿಂದಂತಲ್ಲಿ
ವಾದವಶ್ಯಂ ಮೋಹನಸ್ತಂಭನವ ಬಲ್ಲ
ಭೇದಂಗಳಂ ದಂಡ ಸಾಮಂಗಳಂ ಬಲ್ಲ
ಪಂಡಿತರ್ಸವಣರುಂ ಜೈನರಾರ್ಹತರಲ್ಲಿ
ತಂಡತಂಡದ ಋಷಿಗಳೆಂಬ ಶ್ರಾವಕರಲ್ಲಿ
ಸವಣವಡಿಕೂಡಿ ನೆರೆದುದು ಗಣಂಗಳ ಮುಂತಿ
ರವಿಕಿರಣದುರವಣಿಗೆ ಸಾರ್ದ ಕಳ್ತಲೆಯಂತೆ
ದಾವಾನಲಂ ನೋಡಿ ನೆರೆದ ತರೆಗೆಲೆಯಂತೆ
ಧಾವಿಸೆ ಮಹಾನಿಲಂಗೊಂಡಿರ್ದ ಮುಗಿಲಂತೆ
ಇಂತು ನೆರೆದಿರ್ದುದಾಶೇಷಶ್ರವಣರಲ್ಲಿ

ಶಿವಾನುಭವ.

ವರ್ಷ ೧೦] ಅಗಷ್ಟ ೧೯೩೫ [ಸಂಚಿಕೆ ೨

ಶ್ರೀ ಪ್ರಭುದೇವರ ಕಾಲ.

ಲೇಖಕ:— ಬುದ್ಧಯ್ಯಾಸ್ವಾಮಿ ಪುರಾಣಿಕ.

೧ ನೆಯ ಪ್ರಕರಣ.

ನನ್ನಂಥ ಮಂದಬುದ್ಧಿಯ ಮನುಷ್ಯನು ಶ್ರೀಮನ್ನಿರಂಜನ ಜಗದ್ಗುರುವಾಚಾಮಗೋಚರನಾದಂಥ ಆ ಅನಾದಿ ಜಂಗಮಲಿಂಗನ ಕಾಲ ನಿರ್ಣಯ ಮಾಡುವದೆಂದರೆ ಆಕಾಶಕ್ಕೆ ಗವಸಣಿಗೆ ಹಾಕಿದಂತೆ ಹಾಸ್ಯಾಸ್ಪದವೇ ಸರಿ; ಆದಾಗ್ಯೂ ಯಥಾಮತಿ ಪ್ರಯತ್ನಮಾಡುವದು ನನ್ನ ಆದ್ಯ ಕರ್ತವ್ಯವೆಂದು ತಿಳಿದು ಕೆಳಗಿನ ನಾಲ್ಕು ಪಂಕ್ತಿಗಳನ್ನು ವಾಚಕರ ಅವಗಾಹನಕ್ಕಾಗಿ ಇದರಂಡಿಯಲ್ಲಿ ಕೊಡುತ್ತೇವೆ. ಅನಾದಿ ವೀರಶೈವ ಸಾರಸಂಗ್ರಹ ನಾಮಕ ಗ್ರಂಥದ ೧೬ ನೆಯ ಪ್ರಕರಣದಲ್ಲಿ ವೇದಾಗಮೋಪನಿಷತ್ತುಗಳ ಆಧಾರದಿಂದ ಈ ಅನಾದಿ ಜಂಗಮಲಿಂಗನ ಮಹಾತ್ಮ್ಯವನ್ನು ವರ್ಣನಮಾಡಿರುವರು. ಅದನ್ನು ವಾಚಕರು ಓದಬೇಕೆಂದು ನಾವು ಅವರಿಗೆ ಬೇಡಿಕೊಳ್ಳುತ್ತೇವೆ ಅಂದರೆ ವೇದಾಗಮೋಪನಿಷತ್ತುಗಳ ಕಾಲವು ಯಾವ ಕಾಲವೋ ಅದೇ ಕಾಲವು ಶ್ರೀ ಪ್ರಭುದೇವರದೆಂದು ವಾಚಕರಿಗೆ ಸಹಜವಾಗಿ ಲಕ್ಷ್ಯದಲ್ಲಿ ಬರಬಹುದು. ಶ್ರೀಯುತ ವೀರಪ್ಪ ಬಸಪ್ಪ ಬಿಳೇಅಂಗಡಿ, ಬಿ. ಎ. ಎಲ್. ಎಲ್. ಬಿ. ವಕೀಲ ಹುಬ್ಬಳ್ಳಿ ಇವರು ಬರೆದ "ವೀರಶೈವ ಮತಪ್ರಾಚೀನತ್ವ" ಯೆಂಬ ಪುಸ್ತಕದಲ್ಲಿ ಅವರು ವೀರಶೈವ ಮತದ ಕಾಲನಿರ್ಣಯವನ್ನು ನಿಗಮಾಗಮೋಪನಿಷತ್ತುಗಳ ಶಿಲಾಲೇಖಗಳ ಮತ್ತು ತಾಮ್ರಪಟ ಇತ್ಯಾದಿಗಳ ಸಹಾಯದಿಂದ ಸಾಧಾರಣ ಸಿದ್ಧಗೊಳಿಸಿರುವರು. ಆ ಸನಾತನ ವೈದಿಕ ವೀರಶೈವಮತದ ಸಂಸ್ಥಾಪಕರಾದ ಶ್ರೀ ಪಂಚಾಚಾರ್ಯರಿಗೆ "ಮದೂರ್ಧ್ವ ವಕ್ತ್ರಸಂಜಾತೊ ನಿರಂಜನ ಗಣೇಶ್ವರಃ। ಶೂನ್ಯಪೀಠಾಧಿಕಾರೀಚ ಪಂಚಾಚಾರ್ಯ ಗುರುರ್ವರಃ॥" ಅಂದರೆ ನನ್ನ ಊರ್ಧ್ವಮುಖದಿಂದ ಉತ್ಪನ್ನ

ನಾದಂಥ ನಿರಂಜನನೆಂಬ ಹೆಸರಿನ ಗಣಾಧ್ಯಕ್ಷನು ಶೂನ್ಯಪೀಠದ ಅಧಿಕಾರಿಯಾಗಿ ಪಂಚಾಚಾರ್ಯರಿಗೆ ಶ್ರೇಷ್ಠ ಗುರುವಾಗಿರುವನು. ಈ ಸುಪ್ರಭೇದಾಗಮದ ಆಧಾರದಿಂದ ಗುರುವಾಗಿ ಬಂದಂಥ ಆ ಪ್ರಭುದೇವರ ಕಾಲನಿರ್ಣಯವಾದರೂ ಆ ಪಂಚಾಚಾರ್ಯರ ಕಾಲನಿರ್ಣಯದ ಕೂಡ ಮಾಡಬೇಕಾಗುವದು.

ಮೈಸೂರಿನ ಆರ್ಕಿಯಾಲಾಜಿಕಲ್ ಡಾಯರೆಕ್ಟರ ಮಹಾಮಹೋಪಾಧ್ಯಾಯ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವಬಹಾದ್ದೂರ ಆರ್. ನರಸಿಂಹಾಚಾರ್ಯ ಎಂ. ಎ. ಎಮ್. ಆರ್. ಎ. ಎಸ್. ಇವರು ತಮ್ಮ ಕರ್ನಾಟಕ ಕವಿಚರಿತೆಯ (೧೯೨೪ರಲ್ಲಿ ತಿದ್ದಿದ ಮುದ್ರಣ) ಪ್ರಥಮ ಸಂಪುಟದ ೧೮೦ ನೆಯ ಪುಟದಲ್ಲಿ ಶ್ರೀ ಪ್ರಭುದೇವರ ಕಾಲನಿರ್ಣಯವನ್ನು ಕೆಳಗಿನಂತೆ ಮಾಡಿರುವರು. ಅದರಲ್ಲಿ "ಇಸ್ವಿ ಸನ್ ೧೧೬೦ ನೆಯ ಸುಮಾರಿನಲ್ಲಿ ಈತನು ಷಟ್ಸ್ಥಲ ಜ್ಞಾನಚಾರಿತ್ರ, ಶೂನ್ಯಸಂಪಾದನೆ, ಮಂತ್ರಗೋಪ್ಯ, ಸೃಷ್ಟಿಯವಚನ, ಬೆಡಗಿನವಚನ, ಮಂತ್ರಮಹಾತ್ಮ್ಯ, ಕಾಲಜ್ಞಾನವಚನವೆಂಬ ಗ್ರಂಥಗಳನ್ನು ಬರೆದಿದ್ದಾನೆ. ಇವನಿಗೆ ಅಲ್ಲಮ ಎಂಬ ಹೆಸರೂ ಉಂಟು; ಮಾಯಾಕೋಳಾಹಳ ಎಂಬ ಬಿರುದೂ ಇದ್ದಂತೆ ತಿಳಿಯುತ್ತದೆ. ಈತನ ವಿಷಯವಾಗಿ ಚನ್ನಬಸವಪುರಾಣ, ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳಿಂದ ಈ ಅಂಶಗಳು ತಿಳಿಯ ಬರುತ್ತವೆ:— ಇವನು ವೀರಶೈವಕವಿ, ಈತನ ತಂದೆ ನಿರಹಂಕಾರ, ತಾಯಿ ಸುಜ್ಞಾನಿ, ಇವನ ಚಿತ್ತಸ್ಥೈರ್ಯವನ್ನು ಪರೀಕ್ಷಿಸುವದಕ್ಕಾಗಿ ಪಾರ್ವತೀದೇವಿ ತನ್ನ ತಾಮಸ ಗುಣವನ್ನು ಸ್ತ್ರೀರೂಪವಾಗಿ ಹುಟ್ಟುವಂತೆ ಆಟ್ಟಿದಳು. ಅದು ಬೆಳವಲನಾಡಿನ ಬನವಸೆಯ ರಾಜನಾದ ಮಮಕಾರನೃಪನ ಪತ್ನಿ ಮೋಹಿನಿದೇವಿಯ ಗರ್ಭದಲ್ಲಿ ಮಾಯೆ ಎಂಬ ಹೆಣ್ಣುಮಗಳಾಗಿ ಹುಟ್ಟಿತು. ಆ ಹೆಣ್ಣುಮಗಳು ಈತನನ್ನು ಮೋಹಗೊಳಿಸಲು ಯತ್ನಿಸಿದಾಗ ಈತನು ಅವಳನ್ನು ತಿರಸ್ಕರಿಸಿದನು. ಇವನು ಅನಿಮಿಷನ ಕೈಯ ಲಿಂಗವನ್ನು ಸ್ವೀಕರಿಸಿದನು. ಗೊಗ್ಗಯ್ಯ ಮುಕ್ತಾಯಿಗಳಿಗೆ ಬೋಧಿಸಿ ಮುಕ್ತಿಯನ್ನು ಕೊಟ್ಟನು. ಸೊನ್ನಲಿಗೆಗೆ ಹೋಗಿ ಸಿದ್ಧರಾಮನಿಗೆ ಶಿವತತ್ವವನ್ನು ತಿಳಿಸಿ ಅವನೊಡನೆ ಕಲ್ಯಾಣಕ್ಕೆ ಹೋಗಿ ಬಸವನಿಂದ ಸತ್ಕರಿತನಾಗಿ ಶೂನ್ಯಪೀಠವನ್ನು ಹತ್ತಿದನು. ಬಳಿಕ ಶ್ರೀಶೈಲಕ್ಕೆ ಹೋಗಿ ಅಲ್ಲಿ ಮಹಾದೇವಿಗೆ ನಿರ್ವಾಣಪದವಿಯನ್ನು ಉಪದೇಶಿಸಿ ಬಸವನಿಗಿಂತ ಸ್ವಲ್ಪ ಕಾಲ ಮುಂಚೆ ಕದಳಿಯಲ್ಲಿ ಬಯಲಾದನು. ಇವನು ವೀರಶೈವ ಗುರು

ಗಳಲ್ಲಿ ಬಹಳ ಪ್ರಖ್ಯಾತನು. ಶ್ರೀ ಮದ್ದೇಶಿಕ ಷಟ್ಸ್ಥಲ ಚಕ್ರವರ್ತಿ ಬ್ರಹ್ಮಾನಂದ ಪರಶಿವಮೂರ್ತಿ ವಿರಕ್ತಶಿಖಾಮಣಿ ಮಾಯಾಕೋಳಾಹಳ ಎಂದು ಕೆಲವರು ವೀರಶೈವ ಗ್ರಂಥಕರ್ತರು ಈತನನ್ನು ವಿಶೇಷಿಸಿ ಬರೆದಿದ್ದಾರೆ. ಇವನ ವಿಷಯವಾಗಿ ಪ್ರಭುಲಿಂಗಲೀಲೆ, ಪ್ರಭುದೇವರ ಪುರಾಣ, ಪ್ರಭು ನಟನ ಶಾಂತಾವಳಿ, ಪ್ರಭುಚರಿತ್ರೆ, ಪ್ರಭುಗೀತೆ ಮೊದಲಾದ ಗ್ರಂಥಗಳು ಹುಟ್ಟಿವೆ. ಈತನ ವಚನಗಳಲ್ಲಿ ಗುಹೇಶ್ವರ ಎಂಬ ಅಂಕಿತವು ದೊರೆಯುತ್ತದೆ. ಜ್ಯೋತಿರ್ಮಯ ಶಾಂಭವೀ ಜ್ಞಾನದೀಕ್ಷಾ ಬೋಧೆ ನಾಮಕ ಗ್ರಂಥದಲ್ಲಿ ವೀರಶೈವ ಮತವು ಈಶ್ವರ ಪ್ರೋಕ್ತವು. ಅದನ್ನು ಶ್ರೀ ಅಲ್ಲಮ ಪ್ರಭುದೇವನು ಕಲ್ಯಾಣಪಟ್ಟಣದಲ್ಲಿ ಶ್ರೀ ಬಸವಾದಿ ಪ್ರಮುಥಗಣಂಗಳಿಗೆ ಎಂಭತ್ತುಕೋಟಿ ವಚನಗಳಿಂದ ಉಪದೇಶಿಸಿದನು ಎಂದು ಹೇಳಿದೆ" ಎಂದು ಬರೆದಿರುವರು. ಶ್ರೀ ಪ್ರಭುದೇವರು ಐಕ್ಯವಾದನಂತರ ಅವರ ವಿಷಯವಾಗಿ ಹಿಂದಿನಿಂದ ಅನೇಕ ಗ್ರಂಥಗಳು ನಿರ್ಮಾಣವಾಗಿರುವವು. ಅವುಗಳಲ್ಲಿ ಕೆಲವು ಶ್ರೀಮನ್ನಿರಂಜನ ಜಗದ್ಗುರು ಗ್ರಂಥಮಾಲೆಯಲ್ಲಿ ಪ್ರಸಿದ್ಧಿಸಲ್ಪಟ್ಟಿರುವವು. ಹೀಗಿರಲು ಅವುಗಳನ್ನು ವಿಚಾರಿಸದೆ ಕರ್ನಾಟಕ ಕವಿಚರಿತೆಕಾರರು ಶ್ರೀ ಪ್ರಭುದೇವರ ಕಾಲವನ್ನು ಸುಮಾರು ಇಸ್ವಿ ಸನ್ ೧೧೬೦ ಎಂದು ನಿರ್ಣಯಿಸಿರುವರು. ಆದುದರಿಂದ ಅದನ್ನೇ ಇದರಡಿಯಲ್ಲಿ ವಿಶೇಷ ಸ್ಪಷ್ಟೀಕರಿಸುತ್ತೇವೆ. ಮೇಲೆ ತೋರಿಸಿದಂತೆ ಅನೇಕ ಪ್ರಾಚೀನ ಮತ್ತು ಅರ್ವಾಚೀನ ವೀರಶೈವ ಗ್ರಂಥಕರ್ತರು ಶ್ರೀ ಪ್ರಭುವನ್ನು ವಿಶೇಷಿಸಿ ಬರೆದವರಲ್ಲಿ ಕೆಲವರು ಸ್ತುತಿಸಿದ ಸ್ತೋತ್ರಗಳಲ್ಲಿ ಒಂದೊಂದೇ ಶ್ಲೋಕವನ್ನು ಮಾದರಿಗಾಗಿ ತೆಗೆದುಕೊಂಡು ಶ್ರೀಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ಎರಡನೆಯ ಪುಷ್ಪವಾದ ಶ್ರೀ ಪ್ರಭುದೇವರ ಸ್ತೋತ್ರಸಂಗ್ರಹದಲ್ಲಿ ಮುದ್ರಿಸಲಾಗಿದೆ. ಅವುಗಳೊಳಗಿನ ಕೆಲವು ವೀರಶೈವ ಗ್ರಂಥಕರ್ತೃಗಳ ಹೆಸರುಗಳನ್ನು ವಾಚಕರ ಸೌಕರ್ಯಕ್ಕಾಗಿ ಕೆಳಗೆ ಕೊಡುವೆವು.

ಕ್ರಿ ಶ. ೧೬೦೬ ನೇಯ ಸುಮಾರಿನಲ್ಲಿ ವೃಷಭ ಪುರದ ಅಗಮಜ್ಞಾನಸಿದ್ಧವೀರನೆಂಬ ತನ್ನ ಗುರುವಿನ ಆಜ್ಞಾನುಸಾರವಾಗಿ ಎಳಂದೂರ ಸಿಂಹಾಸನಾಧೀಶ ಹರೀಶ್ವರನು (ಹರಿದೇವ) ಶ್ರೀ ಪ್ರಭುದೇವರ ಪುರಾಣವನ್ನು ನಾನಾ ಷಟ್ಪದಿಯಲ್ಲಿ ಬರೆದಿದ್ದಾನೆ. ಇದರಲ್ಲಿ ಸಂಧಿಗಳು ೯, ಪದಗಳು ೧೪೯೭ ಇದ್ದು ಇದರಲ್ಲಿ ಶಬ್ದವೈಚಿತ್ರ್ಯವು ಬಹಳೇ ಇದ್ದುದರಿಂದ ಈ

ಗ್ರಂಥಕ್ಕೆ ಪ್ರಾಸರತ್ನಾಕರವೆಂದು ಅನ್ನುವರು. ಇದರಲ್ಲಿ ಅಲ್ಲಮಪ್ರಭು ದೇವನ ಸಂಪೂರ್ಣ ಚರಿತ್ರೆ ಹೇಳಲ್ಪಟ್ಟಿದೆ.

ಕ್ರಿ. ಶ. ೧೫೨೪ ರಲ್ಲಿ ಮಳೆಯ ಮಲ್ಲೇಶನ ಶಿಷ್ಯನಾದ ವಿರೂಪಾಕ್ಷ ಪಂಡಿತನು ತನ್ನ ಚೆನ್ನಬಸವ ಪುರಾಣದಲ್ಲಿಯೂ, ಕ್ರಿ. ಶ. ೧೫೮೦ ರ ಸುಮಾರಿನಲ್ಲಿ ಕೋಲ್ಹಾರವ ಅದೃಶ್ಯಕವಿಯು ತನ್ನ ಪ್ರೌಢದೇವರಾಯನ ಕಾವ್ಯದಲ್ಲಿಯೂ ಶ್ರೀ ಪ್ರಭುವನ್ನು ಕೊಂಡಾಡಿರುವರು.

ಕ್ರಿ. ಶ. ೧೫೫೦ ರ ಸುಮಾರಕ್ಕೆ ಪ್ರಸನ್ನ ದೇಶಿಕನ ಕುಮಾರ ಮರಿ ರಾಚವಪ್ಪೇಶ ನೆಂಬವನು ಪ್ರಭುನಟನ ತಾರಾವಳಿ ನಾಮಕ ಗ್ರಂಥವನ್ನು ಬರೆದಿವ್ವಾನೆ. ಇದರಲ್ಲಿ ೨೭ ಪದಗಳಿದ್ದು ಅವುಗಳಲ್ಲಿ ಶ್ರೀ ಪ್ರಭುವಿನ ಸಂಪೂರ್ಣ ಚರಿತ್ರವನ್ನು ಹೇಳಿದೆ.

ಕ್ರಿ. ಶ. ೧೫೫೩ ನೆಯ ಸುಮಾರಿನಲ್ಲಿ ಭಾವಚಿಂತಾರತ್ನ, ವೀರಶೈವಾಮೃತ ಪುರಾಣ, ಪುರಾತನ ರಗಳೆ ಇತ್ಯಾದಿ ಉದ್ಗ್ರಂಥಗಳನ್ನು ಬರೆದ ಗುಬ್ಬಿ ಮಲ್ಲಣಾರ್ಯನೂ, ಕ್ರಿ. ಶ. ೧೫೮೦ ಸುಮಾರಿನಲ್ಲಿ ೬೫ ಪುರಾತನರ ಚರಿತ್ರೆಯನ್ನು ಬರೆದ ಪುಲಿಗೇರಿಯ ಷಡಂಗ ಕವಿಯೂ, ಕ್ರಿ. ಶ. ೧೬೭೦ ರಲ್ಲಿದ್ದ ತೋಂಟದ ಶ್ರೀ ಸಿದ್ಧೇಶ್ವರನೂ ಹಾಗು ಕರ್ನಾಟಕ ಕವಿ ಚರಿತಕಾರರ ಅಭಿಪ್ರಾಯದಂತೆ. ಕ್ರಿ. ಶ. ೧೬೩೦ ನೆಯ ಸುಮಾರಕ್ಕೆ ಆಗಿಹೋದ ಮತ್ತು ಅನುಭವಸೂತ್ರ, ಪ್ರಭುಗೀತೆ, ಏಕೋತ್ತರಷಟ್ಸ್ಥಲ ಷಟ್ಪದಿ, ಷಟ್ಸ್ಥಲ ಗದ್ಯ, ಶತಕತ್ರಯ ಇತ್ಯಾದಿ ಗ್ರಂಥಗಳನ್ನು ಬರೆದು ಪ್ರಸಿದ್ಧಿಯನ್ನು ಪಡೆದ ಮುಗ್ಗೆಯಮಾಯಿದೇವಾಚಾರ್ಯನೂ ಶ್ರೀ ಪ್ರಭುವನ್ನು ಕೊಂಡಾಡಿರುವರು.

ಕ್ರಿ. ಶ. ೧೬೪೦ ರ ಸುಮಾರಿನಲ್ಲಿ ವಿದ್ಯಾನಗರದೊಳಗಿನ ೧೦೧ ವಿರಕ್ತರೊಳಗಿನ ಕಲ್ಯಾಪದ ಪ್ರಭುದೇವನೆಂಬವನು ಶ್ರೀ ಪ್ರಭುದೇವರ ಮಂತ್ರಗೋಪ್ಯದ ಮೇಲೆ ಟೀಕೆಯನ್ನು ಬರೆದಿರುವನು. ಅದೇ ಸುಮಾರಿನಲ್ಲಿ ಜಾಮರಸನೆಂಬವನು ಪ್ರಭುಲಿಂಗ ಲೀಲೆಯೆಂಬ ಗ್ರಂಥವನ್ನು ಭಾವಿನಿ ಷಟ್ಪದಿಯಲ್ಲಿ ಬರೆದಿರುವನು. ಇದರಲ್ಲಿ ೧೧೧೧ ಪದ್ಯಗಳಿದ್ದು ಪ್ರಭುವಿನ ಸಂಪೂರ್ಣ ಚರಿತ್ರವು ಹೇಳಲ್ಪಟ್ಟಿದೆ.

ಕ್ರಿ ಶ. ೧೬೫೦ ರ ಸುಮಾರಕ್ಕೆ ಕುಮಾರ ಬಂಕನಾಥನೆಂಬವನು ಶ್ರೀ ಪ್ರಭುದೇವರ ವಚನಗಳ ಮೇಲೆ ಟೀಕೆಯನ್ನು ಬರೆದಿರುವನು.

ಅದೇ ಕಾಲಕ್ಕೆ ಜೀನ್ನ ಶ್ರೀಪ್ರಭು, ಮಗಿಯನರೇಂದ್ರ ಮತ್ತು ಗುರುಬಸವ ಎಂಬವರು ಪ್ರತಿಯೊಬ್ಬರು ೧೧೦೦ ಪದ್ಯಗಳಿಂದ ಶ್ರೀ ಪ್ರಭುವನ್ನು ಕೊಂಡಾಡಿರುವರು. ಅವುಗಳೊಳಗೆ ಸಿಕ್ಕಷ್ಟು ಕೆಲವು ಪದ್ಯಗಳನ್ನು ಶ್ರೀ ಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ೧ ನೆಯ, ೪ ನೆಯ, ೯ ನೆಯ, ಮತ್ತು ೧೧ ನೆಯ, ಪುಷ್ಪಗಳಲ್ಲಿ ಹೇಳಿದೆ.

ಈ ಕುಮಾರ ಬಂಕನಾಥನ ಗುರುವಾದ ಮಹಲಿಂಗದೇವ (ವಾರಾಣಸೀಂದ್ರ) ನು ಕ್ರಿ. ಶ. ೧೬೨೫ ನೆಯ ಸುಮಾರಿನಲ್ಲಿ ಪ್ರಭುದೇವರ ಷಟ್ಸ್ಥಲ ಜ್ಞಾನಚಾರಿತ್ರೆ ಎಂಬ ಟೀಕಾತ್ಮಕ ಗ್ರಂಥವನ್ನು ಜಕ್ಕಣಾಮಾತ್ಯನ ಪ್ರಾರ್ಥನಾನುಸಾರವಾಗಿ ಬರೆದಿರುವೆನು.

ಕ್ರಿ. ಶ. ೧೬೦೦ ಸುಮಾರಿನಲ್ಲಿ ನೀಲಕಂಠ ಶಿವಾಚಾರ್ಯನು ತನ್ನ ಬ್ರಹ್ಮಸೂತ್ರ ವ್ಯಾಖ್ಯಾನರೂಪವಾದ ಕ್ರಿಯಾಸಾರವೆಂಬ ಗ್ರಂಥದಲ್ಲಿ ಶ್ರೀ ಪ್ರಭುವನ್ನು ಸ್ತುತಿಸಿರುವನು.

ಕ್ರಿ. ಶ. ೧೫೬೯ ನೆಯ ಸುಮಾರಿನಲ್ಲಿ ಉಭಯಕವಿತ್ವ ಸಮರ್ಥ ಭೀಮಕವಿಯು ತನ್ನ ಬಸವ ಪುರಾಣದಲ್ಲಿಯೂ ಮತ್ತು ಕ್ರಿ. ಶ. ೧೫೨೫ ನೆಯ ಸುಮಾರಿನಲ್ಲಿ ಜಟಾಶಂಕರ ದೇವನೆಂಬವನು ಶ್ರೀ ಪ್ರಭುದೇವರ ತ್ರಿವಿಧನಾಯಕ ಗ್ರಂಥದಿಂದಲೂ ಶ್ರೀ ಪ್ರಭುವನ್ನು ಕೊಂಡಾಡಿರುವರು.

ಕ್ರಿ. ಶ. ೧೭೨೨ ನೆಯ ಸುಮಾರಿನಲ್ಲಿ ಸೋಮರಾಜನೆಂಬ ಕವಿಯು ತನ್ನ ಶೃಂಗಾರಸಾರ ಅಥವಾ ಉದ್ಭಟ ಕಾವ್ಯದಲ್ಲಿ ಶ್ರೀ ಅಲ್ಲಮಪ್ರಭುವನ್ನು ಕೊಂಡಾಡಿ ಗುರು ಅಲ್ಲಮನ ಕೃಪೆಯಿಂದ ಈ ಕಾವ್ಯವನ್ನು ರಚಿಸಿದೆನೆಂದೂ ಮತ್ತು ಅಲ್ಲಮ ನಾಮ ಸ್ಮರಣೆಯನ್ನು ಒಂದೊಂದು ನಿಮಿತ್ಯವಾಗಿ ಮಾಡಬೇಕೆಂತಲೂ ಹೇಳಿ ಪ್ರತಿಯೊಂದು ಆಶ್ವಾಸದ ಕೊನೆಯಲ್ಲಿ ಅಲ್ಲಮಪ್ರಿಯನೆಂದು ಈಶ್ವರನನ್ನು ಸ್ತುತಿಸಿರುವನು.

ಕ್ರಿ. ಶ. ೧೭೯೫ ರ ಸುಮಾರಿನಲ್ಲಿ ವಾಲ್ಮೀಕಿ ಸೋಮವಾರಾಧ್ಯನು ತನ್ನ ಶಿಷ್ಯನಾದ ಸಂಗಯ್ಯನಿಗೋಸುಗ ಜ್ಯೋತಿರ್ಮಯ ಶಾಂಭವೀಜ್ಞಾನದೀಕ್ಷಾ ಜೋಧೆನಾಮಕ ಗ್ರಂಥದ ಪರಮ ರಹಸ್ಯವನ್ನು ೧೬೦ ವಚನಗಳಲ್ಲಿ ಅಡಕಮಾಡಿ ಹೇಳಿರುವನು. ಆ ಜ್ಯೋತೀರ್ಮಯ ಶಾಂಭವೀಜ್ಞಾನದೀಕ್ಷಾಭೋದೆಯಲ್ಲಿ " ಶ್ರೀ ಪ್ರಭುದೇವನು ಕಲ್ಯಾಣಪಟ್ಟಣದೊಳಗೆ ಶ್ರೀ ಬಸವಾದಿ ಪ್ರಮಥಗಣಂಗಳಿಗೆ ಎರಡೆಂಭತ್ತು ಕೋಟಿ ವಚನಗಳಿಂದ ವೀರಶೈವೋಪದೇಶವನ್ನು ಮಾಡಿದ" ನೆಂದು ಹೇಳಿದೆ.

ಕ್ರಿ. ಶ. ೧೧೬೦ ನೆಯ ಸುಮಾರಿನಲ್ಲಿ ಇದ್ದಂಥ ಮರುಳಶಂಕರ ದೇವನಿಗೆ ಪ್ರಭುದೇವನು ನಿರ್ವಾಣಪ್ರಾಪ್ತಿಯ ಮಾರ್ಗವನ್ನು ಹೇಳಿ ಮುಕ್ತಮಾಡಿದನೆಂದು ಪ್ರಭುಲಿಂಗಲೀಲೆಯಲ್ಲಿ ಹೇಳಿರುವದರಿಂದಲೂ, ಪಾಲ್ಕುರಿಕೆ ಸೋಮಾರಾಧ್ಯನ ಗಣಸಹಸ್ರ ನಾಮದಲ್ಲಿ ಹೇಳಲ್ಪಟ್ಟ ಅಜಗಣ್ಣನು ಶ್ರೀ ಪ್ರಭುವಿನಿಂದ ಹೊಗಳಲ್ಪಟ್ಟನೆಂದೂ, ಅಜಗಣ್ಣನ ತಂಗಿಯಾದ ಮುಕ್ತಾಯಕ್ಕನನ್ನು ಉದ್ಧಾರ ಮಾಡಿದ ಏವರವನ್ನು ಪ್ರಭುಲಿಂಗಲೀಲೆಯಲ್ಲಿ ಹೇಳಿರುವದರಿಂದಲೂ, ಹಾಗು ಉಭಯಕವಿಶರಭಭೇರುಂಡ, ಉಭಯಕವಿ ಕಮಲರವಿ ಅದಟಕವಿನಿಕರಚೌದಂತ ಮುಂತಾದ ಬಿರುದುಗಳನ್ನು ಧಾರಣಮಾಡಿದಂಥ ರಾಘವಾಂಕನು ಯಾವ ಸಿದ್ಧರಾಮೇಶ್ವರ ಪುರಾಣವನ್ನು ಬರೆದಿರುವನೋ, ಅಂಥ ಸಿದ್ಧರಾಮನ ಉದ್ಧಾರವನ್ನು ಮಾಡಿದನೆಂದೂ ಪ್ರಭುಲಿಂಗಲೀಲೆಯಲ್ಲಿ ಹೇಳಿರುವದರಿಂದಲೂ ಕ್ರಿ. ಶ. ೧೧೬೦ ನೆಯ ಸುಮಾರಿನಲ್ಲಿ ಶ್ರೀ ಪ್ರಭುದೇವನು ಇದ್ದಿರಬಹುದೆಂದು ಕರ್ನಾಟಕ ಕವಿಚರಿತ್ರಕಾರರ ಅಭಿಪ್ರಾಯವದೆ. ಕ್ರಿ. ಶ. ೧೧೫೬ ವರೆಗೆ ಬಿಜ್ಜಳನು ಕಲ್ಯಾಣ (ನಿಜಾಮು ಇಲಾಖಾ) ನಗರದಲ್ಲಿ ಸಾರ್ವಭೌಮರಾಜನಿದ್ದನು. ಆ ಕಾಲಕ್ಕೆ ಶ್ರೀ ಬಸವೇಶ್ವರನು ಅತನ ಮುಖ್ಯ ಮಂತ್ರಿಯಾಗಿದ್ದನು. ಆ ಕಾಲಕ್ಕೆ ಬಸವೇಶ್ವನು ಸುಮಾರು ೩೧-೩೨ ವರುಷದವನಿರಬಹುದು. ಯಾಕಂದರೆ ಅವನು ಕ್ರಿ. ಶ. ೧೧೩೯ ನೆಯ ಸುಮಾರಿನಲ್ಲಿ ಜನ್ಮ ತಾಳಿರುವನು. ಶ್ರೀ ಪ್ರಭುದೇವನು ಬಸವೇಶ್ವರನ ಕಾಲಕ್ಕೆ ಕಲ್ಯಾಣನಗರಕ್ಕೆ ಹೋದದ್ದು ಇತಿಹಾಸ ಪ್ರಸಿದ್ಧವದೆ. ಇಷ್ಟರ ಮೇಲಿಂದಲೇ ಶ್ರೀ ಪ್ರಭುದೇವನ ಕಾಲವು ಸುಮಾರು ಕ್ರಿ. ಶ. ೧೧೬೦ ಇರಬಹುದೆಂದು ಊಹಿಸುವದು ಸಮಂಜಸವೆನಿಸಲಾರದು. ಯಾಕಂದರೆ ಕಲ್ಯಾಣನಗರದಲ್ಲಿ ಬಸವೇಶನನ್ನು ಪ್ರಭುದೇವನು ಕಂಡ ವೇಳೆಯಲ್ಲಿ ಪ್ರಭುದೇವನೇನು ಚಿಕ್ಕವನೋ, ಬಸವೇಶನ ಸಮವಯಸ್ಕನೋ, ಅಥವಾ ಅವನಿಗಿಂತ ತರುಣನೋ, ಇಲ್ಲವೆ ಹಿರಿಯನೋ, ಇದನ್ನು ತಿಳಿಯಲು ಏನೂ ಮಾರ್ಗವಿಲ್ಲವು. ಮತ್ತು ಅದನ್ನು ಈ ವರೆಗೂ ಯಾವ ಇತಿಹಾಸಕಾರರೂ ಸಂಶೋಧಿಸಿ ಸಿದ್ಧಪಡಿಸಿಲ್ಲವು. ಬಸವನಗಿಂತಲು ಸುಮಾರು ೧೫೫ ವರುಷದ ಪೂರ್ವದಲ್ಲಿ ಶ್ರೀ ಪ್ರಭುದೇವನು ಇದ್ದನೆಂಬ ಬಗ್ಗೆ ಆಧುನಿಕ ಎಷ್ಟೋ ಕಾಗದ ಪತ್ರಗಳು ಸಿಗುತ್ತವೆ. ಅವು ಯಾವವೆಂದರೆ ಡಾಕ್ಟರ ಕೇತಕರ ಇವರು ತಮ್ಮ ಮಹಾರಾಷ್ಟ್ರ ಜ್ಞಾನಕೋಶ, ಭಾಗ ೧೯-೧೧, (ಕ) ಅಕ್ಷರ, ಪುಟ ೨೯೯ ರಲ್ಲಿ " ಶ್ರೀ ಬಸವ ಇವನು ಲಿಂಗಾಯತ ಮತದ ಸಂಸ್ಥಾಪಕನಿರದೆ ಆ ಧರ್ಮದ ಸುಧಾರಕನೂ ಮತ್ತು ಪ್ರಸಾರಕನೂ ಇದ್ದನೆಂದು ಅಂದಿರುವರು. ಅದರಂತೆ ಅದೇ ಮಹಾರಾಷ್ಟ್ರ ಜ್ಞಾನಕೋಶ, ಭಾಗ ೨೦ (ಶ) ಅಕ್ಷರ, ಪುಟ ೯೬ ರಲ್ಲಿ "೯-೧೦ ಶತಮಾನದಲ್ಲಿ ಕಾಶ್ಮೀರದೊಳಗೆ ಎರಡು ಶೈವ ಪಂಥಗಳು ಉದಯವಾದವು. ಅದರಂತೆ ೧೧ ನೆಯ ಶತಮಾನದಲ್ಲಿ ಕರ್ನಾಟಕ ಪ್ರಾಂತದೊಳಗೆ ವೀರಶೈವ ಅಥವಾ ಲಿಂಗಾಯತ ಪಂಥವು ಉದಯವಾಯಿತು. ಬಸವನು ವೀರಶೈವ ಪಂಥದ ಪ್ರವೃತ್ತಕನೆಂಬ ತಿಳವಳಿಕೆಯು ಇದ್ದರೂ ಬಸವನಿಗಿಂತಲೂ ಪೂರ್ವದಲ್ಲಿ ಈ ಪಂಥವು ಅಸ್ತಿತ್ವದಲ್ಲಿದ್ದು ಆ ಪಂಥವನ್ನು ಬಸವನು ಊರ್ಜಿತಾವಸ್ಥೆಗೆ ತಂದನೆಂದು ಇತ್ತೀಚೆಯ ಶೋಧಗಳ ಮೇಲಿಂದ ಸಿದ್ಧವಾಗಿದೆ" ಎಂದು ಅಂದಿದೆ. ಇದರ ಮೇಲಿಂದ ನೋಡಲಾಗಿ ಶ್ರೀ ಬಸವನಿಗಿಂತಲು ಪೂರ್ವದಲ್ಲಿ ಅನೇಕ ಶಿವಶರಣರು ಆಗಿಹೋದದ್ದು ನಿಜವೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಇವರೊಳಗಿನವನೊಬ್ಬನಾದ ಸಕಲೇಶ ಮಾದರಸನು ಕ್ರಿ. ಶ. ೧೧೫೦ ರ ಸುಮಾರಿಕ್ಕೆ ಆಗಿಹೋದನು. ಇವನು ವಚನಗಳನ್ನು ಬರೆದಿದ್ದಾನೆ. ಇವನು ವೀರಶೈವ ಕವಿಯು. ಪದ್ಮಣ್ಣಾಂಕನು (ಸು ೧೩೮೫) ಪದ್ಮರಾಜ ಪುರಾಣದಿಂದ ಇವನ ವಿಷಯವಾಗಿ ಈ ಅಂಶಗಳು ತಿಳಿಯುತ್ತವೆ. ಈತನ ತಂದೆಯಾದ ಮಲ್ಲರಸನು ಕಲ್ಲಕುರಿಕೆಯಲ್ಲಿ ದೊರೆಯಾಗಿದ್ದು ವಿರಕ್ತನಾಗಿ ಶ್ರೀ ಶೈಲಕ್ಕೆ ಹೋದನು. ಇವನು ಕೆಲವುಕಾಲ ಅಲ್ಲಿ ಆಳುತ್ತಿದ್ದು ವಿರಕ್ತಿ ಹುಟ್ಟಿ ಅಂಬೆಯಮಾರ್ಗವಾಗಿ ಶ್ರೀ ಶೈಲಕ್ಕೆ ಹೋಗಿ ತಂದೆಯನ್ನು ಕಾಣಲು ಅವನು— ನೀನು ಕಲ್ಯಾಣದಲ್ಲಿ ಧರ್ಮ ಸ್ಥಾಪನೆಗಾಗಿ ಹುಟ್ಟುವ ಬಸವನೊಡನೆ ಕಾಲವನ್ನು ಕಳೆಯಬೇಕು— ಎಂದು ಹೇಳಿ ಹಿಂದಕ್ಕೆ ಕಳುಹಿಸಿದನು. ಇವನ ಮಗ ಮಾಯಿದೇವ, ಮೊಮ್ಮಗ ಕೆರೆಯಪದ್ಮರಸ. ಇದರಿಂದ ಇವನು ಬಸವನಿಗಿಂತ ಕೆಲವು ಕಾಲ ಹಿಂದೆ ಇದ್ದವನೆಂದೂ ಕೆರೆಯಪದ್ಮರಸನ ಪಿತಾಮಹನೆಂದೂ ತಿಳಿಯುತ್ತವೆ. ಇದುದರಿಂದ ಇವನ ಕಾಲವು ಸುಮಾರು ಕ್ರಿ ಶ. ೧೧೫೦ ಆಗಿರಬಹುದೆಂದು ಕವಿಚರಿತೆಕಾರರು ತಮ್ಮ ಕವಿಚರಿತೆಯ ಪ್ರಥಮ ಸಂಪುಟದ ೧೬೭ ನೆಯ ಪುಟದಲ್ಲಿ ಹೇಳಿರುವರು. ಶ್ರೀ ಪ್ರಭುದೇವನು ಮಹಾದೇವಿಯಕ್ಕನಿಗೆ ನಿರ್ವಾಣಪ್ರಾಪ್ತಿಯ ಮಾರ್ಗವನ್ನು ಬೋಧಿಸಲು ಕದಳೀ ಬನಕ್ಕೆ ಹೋಗುವ ದಾರಿಯಲ್ಲಿ ಶ್ರೀ ಶೈಲದಲ್ಲಿ ಈ ಸಕಲೇಶ ಮಾದರಸನನ್ನು ಉದ್ಧಾರ ಮಾಡಿದ್ದು ಪುರಾಣ ಪ್ರಸಿದ್ಧವದೆ. ಇದರ ಮೇಲಿಂದ ನೋಡಲಾಗಿ

ಶ್ರೀ ಪ್ರಭುದೇವನ ಕಾಲವು ಕ್ರಿ. ಶ. ೧೧೫೦ ರಕ್ಕಿಂತಲೂ ಹಿಂದೆ ಹೋಗುತ್ತದೆ. ಅದರಂತೆ ಶ್ರೀ ಸಿದ್ಧರಾಮನ ಕಾಲವಾದರೂ ಕ್ರಿ. ಶ. ೧೧೬೦ ರಕ್ಕಿಂತಲೂ ಹಿಂದೆ ಹೋಗುವದು. ಇದೂ ಅಲ್ಲದೆ ಈ ಸಿದ್ಧರಾಮನು ವಿದ್ಯಾಸಮುದ್ರನೆಂಬ ಬಿರುದನ್ನು ಪಡೆದಂಥ ಕರ್ಪರನೆಂಬ ಹೆಸರಿನ ಜೋಗಿಯನ್ನು ವಾದದಲ್ಲಿ ಗೆದ್ದಿರುವನು. ಕ್ರಿ. ಶ. ೧೦೮೪ ರ ಶಾಸನದಲ್ಲಿ ಕರ್ಪರನೇ ಇವನಿರಬಹುದು, (*Ind. Ant XIII 91*) ಎಂದರೆ ಕ್ರಿ. ಶ. ೧೦೮೪ ರ ಸುಮಾರಿನಲ್ಲಿ ಈ ಸಿದ್ಧರಾಮನು ಪ್ರೌಢನೂ ಮತ್ತು ಬಹಳ ವಿದ್ವಾಂಸನೂ ಇದ್ದಿರಬಹುದು. ಆದುದರಿಂದ ಶ್ರೀ ಪ್ರಭುದೇವನ ಕಾಲವು ಕ್ರಿ. ಶ. ೧೦೮೪ ರಕ್ಕಿಂತಲೂ ಹಿಂದೆ ಹೋಗುತ್ತದೆ.

ಶ್ರೀ ರೇವಣ ಸಿದ್ಧೇಶ್ವರನು ಸಿದ್ಧರಾಮನ ತಾಯಿಯಾದ ಸುಗ್ಗಲ ದೇವಿಗೆ ಸಿದ್ಧರಾಮನ ಜನನದ ವಿಷಯವಾಗಿ ಮುಂಚಿತವಾಗಿಯೇ ಸೂಚಿಸಿದ್ದನೆಂದು ವೀರಶೈವ ಗ್ರಂಥಗಳ ಮೇಲಿಂದ ತಿಳಿದು ಬರುತ್ತದೆ. ಆದುದರಿಂದ ಈ ರೇವಣಸಿದ್ಧೇಶ್ವರನ ಕಾಲವಾದರೂ ಸುಮಾರು ಕ್ರಿ. ಶ. ೧೦೬೦ ರ ಕ್ಕಿಂತಲೂ ಹಿಂದೆ ಇರಬೇಕಾಗುತ್ತದೆ. ಮತ್ತು ಶ್ರೀಕರಾಚಾರ್ಯನು ಈ ಗುರು ರೇವಣಸಿದ್ಧನ ನಾಮನಿರ್ದೇಶವನ್ನು ತನ್ನ ಶ್ರೀಕರ ಭಾಷೆಯಲ್ಲಿ ಮಾಡಿರುವನು. ಹಾಗು ಪ್ರಭುದೇವ ಮತ್ತು ರೇವಣಸಿದ್ಧ ಹೀಗೆ ಉಭಯತರು ಕೂಡಿ ಸಮಾಜೋದ್ಧಾರದ ಕೆಲಸಗಳನ್ನು ಮಾಡುತ್ತಿದ್ದರೆಂದು ವೀರಶೈವರ ಇತಿಹಾಸದಿಂದ ಸಿದ್ಧವಾಗುತ್ತದೆ. ಉಭಯತರ ಪುಣ್ಯಸ್ಥಾನಗಳಾದರೂ ಮಹಾರಾಷ್ಟ್ರ ಮೊದಲಾದ ದೇಶಗಳಲ್ಲಿ ಒಂದಕ್ಕೊಂದು ಸಮೀಪದಲ್ಲಿರುವವು. ಇದೂ ಅಲ್ಲದೆ ಕಾಯಕದ ಜಂಗಮರೂ ಕೂಡ ಈ ವರೆಗೂ "ರೇವಣಸಿದ್ಧೇಶ್ವರ ಪ್ರಭುವೇ" ಎಂದು ಅನ್ನುತ್ತ ಭಕ್ತಿಯನ್ನು ಬೇಡುತ್ತಿರುವರು. ಇದರಮೇಲಿಂದ ನೋಡಲಾಗಿ ಶ್ರೀ ಪ್ರಭುದೇವನ ಕಾಲವು ಕ್ರಿ. ಶ. ೧೦೬೦ ಕ್ಕಿಂತಲೂ ಹಿಂದೆಹೋಗುತ್ತದೆ.

ಶ್ರೀಪತಿ ಪಂಡಿತ ವೀರಶೈವ ಪಂಡಿತತ್ರಯಗಳಲ್ಲಿ ಒಬ್ಬನು. ಇವನ ಕಾಲವು ಸುಮಾರು ಕ್ರಿ. ಶ. ೧೧೬೦ ಎಂದು ಕರ್ನಾಟಕ ಕವಿಚರಿತೆಕಾರರು ನಿರ್ಧರಿಸಿರುವರು. ಆದರೆ ಶ್ರೀಕರ ಭಾಷ್ಯದ ಕರ್ತೃವಾದ ಶ್ರೀಪತಿ (ಶ್ರೀಕರಾಚಾರ್ಯ)ನು ತನ್ನ ಶ್ರೀಕರ ಭಾಷ್ಯದ ಅದ್ಯಂತ್ಯದಲ್ಲಿ ತನಗೆ ನಿರಾಧಾರಿ ಯತೀಂದ್ರನೆಂದು ಸಂಬೋಧಿಸಿಕೊಂಡಿರುವನು. ಈತನು ಶಂಕರಾಚಾರ್ಯರ ಸಮಾನ ಯೋಗ್ಯತೆಯವನಿದ್ದು ಕ್ರಿ. ಶ. ೧೦೬೦ ರ

ಸುಮಾರಿನಲ್ಲಿ ಇದ್ದನೆಂದು ಮದ್ರಾಸದ ಶ್ರೀಯುತ ನಾರಾಯಣಶಾಸ್ತ್ರಿ, ಬಿ. ಎ. ಬಿ. ಎಲ್, ಇವರು ಇಂಡಿಯನ್ ರಿವ್ಯೂ ಮಾಸಿಕದ ಕ್ರಿ. ಶ. ೧೯೧೫ ನೇ ವರ್ಷದ ಮೇ ತಿಂಗಳ ಸಂಚಿಕೆಯಲ್ಲಿ ಹೇಳಿರುವರು.

ನಿರಾಭಾರಿ ಎಂಬ ಒಕ್ಕಣಿಕೆಯನ್ನು ಪ್ರಭುಸಾಂಪ್ರದಾಯಕರಾದ ವಿರಕ್ತರು ತಮಗೆ ಉಪಯೋಗಿಸುತ್ತಿರುವರು. ಇದರ ಮೇಲಿಂದ ಶ್ರೀಕರಾಚಾರ್ಯನು ವಿರಕ್ತನಿದ್ದಿರಬಹುದಲ್ಲದೆ ಆ ಕಾಲಕ್ಕೆ ನಿರಾಭಾರಿ ವಿರಕ್ತ ಆಶ್ರಮವು ಅಭ್ಯುತ್ಪನ್ನದಲ್ಲಿದ್ದು ಆ ಆಶ್ರಮದೊಳಗಿನ ಜನರು ಆ ಕಾಲದಲ್ಲಿ ಪ್ರಖ್ಯಾತರಿದ್ದದ್ದು ನಿರ್ವಿವಾದವಾಗಿ ಸಿದ್ಧವಾಗುತ್ತದೆ. ನಿರಾಭಾರಿ ವಿರಕ್ತ ಜನರು ಪ್ರಭುಸಾಂಪ್ರದಾಯಕರೆಂಬುವದು ಶಾಸ್ತ್ರ ಪ್ರಸಿದ್ಧವೇ ಅಿದೆ. ಆತ ಏವ ಶ್ರೀ ಪ್ರಭುದೇವನ ಕಾಲವು ಕ್ರಿ. ಶ. ೧೦೬೦ ರಕ್ಕಿಂತಲೂ ಹಿಂದೆ ಹೋಗುತ್ತದೆ ಎಂದು ಮೇಲೆ ಹೇಳಿದ್ದು ನಿಸ್ಸಂಶಯವಾಗಿ ಸಿದ್ಧವಾಗುತ್ತದೆ.

ಮಿ॥ ಉಯಿಲ್ಯಮ್ಸ್‌ರಾಯಿಸ್ ಇವರು ತಮ್ಮ ಮೈಸೂರ ಮತ್ತು ಕುರ್ಗ ಎಂಬ ಹೆಸರಿನ ಗ್ರಂಥದಲ್ಲಿ "ಹೇಗೆ ಏಕಾಂತ ರಾಮಯ್ಯನೆಂಬ ಒಬ್ಬ ಶಿವಶರಣನು ೫೦೦ ವೀರಶೈವ ಪಂಡಿತರೊಡನೆ ಬದಾಮಿ ತಾಲೂಕಿನ ಹತ್ತರಿರುವ ಐಹೊಳೆಯೆಂಬಲ್ಲಿದ್ದು ಇತರ ಮತಾವಲಂಬಿ ಜನರಿಗೆ ವೀರಶೈವ ದೀಕ್ಷೆಯನ್ನು ಕೊಡುತ್ತಿದ್ದನೆಂದೂ ಮತ್ತು ಅದೇ ಕಾಲಕ್ಕೆ ಶ್ರೀಬಸವನು ಬಿಜ್ಜಳನ ಮಂತ್ರಿಯಾಗಿದ್ದು ಏಕಾಂತರಾಮಯ್ಯನ ಕಾರ್ಯವನ್ನೇ ಮುಂದೆ ಸಾಗಿಸಿದ್ದನೆಂದೂ" ಅಂದಿರುವರು. ಅದರಂತೆಯೇ ಕ್ರಿ. ಶ. ೧೦೪೦ ರ ಸುಮಾರಿನಲ್ಲಿ ಜೇಡರ ದಾಸಿಮಾರ್ಯನೆಂಬ ಒಬ್ಬ ಶಿವಶರಣನು ಜೈನರನ್ನು ಗೆದ್ದು ಸುಗ್ಗಲದೇವಿಯ ಗಂಡನಾದ ಜಯಸಿಂಹನೆಂಬ ರಾಜನಿಗೆ ವೀರಶೈವ ದೀಕ್ಷೆಯನ್ನು ಕೊಟ್ಟದ್ದು ತಿಳಿಯಬರುತ್ತದೆ; (ಬಸವ ಪುರಾಣ ಸಂಧಿ ೫೧ ಮತ್ತು ವೃಷಭೇಂದ್ರವಿಜಯ ಆಶ್ವಾಸ ೩೫) ಕರ್ನಾಟಕ ಕವಿಚರಿತೆಕಾರರು ಕವಿಚರಿತೆಯ ಪ್ರಥಮಸಂಪುಟದ ೨೦೧ ನೇ ಪುಟದಲ್ಲಿ "ಬ್ರಹ್ಮಶಿವನೆಂಬ (ಸು. ೧೧೨೫) ಆ ಕವಿಯ ಹೆಸರನ್ನು ಹೇಳುವದರಿಂದ ದಾಸಿವ.ಯ್ಯನು ಅವನಿಗಿಂತ ಮುಂಚೆ ಇದ್ದಿರಬೇಕು. ಆದುದರಿಂದ ಈ ರಾಜನು ೧೦೧೮ ರಿಂದ ೧೦೪೨ ರ ವರೆಗೆ ಆಳಿದ ಚಾಳುಕ್ಯ ರಾಜನಾದ ೧ ನೇ ಜಯಸಿಂಹನಾಗಿರಬೇಕು" ಎಂದು ಅಂದಿರುವರು. ಈ ದಾಸಿವಮಾರ್ಯನು ಜಂಗಮಲಿಂಗನ ಸ್ತುತಿಯನ್ನು ಮಾಡಿರುವನು ಶ್ರೀ ಪ್ರಭುದೇವನಿಗೆ ಜಂಗಮಲಿಂಗವೆಂಬುವದು ಜಗತ್ಪ್ರಸಿದ್ಧವದೆ. ಈ

ಜೇಡರ ದಾಸಿಮಾರ್ಯನಿಗೆ ನನ್ನಂಥ ದಾನಶೂರರಿಲ್ಲೆಂದು ಗರ್ವಬಂದಾಗ ಅತನ ಗರ್ವ ಪರಿಹಾರವನ್ನು ಶಂಕರದಾಸಿಮಾರ್ಯನು ಮಾಡಿದನೆಂಬ ಹರೀಶ್ವರಕೃತ ಶಂಕರದೇವ ರಗಳೆ, ಆಂಧ್ರಭಾಷೆಯೊಳಗಿನ ಸಿದ್ಧಕವಿಕೃತ ಮಲಬಸವ ಪುರಾಣ ಮತ್ತು ಭೀಮಕವಿಕೃತ ಬಸವಪುರಾಣ ಇತ್ಯಾದಿ ಗ್ರಂಥಗಳಲ್ಲಿ ಹೇಳಿರುವದು. ಇದರ ವೇಲಿಂದ ಜೇಡರ ದಾಸಿಮಾರ್ಯ ಹಾಗು ಶಂಕರದಾಸಿಮಾರ್ಯ ಈ ಉಭಯತರು ಸಮಕಾಲೀನರೆಂದು ಗೊತ್ತಾಗುತ್ತದೆ. ಈ ಶಂಕರದಾಸಿಮಾರ್ಯನು ಪ್ರಭುದೇವರನ್ನು ಸ್ತುತಿಸಿರುವನೆಂದು ಶೂನ್ಯಸಂಪಾದನೆಯಲ್ಲಿ ಹೇಳಿರುವದು. ಆದುದರಿಂದ ಈ ಮೂವರು ಸಮಕಾಲೀನರೆಂದು ಸಿದ್ಧವಾಗುತ್ತದೆ. ಅಂದಮೇಲೆ ಪ್ರಭುದೇವನ ಕಾಲವಾದರು ಕ್ರಿ ಶ. ೧೦೪೦ ರ ಕ್ಕಿಂತಲೂ ಹಿಂದೆ ಹೋಗುತ್ತದೆ.

ಕರ್ನಾಟಕ ಕವಿಚರಿತೆಕಾರರು ತಮ್ಮ ಕವಿಚರಿತೆಯ ದ್ವಿತೀಯ ಸಂಪುಟದ ೧೫೩ ನೇಯ ಪುಟದಲ್ಲಿ "ಸುಮಾರು ಕ್ರಿ. ಶ. ೧೭೫೦ ರಲ್ಲಿ ಅಮಲಾನಂದನಿಂದ ರಚಿತವಾದ ಕಲ್ಪತರುವೆಂಬ ವ್ಯಾಖ್ಯಾನದ ಹೆಸರನ್ನು ಶ್ರೀ ನಿಜಗುಣ ಶಿವಯೋಗಿಯು ತನ್ನ ವಿವೇಕ ಚಿಂತಾಮಣಿಯಲ್ಲಿ ಉತ್ತರ ಮೀಮಾಂಸದ ವಿಚಾರದ ಕಾಲಕ್ಕೆ ತೆಗೆದುಕೊಂಡಿರುವದರಿಂದ ಈ ನಿಜಗುಣಶಿವಯೋಗಿಯು ಕ್ರಿ. ಶ. ೧೭೫೦ ರಕ್ಕಿಂತ ಈಚೆಯವನೆಂತಲೂ, ಕ್ರಿ. ಶ. ೧೬೬೭ ರಲ್ಲಿ ಷಡಕ್ಷರದೇವನು ಇವನನ್ನು ಸ್ತುತಿಸುವದರಿಂದ ಇವನು ಆ ಕಾಲದ ಹಿಂದೆ ಇದ್ದಿರಬೇಕೆಂದೂ" ಅಂದು ನಿಜಗುಣ ಶಿವಯೋಗಿಯ ಕಾಲವನ್ನು ಕ್ರಿ. ಶ. ೧೭೫೦ ಎಂದು ಅಂದಿರುವರು. ಕವಿಚರಿತೆಕಾರರು ಅಮಲಾನಂದನ ಕಾಲವನ್ನು ಕ್ರಿ. ಶ. ೧೭೫೦ ಎಂದು ಸರಾಸರಿಯಾಗಿ ಗ್ರಹಿಸಿ ಇದಕ್ಕೆ ಯಾವ ಆಧಾರಗಳನ್ನು ಕೊಟ್ಟಿಲ್ಲ. ಇದು ಅಲ್ಲದೆ ಷಡಕ್ಷರದೇವ (ಕ್ರಿ. ಶ. ೧೬೬೭) ನ ಹೊರ್ತಾಗಿ ಹಿಂದೆ ಯಾರೂ ಸ್ತುತಿಸಿದ್ದನ್ನು ಹೇಳದೆ ಹಿಂದುಮುಂದೆ ೨೫೦ ವರ್ಷಗಳನ್ನು ಬಿಟ್ಟು ನಿಜಗುಣಶಿವಯೋಗಿಯ ಕಾಲವನ್ನು ಕ್ರಿ. ಶ. ೧೭೫೦ ಎಂದು ಅನ್ನುವದು ಕೇವಲ ತಪ್ಪು ಅನಿಸುತ್ತದೆ. ಇದಕ್ಕಿಂತಲೂ ಮಿ॥ ಎಡ್ವರ್ಡ ಪಿ. ರಾಯಿಸ್. ಬಿ. ಎ. ಇವರು ಕ್ರಿ. ಶ. ೧೯೨೧ ರಲ್ಲಿ ಬರೆದ ತಮ್ಮ ಕನ್ನಡ ವಾಙ್ಮಯದ ಇತಿಹಾಸದ ೭೧ ನೇ ಪುಟದಲ್ಲಿ "ಈ ನಿಜಗುಣ ಶಿವಯೋಗಿಯ ಕಾಲವು ಕ್ರಿ. ಶ. ೧೭೫೦—೧೮೦೫ ರ ಮಧ್ಯದಲ್ಲಿರಬೇಕು.

ಅದನ್ನು ಖಂಡಿತವಾಗಿ ಹೇಳಲಿಕ್ಕೆ ಬರಲಾರದು" ಎಂದು ಅಂದು ಇದು ಬಹಳೇ ಸಯುಕ್ತಿಕ ಎಂದು ಅಂದಿರುವರು. ಆದರೆ ಮಿ॥ ಎಡ್ವರ್ಡರಾಯಿಸ್ ಇವರು ಸಹ ಕ್ರಿ. ಶ. ೧೭೫೦ ರಕ್ಕಿಂತಲೂ ಹಿಂದೆ ಹೋಗಲಾರರು, ಮತ್ತು ಡಾಕ್ಟರ ಕೇತಕರ ಇವರು ತಮ್ಮ ಮಹಾರಾಷ್ಟ್ರ ಜ್ಞಾನಕೋಶ, ಭಾಗ ೧೦-೧೧, (ಕ) ಅಕ್ಷರ, ಪುಟ ೩೦೬ ರಲ್ಲಿ "೧೭ ನೇ ಶತಮಾನದ ಮಧ್ಯದಲ್ಲಿ ನಿಜಗುಣಯೋಗಿಯೆಂಬವನೊಬ್ಬ ವಿದ್ವಾನ ಲಿಂಗಾಯತ ಲೇಖಕನಾಗಿ ಹೋದನು. ಅವನು ವಿವೇಕ ಚಿಂತಾಮಣಿ (ಚಂಗಃ) ಶೈವವಿದ್ಯೆಯ ಒಂದು ಪ್ರಕಾರದ ಜ್ಞಾನಕೋಶ ಕೈವಲ್ಯ ಪದ್ಧತಿ, ತಾತ್ವಿಕ ವಿಷಯದ ಮೇಲಿನ ಪದಗಳು ಪುರಾತನ ತ್ರಿವಿದಿ, ೭೩ ಪುರಾತನರ (ಶೈವಸಾಧುಗಳ) ತ್ರಿಪದಿ ಛಂದಸ್ಸಿನಲ್ಲಿಯ ವರ್ಣನೆ, ಪಾರಮಾರ್ಥಗೀತೆ ಮತ್ತು ಪರಮಾನುಭವಜೋಳಿ ಈ ಗ್ರಂಥಗಳನ್ನು ಬರೆದನು" ಎಂದು ಅಂದಿರುವರು. ಇದರ ಮೇಲಿಂದ ನೋಡಲಾಗಿ ಈ ಮೂರು ಗ್ರಂಥಕರ್ತೃಗಳಲ್ಲಿ ಕೆಂಚಿತ್ತಾದರೂ ಮೇಳವಿಲ್ಲೆಂದು ವಾಚಕರಿಗೆ ಸಹಜ ಲಕ್ಷದಲ್ಲಿ ಬರಬಹುದು.

ವಿವೇಕ ಚಿಂತಾಮಣಿಯ ಅಚ್ಚಾದ ಪ್ರತಿಯೊಳಗಿನ ಉತ್ತರ ಮೀಮಾಂಸಾ ಎಂಬ ಶಿರೋಲೇಖದ ಕೆಳಗೆ "ವಾಚಸ್ಪತಿ ಮಿತ್ರನು ಶಾಂಕರ ಭಾಷ್ಯದ ತಾತ್ಪರ್ಯ ಭೋದಕ ಭಾಮಿತಿ ನಾಮಕ ವ್ಯಾಖ್ಯಾನವನ್ನು ಬರೆದಿರುವನೆಂದೂ, ಈ ಭಾಮಿತಿ ವ್ಯಾಖ್ಯಾನಕ್ಕೆ ಕಲ್ಪತರು ವ್ಯಾಖ್ಯಾನವಿರುವದಲ್ಲದೆ ಈ ಕಲ್ಪತರುವಿಗೆ ಕೌಸ್ತುಭನಾಮಕ ಟೀಕೆ" ಎಂದು ಇರುವದು. ಇದರಲ್ಲಿ ಕಲ್ಪತರು ಹಾಗು ಕೌಸ್ತುಭ ಗ್ರಂಥಗಳ ಗ್ರಂಥಕರ್ತರ ಹೆಸರು ಹೇಳಿಲ್ಲ. ಹೀಗಿರಲು ಈ ಕಲ್ಪತರು ವ್ಯಾಖ್ಯಾನವನ್ನು ಅಮಲಾನಂದನೇ ಬರೆದಿರುವನೆಂದು ಹೇಳಲಿಕ್ಕಾಗದು. ಇರಲಿ. ಹಳೇ ತಾಡವಾಲೀ ಗ್ರಂಥಗಳಲ್ಲಿ ಭಾಮಿತಿ ಕರ್ತೃವಾದ ವಾಚಸ್ಪತಿ ಮಿತ್ರನ ನಾಮನಿರ್ದೇಶವಾದರೂ ಕಂಡುಬರುವದಿಲ್ಲ. ಆದುದರಿಂದ ಈ ಸಂಗತಿಯು ಅಚ್ಚಾದ ವಿವೇಕಚಿಂತಾಮಣಿಯಲ್ಲಿ ಕ್ಷೇಪಕ ಅಂದರೆ ಹಿಂದಿನಿಂದ ಸೇರಿಸಿರಬಹುದೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಇದೂ ಅಲ್ಲದೆ ಕೊಡಗು ಪ್ರಾಂತದ ದೊರೆಯಾದ ಲಿಂಗರಾಜನೆಂಬವನು ವಿವೇಕಚಿಂತಾಮಣಿಯೊಳಗಿನ ಪ್ರಥಮ ಪ್ರಕರಣದ ಭಾಷಾಂತರವನ್ನು ಸಂಸ್ಕೃತದಲ್ಲಿ ಮಾಡಿರುವದರಿಂದ ಆ ಪ್ರಕರಣಕ್ಕೆ ಲಿಂಗರಾಜೀಯ ಎಂದು ಹೆಸರು

ಬಂದಿದೆ. ಇದಕೊಳಗಿನ ಸೂತ್ರವಿಚಾರದಲ್ಲಿಯೂ ಕೂಡ ಈ ಕಲ್ಪತರು ಗ್ರಂಥದ ನಾಮನಿರ್ದೇಶವೂ ಇಲ್ಲ. ಅದರಂತೆ ಸುಮಾರು ಎರಡನೂರು ವರ್ಷಗಳ ಪೂರ್ವದಲ್ಲಿ ಶಾಂತೇಶ್ವರನೆಂಬ ಒಬ್ಬ ವೀರಶೈವ ಕವಿಯು ಈ ವಿವೇಕ ಚಿಂತಾಮಣಿಯನ್ನು ಮರಾಠಿಯಲ್ಲಿ ಓವೀಬದ್ಧವಾಗಿ ಭಾಷಾಂತರ ಮಾಡಿರುವನು. ಇದರ ಸೂತ್ರ ವಿಚಾರದಲ್ಲಿಯೂ ಕೂಡ ಕಲ್ಪತರು ಮೊದಲಾದ ಗ್ರಂಥಗಳ ಹೆಸರು ಕಂಡುಬರುವದಿಲ್ಲ ಆದರೆ ಇತ್ತೀಚೆಗೆ ಅಚ್ಚಾದ ಗ್ರಂಥಗಳಲ್ಲಿ ಮಾತ್ರ ಭಾವಿತಿ ಕಲ್ಪತರು ಮೊದಲಾದ ಗ್ರಂಥಗಳ ಹೆಸರು ಕಂಡುಬರುತ್ತವೆ. ಈ ಅಚ್ಚಾದ ಗ್ರಂಥದೊಳಗಿನ ಹೆಚ್ಚಿನ ವಿಷಯವನ್ನೇ ಪುನಃ ಓವೀಬದ್ಧ ಮರಾಠಿಯಲ್ಲಿ ಭಾಷಾಂತರ ಮಾಡಿಸಿ ಕೈಲಾಸವಾಸಿ ರಾ॥ ಬಾ॥ ವಾರವ ಅಪ್ಪಾ ಸಾಹೇಬರು ಪ್ರಕಟ ಮಾಡಿರುವರು. ಅದುದರಿಂದ ತಾಡವಾಲೀ ಗ್ರಂಥವಲ್ಲಿ ಇರವಂಥ ಸಂಗತಿಯು ಅಚ್ಚಾದ ವಿವೇಕ ಚಿಂತಾಮಣಿಯಲ್ಲಿ ಬಂದಿದ್ದು ಕ್ಷೇಪಕ ಅಂದರೆ ಹಿಂದಿನಿಂದ ಸೇರಿಸಿದ್ದು ನಿಜವಿರುತ್ತದೆಂದು ವಾಚಕರ ಮನವರಿಕೆಯಾಗದೆ ಇರಲಾರದು. ಮೂಲ ಹಳೇ ತಾಡವಾಲೀ ಗ್ರಂಥಗಳಲ್ಲಿ ಶಂಕರಾಚಾರ್ಯನ ಭಾಷ್ಯಕ್ಕೆ ವಿವರಣೆ ಮಾಡಿದನು ಎಂಬದರ ವರೆಗೆ ಇರುತ್ತದೆ. ಇದರ ಅನುಕರಣವನ್ನೇ ಲಿಂಗರಾಜೀಯ ಮತ್ತು ಶಾಂತೇಶನ ಮರಾಠಿ ವಿವೇಕಚಿಂತಾಮಣಿಗಳಲ್ಲಿ ಮಾಡಿದಂತೆ ಕಂಡುಬರುತ್ತದೆ. ಇದರ ಮುಂದಿನ ಸಂಗತಿಯು ಅಂದರೆ ಶಂಕರಾಚಾರ್ಯನ ಶಿಷ್ಯರು ಶಾಂಕರ ಭಾಷ್ಯಕ್ಕೆ ವೃತ್ತಿಪಂಚಪಾದಿಕಾ, ಬ್ರಹ್ಮವಿದ್ಯಾಭರಣ, ರಾಮಾನಂದೀಯ ಮೊದಲಾದ ಗ್ರಂಥಗಳನ್ನು ಬರೆದರೆಂದೂ, ಅವಕ್ಕೆ ಅವರ ಶಿಷ್ಯರಾದ ವಾಚಸ್ಪತಿ ಮಿತ್ರರು ಭಾವಿತಿ ನಾಮಕ ವ್ಯಾಖ್ಯಾನವನ್ನು ಬರೆದರೆಂದೂ ಈ ವ್ಯಾಖ್ಯಾನಕ್ಕೆ ಕಲ್ಪತರು, ಇದಕ್ಕೆ ಕೌಸ್ತುಭ ಎಂಬ ಟೀಕಾ ಗ್ರಂಥಗಳೂ ಹಿಂದಿನಿಂದ ವಿವೇಕಚಿಂತಾಮಣಿಯಲ್ಲಿ ಹಾಕಿದ್ದು ನಿಜವೆಂದೂ ತೋರುತ್ತದೆ. ಹೀಗಿರುತ್ತಿರಲು ಹಿಂದಿನಿಂದ ಸೇರಿಸಲ್ಪಟ್ಟಂಥ ಕಲ್ಪತರು ಮೊದಲಾದ ಗ್ರಂಥಗಳ ಹೆಸರಿನ ಆಧಾರದ ಮೇಲಿಂದ ಮತ್ತು ಹಳೇ ತಾಡವಾಲೀ ಗ್ರಂಥಗಳನ್ನು ನೋಡದೆ ಈ ನಿಜಗುಣ ಶಿವಯೋಗಿಯ ಕಾಲವು ಸುಮಾರು ಕ್ರಿ. ಶ. ೧೫೦೦ ಎಂದು ಗೊತ್ತುಮಾಡುವದು ಬಹಳೇ ಅಯುಕ್ತವಾಗಿ ಕಂಡುಬರುತ್ತದೆ. ಮಹಾರಾಷ್ಟ್ರ ಜ್ಞಾನಕೋಶಕಾರರಾದ ಡಾಕ್ಟರ ಕೇತಕರ ಇವರು ಈ ನಿಜಗುಣಶಿವಯೋಗಿಯ

ಕಾಲವನ್ನು ೧೭ ನೇ ಶತಮಾನದ ಮಧ್ಯವೆಂದು ಹಿಡಿದಿರುವರು. ಇವರಿಗೆ ಕನ್ನಡ ವಾಙ್ಮಯವೆಂಬ ಎರಡನೇಯವರ ಲೇಖಗಳೇ ಆಧಾರವಾಗಿದ್ದಂತೆ ಕಂಡುಬರುತ್ತದೆ. ಇನ್ನು ಕರ್ನಾಟಕ ಕವಿಚರಿತೆಕಾರರು ತಮ್ಮ ಕವಿಚರಿತೆಯ ಎರಡನೇ ಸಂಪುಟದಲ್ಲಿ "ನಿಜಗುಣಶಿವಯೋಗಿಯ ಗುರುವಾದ ಚನ್ನಸದಾಶಿವಯೋಗಿಯು ಶಿವಯೋಗಪ್ರದೀಪಿಕಾ ಎಂಬ ಗ್ರಂಥವನ್ನು ಬರೆದಿರುವನು. ಇದಕ್ಕೆ ಪಾರಮಾರ್ಥ ಪ್ರಕಾಶಿಕಾ ಎಂಬ ಹೆಸರಿನ ವ್ಯಾಖ್ಯಾನವನ್ನು ನಿಜಗುಣಶಿವಯೋಗಿಯು ಬರೆದಿರುವನು" ಎಂದು ಅಂದಿರುವರು ಮತ್ತು ಈ ಚನ್ನಸದಾಶಿವನ ಕಾಲವು ತಿಳಿಯುವದಿಲ್ಲವು. ಅದು ತಿಳಿಯದ ಹೊರತೂ ನಿಜಗುಣಶಿವಯೋಗಿಯ ಕಾಲವನ್ನು ಗೊತ್ತುಮಾಡುವದು ಉಚಿತವಲ್ಲವೆಂದು ಅಂದಿರುವರು. ಈ ಮೇಲಿನ ವಿವೇಚನೆಯ ಮೇಲಿಂದ ನಿಜಗುಣಶಿವಯೋಗಿಯ ಕಾಲವು ಕ್ರಿ. ಶ. ೧೫೦೦ ಎಂಬುವದು ಗೊತ್ತುಮಾಡುವದು ಯೋಗ್ಯವಲ್ಲೆಂದೂ ಇದಕ್ಕೂ ಹಿಂದಿರಬಹುದೆಂದೂ ತೋರುತ್ತದೆ. ಏಕಂದರೆ ನಿಜಗುಣಶಿವಯೋಗಿಯು ವೀರಶೈವ ಕವಿಯಾಗಿದ್ದನು. ಈತನಿಗೆ ನಿಜಗುಣಾರಾಧ್ಯ ಎಂಬದು ಇನ್ನೊಂದು ಹೆಸರುಂಟು. ಇವನು ಶಂಭುಲಿಂಗನ ಬೆಟ್ಟದ ಸುತ್ತಲಿನ ಪ್ರಾಂತದ ರಾಜನಾಗಿದ್ದು ಆ ರಾಜ್ಯದ ತ್ಯಾಗವನ್ನು ಮಾಡಿ ವಿರಕ್ತನಾಗಿ ಆದೇ ಗುಡ್ಡದೊಳಗೆ ಶಿವಯೋಗತತ್ಪರನಾಗಿ ಇದ್ದನೆಂಬುದು ಇತಿಹಾಸಪ್ರಸಿದ್ಧವದೆ. ಇವನು ಬರೆದ ಷಟ್‌ಶಾಸ್ತ್ರಗಳಲ್ಲಿ ಶ್ರೀ ಬಸವಾದಿ ಪ್ರಮುಥರ ನಾಮನಿರ್ದೇಶವು ಕಂಡುಬರುವದಿಲ್ಲ. ಇದೂ ಅಲ್ಲದೆ ಶ್ರೀ ಬಸವೇಶ್ವರನು ತನ್ನ ವಚನದಲ್ಲಿ ಈ ನಿಜಗುಣ ಶಿವಯೋಗಿಯನ್ನು ಹೊಗಳಿರುವನು. ಅದುದರಿಂದ ನಿಜಗುಣಶಿವಯೋಗಿಯು ಶ್ರೀ ಬಸವಾದಿ ಪ್ರಮಥರಿಗಿಂತಲು ಹಿಂದಿನವನೆಂಬುವದರಲ್ಲಿ ತಿಲಮಾತ್ರವೂ ಸಂಶಯವಿಲ್ಲವು ಎಷ್ಟು ಹಿಂದೆ ಇದ್ದಿರಬಹುದು ಎಂಬದು ಖಂಡಿತವಾಗಿ ಹೇಳಲಿಕ್ಕಾಗದು. ಇರಲಿ. ಇವನು ತನ್ನ ವಿವೇಕಚಿಂತಾಮಣಿಯಲ್ಲಿ ನಿರಾಭಾರಿ ಆಶ್ರಮದ ವರ್ಣನೆಯನ್ನು ಮಾಡಿ ಈ ನಿರಾಭಾರಿಗಳಲ್ಲಿ ಸ್ವಯ, ಚರ, ಪರ ಹೀಗೆ ಮೂರು ಭೇದಗಳು ಇವೆಯೆಂದು ವರ್ಣನೆ ಮಾಡಿರುವನು. ಈ ವಿರಕ್ತಾಶ್ರಮಕ್ಕೆ ಶ್ರೀ ಪ್ರಭುದೇವನು ಮುಖ್ಯ ಗುರುವಾದದ್ದು ಎಲ್ಲ ವಿರಕ್ತರಿಗೂ ಮಾನ್ಯವದೆ. ಅದುದರಿಂದ ಈ ನಿಜಗುಣ ಶಿವಯೋಗಿಯ ಕಾಲವು ಸುಮಾರು ಕ್ರಿ. ಶ ೧೬೦೦ ಎಂದು ಹಿಡಿದರೆ ಇವನಿಗಿಂತಲೂ ಶ್ರೀ ಪ್ರಭುದೇವನು ಪೂರ್ವದಲ್ಲಿ ಇದ್ದದ್ದು ಸಹಜವೆಂದು ಕಂಡುಬರುತ್ತದೆ.

ಶಾಲಿವಾಹನ ಶಕೆ ೬೮೬ ರಲ್ಲಿ ಪ್ರಭುದೇವನು ಕಲ್ಯಾಣಕ್ಕೆ ಬಂದು ಕಲಿಗತ ವರ್ಷ ೪೦೦೧, ಶಾಲಿವಾಹನ ಶಕೆ ೧೮೨೨ ರೌದ್ರಿನಾಮಸಂವತ್ಸರ ದಲ್ಲಿ ಚನ್ನಬಸವನಿಗೆ ಶೂನ್ಯಸಿಂಹಾಸನದ ಅಧಿಕಾರವನ್ನು ಕೊಟ್ಟು ಸರ್ವ ಪ್ರಥಮಗಣಂಗಳಿಗೆ ದರ್ಶನ ಆಶೀರ್ವಾದವನ್ನಿತ್ತು ಮುಂದೆ ನಡೆದನೆಂದು ಚಿತ್ರಕಲ್‌ದುರ್ಗ ಪಟ್ಟವಲ್ಲರಿ ಪ್ರಸ್ತಾವನೆಯ ೬ ನೇ ಪುಟದಲ್ಲಿ ಹೇಳಿರುವದು. ಇದರ ಮೇಲಿಂದ ಪ್ರಭುದೇವನ ಕಾಲವು ಕ್ರಿ. ಶ. ೯೦೦ ಕ್ಕಿಂತಲೂ ಹಿಂದೆ ಹೋಗುವದು.

ವಿರೂಪಾಕ್ಷ ಪಂಡಿತಕೃತ ಚೆನ್ನಬಸವ (ಗಾಲವ) ಪುರಾಣದ ಕಾಂಡ ೫, ಸಂಧಿ ೯, ೧೮ ನೇ ಪದ್ಯದಲ್ಲಿ "ಬಸವನು ಶಾಲಿವಾಹನ ಶಕೆ ೨೦೭ ರಕ್ತಾಕ್ಷಿನಾಮಸಂವತ್ಸರದಲ್ಲಿ ಐಕ್ಯನಾದನೆಂದು" ಹೇಳಿದೆ. ಇದರಮೇಲಿಂದ ಪ್ರಭುದೇವನ ಕಾಲವು ಸುಮಾರು ಕ್ರಿ. ಶ. ೬೦೦ ಆಗುತ್ತದೆ.

ಡಾಕ್ಟರ ಶ್ರೀಧರ ವೆಂಕಟೇಶ ಕೇತಕರಕೃತ ಮಹಾರಾಷ್ಟ್ರ ಜ್ಞಾನ ಕೋಶ, ಭಾಗ ೧೨, ಪುಟ ೨೨೭ ರಲ್ಲಿ "ಗೋರಖನಾಥನು ಕಾನಫಾಟಿ ಯೋಗೀ ಪಂಥದ ಸಂಸ್ಥಾಪಕನೆಂದು ತಿಳಿಯಲ್ಪಡುತ್ತಾನೆ. ಗೋರಕ್ಷ ನಾಥ ಎಂಬ ಸಂಸ್ಕೃತ ಹೆಸರಿನ ಹಿಂದೀ ರೂಪವು ಗೋರಖನಾಥ ಎಂದು ಆಗಿದೆ. ಇವನ ಕಾಲವು ನಿಶ್ಚಿತವಾಗಿಲ್ಲವು. ಯಾಕಂದರೆ ಇವನ ಸಂಬಂಧ ವಾಗಿ ಪ್ರಚಾರದಲ್ಲಿದ್ದಂಥ ಅನೇಕ ಆಖ್ಯಾಯಿಕೆಗಳಲ್ಲಿ ಒಂದಕ್ಕೊಂದು ಮೇಳ ಇಲ್ಲದಂತೆ ಎಷ್ಟೋ ವಿಸಂಗತ ಸಂಗತಿಗಳು ಕಂಡುಬರುತ್ತವೆ. ನೇಪಾಳದೊಳಗೆ ೭ ನೇ ಶತಮಾನದಲ್ಲಿ ಆಗಿಹೋದ ನರೇಂದ್ರದೇವರಾ ಜನ ಕೂಡ ಈತನ ಸಂಬಂಧವನ್ನು ಹೊಂದಿಸುವರು, ಆದರೆ ಇವನು ಉತ್ತರ ಹಿಂದುಸ್ತಾನದಲ್ಲಿ ೧೫ ನೇ ಶತಮಾನದೊಳಗೆ ಇದ್ದಂಥ ಕಬೀರನ ಸಮಕಾಲೀನ ಪ್ರತಿಸ್ಪರ್ಧಿಯು ಎಂದು ತಿಳಿಯುವರು. ಮತ್ತು ಪಶ್ಚಿಮ ಹಿಂದುಸ್ತಾನದಲ್ಲಿ ೧೪ ನೇ ಶತಮಾನದ ಕಡೆಯ ಭಾಗದೊಳಗೆ ಕಚ್ಛ ದಲ್ಲಿ ಕಾನಫಾಟಿಯೆಂಬ ಪಂಥವನ್ನು ಆರಂಭಮಾಡಿದ ಧರ್ಮನಾಥನ ಗುರುವಿನ ಮಾನವನ್ನು ಈ ಗೋರಕ್ಷನಾಥನಿಗೆ ಕೊಡುವರು. ಗೋರಖ ನಾಥನ ಅಲ್ಪ ಚರಿತ್ರ ಮತ್ತು ಮಹಾರಾಷ್ಟ್ರಕ್ಕೆ ಆತನ ಸಂಬಂಧ ಎಂಬು ವದರಲ್ಲಿ ಇವನು ಮಚ್ಛೀಂದ್ರನಾಥನ ಶಿಷ್ಯನಾಗಿದ್ದನು. ಇವನು ಜಾತಿ ಯಿಂದ ಬ್ರಾಹ್ಮಣನು. ಆಕಳ ಶಗಣಿಯ ಕಿಟ್ಟನಲ್ಲಿ ಉದ್ಭವಿಸಿದರಿಂದ ಈತನಿಗೆ ಗೋರಖನಾಥ ಎಂಬ ಹೆಸರು ಬಂದಿದೆ. ಈತನು ಮಚ್ಛೀಂದ್ರ

ನಾಥನ್ನು ಶ್ರೀರಾಜ್ಯದೊಳಗಿಂದ ತಿರುಗಿ ಕರೆದುಕೊಂಡ ಬಂದ ಕಥೆಯು ಕೇಳಿಕೆಯಲ್ಲಿದೆ. ಈತನ ನಿತ್ಯ ವಾಸಸ್ಥಳವು ಗೋರಖಪೂರ ಜಿಲ್ಲೆಯೊಳ ಗಿನ ಗೋರಖಪೂರವೆಂಬ ಗ್ರಾಮದಲ್ಲಿ ಇತ್ತೆಂದು ಹೇಳುವರು. ಈತನು ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಲ್ಲಿ ಬರೆದ ಎರಡು ಗ್ರಂಥಗಳು ಸಿಗು ತ್ತವೆ. ವ್ರಜಭಾಷೆಯಲ್ಲಿಯೂ ಈತನು ಅಲ್ಪಸ್ವಲ್ಪ ಕಾವ್ಯರಚನೆಯನ್ನು ಮಾಡಿದ್ದು ಕಂಡುಬರುವದು. ರಸಾಯನ ಶಾಸ್ತ್ರದ ಮೇಲೆ ಗೋರಖಕಿ ಮಯಾಗಾರ ಎಂಬ ಹೆಸರಿನ ಒಂದು ಗ್ರಂಥವನ್ನು ಈತನು ಬರೆದಿರು ವನು. ಮರಾಠಿಯಲ್ಲಿ ಇವನು ಬರೆದ ಅಮರನಾಥ ಸಂವಾದ ಎಂಬು ದೊಂದು ಚಿಕ್ಕ ಗ್ರಂಥವೂ ಹಿಂದೀ ಭಾಷೆಯಲ್ಲಿ ಬರೆದ ಅನೇಕ ಸ್ಫುಟ ಕವಿತೆಗಳೂ ದೊರೆಯುತ್ತವೆ. ಇವನ ಕೆಲವು ವಾಕ್ಯಗಳನ್ನು ಗೋರಖ ಮತ ಎಂಬ ಹೆಸರಿನಿಂದ ಪ್ರಸಿದ್ಧಿಸಿರುವರು. ಈತನ ಶಿಷ್ಯನು ಗೈನೀನಾಥ, ಗೈನೀನಾಥನ ಶಿಷ್ಯನು ನಿವೃತ್ತಿನಾಥ (ಜ್ಞಾನೇಶ್ವರನ ಅಣ್ಣ) ಜೋತಿಷ್ಯದ ಮೇಲೆಯೂ ಈತನ ಕೆಲವು ಗ್ರಂಥಗಳು ಇರಬಹುದು. ಮೂಹೂರ್ತ ಮುಂತಾದವುಗಳ ಮೇಲೆ ಗೋರಖಮತವೆಂಬದೊಂದು ಸ್ವತಂತ್ರ ಮತ ವಿರುವದು. ಇವನು ನವನಾಥರೊಳಗಿನವನೊಬ್ಬನಿದ್ದು ಇವನ ಚರಿತ್ರವು ನವನಾಥ ಭಕ್ತಿಸಾರದಲ್ಲಿ ಹೇಳಿದೆ. ನೇಪಾಳವನ್ನು ಗೆದ್ದು ತಮ್ಮ ಕೈಯಲ್ಲಿ ಇಟ್ಟುಕೊಂಡಂಥ ಗೂರಖಾ ಸಂಸ್ಥಾನಗಳಲ್ಲಿ ಗೋರಕ್ಷನಾಥನನ್ನು ಸಂರ ಕ್ಷಕದೇವರೆಂದು ತಿಳಿಯುವರು. ಪೂರ್ವದಲ್ಲಿ ನೇಪಾಳದ ಸಂರಕ್ಷಕ ದೇವರು ಮಚ್ಛೀಂದ್ರನಾಥನಿದ್ದು ಬರಬರುತ್ತ ಆತನ ಶಿಷ್ಯನಾದ ಗೋರಖ ನಾಥನು ಆ ಸ್ಥಾನದಲ್ಲಿರಬಹುದು. ತಿಬೇಟದಲ್ಲಿ ಗೋರಕ್ಷನಾಥನು ಒಬ್ಬ ಬೌದ್ಧ ಮಾಂತ್ರಿಕನೆಂದು ತಿಳಿಯುವರು. ಈ ಹೊತ್ತಿಗೂ ಹಿಂದುಸ್ತಾನ ದೊಳಗಿನ ಎಷ್ಟೋ ಭಾಗಗಳಲ್ಲಿ ಗೋರಖನಾಥನು ಸರ್ವಶಕ್ತಿವಾನ್ ಪರಮೇಶ್ವರನೆಂದು ಎಣಿಸಲ್ಪಡುವನು. ಸತ್ಯ ಯುಗದಲ್ಲಿ ಪಂಜಾಬದ ಲ್ಲಿಯೂ, ತ್ರೇತಾಯುಗದಲ್ಲಿ ಗೋರಖಪೂರದಲ್ಲಿಯೂ, ದ್ವಾಪಾರ ಯುಗ ದಲ್ಲಿ ಹುರಮಜಗ್ರಾಮದಲ್ಲಿಯೂ, ಹಾಗು ಕಲಿಯುಗದಲ್ಲಿ ಕಾಠೇವಾ ಡದಲ್ಲಿಯೂ ಅವತರಿಸಿ ಆ ಆ ಸ್ಥಾನಗಳಲ್ಲಿಯ ಗೋರಖಮತದಲ್ಲಿ ಈತನು ವಾಸಮಾಡುತ್ತಿದ್ದನೆಂದು ಆತನ ಭಕ್ತರು ತಿಳಿಯುವರು. ಭರ್ತೃಹರಿರಾಜ ನಿಗೆ ಗೋರಕ್ಷನಾಥನು ಸನ್ಯಾಸ ದೀಕ್ಷೆಯನ್ನು ಕೊಟ್ಟಂತೆ ಒಂದು ಕಥೆ ಯನ್ನು ಹೇಳುವರು. ಕೆಲವು ಸ್ಥಳಗಳಲ್ಲಿ ಭರ್ತೃಹರಿರಾಜನ ಬದಲು ಗೋಪೀಚಂದನ ಹೆಸರು ಹೇಳುವರು. ಮರಾಠಿ, ಹಿಂದೀ, ಬಂಗಾಲೀ

ಮುಂತಾದ ವಾಙ್ಮಯಗಳ ಆಧಾರದಿಂದ ಗೋರಖನಾಥನೆಂಬವನು ಒಬ್ಬ ಪ್ರಮುಖ ಶೈವಧರ್ಮ ಪ್ರಚಾರಕನಿದ್ದು ಮಧ್ಯಯುಗದಲ್ಲಿ ಉತ್ತರ ಹಿಂದುಸ್ಥಾನದೊಳಗಿನ ಭಕ್ತಿಮಾರ್ಗದ ಪ್ರಗತಿಗೆ ಪ್ರತಿಬಂಧಮಾಡುವ ಕಾರ್ಯವನ್ನು ಈತನು ಮಾಡಿದನೆಂದು ಹೇಳಬಹುದು. ಗೋರಖನಾಥನ ವಿಷಯವಾಗಿ ಸುಸಂಗತ ವಿವೇಚನವನ್ನೂ ಶೋಧವನ್ನೂ ಈ ಹೊತ್ತಿಗೂ ಯಾರೂ ಮಾಡಿಲ್ಲವು. ಈತನು ಇದ್ದನೋ ಅಥವಾ ಕಾಲ್ಪನಿಕ ಪುರುಷನೋ ಎಂಬುದನ್ನು ನಿಶ್ಚಯಾತ್ಮಕವಾಗಿ ಹೇಳಲಾಗದು. ನೇಪಾಳದಲ್ಲಿ ಮಹಾಯಾನಿ ಬೌದ್ಧ ಸಾಂಪ್ರದಾಯದವರ ವರ್ಚಸ್ಸನ್ನು ಇವನು ಕತ್ತೊಗೆದು ಮಾಡಿದ ಮಹತ್ಕಾರ್ಯವು ನೇಪಾಳದ ಇತಿಹಾಸ ಶೋಧಕರಿಗೆ ಚೆನ್ನಾಗಿ ಕಂಡುಬರುವದು. ಗೋರಖಪಂಥದ ವಿಷಯವಾಗಿ ವಿವೇಚನೆಯನ್ನು ಕಾನಫಾಟಿ ಎಂಬ ಲೇಖದಲ್ಲಿ ಹೇಳಿರುವೆವು ಎಂದು ಹೇಳಿರುವದು.

ಈ ಮೇಲಿನ ವಿವೇಚನೆಗಳ ಮೇಲಿಂದ ನೋಡಲಾಗಿ ಗೋರಖನಾಥನು ೭ನೇ ಶತಮಾನದಲ್ಲಿ ನೇಪಾಳದಲ್ಲಿ ಆಗಿಹೋದ ನರೇಂದ್ರದೇವರಾಜನ ಸಮಕಾಲೀನನೆಂದೂ ಉತ್ತರಹಿಂದುಸ್ಥಾನದಲ್ಲಿ ೧೫ನೇ ಶತಮಾನದಲ್ಲಿ ಆಗಿಹೋದ ಕಬೀರನ ಸಮಕಾಲೀನ ಪ್ರತಿಸ್ಪರ್ಧಿ ಎಂದೂ ಹಾಗೂ ಪಶ್ಚಿಮ ಹಿಂದುಸ್ಥಾನದೊಳಗೆ ೧೪ನೇ ಶತಮಾನದ ಅಂತ್ಯ ಭಾಗದಲ್ಲಿ ಕಚ್ಛದೊಳಗೆ ಕಾನಫಾಟಿ ಪಂಥವನ್ನು ಆರಂಭಮಾಡಿದ ಧರ್ಮನಾಥನ ಗುರುವಿನ ಕಾಲದವನೆಂದೂ ಈ ರೀತಿ ಮೂರು ಭಿನ್ನಾಭಿಪ್ರಾಯಗಳು ಹೊರಬೀಳುವವು. ಒಟ್ಟಿನಮೇಲೆ ಈತನ ಕಾಲವು ಇನ್ನೂ ನಿಶ್ಚಿತವಾಗಿಲ್ಲವು. ಮತ್ತು ಈ ಗೋರಖನಾಥನ ಶಿಷ್ಯನು ಆತನ ತಮ್ಮನಾದ ಗೈನಿನಾಥನು ಈತನ ಶಿಷ್ಯನು ನಿವೃತ್ತಿನಾಥನೆಂದು ಹೇಳಿದೆ. ಈ ನಿವೃತ್ತಿನಾಥನ ಶಿಷ್ಯನು ಆತನ ಖಾಸ ತಮ್ಮನಾದ ಜ್ಞಾನದೇವನು. ಈ ಗುರುಪರಂಪರೆಯು ಮಚ್ಛೇಂದ್ರಸಂಹಿತೆ ಹಾಗು ಭಕ್ತಿತತ್ವಾವೃತಗಳಲ್ಲಿ ಹೇಳಿದೆ. ಮತ್ತು ಮಹಾರಾಷ್ಟ್ರ ಜ್ಞಾನಕೋಶ, ಭಾಗ ೨ (ಜ್ಞ) ಅಕ್ಷರ, ಪುಟ ೪—೫ ರಲ್ಲಿ "ಜ್ಞಾನೇಶ್ವರನ ಜನ್ಮವು ಶಾಲಿವಾಹನ ಶಕೆ ೧೧೧೫-೧೪-೧೫ ಎಂದೂ ಹಾಗು ಆತನು ತನ್ನ ವಯಸ್ಸಿನ ೨೧ನೇ ವರ್ಷದಲ್ಲಿ ಆಳಂದಿಯಲ್ಲಿ ಸಮಾಧಿಸ್ಥನಾದನೆಂದೂ" ಹೇಳಿದೆ. ಶ್ರೀಯುತ ಬಾಳಕೃಷ್ಣ ಲಕ್ಷ್ಮಣ ಘಾಟಕಕೃತ ಜ್ಞಾನೇಶ್ವರ ಚರಿತ್ರ, ಪುಟ ೫೪ ರಲ್ಲಿ

"ಶ್ರೀ ಜ್ಞಾನದೇವನ ಜನ್ಮವು ಶಾಲಿವಾಹನ ಶಕೆ ೧೧೧೭ (ಕ್ರಿ. ಶ. ೧೧೭೫) ಯುವನಾಮಸಂವತ್ಸರ, ಶ್ರಾವಣ ವದ್ಯ, ಅಷ್ಟಮಿ ಬುಧವಾರ ರಾತ್ರಿ ೨ ಪ್ರಹರಗಳ ನಂತರ ಆಯಿತೆಂದು ಹೇಳಿದೆ. ಇದರ ಮೇಲಿಂದ ಜ್ಞಾನೇಶ್ವರನ ಕಾಲವು ೧೩ನೇ ಶತಮಾನದ ಕಡೆಯ ಭಾಗದಲ್ಲಿ ಇದ್ದಂತೆ ವಾಚಕರಿಗೆ ಕಂಡುಬರುವದು. ಗುರುಪರಂಪರೆಯಿಂದ ನೋಡಲಾಗಿ ಗೋರಖನಾಥನು ಜ್ಞಾನೇಶ್ವರನ ಮುತ್ತಾತ್ಯಗುರುವು ಆಗುವನು. ಆತನ ಕಾಲವಾದರೂ ೧೩ನೇ ಶತಮಾನಕ್ಕಿಂತಲೂ ಹಿಂದೆ ಹೋಗುತ್ತದೆ. ಅಂದ ಮೇಲೆ ಡಾ॥ ಕೇತಕರ ಇವರು ತಮ್ಮ ಮಹಾರಾಷ್ಟ್ರ ಜ್ಞಾನಕೋಶದಲ್ಲಿ ಕೆಲವರು ೧೪ನೇ ಶತಮಾನದಲ್ಲಿಯೂ ಕೆಲವರು ೧೫ನೇ ಶತಮಾನದಲ್ಲಿಯೂ ಗೋರಖನಾಥನು ಇದ್ದನೆಂದು ಹೇಳುತ್ತಾರೆಂದು ಹೇಳಿದ್ದು ತೀರ ತಪ್ಪೆಂದು ಕಂಡುಬರುತ್ತದೆ. ಕ್ರಿ. ಶ. ೧೦೦೦ ಸುಮಾರಕ್ಕೆ ಇದ್ದ ನಿಜಗುಣಶಿವಯೋಗಿಯು ತನ್ನ ವಿವೇಕಚಿಂತಾಮಣಿ ನಾಮಕ ಗ್ರಂಥದಲ್ಲಿ ಕೌಳಯಾಮಳ ಪಂಥ ಎಂಬ ಶಿರೋಲೇಖದ ಕೆಳಗೆ ನವನಾಥರುಗಳ ಹೆಸರುಗಳನ್ನು ಕೊಟ್ಟು ಕಡೆಯವನಾದ ಗೋರಖನಾಥನ ಹೆಸರನ್ನು ಹೇಳಿರುವನು. ನಿಜಗುಣಶಿವಯೋಗಿಯು ತನ್ನ ಗ್ರಂಥಗಳಲ್ಲಿ ಈ ಗೋರಖನಾಥನ ನಾಮನಿರ್ದೇಶವನ್ನು ಮಾಡಿರುವದರಿಂದ ಇವನ ಕಾಲವಾದರೂ ೯ನೇ ಶತಮಾನದ ಕಡೇ ಭಾಗದಲ್ಲಿ ಬೀಳುತ್ತದೆ. ೭ನೇ ಶತಮಾನದ ಕಡೇ ಭಾಗದಲ್ಲಿ ಪ್ರಭುದೇವನು ಇದ್ದನೆಂದು ನಾವು ಈ ಮೊದಲೇ ಸಿದ್ಧಮಾಡಿದ್ದು ವಾಚಕರ ಲಕ್ಷ್ಯದಲ್ಲಿರಬಹುದು. ಪ್ರಭುದೇವನು ಈ ಗೋರಖನಾಥನ ಪರಾಭವವನ್ನು ಮಾಡಿ ಆತನಿಗೆ ಜ್ಞಾನೋಪದೇಶವನ್ನು ಮಾಡಿದ ಕಥೆಯನ್ನು ಚಾಮರಸಕೃತ (೧೪೩೦) ಪ್ರಭುಲಿಂಗಲೀಲೆಯಲ್ಲಿ ಹೇಳಿರುವದು. ಪ್ರಭುದೇವನ ಜ್ಞಾನೋಪದೇಶದ ಬಲದಿಂದ ಗೋರಕ್ಷನಾಥನು ಕನ್ನಡದಲ್ಲಿ ಕೆಲವು ವಚನಗಳನ್ನು ಬರೆದಿರುವನು. ಪ್ರತಿಯೊಂದು ವಚನದ ಅಂತ್ಯದಲ್ಲಿ "ಗೋರಕ್ಷಪಾಲಕ ಮಹಾಪ್ರಭು ಸಿದ್ಧ ಸೋಮನಾಥಲಿಂಗ" ಎಂದು ಗೋರಕ್ಷನಾಥನು ತನ್ನ ಮುದ್ರಿಕೆಯನ್ನು ಹಾಕಿರುವನು. ಕರ್ನಾಟಕ ಕವಿಚರಿತೆಕಾರರು ತಮ್ಮ ಗ್ರಂಥದ ೩ನೆಯ ಸಂಪುಟದ ೩೫೫ನೆಯ ಪುಟದಲ್ಲಿ ಈ ವಚನಗಳ ಉಲ್ಲೇಖವನ್ನು ಮಾಡಿರುವರು. ಇದರ ಮೇಲಿಂದ ಗೋರಖನಾಥನಿಂದ ಮುಂದಿನ ನಾಥಪಂಥದ ಗುರುಗಳು ವೀರಶೈವ ಮತಾವಲಂಬಿಗಳು ಇದ್ದದ್ದು ಸಹಜವಾಗಿ ಕಂಡುಬರುತ್ತದೆ. ಮತ್ತು

ಕೆಳಗಿನ ಉದಾಹರಣೆಗಳ ಮೇಲಿಂದ ಇದು ಸ್ಥಿರಪಡುತ್ತದೆ. ಅದು ಹೇಗಂದರೆ, ಈ ಗೋರಖನಾಥನ ಶಿಷ್ಯನಾದ ಜ್ಞಾನದೇವನು ತನ್ನ ಪಂಚೀಕರಣ ನಾಮಕ ಗ್ರಂಥದ ಅಜವಾಬ್ರಹ್ಮಾಂಡದ ಪುಟ ೪೩-೪೪, ಓವಿ ೨ ರಿಂದಾ ೧೦ ಇವುಗಳಲ್ಲಿ ಲಿಂಗ ಎಂಬ ಪದದಿನ ಕೆಳಗೆ ೧ ಆಚಾರಲಿಂಗ ೨ ಗುರುಲಿಂಗ, ೩ ಶಿವಲಿಂಗ, ೪ ಜಂಗಮಲಿಂಗ, ೫ ಪ್ರಸಾದಲಿಂಗ, ೬ ಮಹಾಲಿಂಗ, ಎಂದು ವೀರಶೈವ ಧರ್ಮದೊಳಗಿನ ಲಿಂಗದ ಪಾರಿಭಾಷಿಕ ಹೆಸರುಗಳನ್ನು ಕೊಟ್ಟಿರುತ್ತಾನೆ. ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಈ ತ್ರಿವಿಧ ಲಿಂಗಗಳು ಮೇಲೆ ಹೇಳಿದಂತೆ ಷಡ್ವಿಧಲಿಂಗಗಳಾದದ್ದು ವೀರಶೈವ ಧರ್ಮಗ್ರಂಥಗಳ ಹೊರ್ತು ಅನ್ಯ ಧರ್ಮಗ್ರಂಥಗಳಲ್ಲಿ ಹೇಳಿರುವದಿಲ್ಲ. ಶ್ರೀಯುತ ವ್ಹಿ. ವ್ಹಿ. ಪಾಠಕ ಇವರು ಅಚ್ಚುಹಾಕಿಸಿದ ಶ್ರೀ ಜ್ಞಾನದೇವಕಥಿತಂ ಮಹಾವಾಕ್ಯ ಪಂಚೀಕರಣಮ್ ಜಗದೀಶ್ವರ ಪ್ರೆಸ್ ಗಾಯವಾಡಿ ಗಿರಗಾವ ನಂಬರ ೯ ಮುಂಬಯಿ. ಅದರಂತೆ ಶ್ರೀಯುತ ಘಿಡೆ ಇವರು ಅಚ್ಚುಹಾಕಿಸಿದ ಜ್ಞಾನೇಶ್ವರಿಯಲ್ಲಿ ಕೆಳಗಿನಂತೆ ವೀರಶೈವ ಧರ್ಮತತ್ವಗಳನ್ನು ಸ್ಪಷ್ಟವಾಗಿ ಹೇಳಿರುವರು. ಅವುಗಳ ವಿವರವು ಕೆಳಗಿನಂತೆ.

ವಿಷಯ	ಭಾಗ.	ಭ. ಗೀತಾ ಶ್ಲೋಕ.	ಜ್ಞಾನೇಶ್ವರೀ ಓವಿ.
ವೀರಶೈವಾಚರಣೆ	೩	೧೦	೮೭-೯೨
ಲಿಂಗಾಂಗ	೬	೧೫	೩೦೫
ಕಾಪಡಿಮಹೇಶ	೬	೧೦	೧೫೩
ಸತಿಪತಿಭಾವ	೧೨	೧೪	೧೫೬

ಇದರ ಪ್ರಸ್ತಾವನೆಯ ೫ನೇ ಪುಟದಲ್ಲಿ ಕಂಡುಬರುವ 'ಕೋರಾನ್ನ' 'ಲಿಂಗಾಂಗ' (ಶಿವಜೀವೈಕ್ಯ) ಮತ್ತು 'ಕಾಪಡಿಮಹೇಶ' (ಅಂದರೆ ಶ್ರೀಬಸವನು ಐಕ್ಯವಾದ ಕಪ್ಪಡಿ ಸಂಗಮನಾಥ) ಈ ಶಬ್ದಗಳು ವೀರಶೈವ ಮತದ ಪಾರಿಭಾಷಿಕ ಶಬ್ದಗಳಿರುವವು.

ಇದರ ಮೇಲಿಂದ ನೇಪಾಳದಲ್ಲಿ ೭ನೇಯ ಶತಮಾನದೊಳಗೆ ಆಗಿ ಹೋದಂಥ ನರೇಂದ್ರ ದೇವರಾಜನ ಕೂಡ ಈ ಗೋರಖನಾಥನನ್ನು ಹೊಂದಿಸಿದ್ದು ಯೋಗ್ಯವೆಂದು ಕಂಡುಬರುತ್ತದೆ. ಒಟ್ಟಿನ ಮೇಲೆ ಗೋರಖನಾಥನು ೭ನೇ ಶತಮಾನದಲ್ಲಿ ಇದ್ದದ್ದು ನಿಜವಿರುತ್ತದೆ. ಇನ್ನು ಈ ಗೋರಖನಾಥನು ತನ್ನ ಗೋರಖ ಸಂಹಿತೆಯಲ್ಲಿ "ಶಿಷ್ಯಾಣಾಂ ಚ ಗುರು

ರ್ಮಾತಾ। ಗುರೋರ್ಮಾತಾತು ಜಂಗಮಃ॥ ಜಂಗಮಸ್ಯ ನ ಮಾತಾಸ್ತಿ। ಹ್ಯಾದಿ ನಾಥಸ್ತು ಜಂಗಮಃ॥೧॥ ಶಿಷ್ಯೋತ್ಪತ್ತಿರ್ಗುರೋರೇವ। ಗುರೋತ್ಪತ್ತಿ ಸ್ತು ಜಂಗಮಾತ್॥ ಜಂಗಮೋತ್ಪತ್ತಿಃಶೂನ್ಯತ್ವಾತ್ಪ್ರಚ್ಛಾಸ್ಯೋ ಜಂಗಮೋ ಭವೇತ್॥೨॥" ಎಂದರೆ ಶಿಷ್ಯನಿಗೆ ಗುರುವೇ ತಾಯಿಯು. ಮತ್ತು ಗುರುವಿಗೆ ಜಂಗಮವೇ ತಾಯಿಯು. ಆದರೆ ಜಂಗಮಕ್ಕೆ ತಾಯಿಯು ಇರದೆ ಜಂಗಮವೇ ಆದಿಸ್ಥಲವಾಗಿರುವದು. ಶಿಷ್ಯನುತ್ಪತ್ತಿಯು ಗುರುವಿನಿಂದಲೂ, ಗುರುವಿನುತ್ಪತ್ತಿಯು ಜಂಗಮನಿಂದಲೂ, ಜಂಗಮನುತ್ಪತ್ತಿಯು ಶೂನ್ಯತ್ವದಿಂದಲೂ ಆಗಿದ್ದು ಈ ಶೂನ್ಯತ್ವಕ್ಕೆ ಜಂಗಮವೆಂದೆನ್ನುವರು. ಈ ಶ್ಲೋಕಗಳು ರಾ॥ ಬ॥ ವಾರದ, ಸೊಲ್ಲಾಪುರ, ಇವರು ಪ್ರಸಿದ್ಧಿಸಿದ ವಿರಕ್ತೋತ್ಪತ್ತಿ ಕ್ರಿಯಾ ಲಕ್ಷಣ ಎಂಬ ಗ್ರಂಥದ ೬೬ನೇ ಪುಟದಲ್ಲಿ ದೊರೆಯುತ್ತವೆ. ಅಷ್ಟಾವರಣಾಂತರ್ಗತ ಜಂಗಮ ಪದವಾಚಕ ನಿರಾಭಾರಿ ವಿರಕ್ತರಿಗೆ ಶ್ರೀಪ್ರಭುದೇವನು ಆದಿಗುರುವಾದದ್ದು ನಿರ್ವಿವಾದವದೆ. ಆದುದರಿಂದ ಶ್ರೀಪ್ರಭುದೇವನ ಕಾಲವು ೭ನೇಯ ಶತಮಾನಕ್ಕಿಂತಲೂ ಹಿಂದೆ ಹೋಗುತ್ತದೆ.

ಕ್ರಿ. ಶ. ೬೮೭ನೇ ವರ್ಷದಲ್ಲಿ ಕರ್ನಾಟಕದ ವಿನಯಾದಿತ್ಯನೆಂಬ ಚಾಳುಕ್ಯ ರಾಜನು ತನ್ನ "ವೀರ" ವೆಂಬ ಗ್ರಾಮದಲ್ಲಿ "ಅಲ್ಲ ಅಥವಾ ಅಲ್ಲಮ" ಎಂಬ ಹೆಸರಿನ ಒಬ್ಬ ಬ್ರಾಹ್ಮಣನಿಗೆ ದಾನ ಕೊಟ್ಟದ್ದರ ವರ್ಣನೆಯು ಒಂದು ಶಿಲಾಶಾಸನದಲ್ಲಿ ಅಿದೆ. ಅದರಲ್ಲಿ "ಕೌಂಡಿಣ್ಯ ಗೋತ್ರದ ದುರ್ಗ್ಗಶರ್ಮನ ಮೊಮ್ಮಗನೂ ಮತ್ತು ಪಾಂಚಾಲಶರ್ಮನ ಮಗನೂ ಆದ ಅಲ್ಲ ಇಲ್ಲನೆ ಅಲ್ಲಮಶರ್ಮನಿಗೆ ವೀರವೆಂಬ ಗ್ರಾಮವನ್ನು ದಾನಕೊಟ್ಟಿದೆ" ಎಂದು ಸಂಸ್ಕೃತದಲ್ಲಿ ಹೇಳಿದೆ. ಈ ಶಿಲಾಲೇಖನವು ಎಪಿಗ್ರಾಫಿಕಾ ಇಂಡಿಕಾದ ೧೯೩೭ನೇ ಇಸ್ವಿಯ ಎಪ್ರಿಲ ತಿಂಗಳದ ಸಂಚಿಕೆಯಲ್ಲಿ ಇರುವದು. ಇದರ ಮೇಲಿಂದ ಕ್ರಿ. ಶ. ೬೮೭ರಲ್ಲಿ ಅರಬಸ್ತಾನದ ಹೊರಗೆ ಮುಸಲ್ಮಾನರ ಸುಳದಾಟವು ಇಲ್ಲದ ಕಾಲಕ್ಕೆ "ಅಲ್ಲ ಅಥವಾ ಅಲ್ಲಮ" ಎಂಬ ಹೆಸರು ಶುದ್ಧ ಕರ್ನಾಟಕ ದೇಶದೊಳಗಿನದು ಇದ್ದಿತೆಂಬುವದಕ್ಕೆ ಏನೂ ಸಂಶಯ ತೋರುವದಿಲ್ಲ. ಇದೂ ಅಲ್ಲದೆ ಶ್ರೀ ಅಲ್ಲಮಪ್ರಭು ದೇವನ ಹೆಸರನ್ನೇ ಈ ಶಿಲಾಲೇಖನದೊಳಗಿನ ಬ್ರಾಹ್ಮಣನಿಗೆ ಇಟ್ಟಿರಬಹುದೆಂದೂ ತರ್ಕಿಸಬಹುದು. ಮತ್ತು ೭ನೇ ಶತಮಾನದಲ್ಲಿ ಪ್ರಭುದೇವನು ಬಹಳೇ ಪ್ರಖ್ಯಾತನೂ ಹಾಗೂ ಪರಮಪೂಜ್ಯನೂ ಇದ್ದದ್ದು ನಿರ್ವಿವಾದವಾಗಿ ಸಿದ್ಧವಾಗುತ್ತದೆ.

ಸುಮಾರು ಕ್ರಿ. ಶ. ದ ಪೂರ್ವದಲ್ಲಿ ೧ ನೇಯ ಶತಮಾನದಿಂದ ೧ ನೇ ವಂಶವು, ಕ್ರಿ. ಶ. ೯೦೦ ರಿಂದ ೨ ನೇ ವಂಶವು, ಹಾಗು ಕ್ರಿ. ಶ. ೧೧೨೭ ರಲ್ಲಿ ೩ ನೇ ವಂಶವು, ಹೀಗೆ ಜೋಳರಾಜರ ೩ ವಂಶಗಳು ಆಗಿಹೋಗಿವೆ. ೧ ನೇ ವಂಶದಲ್ಲಿ ಕರಿಕಾಲ ಜೋಳನೂ, ೨ ನೇ ವಂಶದಲ್ಲಿ ಪರಾಂತಕನೂ (ಕ್ರಿ. ಶ. ೯೦೦-೯೪೦) ಮತ್ತು ೩ ನೇ ವಂಶದಲ್ಲಿ ಚಾಲುಕ್ಯ ಕಲೋತ್ತುಂಗ ಅಥವಾ ರಾಜೇಂದ್ರ ಜೋಳನೂ (ಕ್ರಿ ಶ. ೧೦೭೦ ರಿಂದ ೧೧೨೭) ಬಹಳೇ ಪ್ರಖ್ಯಾತರಾಗಿ ಹೋಗಿರುವರು. ಇವರೊಳಗಿನ ಕರಿಕಾಲ ಜೋಳನೆಂಬ ಅರಸನನ್ನು ಶ್ರೀ ಪ್ರಭುದೇವನು ಉದ್ಧಾರ ಮಾಡಿದ್ದು ಪುರಾಣಪ್ರಸಿದ್ಧವದೆ ಇದನ್ನೇ ಜೆನ್ನ ಶ್ರೀ ಪ್ರಭು (ಕ್ರಿ. ಶ. ೧೪೩೦) ಕವಿಯು ತನ್ನ ಪದ್ಯದಲ್ಲಿ ಹೇಳಿದ್ದು ಶ್ರೀ ಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ೧ ನೇ ಪುಷ್ಪದ ೨೪ ನೇ ಪುಟದೊಳಗಿನ ಒಂದನೇ ಪದ್ಯದ ೩ ನೇ ನುಡಿ ಪ್ರಾರಂಭಕ್ಕೆ "ಕರಿಕಾಲ ಜೋಳಗೆ ಒಲಿದ ದೇವನು" ಎಂದು ಉಲ್ಲೇಖಿಸಿದೆ. ಆದರೆ ಈ ಕರಿಕಾಲ ಜೋಳನು ೨ ನೇ ಇಲ್ಲವೆ ೩ ನೇ ವಂಶದೊಳಗಿನ ಪುರುಷನೆಂದು ತಿಳಿಯಲು ಕಿಂಚಿತ್ತಾದರೂ ಮಾರ್ಗ ವಿಲ್ಲವು. ೨ ನೇ ೩ ನೇ ವಂಶದೊಳಗಿನ ಕರಿಕಾಲ ಜೋಳನೆಂಬ ರಾಜನ ಸಂಗತಿಯು ಈ ವರೆಗೂ ಉಪಲಬ್ಧವಿಲ್ಲವು. ಅಂದಮೇಲೆ ಅವನು ಒಂದನೇ ವಂಶದವನೇ ಎಂದು ತಿಳಿದರೆ ಪ್ರಭುದೇವನ ಕಾಲವು. ಕ್ರಿ ಶ. ಕ್ಕಿಂತಲೂ ಹಿಂದೆ ಹೋಗುತ್ತದೆ. ಇರಲಿ. ಇದರಮೇಲಿಂದ ಪ್ರಭುದೇವನು ಕ್ರಿ. ಶ. ದ ಪೂರ್ವದಲ್ಲಿ ೧ನೇ ಶತಮಾನದಲ್ಲಿ ಇದ್ದದ್ದು ನಿಸ್ಸಂದೇಹ ಸಿದ್ಧವಾಗುತ್ತದೆ.

ಹಠಯೋಗ ಪ್ರದೀಪಿಕಾ (ಕಲ್ಕತ್ತಾ ಎಡಿಸನ್) ಎಂಬ ಒಂದು ಸ್ವತಂತ್ರ ಗ್ರಂಥವು ಅಚ್ಚಾಗಿದೆ. ಅದರ ಕರ್ತೃವು ಕಲಕತ್ತೆಯ ಕಡೆಯವನಿದ್ದು ಆ ಗ್ರಂಥವು ಇತ್ತೀಚಿಗೆ ಕಲ್ಕತ್ತೆಯಲ್ಲಿಯೇ ಅಚ್ಚಾಗಿದೆ. ಅದರಲ್ಲಿ "ಅಲ್ಲಮಃ ಪ್ರಭುದೇವಶ್ಚ ಘೋಡಾ ಜ್ಯೋಲಿಚ ಟಿಂಟಿಣೀ। ಘಾನುಕೀ ನಾದ ದೇವಶ್ಚ ಖಂಡಃ ಕಾಪಾಲಕಸ್ತಥಾ॥" ಈ ಶ್ಲೋಕವದೆ. ಈ ಪುಸ್ತಕದ ಕಾಲನಿರ್ಣಯವು ಮೊದಲಿಗೆ ಆಗಬೇಕು. ಇದೂ ಅಲ್ಲದೆ ಈ ಗ್ರಂಥದಲ್ಲಿ ಹೇಳಲ್ಪಟ್ಟಂಥ ಯೋಗಿಗಳ ಹೆಸರುಗಳ ಜೊತೆಗೆ ಶ್ರೀ ಅಲ್ಲಮ ಪ್ರಭುವಿನ ಹೆಸರಾದರೂ ಕಂಡುಬರುತ್ತದೆ. ಅಂದಮೇಲೆ ಪ್ರಭುದೇವನು ಆ ಯೋಗಿಗಳ ಸಮಕಾಲಿಕನು ಇಲ್ಲವೆ ಅವರಿಗಿಂತಲೂ

ಪೂರ್ವಿಕನು ಇದ್ದಿರಬಹುದು. ಇದು ನಿಶ್ಚಯಾತ್ಮಕವಾಗಿ ಹೇಳಲಿಕ್ಕೆ ಬಾರದಿದ್ದರೂ ಆ ಕಾಲಕ್ಕೆ ಆಸೇತುಹಿಮಾಲಯದ ವರೆಗೂ ಪ್ರಭುದೇವನ ಸಂಚಾರವೂ ಸರ್ವರ ಮುಖದಲ್ಲಿ ಆತನ ದಿವ್ಯ ನಾಮಸ್ಮರಣವೂ ಇದ್ದಿರಬಹುದೆಂದು ಅನುಮಾನವು ಹೊರಡುತ್ತದೆ.

ವೇದವ್ಯಾಸಕೃತ ಭವಿಷ್ಯೋತ್ತರ ಪುರಾಣಾಂತರ್ಗತ ಪ್ರಭುಲಿಂಗ ಲೀಲೆಯೆಂಬುದೊಂದು ೨೫ ಅಧ್ಯಾಯವುಳ್ಳ ಸಂಸ್ಕೃತ ಪುರಾಣವದೆ. ಅದರಲ್ಲಿ ಅಲ್ಲಮಪ್ರಭುದೇವನ ಸಂಪೂರ್ಣ ಚರಿತ್ರೆಯು ಹೇಳಿದೆ. ಈ ಗ್ರಂಥದೊಳಗಿನ ಭಾಷಾಸರಣಿಯು ಯಾವ ಕಾಲದೊಳಗಿನ ಭಾಷಾ ಶೈಲಿಗೆ ಹೋಲುತ್ತದೆಂಬುದನ್ನು ಮೊದಲು ಚನ್ನಾಗಿ ವಿಚಾರಿಸಿದರೆ ಪ್ರಭುದೇವನ ಕಾಲವನ್ನು ತಿಳಿಯಲು ಬಹಳೇ ಸುಲಭವಾಗುವದು.

ನಾರಾಯಣೋಪನಿಷತ್ತಿನಲ್ಲಿ "ಪರಾತ್ಪರಂ ಯನ್ಮಹತೋ ಮಹಾಂತಂ ಪರಾತ್ಪರಂ। ಪರಾದಪ್ಯಕಾತ್ಪರಂ। ಯಜ್ಜಂಗಮ ಲಿಂಗಕಂ।" ಎಂದು ವರ್ಣನೆಯದೆ; ಎಂದರೆ ಜಂಗಮಲಿಂಗವು ಶ್ರೇಷ್ಠವಾದ ವಸ್ತುವಿಗಿಂತಲೂ ಶ್ರೇಷ್ಠವೂ ಮಹತ್ತಿನಕಿಂತಲೂ ಮಹತ್ತಾದದ್ದು ಇದ್ದು ಅವ್ಯಕ್ತಕ್ಕಿಂತಲೂ ಶ್ರೇಷ್ಠವಿರುವದು. ಆದರೆ ಮಾರ್ಸ್ಡೇನಕೃತ ಹಿಂದುಸ್ಥಾನ ಇತಿಹಾಸ ಅಧ್ಯಾಯ ೩ ನೇದರಲ್ಲಿ "ಕ್ರಿ. ಶ. ದ ಪೂರ್ವದಲ್ಲಿ ೧೦೦೦-೩೦೦ ವರ್ಷಗಳ ವರೆಗೆ ಉಪನಿಷತ್ ಕಾಲವೆಂದು ಆಧುನಿಕ ಪಾಶ್ಚಾತ್ಯ ಹಾಗು ಪೌರ್ವಾತ್ಯ ಪಂಡಿತರ ಅಭಿಪ್ರಾಯವದೆ." ಎಂದು ಹೇಳಿರುವದು. ಜಂಗಮಲಿಂಗನ ಅದಿಗುರುವು ಶ್ರೀ ಪ್ರಭುದೇವನೆಂದು ಸಿದ್ಧವಾಗಿರುವದಷ್ಟೇ. ಆದುದರಿಂದ "ಮಚ್ಛಿಖಾಚಕ್ರ ಮಧ್ಯಸ್ಥಂ। ಜರಲಿಂಗಂ ನಿರಂಜನಂ। ಕೃತ್ವಾಬರ್ಹಿರ್ಗತಂ" ಮುಂತಾದ ಅಚಿಂತ್ಯಾಗಮದ ೧೦ ನೇ ಪಟಲದೊಳಗಿನ ಆಧಾರಗಳ ಮೇಲಿಂದ ಈ ಜರಲಿಂಗ ಕಾಲವನ್ನೇ ನಿರ್ಣಯಿಸುವದು. ಅಸಾಧ್ಯವೆಂದು ಕಂಡುಬರುತ್ತದೆ.

ಇದರಂತೆ ಸುಪ್ರಭೇದಾಗಮದಲ್ಲಿ "ಮದೂರ್ಧ್ವ ಮುಖಸಂಜಾತೋ ನಿರಂಜನ ಗಣೇಶ್ವರಃ। ಶೂನ್ಯಪೀಠಾಧಿಕಾರೀಚ। ಪಂಚಾಚಾರ್ಯ ಗುರುರ್ವರಃ॥" ಎಂದು ವರ್ಣನೆಯದೆ. ಎಂದರೆ ನನ್ನ ಊರ್ಧ್ವಮುಖದಿಂದ ಉತ್ಪನ್ನನಾದ ನಿರಂಜನನೆಂಬ ಗಣಾಧ್ಯಕ್ಷನು ಶೂನ್ಯಪೀಠದ ಅಧಿಕಾರಿಯಾಗಿ ಪಂಚಾಚಾರ್ಯರಿಗೆ ಶ್ರೇಷ್ಠ ಗುರುವಾಗಿ ಇದ್ದಿರುವನು.

ಮತ್ತು ಪಾರಮೇಶ್ವರಾಗಮದಲ್ಲಿ " ಇಷ್ಟೋತ್ಪತ್ತಿರ್ಗುರೋಸ್ತ್ವೇವ ಗುರೂತ್ಪತ್ತಿಸ್ತು ಜಂಗಮಾತ್। ಜಂಗಮೋತ್ಪತ್ತಿರೂನ್ಯತ್ವಾತ್। ತಚ್ಚೂನ್ಯಂ ಚರಲಿಂಗಕಂ ॥ " ಎಂದಿರುವದು; ಎಂದರೆ ಇಷ್ಟಲಿಂಗದ ಉತ್ಪತ್ತಿಯು ಗುರುವಿನಿಂದಲೂ ಗುರುವಿನ ಉತ್ಪತ್ತಿಯು ಜಂಗಮನಿಂದಲೂ ಹಾಗು ಜಂಗಮನ ಉತ್ಪತ್ತಿಯು ಶೂನ್ಯತ್ವದಿಂದಲೂ ಇದ್ದು ಆ ಶೂನ್ಯವೇ ಚರಲಿಂಗವು.

ಸ್ವಾಯಂಭು ಆಗಮದ ಎನೆಯ ಪಟಲದಲ್ಲಿ. " ಮಮಜಂಗಮ ಲಿಂಗೇನ। ಸಕಂ ಪಂಚಗಣಾಧಿಪಾಃ। ಆವಿರ್ಭೂತಾ ಮಹೀ ಭಾಗೇ। ಮದನುಜ್ಞಾನಸಾರತಃ"॥ ಎಂದು ಹೇಳಿದೆ. ಅದರಂತೆ ಶಾಕಟಾಯನದಲ್ಲಿ " ಶಿಷ್ಯಪ್ರಾಣೋ ಗುರೋರ್ದೇವೀ। ಗುರುಪ್ರಾಣಸ್ತು ಜಂಗಮಃ। ಜಂಗಮಸ್ಯ ಪ್ರಸಾದಃ ಸ್ಯಾತ್। ಸರ್ವಶಾಸ್ತ್ರೇಷು ಗೀಯತೆ" ॥ ಎಂದು ಹೇಳಿದೆ; ಎಂದರೆ ಗುರುವು ಶಿಷ್ಯನ ಪ್ರಾಣವು ಮತ್ತು ಜಂಗಮನು ಗುರುವಿನ ಪ್ರಾಣವು ಆಗಿ ಇರುವದರಿಂದ ಜಂಗಮನ ಪ್ರಸಾದವನ್ನು ಸರ್ವರೂ ಸೇವಿಸಬೇಕು ಎಂದು ಸರ್ವ ಶಾಸ್ತ್ರಗಳಲ್ಲಿ ಹೇಳಿದೆ.

ಸಿದ್ಧಾಂತ ಶಿಖಾಮಣಿಯಲ್ಲಿ " ಮದೀಯ ಲಿಂಗಸಂಭೂತಂ। ಮದ್ಭಕ್ತ ಪರಿಪಾಲಕಂ ॥ ವಿಸ್ಮೃತಾ ಮಾನುಷಾಃ ಸರ್ವೇ। ತ್ವಾವಮ್ ಭಜಂತು ಮದಾಜ್ಞಯಾ" ॥ ಎಂದು ಹೇಳಿದೆ. ಏವಂಚ ಸೂಕ್ಷ್ಮಾಗಮ, ಪಾರಮೇಶ್ವರಾಗಮ, ಸುಪ್ರಭೇದಾಗಮ, ಅಚಿಂತ್ಯಾಗಮ, ಯೋಗಜಾಗಮ, ವೀರಾಗಮ, ಸ್ವಾಯಂಭುಆಗಮ, ಉತ್ತರವಾತುಲತಂತ್ರ, ಪಾರಮೇಶ್ವರ ತಂತ್ರ, ಸನ್ಯಾಸೋಪನಿಷತ್, ನಾರಾಯಣೋಪನಿಷತ್, ಛಾಂದೋಗ್ಯಸ್ಮೃತಿ, ಅಮೃತಬಿಂದುಸ್ಮೃತಿ, ಶಾಕಟಾಯನ, ಶಂಕರ ಸಂಹಿತಾ, ಗೋರಕ್ಷಸಂಹಿತಾ, ಶಾಂಕರಭಾಷ್ಯ, ಶ್ರೀಕರಭಾಷ್ಯ, ಕ್ರಿಯಾಸಾರ, ವ್ಯಾಸೋಕ್ತ ಭವಿಷ್ಯತ್ಪುರಾಣಾಂತರ್ಗತ ಪ್ರಭುಲಿಂಗಲೀಲಾ, ಸಿದ್ಧಾಂತಶಿಖಾಮಣಿ, ಅನಾದಿ ವೀರಶೈವ ಸಾರಸಂಗ್ರಹ, ವೀರಶೈವಾಚಾರ ಪ್ರದೀಪಿಕಾ, ಪರಮಲಘು ಮಂಜೂಷಾ, ಕಾವ್ಯಪ್ರಕಾಶ, ವಿಶ್ವಗುಣಾದರ್ಶ ಚಂಪು, ವಿವೇಕಚಿಂತಾಮಣಿ, ವಚನಶಾಸ್ತ್ರ ಮುಂತಾದ ಪ್ರಮಾಣ ಭೂತ ಗ್ರಂಥಗಳಲ್ಲಿ ವಿಸ್ತಾರಸೂರ್ವಕವಾಗಿ ವರ್ಣಿಸಲ್ಪಟ್ಟಂಥ ಶ್ರೀ ಪ್ರಭುಸಾಂಪ್ರದಾಯಕ ನಿರಾಭಾರಿ ವಿರಕ್ತಜನಂಗೆ " ಆದೌತಚ್ಚರಲಿಂಗಂತು। ನಿರಂಜನ ಇತಿಸ್ಮೃತಸ್। ತ್ರೇತಾಯಾಮಾವ್ ದೈವತಂಚೈ

ಕಶ್। ನಿರ್ಮಾಯ ಇತಿ ಕೀರ್ತಿತಮ್। ದ್ವಾಪಾರೇ ನಿಷ್ಕಲಂಜೇತಿ। ವಿಖ್ಯಾತಂ ಚ ತದೇವ ಹಿ। ಕಲೌಪ್ರಭುರಿತಿಖ್ಯಾತಮ್। ತಸ್ಯ ನಾಮಾನಿ ವೈಕ್ರಮಾತ್ ॥ " ಎಂದರೆ ಈ ಚರಲಿಂಗಕ್ಕೆ ಕೃತಯುಗದಲ್ಲಿ ನಿರಂಜನವೆಂತಲೂ, ತ್ರೇತಾಯುಗದಲ್ಲಿ ನಿರ್ಮಾಯವೆಂತಲೂ, ದ್ವಾಪಾರ ಯುಗದಲ್ಲಿ ನಿಷ್ಕಲವೆಂತಲೂ ಕಲಿಯುಗದಲ್ಲಿ ಪ್ರಭುವೆಂತಲೂ ಹೀಗೆ ಕ್ರಮವಾಗಿ ಹೆಸರುಗಳು ಬಂದಿವೆ ಎಂಬ ಈ ಉತ್ತರವಾತುಲತಂತ್ರದ ಆಧಾರದಿಂದ ಯುಗ ಯುಗಾಂತರಗಳಲ್ಲಿ ಗುರುರೂಪದಿಂದ ಅವತರಿಸಿದಂಥ ಶ್ರೀ ಪ್ರಭುದೇವನ ಕಾಲವನ್ನು ನಿಶ್ಚೈಸುವದು ನಾವು ಹಿಂದೆ ಹೇಳಿದಂತೆ ಬಹಳೇ ದುಸ್ತರವಾಗಿರುವದು.

ಮೈಸೂರ ಅರ್ಚಿಯಾ ಲಾಜಿಕಲ್ ಖಾತೆಯ ಡಾಯರೆಕ್ಟರರಾದ ಮಹಾಮಹೋಪಾಧ್ಯಾಯ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ ಬಹಾದ್ದೂರ ಆರ್. ನರಸಿಂಹಾಚಾರ್ಯರು ತಮ್ಮ ಕವಿಚರಿತೆಯಲ್ಲಿ ಕ್ರಿ. ಶ. ೧೧೬೦ನೇ ಸುಮಾರಿನಲ್ಲಿ ಶ್ರೀ ಪ್ರಭುದೇವನು ಇದ್ದನೆಂದು ನಿಶ್ಚೈಯಿಸಿರುವರು. ಅದೇ ಪ್ರಭುದೇವನು ವೇದಾಗಮೋಪನಿಷತ್ತುಗಳ ಕಾಲದಲ್ಲಿಯೂ ಇದ್ದನೆಂದು ಹೇಳಿದರೆ ಅಧುನಿಕ ಪಾಶ್ಚಾತ್ಯ ಹಾಗು ಪೌರ್ವಾತ್ಯ ಪಂಡಿತರಿಗೆ ಅಸಂಭವನೀಯವೆಂದು ಕಂಡು ಬರುತ್ತದೆ. ಆದುದರಿಂದಲೇ ಮಹಾರಾಷ್ಟ್ರ ಜ್ಞಾನಕೋಶಕಾರರಾದ ಡಾಕ್ಟರ ಕೇತಕರ ಇವರಾದರೂ ಕೂಡ ತಮ್ಮ ಮಹಾರಾಷ್ಟ್ರ ಜ್ಞಾನಕೋಶ, ಭಾಗ ೬-೭ (ಅ) ಅಕ್ಷರ, ಪುಟ ೪೯೪ ರಲ್ಲಿ " ಅಲ್ಲಮಪ್ರಭು ಇವನಿಗೆ ಪ್ರಭುಲಿಂಗ ಎಂದೂ ಅನ್ನುವರು. ಇವನು ಆರಾಧ್ಯ ಜಾತಿಯ ತೆಲಗು ಬ್ರಾಹ್ಮಣ ಸಿದ್ಧನೆಂದು ತಿಳುವಳಿಕೆಯುದೆ. ಆದರೆ ಇವನು ಐತಿಹಾಸಿಕ ಪುರುಷನಿದ್ದನೆಂಬುವದರ ವಿಷಯವಾಗಿ ನಿಶ್ಚಿತವಿಲ್ಲವು. ಲಿಂಗಾಯತ ಧರ್ಮದ ಸಂಸ್ಥಾಪಕನಾದ ಬಸವನಿಗಿಂತಲೂ ಮುಂಚಿತವಾಗಿ ಈ ಪುರುಷನಿದ್ದನೆಂದು ವೀರಶೈವರು ತಿಳಿಯುತ್ತಾರೆ. ಪ್ರಭುಲಿಂಗಲೀಲೆಯೆಂಬುದೊಂದು ಕನ್ನಡ ಭಾಷೆಯಲ್ಲಿ ಗ್ರಂಥವಿದ್ದು ಅದರಲ್ಲಿ ಈತನ ವರ್ಣನೆಯು ಕಂಡು ಬರುತ್ತದೆ. ಈ ಕಾವ್ಯದಲ್ಲಿ ಪ್ರಭುಲಿಂಗನಿಗೆ ಗಣಪತಿಯ ಅವತಾರವೆಂದು ಹೇಳಿದೆ, ಹಾಗು ಪ್ರತ್ಯಕ್ಷ ಪಾರ್ವತಿಯು ಇವನನ್ನು ಪರೀಕ್ಷಿಸುವ ಕುರಿತು ತನ್ನ ಅಂಶದಿಂದ ಒಬ್ಬ ಬನವಾಸಿ ರಾಜಕನ್ಯೆಯನ್ನು ಉತ್ಪನ್ನ ಮಾಡಿದ ಕಥೆಯನ್ನು ಹೇಳಿದೆ ಈತನು ಅತ್ಯಂತ ಪವಿತ್ರ ವರ್ತನವುಳ್ಳವನೂ, ಶಾಂತನೂ, ಬಹಳ ಪ್ರವಾಸ ಮಾಡಿದವನೂ,

ಮತ್ತು ಅಲ್ಲಲ್ಲಿಗೆ ಅನೇಕ ಚಮತ್ಕಾರಗಳನ್ನು ತೋರಿಸಿದ್ದರಿಂದ ಜನರಲ್ಲಿ ಪ್ರಸಿದ್ಧಿಯನ್ನು ಪಡೆದಿರುವನೆ" ಎಂದೂ ಹೇಳಿದೆ.

"ಕೊಲ್ಹಾಪುರ ಸಂಸ್ಥಾನದೊಳಗಿನ ಅಳತೆಯೆಂಬ ಗ್ರಾಮದಲ್ಲಿ ಅಲ್ಲಮಪ್ರಭುದೇವನ ದೇವಾಲಯವಿದ್ದವು ಅದು ಅತನದಾಗಿದೆ. ಪ್ರಭು ಗಜೇಬನ ಸ್ಮರಣಾರ್ಥವಾಗಿ ದೇವಿಗೆ ಈ ಹೆಸರು ಕೊಟ್ಟಿದೆ" ಎಂದು ಒಂದು ಕಡೆಯೂ, ಮತ್ತು ಎರಡನೇ ಕಡೆಯಲ್ಲಿ ಅದೇ ಮಹಾರಾಷ್ಟ್ರ ಜ್ಞಾನಕೋಶ, ಭಾಗ ೧೦.೧೧, (ಕ) ಅಕ್ಷರ ಪುಟ ೩೦೧ ರಲ್ಲಿ "ಪ್ರಭು ಲಿಂಗಲೀಲಾ ಗ್ರಂಥವು ಷಟ್ಪದಿಯಲ್ಲಿ ಅದೆ. ಅದರ ನಾಯಕನು ಪ್ರಭು ಲಿಂಗ ಅಥವಾ ಅಲ್ಲಮ ಪ್ರಭು ಇದ್ದು ಆತನು ಬಸವನಿಗೆ ಸಹಕಾರಿಯಾಗಿದ್ದನು. ಈ ಗ್ರಂಥದಲ್ಲಿ ಪ್ರಭುಲಿಂಗನಿಗೆ ಗಣಪತಿಯ ಅವತಾರವೆಂದು ಹೇಳಿದೆ. ಒಂದು ವೇಳೆ ಪಾರ್ವತಿಯು ಸಂಸಾರ ವಿರಕ್ತಿಯ ಪರೀಕ್ಷೆ ಮಾಡುವ ಕುರಿತು ಬನವಾಸಿನಾಮಕ ಒಬ್ಬ ರಾಜಕನ್ಯೆಯಲ್ಲಿ ಪ್ರಭುಲಿಂಗನಿಗೆ ಮೋಹ ಹುಟ್ಟುವಂತೆ ತನ್ನ ಕೆಲವಂಶವನ್ನು ಹಾಕಿದಳೆಂದು ಒಂದು ಕಥೆಯಿದೆ" ಎಂದು ವರ್ಣನವದೆ. ಈ ಮೇಲಿನ ಎರಡೂ ವರ್ಣನೆಗಳನ್ನು ನೋಡಲಾಗಿ ಅಲ್ಲಮಪ್ರಭುವಿನ ವಿಷಯವಾಗಿ ಡಾಕ್ಟರ ಕೇತಕರ ಇವರು ಕೊಟ್ಟಿಂಥ ಅಭಿಪ್ರಾಯವು ಕೇವಲ ಚಾಮರಸಕೃತ ಪ್ರಭುಲಿಂಗಲೀಲೆಯ ಆಧಾರದ ಮೇಲಿಂದ ಕೊಟ್ಟಂತೆ ವಾಚಕರಿಗೆ ಸಹಜವಾಗಿ ಕಂಡು ಬರುತ್ತದೆ. ಆದರೆ ಆ ಅಭಿಪ್ರಾಯವನ್ನು ಕೂಡ ಚಾಮರಸನ ಪ್ರಭುಲಿಂಗಲೀಲೆಯನ್ನು ಚನ್ನಾಗಿ ಓದಿ ಕೊಟ್ಟಂತೆ ಕಾಣುವದಿಲ್ಲವು. ಈ ಅಭಿಪ್ರಾಯದಲ್ಲಿಯೂ ಕೂಡ ಒಂದಕ್ಕೊಂದು ಮೇಳವಿಲ್ಲವು. ಒಮ್ಮೆ ಅವರು ಅಲ್ಲಮ ಪ್ರಭುದೇವನಿಗೆ ಗಣಪತಿಯ ಅವತಾರನೆಂದು ತಿಳಿದಿರುವರು, ಎಂದರೆ ಸರಳಶುಂಡ, ವಕ್ರತುಂಡ, ಶಿವಕುಮಾರ, ಗಜಾನನ ಈತನೇ ಅವನೆಂದು ಅವರ ತಿಳುವಳಿಕೆಯಾಗಿದೆ. ಆದರೆ ವಾಸ್ತವಿಕವಾಗಿ ಅದು ಹಾಗಿರದೆ ಆ ಲಂಬೋದರ ಏಕದಂತನ ತಾಯಿತಂದೆಗಳಾದ ಪಾರ್ವತೀ ಪರಮೇಶ್ವರರ ಲಗ್ನದಲ್ಲಿ ಯಾವ ಗಣಪತಿಯ ಅಂದರೆ ಗಣಾನಾಂ ಪತಿಃ। ಎಂದರೆ ಪ್ರಮಥಗಣಗಳ ಒಡೆಯನಾದ ಯಾವ ಪರಶಿವನನ್ನು ಪೂಜಿಸಿರುವರೋ ಆದೇ ಸಾಕ್ಷಾತ್ ಶಿವಸ್ವರೂಪನಾದ ಈ ಪ್ರಭುದೇವನಿರುವನು. ಮತ್ತೊಂದು ಕಡೆಯಲ್ಲಿ ಅಲ್ಲಮ ಪ್ರಭುದೇವನು ಆರಾಧ್ಯಬ್ರಾಹ್ಮಣನಿದ್ದು ಲಿಂಗಾಯತ ಧರ್ಮದ ಸಂಸ್ಥಾಪಕನಾದ ಬಸವನಿಗಿಂತಲೂ ಮುಂಚೆ ಇದ್ದನೆಂದು ಹೇಳಿದೆ. ಬೇರೊಂದು ಕಡೆ ಇವನು ಬಸವನ ಸಹಕಾರಿಯೆಂದು ಹೇಳಿದೆ. ಒಂದು ಕಡೆ ಅಲ್ಲಮಪ್ರಭುದೇವನು ಐತಿಹಾಸಿಕ ಪುರುಷನಿದ್ದ ಬಗ್ಗೆ ನಿಶ್ಚಿಯವಿಲ್ಲವೆಂದೂ ಹಾಗು ಬೇರೊಂದು ಕಡೆ (ಮಹಾರಾಷ್ಟ್ರ ಜ್ಞಾನಕೋಶ, ಭಾಗ ೧೨ ಇದು ಪುಟ ೨೦-೨೧) ಶ್ರೀ ಬಸವನು ಚನ್ನಬಸವಗೆ ಅಲ್ಲಮ ಪ್ರಭುವಿನ ದರ್ಶನವನ್ನು ಮಾಡಿಸುವೆನೆಂದು ಆಶ್ವಾಸನ ಕೊಟ್ಟನು. ಮತ್ತು ಕಲ್ಯಾಣದಲ್ಲಿ ಬಸವ ಚನ್ನಬಸವರುಗಳಿಗೆ ಭೆಟ್ಟಿಯಾಗುವ ಕುರಿತು ಸಿದ್ಧರಾಮನೊಡನೆ ಸೊಲ್ಲಾಪುರದಿಂದ ಪ್ರಭುದೇವನು ಹೊರಟನು. ದಾರಿಯಲ್ಲಿ ಪ್ರದೇಶಗಳ ಶೋಭೆಯನ್ನು ಕಂಡು ಇವರು ಸಂತುಷ್ಟರಾದರು. ಕಲ್ಯಾಣದ ಹೊರಗಿನ ಉಪವನದ ಶೋಭೆಯನ್ನು ನೋಡುತ್ತ ಅರಮನೆಯ ಕಡೆಗೆ ಹೊರಟರು. ತದನಂತರ ಶಾಂತಿಯ ಪರಮಸ್ಥಾನವಾದ ಬಸವಪ್ರಧಾನನ ಅರಮನೆಯ ಎದುರಿಗೆ ಬರಲಾಗಿ ಬಸವನು ತನ್ನ ಸೇವಕರಿಂದ ಇವರಿಗೆ ಒಳಗೆ ಬರಹೇಳಿದನು. ಅದರೆ ಈ ಕೂಲಿಯ ಆದರವನ್ನು ಕಂಡು ಪ್ರಭುದೇವನು ಆಮಂತ್ರಣವನ್ನು ನಾಕರಿಸಿದನು. ಅಷ್ಟರಲ್ಲಿ ಚನ್ನಬಸವನು ಇದರ ಪರಿಣಾಮವು ಅತ್ಯಂತ ಅನಿಷ್ಟವಾಗಬಹುದೆಂದು ತಿಳಿದು ಪೂಜ್ಯ ಅತಿಥಿಗಳಿಗೆ ಅರ್ಘ್ಯಪಾದ್ಯಾದಿಗಳಿಂದ ಸತ್ಕಾರವಾಡಿದನು. ಪ್ರಭುದೇವನು ಸಿದ್ಧರಾಮನೊಡನೆ ಚನ್ನಬಸವನ ಅರಮನೆಯ ಬಹಿರ್ಭಾಗದಲ್ಲಿ ಕುಳಿತನು. ಯಾಕಂದರೆ ದೀಕ್ಷೆ ಇಲ್ಲದವರಿಗೆ ಒಳಗೆ ಪ್ರವೇಶವಿಲ್ಲನೆಂದು ಚನ್ನಬಸವನ ಕಟ್ಟಪ್ಪಣೆ ಇತ್ತು" ಎಂದು ಹೇಳಿದೆ. ಮತ್ತು ಅದೇ ಜ್ಞಾನಕೋಶ, ಭಾಗ ೧೨-೧೩, (ಚ) ಅಕ್ಷರ, ಪುಟ ೨೩೦ ರಲ್ಲಿ "ಆ ಮೇಲೆ ಪ್ರಭುದೇವನು ಚನ್ನಬಸವನ ಅಪ್ಪಣೆಯನ್ನು ಕೇಳಿದನು. ಅನಂತರ ಸಿದ್ಧರಾಮನು ಭವಿಷ್ಯತ್ತಾಲದ ಬಗ್ಗೆ ಪ್ರಶ್ನ ಮಾಡಿದ್ದರಿಂದ ಚನ್ನಬಸವನು ಹೇಳತೊಡಗಿದನು. ಪ್ರಭುದೇವನು ಸಂಚರಿಸುತ್ತ ಕಲ್ಯಾಣಕ್ಕೆ ಬಂದು ಬಸವನ ಯಜ್ಞಕುಂಡದ ಮೇಲೆ ಆರೋಹಣ ಮಾಡುವನು. ಅದರಿಂದ ಸರ್ವ ಜಂಗಮರು ಸಿಟ್ಟಾಗುವರು. ಮುಂದೆ ಆ ಪ್ರಭುದೇವನೊಬ್ಬನೇ ಯಾವತ್ತೂ ಅನ್ನವನ್ನು ತಿಂದು ಯಾವತ್ತೂ ಜಂಗಮರಿಗೆ ಸಂತುಷ್ಟ ಮಾಡುವನು." ಎಂದು ವರ್ಣನವದೆ. ಈ ಯಾವತ್ತೂ ವಿವೇಚನೆಗಳ ಮೇಲಿಂದ ಅಲ್ಲಮಪ್ರಭುದೇವನು ಬಸವನ ಒಬ್ಬ ಸಹಕಾರಿಯಾಗಿದ್ದನೆಂದು ಮಹಾರಾಷ್ಟ್ರ

ಜ್ಞಾನಕೋಶಕಾರರ ಅಂಬೋಣವದೆ. ಒಮ್ಮೆ ಪಾರ್ವತಿಯು ಪರೀಕ್ಷೆಯ ದೆಸೆಯಿಂದ ಬನವಾಸಿ ರಾಜಕನ್ಯೆಯನ್ನು ಕಳಿಸಿದಳೆಂದೂ ಮತ್ತೊಂದು ಕಡೆ ಬನವಾಸಿ ನಾಮಕ ರಾಜಕನ್ಯೆಯನ್ನು ಕಳಿಸಿದಳೆಂದೂ ಹೇಳಿದೆ. ಬನವಾಸಿ ಇದು ಮನುಷ್ಯರ ಹೆಸರು ಇರದೆ ಒಂದು ಪ್ರಾಂತದ ಹೆಸರು ಅದೆ. ಏವಂಚ ಈ ಸಂಗತಿಯನ್ನು ಹೇಳುವಾಗ್ಗೆ ಡಾಕ್ಟರ ಕೇತಕರ ಇವರು ಎರಡನೇಯವರ ಬೊಗಕೆಯಿಂದ ನೀರು ಕುಡಿದಂತೆ ಆಗಿದೆ. ಹೀಗೆ ಮಾಡದೆ ಅವರು ಈ ಸಂಗತಿಯನ್ನು ಚನ್ನಾಗಿ ವಿಚಾರ ಮಾಡಿ ಬರೆಯ ಬೇಕಾಗಿತ್ತು. ಹಾಗೇನೂ ಮಾಡಿದಂತೆ ಕಂಡುಬರುವದಿಲ್ಲವು. ಅದುದರಿಂದ ಕೆಳಗಿನ ವಿಚಾರಗಳನ್ನು ಸೂಕ್ಷ್ಮ ರೀತಿಯಿಂದ ವಿಚಾರ ಮಾಡಿದರೆ ವಾಚಕರ ಸಂಶಯಗಳು ತನ್ನಷ್ಟಕ್ಕೆ ತಾವೇ ದೂರವಾಗಿ ನಮ್ಮ ಅಭಿಪ್ರಾಯದ ಸತ್ಯತೆಯು ಗೊತ್ತಾಗಬಹುದು. ಆ ವಿಚಾರಗಳು ಕೆಳಗಿನಂತೆ:—

ಜಯಕರ್ನಾಟಕ ವರ್ಷ ೨, ಅಂಕಲ, ಜೇಷ್ಠ ಶುದ್ಧ ೧೫, ಶಾಲಿವಾಹನ ಶಕೆ ೧೮೪೬ ಪುಟ ೬೨೪ ರಲ್ಲಿ "ಶತಾಯುರ್ವೈ ಪುರುಷಃ" (ವೇದವಾಕ್ಯ) ಈ ವಾಕ್ಯವನ್ನು ನೋಡಿದರೆ ಮನುಷ್ಯನ ಜನ್ಮಸಿದ್ಧ ಆಯುಷ್ಯವು ೧೦೦ ವರ್ಷದಿದ್ದು ಸದಾಚಾರದಿಂದ ಅದಕ್ಕಿಂತಲೂ ಹೆಚ್ಚ ಮತ್ತು ದುರಾಚಾರದಿಂದ ಅದಕ್ಕಿಂತಲೂ ಕಡಿಮೆಯೂ ಮಾಡಲಿಕ್ಕೆ ಬರುತ್ತದೆ. ಅದು ಹೇಗಂದರೆ, ಮಹಾಭಾರತ ಯುದ್ಧದ ಕಾಲದಲ್ಲಿ ಜೀವಂತವಿದ್ದ ವೀರರ ವಯೋವಾನವು ಭೀಷ್ಮಾಚಾರ್ಯ ೧೭೦ ವರ್ಷ, ಧೃತರಾಷ್ಟ್ರ ೧೫೦, ವ್ಯಾಸಮಹರ್ಷಿ ೧೫೫, ಶ್ರೀಕೃಷ್ಣ ೧೨೫, ವಸುದೇವ ೧೫೦, ದೇವಕಿ ೧೪೦, ಈ ಪ್ರಕಾರವಾಗಿ ಇತ್ತು. ಆ ಕಾಲಕ್ಕೆ ಈ ಯಾವತ್ತರು ಕೇವಲ ಜೀವ ಧಾರಿಗಳಾಗಿರದೆ ಅಮರಣ ಬಹಳೇ ಸಶಕ್ತರಾಗಿದ್ದರು. ಧೃತರಾಷ್ಟ್ರನು ತನ್ನ ವಯಸ್ಸಿನ ೧೦೬ ನೇ ವರ್ಷದಲ್ಲಿ ಭೀಮನ ಉಕ್ಕಿನ ಮೂರ್ತಿಯನ್ನು ಹಿಚಿಕಿ ಅದನ್ನು ಪುಡಿ ಪುಡಿ ಮಾಡಿದನು. ಬಾಯಬಲ್ಲಿನಲ್ಲಿ ಅಬ್ರಾಹೀಮನು ೧೭೫ ವರ್ಷ ಇದ್ದನೆಂದೂ ಐಝಾಕನು ೧೮೦ ವರ್ಷ ಇದ್ದನೆಂದೂ ಹೇಳಿದೆ. ಹಿಂದುಸ್ಥಾನದೊಳಗಿನ ಆಧುನಿಕ ಜನರಲ್ಲಿ ಕುರಬರ ಮಲ್ಲಾರಿಯು ೧೧೫ ವರ್ಷ, ರಾಮಶೇಟಿ ಭುರಿಕಿ, ಸಾತಾರಾ, ೧೦೮ ವರ್ಷ, ಅಹಮ್ಮದಖಾನ ಕೊಲ್ಹಾಪೂರ ೧೦೮ ವರ್ಷ, ನಿಜಾಮ ಉಲಮುಲ್ಕ ೧೦೮ ವರ್ಷ, ರಾಮಲಾಲ ಕಾಗಡಿ ಹರಿದ್ವಾರ ೧೦೪

ವರ್ಷ, ಪಂಡಿತ ಪ್ರಭಾಕರ ಶಾಸ್ತ್ರಿ ೧೦೮ ವರ್ಷ ಈ ಪ್ರಕಾರ ಬಾಳಿದರೆಂದು ಹೇಳಿದೆ. ಯುರೋಪದೊಳಗಿನ ಆಧುನಿಕ ಜನರು ಥಾಮಸ್ ಪಾರ್ ೧೫೨ ವರ್ಷ, ಮೇರಿ ಬಿಂಜಲ್ ೧೧೨ ವರ್ಷ, ಹೆನರಿ ಜೋಕಿನ್ಸ್ ೧೬೯ ವರ್ಷ, ಕೌನ್ಸರಿನ್ ಪೆಂಡ ೧೪೦ ವರ್ಷ ಜೀವಿಸಿದ್ದರೆಂದು ಹೇಳಿದೆ. ರೋಮಾನಿಯಾ, ಬಲ್ಗೇರಿಯಾ ಮುಂತಾದ ದೇಶಗಳಲ್ಲಿ ಈಗ್ಗೂ ಕೂಡ ೧೦೦ ವರ್ಷ ವಯಸ್ಸಿನ ಜನರು ಸಿಗುತ್ತಿರುವರು." ಎಂದು ಹೇಳಿದೆ. ಇದು ಅಲ್ಲದೆ ಥಾಮಸ್ ಕಾರ್ನ ಶೋಲ್ಡೀಚ್ (ಇಂಗ್ಲಂಡ) ಇವನು ಕ್ರಿ. ಶ ೧೫೩೧ ರಲ್ಲಿ ಹುಟ್ಟಿ ಕ್ರಿ. ಶ. ೧೭೪೮ ರಲ್ಲಿ ಮರಣಹೊಂದಿದನು. ಅಂದರೆ ಇವನು ಒಟ್ಟಿಗೆ ೨೧೭ ವರ್ಷ ಜೀವಂತನಿದ್ದನು. ಇವನ ಜೀವಮಾನದ ಕಾಲದಲ್ಲಿ ೪, ೫, ೬, ೭ ನೆಯ ಹೆನ್ರಿಗಳು ೪, ೫, ೬ ನೆಯ ಎಡ್ವರ್ಡರು ೩ನೇ ರಿಚರ್ಡನು ಹೀಗೆ ಒಂಭತ್ತು ಮಂದಿ ಅರಸರೂ ಮೇರಿ ಹಾಗು ಇಲಿಝಾ ಎಂಬ ರಾಣಿಯವರೂ ಹೀಗೆ ೧೧ ಮಂದಿ ಇಂಗ್ಲಂಡದ ರಾಜ್ಯವನ್ನ ನಡಿಸಿದರೆಂದು ಹೇಳಿದೆ. ತಾರೀಖು ೫೦-೬-೧೯೩೨ನೇ ಇಸ್ವಿಯ ಲೋಕಮತದಲ್ಲಿ "ಚೀನದೊಳಗಿನ ಪಾಂಗ ಚುವಾ ಎಂಬ ಹೆಸರಿನ ಒಂದು ಹಳ್ಳಿಯಲ್ಲಿ ಅಜಾಂಗಯೂನ ಈ ಹೆಸರಿನ ಒಬ್ಬ ಮುದಕನು ೨೨೫ ವರ್ಷದವನಿದ್ದು ಸದ್ಯಕ್ಕೆ ಜೀವಂತನಿರುವನು. ಅವನಿಗೆ ೧೪ ಮಂದಿ ಹೆಂಡರುಗಳಾಗಿದ್ದು ಅವರಿಂದ ಒಂದು ನೂರಾ ಯಂಭತ್ತು ಹುಡುಗರಿರುವರೆ"ಂದು ಹೇಳಿದೆ. ಝೆರೋ ಅಗಾ (ಕಾನ್ಸಟಾಂಟಿನೋಪಲ್) ಇವನು ಕ್ರಿ. ಶ. ೧೭೭೫ ರಲ್ಲಿ ಹುಟ್ಟಿದನು. ಈಗ್ಗೆ ಇವನು ಜೀವಂತನಿದ್ದು ಕೂಲಿ ಕೆಲಸವನ್ನು ಮಾಡುತ್ತಾನೆ. ಇವನ ವಯಸ್ಸು ಈಗ್ಗೆ ೧೬೦ ಆದೆ. ೧೮೫ ನೇ ವರ್ಷದಲ್ಲಿ ಇವನಿಗೆ ಮಗ ಹುಟ್ಟಿದನು. ೧೦೫ನೇ ವರ್ಷದಲ್ಲಿ ಇವನ ಯಾವತ್ತೂ ಹಲ್ಲುಗಳು ಬಿದ್ದು ತಿರುಗಿ ಬಂದವು. ಬಾಲ್ಟಿಮೋರದಲ್ಲಿ ಇರುವಾಕ ಹೆಶಾಯ ಫಸ್ಕೋ ಇವನು ಈಗ್ಗೆ ೧೧೩ ವರ್ಷದವನಿರುವನು. ಇವನ ಸಾರಾಯಿಂಬ ಹೆಂಡತಿಯು ೧೧೧ ವರ್ಷದವಳಿರುವಳು. ಕ್ರಿ. ಶ. ೧೯೨೫ ಡಿಸೆಂಬರದ ಫಿಜಿಕಲ್ ಕಲ್ಚರ, ಪುಟ ೨೯, ೧೩೬, ೧೩೮ ಇವುಗಳಲ್ಲಿ "ರಾಕ್ ಫೆಲರ ಸಂಸ್ಥೆಯ ಡಾಕ್ಟರ ಅಲೆಕ್ಸಿ ಕ್ಯಾರೆಲ್ ಮತ್ತು ಜೋಹನ್ಸಹಾಫ ಕಿನ್ಸನದ ಡಾಕ್ಟರ ರೆಡಮಂಡ್ ಪರೆಲ್ ಈ ಉಭಯತರು ಕೆಲವು ಪ್ರಯೋಗಗಳನ್ನ ಮಾಡಿ ಪ್ರಾಣಿಗಳ ಸ್ನಾಯುಗಳು ಅಮರವಿರುತ್ತವೆಂದು ಸಿದ್ಧ

ಮಾಡಿರುವರು. ಪ್ರಾಣಿಗಳ ಪ್ರಾಣಕೋಶ (ಶೆಲ್ಸ) ಗಳಲ್ಲಿ ಏನೂ ಹೆಚ್ಚು ಕಡಿಮೆ ಮಾಡದಿದ್ದರೆ ಅವು ಜೀವಂತ ಉಳಿದು ನಿಯವಿುತತನದಿಂದ ಬೆಳೆಯುತ್ತವೆ. ಸೂಕ್ಷ್ಮ ಜಂತುಗಳಿಂದ (ಬ್ಯಾಕ್ಟೀರಿಯಗ) ರಕ್ಷಣ ಮಾಡಿ ಕೆಲವು ರಸಾಯನ ದ್ರವ್ಯದಲ್ಲಿ ಹಾಕಿ ಇಟ್ಟರೆ ಜೀವಂತ ಕೋಳಿಯ ಕಾವಿನ ಹೊರ್ತು ಕೋಳಿ ಮರಿಗಳ ಸ್ನಾಯುಗಳು ಬೆಳೆಯುತ್ತವೆ. ಇದರ ಮೇಲಿಂದ ಕಂಡುಬರುವದೇನಂದರೆ, ಮಾನವ ಪ್ರಾಣಿಗಳ ಶಾರೀರಿಕ ಹಾಗು ಮಾನಸಿಕ ಶಕ್ತಿಗಳು ಚನ್ನಾಗಿ ಉಳಿಯುವಂತೆ ಇಟ್ಟರೆ ಅವು ಸಾಮಾನ್ಯವಾಗಿ ತಿಳಿದಿರುವ ಆಯುರ್ಮಾನದ ಕಾಲಕ್ಕಿಂತಲೂ ಹೆಚ್ಚು ದಿವಸ ನಿಶ್ಚಯವಾಗಿ ಬಾಳುತ್ತವೆ. ಇಂಥ ಶಾಸ್ತ್ರೀಯ ಪ್ರಯೋಗಗಳು ಮೊಟ್ಟಮೊದಲು ಜರ್ಮನಿಯಲ್ಲಿ ಆರಂಭವಾಗಿ ತೀವ್ರವೇ ಅಮೇರಿಕೆಯು ಲ್ಲಿಯೂ ಕೂಡ ಅವುಗಳ ಪ್ರಸಾರವಾಯಿತು. ಹೀಗೆ ಮೆಲ್ಲಮೆಲ್ಲನೆ ಈ ರಾಸ್ತ್ರೀಯ ಪ್ರಯೋಗಗಳು ಇಂಗ್ಲಂಡದಲ್ಲಿಯೂ ಆರಂಭವಾದವು. ಈ ವರೆಗೆ ಈ ಶಾಸ್ತ್ರದ ಮೇಲೆ ಸುಮಾರು ಇರವತ್ತು ಪ್ರಸಿದ್ಧ ಡಾಕ್ಟರರು ಉತ್ತಮ ಗ್ರಂಥಗಳನ್ನು ಬರೆದಿರುವರು. ಅವುಗಳೊಳಗಿನ ಕೆಲವು ಗ್ರಂಥಗಳು ಬಹಳೇ ಪ್ರಸಿದ್ಧವಿರುವವು. (೧) ಡಾಕ್ಟರ ಜೆಂಡಿ ಡ್ರಿಕ್ಟಲಸ್ಸ ಇವನ ಸ್ವಾಭಾವಿಕ ಗುಣದ ಶಾಸ್ತ್ರದ ಇತಿಹಾಸವು. (೨) ಹೋರ್ಯಾಸ ಫ್ಲೇಚರ ಇವನ "ಹೇಗೆ ತಿನ್ನಬೇಕು?" (೩) ಬರ್ನರ ವ್ಯಾಕ ಫೆಡನ್ ಇವನ "ಏನು ತಿನ್ನಬೇಕು?" ಮತ್ತು (೪) ಉತ್ತರ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಂದ ಪ್ರಸಿದ್ಧವಾದ "ಹೇಗೆ ಜೀವಿಸಬೇಕು" (೫) ಸ್ಯಾಂಡ ಫೋರ್ಡ ಜೆನಟ್ ಇವನ "ಮುಪ್ಪು ಅದರ ಕಾರಣಗಳು ಮತ್ತು ಅದನ್ನು ಹೋಗಲಾಡಿಸುವ ಉಪಾಯಗಳು." (೬) ಎಡಾಫಜಸ್ಟ ಇವನ "ನಿರಂತರ ಹೇಗೆ ಇರಬೇಕು ಮತ್ತು ಸ್ವಾಭಾವಿಕ ಗುಣವನ್ನು ಹೇಗೆ ಹೊಂದಬೇಕು" ಇತ್ಯಾದಿ. ಇದು ಆದಿಭೌತಿಕ ವಿಚಾರವಾಯಿತು. ಆಧ್ಯಾತ್ಮಿಕ ರೀತಿಯಿಂದ ಯಾರಿಗಾದರೂ ಇದರ ವಿಚಾರ ಮಾಡುವದು ಅವಶ್ಯವಿದ್ದರೆ ಅವರು ಅಗತ್ಯವಾಗಿ ಈ ವಿಷಯದ ಮೇಲಿನ ಪಾತಂಜಲ ಯೋಗಶಾಸ್ತ್ರವನ್ನೂ ಹಾಗು ಅದರ ಮೇಲಿನ ಟೀಕಾತ್ಮಕ ಗ್ರಂಥಗಳನ್ನೂ ಓದತಕ್ಕದ್ದು. ಸ್ವಾಮಿ ವಿವೇಕಾನಂದರು ತಮ್ಮ ಪುಸ್ತಕದ ೧ ನೆಯ ಸಂಪುಟದ ೩೦೬ ನೆಯ ಪುಟದಲ್ಲಿ "ಪ್ರಥಾವ್ಯಸ ತೇಜೋ ನಿಲಯೇ ಸಮುಧ್ಭಿತೇ। ಪಂಚಾತ್ಮಕೆ ಯೋಗಗ್ನಿ ಶರೀರ ಪ್ರವೃತ್ತೇ॥ ನತಸ್ಯ ರೋಗೋ ನ ಜರಾ ನ ಮೃತ್ಯುಃ। ಪ್ರಾಪ್ತಸ್ಯ

ಯೋಗಾಗ್ನಿಮಯಂ ಶರೀರಂ॥ ಎಂದರೆ ಯೋಗಾಭ್ಯಾಸಿಗಳು ಪಂಚ ಭೂತಗಳಿಂದ ಆಗುವ ಗುಣಧರ್ಮಗಳನ್ನು ತಿಳುಕೊಂಡರೆ ಅವರಿಗೆ ಯೋಗವು ಸಿದ್ಧಿಸಿತೆಂದು ಹೇಳಬಹುದು. ಅವರಿಗೆ ಮುಪ್ಪು, ಮರಣ ಇವೆ. ವ್ಯಾಧಿಯು ಬರಲಾರವು ಅವರ ಶರೀರವು ಯೋಗಾಗ್ನಿಯಿಂದ ದಗ್ಧವಾಗಿರುತ್ತದೆ," ಎಂದು ಹೇಳಿರುವರು. ಅದೇ ಪುಸ್ತಕದ ೨೪೩, ೨೪೪, ೨೪೫ ನೇ ಪುಟಗಳಲ್ಲಿ "ಕ್ಲೇಶ ಮೂಲಃ ಕರ್ಮಾಶಯೋ ದೃಷ್ಟಾದೃಷ್ಟ ಜನ್ಮವೇದನೀಯಃ। ಎಂದರೆ ಯೋಗಿಗಳು ತಮ್ಮ ಭೌತಿಕ ಶರೀರವನ್ನು ಬದಲು ಮಾಡುತ್ತಾರೆ. ಅವರು ಶರೀರದ ರಚನೆಗಳಲ್ಲಿ ಕೋಗಾದಿಗಳು ಸೇರದಂತೆ ಸ್ಥಿತ್ಯಂತರ ಮಾಡುತ್ತಾರೆ. ಅದಕ್ಕೆ ನಾವು ಮರಣವೆಂದೆನ್ನುತ್ತೇವೆ. ಮನುಷ್ಯನ ಸ್ನಾಯುಗಳಲ್ಲಿ ಆತ್ಮನು ಸಂಚರಿಸುತ್ತಿದ್ದರೆ ಅವನಿಗೆ ನಾವು ಜೀವಂತನೆಂದೂ ಮತ್ತು ಈ ಕಾರ್ಯವು ನಿಂತ ಕೂಡಲೆ ಆತನು ಮೃತನಾದನೆಂದೂ ಹೇಳುತ್ತೇವೆ. ಆದರೆ ಮನುಷ್ಯನು ಈ ಎರಡೂ ಕಾರ್ಯಗಳಿಗೆ ಮಿಕ್ಕಿದವನಾವರೆ ಆತನಿಗೆ ಜನನ ಮರಣಾದಿಗಳೇ ಇಲ್ಲವು. ನಾವು ಈ ಭೌತಿಕ ಶರೀರದ ಒಡೆಯರು. ನಾವು ಅದನ್ನು ಮನಬಲ್ಲಂತೆ ಮಾಡಬಹುದು. ಇದು ನಮಗೆ ಸಿದ್ಧಿಸಿದ್ದಾದರೆ ಮನಬಲ್ಲಂತೆ ನಾವು ತಾರುಣ್ಯವನ್ನು ಹೊಂದಬಹುದು. ಆ ಮೇಲೆ ನಮಗೆ ಜನನ ಮರಣ ಹಾಗು ರೋಗಾದಿಗಳೇ ಇಲ್ಲವು" ಎಂದು ಹೇಳಿರುವರು. ಇದಕ್ಕಿಂತಲೂ ಹೆಚ್ಚಿನ ಸಂಗತಿಗಳು ಬೇಕಾಗಿದ್ದರೆ ಅವರು ಅಗತ್ಯವಾಗಿ ಶ್ರೀ ಸ್ವಾಮಿ ವಿವೇಕಾನಂದರ ಯೋಗ ವಿಷಯದ ಮೇಲಿನ ವ್ಯಾಖ್ಯಾನಗಳನ್ನು ಓದಬೇಕು; ಎಂದರೆ ಮನುಷ್ಯನಿಗೆ ತನ್ನ ಆಯುಷ್ಯವನ್ನು ಹೇಗೆ ಹೆಚ್ಚಿಸಲಿಕ್ಕೆ ಬರುತ್ತದೆ ಎಂಬುವದು ಸಹಜವಾಗಿ ಮನವರಿಕೆಯಾಗಬಹುದು. ಶ್ರೀ ಯೋಗಿಂದ್ರರವರ ಯೋಗ ಅಥವಾ ಆರೋಗ್ಯ ಶಾಸ್ತ್ರ, ಪುಟ ೨೦ ರಲ್ಲಿ "ಪ್ರಾಣಿ ಮತ್ತು ವನಸ್ಪತಿ ಇವುಗಳ ಗುಣಧರ್ಮಗಳನ್ನು ತಿಳಿಯುವ ವಿದ್ಯೆಯನ್ನು ಪಡೆದವರಲ್ಲಿ ಹೆಸರಾದ ಡಾಕ್ಟರ ಹ್ಯಾಲಿಹೌವಿವ್ವರ ಮೊದಲಾದವರು ಮುಪ್ಪಿನಿಂದ ಮರಣ ಹೊಂದಿದರು. ತೀರ ವಿರಳವೆಂದು ಒಪ್ಪಿರುವರು. ಮರಣದ ಸಾಧಾರಣ ಕಾರಣಗಳು ಮತ್ತು ಇಲ್ಲವೆ ಅಪಾಯವೆಂದು ಹೇಳಬಹುದು. ಇವುಗಳಲ್ಲಿ ನಾವು ವ್ಯಾಧಿಗಳನ್ನೂ ಸೇರಿಸಬಹುದು. (ಡಾಕ್ಟರ ಡಬ್ಲ್ಯು ಡಿ. ಹಾಲಿಬರ್ಟನ್, ಎಮ್. ಡಿ., ಇವರ ಪ್ರಾಣಿ ಮತ್ತು ವನಸ್ಪತಿಗಳ ಗುಣಧರ್ಮ ತಿಳಿಯುವ ಕೈಪಿಡಿ, ಪುಟ ೯೬೭) ತಾರುಣ್ಯದಲ್ಲಿ ಮನುಷ್ಯನ ಸತ್ವವು ಅಥವಾ

ಚೈತನ್ಯವು ಹೆಚ್ಚಿದಾಗ್ಗೆ ಅನೇಕ ರೋಗಗಳು ದೂರಾಗುವವು; ಆದರೆ ಶಕ್ತಿಯುವ ಶಕ್ತಿಯು ವಯಸ್ಸು ಅದಾಗ್ಗೆ ಕುಗ್ಗುತ್ತಹೋದರೆ ಕೆಲವು ರೋಗಗಳು ರೂಢವಾದ ಆಲಸ್ಯದಿಂದ ಬಹಳವಾಡಿ ಗೊತ್ತಾಗದೆ ಮಹತ್ವವ ಶರೀರದ ಭಾಗಕ್ಕೆ ಅಂಟಿಕೊಂಡು ಅವುಗಳ ಉಪಟಳವನ್ನು ತಡಿಯ ಲಿಕ್ಕೆ ಶರೀರವು ಅಸಮರ್ಥವಾಗುತ್ತದೆ. ಇದರಿಂದಲೇ ಮನುಷ್ಯನ ಜೀ ಹಾಸವು ಮುಗಿಯುತ್ತದೆ. ಇದಕ್ಕೇನೇ ನಾವು ಮರಣವೆಂದೆನ್ನುತ್ತೇವೆ. ಮನುಷ್ಯನಿಗೆ ೧೦೦ ವರ್ಷಗಳನ್ನು ಮಿಕ್ಕಿ ಅನಿಯಮಿತ ಅವಧಿಯ ವರೆಗೆ ಬಾಳಲಿಕ್ಕೆ ಶಕ್ಯವಿದೆ ಎಂದು ಇತ್ತೀಚಿನ ಎಷ್ಟೋ ನಾಮಾಂಕಿತ ಡಾಕ್ಟರರು ಒಪ್ಪಿರುವರು. ೨೦೦ ವರ್ಷಗಳಿಗಿಂತಲೂ ಹೆಚ್ಚಿಗೆ ಸಶಕ್ತರಾಗಿ ಬಾಳಿದವರ ಉದಾಹರಣೆಗಳುಂಟು. ಯೋಗಾಭ್ಯಾಸಿಗಳು ೩ ಶತಮಾನಗಳಿಗಿಂತಲೂ ಹೆಚ್ಚಿಗೆ ಬಾಳಿದವರ ಉದಾಹರಣೆಗಳನ್ನು ಕೊಡುವರು. (ಜ್ಯೋತ್ಸ್ನೆ ಎಂಬ ಟೀಕಾ ಸಹಿತ ಇರುವ ಹಠಯೋಗ ಪ್ರದೀಪಿಕಾ, ಶ್ಲೋಕಗಳು ೧, ೫, ೬, ೭, ೮ಹಾ ಮತ್ತು ಟ್ರಾಯರ ಕೃತ ಪರ್ಶಿಯನ ದಬಿಸ್ತಾನದ ಭಾಷಾಂತರ, ೨ ನೆಯ ಪುಸ್ತಕ, ಪುಟ ೧೩೭-೧೩೮, ಕ್ರಿ. ಶ. ೧೮೪೩ ನೆಯ ಆವೃತ್ತಿ) ಮನುಷ್ಯನಿಗೆ ೩೦೦ ವರ್ಷಗಳ ಆಯುಷ್ಯವೆಂಬುವದು ಕೇಳಿದ ಕೂಡಲೆ ಈಗ್ಯೆ ಎಷ್ಟು ಅಗಾಧವೆನಿಸುತ್ತದೆಯೋ ಅಷ್ಟು ಹಿಂದಿನ ಕಾಲಕ್ಕೆ ಅಸಿಸುತ್ತಿದ್ದಿಲ್ಲವೆಂದು ಬರ್ನಾರ್ಡಶಾ ಎಂಬವನು ತನ್ನ ಪ್ರಸಿದ್ಧ ಗ್ರಂಥದಲ್ಲಿ ಹೇಳಿದ್ದು ನಿಜವೆಂದು ತೋರುತ್ತದೆ. ಸದ್ಯದ ಕೃತ್ರಿಮ ಇರುವಿಕೆಯ ಸ್ಥಿತಿಗತಿಯ ಮೇಲಿಂದ ಬರ್ನಾರ್ಡಶಾನ ಅಭಿಪ್ರಾಯದಲ್ಲಿ ಕಿಂಚಿತ್ ಅತಿಶಯೋಕ್ತಿಯು ಇರುವದೆಂದು ಎನಿಸಬಹುದು. ಮುಂದೆ ಯಾವ ಕಾಲಕ್ಕೆ ಮಾನವನ ಆಯುಷ್ಯ ಮರ್ಯಾದೆಯು ೩೦೦ ವರ್ಷದ್ದು ಆಗುವದೆಂಬದನ್ನ ಹೇಳಲಿಕ್ಕೆ ನಮಗೆ ಅಸಾಧ್ಯವು. ಆದರೆ ಈ ಶಾಸ್ತ್ರೀಯ ಯುಗದಲ್ಲಿ ಈ ಸಂಗತಿಯು ಸಹಜವಾಗಬಹುದು. ೧೯ನೆಯ ಶತಮಾನದ ಒಂದು ಸಂಜಿಕೆಯಲ್ಲಿ ಡಾಕ್ಟರ ಎಫ್. ಎ. ಇ. ಕ್ರೂ ಇವರು ಈಗ್ಗೆ ಒಂದು ಹುಳಕ್ಕೆ ತಾರುಣ್ಯವು ಪ್ರಾಪ್ತವಾಗುವದು ಶಕ್ಯವಿದೆ ಎಂದು ಅಂದಿರುವರು. ಪ್ಲೆನೇರಿಯಾ ಎಂಬದೊಂದು ಮುಸ್ಸಾದ ಹುಳವನ್ನು ಉಪವಾಸ ಇಟ್ಟರೆ ಅದರ ತೂಕವು ೨೫ ರಿಂದ ೬೦ ವರೆಗೆ ಕಡಿಮೆಯಾಗುವದು. ಮತ್ತು ಅದೇ ಆಕಾರದ ತರುಣ ಹುಳದಲ್ಲಿದ್ದಷ್ಟೇ ಪೋಷಕ ದ್ರವ್ಯಗಳು ಅದರಲ್ಲಿ ಸಿಗುತ್ತವೆ. ಮತ್ತು ಅದು ಚಿಕ್ಕ ವಯಸ್ಸಿನದು ಕಾಣುವದು. ಇದಲ್ಲದೆ ಅದು ನಿಜವಾಗಿ ಚಿಕ್ಕ

ದನ್ನು ಪೋಷಣ ಮಾಡಿದಂತೆ ಪ್ರಾಢವಾಗಿ ಬೆಳೆಯುತ್ತದೆ. ಮೇಲಾಗಿ ಶಕ್ತಿ ಪ್ರಯೋಗವನ್ನು ಮೇಲಿಂದಮೇಲೆ ಮಾಡಿದರೆ ಅದರ ಆಯುಷ್ಯವು ಎಂ ಪಾಲು ಹೆಚ್ಚಿಗೆ ಬೆಳೆಯುವದು. ನಿಯಮಿತವಾದ ಉಪವಾಸವು ಮಾನವನಲ್ಲಿಯೂ ವಿಶೇಷ ಕ್ರಾಂತಿಯನ್ನುಂಟುಮಾಡಿದೆಯೆಂದು ಡಾಕ್ಟರ ಕ್ಯೂರವರ ಅಭಿಪ್ರಾಯವದೆ. ತಾರುಣ್ಯ ಪ್ರಾಪ್ತಿಯ ವಿದ್ಯೆಯನ್ನು ಬಲ್ಲಂಥ ಏಂದುಸ್ತಾನದೊಳಗಿನ ಯೋಗಿ ಜನರು ಸಾವಿರಾರು ವರ್ಷಗಳ ಪೂರ್ವದಲ್ಲಿ, ಎಂದರೆ ಯೇಸುಕ್ರಿಸ್ತನ ಮರಣದ ಪೂರ್ವದಲ್ಲಿ, ಕೆಲವು ಅಮೌಲ್ಯವಾದ ಉದಾಹರಣೆಗಳಿಂದ ಇದನ್ನು ಸಿದ್ಧವಾಡಿರುವರು ಆವರ ಅನುಭವಗಳು ಈಗಿನ ರಸಾಯನ ಕಾಲದಲ್ಲಿ ಹೊಸದಾಗಿ ಶೋಧಿಸಿದ ಪ್ರಯೋಗಗಳಿಗೆ ಸರಿ ಬೀಳುತ್ತವೆಯೆಂದು ನನ್ನ ಸ್ವಂತ ಅನುಭವದಿಂದ ನಾನು ವಾಚಕರಿಗೆ ಹೇಳಬಲ್ಲೆನು. ಡಾಕ್ಟರ ಫಿಸ್ಕಿ ಮತ್ತು ಫೀಶರ ಎಂಬ ಪ್ರಸಿದ್ಧ ವೈದ್ಯರು ರಸಾಯನ ಶಾಸ್ತ್ರದ ಶೋಧವು ಹೆಚ್ಚಾದಂತೆ ಆಯಷ್ಯಮರ್ಯಾದೆಯು ಇಂತಿಷ್ಟೇ ಎಂದು ಗೊತ್ತಾಗುವದಿಲ್ಲವೆಂದು ಹೇಳಿರುವರು. ಮನುಷ್ಯನ ಮರಣದ ಬಗ್ಗೆ ಅನೇಕ ಕಾರಣಗಳಿರುವವು. ಆದರೆ ಮನುಷ್ಯನು ಸಾಯಲೇ ಬೇಕೆಂಬ ಬಗ್ಗೆ ಯೋಗ್ಯ ಕಾರಣಗಳು ಎಲ್ಲಿಯೂ ಹೇಳಿಲ್ಲವು. ('ಹೇಗೆ ಬದುಕಬೇಕು' ೧೫ ನೆಯ ಆವೃತ್ತಿ. ಪುಟ ೧೬೧) ಮನುಷ್ಯನ ಸ್ನಾಯುಗಳು ಶರೀರದ ಹೊರಗೆ ಏಳು ವರ್ಷಗಳ ವರೆಗೆ ಜೀವಂತ ಇರುತ್ತವೆಯೆಂದು ಕಳೆದ ಮಹಾಯುದ್ಧಕಾಲದೊಳಗಿನ ಡಾಕ್ಟರ ಕ್ಯಾರೆಲ್ ಇವರ ಶಾಸ್ತ್ರೀಯ ಪ್ರಯೋಗಗಳ ಮೇಲಿಂದ ಸಿದ್ಧವಾಗಿದೆ. ಈ ಸ್ನಾಯುಗಳು ಬೆಳೆಯುತ್ತ ದ್ವಿಗುಣಿತವಾಗುತ್ತವೆ. ಯೋಗ್ಯರೀತಿಯಿಂದ ತೊಳೆದು ಇಟ್ಟರೆ ನೃದ್ಧಿಯನ್ನು ಪೊಂದುತ್ತವೆ" ಎಂದು ಬೇಳಿದೆ. ಇದರ ಮೇಲಿಂದ ಹಿಂದೆ ಋಷಿಗಳು ಸಹಸ್ರಾವಧಿ ವರ್ಷಗಳವರೆಗೆ ಬಾಳುತ್ತಿದ್ದರೆಂಬುವದರಲ್ಲಿ ವಿಶೇಷ ತಥ್ಯಾಂಶವಿದೆ ಎಂದು ಮನವರಿಕೆಯಾಗುತ್ತದೆ.

ಇನ್ನು ಲೌಕಿಕ ರೀತಿಯಿಂದ ವಿಚಾರಿಸಿದರೆ ಲೌಕಿಕ ಉದಾಹರಣೆಗಳಿಂದಲೂ ಈ ಸಂಗತಿಯು ಸಹಜವಾಗಿ ತಮ್ಮ ಮನವರಿಕೆಯಾಗಬಹುದು. ಉದಾಹರಣಾರ್ಥವಾಗಿ:- ಒಂದೇ ಕಾಲಕ್ಕೆ ಒಬ್ಬನೇ ಮಾಡಿದ ಒಂದೇ ನಮೂನೆಯ ೨ ಘಡಿಯಾಳಗಳನ್ನು ತೆಗೆದುಕೊಳ್ಳೋಣ ಒಂದಕ್ಕೆ ಒಬ್ಬನೇ ದಿನಂಪ್ರತಿ ವೇಳೆಗೆ ಸರಿಯಾಗಿ ಕೀಲಿಯನ್ನು ಕೊಡುತ್ತಾ

ಹೋದರೆ ಅದು ಬಹಳ ದಿವಸ ನಡೆಯುತ್ತದೆ. ಇನ್ನೊಂದಕ್ಕೆ ಬೇಕಾದವರು ಬೇಕಾದಾಗ್ಗೆ ಮನಬಲ್ಲಂತೆ ಮೇಳೆ ತಪ್ಪಿ ಕೀಲಿಯನ್ನು ಕೊಡುತ್ತ ಹೋದರೆ ಅದು ತೀವ್ರವೇ ಕೆಡುವ ಸಂಭವವದೆ. ಅದರಂತೆ 'ಗಂಂ ವೈರ್ ಗಳ ವರೆಗೆ ತಡೆಯುವಂಥ' ಎಂದು ಮೇಲೆ ಬರೆದ ಕೆಲವು ಟಾಯರ್ ಗಳನ್ನು ತಕ್ಕೊಳ್ಳೋಣ. ಸರಿಯಾಗಿ ಉತ್ತಮನಾದ ಡಾರಿಯ ಮೇಲೆ ಉಪಯೋಗಿಸಿದರೆ ಅವು ಬಹಳ ದಿವಸ ತಡೆಯುತ್ತವೆ. ಮನಬಲ್ಲಂತೆ ಉಪಯೋಗ ಮಾಡಿದರೆ ಅವು ತೀವ್ರವೇ ನಾಶಹೊಂದುತ್ತವೆ. ಇದು ಅಲ್ಲದೆ ಇಂಗಳನ ಮೇಲೆ ಬೂದಿಯನ್ನು ಡಾಕಿಟ್ಟರೆ ಆ ಇಂಗಳವು ಹೆಚ್ಚು ಬೇಳೆ ತಡೆಯುತ್ತದೆ. ಅದರಂತೆಯೇ ಒಬ್ಬ ಸಶಕ್ತ ಮನುಷ್ಯನ ಶ್ವಾಚ್ಛ್ವಾಸವು ೪ ಸೇಕಂದುಗಳಿಗೆ ಒಂದು ಬಾರಿ ಆಗುತ್ತದೆ. ಇದಕ್ಕೆ ಯೋಗಶಾಸ್ತ್ರದಲ್ಲಿ ಜಪವೆಂದೆನ್ನುತ್ತಾರೆ. ಇಂಥ ಜಪಗಳು ಒಂದು ಮಿನಿಟಿನಲ್ಲಿ ೧೫, ಒಂದು ತಾಸಿಗೆ ೯೦೦, ಮತ್ತು ಒಂದು ದಿವಸಕ್ಕೆ ೨೧೬೦೦ ಆಗುತ್ತವೆ. 'ಶತಾಯುರ್ವೈ ಪುರುಷಃ' ಈ ನ್ಯಾಯದಿಂದ ಒಬ್ಬನಿಗೆ ೧೦೦ ವರ್ಷ ಆಯುಷ್ಯ ಹಿಡಿದರೆ ಅವನಿಗೆ ೨೧೬೦೦×೩೬೫×೧೦೦=೭೮೮೪೦೦೦೦ ಜಪಗಳಾಗುತ್ತವೆ. ಇಷ್ಟು ಜಪ ಸಂಖ್ಯೆಯು ಮುಗಿಯದ ಹೊರ್ತು ಮಾನವನಿಗೆ ಮರಣ ಬರಲಾರದು. ಯೋಗಿ ಜನರು ಪ್ರಾಣಾಯಾವದಿಂದ ತಮ್ಮ ಪ್ರಾಣವಾಯುವಿನ ಕುಂಭಕ ಮಾಡಿ ತಮ್ಮ ಶ್ವಾಸೋಚ್ಛ್ವಾಸವನ್ನು ಬಂದು ಇಟ್ಟರೆ ಅವರ ಆಯುಷ್ಯ ಮರ್ಯಾದೆಯು ಹೆಚ್ಚುತ್ತದೆ. ಇದರ ವಿರುದ್ಧವಾದ ಉದಾಹರಣೆಗಳನ್ನು ಟಪಾಲ ರನ್ನರನ ಉದಾಹರಣೆಯಿಂದ ನಾವು ಕಾಣಬಹುದು. ಓಡುವದರಿಂದ ಅವನ ಶ್ವಾಸೋಚ್ಛ್ವಾಸಗಳು ದ್ವಿಗುಣಿತವಾಗಿ ಅವನ ಆಯುಷ್ಯ ಮರ್ಯಾದೆಯು ಕಡಿಮೆಯಾಗುತ್ತದೆ. ಏವಂಚ ಯೋಗಿ ಜನರಿಗೆ ತಮಗೆ ಬೇಕಾದಂತೆ ಶ್ವಾಸೋಚ್ಛ್ವಾಸವನ್ನು ನಿಯಮನ ಮಾಡಲಿಕ್ಕೆ ಬರುತ್ತದೆ. ಆದುದರಿಂದಲೇ ಶ್ರೀಮದ್ಭೃಣುಕ ಭಗವತ್ಪಾದಾಚಾರ್ಯರು ೧೪೦೦ ವರ್ಷಗಳ ವರೆಗೆ ಎಂದರೆ ೭೦೦ ವರ್ಷ ಗುಪ್ತವಾಗಿಯೂ ಹಾಗು ೭೦೦ ವರ್ಷ ಪ್ರಕಟ ರೂಪದಿಂದಲೂ ಭೂಮಂಡಲದಲ್ಲಿ ಸಂಚರಿಸುತ್ತಿದ್ದರೆಂದು ಪುರಾಣ ಪ್ರಸಿದ್ಧವದೆ. ಇದೇ ನಿಯಮವು ಶ್ರೀಮದನಾದಿ ಅಲ್ಲಮಪ್ರಭುವಿಗೂ ಹತ್ತುತ್ತದೆ. ಆದುದರಿಂದ ಶ್ರೀಪ್ರಭುದೇವನು ತನ್ನ ತನ್ನ ವಚನದಲ್ಲಿ "ಕೃತಯುಗದಲ್ಲಿ ನಾನು ಭಕ್ತಿಕಾರಣ ಸ್ಥೂಲಕಾಯನೆಂಬ ಗಣೇಶ್ವರನಾಗಿರ್ದೆನೈಯ್ಯಾ, ತ್ರೇತಾಯುಗದಲ್ಲಿ ನಾನು ಭಕ್ತಿಕಾರಣ ಶೂನ್ಯಕಾಯನೆಂಬ ಗಣೇಶ್ವರನಾಗಿರ್ದೆನೈಯ್ಯಾ, ದ್ವಾಪರದಲ್ಲಿ ನಾನು ಭಕ್ತಿಕಾರಣ ಅನುಮಿಷನೆಂಬ ಗಣೇಶ್ವರನಾಗಿರ್ದೆನೈಯ್ಯಾ, ಕಲಿಯುಗದಲ್ಲಿ ನಾನು ಭಕ್ತಿಕಾರಣ ಅಲ್ಲಮಪ್ರಭುದೇವನೆಂಬ ಗಣೇಶ್ವರನಾಗಿರ್ದೆ ಕಾಣಾ ಗುಹೇಶ್ವರಾ" ಎಂದು ತನ್ನ ಒಂದು ವಚನದಲ್ಲಿ ಸ್ಪಷ್ಟವಾಗಿ ಹೇಳಿರುವನು

"ಲೋಕಪ್ರಿಯ ಸರ್ವಜ್ಞಮೂರ್ತಿಯ ವಚನಗಳು."

ಲೇಖಕ:— ಕೀರ್ತನಕೇಸರಿ, ಕೀರ್ತನ ವಿಚಕ್ಷಣ, ಕೀರ್ತನ ಶಿರೋಮಣಿ,
ಶಿವಕೀರ್ತನ ಕವಿರಾಜ, ಕವಿರತ್ನ
ಬಿ. ಶಿವಮೂರ್ತಿಶಾಸ್ತ್ರಿ ಹುಲ್ಕುಂಟೆಮಠ, ತುಮಕೂರು.

ಕರ್ನಾಟಕ ಸಾಹಿತ್ಯ ನಭೋಮಂಡಲದಲ್ಲಿ ಪಂಪ ರನ್ನರಂತಹ ಮಹಾಕವಿಗಳನ್ನೂ, ಹರಿಹರ ರಾಘವಾಂಕರಂತಹ ಕ್ರಾಂತಿಕಾರಕ ಕವಿಗಳನ್ನೂ, ಲಕ್ಷ್ಮೀಶ ಕುಮಾರ ವ್ಯಾಸರಂತಹ ಕವಿಕೋಕಿಲೆಗಳನ್ನೂ, ನಿಜಗುಣ ಪುರಂದರರಂತಹ ಮಹಾನುಭಾವರನ್ನೂ ನಾವು ಥಳಥಳಿಸುವ ನಕ್ಷತ್ರಗಳೆಂದು ಭಾವಿಸಿದರೆ "ಸರ್ವಜ್ಞ" ನನ್ನು ಧ್ರುವತಾರೆಯೆಂದು ಕರೆಯಬೇಕಾಗುತ್ತದೆ.

ಆದಿಪಂಪನಿಂದ ಅಭಿನವ ಕಾಲಿದಾಸನ ವರೆಗಿನ ಅಸಂಖ್ಯಾತ ಕನ್ನಡ ಕವಿಗಳು ಕನ್ನಡ ಸಾಹಿತ್ಯವನ್ನು ನಾನಾ ಮುಖದಿಂದ ಬೆಳೆಸಿದ್ದಾರೆ ಹಾಗೂ ಬೆಳಗಿಸಿದ್ದಾರೆ. ಅಚ್ಚಗನ್ನಡಗಬ್ಬಿಗನಾದ ಕೆಚ್ಚೆದೆಯ ಅಂಡಯ್ಯನು ಸಕ್ಕದದ ಹಂಗಿಲ್ಲದೆ ತಿರುಳ್ಗನ್ನಡದಲ್ಲಿಯೇ ತನ್ನ ಶಬ್ದಮಣಿಯನ್ನು ಬರೆದು ಕನ್ನಡ ಕೀರ್ತಿಧ್ವಜವನ್ನು ಎತ್ತಿ ನಿಲ್ಲಿಸಿದ್ದಾನೆ. ಉಪನಿಷತ್ತನ್ನು ಹೋಲುವ ವಚನ ರಚನೆಗಳಿಂದ ಬಸವಾದಿಗಳು ಕನ್ನಡತಿಯನ್ನು ಕಳೆಯೇರಿಸಿದ್ದಾರೆ. ಇವರೆಲ್ಲರಿಗೂ ಮಿಗಿಲೆನಿಸಿ ವಿನೂತನವೂ ವಿಲಕ್ಷಣವೂ ಆದ ಮಾರ್ಗವನ್ನು ಹಿಡಿದು ಸರ್ವಜ್ಞನು ಸಿಡಿಲಿನಂತೆ ಗಂಭೀರವೂ, ಗಂಗೆಯಂತೆ ಪವಿತ್ರವೂ, ಹಿಮಾಲಯದಂತೆ ಮಹೋನ್ನತವೂ, ಸಾಗರದಂತೆ ಗಂಭೀರವೂ, ಬಂಗಾರದಂತೆ ಪ್ರಿಯತನವೂ,

ವಸಂತದಂತೆ ಆಹ್ಲಾದಕರವೂ, ನವರತ್ನಹಾರದಂತೆ ಅಮೌಲ್ಯವೂ ಆದ ತನ್ನ ವಚನಗಳಿಂದ ಕನ್ನಡಿಗರ ಕಿವಿ ನಾಲಿಗೆ ಮನಗಳನ್ನು ಸೆಳೆ ಹಿಡಿದಿದ್ದಾನೆ.

ಕನ್ನಡ ನುಡಿಯ ಬೆಡಗು, ಬಿನ್ನಾಣ, ಇಂಪು, ಸೊಂಪು, ಗತಿ, ನಮಕಗಳನ್ನು ಕಾಣಬೇಕಾದರೆ ನಾವು ಸರ್ವಜ್ಞ ವಚನಗಳನ್ನು ಅವ ಲೋಕಿಸಬೇಕಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಸರ್ವಜ್ಞ ವಚನಗಳು ಹಾಲಿನೊಳಗಣ ತುಪ್ಪದಂತೆ, ಹೂವಿನೊಳಗಣ ವಾಸನೆಯಂತೆ, ಆಕಾಶ ದೊಳಗಣ ಮಂಜಿನಂತೆ, ದೀಪದೊಳಗಿನ ಪ್ರಕಾಶದಂತೆ, ದೇಹದೊಳ ಗಿನ ಜೀವನಂತೆ ಎಂದು ನಾವು ಉಪಮಿಸಬಹುದು.

ತಮಿಳು ಭಾಷೆಯಲ್ಲಿ ತಿರುವಳ್ಳುವ ಕವಿಗೂ ತೆಲುಗಿನಲ್ಲಿ ವೇಮಣ್ಣಾ ಕವಿಗೂ ಮರಾಠಿ ಸಾಹಿತ್ಯದಲ್ಲಿ ಸಮರ್ಥ ರಾಮದಾಸ ಮುನಿಗೂ, ಹಿಂದಿ ವಾಙ್ಮಯದಲ್ಲಿ ಕಬೀರದಾಸನಿಗೂ, ಸಂಸ್ಕೃತದ ಭರ್ತೃಹರಿಗೂ ಇರುವ ಸ್ಥಾನವನ್ನೇ ಕನ್ನಡದಲ್ಲಿ ಸರ್ವಜ್ಞನಿಗೆ ಸಲ್ಲಿಸ ಬಹುದು ಎಂದು ಹಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕನ್ನಡ ನಾಡಿನಲ್ಲಿ ಸರ್ವಜ್ಞನು ಉದಯಿಸಿ ವೇದಸಾರರೂಪವಾದ ತನ್ನ ವಚನಗಳನ್ನು ಹರಡದಿದ್ದರೆ ಅಂದು ಕನ್ನಡ ಸಾಹಿತ್ಯವು ತಂತಿ ಯಿಲ್ಲದ ತಂಬೂರಿಯಂತೆ, ತುಪ್ಪವಿಲ್ಲದ ಊಟದಂತೆ, ಹಲ್ಲಿಲ್ಲದ ಬಾಯಿ ಯಂತೆ, ವಿದೂಷಕನಿಲ್ಲದ ನಾಟಕದಂತೆ, ಮೀಸೆಯಿಲ್ಲದ ಮುಖದಂತೆ, ರಾಗವಿಲ್ಲದ ಓದುಗಾರಿಕೆಯಂತೆ, ಹನುಮನಿಲ್ಲದ ರಾಮಾಯಣದಂತೆ, ಗಿಳಿಯಿಲ್ಲದ ಪಂಜರದಂತೆ ಆಗುತ್ತಿದ್ದಿತೆಂದು ಹೇಳಬಹುದು.

ಸರ್ವಜ್ಞನ ವಚನಗಳನ್ನು ಓದಬೇಕೆನ್ನುವವರಿಗೆ ಅವನ ಕಾಲ, ದೇಶ, ಮತ, ಜೀವನ ಕ್ರಮ, ಸಂದೇಶ, ವ್ಯಕ್ತಿತ್ವ, ಹುಟ್ಟು, ಸಾವು ಈ ಮೊದಲಾದ ವಿಚಾರಗಳು ತಿಳಿದಿರಬೇಕೆಂದುದು ಅವಶ್ಯಕ. ಅದನ್ನು ಸಂಕ್ಷೇಪವಾಗಿ ಮಾಡಿಕೊಡುವುದೇ ಈ ಲೇಖನದ ಉದ್ದೇಶ. ಕವಿಯ ವಿಚಾರಜೊಂದಿಗೆ ಅವನ ಗ್ರಂಥ ವಿಮರ್ಶೆಯನ್ನು ಇದರಲ್ಲಿ ಗರ್ಭೀಕರಿಸಿದೆ.

ಸರ್ವಜ್ಞ ಕವಿಗಳು.

ಈಗ ನಾವು ಚರ್ಚಿಸಬೇಕಾದುದು ಲೋಕಪ್ರಿಯ ಸರ್ವಜ್ಞಮೂರ್ತಿಯ ವಿಚಾರವನ್ನು ಮಾತ್ರ. ಆದರೆ ಈ ಹೆಸರಿನ ಕವಿಗಳು ಬಹಳ ಮಂದಿ

ಆಗಿರಬಹುದೇ ಎಂದು ಆಲೋಚಿಸುವುದು ನಮ್ಮ ಆದ್ಯಕರ್ತವ್ಯವಾಗಿದೆ. ಒಂದೇ ಹೆಸರಿನ ಕವಿಗಳು ಹಲವರಾಗಿರುವರೆಂಬುದು ಕನ್ನಡ ಸಾಹಿತ್ಯದ ಪರಿಚಯವಿರುವವರಿಗೆಲ್ಲಾ ತಿಳಿದ ವಿಷಯ. ಏಕೆಂದರೆ ನಿಜಗುಣ, ಷಡಕ್ಷರ, ಎಂಬ ಹೆಸರಿನ ಮೂರುನೂರು ಮಂದಿ ಕವಿಗಳು ನಾಗವರ್ಮ, ಗುಣವರ್ಮ, ಪದ್ಮರಸ ಎಂಬ ಹೆಸರಿನ ಇಬ್ಬಿಬ್ಬರು ಕವಿಗಳು ನಮ್ಮ ಸಾಹಿತ್ಯದಲ್ಲಿ ಆಗಿಹೋಗಿದ್ದಾರೆ. ಅಂತೆಯೇ "ಸರ್ವಜ್ಞ" ಎಂಬ ಹೆಸರನ್ನು ಧರಿಸಿದ ಇತರರೂ ಇರಬಹುದೇ ಎಂದು ವಿಚಾರ ಮಾಡೋಣ.

ವಿದ್ವಾಂಸರು ಭಗವಂತನನ್ನು "ಸರ್ವಜ್ಞ" ಎಂದು ಕರೆಯುತ್ತಾರೆ. ಶಿವಸಹಸ್ರ ನಾಮದಲ್ಲಿ "ಓಂ ಸರ್ವಜ್ಞಾಯನಮಃ" ಎಂದು ಪರಮೇಶ್ವರನನ್ನು ಮಹರ್ಷಿಗಳು ಕರೆದಿದ್ದಾರೆ. ಸರ್ವಜ್ಞ ಮೂರ್ತಿಯೂ ತನ್ನ ವಚನ ಒಂದರಲ್ಲಿ "ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ। ಒಬ್ಬ ಸರ್ವಜ್ಞ ಕರ್ತನೂ ಜಗಕೆಲ್ಲ। ಒಬ್ಬನೇ ದೈವ ಸರ್ವಜ್ಞ" ಎಂಬ ಪದ್ಯದಲ್ಲಿ ಸರ್ವಲೋಕೇಶ್ವರನಾದ ಪರಮೇಶ್ವರನನ್ನು ಸರ್ವಜ್ಞನೆಂದು ಕರೆದಿದ್ದಾನೆ.

ಭರತಖಂಡದಲ್ಲಿ ಅಸಾಧಾರಣ ಪಂಡಿತರಾದವರನ್ನು ಈಗಿನ ಕಾಲದಲ್ಲಿ 'ಮಹಾಮಹೋಪಾಧ್ಯಾಯ' ಎಂಬ ಪ್ರಶಸ್ತಿಯಿಂದ ಕರೆಯುವಂತೆ ಪ್ರಾಚೀನ ಕಾಲದಲ್ಲಿ ಘಟಾನು ಘಟಿಗಳಾದ ವಿದ್ವಾಂಸರನ್ನು "ಸರ್ವಜ್ಞ" ಎಂದು ಕರೆಯುತ್ತಿದ್ದಂತೆ ಕಾಣುತ್ತದೆ.

"ಹದಿನಾಲ್ಕನೇ ಶತಮಾನದಲ್ಲಿ ಮಹಾಭಾರತಕ್ಕೆ ಸಂಸ್ಕೃತ ಭಾಷೆಯಲ್ಲಿ ಉತ್ತಮೋತ್ತಮವಾಗಿ ವ್ಯಾಖ್ಯಾನವನ್ನು ಬರೆದ ವಿದ್ವಾಂಸನೊಬ್ಬನಿಗೆ 'ಸರ್ವಜ್ಞನಾರಾಯಣ' ನೆಂದೂ ಸುಮಾರು ಇದೇ ಶತಮಾನದಲ್ಲಿ ಜೀವಿಸಿದ್ದ ವಿದ್ಯಾನಿಧಿ ಸಾಯಣಾಚಾರ್ಯನ ಅಣ್ಣನಾದ ಮಾಧವನಿಗೆ ಸರ್ವಜ್ಞ ಹಾಗೂ ವಿದ್ಯಾರಣ್ಯ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ೧೬ನೇ ಶತಮಾನದಲ್ಲಿ ಆಗಿಹೋದ ಮೂರನೇ ಸೋಮೇಶನೆಂಬ ಅರಸನಿಗೆ 'ಭೂಲೋಕಮಲ್ಲ' ನೆಂತಲೂ 'ಸರ್ವಜ್ಞ ಚಕ್ರವರ್ತಿ' ಯೆಂತಲೂ ಹೆಸರುಗಳಿದ್ದಂತೆ ತಿಳಿದುಬರುತ್ತದೆ." ±

ನಮ್ಮ ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ "ಸರ್ವಜ್ಞಮೂರ್ತಿ" ಯಲ್ಲದೆ, ಈ ಹೆಸರಿನ ಇತರರೂ ಇರಬಹುದೆಂಬುದಕ್ಕೆ ಅವಕಾಶವಿದೆ.

± ಟಿಪ್ಪಣಿ:— ಸ. ವ. ಪ್ರ. ಮು. ಪೀಠಿಕೆ ನೋಡಿ.

ಮೈಸೂರು ಪ್ರಾಚೀನ ಪುಸ್ತಕಾಲಯದಲ್ಲಿ "ಸರ್ವಜ್ಞ ಪದ" ಎಂಬ ತಾಳೆಯೋಲೆಯ ಗ್ರಂಥವೊಂದಿದೆ. ಇದರ ಛಂದಸ್ಸು 'ಷಟ್ಪದ' ಎಂದಿದೆ. ಕವಿ 'ಸರ್ವಜ್ಞ' ಎಂದಿದೆ. ಈ ಸಂದರ್ಭವನ್ನು ನೋಡಿದರೆ "ತ್ರಿಪದಿ" ಯ ಸರ್ವಜ್ಞಮೂರ್ತಿಯ ಕೀರ್ತಿಯು ಕನ್ನಡ ನಾಡಿನಲ್ಲಿ ಹಬ್ಬಿದುದನ್ನು ಕಂಡು ಮತ್ತಾವನೋ ಒಬ್ಬ ಕವಿಯು 'ಸರ್ವಜ್ಞ' ಎಂಬ ಅಂಕಿತವನ್ನಿಟ್ಟುಕೊಂಡು ಸ್ಪರ್ಧೆಗಾಗಿ "ಷಟ್ಪದ" ಗಳನ್ನು ಬರೆದನೇನೋ ಎಂದು ನಮಗೆ ಅನುಮಾನವುಂಟಾಗುತ್ತದೆ. ಅಲ್ಲದೆ ಅದೇ ಮೈಸೂರು ಪ್ರಾಚೀನ ಪುಸ್ತಕಾಲಯದಲ್ಲಿ ಹಾಡಿನ ರೂಪದಿಂದ "ಸರ್ವಜ್ಞ ಪದಗಳು" ಎಂಬ ಗ್ರಂಥವೊಂದಿವೆ. ಇದರ ಕವಿ 'ಸರ್ವಜ್ಞ' ಎಂದು. ಈ ಹಾಡುಗಳ ಕರ್ತೃವು "ತ್ರಿಪದಿ" ಕಾರನಾದ ಸರ್ವಜ್ಞಮೂರ್ತಿಯೋ ತದ್ಭಿನ್ನನೋ ಎಂಬುದೂ ವಿಚಾರಾರ್ಹವಾಗಿದೆ. ಅದೇ ಪುಸ್ತಕಾಲಯದಲ್ಲಿ "ಸರ್ವಜ್ಞ ಕಾಲಜ್ಞಾನ" ಎಂಬುದೊಂದು ಗ್ರಂಥವಿದೆ. ಇದನ್ನು ಬರೆದವ "ಸರ್ವಜ್ಞ ಮುನಿ" ಎಂಬಾತನೆಂದಿದೆ. ಈ ಸರ್ವಜ್ಞಮುನಿಯೂ ನಮ್ಮ ಲೇಖನಕ್ಕೆ ವಿಷಯನಾದ ಸರ್ವಜ್ಞಮೂರ್ತಿಯೂ ಒಬ್ಬನೇ, ಭಿನ್ನನೇ ಎಂಬುದೂ ವಿಚಾರಾರ್ಹವಾಗಿದೆ.

ಶ್ರೀಮಾನ್ ಉತ್ತಂಗಿ ಚನ್ನಪ್ಪನವರು ಅನೇಕ ವರ್ಷಕಾಲ ಹಲವು ತಾಡ ಓಲೆ ಗ್ರಂಥಗಳನ್ನೂ ಮುದ್ರಣ ಗ್ರಂಥಗಳನ್ನೂ ಪರಿಶೋಧಿಸಿ ಬರೆದ ಸರ್ವಜ್ಞ ವಚನಗಳ ಮೊದಲನೇ ಮುದ್ರಣದ ವಿಸ್ತಾರವಾದ ಪೀಠಿಕೆಯಲ್ಲಿ ಸರ್ವಜ್ಞನೆಂಬ ಹೆಸರಿನ ಕವಿಗಳು ಕನ್ನಡದಲ್ಲಿ ಹಲವರಾಗಿರಬಹುದೆಂಬ ಅರ್ಥವನ್ನು ಎಲ್ಲಿಯೂ ಹೊರಗೆಡವಿಲ್ಲ.

ಪ್ರಾಕ್ತನವಿಮರ್ಶವಿಚಕ್ಷಣ, ಮಹಾಮಹೋಪಾಧ್ಯಾಯ, ರಾವಬಹದ್ದೂರ ಆರ್ ನರಸಿಂಹಾಚಾರ್ಯ ಎಂ. ಎ. *M. R. A. S.* ಅವರಾದರೂ ಕನ್ನಡ ಕವಿಚರಿತ್ರೆಯನ್ನು ಎರಡನೇಭಾಗದಲ್ಲಿ ಸರ್ವಜ್ಞಮೂರ್ತಿ ವಿಚಾರವನ್ನು ಚರ್ಚಿಸುವಾಗ ಈ ಹೆಸರಿನ ಹಲವರಾಗಿರಬಹುದೆಂಬ ಅಭಿಪ್ರಾಯವನ್ನು ಎಲ್ಲಿಯೂ ಹೇಳಿಲ್ಲ. ಆದರೂ ಈ ವಿಚಾರದಲ್ಲಿ ನಮಗುಂಟಾದ ಸಂದೇಹಗಳನ್ನು ಚರ್ಚಿಸಿದರೆ ಸಂಶೋಧಕರ ಮನಸ್ಸು ಇತ್ತಬೀಳಬಹುದೆಂದು ನಾನು ಭಾವಿಸುತ್ತೇನೆ.

ಸರ್ವಜ್ಞಮೂರ್ತಿಯು ತ್ರಿಪದಿಗಳನ್ನು ಬರೆದನೆಂಬುದು ಪ್ರಸಿದ್ಧವಾದ ವಿಚಾರ. ಷಟ್ಪದಿಗಳನ್ನೂ ಹಾಡುಗಳನ್ನೂ ಬರೆದಿರುವ ಕವಿಗಳು ಅಥವಾ

ಕವಿಯು ಬೇರೊಬ್ಬನಿರಬಹುದೆಂದು ತೋರುತ್ತದೆ. ಮೂಲ ಗ್ರಂಥಗಳು ನಮ್ಮ ಹಸ್ತಗತವಾಗುವವರೆಗೆ ನಾವೀ ವಿಚಾರದಲ್ಲಿ ಸಿದ್ಧಾಂತ ಮಾಡಲಾಗುವುದಿಲ್ಲ.

ಪ್ರಾಚೀನ ಗ್ರಂಥ ಸಂಶೋಧಕರೂ, ಕನ್ನಡ ಸಾಹಿತ್ಯಸೇವಾಸಕ್ತರೂ ಆದ ಪೇ. ನಿಶ್ಶಂಕಮಠದ ಶಾಂತವೀರಾರ್ಯರು ಈಗ ಒಂದು ವರ್ಷದ ಕೆಳಗೆ ನಾನು ದಾವಣಗೇರಿಯಲ್ಲಿ ಅವರಿಗೆ ಭೆಟ್ಟಿಯಾದಾಗ ಪ್ರಸಂಗವಶದಿಂದ "ಸರ್ವಜ್ಞಮೂರ್ತಿಗಿಂತಲೂ ಭಿನ್ನನಾದ ಸರ್ವಜ್ಞಕವಿ" ಎಂಬುವನೊಬ್ಬನಿದ್ದಾನೆಂದೂ ಆತನ ಗ್ರಂಥವು ತಮ್ಮ ಸಂಗ್ರಹದಲ್ಲಿದೆಯೆಂದೂ ಹೇಳಿದ್ದರು. ನಾನು ಈ ಪೀಠಿಕೆಯನ್ನು ಬರೆಯುವ ಮೊದಲು ಆ ಗ್ರಂಥವನ್ನು ಹಸ್ತಗತ ಮಾಡಿಕೊಳ್ಳಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲವಾಗಿ ಉಪಾಯವಿಲ್ಲವಾಗಿದೆ.

"ಸರ್ವಜ್ಞ ತ್ರಿಪದಿಗಳನ್ನು ಸಂಪಾದನೆಯ ಸಿದ್ಧವೀರೇಶನು ಸಂಗ್ರಹಿಸಿದ್ದಾನೆಂದು ಕವಿಚರಿತ್ರೆಕಾರರೇ ಹೇಳಿದ್ದಾರೆ. ಸಿದ್ಧವೀರನ ಕಾಲ, ಕ್ರಿ ಶ. ೧೬೦೦ ಎಂದು ಅವರೇ ನಿರ್ಣಯಿಸಿದ್ದಾರೆ. ಅಲ್ಲದೆ ಕೆಲವು ತಾಳವೋಲೆ ಗ್ರಂಥಗಳಲ್ಲಿ 'ಜ' ಎಂಬ ಪ್ರಾಚೀನಾಕ್ಷರವು ಲಭಿಸುವದರಿಂದ ತ್ರಿಪದಿಕರ್ತೃನಾದ ಸರ್ವಜ್ಞಮೂರ್ತಿಯು ಕ್ರಿ ಶ ೧೬೦೦ಕ್ಕಿಂತಲೂ ಹಿಂದಿನವನಾಗಿರಬೇಕೆಂದು ಸಿದ್ಧವಾಗುತ್ತದೆ.

ಕಾಲಜ್ಞಾನ ತ್ರಿವಿಧಿಯಲ್ಲಿ ವಿಜಯನಗರದ ನಾಶ, ಶ್ರೀರಂಗಪಟ್ಟಣ ಆಂಗ್ಲರ ವಶವಾದುದು ಈ ಮೊದಲಾದ ಹೊಸ ವಿಚಾರಗಳಿರುವುದರಿಂದ ಈ ಕಾಲಜ್ಞಾನಕರ್ತೃವು ಆಧುನಿಕನಾಗಿರಬೇಕು. ಇವನನ್ನೇ ಸರ್ವಜ್ಞ ಮುನಿ ಎಂದು ಕರೆಯಬಹುದು. ಉತ್ತಂಗಿಯವರೇ ಹೇಳುವಂತೆ ಬಾಡವಿ ತಾಡಪೋಲೆ ಗ್ರಂಥದಮೇಲೆ "ಸರ್ವಜ್ಞಗಣೇಶ್ವರನು ನಿರೂಪಿಸಿದ ಕಾಲಜ್ಞಾನವಚನವೆಂದು ಹೆಸರು" ಎಂದಿರುವುದಾದ ಪ್ರಯುಕ್ತ ಈ ಕಾಲಜ್ಞಾನ ಕರ್ತೃವು ಮೂಲ ಸರ್ವಜ್ಞಮೂರ್ತಿಯಲ್ಲವೆಂದೂ ಸರ್ವಜ್ಞಗಣೇಶ್ವರ, ಸರ್ವಜ್ಞಮುನಿ ಎಂಬ ಹೆಸರಿನ ಅನ್ಯನೆಂದೂ ಇವನು ಬಸವನ ಕಾಲಜ್ಞಾನವಚನವನ್ನೇ ತ್ರಿಪದಿರೂಪದಲ್ಲಿ ಬರೆದು ತನ್ನ ಕೆಲವು ವಿಚಾರಗಳನ್ನು ಸೇರಿಸಿದನೆಂದೂ ಹೇಳಬಹುದು.

"ಪರಮಾರ್ಥ" ಎಂಬ ಮುದ್ರಿಕೆಯ ಕೆಲವು ಪದ್ಯಗಳನ್ನು ನಾವು ಸರ್ವಜ್ಞ ವಚನಗಳ ಪ್ರಥಮಮುದ್ರಣದ ಪುಟ ೭೦ ರಲ್ಲಿ ಕಾಣಬಹು

ದಾಗಿದೆ. ಇವುಗಳ ರಚನಾವಿಧಾನವನ್ನು ನೋಡಿದರೂ ಇವು ಸರ್ವಜ್ಞಮುನಿಯವೇ ಹೊರತು ಸರ್ವಜ್ಞಮೂರ್ತಿಯವಲ್ಲವೆಂದು ಹೇಳಬಹುದಾಗಿದೆ. ಸಾರಾಂಶಃ— ಕನ್ನಡ ಭಾಷೆಯಲ್ಲಿ ತ್ರಿಪದಿಗಳನ್ನು ಬರೆದು ಪ್ರಸಿದ್ಧನಾದ ಪ್ರಾಚೀನ ಸರ್ವಜ್ಞಮೂರ್ತಿ, ಇವನಿಗೆ ಸಾಲೆಸರ್ವಜ್ಞನೆಂದೂ ಹೆಸರು. ಇವನನ್ನು ಸ್ಪರ್ಧಿಸಲು ಚೌಪದಿಹಾಡುಗಳನ್ನು ಬರೆದಿರಬಹುದು. ಸರ್ವಜ್ಞಕವಿ, ಕಾಲಜ್ಞಾನತ್ರಿಪದಿಗಳನ್ನು ಬರೆದ ಸರ್ವಜ್ಞಗಣೇಶ್ವರ ಅಥವಾ ಸರ್ವಜ್ಞಮುನಿ ಎಂದೂ "ಪರಮಾರ್ಥ" ಎಂಬ ಮುದ್ರಿಕೆಯುವನು ಸರ್ವಜ್ಞಮುನಿಯೇ ಆಗಬಹುದೆಂದು ತೋರಿಬರುತ್ತದೆ.

ಈ ವಿಚಾರವು ಅತ್ಯಂತ ಮಹತ್ವದ್ದಿದ್ದು ಸಂಶೋಧಕರು ಇತ್ತ ಲಕ್ಷಿಸಬೇಕೆಂದು ನಾನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ. ಕಾಲಜ್ಞಾನ ತ್ರಿಪದಿಗಳನ್ನು ಬರೆದು ಶ್ರೀರಂಗಪಟ್ಟಣವು ಆಂಗ್ಲರ ವಶವಾದುದನ್ನು ಹೇಳುವ ಸರ್ವಜ್ಞನು ಸಂಪಾದನೆ ಸಿದ್ಧವೀರಾಚಾರ್ಯನ ಕಾಲಕ್ಕಿಂತ ಹಿಂದಿದ್ದ ಸರ್ವಜ್ಞಮೂರ್ತಿಗಿಂತ ಭಿನ್ನನೆಂಬುದರಲ್ಲಿ ಅನುಮಾನವಿಲ್ಲ. ತ್ರಿಪದಿಕಾರನಾದ ಸರ್ವಜ್ಞಮೂರ್ತಿ ಅಥವಾ ಸಾಲೆಸರ್ವಜ್ಞನು ೧೬ನೇ ಶತಮಾನಕ್ಕಿಂತ ಹಿಂದಿನವನಾಗಿರಲೇಬೇಕೆಂದು ತೋರುತ್ತದೆ.

ಕವಿಯ ಕಾಲ.

ಸರ್ವಜ್ಞಮೂರ್ತಿಯ ಕಾಲವಿಚಾರದಲ್ಲಿ ವಿದ್ವಾಂಸರಲ್ಲಿ ಮತಭೇದವಾಗಿದೆ.

೧. ವಿ॥ ಕಿಟೆಲ್‌ಸಾಹೇಬರು ೧೮ನೇ ಶತಮಾನದವನೆನ್ನುವರು.

೨. ಶ್ರೀ. ಆರ್. ನರಸಿಂಹಾಚಾರ್ಯರು ೧೭ನೇ ಶತಮಾನವೆನ್ನುವರು.

೩. ಶ್ರೀ. ಉತ್ತಂಗಿ ಚನ್ನಪ್ಪನವರು ೧೬ನೇ ಶತಮಾನವೆನ್ನುವರು.

೪. "ಸರ್ವಜ್ಞ ಸಂದೇಶ" ಕಾರರೂ ೧೬ನೇ ಶತಮಾನವನ್ನೇ ಒಪ್ಪಿರುವರು.

ಸಂಪಾದನೆಯ ಸಿದ್ಧವೀರಣಾಚಾರ್ಯನು (ಕ್ರಿ. ಶ. ೧೬೦೦) ಸರ್ವಜ್ಞ ತ್ರಿಪದಿಗಳನ್ನು ಸಂಗ್ರಹಿಸಿರುವದರಿಂದ ಸರ್ವಜ್ಞಮೂರ್ತಿಯು ಸಿದ್ಧವೀರಣಾಚಾರ್ಯನಿಗಿಂತಲೂ ಹಿಂದಿನವನಾಗಿರಲೇಬೇಕೆಂದು ಹಿಂದೆಯೇ ಹೇಳಲಾಗಿದೆ. ನಮ್ಮ ಊಹೆಯ ಪ್ರಕಾರ "ಸರ್ವಜ್ಞಮುನಿ"ಯ ಕಾಲ

ಜ್ಞಾನ ತ್ರಿಪದಿಗಳನ್ನು ಸರ್ವಜ್ಞಮೂರ್ತಿಯ ವಚನಗಳಲ್ಲಿ ಮಿಶ್ರ ಮಾಡಿ ಪ್ರಕಟಿಸಿದುದೇ ಇವನ ಕಾಲದಲ್ಲಿ ವಿದ್ವಾಂಸರಲ್ಲಿ ಮತಭೇದವಾಗಲಿಕ್ಕೆ ಕಾರಣವಾಯ್ತು. ಮೂಲ ಸರ್ವಜ್ಞನೂ ಕಾಲಜ್ಞಾನದ ಸರ್ವಜ್ಞನೂ ಬೇರೆಯೆಂದರೆ, ಸರ್ವಜ್ಞಮೂರ್ತಿಯು ೧೬ನೇ ಶತಕಕ್ಕೆ ಹಿಂದಿನವನೇ ಆಗುತ್ತಾನೆ. ಕಾಲಜ್ಞಾನ ಕರ್ತೃವು ಬೇರೆಯಲ್ಲವಾದರೆ ವಿ॥ ಕಿಟೆಲ್ ಪಂಡಿತರ ಮತವೇ ನಿಶ್ಚಯವಾಗಬೇಕಾಗುತ್ತದೆ. ಸಾರಾಂಶವೇನೆಂದರೆಃ- ಹಾಡುಗಳ ಸರ್ವಜ್ಞಕವಿ, ಕಾಲಜ್ಞಾನದ ಸರ್ವಜ್ಞಮುನಿ, ತ್ರಿಪದಿಗಳ ಸರ್ವಜ್ಞಮೂರ್ತಿ ಇವರುಗಳು ಭಿನ್ನರಾಗಿರಬಹುದೆಂದು ತೋರುತ್ತದೆ. ಪ್ರಾಚೀನನಾದ ಸರ್ವಜ್ಞಮೂರ್ತಿಯು ೧೬ನೇ ಶತಮಾನಕ್ಕೆ ಹಿಂದಿನವನಾಗಿರಬೇಕೆಂದು ನಮ್ಮ ಅಭಿಪ್ರಾಯವಾಗಿದೆ.

ಸರ್ವಜ್ಞನ ಮತ.

ಈ ಕವಿಯ ಉದಾರಭಾವದಿಂದ ಯುಕ್ತವಾದ ಕೆಲವು ವಚನಗಳನ್ನು ಕಂಡು ಹಲವರು ಇವನನ್ನು ಯಾವ ಮತಕ್ಕೂ ಅಂಟದ ಅವಧೂತನಾಗಿರಬಹುದೆಂದು ಶಂಕಿಸುತ್ತಾರೆ. ಇದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಕವಿಚರಿತ್ರೆಕಾರರು ಹೇಳಿರುವಂತೆ ಇವನು ವೀರಶೈವ ಕವಿಯೇ ಆಗಿದ್ದಾನೆ. ಇವನ ಷಟ್‌ಸ್ಥಲ ಪದ್ಧತಿಯಲ್ಲಿ ಇದಕ್ಕೆ ಬೇಕಾದಷ್ಟು ನಿದರ್ಶನಗಳನ್ನು ಕೊಡಬಹುದು.

(೧) ಇವನು ವೀರಶೈವ ಸಿದ್ಧಾಂತಾನುಸಾರವಾಗಿ ಶಿವಾಧಿಕ್ಯವನ್ನು ಸ್ಥಾಪಿಸುತ್ತಾನೆ. ಉದಾಹರಣೆಃ—" ಹುಟ್ಟಿಸುವನಜನೆಂಬ ಕಷ್ಟದಾನಡಿಜೇಡ। ಹುಟ್ಟಿಪನು ತನ್ನ ಶಿರವರಿಯೆ ಮತ್ತೊಂದ। ಹುಟ್ಟಿಸವನೇ ಸರ್ವಜ್ಞ ॥" ಎಂಬೀ ಪದ್ಯದಲ್ಲಿ ಚತುರ್ಮುಖ ಬ್ರಹ್ಮನನ್ನೂ, "ಹತ್ತು ಭವವನು ಎತ್ತಿ ಎತ್ತು ಎಮ್ಮೆಯ ಕಾದು। ಮತ್ತೆ ಪಾಂಡವರಿಗಾಳಾದ ಹರಿಯು ತಾ। ನೆತ್ತಣಾ ದೈವ ಸರ್ವಜ್ಞ ॥" ಎಂಬ ಪದ್ಯದಲ್ಲಿ ನಾರಾಯಣನನ್ನೂ ಧಿಃಕರಿಸಿ " ಪಂಬೊಮ್ಮರೆಂಬುವರು ಹರನಿಂದಲಾದವರು। ಅರಸಿಗೆ ಆಳು ಸರಿಯಹನೆ? ಶಿವನಿಂದ। ಮೇರೆವರಿನ್ನಾರು ಸರ್ವಜ್ಞ ॥" ಎಂಬ ಪದ್ಯದಲ್ಲಿ ಶಿವನ ಹೆಚ್ಚುಗಾರಿಕೆಯನ್ನು ನಿರೂಪಿಸಿದ್ದಾನೆ. ಈ ರೀತಿಯಲ್ಲಿ ವಿಷ್ಣು-ಬ್ರಹ್ಮರನ್ನು ಹಳಿದು ಶಿವನೇ ದೇವತೆಗಳಲ್ಲಿ ಅಧಿಕನೆಂದು ಸಾಧಿಸತಕ್ಕವರು ವೀರಶೈವ ಕವಿಗಳ ಹೊರತು ಮತ್ತಾರೂ ಇಲ್ಲ.

(೨) ವೀರಶೈವ ಸಾಹಿತ್ಯದ ಪಾರಿಭಾಷಿಕ ಶಬ್ದಗಳು (*Technical words*) ಇವನ ಗ್ರಂಥದಲ್ಲಿ ಬಹಳವಾಗಿವೆ. "ಕರಣ ಪ್ರಸಾದವ ನೆಂಜಲೆಂದವನಿಗೆ, ಲಿಂಗವುಳ್ಳನೆ ಪುರುಷ, ನಿಜ ಸುಖಿ ಮಹೇಶ್ವರನು, ಅರ್ಪಿತದ ಭೇದ, ಲಿಂಗವಿಹಿತನಾಗಿ ನುಂಗದಿರು ಏನುವನು, ಜಂಗಮ ಭಕ್ತರ ನಡೆ ಲೇಸು, ಐಕ್ಯದೊಳಗಿಪ್ಪ ಶರಣರಿಗೆ, ಇಷ್ಟಲಿಂಗದಿ ಮನವ ನಟ್ಟನೇ ನಿಲಿಸದೇ, ಕಂಡವರ ಕಂಡು ತಾ ಕೊಂಡು ಲಿಂಗವ ಕಟ್ಟಿ ಕಾಯಕದ ಭಕ್ತನಾ ಯಯತರ ನೋಡಿರೋ? ಲಿಂಗಸಂಗಿಗಳ ನುಡಿ ಲೇಸು, ಸಜ್ಜೆಯಲ್ಲಿ ಶಿವನ ಧರಿಸಿಪ್ಪ ಶರಣರ, ಬಸವನೆಂದರೆ ಪಾಪ ದೆಸೆಗೆಟ್ಟು ಹೋಗುವದು" ಇತ್ಯಾದಿ ವಚನಗಳು ಈ ಕವಿಯು ವೀರ ಶೈವನೆಂಬುದಕ್ಕೆ ಸಾಕ್ಷಿಯಾಗಿವೆ.

(೩) ಕರ್ನಾಟಕದಲ್ಲೆಲ್ಲಾ ಬಹುದಿನಗಳಿಂದಲೂ ಇವನನ್ನು ವೀರ ಶೈವನೆಂದೇ ಹೇಳಿಕೊಂಡು ಬರುತ್ತಿದ್ದಾರೆ.

ಈ ಎಲ್ಲ ಕಾರಣಗಳಿಂದಲೂ ಸರ್ವಜ್ಞಮೂರ್ತಿಯು ವೀರ ಶೈವನೂ, ವೀರಶೈವ ಸಿದ್ಧಾಂತವನ್ನು ಚೆನ್ನಾಗಿ ಬಲ್ಲವನೂ ಆಗಿದ್ದ ನೆಂದು ನಿರ್ಧಾರವಾಗಿ ಹೇಳಬಹುದು ಆದರೆ ಇವನು ವಚನಕಾರರಿಗಿಂತಲೂ ಉದಾರನೂ ಲೌಕಿಕ ವಿಚಾರದಲ್ಲಿ ಕುಶಲನೂ ಆಗಿದ್ದಾನೆಂಬುದರಲ್ಲಿ ಅನುಮಾನವಿಲ್ಲ.

ಕವಿಯ ಚರಿತ್ರೆ.

ಬಾಲ್ಯಃ— ಶ್ರೀಯುತ ಉತ್ತಂಗಿ ಚನ್ನಪ್ಪನವರು ಸರ್ವಜ್ಞ ವಚನಗಳ ಪ್ರಥಮ ಮುದ್ರಣ ಪೀಠಿಕೆಯಲ್ಲಿ ಈ ಕವಿಯ ಚರಿತ್ರೆಯನ್ನು ಬಹಳ ಚೆನ್ನಾಗಿಯೂ, ವಿಸ್ತಾರವಾಗಿಯೂ ಹೇಳಿದ್ದಾರೆ. ಸರ್ವಜ್ಞನು ತನ್ನ ಜನ್ಮವೃಂತ್ತಾತವನ್ನು ತಾನೇ ಬರೆದಿರುವುದರಿಂದ ಇವನ ಜೀವನ ಚರಿತ್ರೆಯನ್ನು ತಿಳಿಯಬೇಕೆನ್ನುವವರಿಗೆ ಕೊಂಚ ಅನಕೂಲವಾಗಿದೆ. ಧಾರವಾಡ ಜಿಲ್ಲೆಯ ಮಾಸೂರ ಗ್ರಾಮದ ಬಸವರಸನೆಂಬ ಆರಾಧ್ಯ ಬ್ರಾಹ್ಮಣನು ತನ್ನ ಹೆಂಡತಿ ಅಕ್ಕ ಮಲ್ಲಮ್ಮನು ಮಕ್ಕಳಿಲ್ಲದೆ ಮರಗುತ್ತಿರಲು ಕಾಶಿಯ ಮುಕ್ತಣ್ಣನ ದರ್ಶನಕ್ಕೆ (ಪುತ್ರಕಾಂಕ್ಷಿಯಾಗಿ) ಹೋದನು. ವಿಶ್ವನಾಥನ ಅನುಗ್ರಹವೂ ಆಯಿತು. ಮತ್ತೆ ಹಿಂತಿರುಗಿ ಬರುವಾಗ ಅಂಬಲೂರಿನ ಕುಂಬಾರ ಮಾಳಿಯೆಂಬವಳು ಕರ್ಮಧರ್ಮ ಸಂಯೋಗದಿಂದ ಗಂಟು ಬೀಳಲು ಅವರೀರ್ವರ ಸಂಪರ್ಕದಿಂದ ಸರ್ವಜ್ಞನುದಯಿಸಿದನು. ಸರ್ವಜ್ಞನ ಬಾಲ್ಯವೆಲ್ಲಾ ಕುಂಬಾರ ಸಾಲೆಯಲ್ಲಿಯೇ ಕಳೆಯಿತು ಇದರಿಂದಲೇ ಇವನಿಗೆ ಸಾಲಿಸರ್ವಜ್ಞನೆಂಬ ಹೆಸರೂ ಬಂದಿರಬಹುದೆಂದು ತೋರುತ್ತದೆ.

ಸರ್ವಜ್ಞನು ತಾನು ಮೊದಲು ಕೈಲಾಸದಲ್ಲಿ ಪುಷ್ಪದತ್ತನೆಂಬ ಪ್ರಮಥನೆಂದೂ, ತಾನು ಹಿಂದಿನ ಜನ್ಮವಲ್ಲಿ ವರರುಚಿಯಾಗಿದ್ದೆನೆಂದೂ, ಈ ಜನ್ಮದಲ್ಲಿ ಸಾಲಿಸರ್ವಜ್ಞನಾಪೆನೆಂದೂ ತನಗೆ ಬಸವರಸ-ಮಾಳವ್ವೆಯರು ಕೇವಲ ನಿಮಿತ್ತ ಮಾತ್ರರಾದ ತಂದೆ-ತಾಯಿಗಳೆಂದೂ ತಾನು ನಿಜವಾಗಿ ಪಾರ್ವತೀ-ಪರಮೇಶ್ವರನ ವರಪುತ್ರನೆಂದೂ ಹೇಳಿಕೊಂಡಿದ್ದಾನೆ. ಬಸವೇಶ್ವರನು ತನ್ನ ಹಿಂದಿನ ಏಳು ಜನ್ಮಗಳ ವೃತ್ತಾಂತವನ್ನೂ ಗೌತಮಬುದ್ಧನು ತನ್ನ ನಲವತ್ತು ಜನ್ಮಗಳ ವೃತ್ತಾಂತವನ್ನೂ ಹೇಳಿದ್ದಾರೆ. ಹೀಗೆಯೇ ಸರ್ವಜ್ಞನು ತನ್ನ ಹಿಂದಿನ ಜನ್ಮಗಳೆರಡರ ವೃತ್ತಾಂತವನ್ನು ಅರಿತು ಹೇಳಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಮಹಾತ್ಮರಾದವರಿಗೆ ಇದು (ಹೀಗೆ ಜನ್ಮಾಂತರ ವಿಚಾರ ತಿಳಿಯುವುದು) ಸ್ವಭಾವಿಕವಾಗಿದೆ. ಅಂತಹ ವಿಶೇಷವಾದ ಸಂಸ್ಕಾರವುಳ್ಳವರಾದ್ದರಿಂದಲೇ ಅವರನ್ನು ಮಹಾಪುರುಷರೆಂದು ಕರೆಯುತ್ತಾರೆ.

ಸರ್ವಜ್ಞನು ಕೇವಲ ಬಾಲ್ಯದಲ್ಲಿಯೇ ಕುಂಬಾರ ಸಾಲೆಯನ್ನು ಬಿಟ್ಟು ಹೊರಟು ಹೋದಂತೆ ಕಾಣುತ್ತದೆ. ಇವನು ಮಾಳಿ-ಮಾಳವ್ವರನ್ನು ನಾತಾ-ಪಿತೃಗಳೆಂದು ಗೌರವಿಸದೆ ಧಿಕ್ಕರಿಸಿ ತಾನು "ಚಂದ್ರಶೇಖರನ ವರಪುತ್ರ"ನೆಂದು ವಾದಿಸಿದುದೇ ಇದಕ್ಕೆ ಕಾರಣವಾಗಿರಬೇಕು.

ಪ್ರೌಢಾವಸ್ಥೆಃ— ಸರ್ವಜ್ಞನು ಒಂದೆಡೆಯಲ್ಲಿ ನಿಲ್ಲದೆ ಸದಾ ದೇಶಾಟನಪಲ್ಲಿಯೂ, ವಿದ್ವತ್ಸಂಭಾಷಣೆಯಲ್ಲಿಯೂ, ಪರಶಿವ ಧ್ಯಾನ-ಪೂಜೆಗಳಲ್ಲಿಯೂ ಕಾಲ ಕಳೆಯುತ್ತಿದ್ದನೆಂದು ತೋರುತ್ತದೆ. ಇವನ ವಚನಗಳನ್ನು ಓದಿದರೆ ಕಡೆಯಪಕ್ಷ ಇವನು ಸಮಗ್ರ ಕನ್ನಡ ದೇಶವನ್ನೆಲ್ಲಾ ಸಂಚರಿಸಿರಬೇಕೆಂದು ಊಹಿಸಬಹುದಾಗಿದೆ. ಅಲ್ಲದೆ ಆಂಧ್ರ ದ್ರಾವಿಡರ ಪರಿಚಯವೂ ಇವನಿಗಾಗಿರಬಹುದೆಂಬುದು ಇವನು ತೆಲುಗರನ್ನೂ ತಿಗುಳರನ್ನೂ ಅಣಕಿಸಿರುವ ಪದ್ಯಗಳಿಂದ ತಿಳಿದುಬರುತ್ತದೆ.

ಸರ್ವಜ್ಞನ ಜನ್ಮತಿಥಿ ಯಾವುದು? ಅವನು ಎಷ್ಟು ವರ್ಷ ಬಾಳಿದನು? ಅವನ ವಿದ್ಯಾಭ್ಯಾಸವೆಲ್ಲಿ? ಅವನ ಅಂತ್ಯವೆಂದು? ಸಮಾಧಿ

ಯೆಲ್ಲಿ? ಎಂಬೀ ರಹಸ್ಯವನ್ನು ಇತಿಹಾಸ ಪುರುಷನು ನಮಗೆ ತಿಳಿಸಿ ಕೊಡುವಂತಿಲ್ಲ. ಅವನ ಗ್ರಂಥವನ್ನು ಓದುವುದರಿಂದ ಅವನು ಸುಮಾರು ನಲವತ್ತು-ಐವತ್ತು ವರ್ಷಗಳ ವರೆಗಾದರೂ ಬದುಕಿದ್ದು ಕಡೆಗೆ ಶಿವ ಯೋಗದಿಂದ ಲಿಂಗವಲ್ಲಿ ಅಡಗಿರಬಹುದೆಂದು ಹೇಳಬಹುದಾಗಿದೆ. ಸಾರಾಂಶ- ಸರ್ವಜ್ಞಮೂರ್ತಿಯ ಜನ್ಮಬಾಲ್ಯಗಳ ವಿಚಾರವಾಗಿ ಕೆಲವು ಸಂಗತಿಗಳು ತಿಳಿದುಬಂದರೂ ಅವನ ಯೌವನ-ವಾರ್ಧಿಕ್ಯಕಾಲ ವಿಚಾರವೂ, ಅವನು ಐಕ್ಯನಾದ ಮತ್ತು ಎಲ್ಲಿ ಸಮಾಧಿಸ್ಥನಾದನೆಂಬ ಸಮಾಚಾರವೂ ಇನ್ನೂ ತಿಳಿದುಬಂದಿಲ್ಲವೆಂದು ವಿಧಿಯಿಲ್ಲದೆ ಒಪ್ಪಿಗೊಳ್ಳಬೇಕಾಗಿದೆ.

ಜೀವನಧ್ಯೇಯ.

ಪ್ರತಿಭಾಶಾಲಿಯಾದ ಸರ್ವಜ್ಞನು ಯಾವಾಗಲೂ ಗರ್ವದಿಂದಿರದೆ ಸರ್ವರೊಳಗೊಂದೊಂದು ನುಡಿಗಲ್ಲು ವಿದ್ಯದ ಪರ್ವತವೆ ಆಗಿ ತನ್ನಲ್ಲಿದ್ದ ಜ್ಞಾನಾಮೃತವನ್ನು ಕನ್ನಡಿಗರಿಗೆಲ್ಲಾ ಹಂಚುತ್ತ ಪಟ್ಟಣಕ್ಕೆ ಪಂಚರಾತ್ರೆ ಹಳ್ಳಿಗೆ ಏಕರಾತ್ರೆಯಂತೆ ಸಂಚರಿಸಿ ತಾನು ವಿರಕ್ತನೂ ನಡೆನುಡಿಗಳಲ್ಲೊಂದಾದ ಮಹಿಮನೂ ಆಗಿ ಜನರಿಗೆ ಭಕ್ತಿ, ಜ್ಞಾನ, ವೈರಾಗ್ಯ ಬೋಧೆ ಮಾಡುತ್ತಾ "ನೀತಿಯೆ ಸಕಲ ಲೋಕಕ್ಕೆಲ್ಲ ಸಾಧನವೆಂದು" ಡಂಗೂರು ಸಾರುತ್ತ ತನ್ನ ಸಿಡಿಲಿನ ನುಡಿಗಳಿಂದ ಕನ್ನಡಿಗರನ್ನು ಬಡಿದೆಬ್ಬಿಸಿ ತನ್ನ ಜನ್ಮವನ್ನು ಸಾರ್ಥಕಮಾಡಿಕೊಂಡುದರ ಜತೆಗೆ ಕರ್ನಾಟಕವನ್ನೂ ಹುರಿದುಂಬಿಸಿ ಕಳೆಯೇರಿಸಿ ನಾಡಿನ ಸೇವೆಗಾಗಿ ಹೆಣಗಾಡಿದನು. ಇದುವೇ ಅವನ ಜೀವನ ಧ್ಯೇಯವೆಂದು ನಾವು ಅನುಮಾನವಿಲ್ಲದೆ ಹೇಳಬಹುದಾಗಿದೆ.

ಗ್ರಂಥರಚನೆ.

ಈಗ ನಮಗೆ ಪ್ರಾಪ್ತವಾಗಿರುವ ವಚನಗಳನ್ನೆಲ್ಲಾ "ಸರ್ವಜ್ಞಮೂರ್ತಿ"ಯೇ ಗ್ರಂಥರೂಪದಲ್ಲಿ ಬರೆದಿಟ್ಟನೆಂದು ಹೇಳಲಾಗುವುದಿಲ್ಲ. ಹಾಗಿದ್ದರೆ ವೈಮಿನಿಭಾರತ, ಚನ್ನಬಸವಪುರಾಣ ಮೊದಲಾದ ಗ್ರಂಥಗಳ ತಾಳೆಪೋಲೆ ಪ್ರಾಚೀನ ಪ್ರತಿಗಳು ಸಿಕ್ಕಿದಂತೆ ಸರ್ವಜ್ಞ ತ್ರಿಪದಿಗಳ ಪೂರ್ಣ ಪ್ರತಿಯು ಸಿಗಬೇಕಾಗಿತ್ತು. ಸರ್ವಜ್ಞನು ಕೆಲವು ಮುಖ್ಯವಾದ ವಚನಗಳನ್ನು ಬರೆದಿಟ್ಟಿದ್ದರೂ ಇಟ್ಟಿರಬಹುದು. ಆದರೆ ವಿಶೇಷತಃ ಅತನ ಬಾಯಿಂದ ಕೇಳಿದವರು ಬರೆದಿಟ್ಟವು ಕೆಲವು. ಜನರಲ್ಲಿ ಬಾಯಿಂದ

ಬಾಯಿಗೆ ಪ್ರಚಾರದಲ್ಲಿ ಬಂದ ವಚನಗಳನ್ನು ಬರೆದಿಟ್ಟವು ಕೆಲವು. ಅಂತಹ ಸಂಗ್ರಹಕಾರರಲ್ಲಿ ಸಂಪಾದನೆ ಸಿದ್ಧವೀರಾಚಾರ್ಯನೊಬ್ಬನೆಂದು ಹೇಳಬಹುದು.

ಸರ್ವಜ್ಞನ ವಚನಗಳೆಲ್ಲಾ ಒಂದೆಡೆಯಲ್ಲಿ ಇದುವರೆಗೆ ಶ್ರೀಮಾನ್ ಉತ್ತಂಗಿಯವರು ಸರ್ವಜ್ಞ ವಚನಗಳ ಗ್ರಂಥವನ್ನು ಪ್ರಕಟಿಸುವ ವರೆಗೆ ಲಭಿಸುತ್ತಿರಲಿಲ್ಲವೆಂದು ಹೇಳಬಹುದಾಗಿದೆ. ಇಷ್ಟು ದೀರ್ಘಕಾಲದ ವರೆಗೆ ಸರ್ವಜ್ಞ ವಚನಗಳೆಲ್ಲವೂ ಒಂದೆಡೆ ಲಭಿಸದಂತಾಗಲು ಮುಖ್ಯ ಕಾರಣವೆಂದರೆ ಸರ್ವಜ್ಞನು ತನ್ನ ವಚನಗಳನ್ನೆಲ್ಲ ಒಂದು ಗ್ರಂಥರೂಪವಾಗಿ ಬರೆದಿಡದಿದ್ದುದೇ ಆಗಿದೆ.

ವಚನಗಳ ಸಾರ.

ಸರ್ವಜ್ಞಮೂರ್ತಿಯ ವಚನಗಳನ್ನು ಪ್ರಕಾಶಕರು (೧) ಪಾರಮಾರ್ಥಿಕ ವಚನಗಳು, (೨) ನೈತಿಕ ವಚನಗಳು, (೩) ಲೌಕಿಕ ಪದ್ಯಗಳು ಎಂಬುದಾಗಿ ವಿಭಾಗಿಸಿದ್ದು ಯೋಗ್ಯವೇ ಆಗಿದೆ. ಪಾರಮಾರ್ಥಿಕ ವಚನಗಳು ವೀರಶೈವ ಸಿದ್ಧಾಂತಕ್ಕೆ ಸಂಬಂಧಪಟ್ಟ ಗುರು, ಲಿಂಗ, ಜಂಗಮ, ತೀರ್ಥ, ಪ್ರಸಾದ ಮೊದಲಾದ ಅಷ್ಟಾವರಣ ವಿಚಾರಗಳನ್ನು ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಷಟ್ಸ್ಥಲ ವಿಚಾರಗಳನ್ನು ತಿಳಿಸತಕ್ಕವಾಗಿವೆ. ಮುಖ್ಯವಾಗಿ ಈ ಭಾಗವು ವೀರಶೈವ ಮತತತ್ವವನ್ನು ತಿಳಿಯುವವರಿಗೆ ಬಹಳ ಸಹಾಯಕವಾಗಿವೆ.

ನೈತಿಕವಚನಗಳು:— ಪ್ರಪಂಚದಲ್ಲಿ ಜೀವಿಸುವ ಪ್ರತಿಯೊಬ್ಬ ಮಾನವನಿಗೂ ಉಪಯುಕ್ತವಾಗಿವೆ. ಈ ಭಾಗದಲ್ಲಿ ಕವಿಯು ದಾನ, ಧರ್ಮ, ರಾಜನೀತಿ, ಸತ್ಸಂಗ, ದುಸ್ಸಂಗ, ಮೂರ್ಖರ ಸ್ವಭಾವ, ಅದೃಷ್ಟ ವಿಚಾರ ತನ್ನ ಕಾಲದ ಜೈನರು ಬ್ರಾಹ್ಮಣರು ಇವರ ಸ್ವಭಾವ ವಿವಿಧವಾದ ನೀತಿಗಳು ಇವುಗಳನ್ನು ಹೇಳಿದ್ದಾನೆ.

ಲೌಕಿಕ ಪದ್ಧತಿಗಳಲ್ಲಿ ಸ್ತ್ರೀಯರ ಲಕ್ಷಣ, ಸ್ವಭಾವ, ಜಾತಿಯ ರೀತಿ, ವಿಟರ ಸ್ವಭಾವ, ವೇಶ್ಯಾ ಹೃದಯ, ಅನ್ನದಾನದ ಫಲ. ರಸವಾದ ಕೆಲವು ಜ್ಯೋತಿಶ್ಶಾಸ್ತ್ರದ ವಿಚಾರಗಳು ಬೆಡಗಿನ ವಚನ ಇವುಗಳನ್ನು ಹೇಳಿದ್ದಾನೆ. ಸಾರಾಂಶ:— ಸರ್ವಜ್ಞಮೂರ್ತಿಯ ವಚನಗಳು ಮನುಷ್ಯನಿಗೆ ತಿಳಿಸಬೇಕಾದ ಸಕಲ ವಿಚಾರಗಳನ್ನೂ ಬಹಳ ಹೃದ

ಯಂಗವುವಾಗಿ ತಿಳಿಸುತ್ತವೆ. ಈತನ ಗ್ರಂಥವನ್ನು ಕನ್ನಡಿಗರ ಪಸ್ಪು ಕೋಶ (*Encyclopaedia*) ಎಂದು ಕರೆಯಬಹುದು. ಮುಖ್ಯವಾಗಿ ಈತನ ವಚನಗಳನ್ನು ಸಾಂಗವಾಗಿ ಓದಿದಲ್ಲಿ ಅವುಗಳ ಮಹತ್ವವು ಓದುಗರಿಗೆ ಅಂಗವಾಗಲಾರವು. ಸರ್ವಜ್ಞ ಕವಿಯ ಸರ್ವಜ್ಞತ್ವವು ತಿಳಿಯಲಾರದು.

ಶಾಸ್ತ್ರ ಪಾಂಡಿತ್ಯ.

ಸರ್ವಜ್ಞ ಮೂರ್ತಿಗೆ "ಸರ್ವಜ್ಞ" ಎಂಬ ಹೆಸರು ಜನ್ಮನಾಮವಾಗಿರದೆ (ಆ ಜನ್ಮನಾಮ ನಮಗೆ ತಿಳಿದುಬಂದಿಲ್ಲ.) ಜನರು ಇವನ ಬಹುಶ್ರುತತ್ವವನ್ನು ಕಂಡುಕೊಟ್ಟ ಬಿರುದಾಗಿರಬಹುದು. ಕವಿಯೂ ಕೂಡ ಈ ಅಭಿಪ್ರಾಯವನ್ನೇ "ಸರ್ವಜ್ಞನೆಂಬುವನು ಗರ್ವದಿಂದಿರದವನೆ? ಸರ್ವರೊಳಗೊಳಕೊಂಡು ನುಡಿಗಲಿತು ವಿದ್ಯದ ಪರ್ವತವೆ ಸರ್ವಜ್ಞ" ಎಂಬ ವಚನದಲ್ಲಿ ಮೌನವಾಗಿ ಪ್ರಕಟಿಸಿದ್ದಾನೆ.

ಕವಿಕುಲಲಲಾಮನಾದ ಕಾಲಿದಾಸನೂ ಕೂಡ "ವಂದಃ ಕವಿಯಃ ಪ್ರಾರ್ಥೀಗವಿಷ್ಯಾಮ್ಯುಪಹಾಸ್ಯತಾಂ। ಪ್ರಾಂಶು ಲಭ್ಯೇ ಪತೀಲೋಭಾದುದ್ಬಾಹುರಿವ ವಾಮನಃ ॥ ಅಂದರೆಃ— ಮಂದಬುದ್ಧಿಯುಳ್ಳ ನಾನು ಮಹಾ ಕವಿಯ ಕೀರ್ತಿಯನ್ನು ಅಪೇಕ್ಷಿಸಿ ಅಪಹಾಸ್ಯಕ್ಕೆ ಈಡಾಗುತ್ತಿದ್ದೇನೆ. ಈ ನನ್ನ ಪ್ರಯತ್ನವು ಗಿಡ್ಡ ಮಾನವನು ಉನ್ನತ ವೃಕ್ಷಕ್ಕೆ ಕೈಚಾಚಿ ವಿಫಲವಾದಂತಾಗಿದೆ" ಎಂದು ಹೇಳಿ ಅಪಾರವಾದ ವಿನಯವನ್ನು ಪ್ರಕಟಿಸಿರುವಾಗ ಈ ಕವಿಯು ಸರ್ವಜ್ಞನೆಂದು ಬಿರುದು ಕಟ್ಟಿಕೊಂಡುದು ಸರಿಯೇ? ಇದು ಇವನ ಹೆಮ್ಮೆಗೆ ನಿದರ್ಶನವಲ್ಲವೇ? ಎಂದು ಕೇಳುವವರೂ ಇದ್ದಾರೆ. ಇದಕ್ಕೆ ಸಮಾಧಾನವೂ ಉಂಟು.

ಕನ್ನಡ ಕವಿಗಳು ಪ್ರಾಯೇಣ ತಮ್ಮ ಬಿರುದುಗಳನ್ನು ತಾವು ಹೊಗಳಿಕೊಳ್ಳುವ ತಮ್ಮ ಪಾಂಡಿತ್ಯವನ್ನು ಹೊಗಳಿಕೊಳ್ಳುವ ಸಾಂಪ್ರದಾಯಪ್ರಿಯರಾಗಿದ್ದಾರೆ. ಕನ್ನಡ ಕವಿಗಳ ಈ ಸಂಪ್ರದಾಯಕ್ಕೆ ಸರ್ವಜ್ಞನು ಹೊರಗಾದವನಲ್ಲ. ಕನ್ನಡ ಕವಿಗಳ ಈ ಭಾವವು ದುರಹಂಕಾರವೆಂದು ಭಾವಿಸಬಾರದು. ಇದು ಆತ್ಮನಿಶ್ವಾಸದ ನುಡಿ. ಅಥವಾ ಸಾತ್ವಿಕಾಹಂಕಾರ. ಇವರಲ್ಲಿ ಸರ್ವಜ್ಞನು ತಾನು ಗರ್ವದಿಂದಾದವನಲ್ಲವೆಂದೂ ಸರ್ವರೊಳಗೊಂದೊಂದು ನುಡಿ ಕಲ್ತು ವಿದ್ಯದ ಪರ್ವತವಾದವನೆಂದೂ

ಬಹಳ ವಿನಯವಾದ ರೀತಿಯಿಂದಲೇ ತನ್ನ ಬಿರುದನ್ನು ಹೇಳಿ ವಾಚಕನ ಚಿತ್ತದ ಮೇಲೆ ತನ್ನ ಸರ್ವಜ್ಞತ್ವದ ಮುದ್ರೆ ಒತ್ತಿ ಅವರ ಚಿತ್ತ ಸಾಮ್ರಾಜ್ಯದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿಬಿಡುತ್ತಾನೆ ಆದುದರಿಂದ ವಿನಯಮೂರ್ತಿಯಾದ ಕಾಲಿದಾಸನಂತೆಯೇ ಸಾತ್ವಿಕ ಹೆಮ್ಮೆಯ ಸರ್ವಜ್ಞಮೂರ್ತಿಯೂ ನಮಗೆ ಮಾನ್ಯನಾಗಿದ್ದಾನೆ. ಇವನ ಒಂದೊಂದು ವಚನವೂ ಕವಿಯ ಸರ್ವಜ್ಞತ್ವವನ್ನು ತೋರಿಸುತ್ತವೆಯೆಂಬುದನ್ನು ವಾಚಕರು ಮೂಲ ಗ್ರಂಥವನ್ನು ಓದುವುದರಿಂದ ಮನಗಾಣಬಹುದು.

ಸರ್ವಜ್ಞನು ಈ ಪ್ರಪಂಚವೆಂಬ ಪಾಠಶಾಲೆಯಲ್ಲಿ ವಿದ್ವಾಂಸರಾದ ಅನೇಕ ಗುರುಗಳಿಂದ ಅನೇಕ ಶಾಸ್ತ್ರಗಳನ್ನು ಕಲಿತಿರಬಹುದೆಂದು ತೋರುತ್ತದೆ. ಇವನಿಗೆ ಜ್ಯೋತಿಷ-ವೈದ್ಯ-ರಸವಾದ-ಯೋಗ, ಸ್ತ್ರೀಪುರುಷ ಲಕ್ಷಣ, ಶಿವಾನುಭವ ಈ ಶಾಸ್ತ್ರಗಳಲ್ಲಿ ಬೇಕಾದಷ್ಟು ಪಾಂಡಿತ್ಯವಿತ್ತೆಂಬುದಕ್ಕೆ ಅವನ ಗ್ರಂಥವೇ ಸಾಕ್ಷಿಯಾಗಿದೆ. ಅವನ ಬೆಡಗಿನ ವಚನಗಳು ವಿದ್ವಾಂಸನ್ನು ಬೆರಗುಗೊಳಿಸುವುದಲ್ಲದೆ ಬೆರಳನ್ನು ಸಹ ಕಚ್ಚುವಂತೆ ಮಾಡುತ್ತವೆ. ಮೇಲಾಗಿ ಸರ್ವಜ್ಞನು ಉತ್ತಮ ಸಾಹಿತ್ಯವಿದನೂ, ವಿುಗಿಲಾದ ಲೋಕಾನುಭವಿಯೂ ಆಗಿದ್ದನೆಂಬುದು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಾದ ವಿಚಾರವಾಗಿದೆ. ಇವನ ವೈದ್ಯ ಪದ್ಧತಿ, ಜ್ಯೋತಿಷ ಪದ್ಧತಿ, ರಸವಾದ ಪದ್ಧತಿ, ಶಿವಯೋಗ ಪದ್ಧತಿ, ಇವುಗಳು ಇವನು ಅನೇಕ ಶಾಸ್ತ್ರಗಳನ್ನು ಬಲ್ಲವನೆಂಬುದಕ್ಕೆ ನಿದರ್ಶನವಾಗಿವೆ.

ಸಂಸ್ಕೃತ ಜ್ಞಾನವಿತ್ತೆ?

ಸರ್ವಜ್ಞಮೂರ್ತಿಗೆ ನಿರ್ವಾಣ ಭಾಷೆಯ ಪರಿಚಯವಿತ್ತೆ? ಎಂದು ಅನೇಕರು ಪ್ರಶ್ನವಾಡುತ್ತಾರೆ. ಇವನ ಗ್ರಂಥವನ್ನೆಲ್ಲಾ ಓದಿದರೆ "ತತ್ವಮಸಿ" "ಜಾತಸ್ಯಮರಣಂಧ್ರುವಂ" ಎಂಬ ಎರಡು ಮೂರು ಸಂಸ್ಕೃತ ಪದಗಳು ಮಾತ್ರ ಲಭಿಸುತ್ತವೆ. ಆದುದರಿಂದ ಇವನಿಗೆ ಸಂಸ್ಕೃತ ಭಾಷೆ ಬರುತ್ತಿರಲಿಲ್ಲವೆಂದು ಕೆಲವರು ತರ್ಕಿಸುತ್ತಾರೆ. ಇದು ಸರಿಯಲ್ಲವೆಂದು ತೋರುತ್ತದೆ. ಸರ್ವಜ್ಞಮೂರ್ತಿಯು ಅನೇಕ ಸಂಸ್ಕೃತನ್ಯಾಯಗಳನ್ನು ಕನ್ನಡ ಗಾದೆಗಳಲ್ಲಿ ಹೇಳಿದ್ದಾನೆ. ಇಂತಹ ಕೆಲವು ಸಂಸ್ಕೃತನ್ಯಾಯಗಳನ್ನು ಶ್ರೀ ಉತ್ತಂಗಿಯವರು ಪ್ರಥಮ ಮುದ್ರಣದ ಪೀಠಿಕೆಯಲ್ಲಿ ಕೊಟ್ಟಿದ್ದಾರೆ. ಜ್ಯೋತಿಷ್ಯ, ವೈದ್ಯಾದಿಶಾಸ್ತ್ರಜ್ಞಾನವನ್ನು ಸಂಸ್ಕೃತಜ್ಞಾನವಿಲ್ಲದೆ

ಸಂಪಾದಿಸುವುದಕ್ಕಾಗುತ್ತಿರಲಿಲ್ಲವೆಂದು ಹೇಳಬಹುದು. ಸರ್ವಜ್ಞನು ಕೇವಲ ಪಂಡಿತರಿಗಾಗಿ ತನ್ನ ಗ್ರಂಥವನ್ನು ನಿರ್ಮಿಸದೆ ಜನಸಾಮಾನ್ಯರನ್ನು ಉದ್ದೇಶಿಸಿ ತನ್ನ ವಚನಗಳನ್ನು ಹಾಡಿದ್ದರಿಂದಲೂ ಅವನು ಸಂಪೂರ್ಣವಾಗಿ ಕನ್ನಡಿಗತನವುಳ್ಳ ಕವಿಯಾದದರಿಂದಲೂ ಸಂಸ್ಕೃತದ ಅಡಂಬರಕ್ಕೆ ಹೋಗದೆ ತಿರುಳುಗನ್ನಡದಲ್ಲಿಯೇ ತನ್ನ ತ್ರಿಪದಿಗಳನ್ನು ಹಾಡಿಟ್ಟಾನೆ. ಇವನಿಗೆ ಭಗವದ್ಗೀತೆ, ಉಪನಿಷತ್ತು ಮೊದಲಾದುವುಗಳ ಜ್ಞಾನವಿತ್ತೆಂದು ಇವನ ವಚನಗಳನ್ನು ಓದುವದರಿಂದ ತಿಳಿದುಬರುತ್ತದೆ. ಆದುದರಿಂದ ಸರ್ವಜ್ಞನು ಸಂಸ್ಕೃತ ಜ್ಞಾನಹೀನನೆಂಬುದು ಸರಿಯಲ್ಲವೆಂದು ನಮ್ಮ ಭಾವನೆಯಾಗಿದೆ.

ಅಂದಿನ ಕರ್ನಾಟಕದ ಸ್ಥಿತಿ.

ಸರ್ವಜ್ಞಮೂರ್ತಿ ವಚನಗಳಿಂದ ಅಂದಿನ ಕರ್ನಾಟಕದ ಸ್ಥಿತಿಗತಿಗಳನ್ನು ಕೆಲಮಟ್ಟಿಗೆ ತಿಳಿಯಲಿಕ್ಕೂ ಅವಕಾಶವಿದೆ. ಬ್ರಾಹ್ಮಣಪದ್ಧತಿಯಲ್ಲಿ ತನ್ನ ಕಾಲದ ಬ್ರಾಹ್ಮಣ ಸಮಾಜದ ಗುಣಾವಗುಣಗಳನ್ನು ಟೀಕಿಸಿದ್ದಾನೆ.

ಅಂಕಿತದ ವಿಚಾರ.

ಸರ್ವಜ್ಞಮೂರ್ತಿಯು "ಸರ್ವಜ್ಞ" ಎಂಬ ಹೆಸರಿನಿಂದ ತನ್ನ ವಚನಗಳನ್ನು ಬರೆದಿದ್ದಾನೆ. ವಚನಗಳ ಕಡೆಯಲ್ಲಿ ಬರುವ ಈ ಹೆಸರನ್ನು "ಅಂಕಿತ" ಎಂದು ಹೇಳುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಮಹಾಮಹಾ ಕವಿಗಳೂ ಒಂದೊಂದು ದೇವರ ಅಂಕಿತ ಮಾಡಿ ತಮ್ಮ ಕಾವ್ಯಗಳನ್ನು ಬರೆದಿದ್ದಾರೆ. ಕುಮಾರವ್ಯಾಸನು ತನ್ನ ಕಾವ್ಯಗಳನ್ನು ಗದುಗಿನ ವೀರನಾರಾಯಣನಿಗೂ, ಲಕ್ಷ್ಮೀಶನು ದೇವಪುರದ ಲಕ್ಷ್ಮೀರಮಣನಿಗೂ, ಹರಿಹರ, ರಾಘವಾಂಕ, ಭೀಮಕವಿ, ವಿರೂಪಾಕ್ಷಪಂಡಿತಾದಿಗಳು ಹಂಪೆಯ ವಿರೂಪಾಕ್ಷನಿಗೂ, ನಿಜಗುಣನು ಶಂಭುಲಿಂಗನಿಗೂ ಪುರಂದರದಾಸನು ಪುರಂದರವಿಠಲನಿಗೂ, ಅಂಕಿತಮಾಡಿ ತಮ್ಮೀ ಗ್ರಂಥಗಳನ್ನೂ ವಚನಗಳನ್ನೂ ಬರೆದಿದ್ದಾರೆ.

ವೀರಶೈವ ವಚನಕಾರರು ಪ್ರತಿಯೊಬ್ಬರೂ ಒಂದೊಂದು ಅಂಕಿತವನ್ನು ಸ್ವೀಕರಿಸಿದ್ದಾರೆ. ಹರಿದಾಸರೂ ಬೇರೆ ಬೇರೆ ಅಂಕಿತಗಳಿಂದ ವಚನಗಳನ್ನು ನಿರ್ಮಿಸಿದ್ದಾರೆ.

ಸರ್ವಜ್ಞಮೂರ್ತಿಯು ಹೇಳುವ "ಸರ್ವಜ್ಞ" ಎಂಬ ಅಂಕಿತವು ಕವಿಯ ಹೆಸರೊ? ಅಥವಾ ಜಗಕೆ ಒಬ್ಬನೇ ದೇವನಾದ ಸರ್ವಜ್ಞನೆನಿಸಿದ ಭಗವಂತನ ಹೆಸರೋ? ಎಂಬುದು ವಿಚಾರಣೀಯವಾಗಿದೆ. ಈ ಕವಿಯು ಗರ್ವದಿಂದಿದ್ದವನಲ್ಲವಾದ್ದರಿಂದಲೂ, ಕೀರ್ತಿಕಾಂಕ್ಷೆಯಿಲ್ಲವಾದ್ದರಿಂದಲೂ ಇವನು ಹೇಳುವ ಅಂಕಿತವು ಕವಿಯ ಹೆಸರಲ್ಲದೆ ಭಗವಂತನಾದ ಸರ್ವಜ್ಞನನ್ನೇ ನಿರ್ದೇಶಿಸಿದ್ದಾಗಿರಬೇಕೆಂದು ನಮ್ಮ ಮತವಾಗಿದೆ. ಏತಕ್ಕಂತೆ ಹಲವು ಕನ್ನಡ ಕವಿಗಳೂ ತತ್ತ್ವಾಪಿ ವೀರಶೈವ ವಚನಕಾರರೂ ಸರ್ವಶಕ್ತನಾದ ಪರಮೇಶ್ವರನನ್ನೇ ಯಾವುದಾದರೊಂದು ಅಂಕಿತದಿಂದ ಸಂಬೋಧಿಸಿ ತಮ್ಮ ಗ್ರಂಥಗಳನ್ನು ಬರೆದಿದ್ದಾರೆ. ಸರ್ವಜ್ಞಮೂರ್ತಿಯೂ ಈ ಪದ್ಧತಿಗೆ ಅಪವಾದವಲ್ಲವೆಂದು ನಮ್ಮ ತಿಳುವಳಿಕೆಯಾಗಿದೆ.

ಅಂದಿನ ಬ್ರಾಹ್ಮಣ ಸಮಾಜದಲ್ಲಿ ಬಾಹ್ಯಾಚಾರವೂ ವರ್ಣಭೇದವೂ ಬಹಳವಾಗಿತ್ತು. ಯಜ್ಞಯಾಗಗಳ ನೆವದಲ್ಲಿ ಪ್ರಾಣಹಿಂಸೆ ಬಹಳವಾಗಿ ನಡೆಯುತ್ತಿತ್ತು. ವೇದಪ್ರಾಮಾಣ್ಯದ ಭರದಲ್ಲಿ ಸ್ವತಂತ್ರ ವಿಚಾರಗಳಿಗೆ ಮಾನ್ಯತೆಯಿರಲಿಲ್ಲ. ಜನಾಂಗವು ಕೇವಲ ಶ್ರದ್ಧಾಪ್ರಪಂಚದಲ್ಲಿಯೇ ತೇಲಿ ಮುಳುಗಿತ್ತು. ಬ್ರಾಹ್ಮಣರಲ್ಲಿ ಒಂದು ಕುಲವಾದ ಕಮ್ಮೆ ಎಂಬ ಪಂಗಡಕ್ಕೆ ಸೇರಿದವರು "ತನಗಾದವರ ಕೊಲುವ" ಸ್ಥಿತಿಗೆ ಬಂದಿದ್ದರು. ಅಕ್ಕರವ ಕಲಿತವರು ಉಪಕಾರಿಗಳನ್ನು ತಿನಗಲಿತಿದ್ದರು. ಕರಣಿಕರು ನರಕಕ್ಕೆ ಸಾಧೇಯವನ್ನು ಕಟ್ಟಿಕೊಳ್ಳುತ್ತಿದ್ದರು "ಹಾರುವನು ಪರಿಹಾರುವನಪಕಾರಿ ಹಾರುವನು ತೋರ್ವಬಹುದಾರಿ ಮುನಿದರೆ ಮಾರುವನೆ ಮಾರಿ ಸರ್ವಜ್ಞ ॥ ಎಂದು ಮೊದಲಾಗಿ ಅಂದಿನ ಹಾರುವರ (ಬ್ರಾಹ್ಮಣರ) ವಿಚಾರವನ್ನು ಕವಿಯು ಹೇಳಿರುವನು.

ಜೈನ ಪದ್ಧತಿಯಲ್ಲಿ ತನ್ನ ಕಾಲದ ಜೈನ ಸಮಾಜದ ರೀತಿನೀತಿಗಳನ್ನೂ ಸರ್ವಜ್ಞನು ವಿವರಿಸಿರುವನು. ಸರ್ವಜ್ಞನು ಸ್ವಭಾವತಃ ಅಹಿಂಸಾಪ್ರಿಯನಾದ್ದರಿಂದಲೂ ಸರ್ವಜ್ಞನು ಅನುಸರಿಸಿದ ವೀರಶೈವ ಸಿದ್ಧಾಂತದಲ್ಲಿ ಸಹ ಪ್ರಾಣಿಹಿಂಸಾಪ್ರಧಾನವಾದ ಯಜ್ಞಯಾಗಗಳು ನಿಷೇಧಿಸಿರುವುದರಿಂದಲೂ ಕವಿಯು ಅಹಿಂಸಾಪ್ರಧಾನವಾದ ಜೈನ ಧರ್ಮವನ್ನು ಬಹಳವಾಗಿ ಮೆಚ್ಚಿದ್ದಾನೆ. ಇದಕ್ಕೆ "ಕೊಲುವಧರ್ಮವನೊಯ್ದು ಒಲೆಯೊಳಗೆ ಇಕ್ಕುವಾ। ಕೊಲಲಾಗದೆಂಬ ಜೈನನ ಮತವೆನ್ನ ತಲೆಯ ಮೇಲಿರಲಿ ಸರ್ವಜ್ಞ" ಈ ವಚನವೇ ಸಾಕ್ಷಿಯಾಗಿದೆ. ಅಂದಿನ

ಶ್ರವಣರು ಕೇವಲ ಸತ್ಯವಂತರಾಗಿದ್ದರೆಂದು ತೋರುತ್ತದೆ. "ಉಪ್ಪ ಸಪ್ಪನೆಯಕ್ಕು ಕಪ್ಪರವು ಕರಿದಕ್ಕು। ಸರ್ವನಿಗೆ ಬಾಲವೆರಡಕ್ಕು ಶ್ರವಣರು। ತಪ್ಪಾದಿದಂದು ಸರ್ವಜ್ಞ ॥ ಎಂಬ ಪದ್ಯವು ನಮ್ಮ ಮೇಲಿನ ಅಭಿಪ್ರಾಯಕ್ಕೆ ಆಧಾರವಾಗಿದೆ. ಅಂದಿನ ಜೈನ ಸಮಾಜವು ಸರ್ವಜ್ಞನಂತಹ ಖಂಡಿತವಾದಿಯ ಮೆಚ್ಚುಗೆಯನ್ನು ಪಡೆಯುವಂತಿತ್ತೆಂದು ತೋರುತ್ತದೆ.

ಪಟ್ಟಿಲ ವಚನಗಳನ್ನು ಓದಿದರೆ ಅಂದಿನ ಲಿಂಗವಂತ ಸಮಾಜದ ಸ್ಥಿತಿಗತಿಯನ್ನೂ ನಾವು ಊಹಿಸಬಹುದು. ವೀರಶೈವರಲ್ಲಿ 'ಭವಿ ಭಕ್ತ' ಎಂಬ ಪಕ್ಷಪಾತವು ಬಹಳವಾಗಿತ್ತೆಂದು ತೋರುತ್ತದೆ. ಆಲಸ್ಯದಿಂದ ಶಿವಪೂಜೆಮಾಡುವವರನ್ನು ಲಿಂಗವ ಕಂಡು ಪೂಜಿಸದೆ ಯಮದಂಡನೆಗೆ ಗುರಿಯಾಗುತ್ತಿದ್ದವರನ್ನೂ ಇಷ್ಟಲಿಂಗದಿ ಮನವ ನೆಟ್ಟನೆ ನಿಲಿಸದೇ ಕಷ್ಟಭ್ರಮೆಗಳಿಗೊಳಗಾಗಿ ಕರ್ಮದ ಬಟ್ಟೆಗೆ ಹೋದವರನ್ನೂ ಲಿಂಗಕ್ಕೆ ತೋರದೇ ನುಂಗುವ ಭಕ್ತರನ್ನೂ ತಾನೆಂಬುದಿಲ್ಲದ ಐಕ್ಯರನ್ನೂ ಸುಖದುಃಖವನ್ನು ಶಿವನಿಗಿತ್ತುತಾ ಕಿಂಕರತೆಯನ್ನು ಕೈಕೊಂಡ ಶರಣರನ್ನೂ ಹಿಂಸೆಗೆ ಒಡಂಬಡದ ಮಾಹೇಶ್ವರರನ್ನೂ ಶಿವಪೂಜೆಮಾಡಿ ಶಿವನ ಕೊಂಡಾಡಿ ಶಿವಲೋಕವನ್ನು ಸೂರೆಗೊಳ್ಳುವ ಶಿವಭಕ್ತರನ್ನೂ ಸರ್ವಜ್ಞಮೂರ್ತಿಯು ಕಂಡಿದ್ದನೆಂದು ತೋರುತ್ತದೆ. ಈ ಕವಿಯು ಪಟ್ಟಿಲವಚನಗಳ ಮೇಲಿಂದ ಅಂದಿನ ವೀರಶೈವ ಸಮಾಜವು ಐವತ್ತಕ್ಕೆ ಏರದ ಐದಕ್ಕೆ ಇಳಿಯದ ಸ್ಥಿತಿಯಲ್ಲಿತ್ತೆಂಬುದನ್ನು ನಾವು ಊಹಿಸಬಹುದಾಗಿದೆ.

ಇದೂ ಅಲ್ಲದೆ ಕವಿಯು ಕಾಲದ ತಿಗುಳ (ತಮಿಳ) ತೆಲಗ, ತುರುಕ, ಉಕ್ಕುಸಾಲಿಗ, ಬಡಿಗ, ಬಣಜಿಗ, ಪಂಚಾಳ, ಹಟಗಾರ, ಗಾಜುಗಾರ, ಬೇಡ, ಬೆಸ್ತ, ಜಾಲಗಾರ ಈ ಮೊದಲಾದ ಜನರ ಗುಣಶೀಲಗಳನ್ನು ತಿಳಿಯಲಿಕ್ಕೆ ಕೆಲವು ವಚನಗಳು ನಮಗೆ ಸಹಾಯಕವಾಗಿವೆ. ಇತ್ಯಾದಿ ವಿಚಾರಗಳಿಂದ ಅಂದಿನ ಕನ್ನಡನಾಡಿನ ಜನಜೀವನವು ಹೇಗಿತ್ತೆಂಬುದನ್ನು ನಾವು ಊಹಿಸಬಹುದಾಗಿದೆ.

ಕವಿಯ ಮುಖ್ಯ ಸಂದೇಶ.

ಸರ್ವಜ್ಞಮೂರ್ತಿಯ ಸಂದೇಶಗಳಲ್ಲಿ ಮುಖ್ಯವಾದ್ದು ದೇವರು ಒಬ್ಬನೇ ಎಂಬ ಉಪನಿಷತ್ಸಿದ್ಧಾಂತವನ್ನೇ ಈ ಕವಿಯು ಎತ್ತಿಹಿಡಿದು

ಮುಕ್ತ ಕುಲಗೋತ್ರಗಳ ದುರಭಿಮಾನ ಕಡಿಮೆಯಾಗಬೇಕೆಂದು ಹಿಂದೂ ಸಮಾಜದ ನಾಶಕ್ಕೆ ಮುಖ್ಯ ಕಾರಣಗಳಾದ

೧ ದೇವರು ಬಹುಜನರೆಂದೂ ಅವರೊಳಗೆ ಹೆಚ್ಚುಕಡಿಮೆ ಭಾವ ಇಂದೂ ಭಾವಿಸಿದುದು.

೨. ವರ್ಣಾಶ್ರಮಿಗಳ ಅಭಿಮಾನ, ಜಾತಿ-ಮತಗಳ ಗೊಂದಲದಿಂದ ಹಿಂದೂ ಸಮಾಜದಲ್ಲಿ ಅನೈಕಮತ್ಯವು ಬೆಳೆದುದು.

ಈ ಎರಡು ವಿಚಾರಗಳಿಂದ ಹಿಂದೂ ಸಮಾಜವು ನಾಶವಾಗುತ್ತಿದೆಯೆಂದು ಮಹಾನುಭಾವನಾದ ಸರ್ವಜ್ಞನು ತಿಳಿದು ದೇವರು ಒಬ್ಬನೇ ಎಂದೂ, ದೇವರೊಲಿದಾತನೇ ಜಾತನೆಂದೂ, ಜಾತಿ ಹೀನನ ಮನೆಯು ಜ್ಯೋತಿಹೀನವಲ್ಲೆಂದೂ ಎಚ್ಚರಿಸಿ ಅಜ್ಞಾನಮಯವಾಗಿದ್ದ ಸಮಾಜಕ್ಕೆ ಎಚ್ಚರಿಕೆಯ ಡಂಗುರವನ್ನು ಸಾರಿ ಹೇಳಿದನು. ಸರ್ವಜ್ಞಮೂರ್ತಿಯಿಂದ ಕರ್ನಾಟಕಕ್ಕಾದ ಈ ಉಪಕಾರವು ಸಾಮಾನ್ಯವಾದುದಲ್ಲ. ಕರ್ನಾಟಕದಲ್ಲಿ ಅನ್ಯಮತ ಸಹಿಷ್ಣುತಾ ಭಾವವೂ, ಜಾತಿ-ಜಾತಿಗಳ ಪ್ರೇಮ ಬಾಂಧವ್ಯವೂ, ಏಕದೇವೋಪಾಸನೆಯ ತತ್ವವೂ ಬಹು ಜನರಲ್ಲಿ ನೆಲೆಗೊಳ್ಳಲಿಕ್ಕೆ ಸರ್ವಜ್ಞ ಸಂದೇಶವು ಬಹುಮಟ್ಟಿಗೆ ಕಾರಣವೆಂದು ನಾವು ಭಾವಿಸಿದ್ದೇವೆ.

ನಡೆವುದೊಂದೇ ಭೂವಿ ಕುಡಿವುದೊಂದೇ ನೀರು।
ಸುಡುವಗ್ನಿಯೊಂದೆ ಇರುತಿರೆ ಕುಲಗೋತ್ರ ।
ನಡುವೆ ಎತ್ತಣದು ಸರ್ವಜ್ಞ ॥

ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ।
ಜಾತಿ ವಿಜಾತಿ ಎನಬೇಡ ದೇವನೊಲಿ।
ದಾತನೇ ಜಾತ ಸರ್ವಜ್ಞ ॥

ಯಾತರದು ಹೂವೇನು ನಾ ತರದು ಸಾಲದೇ।
ಜಾತಿ ವಿಜಾತಿ ಎನಬೇಡ ದೇವನೊಲಿ।
ದಾತನೇ ಜಾತ ಸರ್ವಜ್ಞ ॥

ಅವಯವಗಳೆಲ್ಲರಿಗೆ ಸಮನಾಗಿ ಇರುತಿರಲು ।
ಭವಿ, ಭಕ್ತ, ಶ್ವಪಚ, ಶೂದ್ರರು ಇಂತೆಂಬ।
ಕವನಲಿಕ್ಷಣದು ಸರ್ವಜ್ಞ ॥

ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ।
ಒಬ್ಬ ಸರ್ವಜ್ಞಕರ್ತನು ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ ॥
ಆ ದೇವ ಈ ದೇವ ಮಾದೇವನೆನಬೇಡ।
ಆ ದೇವ ದೇವ ಭುವನ ಪ್ರಾಣಿಗಳ।
ನಾದವನೆ ದೇವ ಸರ್ವಜ್ಞ ॥

ಎಂಬೀ ವಚನಗಳನ್ನು ಹಿಂದುವೆನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ಸದಾ ಪಠಿಸುತ್ತಿರುವುದು ಒಳ್ಳೆಯದು.

ಮೂರ್ತಿಪೂಜೆ.

ಮೂರ್ತಿಪೂಜೆಯು ಆರ್ಯ ಸಂಸ್ಕೃತಿಗೆ ಸೇರಿದುದಲ್ಲ. ಇದು ದ್ರಾವಿಡ ಸಂಸ್ಕೃತಿಯ ಕೊಡುಗೆ. ಈಗಿನ ಹಿಂದೂ ಸಮಾಜವು ಆರ್ಯ ದ್ರಾವಿಡ ಸಂಸ್ಕೃತಿಗಳ ಮಿಶ್ರ ಸಂಸ್ಕೃತಿಗಳನ್ನು ಸ್ವೀಕರಿಸಿದೆ. ದೇವರನ್ನು ಮೂರ್ತಿಗಳಲ್ಲಿ ಧಾವಿಸಿ ಪೂಜಿಸುವುದೂ, ಬಹುದೇವತೋಪಾಸನೆ, ಕ್ಷುದ್ರ ದೇವತೋಪಾಸನೆಯೂ ದ್ರಾವಿಡರವೆಂಬುದನ್ನು ಇತಿಹಾಸವಿದರೆಲ್ಲರೂ ಒಪ್ಪಿಕೊಂಡಿದ್ದಾರೆ ಮೂರ್ತಿಪೂಜೆಯಲ್ಲಿ ಗುಣವಿದ್ದಂತೆ ದೋಷವೂ ಇದೆ. ಸರ್ವಜ್ಞಮೂರ್ತಿಯು ಖಡಾಖಡಿಯಾಗಿ ಮೂರ್ತಿಪೂಜೆಯನ್ನು ಖಂಡಿಸಿದ್ದರೂ ತಾನು ಲಿಂಗರೂಪೀ ಮೂರ್ತಿಯನ್ನು ಪೂಜಿಸತಕ್ಕವನೇ ಆಗಿದ್ದನು. ಆದುದರಿಂದ ಅವನ ಮೂರ್ತಿಪೂಜಾ ಖಂಡನೆಯು ಕ್ರೈಸ್ತ ಮಹಮ್ಮದೀಯರ ಮೂರ್ತಿಪೂಜಾ ವಿರೋಧದಂತಿರದೆ ಮೂರ್ತಿಪೂಜೆಯ ಅತಿರೇಕವನ್ನು ಮಾತ್ರ ಖಂಡಿಸಿದ್ದಾನೆಂದು ಭಾವಿಸಬೇಕಾಗಿದೆ.

ಆದಿದೈವವನು ತಾ ಭೇದಿಸಲಿಕರಿಯದೇ।
ಹಾದಿಯಾ ಕಲ್ಲಿಗೆಡೆಮಾಡಿ ನಮಿಸುವಾ।
ಮಾದಿಗರ ನೋಡು ಸರ್ವಜ್ಞ।
ತನ್ನಲಿಹ ಲಿಂಗವನು ಮನ್ನಿಸಲಿ ಕರಿಯದೇ
ಬಿನ್ನಣದಿ ಕಟಿದ ಪ್ರತಿಮೆಗಳಗೆಂಗುತಿಹ।
ಅನ್ಯಾಯ ನೋಡ ಸರ್ವಜ್ಞ ॥
ಉಣಬಂದ ಜಂಗಮಕೆ ಉಣಬಡಿಸಲೊಲ್ಲದೆ।
ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ।
ಬಣಗುಗಳ ನೋಡು ಸರ್ವಜ್ಞ ॥

ಕಲ್ಲು ಕಲ್ಲೆಂಬುವಾ ಕಲ್ಲೊಳಿರ್ಪುದೆ ದೈವ।
ಕಲ್ಲಲಿ ಕಳೆಯ ನಿಲಿಸಿದಾ ಗುರುವಿನ।
ನೊಲ್ಲಲ್ಲೆ ದೈವ ಸರ್ವಜ್ಞ ॥
ಒಟ್ಟಿಯಾ ಕಲ್ಲಿಂಗೆ ಒಟ್ಟಿ ಪತ್ರಿಯನಿಟ್ಟು।
ಕಟ್ಟಿದಾ ಲಿಂಗವಡಿಯಾಗಿ ಶರಣೆಂಬ।
ಭ್ರಷ್ಟರನು ನೋಡು ಸರ್ವಜ್ಞ ॥

ಮೇಲೆ ಹೇಳಿದ ವಚನಗಳಲ್ಲಿ ಮೂರ್ತಿಪೂಜೆಯ ನಿರಸನ ಮಾಡಿದ್ದರೂ "ಕಟ್ಟಿದಾ ಲಿಂಗವಡಿ ಮಾಡಿ" ಅಂದರೆ ವೀರಶೈವನಾದವನು ಇಷ್ಟಲಿಂಗವನ್ನು ಕೆಳಗುಮಾಡಿ ಸ್ಥಾವರ ಲಿಂಗಕ್ಕೆ ನಮಸ್ಕರಿಸಬಾರದೆಂದು ಕವಿಯು ಹೇಳುತ್ತಾನೆ. ಇಲ್ಲಿ ವೀರಶೈವ ಸಿದ್ಧಾಂತದಂತೆ ಇಷ್ಟಲಿಂಗ ಪೂಜೆಯನ್ನು ಕವಿಯು ಅಂಗೀಕರಿಸಿರುವುದರಿಂದಲೂ ಲಿಂಗಮುಖವು ಜಂಗಮವೆಂಬ ವೀರಶೈವ ತತ್ವವನ್ನು ಮೇಲಿನ ಮೂರನೇ ವಚನದಲ್ಲಿ ಹೇಳಿರುವುದರಿಂದಲೂ ಕವಿಯು ಮೂರ್ತಿಪೂಜೆಯ ಅತಿರೇಕವನ್ನು ಮಾತ್ರ ಖಂಡಿಸುವನೇ ಹೊರತು ಇಷ್ಟಲಿಂಗರೂಪವಾದ ಪ್ರೌಢತಮವಾದ ಮೂರ್ತಿ ಪೂಜೆಯನ್ನು ನಿರಸನಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕವಿಯು ಮೂರ್ತಿಪೂಜೆಯಲ್ಲಿ ತೇಲಿ ಮುಳುಗಿ ಅದರ ತತ್ವವನ್ನು ತಿಳಿಯದೆ ಅಂಧಶ್ರದ್ಧೆಯಲ್ಲಿ ರವಿಸುವವರಿಗೆ ಈ ಮೂಲಕ ಎಚ್ಚರಿಕೆ ಕೊಟ್ಟಿರುವುದು ಯೋಗ್ಯವೇ ಆಗಿದೆ.

ಕವಿಯು ವಿರಕ್ತನಾಗಿದ್ದನು.

ಸರ್ವಜ್ಞಮೂರ್ತಿಯು ಅನೇಕ ವಚನಗಳಲ್ಲಿ ಸ್ತ್ರೀ ಪುರುಷ ರಹಸ್ಯಗಳನ್ನು ವಿವರಿಸಿರುವುದರಿಂದ ಕೆಲವರು ಇವನು ಸಂಸಾರಿಯಾಗಿರಬಹುದೇ? ಎಂದು ಸಂದೇಹಿಸುವರು. ಇದು ಸರಿಯಲ್ಲವೆಂದು ತೋರುತ್ತದೆ ಶೃಂಗಾರ ರಸ ಸಂಬಂಧದಿಂದ ವಿಚಾರಗಳನ್ನು ಸ್ತ್ರೀ ಸಂಪರ್ಕವಿಲ್ಲದ ಯೋಗಿಗಳೂ ಹೇಳಿರುವ ಉದಾಹರಣೆಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಿಕ್ಕುತ್ತವೆ. ಮಹಾಕವಿ ಹರಿಹರದೇವ, ಗುಬ್ಬಿ ಮಲ್ಲಣಾರ್ಯ, ಷಡಿಕ್ಷರದೇವ ಮೊದಲಾದ ಕವಿ ಪುಂಗವರು ತಮ್ಮ ಕಾವ್ಯಗಳಲ್ಲಿ ಜೇಕಾದಷ್ಟು ಶೃಂಗಾರದ ಪ್ರಸಂಗಗಳನ್ನು ಹೇಳಿದ್ದರೂ ಅವರೆಲ್ಲರೂ ಮಹಾ ಶಿವಯೋಗಿಗಳೆಂದೇ ಇಂದಿನ ವರೆಗೂ ಪರಿಗಣಿತರಾಗಿದ್ದಾರೆ. ಸರ್ವ

ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ ।
ಒಬ್ಬ ಸರ್ವಜ್ಞಕರ್ತನು ಜಗಕೆಲ್ಲ
ಒಬ್ಬನೇ ದೈವ ಸರ್ವಜ್ಞ ॥

ಆ ದೇವ ಈ ದೇವ ಮಾದೇವನೆನಬೇಡ ।
ಆ ದೇವ ದೇವ ಭುವನ ಪ್ರಾಣಿಗಳ ।
ಗಾವವನೆ ದೇವ ಸರ್ವಜ್ಞ ॥

ಎಂಬೀ ವಚನಗಳನ್ನು ಹಿಂದುವೆನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ಸದಾ ಪಠಿಸುತ್ತಿರುವುದು ಒಳ್ಳೆಯದು.

ಮೂರ್ತಿಪೂಜೆ.

ಮೂರ್ತಿಪೂಜೆಯು ಆರ್ಯ ಸಂಸ್ಕೃತಿಗೆ ಸೇರಿದುದಲ್ಲ. ಇದು ದ್ರಾವಿಡ ಸಂಸ್ಕೃತಿಯ ಕುರುಹು. ಈಗಿನ ಹಿಂದೂ ಸಮಾಜವು ಆರ್ಯ ದ್ರಾವಿಡ ಸಂಸ್ಕೃತಿಗಳ ಮಿಶ್ರ ಸಂಸ್ಕೃತಿಗಳನ್ನು ಸ್ವೀಕರಿಸಿದೆ. ದೇವರನ್ನು ಮೂರ್ತಿಗಳಲ್ಲಿ ಧಾವಿಸಿ ಪೂಜಿಸುವುದೂ, ಬಹುದೇವತೋಪಾಸನೆ, ಕ್ಷುದ್ರ ದೇವತೋಪಾಸನೆಯೂ ದ್ರಾವಿಡರವೆಂಬುದನ್ನು ಇತಿಹಾಸವಿದರೆಲ್ಲರೂ ಒಪ್ಪಿಕೊಂಡಿದ್ದಾರೆ ಮೂರ್ತಿಪೂಜೆಯಲ್ಲಿ ಗುಣವಿದ್ದಂತೆ ದೋಷವೂ ಇದೆ. ಸರ್ವಜ್ಞಮೂರ್ತಿಯು ಖಡಾಖಡಿಯಾಗಿ ಮೂರ್ತಿಪೂಜೆಯನ್ನು ಖಂಡಿಸಿದ್ದರೂ ತಾನು ಲಿಂಗರೂಪೀ ಮೂರ್ತಿಯನ್ನು ಪೂಜಿಸತಕ್ಕವನೇ ಆಗಿದ್ದನು. ಆದುದರಿಂದ ಅವನ ಮೂರ್ತಿಪೂಜಾ ಖಂಡನೆಯು ಕ್ರೈಸ್ತ ಮಹಮ್ಮದೀಯರ ಮೂರ್ತಿಪೂಜಾ ವಿರೋಧದಂತಿರದೆ ಮೂರ್ತಿಪೂಜೆಯ ಅತಿರೇಕವನ್ನು ಮಾತ್ರ ಖಂಡಿಸಿದ್ದಾನೆಂದು ಭಾವಿಸಬೇಕಾಗಿದೆ.

ಆದಿದೈವವನು ತಾ ಭೇದಿಸಲಿಕರಿಯದೇ ।
ಹಾದಿಯಾ ಕಲ್ಲಿಗೆಡೆಮಾಡಿ ನಮಿಸುವಾ ।
ಮಾದಿಗರ ನೋಡು ಸರ್ವಜ್ಞ ।

ತನ್ನಲಿಹ ಲಿಂಗವನು ಮನ್ನಿಸಲಿ ಕರಿಯದೇ
ಬಿನ್ನಣದಿ ಕಟಿದ ಪ್ರತಿಮೆಗಳಿಗೆಂಗುತಿಹ ।
ಅನ್ಯಾಯ ನೋಡ ಸರ್ವಜ್ಞ ॥

ಉಣಬಂದ ಜಂಗಮಕೆ ಉಣಬಡಿಸಲೊಲ್ಲದೆ ।
ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ ।
ಬಣಗುಗಳ ನೋಡು ಸರ್ವಜ್ಞ ॥

ಕಲ್ಲು ಕಲ್ಲೆಂಬುವಾ ಕಲ್ಲೊಳಿರ್ಪುದೆ ದೈವ ।
ಕಲ್ಲಲ್ಲಿ ಕಳೆಯ ನಿಲಿಸಿದಾ ಗುರುವಿನ ।
ಸೊಲ್ಲಲ್ಲೆ ದೈವ ಸರ್ವಜ್ಞ ॥

ಒಟ್ಟಿಯಾ ಕಲ್ಲಿಂಗೆ ಒಟ್ಟಿ ಪತ್ರಿಯನಿಟ್ಟು ।
ಕಟ್ಟಿದಾ ಲಿಂಗವಡಿಯಾಗಿ ಶರಣೆಂಬ ।
ಭ್ರಷ್ಟರನು ನೋಡು ಸರ್ವಜ್ಞ ॥

ಮೇಲೆ ಹೇಳಿದ ವಚನಗಳಲ್ಲಿ ಮೂರ್ತಿಪೂಜೆಯು ನಿರಸನ ಮಾಡಿದ್ದರೂ "ಕಟ್ಟಿದಾ ಲಿಂಗವಡಿ ಮಾಡಿ" ಅಂದರೆ ವೀರಶೈವನಾದವನು ಇಷ್ಟಲಿಂಗವನ್ನು ಕೆಳಗುವಾಡಿ ಸ್ಥಾವರ ಲಿಂಗಕ್ಕೆ ನಮಸ್ಕರಿಸಬಾರದೆಂದು ಕವಿಯು ಹೇಳುತ್ತಾನೆ. ಇಲ್ಲಿ ವೀರಶೈವ ಸಿದ್ಧಾಂತದಂತೆ ಇಷ್ಟಲಿಂಗ ಪೂಜೆಯನ್ನು ಕವಿಯು ಅಂಗೀಕರಿಸಿರುವುದರಿಂದಲೂ ಲಿಂಗಮುಖವು ಜಂಗಮವೆಂಬ ವೀರಶೈವ ತತ್ವವನ್ನು ಮೇಲಿನ ಮೂರನೇ ವಚನದಲ್ಲಿ ಹೇಳಿರುವುದರಿಂದಲೂ ಕವಿಯು ಮೂರ್ತಿಪೂಜೆಯ ಅತಿರೇಕವನ್ನು ಮಾತ್ರ ಖಂಡಿಸುವನೇ ಹೊರತು ಇಷ್ಟಲಿಂಗರೂಪವಾದ ಪ್ರಾಥಮಿಕವಾದ ಮೂರ್ತಿ ಪೂಜೆಯನ್ನು ನಿರಸನಮಾಡಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಕವಿಯು ಮೂರ್ತಿಪೂಜೆಯಲ್ಲಿ ತೇಲಿ ಮುಳುಗಿ ಅದರ ತತ್ವವನ್ನು ತಿಳಿಯದೆ ಅಂಧಶ್ರದ್ಧೆಯಲ್ಲಿ ರವಿಸುವವರಿಗೆ ಈ ಮೂಲಕ ಎಚ್ಚರಿಕೆ ಕೊಟ್ಟಿರುವುದು ಯೋಗ್ಯವೇ ಆಗಿದೆ.

ಕವಿಯು ವಿರಕ್ತನಾಗಿದ್ದನು.

ಸರ್ವಜ್ಞಮೂರ್ತಿಯು ಅನೇಕ ವಚನಗಳಲ್ಲಿ ಸ್ತ್ರೀ ಪುರುಷ ರಜಸ್ಯಗಳನ್ನು ವಿವರಿಸಿರುವುದರಿಂದ ಕೆಲವರು ಇವನು ಸಂಸಾರಿಯಾಗಿರಬಹುದೇ? ಎಂದು ಸಂದೇಹಿಸುವರು. ಇದು ಸರಿಯಲ್ಲವೆಂದು ತೋರುತ್ತದೆ ಶೃಂಗಾರ ರಸ ಸಂಬಂಧದಿಂದ ವಿಚಾರಗಳನ್ನು ಸ್ತ್ರೀ ಸಂಪರ್ಕವಿಲ್ಲದ ಯೋಗಿಗಳೂ ಹೇಳಿರುವ ಉದಾಹರಣೆಗಳು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಸಿಕ್ಕುತ್ತವೆ. ಮಹಾಕವಿ ಹರಿಹರದೇವ, ಗುಬ್ಬಿ ಮಲ್ಲಣಾರ್ಯ, ಷಡಕ್ಷರದೇವ ಮೊದಲಾದ ಕವಿ ಪುಂಗವರು ತಮ್ಮ ಕಾವ್ಯಗಳಲ್ಲಿ ಬೇಕಾದಷ್ಟು ಶೃಂಗಾರದ ಪ್ರಸಂಗಗಳನ್ನು ಹೇಳಿದ್ದರೂ ಅವರೆಲ್ಲರೂ ಮಹಾ ಶಿವಯೋಗಿಗಳೆಂದೇ ಇಂದಿನ ವರೆಗೂ ಪರಿಗಣಿತರಾಗಿದ್ದಾರೆ. ಸರ್ವ

ಜ್ಞಾನಿದರೂ ಈ ಪಂಕ್ತಿಗೇ ಸೇರತಕ್ಕವನು. ಶಾಸ್ತ್ರಜ್ಞಾನದಿಂದಲೂ, ಕಾವ್ಯ ಪರಿಚಯದಿಂದಲೂ, ಮಹಾ ಶಕ್ತಿಯಿಂದಲೂ ಕವಿಗಳು ಬೇಕಾದು ದನ್ನು ಬರೆಯಬಲ್ಲರು. ವೇಶ್ಯಾವಾಟಿಯ ವಿಚಾರವನ್ನು ಬರೆದಿರುವ ಮಹಾ ಕವಿಗಳೆಲ್ಲರೂ ಸೂಳೆಗೇರಿಯಲ್ಲಿ ಉತ್ತೀರ್ಣರಾಗಬೇಕಾದ ಚಾಣಾಕ್ಷತೆ ಹೇಗಿಲ್ಲವೋ ಹಾಗೆ ಸ್ತ್ರೀ ರಹಸ್ಯ ವಿಚಾರವನ್ನು ಹೇಳುವ ಕವಿಗಳೆಲ್ಲರೂ ಸ್ತ್ರೀ ಸಂಗವನ್ನು ಮಾಡಿರಲೇಬೇಕೆಂಬ ನಿಯಮವಿಲ್ಲ. ಹಾಗಿದ್ದರೆ ಸರ್ವಜ್ಞನ ಮುಖದಿಂದ

ನೀರಬೊಬ್ಬಳಿಯಂತೆ ತೋರುತಿಹದೀಹದ।
ಸಾರವರಿಯದೇ ಸುಖಿಪುದಜ್ಞಾನದ।
ದಾರಿಯಹುದೆಂದ ಸರ್ವಜ್ಞ ॥

ಉರಗನ ಮುಖದಿ ಸಿಕ್ಕಿರುತಿಪ್ಪ ಕಪ್ಪೆತಾ।
ಎರಗುವ ನೊಣಕೆ ಹರಿದಂತೆ ಸಂಸಾರ।
ದಿರವು ಕಾಣಯ್ಯ ಸರ್ವಜ್ಞ ॥

ಎಂಬ ವೀರವೈರಾಗ್ಯದ ವಚನಗಳು ಹೊರಡಲಿಕ್ಕೆ ಕಾರಣವಿರಲಿಲ್ಲ.

ಸರ್ವಜ್ಞನು ಕರದಿ ಕಪ್ಪರ ಹಿಡಿದು ಮೂಡೆ ಬೋಳಿಸಿಕೊಂಡು ತುಂಡು ಗಂಬಳಿ ಹೊದೆದು ಹಿಂಡನಗಲಿದ ಗಜದಂತೆ ಇರುವವನು ನಿಶ್ಚಯ ಬಿಡದೆ ಒಬ್ಬರಿಚ್ಛೆಯಲಿ ನಡೆಯದೆ ನೆಚ್ಚಿ ಒಂದೂರೊಳಿರದೆ ಕುಲಗೆಟ್ಟು ಶಿವನ ಮರೆಹೊಕ್ಕವನು ಇಂತಹ ಕವಿಯು ಸಾಮಾನ್ಯ ಮಾನವರಂತೆ ಸಂಸಾರ ಪಾಶದಲ್ಲಿ ಸಿಕ್ಕತಕ್ಕವನಲ್ಲವೆಂದೂ ಹಿಂಡನಗಲಿದ ಗಜದಂತೆ ಊರೂರಿಗೆ ಅಲೆಯುತ್ತಿದ್ದ ಪರಮವಿರಕ್ತನೆಂದೂ ಸುಲಭವಾಗಿ ಊಹಿಸಬಹುದು.

ಕವಿಯ ಗುಣಶೀಲಗಳು.

ಸರ್ವಜ್ಞಮೂರ್ತಿಯ ಗುಣಶೀಲಗಳು ಹೇಗಿದ್ದವೆಂದು ನಾವು ಅವನ ಹೃದಯದ ಯೋಚನೆಯು ಫಲವಾದ ಅವನ ಗ್ರಂಥವನ್ನು ಓದುವುದರಿಂದ ಊಹಿಸಬಹುದು. ಅವನ ಒಂದೊಂದು ಸದ್ಗುಣಗಳ ಮೇಲೆಯೂ ಬೇಕಾದಷ್ಟು ಬರೆಯಬಹುದಾದರೂ ಲೇಖನ ವಿಸ್ತಾರಭಯದಿಂದ ಅವುಗಳನ್ನೆಲ್ಲಾ ಸಂಗ್ರಹವಾಗಿ ಮುಂದೆ ನಿರೂಪಿಸಿದೆ.

(೧) ಸರ್ವಜ್ಞನು ಕೇವಲ ಸ್ವಾತಂತ್ರ್ಯ ಪ್ರಿಯ. ಇದಕ್ಕೆ "ಜಗದಿ ಸ್ವತಂತ್ರವೇ ಲೇಸು" 'ಹಂಗಿನರಮನೆಗಿಂತ ಬಿಂಗಡದ ಗುಡಿ ಲೇಸು' ಇತ್ಯಾದಿ ವಚನಗಳೇ ಸಾಕ್ಷಿಯಾಗಿವೆ.

(೨) ಈ ಕವಿಯು ಕೇವಲ ಖಂಡಿತವಾದಿ. ಇದಕ್ಕೆ "ಕಂಡಂತೆ ಬೇಳದರೆ ಕೆಂಡವುರಿಯುವುದು ಭೂ । ಮುಂಡಲದೊಳಗೆ ಕಂಡಿತವ ನಾಡುವರ । ಕಂಡಿಹುದೆ ಕಷ್ಟ" ಎಂಬ ವಚನವೇ ಸಾಕ್ಷಿಯಾಗಿದೆ.

(೩) ಇವನು ಕೇವಲ ವೈರಾಗ್ಯವಂತ. ಸದಾ ಭಿಕ್ಷಾಟನದಲ್ಲಿದ್ದು ಜೀವಿಸಿದವನು. 'ಸಿರಿಯ ಸಂಸಾರವನು ಸ್ಥಿರವೆಂದು ನಂಬದಿರು' 'ತಿರಿವರಿಂ ಸಿರಿವಂತರಾರು' ಈ ವಚನಗಳೇ ಇದಕ್ಕೆ ಸಾಕ್ಷಿಯಾಗಿವೆ.

(೪) ಸಮದರ್ಶಿತ್ವ, ಪರಮತ ಸಹಿಷ್ಣುತಾ ಇವು ಸರ್ವಜ್ಞನ ಮುಖ್ಯವಾದ ಗುಣಗಳಾಗಿವೆ. ಇದಕ್ಕೆ "ಜಾತಿಹೀನನ ಮನೆಯ ಜ್ಯೋತಿ ಜಾತಿಹೀನವೇ" "ಜೈನನ ಮತವೆನ್ನ ತಲೆಯ ಮೇಲಿರಲಿ" ಎಂಬ ವಚನಗಳು ಆಧಾರವಾಗಿವೆ.

(೫) ಧೈರ್ಯಶಾಲಿ. ಕವಿಯಲ್ಲಿ ಈ ಗುಣವಿದ್ದುದಕ್ಕೆ 'ನಿಷ್ಠುರವ ಬಿಡದೆ ಒಬ್ಬರಿಚ್ಛೆಯಲಿ ನಡೆಯದೆ ಸ್ವಚ್ಛಂದವಾಗಿದ್ದುದೇ ಪ್ರಮಾಣವಾಗಿದೆ. ಜಾತಿ ವೀರರು ಸಾವ ಭೀತಿಗಂಜುಳಿವರೇ, ಅಡಿಯ ಮುಂದಿಡಿ ಸ್ವರ್ಗ ಅಡಿಯ ಹಿಂದಿಡೆ ನರಕ,' ಎಂಬ ನುಡಿಗಳೂ ಇದಕ್ಕೆ ಸಾಕ್ಷಿಯಾಗಿವೆ.

(೬) ಉದ್ಯೋಗ ಪ್ರಿಯ. ಸರ್ವಜ್ಞನು ಕೇವಲ ಉದ್ಯೋಗ ಪ್ರಿಯನಾಗಿದ್ದನೆಂಬುವಕ್ಕೆ "ಉದ್ಯೋಗವುಳ್ಳವನ ಹೊದ್ದುವುದು ಸಿರಿಬಂದು ಉದ್ಯೋಗವಿಲ್ಲದಿರುವನಾ ಕರದೊಳಗಿದ್ದುದೂ ಪೋಪು" ಎಂಬ ವಚನವೇ ಪ್ರಮಾಣವಾಗಿದೆ. ಸರ್ವಜ್ಞನ ಈ ಬೋಧೆಯು ಡಾಕ್ಟರ ಜಗದೀಶ ಚಂದ್ರ ಬೋಸರ *The duty is the God* ಎಂಬ ಮಾತನ್ನು ಸ್ಮರಣೆಗೆ ತರುತ್ತದೆ.

(೭) ರಸಿಕ ಶಿರೋಮಣಿ. ಈ ಕವಿಯು ವೈರಾಗ್ಯವುಳ್ಳವನಾದರೂ ಇವನ ವಾಕ್ಯಗಳು ನವರಸಮಯವಾಗಿವೆ. ಹಾಸ್ಯರಸದಲ್ಲಿ ಇವನಿಗೆ ಅಭಿರುಚಿಯಿದ್ದಂತೆ ಕಾಣುತ್ತದೆ. ಇದಕ್ಕೆ ಇವನ ಗ್ರಂಥವೇ ಸಾಕ್ಷಿಯೆನ್ನಬಹುದು.

(೮) ಅಹಿಂಸಾವಾದಿ. "ಕೊಲ್ಲದಿರ್ಪ ಧರ್ಮವೆಲ್ಲರಿಗೆ ಸಮ್ಮತವು ಅಲ್ಲದೆ ಮಾರಿ ಕೊಲ್ಲುವನು ನರಕಕ್ಕೆ ನಿಲ್ಲದೇ ಹೋಹ" ಎಂಬ ವಚನವೇ ಇದಕ್ಕೆ ಪ್ರಮಾಣವಾಗಿದೆ.

(೯) ಶಿವಭಕ್ತ. ಇದಕ್ಕೆ 'ಪರದೈವ ಕಾಲೂರಿ ನಿಂದಿಲ್ಲ' 'ಶಂಭು ವಿದ್ದಂತೆ ಮತ್ತೊಂದು ದೈವವನು ನಂಬುವನೆ ಹೆಡ್ಡ" ಎಂಬೀ ವಚನವೇ ಕವಿಯ ಶಿವಭಕ್ತಿಗೆ ಸಾಕ್ಷಿಯಾಗಿದೆ.

ನಿಷ್ಠುರ ಸ್ವಭಾವಿ. ಇವನು ಯಾರ ಹಂಗಿಗೂ ಸಿಗದೆ ಲೋಕ ಹಿತವನ್ನು ಬಯಸುವವನಾದುದರಿಂದ ಕೆಲವು ಸಮಯದಲ್ಲಿ ನಿಷ್ಠುರನಾಗಿರುವನು. ಇದಕ್ಕೆ ಇವನ ಗ್ರಂಥದಲ್ಲಿ ವಿಪುಲವಾಗಿ ಪ್ರಮಾಣಗಳು ಸಿಕ್ಕುತ್ತವೆ.

ರಾಮಾಯಣ-ಮಹಾಭಾರತಗಳ ದ್ವೇಷಿ ಅಲ್ಲ.

ಸರ್ವಜ್ಞಮೂರ್ತಿಯು ರಾಮಾಯಣ-ಭಾರತ ಗ್ರಂಥಗಳನ್ನು ತಿರಸ್ಕಾರದಿಂದ ಕಂಡನೆಂಬ ಪ್ರತೀತಿಯು ಬಹು ಜನರ ಮನಸ್ಸನ್ನು ಹೊಕ್ಕಿದೆ. ಇದಕ್ಕೆ

"ಹಾದರದ ಕಥೆಯನ್ನು ಸೋದರರ ವಧೆಯನ್ನು।
ಆದರಿಸಿ ಪುಣ್ಯ ಕಥೆಯೆಂದು ಕೇಳುವರು।
ಮಾದಿಗರು ನೋಡ ಸರ್ವಜ್ಞ ॥"

ಎಂಬ ವಚನವನ್ನು ಉದಾಹರಿಸುತ್ತಾರೆ. ಇದು ವೃಥಾಪವಾದವೆಂದು ನಮ್ಮ ಅಭಿಪ್ರಾಯ. ಹಾದರದ ಕಥೆ = ರಾಮಾಯಣ, ಸೋದರರ ವಧೆ = ಭಾರತವೆಂದು ಕವಿಯು ಹೇಳಿಲ್ಲ. ಇದು ಯಾರೋ ಜಾನಪದರು ಮಾಡಿದ ಅರ್ಥ. ಏಕ ಪತ್ನೀ ವ್ರತಕ್ಕೆ ಪರಮಾವಧಿಯೆನಿಸಿದ ಪತಿವ್ರತಾಶಿರೋಮಣಿಯಾದ ಸೀತಾರಾಮರ ಬಗ್ಗೆ ಕವಿಯು ತುಚ್ಛಭಾವ ತಾಳಲಾರನೆಂದು ನಾವು ಧೈರ್ಯವಾಗಿ ಹೇಳುತ್ತೇವೆ. ರಾಮಾಯಣದಲ್ಲಿ ಹಾದರದ ಪ್ರಸಂಗವೇ ಇಲ್ಲ. ಆದ್ದರಿಂದ ಅದು ಹಾದರದ ಕಥೆಯಲ್ಲ. ಭಾರತದಲ್ಲಿ ಸೋದರರ ವಧೆಯಿದ್ದರೂ ಅದು ಕ್ಷತ್ರಿಯ ಧರ್ಮದಂತೆ ಮಾಡಿದ ಯುದ್ಧ ಆದ್ದರಿಂದ ಅದು ಸೋದರರ ವಧೆಯಲ್ಲ. ಸರ್ವಜ್ಞನೂ ಹಾಗೆ ಭಾವಿಸಿಲ್ಲ. ಪ್ರಪಂಚದಲ್ಲಿ ವ್ಯಭಿಚಾರ ಸಂಬಂಧವಾದ, ಕೆಟ್ಟ ತಮ್ಮಂದಿರ ಕಲಹ ಸಂಬಂಧವಾದ ಮಾತುಗಳನ್ನು ಕೇಳತಕ್ಕದ್ದಲ್ಲವೆಂದು

ಸರ್ವಜ್ಞ ಕವಿಯ ಅಭಿಪ್ರಾಯವೆಂದು ನಮ್ಮ ತಾತ್ಪರ್ಯ. ಸೀತಾ, ರಾಮ, ಪಾಂಡವರನ್ನು ಹಳಿಯುವ ಪದ್ಯಗಳನ್ನು ನಾವು ಈ ಕವಿಯ ವಚನಗಳಲ್ಲಿ ಎಲ್ಲಿಯೂ ಕಾಣಲಾಗುವದಿಲ್ಲ.

ಕವಿಯು ದೇಶಾಭಿಮಾನಿ.

ಸರ್ವಜ್ಞನು ತನ್ನ ಜೀವಿತ ಕಾಲವನ್ನೆಲ್ಲ ಕನ್ನಡಿಗರಿಗೆ ಉಪದೇಶ ಮಾಡುವುದರಲ್ಲಿಯೇ ಕಳೆದಿರುವನೆಂಬದನ್ನು ನಾವು ಲಕ್ಷಿಸಿದರೆ ಅವನ ದೇಶಾಭಿಮಾನವೂ ಪರೋಪಕಾರ ಬುದ್ಧಿಯೂ ನಮಗೆ ಹೊಳೆಯದಿರುವುದಿಲ್ಲ. "ಕನ್ನಡಿಗನ ಕಳೆಯ" ಉತ್ತಮವಾದುದೆಂದು ಹೇಳುವಾಗ ಕವಿಯ ಮನಸ್ಸು ದೇಶಾಭಿಮಾನದಿಂದ ತುಂಬಿತುಳುಕುತ್ತಿತ್ತೆಂದು ತೋರುತ್ತದೆ.

ಸದಾ ಸಂಚಾರದಲ್ಲಿದ್ದ.

ಕವಿಯು ಸದಾ ಸಂಚಾರದಲ್ಲಿದ್ದನೆಂದು ಕಾಣುತ್ತದೆ. "ನೆಚ್ಚಿಬಂ ದೊರೊಳತಿರು" ಎಂದು ಇವನೇ ಹೇಳಿಬಿಟ್ಟಿದ್ದಾನೆ. ಇವನಿಗೆ ಅಪಾರವಾದ ಲೋಕಾನುಭವ ಬರಲಿಕ್ಕೆ ಶಾಸ್ತ್ರಾಧ್ಯಯನದ ಜತೆಗೆ ಈ ದೇಶಾಟನವೂ ಸಹಾಯವಾಯ್ತೆಂದು ಧಾರಾಳವಾಗಿ ಹೇಳಬಹುದು. ಗ್ರಂಥಾವಲೋಕನದಿಂದ ಶಾಸ್ತ್ರ ಪಾಂಡಿತ್ಯವು ಹೋಗುವಂತೆ ದೇಶಾಟನದಿಂದ ಲೋಕಪಾಂಡಿತ್ಯವು ನಾಶವಾಗುತ್ತದೆ. ಈ ಕವಿಗೆ ಈ ಬಗೆಯ ಎರಡೂ ಅನುಕೂಲವಿದ್ದುದರಿಂದ ಇವನು ನಿಜವಾಗಿಯೂ ಸರ್ವಜ್ಞನೆನಿಸಿದನು.

ಹೀನೋಪಮೆಗಳು.

ಸರ್ವಜ್ಞನು ಕೆಲವು ಹೀನೋಪಮೆಗಳನ್ನು ಹೇಳಿರುವುದು ಪ್ರೌಢರಿಗೆ ಸರಿದೋರುವುದಿಲ್ಲವಾದರೂ ಪಾಮರ ಜನರ ಬೋಧೆಗೆ ಅವು ಹೆಚ್ಚು ಸಹಾಯಕವಾಗುತ್ತವೆ. ಸರ್ವಜ್ಞನು ವಚನಗಳನ್ನು ಪಾಡಿದ್ದು ರಾಜಾಸ್ಥಾನದ ಪಂಡಿತರನ್ನಾಗಲಿ ಪ್ರಭುಗಳನ್ನಾಗಲಿ ಮೆಚ್ಚಿಸಲಿಕ್ಕಿಲ್ಲ. ಕೇವಲ ಪಾಮರರ ಉದ್ಧಾರಕ್ಕಾಗಿ, ಸರ್ವಜ್ಞನ ವಚನಗಳನ್ನು ಇಂದಿನ ವರೆಗೆ ಉಳಿಸಿದವರು ಬಳಸಿದವರು ವಿಶೇಷತಃ ಪಂಡಿತರಲ್ಲ. ಕೇವಲ ಪಾಮರರೇ. ಸರ್ವಜ್ಞವಚನಗಳು ಅತ್ತ ಪ್ರೌಢ ವಾಙ್ಮಯವೂ ಅಲ್ಲ. ಇತ್ತ ಜನಪದ ಸಾಹಿತ್ಯವೂ ಇಲ್ಲ. ಸಾರಾಂಶ — ಜನಸಾಮಾನ್ಯದಲ್ಲಿದ್ದ ಅಜ್ಞಾನ ಅನಾಚಾರಗಳನ್ನು ಹೋಗಲಾಡಿಸುವುದಕ್ಕಾಗಿ ಅವರಿಗೆ ರುಚಿಸುವ ಭಾಷೆ

ಯಲ್ಲಿ ತಿಳಿಯುವ ರೀತಿಯಲ್ಲಿ ಕವಿಯು ವಚನಗಳನ್ನು ಹಾಡಿದ್ದಾನೆ. ಅದುದರಿಂದ ಹೀನೋಪಮೆಗಳು ವಿದ್ವಾಂಸರಿಗೆ ಅಸಹ್ಯವಾಗಿದ್ದರೂ ಪಾಮರರಾದ ಕತ್ತಿವಾನವರಿಗೆ ಇವು ಶಸ್ತ್ರಚಿಕಿತ್ಸೆಯಂತೆ ಉಪಯುಕ್ತವಾಗಿಯೇ ಇವೆ.

ಪೂರ್ವ ಕವಿಗಳು.

ಸರ್ವಜ್ಞನು ಕನ್ನಡ ಕವಿಗಳ ಸಂಪ್ರದಾಯದಂತೆ ಯಾವ ಪೂರ್ವ ಕವಿಗಳನ್ನೂ ಸ್ಮರಿಸಿಲ್ಲ. ಇವನನ್ನೂ ಇಂದಿನ ವರೆಗೆ ಯಾವ ಕವಿಯೂ ಸ್ಮರಿಸಿದಂತೆ ಕಾಣುವದಿಲ್ಲ. ವಿಚಾರ ಮಾಡಿದರೆ ಇವನು ಯಾವ ಕವಿಗೂ ಕಡಿಮೆಯಾದವನಲ್ಲ. ಹೀಗಾಗಲು ಕವಿಯು ದರಿದ್ರನಾರಾಯಣರಲ್ಲಿಯೇ ಹುಟ್ಟಿ ಬೆಳೆದು ಅವರ ಹಿತಕ್ಕೇ ವಚನಗಳನ್ನು ಹಾಡಿ, ಯಾವ ರಾಜಾಸ್ಥಾನದ ಆಶ್ರಯವನ್ನೂ ಹೊಂದದೆ, ತನ್ನ ಗ್ರಂಥವನ್ನಾದರೂ ಪರಿಪೂರ್ಣವಾಗಿ ಬರೆದಿಡುವ ಮನಸ್ಸಿಲ್ಲದೆ "ಹಿಂಡನಗಲಿದ ಗಜದಂತಿ"ರ್ದುದೇ ಕಾರಣವೆಂದು ತೋರುತ್ತದೆ. ಸೋಮೇಶ್ವರ ಶತಕ, ಸಿದ್ಧನೀತಿ, ಶಿವಶರಣರ ವಚನಗಳಿಂದ ವಿಷಯ ಸಂಗ್ರಹಿಸಿದ್ದರೂ ಕವಿ ಯಾರ ಹೆಸರನ್ನೂ ಸ್ಮರಿಸಿಲ್ಲ.

ವಚನಕಾರರೂ ಸರ್ವಜ್ಞನೂ.

ಸರ್ವಜ್ಞನ ವಚನಗಳಲ್ಲಿ ಬಸವಾದಿ ಪ್ರಮಥರ ವಚನಗಳ ಭಾವ ಕೆಲವೆಡೆಯಿದೆ. ವಚನಕಾರರು ಸ್ಥಾಪಿಸುವ ಏಕೇಶ್ವರ ವಾದ, ಮೂರ್ತಿಪೂಜಾ ನಿರಸನ, ಕ್ಷುದ್ರ ದೇವತಾ ಪೂಜಾ ತಿರಸ್ಕಾರ, ಶಿವಾದ್ವೈತ, ಖಂಡಿತವಾದಿತ್ವ, ವಿಚಾರ ಸ್ವಾತಂತ್ರ್ಯ, ಶಿವಾನುಭವ ನಿಷ್ಠೆ ಈ ಮೊದಲಾದ ತತ್ವಗಳನ್ನು ಜೀರ್ಣಿಸಿಕೊಂಡು ಸರ್ವಜ್ಞನು ತನ್ನ ವಚನಗಳಲ್ಲಿ ಅವೇ ತತ್ವಗಳನ್ನು ಇನ್ನೂ ರಮಣೀಯವಾಗಿ ಹೇಳಿದ್ದಾನೆ.

ವಚನಕಾರನಿಗಿಂತಲೂ ಇವನಲ್ಲಿ ಮಿಗಿಲಾದ ಗುಣಗಳಿವೆ. ಉದಾರವಾದ ಭಾವಗಳಿವೆ. ವಚನಕಾರರಲ್ಲಿರುವ ಭವಿ-ಭಕ್ತ ಭೇದವೂ, ಅನ್ಯಮತ ತಿರಸ್ಕಾರವೂ ಇವನಲ್ಲಿಲ್ಲ. ಸರ್ವಜ್ಞನು ವಚನಕಾರರಿಗಿಂತ ಹೆಚ್ಚಾದ ಲೋಕಾನುಭವಿ, ಬಹುಶ್ರುತ, ರಸಿಕ, ಮಾತಿನ ಜಾಣ. ಕಸವನ್ನು ರಸವನ್ನಾಗಿ ಮಾಡುವಂಥ ಚತುರ ಎಂದು ನಾವು ಧಾರಾಳವಾಗಿ ಹೇಳಬಹುದು. ಸಾರಾಂಶ:- ಸರ್ವಜ್ಞನು ವಚನಕಾರರಲ್ಲಿರುವ

ಸದ್ಗುಣಗಳನ್ನೊಳಗೊಂಡು ಅವರಲ್ಲಿಲ್ಲದ ಕೆಲವು ಅಸಾಧಾರಣ ಗುಣದಿಂದ ಅಲಂಕೃತನಾಗಿ ರಸಭರಿತವೂ ಅನಾವೃಶವೂ ಆದ ವಚನಗಳಿಂದಲೂ ತನ್ನದೇ ಆದ ಒಂದು ಶೈಲಿಯಿಂದಲೂ ಕೂಡಿ ಸಕಲ ಕನ್ನಡಿಗರನ್ನೂ ತನ್ನ ಮಾತಿನ ಮಂತ್ರದಿಂದ ಬಂಧಿಸಿ ಬಿಟ್ಟಿರುವನು.

ಕವಿಯ ವ್ಯಕ್ತಿತ್ವ.

"ಕಿರಿದರೊಳ್ ಪಿರಿದುಮರ್ಥಮನರಿಪಲ್ಕೆರೆ ವಾಣಿನಾತನಾದಂ ಸಿಪುಣಂ" ಎಂಬುದಾಗಿ ಕವಿರಾಜಮಾರ್ಗದಲ್ಲಿ ನೃಪತುಂಗ ದೇವನು ಹೇಳಿದ್ದಾನೆ. ಅದರ ಅಂದಿನಿಂದ ಇಂದಿನ ವರೆಗೆ ನೃಪತುಂಗನ ಅಭಿಪ್ರಾಯದಂತೆ ಕಿರಿದರೊಳ್ ಪಿರಿದುಮರ್ಥಮನೊರೆದವರಲ್ಲಿ ಸರ್ವಜ್ಞಮೂರ್ತಿಯೇ ಅಗ್ರಗಣ್ಯನಾಗಿದ್ದಾನೆ. ವಚನಕಾರರೂ ಹರಿದಾಸರೂ ಹಿತವೂ ಮಿತವೂ ಅದರೀತಿಯಲ್ಲಿ ಎಪಿಟೆವಿ (*Epitome Short and Sweet*) ತಮ್ಮ ವಚನಗಳನ್ನು ಹಾಡಿದ್ದರೂ ಪರೀಕ್ಷೆಗೆ ನಿಂತರೆ ಅವರೆಲ್ಲರಿಗಿಂತಲೂ ಸರ್ವಜ್ಞನೇ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳುತ್ತಾನೆ.

ಕಾವ್ಯವು "ಮನೋಭವನಲರಂಬಿನಂತೆ" ವಾಚಕರ ಹಾಗೂ ಶ್ರೋತೃಗಳ ಚಿತ್ತವನ್ನು ಅಪಹರಿಸಬೇಕೆಂದು ಷಡಕ್ಷರದೇವ ಮಹಾಕವಿಯು ಹೇಳಿರುವನು. ಸರ್ವಜ್ಞನು ಹೀಗೆಯೇ ತನ್ನ ವಚನಗಳನ್ನು ಹೇಳಿ ಬರೆದಿದ್ದಾನೆ. ಹಿತವಾಗಿಯೂ ಮಿತವಾಗಿಯೂ ಸರಸವಾಗಿಯೂ ಇರುವಂತೆ ಕವಿತೆಯನ್ನು ಬರೆವುದರಲ್ಲಿ ಸರ್ವಜ್ಞನು ಅಗ್ರಗಣ್ಯನೆಂದರೆ ಪ್ರಾಯೇಣ ಯಾರೂ ವಿರೋಧಿಸುವುದಿಲ್ಲ.

ಸರ್ವಜ್ಞನ ಛಂದಸ್ಸು.

ಸರ್ವಜ್ಞಮೂರ್ತಿಯ ಕೀರ್ತಿಯು ಕನ್ನಡನಾಡಿನಲ್ಲಿ ಗೋಪಾಲಕನಿಂದ ಭೂಪಾಲಕರ ವರೆಗೆ ಹಬ್ಬಲಿಕ್ಕೆ ಪಾಮರರಿಂದ ಪಂಡಿತರ ವರೆಗೆ ಪಸರಿಸಲಿಕ್ಕೆ ಕವಿಯು ಆರಿಸಿಕೊಂಡ ಛಂದಸ್ಸೂ ಒಂದು ಕಾರಣವಾಗಿದೆ. ನಾವು "ತ್ರಿಪದಿ" ಗಳನ್ನು ಸರ್ವಜ್ಞನ ಛಂದಸ್ಸೆಂದು ಬೇಕೆಂದೇ ಕರೆದಿದ್ದೇವೆ. ತ್ರಿಪದಿಗಳನ್ನು ಅನೇಕ ಕವಿಗಳು ಬರೆದಿದ್ದರೂ ತ್ರಿಪದಿಯೆಲ್ಲಯೇ ಹಲವು ಕವಿಗಳು ಗ್ರಂಥನಿರ್ಮಾಣಮಾಡಿದ್ದರೂ ತ್ರಿಪದಿಗಳು ಸರ್ವಜ್ಞನ ಕೈಯ್ಯಲ್ಲಿ ಪಳಗಿದಂತೆ, ಭಾವಪೂರ್ಣವಾದಂತೆ, ಸರ

ಸವಾದಂತೆ, ತೇಜಃಪುಂಜವಾದಂತೆ, ಚಿತ್ತಾಕರ್ಷಕವಾದಂತೆ, ಹೃದಯಂ ಗಮವಾದಂತೆ ಮುತ್ತಾವ ಕವಿಯ ಹಸ್ತದಿಂದಲೂ ಹೊರಸೂಸಿಲ್ಲ.

ಕನ್ನಡಸಾಹಿತ್ಯದಲ್ಲಿ ಆಎಪಂಪನ ವೃತ್ತಗಳೂ ಹರಿಹರನ ರಗಳೆಗಳೂ, ಬಸವೇಶನ ವಚನಗಳೂ, ಲಕ್ಷ್ಮೀಶನ ಷಟ್ಪದಿಗಳೂ, ನಿಜಗುಣನ ಹಾಡುಗಳೂ, ಷಡಕ್ಷರ ಕಂದಗಳೂ, ರತ್ನಾಕರ ವರ್ಣಿಯ ಸಾಂಗತ್ಯಗಳೂ ಪ್ರಸಿದ್ಧವಾಗಿರುವಂತೆ ಸರ್ವಜ್ಞನ ತ್ರಿಪದಿಗಳೂ ವಿಖ್ಯಾತವಾಗಿವೆ.

'ತ್ರಿಪದಿ' ಎಂಬ ಛಂದಸ್ಸು ಸಂಸ್ಕೃತ ಜನ್ಯವಲ್ಲ. ಇದು ದ್ರಾವಿಡ ಛಂದಸ್ಸಿಗೆ ಸೇರಿದುದು. ನಾಗವರ್ಮನು ತನ್ನ "ಛಂದೋಂಬುಧಿ" ಎಂಬ ಗ್ರಂಥದಲ್ಲಿ ತ್ರಿಪದಿಯಲ್ಲಿಯೇ ತ್ರಿಪದಿ ಲಕ್ಷಣವನ್ನು ಹೇಳಿದ್ದಾನೆ. ನಾಗವರ್ಮನ ಕಾಲ ಕ್ರಿ. ಶ. ೯೯೦ ಎಂದು ಕವಿಚರಿತ್ರೆಕಾರರು ಹೇಳಿದ್ದಾರೆ. ಅಂದರೆ ನಾಗವರ್ಮನ ಕಾಲದಲ್ಲಿಯೇ ತ್ರಿಪದಿಗಳು ಕನ್ನಡದಲ್ಲಿ ಬಳಕೆಯಲ್ಲಿದ್ದವೆಂದು ತೋರುತ್ತದೆ. ನಾಗವರ್ಮನ ಸಮಕಾಲೀನನೇ ಆದ ರನ್ನನು ತನ್ನ ಗದಾಯುದ್ಧದಲ್ಲಿಯೂ ಸೋಮರಾಜನು ತನ್ನ "ಶೃಂಗಾರಸಾರ" ದಲ್ಲಿಯೂ ಷಡಕ್ಷರ ದೇವನು ತನ್ನ ರಾಜಶೇಖರವಿಳಾಸದಲ್ಲಿಯೂ ತ್ರಿಪದಿಗಳನ್ನು ಹೇಳಿದ್ದಾರೆ. ಇದರಿಂದ ತ್ರಿಪದಿಗಳ ಛಂದಸ್ಸು ಮಹಾ ಕಾವ್ಯಗಳಿಗೂ ಉಪಯೋಗಬೀಳುತ್ತಿತ್ತೆಂದು ನಾವು ತಿಳಿಯಬಹುದಾಗಿದೆ.

ವೀರಶೈವ ಕವಿಗಳನೇಕರು ತ್ರಿಪದಿಯಲ್ಲಿಯೇ ತಮ್ಮ ಗ್ರಂಥಗಳನ್ನು ಬರೆದಿದ್ದಾರೆ. ಇಂಥವುಗಳಲ್ಲಿ ನಿಜಗುಣಶಿವಯೋಗಿಯ "ಪುಂಡಾತನರ ತ್ರಿಪದಿ" ಯೂ ಮೈಲಾರದ ಬಸವಲಿಂಗಶರಣನ "ಗುರುಕರುಣತ್ರಿಪದಿ" ಯೂ, ಜಟಾಶಂಕರ ದೇವನ ಪ್ರಭುದೇವನ ತ್ರಿಪದಿಯೂ, ಪುರಾತನ ದೇವಿಯರ ತ್ರಿಪದಿಯೂ, (ಕವಿಹೆಸರು ಗೊತ್ತಾಗಿಲ್ಲ) ಕನ್ನಡಿಗರಲ್ಲಿ ಬಹಳವಾಗಿ ಬಳಕೆಯಲ್ಲಿವೆ.

ತ್ರಿಪದಿಯ ಲಕ್ಷಣ.

ಸರ್ವಜ್ಞಮೂರ್ತಿಯ ವಚನಗಳಿಲ್ಲ ತ್ರಿಪದಿ ಛಂದಸ್ಸಿನಲ್ಲಿರುವುದರಿಂದ ತ್ರಿಪದಿಯ ಲಕ್ಷಣವನ್ನು ತಿಳಿವುದೂ ಅವಶ್ಯವಾಗಿದೆ. ಅದನ್ನಿಲ್ಲಿ ನಾವು ಸಂಗ್ರಹವಾಗಿ ಹೇಳುತ್ತೇವೆ. ಈ ವಿಚಾರವನ್ನು ವಿಸ್ತಾರವಾಗಿ ತಿಳಿಯಲಾಶಿಸುವವರು "ಸರ್ವಜ್ಞ ವಚನ"ಗಳ ಪ್ರಥಮ ಮುದ್ರಣದ ಪೀಠಿಕೆಯನ್ನು ಅವಲೋಕಿಸುವುದು ಉತ್ತಮ.

"ತ್ರಿಪದಿ" ಅಂದರೆ ಮೂರು ಪಾದವುಳ್ಳ ಪದ್ಯ ಎಂದರ್ಥ. ಇದರಲ್ಲಿ ಮೊದಲನೇ ಪಾದದಲ್ಲಿ ೨೦ ಮಾತ್ರೆಗಳೂ, ಎರಡನೇ ಪಾದದಲ್ಲಿ ೧೮ ಮಾತ್ರೆಗಳೂ, (ಕೆಲವು ಕಡೆ ೧೭ ಮಾತ್ರೆಗಳಿರುವುದೂ ಉಂಟು) ಮೂರನೇ ಪಾದದಲ್ಲಿ ೧೩ ಮಾತ್ರೆಗಳೂ ಇರುತ್ತವೆ.

ಮೊದಲನೆ ಸಾಲಿನಲ್ಲಿ ಅರ್ಧ ಸಾಲಾದ ಮೇಲೆ ಮುತ್ತಿಡುವ ಮೊದಲಿನ ಪ್ರಾಸೇ ಮುತ್ತರ್ಧ ಸಾಲಿನ ಎರಡನೆ ಅಕ್ಷರದಲ್ಲಿ ಬರುತ್ತದೆ. ಇದನ್ನು ತ್ರಿಪದಿಯ ಅಸಾಧಾರಣ ಗುಣವೆನ್ನಬಹುದು. ರಾಜಶೇಖರವಿಳಾಸ, ಶೃಂಗಾರಸಾರ ಮಹಾ ಕಾವ್ಯಗಳಲ್ಲಿರುವ ತ್ರಿಪದಿಗಳನ್ನು ಹೇಳುವಾಗ ಎರಡನೇ ಪಾದದಲ್ಲಿ ಮೂರು ಗಣಗಳ ವರೆಗೆ ಹೇಳಿ ಮತ್ತೆ ಆ ಎರಡನೆ ಸಾಲವನ್ನು ಮೊದಲಿಗೆ ಹೇಳುವ ರೂಢಿಯುಂಟು. ಹಳ್ಳಿಗರಲ್ಲಿ ಪಾಡಿಕೆಯಾಗಿರುವ 'ಪನಕೆವಾಡು' ಗಳಲ್ಲಿನ ತ್ರಿಪದಿಗಳನ್ನು ಮೇಲೆ ಹೇಳಿದಂತೆ ಹೇಳುವುದುಂಟು. ಸರ್ವಜ್ಞ ತ್ರಿಪದಿ, ಗುರುಕರುಣತ್ರಿಪದಿ, ಮೊದಲಾದವುಗಳನ್ನು ಹೇಳುವಾಗ ಮೇಲೆ ಹೇಳಿದಂತೆ ಎರಡನೇ ಪಾದವನ್ನು ಹಿಂದೆಮುಂದೆ ಮಾಡುವ ಪದ್ಧತಿಯು ಕಾಣಲಿಲ್ಲ. ಈ ತ್ರಿಪದಿಗಳನ್ನು ತ್ರಿವದಿ, ತ್ರಿವಳಿ, ತಿವದಿ ಎಂದೂ ಕರೆಯುತ್ತಾರೆ.

ನಾಗವರ್ಮನು ಛಂದೋಂಬುಧಿಯಲ್ಲಿ ತ್ರಿಪದಿಯ ಲಕ್ಷಣವನ್ನು "ಬಿಸರುಹೋದ್ಭವಗಣಂ। ರಸದಶಸ್ಥಾನದೊಳ್। ಬಿಸರುಹ ನೇತ್ರಗಣವೆಂ ಬರ್ಕುಳಿದುವು। ಬಿಸರುಹನೇತ್ರೆ ತ್ರಿಪದಿಗೆ" ಎಂದು ಹೇಳಿದ್ದಾನೆ. ಈ ತ್ರಿಪದಿಯಲ್ಲಿ ಆರು ಮತ್ತು ಹತ್ತನೇ ಗಣವು ಬ್ರಹ್ಮಗಣ ಬರಬೇಕೆಂದು ನಾಗವರ್ಮನ ಮತ. ಆದರೆ ಸರ್ವಜ್ಞ, ಷಡಕ್ಷರ, ಸೋಮರಾಜರ ತ್ರಿಪದಿಗಳಲ್ಲಿ ರಸ, ದಶ, ಸ್ಥಾನದಲ್ಲಿ ಪ್ರಾಯೇಣ ನಾಗವರ್ಮನು ಹೇಳಿದಲಕ್ಷಣವಿಲ್ಲ. ಕವಿಚಕ್ರವರ್ತಿ ರನ್ನನ ಗದಾಯುದ್ಧದಲ್ಲಿ ಪ್ರಯೋಗಿಸಲ್ಪಟ್ಟಿರುವ ತ್ರಿಪದಿಯು.

"ಪದ್ಯರಚನೆಯೊಳ್ ಕಾಳಿದಾಸನುಂ।
ಗದ್ಯರಚನೆಯೊಳ್ ಬಾಣನುಮುಂ ಕವಿಗಳಿರ್ವರುಂ।
ನೆಗಳ್ದರದಂ ಸತ್ಕವಿಗಳಿರ್ವರುಮೆಮಗಭಿ ವಂದ್ಯರ್"

ಎಂಬ ಪ್ರಕಾರವಿದ್ದು ನಾಗವರ್ಮನ ಮತಕ್ಕೂ ಸರ್ವಜ್ಞನ ಪದ್ಧತಿಗೂ ಸರಿ ಹೋಗದ ಜೇಲೊಂದು ಲಕ್ಷಣವುಳ್ಳದ್ದಾಗಿದೆ. ಈ ತ್ರಿಪದಿಯ ಲಕ್ಷಣವು ಯಾವ ಛಂದೋ ಗ್ರಂಥದಲ್ಲಿದೆಯೋ ನಮಗೆ ತಿಳಿಯದು.

ರನ್ನನ ಕಾಲದಲ್ಲಿ ಈ ತರದ ತ್ರಿಪದಿಗಳು ರೂಢಿಯಿದ್ದರೂ ಇರಬಹುದು. ಇಲ್ಲವಾದರೆ ಮಹಾಕವಿ ರನ್ನನು ಇದನ್ನು ತನ್ನ ಕಾವ್ಯದಲ್ಲಿ ಪ್ರಯೋಗಿಸುತ್ತಿದ್ದನೆಂತು?

ಕವಿಯ ಜಾತ್ಯ:

ತನ್ನ ಗ್ರಂಥವನ್ನು ಬರೆಯಲಿಕ್ಕೆ ಸರ್ವಜ್ಞನು ವಿಲಕ್ಷಣವೂ ಮನೋಹರವೂ ಆದ ತ್ರಿಪದಿ ಛಂದಸ್ಸನ್ನು ಸ್ವೀಕರಿಸಿದನು. ಪ್ರಾಯೇಣ ಪ್ರತಿಭಾಶಾಲಿಗಳಾದ ಕವಿಗಳೆಲ್ಲರೂ ಈ ಮಾರ್ಗವನ್ನೇ ಸ್ವೀಕರಿಸಿರುತ್ತಾರೆಂದು ತೋರುತ್ತದೆ. ಹರಿಹರದೇವನು ಜೈನರ ಚಂಪೂ ಶೈಲಿಯನ್ನು ಬಿಟ್ಟು ರಗಳೆಗಳಲ್ಲಿಯೇ ತನ್ನ ಶಿವಶರಣರ ಚರಿತ್ರೆಗಳನ್ನು ಬರೆದನು. ಕೆರೆಯ ಪದ್ಮರಸನೂ ತನ್ನ ದೀಕ್ಷಾಬೋಧೆಯೆಂಬ ಗ್ರಂಥವನ್ನು ರಗಳೆಯಲ್ಲಿಯೇ ಬರೆದಿರುವನು. ರಾಘವಾಂಕ ಪಂಡಿತನು ಷಟ್ಪದಿಗಳಲ್ಲಿಯೇ ತನ್ನ ಗ್ರಂಥಗಳನ್ನೆಲ್ಲಾ ಬರೆದನು. ನಿಜಗುಣ ಶಿವಯೋಗಿಯು ರಗಳೆ, ಹಾಡು, ಸಾಂಗತ್ಯ, ತ್ರಿಪದಿ, ಗದ್ಯ ಮೊದಲಾದ ವಿವಿಧ ಛಂದಸ್ಸಿನಲ್ಲಿ ಗ್ರಂಥ ನಿರ್ಮಾಣ ಮಾಡಿದನು. ಬಸವೇಶನು ಬಿಡುಗನ್ನಡ ವಚನಗಳಲ್ಲಿಯೇ ತನ್ನ ಗ್ರಂಥಗಳನ್ನು ಬರೆದು ಇತರ ಶರಣರಿಗೆ ಮಾರ್ಗದರ್ಶಕನಾದನು. ಪುರಂದರದಾಸರೇ ಮೊದಲಾದ ಹರಿದಾಸರೂ ಹಾಡುಗಳು ಸುಳಾದಿಗಳು ತ್ರಿಪದಿಗಳು ಮೊದಲಾದ ಛಂದಸ್ಸಿನಲ್ಲಿ ತಮ್ಮ ಗ್ರಂಥಗಳನ್ನು ಬರೆದರು. ರತ್ನಾಕರವರ್ಣಿಯು ಸಾಮಾನ್ಯವಾದ ಸಾಂಗತ್ಯದಲ್ಲಿಯೇ "ಭರತೇಶ ವೈಭವ"ದಂತಹ ಅಗಾಧವಾದ ಗ್ರಂಥವನ್ನು ನಿರ್ಮಿಸಿದನು.

ಆಂಧ್ರ ವಾಙ್ಮಯದಲ್ಲಿ ಸುಪ್ರಸಿದ್ಧನಾದ ಪಾಲ್ಕುರಿಕೆ ಸೋಮನಾಥನು "ದ್ವಿಪದಿ"ಗಳಲ್ಲಿಯೇ ಬಸವಪುರಾಣದಂಥ ಉತ್ತನೋತ್ತಮ ಕಾರ್ಯವನ್ನು ನಿರ್ಮಿಸಿದನು. ತಮಿಳು ಭಾಷೆಯಲ್ಲಿ ಋಷಿಕವಿಯೆನಿಸಿದ ತಿರುವಳ್ಳುವ ಕವಿಯು ದ್ವಿಪದಿಯ ಛಂದಸ್ಸಿನಲ್ಲಿಯೇ ಕುರುಳ್ ಎಂಬ ಲೋಕವಿಖ್ಯಾತ ಗ್ರಂಥವನ್ನು ನಿರ್ಮಿಸಿರುವನು. ಆಂಧ್ರ ಕವಿಕೋಕಿಲೆಯೆನಿಸಿದ ವೇಮಣ್ಣನು ಪ್ರೌಢತಮವಾದ ಚಂಪೂಶೈಲಿಯನ್ನು ಬಿಟ್ಟು ಸಾಮಾನ್ಯ ಗೀತೆಗಳಲ್ಲಿಯೇ ಗ್ರಂಥವನ್ನು ಬರೆದಿರುವನು. ಹೀಗೆಯೇ ಕನ್ನಡಿಗರ ಜೀವಸ್ವರೂಪನಾದ ಸರ್ವಜ್ಞ ಮೂರ್ತಿಯೂ ಕೂಡ ಸಾಮಾನ್ಯವೆನಿಸಿದ "ತ್ರಿಪದಿ"ಗಳಲ್ಲಿ ಸಕಲಶಾಸ್ತ್ರಸಾರರೂಪವೂ, ಬಹು ಅರ್ಥಗರ್ಭಿತವೂ ಆದ ವಚನಗಳನ್ನು ಹಾಡಿ ತನ್ಮೂಲಕ ತನ್ನ ಅಸಾಧಾರಣವಾದ ಪಾಂಡಿತ್ಯವನ್ನು ಪ್ರಕಟಿಸಿರುವನು.

ವ್ಯಾಕರಣ ವಿಚಾರ.

ಸರ್ವಜ್ಞನು ಎಲ್ಲ ವಿಚಾರದಲ್ಲಿಯೂ ಒಬ್ಬರ ಹಂಗಿನಲ್ಲಿಲ್ಲದವನು. ನಿಷ್ಠೆಯ ಬಿಡದೆ ಒಬ್ಬರಿಚ್ಛೆಯಲಿ ನಡೆಯದೆ ಸ್ವೇಚ್ಛೆಯಾಗಿ ತಿರುಗುವವನು. ಹಿಂಡನಗಲಿದ ಗಜದಂತೆ ಓಡಾಡುತ್ತಿದ್ದ ಈ ತಂಡುಗಂಬಳಿಯ ಪುರುಷನು ವೈಯ್ಯಾಕರಣಿಗಳ ಬಲೆಗೆ ಬೀಳುವವನೇ? ಎಂದಿಗೂ ಇಲ್ಲ. "ಪ್ರಯೋಗ ಶರಣಾರಿದ್ದ ವೈಯ್ಯಾಕರಣರಿದ್ದ" ಎಂಬ ಮಾತು ಸರ್ವಜ್ಞನಿಗೆ ತಿಳಿಯದಂತಿರಲಿಲ್ಲ.

ಸರ್ವಜ್ಞನ ಗ್ರಂಥದಲ್ಲಿ ಎಷ್ಟೋ ಕಡೆ ಶಬ್ದಗಳು ಕಾವ್ಯ ಮಾರ್ಗವನ್ನು ಬಿಟ್ಟಿವೆ. ವ್ಯಾಕರಣ ಸೂತ್ರಗಳನ್ನು ಧಿಕ್ಕರಿಸಿವೆ. ಗ್ರಾಮ್ಯ ಭಾಷೆಯನ್ನು ಹಿಂಬಾಲಿಸಿವೆ. ಹೀಗಾದುದೇ ಸರ್ವಜ್ಞ ವಚನಗಳಿಗೆ ಒಂದು ಬಗೆಯ ರಮಣೀಯತೆಯನ್ನೂ, ಚೈತನ್ಯವನ್ನೂ ಉಂಟುಮಾಡಿದೆ. ಇದರಿಂದಲೇ ಸರ್ವಜ್ಞ ವಚನಗಳು ನಗರ ವನಗಳಲ್ಲಿ ಗಿಡಲತೆಗಳಂತೆ ಕೃತ್ರಿಮ ಸೌಂದರ್ಯವನ್ನು ತಾಳದೆ ಘೋರಾರಣ್ಯದ ಗಿಡಬಳ್ಳಿಗಳಂತೆ ನೈಸರ್ಗಿಕತೆಯಿಂದ ತುಂಬಿಕೊಂಡಿವೆ.

ಸರ್ವಜ್ಞನ ಶೈಲಿ.

ಶೈಲಿಯು ಕವಿಯ ಯೋಗ್ಯತಾ ನಿರ್ಣಯಕ್ಕೆ ಮುಖ್ಯ ಸಾಧನ. ಶೈಲಿಯೇ ಕವಿ (*Style is the man*) ಎಂಬ ಆಂಗ್ಲವಾಕ್ಯವೊಂದು ಪ್ರಸಿದ್ಧವಾಗಿಯೇ ಇದೆ. ಸರ್ವಜ್ಞನು ದೀರ್ಘ ಸಮಾಸಗಳನ್ನು, ಕ್ಲಿಷ್ಟಕರವಾದ ಶಬ್ದಗಳನ್ನೂ ಪ್ರಾಯೇಣ ಉಪಯೋಗಿಸುವುದಿಲ್ಲ. ಇವನ ಶಬ್ದಗಳು ಕಿರಿಯವು ಹಿರಿದಾದ ಅರ್ಥವನ್ನ ಕೊಡತಕ್ಕವು. ಜನರಿಗೆ ಬಹುಮುಟ್ಟಿಗೆ ಪರಿಚಯವಾವವು. ಬೆಡಗಿನ ವಚನಗಳನ್ನು ಸರ್ವಜ್ಞನು ಬರೆದುದು ತಾವು ಮಹಾಪ್ರೌಢರೆಂದು ವಿಜೃಂಭಿಸುತ್ತಿದ್ದ ಕವಿಗಳಿಗಾಗಿ, ಪಂಡಿತರಿಗಾಗಿ. ಇವರ ಮೆದಳನ್ನ ಕಲಕುವುದಕ್ಕಾಗಿ. ಅದರೆ ಈ ಬೆಡಗಿನ ವಚನಗಳು ಕೂಡ ಪಂಡಿತರಿಗಿಂತಲೂ ಪಾಮರರಲ್ಲಿಯೇ ಪ್ರಚಾರದಲ್ಲಿರುವುದೊಂದು ಚಮತ್ಕಾರ. ಸರ್ವಜ್ಞ ವಚನಗಳು ಓದುಗಬ್ಬವಾಗಿದ್ದರೂ ಇದು ವಿಶೇಷತಃ ಹಾಡುಗಬ್ಬವಾಗಿಯೇ ಪ್ರಚಾರದಲ್ಲಿರುವುದು. ಇನ್ನೊಂದು

ಸ್ವಾರಸ್ಯವಾದ ವಿಚಾರ. ಸರ್ವಜ್ಞನ ವಚನದಲ್ಲಿಯ ಕೆಲವು ನೀತಿವಾಕ್ಯಗಳು ಗಾದೆಯ ಮಾತುಗಳಂತೆ ಜನರಲ್ಲಿ ರೂಢಿಯಾಗಿರುವುವೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಸರ್ವಜ್ಞ ವಚನಗಳಂತೆ ಕನ್ನಡದಲ್ಲಿ ಪ್ರಚಾರದಲ್ಲಿರುವ ಪದ್ಯಗಳೆಂದರೆ ಸೋಮೇಶ್ವರ ಶತಕದ ಪದ್ಯಗಳು ಹೊರತು ಮತ್ತಾವುದೂ ಇಲ್ಲ.

ಸರ್ವಜ್ಞ ವಚನದಲ್ಲಿ ಮಹಾಕಾವ್ಯದಲ್ಲಿರಬೇಕಾದ ಕೆಲವು ಅಲಂಕಾರಗಳಿವೆ. ಇವನು ರೂಪಕ, ಯಮಕ, ಉಪಮಾ, ದೃಷ್ಟಾಂತ, ಶ್ಲೇಷ ಮೊದಲಾದ ಅಲಂಕಾರಗಳನ್ನು ಉಪಯೋಗಿಸಿಕೊಂಡಿದ್ದಾನೆ. ಇವನ ವಚನದಲ್ಲಿ ಶೃಂಗಾರ, ಅದ್ಭುತ, ಬೀಭತ್ಸ ಮೊದಲಾದ ರಸಗಳಿದ್ದರೂ ಹಾಸ್ಯ ರಸವು ಮಿಗಿಲಾಗಿದೆಯೆಂದು ಹೇಳಬಹುದು.

ಶೃಂಗಾರರಸದಲ್ಲಿ ಷಡಕ್ಷರದೇವನೂ, ವೀರರಸದಲ್ಲಿ ರನ್ನನೂ, ಕರುಣಾರಸದಲ್ಲಿ ರಾಘವಾಂಕನೂ, ಭಕ್ತಿರಸದಲ್ಲಿ ಹರಿಹರನೂ ಮಿಗಿಲಾಗಿರುವಂತೆ ಹಾಸ್ಯರಸದಲ್ಲಿ ಸರ್ವಜ್ಞನು ಶ್ರೇಷ್ಠನೆನಿಸಿರುವನು.

ಗಾಂಭೀರ್ಯಕ್ಕೆ ಆದಿಪಂಪನೂ, ಪಕಲತೆಗೆ ಅಭಿನವಪಂಪನೂ, ಉದಾರತೆಗೆ ಕುಮಾರವ್ಯಾಸನೂ, ಮಧುರತೆಗೆ ಲಕ್ಷ್ಮೀಶನೂ ಹೆಸರಾಗಿರುವಂತೆ ವಿನೋದಕ್ಕೆ ಸರ್ವಜ್ಞನು ಸೀಮಾಪುರುಷನಾಗಿರುವನು.

ಸರ್ವಜ್ಞನ ಶೈಲಿಯಲ್ಲಿ ಪದಪ್ರಯೋಗಚಾತುರ್ಯವು ಒಂದು ಮುಖ್ಯ ಗುರುತಾಗಿದೆ. ಇವನು ಇನ್ನಾವಕವಿಯೂ ಹೇಳಿಲ್ಲವಾದ ಕೆಲವು ಮನೋಹರವಾದ ಶಬ್ದಗಳನ್ನು ನಿರ್ಮಿಸಿದ್ದಾನೆ. ತಗ್ಗಿನಕುಣಿ, ಕಾಮನಕೆರೆ, ಉಚ್ಚೆಯಬಚ್ಚಲು, ಸಂದಿಯಗಾಯ (ಯೋನಿ) ಗುದ್ದುಗಣ್ಣವ (ಮುದುಕ) ಕಾಡನುಡಿ (ಬೈಗಳು) ತುತ್ತಿನಚೀಲ (ಹೊಟ್ಟೆ) ಎಲುವಿನಮನೆ (ದೇಹ) ಕೊಲುವಧರ್ಮ (ಕರ್ಮಮಾರ್ಗ) ಸಂದರಿವು (ಬ್ರಹ್ಮಜ್ಞಾನ) ನಾಡನುಡಿ (ರಾಜಕೀಯವಿಚಾರ) ಕಿರಿಗೂಸು (ಕನ್ನೆ) ಅಟ್ಟಕ್ಕುವಿರಕೆ, ಇಂಬರಿಯು ವಾಕೆ (ಪತ್ನಿ) ಇವೇ ಮೊದಲಾದ ಶಬ್ದಗಳನ್ನು ಅವನ ವಚನದಲ್ಲಿ ಕಂಡಾಗ ನಾವು ಇವನ ಶಬ್ದರಚನಾನೈಪುಣ್ಯವನ್ನು ಕಂಡು ತಲೆದೂಗುತ್ತೇವೆ. ಚಕಿತರಾಗುತ್ತೇವೆ. ಆನಂದಪರವಶರಾಗುತ್ತೇವೆ.

ಶಬ್ದ ಪ್ರಯೋಗದಲ್ಲಿ ನೈಪುಣ್ಯವಿದ್ದಂತೆಯೇ ಈ ಕವಿಗೆ ಪದಪ್ರಯೋಗದಲ್ಲಿಯೂ ಕುಶಲತೆಯಿದೆ. ಪರಿಮಾಣವಕ್ಕು, ಪದವಕ್ಕು ಲಾಸನೆರೆಮನೆಯಕ್ಕು. ಈಚಲೊಂದೆಡೆಗೆ ಉಪಕಾರಿ. ಮಸಿವಂಣವೆಂದು, ಕೊಂಡೆಯನು ಕಲಿಯು ಒಂದೆಂಬ, ಬೆಟ್ಟಕರ್ಪುರವುರಿದು ಬೊಬ್ಬಿಡಲು

ಒಂದಿಲ್ಲ, ಮುತ್ತುನೀರೊಳು ಪುಟ್ಟ ಮತ್ತೆನೀರಪ್ಪುದೇ, ಉಸ್ಣೆ ಕೆಜ್ಜೆ ಬೊಳೆದು ಉಣ್ಣದದು ನೊರೆಹಾಲ, ಕೊಲುವ ಕೈಯೊಳು ಪೂಜೆ, ಪೊಲಿವ ಬಾಯೊಳು ಮಂತ್ರ, ಅಪ್ಪೈತಿ ತಾನಾಗಿ ಯುದ್ಧವಿನ್ನಾರೊಡನೆ, ಸತ್ತು ಪೋದರೆ ನಿನಗದೆತ್ತಣದುವೋಕ್ಷವೈ, ಇತ್ಯಾದಿ ಪ್ರಯೋಗಗಳು ಕನ್ನಡ ಸಾಹಿತ್ಯಸಮುದ್ರದ ರತ್ನಗಳೆಂದು ಹೇಳುವಂತಿವೆ.

ಕವಿಯ ಆದರ್ಶ.

ಸರ್ವಜ್ಞನು ಬಾಯಿಬಿಟ್ಟು ಹೇಳದಿದ್ದರೂ ಅವನ ವಚನಗಳಲ್ಲಿ ಸೋಮೇಶ್ವರ ಕವಿ, ಸಿದ್ಧ ಕವಿ, ವಚನಕಾರರು. ಭರ್ತೃಹರಿ ಈ ಮೊದಲಾದವರ ಭಾವಗಳನ್ನು ಕಾಣಬಹುದು. ಅನೇಕ ಸಂಸ್ಕೃತವಾಕ್ಯಗಳ ಭಾಷಾಂತರವನ್ನು ಕಾಣಬಹುದು. ಕವಿಯು ಅನೇಕ ಶಾಸ್ತ್ರಗಳನ್ನು ಓದಿದವನಾಗಿದ್ದನೆಂದು ನಾವು ಹಿಂದೆಯೇ ಹೇಳಿದ್ದೇವೆ. ಆದರೆ ಸರ್ವಜ್ಞನು ಪುಲಿಗೆರೆಯ ಸೋಮೇಶ್ವರ ಕವಿಯು.

ವೃ॥ ಕೆಲವಂ ಬಲ್ಲವರಿಂದ ಕಲ್ತುಕೆಲವಂ ಶಾಸ್ತ್ರಂಗಳಿಂ ಕೇಳುತಂ।
ಕೆಲವಂ ಮಾಳ್ಪವರಿಂದ ಕಂಡುಕೆಲವಂ ಸುಜ್ಞಾನದಿಂ ನೋಡುತಂ।
ಕೆಲವಂ ಸಜ್ಜನಸಂಗದಿಂದಲರಿಯಲ್ ಸರ್ವಜ್ಞನಪ್ಪಿನರಂ।
ಪಲವುಂ ಪಳ್ಕಸಮುದ್ರವೈಹರಹರಾ ತ್ರೈಜೆನ್ನಸೋಮೇಶ್ವರಾ॥

ಎಂಬ ವೃತ್ತವನ್ನು ಸದಾ ತನ್ನ ಲಕ್ಷ್ಯದಲ್ಲಿಟ್ಟದ್ದು ಅದರಂತೆ ಆಚರಿಸಿ ಸರ್ವರೊಳಗೊಂದೊಂದು ನುಡಿ ಕಲ್ತು ವಿದ್ಯೆಯ ಪರ್ವತವೆ ಆಗಿ ಕಡೆಗೆ ಸರ್ವಜ್ಞನಾದನೆಂದು ತೋರುತ್ತದೆ.

ಕವಿಯ ಕವನಶಕ್ತಿ.

"ನಾಋಷಿಃ ಕುರುತೇ ಕಾವ್ಯಂ" ಎಂಬ ಪ್ರಾಚೀನ ವಾಕ್ಯದಂತೆ ಋಷಿಯು ಅಂಶವಿಲ್ಲದವನು ಕವಿಯಾಗಲಾರನು. ಕವಿತಾಶಕ್ತಿಯು ಸಂಸ್ಕಾರಜನ್ಯವಾದುದೆಂದೂ ಕಲಿತರೆ ಬರುವುದಿಲ್ಲವೆಂದೂ ಪ್ರಾಚೀನರ ಮತ. ಈ ಅರ್ಥವಲ್ಲಿ ಷಡಕ್ಷರ ಕವಿಯ

ವೃ॥ ಕಲಿಸಿದೊಡೇಂಬರ್ಕುಮೆಸ।
ಲ್ಲಲಿತ ಕವಿತ್ವಂ ನಿಸರ್ಗಸುಭಗಂ ರಮಣೀ।
ವಿಲಸಿತ ರತಿರಸ ರಸಿಕತೆ।
ತಲೆದೋರ್ಪುದು ತಾನೆ ಕಲಿಸಲೇಂಬಂದಪುದೇ॥

ಎಂಬೀ ಪದ್ಯವು ನಮ್ಮ ಅಭಿಪ್ರಾಯವನ್ನು ಸಮರ್ಥಿಸಲಿಕ್ಕೆ ಸಹಾಯಕವಾಗಿದೆ. ಇದೇ ಕವಿಯು ಹೇಳುವಂತೆ "ಬಹುತರ ಜನ್ಮಕೋಟಿಗಳಿಂ ಪಾರ್ಜಿಸಿದುತ್ತಮಪುಣ್ಯದೇಳ್ಗೆಯಿಂ ವಹಿಯೊಳಿ ಸತ್ಕವಿತ್ವದಿ ಪಪನ್ನಸಾರ್ವಂ" ಎಂಬ ಮಾತಿನಿಂದ ಪೂರ್ವಜನ್ಮದ ಪುಣ್ಯಪ್ರಭಾವದಿಂದ ಕವಿತಾಶಕ್ತಿಯು ಪ್ರಾಪ್ತವಾಗುತ್ತದೆ. ಈ ಶಕ್ತಿಯು ದೇಶಾಟನ, ಪಂಡಿತ ಭಾಷಣ, ಕಾವ್ಯಾವಲೋಕನಗಳಿಂದ ವಿಕಾಸವಾಗುತ್ತದೆ. ಸರ್ವಜ್ಞನಿಗೆ ಈ ಬಗೆಯ ಎಲ್ಲ ಯೋಗ್ಯತೆಯೂ ಇದ್ದುದರಿಂದ ಅವನ ಕವಿತೆಯು ಪ್ರಾಸಾದಿಕವಾಗಿದೆ.

ಸರ್ವಜ್ಞನು ಆಶುಕವಿ (ಅಂದರೆ ನೆನೆಸಿಕೊಂಡ ಕೂಡಲೇ ಒಂದು ವಿಚಾರದ ಮೇಲೆ ಕವನವನ್ನು ಹೇಳುವ ಶಕ್ತಿಯುಳ್ಳವನೆಂದು ತಾತ್ಪರ್ಯ) ಆದ್ದರಿಂದಲೇ ಅವನ ವಚನಗಳೆಲ್ಲ ಒಂದೇ ಕಾಲದಲ್ಲಿ ಒಂದೆಡೆಯಲ್ಲಿ ಕೂತು ಬರೆದವುಗಳಲ್ಲ. ದೇಶಾಟನದಲ್ಲಿ ಪ್ರಸಂಗ ಬಂದಾಗ ಹಾಡಿದವು. ಈ ತತ್ವವನ್ನು ತಿಳಿದೇ ನಾವು ಅವನ ಕಾವ್ಯವನ್ನು ಅವಲೋಕಿಸಬೇಕಾಗಿದೆ.

ಕವಿಗಳಲ್ಲಿ "ವಿಶ್ವವಾಕ್ಯ" ಗಳೆಂದೂ "ವಾಗ್ವಶ್ಯ" ರೆಂದೂ ಎರಡು ಭಾಗವುಂಟೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಮಾತುಗಳಿಗೆ ಅಧೀನನಾಗಿರತಕ್ಕವನು "ವಾಗ್ವಶ್ಯ" ನೆಂದು ಹೇಳುತ್ತಾರೆ. ಇಂಥವನೇ ಕುಕವಿ. ಪಾಮರಕವಿ ಎಂಬುವನು. ಯಾವನಿಗೆ ಶಬ್ದಾರ್ಥಗಳು ವಿಧೇಯವಾಗಿರುತ್ತವೋ ಯಾವನ ಮೇಲೆ ಸರಸ್ವತಿಯ ಸಂಪೂರ್ಣವಾದ ಅನುಗ್ರಹವಿದೆಯೋ ಅವನು "ವಶ್ಯವಾಕ್ಯ" ನೆನಿಸಿಕೊಳ್ಳುತ್ತಾನೆ. ಇವನೇ ಮಹಾಕವಿ ಪಂಡಿತಕವಿ ಎಂದೆನಿಸಿಕೊಳ್ಳುತ್ತಾನೆ. ಇಂಥವನಿಗೆ ಆಶುಕವಿತ್ವಶಕ್ತಿಯಿದ್ದರಂತೂ ಸುವರ್ಣಕ್ಕೆ ಸೌರಭವು ಸೇರಿದಂತೆಯೇ ಸರಿ. ಸರ್ವಜ್ಞನು ಆಶುಕವಿಯೂ ವಶ್ಯವಾಕ್ಯನಾದ ಮಹಾಕವಿಯೂ ಆಗಿದ್ದಾನೆ.

ಸರ್ವಜ್ಞನು ತನಗೆ ಲಭಿಸಿದ ಅಮೌಲ್ಯವಾದ ಕವಿತಾಶಕ್ತಿಯನ್ನು ಯಾವನಾದರೊಬ್ಬ ರಾಜನ ಆಸ್ಥಾನಕ್ಕೆ ಹೋಗಿ ಧನಿಕನ ಮನೆಗೆ ಹೋಗಿ ಅವರನ್ನು ಸ್ತುತಿಗೆಯ್ಯುವುದರಲ್ಲಿ ತನ್ನ ಸತ್ವವನ್ನೂ ಜೀವಿತವನ್ನೂ ಕಳೆದುಕೊಳ್ಳದೆ ಹರಿಹರನು ಪಂಪಾಶತಕದಲ್ಲಿ ಹೇಳಿದಂತೆ "ಮನುಜನ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯವಂ ತನತನಗಾದಜಂಪ್ರ ರವಿಕರ್ಣ ದಧೀಚಿಗಳೆಂದು" ಹೊಗಳಿ ತನ್ನ ಅಮೌಲ್ಯವಾದ ಶಕ್ತಿಯನ್ನು ಕಳೆದುಕೊಳ್ಳದೆ ಜನತಾ ಜನಾರ್ದನನ ಸೇವೆಗಾಗಿ ತನ್ನ ಶಕ್ತಿಯನ್ನೆಲ್ಲಾ ಎರೆದು ದೇಶಸೇವೆಮಾಡಿ ತನ್ನ ವಚನಗಳನ್ನು ಸಾರ್ಥಕಪಡಿಸಿದ್ದಾನೆ. ಆದುದರಿಂದ ಸರ್ವಜ್ಞಮೂರ್ತಿಯನ್ನು ನಾವು ರಾಜಾಸ್ಥಾನದಲ್ಲಿ ತುಳಿದು "ಇಂದುವದನೆ ಕುಂದರದನೆ" ಎಂದು ಬರೆದ ಕವಿಗಿಂತಲೂ ಶ್ರೇಷ್ಠನೆಂದೂ ಉಪಯುಕ್ತನೆಂದೂ ಕರೆಯುತ್ತೇವೆ. ಈ ಪ್ರಕಾರ ಸರ್ವಜ್ಞನು ತನಗೆ ಭಗವಂತನು ಅನುಗ್ರಹಿಸಿದ ಕವಿತಾಶಕ್ತಿಯನ್ನು ಲೋಕಸೇವೆಗೂ ಭಾಷಾಸೇವೆಗೂ ಒಪ್ಪಿಸಿ ಕೃತಾರ್ಥನಾಗಿದ್ದಾನೆ.

ಕವಿಯ ರೂಪ.

ಸರ್ವಜ್ಞ ವಚನಗಳು ಪ್ರಥಮ ಮುದ್ರಣ ಪೀಠಿಕೆಯಲ್ಲಿ ಶ್ರೀ ಉತ್ತಂಗಿಯವರು ಸರ್ವಜ್ಞನ ರೂಪವನ್ನು ಕುರಿತು ಬರೆದಿದ್ದಾರೆ. ಈಗ ನಮಗೆ ಸರ್ವಜ್ಞನ ಭಾವಚಿತ್ರ ಸಿಕ್ಕಿಲ್ಲ. ಸಿಗುವ ಸಂಭವವೂ ಕಾಣಲಿಲ್ಲ. ಉತ್ತಂಗಿಯವರು ಪ್ರಥಮ ಮುದ್ರಣದಲ್ಲಿ ಕೊಟ್ಟಿರುವ ಚಿತ್ರವು ಊಹೆ ಹೊರತು ಅವನ ರೂಪವನ್ನು ತಿಳಿಯುವುದಕ್ಕೆ ಬೇರೆ ಮಾರ್ಗವಿಲ್ಲ. ಒಮ್ಮಟ್ಟಿಗೆ ಕವಿಯು ಹಾಗೆಯೇ ಇದ್ದಿರಬಹುದೆಂದು ತೋರುತ್ತದೆ.

ಸರ್ವಜ್ಞನು ಆರಾಧ್ಯನಾದ ಬಸವರಸ ದ್ರಾವಿಡಳಾದ ಕುಂಬಾರ ಮಾಳಿ ಇವರ ಸಂಸರ್ಗದಿಂದ ಹುಟ್ಟಿದವನಾದ್ದರಿಂದ ಅವನು ಆರ್ಯ ದ್ರಾವಿಡ ಸಂಮಿಶ್ರರೂಪವುಳ್ಳವನಾಗಿದ್ದಾನೆಂದು ತೋರುತ್ತದೆ. ಅವನ ವಚನಗಳಲ್ಲಿಯೂ, ಆರ್ಯ ದ್ರಾವಿಡ ಸಂಸ್ಕೃತಿಯ ಮಿಶ್ರಭಾವವಿದೆಯೆಂಬುದನ್ನು ನಾವು ಪರೀಕ್ಷಿಸಬಹುದು. ಮಿಕ್ಕ ವಿಚಾರವನ್ನು ಊಹಿಸಲಿಕ್ಕೆ ನಾವು ಅಸಮರ್ಥರಾಗಿರುವೆವು. ಇವನು ಕಾಲಿಗೆ ಪಾವಿಗೆಯನ್ನೇ ಹಾಕುತ್ತಿರಬೇಕು. ಏಕೆಂದರೆ ಇವನು ಕೇವಲ ಅಹಿಂಸಾವಾದಿ. ಹೆಗಲ ಮೇಲೆ ತುಂಡುಗಂಬಳಿಯೂ ಗುಡಾರದ ಮಾಡಿಯೂ ಇವನ ಹೆಗ್ಗುರುತೆಂದು ತೋರುತ್ತದೆ.

ಉತ್ತಂಗಿಯವರ ಸಾಹಸ.

ಕನ್ನಡ ಭಾಷಾಸೇವೆಮಾಡಿದವರನ್ನು ಜೈನರು, ವೀರಶೈವರು, ಬ್ರಾಹ್ಮರು ಎಂದು ವರ್ಗೀಕರಿಸಿ ವಿಂಗಡಿಸುವ ಪದ್ಧತಿಯುಂಟು. ಇನ್ನು ಮೇಲೆ ಈ ಪಟ್ಟಿಯಲ್ಲಿ ಕೈಸ್ತರನ್ನೂ ಸೇರಿಸಬೇಕಾಗಿದೆ.

ಗೌರವೀಯರಾದ ರೈಸ್, ಮತ್ತು ಕಿಟಲ್ ಸಾಹೇಬರುಗಳು ಕನ್ನಡಸಾಹಿತ್ಯಕ್ಕೆ ಮಾಡಿದ ಸೇವೆಯು ಸಾಮಾನ್ಯವಾದುದಲ್ಲ. ಅವರ ಮತಕ್ಕೆ ಸೇರಿದವರೂ ನಮ್ಮ ದೇಶೀಯರೂ ಆದ ಶ್ರೀ ಉತ್ತಂಗಿ ಚನ್ನಪ್ಪನವರ ಕನ್ನಡ ಭಾಷಾಸೇವೆಯೂ ಅಸದೃಶವಾಗಿದೆ. ಇವರು ಹಿಂದೂ ಸಮಾಜದ ಹಿತಚಿಂತಕ ಬಸವೇಶ್ವರನೂ ಅಸ್ಪೃಶ್ಯತಾನಿವಾರಣೆಯೂ, ಅನುಭವಮಂಟಪ, ನಾರಾಯಣ ವಾಮನತಿಲಕರ ಚರಿತ್ರೆ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಸರ್ವಜ್ಞ ವಚನಗಳನ್ನು ಸರ್ವೋತ್ತಮವಾಗಿ ಈಗ ಹತ್ತು ವರ್ಷಗಳ ಮೊದಲು ಪ್ರಕಟಿಸಿ ಕನ್ನಡ ಭಾಷೆಗೇ ಮಹೋಪಕಾರ ಮಾಡಿದ್ದಾರೆ. ಬಸವೇಶ್ವರ ಮಹಾದೇವಿಯಕ್ಕ ಇವರ ವಚನಗಳನ್ನೂ ಸರ್ವಜ್ಞನ ವಚನಗಳನ್ನೂ ಇಂಗ್ಲಿಷ್ ಭಾಷೆಯಲ್ಲಿ ತರ್ಜುಮೆ ಮಾಡಿ ಈ ಕನ್ನಡ ಕವಿಗಳ ಕೀರ್ತಿಯನ್ನು ಲೋಕದಲ್ಲಿ ಹರಡಲು ಪ್ರಯತ್ನಿಸಿದ್ದಾರೆ. ಈಗಾಗಲೇ ಸರ್ವಜ್ಞ ವಚನಗಳನ್ನು (ಇನ್ನೂ ಹೊಸದಾಗಿ ಕೆಲವು ತ್ರಿಪದಿಗಳನ್ನು ಸಂಗ್ರಹಿಸಿ) ದ್ವಿತೀಯ ಮುದ್ರಣ ಮಾಡಿಸಿ ಕನ್ನಡಿಗರ ಕೈಗೆ ಕೊಡುವವರಾಗಿದ್ದಾರೆ. ಇವರು ಉಪಾಧ್ಯಾಯರಾಗಿಯೂ ಬೋಧಕರಾಗಿಯೂ ಕನ್ನಡನಾಡಿನ ಸೇವೆ ಮಾಡಿದ್ದಾರೆ. ಈ ಪ್ರಕಾರ ಉತ್ತಂಗಿಯವರ ಭಾಷಾಸೇವೆಯೂ ಸಾಹಸವೂ ಸ್ತೋತ್ರಾರ್ಹವಾಗಿವೆ.

ಈ ಕವಿಯ ಬಗ್ಗೆ ಕನ್ನಡಿಗರ ಕರ್ತವ್ಯ.

ಸರ್ವಜ್ಞಮೂರ್ತಿಯ ವಿಚಾರವಾಗಿ ಕನ್ನಡಿಗರು ಇನ್ನೂ ತೋರಿಸಬೇಕಾದ ಶ್ರದ್ಧೆಯನ್ನು ತೋರಿಸಿಲ್ಲವೆಂದೇ ಹೇಳಬೇಕಾಗಿದೆ. ಅಥಣಿಯ ಅತ್ಯೋದ್ಧಾರ ಗ್ರಂಥನಾಲೆಯವರು 'ಸರ್ವಜ್ಞಸಂದೇಶ'ವನ್ನು ಪ್ರಕಟಿಸಿದುದೂ ಕೆಲವು ದಿನಗಳ ಹಿಂದೆ ತಿಪಟೂರು ಕರ್ಣಾಟಕ ಸಂಘದವರು 'ಸರ್ವಜ್ಞಜಯಂತಿ'ಯನ್ನು ಆಚರಿಸಿದುದೂ ಕೊಂಚ ಸಮಾಧಾನಕರವಾಗಿದೆ.

ಕವಿರನ್ನಪ್ರಶಸ್ತಿ, ಕವಿಲಕ್ಷ್ಮೀಶ, ಮುದ್ದಣಸಂಚಿಕೆ, ಗಳಂತೆ 'ಸರ್ವಜ್ಞ ಕೈಪಿಡಿ' ಯೊಂದು ಅವಶ್ಯವಾಗಿದೆ. ಎಲ್ಲೆಲ್ಲಿಯೂ ಸರ್ವಜ್ಞನ ಪುಣ್ಯದಿನಾಚರಣೆಯಾಗಬೇಕಾಗಿದೆ. ಅವನ ದಿವ್ಯ ಸಂದೇಶವು ಜನಪದದ ನಾಡಿನಾಡಿಯಲ್ಲಿ ಪ್ರವಹಿಸಬೇಕಾಗಿದೆ. ಸರ್ವಜ್ಞನ ವಚನಗಳನ್ನು ಇತರ ಭಾಷೆಗಳಲ್ಲಿಯೂ ಭಾಷಾಂತರಿಸಿ ಪ್ರಚುರಪಡಿಸಬೇಕಾಗಿದೆ. ಸರ್ವಜ್ಞನಿಗಾಗಿ ತಮ್ಮ ಜೀವಿತವನ್ನು ಧಾರೆಯೆರೆದ ಶ್ರೀ ಉತ್ತಂಗಿಯವರನ್ನು ಎಲ್ಲರೂ ಅಭಿನಂದಿಸಬೇಕಾಗಿದೆ. ಅಲ್ಲಿನ ವರೆಗೆ ಕನ್ನಡಿಗರ ಕರ್ತವ್ಯ ಮುಗಿದಂತಾಗಲಿಲ್ಲ.

ಜರ್ಮನಿಯಲ್ಲಿ ಆರ್ಯಧರ್ಮ.

ರಶಿಯ ದೇಶವು ತನ್ನ ಸಮಾಜ ಸುಧಾರಣೆಯ ಕಾರ್ಯಗಳನ್ನು ಮಾಡಲು ಅತ್ಯುತ್ಸುಕತನವಾಗಿ ಸಾಹಸಪಡುತ್ತಲಿರುವದು ಕಂಡು ಬರುತ್ತಿದೆ. ಆದರೆ ಅದು ತನ್ನ ಈ ಕಾರ್ಯವನ್ನು ಸಾಧಿಸುವಲ್ಲಿ ಧರ್ಮವನ್ನು ಸಂಪೂರ್ಣವಾಗಿ ತ್ಯಜಿಸಬಿಟ್ಟಿದೆ. ಇಷ್ಟೇ ಅಲ್ಲ, ಧರ್ಮವು ಸಮಾಜದ ಬೆಳವಣಿಗೆಗೆ ಬಾಧಕವೆಂದು ಎಣಿಸಿ ಪ್ರಾರ್ಥನಾಲಯಗಳಿಗೆ ಯಾರೂ ಹೋಗಕೂಡದೆಂದು ನಿರ್ಬಂಧಿಸಿದೆ. ಮತ್ತು ಧರ್ಮಬೋಧಕರು ಧರ್ಮಬೋಧೆಯ ಕಾರ್ಯಗಳನ್ನು ಮಾಡಕೂಡದೆಂತಲೂ ಆಜ್ಞೆಯನ್ನಿತ್ತಿದೆ. ಹೀಗೆ ಅದು ಧರ್ಮವನ್ನು ತ್ಯಜಿಸಿ ಕೇವಲ ಆರ್ಥಿಕ ಉನ್ನತಿಯ ಕಡೆಗೆ ಲಕ್ಷವನ್ನಿಟ್ಟುಕೊಂಡು ಸಮಾಜ ಸುಧಾರಣಾ ಕಾರ್ಯಗಳಲ್ಲಿ ತೊಡಗಿರುತ್ತದೆ. ಆದರೆ ಇದರ ಪರಿಣಾಮವು ಅಂತ್ಯದಲ್ಲಿ ಏನಾಗುವದೆಂಬವರ ಕಡೆಗೆ ಎಲ್ಲರ ಲಕ್ಷವು ಈಗ ಹತ್ತಿರುತ್ತದೆ.

ಅವರೆ ರಶಿಯಾ ದೇಶಕ್ಕೆ ಮಗ್ಗುಲಾಗಿದ್ದ ಜರ್ಮನೀ ದೇಶದಲ್ಲಿ ದೇರೊಂದು ಬಗೆಯಾಗಿ ಸಮಾಜ ಸುಧಾರಣಾ ಕ್ರಾಂತಿಯನ್ನು ಮಾಡುವ ಪ್ರಯತ್ನಗಳು ಸಾಗಿರುತ್ತವೆ. ಜರ್ಮನಿಯು ನಿಜವಾಗಿ ಈಗಿನ ಶಾಸ್ತ್ರೀಯ ಯುಗದಲ್ಲಿ ಅತ್ಯಂತ ಮೇಲ್ತರದ ಸ್ಥಾನವನ್ನು ಪಡೆದುಕೊಂಡಿದೆ. ಅದು ಈಗ ಹಿಟ್ಲರನ ಸಂಪೂರ್ಣ ಅಧಿಕಾರಕ್ಕೆ ಒಳಪಟ್ಟಿದ್ದಾಗಿರುತ್ತದೆ. ಅವನು ಈಗ ಅಲ್ಲಿ ಸಂಪೂರ್ಣ ಸಾರ್ವಭೌಮ ರಾಜನಾಗಿರುವನೆಂತಲೇ ಹೇಳಬಹುದು. ಆದರೆ ಅವನ ನೇತೃತ್ವದಲ್ಲಿ ಬೇರೊಂದು ಬಗೆಯ ಸಂಸ್ಕರಣ ಕಾರ್ಯಗಳು ನಡೆದಿವೆ. ಈ ಕಾರ್ಯಗಳಿಗೆ ಆರ್ಯ ಧರ್ಮದ ತತ್ವಗಳೇ ತಳಹದಿಯಾಗಿರುತ್ತವೆ. ಆರ್ಯ ಧರ್ಮವನ್ನು ಪುನರುಜ್ಜೀವನಗೊಳಿಸಬೇಕೆಂದು ಹಿಟ್ಲರನ ಧ್ಯೇಯವಾಗಿದೆ. ಜರ್ಮನರು ರಶಿಯನ ಮತ್ತೆ ಧರ್ಮವನ್ನು ತಮ್ಮ ಸುಧಾರಣಾ ಕಾರ್ಯಗಳಲ್ಲಿ ಬಿಟ್ಟಿರುವದಿಲ್ಲ. ಹೋದ. ಈಚೆರ ಹಬ್ಬದಲ್ಲಿ ಪುರಾತನ ಕಾಲದ ಆರ್ಯರು ಆಚರಿಸು

ತ್ತಿದ್ದ ಸೂರ್ಯೋಪಾಸನೆಯನ್ನು ಕೈಕೊಂಡರು. ಈ ದೇವತೆಗೆ ಸಿಗ್‌ಫ್ರಿಡ್ ಎಂಬ ಹೆಸರು ಇವೆ. ರಾಕ್ಷಸ ಸಂಹಾರಕನೆಂದು ಈ ದೇವತೆಯ ಬಗ್ಗೆ ಅವರಲ್ಲಿ ದಂತಕಥೆಗಳು ಇವೆ. ಅವನ ಕಥೆಯು ವಿಷ್ಣುವು ವಾಮನ ಮೂರ್ತಿಯಾಗಿ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದು ಅಲ್ಲಿ ಬಂಧಿಸಿಟ್ಟ ವೃತ್ತಾಂತವನ್ನು ಹೋಲುತ್ತದೆ.

ಈಗ ಜರ್ಮನ್ನ ಭಾಷೆಯಲ್ಲಿ ಆರ್ಯರ ಪುರಾತನ ಧಾರ್ಮಿಕ ಶಬ್ದಗಳು ರೂಢವಾಗತೊಡಗಿವೆ. ಹಿಟ್ಲರನು ಇನ್ನುಮೇಲೆ ಜರ್ಮನ್ನ ಜನರು ಶುದ್ಧ ಆರ್ಯವಂಶೀಯರಕೂಡ ತಮ್ಮ ಶರೀರ ಸಂಬಂಧಗಳನ್ನು ಬೆಳಿಸಬೇಕೆಂದು ಕಡುತರವಾದ ಕಾಯ್ದೆಗಳನ್ನು ಕಲ್ಪಿಸಿರುವನು. ಈ ಹೊಸಬಗೆಯ ಧಾರ್ಮಿಕ ತತ್ವಗಳ ಜ್ಞಾನವನ್ನು ಜರ್ಮನ್ನ ತರುಣರಿಗೆ ಮಾಡಿಕೊಡುವ ಏರ್ಪಾಡುಗಳು ಉಂಟಾಗಹತ್ತಿವೆ. ಜರ್ಮನರಲ್ಲಿ ದೀಕ್ಷಾ ವಿಧಿಯಂಥ ದೀಕ್ಷೆಯೊಂದಿದೆ. ಇದಕ್ಕೆ ಜ್ಯೂಗೇಂಡ್ ವೈ (*Jugend weihe*) ಎಂಬ ಹೆಸರು.. ಜರ್ಮನ್ನ ತರುಣರನ್ನು ಪುರಾತನ ಕಾಲದ ಕೋಟೆಗಳಲ್ಲಿ ಬರಮಾಡಿಕೊಂಡು ಈ ವಿಧಿಯನ್ನು ಅಲ್ಲಿ ಅವರಿಗೆ ನೆರವೇರಿಸುವರು. ಸ್ವಸ್ತಿಕ ಚಿನ್ಹವುಳ್ಳ ನಿಶಾನಿಯು ಈಗ ಜರ್ಮನ್ನ ರಾಜ್ಯದಲ್ಲಿ ಹಾರಾಡುತ್ತಲಿದೆ. ಇದು ಅವರಲ್ಲಿ ಐಹಿಕಸುಖಸಾಧನೆಯ ಚಿನ್ಹವಾಗಿದೆ. ಇದರೊಡನೆ ಧಾರ್ಮಿಕ ಉನ್ನತಿಯ ದ್ಯೋತಕವಾದ ಬೇರೊಂದು ನಿಶಾನಿಯನ್ನು ಸಹ ಕಲ್ಪಿಸಿ ಅದನ್ನು ಹಾರಾಡಿಸುತ್ತಲಿರುವರು. ಇದರಲ್ಲಿ ಆಕಾಶವರ್ಣದ ಬಟ್ಟೆಯ ಮೇಲೆ ಸುವರ್ಣ ಬಣ್ಣದಿಂದ ಸೂರ್ಯನ ಚಿನ್ಹವನ್ನು ಬರೆದಿರುವರು. ಈ ಎರಡೂ ನಿಶಾನಿಗಳನ್ನು ಮುಂದಿಟ್ಟುಕೊಂಡು ತರುಣರ ಮೆರವಣಿಗೆಗಳು ದೇಶದಲ್ಲೆಲ್ಲ ಕಾಲಕಾಲಕ್ಕೆ ಹೊಡುತ್ತಲಿವೆ.

ಜರ್ಮನಿಯ ಪ್ರಸಿದ್ಧ ನದಿಯಾದ ರ್ಹೈನ ನದಿಯ ಕೆಳಭಾಗದ ಕಂದರ ಪ್ರದೇಶಗಳಲ್ಲಿ ಅರಣ್ಯ ಭೂಮಿಗಳು ಪಸರಿಸಿರುತ್ತವೆ. ಈ ಭೂಭಾಗವು ಪೃಥ್ವೀ ತಾಯಿ ಎಂಬ ದೇವತೆಗೆ ಅರ್ಪಿಸಲ್ಪಟ್ಟದ್ದಾಗಿದೆ. ಈ ದೇವತೆಗೆ ಫೊಲ್ಡ (*Folde*) ಎಂಬ ಹೆಸರು. ಈ ದೇವತೆಯ ಹೆಸರಿನಿಂದ ಪೂಜಾವಿಧಾನಗಳು ಇಲ್ಲಿ ಒಂದು ಸಾವಿರ ವರ್ಷದ ಹಿಂದೆ ನಡೆಯುತ್ತಿದ್ದವಂತೆ. ಆದರೆ ಈಗ ಆ ವಿಧಾನಗಳು ಹಿಟಲರನ ಹೊಸ ಆಸ್ಪಣೆಯ ಮೇರೆಗೆ ಪುನಃ ಪ್ರಾರಂಭವಾಗಿವೆ.

ಈ ಪ್ರಕಾರ ಜರ್ಮನರ ಒಂದು ನಿಶಾನೆಯು ಕೆಂಪುವರ್ಣವುಳ್ಳದಾಗಿ ಪ್ರಪಂಚ ಜನಾಂಗದ ಐಹಿಕ ಉನ್ನತಿಯ ದ್ಯೋತಕವಾಗಿಯೂ, ಇನ್ನೊಂದು ಬಿಳಿವರ್ಣದ ನಿಶಾನೆಯು ಜರ್ಮನರ ಆತ್ಮವಿಕಾಸದ ಗುರುತಾಗಿಯೂ ಜರ್ಮನ್ ಸಂಸ್ಕೃತಿಯ ಹೊಸ ಪ್ರವಾಹವು ಅಲ್ಲಿ ಈಗ ಹರಿಯತೊಡಗಿದೆ.

ಜರ್ಮನ್ನ ಪ್ರತಿಯೊಬ್ಬ ತರುಣನು ಜರ್ಮನಿಯು ತನ್ನ ತಂದೆಯ ಸ್ಥಾನವೆಂದು ತಿಳಿದು ಅದರ ಉನ್ನತಿಗಾಗಿ ತನ್ನ ಸರ್ವಸ್ವವನ್ನೆಲ್ಲ ಅರ್ಪಿಸುವೆನೆಂದು ಅವನಿಂದ ಒಂದು ಪ್ರತಿಜ್ಞೆಯು ಸಾರ್ವಜನಿಕವಾಗಿ ತಗೆದುಕೊಳ್ಳುವ ರೂಢಿಯು ಉಂಟಾಗಿದೆ. ಈ ವಿಧಾನವು ಆಗಿಂದಾಗ್ಗೆ ಅಲ್ಲಿ ಆಗುವ ಉತ್ಸವಾದಿಗಳಲ್ಲಿ ಜರಗಹತ್ತಿದೆ.

ತರುಣರ ಕೂಟಗಳು ಏರ್ಪಡಿಸಲ್ಪಟ್ಟ ದೇಶದಲ್ಲಿ ಕಂಗೊಳಿಸುವ ಅರಣ್ಯಭೂಮಿಗಳಲ್ಲಿ ಸಂಚರಿಸುತ್ತ ಹೋಗುವ ಒಲವು ಈಗ ಹೆಚ್ಚಾಗಹತ್ತಿವೆ. ಇಂಥ ತರುಣರ ಸಂಘಗಳು ಅಲ್ಲಿ ಬಹು ಸಂಖ್ಯಾಕವಾಗಿ ಉತ್ಪನ್ನವಾಗುವದರಲ್ಲಿ ಇವೆ. ಈ ಸಂಘಗಳಲ್ಲಿ ಸೇರಿದವರು ಕಾಲ್ನಡಿಗೆಯಿಂದ ನಡೆಯುತ್ತ ಹಳ್ಳಿಗಾಡಿನ ಜನರಲ್ಲಿ ಬೆರೆಯುತ್ತ ತಮ್ಮ ವಿಚಾರಗಳನ್ನು ದೇಶದಲ್ಲಿ ಪಸರಿಸುತ್ತ ತಿರುಗುವುದುಂಟು. ಈ ಸಂಚಾರಕ ತರುಣರ ತಂಡಗಳು ರಾತ್ರಿಯಲ್ಲಿ ತಂಗುವದಕ್ಕೆ ಅನುಕೂಲವಾಗಬೇಕೆಂದು ಅಲ್ಲಲ್ಲಿ ತರುಣ ನಿಲಯಗಳು ಸ್ಥಾಪಿಸಲ್ಪಟ್ಟಿವೆ. ಈ ತಂಡಗಳು ರಾತ್ರಿಯನ್ನು ಅಲ್ಲಿ ಕಳೆದು ಮರುದಿನ ಮುಂದಿನ ನಿಲಯಕ್ಕೆ ತೆರಳುವವು.

ವಿಚಾರ ಮಾಡಿ ನೋಡಿದಲ್ಲಿ ಐಹಿಕವನ್ನು ಬಿಟ್ಟು ಪಾರಮಾರ್ಥವಿಲ್ಲ, ಪಾರಮಾರ್ಥವನ್ನು ಬಿಟ್ಟು ಐಹಿಕವಿಲ್ಲ. ಅವು ಪರಸ್ಪರಾವಲಂಬಿಗಳಾಗಿವೆ. ಈ ತತ್ವವನ್ನು ಗುರಿಯಾಗಿಟ್ಟುಕೊಂಡು ವೀರಶೈವ ಧರ್ಮತತ್ವಗಳು ಕಲ್ಪಿಸಲ್ಪಟ್ಟಿವೆ. ಷಟ್‌ಸ್ಥಲ ಶಾಸ್ತ್ರದ ಪ್ರತಿಯೊಂದು ವಿಷಯದಲ್ಲಿ ಇವು ಎರಡೂ ಮಾರ್ಗಗಳು ಪರಸ್ಪರ ಹೆಣೆದುಹೋಗಿವೆ. ಸಮಾಜ ಸುಧಾರಣೆಯ ಕಾರ್ಯಗಳಲ್ಲಿ ಈ ರೀತಿಯು ಇರದೇ ಹೋದಲ್ಲಿ ಅದರ ಗತಿಯು ಕುಂಠಿತವಾಗದೆ ಇರದು.

ಪಾಶ್ಚಾತ್ಯರ ತತ್ವಶಾಸ್ತ್ರ.

ಲೇಖಕ— ವೀರಪ್ಪ ಯಗಟಿ, ಬಿ. ಎ. ಎಲ್. ಎಲ್. ಬಿ. ಹಾವೇರಿ.

(ಮುಂದೆ ಸಾಗಿದ್ದು)

ಅರಿಸ್ಟಾಟಲ— ಕ್ರಿ. ಪೂ. ೩೮೪ ರಿಂದ ೩೨೪ ರ ವರೆಗೆ. ಇವನು ಥ್ರೇಸ ದೇಶದಲ್ಲಿ ಸ್ಟ್ಯಾಗೀರಾ ಎಂಬಲ್ಲಿ ಹುಟ್ಟಿದನು. ಇವನ ತಂದೆಯು ಮೆಸೆಡೋನಿಯಾ ರಾಜ್ಯದ ಅರಸನಾದ ಅಮಿಂಟಾಸನ ವೈದ್ಯನಾಗಿದ್ದನು. ಅರಿಷ್ಟಾಟಲನಿಗೆ ಚಿಕ್ಕಂದಿನಿಂದ ವೈದ್ಯ ವಿದ್ಯೆಯಲ್ಲಿ ಶ್ರದ್ಧೆಯು ದೊರೆಯಿತು. ಇದರಿಂದ ಮುಂದೆ ಅವನಿಗೆ ಪ್ರತಿಯೊಂದು ಶಾಸ್ತ್ರದ ಪ್ರತಿಪಾದನೆಯಲ್ಲಿ ತಪ್ಪಿಲ್ಲದಂತೆಯೂ, ನಿಶ್ಚಿತವಾಗಿಯೂ, ವೈಜ್ಞಸ್ಥಿತಿಗನು ಗುಣವಾಗಿಯೂ ನಿರ್ಣಯಗಳನ್ನು ತೆಗೆಯಲು ಸಹಾಯವುಂಟಾಯಿತು. ಚಿಕ್ಕಂದಿನಲ್ಲಿಯೇ ತಾಯಿ-ತಂದೆಗಳು ಮೃತವಾದ್ದರಿಂದ ಇವನು ಪ್ರೋಕ್ಷಿನಸ್ ಎಂಬವನಿಂದ ಸಂರಕ್ಷಣೆ ಹೊಂದಿದನು. ಪ್ಲೇಟೋನ ಆಶ್ರಮಕ್ಕೆ ಈತನು ಕ್ರಿ. ಪೂ. ೩೬೭ ರಲ್ಲಿ ಬಂದು ಸೇರಿದನು. ಆಗ ಇವನಿಗೆ ೧೮ ವರ್ಷ ವಯಸ್ಸಾಗಿದ್ದಿತು. ಅಲ್ಲಿ ಇವನು ೧೭ ವರ್ಷಗಳ ವರೆಗೆ ಅಂದರೆ ತನ್ನ ೩೭ ನೇ ವಯಸ್ಸಿನ ವರೆಗೆ ಇದ್ದನು. ಅಲ್ಲಿ ಇವನು ಸಾಧಾರಣ ವಿದ್ಯಾರ್ಥಿಯಾಗಿರದೆ ತೀಕ್ಷ್ಣ ಮೇಧಾವಿಯೆಂದು ಪ್ರಸಿದ್ಧಿಗೆ ಬಂದನು. ಉತ್ತಮ ಬರಹಗಾರನೆಂದು ಪ್ರಖ್ಯಾತಿ ಹೊಂದಿದನು. ಪ್ಲೇಟೋನ ವಿದ್ಯಾಪೀಠದಲ್ಲಿ ನೈತಿಕ ಮತ್ತು ತಾತ್ವಿಕ ಸಿದ್ಧಾಂತಗಳ ಕಡೆಗೆ ಈತನ ಪ್ರವೃತ್ತಿಯು ಬಲಿಯಿತು. ಇದಲ್ಲದೆ ವಿದ್ಯಾಪೀಠದ ಪ್ರವೃತ್ತಿಯನ್ನು ಭೌತಿಕ ಶಾಸ್ತ್ರಗಳ ಕಡೆಗೆ ತಿರುಗಿಸುವಂತೆ ಈತನು ಕಾರಣನಾದನು. ಇವನು ತೀಕ್ಷ್ಣ ಬುದ್ಧಿಯವನಿದ್ದರಿಂದ ತನ್ನ ಗುರುವಾದ ಪ್ಲೇಟೋನ ಸಿದ್ಧಾಂತಗಳನ್ನು ಸಹ ಖಂಡಿಸುತ್ತಿದ್ದನು.

ಪ್ಲೇಟೋನ ಮರಣದ ತರುವಾಯ ಅವನ ಅಣ್ಣನ ಮಗನಾದ ಸ್ಪೂಸಿಯಸ್ ಎಂಬವನು ವಿದ್ಯಾಪೀಠದ ಅಧಿಪತಿಯಾದನು. ಆಗ ಅರಿಸ್ಟಾಟಲನು ಅಥೆನ್ಸ ಪಟ್ಟಣ ಬಿಟ್ಟು ಹೆರ್ಮಿಯಾಸ ಎಂಬ ಅರಸನ ಆಸ್ಥಾನಕ್ಕೆ ಹೋದನು. ಅಲ್ಲಿ ಅವನು ಆರು ವರ್ಷಗಳ ಕಾಲ ಇದ್ದನು. ಕ್ರಿ. ಪೂ. ೩೪೩ ರಲ್ಲಿ ಫಿಲಪ್ ರಾಜನು ತನ್ನ ಮಗನಾದ ಅಲೆಕ್ಸ್ಯಾಂಡರನಿಗೆ ವಿದ್ಯೆ ಕಲಿಸಲು ಅರಿಸ್ಟಾಟಲನಿಗೆ ಆಮಂತ್ರಣ ಕೊಟ್ಟನು.

ಸುಮಾರು ೮ ವರ್ಷ ಅಲೆಕ್ಸ್ಯಾಂಡರನಿಗೆ ವಿದ್ಯೆ ಕಲಿಸಿ ಅವನ ಮೇಲೆ ಅಗಾಧವಾದ ಪರಿಣಾಮವನ್ನುಂಟು ಮಾಡಿದನು. ಅಲೆಕ್ಸ್ಯಾಂಡರನು ತನ್ನ ಗುರುವಿನ ವಿಷಯದಲ್ಲಿ ಹೇಳುವದೇನಂದರೆ—"ನನ್ನ ಜೀವಿತದ ಸಂಬಂಧವಾಗಿ ನನ್ನ ತಂದೆಗೆ ಋಣಿಯಾಗಿದ್ದೇನೆ. ಉತ್ತಮ ರೀತಿಯಿಂದ ಹೇಗೆ ಜೀವಿಸಬೇಕೆಂಬ ಜ್ಞಾನ ಮಾಡಿಕೊಟ್ಟ ಸಂಬಂಧವಾಗಿ ನಾನು ಅರಿಸ್ಟಾಟಲನಿಗೆ ಋಣಿಯಾಗಿದ್ದೇನೆ." ಅಲೆಗ್ಸ್ಯಾಂಡರನು ಯಾವಾಗಲೂ ಅರಿಸ್ಟಾಟಲನ ನೀತಿಶಾಸ್ತ್ರ ಗ್ರಂಥವನ್ನು ತನ್ನ ಹತ್ತರ ಇಟ್ಟುಕೊಂಡಿರುತ್ತಿದ್ದನು. ಅಲೆಗ್ಸ್ಯಾಂಡರನಲ್ಲಿದ್ದ ರಾಜಕಾರಣ ಪಟುತ್ವ, ಆತ್ಮನಿಗ್ರಹ, ಉದಾರತನ, ಶಾಂತಿ, ಸಮಾಧಾನ ಗುಣಗಳು ಅರಿಸ್ಟಾಟಲನ ಬೋಧೆಯಿಂದ ಲಭಿಸಿದ್ದವು. ಅಲೆಗ್ಸ್ಯಾಂಡರನು ಅರಿಸ್ಟಾಟಲನ ಪ್ರಾಣಿಶಾಸ್ತ್ರ (*Zoology*) ಶೋಧೆಗಾಗಿ ಒಂದು ಸಾವಿರ ಜನರನ್ನು ಏಶಿಯಾ ಮತ್ತು ಗ್ರೀಸ ದೇಶಗಳಲ್ಲಿ ಸಂಚರಿಸುವ ವ್ಯವಸ್ಥೆ ಮಾಡಿ ಅರಿಸ್ಟಾಟಲನ ವಶದಲ್ಲಿರಿಸಿದ್ದಲ್ಲದೆ ಅನೇಕ ದ್ರವ್ಯವನ್ನು ತನ್ನ ಗುರುವಿಗೆ ಕೊಟ್ಟನು.

ಅಲೆಗ್ಸ್ಯಾಂಡರನು ಏಶಿಯಾಖಂಡದಲ್ಲಿ ದಂಡೆತ್ತಿ ಹೋದನಂತರ ಅರಿಸ್ಟಾಟಲನು ಅಥೆನ್ಸ ಪಟ್ಟಣಕ್ಕೆ ಹೋಗಿ ತನ್ನ ವಿದ್ಯಾಪೀಠವನ್ನು ಕ್ರಿ ಪೂ. ೩೩೪ ರಲ್ಲಿ ಸ್ಥಾಪಿಸಿದನು. ೧೨ ವರ್ಷಗಳ ವರೆಗೆ ಇವನು ಈ ವಿದ್ಯಾಪೀಠದ (*Lyceum*) ನಿಯಂತ್ರತ್ವವನ್ನು ವಹಿಸಿದ್ದನು. ಪ್ಲೇಟೋನ ವಿದ್ಯಾಪೀಠ (*Academy*) ಕ್ಕಿಂತಲೂ ಇದು ಉತ್ಕೃಷ್ಟವಾದ ಪ್ರಖ್ಯಾತಿಯನ್ನು ಹೊಂದಿತು. ಇವನ ನೇತೃತ್ವದಲ್ಲಿ ಅಸಂಖ್ಯಾತವಾದ ಗ್ರಂಥಗಳು ರಚಿಸಲ್ಪಟ್ಟವು. ಆಮೇಲೆ ಅಥೆನ್ಸ ಜನರು ಅಲೆಗ್ಸ್ಯಾಂಡರನ ವಿರೋಧವಾಗಿ ದಂಗೆಯೆದ್ದದರಿಂದ ಅರಿಸ್ಟಾಟಲನು ಅಥೆನ್ಸದಲ್ಲಿ ಸುರಕ್ಷಿತವಾಗಿ ಇರದಂತಾದ್ದರಿಂದ ಅವನು ಚಾಲಸಿಸ್ ಪಟ್ಟಣಕ್ಕೆ ಪಲಾಯನ ಮಾಡಬೇಕಾಯಿತು. ಅವನು ಅಲ್ಲಿಯೇ ಮುಂದಿನ ವರ್ಷ ಅಂದರೆ ಕ್ರಿ. ಪೂ. ೩೨೩ ರಲ್ಲಿ ಮರಣಹೊಂದಿದನು. ಅರಿಸ್ಟಾಟಲನ ಸಾಲ್ವತ್ತು ಗ್ರಂಥಗಳು ಈಗ ಉಪಲಬ್ಧವಾಗಿವೆ. ಅಲೆಗ್ಸ್ಯಾಂಡ್ರಿಯಾದ ಪಾಟನಾಲಯದಲ್ಲಿಯು ಪುಸ್ತಕ ಪಟ್ಟಿಯು ಇವನ ಉಳಿದ ಒಂದುನೂರಾ ಹತ್ತಾರು ಗ್ರಂಥಗಳ ಹೆಸರನ್ನು ಹೇಳುವದು. ಈಗ ಅವು ಕಳೆದು ಹೋಗಿವೆ. ಇವನು ಸಾಮಾನ್ಯ ಜನತೆಯ ಸಲುವಾಗಿ ನ್ಯಾಯ,

ನೀತಿ, ರಾಜನೀತಿ, ಜ್ಞಾನ, ವಿದ್ಯಾ, ಪ್ರೇಮ ಮೊದಲಾದ ವಿಷಯಗಳ ಮೇಲೆ ಪ್ರವಚನಗಳನ್ನು ಬರೆದನು. ಅವುಗಳಲ್ಲಿ ಅವನ ಸಿದ್ಧಾಂತ ಶಕ್ತಿಯೂ, ಹೊಸ ವಿಚಾರಗಳೂ ತುಂಬಿತುಳುಕುತ್ತವೆ.

ಪ್ಲೇಟೋನು ಪ್ರೋಟ್ಯಾಗೋರಾಸನ ಪ್ರತ್ಯಕ್ಷಜ್ಞಾನದ ಸಿದ್ಧಾಂತವನ್ನು ಖಂಡಿಸಿ ಭಾವನಾಲೋಕಕ್ಕೆ ವಿಶೇಷ ಮಹತ್ವಕೊಟ್ಟನು. ಅರಿಸ್ಟಾಟಲನು ದೃಶ್ಯಜಗತ್ತಿಗೆ ಪ್ರಾಮುಖ್ಯತೆಯನ್ನು ಕೊಟ್ಟನು. ಭಾವನೆಗಳು ಜಗತ್ತಿನಿಂದ ಪ್ರತ್ಯೇಕವಾಗಿರುವದಾದರೆ ಅವುಗಳ ಅಸ್ತಿತ್ವವು ನಮಗೆ ಗೊತ್ತಾಗುವ ಬಗೆ ಹೇಗೆ? ಅಲ್ಲದೆ ಅವುಗಳ ವ್ಯಾಪಕ ಜಗತ್ತಿನ ಸೃಷ್ಟಿಯನ್ನು ವಿವರಿಸುವವೆಂತು? ಎಂದು ಪ್ಲೇಟೋನ ಸಿದ್ಧಾಂತವನ್ನು ಖಂಡಿಸಿದನು. ಬಿಳಿಯ ಬಣ್ಣದ ಭಾವನೆಯುಂಟೆಂದು ತಿಳಿದರೂ ಅದು ಬಿಳಿ ವಸ್ತುವನ್ನ ಹೇಗೆ ನಿರ್ಮಾಣಮಾಡಬಲ್ಲದು? ಒಂದುವೇಳೆ ಭಾವನೆಗಳು ಜಗತ್ತಿನ ವಸ್ತುಗಳ ಸೃಷ್ಟಿಕಾರಣವನ್ನು ವಿವರಿಸುತ್ತವೆಂದು ತಿಳಿದರೂ ವಸ್ತುಗಳ ಚಲನೆಯನ್ನು ವಿವರಿಸಲಾರವು. ಯಾಕೆಂದರೆ ಭಾವನೆಗಳಿಗೆ ಸ್ವಯಂಚಲನೆಯಿಲ್ಲ. ಆದ್ದರಿಂದ ಭಾವನೆಗಳ ಪ್ರತಿಬಿಂಬಗಳಾದ ದೃಶ್ಯ ವಸ್ತುಗಳು ನಿಶ್ಚಲವಾಗಿರಬೇಕಾಯಿತು. ಪ್ಲೇಟೋನು ಜಗತ್ತಿನಲ್ಲಿಯ ನಾನಾ ಸೃಷ್ಟವಸ್ತುಗಳ ಕಾರಣವನ್ನು ತೋಳಲಶಕ್ತನಾಗಿದ್ದು ಮತ್ತೊಂದು ಭಾವನಾಲೋಕವನ್ನು ನಿರ್ಮಿಸಿದ್ದಾನೆ. ಅವನ ಭಾವನೆಗಳು ದೃಷ್ಟವಸ್ತುಗಳ ಪ್ರತಿರೂಪಗಳೇ ವಿನಾ ಬೇರೆಯಲ್ಲ. ಇವನ ಭಾವನೆಗಳು ವಸ್ತುಗಳ ಸತ್ವವೆಂದು ತಿಳಿದಾಗ್ಯೂ ಭಾವನೆಗಳನ್ನು ವಸ್ತುಗಳಿಂದ ಪ್ರತ್ಯೇಕವಾಗಿರಿಸಿದ್ದು ಪ್ರಮಾದವಾಗಿದೆ. ಭಾವನೆಯು ಸಮಷ್ಟಿಯಾಗಿದ್ದರೆ ವ್ಯಷ್ಟಿಯಲ್ಲಿಯೇ ಇರತಕ್ಕದ್ದು.

ಅರಿಸ್ಟಾಟಲನ ಮೂಲಸಿದ್ಧಾಂತಃ— ಇವನು ಪ್ರತ್ಯಕ್ಷಜ್ಞಾನಕ್ಕೂ ಭಾವನೆಗೂ ಅಗಲಿರದಂಥ ಸಂಬಂಧವನ್ನು ಕಲ್ಪಿಸಿದನು. ದೃಶ್ಯವಸ್ತುಗಳು ಭಾವನೆಗಳಿಂದ ಭಿನ್ನವಿದ್ದಾಗ ಸತ್ಯವಾಗಿರಲಾರವು. ಭಾವನೆಗಳು ದೃಶ್ಯವಸ್ತುಗಳಿಂದ ಭಿನ್ನವಿರುವಾಗ ಕೇವಲ ಛಾಯಾಮಾತ್ರವಾಗಿರುವವು. ನಿಜವಸ್ತುವು ದೃಶ್ಯಜಗತ್ತಿನಲ್ಲಿ ಪ್ರಕಟವಾಗುವ ಸತ್ವವಾಗಿದೆ. ಮತ್ತು ಜಗತ್ತಿನಲ್ಲಿಯೇ ಅದರ ವಾಸವು. ವ್ಯಕ್ತಿಯೇ ನಿಜವಾದ ವಸ್ತುವು.

ತರ್ಕಶಾಸ್ತ್ರಃ— ಎಲ್ಲ ವ್ಯವಹಾರಿಕ ಶಾಸ್ತ್ರಗಳ ಸಮಸ್ಯೆಗಳನ್ನು ಬಿಡಿಸಲು ತರ್ಕವು ನಿಜವಾದ ಸಾಧನವೆಂದು ಇವನು ತಿಳಿದನು. ವ್ಯಷ್ಟಿಯಲ್ಲಿ ಜರಗುವ ಕಾರ್ಯಗಳಿಗೆಲ್ಲ ಒಂದು ವಿಶಿಷ್ಟವಾದ ಕಾರಣವುಂಟೆಂದು ಇವನು ತಿಳಿದನು. ತರ್ಕಪದ್ಧತಿಯು ಶಾಸ್ತ್ರೀಯವಾಗಿದ್ದರೆ ಅದು ಸೃಷ್ಟಿ ನಿಯಮಗಳನ್ನು ಅನುಸರಿಸಬೇಕು. ಪ್ರತಿಯೊಂದು ಪ್ರತ್ಯಕ್ಷ ಜ್ಞಾನವನ್ನು ಒಂದೇ ಸಾರ್ವತ್ರಿಕ ಭಾವನೆಯೊಳಗಿಂದ ಹೊರಪಡಿಸಬೇಕು. (*Deduction of particular perception from universal idea.*) ಇವನ ತರ್ಕವನ್ನು ಚನ್ನಾಗಿ ರಚಿಸಿದ್ದರಿಂದ ಇವನಿಗೆ ತರ್ಕಶಾಸ್ತ್ರದ ಪಿತಾಮಹನೆಂದು ಹೆಸರಾಯಿತು.

ತತ್ವಶಾಸ್ತ್ರಃ— ಸೃಷ್ಟಿಯಲ್ಲಿಯ ವಸ್ತುಗಳು ತಾವೇ ನಿಜವಾಗಿರದೆ ಅವುಗಳು ಜಗದಾತ್ಮದೊಂದಿಗೆ ಕೂಡಿದಾಗ ಮಾತ್ರವೇ ನಿಜವಾಗಿರುವವು. ಸೃಷ್ಟಿಯ ಪ್ರತಿಯೊಂದು ವಸ್ತುವು ಪ್ರಕೃತಿ ಮತ್ತು ಕಲಾ ಇವೆರಡರ ಸಂಯೋಗದಿಂದಾಗಿದೆ. ಪ್ರಕೃತಿಯು ಕಲೆಯಾಗಿ ಪರಿಣಮಿಸುವುದೇ ಧ್ಯೇಯವಾಗಿದೆ. ಸಜೀವ ವಸ್ತುಗಳ ನಿರ್ಮಾಣದಲ್ಲಿ ಉಪಾದಾನ ಕಾರಣ, ಕಾರ್ಯಕಾರಣಗಳೆರಡು ಅವಶ್ಯವೆಂತಲೂ ನಿರ್ಜೀವ ವಸ್ತುಗಳ ರಚನೆಯಲ್ಲಿ ಉಪಾದಾನ, ನಿಮಿತ್ತ, ಕಾರ್ಯಕಾರಣ, ಅಂತಿಮ ಕಾರಣಗಳು ಅವಶ್ಯವೆಂತಲೂ ಇವನು ಹೇಳುತ್ತಾನೆ. ಪ್ರತಿಯೊಂದು ವಸ್ತುವು ಅದರಷ್ಟಕ್ಕೆ ಸ್ವಯಂಸಿದ್ಧವಾಗಿ ಕಂಡರೂ ಮತ್ತೊಂದು ವಸ್ತುವಿನೊಡನೆ ಹೋಲಿಸಿದಾಗ ಅದು ಸ್ವಯಂಸಿದ್ಧವಾಗಿ ಕಂಡುಬರುವದಿಲ್ಲ. ಪುಷ್ಪವು ಸ್ವಯಂಪರಿಪೂರ್ಣವಾಗಿ ಕಂಡುಬಂದರೂ ಫಲದೊಡನೆ ಹೋಲಿಸಿದಾಗ ಅದರ ಪೂರ್ಣತೆಗೆ ಭಂಗಬರುವದು ಪುಷ್ಪವು ಫಲಕ್ಕೆ ಪ್ರಕೃತಿರೂಪವಾಗಿದ್ದು ನೊಸ್ಸೆಗೆ ಕಲಾರೂಪವಾಗಿದೆ. ಇಲ್ಲಿ ಅರಿಸ್ಟಾಟಲನು ದ್ವೈತಭಾವನ್ನು ಪ್ರಕಟಿಸಿದ್ದಾನೆ. ಶುದ್ಧ ಕಲೆಯೇ ಪರಮಾತ್ಮವಾಗಿದೆ. ಪರಮಾತ್ಮನು ಪ್ರಕೃತಿಯಿಂದ ಭಿನ್ನನಾಗಿರುವನು.

ದೇವರುಃ— ಪ್ರಕೃತಿಯು ಸಂಭಾವ್ಯವಸ್ತು (*Potential*) ವಾಗಿರುವದರಿಂದ ಚಲನಾ ಮತ್ತು ಉತ್ಪಾದಕ ಶಕ್ತಿರಹಿತವಾಗಿದೆ. ಪ್ರಕೃತಿಯ ಮೇಲೆ ಕಲೆಯ ಪ್ರೇರಣೆಯುಂಟಾದಾಗ ಚಲನೆಯುತ್ಪನ್ನವಾಗುವದು ಪ್ರಕೃತಿಯಲ್ಲಿ ರೂಪಾಂತರಹೊಂದುವ ಗುಣವುಂಟು. ಕಲೆಯಲ್ಲಿ ಕ್ರಿಯಾಶಕ್ತಿಯುಂಟು ಇವನ ಕಲೆಯು ಹಿಂದೂ ತತ್ವಶಾಸ್ತ್ರದಲ್ಲಿಯ ಚಿಚ್ಛಕ್ತಿಗೆ ಸದೃಶವಾಗಿದೆ. ಇವನ ಸೃಷ್ಟಿಕ್ರಮವು ಆದ್ಯಂತವಿಲ್ಲದೆ ವರ್ತುಳಾ

ಕಾರವಾಗಿದೆ. ದೇವರು ಜಗತ್ತಿನ ಚಲನೆಗೆ ಕಾರಣನಾಗಿದ್ದಾನೆ. ದೇವರು ಯಾಂತ್ರಿಕ ಚೇತಿಯ ಕಾರಣನಾಗಿರದೆ ಅಂತಿಮ ಅಥವಾ ಧ್ಯೇಯರೂಪವಾದ ಕಾರಣನಿದ್ದಾನೆ. ದೇವರು ತನ್ನ ಭಾವವನ್ನೇ ಹೊಂದುವ ಹಾಗೆ ಪ್ರಕೃತಿಯನ್ನು ಪ್ರೇರಣೆಮಾಡುತ್ತಾನೆ. ದೇವರು ಶಾಶ್ವತನೂ, ಅಚಲನೂ, ನಿತ್ಯನೂ, ಜಗತ್ತಿನ ಉತ್ಪತ್ತಿಗೆ ಕಾರಣನೂ, ನಿತ್ಯಪರಿಪೂರ್ಣನೂ, ಚಿತ್ಸ್ವರೂಪನೂ, ಕೇವಲಾತ್ಮಧ್ಯಾನಾಸಕ್ತನೂ, ಅನನ್ಯನೂ ಇದ್ದಾನೆ. ದೇವರ ವಿಷಯವಾದ ಈ ಅಪ್ಪೈತ ವಿಚಾರವು ಗ್ರೀಕರು ಈ ವರೆಗೂ ಪ್ರತಿಪಾದಿಸಿದ್ದಕ್ಕಿಂತ ಪರಿಪಕ್ವವಾದ ಫಲವಾಗಿದೆ.

ಪ್ರಕೃತಿಃ — ದೇವರು ಪ್ರಕೃತಿಯಿಂದ ಭಿನ್ನನಾಗಿರಬಲ್ಲನಾದರೂ ಪ್ರಕೃತಿಯು ದೇವರನ್ನಗಲಿರಲಾರದು. ಪ್ರಕೃತಿಯು ಎರಡುಸ್ವರೂಪವುಳ್ಳದಾಗಿದೆ. ಕಲೆಯೊಡನೆ ಸಹಕಾರಿತ್ವದಿಂದ ದೃಶ್ಯ ಜಗತ್ತಿನ ನಿರ್ವಾಣದಲ್ಲಿ ಸಹಾಯ ಭೂತವಾಗಿದೆ. ಮತ್ತು ಸೃಷ್ಟಿಯಲ್ಲಿಯ ಜೀವಾಯಕತ್ವಕ್ಕೆ ಮೂಲವಾಗಿದೆ. ಕಲೆಯು ಪೂರ್ಣ ಪ್ರಾದುರ್ಭಾವಹೊಂದಲು ಮತ್ತು ಸೃಷ್ಟ ಜಗತ್ತು ದೇವರಂತೆ ಪರಿಪೂರ್ಣತೆಯನ್ನು ಹೊಂದಲು ಪ್ರಕೃತಿಯು ಅತಂಕವಾಗಿದೆ. ಈತನ ಪ್ರಕೃತಿಯು ಪ್ಲೇಟೋನ ಪ್ರಕೃತಿಯಂತೆ ಶೂನ್ಯಪದಾರ್ಥವಾಗಿರದೆ ಭೌತಿಕ ವಸ್ತುಗಳ ಮೂಲವಸ್ತು (*sustratum*) ಆಗಿದೆ. ಇದು ಅನಂತವೂ, ಅನಿಯರ್ಮಾದಿತವೂ ಆಗಿದ್ದು ಇದರ ಪ್ರತಿಗಾವಿಗೂ ಪ್ರೇರಣೆಯಿಂದ ಅದೃಷ್ಟ (*fate*) ಮತ್ತು ಕಷ್ಟಸಂಭವ (*accident*) ಗಳು ಜರಗುವವು. ಸೃಷ್ಟಿಯು ಯಾಂತ್ರಿಕ ಮತ್ತು ಧ್ಯೇಯಭೂತವಾದ ಎರಡು ಕಾರಣಗಳಿಂದ ಕೂಡಿದೆ. ಪರಮಾತ್ಮನೊಬ್ಬನೇ ಧ್ಯೇಯಭೂತವಾದ ಅಥವಾ ಅಂತಿಮ ಕಾರಣನು. ಅವನಿಂದಲೇ ಸೃಷ್ಟಿಯೊಳಗಿನ ಕಾರ್ಯವು ಜರಗುತ್ತದೆ. ಪ್ರಕೃತಿಗೆ ಸ್ವಯಂ ಚಲನೆಯಿಲ್ಲ. ಪ್ರಕೃತಿಯಲ್ಲಿ ದೈವೀಸ್ವರೂಪವನ್ನು ಹೊಂದುವ ಇಚ್ಛೆಯುಂಟಾದಾಗ ಚಲನೆಯುಚ್ಚನ್ನವಾಗುವದು. ಸೃಷ್ಟಿಯು ಆರಿಷ್ಟಟಲನಿಗೆ ಜೀವಮಯವಾಗಿತ್ತು. ಆಧುನಿಕಶಾಸ್ತ್ರ ಸಿದ್ಧಾಂತದ ಪ್ರಕಾರ ಸೃಷ್ಟಿಯು ಜಡವಾಗಿದ್ದು ಯಾಂತ್ರಿಕ ಕಾರಣಕ್ಕೆ ಅಧೀನವಾಗಿದೆ. ಕ್ರಿಸ್ತರ ಸಿದ್ಧಾಂತದಂತೆ ಇವನ ಸೃಷ್ಟಿಯು ನಿರ್ಮಾಣವಾದದ್ದಲ್ಲ ಅಥವಾ ಡಾರ್ವಿನ್ನನ ಉತ್ಕ್ರಾಂತಿವಾದದಲ್ಲಿ ಹೊಸ ಜೀವಜಾತಿಗಳು ಕ್ರಮದಿಂದ ಅಭಿವೃದ್ಧಿಯಾಗುತ್ತ ಹೋದಂತೆ (*Evolution*)

ಇವನ ಸಿದ್ಧಾಂತವಲ್ಲ. ಇವನ ಜಗತ್ತು ಯಾವಾಗಲೂ ಅಸ್ತಿತ್ವವಲ್ಲಿದೆ ಅದಕ್ಕೆ ಸ್ಥಲದ ಮೇರೆಯುಂಟೋವಿನಃ ಕಾಲದ ಮೇರೆ ಇಲ್ಲ. ಮತ್ತು ಜಗತ್ತಿನಲ್ಲಿ ದೈವೀ ಬುದ್ಧಿಯು ಯಾವಾಗಲೂ ವಾಸವಾಗಿದೆ. ಯಾಂತ್ರಿಕ ಕಾರಣಗಳಿಂದ ಬದ್ಧವಾದ ವಸ್ತುಗಳೂ ಬುದ್ಧಿಯುಕ್ತವಾದ ಪ್ರಾಣಿಗಳೂ ದೇವರನ್ನೇ ಹೊಂದುವ ಧ್ಯೇಯವುಳ್ಳವಾಗಿವೆ. ಯಾಂತ್ರಿಕ ಕಾರಣಗಳಿಂದ ಬದ್ಧವಾದ ವಸ್ತುಗಳ ವಿಚಾರ ಮಾಡುವ ಶಾಸ್ತ್ರಕ್ಕೆ ಭೌತಿಕಶಾಸ್ತ್ರವೆಂದೂ ಬುದ್ಧಿಯುಕ್ತವಾದ ಪ್ರಾಣಿಗಳ ವಿಷಯದ ಶಾಸ್ತ್ರಕ್ಕೆ ಮಾನಸ, ನೈತಿಕ ಮತ್ತು ರಾಜನೈತಿಕಶಾಸ್ತ್ರಗಳೆಂದೂ ಅರಿಷ್ಟಟಲನು ತಿಳಿದನು. ಭೂಮಿಯು ಗೋಳಾಕಾರವಾದದ್ದೆಂದೂ ಅಚಲವಾದದ್ದೆಂದೂ ಅದರ ಸುತ್ತಲೂ ಸೂರ್ಯ, ಚಂದ್ರ, ನಕ್ಷತ್ರಮಂಡಲಗಳು ಸುತ್ತುತ್ತಿರುವವೆಂದೂ, ಪರಮಾತ್ಮನು ಇವೆಲ್ಲವನ್ನು ಚಲಿಸುವಂತೆ ಮಾಡುತ್ತಾನೆಂದೂ ಈತನು ತಿಳಿದನು. ಗ್ರಹಗಳ ಚಲನೆಯಿಂದ ಭೂಲೋಕದ ಜೀವಿಗಳ ಮೇಲೆ ಪರಿಣಾಮವುಂಟಾಗುವದೆಂದೂ ಅವು ದೇವತೆಗಳೆಂತಲೂ ಈತನು ಗ್ರಹಿಸಿದನು. ಸೃಷ್ಟಿಯಲ್ಲಿ ಮೂರು ವಿಧವಾದ ಚಲನೆಗಳುಂಟು. ಸ್ಥಳಭೇದ (ಯಾಂತ್ರಿಕ ಸ್ವರೂಪದ್ದು) ಗುಣಭೇದ (ರಸಾಯನಿಕ) ವಸ್ತುಭೇದ (ಸಜೀವನ ವಸ್ತುಸಂಬಂಧವಾದ–*Organic*) ವಸ್ತುಭೇದವು ಉಳಿದ ಎರಡು ಭೇದಗಳಿಗಿಂತ ಹೆಚ್ಚು ಸತ್ಯವಾದದ್ದು. ಗುಣಭೇದಗಳು ಪರಿಮಾಣ ಭೇದಗಳಿಂದ ಭಿನ್ನವಾಗಿವೆಯೆಂದು ಇವನು ಯಥಾರ್ಥವಾಗಿ ಶಾಸ್ತ್ರಪದ್ಧತಿಗನುಗುಣವಾಗಿ ಹೇಳಿರುವನು.

ಮಾನಸಶಾಸ್ತ್ರಃ — ಮನುಷ್ಯನು ಸೃಷ್ಟಿಯ ಅಂಗವಾಗಿದ್ದಾನೆ. ಪೊದಲು ಯಾಂತ್ರಿಕ ಬದಲಾವಣೆಯಿದ್ದು ಆ ಮೇಲೆ ರಸಾಯನಿಕ ಆನಂತರ ಸಜೀವನ ವಸ್ತುಗಳಲ್ಲಿ ಬದಲಾವಣೆ ಹೀಗೆ ಕ್ರಮವಿರುವದು. ಸಜೀವನದಲ್ಲಿ ಪುನಃ ಸಸ್ಯಜೀವ, ಇಂದ್ರಿಯಯುಕ್ತ ಜೀವ ಮತ್ತು ಬುದ್ಧಿಯುಕ್ತ ಜೀವ ಎಂಬ ಕ್ರಮಭೇದವುಂಟು. ಸಸ್ಯಗಳಿಗೆ ಸಜಾತಿ ಮಾಡಿಕೊಳ್ಳುವ ಮತ್ತು ಹಬ್ಬಿಸುವ ಶಕ್ತಿಯುಂಟು. ಇಂದ್ರಿಯಯುಕ್ತ ಜೀವಿಗಳಿಗೆ ಆಹಾರೇಚ್ಛೆ, ಸ್ವಯಂಚಲನೆಗಳುಂಟು. ಮನುಷ್ಯನಿಗೆ ಈ ಶಕ್ತಿಗಳಿರುವದಲ್ಲದೆ ಬುದ್ಧಿಶಕ್ತಿಯು ವಿಶಿಷ್ಟವಾಗಿರುವದು. ಮತ್ತು ಧ್ಯೇಯಯುಕ್ತವಾಗಿರುವದು. ಬುದ್ಧಿಯ ಕಾರ್ಯಗಳೆಲ್ಲವು ಯಾವದೊಂದು ಧ್ಯೇಯದ ಕಡೆಗೆ ಮುಖ್ಯವಾಗಿರುವವು. ಜೀವಾತ್ಮದ ಉದ್ದೇಶವನ್ನು ಪರೀಕ್ಷಿಸಲು ಸಫಲಗೊ

ಳಿಸುವದು. ಬುದ್ಧಿಯು ಜೀವಾತ್ಮದ ಅಂಶವಾಗಿದೆ. ಅದು ಭೌತಿಕವಾಗಿರದೆ ಬದಲಾವಣೆಯನ್ನು ಹೊಂದಲಾರದ್ದೂ ಸುಖದುಃಖಗಳಿಂದ ಅಲಿಪ್ತವಾದದ್ದೂ ಇದೆ. ದೇಹವು ನಾಶವಾದ ನಂತರ ಸಹ ಅದು ಉಳಿಯುವನು. ವಿಚಾರವೇ ಬುದ್ಧಿಯ ಕ್ರಿಯೆಯಾಗಿದೆ. ಇವನು ಬುದ್ಧಿಯಲ್ಲಿ ಅನಾಸಕ್ತ ಬುದ್ಧಿ (*Passive reason*) ಮತ್ತು ಆಸಕ್ತಬುದ್ಧಿ (*Active reason*) ಎಂದು ಎರಡು ವಿಭಾಗಮಾಡಿದ್ದಾನೆ. ಅನಾಸಕ್ತ ಬುದ್ಧಿಯು ಕ್ರಮದಿಂದ ಬೆಳವಣಿಗೆ ಹೊಂದುವ ವ್ಯಕ್ತಿಯಲ್ಲಿದೆ. ಆಸಕ್ತ ಬುದ್ಧಿಯೊಂದೇ ಮರಣದ ನಂತರ ಉಳಿಯುವದು. ಇದು ದೇವರಲ್ಲಿ ಬೆರೆಯುವದೋ ಹಾಗೇ ಉಳಿಯುವದೋ ಎಂಬ ಬಗ್ಗೆ ಇವನು ಏನೂ ಹೇಳಿಲ್ಲ.

ನೀತಿಶಾಸ್ತ್ರ:- ಸದ್ಗುಣವು ಬುದ್ಧಿಯ ಚಟುವಟಿಕೆಯನ್ನುಂಟುಮಾಡಲು ಸಾಧನವಾಗಿದೆ. ಬೌದ್ಧಿಕಚಟುವಟಿಕೆಯು ನೈತಿಕ ಜೀವನದ ಕ್ರೀಯಸ್ಸಾಗಿದೆ. ಸುಖವೇ ಮನುಷ್ಯನ ಧ್ಯೇಯವು. ಸುಖವು ಮನುಷ್ಯ ಪ್ರಯತ್ನದ ಮತ್ತು ಪರಿಸ್ಥಿತಿಯ ಫಲವಾಗಿದೆ. ಸುಖದ ಬೆಲೆಯನ್ನು ನಿರ್ಧರಿಸಲು ಸದ್ಗುಣವು ಪ್ರಮಾಣವಾಗಿದೆ. ಮನುಷ್ಯಕಾರ್ಯದ ಪ್ರತಿಫಲವಾಗಿ ಸುಖಗಳು ಯಾವಾಗಲೂ ಪ್ರತಿಫಲಿಸುವವೆಂದು ಹೇಳಲು ಬರುವದಿಲ್ಲ. ಇಂದ್ರಿಯನಿಗ್ರಹ ಮಾಡುವದರಲ್ಲಿ ವ್ಯವಹಾರಿಕ ಸದ್ಗುಣವಿರುವದೆಂತಲೂ ಬೌದ್ಧಿಕ ವ್ಯವಸಾಯದಿಂದ ಬೌದ್ಧಿಕ ಸದ್ಗುಣವುಂಟಾಗುವದೆಂತಲೂ ಈತನ ಮತವು. 'ಜ್ಞಾನವೇ ಸದ್ಗುಣವಾಗಿದೆ' ಎಂಬ ಸಾಕ್ರೆಟಿಸನ ಸಿದ್ಧಾಂತವನ್ನು ಇವನು ಖಂಡಿಸಿದನು. ಒಂದು ಕಾರ್ಯವು ಕೆಟ್ಟದೆಂದೂ ತಿಳಿದಿದ್ದರೂ ಮನುಷ್ಯನು ಕಾಮ-ಕ್ರೋಧಾದಿಗಳ ವಶವರ್ತಿಯಾಗಿ ಅದನ್ನು ಮಾಡುವನು. ಆದ್ದರಿಂದ ಇಚ್ಛಾಸ್ವಾತಂತ್ರ್ಯವನ್ನು ಇವನು ಪ್ರತಿಪಾದಿಸಿದನು. ಧೈರ್ಯವು ಭೀರುತ್ವ ಮತ್ತು ದುಡುಕುತನಗಳ ಮಾಧ್ಯಮಿಕ ಸದ್ಗುಣವು. ವ್ಯವಹಾರಿಕ ಸದ್ಗುಣಗಳನ್ನು ಸಾಧಿಸುವದರಲ್ಲಿ ಮಿತಗುಣವು ಸಾಧನವು. ಬೌದ್ಧಿಕ ಸದ್ಗುಣಗಳಿಂದ ಮನುಷ್ಯನು ದೈವಿಕ ಸುಖವನ್ನು ಹೊಂದುವನು.

ರಾಜನೀತಿ:— ಇಹಲೋಕದಲ್ಲಿ ಸುಖಕ್ಕಿಂತ ಬೌದ್ಧಿಕ ಚಟುವಟಿಕೆಯೇ ಮೇಲಾದದ್ದು, ಸರಕಾರವು ವ್ಯಕ್ತಿಯ ಸದ್ಗುಣವನ್ನು ಬೆಳಸಬೇಕು. ವ್ಯಕ್ತಿಯು ತನ್ನ ಹಿತವನ್ನು ಸಮಾಜದ ಹಿತಕ್ಕೆ ಅಧೀನ ಮಾಡಬೇಕು. ಸರಕಾರಕ್ಕೆ ಜನರ ಹಿತವೇ ಧ್ಯೇಯವಾಗಿರಬೇಕು. ಇವನು ಪ್ಲೇಟೋನಂತೆ ಸಮಾಜ ಸಮತಾವಾದಿಯಾಗಿರದೆ ವಿವಾಹ ಪದ್ಧತಿಯನ್ನೂ ಕೌಟುಂಬಿಕ ಸಂಬಂಧವನ್ನೂ ಬಲವಾಗಿ ಪ್ರತಿಪಾದಿಸಿದನು. ಇವನು ಸ್ತ್ರೀಯರ ಗೌರವವನ್ನು ತಿಳಿಪಿ ಅವರಿಗೆ ಯೋಗ್ಯ ಮರ್ಯಾದೆ ಇರತಕ್ಕದ್ದೆಂದು ಹೇಳಿದನು. ಗುಲಾಮಗಿರಿಯು ಪದ್ಧತಿಯಾದರೂ ಇವನಿಗೆ ಸಂಮತವಿಲ್ಲ.

ಸಾಕ್ರೆಟೀಸ ಮತ್ತು ಬಸವ.

ಲೇಖಕರ:— ನೀಲಕಂಠ (ಬಸವನ ಬಳಗ).

ಸಾಕ್ರೆಟಿಸನು ಜನ್ಮ, ಶಿಕ್ಷಣ, ಸಂಸ್ಕೃತಿಗಳಿಂದ ಗ್ರೀಕನು. ಆದರೆ ಆತನ ತತ್ವಗಳು ಗ್ರೀಸಕ್ಕಷ್ಟೇ ಸಂಬಂಧಿಸಿದಂಥವಲ್ಲ ದೇಶಕಾಲವನ್ನು ವಿೀರಿದಂಥವುಗಳು. ಆ ತತ್ವಗಳ ಮೂಲಕ ಸಾಕ್ರೆಟಿಸನು ವಿಶ್ವವ್ಯಾಪಕನೂ ಅಮರನೂ ಆಗಿದ್ದಾನೆ.

ಸಾಕ್ರೆಟಿಸನಿಗೂ ಬಸವೇಶ್ವರನಿಗೂ ತಾದಾತ್ಮ್ಯ ಸಂಬಂಧವಿರುತ್ತದೆ. ಬಸವನು ಜನ್ಮದಿಂದ ಶೈವನಾದರೂ ಮತ ಸಂಸ್ಕೃತಿಗಳಿಂದ ವೀರಶೈವನಾಗಿದ್ದಾನೆ. ಆತನ ದಿವ್ಯ ತತ್ವಗಳು ವಿಶ್ವವ್ಯಾಪಕವಾಗಿವೆ. ಆದರೆ ತಿಳುವಳಿಕೆಯಿಲ್ಲದವರು ಆ ತತ್ವಗಳು ವೀರಶೈವ ಧರ್ಮಕ್ಕಷ್ಟೇ ಸಂಬಂಧಿಸಿರುವವೆಂದು ಭಾವಿಸುತ್ತಾರೆ. ಸಾಕ್ರೆಟಿಸನಂತೆ ಬಸವನೂ ವಿಶ್ವವ್ಯಾಪಕನಾಗಿದ್ದಾನೆ. ಬಸವನು ಲಿಂಗಾಯತನಾದರೂ ಆತನ ತತ್ವಗಳು ಮಾನವ ಸೃಷ್ಟಿಗೆಲ್ಲ ಸಂಬಂಧಿಸಿದಂಥವಾಗಿರುತ್ತವೆ.

ಸಾಕ್ರೆಟಿಸನು ಪಾಶ್ಚಾತ್ಯ ತತ್ವಜ್ಞಾನ ಶಾಸ್ತ್ರದ ಮೂಲ ಪುರುಷನು. ಸಾಕ್ರೆಟಿಸನಿಗಿಂತ ಪೂರ್ವದಲ್ಲಿ ಪ್ರಕೃತಿವಾದಿಗಳಿದ್ದರು. (*Cosmologist*) ಈ ದೃಶ್ಯರೂಪೀ ಜಗತ್ತು ಹೇಗೆ ನಿರ್ಮಿತವಾಯಿತೆಂಬದನ್ನು ನಿರ್ಧರಿಸಲಿಕ್ಕೆ ಅವರು ಪೃಥ್ವಿ, ಆಪ್, ತೇಜ, ವಾಯು, ಆಕಾಶಗಳೆಂಬೀ ಪಂಚಮಹಾಭೂತಗಳನ್ನಾಶ್ರಯಿಸಿದರು. ಈ ತತ್ವಗಳಿಂದಲೇ ವಿಶ್ವದ ಉತ್ಪತ್ತಿಯಾಯಿತೆಂದು ಅವರು ಸಾಧಿಸಿದರು. ಗ್ರೀಕರ ಮನೋಭೂಮಿಕೆಯಲ್ಲಿ ಮೊಟ್ಟಮೊದಲು ಬಿಂಬಿಸಿದ ವಿಚಾರಗಳವು.

ಬರಬರುತ್ತ ಈ ಪಂಚಭೂತಗಳನ್ನೇ ಜನರು ನಾನಾ ಪ್ರಕಾರವ ದೇವತೆಗಳನ್ನು ಮಾಡಿ ಆರಾಧಿಸಹತ್ತಿದರು. ಅಗ್ನಿ, ವರುಣ, ಆಕಾಶ ಮುಂತಾದವುಗಳು ದೇವರೆಂದು ತಿಳಿದು ಧರ್ಮದ ಅನೇಕ ಮೂಢ ಭಾವನೆಗಳಿಗೆ ಆಸ್ಪದ ಕೊಟ್ಟರು. ಪೂಜೆ, ಮಂತ್ರ, ಮಹೋತ್ಸವಾದಿ ಮೂಢ ಭಾವನೆಯ ಕಾರ್ಯಗಳು ಅವರಲ್ಲಿ ಬೇರೂರಿದವು. ಗ್ರೀಸ ದೇಶದ ಅಲಂಫಿಕ್ ಆರಫಿಕ್ ಎಂಬ ಧರ್ಮ ವಿಚಾರಗಳು ಮೂಢ ಭಾವನೆಯ ಮುದ್ದೆಗಳೆಂದು ಸುಜ್ಞರು ತಿಳಿಯುತ್ತಾರೆ. ಆದರೆ ವಿಶ್ವ ವ್ಯಾಪಕ ದೃಷ್ಟಿಯಿಂದ ಈ ವಿಚಾರಗಳು ಅಪೂರ್ಣವಾಗಿರುತ್ತವೆ. ಕಾಲ ಗತಿಯಿಂದ ಹೆಚ್ಚಿನ ಬುದ್ಧಿಯ ಉದಾತ್ತ ವಿಚಾರಗಳು ತಲೆದೋರಲು ಈ ಮೂಢ ಭಾವನೆಗಳು ಕಾಲ್ದೆಗೆಯಲೇಬೇಕಾಯಿತು.

ಈ ಪ್ರಕೃತಿವಾದಿಗಳು ೬ನೆ ಶತಮಾನಗಳ ವರೆಗೆ ತಮ್ಮ ಮೂಗು ಮೇಲು ಮಾಡಿಕೊಂಡು ಮೆರೆದರು. ಅದರೆ ಮುಂದೆ ಗ್ರೀಸದಲ್ಲಿ ದಿವ್ಯ ತತ್ವಜ್ಞಾನಿಗಳುದಿಸಿದ್ದರಿಂದ ಆ ಪ್ರಕೃತಿವಾದಿಗಳು ಮೂಲಿ ಹಿಡಿದರು. ಈ ತತ್ವಜ್ಞಾನಿಗಳೆಂದರೆ ಸೋಫಿಸ್ಟರು. ಇವರು ಸದ್ಗುಣದ ಪಹೋದರರೂ ವಿಚಾರದ ಪುರಸ್ಕರ್ತರೂ ಆಗಿದ್ದರು. ಜನರಿಗೆ ನೀತಿಯನ್ನು ಉಪದೇಶಿಸುತ್ತ ಅವರು ಜನರ ಮೂಢ ಭಾವನೆಗಳನ್ನು ಮೂಲಿಗೊತ್ತಿ ಸುವಿಚಾರಗಳನ್ನೇ ಪ್ರಚಾರಗೊಳಿಸಲಾರಂಭಿಸಿದರು. ಆದರೆ ಅವರ ದುರ್ದೈವದಿಂದ ಸರಕಾರದವರು ಇವರು ಕ್ರಾಂತಿಕರಾಗಿ ತರುಣರ ಮನಸ್ಸನ್ನು ಕಲುಷಿತಗೊಳಿಸುವರೆಂಬ ಆರೋಪದ ಮೇಲಿಂದ ಇವರನ್ನು ಅಟಕಿನಲ್ಲಿಟ್ಟರು. ಸೋಫಿಸ್ಟರು ನಿಜವಾಗಿ ಸದ್ಗುಣ-ಸದಾಚಾರಗಳನ್ನು ಬೋಧಿಸುತ್ತಿದ್ದುದೇನೋ ನಿಜ. ಆದರೆ ಅವರು ಈ ಪ್ರಚಾರಕ ಕಾರ್ಯವನ್ನು ದುಡ್ಡಿನಾಶೆಯಿಂದ ಮಾಡುತ್ತಿದ್ದರು. ಈ ಮೇರೆಗೆ ಅವರು ತಮ್ಮ ಪವಿತ್ರವಾದ ಸದ್ಬುದ್ಧಿಯನ್ನು ದುಡ್ಡಿಗಾಗಿ ಮಾರಿಕೊಂಡರು. ಅದುದರಿಂದ ಅವರ ವರ್ಚಸ್ಸು ಕ್ರಮೇಣ ಕಡಿಮೆಯಾಯಿತು ಇಷ್ಟರಲ್ಲಿ ಸಾಕ್ರೆಟಿಸನ ಕೀರ್ತಿಧ್ವಜವು ತಲೆಯೆತ್ತಿ ಮೆರೆಯಿತು. ಆತನು ಸದ್ಗುಣ-ಸದಾಚಾರಗಳನ್ನು ಬೋಧಿಸುವದು ದುಡ್ಡಿನಾಶೆಯಿಂದಲ್ಲ. ಆದರೆ ಕರ್ತವ್ಯದಿಂದೆಂಬ ಮಾತನ್ನು ಆತನು ಸೋಫಿಸ್ಟರಿಂಗೆ ಮನವರಿಕೆ ಮಾಡಿ ಕೊಟ್ಟನು. ಅಮೇಲೆ ನೀತಿಯು ಕ್ರಮಬದ್ಧವಾಗಿ ಪ್ರಚಾರದಲ್ಲಿ ಬರಲು ಉಪಕ್ರಮವಾಯಿತು.

ಬಸವೇಶ್ವರನ ಜೀವಮಾನದಲ್ಲಿ ಸಹ ಇದೇ ಮಾದರಿಯ ಸಂಗತಿಗಳೇ ದೃಗ್ಗೋಚರವಾಗುವವು. ಮೊಟ್ಟಮೊದಲು ವೇದಕಾಲದಿಂದ ತತ್ವಜ್ಞಾನದ ಮೂಲ ವಿಚಾರಗಳು ಭರತಖಂಡದಲ್ಲಿ ಮೊಳಿಕೆಯೊಡೆದವು. ಮಳೆ, ಗಾಳಿ, ಮಿಂಚು, ಗುಡುಗು ಮೊದಲಾದ ನೈಸರ್ಗಿಕ ರೂಪಗಳನ್ನು ದೇವರಂತೆ ಪೂಜಿಸುವದು ಆ ಕಾಲದ ವೈಲಕ್ಷಣ್ಯವಾಗಿದ್ದಿತು. ಹಿಂದುಸ್ತಾನದ ವೈದಿಕ ಧರ್ಮವೆಂದರೆ ಗ್ರೀಸದೇಶದ ಆರಫಿಕ್ ಮತ್ತು ಅಲಂಫಿಕ್ ಧರ್ಮದಂತೆ ತೀರ ಪ್ರಾಕೃತ ಸ್ಥಿತಿಯುಳ್ಳದ್ದೆಂದು ಅರವಿಂದ ಸೋದರವರು ಹೇಳಿದ್ದಾರೆ. ಮುಂದೆ ಉಪನಿಷತ್ಕಾಲದಲ್ಲಿ ದೇವ ಎಂದರೆ ಪರಬ್ರಹ್ಮವೆಂಬ ಕಲ್ಪನೆಯು ತಲೆದೋರಿತು. ಈ ಪರಬ್ರಹ್ಮವೇ ಮುಂದೆ ಪುರುಷವಾಚಕವಾಗಿ ಈಶ್ವರ, ಕೃಷ್ಣ ಮುಂತಾದ ನಾಮಗಳಿಂದ ಕಂಗೊಳಿಸಿತು. ಆ ಮೇಲೆ ಪುರುಷರೂಪೀ ದೇವತೆಗಳ ಬಗ್ಗೆ ಸಾಂಪ್ರದಾಯದಂತೆ ಪೂಜಾ ವಿಧಾನಗಳು ನಡೆಯಲಾರಂಭಿಸಿದವು. ಈ ಪೂಜಾ ವಿಧಾನಗಳು ಗ್ರೀಕರ ಪೂಜಾ ಕ್ರಮಗಳನ್ನು ಬಹುಮಟ್ಟಿಗೆ ಹೋಲುತ್ತವೆ. ಗ್ರೀಸ ದೇಶದಲ್ಲಿ ಈ ತರಹದ ಪೂಜೆಪುನಸ್ಕಾರಗಳ ವಿರುದ್ಧವಾಗಿ ಸಾಕ್ರೆಟಿಸನು ಎದ್ದು ನಿಂತಂತೆ ನಮ್ಮಲ್ಲಿ ವೈದಿಕ ಮೂಢ ಭಾವನೆಯ ವಿಧಾನಗಳ ವಿರುದ್ಧವಾಗಿ ಬಸವೇಶ್ವರನು ನಡುಕಟ್ಟಿ ನಿಂತನು.

ಗ್ರೀಸದಂತೆ ಭರತಖಂಡವಾದರೂ ಮೊದಲು ಪ್ರಾಕೃತಿಕ ರೂಪಗಳನ್ನು ದೇವರೆಂದು ಭಾವಿಸಿ ಪೂಜಿಸುತ್ತಲಿದ್ದಿತು. ಆದರೆ ಆ ಕಾಲಕ್ಕೆ ಅಧ್ಯಾತ್ಮ ಶಾಸ್ತ್ರವಾಗಲಿ ನೀತಿಶಾಸ್ತ್ರವಾಗಲಿ ಕ್ರಮಬದ್ಧವಾದ ಸ್ಥಿತಿಯಲ್ಲಿದ್ದಿಲ್ಲ. ಮುಂದೆ ಶಂಕರ, ರಾಮಾನುಜ, ಬುದ್ಧ ಮೊದಲಾದವರು ಈ ವಿಷಯದ ಕಡೆಗೆ ವಿಶೇಷ ಗಮನಕೊಟ್ಟರು. ಅವರು ಧರ್ಮವನ್ನು ಮೂಢಭಾವನೆಯಿಂದ ಬಿಡಿಸಿ ತಾತ್ವಿಕ ಸ್ವರೂಪಕ್ಕೆ ತರಬೇಕೆಂದು ಹವಣಿಸಿದರು. ಆದರೆ ಅವರ ಪ್ರಯತ್ನಗಳೇನೂ ಅಷ್ಟು ಯಶಸ್ವಿಯಾಗಲಿಲ್ಲ-ಯಾಕಂದರೆ ಅವರು ತಾನೇ ದೇವರೆಂಬ ಹಾಗೂ ಪುರುಷರೂಪ ದೇವರೊಬ್ಬನಿರುತ್ತಾನೆಂಬ ವಿಚಾರವನ್ನು ಪ್ರಚಾರಮಾಡಿದರು. ಆದರೆ ಬಸವೇಶ್ವರನು ಆತ್ಮಬ್ರಹ್ಮ, ಪುರುಷಬ್ರಹ್ಮ ವಿಚಾರಗಳು ತೀರ ಅಪರಿಪಕ್ವವಾದವುಗಳೆಂದು ಮೊದಲು ಕಂಡುಹಿಡಿದನು. ಯಾಕಂದರೆ ಅವು ವಿವೇಕಕ್ಕೆ ಸಮಂಜಸವಾಗಲಾರವು. ಬಸವಾದಿ ಪ್ರಮಥರು ಹೇಳಿಕೊಟ್ಟ ದೇವರೆಂದರೆ ವಿಶ್ವವ್ಯಾಪಿಯಾದ ಪರಬ್ರಹ್ಮವಸ್ತುವು ಆದರೆ ಮರ್ಯಾದಿತ

ವಾದ ಪುಟ್ಟದೇವತೆಯಲ್ಲ. ಪರಬ್ರಹ್ಮವಸ್ತುವೆಂದರೆ ಅಪಾರ ಸತ್ಯವೆ. (*Infinita goodness*) ಎಲ್ಲ ಮಾನವರಿಗೆ ಮನವರಿಕೆಯಾಗುವ ತತ್ವವಿದು. ಸಾಕ್ರೆಟಿಸ ಮತ್ತು ಬಸವೇಶ್ವರರು ಪ್ರತಿಪಾದಿಸುವ ದೇವರೆಂದರೆ ಅಪಾರವಾದ ಸತ್ಯವಲ್ಲದೆ ಬೇರೊಂದಲ್ಲ

ಈ ಉಭಯ ಮಹಿನುರ ತತ್ವಗಳು ವಿಶೇಷವಾಗಿ ಪರಸ್ಪರ ಹೋಲುತ್ತವೆ. ನಿನ್ನ ನೀನರಿದೊಡೆ ಅಲ್ಲಿಯೇ ಎಲ್ಲ ತತ್ವದ ರಹಸ್ಯವಿರುವದೆಂದು ಬಸವೇಶ್ವರನು ಮನವರಿಕೆ ಮಾಡಿಕೊಟ್ಟನು. ತನ್ನ ತಾನರಿಯಬೇಕಾದರೆ ಮೊದಲು ತಾನು ಅಜ್ಞಾನಿಯೆಂದೇ ಭಾವಿಸಿ ನಡೆಯಬೇಕಾಗುತ್ತದೆ. ನಾನು ಎಲ್ಲ ತಿಳಿದವನೆನ್ನವದು ಅಹಂಕಾರದ ಬೀಜವು. ನನಗೆ ಏನೂ ಗೊತ್ತಿಲ್ಲವೆನ್ನವದು ವಿನಯದ ತಳಹದಿಯು. ಇದರಲ್ಲಿ ಮಾನವರ ಸೇವೆ ಮಾಡಲು ಅಪಾರವಾದ ಶಕ್ತಿಯಿರುತ್ತದೆ. ಇದೇ ಬಸವನ ತತ್ವವು.

ಸಾಕ್ರೆಟಿಸನು ಮಹಾಜ್ಞಾನಿಯಾಗಿದ್ದರೂ ತಾನು ಏನೂ ತಿಳಿಯದವನೆಂದೇ ಪ್ರತಿಪಾದಿಸುತ್ತಿದ್ದನು. ಈತನಾದರೂ ತನ್ನ ತಾನರಿದರೆ ಅದರಲ್ಲಿಯೇ ಎಲ್ಲ ತತ್ವವು ಅಡಕವಾಗಿರುತ್ತದೆಂಬ ಮಾತನ್ನೇ ಎತ್ತಿ ಹಿಡಿದನು. ಜ್ಞಾನಿಗಳು ಜನರೆದುರಿಗೆ ತಾವು ಅಜ್ಞಾನಿಗಳೆಂದು ಹೇಳಿದರೆ ಅದು ಆಶ್ಚರ್ಯವಾಗಿ ತೋರಬಹುದು. ಬಸವೇಶ್ವರನು ದ್ವಿತೀಯ ಶಂಭುವೆಂದೂ ಸರ್ವಜ್ಞನೆಂದೂ ಶರಣಪ್ರಮಥರು ಕೊಂಡಾಡಿದರು. ಆತನು "ಎನಗಿಂತ ಕಿರಿಯರಾರಿಲ್ಲ, ಶಿವಶರಣರಿಗಿಂತ ಹಿರಿಯರಾರಿಲ್ಲ" ಎಂಬ ಕಿಂಚಿಜ್ಞತ್ವದ ವಿಚಾರಗಳನ್ನೇ ಮುಂದು ಮಾಡಿದನು. ಯಾವ ದೇಶದಲ್ಲಿದ್ದರೇನು? ಯಾವ ಕಾಲದಲ್ಲಿದ್ದರೇನು? ಮಹಾತ್ಮರ ವಿಚಾರಗಳು ಒಂದೇ ಮಾದರಿಯವಿರುತ್ತವೆ.

ನಿಜಸುಖವಾವುದು?

ಮನುಷ್ಯನು ಉಚ್ಚತಮ ಸ್ಥಿತಿಯನ್ನು ಹೊಂದಲಿಕ್ಕೆ ಯಾವಾಗಲೂ ಅಪೇಕ್ಷೆ ಪಡುವದುಂಟು. ಈ ಉಚ್ಚತಮ ಸ್ಥಿತಿ ಎಂದರೆ ನಿರಂತರ ಸೌಖ್ಯವನ್ನು ಹೊಂದುವದೇ ಇದೆ. ಆದರೆ ಈ ಸೌಖ್ಯವಾವುದೆಂಬ ವಿಷಯದಲ್ಲಿ ಅನೇಕರ ಅನೇಕ ಅಭಿಪ್ರಾಯಗಳುಂಟು.

ಆದರೆ ಹಿಂದೂ ಧರ್ಮದಲ್ಲಿ ಮೋಕ್ಷವನ್ನು ಹೊಂದುವದೇ ಸೌಖ್ಯವೆಂದು ತಿಳಿಯಲ್ಪಟ್ಟಿದೆ. ಈ ಬಗೆಯಾಗಿ ಅದರಲ್ಲಿಯ ಎಲ್ಲ ಪಂಗಡಗಳೂ ಎಲ್ಲ ತತ್ವವೇತ್ತಿಗಳೂ ಧರ್ಮ ಸುಧಾರಕರೂ ತಿಳಿದಿರುವರು. ಜಗತ್ತಿಲ್ಲವು ಪರಮಾತ್ಮನಿಂದ ಉಂಟಾಗಿದ್ದು ಅವನಲ್ಲಿಯೇ ಅದು ಕಡೆಗೆ ಬೆರೆದು ಹೋಗತಕ್ಕದ್ದೆಂದು ಈಗ ಎಲ್ಲರೂ ಭಾವಿಸಿರುವರು. ಒಬ್ಬ ವಚನಕಾರನು ಅನ್ನವದೇನಂದರೆ:— "ಅಯ್ಯಾ ಚಂದ್ರನಿಂದಾದ ಕಲೆ ಚಂದ್ರನ ಬೆರಿಸಿ ಚಂದ್ರನಾದಂತೆ ಸೂರ್ಯನಿಂದಾದ ಕಿರಣ ಸೂರ್ಯನ ಬೆರಿಸಿ ಸೂರ್ಯನಾದಂತೆ ಅಗ್ನಿಯಿಂದಾದ ಕಾಂತಿ ಅಗ್ನಿಯ ಬೆರಸಿ ಅಗ್ನಿಯಾದಂತೆ ದೀಪದಿಂದಾದ ಬೆಳಗು ದೀಪವ ಬೆರಸಿ ದೀಪವಾದಂತೆ ಸಮುದ್ರದಿಂದಾದ ನದಿ ಸಮುದ್ರವ ಬೆರಸಿ ಸಮುದ್ರವಾದಂತೆ" ಪರಮಾತ್ಮನಿಂದ ಸುಟ್ಟಿದ ಪ್ರಾಣಿಯು ಕಡೆಗೆ ಅವನಲ್ಲಿಯೇ ಬೆರೆದು ಹೋಗುವದೇ ಅದರ ಅಂತಿಮೋದ್ಯೇಯವಾಗಿರತಕ್ಕದ್ದು. ಇದನ್ನೇ ಮನುಷ್ಯನು ಸದಾಕಾಂಕ್ಷಿಸುತ್ತಿರಬೇಕು ಎಂದೂ ಹಿಂದೂ ಧರ್ಮವು ಯಾವಾಗಲೂ ಬೋಧಿಸುತ್ತಿರುವದು.

ಹಿಂದು ಧರ್ಮ ಶಾಸ್ತ್ರದಲ್ಲಿ ಪರಮಾತ್ಮನು ಆಕಾರ ರಹಿತನೆಂದು ಹೇಳಲ್ಪಟ್ಟಿರುತ್ತದೆ. ಅವನು ನಿರ್ಗುಣ, ನಿರಂಜನ, ನಿರುಪಮ ಎಂಬ ಶಬ್ದಗಳಿಂದ ವರ್ಣಿಸಲ್ಪಟ್ಟಿರುತ್ತಾನೆ. ವೀರಶೈವ ವಚನಕಾರರಾದರೂ ಅವನು ಶೂನ್ಯವೆಂದು ಭಾವಿಸಿ ಹಾಗೆ ಅನೇಕ ಉಕ್ತಿಗಳಲ್ಲಿ ಅವನನ್ನು ವರ್ಣಿಸಿರುವದುಂಟು. ಇಲ್ಲಿ ಶೂನ್ಯವೆಂದರೆ ನಾಸ್ತಿಕ ಮತವಾದಿಗಳು ತಿಳಿಯುತ್ತಿರುವಂತೆ ದೇವರ ಅಸ್ತಿತ್ವವೇ ಇಲ್ಲವೆಂಬ ಭಾವವಲ್ಲ. ಇದರ ಅಭಿಪ್ರಾಯವು ಜಗತ್ತನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ಅವಯವ, ನಿರವಯವ ಈ ಉಭಯಕ್ಕೆ ಮಿರಿ ತೋರುವಂಥ ಸ್ಥಿತಿ ಎಂದಿದೆ.

ಶೂನ್ಯವನ್ನು ಬಯಲು ಎಂಬ ಅಚ್ಚಗನ್ನಡ ಶಬ್ದದಿಂದಲೂ ವಚನಕಾರರು ಕರೆಯುವದುಂಟು.

ಹೀಗೆ ಬಯಲು ರೂಪುಳ್ಳ ಪರಮಾತ್ಮನಲ್ಲಿ ಅನೇಕ ಬಗೆಯ ಶಕ್ತಿಗಳು ಅಡಗಿರುವವು. ಜಗತ್ತಿನ ಸೃಷ್ಟಿಯ ಕಾಲದಲ್ಲಿ ಈ ಶಕ್ತಿಗಳು ಬಹಿಷ್ಕರಿಸಲ್ಪಡಲು ದೃಶ್ಯ ಜಗತ್ತು ನಮ್ಮ ದೃಷ್ಟಿಗೆ ಗೋಚರವಾಗುವದು. ಹೀಗೆ ಗೋಚರವಾಗುವ ಪೂರ್ವದಲ್ಲಿ ಅದು ಆರು ಸ್ಥಿತ್ಯಂತರಗಳಿಂದ ಹಾಯ್ದು ಬರಬೇಕಾಗುವದು. ಇವುಗಳಿಗೆ ಸಾದಾಖ್ಯಗಳೆಂಬ ಹೆಸರನ್ನು ವಚನಕಾರರು ಕೊಟ್ಟಿರುವರು. ಅವು ಯಾವವೆಂದರೆ ಕರ್ತೃ ಸಾದಾಖ್ಯ, ಕರ್ಮ ಸಾದಾಖ್ಯ, ಮೂರ್ತಿ ಸಾದಾಖ್ಯ, ಅಮೂರ್ತಿ ಸಾದಾಖ್ಯ, ಶಿವಸಾದಾಖ್ಯ, ಮಹಾಸಾದಾಖ್ಯ ಎಂದು ಇರುವವು.

ಜಗತ್ತಿನಲ್ಲೆಲ್ಲ ಅಲೆದಾಡುವ ಶಕ್ತಿಗಳಲ್ಲಿ ಎರಡು ಭಾಗಗಳನ್ನು ನಾವು ಮಾಡಬಹುದು. ಯಾವ ಶಕ್ತಿಗಳು ಒಂದನ್ನೊಂದು ಆಕರ್ಷಿಸುತ್ತವೋ ಅವುಗಳಿಗೆ ಪ್ರೀತಿಯೆಂತಲೂ ಯಾವವು ಒಂದನ್ನೊಂದು ಪರಸ್ಪರ ನೂಕುತ್ತವೋ ಅವು ಹಗೆತನವುಳ್ಳವೆಂತಲೂ ವಾಡಿಕೆಯಾಗಿ ಹೇಳುವದುಂಟು. ಪರಸ್ಪರ ಆಕರ್ಷಿಸುವ ಶಕ್ತಿಯು ಸುಖವಾಗಿ ಪರಿಣಮಿಸುವದು. ಈ ಶಕ್ತಿಯ ಯೋಗ್ಯ ಉಪಯೋಗದಿಂದಲೇ ಜಗತ್ತಿನ ಪ್ರಗತಿಯು ಮತ್ತು ಮಾನವೀ ಸ್ವಭಾವದ ಉನ್ನತಿಯು ಇರುತ್ತದೆ. ಆದರೆ ಯಾವ ಶಕ್ತಿಯಿಂದ ಪದಾರ್ಥಗಳು ಒಂದನ್ನೊಂದು ನೂಕುತ್ತವೆಯೋ ಅದು ಜಗತ್ತಿನಲ್ಲಿ ದ್ವೇಷಾಸೂಯೆ ಭಾವಗಳನ್ನು ಹುಟ್ಟಿಸುತ್ತದೆ. ಈ ಉಭಯ ಶಕ್ತಿಗಳ ಮೂಲಕ ಜಗತ್ತಿನ ಪ್ರಗತಿಯು ಇಲ್ಲವೆ ಅವನತಿಯು ಉಂಟಾಗುತ್ತದೆ.

ಆದರೆ ಮೋಕ್ಷ ಸ್ಥಿತಿಯು ಈ ಉಭಯ ಬಗೆಯ ಭಿನ್ನತೆಗೆ ವಿರಾಧಾಗಿರುತ್ತದೆ. ಈ ಭಿನ್ನತೆಗೆ ಅದು ತೀರ ಬೇರೆಯಾಗಿದೆ. ಇಲ್ಲಿ ಸುಖವೂ ಇಲ್ಲ, ದುಃಖವೂ ಇಲ್ಲ. ಶರಣ ಸ್ಥಿತಿಯಲ್ಲಿರುವವರು ಈ ಬಗೆಯಾಗಿ ಇರಬೇಕೆಂದು ವಚನಕಾರರು ಯಾವಾಗಲೂ ಬೋಧಿಸುತ್ತಿರುವರು. ಶರಣನು ಸಂಗರಹಿತನೂ ದ್ವೈತಾದ್ವೈತವನ್ನು ವಿರಿದವನೂ ಇದ್ದಾನೆ. ಅವನು ಸಾವಯನೂ ಅಲ್ಲ; ನಿರವಯನೂ ಅಲ್ಲ. ಇಂಥ ಶರಣನು ದುಃಖರಹಿತನಾಗಿರುತ್ತಾನೆ. ಮತ್ತು ಅವನಲ್ಲಿ ನಿತ್ಯ ನಿರಂಜನ ಪ್ರಭೆಯ

ಬೆಳಗು ಯಾವಾಗಲೂ ಪ್ರಕಾಶಿಸುತ್ತಲಿರುತ್ತದೆ. ಇಂಥವನು ಅನುಪಮವಾದ ಸುಖಸಾರಾಯದಲ್ಲಿ ಯಾವಾಗಲೂ ತೇಂಕಾಡುತ್ತಲಿರುವನು.

ಆದರೆ ಮನುಷ್ಯನು ಈ ಬಗೆಯ ಸ್ಥಿತಿಯನ್ನು ಒಳಕೊಳ್ಳವದಿಲ್ಲದರಿಂದ ಅವನ ಶಕ್ತಿಗಳೆಲ್ಲವೂ ಐಹಿಕ ಸುಖೋಪಭೋಗಗಳಲ್ಲಿ ಕುಂದುತ್ತ ಹೋಗಿ ಕಡೆಗೆ ನಾಶಬಡುತ್ತವೆ. ಅವನು ಯಾವಾಗಲೂ ಊಟ, ಉಡಿಗೆ, ನಿದ್ರೆ, ಇಂದ್ರಿಯಸುಖ ಇವುಗಳಲ್ಲಿ ಲೋಲುಪ್ತನಾಗಿ ಕಾಲ ಕಳೆಯುತ್ತಿರುವನು. ಇದರಿಂದ ಅವನು ಅನೇಕ ಬಗೆಯ ಕಷ್ಟಗಳಿಗೆ ಈಡಾಗುವನು. ಅವನು ಯಾವಾಗಲೂ ಚಿಂತಾತುರನಾಗಿರುವನು. ಹೀಗೆ ಮಾನವ ಜಾತಿ ಎಲ್ಲವೂ ವ್ಯರ್ಥವಾಗಿ ಕಾಲ ಕಳೆಯುತ್ತಿರುವದು. ಆದರೆ ಈ ಬಗೆಯ ಜೀವಿತವು ಮನುಷ್ಯನ ಧ್ಯೇಯವಲ್ಲ. ಇದು ಅವನ ಪ್ರಗತಿಯ ಹಾದಿಯಲ್ಲ. ಆದ್ದರಿಂದ ಇಂಥ ಹಾದಿಯಲ್ಲಿ ಸಿಲುಕದೆ ಕಂಗೆಡದೆ ಯಾರು ಶಾಂತ ಮತ್ತು ಉಚ್ಚ ಮನಸ್ಕರಾಗಿ ಇರುತ್ತಾರೋ ಅಂಥವರ ಚೈತನ್ಯವು ಮತ್ತು ಶಕ್ತಿಯು ಅಚ್ಚಳಿಯದೆ ಉಳಿಯುತ್ತದೆ. ಇವರೇ ಲೋಕನಾಯಕರಾಗುವರು ಮತ್ತು ಧರ್ಮ ಸುಧಾರಕರಾಗುವರು ಇವರಿಂದಲೇ ಜಗತ್ತಿನ ಪ್ರಗತಿಯ ಜ್ಯೋತಿಯು ಯಾವಾಗಲೂ ಬೆಳಗುತ್ತಲಿರುವದು.

ಮನುಷ್ಯನು ಈ ಬಗೆಯ ಪರಿಸ್ಥಿತಿಯಲ್ಲಿ ಬರಬೇಕಾದರೆ ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗ ಎಂಬ ಹೆಸರಿನ ಕ್ರಿಯೆಗಳಿಂದ ತನ್ನನ್ನು ಶುದ್ಧಮಾಡಿಕೊಳ್ಳಬೇಕೆಂದು ವಚನಕಾರರು ಹೇಳುತ್ತಿರುವರು. ಪಟ್ಟಸ್ಥಲ ಶಾಸ್ತ್ರಜ್ಞರು ಮನುಷ್ಯನ ಪ್ರಗತಿಯ ಕಾರ್ಯಗಳಲ್ಲಿ ಈ ಬಗೆಯ ವಿಭಾಗಗಳನ್ನು ಮಾಡಿರುವರು. ಸಂಸಾರದ ವ್ಯಾಮೋಹದ ಕಡೆಗೆ ಒಯ್ಯುವ ಗುಣಗಳನ್ನು ತ್ಯಜಿಸಿ ಬಿಡುವದೇ ತ್ಯಾಗಾಂಗವೆನಿಸುವದು. ಹೀಗೆ ದುಷ್ಟ ವಾಸನೆಗಳನ್ನು ಬಿಟ್ಟುಕೊಟ್ಟು ಉಚ್ಚ ವಾತಾವರಣದಲ್ಲಿದ್ದುಕೊಂಡು ತನ್ನ ಕ್ರಿಯೆಗಳನ್ನು ಮಾಡುತ್ತಿರುವದೇ ಭೋಗಾಂಗವೆನಿಸುವದು. ಈ ಎರಡನೇ ಸ್ಥಿತಿಯಲ್ಲಿ ಮನುಷ್ಯನು ಕುವಿಚಾರಗಳನ್ನು ತೊಲಗಿಸಿ ಸದ್ವಿಚಾರ ಮತ್ತು ಸತ್ಕೃತ್ಯಗಳಲ್ಲಿ ಮಗ್ನನಾಗಿರುತ್ತಾನೆ. ಯೋಗಾಂಗದಲ್ಲಿ ಅತ್ಯಂತ ಉಚ್ಚತಮ ಸ್ಥಿತಿಯಲ್ಲಿದ್ದುಕೊಂಡು ಪರಮಾತ್ಮನಲ್ಲಿ ಸಂಪೂರ್ಣ ಸಾಮರಸ್ಯವನ್ನು ಹೊಂದಿರುತ್ತಾನೆ. ಈ ಕಡೆಯ ಸ್ಥಿತಿಯು ಮನುಷ್ಯನ ವಿಕಾಸತೆಯ ಪೂರ್ಣತ್ವ ಎಂದು ಹೇಳಬಹುದು.

ಹೀಗೆ ಮನುಷ್ಯನು ಪ್ರಗತಿಯನ್ನುಂಟುಮಾಡಿಕೊಳ್ಳುತ್ತ ಕಡೆಗೆ ಮೋಕ್ಷವನ್ನೈದುವನು. ಇದೇ ನಿಜವಾದ ಅಂತಿಮ ಸುಖವು. ಈ ಸುಖದ ರೀತಿಯನ್ನು ವಚನಕಾರರು ತಮ್ಮ ವಚನಗಳಲ್ಲಿ ಅನೇಕ ಬಗೆಯಾಗಿ ಹೇಳಿರುವರು.

"ಅಂಗದುದಯ ಲಿಂಗಸುಖವು. ಲಿಂಗದುದಯ ಅಂಗಸುಖವು. ಅಂಗಲಿಂಗ ಸಂಗಸುಖದಿಂದ ಮಿಕ್ಕಿ ಮಿಗಿಲಿ ಸಿಂದ ಪರಮಸುಖವನೇನೆಂಬೆನಯ್ಯ? ಕೂಡಲ ಚನ್ನಸಂಗನ ಶರಣನನೇನೆಂಬೆನಯ್ಯ?"

"ಅಂತರಂಗದಲ್ಲಿ ಅನುಮಿಷನಾಗಿ ನಿರಂತರ ಲಿಂಗಸುಖಿ ನೋಡಯ್ಯ. ತುಂಬಿದುದು ತುಳುಕದು ನೋಡಯ್ಯ? ಒಲಿದುದು ಓಸರಿಸದು ನೋಡಾ. ಚನ್ನಮಲ್ಲಿಕಾರ್ಜುನಯ್ಯ ನೀನೊಲಿನ ಶರಣಂಗೆ ನಿಸ್ಸೀಮ ಸುಖವಯ್ಯ."

"ಅಲಿಕಲ್ಲ ಹರಳಿನಂತೆ ಅರಗಿನ ಪುತ್ತಳಿಯಂತೆ ತನು ಕರಗಿ ನೆರೆವ ಸುಖವ ನಾನೇನೆಂಬೆ? ನಮ್ಮ ಕೂಡಲಸಂಗಮ ದೇವರ ಮನವುಟ್ಟಿ ನೆರೆವ ಸುಖವ ನಾನಾರಿಗೆ ಉಸುರುವೆನು?"

ಶ್ರೀ ಮಹಾಂತೇಶ ಕಡಕೋಳ ಮಡಿವಾಳಪ್ಪನವರ ಪದ್ಯಗಳು.

(ಚ. ಮು. ಕೋರಿ,)

ಮಡಿವಾಳಪ್ಪನವರು ನಿಜಾಮ ಇಲಾಖಾ ಗುಲಬುರ್ಗಾ ಜಿಲ್ಲಾ ಅಂದೋಲಾ ತಾಲೂಕ ಕಡಕೋಳ ಗ್ರಾಮದಲ್ಲಿ ವಾಸಿಸುತ್ತಿದ್ದರು. ಇವರು ಮಹೇಶ್ವರ ವರ್ಗದಲ್ಲಿ ಜನ್ಮತಾಳಿದರು. ಲೌಕಿಕ ಪಾರಮಾರ್ಥಿಕ ಚತುರಾದ ಶರಣರೂ ಶಿವಾನುಭವಿಗಳೂ ಆಗಿದ್ದರು. ಇವರು ಕಲಬುರ್ಗಿಯ ಶಿವಶರಣಾದ ಶರಣಬಸಪ್ಪನವರ ಸಮಕಾಲೀನರು. ಶ್ರೀ ಶರಣಬಸಪ್ಪನವರಿಂದಲೇ ದೀಕ್ಷೆಯನ್ನು ಹೊಂದಿದರು. ಶರಣಪ್ಪನವರ ಜನ್ಮಸ್ಥಳವಾದ ಅರಳಗುಂಡಿಗಿಯ ಸಮೀಪದಲ್ಲಿಯೇ ಕಡಕೋಳವಿರುವದು. ಚಿಣಮಗೇರಿಯ ಮಹಾಂತ ಸ್ವಾಮಿಗಳಿಂದಲೇ ಅನುಗ್ರಹವನ್ನು ಪಡೆದು ಅನೇಕ ಪದ್ಯಗಳನ್ನು ಹಾಡಿದ್ದಾರೆ. ಪ್ರತಿಯೊಂದು ಪದ್ಯದ ಕೊನೆಯಲ್ಲಿ ತಮ್ಮ ಗುರುಗಳಾದ ಮಹಾಂತಸ್ವಾಮಿಗಳ ಅಂಕಿತವನ್ನಿಟ್ಟಿದ್ದಾರೆ. ಪದ್ಯಗಳು ಬಹಳ ಸ್ಫೂರ್ತಿದಾಯಕವೂ ಶಿವಾನುಭವ ಜನ್ಯವಾದುವೂ ಗ್ರಾಮ್ಯ ಜನರಿಗೂ ಕೂಡ ತಿಳಿಯುವಂಥವೂ ಇರುತ್ತವೆಂಬದು ಕೆಳಗಿನ ಪದ್ಯಗಳನ್ನು ಓದುವವರಿಂದ ಗೊತ್ತಾಗುತ್ತದೆ. ಇವರ ಕವಿತಾ ಶಕ್ತಿಯು ಅಗಾಧವಾದದ್ದು. ಇವರ ದರ್ಶನಕ್ಕಾಗಿ ದೂರ ಪ್ರದೇಶಗಳಿಂದ ಜನರು ಬರುತ್ತಿದ್ದರು. ಪೈನೂರ ಕೃಷ್ಣಪ್ಪ, ತೆಲಗುಬಾಳದ ರಾಮಪ್ಪ, ಕಡ್ಲೆವಾಡದ ಸಿದ್ದಪ್ಪ ಈ ಮೂವರನ್ನೇ ಮಾತ್ರ ತಮ್ಮ ಶಿಷ್ಯರನ್ನಾಗಿ ಮಾಡಿಕೊಂಡಿದ್ದರು. ಅವರ ಶಿಷ್ಯರೆಲ್ಲರೂ ತಮ್ಮ ಗುರುಗಳಂತೆಯೇ ಕವಿತಾ ಶಕ್ತಿಯನ್ನು ಪಡೆದಿದ್ದರು. ಅವೆಲ್ಲ ಪದ್ಯಗಳನ್ನು ಸಂಗ್ರಹಿಸಿ ಪ್ರಚುರ ಪಡಿಸುವದು ಅತ್ಯಂತ ಅವಶ್ಯವಿರುವದು. ಕಾಲಕ್ರಮದಿಂದ ಅವರು ರಚಿಸಿದ ಪದ್ಯಗಳಲ್ಲಿ ಅನೇಕ ದೋಷಗಳು ಸೇರಿದಂತೆ ಕಂಡುಬರುತ್ತವೆ. ಬಲ್ಲವರು ಅವುಗಳನ್ನು ತಿದ್ದಿ ಪ್ರಕಟಿಸುವದು ಅವಶ್ಯವದೆ. ಮು. ರಾ. ರಾ. ರಾಮಚಂದ್ರಪ್ಪ ಜೋಳಾಳ ಮುಖಾಂತರ ಮೊರುಟಿಗಿ ಇವರು ಸಂಗ್ರಹಿಸಿದವುಗಳಲ್ಲಿ ಕೆಲವನ್ನು ನಾನು ಇಲ್ಲಿ ಕೊಟ್ಟಿದ್ದೇನೆ.

೧

ಮೇಲುವ ನಿಲುಕಿಸಿಕೋ ಕಾಯಿ। ಕೆಳಗ್ಹಲುಬಿ ತೆರೆವದ್ಯಾತಕ ಬಾಯಿ ॥ಪ॥ ಒಂದೆ ಬೇರಿಗೆ ಮೂರೆಲೆಯಾಗಿ। ಅದಕ್ಹೊಂದಿ ಇಪ್ಪತ್ತೈದು ಶಾಖೆಗಳಾಗಿ। ಮುಂದೆ ಮೂವತ್ತಾರು ಕಾಯಾಗಿ। ಇದರ ಸಂದೇಹ ಬಲ್ಲಣ್ಣಗ ತಿಳಿಯಾಗಿ ॥೧॥ ಹಣ್ಣೊಳು ರಸಪೂರ್ಣ ತುಂಬೇದ। ಆ ಹಣ್ಣು ಕಾಯ್ದುಕೊಂಡೊಂದು ಗಿಳಿಯಾದ। ಕಣ್ಣಿಟ್ಟು ನೋಡು ಕಾಣಿಸುತಾವ ಇದು ಅಣ್ಣಪ್ಪಗಳಿಗೆ ಬಲ್ಲಿದ್ದಾದ ॥೨॥ ನೆಲಸೀರು ಕಿಚ್ಚು ಮೇಲಾಕಾಶ। ಅದರೊಳು ಹುಟ್ಟಿ ಬೆಳೆದದ್ವೀದೇಶಾ। ಸಲೆ ಕಲ್ಪಿಸಲ್ಪಟ್ಟ ಶ್ರೀ ಮಹಾಂತೇಶಾ। ತಾನು ತಿಳಿದಾತನೆ ಬಲ್ಲ ಸರ್ವೇಶಾ ॥೩॥

ಹಲುಬಿ=ಚಿಂತಿಸಿ.

೨

ದಾವಪಥ ದಾವನೆಲೆ ದಾವಸುಖಬಲ್ಲ। ಮೂವರೊಂದಾದರನು ತಿಳಿದಹ್ಹಳಿಲ್ಲಿ ॥ಪ॥ ಬ್ರಹ್ಮನಿಂದಲೆ ಜಗವು। ಜಗದಿಂದಲೆ ಬ್ರಹ್ಮ। ಬ್ರಹ್ಮನೆ ಜಗವು ಆ ಜಗವೇ ಪರಬ್ರಹ್ಮ ॥೧॥ ಜೀವದಿಂದಲೆ ಅರಿವು। ಅರಿವಿನಿಂದಲೆ ಜೀವ। ಜೀವೆ ಅರಿವು ಆ ಅರಿವೇ ಪರಶಿವನು ॥೨॥ ಬುಡದಿಂದ ನಡುಕಡೆಯೋ। ಕಡೆಯಿಂದ ನಡುಬುಡವೋ। ಬುಡನಡುವೊ ಕಡೆಯೋ। ಕಡೆನಡುವೋ ಬಡವೋ। ಪೊಡವಿಯೊಳ್ ಕಡಕೋಳ ಒಡೆಯ ಮಹಾ ಮಾಂತನಾನು ಮಡಿವಾಳನು। ವಾಕ್ಯ ಮಡಿವಾಳನು ॥೩॥

ದಾನ=ಯಾವ ಮಡಿವಾಳ=ಶುದ್ಧಮಾಡುವವ.

೩

ಶಿವನಾಮವ ಸ್ಮರಿಸೋ। ಈ ಭವ ಮಾಲೆಯ ಪರಿಹರಿಸೋ ॥ಪ॥ ಹೋಡೆ ದಿನದ ಸಂತಿ। ಆತ್ಮನ ನೋಡದೆ ನೀ ಕುಂತಿ। ಕೂಡಿ ಮರೆಗೆ ಸಿಂತಿ ತುಳಶಳಿ ಮಾಡುವಳೇ ಕಾಂತಿ ॥ ಬ್ಯಾಡೋ ಪರರ ಚಿಂತಿ। ನಾಳ್ಯೆಮ ಕೇಳಿದರೇನಂತಿ ॥೧॥ ಆಯುಷ್ಯ ಹತ್ತತ್ತು। ರಾತ್ರಿಗೆ ಹೋದವು ಐವತ್ತು ಪ್ರಾಯಕ ಇಪ್ಪತ್ತು। ಪ್ರಾಯದ ಘಾಯಿಗೆ ಮೂವತ್ತು। ವಾಯಿಗಿಲ್ಲ ಹೊತ್ತು ನೀ ತಿಳಿ ವ್ಯಾಳ್ಯೆವ್ಯಾಳಿಕೆ ಗೊತ್ತು ॥೨॥ ಕುಲ ಫಲಕ್ಕೋರಾಡಿ। ತಾ ಪ್ರಜ್ವಲಿಸುವ ಮುಖ ಬಾಡಿ। ಹಲವರಿಗ್ಹಳಿದಾಡಿ। ಪುಣ್ಯದ ಫಲ ಹೋಯಿತು ಝಾಡಿ। ಕಲಕಿನೊಳಗೆ ಕೂಡಿ ನಡದೆಲೊ

ನೆಲಮನೆಗೆಲೆ ಪೋಡಿ ॥೩॥ ಆಶೆಯ ಹಿಡಿಬ್ಯಾಡ। ಬಹಳ ನಿರಾಶಿಲಿ ಕೆಡಬ್ಯಾಡ। ದ್ವೇಷವ ತೊಡು ಬ್ಯಾಡ। ಒಬ್ಬರ ದೂಷಿಸಿ ನುಡಿ ಬ್ಯಾಡ। ಭಾಷಿಲೆ ಕೆಡಬ್ಯಾಡ। ಗುರುಮಹಾಂತೇಶನ ಬಿಡುಬ್ಯಾಡ ॥೪॥ ಅರ್ಥ ಪ್ರಾಣಾಭಿಮಾನ। ಅವರವರರಿತು ನೀಡೋ ಬಾನ। ಕರ್ತು ಶ್ರೀಗುರು ಧ್ಯಾನ। ಅವ್ರತ ತುರ್ತ ಮಾಡೋ ಪಾನ ॥೫॥

ಹೋಡೆ=ಸ್ವಲ್ಪ. ಕೆಲವು. ನಾಳ್ಯೆಮ=ನಾಳೆಯಮ. ಹತ್ತತ್ತು=ನೂರು. ವಾಯು=ಜೀವ. ಹೋರ್ಯಾಡಿ=ಜಗಳಾಡಿ. ಹಳಿದಾಡಿ=ನಿಂದಿಸಿ. ಝಾಡಿ=ಎಲ್ಲಾ. ಕಲಕು=ದೋಷ ನೆಲಮನೆ=ಗೋರಿ, ಕುಣಿ, ಸ್ಮಶಾನದಲ್ಲಿಯ ಮನೆ ಭಾಷಿಲೆ=ಮಾತಿನಿಂದ. ಬಾನ=ಆಹಾರ.

೪

ತನ್ನ ತಾ ತಿಳಿದ ಮ್ಯಾಲೆ। ಇನ್ನೇನಿನ್ನೇನು। ತನ್ನಂತೆ ಸರ್ವರ ಜೀವಾ। ವನ್ನಿಸಿ ಮೂಕಾದ ಮ್ಯಾಲೆ ॥ಪ॥ ತಾನೇ ಪೃಥ್ವಿ, ಆಪ್, ತೇಜ, ತಾನೆ ವಾಯು, ಆಕಾಶಾತ್ಮ। ತಾನೆ ಸೂರ್ಯ ಚಂದ್ರ ತಾರಾ। ತಾನೆ ಬ್ರಹ್ಮಾಂಡಾದ ಮ್ಯಾಲೆ ॥೧॥ ತಾನೆ ತ್ವಕ್ಕು ಶ್ರೋತೃಹೃದಯ। ತಾನೇ ಜಿಂಹೆ ನೇತ್ರ ಘ್ರಾಣ। ತಾನೇ ಕಾಯ ಕರಣ ಹರಣ। ತಾನೇ ಪಿಂಡಾಂಡಾದ ಮ್ಯಾಲೆ ॥೨॥ ತಾನೇ ಹೆತ್ತಾ ಉತ್ತಾ ಸತ್ತಾ। ತಾನೇ ಭೃತ್ಯ ತಾನೇ ಮೃತ್ಯ ತಾನೆ ಅರಿತ ಬೆರಿತ ತಾನೆ। ತಾನೇ ಸರ್ವ ಎಲ್ಲಾದ ಮ್ಯಾಲೆ ॥೩॥ ತಾನೆ ಲಕ್ಷ ಸಾವಿರ ನೂರು। ತಾನೆ ಹತ್ತೊಂಭತ್ತು ಎಂಟು। ಏಳು ಆರು ಐದು। ನಾಲ್ಕು ಮೂರು ಎಡೆರ್ಂದಾದ ಮ್ಯಾಲೆ ॥೪॥ ತಾನೇ ನೀನು ನೀನೇ ತಾನು। ತಾನೆ ಅಲ್ಲಿ ತಾನೆ ಇಲ್ಲಿ। ತಾನೆ ಮಾಹಾಂತ ಮಾಹಾಂತ ತಾನೆ ಏನೋ ಏನೊಂದಾದ ಮ್ಯಾಲೆ ॥೫॥

೫

ಸುಳಿ ಸುಳಿ ಸುಳಿ ನೀ ಮಾಡುವದೆಲ್ಲಾ ॥ಪ॥ ಆಶೆಯುಳಿದು ಪರ ದೇವರ ತಿರಿಯುಂದೂ ಶ್ರೀಶೈಲ ಉಳವಿ ಹಂಪಿ ಕಾಶೀಯಾತ್ರೆಗಳೆಲ್ಲಾ ॥೧॥ ಪಟ್ಟದಯ್ಯನು ತಾನೆ। ಕೊಟ್ಟ ಲಿಂಗಕ್ಕೆ ಮನ। ಸಿಟ್ಟು ಪೂಜಿಸಿ ನಯನ। ದೃಷ್ಟಿ ನೋಡುವದೆಲ್ಲಾ ॥೨॥ ಅಷ್ಟಾವರಣವ ಪಿಡಿದು। ಅಷ್ಟಾ ದಳನೆಯಿಂದ ಶ್ರೇಷ್ಠ ಪೂಜಿತನಾಗಿ। ಮುಟ್ಟಿ ಪೂಜಿಸುವದೆಲ್ಲಾ ॥೩॥ ಒರು ಮೂರರ ಮೇಲೆ। ಏರಿನಿಂದ್ರಲು ಬಲು। ಮೀರಿದ ಉನ್ಮನಿಪ್ರಭೆ।

ಸೂರೆಗೊಂಬುವದೆಲ್ಲಾ ॥೪॥ ಶೇಷನ ಮುಖದೊಳು। ಸೂಸುವ ಅವೃತ। ಸಾಸಿರೆಸಳಿನಲ್ಲಿ ಘೋಷ ಕೇಳುವದೆಲ್ಲಾ ॥೫॥ ಬಿಳಿದು ಕೆಂಪದು ಬಂತು। ಒಳಗ ಬಂದದ್ದು ಚಿತ್ತು। ಪಸರು ಹಳದಿ ಕಪ್ಪು ಗೊತ್ತು ಅಂಬುವದೆಲ್ಲಾ ॥೬॥ ನಾನಾ ವಿನೋದದಿ। ಮೌನ ಮಹಾಂತೇಶನು ತಾನೇ ತಾನೆಂಬುವದೊಂದೇ। ನಾನು ನೀನೆಂಬುವದೆಲ್ಲಾ ॥೭॥

ಘೋಷ=ಧ್ವನಿ, ಸೂರೆಗೊಂಬು = ಪ್ರಕಾಶಿಸು.

೬

ಬಡಕಡೆ ಇಲ್ಲದ ನಿಷ್ಕಲ ಲಿಂಗವ್ವಾ। ಅಡಿಹಿಡಿ ಸಂಗವ್ವಾ। ಜಡದೃಶ್ಯ ಅದೃಶ್ಯ ಆಗುದೆ ಸಿದ್ಧವ್ವಾ। ಬಿಡುಭ್ರಮೆ ಮುದ್ದವ್ವಾ ॥೪॥ ಸೋಹಂ ಬ್ರಹ್ಮ ಎಂಬುದೆ ಶೀಲವ್ವಾ। ಭಯಯಾಕಿಲ್ಲವ್ವಾ। ಲಯ ನಿರ್ಲಯ ಕರಿಗೊಂಬುದು ಎಲ್ಲವ್ವಾ। ನಯನಗಳೆರಡು ಇಲ್ಲದ ಕಲ್ಲವ್ವಾ। ಜಗಜಯಮುಲ್ಲವ್ವಾ ॥೧॥ ಜೀವ ಮನವು ತನುವು ಮರವಿಯ ಮಾಳವ್ವಾ। ದೇವರಗೋಳವ್ವಾ। ಕಾಮನ ರತಿಸುಖ ಯಮುಮುದ ಕಾಳವ್ವಾ। ಪಾವನ ಶ್ರೀಗುರು ಚರಣದ ಧೂಳವ್ವಾ। ಸೇವಿಸಿ ಬಾಳವ್ವಾ ॥೨॥ ಬಲ್ಲಿದ ಮಹಾಂತೇಶನ ನಾಗವ್ವಾ। ಎಲ್ಲಕ ಬಾಗವ್ವಾ। ಇಲ್ಲದ್ದು ಹುಡುಕುದು ಯಾತರ ಯೋಗವ್ವಾ। ತಲ್ಲಣಿಸುವ ತಾಪತ್ರದ ಭೋಗವ್ವಾ। ಸಲ್ಲದು ರಾಗವ್ವಾ ॥೩॥

೭

ತಿಳಿವಲ್ಲಿ ಯಾಕಿನ್ನು ಭೋರಿಗೆ। ಜ್ಞಾನದದ ಬಳಕಿಲ್ಲ ನಿನಗಿನ್ನು ಭೋರಿಗೆ ॥ಪ॥ ಇಳೆಯೊಳು ಸಂಸಾರ ಭೋರಿಗೆ। ನೀವಾಡಿ ಕೆಡುವಂಥ ಭೋರಿಗೆ। ಹುಟ್ಟೀನು ಹುಟ್ಟದೀನು ಭೋರಿಗೆ। ಹುಟ್ಟ ಕಟ್ಟ ತನವು ಭೋರಿಗೆ। ಕೊಟ್ಟೀನು ಕೊಂಡೀನು ಭೋರಿಗೆ। ಕೊಟ್ಟು ಇಟ್ಟು ಹಂಗಿಸವಂಥ ಭೋರಿಗೆ ॥೧॥ ಹೇಸಿಕೆ ತನುವಿನ್ನು ಭೋರಿಗೆ। ನೆಚ್ಚಿ ಘಾಸಿಯಾಗಬೇಡ ಭೋರಿಗೆ। ಆಶೆ ತೀರಿದ ಮೇಲೆ ಭೋರಿಗೆ। ತಾಸು ಬಾಳದು ಹುಚ್ಚ ಭೋರಿಗೆ ॥೨॥ ಓದೀನು ಹಾಡಿ ಏನು ಭೋರಿಗೆ। ಓದಿ ಹಾಡಿ ಕಾಣದಂಥ ಭೋರಿಗೆ। ಸಾಧುರನ ಜರಿವಂಥ ಭೋರಿಗೆ। ವೇದನಾದ ಅರಿಯದಂಥ ಭೋರಿಗೆ ॥೩॥ ನೆಚ್ಚಿಕಿ ತನುವಿನ್ನು ಭೋರಿಗೆ। ನೆಚ್ಚಿ ಘಾಸಿಯಾಗಬೇಡ ಭೋರಿಗೆ। ನಿದ್ದಿಯ ಮಾಡಬ್ಯಾಡ ಭೋರಿಗೆ।

ನೀ ಎಚ್ಚು ಕೊಂಡಿರೋ ಭೋರಿಗೆ ॥೪॥ ಸಜ್ಜನರ ಬದಿಲಿದ್ದು ಭೋರಿಗೆ। ಬಿಚ್ಚಿ ಕಾರಿಹಾಲು ಕುಡಿವಂಥ ಭೋರಿಗೆ। ನರ ದೇಹದೊಳು ಬಂದು ಭೋರಿಗೆ। ಲಕ್ಷ್ಮಿಪುರ ಮಹಾಂತರ ಅರಿಯದ ಭೋರಿಗೆ ॥೫॥

ಬಳಕೆ=ಸಂಸ್ಕಾರ, ಘಾಸಿಯಾಗಬೇಡ=ನಾಶಹೊಂದಬೇಡ ಹಾದಿ ಕಾಣದಂಥ = ಸನ್ಮಾರ್ಗತಿಳಿಯದಂಥ, ಜರಿ=ನಿಂದಿಸು, ನೆಚ್ಚಿಕಿ=ನಂಬಿದ, ನಿದ್ದಿಯ ಮಾಡಬೇಡ=ಅಜ್ಞಾನದಲ್ಲಿ ಇರಬೇಡ, ಭೋರಿಗೆ=ಒಂದು ಬೈಗಳ.

ಒಮ್ಮೆ ತಾಳೀಕೋಟೆಯ ಪ್ರಸಿದ್ಧರಾದ ಒಬ್ಬ ಫಕೀರರು ಇವರ ಖ್ಯಾತಿಯನ್ನು ಕೇಳಿ ದರ್ಶನಕ್ಕೆಂದು ಕಡಕೋಳಕ್ಕೆ ಬರುತ್ತಿರಲು, ಊರ ಮುಂದಿನ ಹಳ್ಳದಲ್ಲಿಯೇ ಪರಸ್ಪರರ ದರ್ಶನವಾಯಿತು ಆಗ ಅವರ ಗುರುತು ಪರಸ್ಪರರಿಗೆ ಇದ್ದಿರಲಿಲ್ಲ ಆಗ ಆ ಫಕೀರರು ಮಡಿವಾಳಪ್ಪನವರು ಎಲ್ಲಿರುವರೆಂದು ಕೇಳಲು ಆಗ ಮಡಿವಾಳಪ್ಪನವರು ಇಲ್ಲೇ ದಿಬ್ಬದ ಮೇಲಿನ ಗುಡಿಸಲಿನಲ್ಲಿ ಇರುವರೆಂದು ಅವರನ್ನು ಕರೆದೊಯ್ಯುವಾಗ ತಾವು ಯಾರೆಂದು ವಿಚಾರಿಸಲು ಅವರು ನಾನೊಬ್ಬ ಫಕೀರನೆಂದು ಅನ್ನಲು ಆಗ ಫಕೀರನಾಗಬೇಕಾದರೆ ಹೇಗಿರಬೇಕೆಂದು ಹಾಡಿದ ಪದವಿದು.

೮

ಫಕೀರನಾಗಬೇಕಾನರೆ ಮನದ ವಿಕಾರವೆಲ್ಲಾ ಕಳೆಯಬೇಕು। ಆಕಾರ ಉಕಾರ ಮಕಾರ ಓಂಕಾರ ಝೆಂಕಾರನಾದ ಉಳಿದಿರಬೇಕು ॥೪॥ ಸತಸುತ ಹಿತರೆಂಬ ಮೋಹದ ಮಡಕಿ ಗತಿಲಿಂದ ಅತೀತಯ ಗಳಿದಿರಬೇಕು। ಕೃತಕ ಕೂಪಲ ಅತಿ ಗಳಿಯದ ಸುಮತೆ ಎಂಬೋ ಗಡ್ಡಾ ಬೆಳಿಸಿರಬೇಕು ॥೧॥ ಹಸಿವು ತೃಷೆ ವ್ಯಸನ್ಹಿಸಿಗಳಿಂದ ಮನ ಹಸನ ಮಾಡುವ ಸೊಗಸಿರಬೇಕು। ತುಸು ಮಾತ್ರ ಕಳಿಸಿ ಮೊಸದಲಿ ಮುಸಲ್ಮಾನನಾಗಿ ಬಹಳ ಸೊಗಸಿರಬೇಕು ॥೨॥ ಕಾಮ ಕ್ರೋಧ ಲೋಭ ಮದ ಮೋಹವು ತಾಮಸ ಗುಣಗಳು ಸುಟ್ಟಿರಬೇಕು। ನಮ ಶೀಮೆಗಳು ಮುಟ್ಟಿನೆಂಬೋ ಪ್ರೇಮದ ಲುಂಗಿ ಉಟ್ಟಿರಬೇಕು ॥೩॥ ಸಾಕು ಬೇಕು ಎರಡೇಕ ಮಾಡಿ ತೀಕಾಗಿ ಕೋಲು ಹಿಡಿದಿರಬೇಕು। ಲೋಕದೊಳಗ ಎನಾನಾನಾಗಿ ಬಲು ಜೋಕಿಲಿ ಮೇಲಕ್ಕೆ ನಡದಿರಬೇಕು ॥೪॥ ಸತ್ಯವು ಒಡಿದು ಮಿಥ್ಯವು ಕಡಿದು ಕತ್ತಲೆ ಕರ್ಮವು ಕಡದಿರಬೇಕು। ಜೋಲಾ ಪೀರಾ ಮಹಾಂತೇಶನ ಭಜಿಸುತ ಆನಂದ ಅಲಾಯಿ ಆಡಲಿಬೇಕು ॥೫॥

ಕ್ವತಕಕೂಡಲ ಲತಿಗಳೆಯದೆ=ಗಡ್ಡಾ ಬಿಡದೆ, ಶೀಕಾಗಿ = ಜನ್ನಾಗಿ, ಲವಲಾಕನಾಗಿ = ಹೌದೆನಿಸಿಕೊಂಡು, ಮೇಲಕ್ಕೆ ನಡೆದಿರಬೇಕು = ಆತ್ಮಜ್ಞಾನ ಪಡಕೊಳ್ಳುವ ಮಾರ್ಗ ಹಿಡಿದಿರಬೇಕು.

೯

ಧನವು ಗಳಿಸಬೇಕೆಂಥಾದ್ದು । ಈ ಜನರಿಗೆ ತಿಳಿದಂಥಾದ್ದು । ಅನುದಿನ ಅಜಹರಿ ಮನುಮುನಿ ಇಂದ್ರರು ಹೌದ್ಹೌದೆಂಬುವಂಥಾದ್ದು ಕೊಟ್ಟರೆ ತೀರದಂಥಾದ್ದು । ಇದು ಬಿಟ್ಟರೆ ಹೋಗದಂಥಾದ್ದು । ಬಚ್ಚಿಟ್ಟಿಗಂಟು ಬೈಲಿಗೆ ಇಟ್ಟರೆ ಯಾರೂ ಮುಟ್ಟದಂಥಾದ್ದು ॥೧॥ ಕರ್ಮವ ಬಾರದಂಥಾದ್ದು ; ಒಮ್ಮೆರಿಗೊರ್ಮವ ತೋರದಂಥಾದ್ದು ನಿರ್ಮಲವಾದ ಮನಸ್ಸಿಲೆ ದಾನ ಧರ್ಮ ಬೀರುವಂಥಾದ್ದು ॥೨॥ ಮರಿಯಬಾರದಂಥಾದ್ದು । ನಿಜ ಅರುವಿನಲ್ಲಿರುವಂಥಾದ್ದು । ವರವು ಹೇಳಿದನು ಗುರು ಮಹಾಂತೇಶನು । ಕುರುಹು ಹೇಳಿದಂಥಾದ್ದು ॥೩॥

ಮರ್ಮ = ವೈರತ್ವ, ಕುರುಹು = ಗುರುತು.

ದೇವರ ಅಸ್ತಿತ್ವ ಮತ್ತು ಶಾಸ್ತ್ರೀಯ ಶೋಧಕರು.

ಈಗಿನ ಶಾಸ್ತ್ರೀಯ ಯುಗದಲ್ಲಿ ಶಾಸ್ತ್ರೀಯ ಅಥವಾ ವೈಜ್ಞಾನಿಕ ವಿಷಯಗಳು ದೇವರ ಅಸ್ತಿತ್ವಕ್ಕೆ ಭಂಗತಂದಿವೆ, ಹಾಗೂ ಅವುಗಳ ತತ್ವಗಳ ಅಭ್ಯಾಸದಿಂದ ದೇವರಿಲ್ಲೆಂದು ದೃಢವಾಗಹತ್ತಿದೆ, ಎಂದು ಬಹು ಜನರು ತಿಳಿಯುತ್ತಲಿರುವರು. ಇಂಥವರಲ್ಲಿ ವಿದ್ವಾಂಸರೂ ಅತ್ಯುತ್ತಮ ಶೀಲ ಮತ್ತು ಸ್ವಭಾವವುಳ್ಳವರೂ ಕೂಡ ಇರುವದಾಗಿ ಕಂಡುಬರುತ್ತದೆ. ಇವರಲ್ಲಿ ಕೆಲವರು ತಾವು ನಾಸ್ತಿಕವೆಂದು ಕರೆದುಕೊಳ್ಳುತ್ತಾರೆ. ಕೆಲವರು ತಾವು ಜಡವಸ್ತುವೇ ನಿಜವೆಂದು ತಿಳಿಯುವವರಿದ್ದೇವೆಂದು ಹೇಳಿಕೊಳ್ಳುತ್ತಾರೆ. ಇನ್ನೂ ಕೆಲವರು ತಾವು ಅಜ್ಞೇಯವಾದಿಗಳೆಂದೆನ್ನಿಸಿಕೊಳ್ಳುತ್ತಾರೆ, ಅಂದರೆ ಜಗತ್ತು ತಿಳಿಯಲು ಅಶಕ್ಯವೆಂದೆನ್ನುವವರಿದ್ದಾರೆ ಬೇರೆ ಕೆಲವರು ಜಗತ್ತಿನಲ್ಲಿ ಯಾವದೂ ಸತ್ಯವಲ್ಲ. ಹಿತಸಾಧನೆಯು ಹೊರ್ತು ಬೇರೊಂದಿಲ್ಲವೆಂದೆನ್ನುವವರೂ ಇದ್ದಾರೆ. ಆದರೆ ಇವರೆಲ್ಲರಲ್ಲಿ ದೇವರಿದ್ದಾನೆಂಬ ಕಲ್ಪನೆ ಇಲ್ಲ. ಅವರು ಶಾಸ್ತ್ರೀಯ ವಿಷಯಗಳು ದೇವರ ಅಸ್ತಿತ್ವವನ್ನು ಹೊಡೆದು ಹಾಕಿರುವವೆಂದು ನಂಬಿರುವರು.

ಆದರೆ ಇಂಥ ತಿಳುವಳಿಕೆಯಲ್ಲಿ ನಿಜಾಂಶವು ಇದೆಯೋ ಹ್ಯಾಗೆ ಎಂಬದನ್ನು ದೃಢಪಡಿಸುವದು ಅತ್ಯಂತ ಮಹತ್ವದ್ದದೆ ಯಾಕಂದರೆ— ಧರ್ಮ ಜಾಗ್ರತೆಗೆ ದೇವರಿದ್ದಾನೆಂಬ ನಂಬಿಗೆಯು ಪೊದಲು ಬೇಕು. ದೇವರಿದ್ದಾನೆಂಬ ತಿಳುವಳಿಕೆಯು ಇಲ್ಲವೆ ಹೋದರೆ ಧರ್ಮವೂ ಕೂಡ ಅದರೊಡನೆ ಹೊರಟುಹೋಗುವದು. ಸಾಂಪ್ರತ ಕಾಲದಲ್ಲಿ ಅತ್ಯದ್ಭುತವಾದ ಶಾಸ್ತ್ರೀಯ ಶೋಧಗಳು ಭರದಿಂದ ಸಾಗಹತ್ತಿವೆ. ಇವುಗಳ ಮೂಲಕ ವಿಶ್ವದಲ್ಲೆಲ್ಲ ಒಬ್ಬ ಚಿದಾತ್ಮನು ವ್ಯವಹರಿಸುತ್ತಾನೆಂಬ ವಿಚಾರಕ್ಕೆ ಇಂಬಿಲ್ಲವೋ ಹ್ಯಾಗೆ ಎಂಬುದೊಂದು ಗೂಢ ಪ್ರಶ್ನೆಯು ಈಗ ಉತ್ಪನ್ನವಾಗಹತ್ತಿದೆ.

ಈ ವಿಷಯದ ಬಗ್ಗೆ ಆಧುನಿಕ ಶಾಸ್ತ್ರಜ್ಞರ ಅಭಿಪ್ರಾಯವೇನೆಂಬುದನ್ನು ತಿಳಿಯುವದು ಬಹು ಮಹತ್ವದ್ದದೆ. ಈ ಕಾಲದಲ್ಲಿ ಬೇರೆ ಬೇರೆ ಪೀಠಗಳಲ್ಲಿ ಅತ್ಯಂತ ವಿಖ್ಯಾತಿಹೊಂದಿದ ಶಾಸ್ತ್ರಜ್ಞರು ಅನೇಕರಿದ್ದಾರೆ. ಅವರಲ್ಲಿ ಕೆಳಗೆ ಕಾಣಿಸುವವರು ಅತ್ಯಂತ ಮೇಲ್ತರದ ಸ್ಥಾನವನ್ನು ಹೊಂದಿರುವರು. ಅವರ ಹೆಸರುಗಳು ವೈಜ್ಞಾನಿಕ ವಿಷಯ ನಿಪುಣ

ರಲ್ಲಿ ಗೊತ್ತಿಲ್ಲದಿರುವದು ಶಕ್ಯವಿಲ್ಲ. ಇಂಥವರ ಅಭಿಪ್ರಾಯಗಳನ್ನು ನಾವು ಪರೀಕ್ಷಿಸಿ ನೋಡಿದಲ್ಲಿ ಶಾಸ್ತ್ರೀಯ ವಿಷಯಗಳು ಮತ್ತು ಧರ್ಮ ಇವುಗಳಲ್ಲಿ ಪರಸ್ಪರ ವಿರೋಧವಿಲ್ಲ, ಇಷ್ಟೇ ಅಲ್ಲ, ವಿಜ್ಞಾನಶಾಸ್ತ್ರದ ತತ್ವಗಳು ಧಾರ್ಮಿಕ ಮೂಲ ತತ್ವಗಳ ಸತ್ಯತೆಯನ್ನು ಹೆಚ್ಚಿಚ್ಚು ಈಗ ಬಲಪಡಿಸುತ್ತಲಿವೆ ಎಂಬದು ಕಂಡುಬರದೆ ಇರಲಾರದು. ಇವರ ಅಭಿಪ್ರಾಯಗಳನ್ನು ನಾವು ಸಂಕ್ಷೇಪವಾಗಿ ಇಲ್ಲಿ ವಿವರಿಸುತ್ತೇವೆ.

ಆಲಬರ್ಟ ಈನಸ್ಟೀನ.

ಆಲಬರ್ಟ ಈನಸ್ಟೀನನು ಜರ್ಮನಿಯ ಪ್ರಸಿದ್ಧ ಗಣಿತಜ್ಞನು. ಇವನು ಜ್ಯೂ ಜಾತಿಯವನಾದ್ದರಿಂದ ಹಿಟ್ಲರನ ಕಾನೂನುಗಳಿಗೆ ಒಳಪಟ್ಟು ಜರ್ಮನಿ ದೇಶವನ್ನು ಬಿಟ್ಟುಕೊಟ್ಟು ಅಮೇರಿಕೆಗೆ ಹೋಗಬೇಕಾಯಿತು. ಇವನು ಅನ್ನುವದೇನಂದರೆ:—"ಈಗ ದೇವರಿದ್ದಾನೆಂದು ನನ್ನ ಅಭಿಪ್ರಾಯವಾಗಿದೆ. ಸ್ಪಿನೋಜಾನು ಯಾವ ಬಗೆಯ ದೇವರು ಇದ್ದಾನೆಂದು ಹೇಳುತ್ತಾನೋ ಅಂಥ ದೇವರ ಮೇಲೆ ನನ್ನ ವಿಶ್ವಾಸವಿದೆ. ವಿಶ್ವದಲ್ಲೆಲ್ಲ ಸುವ್ಯವಸ್ಥೆಯು ಇದೆ ಈ ವ್ಯವಸ್ಥೆಯು ವಿಶ್ವದಲ್ಲಿ ಪರಮಾತ್ಮನು ಇದ್ದಾನೆಂಬದನ್ನು ತೋರಿಸಿಕೊಡುತ್ತದೆ. ಜಗತ್ತಿನಲ್ಲೆಲ್ಲ ಅರಿವು ಇದೆ. ಅದು ಹೆಜ್ಜೆಜ್ಜಿಗೆ ತೋರಿಬರುತ್ತದೆ. ಈ ಅರಿವು ಇದ್ದದರಿಂದಲೇ ವಿಶ್ವದಲ್ಲೆಲ್ಲ ಸುವ್ಯವಸ್ಥೆಯು ನೆಲೆಗೊಂಡಿದೆ. ಇದರ ಮೂಲಕವಾಗಿಯೇ ಶಾಸ್ತ್ರಜ್ಞರು ತಮ್ಮ ಭೌತಿಕ ಶೋಧಗಳನ್ನು ಯಾವಾಗಲೂ ಆಶಾಯುಕ್ತರಾಗಿ ನಡಿಸುತ್ತಲಿದ್ದಾರೆ. ಜಗತ್ತು ಆಕಸ್ಮಿಕವಾಗಿ ತಾನಾಗಿಯೇ ಉಂಟಾದ ಒಂದು ವಸ್ತುವಲ್ಲ ಎಂದು ಈನಸ್ಟೀನನು ಅಭಿಪ್ರಾಯಪಟ್ಟಿರುತ್ತಾನೆ.

ಜೆ. ಎಸ್. ಹಾಲ್ಡೇನ.

ಜಾನ್. ಎಸ್. ಹಾಲ್ಡೇನ ಇವರು ಪೃಥ್ವಿಯಲ್ಲಿ ಅತ್ಯಂತ ಪ್ರಸಿದ್ಧರಾದ ವಿಜ್ಞಾನಶಾಸ್ತ್ರಜ್ಞರು. ಇವರು ಆಕ್ಸಫರ್ಡ ಮತ್ತು ಬರ್ಮಿಂಗಹ್ಯಾಮ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೆಸರರಾಗಿ ಕೆಲಸಮಾಡಿದ್ದಾರೆ. ಇವರು ಅನ್ನುವದೇನಂದರೆ:— ಈ ದೃಶ್ಯ ಜಗತ್ತು ತಾನಾಗಿಯೇ ಉಂಟಾಗಿ ವ್ಯವಹರಿಸುತ್ತಿರುವಂಥ ಒಂದು ಬಗೆಯ ಯಂತ್ರದಂತಿರುವದಿಲ್ಲ. ಅದರೊಂದು ದೈವೀ ಶಕ್ತಿಯುಳ್ಳದ್ದು (*Spiritulal world*) ಎಂದು ನನಗೆ ಅನಿಸುತ್ತದೆ. ಇದರ ಸ್ವರೂಪವು ನನಗೆ

ಇನ್ನೂ ಪೂರ್ಣವಾಗಿ ತಿಳಿದಿಲ್ಲ. ಅರೆವಾಸಿಯಾಗಿ ನಮ್ಮ ಕಣ್ಣಿಗೆ ಸ್ಪಷ್ಟಿಸಿ ಹೊಳೆಯುಹತ್ತಿರುತ್ತದೆ. ಜಗತ್ತಿನ ನಿಜವಾದ ವಸ್ತುವು ಈ ದೈವೀ ಶಕ್ತಿಯುಳ್ಳದ್ದೇ ಇದೆ ಎಂದು ನನಗೆ ಮನವರಿಕೆಯಾಗುತ್ತಲಿದೆ.

ಜಗತ್ತಿನ ಉತ್ಪತ್ತಿ ಮತ್ತು ಅದರ ವ್ಯವಹಾರವು ರಸಾಯನ ಶಾಸ್ತ್ರ ಮತ್ತು ಪದಾರ್ಥ ವಿಜ್ಞಾನಶಾಸ್ತ್ರ ಇವುಗಳ ತತ್ವಗಳನ್ನು ಮಾತ್ರ ಅನುಸರಿಸಿ ಆದದ್ದು ಅಥವಾ ನಡೆದದ್ದು ಇರುವದಿಲ್ಲೆಂಬದು ಈಗ ಬಹುವಾಗಿ ಸ್ಪಷ್ಟಪಡುತ್ತ ನಡೆದಿದೆ. ಈಗ ಹೊಸದೊಂದು ವಿಶ್ವರಚನಾಶಾಸ್ತ್ರವು ನಿರ್ಮಾಣವಾಗುವದರಲ್ಲಿ ಇದೆ. ದೃಶ್ಯ ಜಗತ್ತಿನಲ್ಲಿ ನಡೆಯುತ್ತಿರುವ ವ್ಯಾಪಾರಗಳನ್ನು ರಸಾಯನ ಶಾಸ್ತ್ರಜ್ಞರು ಬಾಹ್ಯ ಪ್ರಥಕ್ಕರಣ ಮಾತ್ರ ಮಾಡಬಲ್ಲರು. ಅದರ ಮೂಲಭೂತ ನಿಜಾಂಶಗಳು ಪ್ರಕೃತಿ ಶಾಸ್ತ್ರಗಳಿಂದ ಸಂಪೂರ್ಣವಾಗಿ ಗೊತ್ತಾಗುವವೆಂದು ಮೊದಲಿಗೆ ತಿಳುವಳಿಕೆಯಾಗಿತ್ತು. ಆದರೆ ಹೆಚ್ಚು ಹೆಚ್ಚು ಶೋಧಗಳು ಹೊರಡಹತ್ತಿದಂದಿನಿಂದ ಈ ನಂಬಿಗೆಯು ಕೇವಲ ಭ್ರಾಮುಕವೆಂದು ಕಂಡುಬರಹತ್ತಿದೆ. ಶರೀರರಚನಾ ಶಾಸ್ತ್ರಜ್ಞರೂ ಕೂಡ ಈ ಬಗೆಯ ತಿಳುವಳಿಕೆಯನ್ನೇ ಸ್ವೀಕರಿಸಹತ್ತಿರುವರು. ವಿಶ್ವದ ಬಗ್ಗೆ ಮೊದಲಿಗಿದ್ದ ಯಾಂತ್ರಿಕ ಕಲ್ಪನೆಯು ಅಷ್ಟು ಸಮಾಧಾನಕರವಾಗಿ ಮೊದಲೂ ತೋರಿರಲಿಲ್ಲ. ಮತ್ತು ಮುಂದಾದರೂ ತೋರುವ ಸಂಭವವಿಲ್ಲ. ಈ ಅಭಿಪ್ರಾಯವೇ ಈಗ ಹೆಚ್ಚಿಚ್ಚು ಬಲಗೊಳ್ಳಹತ್ತಿದೆ. ಈಗಿನ ನಮ್ಮ ವಿಜ್ಞಾನ ಶಾಸ್ತ್ರಜ್ಞನಿಗೆ ಒಬ್ಬ ಮನುಷ್ಯನ ಬೆಲೆಗಟ್ಟಲು ಹೇಳಿದಲ್ಲಿ ಅವನು ಮಾಡಲು ಶಕ್ಯವಿರುವ ರೀತಿಯನ್ನು ಕೆಳಗೆ ಕಾಣಿಸಿದಂತೆ ವಿವರಿಸಬಹುದು. ಏನಂದರೆ:— ಪ್ಲೇಟೋ, ಡಾಂಟೆ, ನ್ಯೂಟನ್ನ ಈನಸ್ಟೀನ ಇವರಂಥ ಮಹಾ ವಿಭೂತಿಗಳ ತಲೆಬುರುಡೆಯಲ್ಲಿಯ ಮಿದುಳು, ಅವರ ಸ್ನಾಯುಗಳು ಹಾಗೂ ಅವರ ಇತರ ಭಾಗಗಳು ಇವುಗಳನ್ನು ತೆಗೆದುಕೊಂಡು ಪೃಥಕ್ಕರಣ ಮಾಡಿ ಅವುಗಳಿಂದ ಹೊರಟ ಸೆಣದಿಂದ ಸಾಬಣದ ಇಂತಿಷ್ಟು ಉದ್ದ ತುಣುಕುಗಳಾಗುವವು, ಅವರ ಶರೀರದಲ್ಲಿಯ ಸಿಪ್ಪೆಣದ ಅಂಶದಿಂದ ಹೆಂಗಸರು ತಲೆಯಲ್ಲಿ ಸಿಕ್ಕಿಸಿಕೊಳ್ಳುವಂಥ ಟಾಚಣಿಗಳು ಇಂತಿಷ್ಟಾಗುವವು, ಈ ಪ್ರಕಾರ ಅವರ ಶರೀರದಲ್ಲಿಯ ಜೀನಸುಗಳ ಮಾಪನ್ನು ಗೊತ್ತುಪಡಿಸಿ ಅವುಗಳೆಲ್ಲದರ ಒಟ್ಟು ತೂಕ ಇಂತಿಷ್ಟು ಗೇಣು ಆಗುವದು ಎಂದು ಹೇಳಿಕೊಡಬಹುದು. ಆದರೆ ಮನುಷ್ಯನ

ಯೋಗ್ಯತೆಯನ್ನು ಹೀಗೆ ಕಟ್ಟುವದು ಎಷ್ಟು ಹಾಸ್ಯಾಸ್ಪದವೆಂಬುದು ಕಂಡುಬಂದೆ ಇರಲಾರದು.

ಮನುಷ್ಯನ ಯೋಗ್ಯತೆಯು ಅವನ ಬಾಹ್ಯಶಾರೀರಿಕಶಕ್ತಿ ಮತ್ತು ಅವನಲ್ಲಿಯ ದ್ರವ್ಯಗಳು ಇವುಗಳ ಮೇಲೆ ಅವಲಂಬಿಸದೆ ಅದು ಅವನ ಬುದ್ಧಿ ಮತ್ತು ಅವನ ಮಾನಸಿಕಶಕ್ತಿ ಇವುಗಳ ಮೇಲೆ ಅವಲಂಬಿಸಿರುತ್ತದೆ.

ಹಾಗೆಯೇ ಮನುಷ್ಯನು ವಿಶ್ವದಲ್ಲೆಲ್ಲ ವ್ಯಾಪಿಸಿರುವ ವಸ್ತುಗಳ ಭಾರವನ್ನು ಕಂಡುಹಿಡಿಯಬಹುದು. ಅಥವಾ ದೂರದರ್ಶಕ ಯಂತ್ರದ ಸಹಾಯದಿಂದ ಕಣ್ಣಿಗೆ ಅಗೋಚರವಾದ ಚಮ್ಕಿಗಳನ್ನು ಕಂಡುಹಿಡಿಯಬಹುದು. ಆದರೂ ಅವನ ಮಾನಸಿಕ ಅಂತರಂಗದ ವ್ಯಾಪಾರಗಳಿಗೂ ಬಾಹ್ಯ ಶಾರೀರಿಕ ಸ್ಥೂಲ ವ್ಯಾಪಾರಗಳಿಗೂ ಮಹದಂತರವದೆ. ಕೇವಲ ಜಡವಸ್ತು ಮತ್ತು ಚೈತನ್ಯವಸ್ತು ಇವುಗಳು ಮಾನವೀ ಬುದ್ಧಿಗೆ ನಿಲುಕಲಾರದಷ್ಟು ದೂರದೂರವಾಗಿವೆ.

ಸರ ಆರ್ಥರ ಎಡ್ಡಿಂಗಟನ್ನ.

ಸರ ಆರ್ಥರ ಎಸ್. ಎಡ್ಡಿಂಗಟನ್ ಎಂಬವರು ಕೇಂಬ್ರಿಜ್ಜ ವಿಶ್ವವಿದ್ಯಾಲಯದಲ್ಲಿ ಒಬ್ಬ ಪ್ರಸಿದ್ಧ ಖಗೋಲಶಾಸ್ತ್ರಜ್ಞರಿರುವರು. ಈ ವಿಷಯದ ಬಗ್ಗೆ ಅವರು ಅನ್ನುವದೇನೆಂದರೆ:— ೧೯ನೇ ಶತಮಾನದಲ್ಲಿಯ ವೈಜ್ಞಾನಿಕರು ಜಡವಸ್ತುಗಳು ಮತ್ತು ಅವುಗಳಿದ್ದ ದೃಶ್ಯ ಜಗತ್ತು ತಾವಾಗಿಯೇ ವ್ಯವಹರಿಸುತ್ತವೆ ಎಂದು ತಿಳಿಯುತ್ತಿದ್ದರು. ಇಂಥವರು ಆಗ ಬಹು ಜನರಿದ್ದರು. ಅದರಂತೆಯೇ ಮನುಷ್ಯನಿಗೆ ಸ್ವತಂತ್ರತೆ ಎಂಬುದು ಇಲ್ಲ, ಅವನ ಕಾರ್ಯಗಳು ಈ ಪೂರ್ವದಲ್ಲಿಯೇ ನಿಶ್ಚಯಿಸಲ್ಪಟ್ಟಿವೆ, ಅವನ ಅಧೀನತೆಯಲ್ಲಿ ಯಾವದೂ ಇಲ್ಲ. ಮತ್ತು ಅವನ ಕಾರ್ಯಗಳು ತನ್ಮಷ್ಟಕ್ಕೆ ತಾವೇ ಉಂಟಾಗುತ್ತವೆ ಎಂಬ ವಿಚಾರಗಳುಳ್ಳವರೂ ಆಗ ಅನೇಕರಿದ್ದರು ಅಂದರೆ ಈ ಜಗತ್ತೆಲ್ಲ ಒಂದು ಯಂತ್ರದಂತೆ ತಾನಾಗಿಯೇ ನಡೆದಿರುತ್ತದೆ, ಅದಕ್ಕೆ ಬಾಹ್ಯ ಪ್ರೇರಣೆಯ ಅವಶ್ಯಕತೆ ಇಲ್ಲ, ಪ್ರಾಣಿವರ್ಗಗಳೂ ವನಸ್ಪತಿಗಳೂ ಕೂಡ ಅವುಗಳಿಗೆ ಸಂಬಂಧಪಟ್ಟ ಶಾಸ್ತ್ರೀಯ ತತ್ವಗಳಿಗೆ ಅನುಸಾರವಾಗಿ ನಡೆಯುತ್ತಲಿವೆ ಎಂಬ ಅಭಿಪ್ರಾಯಗಳು ಹೊರಪಡುತ್ತಿದ್ದವು. ಆದರೆ ಆಧುನಿಕ ಶಾಸ್ತ್ರೀಯ ಜ್ಞಾನವು ಇಂಥ ವಿಚಾರಗಳನ್ನು ಹೊರದೂಡಹತ್ತಿದೆ. ಅದು ಈಗ ವಿಶ್ವದಲ್ಲೆಲ್ಲ ಒಂದು ದೈವೀ ಶಕ್ತಿಯು ಅಡಗಿರುತ್ತದೆಂದು ತಿಳಿಯಹತ್ತಿದೆ

ಮತ್ತು ಆ ಶಕ್ತಿಯು ಮನುಷ್ಯನಲ್ಲಿಯೂ ಕೂಡ ವಾಸಿಸುತ್ತದೆ ಎಂಬ ವಿಚಾರಗಳೂ ಕೂಡ ಉಂಟಾಗಹತ್ತಿವೆ ಹೀಗೆ ಹಿಂದಿನ ನಾಸ್ತಿಕವಾದವು ಈಗ ಹೊಂಟುಹೋಗಹತ್ತಿದೆ. ಹೀಗೆ ನಮ್ಮ ಅನುಭವದ ಕಾರ್ಯಗಳಲ್ಲಿ ಮನಸ್ಸಿಗೆ ಉಚ್ಚಸ್ಥಾನವು ದೊರೆಯಹತ್ತಿದೆ. ಮನಸ್ಸೇ ಮುಖ್ಯವಾದದ್ದು ಮತ್ತು ಅದೇ ನಮಗೆ ಪ್ರತ್ಯಕ್ಷವಾಗಿ ಸಂಬಂಧಿಸಿದ್ದು. ಉಳಿದದ್ದೆಲ್ಲವೂ ಅಪ್ರತಕ್ಷವಾಗಿ ದೂರಿನಿಂದ ಅನುಮಾನಪೂರ್ವಕವಾಗಿ ನಮ್ಮ ಮೇಲೆ ಪರಿಣಾಮ ಮಾಡುತ್ತವೇ ಹೊರ್ತು ಬೇರೊಂದಿಲ್ಲ. ಈ ಪ್ರಕಾರ ಧರ್ಮವು ಮನುಷ್ಯನ ಮನಸ್ಸು ಮತ್ತು ಚೈತನ್ಯ ಇವುಗಳಿಗೆ ವಿಶೇಷ ಸಂಬಂಧ ಪಟ್ಟದ್ದಾಗಿದೆ. ಅದನ್ನು ದೂರಮಾಡಲಿಕ್ಕೆ ಬರಲಾರದು ಎಂದು ಇವರ ಅಭಿಪ್ರಾಯವದೆ.

ಕಿರ್ಟಲೆ. ಎಫ್. ಮ್ಯಾದರ.

ಕಿರ್ಟಲೆ. ಎಫ್. ಮ್ಯಾದರ ಎಂಬವರು ಈಗ ಹಾರ್ವಾರ್ಡ ವಿಶ್ವವಿದ್ಯಾಲಯದಲ್ಲಿ ಭೂಗರ್ಭಶಾಸ್ತ್ರಜ್ಞರಿರುವರು ಇವರ ಅಭಿಪ್ರಾಯವೇನೆಂದರೆ:— ಹತ್ತಿಪ್ಪತ್ತು ವರ್ಷಗಳ ಹಿಂದೆ ವಿಶ್ವದಲ್ಲೆಲ್ಲ ತುಂಬಿದ ಶಕ್ತಿಯ ಕಾರಣಗಳನ್ನು ವಿವೇಚಿಸುವಲ್ಲಿ ಹ್ಯಾಗೆ ಒಂದು ಯಂತ್ರವು ನಡೆದಿರುತ್ತದೋ ಹಾಗೆಯೇ ಈ ವಿಶ್ವವೂ ನಡೆದಿರುತ್ತದೆಂದು ಹೇಳಲ್ಪಡುತ್ತಿತ್ತು. ಆದರೆ ಈಚೆಗೆ ಕೆಲವು ವರ್ಷಗಳಲ್ಲಿ ಈ ವಿಚಾರಗಳಿಗೆ ಸಮರ್ಥನೆಯು ದೊರೆಯಲಾರದಂತೆ ಆಗಿದೆ. ನಾವು ದೃಶ್ಯ ಜಡ ವಸ್ತುಗಳನ್ನು ಹೆಚ್ಚು ಹೆಚ್ಚಿಗೆ ಪೃಥಕ್ಕರಣ ಮಾಡಿದ ಹಾಗೆ ಮತ್ತು ವಸ್ತುಗಳ ತಿರುಳು ಏನಿರುತ್ತದೆಂಬದನ್ನು ಶೋಧಿಸುತ್ತ ಹೋದ ಹಾಗೆ ಹೊಸ ಹೊಸ ವಿಚಾರಗಳು ವೈಜ್ಞಾನಿಕರಲ್ಲಿ ಉಂಟಾಗಹತ್ತಿವೆ. ವಿಶ್ವದಲ್ಲೆಲ್ಲ ಒಂದು ಪ್ರಚಂಡ ಶಕ್ತಿಯು ತುಂಬಿರುವದಲ್ಲದೆ ಅದು ಪದಾರ್ಥದ ಅಣುವಿನಲ್ಲಿಯೂ ಕೂಡ ಇರುತ್ತವೆ. ಇದರ ವೈಶಿಷ್ಟ್ಯವು ಯಾಂತ್ರಿಕವಾಗಿರದೆ ಮಾನಸಿಕವಾಗಿರುತ್ತದೆ. ಜಗತ್ತು ಬರೇ ಒಂದು ದೊಡ್ಡ ಯಂತ್ರದಂತಿರದೆ ಅದು ಒಂದು ದೊಡ್ಡ ವಿಚಾರವಂತಿದೆ. ಇದರಲ್ಲಿ ಕಂಡುಬರುವ ಸಂಗತಿಗಳು ಒಂದು ಯಂತ್ರದ ಕ್ರಿಯೆಗಳಂತಿರದೆ ಮಾನಸಿಕ ಕ್ರಿಯೆಗಳಂತೆ ಇವೆ. ಈ ಕಾಲಕ್ಕೆ ವೈಜ್ಞಾನಿಕರು ಪದಾರ್ಥಗಳನ್ನು ಮತ್ತು ಅನೇಕ ಬಗೆಯ ಶಕ್ತಿಗಳನ್ನು ಪೃಥಕ್ಕರಣವನ್ನು ಅತ್ಯಂತವಾಗಿ ಮಾಡಿರುತ್ತಾರೆ. ಅವರ ಪ್ರಯೋಗಗಳಿಂದ ಜಗತ್ತಿನಲ್ಲೆಲ್ಲ ಇರುವ ನಿಜವಾದ ವಸ್ತುವು ಮನಸ್ಸು

ಇದೆ ಎಂದು ಹೆಚ್ಚೆಚ್ಚಿಗೆ ಕಂಡುಬರಹತ್ತಿದೆ. ಇಷ್ಟೇ ಅಲ್ಲ ಈ ವಿಜ್ಞಾನದ ಬಾಹ್ಯ ಪ್ರಕಟತೆಯೇ ಜಡವಸ್ತುವಾಗಿದೆ. ದೇವರ ಸ್ವರೂಪದ ಬಗ್ಗೆ ಹೀಗೆ ನನ್ನ ನಂಬಿಗೆಯಾಗಿದೆ. ನನ್ನ ದೃಷ್ಟಿಯಿಂದ ಜಗತ್ತಿನಲ್ಲಿದ್ದ ಎಲ್ಲವೂ ದೇವರು ಮತ್ತ ಈ ದೇವಾಂಶವು ಮನುಷ್ಯನಲ್ಲಿಯೂ ತಲೆದೋರಿ ಅವನ ವ್ಯಕ್ತಿವೈಶಿಷ್ಟ್ಯವನ್ನು ಹೆಚ್ಚವಾಡುತ್ತಲಿದೆ.

ಈ ರೀತಿಯಾಗಿ ಇರುವ ಪರಮಾತ್ಮನಲ್ಲಿ ಉತ್ತಮವಾದುದು ಇದೆಯೇ ಇಲ್ಲವೆ ಎಂಬ ಪ್ರಶ್ನೆಯು ಉದ್ಭವಿಸುತ್ತದೆ. ಜಗತ್ತಿನಲ್ಲಿ ಉತ್ತಮ ಗುಣವುಳ್ಳ ಜನರು ಇರುವದರ ಮೇಲಿಂದ ವಿಶ್ವವ್ಯಾಪಿಯಾದ ಶಕ್ತಿಯಲ್ಲಿಯೂ ಕೂಡ ಉತ್ತಮತನವು ಇದೆ ಎಂದು ಹೇಳಲು ಪ್ರತ್ಯವಾಯವಿಲ್ಲ. ಮತ್ತು ಈ ಉತ್ತಮತನವೇ ಜಗತ್ತಿನಲ್ಲಿ ದಯೆ, ಸತ್ಯ ಮುಂತಾದ ಸದ್ಗುಣಗಳನ್ನು ಉಂಟುಮಾಡುತ್ತದೆ.

ಆರ್ಥರ್. ಎಚ್. ಕಾಂಪಟನ್ನ.

ಆರ್ಥರ್. ಎಚ್. ಕಾಂಪಟನ್ನ ಎಂಬವರು ಚಿಕಾಗೋ ವಿಶ್ವವಿದ್ಯಾಲಯದಲ್ಲಿ ಪದಾರ್ಥವಿಜ್ಞಾನ ಶಾಸ್ತ್ರದ ಪ್ರಸಿದ್ಧ ಸಂಶೋಧಕರಿರುವರು. ಅವರ ಅಭಿಪ್ರಾಯವೇನೆಂದರೆ:— ಪೊವಲಿನ ಪ್ರಗತಿಯ ತತ್ವವು ಈಗಿನ ಹೊಸ ಸಂಶೋಧನದ ಕಾಲದಲ್ಲಿ ಹಳೆಯದಾಗಹತ್ತಿದೆ. ಈ ತತ್ವದ ಪ್ರಕಾರ ವಸ್ತುಗಳು ಸುತ್ತಲಿನ ಪರಿಸ್ಥಿತಿಗೆ ಅನುಸರಿಸಿ ಪ್ರಗತಿಯ ಮಾರ್ಗವನ್ನು ಅನುಸರಿಸುತ್ತ ಹೊಗುವವೆಂದು ತಿಳಿಯುವದುಂಟು. ಆದ್ದರಿಂದ ಈ ಪರಿಸ್ಥಿತಿಯನ್ನು ಯಾವದು ಚನ್ನಾಗಿ ಎದುರಿಸಬಲ್ಲದೋ ಅದೇ ಮಾತ್ರ ಬಾಳುವದು. ಈ ತರದ ವಿಚಾರಗಳ ಮೂಲಕ ಬೆಳವಣಿಗೆಯು ಬುದ್ಧಿಪೂರ್ವಕವಾಗಿ ಇರದೆ ಅಕಸ್ಮಿಕವಾದ ಸಂಗತಿಗಳಮೇಲೆ ಅವಲಂಭಿಸಿರುತ್ತದೆಂದು ತಿಳಿಯಬೇಕಾಗುತ್ತದೆ ಆದರೆ ಈಜಿಗೆ ಹೊರಟ ಶಾಸ್ತ್ರೀಯ ಶೋಧಗಳ ಮೂಲಕ ಈ ತಿಳುವಳಿಕೆಯು ನಿಜತತ್ವವನ್ನು ಸ್ಥಿರಪಡಿಸುವದು ಕಠಿಣವಾಗಹತ್ತಿದೆ. ಈಗಿನ ಪದಾರ್ಥವಿಜ್ಞಾನ ಶಾಸ್ತ್ರಜ್ಞರು ಅಭಿಪ್ರಾಯ ಪಡುವದೇನೆಂದರೆ, ಈ ವಿಶ್ವವು ಅಗಣಿತ ಸೂಕ್ಷ್ಮ ಅಣುಗಳಿಂದ ತುಂಬಿ ಹೋಗಿದ್ದು ಈ ಅಣುಗಳಲ್ಲೆಲ್ಲ ಅನೇಕ ಗುಣಗಳೂ ಅನೇಕ ಬಗೆಯ ಶಕ್ತಿಗಳೂ ಇರುತ್ತವೆ. ಇವುಗಳ ಪರಸ್ಪರ ಆಘಾತ ಪ್ರತ್ಯಾಘಾತಗಳು ಜಗತ್ತಿನಲ್ಲಿ ನಡೆಯುತ್ತಲೇ ಇವೆ. ಆದರೆ ಇವುಗಳಲ್ಲೆಲ್ಲ ಅರಿವು ಎಂಬ

ಒಂದು ಇದ್ದು ಅದು ತನಗೆ ಬೇಕಾದ ಅಣುಗಳನ್ನು ತನ್ನ ಕಡೆಗೆ ಎಳೆಯುತ್ತದೆಂದು ಭಾವಿಸಲ್ಪಟ್ಟಿದೆ. ಇದರಿಂದ ಜಗತ್ತು ಒಂದು ಉದ್ದೇಶ ಪೂರ್ವಕವಾಗಿ ಪ್ರಕಟವಾಗುತ್ತಲಿದೆ ಎಂದು ತಿಳಿಯಬೇಕಾಗುತ್ತದೆ. ಆದ್ದರಿಂದ ಅದು ಅಕಸ್ಮಿಕವಾಗಿ ತನ್ನಷ್ಟಕ್ಕೇ ತಾನೇ ಪ್ರಕಟವಾದುದಲ್ಲ. ಎಲ್ಲಿ ಆಂವು ಎಂಬುದು ಇದೆಯೋ ಅಲ್ಲಿ ಸ್ವಾತಂತ್ರ್ಯವುಳ್ಳ ಒಂದು ವಸ್ತುವು ಇದೆ, ಎಂದು ತಿಳಿಯಬೇಕಾಗುತ್ತದೆ. ಮನುಷ್ಯನಿಗೆ ಸ್ವಾತಂತ್ರ್ಯವಿದ್ದಾದರೆ ಅವನಲ್ಲಿ ಉದ್ಭವಿಸುವ ವಿಚಾರಗಳು ಕೇವಲ ಅವನ ಪರಮಾಣುಗಳ ಕ್ರಿಯೆಗಳಿಂದಾಗಲಾರವು. ಒಂದು ವೇಳೆ ಹಾಗೆ ತಿಳಿದದ್ದಾದರೆ ಆ ಪರಮಾಣುಗಳ ಕೈವಶದಲ್ಲಿಯೇ ಅವನು ಉಳಿಯತಕ್ಕದ್ದು. ಹೀಗಾದಲ್ಲಿ ಅವನಿಗೆ ಸ್ವಾತಂತ್ರ್ಯವು ಇರಲಾರದು. ಮನುಷ್ಯನಿಗೆ ಸ್ವಾತಂತ್ರ್ಯವಿದೆ, ಎಂದು ಎಣಿಸಿದರೆ ಅವನಲ್ಲಿ ಕೆಲಮಟ್ಟಿಗಾದರೂ ವಿಚಾರ ಶಕ್ತಿಯು ಇರಲೇ ಬೇಕು. ಈ ವಿಚಾರ ಶಕ್ತಿಯು ಬರೇ ಕೇವಲ ವಿದ್ಯುಚ್ಛಕ್ತಿಯ ಬಾಹ್ಯ ಕ್ರಿಯೆಯಲ್ಲ. ಈ ವಿಚಾರಿಸುವ ಕ್ರಿಯೆಯು ಕೂಡ ಒಂದು ಆಂತಃಶಕ್ತಿಯ ಪರಣಾಮವಾಗಿದೆ.

ಹೀಗೆ ಆಂತಃಶಕ್ತಿಯೊಂದಿದೆ ಎಂದು ನಾವು ಗ್ರಹಿಸಿದಲ್ಲಿ ವಿದ್ಯುಚ್ಛಕ್ತಿಯ ಕಾರ್ಯಗಳು ನಿಂತುಹೋದರೂ ಕೂಡ ಈ ಶಕ್ತಿಯು ಸಾಯಲಾರದು. ಅದ್ದರಿಂದ ಮನುಷ್ಯನು ಮರಣಹೊಂದಿದರೂ ಕೂಡ ಈ ಆಂತಃಶಕ್ತಿಯ ಮೂಲಕ ಅವನಲ್ಲಿ ಎಚ್ಚರಿಕೆ ಉಳಿಯುವದೆಂಬ ಅನುಮಾನವು ಹೊರಡುವದು. ಹೀಗೆ ಪರಲೋಕವೆಂಬುದೊಂದು ಇದೆ ಎಂದು ತಿಳಿಯಬೇಕಾಗುವದು. ಹೀಗೆ ಅಭಿಪ್ರಾಯವನ್ನು ಆರ್ಥರ ಕಾಂಪಟನ್ನ ಇವರು ಶೋಧಿಸಿರುವರು.

ರಾಬರ್ಟ ಎ. ಮಿಲಿಕ್ಕನ್ನ.

ರಾಬರ್ಟ ಎ. ಮಿಲಿಕನ್ನ ಎಂಬವರು ಪಸಾಡೆನಾ ಎಂಬಲ್ಲಿಯ ಔದ್ಯೋಗಿಕ ಸಂಸ್ಥೆಯಲ್ಲಿ ಪದಾರ್ಥವಿಜ್ಞಾನಶಾಸ್ತ್ರದ ಪ್ರೋಫೆಸರರಿರುವರು. ಇವರ ಅಭಿಪ್ರಾಯವೇನೆಂದರೆ:— ವಿಶ್ವದಲ್ಲೆಲ್ಲ ನಾನಾ ವಿಧತ್ವವು ತೋರಿಬರುತ್ತದೆ. ಆದರೆ ಇದನ್ನೆಲ್ಲ ಒಂದುಗೂಡಿಸುವ ತತ್ವವು ಪರಮಾತ್ಮನಿರುವನು. ಪೃಥ್ವಿಯು ಮೂಲಸ್ಥಿತಿಯಲ್ಲಿ ಸಂಚಲವಾದದ್ದೂ ವಾಯು ರೂಪೀ ವಸ್ತುಗಳಿಂದ ಕೂಡಿಕೊಂಡಂಥಾದ್ದೂ ಇದ್ದು ಮುಂದೆ ಬರ

ಬರುತ್ತ ಅದು ಕೋಟ್ಯಾವಧಿ ವರ್ಷಗಳಲ್ಲಿ ಈಗಿನ ಸ್ಥಿರತರವಾದ ಭೂಮಿಯ ಆಕಾರವನ್ನು ಹೊಂದಿದೆ. ಈ ಭೂಮಿಯಲ್ಲಿ ಜೀವಜಂತುಗಳು ಉತ್ಪನ್ನವಾಗುತ್ತ ಬಂದು ಅವುಗಳಲ್ಲಿ ಮನುಷ್ಯನೆಂಬ ಅಗಾಧ ಪ್ರಾಣಿಯೊಬ್ಬನು ಉದ್ಭವಿಸಿರುವನು. ಮನುಷ್ಯ ಮೊದಲ್ಗೊಂಡು ಎಲ್ಲ ವಸ್ತುಗಳಲ್ಲಿ ಜೀವಕಳೆಯು ಸ್ಫುರಿಸಿದ್ದರಿಂದ ಪೃಥ್ವಿಯಲ್ಲೆಲ್ಲ ಪ್ರಗತಿಯ ಕಾರ್ಯಗಳು ಉಂಟಾಗಿರುತ್ತವೆ. ಇದು ಪರಮಾತ್ಮನ ಅಸ್ತಿತ್ವದ ದ್ಯೋತಕವೇ ಇರುತ್ತದೆ. ಈ ಪರಮಾತ್ಮನ ಕಳೆಯು ಮನುಷ್ಯನಲ್ಲಿ ದೈವೀ ಶಕ್ತಿಯ ರೂಪದಿಂದ ವ್ಯವಹರಿಸುತ್ತದೆ. ಇದೆಲ್ಲ ದೇವರ ಅದ್ಭುತ ಕಾರ್ಯವಾಗಿದೆ. ಇವಕ್ಕಾ ಹೆಚ್ಚಿನದು ಯಾವದಿರಬೇಕು?

ಸರ ಜೇವ್ಸ ಜೀನ್ಸ.

ಸರ್ ಜೇವ್ಸ ಜೀನ್ಸ ಇವರು ಕೇಂಬ್ರಿಜ ಮತ್ತು ಪ್ರಿನ್ಸಟನ್ನ ಇಲ್ಲಿ ಗಣಿತಶಾಸ್ತ್ರ ಮತ್ತು ಖಗೋಲಶಾಸ್ತ್ರ ಇವುಗಳ ಪ್ರೊಫೆಸರರು ಇರುವರು. ಹಾಗೂ ಇವರು ಗ್ರೇಟಬ್ರಿಟನದ ರಾಯಲ್ ಸೋಸಾಯಿಟಿಯ ಸೆಕ್ರೆಟರಿಗಳೂ ಇರುವರು. ಇವರು ಅನ್ನುವದೇನಂದರೆ, ವಿಶ್ವವು ಒಂದು ದೊಡ್ಡ ಯಂತ್ರದಂತೆ ಇರದೆ ಅದೊಂದು ಅರಿವು ಎಂದು ಅನ್ನಬಹುದಾಗಿದೆ. ಈಗ ಮಹತ್ವದ ಶಾಸ್ತ್ರೀಯ ಶೋಧಗಳು ಅಸಂಖ್ಯವಾಗಿ ಹೊರಟಿದ್ದು ಅವೆಲ್ಲವುಗಳೂ ಈ ವಿಚಾರವನ್ನೆ ದೃಢಪಡಿಸುತ್ತವೆ. ಈಗಿನ ಎಲ್ಲ ಶಾಸ್ತ್ರಜ್ಞರು ಬಹುತರವಾಗಿ ಇದೇ ರೀತಿಯ ಅಭಿಪ್ರಾಯವುಳ್ಳವರಿರುವರು. ಸೃಷ್ಟ ಪದಾರ್ಥಗಳಲ್ಲಿ ಮನಸ್ಸು ಆಕಸ್ಮಿಕವಾಗಿ ಬಂದುದಲ್ಲ. ಅದರಲ್ಲಿ ಹುಟ್ಟಿಸುವ ಸಾಮರ್ಥ್ಯವಿದೆ. ಅದರಲ್ಲಿ ನಿಯಂತ್ರಣ ಶಕ್ತಿ ಇದೆ. ಈ ಬಗೆಯ ವಿಚಾರಗಳು ಈಗ ರೂಢವಾಗಹತ್ತಿವೆ. ಒಟ್ಟಿಗೆ ವಿಶ್ವವೆಂದರೆ ಶುದ್ಧ ಅರಿವು ಎಂದು ಹೇಳಬಹುದು. ಈ ವಿಚಾರದ ಬಗೆಯು ಇನ್ನೂ ಪೂರ್ಣವಾಗಿ ಗೋಚರವಾಗದಿದ್ದರೂ ಈ ಭಾವವು ಹೆಚ್ಚಿಚ್ಚಿಗೆ ವ್ಯಕ್ತವಾಗಹತ್ತಿದೆ. ಮೊದಲಿನ ಕಾಲದಲ್ಲಿ ಶಾಸ್ತ್ರಜ್ಞರಲ್ಲಿ ಜಡಪದಾರ್ಥಗಳ ಗುಣಪರೀಕ್ಷೆಯೇ ಮುಖ್ಯ ಅಭ್ಯಾಸವಾಗಿತ್ತು. ಆದರೆ ಈಗ ಇದರ ವಿಶೆಯು ಬದಲಾಗುವದರಲ್ಲಿ ಇದೆ. ಯಾಕಂದರೆ ಈ ಜಡವಸ್ತುಗಳು ಯಾವವೂ ಸ್ಥಿರವಾಗಿ ಉಳಿಯುವಂತೆ ತೋರುವದಿಲ್ಲ. ಅವು ನಶ್ವರವಾಗಿವೆ. ಆದ್ದರಿಂದ ವಿಶ್ವದ ಆಧಾರವಾದುದೂ ಸತ್ಯವಾದುದೂ ಬೇರೊಂದು

ಪದಾರ್ಥ ಇದ್ದು ಅದು ಮನಸ್ಸು ಎಂಬ ವಿಚಾರವು ಈಗ ಬಲಪಡುತ್ತಲಿದೆ ಎಂದು ಹೇಳಿದ್ದಾರೆ.

ಈ ಪ್ರಕಾರ ವಿಜ್ಞಾನ ವಿಷಯ ಬಲ್ಲವರಲ್ಲಿ ಅತ್ಯಂತ ಪ್ರಖ್ಯಾತಿಗೊಂಡಿದ ಸಂಶೋಧಕರು ಪರಮಾತ್ಮನ ವಿಷಯದಲ್ಲಿ ಯಾವ ಅಭಿಪ್ರಾಯವನ್ನು ಹೊಂದಿರುವರೆಂಬದನ್ನು ನಾವು ಮೇಲೆ ವಿವರಿಸಿದ್ದೇವೆ. ಆ ಅಭಿಪ್ರಾಯಗಳೆಲ್ಲ ಒಂದೇ ರೀತಿಯವಾಗಿರುತ್ತವೆ. ಇವುಗಳಿಂದ ನಾವು ತಿಳಿಯತಕ್ಕದ್ದೇನಂದರೆ ವಿಶ್ವದಲ್ಲಿ ಅರ್ಥವಿಲ್ಲದ್ದು ಯಾವದೂ ಇಲ್ಲ. ಆಕಸ್ಮಿಕವಾಗಿ ತಾನೇ ಆದದ್ದೂ ಇರುವದಿಲ್ಲ. ಎಲ್ಲದರಲ್ಲಿಯೂ ದೈವೀಶಕ್ತಿಯು ಇದೆ, ಅರಿವು ಇದೆ. ಎಲ್ಲವೂ ಉದ್ದೇಶಪೂರ್ವಕವಾಗಿ ವ್ಯವಹರಿಸುತ್ತವೆ, ಸತ್ಯವಾಗಿವೆ, ಅತ್ಯುತ್ತಮವಾಗಿವೆ, ಚೈತನ್ಯಯುಕ್ತವಾಗಿವೆ. ಇವೆಲ್ಲವುಗಳ ಪೂರ್ಣತೆಯೇ ದೇವರು.

ಸ್ವಾದಿಯ ಸದಾಶಿವರಾಯ ಮತ್ತು ಬಸವರಾಜರು.

ಶಿವಾನುಭವದ ಹಿಂದಿನ ಸಂಚಿಕೆಗಳಲ್ಲಿ ಕೆಳದಿಯ ರಾಜರಿಗೂ ಕೊಡಗು ಹಾಗು ಬೀಳಗಿ ಅರಸುಮನೆತನಗಳಿಗೂ ಸಂಬಂಧಿಸಿದ ವೃತ್ತಾಂತಗಳು ಅನೇಕ ಸಾರಿ ಬಂದಿರುವವು. ಕರ್ನಾಟಕದ ಈ ಪ್ರಸಿದ್ಧ ರಾಜಮನೆತನಗಳ ಸಾಮಾನ್ಯ ವಿವರಣೆಗಳಲ್ಲದೆ ಅವುಗಳಲ್ಲಿ ಆಗಿ ಹೋದ ಅನೇಕ ಪ್ರಸಿದ್ಧ ರಾಜರ ವೃತ್ತಾಂತಗಳೂ ಕೂಡ ಬಂದಿರುತ್ತವೆ. ಅಲ್ಲದೆ ಈ ಪತ್ರಿಕೆಯ ಸಂಪುಟಗಳಲ್ಲಿ ಬೀಳಗಿ ಮತ್ತು ಕೊಡಗು ರಾಜವಂಶಗಳ ಪುರಾತನ ಸಮಗ್ರ ವೃತ್ತಾಂತಗಳು ಕೊಡಲ್ಪಟ್ಟಿವೆ. ಅದರಂತೆ ಹಾಗಲವಾಡಿ ರಾಜಮನೆತನದಲ್ಲಿ ಆಗಿಹೋದ ಪ್ರತಿಯೊಬ್ಬ ಅರಸನ ಸಂಕ್ಷಿಪ್ತ ವೃಂತಾಂತವು ಹಿಂದಿನ ಸಂಚಿಕೆಯೊಂದರಲ್ಲಿ ಬಂದಿರುತ್ತದೆ. ಇವೆಲ್ಲವುಗಳ ಮೇಲಿಂದ ಈ ವೀರಶೈವ ರಾಜರುಗಳು ಕರ್ನಾಟಕದ ಸಂಸ್ಕೃತಿಯನ್ನು ಹ್ಯಾಗೆ ಎತ್ತಿಹಿಡಿಯುತ್ತಿದ್ದರೆಂಬದು ವಾಚಕರಿಗೆ ಸ್ಪಷ್ಟವಾಗದೆ ಇರದು. ಅವರ ಕಾಲದಲ್ಲಿ ಅನೇಕ ಪ್ರಖ್ಯಾತ ಕವಿಗಳೂ ಶಾಸ್ತ್ರನಿಪುಣರೂ ವ್ಯಾಕರಣ ಛಂದಶ್ಶಾಸ್ತ್ರ ಬಲ್ಲವರೂ ಉತ್ಪನ್ನರಾಗಿದ್ದುದು ಕಂಡುಬರುತ್ತದೆ. ಈ ರಾಜರಂತೆ ಸ್ವಾದಿಯ ರಾಜರೂ ಕೂಡ ಕರ್ನಾಟಕದ ಇತಿಹಾಸದಲ್ಲಿ ಪ್ರಸಿದ್ಧಿಯನ್ನು ಹೊಂದಿರುವರು.

ಸ್ವಾದಿಯ ರಾಜ್ಯವು ಈಗಿನ ಕಾರವಾರ ಜಿಲ್ಲೆಯ ಉತ್ತರಭಾಗದಲ್ಲಿ ನೆಲಸಿತ್ತು. ಅಂದರೆ ಈಗಿನ ಶಿರ್ಸಿ, ಯಲ್ಲಾಪುರ, ಹಳ್ಳಿಯಾಳ, ಸುಪಾ ಈ ಪ್ರದೇಶಗಳಲ್ಲಿ ಅಲ್ಲದೆ ಘಟ್ಟದ ಕೆಳಗೆ ಗೋವೆಯ ಸರಹದ್ದಿನಿಂದ ವಿಜ್ಞಾನ ನದಿಯ ವರೆಗೂ ಹಬ್ಬಿತ್ತು. ಈ ಪ್ರಾಂತದ ದಕ್ಷಿಣಭಾಗವು ಬಲಾಢ್ಯರಾದ ಕೆಳದಿ ರಾಜರುಗಳ ವಶದಲ್ಲಿ ಇದ್ದದರಿಂದ ಇವರ ರಾಜ್ಯದಲ್ಲಿ ಒಳಸೇರಲು ಇವರಿಗೆ ಶಕ್ಯವಾಗಲಿಲ್ಲ. ಸ್ವಾದಿಯ ರಾಜ್ಯವು ಅತ್ಯಂತ ಫಲದೃಪವೂ ಶ್ರೀಮಂತಿಕೆಯುಳ್ಳದ್ದೂ ಆಗಿತ್ತು. ಇಲ್ಲಿ ಕಾರವಾರ ಮೊದಲಾದ ಮಹತ್ವದ ಬಂದರಗಳಿದ್ದವು. ಇವುಗಳ ಮೂಲಕ ನಡೆಯುತ್ತಿದ್ದ ವ್ಯಾಪಾರದ ಮೂಲಕ ಈ ರಾಜ್ಯಕ್ಕೆ ಒಳ್ಳೇ ಮಹತ್ವವು ಒದಗಿತ್ತು. ಆದ್ದರಿಂದ ವಿಜಯನಗರದ ಕೃಷ್ಣರಾಜನು ತನ್ನ ಸವೀಪದ ಆಪ್ತನಾದ ಅರಸಪ್ಪ ನಾಯಕನನ್ನು ಈ ಭಾಗದ ಸುಭೇದಾರನನ್ನಾಗಿ ನೇಮಿಸಿದ್ದನು. ಈ ಅರಸಪ್ಪನಾಯಕನು ಸ್ವಾದಿಯ ಗ್ರಾಮವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಇವನೇ ಮುಂದೆ ಸ್ವಾದಿಯ ರಾಜರ ಮೂಲಪುರುಷನಾದನು.

ಅರಸಪ್ಪನಾಯಕನ ತರುವಾಯ ರಾಮಚಂದ್ರನಾಯಕನು ಅವನ ತರುವಾಯ ರಘುನಾಥನಾಯಕನು ರಾಜ್ಯವಾಳಿದರು. ರಘುನಾಥನಾಯಕನ ತರುವಾಯ ಮಧುಲಿಂಗನಾಯಕನು ಪಟ್ಟಕ್ಕೇರಿದನು. ಇವನು ವೀರಶೈವ ಮತವನ್ನು ಸ್ವೀಕರಿಸಿದಂತೆ ತಿಳಿಯುತ್ತದೆ. ಇವನ ಮಗನೇ ಸದಾಶಿವರಾಯನಾಯಕನು. ಅವನು ೧೬೭೪ ರಿಂದ ೧೬೯೭ ರ ವರೆಗೆ ರಾಜ್ಯವಾಳಿದನು. ಸ್ವಾದಿಯ ರಾಜವಂಶದಲ್ಲಿ ಇವನೇ ಅತ್ಯಂತ ಪ್ರಸಿದ್ಧನಾಗಿದ್ದನು. ಇವನ ತರುವಾಯ ಇವನ ಮಗ ಬಸವಲಿಂಗರಾಜನು ಆಳತೊಡಗಿದನು. ಇವನಾದರೂ ತಂದೆಯಂತೆಯೇ ಅತ್ಯಂತ ಪ್ರಸಿದ್ಧಿಹೊಂದಿದನು. ಇವನು ೧೬೯೭ ರಿಂದ ೧೭೪೫ ರ ವರೆಗೆ ಆಳಿದನು. ಸ್ವಾದಿಯ ರಾಜರಲ್ಲಿ ಈ ಉಭಯ ರಾಜರ ಆಳಿಕೆಯ ಕಾಲವೇ ಅತ್ಯಂತ ಮಹತ್ವದ್ದಿರುತ್ತದೆ. ಈ ಉಭಯತರ ಸಂಕ್ಷಿಪ್ತ ವೃತ್ತಾಂತವನ್ನು ನಾವು ಇಲ್ಲಿ ಕೊಡುತ್ತೇವೆ.

ವಿಜಾಪೂರ ಬಾದಶಹರು ಆಳುವ ವರೆಗೂ ಈ ರಾಜರು ಅವರಿಗೆ ಅಂಕಿತರಾಗಿ ನಡಿಯುತ್ತಿದ್ದರು. ಆ ರಾಜ್ಯವು ೧೬೮೬ ರಲ್ಲಿ ಮುಳುಗಿ ಹೋದ ಬಳಿಕ ಸ್ವಾದಿಯ ಅರಸರು ಸ್ವತಂತ್ರರಾದರು. ಈ ಅರಸರ ಸೈನ್ಯದಲ್ಲಿ ೩೦೦೦ ರಾಹುತರೂ ೨೫೦೦೦ ಕಾಲಾಳುಗಳೂ ಇದ್ದರೆಂದು ಫ್ರಾಯರ್ ಎಂಬ ಪ್ರವಾಸಿಯು ತನ್ನ ಗ್ರಂಥದಲ್ಲಿ ಬರೆದಿರುವನು. ಸದಾಶಿವರಾಯನು ಪಟ್ಟಕ್ಕೇರಿದ ಬಳಿಕ ಅವನು ತನ್ನ ರಾಜ್ಯವನ್ನು ಪಶ್ಚಿಮಕ್ಕೆ ಸಮುದ್ರದ ವರೆಗೂ ಬೆಳಿಸಿದನು.

ಈ ಉಭಯ ಅರಸರ ಕಾಲದಲ್ಲಿ ಇವರ ಮುಖ್ಯ ಎದುರಾಳಿಗಳೆಂದರೆ ಇಂಗ್ಲಿಷರು, ಮತ್ತು ಮರಾಠರು, ಇವರೇ ಆಗಿದ್ದರು. ಇವರಲ್ಲಿ ಪೋರ್ತಗೀಜರು ಗೋವೆಯಲ್ಲಿ ರಾಜ್ಯವಾಳುತ್ತಿದ್ದರು. ಆದರೆ ಇಂಗ್ಲಿಷರು ಮಾತ್ರ ಈ ಅರಸರ ರಾಜ್ಯದಲ್ಲಿಯೇ ಅಂದರೆ ಕಾರವಾರದಲ್ಲಿ ತಮ್ಮ ಅಂಗಡಿಯನ್ನು ಹಾಕಿಕೊಂಡು ಇದ್ದರು. ಆಗಿನ ಇವರ ಅಂಗಡಿಗಳೆಂದರೆ ಕೋಟೆ ಕೊತ್ತಲುಗಳನ್ನು ಕಟ್ಟಿಕೊಂಡು ಸೈನಿಕರನ್ನು ಅಲ್ಲಿ ಇಟ್ಟುಕೊಂಡು ಜೀನಸುಗಳನ್ನು ಖರೀದಿ ಮಾಡುವದೂ ಪರದೇಶಕ್ಕೆ ಕಳಿಸುವದೂ ಆಗಿ

ದ್ದವು. ಪ್ರಸಂಗ ಬಂದರೆ ಯುದ್ಧಕ್ಕೂ ಅವರು ಸನ್ನದ್ಧರಾಗುತ್ತಿದ್ದರು. ಇಂಗ್ಲಿಷ, ಡಚ್ಚು, ಫ್ರೆಂಚ, ಮತ್ತು ಪೋರ್ತುಗೀಜ ವ್ಯಾಪಾರಸ್ಥರು ಹಿಂದುಸ್ತಾನ ದೇಶದಲ್ಲಿ ಬಂದು ಅಂಗಡಿಕಾರರಾಗಿದ್ದರೂ ಯಾವ ಬಗೆಯ ಕೋಲಾಹಲಗಳನ್ನೆಬ್ಬಿಸಿದರೆಂಬದು ಇತಿಹಾಸ ಪ್ರಸಿದ್ಧವಾಗಿದೆ. ಫ್ರೆಂಚರು ಮತ್ತು ಇಂಗ್ಲಿಷರು ಮದ್ರಾಸ ಮತ್ತು ಕಲಕತ್ತೆಯಲ್ಲಿ ಅಂಗಡಿಗಳನ್ನು ತೆರೆದ. ಮುಂದೆ ಅವರು ತಮ್ಮ ತಮ್ಮ ರಾಜ್ಯಗಳನ್ನೇ ಸ್ಥಾಪಸಿ ಗೈದರು. ಇದೇ ಬಗೆಯ ಕಾರ್ಯಕವನ್ನು ಇಂಗ್ಲಿಷರೂ ಪೋರ್ತುಗೀಜರೂ ಕರ್ನಾಟಕದ ಬಂದರಗಳಲ್ಲಿ ಇದ್ದುಕೊಂಡು ಮಾಡಲೆಣಿಸಿದ್ದರು. ಆದ್ದರಿಂದ ಅವರು ಇಲ್ಲಿಯ ರಾಜ್ಯಗಳಲ್ಲಿ ಕೈಹಾಕಲೂ ಬಗೆಯುತ್ತಿದ್ದರು. ಆದರೆ ಬಲಾಢ್ಯರಾದ ವಿಜಯನಗರದ ಅರಸರ ಮತ್ತು ಪರಾಕ್ರಮಶಾಲಿಗಳೂ ಜಾಣರೂ ಆದ ಕೆಳದಿಯ ಮತ್ತು ಸ್ವಾದಿಯ ರಾಜರುಗಳ ಮೂಲಕ ಇವರ ಆಟವೇನೂ ಇಲ್ಲಿ ನಡೆಯಲಿಲ್ಲ. ಸದಾಶಿವರಾಯ ನಾಯಕನು ಕಾರವಾರವನ್ನು ಕೈವಶವಾಡಿಕೊಂಡ ಬಳಿಕ ಅಲ್ಲಿದ್ದ ಇಂಗ್ಲಿಷರ ಕಾರವಾರದ ಅಂಗಡಿಯ ಮೇಲೆ ಕಪ್ಪವನ್ನು ಎತ್ತಿದನೆಂದು ತಿಳಿದು ಬರುತ್ತದೆ. (ಬ್ರಾಸಿಸ ಜನಲ್ಸ) ಇದು ೧೬೭೯ ರಲ್ಲಿ. ಮುಂದೆ ಇಂಗ್ಲಿಷರು ತಮ್ಮ ಈ ಅಂಗಡಿಯನ್ನು ಹಾಗೂ ಹೀಗೂ ಸಾಗಿಸುತ್ತ ಬಂದರು. ಈ ಕಾಲದಲ್ಲಿ ಅವರು ಹುಬ್ಬಳ್ಳಿ ಮೊದಲಾದ ಕರ್ನಾಟಕದ ವ್ಯಾಪಾರದ ಕೇಂದ್ರಸ್ಥಳಗಳ ಕೂಡ ವ್ಯವಹಾರವನ್ನು ನಡಿಸುತ್ತಿದ್ದರು. ಆದರೆ ೧೬೮೪ ರಲ್ಲಿ ಕೆಳಗೆ ಕಾಣಿಸಿದ ಸಂಗತಿ ಸಂಭವಿಸಿತು. ಆಗ ಇಂಗ್ಲಿಷರ ಹಡಗದಲ್ಲಿಯ ಕೆಲವು ನಾವಿಕರು ಕಾರವಾರದಲ್ಲಿಯ ಒಂದು ಆಕಳನ್ನು ಕದ್ದು ಅದನ್ನು ಕೊಂದರು. ಆಗ ಪಟ್ಟಣದ ಜನರು ಸಿಟ್ಟಿಗೆದ್ದು ಅವರ ಅಂಗಡಿಯನ್ನು ಮುತ್ತಿದರು. ಈ ಹೊಡೆದಾಟದಲ್ಲಿ ಪಟ್ಟಣದಲ್ಲಿಯ ಇಬ್ಬರು ಸತ್ತರು. ಆಗ ಜನರು ಹಡಗದಲ್ಲಿ ಹಾಕಿದ್ದ ಮೆಣಸನ್ನು ಕೈವಶವಾಡಿಕೊಂಡರು. ಆಕಳನ್ನು ಕೊಂದದ್ದಕ್ಕೆ ಕಂಪನಿಯವರು ಲುಕ್ಸಾನ ಕೊಡಲು ಒಪ್ಪಿಕೊಂಡರು. ಆಗ ಈ ಜಗಳವು ನಿಂತಿತು. ಮುಂದೆ ಇಂಗ್ಲಿಷ ವರ್ತಕರು ಕಾರವಾರ ಕೋಟೆಯನ್ನು ಭದ್ರಪಡಿಸುತ್ತ ನಡೆದರು. ಆದರೆ ಸದಾಶಿವರಾಯನ ಮಗನಾದ ಬಸವರಾಜನು ಇದಕ್ಕೆ ಒಪ್ಪದೆ ೧೭೧೫ ರಲ್ಲಿ ಆ ಕೋಟೆಯನ್ನು ಕೆಡಿವಿಬಿಟ್ಟನು. ಮತ್ತು ಸಮೀಪದಲ್ಲಿ ಸದಾಶಿವಗಡ ಎಂಬ ಭದ್ರವಾದ ಕೋಟೆಯನ್ನು ತನ್ನ ತಂದೆಯ ಹೆಸರಿನಿಂದ ಕಟ್ಟಿಸಿದನು ಇದರಿಂದ ಇಂಗ್ಲಿಷ ವರ್ತಕರಿಗೆ ತಮ್ಮ ಸುರಕ್ಷತೆಗೆ ಭಂಗಬರು

ವದೆಂದು ತೋರಿತು. ಇಂಗ್ಲಿಷರ ಮುಖ್ಯಾಧಿಕಾರಿಯಾದ ಟೇಲರ ಎಂಬವನು ಬಸವರಾಜನ ಒಂದು ಹಡಗವನ್ನು ಹಿಡಿದುಕೊಂಡನು. ಆಗ ರಾಜನು ಒಂದು ದಂಡನ್ನು ತೆಗೆದುಕೊಂಡು ಬಂದು ಇಂಗ್ಲಿಷರ ವಸಾಹತಿಗೆ ಎರಡು ತಿಂಗಳ ವರೆಗೆ ಮುತ್ತಿಗೆ ಹಾಕಿದನು. ಇಂಗ್ಲಿಷರ ನೌಕೆಯು ಈ ಮುತ್ತಿಗೆಯನ್ನು ಎಬ್ಬಿಸಲು ಎರಡು ಸಾರೆ ಪ್ರಯತ್ನಿಸಿತು. ಆದರೆ ಅದು ನಿಷ್ಫಲವಾಯಿತು. ಕಡೆಗೆ ಒಬ್ಬ ಮುಸಲ್ಮಾನನ ಮಧ್ಯಸ್ಥಿಕೆಯಿಂದ ಅರಸನು ಈ ಮುತ್ತಿಗೆಯನ್ನು ಎಬ್ಬಿಸಿದನೆಂದು ತಿಳಿಯುತ್ತದೆ. ಆದರೆ ಬಸವರಾಜನು ಇಂಗ್ಲಿಷರ ಕೂಡ ಮುಂದೆ ವಿರೋಧಿಯಾಗಿ ವರ್ತಿಸಹತ್ತಿದ್ದರಿಂದ ಇಂಗ್ಲಿಷರು ಕಾರವಾರದಿಂದ ತಮ್ಮ ಅಂಗಡಿಯನ್ನೇ ಕಿತ್ತುಕೊಂಡು ಹೋಗಬೇಕಾಯಿತು.

ಇಂಗ್ಲಿಷರ ತರುವಾಯ ಸ್ವಾದಿಯ ಅರಸರಿಗೆ ಮೊಗಲರು ಮತ್ತು ಮರಾಠರು ಇವರೇ ಮುಖ್ಯ ಇದರಾಳಿಗಳಾಗಿ ಉಳಿದರು ವಿಜಾಪೂರ ರಾಜ್ಯವು ಹಾಳಾದ ಬಳಿಕ ಕರ್ನಾಟಕ ಭಾಗವೆಲ್ಲ ಮೊಗಲರ ಕೈಸೇರಿತು. ಮೊಗಲರು ಕೆಳದಿ ಮತ್ತು ಸ್ವಾದಿಯ ಅರಸರ ಮೇಲೆ ದಾಳಿಯನ್ನು ಮಾಡಿದರು. ಆಗ ರಾಜ್ಯವಾಳುತ್ತಿದ್ದ ಸದಾಶಿವರಾಯನಾಯಕನು ಔರಂಗಜೇಬನಿಗೆ ಕಪ್ಪವನ್ನು ಕೊಡಲು ಒಪ್ಪಿಕೊಂಡನು. ಸದಾಶಿವರಾಯನು ಕೆಲವು ಸಾರೆ ಸಂಭಾಜಿಯ ಗೂಡವೂ ಯುದ್ಧ ಹೂಡುವ ಪ್ರಸಂಗಗಳು ಬಂದವು. ಆದರೆ ಈ ಯಾವ ಯುದ್ಧಗಳಲ್ಲಿಯೂ ಸದಾಶಿವರಾಯನನ್ನು ತನ್ನ ಕೈವಶವಾಡಿಕೊಳ್ಳಲಿಕ್ಕೆ ಸಂಭಾಜಿಗೆ ಶಕ್ಯವಾಗಲಿಲ್ಲ. ಸಂಭಾಜಿಯು ಪೋರ್ತುಗೀಜರನ್ನು ಕೆಣಕಿದ್ದರಿಂದ ಈ ಉಭಯತರು ಕೂಡಿಕೊಂಡು ಅವನ ವಿರುದ್ಧ ಯುದ್ಧ ಹೂಡಿದರು. ಆಗ ಸಂಭಾಜಿಯು ಒಂದು ಸೈನ್ಯವನ್ನು ತಾನು ಸ್ವತಃ ತೆಗೆದುಕೊಂಡು ಸ್ವಾದಿಯ ಪಟ್ಟಣದ ಮೇಲೆ ಸಾಗಿಬಂದನು. ಆದರೆ ಇದರ ಪರಿಣಾಮವೇನೂ ಆಗಲಿಲ್ಲವೆಂದು ಆರ್ಮ ಎಂಬ ಒಬ್ಬ ಗ್ರಂಥಕಾರನು ತನ್ನ ಇತಿಹಾಸದಲ್ಲಿ ಹೇಳಿದ್ದಾನೆ. ೧೬೮೫ ರಲ್ಲಿ ಇದೇ ಬಗೆಯಾಗಿ ಉಭಯತರಲ್ಲಿ ಪುನಃ ವ್ಯಾಜ್ಯವು ಉಂಟಾಗಲು ಸದಾಶಿವರಾಯನು ಮರಾಠರ ಸ್ವಾಮಿತ್ವವನ್ನು ಸಂಪೂರ್ಣವಾಗಿ ಅಲ್ಲಗಳೆದು ನಾಯಕ ಎಂಬ ಹೆಸರನ್ನು ಬಿಟ್ಟುಕೊಟ್ಟು ರಾಜನೆಂಬ ಬಿರುದನ್ನು ಧರಿಸಿದನು. ಆದರೆ ಈ ಕಾಲದಲ್ಲಿ ಸಂಭಾಜಿಯು ಮೊಗಲರ ಕೂಡ ಯುದ್ಧದಲ್ಲಿ ತೊಡಗಿದ್ದ

ರಿಂದ ಸದಾಶಿವರಾಯನ ವಿರುದ್ಧವಾಗಿ ಅವನು ಏನೂ ಮಾಡಲಾರದ ವನಾದನು. ಮುಂದೆ ೧೭೨೭ ನೇ ಇಸ್ವಿಯಲ್ಲಿ ಪೇಶ್ವೆ ಬಾಳಾಜಿ ಬಾಜೀ ರಾಯನು ಕರ್ನಾಟಕದ ಮೇಲೆ ಸ್ವಾರೀಮಾಡಿದನು. ಆಗ ಸ್ವಾದಿಯ ರಾಜ್ಯವು ಅತ್ಯಂತ ಶ್ರೀಮಂತಿಕೆಯುಳ್ಳದ್ದೆಂದು ಬಹು ಪ್ರಸಿದ್ಧಿಯನ್ನು ಹೊಂದಿತ್ತು. ಆದ್ದರಿಂದ ಮರಾತರ ದಂಡು ಸ್ವಾದಿಯ ರಾಜಧಾನಿಯನ್ನು ಮುತ್ತಿ ಸುಲಿಗೆಯ ಮಾಡಿತು. ಆಗ ಬಸವಲಿಂಗರಾಜನು ರಾಜನಾಗಿದ್ದು ಅವನು ಮರಾತರಿಗೆ ಚೌಥವನ್ನು ಕೊಡಲು ಒಪ್ಪಿದ್ದರಿಂದ ಅವರಲ್ಲಿ ಒಡಂಬಡಿಕೆಯಾಯಿತು. ಮುಂದೆ ೧೭೫೯ ರಲ್ಲಿಯೂ ಬಸವಲಿಂಗರಾಜನು ಪೇಶ್ವೆಯರ ವಿರುದ್ಧ ಕಾಳಗ ಹೂಡಿದ್ದು ತಿಳಿದು ಬರುತ್ತದೆ ಆಗ ಅವನು ಪೊರ್ತುಗೀಜರ ಸಹಾಯವನ್ನು ಪಡೆದಿದ್ದನು. ಆದರೆ ಇದರ ಅಂತ್ಯ ಪರಿಣಾಮವೇನಾಯಿತೆಂಬದು ನಮಗೆ ತಿಳಿದು ಬಂದಿಲ್ಲ.

ಸ್ವಾದಿಯ ಅರಸರು ವ್ಯಾಪಾರಾಭಿವೃದ್ಧಿಯ ವಿಷಯದಲ್ಲಿ ಜನರಿಗೆ ಬಹಳ ಸಹಾಯಮಾಡುತ್ತಿದ್ದರಿಂದ ಅವರ ರಾಜ್ಯವು ಬಹಳ ಸಂಪತ್ತುಳ್ಳದ್ದಾಗಿತ್ತು. ಆ ಕಾಲಕ್ಕೆ ಉತ್ತರ ಕರ್ನಾಟಕದ ಸರಕುಗಳು ಸಿರಸಿ ಸಂಬ್ರಾಣಿ ಹಳಿಯಾಳ ಈ ಮಾರ್ಗಗಳಿಂದ ಹಾಯ್ದು ಪಶ್ಚಿಮ ತೀರದ ಬಂದರಗಳಿಗೆ ಸಾಗಿಸಲ್ಪಡುತ್ತಿದ್ದವು. ಸ್ವಾದಿಯ ರಾಜ್ಯದಲ್ಲಿ ಕಾರವಾರ, ಅಂಕೋಲಾ, ಕದರಿಮಡಿ ಮತ್ತು ವಿರಜಾನ ಈ ಬಂದರಗಳು ಮುಖ್ಯವಾಗಿದ್ದವು. ಇವೆಲ್ಲವೂ ಆಗ ದೊಡ್ಡ ಪಟ್ಟಣಗಳಾಗಿ ಬಹು ವಿಸ್ತಾರವಾಗಿದ್ದವು. ಹಳಿಯಾಳದಲ್ಲಿ ಇಂಗ್ಲಿಷರದೊಂದು ಅಂಗಡಿಯು ಇತ್ತು. ಇಂಗ್ಲಿಷ ಮತ್ತು ಪೋರ್ತುಗೀಜ ವ್ಯಾಪಾರಸ್ಥರು ಹುಬ್ಬಳ್ಳಿಯಲ್ಲಿ ನಿಂತು ಅಲ್ಲಿ ಮಾಲನ್ನು ಖರೀದಿಮಾಡಿ ಪರದೇಶಗಳಿಗೆ ಸ್ವಾದಿಯ ರಾಜ್ಯದೊಳಗಿಂದ ಹಾಯ್ದು ಸಾಗಿಸುತ್ತಿದ್ದರು. ಆಗ ಕಾರವಾರ ಜಿಲ್ಲೆಯಲ್ಲಿಯ ಎಲ್ಲ ವರ್ಗದ ಜನರು ವ್ಯಾಪಾರೋದ್ಯೋಗಗಳಲ್ಲಿ ತೊಡಗಿಕೊಂಡು ಧನಸಂಪನ್ನರಾಗಿದ್ದರು. ಆದ್ದರಿಂದ ಮರಾತಾ ಮತ್ತು ಪೇಶ್ವೆಯರು ಸ್ವಾದೀ ನಾಡಿನಲ್ಲಿ ಹಾವಳಿಮಾಡಿ ಸುಲಿಗೆಯನ್ನು ಮಾಡಲಿಕ್ಕೆ ಯಾವಾಗಲೂ ಹಾತೊರೆಯುತ್ತಿದ್ದರು. ಆದರೆ ಇದು ಅತ್ಯಂತ ಭದ್ರವಾದ ಮತ್ತು ಬಿಕ್ಕಟ್ಟಿನ ಪ್ರದೇಶವಿದ್ದದರಿಂದ ಅವರ ಆಟವು ಅಲ್ಲಿ ಹೆಚ್ಚಾಗಿ ಸಾಗುತ್ತಿದ್ದಿಲ್ಲ. ಸ್ವಾದಿಯ ರಾಜರು ತಮ್ಮ ವ್ಯಾಪಾರದ ಅಭಿವೃದ್ಧಿಯ ಸಲುವಾಗಿ ಯಾವಾಗಲೂ ಪೋರ್ತುಗೀಜ

ರೊಡನೆ ಸ್ನೇಹದಿಂದ ವರ್ತಿಸುತ್ತಿದ್ದರು. ಆದ್ದರಿಂದ ಪೋರ್ತುಗೀಜರ ಯುದ್ಧಗಳಲ್ಲಿ ರಾಜರು ಅವರಿಗೆ ಯಾವಾಗಲೂ ಸಹಾಯ ಮಾಡುತ್ತ ಬಂದರು. ೧೫೯೭ ರಲ್ಲಿ ಪೋರ್ತುಗೀಜರ ಕೂಡ ಅವರು ಒಪ್ಪಂದ ಮಾಡಿಕೊಂಡು ಬಸ್ರೂರಿನಲ್ಲಿಯ ತೇಗಿನ ಕಟ್ಟಿಗೆಯನ್ನು ಹಡಗದಿಂದ ಒಯ್ಯಲು ಮತ್ತು ಕ್ರಿಸ್ತೀಜನರ ಸಲುವಾಗಿ ಒಂದು ದೇವಾಲಯವನ್ನು ಕಟ್ಟಿಸಲು ಅಪ್ಪಣೆ ಕೊಟ್ಟರು. ೧೭೫೫ ರಲ್ಲಿ ಈ ಒಡಂಬಡಿಕೆಯು ಪುನಃ ಸ್ವೀಕರಿಸಲ್ಪಟ್ಟಿತು. ೧೭೪೨ ರಲ್ಲಿಯೂ ಇದೇ ಬಗೆಯ ಒಪ್ಪಂದವಾಗಿ ಸ್ವಾದಿಯ ರಾಜ್ಯದಲ್ಲಿ ಕೆಲವು ಗ್ರಾಮಗಳು ಪೋರ್ತುಗೀಜರಿಗೆ ಕೊಡಲ್ಪಟ್ಟಿದ್ದಲ್ಲದೆ ಪ್ರಾರ್ಥನಾಲಯಗಳನ್ನು ಅಲ್ಲಿ ಕಟ್ಟಲು ಒಪ್ಪಿಗೆಯು ಕೊಡಲ್ಪಟ್ಟಿತು. ಈ ಪ್ರಕಾರ ಸ್ವಾದಿಯ ಅರಸರು ಪೋರ್ತುಗೀಜರೊಡನೆ ಮಿತ್ರತ್ವದಿಂದ ನಡೆದರು. ವಿಜಯನಗರದ ಅರಸರೂ ಕೂಡ ಇದೇ ಬಗೆಯಾಗಿ ಪೋರ್ತುಗೀಜರ ಕೂಡ ನಡೆದದ್ದು ಕಂಡುಬರುತ್ತದೆ.

ಫ್ರಾಯರ ಎಂಬ ಪ್ರವಾಸಿಯು ೧೬೭೬ ರಲ್ಲಿ ಈ ಭಾಗದಲ್ಲಿ ಸಂಚಾರ ಮಾಡಿದನು. ಅವನು ತನ್ನ ವರ್ಣನೆಯಲ್ಲಿ ಹೇಳಿರುವದೇನಂದರೆ — ಸ್ವಾದಿಯ ರಾಜ್ಯವು ಮೆಣಸಿನ ಹುಟ್ಟುವಳಿಗಾಗಿ ಬಹು ಪ್ರಸಿದ್ಧವಾಗಿದೆ. ಇಲ್ಲಿ ಹುಟ್ಟುವ ಈ ಜೀನಸು ಪೃಥ್ವಿಯಲ್ಲೆಲ್ಲ ಅತ್ಯುತ್ತಮವಿದ್ದು ಅದು ಬಹು ಹುಟ್ಟಿಯಾಗಿ ಮಾರುತ್ತದೆ. ಈ ರಾಜ್ಯದ ಒಟ್ಟು ಉತ್ಪನ್ನವು ೩೦ ಲಕ್ಷ ಪ್ಯಾಗೋಡಾ ಅಂದರೆ ಸುಮಾರು ೧ ಕೋಟಿ ರೂಪಾಯಿ ಇತ್ತೆಂದು ಬರೆದಿದ್ದಾನೆ. ೧೬೯೫ ರಲ್ಲಿ ಗೇಮಿಲಿ ಎಂಬ ಹೆಸರಿನ ಇಟಾಲಿಯನ್ ಪ್ರವಾಸಿಗನು ಈ ರಾಜ್ಯದಲ್ಲಿ ಹಾಯ್ದು ಹೋದನು. ಅವನು ಅನ್ನುವದೇನಂದರೆ. ಸ್ವಾದಿಯ ಅರಸನು ಪರ್ವತಪ್ರದೇಶದಲ್ಲಿ ರಾಜ್ಯವಾಳುತ್ತಿದ್ದಾನೆ. ಇದು ಶ್ರೀಮಂತ ನಾಡಾಗಿದೆ, ಅರಸನು ಹಳ್ಳಿಯಾಳದ ದಕ್ಷಿಣಕ್ಕೆ ೭ ಮೈಲಿನಷ್ಟಿರುವ ಸಾಂಬ್ರಾಣಿಯಲ್ಲಿರುತ್ತಾನೆ. ಅಲ್ಲಿ ದೊಡ್ಡ ವ್ಯಾಪಾರವು ನಡೆಯುತ್ತದೆ. ಈ ಒಂದೇ ಊರಿಂದ ಅವನಿಗೆ ೩ ಲಕ್ಷ ರೂಪಾಯಿ ಉತ್ಪನ್ನವಿರುತ್ತದೆ. ೧೭೨೦ ರಲ್ಲಿ ಹೆಮಿಲ್ಟನ್ ಎಂಬ ಪ್ರವಾಸಿಯು ಬರೆದಿರುವದು ಏನಂದರೆ — ಕಂದರುಗಳಲ್ಲಿ ಧಾನ್ಯವು ಸಮೃದ್ಧಿಯಾಗಿದೆ. ಇಲ್ಲಿ ಅತ್ಯುತ್ತಮ ಮೆಣಸು ಆಗುತ್ತಿದ್ದಂತೆ ಹಿಂದುಸ್ತಾನದಲ್ಲಿ ಬೇರೆ ಯಾವ ಕಡೆಗೂ ಆಗುವದಿಲ್ಲ. ಈ ಎಲ್ಲ ವರ್ಣನೆಗಳ ಮೇಲಿಂದ ಸ್ವಾದಿಯ ರಾಜ್ಯವು ಸಣ್ಣದಿದ್ದರೂ ಕೂಡ ಎಷ್ಟು ವೈಭವಸ್ಥಿತಿಯಲ್ಲಿ ಇತ್ತೆಂಬದು ಚನ್ನಾಗಿ ತಿಳಿದು ಬರುವಂತಿದೆ.

ಸ್ವಾದಿಯ ಅರಸರು ವಾಜ್ಯಯ ಕಾರ್ಯದಲ್ಲಿಯೂ ಮುಂದಾಗಿದ್ದರು. ಸದಾಶಿವರಾಯನು ಸ್ವತಃ ಒಬ್ಬ ಕವಿಯಾಗಿದ್ದನು. ಅವನು ಸದಾಶಿವನೀತಿ ಎಂದು ಕಾವ್ಯವನ್ನು ಬರೆದಿರುವನು. ಈ ರಾಜರ ಕುಲದೇವತೆಯು ಬನವಾಸಿ ಮಧುಕೇಶ್ವರನೆಂದು ತಿಳಿದುಬರುತ್ತದೆ. ಈ ದೇವಾಲಯಕ್ಕೆ ಅವನು ದೊಡ್ಡ ಉಂಬಳಿಗಳನ್ನು ಪಾಕಿಕೊಟ್ಟಿರುವನು. ಇವನ ರಾಜ್ಯದಲ್ಲಿ ಬನವಾಸಿಯೊಂದಲ್ಲದೆ ಗೋಕರ್ಣ, ಉಳವಿ ಹೀಗೆ ಪ್ರಸಿದ್ಧ ಕ್ಷೇತ್ರಗಳೂ ಇವೆ. ಅವುಗಳಿಗೂ ಅವರು ವಿಶೇಷ ಸಹಾಯ ಮಾಡುತ್ತ ಬಂದರು. ಆರಂಭದ ಕೆಲವು ರಾಜರು ಜೈನ ಧರ್ಮವನ್ನು ಪೋಷಿಸುತ್ತಿದ್ದಹಾಗೆ ಕಂಡುಬರುತ್ತದೆ. ಆದ್ದರಿಂದ ಜೈನ ದೇವಾಲಯಗಳಿಗೂ ಜೈನರಿಗೂ ಇವರು ತುಂಬಾ ಸಹಾಯ ಮಾಡಿದರು. ಸ್ವಾದಿಯಲ್ಲಿ ಅನೇಕ ಜೈನ ಮನೆತನಗಳಿದ್ದು ಅವುಗಳಲ್ಲಿ ಮಹತ್ವದ ಪುರಾತನ ಗ್ರಂಥಗಳು ಇನ್ನೂ ಉಪಲಬ್ಧವಿವೆಂದು ತಿಳಿದುಬರುತ್ತದೆ. ಸದಾಶಿವರಾಯನು ತನ್ನ ರಾಜ್ಯದಲ್ಲಿ ಘಟ್ಟದ ಮೇಲಿನ ಸೀಮೆಗೆ ಬಾಲಾಘಾಟವೆಂತಲೂ ಸಮುದ್ರ ತೀರದ ಪ್ರದೇಶಕ್ಕೆ ಪಯಣಘಾಟವೆಂತಲೂ ವಿಂಗಡಿಸಿ ರಾಜ್ಯದ ವ್ಯವಸ್ಥೆಯನ್ನು ಮಾಡಿದ್ದನೆಂದು ಗ್ಯಾಝಂಟೆ ಎಂಬ ಇತಿಹಾಸಕಾರನು ಹೇಳುತ್ತಾನೆ.

ಈ ಪ್ರಕಾರ ಉಭಯ ರಾಜರ ಬಗ್ಗೆ ಉಪಲಬ್ಧವಿರುವ ವಿಷಯಗಳಿದ್ದು ಇವುಗಳಿಂದ ಇವರು ಅತ್ಯುತ್ತಮ ರೀತಿಯಿಂದ ಸುಮಾರು ೭೫ ವರ್ಷಗಳವರೆಗೆ ಶಾಂತತೆಯಿಂದ ಮತ್ತು ಉತ್ತಮರೀತಿಯಿಂದ ರಾಜ್ಯ ಪಾಳಿದ್ದು ಕಂಡುಬರುತ್ತದೆ. ಆದರೆ ಇದರ ತರುವಾಯ ರಾಜ್ಯವಾಳಿದ ಇಮ್ಮಡಿ ಸದಾಶಿವನು ಬಹಳ ದುರ್ಬಲನಾದ್ದರಿಂದ ರಾಜ್ಯದಲ್ಲಿ ಅವ್ಯವಸ್ಥೆಯಾಯಿತು. ಮತ್ತು ೧೭೬೩ ರಲ್ಲಿ ಹೈದರಲ್ಲಿಯ ಸರದಾರನು ಸ್ವಾದಿಯ ರಾಜ್ಯವನ್ನು ಅಭಿಯೋಗಿಸಲು ರಾಜನು ಓಡಿ ಹೋಗಿ ಪೋರ್ತುಗೀಜರಿಗೆ ಶರಣುಹೋಗಬೇಕಾಯಿತು. ಈ ಪ್ರಕಾರ ಈ ಸ್ವಾದಿಯ ರಾಜ್ಯವು ಮುಂದೆ ಲಯವಾಯಿತು.

ಸ್ವಾದಿಯ ಅರಸರ ಇತಿಹಾಸವನ್ನು ಹಿಂದಿನ ಕಾಲದ ಒಬ್ಬ ಕವಿಯು ಬರೆದಿರುವಂತೆ ನಮ್ಮ ಕೇಳಿಕೆಯಲ್ಲಿ ಇವೆ. ಹಾಗೆಯೇ ಅವರ ಅನೇಕ ವೃತ್ತಾಂತಗಳು ಈ ಭಾಗದಲ್ಲಿ ಇರಬಹುದು. ಆದರೆ ಅವುಗಳನ್ನು ಯಾರೂ ಇನ್ನೂ ವರೆಗೆ ಶೋಧಿಸಿ ಪ್ರಸಿದ್ಧಿಸಿರುವದಿಲ್ಲ. ಇದರಿಂದ ಬೀಳಗಿ, ಕೆಳದಿ ಮತ್ತು ಕೊಡಗು ಈ ರಾಜರ ವಿಷಯದಲ್ಲಿ ನಮಗೆ ತಿಳಿದಷ್ಟು ವೃತ್ತಾಂತ

ಗಳು ಈ ಸ್ವಾದಿಯ ರಾಜರ ಬಗ್ಗೆ ತಿಳಿದು ಬಂದಿಲ್ಲ. ಇದು ಖೇದಕರವಾದದ್ದು. ಆದ್ದರಿಂದ ಕರ್ನಾಟಕ ಇತಿಹಾಸ ಸಂಶೋಧಕರು ಇತ್ತಕಡೆಗೆ ವಿಶೇಷ ಲಕ್ಷಕೊಡುವರೆಂದು ನಾವು ಹಾರೈಸುತ್ತೇವೆ.

ಸಂಪಾದಕರ ಸೂಚನೆಗಳು.

ವಿಷಯ ಪರಿಚಯ.

ಈ ಸಂಚಿಕೆಯಲ್ಲಿ ಬಂದ ವಿಷಯಗಳನ್ನು ಪರಿತೀಲಿಸಿದಲ್ಲಿ ಅವುಗಳ ಲೇಖಕರು ಆಯಾ ವಿಷಯಗಳನ್ನು ಚನ್ನಾಗಿ ಅಭ್ಯಾಸಮಾಡಿ ಅವುಗಳನ್ನು ಬರೆದಿರುವರೆಂಬದು ತತ್ಕ್ಷಣವೇ ಗೋಚರವಾಗುವದು. ಈ ಲೇಖಗಳನ್ನು ಕಳಿಸಿದ್ದಕ್ಕೂನ್ನಿರ ಶಿವಾನುಭವ ಪತ್ರಿಕೆಯು ಅವರಿಗೆ ಋಣಿಯಾಗಿದೆ.

ಶ್ರೀ ಪ್ರಭುದೇವರು ಮತ್ತು ಸರ್ವಜ್ಞಕವಿ:— ಈ ಉಭಯತರು ಕರ್ನಾಟಕದಲ್ಲಿ ಕ್ರಾಂತಿಕಾರಕ ಮಹಾಪುರುಷರಾಗಿರುವರೆಂದು ಹೇಳಬಹುದು. ಶಿ॥ ಮು॥ ಬುದ್ಧಯ್ಯನವರು ತಮ್ಮ ಲೇಖದಲ್ಲಿ ಮಾಡಿದ ವಿಧಾನಗಳನ್ನು ಬಹುಜನರು ಒಪ್ಪಲಿಕ್ಕಿಲ್ಲ. ಆದರೆ ಲೇಖಕರು ಶ್ರೀ ಪ್ರಭುದೇವರ ಮೇಲೆ ಇನ್ನೂ ಕೆಲವು ಲೇಖಗಳನ್ನು ಬರೆಯುವವರಾದ್ದರಿಂದ ಅವು ಮುಗಿಯುವ ವರೆಗೂ ಈ ವಿಧಾನಗಳ ಬಗ್ಗೆ ಯಾರೂ ಚರ್ಚಿಸಬಾರದೆಂದು ಅವರ ಅಪೇಕ್ಷೆ ಇದೆ. ಆದ್ದರಿಂದ ಈ ವಿಷಯದಲ್ಲಿ ನಾವು ಸಭ್ಯಕ್ಕೆ ಪ್ರಸ್ತಾಪಿಸುವದು ಉಚಿತ ತೋರುವದಿಲ್ಲ ಶಿ॥ ಮೂ॥ ಶಿವಮೂರ್ತಿ ಶಾಸ್ತ್ರಿಗಳವರ ಲೇಖದಿಂದ ಅವರು ಸರ್ವಜ್ಞನ ಕವಿತೆಗಳನ್ನು ಎಷ್ಟು ಮನಸ್ಸಿಗೊಟ್ಟು ಅಭ್ಯಾಸ ಮಾಡಿರುವರೆಂಬದು ಚನ್ನಾಗಿ ತಿಳಿದುಬರುತ್ತದೆ. ಇದು ಅಭಿನಂದನೀಯವೂ ಅನುಕರಣೀಯವೂ ಆಗಿರುತ್ತದೆ. ಆದರೆ ಶಾಸ್ತ್ರಿಗಳವರು ತಮ್ಮ ಲೇಖದಲ್ಲಿ ಸರ್ವಜ್ಞನು ವಚನಕಾರರಕ್ಕಿಂತಲೂ ಮಿಗಿಲಾದನೆಂದು ಹೇಳಿದ್ದು ಮಾತ್ರ ಸರಿಯಾಗಲಾರದು. ವಚನಕಾರರಲ್ಲಿ ಭಿನ್ನಭಿನ್ನ ಭೇದವೂ, ಅನ್ಯಮತತಿರಸ್ಕಾರವೂ ಇದೆ ಎಂದು ಶಿ॥ ಮೂ॥ ಶಿವ

ಮೂರ್ತಿ ಶಾಸ್ತ್ರಿಗಳವರು ಅವರ ಮೇಲೆ ದೋಷ ಹೊರಿಸಿರುವರು. ಅದಕ್ಕಿ ಪೂರ್ವದ ವಚನಕಾರರಲ್ಲಿ ಈ ಬಗೆಯ ಭೇದಭಾವವು ಇರುವದಿಲ್ಲೆಂದು ನಾವು ಧಾರಾಳವಾಗಿ ಹೇಳಬಹುದು. ಭವಿಯಾದ ಬಿಜ್ಜಳನ ಗದ್ದುಗೆಯ ಕೆಳಗೆ ಓಲೈಸಲು ಬಸವೇಶ್ವರನು ಹಿಂದೆಗೆಯಲಿಲ್ಲ ಇಷ್ಟೇಅಲ್ಲ; ಅವನು ಅದನ್ನು ಸಮರ್ಥಿಸಿದ್ದನ್ನು ನಾವು ಲಕ್ಷಿಸುವದು ಅವಶ್ಯವಿದೆ. ಭಕ್ತಭವಿ ಎಂಬ ಭೇದವನ್ನು ಮಾಡುವ ಅರುವತ್ತನಾಲ್ಕು ಶೀಲಗಳನ್ನು ವಚನಕಾರರು ಚನ್ನಾಗಿ ದೂಷಿಸಿದ್ದನ್ನು ನಾವು ಲಕ್ಷದಲ್ಲಿಡಬೇಕು. ಸರ್ವಜ್ಞನು ತನ್ನ ವಚನಗಳನ್ನು ಪಾಮರರಿಗೋಸ್ಕರ ಲೌಕಿಕ ದೃಷ್ಟಿಯಿಂದ ಬರೆದಿದ್ದಾನೆ. ಆದರೆ ವಚನಕಾರರು ತಮ್ಮ ಉಕ್ತಿಗಳನ್ನು ಪಾರಮಾರ್ಥಿಕ ದೃಷ್ಟಿಯಿಂದ ಶಿವಾನುಭವಿಗಳಿಗೋಸ್ಕರ ಬರೆದಿರುವರು. ಆದ್ದರಿಂದ ಈ ಉಭಯತರನ್ನು ಪರಸ್ಪರ ಹೋಲಿಸಿದ್ದಾದರೆ ತಪ್ಪಾಗುವ ಸಂಭವವಿದೆ.

ಪಾಶ್ಚಿಮಾತ್ಯರ ತತ್ವಜ್ಞಾನ:— ಈ ಲೇಖದಲ್ಲಿ ವಿ. ಯಗಟಿಯವರು ಪೃಥ್ವಿಯಲ್ಲಿ ಅತ್ಯಂತ ಪ್ರಸಿದ್ಧರಾದ ಅರಿಸ್ಟಾಟಲ ಮತಗಳನ್ನು ನಿರೂಪಿಸಿರುವರು. ಈ ತತ್ವವೇತ್ತಿಯ ವಿಚಾರಗಳು ವೀರಶೈವರಿಗೆ ಮನನೀಯವಾಗಿವೆ. ಬಸವನಬಳಗದವರು ಸಾಕ್ರೆಟೀನ ಮತ್ತು ಬಸವ ಎಂಬ ಚಿಕ್ಕ ಲೇಖವನ್ನು ಬರೆದಿರುವರು

ಇತರ ಸಾಮಾನ್ಯ ಲೇಖಗಳು— ಇವು ಈ ಸಂಚಿಕೆಯಲ್ಲಿ ಮೂರು ಇವೆ ದೇವರ ಅಸ್ತಿತ್ವದ ಬಗ್ಗೆ ಆಧುನಿಕ ಶಾಸ್ತ್ರೀಯ ಶೋಧಕರು ಯಾವ ವಿಚಾರವುಳ್ಳವರಿರುವರೆಂಬದನ್ನು ತಿಳಿಯುವದು ಅತ್ಯಂತ ಮಹತ್ವದ್ದದೆ ಆದ್ದರಿಂದ ಈ ವಿಷಯದ ಬಗ್ಗೆ ಬಂದ ಲೇಖವನ್ನು ವಾಚಕರು ಚನ್ನಾಗಿ ಪರಿಶೀಲಿಸುವರೆಂದು ನಂಬಿದೇವೆ. ಉಳಿದ ಎರಡು ಲೇಖಗಳು ಸಿಜನಸುಖವಾವುದು, ಮತ್ತು ಜರ್ಮನಿಯಲ್ಲಿ ಆರ್ಯಧರ್ಮ ಎಂಬವು ಇವೆ.

ಸ್ವಾದಿಯ ಸದಾಶಿವರಾಯ ಮತ್ತು ಬಸವರಾಜ:— ಸ್ವಾದಿಯ ಅರಸರ ಬಗ್ಗೆ ಬಹು ಸ್ವಲ್ಪ ಲೇಖಗಳು ಈಗ್ಗೆ ಪ್ರಸಿದ್ಧವಾಗಿವೆ ಈ ವರೆಗೆ ಪ್ರಕಟವಾದ ಅಲ್ಪಸ್ವಲ್ಪ ಸಂಗತಿಗಳನ್ನು ಕ್ರೋಢೀಕರಿಸಿ ಈ ಲೇಖನವು ಬರೆಯಲ್ಪಟ್ಟಿದೆ. ಈ ಲೇಖದಿಂದ ಈ ಅರಸರು ಕರ್ನಾಟಕದ ಇತಿಹಾಸದಲ್ಲಿ ಮಾಡಿದ ಮಹತ್ವದ ಕಾರ್ಯಗಳಾವವು ಎಂಬದು ಸ್ಥೂಲರೀತಿಯಿಂದ ಗೊತ್ತಾಗದೆ ಇರದು.

ಶರಣ ಸಾಹಿತ್ಯ:— ಈ ಸಂಚಿಕೆಯಲ್ಲಿ ನಿಜಾಮ ಇಲಾಖೆಯಲ್ಲಿ ಅತ್ಯಂತ ಪ್ರಸಿದ್ಧಿಹೊಂದಿದ ಕಡಕೋಳ ಮಡಿವಾಳಪ್ಪನವರ ಪದ್ಯಗಳು ಕೆಲವು ಮತ್ತು ಮಲ್ಲೇನಹಳ್ಳಿ ಚನ್ನಬಸವದೇವರು ಮಾಡಿದ ಪದ್ಯಗಳು ಸೇರಿವೆ. ಈ ಉಭಯತರು ಕೇವಲ ಪಾರಮಾರ್ಥಿಕ ವಿಷಯದಲ್ಲಿ ಕಾಲಕಳೆದಿರುವರು. ಆದರೆ ಈ ಪದಗಳನ್ನು ಹಳ್ಳಿಯ ಜನರು ಬಾಯಿಂದ ಬಾಯಿಗೆ ಸಂಗ್ರಹಿಸಿದ್ದವಿರುವದರಿಂದ ಇವು ಅಶುದ್ಧವಾಗಿರುವದು ಸ್ವಾಭಾವಿಕವಾಗಿದೆ. ಇವುಗಳನ್ನು ಶ್ರಮಬಟ್ಟು ಸಂಗ್ರಹಿಸಿದ್ದಕ್ಕೆ ಬಿ.ಚ. ಮು. ಕೋರಿ ಮು. ವಿಜಾಪುರಹಾಗು ವಿ. ಎಚ್. ಆರ್. ಮಹಾಂತಯ್ಯ ಮು. ತುಮಕೂರು ಇವರು ಅಭಿನಂದನೀಯರಾಗಿರುವರು.

ಉರಿಲಿಂಗಪೆದ್ದಿಗಳ ವಚನ ಮತ್ತು ಹರಿಹರನ ರಗಳೆಗಳು:— ಈ ಸಂಚಿಕೆಯಲ್ಲಿ ಕೆಲವು ದೊಡ್ಡ ಲೇಖಗಳು ಸೇರ್ಪಡೆಯಾದ್ದರಿಂದ ಈ ಮಹತ್ವದ ಗ್ರಂಥಗಳಿಗೆ ಕೊಡತಕ್ಕಷ್ಟು ಪುಟಗಳನ್ನು ಅನಿವಾರ್ಯಹಕ್ಕಾಗಿ ಕೊಟ್ಟಿರುವದಿಲ್ಲ. ಇದಕ್ಕೋಸ್ಕರ ವಾಚಕರು ಕ್ಷಮಿಸಬೇಕು.

ಶಿವಾನುಭವಕ್ಕೆ ಪ್ರೋತ್ಸಾಹ.

ಶಿವಾನುಭವ ಪತ್ರಿಕೆಗೆ ಈ ಕಾಲಕ್ಕೆ ಸಹಾಯ ದೊರೆಯುವದು ಅತ್ಯಂತ ಆವಶ್ಯಕವಾಗಿರುವದು. ಈ ಪತ್ರಿಕೆಗೆ ಈಗ ೨೨೪ ಜನ ವರ್ಗಣೀದಾರರು ಮಾತ್ರ ಉಳಿದಿರುವರು. ಈ ಸ್ಥಿತಿಯಲ್ಲಿ ಜಿ. ರಾಯಚೂರ ಮಾನ್ಯಯ ಶ್ರೀಯುತ ಜಾನೇಕಲ್ಲಗೌಡ ಬಸಪ್ಪನವರು ೭ ಜನ ವರ್ಗಣೀದಾರರನ್ನು ಕೂಡಿಸಿಕೊಟ್ಟಿದ್ದಕ್ಕಾಗಿ ನಾವು ಅವರಿಗೆ ಬಹಳ ಆಭಾರಿಯಾಗಿದ್ದೇವೆ. ಈ ಮಹನೀಯರು ಶಿವಾನುಭವ ಕ್ರೋಢೀಸ್ಕರ ಪ್ರೀತಿಯನ್ನು ವಹಿಸಿ ಯಾವಾಗಲೂ ನಮಗೆ ಸಹಾಯ ಮಾಡುತ್ತಲಿರುವರು. ಇವರ ಅನುಕರಣವನ್ನು ಸಮಾಜದವರು ಮಾಡಿದ್ದಾದರೆ ಗ್ರಂಥ ಸಂಶೋಧನ ಮತ್ತು ಗ್ರಂಥ ಪ್ರಕಟನೆಯ ಮಹತ್ವದ ಕಾರ್ಯವು ತೀವ್ರವಾಗಿ ಆಗುವದಲ್ಲದೆ ಈ ಕಾರ್ಯ ಮಾಡುವವರಿಗೂ ಪ್ರೋತ್ಸಾಹ ಬಾಗುವದು. ಶಿವಾನುಭವ ಪತ್ರಿಕೆಯು ವೀರಶೈವ ಸಂಸ್ಕೃತಿಯ ಒಂದು ವಿಶ್ವಕೋಶವಂತಿದೆ ಎಂಬದನ್ನು ವಾಚಕರು ಲಕ್ಷಿಸಬೇಕೆಂದು ನಮ್ಮ ಸವಿನಯ ಪ್ರಾರ್ಥನೆ ಇದೆ.

ಶ್ರೀಯುತ ಎಮ್. ಎನ್. ಶಿವಪ್ಪ ಚಿಕ್ಕಪೇಟೆ ಬೆಂಗಳೂರ ಇವರು ತಮ್ಮ ಸಹೋದರರ ಲಗ್ನಕಾಲದಲ್ಲಿ ೧ ರೂಪಾಯಿ ಮತ್ತು ಶ್ರೀ ಸಿದ್ಧರಾಮೇಶ್ವರ ಸ್ವಾಮಿ ಮು. ಬೆಲವಂತರ ಇವರು ತಮ್ಮ ತಂದೆಯವರಾದ ಚನ್ನಬಸವೇಶ್ವರ ಸ್ವಾಮಿಗಳು ಲಿಂಗೈಕ್ಯರಾದಾಗ್ಗೆ ೨ ರೂಪಾಯಿಗಳನ್ನು ಶಿವಾನುಭವ ಪತ್ರಿಕೆಯ ಪೋಷಣ ದ್ರವ್ಯವಾಗಿ ಕಳಿಸಿದ್ದಕ್ಕೆ ನಾವು ಈ ಮಹನೀಯರಿಗೆ ತುಂಬಾ ಆಭಾರಿಯಾಗಿದ್ದೇವೆ.

ಚನ್ನಬಸವೇಶ್ವರ ಸ್ವಾಮಿಗಳವರ ಲಿಂಗೈಕ್ಯವು.

ಇವರು ತಾರೀಖು ೨೮-೬-೩೫ನೇ ದಿವಸ ಬೆಲವಂತರ ಗ್ರಾಮದಲ್ಲಿ ತಮ್ಮ ೯೫ನೇ ವಯಸ್ಸಿನಲ್ಲಿ ಲಿಂಗೈಕ್ಯರಾದ ಬಗ್ಗೆ ನಾವು ಬಹಳ ವಿಷಾದಿಸುತ್ತೇವೆ. ಇವರು ಅತ್ಯಂತ ಧಾರ್ಮಿಕ ವೃತ್ತಿಯವರೂ ಸದ್ಗುಣಿಗಳೂ ಆಗಿದ್ದರು. ಇದರಿಂದ ಇವರು ಎಲ್ಲರಿಗೂ ಬಹಳ ಪ್ರಿಯರಾಗಿದ್ದರು. ಶ್ರೀ ಅಥಣಿ ಶಿವಯೋಗಿಗಳೂ, ಸೊಂಡೂರ ಮಹಾರಾಜರೂ ಇವರ ಬಗ್ಗೆ ಅತ್ಯಂತ ಪೂಜ್ಯಭಾವವುಳ್ಳವರಾಗಿದ್ದರು. ಇವರು ಚನ್ನಬಸವೇಶ್ವರ ಗ್ರಂಥ ಮಾಲೆ ಎಂಬ ಹೆಸರಿನಿಂದ ಮಂಗಲ ಸ್ತೋತ್ರಾವಲಿ ಎಂಬ ಗ್ರಂಥವನ್ನು ಪ್ರಕಟಿಸಿರುವರು. ಮತ್ತು ಇನ್ನೂ ಅನೇಕ ಗ್ರಂಥಗಳನ್ನ ಪ್ರಕಟಿಸುವವರಾಗಿದ್ದರು. ಅಷ್ಟರಲ್ಲಿಯೇ ಇವರು ಲಿಂಗೈಕ್ಯರಾದರು. ಇದಕ್ಕೋಸ್ಕರ ನಾವು ಬಹಳ ವಿಷಾದಿಸುತ್ತೇವೆ. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಮಂತ್ರವು ಸಾವಿರವೀ ಮನೆಯಲಿ ಝೇಂಕಾರವು ತಾನಿರ್ಪುದು ಜನುಗದೆ ಸುಸ್ವರಗೈಯುತ ತಾನಾ। ಅನನಯದಿಂ ಮಹಲಿಂಗವೆಯಾಗಿ ಬೆಸೆರಿಯದ ಪಾತಾಳ ಮುಖದಿ। ತಾನಿರುತಲಿ ಶಂತಿಕಲಾದಿನಾಮ ; ವಿಸ್ತರುಪುವೆ ಚಿಚ್ಛಕ್ತಿಗೆ ಒಪ್ಪುವ। ದಿನಪಕೋಟಿ ಪ್ರಭೆ ರೂಪಿಲಿ ಇರ್ದ ವಸುತಯು ಮುಕ್ತಿ ಸಾದಾಖ್ಯದಲಿ ಪುನರಪಿ ಪೊರ್ದವ ಸಂಜ್ಞೆಗಳಿಂದ। ತೊನೆಯುತ ಸದ್ಭಾವದ ಹಸ್ತದೊಳು। ಸಾನುರಾಗದಿ ಸಮರಸಭಕ್ತಿಲಿ। ಏನಾದಿ ತೃಪ್ತಿಯನರ್ಪಿಸುತಲ್ಲಿ। ನ್ಯೂನವಿರದೆ ಜ್ಯೋತಿಯ ಆಕಾರವು ನೀನರಿ ಐಕ್ಯನ ಸ್ಥಲವಿದು ಎಂದ ॥೬॥

ಗುರುದಯವಾಗಲ್। ಮರೆದಿರದೊಪ್ಪೀಗಲ್ಕರಿಷಡ್ವರ್ಗಗಳೆರದ್ದಾಳಾಗಲ್ ಪರತರಕೆಳಸಲ್ಕುರುಹಿದು ತೋರಲ್ ಬೆರೆದೊಕ್ಕರಸಲ್ ನರಭಾವರಿಯಲ್ ಪರಿಭವಕೆಡಿಸಲ್ಕರಿವುರೆ ನಿಲಲ್ಸುರ ರೋಲೈಸಲ್ಸುಖ ಚಿರವಾಗಲ್ಸುರಿ ಮಿಗಿಲಿಲ್ಲದನೇ ವರಗುರುವೆಂದರಿಯುತ ನಂಬಲಸ್ಥಿರವಿಂತಾಗಲ್ಪರಿಕಿಸಿ ದೇಹದೊಳರಸುತ ನೋಡಲ್ಬರದಿ ಚಕ್ರಗಳರವಿಂತೆನುತ ಪರಮಮುಕ್ಷುಗಳರಿವರು ಎಂಬೀ ಭರವಸೆಯಿಂದಾ ನರಿತಷ್ಟ ಸುರಿದೆ ಗುರಿಯಲಿ ಮಗ್ನರಾಗುವೆನೆಂಬುವರಿದ ನರಿಯಲ್ಬೇರಿಲ್ಲವೆಂಬ ಬಹು ಯೋಗಗಳರಿಯಲ್ಕರಿದಲ್ಲವು ಇದು ಸಿದ್ಧಿಸೆ ಕರಕರಕಾಡುವ ನಾಯೆಯನೀಗುವ ಕುರುಹಿದು ಎನ್ನುತ ಸೋಮೆಕಟ್ಟೆ ಗುರುವರ ಪೇಳಿದ ಪರಿಯಿದು ಅದರಿಂ ಒಲಿದೆನು ಮಲ್ಲನ ಪುರದೊಳಗಿದನು ॥೭॥

ಸೊಣವಿನ ಕೆರೆಯ ವರ್ಣನೆ.

ರಾಗ ಲಾವಣಿ.

ಸಾರತರ ಭಾರತಖಂಡದಿ, ಭೂನಾರಿ ವದನದಂತೆ
ತೋರುವ ವಿಷ್ಣಿಕ ಪುರವನು ವರ್ಣಿಪರಾರಪಾರವಂತೆ ॥ ಪ ॥

ಪುರ ಹೊರ ಭಾಗದಿ ಸುರನದಿಯಂದದಿ ಕೆರೆಯು ನಿರ್ಮಲಂತೆ।
ಬಯುವ ತೊರೆ ಕಾಲುವೆ ಕಾವೇರಿ ಸರಿ ಸಮಾನುದಯಿಂತೆ ॥
ಪರಿ ಶೋಭಿಪ ಉಪವನದ ಸೊಬಗು ಸಿರಿಧರನ ಮೋಹಿಪಂತೆ।
ಪರ ಕದಳಿಯು ನಾರಂಗ, ಕ್ರಮುಕ ಫಲವೆರಸಿ ಸಾರ್ವುವಂತೆ ॥ ೧ ॥

ಚೂತ ಫಲ ಸುದಾಡಿಮ ಗಜ ನಿಂಬೆಯು ಕಾತುಫಲೀತುವಂತೆ ।
ಸಾತಿಶಯದಫಲ ಪುಷ್ಪಗಳವೇ, ಸುತ್ರಾಮ ಕಾಂಡದಂತೆ ॥
ಭೂತಳ ತಿರುಗುವ ಯಾಚಕರನು ತಾ ಪ್ರೀತಿಲಿ ಕರೆವಂತೆ ।
ಓತು ಬೆಳೆದ ರಸದಾಳಿ ಗರಿಯು ಕರವಾತ ಬೀಸಲಂತೆ ॥ ೨ ॥

ತೆನೆವಾಲ್ಕುಡಿಯಲ್ಕಿರಗಿ ಮರಳುವ ಗಿಳಿವಿಂಡಿನ ಸೊಂಪು ।
ತೊನೆದಾಡುತ ಬೆಳೆ ಬಾಗಿಹ ರಾಜಾನ್ನಗೊನೆಯಂಜನವೆಂಪು ॥
ಅನಿಮಿಷಾಧಿಪನ ಪುರ ಸಾದೃಶ್ಯವೆ ಘನವ್ರತರಲ್ಲಿ ಗುಂಪು ।
ಇನನೊಡಗೂಡುವ ಕಮಲಮುಖಿಯವೈರ್ಪುನುಗು
ಗಂಧ ಕಂಪು ॥ ೩ ॥

ಕೊತ್ತಳ ಹುಲಿಮುಖ ಕೋಟಿ ತೆನೆಯು ವಿಚಿತ್ರ ಬಾಗಿಲಿಂದ ।
ರತ್ನಗಳೆದೆದಲ್ಲಣದತಿ ವೀರರ ಮೊತ್ತ ಸುಳಿವ ಚಂದ ॥
ಜತ್ತುಗೊಂಡು ಹರ್ಮ್ಯದ ಗೃಹಗಳು ಸಾಲ್ತೆತ್ತುವು ಚಲುವಿಂದ ।
ಮತ್ತು ವೀಧಿಗಳು ಸಿಂಗರ ದಳಿದುವು ನಿತ್ಯೋತ್ಸವದಿಂದ ॥ ೪ ॥

ಗಗನಜ ಶೃಂಗಾರದಂತೆ ಮಿಗಿಲಾಗಿಹ ಗೋಪುರವು ।
ಖಗಗಳ್ ಪಾರಲು ನಿಲುಕದಂತೆ ನಿಗುರಿರುವ ಸ್ತಂಭದಿರವು ॥
ಝಗಝಗಿಸುವ ರತ್ನದ ದೀಪ್ತಿಲಿನವರಂಗತಿ ಶೋಭನವು ।
ಭಗಣವು ಸಾಲ್ಗೈದುವೊ ಎನೆ ಮೌಕ್ತಿಕ ಬಿಗಿದ ಕುಚ್ಚಿ ನಿರವು ॥ ೫ ॥

ಅಧ್ಯಯನ ಪದ ಪಾಳಿ ಕ್ರಮದಿ ಪ್ರಸಿದ್ಧರಿರುವರಲ್ಲಿ ।
ಉದಾತ್ತ ಸ್ಫುರಿತಪ್ರಚಯ ಅನುದಾತ್ತ ಸ್ವರವು ನಾಲ್ವರಲ್ಲಿ ॥
ನಿರ್ಧರದಲಿ ಪರಮಾತ್ಮನ ಸೇವಿಸುತಿರ್ದರೆಲ್ಲಾ ಇಲ್ಲಿ ।
ಸದ್ಗುಣಯುಕ್ತರು ಭಗವದ್ಭಕ್ತರು ಸರ್ವ ದ್ವಿಜರು ಅಲ್ಲಿ ॥ ೬ ॥

ಚತುರಾನನ ಸಮವಾದಿಪ ವಿಪ್ರಪ್ರಸರವನೇನೆಂಬೆ ।
ಶತಮುಖಮಂತ್ರಿಗೆ ಸಮಪುರೋಹಿತ ಶತಿಗಳೂರತುಂಬೆ ॥
ಅತಿ ಭಕ್ತಿಲಿ ಶ್ರುತಿಯೋದಿಪ ಆರ್ಯೋತ್ತಮರ ಸಂದಣಿಂದೆ ।
ಸತತವು ಹವಿರಗ್ನಿಯು ಮಂತ್ರದಿ ಸಾಹಸರು ವಿಪ್ರರೆಂಬೆ ॥ ೭ ॥

ಅರಿವಿಜಯದಿ ದಾನಂಗಳಲಿ ದುರ್ಧರರಾಗುತಲಿನ್ನು ।
ಪರಿಪಾಲಿಸಿ ಪ್ರಜೆಗಳ ಕುಲಧರ್ಮವ ನೆರವೇರಿಸಿ ತಾನು ॥

ವರಾವೃತರಾಣತಿಯೊಳು ಕರುಣವ ಬೆರಸಿ ತೋರುತೀನು ।
ಪರಭಯ ಪಾಪವು ಪರ್ದಿಸದಾಳುವ ಅರಸುಗಳಿಹರಿನ್ನು ॥ ೮ ॥

ಚಿನ್ನ ಬಣ್ಣವು ತೂಕ ಸ್ರವಾಣವು ಧಾನ್ಯಗಳತೆಗಳ ।
ನ್ಯಾಯವಾಗಿಯೆ ರತ್ನಪರೀಕ್ಷೆಗಳನ್ನು ತಿಳಿದು ಪವಳ ॥
ಚಿನ್ನ ಕಣಜ ಒಲ್ಪಜ್ಜಿಗೆರತಿಯಂದೆನ್ನುತಿಡುತ ಕೊಳ್ವ ।
ಸನ್ನುತದಿಂವಿನ ಮಣಿಯ ಭಜಿಪ ಸಂಪನ್ನ ವಣಿಜರ್ವಿಪುಳ ॥ ೯ ॥

ಗೋಪಾಲನೆ ಧರಣಿಯ ಭಕ್ತಿಯು ಕೃಷಿವ್ಯಾಪಕ ತರುವಾಗಿ ।
ರೂಪು ರುಚಿಯ ಭೇದವ ಭಾವಿಸದತಿ ಪಾಸವರ್ಜಿತರಾಗಿ ॥
ಶೋಷವಿರದೆ ದೃಢ ಚಿತ್ತದಿ ಸರ್ವನು ಕಾಪಾಡುವ ತ್ಯಾಗಿ ।
ಭೂಪನೊಳಗೆ ಸರಿಭಾಗಗೊಂಬ ಕುಲದೀಪಕರಿಹರಾಗಿ ॥ ೧೦ ॥

ಅಷ್ಟಭೇದದೊಳು ವರ್ತಿಪ ಗುರುಕರುಣಾಷ್ಟಲಿಂಗ ತ್ರಿವಿಧ ।
ಶಿಷ್ಟ ಭಸಿತ ಸಪ್ತಕರುದ್ರಾಕ್ಷೆಗಳಷ್ಟ ವಿಧಿಯ ಕ್ರಮದ ॥
ಶ್ರೇಷ್ಠ ಮೂಲ ಪಂಚಾಕ್ಷರಿ ಪಂಚಕರಿಷ್ಟವರಿವ ಜಪದ ।
ಕಷ್ಟವಳಿಪ ತೀರ್ಥದ ದಶಭೇದದ ಸಿಷ್ಯೆ ಏಕದಶದ ॥ ೧೧ ॥

ಸ್ವಯ ಚರಪರವೆಂದರಿದು ಭಕ್ತಿ ನಯವೆರಸಿ ತೀವಿದಂಥ ।
ಕಯ ಕೋಡಿಲ್ಲದೆ ಶಿವನ ಕಾಯದೊಳು ಬೆರಸಿ ತೋರುವಂಥ ॥
ಸಿಯುಮ ಕರ್ಮ ಲೋಕಾಂತವ ಪಂಗಿಗೆ ನಿಮಿರ್ದು ಬಾಳುವಂಥ ।
ಲಯವಾಗದ ಶಿವ ಧರ್ಮರತಿಯ ನತಿಭಯದಿ ಪಾಲಿಪಂಥ ॥ ೧೨ ॥

ನಂದಿ ಸ್ಕಾಂದ ಲೈಂಗ್ಯಾದಿ ಪದ್ಮ ನೆಂದೇಳ್ವ ಪುರಾಣಕರು ।
ಚಂದದಿ ವಾತುಲ ಭೀಮ ಮುಖ್ಯ ಸಿದ್ಧಾಗಮ ಸಾರಕರು ॥
ಕುಂದಿಲ್ಲದ ಮಹಾ ವಾಕ್ಯ ಕೌಸ್ತುಭ ಛಂದಶಾಸ್ತ್ರಯುತರಾ ।
ನಂದ ವೀರಶೈವರು ಭೂರುದ್ರರ ಅಂದದೊಳೊಪ್ಪಿಹರು ॥ ೧೩ ॥

ಸರ್ವ ಮತವು ನಿಜಧರ್ಮವರ್ತಿಗಳು ಸರ್ವಕಾಲ ಶುಚಿಗಳ್ ।
ಅರುವಾಯದಿ ಹರಿ ಹರರ ಭಜನೆ ಯುಳಿದೋರ್ವರಿಲ್ಲನೋಡಲ್ ॥
ಸರ್ವ ಅತಿಥಿ ಸತ್ಕಾರ ವಯೋಗುಣ ತೋರ್ವುದಲ್ಲಿ ಈಗಳ್ ।
ಉರ್ವಿಗೆ ಪೊಸತೆನೆ ಝಸವಾಂತೆಸೆವುದು ವೀರ್ವಕೀರ್ತಿ ಮುದ
ದೋಳ್ ॥ ೧೪ ॥

ಆ ನಗರದ ನಾರಿಯರೆಲ್ಲರು ಅಭಿಮಾನ ಸುಗುಣಯುತಿಯರ್ ।
ನ್ಯೂನವಿಲ್ಲ ಪತಿಸೇವೆಯೊಳನುದಿನ ನಾಡೆ ಅರುಂಧತಿಯರ್ ॥
ಏನನೆಂಬೆ ರೂಪಾತಿಶಯಕೆ ರತಿಯೇಕೆ ಎಂಬುವರಿಲ್ಲವರ್ ।
ಸಾನುರಾಗವಲಿ ಬಂಧುವರ್ಗ ಗುರುಸತ್ಯದೊಲುಮೆ ರತಿಯರ್ ॥೧೫॥

ಅರವಟಿಗೆಯು ಪೂವೋಟ ಛತ್ರಬಲ್ಕರನೆಸೆದಿಹ ಪೂವಲ್ಲಿ ।
ಪರಿಪರಿ ಭಕ್ಷ್ಯವು ನಾರಿ ಪೂವುಗಳ್ ಕರೆದು ಧಾತ್ರಿಯಲ್ಲಿ ॥
ತಿರುಗುವ ಜನಕುಪಚಾರ ಮಾಳ್ಪುದಾನರಿಯೆನು ಇನ್ನೆಲ್ಲಿ ।
ಅರರೆ ಇವರೊಳಾಶ್ಚರ್ಯವ ಇನ್ನೊಂದೊರೆವೆನು ಅರ್ಥಿಯಲಿ ॥೧೬॥

ಪುಟ ಭೇದನ ಸುದತಿಯ ಮಾಂಗಲ್ಯವೆ ದಿಟವಿದು ಎಂಬಂತೆ ।
ಉಟವಿಯ ಸಿದ್ಧೇಶ್ವರನ ಮಠವು ದಿಕ್ತಟದೊಳು ಘನವಂತೆ ॥
ನಿಟಿಲಾಂಬಕ ಸುಕ್ಷೇತ್ರವಾಗಿ ಪಟುತರದಿ ಕಾಣ್ಬುದಂತೆ ।
ಸಟೆಯಲ್ಲವು ರಜತಾದ್ರಿವೊಲು ಉತ್ಕಟದಿ ತೋರ್ಪುದಿಂತೆ ॥೧೭॥

ನೆಲ್ಲಿ ಬಿಲ್ವ ಗುಗ್ಗಳ ಗಂಧದ ತರುವೆಲ್ಲ ಕುಸುಮಮಯದಿ ।
ಪಲ್ಲವಿಸುತಲಿಹವಲ್ಲದೆ ಕೊಳಗಳು ಎಲ್ಲ ಕಮಲಮಯದಿ ॥
ಸೊಲ್ಲ ನಿಳಯ ಸ್ವರ ಕೋಗಿಲೆ ಕುಂತಳಗಳನು ಭ್ರಮರವಿಡಿದೀ ।
ನಲ್ಲರ ಹೆದರಿಸಿದಪೊ ಎನೆ ಸ್ತ್ರೀಯರು ಅಲ್ಲಿ ಗೈದರ್ ಭಯದಿ ॥೧೮॥

ಈಶ ಮತ್ಸರಭಿಲಾಷೆಯನೀಯಲ್ ವಾಸವಾದನೆಂಬೋಲ್ ।
ಘಾಸುರ ಸದ್ಗುರು ಮೂರ್ತಿಮಹಿಮೆ ಬಹು ದೇಶದವರು ಅರಿಯಲ್ ॥
ದೋಷ ಕಳೆವರ್ಪ್ಪತರಾಶೆಯಲ್ಕೆಲದರ್ಶಸೋಹದರಿಕೆಯಾಗಲ್ ।
ನಾಶ ರಹಿತನನು ಓಲೈಸಲು ಬಹರೇ ಸೋಮಂದಿ ನೋಡಲ್ ॥೧೯॥

ಸಕಲ ವರ್ಣದವರ ಭಕುತಿಯಿಂದ ಸುಖವಯನ ಸೇವೆಗೈದು ।
ಸಿಪಿಳ ದುರಿತ ಕಡೆಗಾಣಿಪ ಶಕ್ತಿಯ ಯುಕುತಿಯೆಲ್ಲ ತಿಳಿದು ॥
ಅಕಳಂಕನ ದರುಶನ ಮಾತ್ರದಿ ಅಹಂಕಾರವೆಲ್ಲವಳಿದು ।
ವಿಕಳತೆತನ ಪೋಗುತಲವರ್ಗತಿ ವಿಶ್ವಾಸ ಸಾತ್ವಿಕಹುದು ॥೨೦॥

ಪ್ರೋಮದಂತೆ ಬ್ರಾಹ್ಮಣ, ದಿನಮಣಿಯಂಥ ಬಲುಕ್ಷತ್ರಿಯರು ।
ಆ ಮಹಾಸಾಗರದಂತೆ ವೈಶ್ಯ, ವಸುಧಾತೆರ ಶೂದ್ರಕರು ॥

ಕ್ಷೀರವೈದೆ ಕೊಂಡಾಡುತ ಸೇವಿಪುದೇನೆಂಬೆನು ಇವರ ।
ಸೇರುವಿಡಿದು ನಿಜಸತಿಯರ್ಪೈದುತಿಹ ರಾಮಣೀಯ ಕವರ ॥೨೧॥

ಬಡತನದ ಮುಳ್ಳೊಳೆಡೆಗೊಂಡಿತು ಮೃಡನಡಿಯ ಅರ್ಚಿಸಿಂದು ।
ಕಮಲಯಲಪ್ಪುದ ಮಾಳ್ಪೆವೆಂದು ನಿಡು ಜಡೆಯ ತಾಳಿ ನಿಂದು ॥
ಜಡಜ ಕುಮುದ ಚಂಪಕ ಮಲ್ಲಿಗೆ ಸಡಗರದಿ ಕೇತಕಿಂದು ।
ಮುಡದಿಯುಂತಾಂತು ವಲ್ಲಭ ಶಿವಲಿಂಗಕೆ ತಡೆಯಲೀಯಲೆಂದು ॥೨೨॥

ಶಿವಕರುಣಿಸಲಾ ವನಿತೆಯರಧರಕೆ ಸವೆಯದವೃತವಾಯ್ತು ।
ಪವಣಿಲ್ಲದ ಗೌರವ ಸುಖಸಾಧ್ಯಕೆ ಗಮನ ಗಜವದಾಯ್ತು ॥
ಕವಲಿಲ್ಲದೆ ಪತಿದೈವನೆಂಬ ಸದ್ಗುಣ ಬಲ ಸ್ಥಿರವಾಯ್ತು ।
ಬವಣೆ ಬೇಡ ನಮಗಿನ್ನೆನುತಿಹ ಸತಿ ನಿನಹ ಕಾಣಲಾಯ್ತು ॥೨೩॥

ಚರಿಪ ಹಂಸಗಳಸ್ಥಿರ ನಿಲಯವೊ ಸುರುಚಿರದಾಗಸದಿರವೊ ।
ವರಮಂಗಲ ಕವಿ ವಂದಿಪ ಹರಿ ಶೋಭಿತ ಗುರು ಮಂಡಲವೊ ॥
ವರಮಾವೃತರಸಸೆರಕದ ತೇಜವೊ ಪರಿಕರ ಶೃಂಗಾರವೊ ।
ಕರುಣಿಗಳರಸನ ಯೋಗಶಾಲಿ ಕಣ್ಣರಿಯದ ವೈಭವವೊ ॥೨೪॥

ವೃಷಭನಂತೆ ಅಡಿನಾಲ್ಕರ ಮೇಲೆ ಮಿಥುನಿಸಿದ ಸಿಂಹಪೀಠ ।
ಅಸಮಕಟಕ ಚಾತುರ್ಬಲ ಕಂಭದ ಮಿಸುಪ ಮೀನವಾಟ ॥
ಖಿಸಜಚಿತ್ರದನುವಿಲಿ ತೂಲಾಯದಿ ಮಿಸುನಿಕೆಲಸಕೂಟ ।
ರಸನೆಗಳವೆಮಕರಾಂಕನ ವೈರಿ ಮಂಡಿಸಲತಿನಾಗಾಟ ॥೨೫॥

ಈ ಮಂಟಪದೊಳು ಕನ್ಯಾತುಲಾಗ್ರಣಿ ಆ ಮಹಾಶಾಂಭವಿಯು ।
ನೇಮಕ ಲಕ್ಷ ತ್ರಿವಿಧ ಅನಿಮೇಷದಿ ಸ್ವಾಮಿಯಿಪ ಬಗೆಯು ॥
ತಾಮಸರಿವರೆ ಕುಂಭಕದಲಿ ಚಿನ್ಮಯನ ಸುಖದ ಪರಿಯ ।
ನಾವು ದೂರನಿಹಸೀಮೆಲಿ ವೃಶ್ಚಿಕ ನೋವದಿಲ್ಲಖರೆಯ ॥೨೬॥

ಅಂಗಗುಣಗಳನಲಂಗೆ ಇತ್ತು ಕರಣಂಗಳೆಲ್ಲ ಸಶ್ತು ;
ಸಂಗೆಯಮುನೆ ಸಂಗದ ಶಬ್ದದಿ ಬೆಳದಿಂಗಳಲ್ಲಿ ಚಿತ್ತು ॥
ತುಂಗಮನದಹವ್ಮಳಿದು ನಿಜದೊಳಾ ಲಿಂಗಸೌಖ್ಯವೆತ್ತು ।
ಮಂಗಳಮಯ ಪರಿಪೂರ್ಣವಸ್ತು ಬೆಡಂಗಿಗೀಗ ಗೊತ್ತು ॥೨೭॥

ಇಂಥ ಮಹಿಮನಾದ್ಯಂತವನು ನಾನೆಂತ್ಹೊಗಳುವೆ ನಮನು।
ಸಂತಸಗೊಳ್ವರೊ, ಗೊಳ್ವರೊ ವಿಬುಧರು ಚಿಂತೆಯಾಕೆ ಬಿಡುವಾ॥
ಕಾಂತಕಾಂತ ಶ್ರೀಗುರುವ ಭಜಿಸುವರಿಗಿಂತು ತೋರ್ಪ ನಿಜವಾ।
ದ್ಯಂತವಿರಲಿ ಶುಭ ಸನ್ನಿಧಿಯೊಳು ಜಗಜಂತುವೆಲ್ಲ ಪರಮು॥ ೨೮॥

ಅವನಿಯೆಲ್ಲ ಪಾವನನೈದಿತು ಜನಜವನಗೆಲುವ ವರವ।
ಲವಲವಿಕೆಯೊಳಾಂತಿಹ ಪುಣ್ಯದ ಬೆಳವಿಗೆಯೊಳು ಪೊರೆವ॥
ವಿವಿಧ ಕರ್ಮವ್ಹಂಗಿರದೆ ನಿಜದೊಳಾವಿದಿತಂವಾದಪದವ।
ಹವಣನರಿಯೆವರ್ಗಿಪೊಡೆ ತಪೋಧನ ಅವರಿಗಿತ್ತ ವರವ॥ ೨೯॥

ಶಿವನಿಗಧಿಕ ಗುರುವೆಂಬ ಶಾಸ್ತ್ರಸಮ್ಮತಿಶಿರದಂತಿರಲು।
ಭವವ ಗೆಲಲು ಉದ್ಯೋಗಿಸಿ ಆರ್ಯನ ಭಜಿಸೆ ಇರುಳು ಹಗಲು॥
ಸುವಿಮಲ ಮೂರ್ತಿಯು ಸೋಮೆಕಟ್ಟಿ ಶುಭಭವನ ಚರಣ ವಿಗಿಲು।
ಸವೆಯದ ಸುಖಮುಲ್ಲನಪುರನಿಗೆ ಸಂಭವಿಸಿ ತೋರ್ಪುದೆನಲು॥ ೩೦॥

---

(೩)

ಶಿವನಿಗೆ ಶಿವೆಗೆ ವಂದಿಸುವೆ
ಶಿವಶರಣರೊಳಿಮಗೊಲಿದವರ ವರ್ಣಿಸುವೆ॥ ಪ॥

ಹರಿಯಜರರಿಯದ ಉರುತರ ಮೂರ್ತಿಯ
ಕರಮನ ಭಾವದೊಳರ್ಚಿಸುತ
ಸಿರಿಗೊಲ್ಲದರೆ ತನ್ನ ಗುರುತಾನಾವನೆಯೀವ
ಪರಮ ಪರಾತ್ಪರಗೆರಗುವೆನು॥ ೧॥

ಯೋಗಿಣಿಯಾಗಿ ತಾ ಭೋಗಭಾಗ್ಯವನಿತ್ತು
ರಾಗವಿರಾಗ ತೇಜವನಾನುತಿ
ಭೋಗಿಭೂಷನ ವಾನುಭಾಗಿಯೆನಿಸಿ ಭಯ
ನೀಗಿಪ ಮಾತೃಪದಕೆ ಮಣಿವೆ॥ ೨॥

ಗೋತ್ರದ ಕರ್ತರ ಸ್ತೋತ್ರಕೆ ಇಂಬಿಲ್ಲ
ಪಾತ್ರವರಿತುಹುದುಗಿಸಿದಿಲ್ಲಿ

ಚಾತ್ರೀಶಧರನಂತ ರೇಣುಕ ವಂಶದ
ಮಾತ್ರಪ್ಪಲ್ಲಭನೆಂದು ನವಿಸುವೆ॥ ೩॥

ಮರುಳಾಚಾರ್ಯಗೆ ವರಪಂಡಿತಾರ್ಯಗೆ
ಪುರವಿಲ್ಲದಾತ್ಮೈಕೋರಾಮಯ್ಯಗೆ
ಸುರರಿಯದ ಸುರುಚಿರ ವೀರಶೈವೋ
ದ್ಧರರೆಂಮ ಧರಣಿಲಿ ಪೊಡಮಡುವೆ॥ ೪॥

ಚತುರ ಸಿಂಹಾಸನ ಪತಿಗಳಿವರು ಪರ
ಗತಿಗೊಡೆಯರು ಎಂದು ಪ್ರಾರ್ಥಿಸುವೆ
ಕ್ಷಿತಿಯೊಳಾರಾಧ್ಯ ಸಂತತಿ ಶುಭವೆನಲೆನ
ಗತಿಶಯವೆಂದು ಭಜನೆಗೊಂಡೆ॥ ೫॥

ಭಕ್ತಿಯಂಗನೆಯನು ರಕ್ತಿಯಿಂದಲಿಕೂಡಿ
ಮುಕ್ತಿಗೊಡೆಯನಾದ ಬಸವೇಶ
ಚಿತ್ತನ * ದೊಳಗೇ ಚಿನ್ಮಯನಾದ ಷಟ್‌ಸ್ಥಲ
ವ್ಯಕ್ತಚನ್ನಣ್ಣನಿಗೆ ಶರಣೆಂಬೆ॥ ೬॥

ಅಜಗಣ್ಣನಂಘ್ರಿಗೆ ನಿಜಗುಣದೇವಗೆ
ತ್ರಿಗಜಪೂಜ್ಯ ಪ್ರಭುರಾಯನಿಗೆ
ಸುಜನ ಶಿರೋಮಣಿ ಮಡಿವಾಳಮುಖ್ಯರ
ನಿಜವಾದಪದ್ಮಕಾನತನಪ್ಪೆ॥ ೭॥

ಅಷ್ಟಾಂಗ ಯೋಗದಿ ವೃಷ್ಟಿಗಳನು ತಾಳಿ
ಅಷ್ಟಸಿದ್ಧಿಗಳೆಲ್ಲ ಸಹಾಯವಾಗಿ
ಕಷ್ಟವಳಿದು ಕರದಿಷ್ಟದಿ ನೆಲೆನೊಂಡ
ಶ್ರೇಷ್ಠ ಸಿದ್ಧರಾಮ ಸಲಹಲಿ॥ ೮॥

ಲಕ್ಷದಮೇಲೆ ತೊಂಭತ್ತಾರುಸಾವಿರ
ಸೋಪ್ಪದಾಯಕರಿಗೆ ಮಗನೆಂಬೆ

---

* ಪದ್ಯ ೬ ಚಿತ್ತನ=ಚಿಕ್ಕತನ (ಸಣ್ಣವಯಸ್ಸಿನಲ್ಲಿ)

ಅಕ್ಷಯನೊಳು ಅಧಿಕರು ಅರುವತ್ತುಮೂ
ರಕ್ಷರಾತ್ಮಕರಡಿ ಹೊರಳುವೆ ॥ ೯ ॥

ಜಂಗಮ ರೂಪಿಲಿ ಜಗದೊಳು ಚರಿಸಿತಾ
ಜಂಗುಳಿ ದೈವದ ಧವನಾಗಿ
ಅಂಗಜನುರುಹಿದ ಮಂಗಳಮಯಸಿದ್ಧ
ಲಿಂಗನ ಬಲಗೊಂಡು ಬಮುಕುವೆ ॥ ೧೦ ॥

ಭಾಸುರ ವಿದ್ಯದಿ ಭೂಸುರಾಗ್ರಣಿಸರ್ವ
ದೋಷಗಳೆದು ಸಾಸಿರದಳದ
ಕೇಸರದೊಳು ಪರಮೇಶನ ಬೆರಸಿದ
ಅಸು ನಂಜುಂಡ ಯನ್ನೊಳಗಿರಲಿ ॥ ೧೧ ॥

ಹರ ತನ್ನ ಶರಣರ್ಗೆ ಸರಿಬಾರೆನೆನ್ನುತ
ಕರೆದು ಘೋಷಿಸಿಕೊಂಡ ಕಲಿಗಣನ
ಇರವೆಂತೊ ಅತನ ಚರಣರಕ್ಷೆಯೊಳಿನ್ನ
ತಿರವನೊರೆಸಿದರೆ ಸುಖಿಯಾದೆ ॥ ೧೨ ॥

ತರಣಿ ಕಿರಣಗಳಿಗೆರವಿಲ್ಲದಂತೆಯೆ
ಪರಿಪರಿ ಪ್ರಮಥರು ಹರಲೀಲೆ
ಧರಿಸಿ ಲೋಕದೊಳವತರಿಸಿ ಮುಕ್ತಿಯ ಬೀಜ
ತರಿಸಲ್ಕೆತಂದ ಅಭವರು ಎಂಬೆ ॥ ೧೩ ॥

ಬಗೆಬಗೆಯಿಂದಲಿ ಬಣ್ಣಿಸಿ ಬಗೆದವ
ರುಗುಳಿದ ತಂಬುಲ ಸವಿಯಿಂದ
ಬಿಗುರದು ಭವವಿನ್ನು ಚಿದ್ಘನ ಮಹಿಮರ
ಪೊಗಳುವಂತಾಗಿ ಪಾವನನಾದೆ ॥ ೧೪ ॥

ಎಲ್ಲರ ಕೃಪೆಯಿಂದ ಮಲ್ಲನಪುರದೊಳು
ಸೊಲ್ಲಿಸಿದೆನು ಸೋಮೆಯ ಕಟ್ಟೆ
ನಲ್ಲಸೊಲಿದು ಮನದೊಲ್ಮೆಯನಾಂತಿರೆ
ಇಲ್ಲಿ ಸಾಷ್ಟಾಂಗ ಪ್ರಣಾಮೆಂದೆ ॥ ೧೫ ॥

ವಚನ:— ೬೬. ಗುರುಲಿಂಗ ಜಂಗಮವೇ ಶಿವನೆಂದರಿದು ಮರೆವನು ಶಿವಭಕ್ತನೇ? ಅಲ್ಲ. ಶಿವಭಕ್ತನು ಅರಿದ ಬಳಿಕ ಮರೆಯನು. ಅರಿದು ಮರೆವನು ಮದ್ದುಗುಣಿಕೆಯ ಮೆದ್ದವನು ಮದ್ಯಮಾಂಸವನು ಸೇವಿಸಿದವನು ಅರಿದು ಮರೆದವನು ಅಜ್ಞಾನಿಗಳ ಸಂಗವ ಮಾಡಿದವನು ಶ್ವಾನನ ಮಿತ್ರನು. ಅವಂದಿರುಗಳಿಗೆ ಅರಿವು ಮರವೆಯು ಸಹಜವಾದ ಕಾರಣ, ಅರಿದು ಮರೆವನಲ್ಲ ಶಿವಭಕ್ತನು. ಮರೆದು ಅರಿವನಲ್ಲ ಶಿವಭಕ್ತನು. ನಂಬುವನಲ್ಲ ಶಿವಭಕ್ತನು. ನಂಬುಗೆಗೆಡುವನಲ್ಲ ಶಿವಭಕ್ತನು. ವಿಶ್ವಾಸವ ಮಾಡುವನಲ್ಲ ಶಿವಭಕ್ತನು. ಅವಿಶ್ವಾಸವ ಮಾಡುವನಲ್ಲ ಶಿವಭಕ್ತನು ಮರೆಡೆಯು ಅಮರೆದವರಂತೆ, ಅರಿದಡೆಯು ಶಿವನಂತೆ ಕಾಣಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವ:— ಶರಣನು ಅರಿದು ಮರೆಯುವನಲ್ಲ. ಅವನು ಅತ್ಯಂತ ದೃಢಭಾವವುಳ್ಳವನು. ಆದ್ದರಿಂದ ಅವನು ಎಂದೂ ಮರೆಯುವಾರನು. ಅವನ ನಡೆನುಡಿಯಲ್ಲಿ ಸದಾಚಾರವು ಪೂರ್ಣವಾಗಿ ನೆಲೆಗೊಂಡಿರುತ್ತದೆ. ಆದ್ದರಿಂದ ಈ ಸ್ಥಿತಿಯು ಅವನಿಗೆ ಪ್ರಾಪ್ತವಾಗಿರುವದು. ಅವನು ನಂಬಿಕೆ, ಅನುನಂಬಿಕೆ, ವಿಶ್ವಾಸ, ಅವಿಶ್ವಾಸ ಇವುಗಳಿಗೆ ಮೀರಿದವನಾಗಿರುವನು. ಇವನು ಕೇವಲ ಶಿವಸ್ವರೂಪನಾಗಿರುವನು.

ವಚನ:— ೬೭. ಪಂಕವಿಲ್ಲದೆ ಕಮಲಕ್ಕೆ ಸುಗಂಧ ಸುಲಲಿತೆ ವೆಂತಪ್ಪುದಯ್ಯ? ಹೊನ್ನು, ಹೆಣ್ಣು, ಮಣ್ಣು ಇಲ್ಲದೆ ದೇವತಾಯೋಗ್ಯ ವೆಂತಪ್ಪುದಯ್ಯ? ಕಮಲ ಪಂಕದಲ್ಲಿ ವರ್ತಿಸಿದಂತೆ ಇಹರು ನಿಮ್ಮ ಶರ ಣರು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವ:— ಅತ್ಯಂತ ಸುಗಂಧವನ್ನು ಬೀರುವ ಕಮಲವು ರಾಡಿ ಯುಳ್ಳಲ್ಲಿಯೇ ಹುಟ್ಟಿ ಬೆಳೆಯುತ್ತದೆ. ಹೊನ್ನು, ಹೆಣ್ಣು, ಮಣ್ಣು ಇವು ಗಳ ವೈಭವದಲ್ಲಿಯೇ ದೇವಾಲಯಗಳು ರಮಣೀಯವಾಗಿ ಕಂಗೊಳಿಸು ತ್ತವೆ. ಅದೇ ಪ್ರಕಾರ ಶರಣರು ಲೌಕಿಕದಲ್ಲಿ ಹುಟ್ಟಿ ಬೆಳೆದರೂ ಕೂಡ ಅವರು ತಮ್ಮ ಸದ್ಗುಣಗಳಿಂದ ಶೋಭೆಯುಳ್ಳವರಾಗಿ ಪ್ರಖ್ಯಾತಿಯನ್ನು ಹೊಂದುತ್ತಾರೆ.

ವಚನ:— ೬೮. ಮನದಲ್ಲಿ ಹವಣನರಿದು ಮನ ನಿರ್ದೇಶವಾಗಿ ದೇಶಾಂತರಿಯಾಗದೆ ಮನ ವಿಕಳವಾಗಿ ಹೊರಪೊಂಟುದು ವೇಷಾಂ

ತರವಯ್ಯಾ. ಕಂಡವರ ಕಾಡಿ ನಿಂದವರ ಬೇಡಿ, ಅಜಾತಿ ಎನ್ನನ್ನ, ಆಚಾರವೆನ್ನದೆ, ಅನಾಚಾರವೆನ್ನದೆ, ತಿರಿದುಂಡು, ವೇಷಡಂಭಕತ್ವದಿಂದ ಲಾಂಛನವ ಹೊತ್ತು ಕಂಡಲ್ಲಿ ಲಜ್ಜೆಗೆಡುವುದು ತನ್ನ ಮುನ್ನಿನ ದುಷ್ಕೃತ ಪೂರ್ವ ಕರ್ಮದ ಫಲವಯ್ಯಾ. ಮತ್ತೆಂತೆಂದಡೆ, ಮನ ನಿರ್ವಾಣವಾಗಿ ವಿವೇಕ ಜ್ಞಾನ ಪರಮಾರ್ಥದಲ್ಲಿ ಪರಿಣಾಮಿಯಾಗಿ ಸುಳಿದು ಸೂತಕಿಯಲ್ಲದೆ, ನಿಂದು ಬದ್ಧನಲ್ಲದೆ, ಸುಜ್ಞಾನದಲ್ಲಿ ಸುಳಿದು, ನಿರ್ಮಲದಲ್ಲಿ ನಿಂದವರು ಅವರು ಪರದೇಶಾಂತರಿಗಳು, ಅವರು ನಿಜನಿವಾಸಿಗಳು. ಆವರುಗಳಿಗೆ ನಮೋ ನಮೋ ಎಂಬೆ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಶರಣರು ಭಿಕ್ಷೆಯನ್ನು ಬೇಡಿ ಹೊಟ್ಟೆ ಹೊರೆದು ಕೊಳ್ಳಬೇಕಲ್ಲದೆ ಇದಕ್ಕೋಸ್ಕರ ಅವರು ದೇಶಾಂತರಿಗಳಾಗಬಾರದು. ಹೀಗೆ ತಿರುಗುತ್ತ ಕಂಡಕಂಡಲ್ಲಿ ಬೇಡುವದು ಲಜ್ಜೆಗೇಡಿತನವು. ಇವರು ಬರೀ ವೇಷ ಡಂಭಕರು. ಹೀಗಿರುವದು ಅವರ ಪೂರ್ವ ಕರ್ಮದ ಫಲ. ಆದರೆ ಶರಣರಾದವರು ಯಾತರಲ್ಲಿಯೂ ಲಪಂಟತ್ವವನ್ನು ಹೊಂದದೆ ವಿವೇಕಜ್ಞಾನದಲ್ಲಿದ್ದುಕೊಂಡು ಸುಜ್ಞಾನದಲ್ಲಿ ಸುಳಿಯುವರು. ಅವರೇ ನಿಜವಾಗಿ ಪರದೇಶಾಂತರಿಗಳು. ಅಂಥವರಿಗೆ ನಾನು ನಮೋ ನಮೋ ಎಂದೆನ್ನುತ್ತೇನೆ ಎಂದು ವಚನಕಾರನು ಹೇಳುತ್ತಾನೆ.

ವೇದಗಳು ದೈವವಲ್ಲ.

ವಿವರಣೆಃ— ವೇದಗಳು ದೇವರೆಂದು ಭಾವಿಸಿ ಜನರು ಅವುಗಳನ್ನು ಪೂಜಿಸುವದುಂಟು. ಆದರೆ ವೇದಗಳು ಜ್ಞಾನವನ್ನು ಕೊಡತಕ್ಕ ಸಾಧನಗಳು ಮಾತ್ರ ಇರುತ್ತವೆ. ಅವುಗಳಿಗೆ ಜನನವಿದೆ. ಅವು ಅಗಸ್ತ್ಯ ವಿಶ್ವಾಮಿತ್ರ ಮೊದಲಾದ ಋಷಿಗಳಿಂದ ರಚಿತವಾದವು. ಜನರು ಈ ವೇದಗಳನ್ನು ಬರೀ ಅಭ್ಯಾಸ ಮಾಡಿ ಪಠನ ಮಾಡುವದರಿಂದ ಮೋಕ್ಷವು ಎಂದಿಗೂ ಲಭಿಸದು. ಆದರೆ ಅವರು ಗುಣ, ಜ್ಞಾನ, ಆಚಾರ ಶೀಲಗಳನ್ನು ಹೊಂದಿ ಸದಾಚಾರಿಗಳಾಗಿದ್ದರೆ ಅವರಿಗೆ ಮೋಕ್ಷವು ಲಭಿಸುವದು. ವಚನಕಾರರು ಈ ತತ್ವಗಳನ್ನು ಸಮರ್ಥಿಸಿ ವೇದಗಳನ್ನು ತಮ್ಮ ವಚನಗಳಲ್ಲಿ ಟೀಕಿಸುವದುಂಟು.

ವಚನಃ— ೬೯. ವೇದಂಗಳು ದೈವನೆಂಬ ವಿಪ್ರರಂತಹ ಮರುಳರುಂಟೆ ತ್ರಿಜಗದಲ್ಲಿ? ವೇದವೆಂಬುದೊಂದು ಸಾಧಕ ಸಂಕಥ್ಯ. ವೇದ ಶ್ರುತಿ ಶ್ವೇತ ಅಗಸ್ತ್ಯ ಮುನಿಗಳಿಂದಾದವು. ಶಬ್ದ ಗಾಂಭೀರ್ಯ ಶ್ರುತಿ ಕೋಟಿಚರಣಕಮಲನೆಂಬ ಲಿಂಗದ ಕೈಯ್ಯಲ್ಲಿ ಕಲಿತ ವೇದಂಗಳು ಅಜ್ಞಾನ ಸಂಗವಾಗಿ ಅಗೋಚರವಾಗಿ ನುಡಿದವು. ಋಗ್ವೇದ "ನಾಹಂ ಕಾರ ಸಂಭವಂ ಬ್ರಹ್ಮತೇಜಃ" ಎಂದುದಾಗಿ, ಯಜುರ್ವೇದ "ನಾಹಂ ಕಾರ ಲಕ್ಷ್ಮೀಪತಿರ್ವಿಷ್ಣು ತೇಜಃ" ಎಂದುದಾಗಿ, ಸಾಮವೇದ "ನಾಹಂ ದೇವ ರುದ್ರ ತೇಜಃ" ಎಂದುದಾಗಿ, ಅಥರ್ವಣವೇದ "ನಾಹಂ ದೇವ ಇಂದ್ರ ತೇಜಃ" ಎಂದುದಾಗಿ, ಕುಲಮದದಿಂದ ಬ್ರಹ್ಮ ಕೆಟ್ಟ; ಬಲಮದದಿಂದ ವಿಷ್ಣು ಕೆಟ್ಟ; ದೈವ ಮದದಿಂದ ರುದ್ರ ಕೆಟ್ಟ; ಫಲಮದದಿಂದ ಇಂದ್ರ ಕೆಟ್ಟ. ಇಂತೀ ನಾಲ್ಕು ಶ್ರುತಿಗಳು ತಮ್ಮ ಗರ್ವದಿಂದ ನೂಂಕಿಸಿ ಕೊಂಡವು. ಮತ್ತಾ ಚತುರ್ವೇದಂಗಳು ಬಂದು ಲಿಂಗದ ಚತುರ್ದಿಶೆಯಲ್ಲಿ ಓಲೈಸಿ ಕೈಮುಗಿದುಕೊಂಡು ಹೊಗಳುತ್ತಿದ್ದವು. ಅದೆಂತೆಂದಡೆ? ಶ್ರುತಿ "ಓಂ ಜಯ ತತ್ವಾನಾಂ ಪುರುಷಮೇರು ಕಾವ್ಯಾನಾಂ ಪುಣ್ಯ ಜಪ ಧ್ಯಾನಾನಾಂ ಸರ್ವ ಜನ್ಮ ವಿನಾಶಾನಾಂ ಆದಿ ಅನಾದಿ ಪಿತೃಣಾಂ ಅಜಕೋಟಿ ಸಹಸ್ರ ವಂದ್ಯಾನಾಂ ದೇವಕೋಟಿ ಚರಣ ಕಮಲಾನಾಂ" ಎಂದು ವೇದಂಗಳು ದೇವರ ಚರಣದ ಕುರುಹ ಕಾಣವು.

ಆದಿಯಲ್ಲಿ ನಮ್ಮ ಪುರಾತನರು ವೇದವನೋದಿದರೆ? ಇಲ್ಲ. ಕಲ್ಲರಿಟ್ಟರು, ಕಾಲಿಲೊದೆದರು. ಬಿಲ್ವಪತ್ರದ ಮರದ ಕೆಳಗೆ ಲಿಂಗವಂ ಪುಟ್ಟಿಸಿ ನಿಷ್ಠೆಯಂ ಪಡೆದರು, ಮನೆಯ ಬಾಗಿಲ ಕಾಯಿಸಿಕೊಂಡರು, ಆಡಿಸಿದರು, ಅಡಗಿಸಿದರು, ಓಡಿದ ಲಿಂಗವಂ ತಂದು ಪ್ರತಿಷ್ಠೆಯಂ ಮಾಡಿದರು, ಇಂತಪ್ಪ ದೃಷ್ಟವ ಸಾಧಿಸಿದವರು ನಮ್ಮ ಪುರಾತನರು. ನಿಮ್ಮವರು ವೇದವನೋದಿದರೆಂಬುದನರಿದು ಅವರನೊಲ್ಲದೆ ಬಿಟ್ಟ ಕಾಣಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ವೇದಗಳು ದೈವವೆಂದು ಭಾವಿಸಿ ಅವುಗಳನ್ನು ಪೂಜಿಸಬಾರದು. ಅವು ಶ್ವೇತ, ಅಗಸ್ತ್ಯ, ವಿಶ್ವಾಮಿತ್ರ ಮೊದಲಾದ ಮುನಿಗಳಿಂದಾಗಿವೆ. ಹೀಗೆ ಹುಟ್ಟಿ ಇದ್ದಂಥವುಗಳು ದೇವರೆಂದು ಭಾವಿಸಬಾರದೆಂದು ವಚನಕಾರನ ಅಭಿಪ್ರಾಯವಿದೆ ಋಗ್ವೇದಕ್ಕೆ ಬ್ರಹ್ಮತೇಜವು, ಯಜುರ್ವೇದಕ್ಕೆ ವಿಷ್ಣುವಿನ ತೇಜವು, ಸಾಮವೇದಕ್ಕೆ ರುದ್ರ ತೇಜವು, ಅಥರ್ವಣ ವೇದಕ್ಕೆ ಇಂದ್ರನ ತೇಜವು ಇರುವುದೆಂಬುದಕ್ಕೆ ವಚನಕಾರನು ಆಧಾರ ಗ್ರಂಥಗಳನ್ನು ಕೊಟ್ಟು ಅನ್ನುವದೇನಂದರೆ— ಈ ನಾಲ್ಕೂ ದೇವತೆಗಳು ಕುಲ ಮದ, ಬಲ ಮದ, ದೈವ ಮದ, ಛಲ ಮದದಿಂದ ಕೆಟ್ಟು ಹೋದರು. ಇಂಥವರ ತೇಜವಿದ್ದಂಥ ವೇದಗಳು ಹ್ಯಾಗೆ ದೇವತೆಗಳು ಆಗಬಹುದು ಎಂದು ಪ್ರಶ್ನೆ ಮಾಡುತ್ತಾನೆ. ಅವನಭಿಪ್ರಾಯವೇನಂದರೆ ನಿಜವಾದ ದೇವತೆಯು ಲಿಂಗವೇ ಇರುತ್ತದೆ. ಈ ಲಿಂಗವನ್ನೇ ಈ ವೇದಗಳು ಸೇವೆ ಮಾಡುತ್ತಲಿವೆ. ಅವು ಈ ಲಿಂಗದ ಮರ್ಮವನ್ನರಿಯವು ಎಂದು ಹೇಳಿ ಇದಕ್ಕೆ ಒಂದು ಶ್ರುತಿಯ ಆಧಾರವನ್ನು ಕೊಟ್ಟಿರುವನು. ಆದ್ದರಿಂದ ಇಂಥ ವೇದಗಳನ್ನು ಬರೀ ಓದುವದರಿಂದ ಏನೂ ಫಲವಿಲ್ಲ. ಆದರೆ ಪರಮಾತ್ಮನಲ್ಲಿ ನಿಷ್ಠೆಯುಳ್ಳವರು ಮಾತ್ರ ಎಲ್ಲಕ್ಕೂ ಹೆಚ್ಚಿನವರು. ಅವರು ಅಘಟಿತ ಕಾರ್ಯಗಳನ್ನು ಮಾಡುವರು ಎಂದು ಹೇಳಿ ಈ ಬಗ್ಗೆ ಕೆಲವರ ಉದಾಹರಣೆಗಳನ್ನು ಇಲ್ಲಿ ಕೊಟ್ಟಿರುವನು.

ವಚನಃ— ಏಂ ವೇದಶಾಸ್ತ್ರ ಪುರಾಣಾಗಮಗ್ರಂಥಗಳನೋದಿದವರೆಲ್ಲರನೂ ಹಿರಿಯರೆಂಬೆನೇ? ಅಲ್ಲಲ್ಲ. ನಿಲ್ಲು ನಿಲ್ಲು. ಅವರೇ ಹಿರಿಯರಾದಡೆ ನಟ್ಟವ ಪಾಣ ಗಳೆಯಾಟ ವಿಡಿಯಾಟ ವಿದೃಶ್ಯಕರಣ ಅಗ್ನಿಸ್ತಂಭ ಕನ್ಯಾವಾದ ಆಕರ್ಷಣ ಚೌಷಷ್ಟಿಕಳಾ ವಿದ್ಯವ ಸಾಧಿಸಿದ ಡೊಂಬ

ನೇನು ಕಿರಿಯನೇ? ಇದು ಹಿರಿದು ಕಿರಿದಿನ ಪರಿಯಲ್ಲ. ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ. ಅದು ಉದರ ಪೋಷಣಾರ್ಥ ವಿದ್ಯೆ ಎನಿಸುವದು. ಅದನೆಂತು ಸರಿ ಎಂಬೆನಯ್ಯಾ ಲಿಂಗವಂತಂಗೆ? ಇದು ಕಾರಣ ಗುಣ, ಜ್ಞಾನ ಧರ್ಮ, ಆಚಾರ, ಶೀಲ ಗುರು, ಲಿಂಗ, ಜಂಗಮ, ಪಾದತೀರ್ಥ, ಪ್ರಸಾದವ ಸಾಧಿಸಿದಾತನೇ ಹಿರಿಯ ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಭಾವಃ— ಅನೇಕರು ವೇದ ಶಾಸ್ತ್ರ, ಪುರಾಣಾಗಮುಗಳನ್ನು ಓದಿದವರು ಹಿರಿಯರೆಂದು ಭಾವಿಸುವದುಂಟು. ಆದರೆ ಹೀಗೆ ತಿಳಿಯುವದು ಸರಿಯಾದದ್ದಲ್ಲೆಂದು ವಚನಕಾರನ ಅಭಿಪ್ರಾಯವು. ಇಂಥವರ ಯೋಗ್ಯತೆಯು ಅಗ್ನಿಸ್ತಂಭ, ಆಕರ್ಷಣ, ಅದೃಶ್ಯಕರಣ. ವಿಡಿಯಾಟ, ಇಂಥ ಆಟಗಳನ್ನು ಆಡುವ ಡೊಂಬರಕಿಂತಲೂ ಹೆಚ್ಚಿನದಲ್ಲ. ಬರೇ ವೇದ ಪಠಣ ಮಾಡಲು ಕಲಿತವರು ಒಂದು ಉದರ ಪೋಷಣ ವಿದ್ಯೆಯನ್ನು ಮಾತ್ರ ಕಲಿತಂತಾಯಿತು. ಆದರೆ ಯಾವನು ಗುಣ, ಜ್ಞಾನ, ಧರ್ಮ, ಆಚಾರ, ಶೀಲ, ಮುಂತಾದವುಗಳನ್ನು ಸಾಧಿಸಿ ಆಚರಿಸುತ್ತಾನೋ ಅವನೇ ಹಿರಿಯನೆಂದು ಹೇಳಿರುವನು.

ಮನಸ್ಸು ಶುದ್ಧವಾಗಿರತಕ್ಕದ್ದು.

ವಿವರಣೆ:— ಮನುಷ್ಯನ ಪ್ರಗತಿಗೆ ಅವನ ಮನಸ್ಸು ಶುದ್ಧವಾಗಿರುವದು ಅತ್ಯವಶ್ಯಕವು. ಅವನ ಹೆಚ್ಚಳವು ಅವನ ಐಶ್ವರ್ಯದ ಮೇಲೆ ಅವಲಂಬಿಸಿಲ್ಲ. ಆದರೆ ಪರಮಾತ್ಮನಲ್ಲಿ ಬೆರೆಯಬೇಕೆಂಬ ಅವನ ಉತ್ಕಟ ಇಚ್ಛೆ ಮತ್ತು ಅದಕ್ಕೋಸ್ಕರ ಅವನು ಮಾಡುವ ಪ್ರಯತ್ನ ಇವುಗಳ ಮೇಲೆ ಅವಲಂಬಿಸಿವೆ. ಇದಕ್ಕೆಲ್ಲ ಸಾಧನೀಭೂತವಾದುದು ಮನಸ್ಸು. ಇಂಥ ಮನಸ್ಸನ್ನು ಸಂತೈಸಿ ಅದನ್ನು ಸರಿಯಾದ ಮಾರ್ಗಕ್ಕೆ ಹಚ್ಚುವದರಲ್ಲಿಯೇ ಮನುಷ್ಯನ ಶ್ರೇಷ್ಠತೆಯು ಇದೆ.

ವಚನ:— ೭೧. ಇಚ್ಛಾಜ್ಞಾನ ಕ್ರಿಯಾಶಕ್ತಿ ನಿಮ್ಮಿಚ್ಛೆ ಎಂಬುದನಾ ಬಲ್ಲೆನು. ಸರ್ವವೂ ನಿಮ್ಮಾಜ್ಞೆ ಎಂಬುದ ನಿಮ್ಮಡಿಗಳು ಬೆಸಸಿದ ಶೃತಿಗಳ ಕೇಳಿ ಬಲ್ಲೆನು. ಇದನರಿದಿರ್ದು ಈ ಮನವು ಮರಳಿ ಬಿದ್ದು ಗುರುಲಿಂಗ ಜಂಗಮಕ್ಕೆ ನಾ ಮಾಡಿದೆನೆಂಬ ಅವಿಚಾರದ ಮನದ ಪರಿಯ ನೋಡಾ! ಇದಿರ ಬೇಡಿದರೆ ಕೊಡರೆಂಬ ಮನದ ಗಸಣಿಯ ನೋಡಾ! ಶಿವಶಿವಾ ಅರಿವಿಂಗಿದು ಲಕ್ಷಣವೇ? ಮಹಾದೇವಾ, ಎನ್ನ ಮನವ ನೋಡಾ! ಎನ್ನ ಮನವ ಸಂತವ ಮಾಡಿ, ನಿಮ್ಮಲ್ಲಿ ಬೆರಿಸಾ. ಬೆರಿಸದಿದ್ದಡೆ ನಿಮಗೆ ಮಹಾ ಗಣಂಗಳಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಧಾವ:— ಮನಸ್ಸು ಅತ್ಯಂತ ಅಹಂಕಾರಿಯಾಗಿದ್ದರಿಂದ ಅದು ಅನೇಕ ಒಗೆಯಾಗಿ ತಳಮಳಿಸುವದುಂಟು. ಅದರ ಈ ಸ್ಥಿತಿಯನ್ನು ದೂರಮಾಡಿ ಪರಮಾತ್ಮನಲ್ಲಿ ಅದು ಬೆರೆಯುವಂತೆ ಮಾಡೆಂದು ವಚನಕಾರನು ಇಲ್ಲಿ ಹೇಳಿಕೊಳ್ಳುತ್ತಾನೆ. ನಿಜವಾಗಿ ಇಚ್ಛಾಶಕ್ತಿ, ಕ್ರಿಯಾಶಕ್ತಿ ಮೊದಲಾದವುಗಳಿಲ್ಲ ಪರಮಾತ್ಮನ ಅಂಕಿತದಲ್ಲಿವೆ. ಅವನಿಂದಲೇ ಜಗತ್ತಿನ ಎಲ್ಲ ವ್ಯಾಪಾರಗಳು ನಡೆಯುತ್ತವೆ. ಹೀಗಿದ್ದರೂ ಮನಸ್ಸು ನಾ ಮಾಡುತ್ತೇನೆಂಬ ಅಹಂಕಾರದಿಂದ ಪರಮಾತ್ಮನನ್ನು ಲೆಕ್ಕಿಸುವದಿಲ್ಲ. ಅದು ಅನೇಕ ಬಗೆಯಾಗಿ ಅನೇಕ ವಸ್ತುಗಳನ್ನು ಆಶಿಮಾಡುತ್ತದೆ. ಅವು ದೊರಕದಿದ್ದರೆ ಹೆರವರನ್ನು ಹಳಿಯಹತ್ತುತ್ತದೆ. ಇದು ಅರಿವಿನ ಲಕ್ಷಣವಲ್ಲ. ಇದು ಅವರ ತಾಮಸ ಭಾವವು. ಇದನ್ನು ಕೆಡಿಸಿ ಪರಮಾತ್ಮನಲ್ಲಿ ಬೆರೆಯುವಂತೆ ಮಾಡೆಂದು ವಚನಕಾರನು ಇಲ್ಲಿ ಹೇಳಿಕೊಳ್ಳುತ್ತಾನೆ.

ವಚನ:— ೭೨. ತನುಮನ ಶುದ್ಧವಾದರೆ ಸ್ವಲ್ಪ ದ್ರವ್ಯ ಧನತರವಾಯಿತ್ತು ನೋಡಿರೇ, ಆ ಮೋಳಿಗೆಯ ಮಾರಿತಂದೆಗೆ ನುಲಿಯ ಚಂದಯ್ಯಂಗೆ ಆಥಕ್ಕೆಯ ಮಾರಣ್ಣಗಳಿಗೆ? ತನುಮನ ಶುದ್ಧವಿಲ್ಲದೊಡೆ ಬಹುಳತರ ಮಹದೈಶ್ವರ್ಯ ಸ್ವಲ್ಪವಾಗಿ ಕರಗಿ ಕೆಟ್ಟು ಹೋಗದೇ? ರಾವಣಂಗೆ ಇಂಗಿಹೋಗದೇ? ಉರಿದು ಉರಿದು ಹೋಗದೇ ತ್ರಿಪುರದಾನವರಿಗೆ? ಇದನರಿತು ತನುಮನ ಶುದ್ಧವಾಗಲು ತೃಣ ಮಹಾಮೇರುವಪ್ಪುದಯ್ಯಾ. ಇಹದಲ್ಲಿ ಪರದಲ್ಲಿ ಮಹಾಮುಕ್ತಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಧಾವ:— ಮನಸ್ಸು ಶುದ್ಧವಾದರೆ ಧನಕನಕ ವಸ್ತುಗಳು ತಾವೇ ಹೆಚ್ಚಾಗುವವು. ಮೋಳಿಗೇಮಾರಯ್ಯ, ನುಲಿಯ ಚಂದಯ್ಯ ಆಥಕ್ಕೆಯ ಮಾರಯ್ಯ ಇವರೇ ಇದಕ್ಕೆ ಉದಾಹರಣೆಗಳಾಗಿದ್ದಾರೆ. ಆದರೆ ಮಹ ಐಶ್ವರ್ಯವುಳ್ಳ ರಾವಣ, ತ್ರಿಪುರದ ದಾನವರು ಅತ್ಯಂತ ಐಶ್ವರ್ಯವಂತರಾದರೂ ಕೂಡ ಅವರ ಮನಸ್ಸಿನ ಮೂಲಕ ಅವರ ಸಂಪತ್ತೆಲ್ಲ ನಾಶವಾಗಿ ಹೋಯಿತು. ಇದನರಿತು ನಡೆದರೆ, ಒಂದು ಹುಲ್ಲು ಸಹ ಮಹಾಮೇರುವಾಗುವದು. ಆದ್ದರಿಂದ ಮನಸ್ಸು ಶುದ್ಧವಾಗಿದ್ದರೆ ಇಹಪರದಲ್ಲಿ ಮಹಾ ಮುಕ್ತಿಯು ಎಂದು ವಚನಕಾರನು ಹೇಳುತ್ತಾನೆ.

ನೈತಿಕ ವಚನಗಳು.

ವಿವರಣೆ:— ಪ್ರತಿಯೊಬ್ಬ ವಚನಕಾರನು ನೈತಿಕ ವಿಷಯಗಳನ್ನು ತನ್ನ ವಚನಗಳಲ್ಲಿ ಹೇಳುವದುಂಟು. ಅದೇ ಪ್ರಕಾರ ಉರಿಲಿಂಗಪೆದ್ದಿಯೂ ಕೆಲವು ಉಕ್ತಿಗಳನ್ನು ಹೇಳಿರುವನು. ನೀತಿ ಮತ್ತು ಧರ್ಮ ಇವುಗಳನ್ನು ವಚನಕಾರರು ವಿಂಗಡಿಸಿ ಹೇಳುವದಿಲ್ಲ. ಅವುಗಳು ಪರಸ್ಪರಾನಲಂಬಿಗಳೆಂದು ತಿಳಿದು ಧಾರ್ಮಿಕ ತತ್ವಗಳನ್ನು ನೈತಿಕ ವಚನಗಳಲ್ಲಿ ಅವರು ಹೆಣೆದು ಬಿಟ್ಟಿರುವರು. ಈ ವಿಷಯವನ್ನು ಹಾಗೂ ಅವರ ನೈತಿಕ ತತ್ವಗಳನ್ನು ವಾಚಕರು ತಾವೇ ಈ ವಚನಗಳಲ್ಲಿ ಸುಲಭವಾಗಿ ಕಂಡುಕೊಳ್ಳಬಹುದಾಗಿದೆ. ಪ್ರತಿವೊಂದು ವಚನಕ್ಕೆ ಭಾವ ಬರೆಯುವದು ಅನಾವಶ್ಯವಾಗಿರುವದರಿಂದ ಅದನ್ನು ಬರೆದಿಲ್ಲ.

ವಚನ:— ೭೩. ಶಿವನೇ ದೈವ, ಶಿವಭಕ್ತನೇ ಕುಲಜ. ಷಡಕ್ಷರಿಯೇ ಮಂತ್ರ, ಕೊಲ್ಲದಿಪ್ಪುದೇ ಧರ್ಮ, ಅಧರ್ಮನಿಂದ ಬಂದುದ ಸೊಲ್ಲದಿಪ್ಪುದೇ ನೇಮ, ಆಶೆ ಇಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ, ವಂಚನೆ ಇಲ್ಲದಿಪ್ಪುದೇ ಭಕ್ತಿ, ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ. ಇದು ಸತ್ಯ ಶಿವ ಬಲ್ಲ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಕುಲಜ = ಉತ್ತಮ ಕುಲದವ; ಸಮಯಾಚಾರ = ಜಾತಿ ಪದ್ಧತಿ

ವಚನ:— ೭೪. ಆಶೆಯುಳ್ಳನ್ನರ ಒಬ್ಬರ ಆಶ್ರಯಿಸುವ. ಆಶ್ರಯದಾಸೆ ಕರಕಷ್ಟ ಕಾಣಿರೋ ಅಯ್ಯ. ಆಸೆಯೇ ದಾಸ ಕಾಣಿರೋ. ನಿರಾಸೆಯೇ ಈಶ ಕಾಣಿರಣ್ಣ. ದಾಸತ್ವದ ಈಶತ್ವದ ಅನುವ ವಿಚಾರಿಸಿ, ಆಸೆಯಡಗಿದರೆ ಅದೇ ಈಶಪದವು. ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ

ಕರಕಷ್ಟ = ಅತಿಶಯ ಕಷ್ಟಕರವು

ವಚನ:— ೭೫ ಶರಣರ ಕೂಡಿ ನುಡಿ ದಿಟವಿಲ್ಲ. ಮೇಲೆ ಬಾಕು. ತನು ಸವೆಯದು, ಮನ ಸವೆಯದು, ಧನ ಸವೆಯದು, ಸತ್ಯರ ನುಡಿ ಸಾಧ್ಯವಾಗದು. ಮೇಲೆ ಇನ್ನೇನಾದೀತು? ಆಸತ್ಯಕ್ಕೆ ಲಿಂಗ ಒಲಿ

ಆಂತದಂ ನೋಡಿ ನಗುತಾನಂದದಿಂದಲ್ಲಿ
ಆ ಸಮಯದೊಳು ರಾಮತಂದೆ ತಾನೊಪ್ಪಿದಂ
ಭಾಸುರವೆನಿಸ್ಪ ಭಕ್ತ್ಯಾಂಗನೆಯನಪ್ಪಿದಂ
ನಳನಳಿಪ ಘುಳುಘುಳಿಪ ಸಿಂಗರಂ ಮಾಡಿದಂ
ಬೆಳಬೆಳಗುತಿರ್ಪ ಪೊಸ ಭಸಿತವುಂ ಪೂಸಿದಂ
ಕರದೊಳುಂ ಕಂಠದೊಳು ರುದ್ರಾಕ್ಷೆಯಂ ಧರಿಸಿ
ಶಿರ ಕೊರಲು ತೋಳುಗಳೊಳಂತವಂ ಸಿಂಗರಿಸಿ
ಸುರುಚಿರ ಸುವರ್ಣ ಪಳಯಂ ತೆಗೆದು ಬಿಗಿದುಟ್ಟು
ನೆರೆದ ಸವಣರ್ನಡುಗಲು ಬುಜೆಂದು ಬೊಬ್ಬಿಟ್ಟು
ಗಾಳಿಯುಂ ಸೀಳ್ವ ಪೊಸ ಕೂರಸಿಯನಳವಡಿಸಿ
ಬಾಲೇಂದುಧರನಣುಗನುಬ್ಬಿನಿಂದಗ್ಗಳಿಸಿ
ಕಾಲ ತೊಡರುಲಿಯೆ ಘುಲುಘುಲುಕೆಂದು ನಡೆತಂದು
ಲೀಲೆ ವಿಗೆ ಭಕ್ತರುಘೆ ಜಾಂಗು ಬೊಲ್ಲೆನಲಂದು
ಬಂದ ಶಿವಭಕ್ತರ್ಗೆ ಮೆಯ್ಯಿಕ್ಕಿ ಹೋ ಎಂದು
ನಿಂದು ನುಡಿದಂ ರಾಮತಂದೆ ಹಿಗ್ಗುತ್ತಂದು
ಈ ಶಿರವನರಿದು ಹತ್ತಿಸಿ ಶಿವನನೊಲಿಸುವೇಂ
ಸಾಸಿರ ಜಿನರನೊಡೆದು ಲಿಂಗಮುಂ ನಿಲಿಸುವೇಂ
ಇದು ಭಾಷೆ ಇದನಳುಪೆ ಜೈನರೇನೆಂದುದಂ
ಮುದದಿಂದೊಡಂಬಟ್ಟಿನೆಂದಲಗನೆತ್ತಿದಂ

ಆಗಳಾ ಜೈನರೆಲ್ಲಂ ಕೌತುಕಂ ಬಡಲು
ರಾಗದಿಂ ಭಕ್ತರೆಲ್ಲಂ ಸಂತಸಂ ಬಡಲು
ಎಡದ ಕೆಯ್ಯಿಂದ ಜಡೆಯುಂಸುತ್ತಿ ಪಿಡಿದಾಗ
ಎಡೆಗುಡದೆಯಲಗಂ ಶಿರಕ್ಕೆ ಪೋಹಿಸುತಾಗ
ಏನೆಂಬೆನೇನೆಂಬೆನೆಲೆಲೆಲೆಲೆ ಕೌತುಕಂ
ಆಸರಿಯೆ ನಾನರಿಯೆನಾಪ ಧೀರಾಂತಕಂ
ಘರಿಲೆಂಬ ದನಿ ಪುಟ್ಟುವಲ್ಲಿಂದ ಮುನ್ನರಿದು
ಹರನಿರ್ದ ದೆಸೆಗಟ್ಟಿ ತಲೆವಿಡಿದು ನಲಿನಲಿದು
ಶಿರಹಸೇರಿಸಿ ಮಲೆದು ಸರಸರನೆ ಹಿಮ್ಮೆಟ್ಟಿ
ಬರುತ ಹಿಂದಣ ನಂದಿಯುಂ ಮುಲಂಗಿರೆ ಮುಟ್ಟಿ

ಸವಣರೆಲ್ಲಂ ನಡಸಡನೆ ನಡುಗಿ ಘೋಳಿಟ್ಟು
ತಮತಮಗೆ ಛೀಡಿಗೊಂಡೆಲ್ಲರುಂ ಮರವಟ್ಟು
ಮಾಯವಿದು ಮಂತ್ರವಿದು ಮಾಹೇಂದ್ರಜಾಲವಿದು
ಕಾಯವೇಳ್ದಿಂತು ಮಾಡುವದು ಕೌಟಲ್ಯವಿದು
ಎಮಗಿವರ ಪರಿ ತಿಳಿಯದೆನುತಾರುಹತರಳುಕಿ
ನೆವದಿಂದಲೇಳಲುದ್ಯತರಾಗಿ ಮನವಳುಕಿ

ಅಂತದಂ ಕಂಡಗ್ಗಣಿಯ ಹೊನ್ನಿತಂದೆಗಳು
ಇಂತಾಗಲಾಗವೆನೆ ನುಡಿದು ಪರವಾದಿಗಳು
ಚನ್ನಾಯಿತೈಯ್ಯ ಕಪಟವಿದೆನಲು ತಮತಮಗೆ
ವಿನ್ನಾಣವೇಕೆ ಮಾಡುವುದನುಸುರುವುವೆಮಗೆ
ಎನೆ ಸವಣರೇಳ್ದು ತಮ್ಮೊಳ್ವಿಚಾರಿಸಿ ನೋಡಿ
ತನತನಗೆ ನುಡಿವೇಕ ವಾಕ್ಯವಾಗುತೆ ಕೂಡಿ
ಇಂತೆಂದರೇಳು ದಿವಸಕ್ಕೆ ಶಿರವಂ ಕೂಡೆ
ಮುಂತೆ ಶಿರವಂ ಪಡೆವುದೆಮ್ಮ ಮತವೆಂದಾಡೆ

ನುಡಿಯೆ ಕೈಕೊಂಡೆವೆನುತಂ ಹೊನ್ನಿತಂದೆಗಳು
ವೃಡನ ಮೊಗಮಂ ನೋಡಿ ತಲೆದೂಗಿ ತಂದೆಗಳು
ಇಂತು ಮಾಡಿದಿರೀ ಸವಣರಿದಕ್ಕೇನೆಂದು
ಕಂತುಹರಮೂರ್ತಿ ವಿಗೆ ಪೊಸತು ಮಾಡುವೆನೆಂದು
ಏಳು ದಿನವೀ ಶಿರವನಿಂತೀ ತೆರದೊಳಿರಿಸಿ
ಬಾಲೇಂದುಧರನಣುಗನಿಚ್ಛೆಯಿಂದನುಕರಿಸಿ
ಸೆರೆಯವೇಳ್ಕೀಳು ದಿವಸಕ್ಕೆ ಶಿರವಂ ಕೂಡಿ
ನೆರೆ ಲೋಕವರಿಯೆ ಮೆರೆವೇಂ ಪಡೆವೆನಿಳೆ ನೋಡಿ
ಪಡೆಯದೊಡೆ ಬ್ರಹ್ಮಾಂಡವೊಡೆಯದೇಕಿರ್ದಪುದು
ಪಡೆಯದೊಡೆ ಶಿವನ ಕೈಲಾಸವೆಂತಿರ್ದಪುದು
ನುಡಿದು ತೋರದೊಡೆ ಶಿವಭಕ್ತಿಯೆಂತಿರ್ದಪುದು
ವೃಡನ ಸಮ್ಮುಖದಿ ಪಡೆವೇಂ ಪಡೆವೆನೆನುತಿರ್ದು

ಎಂದು ಗರ್ಜಿಸುತೆ ಕಂಕಣದಾರವಂ ಕಟ್ಟಿ
ಅಂದು ಸವಣರ ಮನಂ ನಡುಗಿ ಸರಕಂ ಕಟ್ಟಿ

ಒಡನೆ ನಾನೂರೊಡೆಯರುಂ ಕಂಕಣಂಗಟ್ಟಿ
ಸಡಿಪಡ ಜಿನನ ಬೊಂಬೆಗಳನೆಲ್ಲ ಹುಡಿಗಟ್ಟಿ
ಕಳಿಯಬೇಕೆನುತಾರುತುಂ ಬೊಬ್ಬಿರಿವುತಿರಲು
ಘುಳುಘುಳಿಸಿ ಘೂರ್ಮಿಸುತೆ ಕುಪಿತರಾಗುತ್ತಿರಲು
ಆ ಸಮಯದೊಳು ಹೊನ್ನಿತಂದೆಗಳು ಸಡಗರಿಸಿ
ಲೇಸಪ್ಪ ಹೊನ್ನ ಹೊಸ ಪರಿವಾಣಮುಂ ತರಿಸಿ
ಅದರೊಳ್ದಣಿಂಬಮುಂ ಪಾಸಿ ಭಸಿತವನಿಟ್ಟು
ಮುದದಿಂದ ಪಾದೋದಕ ಪ್ರಸಾದವನಿಟ್ಟು
ಸುಲಿಪ ಪಲ್ಮಿನುಗೆ ಕೆತ್ತುವ ಮೀಸೆಯಿಂದೊಪ್ಪೆ
ಫಲದಿಂದೆ ಗಂಟಿಕ್ಕಿ ಬಿಗಿದ ಪುರ್ಬಿಂ ವೊಪ್ಪೆ
ಘುಳುಘುಳಿಪ ರಾಮತಂದೆಗಳ ಶಿರಮುಂ ತಂದು
ಇಳುಪಿದಪರಿವಾಣದೊಳಗೆ ಬೊಪ್ಪಿಡುತಂದು

ಎತ್ತಿದಂ ಶಿವಭಕ್ತರೆಲ್ಲರುಘೆಯುಘೆ ಯೆನಲು
ಸುತ್ತಿರ್ದ ಸವಣ ಪಡೆ ಕೌತುಕಂಬಡುತಿರಲು
ಶಿವನ ಪ್ರಸಾದಮುಂ ನಿಂದು ಹೊರುವಂದದಿಂ
ಭವನ ಕೀರ್ತಿಯನೊಪ್ಪದಿಂ ಧರಿಸುವಂದದಿಂ
ಗಿರಿಶನಭಿಮಾನಮುಂ ಪೊತ್ತು ನಿತ್ತರಿಪಂತೆ
ಶರಣ ಸಂಕುಳದ ಹರಣಮನರರೆ ಹೊರುವಂತೆ
ಹೊತ್ತು ಕೊಂಡಂ ಹೊನ್ನಿತಂದೆ ಹರಿವಾಣಮುಂ
ಹೊತ್ತುಕೊಂಡರ್ಸವಣರೆಲ್ಲ ದುಮ್ಮಾನಮುಂ
ಹಿಂದೆ ದೇಹಕ್ಕೆ ಕಾಪಿಟ್ಟು ನೆರೆ ಧೀರರಂ
ಮುಂದೆ ನಡೆಗೊಂಡನಪ್ರತಿಮನಭಿನವಹರಂ
ಹೊತ್ತ ಬಾಳೆತ್ತಿದ ಕಠಾರಿ ಕಿತ್ತಲಗುಗಳು
ಸುತ್ತಂ ತಳಿರ್ತು ಥಳಥಳಿಪ ಪೊಸಕೈದುಗಳು
ನೋಡಲೆಂದವನಿಯಗಲಕ್ಕೆ ನೆರೆದರಸುಗಳು
ಕೂಡೆ ನೆರೆ ತೀವಿತ್ತು ಶಿವಭಕ್ತರಿಕ್ಕೆಗಳು
ಗಗನವೆಡೆಯಿಲ್ಲೆನಿಸಿ ತುರುಗಿದ ವೃಷಧ್ವಜವ
ಜಗವದಿರೆ ಹೊಯ್ವ ನಿಸ್ಸಾಳದ ಮಹಾರವವ

ವಿಸಿಗೇಳ್ವ ತೆರದಿ ನೊಳಗುವ ಭೇರಿಗಳ ನಡುವೆ
ಅಸಮಾಕ್ಷನಣುಗನಾ ವೀರವೃಂದದ ನಡುವೆ
ನಡೆತಂದನಾಗಳಿ ಬೆರಗಾಗಿ ತಲೆದೂಗೆ
ಒಡನೆ ಭಾಷೆಯ ಗಣಂಗಳ್ಸಹಿತ ಒಂದಾಗೆ

ಬಂದು ಸುಲಿಗೆರೆಯ ಪಟ್ಟಣಮನೊಲವಿಂ ಪೊಕ್ಕು
ಸಂದಣಿಸಿ ಮೆರೆವುತ್ತೆ ಬರುತಂ ಮನಂ ಮಿಕ್ಕು
ಸೋಮನಾಥನ ಪದಕ್ಕೇರಿಸುತೆ ಪೊಡವಟ್ಟು
ಭೂಮಿಗಚ್ಚರಿಯೆನಲ್ಕಲ್ಲೆಂದ ಪೊರಮಟ್ಟು
ಅಣ್ಣಿಗೆರೆಯವ್ಯತನಾಥನ ಚರಣಮಂ ಕಂಡು
ಬಣ್ಣಿಸುತ್ತಲ್ಲಿ ನೆಲೆವರಕೆಯಂ ಕೈಕೊಂಡು
ಕೆಂಭಾವಿಯೊಳ್ಭೋಗನಾಥನಲ್ಲಿಗೆ ಬಂದು
ಬೆಂಬಳಿಯೊಳುರುಳ್ವಾತನೆ ಕರುಣಿ ಶರಣೆಂದು
ಕಪ್ಪಡಿಯ ಸಂಗಮೇಶ್ವರನಲ್ಲಿಗೈತಂದು
ಒಪ್ಪುವಾ ರಾಮತಂದೆಯ ಶಿರಂ ಶರಣೆಂದು
ಆ ವೃಂದದೊಳು ನಾಗನಾಥನಲ್ಲಿಗೆ ಬಂದು
ದೇವ ನಿಮ್ಮಯ ಕರುಣವೀಯೆನುತ್ತಂ ನಿಂದು
ಸೊನ್ನಲಿಗೆಯೊಳು ಜಗದ್ಗುರು ಸಿದ್ಧರಾಮುಂಗೆ
ನಿನ್ನ ಪ್ರಸಾದವೀಯೆನುತೆ ಕರುಣಂಬಡುಗೆ
ಹಂಪೆಗೈತಂದು ವಿರೂಪಾಕ್ಷ ಲಿಂಗವ ಕಂಡು
ಹೆಂಪಿಂದೆ ಹೆಚ್ಚುತ್ತೆ ಹಿಗ್ಗುತ್ತೆ ನಡೆಗೊಂಡು
ಇವು ಮೊದಲ್ಗೊಂಡು ಶಿವಪುರವೆಲ್ಲರೊಳ್ಕೆರಿಸಿ
ಭುವನವೆಲ್ಲರಿಯೆಲೇಳುಂ ದಿವಸವುಂ ಮೆರಿಸಿ
ತಿರುಗಿ ಬರುತಿರ್ದುದಪ್ರತಿಮಶಿವಭವನ ಗಣಂ
ನೆರೆದು ಬರುತಿರ್ದುದಹಿಧರನ ನಚ್ಚಿನ ಗಣಂ
ಈ ಬಂದುದರುಹಕುಲವಿಲಯಾಗ್ನಿ ಮುಖವೆಂಬ
ಈ ಬಂದು ದೆಲೆ ಜೈನ ಹರಿಶರಭ ಮುಖವೆಂಬ
ಬಿರುದೆತ್ತಿ ಕರೆವ ಕಹಳೆಯನಲ್ಲಿ ಪಿಡಿಸುತಂ
ಬರುತಿರ್ದರಬ್ಬಲೂರತ್ತಲುರವಣಿಸುತಂ

M.B,Challa,
PLEADER.
BIJAPUR.

ಶಿವಾನುಭವ.

ವರ್ಷ ೧೦] ಅಕ್ಟೋಬರ ೧೯೩೫ [ಸಂಚಿಕೆ ೩

ಶೂನ್ಯಸಂಪಾದನೆಯ ರಹಸ್ಯ.

(ಲೇಖಕರು— ಬ್ಯಾಳಿ ಕಲ್ಯಾಣಪ್ಪನವರು ಬಿ. ಏ)

ಪ್ರಭುದೇವರ ಪೂಜಾಸ್ತುತಿ.

ಪರಮ ಪ್ರಭುದೇವಂ ಬಸ-
ವರಸನ ಅಂತರ್ನಿವಾಸ ಕೈದಲ್ ಮುದದಿಂ।
ಶರಣಸಮೂಹಂ ಭಜಿಸಿದ
ಪರಿಯಂ ವರ್ಣಿಸುವೆ ಶರಣಜನರಹುದೆನಲು ॥

ಶ್ರೀ ಪ್ರಭುದೇವರು ಬಸವೇಶ್ವರನ ಅರಮನೆಗೆ ದಯಮಾಡಿಸಲು ಬಸವಾದಿ ಪ್ರಮಥರು ಅವರನ್ನು ಆದರ ಸತ್ಕಾರದಿಂದ ಬರಮಾಡಿಕೊಂಡು ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಅವರನ್ನು ವಿಧಿವತ್ತಾಗಿ ಪೂಜಿಸಿದರು. ಆದುದರಿಂದ ಈ ಸಂಪಾನೆಗೆ "ಪ್ರಭುದೇವರ ಪೂಜಾಸ್ತುತಿ" ಎಂಬ ಹೆಸರು ಕೊಡಲ್ಪಟ್ಟಿದೆ.

'ಅತಿಥಿ ದೇವೋಭವ' ಎಂಬ ವೇದವಾಕ್ಯಕ್ಕನುಸರಿಸಿ ವೈದಿಕರು ತಮ್ಮ ಮನೆಗೆ ಅಕಾಸ್ಮಾತ್ತಾಗಿ ಬಂದ ಅತಿಥಿಗಳನ್ನು ದೇವರೆಂದು ತಿಳಿದು ಪೂಜಿಸುವಂತೆ ವೀರಶೈವರು ಸುಜ್ಞಾನಿಗಳಾದ ಜಂಗಮಮೂರ್ತಿಗಳು ತಮ್ಮ ಮನೆಗೆ ಬಂದರೆ ಅವರನ್ನು ಸಾಕ್ಷಾತ್ ಪರಶಿವನೆಂದೇ ತಿಳಿದು ಪೂಜಿಸುವರು. ದೇವರೆಂದರೆ ಯಾರು? ಎಂಥವನು? ಎಂಬುದೇ ತಿಳಿಯದ ನಮಗೆ ದಿವ್ಯಜ್ಞಾನಿಗಳು ದೊರೆತರೆ ಅವರೇ ದೇವರೆಂದು ಮೈಮುಬ್ಬಿ ಅವರಡಿಗೆ ಪೊಡಮಡುವೆವು. ಪೂಜಾಮುನಸ್ಕಾರ ಭೋಜನದಿಗಳಿಂದ ಅವರನ್ನು ತೃಪ್ತಿಪಡಿಸುವೆವು. ಮಂಗಲಸ್ತುತಿಗಳನ್ನು ನಾಡಿ ತಣಿಯುವೆವು.

ನಾವು ಪೂಜೆ ಮಾಡುವ ಉದ್ದೇಶವು ಬಂದ ಜಂಗಮಮೂರ್ತಿಗಳನ್ನು ಸಂತೋಷಪಡಿಸಿ ಅವರಿಂದ ವರವನ್ನು ಪಡೆದುಕೊಳ್ಳಬೇಕೆಂದಲ್ಲ. ಅದರೆ ನಮ್ಮ ಸಂತೋಷವನ್ನು ಮತ್ತಿಷ್ಟು ಹೆಚ್ಚಿಸಿಕೊಳ್ಳುವದಕ್ಕಾಗಿ. ಒಬ್ಬರನ್ನು ತೃಪ್ತಿಗೊಳಿಸಬೇಕೆಂದು ಮಾಡುವ ಕಾರ್ಯದಲ್ಲಿ ಸ್ವಾರ್ಥವಿರುತ್ತದೆ. ಆ ಸ್ವಾರ್ಥವು ಸಾಧಿಸದಿದ್ದರೆ ನಾವು ದುಃಖಿತರಾಗುತ್ತೇವೆ. ನಮ್ಮ ಆನಂದಕ್ಕಾಗಿಯೇ ನಾವು ಮಾಡುವ ಕಾರ್ಯದಲ್ಲಿ ನಿಸ್ವಾರ್ಥವಿರುತ್ತದೆ. ನಿಸ್ವಾರ್ಥ ಗುಣವು ನಿಜಸುಖದ ನಿಧಾನವು. ಪೂಜೆಗೊಳ್ಳುವ ಮೂರ್ತಿಗಳಾದರೋ ಏನಾದರೊಂದು ಆಶೆಯನ್ನಿಟ್ಟುಕೊಂಡು ಭಕ್ತರ ಬಳಿಗೆ ಬಂದರೆ ಅವರ ಯೋಗ್ಯತೆಯೂ ಕಡಿಮೆ ತರಹದ್ದೆಂದು ತಿಳಿಯಬೇಕು. ಯಾಕಂದರೆ ಆ ಸ್ವಾರ್ಥವು ಸಾಧಿಸದಿದ್ದ ಪಕ್ಷದಲ್ಲಿ ಅವರು ಅದನ್ನು ಮನಸಿಗೆ ಹಚ್ಚಿಕೊಂಡು ಕೊರಗುವರು. ಆ ಸ್ವಾರ್ಥಸಾಧನೆಗಾಗಿ ಅವರು ಭಕ್ತರ ಸ್ವಾಧೀನರಾಗಬೇಕಾಗುವದು. ಆದರೆ ನಿಸ್ವಾರ್ಥಿಗಳಾದ ಮೂರ್ತಿಗಳು ನಿಸ್ಪೃಹಿಗಳಿರುತ್ತಾರೆ. "ನಿಸ್ಪೃಹಸ್ಯ ತೃಣಂ ಜಗತ್" ಎಂಬಂತೆ ಭಕ್ತರು ಎಂತಹ ಆಶೆ ಹಚ್ಚಿದರೂ ಅವರು ಅದಕ್ಕೆ ಒಳಗಾಗುವದಿಲ್ಲ.

ನಿರಂಜನ ಮೂರ್ತಿಗಳಾದ ಶ್ರೀಪ್ರಭುದೇವರು ನಿಸ್ವಾರ್ಥ ಬುದ್ಧಿಯ ನಿಸ್ಪೃಹಿಗಳು. ಬಸವಣ್ಣನವರು ನಿಷ್ಕಾಮ ಭಕ್ತಿಯ ನಿಜ ನಿವಾಸವು. ಬೇಡಿದ್ದನ್ನು ಇಲ್ಲೆನ್ನದೆ ನೀಡುವ ಬಸವಣ್ಣನಂಥ ಭಕ್ತನು ದೊರಕಿರುವನೆಂದು ತಿಳಿದು ಪ್ರಭುವು ಅವನಿಂದ ಒಂದು ಕಾಸಿಗಾದರೂ ಆಶಿಮಾಡಲಿಲ್ಲ. ಅದರಂತೆ ಬೇಡಿದಿಷ್ಟಾರ್ಥವನ್ನು ತಪ್ಪದೆ ದಯಪಾಲಿಸಲು ಸಮರ್ಥರಾದ ಪ್ರಭುದೇವರಿಂದ ಬಸವಣ್ಣನವರು ಯಾವ ಲೌಕಿಕ ಇಷ್ಟಸಿದ್ಧಿಗೂ ಬಾಯಿಹಾಕಲಿಲ್ಲ. ಬಸವಣ್ಣನವರದು ನಿಷ್ಕಾಮ ಭಕ್ತಿಯು. ಪ್ರಭುದೇವರದು ನಿರ್ವ್ಯಾಜಸ್ವೀಕಾರವು. ಇದ್ದರೆ ಬಸವಣ್ಣನವರಂಥ ಭಕ್ತರಿರಬೇಕು. ಪ್ರಭುದೇವರಂಥ ಜಂಗಮವಿರಬೇಕು.

'ಹ್ಯಾಂಗೆ ಮಾಳ್ಪರೊ ಹಾಗೆ ಸಕಲೋಪಚಾರಗಳ। ಮಂಗಲದ ಶಿರುವಾಗಿ ಕೈಕೊಳುತಲಿ। ಬಂಗಾರ ಕಬ್ಬಿಣವು ಹಿರಿಕಿರಿದು ಸಮಗೊಂದು ಲಿಂಗಮಾಂತೇಶ್ವರ ಜಗತ್ಪುತ್ರಗೆ। ಜಯಮಂಗಲಂ ನಿತ್ಯ ಶುಭಮಂಗಳಂ' ಹೀಗೆಂದು ಹಾಡಿದ ಬಾಲಲೀಲಾ ಮಹಾಂತಸ್ವಾಮಿಗಳ ಸ್ತುತಿಗನುರೂಪವಾದ ಆಚರಣೆಯುಳ್ಳ ನಮ್ಮ ಪ್ರಭುದೇವರನ್ನು ನಮ್ಮ ಶರಣರ ಬಳ

ಗದ ತಮ್ಮ ತಲೆಯ ಮೇಲೆ ಹೊತ್ತುಕೊಂಡು ಕುಣಿದಾಡಿತು. ಅದರೆ ನಮ್ಮ ಸಮಾಜದಲ್ಲಿ ಈಗ ಪ್ರಭುದೇವರಂತಹ ನಿಸ್ಪೃಹಿಗಳಾದ ಜಂಗಮರಾಗಲಿ ಬಸವಣ್ಣನವರಂಥ ನಿಷ್ಕಾಮ ಭಕ್ತರಾಗಲಿ ದೊರೆಯುವದು ಬಹು ವಿರಳ. ಆದರೆ ಮೊನ್ನೆ ಶಿವೈಕ್ಯರಾದ ನಮ್ಮ ಶ್ರೀ ಅಥಣಿ ಶಿವಯೋಗಿಗಳು ಮಾತ್ರ ಶ್ರೀಪ್ರಭುದೇವರ ಆಚರಣೆಯನ್ನೇ ಬಹು ಮಟ್ಟಿಗೆ ತಮ್ಮ ನಡುವಳಿಕೆಯಲ್ಲಿ ಅಳವಡಿಸಿದ್ದರಿಂದ ಬಹು ಜನರ ಆದರ ಪೂಜ್ಯತೆಗಳಿಗೆ ಪಾತ್ರರಾಗಿದ್ದರು.

ಪ್ರಭುದೇವರು ಬಸವಣ್ಣನವರ ಮನೆಗೆ ದಯಮಾಡಿಸಿದಾಗ ಬಸವಾದಿ ಪ್ರಮಥರೆಲ್ಲರು ಅವರನ್ನು ಅನನ್ಯ ಭಕ್ತಿಯಿಂದ ಪೂಜಿಸಿ ಸ್ತೋತ್ರ ಮಾಡಿದರು. ಪ್ರಭುದೇವರೂ ಅವರ ಸಂಗಡಿಸಿರ್ದ ಸಿದ್ಧರಾಮ ಶಿವಯೋಗಿಗಳೂ ಬಸವಾದಿ ಶಿವಶರಣಾರನ್ನು ಮನವಾರೆ ಕೊಂಡಾಡಿ ತಣಿದರು. ಒಬ್ಬರನ್ನೊಬ್ಬರು ಎತ್ತಿ ಹಿಡಿಯುವದರಲ್ಲಿಯೂ ಹೊಗಳುವದರಲ್ಲಿಯೂ ಅವರೆದುರಿಗೆ ತಾನು ಕಡಿಮೆಯೆಂದು ಹೇಳುವದರಲ್ಲಿಯೂ ಸುಖವಿದೆ, ಆನಂದವಿದೆ, ಸ್ವಾರಸ್ಯವಿದೆ. ಆದರೆ ಅನ್ಯರನ್ನು ಬಗ್ಗುಬಡಿಯುವಾಗಲಿ, ನಿಂದಿಸುವದಾಗಲಿ, ತಾನು ಇನ್ನೊಬ್ಬರಿಗಿಂತ ಹೆಚ್ಚಿನವನೆಂದು ಸಾಧಿಸುವದಾಗಲಿ ಮನುಷ್ಯನನ್ನು ದುಃಖಾಪತ್ತುಗಳಿಗೀಡುಮಾಡುವದು. ಪರಸ್ಪರ ನಮಸ್ಕಾರಗಳಲ್ಲಿ ಸಮರಸ ಭಕ್ತಿಯುಂಟಾಗುತ್ತದೆ. ಇವನ್ನರಿತೇ ನಮ್ಮ ಶಿವಶರಣರು ನಾ ಹೆಚ್ಚು ನೀ ಕಡಿಮೆಯೆಂಬ ಭಾವನೆಯನ್ನು ಮನಸ್ಸಿನಲ್ಲಿ ತಾರದೆ ಒಬ್ಬರನ್ನೊಬ್ಬರು ಸ್ತುತಿಸುತ್ತಲೂ ಒಬ್ಬರ ದೋಷಗಳನ್ನೊಬ್ಬರು ತಿದ್ದುತ್ತಲೂ ಸುಸಂಸ್ಕೃತಿಯ ಕೊನೆಯ ಸೀಮೆಯನ್ನು ಮುಟ್ಟಿದ ನಾಗರಿಕರಂತೆ ಹಿಂದಕ್ಕೆ ಕಾಲಹರಣ ಮಾಡುತ್ತಿದ್ದರು. ಈಗ ನಮ್ಮ ಸಮಾಜದಲ್ಲಿ ಇಂಥ ಬುದ್ಧಿಯು ಲೋಪವಾಗಿರುವದರಿಂದಲೇ ಗುರುವಿರಕ್ತರಲ್ಲಿ ಕಲಹವು ತಲೆಯೆತ್ತಿದೆ.

ಶ್ರೀ ಪ್ರಭುವಿನ ಪೂಜೆಯೆಂದರೆ ಸಾಕ್ಷಾತ್ ನಿರಂಜನ ವಸ್ತುವಿನ ಪೂಜೆಯು. ಬಸವಾದಿ ಪ್ರಮಥರು ಮಾಡಿದ ಪೂಜಾಸ್ತುತಿ ವಿವರವನ್ನು ಇಲ್ಲಿ ಕ್ರಮವಾಗಿ ಕೊಟ್ಟಿದೆ.

(೧) ಬಸವೇಶ್ವರ— ಮನದೊಡೆಯ ಮನೆಗೆ ಬಂದರೆ ಕನಕದ ತೋರಣವ ಕಟ್ಟಿ ಪಡುಸವಾರ್ಜನೆಯ ಮಾಡಿ ರಂಗವೋಲೆಯನಿಕ್ಕಿ

ಉಫೇ, ಚಾಂಗು, ಭಲಾ ಎಂಬೆನು. ಕೂಡಲಸಂಗಮದೇವಾ ನಿಮ್ಮ ಶರಣ ಪ್ರಭುದೇವರು ಬಂದರೆ ಉಬ್ಬಿ ಕೊಬ್ಬಿ ನಲಿದಾಡುವೆ.

ನಮ್ಮ ಪರನು ನಿರಂಜನ ಮೂರ್ತಿಯು ಎನ್ನ ಮನೆಗೆ ಬಂದಿರಲು ಪರಮಾನಂದ ಜಲದಿಂದ ಪಾದಾರ್ಚನೆಯಂ ಮಾಡಿ ಜ್ಞಾನಸುಗಂಧಮುಂ ಲೇಪಿಸಿ ಹೃದಯಕಮಲ ಪುಷ್ಪದಿಂದ ಪೂಜೆಯನ್ನು ಮಾಡಿ ಸುಜ್ಞಾನವೆಂಬ ಧೂಪವ ಬೀಸಿ ಭಕ್ತಿಸಾರಾಯವೆಂಬ ನೈವೇದ್ಯಮುಂ ಸಮರ್ಪಿಸಲು ಸಮರಸ ಸಂಗದಿಂದ ಕೂಡಲಸಂಗಮ ದೇವರ ಶರಣ ಪ್ರಭುದೇವರ ಕರುಣವೆನಗಾಯಿತ್ತು.

ದೀರ್ಘದಂಡ ನಮಸ್ಕಾರಂ ನಿರ್ಲಜ್ಜಂ ಗುರುಸನ್ನಿಧೌ । ಶರೀರಮರ್ಥಂಚ ಪ್ರಾಣಂಚ ಸದ್ಗುರುಭ್ಯೋನಿವೇದಯೇತ್'' ಎಂದುದಾಗಿ ಭವರೋಗ ವೈದ್ಯನೆಂದು ಕೂಡಲಸಂಗನ ಶರಣರಿಗೆ ಶರಣೆಂಬುದೆನ್ನ ಮನವು.

(೨) ಜೆನ್ನಬಸವೇಶ್ವರ— ಅಂಗದ ಮೇಲೆ ಲಿಂಗವುಳ್ಳುದಿಲ್ಲವೆ ಸಂಗಮನಾಥನೆಂಬ ಭಾವ ಬಸವಣ್ಣಂಗಾಯಿತ್ತಲ್ಲದೆ ಎನಗೆ ಆ ಭಾವವಿಲ್ಲ ನೋಡಾ. ಸುಜ್ಞಾನಿಗಳಾದ ಲಿಂಗ ಶರಣರ ಕಂಡರೆ ಮಾತ್ರ ನಂಬಿ ನಚ್ಚಿ ಅವರ ಪಾದಕ್ಕೆರಗುವದೆನ್ನ ಮನವು. ಅವರ ಕಂಡೊಡೆ ಕರುಣಾಮೃತ ಸುರಿವುದೆನಗೆ. ಅವರ ಪಾದಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಮಾಡುವದೆನ್ನ ಮನವು. ಕೂಡಲಚನ್ನಸಂಗಮ ದೇವಾ ನಿಮ್ಮ ಪ್ರಭುವೆಂಬ ಜಂಗಮವ ಕಂಡು ಪೂಜಿಸಿ ಪೂಜಿಸಿ ದಣಿಯದೆನ್ನ ಮನವು.

(೩) ಮಡಿವಾಳ ಮಾಚಯ್ಯ— ಪರವಸ್ತುವು ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವೆಂಬರು. ನಾನು ಅದ ಹಿಡಿದು ಮಾತಾಡುವವನಲ್ಲ. ಸತ್ತೇಗುರು, ಚಿತ್ತೇಲಿಂಗ, ಆನಂದವೇ ಜಂಗಮ, ನಿತ್ಯವೇ ಪ್ರಸಾದ, ಪರಿಪೂರ್ಣವೇ ಪಾದೋದಕವೆಂಬುದನನುಗ್ರಹಿಸಿ ನಿಮ್ಮ ಜಂಗಮಕ್ಕೆ ಭಕ್ತನಾದೆನಯ್ಯಾ. ನಿತ್ಯನಾಗಿ ನಿಮ್ಮ ಜಂಗಮಕ್ಕೆ ವಂದಿಸುವೆ. ಆನಂದದಿಂದ ನಿಮ್ಮ ಜಂಗಮದ ಪಾದೋದಕವ ಕೊಂಬೆ. ಪರಿಪೂರ್ಣನಾಗಿ ನಿಮ್ಮನರ್ಚಿಸಿ ಪೂಜಿಸಿ ಪರವಶನಪ್ಪೆ. ನಾನು ಭಕ್ತಿಪ್ರಸಾದ, ಮುಕ್ತಿಪ್ರಸಾದ, ನಿತ್ಯಪ್ರಸಾದವ ನಿಮ್ಮ ಜಂಗಮದಿಂದ ಪಡೆದುಕೊಂಡು ಕಲಿದೇವರ ದೇವಾ ನಿಮ್ಮ ಶರಣ ಪ್ರಭುದೇವರ ಶ್ರೀ ಪಾದದಲ್ಲಿ ಮನಮಗ್ನವಾಗಿಪ್ಪೆನಯ್ಯಾ.

(೪) ಸೊಡ್ಡಳಬಾಚರಸ— ಏಕ ಏವ ನದ್ವಿತೀಯ ಬ್ರಹ್ಮವೆಂಬ ಘನ ಮಹಿಮನ ಕಂಡಾಕ್ಷಣದಲ್ಲಿಯೇ ಮನ ಮನ ಬೆಂಸಿ ತನು ತನು ಕರಗಿ ಕರಣಂಗಳೆಲ್ಲ ತರಹರವಾದವಯ್ಯ. ಸದ್ಗುರುವಿನ ಶರಣು ಹೊಕ್ಕೆ ನಾನು. ಎನ್ನ ಮಹಾದಾನಿ ಸೊಡ್ಡಳನ ಶರಣ ಪ್ರಭುದೇವರ ಕಂಡು ಎನ್ನ ಭವದ ಬಳ್ಳಿಯ ಬೇರು ಹರಿಯಿತ್ತಯ್ಯಾ.

(೫) ಹಡಪದಪ್ಪಣ್ಣಗಳು— ಮನಕ್ಕೆ ಮನವೊಂದಾಗಿ ಭಾವಕ್ಕೆ ಭಾವವೊಂದಾಗಿ ನಚ್ಚಿ ಮೆಚ್ಚಿದ ಶರಣರ ವರುಶನವಾದ ಬಳಿಕ ಲೌಕಿಕವ ಕತ್ತಲೆಯೆಂದರಿಯೆನಯ್ಯಾ. ಬಸವಪ್ರಿಯ ಕೂಡಲಚನ್ನ ಸಂಗ ನಿಮ್ಮ ಶರಣ ಪ್ರಭುದೇವರಿಗೆ ಶರಣು ಶರಣೆಂಬುದಲ್ಲದೆ ಅನ್ಯವನೇನೆಂದು ಅರಿಯೆನಯ್ಯಾ.

ಈ ಮೇರೆಗೆ ಅನೇಕ ಪ್ರಮಥರು ಪ್ರಭುದೇವರ ಪಾದಪೂಜೆಯನ್ನು ಭಕ್ತಿಪುರಸ್ಸರವಾಗಿ ಸಾಂಗಗೊಳಿಸಿದರು. ಆ ಮೇಲೆ ಪ್ರಭುದೇವರು ತಮ್ಮ ಪಾದಪೂಜೆಯನ್ನು ಮಾಡಿ ಕೊಂಡಾಡಿದ ಶರಣರನ್ನು ತಿರುಗಿ ಬಹು ಪರಿಯಿಂದ ಹೊಗಳಿದರು. 'ಎನ್ನ ಕಾಯವ ಬಸವಣ್ಣನಳವಡಿಸಿಕೊಂಡ. ಎನ್ನ ಭಾವವ ಮಡಿವಾಳಯ್ಯ ನಳವಡಿಸಿಕೊಂಡ. ಎನ್ನ ಮನವ ಚನ್ನ ಬಸವಣ್ಣನಳವಡಿಸಿಕೊಂಡ. ಇಂತೀ ಮೂವ್ವರು ಒಂದೊಂದನಳವಡಿಸಿಕೊಂಡ ಕಾರಣ ಗುಹೇಶ್ವರ, ನಿಮ್ಮ ಶರಣರೆಂಬ ತ್ರಿಮೂರ್ತಿಗಳಿಗೆ ನಮೋ ನಮೋ ಎನುತಿರ್ದೆನು.

ಆ ಮೇಲೆ ಪ್ರಭುದೇವರನ್ನನುಸರಿಸಿ ಬಂದ ಶ್ರೀ ಸಿದ್ಧರಾಮ ಶಿವಯೋಗಿಗಳು ಶ್ರೀ ಬಸವನ ಮಹಿಮೆಯನ್ನು ಪ್ರಭುಸನಿದುರಿಗೆ ಈ ರೀತಿಯಾಗಿ ಕೊಂಡಾಡಿದರು. "ಅಯ್ಯಾ, ನಿಮ್ಮ ಶರಣ ಬಸವಣ್ಣನಿಂದ ಲಿಂಗವ ಕಂಡು ಒಳಗೆ ಬಚ್ಚಿಟ್ಟುಕೊಂಡೆನಯ್ಯಾ. ನಿಮ್ಮ ಶರಣ ಬಸವಣ್ಣನಿಂದ ಲಿಂಗವ ಹಾಸಿ ಹೊದೆದುಕೊಂಡೆನಯ್ಯಾ. ಅಯ್ಯಾ ನಿಮ್ಮ ಶರಣಬಸವಣ್ಣನಿಂದ ನಿರವಯವಾದೆನು. ಎಲೆ ಕಪಿಲಸಿದ್ಧಮಲ್ಲಿನಾಥಯ್ಯಾ ನಿಮ್ಮ ಶರಣಬಸವಣ್ಣಂಗೆ ನಮೋ ನಮೋ ಎನುತಿರ್ದೆನು." ಇದಲ್ಲದೆ "ಎಲೆ ಅಯ್ಯಾ ನಿಮ್ಮ ನಚ್ಚಿದ ಮಚ್ಚಿನ ಶರಣರ ಸಂಗದಲ್ಲಿರಿಸಿ ಎನ್ನ ಧನ್ಯನ ಮಾಡಿದಿರಿ. ಅಹಾ ನಿಮ್ಮ ಕರುಣವನೇನೆಂದುಪಮಿಸುವೆನು? ಕಪಿಲಸಿದ್ಧಮಲ್ಲಿನಾಥಯ್ಯಾ ನಿಮ್ಮ ಶರಣ ಪ್ರಭುದೇವರ ಕರುಣದಿಂದ ನಾನು ಬದುಕಿದೆನು."

ಪೂಜೆಯೆಂದರೆ ಅಂತರಂಗದ ಪ್ರೇಮವನ್ನು ಬಹಿರಂಗದಲ್ಲಿ ತೋರಿಸುವ ಕ್ರಿಯೆಯು. ಅಂತರಂಗದಲ್ಲಿ ಭಕ್ತಿಯಿದ್ದರೆ ಸಾಕೆಂದು ಬಹಿರಂಗದಲ್ಲಿ ಅರ್ಚನಾದಿಗಳನ್ನಾಚರಿಸದಿದ್ದರೆ ಮನುಷ್ಯನು ಪತಿತನಾಗುತ್ತಾನೆ. ತಾಯಿಯು ಮಗನ ಮೇಲೆ ಪ್ರೀತಿಮಾಡುತ್ತಾಳೆಂದರೆ ಅವಳ ಮನಸ್ಸಿನಲ್ಲಷ್ಟೇ ಪ್ರೇಮವಿರುತ್ತವಂತಲ್ಲ. ಅವಳು ಆ ಪ್ರೇಮವನ್ನು ಹಾವಭಾವ ಕ್ರಿಯೆಗಳಿಂದ ವ್ಯಕ್ತಗೊಳಿಸುವಳು. ಕೂಸನ್ನು ಅಂದಚಂದವಾದ ಉಡುತೊಡಿಗೆಗಳಿಂದ ಶೃಂಗರಿಸಿ, ಒಳ್ಳುಣಿಸನ್ನುಣಿಸಿ, ಲಟಲಟ ಮುದ್ದನ್ನು ಕೊಟ್ಟು, ಅತಿಶಯೋಕ್ತಿಯುಳ್ಳ ವಿಶೇಷಣಗಳಿಂದ ಅವನನ್ನು ಹೊಗಳಿ ಆನಂದಿಸುವಳು. ಅದರಂತೆ ನಿಜವಾದ ಪೂಜೆಯು ಅಂತರಂಗದ ಪ್ರೇಮವನ್ನೂ ಬಹಿರಂಗದ ಕ್ರಿಯೆಯನ್ನೂ ಅವಲಂಬಿಸಿರುತ್ತದೆ. ಪೂಜ್ಯರಾದ ವಿಭೂತಿಗಳಲ್ಲಿ ನಮಗೆ ಭಕ್ತಿಯಿದೆಯೆಂದರೆ ನಡೆಯುವದಿಲ್ಲ. ಅವರನ್ನು ಮನೆಗೆ ಕರೆಯಿಸಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಸತ್ಕರಿಸಬೇಕು.

ವೀರಶೈವರಲ್ಲಿ ಶಿವಪೂಜೆ, ಶಿವಪ್ರಸಾದ, ಶಿವಾನುಭವಗೋಷ್ಠಿ ಎಂಬ ಕ್ರಮಗಳು ಬಹುದಿವಸಗಳಿಂದ ನಡೆಯುತ್ತ ಬಂದಿವೆ. ಈಗ ಜನರು ಶಿವಪೂಜೆ ಶಿವಪ್ರಸಾದಗಳಿಗೆ ಮಾತ್ರ ಇಂಬುಗೊಟ್ಟು ಶಿವಾನುಭವಗೋಷ್ಠಿಯನ್ನೇ ತೆಗೆದುಹಾಕಿದಂತೆ ಕಂಡುಬರುತ್ತದೆ ನಿಜವಾಗಿ ನೋಡಿದರೆ ಶಿವಪೂಜೆ ಶಿವಪ್ರಸಾದಗಳಿಗಿಂತಲೂ ಶಿವಾನುಭವಗೋಷ್ಠಿಯೇ ಹೆಚ್ಚು ಮಹತ್ವವಾದುದು. ಕೇವಲ ಶಿವಪೂಜೆ ಶಿವಪ್ರಸಾದಗಳಿಗಷ್ಟೇ ಮಹತ್ವ ಕೊಡುವದು ಸಾಮಾನ್ಯ ಜನರ ಸ್ವಭಾವವು. ಶಿವಾನುಭವ ಗೋಷ್ಠಿಯು ಸುಶಿಕ್ಷಿತರ ತುತ್ತು. ಪ್ರಭುದೇವರ ಪೂಜೆಯು ಬರೇ ಪ್ರಸಾದದ ಪೂಜೆಯಲ್ಲ. ಆದರೆ ಶಿವಾನುಭವ ಗೋಷ್ಠಿಯು ಪೂಜೆಯು. ಶಿವಾನುಭವ ಗೊಷ್ಠಿಯೊಂದು ನಡೆದರೆ ಸಾಕು ಅದರಲ್ಲಿಯೇ ಶಿವಪೂಜೆ ಶಿವಪ್ರಸಾದಗಳೆರಡೂ ಸಮಾವೇಶವಾಗುತ್ತವೆ. ಇವನ್ನರಿಯದೆ ನಮ್ಮ ಸಮಾಜದ ಎಷ್ಟೋ ಜನಗಳು ಸಿಪ್ಪೆಯನ್ನು ತಿಂದು ಹಣ್ಣನ್ನು ಚಲ್ಲುವ ಹಾಗೆ ಶಿವಪೂಜೆ ಶಿವಪ್ರಸಾದಗಳನ್ನು ಆಡಂಬರದಿಂದ ಬೆಳೆಸಿ ಶಿವಾನುಭವ ಗೋಷ್ಠಿಯನ್ನೇ ವರ್ಜಿಸಿರುವರು.

ಪಾದೋದಕ ಪ್ರಸಾದದ ತತ್ವವಾದರೂ ಹೊದಲು ಶಿವಾನುಭವ ಗೋಷ್ಠಿಯು ಸಲುವಾಗಿಯೇ ನೇಮಕಟ್ಟಿದ್ದಿತು. ಆದರೆ ಈಗ ಬಸವಾದಿ

ಪ್ರಮಥರಂತಹ ಶಿವಾನುಭಾವಿಗಳು ಯಾರೂ ಇಲ್ಲದ್ದರಿಂದ ಬರೇ ಪೂಜಾಡಂಬರವೂ ಅಶನಘಾತಕತನವೂ ಮಾತ್ರ ಹೆಚ್ಚಾಗಿವೆ. ಶಿವಾನುಭಾವಿಗ ರಲ್ಲವರನ್ನು ಮನೆಗೆ ಬರಮಾಡಿಕೊಂಡು ಅವರಿಂದ ಪಾದೋದಕ ಪ್ರಸಾದ ಕ್ರಿಯೆಗಳನ್ನು ನಡೆಯಿಸುವದು ಶುದ್ಧ ತಪ್ಪಾದದ್ದು. ಶ್ರವಣ ಮಾಸವೆಂದು ಶಿವಾನುಭವ ಶ್ರವಣಮಾಡದೆ ಮನೆಗೆ ಬಂದ ಅಯ್ಯನವರ ಕಾಲು ತೊಳೆದು, ಅವರಿಗೆ ಅಡ್ಡ ಉದ್ದಬಿದ್ದು ಅವರ ಹೊಟ್ಟೆಯನ್ನು ಮಿಷ್ಟಾನ್ನದಿಂದ ತೃಪ್ತಿಪಡಿಸಿದರೆ ಯಾವ ಪುಣ್ಯವೂ ಬರಲಾರದು. ಪ್ರಭುದೇವರೊಡನೆ ಶರಣರು ನಡೆಯಿಸಿದ ಪಾದೋದಕ ಪ್ರಸಾದ ಕ್ರಿಯೆಯು ಶಿವಾನುಭವ ಗೊಷ್ಠಿಯಿಂದ ತುಂಬಿ ತುಳುಕುತ್ತಿದ್ದಿತೆಂದು ಮೇಲಿನ ಪ್ರಸ್ತಾಪದಿಂದ ಸಹಜವಾಗಿ ಹೊಳೆಯುವದು.

ನಮ್ಮ ಸಮಾಜದಲ್ಲಿ ಪಾದೋದಕ ಪ್ರಸಾದ ತತ್ವವನ್ನಾಚರಿಸುವವರು ಈ ಸಂಪಾದನೆಯಿಂದ ತಿಳಿದುಕೊಳ್ಳುವ ಮುಖ್ಯ ಸಂಗತಿಯೆಂದರೆ ಶಿವಾನುಭಾವಿಗಳಾದ ಪೂಜ್ಯರಿಂದ ಲಿಂಗಾಂಗ ಸಾಮರಸ್ಯದ ವಿಷಯಗಳನ್ನರಿತುಕೊಂಡು ಅದರಂತೆ ಆಚರಿಸಬೇಕೇ ವಿನಾ ಏನೋ ಮೂಢ ಸಾಂಪ್ರದಾಯದಂತೆ ಬರೇ ಪಾದೋದಕ ಪ್ರಸಾದದ ಮುಬ್ಬಿಗೆ ಬೀಳುವ ಸನುಚಿತವು.

ಪಾಶ್ಚಾತ್ಯರ ತತ್ವಶಾಸ್ತ್ರ.

ಲೇಖಕ:— ವೀರಸ್ವಯಂಗಡಿ ಬಿ. ಎ. ಎಲ್. ಎಲ್. ಬಿ. ಹಾವೇರಿ

(ಮುಂದೆ ಸಾಗಿದ್ದು)

ರೋಮ ಜನರ ತತ್ವಃ— ಕ್ರಿ. ಪೂ. ೩೨೨ ರಿಂದ ಕ್ರಿ. ಶ. ೪೭೬ ರವರೆಗೆ ಅರಿಸ್ಟಾಟಲನ ಮರಣದ ತರುವಾಯ ರೋಮಜನರ ತತ್ವವು ೯೦೦ ವರ್ಷಗಳ ವರೆಗೆ ಸಾಗಿತು. ಅಲೆಗ್ಝಾಂಡರನು ಮೃತವಾದ ನಂತರ ಗ್ರೀಸದೇಶವು ೨೦೦ ವರ್ಷಗಳ ವರೆಗೆ ದಂಗೆ ಮತ್ತು ರಾಜ್ಯಕ್ರಾಂತಿಗಳ ಆಗರವಾಯಿತು. ಅದರ ರಾಜ್ಯಪದ್ಧತಿಯು ನಾಶವಾಗಿ ಅದು ಕ್ರಿ. ಪೂ. ೧೪೬ ರಲ್ಲಿ ರೋಮ ಚಕ್ರಾಧಿಪತ್ಯಕ್ಕೆ ಅಧೀನವಾಯಿತು. ಆ ಮೇಲೆ ಅದರ ರಾಷ್ಟ್ರೀಯತ್ವವು ಅಡಗಿಹೋಯಿತು. ಆದರೆ ಅದು ತತ್ವಜ್ಞಾನವನ್ನು ಜಗತ್ತಿಗೆಲ್ಲ ಕೊಡುವಂತಹದಾಯಿತು. ಅಲೆಗ್ಝಾಂಡರನ ಕಾಲಕ್ಕೆ ಗ್ರೀಸವು ರಾಜ್ಯಘಟನಾಶಕ್ತಿಯಲ್ಲಿ ಶಿಖರವನ್ನೇರಿತು. ಮತ್ತು ವಿಚಾರೋತ್ಪಾದಕಶಕ್ತಿಯಲ್ಲಿ ಅರಿಸ್ಟಾಟಲನ ಕಾಲಕ್ಕೆ ಉತ್ತಮ ಸ್ಥಾನವನ್ನು ಅಲಂಕರಿಸಿತು ಅದರ ರಾಜ್ಯವು ನಾಶವಾದರೂ ಅದರ ನಾಗರಿಕತ್ವವು ಜಗತ್ತನ್ನೇ ಪಸರಿಸಿತು. ರೋಮ ದೇಶದ ತರುಣರು ಅಥೆನ್ಸ ಪಟ್ಟಣಕ್ಕೆ ವಿದ್ಯಾಭ್ಯಾಸಕ್ಕೆ ಹೋಗಹತ್ತಿದರು. ರೋಮ ಜನರು ಒಕ್ಕಲಿಗರೂ, ವ್ಯಾಪಾರಿಗಳೂ, ಯೋದ್ಧರೂ ಇದ್ದರಲ್ಲದೆ ಅವರಲ್ಲಿ ಯಾವ ಕಲೆಯಾಗಲಿ, ತತ್ವಜ್ಞಾನವಾಗಲಿ ಇರಲಿಲ್ಲ. ಅವರು ಗ್ರೀಸದ ವಾಙ್ಮಯವನ್ನೂ ಕಲೆಯನ್ನೂ, ನೀತಿಯನ್ನೂ, ಧರ್ಮವನ್ನೂ ಸ್ವೀಕರಿಸಿದರು. ಗ್ರೀಸದ ತತ್ವ-ಬೆಳವಣಿಗೆಯ ಕಾಲವು ೩೦೦ ವರ್ಷಗಳ ವರೆಗೆ ರೋಮ ದೇಶದ್ದು ೮೦೦ ವರ್ಷ, ಮಧ್ಯವರ್ತಿ ಕಾಲದ ತತ್ವವು ೧೦೦೦ ವರ್ಷ, ಆಧುನಿಕ ಕಾಲವು ೪೭೫ ವರ್ಷ ತತ್ವಪ್ರಚಾರದ ಅವಧಿಯಿರುವದು.

ರೋಮ ಜನರ ತತ್ವಕಾಲದಲ್ಲಿ ಸಂಶಯವಾದವು (*Skepticism*) ಪ್ರಾಮುಖ್ಯವಾಗಿದೆ. ಸತ್ಯಜ್ಞಾನವು ಅಸಂಭವವೆಂದು ಇವರ ಹೇಳಿಕೆ. ಜ್ಞಾನಸಾಧನೆಗೆ ಬುದ್ಧಿಯು ಆಧಾರವಾಗಿರಲಾರದೆಂದು ಇವರ ನಂಬಿಕೆ. ವ್ಯವಹಾರ ಜೀವನಕ್ಕೆ ಆವಶ್ಯವಾದ ಜ್ಞಾನವಾವುದೆಂಬುದೇ ಇವರ ಮುಖ್ಯ ಸಮಸ್ಯೆಯು. ಇವರ ವಿದ್ಯಾಪೀಠಗಳು ಅಥೆನ್ಸ, ಅಲೆಗ್ಝಾಂಡ್ರಿಯ,

ಕ್ಟೋಡ್ಸ, ಆಂಟಿಯಾಕ್, ಪೆರಗಾಮಸ್, ಟಾರ್ಸಸ್ ಮೊದಲಾದ ಕಡೆಗಳಲ್ಲಿದ್ದವು. ಅಲೆಗ್ಝಾಂಡ್ರಿಯಾದಲ್ಲಿ ಪ್ರತಿಯೊಂದು ದೇಶದ ಪಂಡಿತರು ಇರಿಸಲ್ಪಟ್ಟಿದ್ದರು. ಅಲ್ಲಿ ಸಸ್ಯಶಾಸ್ತ್ರೀಯ ತೋಟವು (*Botanical gerden*) ಪ್ರಾಣಿಶಾಸ್ತ್ರಸಂಗ್ರಹವೂ (*Zoological collection*) ಶರೀರ ರಚನಾ ಶಾಲೆಯೂ, (*Anatomical museum*) ಜ್ಯೋತಿಷಶಾಸ್ತ್ರದ ಶಾಲೆಯೂ (*Astronomical observatoy*) ಮತ್ತು ಏಳು ಲಕ್ಷ ಗ್ರಂಥಗಳ ವಾಚನಾಲಯವೂ ಇದ್ದವು. ಇಲ್ಲಿಯೇ ಯುಕ್ಲಿಡನು ತನ್ನ ರೇಖಾಗಣಿತವನ್ನು ಬರೆದನು. ಟೊಲೆಮಿಯು ಜ್ಯೋತಿಷಶಾಸ್ತ್ರವನ್ನು ರಚಿಸಿದನು. ಇಲ್ಲಿಯೇ ಕ್ರೈಸ್ತಧರ್ಮವಲ್ಲರು ವಿದ್ಯಾವ್ಯಾಸಂಗಮಾಡಿದರು. ಮತ್ತು ಇಲ್ಲಿಯೇ ಹೊಸ ಪ್ಲೇಟೋನ ಪಂಥವು ಉದ್ಭವಿಸಿತು. ಹಿಬ್ರುಭಾಷೆಯ ಬಾಯಬಲ್ ಗ್ರಂಥವು ಗ್ರೀಕ ಭಾಷೆಯಲ್ಲಿ ಬರೆಯಲ್ಪಟ್ಟಿತು. ಎಲ್ಲ ಧರ್ಮಗಳಿಗೂ ಆಶ್ರಯವು ಕೊಡಲ್ಪಟ್ಟಿತು

ಎಪಿಕ್ಯೂರಿಯನ್ ಪಂಥಃ— ಕ್ರಿ ಪೂ. ೩೪೧-೨೭೦ ಎಪಿಕ್ಯೂರಸನು ಏಷ್ಯಾಮೈನರದ ಸ್ಯಾಮಾಸ ಎಂಬಲ್ಲಿ ಹುಟ್ಟಿದನು. ಇವನು ಅಥೆನ್ಸದಲ್ಲಿ ಕ್ರಿ. ಪೂ. ೩೦೭ ರಲ್ಲಿ ತನ್ನ ತತ್ವಶಾಲೆಯನ್ನು ಸ್ಥಾಪಿಸಿದನು. ಇವನ ಸುಖವಾದವು ಜನರನ್ನು ಸುಲಭವಾಗಿ ಆಕರ್ಷಿಸಿದ್ದರಿಂದ ಅದು ಬಹು ದೂರ ಪಸರಿಸಿತು. ಇವನ ತಾಯಿಯು ಪೂಜಾರಿ ಇದ್ದದರಿಂದ ಅವಳ ಮೂಢ ನಂಬಿಕೆಯ ಪ್ರತಿಗಾಮಿ ಭೋದನೆಯನ್ನು ಇವನು ಪ್ರಚುರಗೊಳಿಸಹತ್ತಿದನು. ಇವನು ಜನರ ಸಂಸಾರ ಬಂಧನದ ಭಾರವನ್ನು ಕಡಿಮೆ ಮಾಡಿ ಶಾಂತಿಜೀವನವನ್ನುಂಟುಮಾಡುವ ಉದ್ದೇಶವುಳ್ಳವನಾಗಿದ್ದನು. ಇವನ ಸುಖವಾದವು ಪ್ರಾಜ್ಞರಾದ ಕೆಲವರ ಮಟ್ಟಿಗೆ ಇತ್ತಲ್ಲದೆ ಅರಿಸ್ಟಿಪಸ್ ಎಂಬವನ ಸುಖವಾದದಂತೆ ಕೇಳುತರದ್ದಾಗಿರಲಿಲ್ಲ. ಅರಿಸ್ಟಿಪಸನ ಸೈರೆನಿಕ್ ಪಂಥದ ಅನುಯಾಯಿಗಳು ಕೇವಲ ಪ್ರಾಪಂಚಿಕರಾಗಿದ್ದರು. ಎಪಿಕ್ಯೂರಿಯನ್ ಪಂಥದ ಅನುಯಾಯಿಗಳು ಪ್ರಪಂಚದಲ್ಲಿದ್ದರೂ ಪಾರಮಾರ್ಥವನ್ನು ಹಿಡಿದಿದ್ದರು. ಎಪಿಕ್ಯೂರಸನ ಬೋಧೆಗೂ ೧೮ ನೇ ಶತಮಾನದಲ್ಲಿ ಫ್ರೆಂಚ ಜನರಿಗೆ ಬೋಧಿಸಿದ ರೂಸೋನ ಬೋಧೆಗೂ ಸ್ವಲ್ಪ ಹೋಲಿಕೆಯುಂಟು. ಈರ್ವರೂ ಶಾಶ್ವತ ಸುಖವನ್ನು ಪ್ರತಿಪಾದಿಸಿದರು. ಈರ್ವರೂ ಸಮಾಜದ ಕೃತ್ರಿಮ ಪದ್ಧತಿಗಳನ್ನು ನಿಷೇಧಿಸಿದರು. ರುಸೋನು ರಾಜಕೀಯ ಸುಧಾರಕನಾಗಿದ್ದನು. ಆದರೆ ಎಪಿಕ್ಯೂರಸನ ಧ್ಯೇಯವು

ಶಾಂತಿಯಾಗಿತ್ತೇ ಹೊರತು ರಕ್ತಪ್ರಧಾರಣವಾಗಿರಲಿಲ್ಲ. ಸುಖವು ಶ್ರೇಷ್ಠ
ಸ್ಸಾದದ್ದು ದುಃಖವು ಕೆಡಕಾದದ್ದು. ಆದರೆ ಕೆಲವು ವೇಳೆ ಹೆಚ್ಚಿನ
ಸುಖಕ್ಕಾಗಿ ದುಃಖವನ್ನು ಸ್ವೀಕರಿಸಬೇಕಾಗುವದು. ಸೈರೆನೆಯಿಕರು ಸುಖವು
ಅಲ್ಪಕಾಲದ್ದಾದರೂ ಅಧಿಕ್ಯವಿದ್ದದ್ದಕ್ಕೆ ಪ್ರಾಧಾನ್ಯಕೊಟ್ಟರು. ಆದರೆ
ಎಪಿಕ್ಯೂರಸನು ದೀರ್ಘಕಾಲದ ಸುಖಕ್ಕೆ ಪ್ರಾಧಾನ್ಯಕೊಟ್ಟು ಸೈರೆನಿಕರ
ತತ್ವಕ್ಕಿಂತ ಮೇಲ್ಮೆಯನ್ನು ತೋರಿಸಿದನು. ಮತ್ತು ಶರೀರಸುಖಕ್ಕಿಂತ
ಮನೋಸುಖವು ವಿಗಿಲಾದದ್ದೆಂದು ಯಥಾರ್ಥವಾಗಿ ಹೇಳಿದನು. ಪ್ರಪಂಚ
ದಿಂದ ನಿರ್ಲಿಪ್ತನಾಗಿರುವುದೇ ಧ್ಯೇಯವೆಂದು ಇವನು ಹೇಳಿದನು. ಮನೋ
ವಿಕಾರರಹಿತನಾಗಿ ಶಾಂತಿಯಿಂದಿರುವದೇ ಪಾರಮಾರ್ಥಿಕವು ಜಗತ್ತಿನ
ಮೇಲೆ ಮನುಷ್ಯನ ಅಧಿಕಾರ ನಡೆಯದ್ದರಿಂದ ತನ್ನ ಅಂತರಂಗದಲ್ಲಾ
ಗುವ ಜಗತ್ತಿನ ಪರಿಣಾಮಗಳನ್ನು ಮನುಷ್ಯನು ನಿಗ್ರಹಿಸಬೇಕು. ಈ
ಪರಿಣಾಮಗಳೇ ಮನೋವಿಕಾರಗಳಾಗಿವೆ. ಆಶೆಗಳು ಕೊರತೆಗಳಾಗಿವೆ.
ಕೊರತೆಯಿಂದ ದುಃಖವುಂಟಾಗುವದು. ಆಶಾರಹಿತವಾಗಿರುವದೇ ಸುಖವು.
ಸುಖವನ್ನು ಶಕ್ಯವಿದ್ದಮಟ್ಟಿಗೆ ಅನುಭವಿಸಬೇಕು. ಎಪಿಕ್ಯೂರಸನು ಸುಖ
ವನ್ನು ತ್ಯಾಗಮಾಡಲು ಸಿದ್ದನಿರಲಿಲ್ಲ. ಯಾಕಂದರೆ ಅವನು ಪೈರಾಗಿಯಿದ್ದಿಲ್ಲ.

ಸದ್ಗುಣವು ಮತ್ತು ಸುಖವು ಒಂದನ್ನೊಂದು ಅನುಸರಿಸುವವು.
ಸದ್ಗುಣವು ಸುಖದ ಸಾಧನವಿರುವಾಗಲೇ ಅದಕ್ಕೆ ಬೆಲೆಯುಂಟು. ಜ್ಞಾನ
ದಿಂದ ಮೋಕ್ಷಸುಖವು ಲಭಿಸುತ್ತದೆ. ಆತ್ಮನಿಗ್ರಹದಿಂದ ಪರಮಾವಧಿ
ಸುಖವನ್ನು ಹೊಂದಬಹುದು. ಶಾಶ್ವತವಾದ ಸುಖವನ್ನೇ ಅನುಸರಿಸ
ಬೇಕು. ಎಪಿಕ್ಯೂರಸನು ಸ್ಟೋಯಿಕ್‌ರಂತೆ ಎಲ್ಲ ಸುಖಗಳನ್ನು ಅನಾದರ
ಮಾಡುವದಿಲ್ಲ. ಆದಾಗ್ಯೂ ಅವುಗಳಿಂದ ನಿರ್ಲಿಪ್ತನಾಗಿರಬಲ್ಲನು. ಅಲ್ಪ
ಸುಖದಿಂದ ಅವನು ತೃಪ್ತನಾಗಿರಬಲ್ಲನು. ಅವನು ಜಗತ್ತಿನ ಬಂಧನಗ
ಳಿಗೆ ಸಿಲುಕದವನು. ಸರಕಾರವು ಸ್ವಾರ್ಥಮಯವಾದದ್ದೆಂದು ಅವನ
ಭಾವನೆ. ವಿವಾಹದ ಭಾರವನ್ನು ಅವನು ವಹಿಸಲು ಒಪ್ಪುವದಿಲ್ಲ.
ಆದರೆ ಸ್ನೇಹವು ಪರಸ್ಪರ ಹಿತಕಾರಿ ಇರುವದರಿಂದ ಅದೊಂದನ್ನೇ
ಸಾಧಿಸಲು ಒಪ್ಪುತ್ತಾನೆ. ಭವ್ಯವು ಮರಣಭಯವನ್ನುಂಟುಮಾಡುವ
ದರಿಂದ ಅವನ್ನು ಅನುಸರಿಸದಿರುವದೇ ಒಳ್ಳೀದು. ದೇವರ ಭಯುವಾ
ದರೂ ಮನುಷ್ಯನ ಶಾಂತಿಯನ್ನು ನಾಶಗೊಳಿಸುವದು. ಯಾವ ಜ್ಞಾನವು
ಸುಖವನ್ನುಂಟುಮಾಡುವದಿಲ್ಲವೋ ಅದು ಅನಾವಶ್ಯಕವು. ಡೆಮಾಕ್ರಿಟ

ನ ಅನುವಾದವನ್ನು ಇವನು ಸ್ವೀಕರಿಸಿದನು. ಅಣುಗಳು ಇಚ್ಛಾಶಕ್ತಿ
ಯುಳ್ಳವುಗಳೆಂದು ಹೇಳಿದನು. ಇವನು ಅದೃಷ್ಟ ವಾದವನ್ನು ನಿರಾಕ
ರಿಸಿ ಇಚ್ಛಾಸ್ವಾತಂತ್ರ್ಯವನ್ನು ಪ್ರತಿಪಾದಿಸಿದನು. ಇಚ್ಛಾಶಕ್ತಿಯುತವಾದ
ಅಣುಗಳಿಂದ ಜಗತ್ತು ಉತ್ಪತ್ತಿಯಾಗುವದು. ಮರಣಕಾಲಕ್ಕೆ ಆತ್ಮದ
ಅಣುಗಳು ದೇಹದಿಂದ ಚದುರಿಹೋಗುವವು.

ಸ್ಟೋಯಿಕ್‌ಪಂಥ.

ಈ ಪಂಥದ ಕಾಲವು ೫೦೦ ವರ್ಷಗಳ ವರೆಗೆ ಸಾಗಿತು. ಇದರ
ಅನುಯಾಯಿಗಳು ಪ್ರಸಿದ್ಧ ಮೇಧಾವಿಗಳಾಗಿದ್ದರು. ಇವರು ಮನುಷ್ಯ
ಜೀವನವು ಸ್ವಾರಸ್ಯವಿಲ್ಲದ್ದಾಗಿಯೂ ಪರಲೋಕವೇ ಶ್ರೇಷ್ಠವಾಗಿಯೂ
ತಿಳಿದರು. ಈ ಪಂಥದ ಸ್ಥಾಪಕನಾದ ಝೀನೋ ಎಂಬವನು ತನ್ನ
ಹಣವನ್ನೆಲ್ಲ ವ್ಯಾಪಾರದಲ್ಲಿ ಕಳೆದುಕೊಂಡು ಸಾಕ್ರೆಟಿಸನ ಜೀವನಕ್ಕೆ
ಮೆಚ್ಚಿ ತತ್ವಜ್ಞಾನದ ಕಡೆಗೆ ಮನಸು ಹಾಕಿದನು. ಇವನ ಉದಾತ್ತ
ಜೀವನದ ಯಶಸ್ಸು ಗ್ರೀಸದಲ್ಲೆಲ್ಲ ಪಸರಿಸಿತು. ಇವನು ಅದೃಷ್ಟದಲ್ಲಿ
ನಂಬಿಗೆಯುಳ್ಳವನಿದ್ದನು. ಇವನಿಗೆ ಸ್ವಲ್ಪ ಗಾಯವಾಗಲು ಅದೇ ನೆವ
ದಿಂದ "ಭೂಮಾತೆಯೇ ಬರುತ್ತೇನೆ. ಯಾಕೆ ನನ್ನನ್ನು ಕರೆಯುವಿ"
ಎಂದು ಹೇಳುತ್ತ ಆತ್ಮಹತ್ಯ ಮಾಡಿಕೊಂಡನು.

ಕ್ರಿಸಿಪಸ್:— ಕ್ರಿ. ಪೂ. ೨೮೦—೨೦೬ ಇವನು ಸ್ಟೋಯಿಕ್‌ಪಂ
ಥದ ತತ್ವಗಳನ್ನು ಸರಿಯಾಗಿ ವ್ಯವಸ್ಥೆಗೊಳಿಸಿದನು. ಇವನು ೫೦೦ ಗ್ರಂಥ
ಗಳನ್ನು ರಚಿಸಿದನು. ಇವನು ಪ್ರತಿದಿನ ೫೦೦ ಪಕ್ತಿಗಳನ್ನು ಬರೆಯದ
ಹೊರ್ತು ಯಾವ ದಿವಸವನ್ನೂ ವ್ಯರ್ಥ ಕಳೆಯುತ್ತಿರಲಿಲ್ಲ. ಶ್ರೀಮಂತ
ರನ್ನೂ ಅಧಿಕಾರಸ್ಥರನ್ನೂ ಅನಾದರಮಾಡುತ್ತಿದ್ದನು. ಸ್ಟೋಯಿಕರ ಮುಖ್ಯ
ತತ್ವವೇನೆಂದರೆ ಆತ್ಮವು ಸಂಸಾರ ಬಂಧನದಿಂದ ನಿರ್ಲಿಪ್ತವಾದದ್ದೂ,
ಸ್ವತಂತ್ರವಾದದ್ದೂ ಎಂಬದು. ಆತ್ಮವು ಇಂದ್ರಿಯವಿಕಾರಗಳನ್ನು ಜ್ಞಾನ
ರೂಪವಾಗಿ ಮಾಡುವದಲ್ಲದೆ ಭಾವವಿಕಾರಗಳನ್ನು (*Excitations of feelings*) ಇಚ್ಛಾಶಕ್ತಿಯಾಗಿ ರೂಪಾಂತರಿಸುವದು. ಆತ್ಮದ ಈ ಸ್ವಾತಂ
ತ್ರ್ಯವನ್ನು ಪ್ರತಿಪಾದಿಸಿದ್ದು ಪಾಶ್ಚಿಮಾತ್ಯರ ಚರಿತ್ರೆಯಲ್ಲಿ ಇದೇ ಮೊದ
ಲನೆಯದು. ಇವರು ಇಂದ್ರಿಯಗಳಿಗಿಂತ ಬುದ್ಧಿಯು ಶ್ರೇಷ್ಠವಾದದ್ದೆಂದು
ಪ್ರತಿಪಾದಿಸಿದರು. ಬುದ್ಧಿಯು ಪ್ರಜ್ಞೆಯನ್ನುಂಟುಮಾಡುವ ಶಕ್ತಿಯಾಗಿದೆ. ಸದ್ಗು
ಣವು ಆತ್ಮಸಂತೋಷಿಯಾಗಿರುವನು. ಅವನು ಸುಖದುಃಖಗಳನ್ನು

ಸಮವಾಗಿ ತಿಳಿಯುವನು. ಬುದ್ಧಿವಂತನೊಬ್ಬನೇ ಸತ್ಯವನ್ನು ಅನುಭವಿಸುತ್ತಾನೆ. ಬುದ್ಧಿಗನುಗುಣವಾಗಿ ನಡೆಯುವದೇ ಶ್ರೇಯವಾದದ್ದು. ಇದೇ ಸದ್ಗುಣವು. ಬುದ್ಧಿಗನುಗುಣವಾಗಿ ನಡೆದದ್ದರ ಪರಿಣಾಮವೇ ಪರಮಸುಖವು. (*Highest good*) ಮನೋವಿಕಾರಕ್ಕನುಗುಣವಾಗಿ ನಡೆದದ್ದರ ಪರಿಣಾಮವು ದುಃಖವಾಗಿದೆ. ಈ ಬುದ್ಧಿಯ ಕಟ್ಟಳೆಗೆ ಸ್ಟೋಯಿಕನು ಅನಂದದಿಂದಲೂ, ಶಾಂತಿಯಿಂದಲೂ, ವಿಶ್ವಾಸದಿಂದಲೂ ಅಧೀನವಾಗಿದ್ದನು.

ಸ್ಟೋಯಿಕರು ಸೃಷ್ಟಿಯಲ್ಲಿಯ ಬುದ್ಧಿ ತತ್ವವನ್ನು (*Logos*) ಜಗತ್ತಿಗೆ ಮೂಲತತ್ವವೆಂದು ತಿಳಿದರು. ಇವರು ಜಗದೀಶ್ವರವಾದಿಗಳು (*Pantheists*). ಸೃಷ್ಟಿಯು ದೇವರಾಗಿದೆ. ದೇವರಲ್ಲಿ ಸೃಷ್ಟಿಸುವ ಶಕ್ತಿಯೂ ನಿಯಾಮಕ ಶಕ್ತಿಯೂ ಇದೆ. ಸೃಷ್ಟಿಯ ನಿಯಮವು ಅನಿವಾರ್ಯವಾಗಿದೆ. ಅದು ಅದೃಷ್ಟ ಸ್ವರೂಪವಾಗಿದೆ. ದೇವರು ಸರ್ವಾಂತರ್ಯಾಮಿಯು, ಪ್ರಕೃತಿಯಲ್ಲಿಯ ಮನಸ್ಸು ಮೂಲ ವಸ್ತುವು. ತನ್ನ ಅಂತರ್ಬುದ್ಧಿಯಿಂದ ಶಕ್ತಿ ಮತ್ತು ಪ್ರಗತಿಗಳಾಗಿ ಪರಿಣಮಿಸುತ್ತದೆ. ಶಕ್ತಿಯು ಜಗತ್ತಿನ ಆತ್ಮವಾಗಿದೆ. ಪ್ರಕೃತಿಯು ಜಗತ್ತಿನ ಶರೀರವಾಗಿದೆ. ಸೃಷ್ಟಿಯು ಚಲನ ಶಕ್ತಿಯುಳ್ಳದ್ದಾಗಿದೆ. ಮನುಷ್ಯನ ಆತ್ಮವು ದೇವರ ಅಂಶವಾಗಿದೆ ಆತ್ಮದಿಂದಲೇ ಮನುಷ್ಯನ ಚಟುವಟಿಕೆಗಳು ನಡೆಯುತ್ತವೆ. ಸೃಷ್ಟಿನಿಯಮಕ್ಕನುಗುಣವಾಗಿ ನಡೆಯುವದು ಮನುಷ್ಯನ ಸ್ವಭಾವಕ್ಕನುಗುಣವಾಗಿ ನಡೆದಂತೆಯೇ.

ಸಾಮಾಜಿಕ ವಿಚಾರ— ಮನುಷ್ಯರು ಎರಡು ವರ್ಗವಾಗಿರುವರೆಂದು ಸ್ಟೋಯಿಕರು ಹೇಳುತ್ತಾರೆ. ಸದ್ಗುಣಯುತರಾದ ಜ್ಞಾನಿಗಳು ಮತ್ತು ದುರ್ಗುಣಯುತರಾದ ದುಷ್ಟರು. ಸದ್ಗುಣಿಗಳು ಅಲ್ಪ ಸಂಖ್ಯಾಕರಿರುವರು. ಜನರೊಡನೆ ನ್ಯಾಯ, ಪ್ರೇಮ, ಸ್ನೇಹ, ಅನನ್ಯ ಭಾವದಿಂದ ವರ್ತಿಸಬೇಕು. ನ್ಯಾಯವಾದದ್ದಾವದೆಂಬದನ್ನು ವ್ಯಕ್ತಿಯೇ ನಿರ್ಣಯಿಸಿಕೊಳ್ಳಬೇಕು. ಗುಲಾಮಗಿರಿಯನ್ನು ತೆಗೆದುಹಾಕಬೇಕು. ಬಡವರನ್ನೂ ರೋಗಿಗಳನ್ನೂ ಸಂರಕ್ಷಿಸಬೇಕು.

ಪಾಪ ಮತ್ತು ಸ್ವಾತಂತ್ರ್ಯ ವಿಚಾರ— ಮನುಷ್ಯನು ದೇವತಾಂಶನು. ತನ್ನ ನಡತೆಯನ್ನು ಸುಧಾರಿಸಿಕೊಳ್ಳಲು ಮನುಷ್ಯನಿಗೆ ಸ್ವಾತಂತ್ರ್ಯವಿದೆ.

ಸೃಷ್ಟಿ ನಿಯಮವನ್ನು ಅವನು ಉಲ್ಲಂಘಿಸಲಾರನು. ಈ ದೃಷ್ಟಿಯಿಂದ ಅವನಿಗೆ ಸ್ವಾತಂತ್ರ್ಯವಿಲ್ಲ. ಆತ್ಮವು ತನ್ನ ಧ್ಯೇಯವನ್ನು ಸಾಧಿಸಿಕೊಂಡಾಗ ಸ್ವತಂತ್ರ್ಯವಾಗುವದು. ದೇವರು ಮನುಷ್ಯನ ಇಚ್ಛಾಶಕ್ತಿ ಮೂಲಕವಾಗಿ ಕಾರ್ಯವೆಸಾಡುವನು. ಸ್ಟೋಯಿಕರು ಮನುಷ್ಯನಿಗೆ ಪೂರ್ಣಸ್ವಾತಂತ್ರ್ಯವಿಲ್ಲವೆಂತಲೂ ಅದೃಷ್ಟದ ಆಧಾರದ ಮೇಲೆ ಭವಿಷ್ಯವು ಹೇಳಲ್ಪಡುವದೆಂತಲೂ ದೇವತೆಗಳಾದರೂ ಅದೃಷ್ಟದ ಆಧಾರದ ಮೇಲೆ ಭವಿಷ್ಯ ಜ್ಞಾನಿಗಳಾಗಿರುವರೆಂತಲೂ ಹೇಳಿದರು.

ಪಾರಮಾರ್ಥಿಕ ವಿಚಾರ ಬೆಳವಣಿಗೆ— ಕ್ರೈಸ್ತನ ಅಗಾಧ ಜೀವಿತದಿಂದ ಪಾರಮಾರ್ಥಿಕ ಕಲ್ಪನೆಯು ವಿಸ್ತರಿಸಿತು. ಇಂಥ ವಿಭೂತಿಗಳು ತೋರಿಸುವ ಕೃತಿಗಳು ಮನುಷ್ಯ ಕೃತಿಗಳಾಗಿರದೆ ದೈವಿಕವಾಗಿವೆ. (*Revelation*) ಮಾನವ ಬುದ್ಧಿಯು ದೈವಜ್ಞಾನವನ್ನು ಹೊಂದಲು ಅಶಕ್ತವಾಗಿದೆ.

ಫೈಲೋ ಮತ್ತು ಯಹೂದೀತತ್ವ (ಜ್ಯೂ)— ಜ್ಯೂ ಜನರ ತತ್ವಜ್ಞಾನವು ಹಳೇ ಬೈಬಲಿನಲ್ಲಿದೆ. ಇವರು ಹಳೇ ಬೈಬಲಿನ ತತ್ವವನ್ನು ವಿವರಿಸುವಾಗ ಗ್ರೀಕ ತತ್ವವನ್ನು ಸಾಧನವಾಗಿ ಉಪಯೋಗಿಸಿದರು. ಫೈಲೋನು ಹಳೇ ಬೈಬಲಿನ ತತ್ವಗಳಿಂದ ಗ್ರೀಕ ತತ್ವ ಜ್ಞಾನವು ಉತ್ಪನ್ನವಾಗಿವೆಯೆಂದು ಹೇಳಿದನು. ಇವನ ಸಿದ್ಧಾಂತವು ಜ್ಯೂ ಮತ್ತು ಕ್ರೈಸ್ತಿಯನ್ ಸಿದ್ಧಾಂತಗಳ ಮಾಧ್ಯಮಿಕ ಸಿದ್ಧಾಂತವಾಗಿತ್ತು. ದೇವರು ಜಗತ್ತಿನ ಮೂಲಕಾರಣನು. ಅವನು ನಿರಾಕಾರನಿದ್ದು ವಾಙ್ಮನಾತೀತನಾಗಿದ್ದಾನೆ, ಮನಸ್ಸಿಗೆ ನಿಲುಕದವನೂ, ಅವರ್ಣನೀಯನೂ ಆಗಿದ್ದಾನೆ. ಆತ್ಮವು ದೇವರಿಂದ ಬಂದದ್ದು. ದೇಹವು ಪ್ರಕೃತಿಯಿಂದಾಗಿದೆ. ಜಗತ್ತಿನಲ್ಲಿಯ ದೇವರ ಕ್ರಿಯಾಶಕ್ತಿಗೆ ಇವನು (*Logos*) ಎಂದು ಕರೆಯುತ್ತಾನೆ. ಕ್ರಿಯಾಶಕ್ತಿಯು ದೇವರ ಆಜ್ಞೆಯಂತೆ ವರ್ತಿಸುವದು. ಪುನರ್ಜನ್ಮವನ್ನು ಇವನು ನಂಬಿದನು. ಆತ್ಮವು ದೇವರಲ್ಲಿ ಐಕ್ಯವನ್ನು ಹೊಂದಲು ಶಕ್ಯವಿದೆ.

ಹೊಸ ಪ್ಲೇಟೋನ ಪಂಥ— ಈ ಪಂಥವು ವೈರಾಗ್ಯ ಮಾರ್ಗವನ್ನು ಮುಖ್ಯವಾಗಿ ಅವಲಂಬಿಸಿತು. ದೇಹವು ಪಾಪದ ಆಗರವು, ಆತ್ಮವು ದೇಹದ ತುಚ್ಛಸ್ಥಿತಿಯನ್ನು ನಿಂದಿಸುವದು; ಆದ್ದರಿಂದ ದೇಹವನ್ನು ತ್ಯಜಿಸಬೇಕು ಎಂದು ಈ ಪಂಥದ ಮುಖಂಡನಾದ ಪ್ಲೋಟಿನಸ್ ಎಂಬ

ವನು ಹೇಳುತ್ತಾನೆ. ಅತ್ಮವಲ್ಲಿಯ ಈ ನೈತಿಕ ಕಲಹವು ಜಗತ್ತಿನಲ್ಲಿಯೂ ಸಹ ಪ್ರತಿಫಟಿಸುತ್ತದೆ. ದೇವರು ನಿರಾಕಾರನು. ಈ ಪಂಥಕ್ಕೂ ಕ್ರಿಸ್ತಿಯನ್ ಧರ್ಮಕ್ಕೂ ಒಂದು ವಿಷಯವು ಸಾಮಾನ್ಯವಾಗಿ ಒಪ್ಪಿಗೆಯುಳ್ಳದ್ದಾಗಿದೆ. ಜಗತ್ತನ್ನು ದೈವೀಭೂತವಾಗಿ ಮಾಡುವದೇ ಈ ವಿಷಯವು. ಕ್ರೈಸ್ತ ಧರ್ಮವು ದೇವರನ್ನೂ ಪ್ರಕೃತಿಯನ್ನೂ ಪ್ರೇಮಬಂಧನದಿಂದ ಐಕ್ಯ ಮಾಡಿರುವದು. ಹೊಸ ಪ್ಲೇಟೋನ ಪಂಥವು ಮನುಷ್ಯನು ಆತ್ಮಸಾಕ್ಷಾತ್ಕಾರದಿಂದ ಕ್ರಮವಾಗಿ ದೇವರನ್ನು ಹೊಂದುವನೆಂದು ಹೇಳುತ್ತದೆ.

ಪ್ಲೊಟಿನಸ್— ಕ್ರಿ. ಶ. ೨೦೪-೨೬೯. ಇವನು ಈಜಿಪ್ತದಲ್ಲಿಯ ಲಕೊಪೊಲಿಸ್ ಎಂಬಲ್ಲಿ ಹುಟ್ಟಿದನು. ಅಲೆಗ್ಝಾಂಡ್ರಿಯಾ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡಿದನು. ಗೋರ್ಡಿಯನ್ ಎಂಬ ಚಕ್ರವರ್ತಿಯು ಪರ್ಶಿಯಾ ದೇಶಕ್ಕೆ ದಂಡೆತ್ತಿ ಹೋದಾಗ ಶಾಸ್ತ್ರಾಭ್ಯಾಸದ ಸಲುವಾಗಿ ಅವನನ್ನು ಹಿಂಬಾಲಿಸಿದನು. ಕ್ರಿ. ಶ. ೨೪೪ ರಲ್ಲಿ ರೋಮು ಪಟ್ಟಣದಲ್ಲಿ ವಿದ್ಯಾಗುರುವಾಗಿದ್ದನು. ಅವನ ಶಾಲೆಯಲ್ಲಿ ಎಲ್ಲ ಜನಾಂಗದ ಪ್ರತಿನಿಧಿಗಳಿದ್ದರು. ಅವನು ಚಕ್ರವರ್ತಿಯ ಕಡೆಯಿಂದ ತತ್ವಜ್ಞಾನಿಗಳ ಮಂಟಪವನ್ನು ಕ್ಯಾಂಪೇನಿಯಾದಲ್ಲಿ ಕಟ್ಟಿಸಿದನು. ಮನುಷ್ಯನು ಅಹರ್ನಿಶೆಯೂ ದೈವೀ ಚಿಂತನೆಯಲ್ಲಿರುವನೆಂದೂ ಇದು ಅವನ ಸಹಜ ಸ್ವಭಾವವೆಂದೂ, ದೇವರು ಅವರ್ಣೀಯನೆಂದೂ, ಸರ್ವಾಂತರ್ಯಾಮಿಯೆಂದೂ, ಪ್ರತಿಯೊಂದು ವಸ್ತುವು ಅವನಿಂದ ಜೀವಕಳೆಯನ್ನು ಹೊಂದುತ್ತದೆಂದೂ ಇವನು ಹೇಳುತ್ತಾನೆ. (*Theory of emanations*) ದೇವರು ತನ್ನ ಶಕ್ತಿವಿಶೇಷದಿಂದ ತನಗೆ ಸದೃಶವಾದ ಸೃಷ್ಟಿಯನ್ನು ನಿರ್ಮಿಸುತ್ತಾನೆ. ಈ ನಿರ್ಮಾಣಶಕ್ತಿಯು ಪ್ರತಿಯೊಂದು ಪ್ರಾಣಿಯಲ್ಲಿರುವದು. ಉತ್ಪತ್ತಿಕ್ರಮವು ಮೂರು ವಿಧವಾಗಿದೆ. ಜಿಚ್ಛಕ್ತಿ, ಆತ್ಮ, ಮತ್ತು ಪ್ರಕೃತಿ. ಮೊದಲು ಜಿಚ್ಛಕ್ತಿಯು ದೇವರ ಪ್ರತಿಬಿಂಬವಾಗಿ ಉತ್ಪತ್ತಿಯಾಗುವದು. ಅದು ದೇವರ ಕಡೆಗೆ ತಿರುಗಿದಾಗ ತಾನು ದೇವರ ಪ್ರತಿಬಿಂಬವೆಂದು ಅದಕ್ಕೆ ಪ್ರಜ್ಞೆಯುಂಟಾಗುವದು. ಹೀಗೆ ವಿಚಾರ ಮಾಡುವವನ ಪ್ರಜ್ಞೆ ವಿಚಾರಕ್ಕೆ ವಿಷಯವಾದ ವಸ್ತುವಿನ ಪ್ರಜ್ಞೆ (*Consciousness of the subject and that of object*) ಎಂಬ ಕಲ್ಪನೆಯು ಉಂಟಾದದ್ದು ಇದೇ ಮೊದಲು. ಜಿಚ್ಛಕ್ತಿಯು ಕಾಲ್ಪನಿಕ ವಸ್ತುವಾಗಿರದೆ ನಿಜವಾದ ವಸ್ತುವಾಗಿದೆ. ಆತ್ಮವೆ ಜಿಚ್ಛಕ್ತಿಯ ಪ್ರತಿಬಿಂಬವಾಗಿದೆ. ಪ್ರಕೃತಿಯು ಆತ್ಮದಿಂದ ಉತ್ಪತ್ತಿಯಾಗು

ವದು. ಜಗತ್ತು ಮಾಯೆಯಾರೂಪವಾಗಿದೆ. ದೇವತೆಗಳು ಪ್ರಕೃತಿಯಿಂದ ಕೂಡಿದ ಪರಿಪೂರ್ಣವಾದ ಆತ್ಮಗಳಾಗಿವೆ. ಪ್ರಕೃತಿಯು ಇರುವ ಕಡೆಯಲ್ಲೆಲ್ಲ ಅಪರಿಪೂರ್ಣತೆಯುಂಟು.

ಪ್ಲೊಟಿನಸನ ನೈತಿಕಸಿದ್ಧಾಂತಃ— ಮನುಷ್ಯರು ಪ್ರಕೃತಿಯಿಂದಾಚ್ಛಾದಿತವಾಗಿದ್ದರೂ ದೈವಿಕ ಜೀವಸದಲ್ಲಿ ಭಾಗಿಗಳಾಗಿದ್ದಾರೆ. ಜಗತ್ತಿನಿಂದ ಬಿಡುಗಡೆ ಹೊಂದುವದು ಮನುಷ್ಯರ ಧ್ಯೇಯವಾಗಿದೆ. ಆತ್ಮವು ಧ್ಯಾನ ಮಗ್ನವಾದಾಗ ತನ್ನ ಮೂಲ ವಸ್ತುವಾದ ದೇವರ ಸಾನ್ನಿಧ್ಯವನ್ನು ಹೊಂದುವದು. ಭಕ್ತಿಯು ಅನಂದಾತಿರೇಕವುಂಟಾದಾಗ ತನ್ನನ್ನು ಮರೆತು ತಾನೇ ಪರಮಾತ್ಮನಾಗುವನು. ಈ ವಿಚಾರವು ವೀರಶೈವರ ಕೇವಲತ್ವವು ಅಥವಾ ಐಕ್ಯಭಾವಕ್ಕೆ ಸದೃಶವಾಗಿದೆ. ಈ ಐಕ್ಯವು ಘಟಿಸಬೇಕಾದರೆ ಆತ್ಮಕ್ಕೆ ದೇವಪ್ರೇರಣೆಯಾಗಬೇಕಾಗುವದೆಂದು ಪ್ಲೊಟಿನಸನು ಹೇಳುತ್ತಾನೆ.

ಬೈಬಲಿನ ಪ್ರಸಾರವೂ ಕ್ರೈಸ್ತಧರ್ಮವೂ.

ಕ್ರೈಸ್ತ ಮತವು ತತ್ವಸಂಥವಾಗಿರದೆ ಧರ್ಮಸಂಥವಾಗಿತ್ತು. ಈ ಸಮಾಜವು ಜಾತಿಭೇದವಿಲ್ಲದ (*Cosmopolitan*) ಸಮಾಜವಾಗಿತ್ತು. ಈ ಮತವು ಒಬ್ಬ ಪರಮಾತ್ಮನಲ್ಲಿ ನಂಬಿಗೆಯನ್ನೂ ಕ್ರೈಸ್ತನಲ್ಲಿ ಭಕ್ತಿಯನ್ನೂ ಇರಿಸಿತು. ಸತ್ಯದಿಂದ ನಡೆಯುವದು ದೇವರ ಆಜ್ಞೆಯೆಂತಲೂ ಮನುಷ್ಯನ ಕೃತಿಗನುಗುಣವಾಗಿ ದೇವರು ಅಂತ್ಯದಲ್ಲಿ ನಿರ್ಣಯವನ್ನು ಹೇಳುವನೆಂತಲೂ (*Last judgment*) ಇವರ ನಂಬಿಗೆ. ಕ್ರಿ. ಶ. ೫೦ ರಲ್ಲಿ ಈ ಸಮಾಜದ ಸಂಖ್ಯೆಯು ೫೦, ಕ್ರಿ. ಶ. ೧೦೦ ರಲ್ಲಿ ೫೦೦೦೦ ಕ್ರಿ. ಶ. ೩೧೧ ರಲ್ಲಿ ಮೂರು ಕೋಟಿಯಾಯಿತು. ಇಷ್ಟರಲ್ಲಿ ಅದು ರೋಮ, ಗ್ರೀಸ ದೇಶಗಳಲ್ಲಿ ಪಸರಿಸಿತು. ದೇವವಾಕ್ಯವು ಕ್ರೈಸ್ತನ ಮುಖಾಂತರ ಬೋಧಿಸಲ್ಪಟ್ಟಿತೆಂತಲೂ, ಕ್ರೈಸ್ತನು ಜಗದಾತ್ಮನೆಂತಲೂ ಅವನು ದೇವರ ಪುತ್ರನೆಂತಲೂ ಕ್ರೈಸ್ತಾನುಯಾಯಿಗಳಾದ ಅಪಾಲಾಜಿಷ್ಟರೆಂಬವರು (*Apologists*) ಪ್ರತಿಪಾದಿಸಿದರು.

ಗ್ನೊಸ್ಟಿಕ್ ಎಂಬ ಕ್ರೈಸ್ತ ಪಂಥವು ಕ್ರೈಸ್ತನಿಂದ ಸರ್ವಜೀವಿಗಳ ಮೋಕ್ಷವಾಗುವದೆಂದು ಹೇಳಿತು. ಸೃಷ್ಟಿಯು ಸತ್ಯಾಸತ್ಯಗಳ ಕಲಹ ಕ್ಷೇತ್ರವಾಗಿದ್ದು ಸತ್ಯವು ಕ್ರೈಸ್ತನ ಸಹಾಯದಿಂದ ಜಯವನ್ನು ಹೊಂದು

ವದು. ಇದರಂತೆಯೇ ಆತ್ಮ ಮತ್ತು ಪ್ರಕೃತಿಗಳ ನಡುವೆ ಕಲಹವನ್ನು ನಡೆದಿದ್ದು ಜಗದಾತ್ಮನಾದ ಕ್ರೈಸ್ತನಿಂದ ಆತ್ಮವು ಪ್ರಕೃತಿಯ ಬಂಧನ ಯಿಂದ ಬಿಡುಗಡೆಹೊಂದುವದು.

ಕ್ರೈಸ್ತ ದೈವಜ್ಞರು— *(Theologians)* ಒರಿಜೆನ್ ಕ್ರಿ. ಶ. ೧೮೫—೨೫೪. ದೇವರು ಅನಾದ್ಯನಂತನೂ, ಶಾಶ್ವತನೂ, ಸೃಷ್ಟಿಕರ್ತನೂ ಇದ್ದಾನೆ. ಅವನ ಕ್ರಿಯಾಶಕ್ತಿಯು ಅವನಂತೆಯೇ ಶಾಶ್ವತವಾದದ್ದು. ಕ್ರೈಸ್ತನು ದ್ವಿತೀಯ ಶಂಭುವು. ಪವಿತ್ರ ಆತ್ಮವಾದರೂ ದೇವರ ಪ್ರತಿಬಿಂಬವು. ಈ ಮೂರು ತತ್ವಗಳೂ ಒಂದೇ *(Unity)* ಆಗಿವೆ. *(Spiritual monotheism)* ದೃಶ್ಯ ಜಗತ್ತು ದೇವರಿಂದ ನಿರ್ಮಿತವಾಗಿದ್ದು ಅಂತ್ಯದಲ್ಲಿ ದೇವರಲ್ಲಿಯೇ ಬೆರೆಯುವದು. ಜೀವಿಗಳು ಇಚ್ಛಾಸ್ವಾತಂತ್ರ್ಯವುಳ್ಳವುಗಳಾಗಿದ್ದು ಪ್ರಕೃತಿಮಯವಾದ ಜಗತ್ತಿನಿಂದ ಬಿಡುಗಡೆಹೊಂದಿ ಪರಮಾತ್ಮನನ್ನು ಸೇರುವವು. ದೇವರ ಇಚ್ಛಾಶಕ್ತಿಯು ದೃಢವಾದದ್ದೂ, ನಿಜವಾದದ್ದೂ ಇರುವದು. ಆತ್ಮದ ಇಚ್ಛಾಶಕ್ತಿಯು ಚಂಚಲವಾದದ್ದು. ಇದರಿಂದಲೇ ಜೀವಿಗಳು ಪಾಪ ಮಾಡುವರು. ಇವರ ಪಾಪಕೃತ್ಯಕ್ಕೆ ದೇವರು ಕಾರಣನಲ್ಲವೆಂದು ಒರಿಜೆನ್ನನು ಸಯುಕ್ತಿಕವಾಗಿ ಹೇಳಿದ್ದಾನೆ. ಇವನು ದೇವರ ಸರ್ವಶಕ್ತಿ ಕಲ್ಪನೆಯ ಮತ್ತು ಪಾಪಕಲ್ಪನೆಯ ನಡುವಿನ ವಿರೋಧವನ್ನು ಇಚ್ಛಾಸ್ವಾತಂತ್ರ್ಯ ಕಲ್ಪನೆಯ ಸಾಧನದಿಂದ ಪರಿಹಾರಮಾಡಿಸಿದನು. ದೇವರಲ್ಲಿ ಭಕ್ತಿ ಕ್ರೈಸ್ತನಲ್ಲಿ ನಂಬಿಕೆ ಇಡುವದರಿಂದ ಜೀವಿಗಳು ದೇವರ ಸಾನ್ನಿಧ್ಯವನ್ನು ಅವನ ಕೃಪೆಯಿಂದ *(Grace)* ಹೊಂದುವರು. ಜೀವಿಗಳ ಮೋಕ್ಷಕ್ಕಾಗಿ ಕ್ರೈಸ್ತನು ಭೌತಿಕ ಹಿಂಸೆಯನ್ನನುಭವಿಸಿ ಅಪರನ್ನು ಪಾರುಮಾಡುವನು.

ಮಧ್ಯವರ್ತಿಕಾಲ ಕ್ರಿ. ಶ. ೪೭೬—೧೪೫೩.

ಈ ಕಾಲವು ಸುಮಾರು ೧೦೦೦ ವರ್ಷಗಳ ವರೆಗೆ ಸಾಗಿತು. ಈ ಕಾಲದ ಪ್ರಸಿದ್ಧ ತತ್ವಜ್ಞಾನಿಯು ಅಗಷ್ಟಾಯಿನನು. ಸೇಂಟಪಾಲ್ ಮತ್ತು ಪ್ಲೋಟಿನಸ್ ಇವರ ಪ್ರೇರಣೆಯು ಇವನ ಮೇಲೆ ವಿಶೇಷವಾಗಿ ಆಯಿತು. ದೇವರಲ್ಲಿಯ ಪೂರ್ಣ ನಂಬಿಗೆಯು ದೇವಮನುಷ್ಯರ ಸಂಬಂಧವನ್ನು ತೋರಿಸುವುದಕ್ಕೆ ಆಧಾರವಾಗಿದೆ ಎಂದು ಇವನು ಹೇಳಿದನು. ಇವನಿಗೆ ಕ್ರೈಸ್ತ ಧರ್ಮದ ಪ್ಲೇಟೋ ಎಂದು ಹೆಸರಾಯಿತು. ಇವನು

ಕಾರ್ಥೇಜದಲ್ಲಿ ಶಿಕ್ಷಣ ಹೊಂದಿದನು. ಇವನು ಅಗಾಧವಾದ ಪೇಧಾವಿಯು. ಇವನು ಕ್ರಿ. ಶ. ೩೫೪ ರಿಂದ ೪೩೦ ರ ವರೆಗೆ ಜೀವಿಸಿದನು. ತಾರುಣ್ಯದಲ್ಲಿ ದುರ್ವ್ಯಸನಿಯಾಗಿದ್ದನು. ಆಮೇಲೆ ಪಶ್ಚಾತ್ತಾಪ ಪಟ್ಟು ತನ್ನ ಪಾಪಕೃತ್ಯಗಳ ದೂಷಣೆಯನ್ನು ತನ್ನ ಆತ್ಮನಿರೂಪಣೆ *(Confessions)* ಎಂಬ ಗ್ರಂಥದಲ್ಲಿ ವಿವರಿಸಿದ್ದಾನೆ. ತನ್ನ ತಾಯಿಯ ಮತ್ತು ಸೇಂಟ್ ಆಂಬ್ರೋಸ ಎಂಬವರ ಪ್ರೇರಣೆಯಿಂದ ಕ್ರೈಸ್ತಧರ್ಮದಲ್ಲಿ ಶ್ರದ್ಧೆವಹಿಸಿದನು. ಪಾದ್ರಿಯ ಸ್ಥಾನವನ್ನು ಸ್ವೀಕರಿಸಿದನು. ಅವನು *(City of God)* ದೇವನಗರ ಎಂಬ ಗ್ರಂಥವನ್ನು ಬರೆದನು. ಅದರಲ್ಲಿ ಪರಮಾತ್ಮನು ಭೂವಿಯಲ್ಲಿರದೆ ಸ್ವರ್ಗದಲ್ಲಿದ್ದಾನೆಂದು ಹೇಳಿದ್ದಾನೆ. ಇವನ ಬೋಧೆಯಲ್ಲಿ ಚರ್ಚಿನ ಅಧಿಕಾರ ಮತ್ತು ವ್ಯಕ್ತಿಯ ಪ್ರಜ್ಞೆಯ ಅಧಿಕಾರ ಇವೆರಡು ವಿಚಾರಗಳು ಪ್ರಾಮುಖ್ಯವಾಗಿವೆ. ಇವನು ಬುದ್ಧಿ ಮತ್ತು ಅವತಾರೋಕ್ತಿಗಳಲ್ಲಿ ಯಾವದು ಹೆಚ್ಚು ಆಧಾರವಾದದ್ದೆಂದು ಹೇಳಿರುವದಿಲ್ಲ. ಆದಾಗ್ಯೂ ಇವನು ಶ್ರದ್ಧೆಗೆ ಜ್ಞಾನವೇ ಆಧಾರವಾದದ್ದೆಂದು *(Knowledge as basis of faith)* ಹೇಳಿ ತತ್ವಮಾರ್ಗವನ್ನವಲಂಬಿಸಿದನು. ಇವನ ಬಾಹ್ಯ ಜಗತ್ತಿನ ಅನುಭವದಿಂದ ತೃಪ್ತನಾಗದೆ ಆತ್ಮನಿರೀಕ್ಷಣೆಯ ಅನುಭವದಲ್ಲಿ ಆಸಕ್ತನಾದನು. ಹೀಗೆ ಇವನು ಆಧುನಿಕ ವಿಜ್ಞಾನಶಾಸ್ತ್ರದ ತಳಹದಿಯನ್ನು ಹಾಕಿದನು. ಭೌತಿಕ ಜಗತ್ತು ಅಸ್ಥಿರವಾಗಿದ್ದು ನಾಶವಾಗಬಹುದು. ಆದರೆ ಆತ್ಮವು ಶಾಶ್ವತವಾದದ್ದೂ ಸತ್ಯವಾದದ್ದೂ ಇದೆ. ಈ ನಿತ್ಯ ವಸ್ತುವು ನನ್ನಲ್ಲಿಯೇ ಇದೆ. ಇದಕ್ಕೆ ಸಂಶಯಪಡುವದಾದರೆ ಇವರ ನಿತ್ಯತ್ವವನ್ನು ಸಿದ್ಧಗೊಳಿಸಿದಂತೆಯೇ. ಜಗತ್ತಿಗೆ ಆಧಾರವಾದ ವಸ್ತುವು ಇರಲೇಬೇಕು. ಈ ವಸ್ತುವೇ ದೇವರು.

ದೇವರ ಪ್ರೇಮವೇ ನೀತಿಯು. ಸೃಷ್ಟಿಸೌಂದರ್ಯವು ದೇವರ ನಿರ್ಮಾಣವೇ ಆಗಿದೆ. ಭಕ್ತಿ ಪ್ರೇಮಗಳಿಂದ ದೇವರ ಕಾರುಣ್ಯವುಂಟಾಗುವದು. ದೇವರ ಕಾರುಣ್ಯದಿಂದಲೇ ಸತ್ಯದ ಜ್ಞಾನವುಂಟಾಗುವದು. ಸದಿಚ್ಛೆಯೊಂದೇ ಸ್ವತಂತ್ರವಾದದ್ದೆಂದು ಇವನು ಹೇಳುತ್ತಾನೆ. ಪಾಪವು ಎಲ್ಲರಲ್ಲಿಯೂ ಆದಿಯಿಂದ ಇರುವದು. ದೇವರ ಕಾರುಣ್ಯವಿಲ್ಲದೆ ಮನುಷ್ಯನು ತನ್ನ ಪ್ರಯತ್ನದಿಂದಲೇ ಮೋಕ್ಷ ಸಂಪಾದಿಸಲಾರನು. ಹಳೇ ಬೈಬಲಿನಲ್ಲಿ ಹೇಳಿದ ಆದಿಮನುಷ್ಯನಾದ ಆ್ಯಡಮ್ನ ಪಾಪದಿಂದ ಮನುಷ್ಯವರ್ಗವೆಲ್ಲ ಪಾಪಭಾಗಿಗಳಾಗುತ್ತಿದ್ದರು. ಆದರೆ ದೇವರ ಕರುಣೆ

ಯಿಂದ ಪಾರಾದರು. ದೇವತಾವತಾರನಾದ ಕ್ರೈಸ್ತನು ಮರಣಯಾತನೆಯಿಂದ ದೇವಪ್ರೇಮವನ್ನು ಮನುಷ್ಯರ ಹೃದಯದಲ್ಲಿ ತುಂಬಿದನು. ಕ್ರೈಸ್ತನಲ್ಲಿಯ ನಂಬಿಗೆಯು ಮೋಕ್ಷಸಾಧನವು. ಈ ನಂಬಿಗೆಯಾದರೂ ದೇವರ ಕೃಪೆಯಿಂದಲೇ ಉಂಟಾಗುವದು. ಲ್ಯಾಡವ್ಮನ ಪಾಪಕ್ಕೆ ಸಿರಂತರ ಶಾಸನವನ್ನನುಭೋಗಿಸಲು ಕೆಲವು ಜನರಾದರೂ ಮೋಕ್ಷಭಾಗಿಗಳಾಗಪೆ ಇರಬೇಕಾಗುವದು.

ಕಪ್ಪುಯುಗ (*Dark ages*) ಕ್ರಿ. ಶ. ೪೭೬—೧೦೦ ಈ ಕಾಲದಲ್ಲಿ ಕಲಹ, ರಕ್ತಪಾತಗಳು ನಡೆದದ್ದರಿಂದ ತತ್ವಜ್ಞಾನದ ಪ್ರಗತಿಯಾಗಲಿಲ್ಲ. ಮುಂದೆ ಚಾರ್ಲಿಮೇನನು ಕ್ರಿ. ಶ. ೮೦೦ ರಿಂದ ತತ್ವದ ಪ್ರಸಾರವನ್ನು ಕೈಕೊಂಡನು. ಅದು ಕ್ರಿ. ಶ. ೯೦೦ ರ ವರೆಗೆ ಸಾಗಿತು. ಈ ಕಾಲದಲ್ಲಿ ತತ್ವಪ್ರಸಾರದ ಮೂರು ಸ್ಥಳಗಳು ಮಾತ್ರ ಇದ್ದವು. ಪೂರ್ವದೇಶದಲ್ಲಿ ಅರೇಬಿಯಾ ಮತ್ತು ಕಾನ್‌ಸ್ಟಾಂಟಿನೋಪಲ್ ಪಶ್ಚಿಮಭಾಗದಲ್ಲಿ ಬ್ರಿಟನ್.

ಜಾನ್‌ಸ್ಕೋಟಸ್ ಎರಿಜೆನಾಃ— ಕ್ರಿ. ಶ. ೮೧೦—೮೭೦ ಇವನು ಐರ್ಲಂಡದಲ್ಲಿ ಜನಿಸಿದನು. ಇವನು ಮಧ್ಯವರ್ತಿ ಕಾಲದ ಪ್ರಖ್ಯಾತ ಪುರುಷನು. ಇವನು ಮನುಷ್ಯನ ಅದೃಷ್ಟವು ದೇವರಿಂದ ಸೊದಲೇ ನಿಶ್ಚಯಿಸಲ್ಪಟ್ಟಿರುವದೆಂದೂ, ರೊಟ್ಟಿಯೂ ಸುರೆಯೂ ಶುದ್ಧವಾಡಿದ ಮೇಲೆ ಕ್ರೈಸ್ತನ ರಕ್ತ, ದೇಹಗಳಾಗುವವೆಂತಲೂ (*Transubstan-tiation*) ಜೋಧಿಸಿದ್ದರಿಂದ ಇವನು ತೀರಿದ ಮುನ್ನೂರು ವರ್ಷಗಳ ವರೆಗೆ ಇವನನ್ನು ಧರ್ಮಲಂಡನೆಂದು ಕರೆದರು. ಇವನ ವಿದ್ವತ್ತು ಶ್ರೇಷ್ಠವಾಗಿದ್ದರಿಂದ ಇವನಿಗೆ ಉತ್ತರದೇಶದ ಉತ್ಪಾದಕನೆಂದು ಹೆಸರಾಯಿತು. ಇವನಿಗೆ ಗ್ರೀಕ ಭಾಷೆಯ ಜ್ಞಾನವಿದ್ದದ್ದು ಆ ಕಾಲದಲ್ಲಿ ವಿಶೇಷ ಸಂಗತಿಯಾಗಿತ್ತು. ಹೊಸ ಪ್ಲೇಟೋಪಂಥದ ತತ್ವದ ಮೇಲೆ ಪ್ರಖ್ಯಾತವಾದ ಗ್ರಂಥವನ್ನು ಬರೆದನು. ದೇವರು ಅಗಮ್ಯನು ಆದ್ದರಿಂದ ಅವನು ವಾಙ್ಮಾತೀತನು. ದೇವರೇ ಸೃಷ್ಟಿರೂಪದಲ್ಲಿದ್ದಾನೆ. ದೇವರು ನಾಲ್ಕು ಸ್ವರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. (೧) ಕೇವಲಸ್ವರೂಪ, (೨) ದೇವರಲ್ಲಿದ್ದ ಜಗತ್ತು, (೩) ದೇವರಿಂದ ವಿಭಕ್ತವಾದ ಬಹಿರಂಗದ ಜಗತ್ತು, (೪) ಜಗತ್ತು ದೇವರಲ್ಲಿ ಪೆರೆತ ನಂತರ ಇರುವ ದೇವರು. ಸೃಷ್ಟಿಯು ದೇವರಿಂದಲೇ ಪ್ರಾದುರ್ಭವಿಸುವದು. ಸೃಷ್ಟ ಜೀವವು ದೇವರಲ್ಲಿ ಪುನಃ ಸೇರಿಕೊಳ್ಳುವದೇ ಮೋಕ್ಷವಾಗಿದೆ. ಸೃಷ್ಟಿಯಲ್ಲಿ ಇದೇ ಪ್ರಕಾರ ಪ್ರತಿಯೊಂದು

ವಸ್ತುವು ಮತ್ತೊಂದು ವಸ್ತುವಿನಲ್ಲಿ ಬೆರೆಯುವದೆಂದು ಇವನು ಹೇಳಿದನು. ಸತ್ಯ ವಸ್ತುವು ಸಾರ್ವತ್ರಿಕವಾದದ್ದು (*Universal*) ದೇವರ ಕಲ್ಪನೆಯು ಸಾರ್ವತ್ರಿಕವಾದ್ದರಿಂದ ದೇವರು ಇದ್ದಾನೆ. ಜಗತ್ತಿನ ಕಲ್ಪನೆಯು ದೇವರ ಕಲ್ಪನೆಯಷ್ಟು ಸಾರ್ವತ್ರಿಕವಾದದ್ದಿರುವದಿಲ್ಲ ಮತ್ತು ಅಷ್ಟು ಪರಿಪೂರ್ಣವಾದದ್ದಿರುವದಿಲ್ಲ. ಮತ್ತು ಜಗತ್ತಿನ ಅಸ್ತಿತ್ವವು ದೇವರ ಅಸ್ತಿತ್ವದಂತೆ ಸಿದ್ಧಿತವಾದದ್ದಲ್ಲ.

ಇವನ ತರುವಾಯ ಕ್ರಿ. ಶ. ೯೦೦—೧೦೦೦ ದ ವರೆಗೆ ಜ್ಞಾನಾರ್ಜನೆಯು ಕುಂದಿತು. ಚಾರ್ಲಿಮೇನನ ಚಕ್ರಾಧಿಪತ್ಯವು ವಿಚ್ಛಿನ್ನವಾಯಿತು. ಪೋಪನ (ಕ್ರಿಸ್ತರ ಜಗದ್ಗುರು) ಅಧಿಕಾರವು ಕೆಲವು ಕಾಲ ಅದೃಶ್ಯವಾಯಿತು.

ಸ್ಕೊಲಾಸ್ಟಿಕ್ ಪಂಥಃ— ಕ್ರಿ. ಶ. ೧೦೦೦-೧೨೦೦ ಇವರು ಮಧ್ಯವರ್ತಿ ಕಾಲದಲ್ಲಿ ಬ್ರಹ್ಮಜ್ಞಾನವಾದದಲ್ಲಿ ತರ್ಕಪದ್ಧತಿಯನ್ನು ಅನುಸರಿಸಿದರು. ಇವರು ಕ್ರೈಸ್ತಮತದ ಸಿದ್ಧಾಂತವು ಪ್ರಮಾಣವೆಂದೂ ಅದು ತರ್ಕಪದ್ಧತಿಗೆ ಅನುಗುಣವಾಗಿರುವದೆಂದೂ ಪ್ರತಿಪಾದಿಸಿದರು. ಈ ಕಾಲದ ತತ್ವವೇತ್ತರನ್ನು ಮೂರು ವಿಧವಾಗಿ ವಿಂಗಡಿಸಬಹುದು. (೧) ನೈಜವಾದಿಗಳು (*Realists*). ಇವರು ಸಮಷ್ಟಿ ಭಾವನೆಯು ನಿಜವಾದದ್ದೆಂತಲೂ ವ್ಯಷ್ಟಿಯು ಸಮಷ್ಟಿಯ ಛಾಯೆಯೆಂತಲೂ ಪ್ರತಿಪಾದಿಸಿದರು. (೨) ನಾಮವಾದಿಗಳು (*Nominalists*). ಇವರು ಸಮಷ್ಟಿಯು ನಾಮಮಾತ್ರ ಉಳ್ಳದೆಂತಲೂ ಅದು ವ್ಯಷ್ಟಿವಸ್ತುವಿನಿಂದ ಉತ್ಪನ್ನವಾದ ಛಾಯೆಯೆಂತಲೂ ಗ್ರಹಿಸಿದರು. (೩) ಭಾವನಾವಾದಿಗಳು (*Conceptualists*) ಇವರು ಸತ್ಯ ವಸ್ತುವು ವ್ಯಷ್ಟಿಯಲ್ಲಿಯೇ ಇರುವದೆಂದೂ ಹೇಳಿದರು. ಕ್ರೈಸ್ತ ಚರ್ಚಿನ ಪುರಸ್ಕರ್ತರು ಸಮಷ್ಟಿ ಭಾವನೆಯೇ ನಿಜವಾದದ್ದೆಂದು ಹೇಳಿ ಅಪ್ತವಾಕ್ಯವನ್ನೇ ಪ್ರಾಧಾನ್ಯವಾಗಿಟ್ಟುಕೊಂಡರು.

ಆ್ಯನ್‌ಸೆಲ್ಮ್:— ೧೦೩೩-೧೧೦೯ ಇವನು ಲೊಂಬಾರ್ಡಿಯಲ್ಲಿ ದೊಡ್ಡ ಮನೆತನದಲ್ಲಿ ಜನಿಸಿದನು. ಚಿಕ್ಕ ವಯಸ್ಸಿನಲ್ಲಿಯೇ ಬೆಕ್ ಎಂಬಲ್ಲಿ ಸನ್ಯಾಸಿ ಮಠವನ್ನು ಪ್ರವೇಶಿಸಿದನು. ಮುಂದೆ ಕ್ಯಾಂಟರ್ಬರಿ ಚರ್ಚಿನ ಮಠಾಧಿಕಾರಿಯಾದನು. ಇವನು ನೈಜವಾದಿಯಾಗಿದ್ದು ಕ್ರೈಸ್ತ ಚರ್ಚಿನ ಸಿದ್ಧಾಂತಗಳನ್ನು ತಾತ್ವಿಕರೀತಿಯಿಂದ ಸಿದ್ಧವಾಡಲೆತ್ನಿಸಿದನು. ಸ್ವಯಂಸಿದ್ಧವಾದ ಮತ್ತು ಸರ್ವಾಂತರ್ಯಾಮಿಯಾದ ಒಬ್ಬ ಪರಮಾತ್ಮನು ಎಲ್ಲ ವಸ್ತು

ಗಳ ಕರ್ತನೆಂದು ಇವನು ಗ್ರಹಿಸಿದನು. ಸೃಷ್ಟಿಗೆ ಕಾರಣನಾದ ಒಬ್ಬ ಪರಮಾತ್ಮನ ಅಸ್ತಿತ್ವವು ಇರಲೇಬೇಕು. ಪರಮಾತ್ಮನು ಸ್ವಯಂಭು, ವಿದ್ವಾನ್. ಅವನು ಪರಿಪೂರ್ಣನಿರುವದರಿಂದ ಅವನ ಅಸ್ತಿತ್ವವಿರುವದು.

ರಾಸೆಲಿನಸ್:— ೧೧೦೦. ಇವನು ಕ್ರೈಸ್ತ ತ್ರೈಮೂರ್ತಿಗಳ ಸಿದ್ಧಾಂತವನ್ನು ಪ್ರತಿಭಟಿಸಿದನು. ತ್ರೈಮೂರ್ತಿಗಳು ಪ್ರತ್ಯೇಕಪುರುಷರಾಗಿದ್ದಾರೆ. ಕೆಲವು ಗುಣಗಳಿಂದ ಮಾತ್ರ ಅವರಲ್ಲಿ ಸಾಮ್ಯವುಂಟು. ಇವನ ನಾಮವಾದಿಯಾದ್ದರಿಂದ ಸಮಷ್ಟಿಯು ನಾಮಮಾತ್ರವಾಗಿದ್ದು ಮನುಷ್ಯರ ಮನಸ್ಸಿನಲ್ಲಿ ಮಾತ್ರ ಇರುವದೆಂದೂ ವ್ಯಕ್ತಿಯೇ ನಿಜವಾದ ವಸ್ತುವೆಂದೂ ಹೇಳಿದನು. ಚರ್ಚಿನ ಅಧಿಕಾರಿಗಳು ಇವನನ್ನು ಬಲವಾಗಿ ಖಂಡಿಸಿದರು. ಇವನು ಇಂಗ್ಲಂಡಕ್ಕೆ ಪಲಾಯನ ಮಾಡಿದನು. ಪುನಃ ಫ್ರಾನ್ಸ್ ದೇಶಕ್ಕೆ ಬಂದು ಯಥಾಪ್ರಕಾರ ತನ್ನ ಸಿದ್ಧಾಂತವನ್ನು ಬೋಧಿಸತೊಡಗಿದನು.

ಅಬೆಲಾರ್ಡ:— ೧೦೭೯-೧೧೪೨. ಇವನು ರಾಸೆಲಿನಸನ ಶಿಷ್ಯನು. ಇವನು ಪಾರಿಸ ಮೊದಲಾದ ಪಟ್ಟಣಗಳಲ್ಲಿ ವಿದ್ಯಾಲಯಗಳನ್ನು ಸ್ಥಾಪಿಸಿದನು. ವಿಶ್ವವಿದ್ಯಾಲಯಗಳ ನಿಜವಾದ ಉತ್ಪಾದಕತ್ವವು ಇವನಿಗೆ ಸಲ್ಲುವದು. ಫ್ರೆಂಚ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ಇವನಿಗೆ ಪಾಂಡಿತ್ಯ. ಸ್ಕೊಲಾಸ್ಟಿಕ್ ಪಂಥದವರಲ್ಲಿ ಇವನೇ ಪ್ರಸಿದ್ಧ ಮೇಧಾವಿಯು. ಇವನು ಭಾವನಾವಾದಿಯಿದ್ದರಿಂದ ಸಮಷ್ಟಿಯು ವ್ಯಷ್ಟಿಯಲ್ಲಿರುವದೆಂದು ಹೇಳಿದನು. ಸಮಷ್ಟಿ ಭಾವನೆಗಳು ಜ್ಞಾನಸಾಧನೆಗೆ ಅವಶ್ಯವಾಗಿರುವದರಿಂದ ನಮಗೆ ಗೋಚರವಾದ ವಸ್ತುಗಳಲ್ಲಿ ಅವು ಅಡಗಿರಲೇಬೇಕು. ವಸ್ತುಗಳ ಮುಖ್ಯ ಗುಣಗಳ ಸಾಮ್ಯವೇ ಈ ಸಮಷ್ಟಿ ಭಾವನೆಗಳಾಗಿವೆ. ಸಮಷ್ಟಿ ಭಾವನೆಗಳು ಮೂರು ವಿಧವಾಗಿರುವವು. (೧) ವಸ್ತುಗಳು ಅಸ್ತಿತ್ವಕ್ಕೆ ಬರುವ ಮೊದಲು ಸಮಷ್ಟಿ ಭಾವನೆಗಳು ದೇವರ ಮನಸ್ಸಿನಲ್ಲಿ ಭಾವನಾರೂಪದಿಂದಿರುವವು. (೨) ಸಮಷ್ಟಿ ಭಾವನೆಗಳು ವಸ್ತುಗಳ ಸಾರರೂಪದಿಂದ ವಸ್ತುಗಳಲ್ಲಿ ಕೂಡಿರುವವು. (೩) ಇವು ಮನುಷ್ಯನ ಮನಸ್ಸಿನಲ್ಲಿ ವಸ್ತುಗಳ ಜ್ಞಾನವಾದಾಗ ವಸ್ತುಗಳ ರೂಪದಲ್ಲಿರುವವು.

ಅಬೆಲಾರ್ಡನ ಬುದ್ಧಿ ಪ್ರಾಮಾಣ್ಯವಾದ (*Rationalism*) ಅಪ್ತವಾಕ್ಯ ಅಥವಾ ಅಧಿಕಾರವಾಣಿಯನ್ನು ಇವನು ನಿರಾಕರಿಸಿದನು. ಬೈಬ

ಲ್ಲಿನ ಬುದ್ಧಿಯು ನಂಬಿಕೆಗೆ ಅಧೀನವಾದದ್ದೆಂದು ಹೇಳಿದನು. ಅಬೆಲಾರ್ಡನು ನಂಬಿಕೆಯು ಬುದ್ಧಿಗೆ ಅಧೀನವಾದದ್ದೆಂದು ಹೇಳಿದನು. ನಂಬಿಕೆಯು ಬುದ್ಧಿಯಿಂದ ಪರೀಕ್ಷಿಸಲ್ಪಟ್ಟಾಗ ಮಾತ್ರ ಅದು ಸತ್ಯವಾದದ್ದೆಂದು ಸಂಬೋಧಿಸಕ್ಕದು. ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವುಂಟೆಂತಲೂ ಅದರಿಂದ ಅವನು ತನ್ನ ಪುಣ್ಯಪಾಪಗಳಿಗೆ ಹೊಣೆಗಾರನಿರುವನೆಂತಲೂ ಇವನು ಹೇಳಿದನು. ಕ್ರೈಸ್ತಧರ್ಮವು ಹೊಸ ವಿಷಯವನ್ನು ಬೋಧಿಸದೆ ಇತರ ಧರ್ಮಗಳ ತತ್ವವನ್ನೇ ಬೋಧಿಸುವದೆಂದು ಇವನು ಹೇಳಿದನು.

ಮಹಮ್ಮದೀ ಧರ್ಮದ ಪ್ರಾಬಲ್ಯ— ಮಹಮ್ಮದನು (೫೭೦-೬೩೨) ಅರೇಬಿಯಾ ಪ್ರಾಂತದ ಜನರನ್ನೆಲ್ಲ ಹತ್ತು ವರ್ಷಗಳಲ್ಲಿ ತನ್ನ ಮತಕ್ಕೆ ಸೇರಿಸಿಕೊಂಡನು. ಅವನ ಅನುಯಾಯಿಗಳು ಪಾಲೆಸ್ಟಾಯಿನ್, ಸಿರಿಯಾ, ಈಜಿಪ್ತ, ಪರ್ಶಿಯಾ ದೇಶಗಳನ್ನು ವಶಪಡಿಸಿಕೊಂಡರು. ಸ್ಪೇನ್ ದೇಶಕ್ಕೆ ದಂಡೆತ್ತಿ ಹೋದರು. ಆದರೆ ಟೂರ್ಸ ಎಂಬ ಯುದ್ಧವಲ್ಲಿ ಅಪಜಯ ಹೊಂದಿದರು. ಕ್ರೈಸ್ತರ ಪುಣ್ಯಭೂಮಿಯಾದ ಯೆರೂಸಲೆಮ್ ಸಹ ಇವರ ಕೈವಶವಾಯಿತು. ಬಗದಾದ, ಬಸರಾ ಮೊದಲಾದ ಪಟ್ಟಣಗಳಲ್ಲಿ ಅರಬೀ ಜನರ ವಿದ್ಯಾನಿಲಯಗಳು ಸ್ಥಾಪಿತವಾಗಿದ್ದವು. ಕ್ರಿ. ಶ. ೧೧೦೦ ರಲ್ಲಿ ಸ್ಪೇನದಲ್ಲಿ ಸಹ ಇವರು ವಿದ್ಯಾ ಪ್ರಸಾರ ಮಾಡಿದರು. ಗ್ರೀಕ ತತ್ವಜ್ಞಾನವು ಅರೇಬಿಯಾ ಭಾಷೆಯಲ್ಲಿ ಪರಿವರ್ತನೆಯಾಯಿತು. ಹಿಂದೂ ಜನರ ತತ್ವವನ್ನು ಸಹ ಪಾಶ್ಚಿಮಾತ್ಯರಲ್ಲಿ ಇವರು ಪ್ರಸಾರ ಮಾಡಿದರು. ಕ್ರಿ. ಶ. ೧೧ ನೇ ಶತಮಾನದಲ್ಲಿ ತುರ್ಕೀ ಜನರು ಅರಬೀ ಜನರನ್ನು ಸೋಲಿಸಿದ್ದರಿಂದ ಜೆರೂಸಲೆಮಿಗೆ ಬರುತ್ತಿದ್ದ ಕ್ರೈಸ್ತ ಯಾತ್ರಿಕರನ್ನು ತುರ್ಕರು ಅತಂಕವಾಡಹತ್ತಿದರು. ಆ ಮೇಲೆ ಕ್ರಿಸ್ತರು ತುರ್ಕರ ವಿರೋಧವಾಗಿ ಕ್ರೂಸೇಡ ಎಂಬ ಅನೇಕ ಸಾರೆ ಯುದ್ಧಗಳನ್ನು ಪ್ರಾರಂಭಿಸಿದರು. ಆದಾಗ್ಯೂ ಜೆರೂಸಲೆಮ್ ಪಟ್ಟಣವನ್ನು ಇವರು ಕೈವಶ ಮಾಡಿಕೊಳ್ಳುವದಾಗಲಿಲ್ಲ. ಆದರೆ ಕಾನ್‌ಸ್ಟಾಂಟಿನೋಪಲ್ ಪಟ್ಟಣವನ್ನು ವಶಪಡಿಸಿಕೊಂಡರು ಈ ಯುದ್ಧಗಳಿಂದ ಯುರೋಪ್‌ವಾಸಿಗಳಲ್ಲಿ ಅಭಿಮಾನವೂ, ಜ್ಞಾನಜಾಗ್ರತೆಯೂ, ವ್ಯಾಪಾರ ಚಟುವಟಿಕೆಯೂ ಬಂದಾಯಿತು. ಗ್ರೀಕರ ತತ್ವಗ್ರಂಥಗಳು ಯುರೋಪ್ ಜನಗಳಿಗೆ ಲಭಿಸಿದವು.

ಥಾಮಸ್ ಅಕ್ವಿನಾಸ್— ೧೨೨೪-೧೨೭೪. ಇವನು ಅರಸು ಮನೆತನಕ್ಕೆ ಸಂಬಂಧಪಟ್ಟವನು. ಇವನು ನೇಪಲ್ಸ ವಿಶ್ವವಿದ್ಯಾಲಯದಲ್ಲಿ

ಅಭ್ಯಾಸ ಮಾಡಿದನು. ತನ್ನ ಹತ್ತೊಂಭತ್ತನೆಯ ವಯಸ್ಸಿನಲ್ಲಿ ಡೊಮಿನಿಕನ್ ಎಂಬ ಕ್ರೈಸ್ತ ಸನ್ಯಾಸಿ ಪಂಥವನ್ನು ಸೇರಬೇಕೆಂದು ನಿರ್ಧರಿಸಿದಾಗ ಇವನ ಸಹೋದರರು ಇವನನ್ನು ಬಂಧನದಲ್ಲಿಟ್ಟರು. ಎರಡು ವರ್ಷಗಳ ಮೇಲೆ ಬಂಧನದಿಂದ ಪಾರಾಗಿ ಹೋದನು. ೧೨೪೬ ರಲ್ಲಿ ಪಾರಿಸ ವಿದ್ಯಾಲಯದಲ್ಲಿ ಪ್ರಶಸ್ತಿಯನ್ನು ಪಡೆದನು. ೧೨೪೮ ರಲ್ಲಿ ಪೋಪನು ರೋಮಿನಲ್ಲಿ ತತ್ವಜ್ಞಾನವನ್ನು ಬೋಧಿಸಲು ಕರಿಸಿಕೊಂಡನು. ಕ್ರೈಸ್ತಧರ್ಮಬೋಧಕರಲ್ಲಿ ಇವನು ಮಾನ್ಯವಾಗಿದ್ದನು. ಇವನ ಉದ್ದೇಶವು ಕ್ರೈಸ್ತಧರ್ಮವನ್ನು ಭೌತಿಕ ಶಾಸ್ತ್ರಕ್ಕೆ ಸಮಂಜಸವಾಗಿ ನಿರೂಪಿಸಬೇಕೆಂಬದಾಗಿತ್ತು. ಪ್ರಕೃತಿಯು ಅನೇಕ ರೂಪದಲ್ಲಿ ಪ್ರಾದುರ್ಭವಿಸ ತಕ್ಕದ್ದೆಂಬ ಅರಿಸ್ಟಾಟಲನ ವಿಚಾರವಿತ್ತು. ಇದರ ಆಧಾರದಿಂದಲೇ ಅಕ್ವಿನಾಸನು ಪ್ರಕೃತಿಮಯವಾದ ಸೃಷ್ಟಿಯು ದೇವಸೃಷ್ಟಿಯ ಬಹಿರಂಗರೂಪವೆಂದು ಹೇಳಿದನು. ಮನುಷ್ಯನ ಆತ್ಮವು ಇವೆರಡರ ನಡುವಿನ ಸ್ಥಾನದಲ್ಲಿರುವದು. ಧರ್ಮ ಮತ್ತು ತತ್ವಜ್ಞಾನಗಳ ಕ್ಷೇತ್ರಗಳು ಬೇರೆ ಬೇರೆ ಇದ್ದಾಗ್ಯೂ ಅವು ಪರಸ್ಪರ ವಿರೋಧಾತ್ಮಕಗಳಾಗಿಲ್ಲ. ದೇವರು ಪ್ರಕೃತಿಯನ್ನು ನಾಶಗೊಳಿಸದೆ ಪರಿಪೂರ್ಣವಾಗಿ ಮಾಡುತ್ತಾನೆ. ಬ್ರಹ್ಮಜ್ಞಾನವು ಸತ್ಯವು ದೇವರಿಂದ ಪ್ರಕಟವಾದದ್ದೆಂದು ಹೇಳುತ್ತದೆ. ಆದರೆ ತತ್ವಜ್ಞಾನವು ಬುದ್ಧಿಯಿಂದ ಸತ್ಯವು ಪ್ರಕಟವಾಗುವದೆಂದು ಹೇಳುತ್ತದೆ. ದೇವರ ಅಸ್ತಿತ್ವ ಆತ್ಮದ ಅಮರತ್ವ, ಮತ್ತು ಈಶ್ವರ ಜಗತ್ತುಗಳ ಸಂಬಂಧವಾದ ಸಮಸ್ಯೆಗಳು ಬ್ರಹ್ಮಜ್ಞಾನ(*Theology*)ತತ್ವಜ್ಞಾನಗಳಿಗೆ(*Philosophy*) ಸಾಮಾನ್ಯವಾಗಿವೆ. ಆದರೆ ಜಗದುತ್ಪತ್ತಿಕ್ರಮ, ಅವತಾರ ಕಾರ್ಯ ಮತ್ತು ತ್ರಿಮೂರ್ತಿಗಳ ಸಿದ್ಧಾಂತಗಳು ಬ್ರಹ್ಮಜ್ಞಾನ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿವೆ. ಪ್ಲೇಟೋನಂತೆಯೇ ಇವನು ಪರಲೋಕವಿದೆಯೆಂದು ನಂಬಿದನು. ಮನುಷ್ಯನು ದೇವಧ್ಯಾನದಲ್ಲಿ ಮಗ್ನವಾದಾಗ ಪರಲೋಕಾನುಭವವುಂಟಾಗುವದು. ಆದರೆ ಗುರುವಿನ ಸಹಾಯವಿಲ್ಲದೆ ಈ ಅನುಭವವು ಲಭಿಸದು.

ಸಮಷ್ಟಿ ಭಾವನೆಗಳು ಎಲ್ಲ ವಸ್ತುಗಳಲ್ಲಿ ಸಾರಭೂತವಾಗಿರಬೇಕು. ವಸ್ತುಗಳನ್ನಾಗಲಿ ಅವು ಛಾಯಾರೂಪವಾಗಿ ಬೇರೆ ಇರಲಾರವು. ವ್ಯಕ್ತಿಯ ವಿಶಿಷ್ಟತ್ವವು ಪ್ರಕೃತಿಯಲ್ಲಿರುವದು. ವಸ್ತುಗಳ ರೂಪವು ನಿತ್ಯದಲ್ಲಿ ಪರಿವರ್ತನೆಯಾಗುತ್ತಿರುವದು. ಆತ್ಮ, ಪರಮಾತ್ಮ ಮತ್ತು ದೇವತೆಗಳು

ಪ್ರಕೃತಿಯಿಂದ ಬದ್ಧವಾಗಿಲ್ಲ. ಪ್ರಕೃತಿಯಿಲ್ಲದೆ ರೂಪಮಾತ್ರವಾಗಿ ಇವು ಇರುವವು. ಇವುಗಳಿಗೆ ಪ್ರಕೃತಿಯು ಅವಶ್ಯಕತೆಯಿಲ್ಲದೆ ಸ್ವಯಂಸಿದ್ಧವಾಗಿರುವವು. ದೇವರಲ್ಲಿ ಅನೇಕತ್ವವು ಅಡಗಿದೆ. ಆತ್ಮಗಳು ತಾವು ಪ್ರವೇಶಿದ ದೇಹಗಳ ವಾಸನೆಗಳಿಂದ ಲಿಪ್ತವಾಗಿರುವದರಿಂದ ಆತ್ಮಗಳು ವಾಸನಾದೃಷ್ಟಿಯಿಂದ ಪರಸ್ಪರ ಭಿನ್ನವಾಗಿ ತೋರುವವು. ಮನುಷ್ಯನು ತನ್ನ ಶ್ರೇಯದ ಜ್ಞಾನವನ್ನು ಅನುಸರಿಸುವ ಮಟ್ಟಿಗೆ ಸ್ವತಂತ್ರನಿರುವನು. ಇಚ್ಛೆಗೆ ಶ್ರೇಯವಾದದ್ದಾವದೆಂದು ತೋರಿಸಿಕೊಟ್ಟು ಬುದ್ಧಿಯು ಇಚ್ಛೆಯ (*Will*) ಕಾರ್ಯವನ್ನು ನಿರ್ಧರಿಸಿರುತ್ತದೆ. ದೇವರಲ್ಲಿ ಸಹ ಅತನ ಸರ್ವಜ್ಞತ್ವವೇ ಅಧಿಕವಾಗಿದೆ. ಅತನ ಇಚ್ಛೆಯು ಸರ್ವಜ್ಞತ್ವಕ್ಕೆ ಅಧೀನವಾಗಿದೆ. ಮನುಷ್ಯನ ಇಂದ್ರಿಯಗಳು ಇಚ್ಛಾಶಕ್ತಿಯನ್ನು ಸೋಲಿಸಿದಾಗ ಪಾಪವು ಘಟಿಸುವದು.

ಡನ್ಸಸ್ಕೋಟಸ್— ೧೨೭೦-೧೩೦೮. ಇವನು ಅಯರ್ಲಂಡದಲ್ಲಿ ಜನಿಸಿದನು. ಚಿಕ್ಕ ವಯಸ್ಸಿನಲ್ಲಿಯೇ ಫ್ರಾನ್ಸಿಸ್ಕನ್ ಪಂಥಕ್ಕೆ ಸೇರಿದನು. ಆಕ್ಸಫರ್ಡ ವಿಶ್ವವಿದ್ಯಾಲಯದಲ್ಲಿ ಪ್ರಶಸ್ತಿಯನ್ನು ಹೊಂದಿದನು. ಅಲ್ಲಿ ಅವನು ಹತ್ತು ವರ್ಷಗಳವರೆಗೆ ಬ್ರಹ್ಮಜ್ಞಾನ, ತತ್ವಜ್ಞಾನ ವಿಷಯಗಳನ್ನು ಬೋಧಿಸಿದನು. ಅವನ ಉಪನ್ಯಾಸಗಳನ್ನು ಅನೇಕರು ಕೇಳುತ್ತಿದ್ದರು. ಇದರಿಂದ ಇವನ ಕೀರ್ತಿಯು ಯುರೋಪಖಂಡದಲ್ಲಿ ಹರಡಿತು. ಇವನು ೧೩೦೪ ರಲ್ಲಿ ಪಾರಿಸ್ ಪಟ್ಟಣಕ್ಕೆ ಹೋಗಿ ನಾಲ್ಕು ವರ್ಷಗಳವರೆಗೆ ಬೋಧಿಸಿದನು. ಇವನು ಯಾವ ಸಿದ್ಧಾಂತವನ್ನಾಗಲಿ ತರ್ಕಶಾಸ್ತ್ರಕ್ಕೆ ವಶಪಡಿಸದೆ ಸ್ವೀಕಾರಮಾಡಲಿಲ್ಲ. ತತ್ವಜ್ಞಾನವು ತರ್ಕದಿಂದ ಕೂಡಿದ ಶಾಸ್ತ್ರವೆಂದು ಇವನು ಹೇಳಿದನು. ಇದು ತಪ್ಪಿಲ್ಲದ್ದೂ, ನಿಜವಾದದ್ದೂ ಇದೆ. ನಂಬಿಕೆಯ ವಿಷಯದಲ್ಲಿ ತರ್ಕದ ಸಂಬಂಧವೇ ಇಲ್ಲ. ನಂಬಿಕೆಗೆ ದೇವವಾಣಿಯೇ ಆಧಾರವು. ಇವನ ವಿಚಾರದಲ್ಲಿ ಬ್ರಹ್ಮಜ್ಞಾನ ಶಾಸ್ತ್ರವು ತತ್ವಶಾಸ್ತ್ರ ಅಥವಾ ದೇವವಾಣಿಗಳಂತೆ ಆಧಾರವಾಗಿಲ್ಲ. ಇದು ತ್ರಿಮೂರ್ತಿಗಳ, ಅವತಾರದ, ಸೃಷ್ಟಿ ನಿರ್ಮಾಣದ ಮತ್ತು ಅಮರತ್ವದ ಸಿದ್ಧಾಂತಗಳನ್ನು ಸಿದ್ಧಮಾಡಲಾರದು.

ದೇವರ ಇಚ್ಛೆಯು ಅಗಮ್ಯವಾದದ್ದು. ದೇವವಾಣಿಯು ಮನುಷ್ಯ ಬುದ್ಧಿಗೆ ನಿಲುಕದ್ದಾಗಿದೆ. ದೇವರು ಸರ್ವಸ್ವತಂತ್ರನು. ಥಾಮಸ್ ಅಕ್ವಿನಾಸನು ಹೇಳುವಂತೆ ದೇವರ ಇಚ್ಛೆಯು ಅತನ ಬುದ್ಧಿಗೆ ಅಧೀನವಾ

ಗಿರುವದಾದರೆ ದೇವರು ಸ್ವತಂತ್ರನಾಗಿರಲಾರನು. ಮನುಷ್ಯನಲ್ಲಿ ಪ್ರಜ್ಞೆಯು ಮೊದಲು ಕೆಲವು ಅಸ್ಪಷ್ಟವಾದ ಮತ್ತು ಅಪೂರ್ಣವಾದ ಭಾವನೆಗಳನ್ನು ಹುಟ್ಟಿಸುವದು. ಯಾವ ಭಾವನೆಗಳ ಮೇಲೆ ಇಚ್ಛೆಯು ತನ್ನ ಲಕ್ಷವನ್ನಿಡುವದೋ ಅಂತಹ ಭಾವನೆಗಳು ಸ್ಪಷ್ಟವಾಗಿಯೂ ಪೂರ್ಣವಾಗಿಯೂ ಪ್ರಾದುರ್ಭವಿಸುವವು. ಉಳಿದವು ಅದೃಶ್ಯವಾಗುವವು. ಶ್ರೇಯವು ದೇವರ ಕೃತಿಯಿಂದಾದದ್ದು. ಅಕ್ವಿನಾಸ ಮತ್ತು ಸ್ಕೋಟಸ್ ಇವರೀರ್ವರೂ ನೈತಿಕ ನಿಯಮವು ದೇವರ ಆಜ್ಞೆಯೆಂದು ಹೇಳುತ್ತಾರೆ. ದೇವರು ತನ್ನ ಇಚ್ಛಾನುಸಾರವಾಗಿ ಸೃಷ್ಟಿಯನ್ನುಂಟುಮಾಡುತ್ತಾನೆ. ತನ್ನ ಕೃಪೆಯಿಂದ ದೇವರು ಮನುಷ್ಯನನ್ನು ಪಾಪದಿಂದ ಮುಕ್ತಮಾಡಬಲ್ಲನು. ಇದರಂತೆಯೇ ಕೈಸ್ತ ಜರ್ಚಿಗೂ ಅಧಿಕಾರವುಂಟು. ದೇವರು ನೈತಿಕ ನಿಯಮವನ್ನು ಬದಲಾಯಿಸಿ ಮತ್ತೊಂದು ವಿಧವಾಗಿ ಮಾಡಬಲ್ಲನು. ಈ ಕಾರಣದಿಂದ ಬುದ್ಧಿಪುರಸ್ಸರವಾದ ಬ್ರಹ್ಮಜ್ಞಾನ ಶಾಸ್ತ್ರವು ಇರಲಾರದು. ದೇವರ ಇಚ್ಛೆಯೇ ನಂಬಿಕೆಯ ವಿಷಯವಾಗಿದೆ. ಅದರಲ್ಲಿ ನಂಬಿಕೆಯನ್ನಿಡುವದೇ ಮನುಷ್ಯನ ಇಚ್ಛೆಯು. ದೈವಿಕ ಕೃಪೆಯೊಂದಿಗೆ ಸಹಕಾರ ಮಾಡುವದೇ ಮನುಷ್ಯಸ್ವಾತಂತ್ರ್ಯದ ಕಾರ್ಯವು.

ವಿಲಿಯಮ್ ಓಕ್ಯಾಮ್— ೧೩೦೦-೧೩೪೯. ಇವನು ಇಂಗ್ಲಂಡದ ಓಕಾಮ್ ಎಂಬಲ್ಲಿ ಜನಿಸಿ ಆಕ್ಸಫರ್ಡದಲ್ಲಿ ವಿದ್ಯಾವ್ಯಾಸಂಗಮಾಡಿದನು. ಇವನು ಪಾರಿಸದಲ್ಲಿ ಬೋಧಿಸಿದನು. ಪೋಪನ ಅಧಿಕಾರಕ್ಕೆ ವಿರೋಧಿಸಿದನು. ಸಮಷ್ಟಿಯು ನಿಜವಾಗಿರದೆ ನಾಮಮಾತ್ರವಾಗಿದೆ. ವ್ಯಷ್ಟಿಯೇ ನಿಜವಾದದ್ದೆಂದು ಹೇಳಿದನು.

ಶ್ರೀ ದ್ರಾಕ್ಷಾರಾಮ ಕ್ಷೇತ್ರವು.

ಲೇಖಕಃ— ಶಿವಸುತ.

ಶೈವಮಠ ಪ್ರದೇಶ ಸುತ್ತಲೂ ಲಿಂಗವುದ್ರೆಯ ಕಲ್ಲುಗಳಿರುವಂತೆ ತೆಲುಗುದೇಶದ ಮೂರುಕಡೆ ಮೂರು ಮಹಾಲಿಂಗಗಳು ಇರುವುವು. ಒಂದುಕಡೆ ಶ್ರೀಶೈಲ ಮಲ್ಲಿಕಾರ್ಜುನ ಲಿಂಗವು, ಇನ್ನೊಂದು ಕಡೆ ಶ್ರೀ ಕಾಳಹಸ್ತೀಶ್ವರ ಲಿಂಗವು, ಮತ್ತೊಂದುಕಡೆ ಶ್ರೀ ದ್ರಾಕ್ಷಾರಾಮೇಶ್ವರ ಲಿಂಗವು. ಈ ಮೂರು ಲಿಂಗಗಳ ಮಧ್ಯದಲ್ಲಿರುವ ಪ್ರಾಂತವೇ ತ್ರಿಲಿಂಗ ಅಥವಾ ತೆಲುಂಗು (ತೆಲುಗು) ದೇಶವೆಂದು ರೂಢಿಯಲ್ಲಿ ಬಂದಿದೆ. ಈ ಮೂರು ಶಿವಕ್ಷೇತ್ರಗಳು ಬರೀ ಆಂಧ್ರವೇಕೆ, ಇಡೀ ಭಾರತೀಯರಿಗೇನೆ ಅತ್ಯಂತ ಗಣ್ಯವಾದವುಗಳು, ಪುರಾತನವಾದವುಗಳು, ಸಾಂಸ್ಕೃತಿಕ ಮತ್ತು ಐತಿಹಾಸಿಕ ದೃಷ್ಟಿಗಳಿಂದ ಬಹು ಮಹತ್ವದವುಳ್ಳ ಸ್ಥಳಗಳು.

ಕ್ಷೇತ್ರಪರಿಚಯ.

ದ್ರಾಕ್ಷಾರಾಮ ಕ್ಷೇತ್ರವು ಗೋದಾವರೀ ನದಿಯ ಮುಖದ್ವಾರಪ್ರದೇಶದಲ್ಲಿ (*Delta area*) ಕಾಕಿನಾಡ ಕೋಟಿಪಲ್ಲಿ ರಸ್ತೆಯಲ್ಲಿರುವುದು. ಈ ಪ್ರಾಂತವು ಮೂರುಕಡೆ ಗೋದಾವರೀ ನದಿಯಿಂದಲೂ, ಒಂದು ಕಡೆ ಸಮುದ್ರದಿಂದಲೂ ಆವರಿಸಿಕೊಳ್ಳಲ್ಪಟ್ಟಿದ್ದು ತ್ರಿಕೋಣಾಕೃತಿಯುಳ್ಳದ್ದಾಗಿರುವದರಿಂದ ಇದಕ್ಕೆ "ಕೋಣಶೀಮ" ಎಂದು ಸಹ ಕರೆಯುವರು. ಗೋದಾವರಿಯು ಇಡೀ ದೇಶದ ಸಾರವನ್ನೆಲ್ಲ ತಂದು ಇಲ್ಲಿ ಬಿಟ್ಟಿರುವದರಿಂದ ಈ ಪ್ರದೇಶವು ಅತ್ಯಂತ ಸಾರವಂತವಾದುದು. ಗಂಡನಮನೆ ಎಂಬ ಅಭಿಮಾನದಿಂದ ಗೋದಾವರಿಯು ಈ ಪ್ರದೇಶದ ಮೇಲೆ ಬಹು ಪಕ್ಷಪಾತ ಉಳ್ಳವಳಾಗಿದ್ದು ಸಮುದ್ರದ ಮಂಳು ಭೂಮಿಯನ್ನು ನಂದನವನವನ್ನಾಗಿ ಮಾಪಡಿಸಿರುವಳು. ಈ ಪ್ರದೇಶದಲ್ಲಿ ಎಲ್ಲಿ ನೋಡಿದರೂ ತೆಂಗು, ಬಾಳೆ, ಅಡಿಕೆ, ಭತ್ತ ಮುಂತಾದವುಗಳೇ ಕಂಗೊಳಿಸುವುವು. ಈ ಭವ್ಯಾರಾಮಪ್ರದೇಶ ಮಧ್ಯಭಾಗದಲ್ಲಿ ದ್ರಾಕ್ಷಾರಾಮವು ಸರೋವರದಲ್ಲಿ ಬಿಲ ಮಧ್ಯಸ್ಥಿತ ಶ್ವೇತಕಮಲದಂತೆ ಕಂಗೊಳಿಸುವುದು.

ದೇವಸ್ಥಾನದ ಮುಂದುಗಡೆ ಸಪ್ತಗೋದಾವರಿ ತೀರ್ಥವಿರುವುದು. ಗೋದಾವರಿಯು ಸಮುದ್ರವನ್ನು ಸೇರುವ ಮುಂದು ೭ ಶಾಖೆಗಳಾಗಿ

ಒಡೆಯುತ್ತವೆ. ಒಂದೊಂದು ಶಾಪಿಗೆ ಸಪ್ತರ್ಷಿಗಳಲ್ಲಿ ಒಬ್ಬೊಬ್ಬರ ಹೆಸರನ್ನು ಇಟ್ಟಿರುವರು. ಏ ಶಾಪಿಗಳ ನೀರು ಈ ತೀರ್ಥದಲ್ಲಿ ಮಿಳಿತವಾಗಿರುವುದರಿಂದ ಈ ತೀರ್ಥಕ್ಕೆ ಸಪ್ತಗೋದಾವರಿ ಎಂದು ಕರೆಯುವರು. ಸಾಧಾರಣವಾಗಿ ಕಾಶೀ ರಾಮೇಶ್ವರ ಯಾತ್ರಿಕರು ಈ ತೀರ್ಥದಲ್ಲಿ ಮೀಯಲು ಪ್ರತಿನಿತ್ಯ ತಂಡತಂಡವಾಗಿ ಬರುವರು. ದೇವಸ್ಥಾನವು ಪುರಾತನ ಕಟ್ಟಡವು. ಸುತ್ತಲೂ ದೊಡ್ಡದಾದ ಪೌಳಿಯು. ಒಂದುಕಡೆ ದೇವಿಯ ದೇವಸ್ಥವು. ಮಧ್ಯದಲ್ಲಿ ಶ್ರೀ ಭೀಮೇಶ್ವರ ದೇವಾಲಯವು. ಶ್ರೀ ಭೀಮೇಶ್ವರ ಲಿಂಗವು ಸುಮಾರು ೬ ಅಂ ಅಡಿ ಉದ್ದವಿರಬಹುದು. ಲಿಂಗದರ್ಶನವಾಗಬೇಕಾದರೆ ಮೇಲುಪ್ಪರಿಗೆಯನ್ನು ಏರಬೇಕು. ಲಿಂಗವು ಇನ್ನೂ ಬೆಳೆಯುತ್ತಲೇ ಇರುವುದೆಂದು ಹೇಳುವರು. ಹಾಗೆ ಬೆಳೆಯುಗೊಡದಂತೆ ಮಸ್ತಕಕ್ಕೆ ಭಂಗಾರದ ಕಟ್ಟನ್ನು ಹಾಕಿರುವರು. ಮಸ್ತಕವನ್ನು ದರ್ಶನಮಾಡಿಕೊಂಡು ದೇವಸ್ಥಾನದ ಕೆಳಭಾಗಕ್ಕೆ ಒಂದು ಪೀಠವನ್ನು ಪ್ರದಕ್ಷಿಣೆ ಮಾಡಬೇಕು. ಈ ಅದ್ಭುತ ಲಿಂಗವನ್ನು ನೋಡಿ ನಾನು ಸ್ತಂಬೀಭೂತನಾದೆನು. ಮನಸ್ಸಿನಲ್ಲಿ ಭಾವನಾ ತರಂಗಗಳು ಉಕ್ಕೇರಹತ್ತಿದವು. ಪುರಾತನ ಶಿವಲಿಂಗಗಳೆಲ್ಲವೂ ಇದೇ ರೀತಿ ಇದ್ದಿರಬಹುದೆಂದು ಊಹಿಸಿದೆನು.

ಯಜ್ಞವಾಟಿಕೆಯೋ?

ದ್ರಾಕ್ಷಾರಾಮಕ್ಕೆ 'ದಕ್ಷಿಣ ಯಜ್ಞವಾಟಿಕೆ' ಎಂದು ಸಹ ಕರೆಯುವುದುಂಟು. ದಕ್ಷಪ್ರಜಾಪತಿಯು ಪರಾಣ ಸುಪ್ರಸಿದ್ಧವಾದ ಯಜ್ಞವನ್ನು ಆಚರಿಸಿದುದೂ, ಶ್ರೀ ದಾಕ್ಷಾಯಣಿಯು ಪತಿನಿಂದೆಯನ್ನು ಕೇಳಿದ ಪಾಪ ವಿಮೋಚನೆಗಾಗಿ ದೇಹವಿಟ್ಟದ್ದುದೂ ಇದೇ ಸ್ಥಳದಲ್ಲಿಂದು ಹೇಳುವರು. ಪುರಾಣದ ಮಾತು ಏನೆ ಇರಲಿ, ಈ ಪುರಾತನ ದೇವಸ್ಥಾನವು ಪೂರ್ವವೈದಿಕ ಯುಗದ ಯಜ್ಞ ಶಾಲೆಯನ್ನು ಜ್ಞಾಪ್ತಿಗೆ ತರುವುದು. ವೈದಿಕ, ತಾಂತ್ರಿಕ ಸಂಸ್ಕೃತಿಗಳ ಹೋರಾಟದ ಚಿತ್ರವನ್ನು ಇಲ್ಲಿ ಸುಸ್ಪಷ್ಟವಾಗಿ ಕಾಣಬಹುದು. ವೇದ ಯುಗದಲ್ಲಿ ದೇವರನ್ನು ಪ್ರೀತಿಸುವ ನೆವದಿಂದ ಅಡುಕುದುರೆ ಮುಂತಾದ ಪ್ರಾಣಿಗಳನ್ನು ಕೊಂದು ಹವನ ಮಾಡಿ ದೇವರ ಹೆಸರಿನಿಂದ ತಿನ್ನುತ್ತಿದ್ದರು. ಇದಕ್ಕೆ 'ಯಜ್ಞ'ವೆಂದು ಹೆಸರು. ಹವನ ಮಾಡಲು ತಂದಿದ್ದ ಬಡಪ್ರಾಣಿಗಳನ್ನು ಯಜ್ಞ ಮುಂಟಪದ ಮಧ್ಯಭಾಗದಲ್ಲಿ ಒಂದು ಸ್ತಂಭಕ್ಕೆ ಕಟ್ಟುವ ಪದ್ಧತಿ ಇದ್ದಿತು. ಆ ಸ್ತಂಭಕ್ಕೆ

ಯಜ್ಞಸ್ತಂಭವೆಂದು ಹೆಸರು. ಬರ ಬರುತ್ತಾ ಆ ಸ್ತಂಭವೇ "ಯೂಪಸ್ತಂಭ"ವೆಂಬೆನಿಸಿಕೊಂಡು ಅನಾದಿ ಮಧ್ಯಾಂತನಾದ ಮತ್ತು ಆಯುವ್ಯಯರ್ತನಾದ ಪರಮಾತ್ಮನ ಸಂಜ್ಞೆಯಾಗಿ ಗ್ರಹಿಸಲ್ಪಟ್ಟು ಪೂಜ್ಯವಾಯಿತು.

ಯೂಪಸ್ತಂಭವೇ ಲಿಂಗವು.

ಕಾಲಗಳಿತವಾದಂತೆ ಮಾನವನ ಬುದ್ಧಿಯು ವಿಕಾಸವಾಯಿತು. "ಸೃಷ್ಟಿಯೂ ವಿಶಾಲವಾಯಿತು. ಸಂಕುಚಿತ ಬುದ್ಧಿಯು ನಾಶವಾಯಿತು." ಅಯ್ಯೋ! ಪಾಪ! ನಮ್ಮ ಸುಖಕ್ಕೆಂದು ನಿರಾಪರಾಧಿಗಳಾದ ಸಾಧು ಪ್ರಾಣಿಗಳನ್ನು ಕೊಲ್ಲುವದು ನ್ಯಾಯವೇ? ಎಂಬುವ ಪ್ರಶ್ನೆಯು ಮಾನವನ ಹೃದಯದಲ್ಲಿ ಮನೆಮಾಡಿಕೊಂಡು ಸಮಾಜದಲ್ಲಿ ದೊಡ್ಡ ವಿಪ್ಲವವನ್ನೆಬ್ಬಿಸಿತು. "ಧರ್ಮದ ಹೆಸರಿನಿಂದ ಪ್ರಾಣಿಗಳನ್ನು ಕೊಲ್ಲುವದು ಕೂಡದೆ"ಂಬ ಸಂದೇಶವನ್ನು ವಿಪ್ಲವಕಾರಕರು ಸರ್ವತ್ರ ಪ್ರಸಾರ ಮಾಡಿದರು. ವೈದಿಕ ಯುಗದ ಸಂಕುಚಿತ ಕರ್ಮವಾದವನ್ನು ಖಂಡಿಸಿದ ಈ ವಿಪ್ಲವಕಾರಕವೇ ಉಪನಿಷತ್ತುಗಳನ್ನೂ ಆಗಮನಗಳನ್ನೂ ಪ್ರಚಾರಗೊಳಿಸಿದ ಧರ್ಮವೀರರು. ಆದರೆ ಪ್ರಾಚೀನ ಪದ್ಧತಿಯ ದೆವ್ವವು ಈ ಚಳವಳಿಕೋರರನ್ನು ಸಹ ಬಿಡಲಿಲ್ಲ. ಇವರು ಯಜ್ಞ ಕರ್ಮಾಚರಣೆಯನ್ನು ಖಂಡಿಸಿದರೂ ಅದರ ತತ್ವವನ್ನು ಮಾತ್ರ ಬಿಡಲಿಲ್ಲ. ದೇವರಿಗಾಗಿ ನಾವು ಯಜ್ಞವಾಡಬೇಕಾದುದು ಸಾಧು ಪ್ರಾಣಿಗಳನ್ನಲ್ಲ, ನಮ್ಮ ಅತ್ಯವನ್ನು ಜೀವಾತ್ಮನ ಸ್ವತಂತ್ರ ವ್ಯಕ್ತಿತ್ವವನ್ನು ಸುಟ್ಟು ಏಕಮೇವಾದ್ವಿತಯನಾದ ಪರಮಾತ್ಮನಲ್ಲಿ ಐಕ್ಯವಾಗುವದೇ ನಿಜವಾದ ಯಜ್ಞವೆಂಬ ನವಸಂದೇಶವೇ ಈ ವಿಪ್ಲವಕಾರಕರ ಸಂದೇಶವಾಯಿತು. "ಉಪನಿಷತ್ತು" ಮತ್ತು "ಆಗಮ" ಈ ಶಬ್ದಗಳು ಇದೇ ಅರ್ಥವನ್ನು ಸೂಚಿಸುವವು. ವೈದಿಕ ಯಜ್ಞ ಶಾಲೆಯ ಮಧ್ಯಭಾಗದಲ್ಲಿ ವೇಧಾಧಿಪತಿಯಾದ ಪರಮಾತ್ಮ ಸೂಚಕವಾಗಿ ನಿಲ್ಲಿಸಲ್ಪಡುವ "ಯೂಪಸ್ತಂಭ"ವೇ ಪರಬ್ರಹ್ಮ ಸ್ವರೂಪ ನಾದ ಲಿಂಗ ಅಥವಾ "ಪತಿ" ವಾಚಕವಾಯಿತು. ಅದಕ್ಕೊಸ್ಕರ ಯಜ್ಞವಾಡಲ್ಪಡುವ ಜೀವಾತ್ಮವೇ ಯಜ್ಞ ಪಲ ಅಥವಾ "ಪಶು" ವಾಚಕವಾಯಿತು. "ಪಶು" "ಪತಿ"ಗಳ ಸಂಬಂಧವೇ ಪಾಶವಾಯಿತು. ತನ್ನನ್ನು ಅಳಿದುಕೊಂಡು ಪರವನ್ನು ಸೇರುವದೇ ಅರ್ಥಾರ್ತ "ತ್ಯಾಗ"ವೇ ಉಪನಿಷತ್ತುಗಳ ಮತ್ತು ಆಗಮಗಳ ಮೂಲ ತತ್ವವಾಯಿತು.

"**ನಕರ್ಮಣಾ ನಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ**" ಎಂಬ ಘನತತ್ತ್ವವೇ ಆಗಮಗಳ ದಿವ್ಯಸಂದೇಶವಾಯಿತು.

ದೇವಾಲಯ ನಿರ್ಮಾಣವು ಆಗಮಿಕ ಪದ್ಧತಿಯಾದರೂ ವೈದಿಕ ಧರ್ಮದ ಯಜ್ಞ ಪದ್ಧತಿಯ ಅನುಕರುಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಆಗಮಶಾಸ್ತ್ರದ ಪ್ರಕಾರ ನಿರ್ಮಿಸಲ್ಪಟ್ಟಿರುವ ದೇವಾಲಯಗಳಿಲ್ಲವೂ ಯಜ್ಞ ಶಾಲೆಗಳನ್ನು ಹೋಲುವವು. ಯಾವ ಸ್ತಂಭದ ಬಡಲು ಶಿವ ಲಿಂಗವು ವಿರಾಜಿಸುತ್ತಲಿದ್ದು ಲಿಂಗಕ್ಕೆ ಆತ್ಮನನ್ನು ಹವನವಾಡಿ ಅರ್ಪಿಸುವದೇ ಅರ್ಥಾತ್ ಆತ್ಮತ್ಯಾಗವೇ ಯಜ್ಞವೆಂದು ಗ್ರಹಿಸಲ್ಪಡುವುದು. ದ್ರಾಕ್ಷಾರಾಮದೇವಾಲಯವನ್ನು ನೋಡಿದವರಿಗೆಲ್ಲ ಈ ವಿಷಯವು ಜೆನ್ನಾಗಿ ಮನವರಿಕೆಯಾಗದೇ ಇರಲಾರದು.

ವೀರಶೈವ ಪಂಚಾಚಾರ್ಯರಲ್ಲಿ ಒಬ್ಬರಾದ ಶ್ರೀ ಪಂಡಿತಾರಾಧ್ಯರ ಚರಿತ್ರೆಗೆ ಸಂಬಂಧ ಪಟ್ಟಿರುವ ಈ ದ್ರಾಕ್ಷಾರಾಮ ಕ್ಷೇತ್ರವು ವೀರಶೈವರಿಗೆ ಬಹು ಮುಖ್ಯವಾದುದು. ಅಮರಗುಂಡವು ಇಲ್ಲಿಯೇ ಇರುವುದೆಂದು ಕೇಳಿದೆನಾಗಲಿ ನೋಡಲೂ ಸಮಯವು ಸಿಕ್ಕಲಿಲ್ಲ. ಈ ಕ್ಷೇತ್ರದ ಸ್ಥಳ ಪುರಾಣವನ್ನು ಪೇಮಲವಾಡ ಭೀಮಕವಿ ಎಂಬ ಕವೀಶ್ವರನು ಭೀಮೇಶ್ವರ ಪುರಾಣವೆಂಬ ಆಂಧ್ರ ಪ್ರೌಢ ಚಂಪೂಕಾವ್ಯದಲ್ಲಿ ಬರೆದಿರುವನು. ಆಂಧ್ರ ಬಸವ ಪುರಾಣವನ್ನು ಕನ್ನಡ ಷಟ್ಪದಿಯಲ್ಲಿ ಬರೆದ ಭೀಮಕವಿಯೇ ಈತನೆಂದು ಕೆಲವರ ವಾದವು. ಈ ವಾದದ ಬಗ್ಗೆ ಚರ್ಚಿಸುವದು ಇಲ್ಲಿ ಅಪ್ರಾಸಂಗಿಕವು.

ದೇವಾಲಯದ ಪೌಳಿಯಲ್ಲಿ ಒಂದು ಕಡೆ ಶ್ರೀ ಮಾಣಿಕ್ಯಾಂಬ ದೇವಿಯ ಗುಡಿ ಇರುವುದು. ಈ ದೇವಿಯು ನವಶಕ್ತಿಯಲ್ಲಿ ಒಂದು ಶಕ್ತಿಯೆಂದು ಹೇಳುವರು. ಈ ದೇವಾಲಯದ ಸುತ್ತಲೂ ಅನೇಕ ಪುರಾತನ ಲಿಪಿಗಳಿವೆ. ವೇಳೆಯ ಅಭಾವದಿಂದ ಅವುಗಳೇನೆಂಬುದನ್ನು ಸಹ ನೋಡಲಿಕ್ಕಾಗಲಿಲ್ಲ. ಅಂತೂ ದ್ರಾಕ್ಷಾರಾಮವು ಅತ್ಯಂತ ದರ್ಶನೀಯವಾದ ಸ್ಥಳವು.

ಯೋಗೀಶ್ವರ ಅರವಿಂದಘೋಷರ "ಯೋಗ ಮತ್ತು ಅದರ ಉದ್ದೇಶ" ×

(ಮುಧುರಚೆನ್ನ—ಹಲಸಂಗಿ)

ಪೂರ್ಣ ಯೋಗದ ಗುರಿಯು ವೈಯಕ್ತಿಕ ಮೋಕ್ಷವಾಗಿರದೆ ಸಮಸ್ತ ಮಾನವ ಕೋಟಿಯ ದಿವ್ಯಜೀವನದ ಉದಯವೇ ಅದರ ಉದ್ದೇಶವಾಗಿದೆ.

ಅಜ್ಞಾನದ ಆನಂದವನ್ನು ಭೋಗಿಸುವ ಇಚ್ಛೆಯುಂಟಾದಾಗ ದೇವನು ಜಗತ್ತಿನಲ್ಲಿ ವಿಷಮ ಪರಿಸ್ಥಿತಿಯನ್ನುಂಟುಮಾಡುತ್ತಾನೆ.

ಅಂಥ ಕಾಲದಲ್ಲಿಯೂ ದಿವ್ಯ ಜೀವನದ ಮೂಲಸೂತ್ರವನ್ನು ಎಲ್ಲಿಯಾದರೂ ಒಂದು ದೇಶದಲ್ಲಿ ಕಾಯ್ದಿಡುತ್ತಾನೆ. ನಿಕೃಷ್ಟಪಕ್ಷಕ್ಕೆ ಈ ಚತುರ್ಯುಗಗಳಿಂದಲೂ ಹಿಂದುಸ್ತಾನಕ್ಕೆ ಆ ಪಟ್ಟವು ಬಂದಿದೆ.

ಸತ್ಯಸ್ಥಿತಿಯ ಅಭಿವೃದ್ಧಿಯು ಜಗತ್ತಿನಲ್ಲಿ ಉಂಟಾಗಬೇಕಾದಾಗ ಹಿಂದುಸ್ತಾನದ ಯೋಗಿಗಳು ಮಾನವಕೋಟಿಯ ಜೀವನ ಕ್ಷೇತ್ರದಲ್ಲಿ ಕಾಲಿಡುವರು. ಆದರೆ ಅದರ ಹ್ರಾಸಕಾಲದಲ್ಲಿ ಅವರು ಜೀವನಕ್ಕೆ ವಿಮುಖರಾಗುವರು.

ಸತ್ಯಸ್ಥಿತಿಯು ಚತುರ್ಯುಗ ಕ್ರಮದಿಂದ ಹ್ರಾಸವೃದ್ಧಿಗಳನ್ನು ಹೊಂದುವದು. ಕಲಿಯುಗವು ಪರಮಹ್ರಾಸದ ಕಾಲವಾಗಿದ್ದರೂ ಸತ್ಯಯುಗದ ಪೂರ್ವ ಸಿದ್ಧತೆಯ ಕಾಲವು ಇದೇ ಆಗಿದೆ.

ದಿವ್ಯಸತ್ಯ ಹಾಗು ನಿಜಸಾಮರಸ್ಯಗಳ ಪುನಃ ಪ್ರತಿಷ್ಠೆಯನ್ನು ಹಿಂದುಸ್ತಾನವೇ ಮಾತ್ರ ಮಾಡಬಲ್ಲದಾಗಿದೆ. ಮನುಷ್ಯನ ಹೊರಗಿನ ಯಾವ ಬದಲಾವಣೆಗಳಿಂದಲೂ ಅದು ಶಕ್ಯವಿರದೆ ಮಾನವನ ಸಂಪೂರ್ಣ ಜೀವಸತ್ತೆಯು ಒಳಗಿನಿಂದ ಬದಲಾದರೆ ಮಾತ್ರ ಅದು ಸಾಧ್ಯವದೆ.

× ಶ್ರೀ ಅರವಿಂದ ಯೋಗಿಗಳ "*Yoga and its objects*" ಎಂಬ ಅತ್ಯಂತ ಮಹತ್ವದ ಸೂತ್ರಾತ್ಮಕ ಗ್ರಂಥದ ಸಾರಂಶವಿದು. ಶ್ರೀ ಅರವಿಂದರ ವಿಚಾರಸರಣಿ ತೀರ ಹೊಸವಾಗಿರುವದರಿಂದ ತಿಳಿದುಕೊಳ್ಳಬೇಕೆನ್ನುವವರು ಬಹಳೇ ಲಕ್ಷಪೂರ್ವಕವಾಗಿ ಮನನ ಮಾಡಬೇಕಾಗುವದು.— ಮುಧುರಚೆನ್ನ.

ಇದಕ್ಕೆ ಆತ್ಮಸಮರ್ಪಣ ಯೋಗವೇ ಏಕೋಪಾಯವು. ಇನ್ನುಳಿವ ಯಾವ ಯೋಗಗಳಿಂದಲೂ ಆ ಧ್ಯೇಯವು ಸಾಧಿಸದು.

ಪೂರ್ಣಯೋಗದ ಮೂಲಸೂತ್ರವು:— ಸಗುಣ ನಿರ್ಗುಣ ಪರ ಬ್ರಹ್ಮನ ಸರ್ವಾಂತರ್ಯಾಮಿತ್ವವನ್ನು ಸಾಕ್ಷಾತ್ಕರಿಸಿಕೊಳ್ಳುವದು.

ಆತ್ಮಸಮರ್ಪಣವು ಸರ್ವಾಂಗೀಣವಾಗಿರಬೇಕಾದದ್ದೇ ಈ ಯೋಗದ ಮುಖ್ಯ ಸಾಧನವು.

ಮಾನವನು ಈ ಯೋಗದಲ್ಲಿ ತನ್ನ ಅಳವಿನಿಂದ ನಡೆಯಬೇಕಾಗಿಲ್ಲ. ದೇವನ ಸರ್ವಸಮರ್ಥ ಸ್ವಾಭಾವಿಕ ಶಕ್ತಿಯೇ ಇಲ್ಲಿ ಕಾರ್ಯ ಮಾಡುತ್ತದೆ. ಅದ್ದರಿಂದ ರಾಜಯೋಗದ ಸಂಯಮ, ಹಠಯೋಗದ ಪ್ರಾಣಾಯಾಮ, ಸಾನುರಾಗದ ಭಕ್ತಿ, ನಿಸ್ವಾರ್ಥಕ್ರಿಯಾರ್ಪಣ ಮೊದಲಾದ ಬಹುವಿಧದ ಯೋಗ ಪದ್ಧತಿಗಳು ಪರಿಣಾಮದಲ್ಲಿ ಇದಕ್ಕೆ ಸರಿಗಟ್ಟಲಾರವು.

ಪೂರ್ಣ ಯೋಗದ ಮೆಟ್ಟಿಲುಗಳು— (೧) ಆತ್ಮಸಮರ್ಪಣದ ಸಂಕಲ್ಪವು ಪ್ರಥಮ ಸಾಧನವಾಗಿದೆ. ಮಾನವನು ತನ್ನ ಸಮಸ್ತಸತ್ತಾ ವಿಭಾಗಗಳನ್ನು ಸಂಪೂರ್ಣವಾಗಿ ಸಮರ್ಪಿಸಲಿಕ್ಕೆಬೇಕು. ದೇವನ ಚಿತ್ತವು ತನ್ನಲ್ಲಿ ಅಪರೋಕ್ಷವಾಗಿ ಪ್ರಕಟವಾಗಬೇಕೆಂಬುದೊಂದೇ ಅತನ ಆಕಾಂಕ್ಷೆಯಾಗಿರಬೇಕು.

(೨) ಸಾಧಕನ ಒಳಗಿನ ಒಳಗಿನ ಅನಿರೀಕ್ಷಿತ ಅಸಂಖ್ಯ ಅಶುದ್ಧಿಗಳನ್ನು ವಿಶ್ವಶಕ್ತಿಯು ಹೂಡಿದೆಬ್ಬಿಸಿ ಹೊರದೂಡಹತ್ತುವದರಿಂದ ಬಹುವಿಧದ ದೈಹಿಕ ಮಾನಸಿಕ ಅಸ್ತವ್ಯಸ್ತತೆಗಳು ಆ ಕಾಲದಲ್ಲಿ ಉಂಟಾಗುವದು ಅನಿವಾರ್ಯವಾಗಿರುವದರಿಂದ ಆಗ ಸಾಧಕನು ಗಾಬರಿಗೊಳ್ಳದೆ ಸಾಕ್ಷೀಭಾವದಿಂದ ಇರಬೇಕಾಗುವದು. ಇದೇ ಎರಡನೇ ಮೆಟ್ಟಿಲು. ಮತ್ತು ಸಂದೇಹವೇ ಈ ಯುಗದ ಮುಖ್ಯ ಅಶುದ್ಧಿಯಾಗಿರುವದರಿಂದ ಅದು ಹೆಣಿಕೆ ಹಾಕಿವ ಕಾಲದಲ್ಲಿ ಧೀರತನವೂ ಸತ್ಸಂಗವೂ ಸಮರ್ಪಣಕ್ಕೆ ಸಹಾಯಕಗಳಾಗಿವೆ. ಗೀತೆಯಲ್ಲಿ ಹೇಳಿದ–"ಮಾಮೇಕಂ ಶರಣಂ ವ್ರಜ ಅಹಂತ್ವಾಂ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿಮಾಶುಚ" ಎಂಬ ಮಾತನ್ನು ಮರೆಯದಿರು.

ಸಾಕ್ಷೀಭಾವಕ್ಕೆ ತನ್ನನ್ನು ತಾನು ಅರಿಯುವ ಅಗತ್ಯವಿದೆ. ಚಿತ್ತವೂ, ಮನಸ್ಸೂ, ಬುದ್ಧಿಯೂ, ಅಹಂಕಾರವೂ ಪುರುಷನ ಆಧಾರಗಳ ಪರಿ

ಚಿತ ವಿಭಾಗಗಳಾಗಿವೆ. ಬುದ್ಧಿಯ ಮೇಲೆ ಇನ್ನೂ ದಿವ್ಯಬುದ್ಧಿ ಅಥವಾ ವಿಜ್ಞಾನ ಮತ್ತು ಆನಂದ ಮುಂತಾದ ಅಪರಿಚಿತ ವಿಭಾಗಗಳೂ ಇವೆ. ಅವುಗಳಲ್ಲಿ ನಮಗೆ ಜಾಗ್ರತಿಯುಂಟಾಗಬೇಕು. ನಮ್ಮ ಜೀವನವೆಲ್ಲ ಆ ಕೇಂದ್ರಗಳಿಂದ ನಡೆಯಬೇಕು. ಇದೇ ಆ ಪೂರ್ಣಯೋಗದ ಪರಾವಸ್ಥೆ.

(೩) ಈ ಯೋಗದ ಮೂರನೇ ಮೆಟ್ಟಿಲೆಂದರೆ ಸರ್ವ ವಸ್ತುಗಳನ್ನು ದೇವರೆಂದು ಗ್ರಹಿಸುವದು. ಮೊದಲಿಗೆ ನಾಮರೂಪಗಳಿಂದ ಅತೀತವಾದ ಒಂದು ಸರ್ವಾಂತರ್ಯಾಮಿ ತತ್ಪವು ಗೋಚರವಾಗುವದು. ಆಗ "ಬ್ರಹ್ಮಸತ್ಯ ಜಗನ್ಮಿಥ್ಯ" ವೆಂಬ ಅನುಭವವು ಬರುವದು. ಅನಂತರ ನಮ್ಮ ಆತ್ಮವಿಕಾಸದ ಪ್ರಗತಿಯು ಮುಂದುವರಿದ ಹಾಗೆ ಜಗತ್ತೂ ಕೂಡ ಪರಬ್ರಹ್ಮನ ಸತ್ಯಪ್ರಕಟನೆಯೆ ಆಗಿದೆಯೆಂದು ಅನುಭವವಾಗುವದರಿಂದ "ಸರ್ವಂಖಲ್ವಿದಂಬ್ರಹ್ಮ" ಎಂಬ ತತ್ಪಕ್ಕೆ ಮುಟ್ಟುವೆವು. ಆಗ "ಆತ್ಮೈವಾನಂ ಸರ್ವಭೂತೇಷು ಸರ್ವಭೂತಾನಿಚಾತ್ಮನಿ" ಎಂಬ ಅನುಭವವು ನಮಗೆ ಸ್ವಾಭಾವಿಕವಾಗುವದು. ಆದರೆ ಇಷ್ಟಕ್ಕೇ ಮುಗಿಯಲಿಲ್ಲ. ಸಮಸ್ತವೂ ಸೃಷ್ಟ ಈಶ್ವರನ ದಿವ್ಯಲೀಲೆಯೆಂದು ಅನುಭವವಾಗುವುದು ಈ ಯೋಗದ ಚರಮಾವಸ್ಥೆಯಾಗಿದೆ.

ಆದರೆ 'ಬ್ರಹ್ಮಸತ್ಯ ಜಗನ್ಮಿಥ್ಯ'ದ ಜಾತಿಯ ಅನುಭವಕ್ಕೆ ನಿಂತು ಬಿಟ್ಟರೆ ಕೊನೆಗೆ ಬೌದ್ಧರ ಮಹಾಶೂನ್ಯದ ಸ್ಥಲವು ಹತ್ತುವದು. ಆದರೆ ನಮಗೆ ಇವೆರಡನ್ನೂ ಮೀರಿರುವ ಅಗಾಧ ಈಶ್ವರನನ್ನು ಸಾಕ್ಷಾತ್ಕರಿಸಿಕೊಳ್ಳುವುದು ಅಗತ್ಯವಾಗಿದೆ.

ಮೂರನೇ ಮೆಟ್ಟಿಲಲ್ಲಿ ನಡೆಯತಕ್ಕ ಸಾಧನ ಕ್ರಮದಲ್ಲಿ, ಸರ್ವ ವಸ್ತುಗಳಲ್ಲಿ ಸರ್ವಾಂತರ್ಯಾಮಿತ್ವವನ್ನು ಅನುಭವಿಸುವುದು. ಆ ಸರ್ವ ವಸ್ತುಗಳೆಂದರೆ ಮೊದಲಿಗೆ ಚರಾಚರಸಜೀವ ವಸ್ತುಗಳಾಗಿದ್ದು ಮುಂದೆ ನಿರ್ಜೀವ ವಸ್ತುಗಳಲ್ಲಿಯೂ ನಾವು ಸರ್ವಾಂತರ್ಯಾಮಿತ್ವವನ್ನು ಅನುಭವಿಸುವೆವು. ಅಷ್ಟಕ್ಕೆ ಸಾಲದು.—ಸರ್ವ ಅಗುಹೋಗುಗಳಲ್ಲಿಯೂ ಆತನನ್ನು ಅನುಭವಿಸಬೇಕಾಗಿದ್ದು ಈ ತೃತೀಯ ಸಾಧನದ ಪರಾವಸ್ಥೆಯು.

ಇವುಗಳಲ್ಲಿ ಜಡವಾಗಿದೆಯೆಂದು ಕಾಣುವ ವಿಶ್ವವು ನಿಜವಾಗಿಯೂ ಜಡವಾಗಿರದೆ ಅದು ಚೈತನ್ಯಮಯವಾಗಿದೆಯೆಂಬ ಅನುಭವವು ನಮಗೆ ಬಂದರೆ "ಕೋಹ್ಯೇವಾನ್ಯಾತ್ ಕಃಪ್ರಾಣ್ಯಾತ್" ಎಂಬ ಅವಸ್ಥೆಯು ಸಹಜವಾಗಿ ಬಿದ್ದುವದರಿಂದ ನಾವಾಗ ಬ್ರಾಹ್ಮೀ ಸ್ಥಿತಿಗೆ ಬರುವೆವು.

ನಮ್ಮ ಆತ್ಮದ ಏಕತ್ವವೂ ದೇವನ ಸರ್ವಾಂತರ್ಯಾಮಿತ್ವವೂ ನಮಗೆ ಸಜೀವ ವಸ್ತುಗಳಲ್ಲಿಯಷ್ಟೇ ಅಲ್ಲದೆ ನಿರ್ಜೀವ ವಸ್ತುಗಳಲ್ಲಿಯೂ ಉಂಟಾಗಬೇಕಷ್ಟೇ? ಆದರೆ ಅದು ಈಗಿನ ಸಂಸ್ಕಾರಮಯ ಜಡದೃಷ್ಟಿಗೆ ಆಗದೆ ಆತ್ಮದ ಪ್ರಕಾಶಮಯವಾದ ಒಳದೃಷ್ಟಿಗಾಗುತ್ತದೆ. ಆಗ 'ಈಶಾವಾಸ್ಯಂ ಇದಂ ಸರ್ವಂ' ಎಂಬ ಅನುಭವಕ್ಕೆ ಬರುವೆವು.

ದೇವನನ್ನು ಸರ್ವ ವಸ್ತುಗಳಲ್ಲಿ ಮತ್ತು ಸರ್ವ ಪ್ರಾಣಿಗಳಲ್ಲಿ ಕಂಡ ಷ್ಟಕ್ಕೆ ಸಾಲದು. ಈ ಜಗತ್ತಿನಲ್ಲಿ ಸ್ವತಃ ನಿನ್ನೊಳಗೆ ಹಾಗು ಅನ್ಯರೊಳಗೆ ನಡೆಯುವ ಸರ್ವ ಘಟನೆಗಳು, ಕೃತಿಗಳು, ವಿಚಾರಗಳು, ಅನುಸಿಕೆಗಳು ಇವುಗಳಲ್ಲೆಲ್ಲ ಆತನನ್ನು ಕಾಣಲಿಕ್ಕೆ ಬೇಕು. ಇದಕ್ಕೆ ಎರಡು ಮಾತಿನ ಅಗತ್ಯವಿದೆ. ನಿನ್ನ ಸರ್ವ ಕೃತಿಗಳ ಫಲವನ್ನು ಆತನಿಗೆ ಬಿಟ್ಟುಕೊಡುವುದು ಒಂದು; ನಿನ್ನ ಸರ್ವ ಕೃತಿಗಳ ಹೊಣೆಯನ್ನು ಆತನಿಗೆ ಬಿಟ್ಟುಕೊಡುವುದು ಎರಡನೇದು. ಹೀಗೆಂದರೆ ಫಲದ ವಿಷಯದಲ್ಲಿ ವೈರಾಗ್ಯವುಂಟಾಗಬೇಕೆಂದಲ್ಲ. ಆದರೆ ಹಾಗೆ ಹೀಗೆ ಅನ್ನುವೆ ನಿನ್ನ ಜೀವನದೊಡೆಯನ ಅಪ್ಪಣೆಯಿಂದ ಕರ್ತವ್ಯವೆಂದು ಕಾರ್ಯವನ್ನೆಸಗುತ್ತ ದೇವನಿಚ್ಛೆಯಿಂದ ಬಂದ ಫಲಕ್ಕೆ ಸಮ್ಮತಿಸುತ್ತ ಇರಬೇಕು. ನಿನ್ನ ಇಚ್ಛೆಯೇನೆಂಬುದನ್ನು ಬದಿಗೊತ್ತಿ ದೇವನಿಚ್ಛೆಯೇನೆಂಬುದನ್ನು ಅರಿತುಕೊಳ್ಳಲಿಕ್ಕೆ ಇಚ್ಛಿಸು. ನಿನ್ನ ಕರ್ತವ್ಯಕರ್ಮಕ್ಕನುಸಾರವಾಗಿ ಯಾವುದು ಅಗತ್ಯವಾದದ್ದೋ ಯಾವುದು ಸರಿಯಯದದ್ದೋ ಅದು ತಾನಾಗಿಯೇ ಆಗಿಬಿಡುವದು. ಜಗತ್ತನ್ನೆಲ್ಲ ಆಳುವ ಮಹಾ ಶಕ್ತಿಗೆ ಕನಿಷ್ಠಪಕ್ಷಕ್ಕೆ ನಿನ್ನಷ್ಟಾದರೂ ಬುದ್ಧಿ ಇದೆ. ನಿನ್ನ ನಿರ್ದೇಶದ ಅಗತ್ಯವಿಲ್ಲ.

ಆದರೆ ಕರ್ತವ್ಯಕರ್ಮವೆಂದರೇನದು? ಡ್ಯೂಟಿ ಎಂದು ಕೆಲವರು ಹೇಳುವರು. ಆದರೆ 'ಡ್ಯೂಟಿ' ಯೆಂದರೆ ಜನಗಳು ಯಾವುದಕ್ಕೆ ಸರಿಯಾದದ್ದೆಂದೂ, ನೀತಿಕರವಾದದ್ದೆಂದೂ ತಿಳಿದಿದ್ದಾರೆಯೋ, ಅಥವಾ ಜನಾಂಗಕ್ಕೆ ರಾಷ್ಟ್ರಕ್ಕೆ ಅಥವಾ ಮಾನವಕೋಟಿಗೆ ಹಿತಕರವಾದದ್ದೆಂದೂ ಸರಿಯಾದದ್ದೆಂದೂ ಭಾವಿಸುವರೋ ಅಂಥಾದ್ದನ್ನು ಮಾಡುವುದಕ್ಕೇ ಡ್ಯೂಟಿ ಎಂಬ ಹೆಸರು. ಇದರಿಂದ ಮನುಷ್ಯನ ಸ್ವೇಚ್ಛಾವೃತ್ತಿಗೆ ಪ್ರತಿಬಂಧವುಂಟಾಗಿ ಆತನು ಸದ್ಗ್ರಹಸ್ಥನಾಗಬಹುದೇ ಹೊರತು ಯೋಗದ ಪೂರ್ಣತೆಗೆ ಅವನು ಮುಟ್ಟಲಾರನು. ಯಾಕಂದರೆ ಇಲ್ಲಿ ಮನುಷ್ಯನು ಗುಣಗಳಿಗೆ ಅಧೀನನಾಗಿ ಉಳಿಯುವನೇ ಹೊರತು ತ್ರಿಗುಣಾತೀತನಾಗುವದಿಲ್ಲ. ಅರ್ಜುನನು ಇಂಥ ಸದ್ಗುಣದ ಮೂಲಕವಾಗಿಯೇ ಯುದ್ಧ ಮಾಡುವದಕ್ಕೆ ನಿರಾಕರಿಸಿದನು. ಆದರೆ ಅವನ ಯುಕ್ತಿಗೆ ವಿರೋಧವಾಗಿ ಶ್ರೀಕೃಷ್ಣನು ಎರಡು ವಿಚಾರಗಳನ್ನಿಟ್ಟನು. ಒಂದು ಕಡಿಮೆಯದು, ಒಂದು ಹೆಚ್ಚಿನದು. ಒದ್ದರಾಗಿದ್ದರೂ ಮೋಕ್ಷವನ್ನು ಅಪೇಕ್ಷಿಸುವವರಾಗಿ ಮೊದಲನೇದು; ಸಂಪೂರ್ಣ ಮುಕ್ತರಿಗಾಗಿ ಎರಡನೇದು. ಮೊದಲನೇದು ಶಾಸ್ತ್ರ ಎರಡನೇದು ಸಂಪೂರ್ಣ ಸಮರ್ಪಣ (ಕರ್ಮ ಹಾಗು ಕರ್ಮಫಲಗಳ ಸಮರ್ಪಣ).

ಶಾಸ್ತ್ರವು ಮನುಷ್ಯನನ್ನು ಸ್ವೇಚ್ಛಾಚಾರದಿಂದ ದೂರ ನಿಲ್ಲಿಸಿ ಕೆಲ ಮಟ್ಟಿಗೆ ಮೋಕ್ಷಾಧಿಕಾರಿಗಳನ್ನಾಗಿ ಮಾಡುವದು. ಪೂರ್ವಕಾಲದಲ್ಲಿ ಮಾನವನ ಮನೋಧರ್ಮವನ್ನೂ ಜಗತ್ತಿನ ನಿಯಮಗಳನ್ನೂ ಅವಲಂಬಿಸಿದ ವೇದಧರ್ಮವು ಶಾಸ್ತ್ರವಾಗಿತ್ತು. ಆದರೆ ಮುಂದೆ ಅದು ಸ್ಥೂಲ ಸ್ವರೂಪದ ಸ್ಮೃತಿಧರ್ಮವಾಯ್ತು. ಮಧ್ಯಕಾಲದ ಜಾತುರ್ವರ್ಣರಚನೆಯು ಈಗ ಅಂಧಚಕ್ರವಾಗಿ ಮೋಕ್ಷಕ್ಕೆ ಬದಲು ಮಾನವನ ತಮೋಭಾವಕ್ಕೆ ಕಾರಣವಾಗಿದೆ. ಶಾಸ್ತ್ರವು ಮನುಷ್ಯನಿಗೆ ಮುಕ್ತಾವಸ್ಥೆಯ ಪೂರ್ವಸಿದ್ಧತೆಯನ್ನು ಮಾತ್ರ ಮಾಡಿಬಿಡುತ್ತದೆ. ಶಾಸ್ತ್ರವು ಶಬ್ದಬ್ರಹ್ಮವಾಗಿದೆ. ಆದರೆ ನಮಗೆ ಮುಕ್ತತೆಯ ಪೂರ್ವಸಿದ್ಧತೆಯಷ್ಟಕ್ಕೇ ತೃಪ್ತಿಯಾಗಬೇಕಾಗಿಲ್ಲ. ಪ್ರತ್ಯಕ್ಷ ಮುಕ್ತತೆ ಬೇಕು. ಇಂಥ ಅವಸ್ಥೆಯಲ್ಲಿ ಸಾಧಕನು ಸಮರ್ಪಣವನ್ನು ಸ್ವೀಕರಿಸಿ ಶಾಸ್ತ್ರವನ್ನು ದಾಟುತ್ತಾನೆ "ಜಿಜ್ಞಾಸುರಪಿ ಯೋಗಸ್ಯ ಶಬ್ದ ಬ್ರಹ್ಮಾತಿವರ್ತತೇ" ಇದೇ ಶ್ರೀಕೃಷ್ಣನ ಕೊನೆಯ ವಿಚಾರವಾದ ಸಮರ್ಪಣವು.

ಕರ್ಮದ ಸಂಪೂರ್ಣ ಸಮರ್ಪಣವು ನೆಲೆಗೊಳ್ಳಬೇಕಾದರೆ ನಮ್ಮ ಕರ್ಮಗಳನ್ನೆಲ್ಲ ದೇವನಾಜ್ಞೆಯಿಂದ ಪ್ರಕೃತಿಯೇ ಮಾಡುತ್ತಾಳೆಂಬ ಅನುಭವವು ಬರಬೇಕಾಗುವದು. ಆಗ ನಮ್ಮ ಕರ್ಮಗಳೆಲ್ಲ ಆ ದೇವನಿಗೆ ಸಂಬಂಧಿಸಿಬಿಡುವವು. ಆಗ ನಮಗೆ ಕರ್ಮದ ಬಂಧನವಿಲ್ಲ. ಈ ಅವಸ್ಥೆಗೆ ಬರುವುದಕ್ಕೆ ಮೂರು ಮೆಟ್ಟಿಲುಗಳಿವೆ.

(೧) "ತ್ವಯಾ ಹೃಷೀಕೇಶ ಹೃದಿ ಸ್ಥಿತೇನ ಯಥಾ ನಿಯುಕ್ತೋಸ್ಮಿ ತಥಾ ಕರೋಮಿ!" 'ದೇವಾ, ನನ್ನ ಹೃದಯದಲ್ಲಿದ್ದುಕೊಂಡು ನೀನು ನನ್ನನ್ನು ಹೇಗೆ ಹೇಗೆ ಪ್ರೇರಿಸುವಿಯೋ ಹಾಗೆ ಹಾಗೆ ನಾನು ಆಚರಿ

ಸುವೆನು' ಎಂಬ ಮಾತು ನಮ್ಮ ದೈನಂದಿನ ಜೀವನದಲ್ಲಿ ಯಾವಾಗ ಒಡಮೂಡುವದೋ ಆಗ ಈ ಮೊದಲಿನದು ಮುಗಿದು ಎರಡನೇ ಮೆಟ್ಟಿಲು ಆರಂಭವಾಗುವದು.

(೨) "ಈಶ್ವರಃ ಸರ್ವಭೂತಾನಾಂ ಹೃದ್ದೇಶೇ ಅರ್ಜುನತಿಷ್ಠತಿ। ಭ್ರಾಮಯನ್ ಸರ್ವಭೂತಾನಿ ಯಂತ್ರಾರೂಢಾನಿ ಮಾಯಯಾ ॥" ದೇವನು ಸರ್ವ ಪ್ರಾಣಿಗಳ ಹೃದಯದಲ್ಲಿ ನಿಂತು ತನ್ನ ತ್ರಿಗುಣಮಯಿ ಮಾಯೆಯಿಂದ ಅವುಗಳನ್ನು ಯಂತ್ರಾರೂಢವಾದವುಗಳಂತೆ ತಿರುಗಿಸುವನು ಎಂಬ ಜ್ಞಾನವೇ ಎರಡನೇ ಮೆಟ್ಟಿಲು. ಆಗ ನೀವು ನಿಮ್ಮಲ್ಲಿ ತ್ರಿಗುಣಗಳ ಕ್ರಿಯೆಗಳನ್ನು ಕಂಡುಕೊಳ್ಳುವಿರಿ. ಆಗ 'ತಥಾಕರೋಮಿ' ಎಂಬದಕ್ಕೆ ಬದಲು 'ಗುಣಾವರ್ತಂತ ಏವ' ಎಂದು ಅನ್ನುವಿರಿ. ಈ ಮೆಟ್ಟಿಲಿನಲ್ಲಿ ಒಂದು ದೊಡ್ಡ ವಿಘ್ನವೇನಂದರೆ— ಪಾಪಪುಣ್ಯಗಳ ದ್ವಂದ್ವದಲ್ಲಿ ನೀವು ದಿಕ್ಕುಗೆಡುವಿರಿ. ಆದರೆ ಒಂದು ಮಾತು ನೆನಪಿರಲಿ. ಅದೇನೆಂದರೆ — ನಿಮ್ಮನ್ನು ನೀವು ಸಂಪೂರ್ಣವಾಗಿ ದೇವನ ಹಸ್ತದಲ್ಲಿ ಸಮರ್ಪಿಸಿದ ಮೇಲೆ ಪಾಪಪುಣ್ಯಗಳ ಪೀಕಲಾಟವು ನಿಮಗೆ ಬೇಡ. ಭಗವಂತನು ಗೀತೆಯಲ್ಲಿ ಮಾಡಿದ ಪ್ರತಿಜ್ಞೆಯನ್ನು ನೆನೆ— "ನ ಮೇ ಭಕ್ತಃ ಪ್ರಣಶ್ಯತಿ" (ನನ್ನ ಭಕ್ತನಿಗೆ ನಾಶವಿಲ್ಲ.) (೩) ಎರಡನೆಯ ಮೆಟ್ಟಿಲಿನ ನಂತರ— ದೇವನನ್ನು ಸಂಪೂರ್ಣ ಅನುಭವಿಸುವದರಿಂದ ಅಥವಾ ದೇವನ ಅನುಗ್ರಹದಿಂದ ತನ್ನಿಂದ ತಾನೆ ಮೂರನೇ ಮೆಟ್ಟಿಲು ಬರುವದು. ಆಗ ಪುರುಷನು ಗುಣಗಳಿಂದ ಭಿನ್ನವಾಗಿ ಬರೇ ತ್ರಿಗುಣಾತೀತನಾಗುತ್ತಾನೆಂತಲ್ಲ. ಆದರೆ ಪ್ರಕೃತಿಯು ಗುಣಗಳನ್ನೆಲ್ಲ ಬಳಸುತ್ತ ಇದ್ದರೂ ಅವುಗಳ ಬಂಧನದಿಂದ ದೂರವಾಗಿ ಉಳಿಯುತ್ತದೆ. ಈಗಿನ ಸತ್ತ್ವವು ಆಗ ಜ್ಯೋತಿರ್ಮಯವಾದ ಜ್ಞಾನವಾಗುವದು, ಈಗಿನ ತಮಸ್ಸು ಆಗ ಅನಂತ ಶಾಂತಿಯಾಗುವದು; ಈಗಿನ ರಜಸ್ಸು ಆಗ ದೈವೀ ತೇಜದ ತಪೋಬಲವಾಗುವದು. ಆಗ ಕರ್ಮವು ದೇವನ ಜ್ಞಾನ ಹಾಗು ದೇವನ ಇಚ್ಛೆ ಇವುಗಳನ್ನು ಅನುಸರಿಸಿದ್ದಾಗುವದು. ಈ ಅವಸ್ಥೆಗೆ ಮುಟ್ಟುವ ಮುಂಚೆ ಮಾರ್ಗದಲ್ಲಿ ನಿಮಗೆ ಒಂದು ಅನುಭವ ಬರುವದು. ಅದೇನಂದರೆ— ನಿಮ್ಮದಲ್ಲದ ಮತ್ತು ನಿಮ್ಮ ದೇಹದಲ್ಲಿಲ್ಲದ ಒಂದು ಶಕ್ತಿಯು (ಅದರೂ ನಿಮ್ಮನ್ನು ನಿಮ್ಮ ದೇಹವನ್ನು ಆಕ್ರಮಿಸಿದ್ದು) ನಿಮಗಾಗಿ ವಿಚಾರಮಾಡುವದು; ಕರ್ಮಮಾಡುವದು; ಇಷ್ಟೇ ಅಲ್ಲ. ನಿಮ್ಮ

ದೇಹ, ಮನಸ್ಸು ಮತ್ತು ಹೃದಯ ಮೊದಲಾದವುಗಳು ಆ ಶಕ್ತಿಯಿಂದಲೇ ಮಿಸುಕುವವು. ಆ ಶಕ್ತಿಯ ಈ ಕ್ರಿಯೆಗಳಲ್ಲೆಲ್ಲ ನೀವು ಆನಂದ ಪಡುವಿ ಇಷ್ಟೆ. ಆದರೆ ಅದರ ಮೇಲೆ ನಿನ್ನ ಬಾಧ್ಯತೆಯಾಗಲಿ, ನಿನ್ನ ಮೇಲೆ ಅದರ ಬಾಧ್ಯತೆಯಾಗಲಿ ಇರಲಾರದು. ನಿನ್ನ ಕರ್ಮಗಳೆಲ್ಲ ಇಲ್ಲಿಗೆ ಕರಗುವವು. "ಕರ್ಮಾಣಿ ಪ್ರವಿಲೀಯಂತೇ ಪದ್ಮಪತ್ರಮಿವಾಂಭಸಾ.

ನಿನ್ನ ಮನಸ್ಸು, ಹೃದಯ, ಶರೀರ ಮುಂತಾದವುಗಳು ನಿನ್ನವಾಗಿ ಉಳಿಯಲಾರವು. ಆಗ ಅವು ಕೇವಲ ದೇವನವು. ನೀನು ದೇವನ ಕಾರ್ಯದ ಒಂದು ಜ್ಞಾನಮಯವಾದ ಆನಂದಮಯವಾದ ಸಜೀವ ಆಧಾರ ಕೇಂದ್ರವು ಮಾತ್ರ. ಇದೇ ತಚ್ಚಿತ್ತ ಅವಸ್ಥೆ; ಯಸ್ಯ ನಾಹಂಕೃತೋ ಭಾವೋ ಬುದ್ಧಿರ್ಯಸ್ಯನಲಿಪ್ಯತೇ. 'ಯಾವನ ಸತ್ತೆಯು ಅಹಂಕಾರದಿಂದ ಸ್ವತಂತ್ರವಾಗಿದೆಯೋ, ಯಾವನ ತಿಳುವಳಿಕೆಯು ಅಲಿಪ್ತವಾಗಿದೆಯೋ" ಎಂದು ವರ್ಣಿಸಲ್ಪಟ್ಟಿದ್ದೇ ತಚ್ಚಿತ್ತಾವಸ್ಥೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಯಾವುದಕ್ಕೆ ಬಹಳ ಮಹತ್ವಕೊಟ್ಟಿದ್ದಾನೆಯೋ ಅಂಥ ಕರ್ಮಸಮರ್ಪಣವೆಂಬುದು ಇದೇ. ಮಯಿ ಸರ್ವಾಣಿ ಕರ್ಮಾಣಿ ಸನ್ಯಸ್ಯಾಧ್ಯಾತ್ಮ ಚೇತಸಾ। ನಿರಾಶೀ ನಿರ್ಮಮೋ ಭೂತ್ವಾ ಯುಧ್ಯಸ್ವ ವಿಗತಜ್ವರಃ ॥

ಅತ್ಯಂತ ಮಹತ್ವದ ಹಾಗು ಅತ್ಯಂತ ಸಂಪೂರ್ಣವಾದ ಈ ಮುಕ್ತಿಗೆ ಮೂರು ಮಾತುಗಳ ಅಗತ್ಯವದೆ.— ನಿಸ್ಪೃಹತೆ, ನಿರ್ದ್ವಂದ್ವತೆ, ನಿರಹಂಕಾರಿತೆ. ಆತ್ಮಸಮರ್ಪಣದ ಪ್ರಧಾನ ಶತ್ರುಗಳು ಮೂರು: ಅವು ಯಾವನೆಂದರೆ— ಸ್ಪೃಹಾ, ದ್ವಂದ್ವ, ಅಹಂಕಾರ.

ಸ್ಪೃಹಾ ಅಂದರೆ ವಿಷಯಗಳ ಮೇಲೆ ಆಶೆ. ದ್ವಂದ್ವವೆಂದರೆ ಸುಖ ಕರ-ದುಃಖಕರ ಇತ್ಯಾದಿ ತಾರತಮ್ಯಗಳ ಸಂಸ್ಕಾರ. ಅಹಂಕಾರವೆಂದರೆ— 'ನಾನು ಕರ್ತಾ' ಎಂಬಭಾವ. ನೀನು ನಿರ್ದ್ವಂದ್ವನಾದರೆ ನಿಸ್ಪೃಹನಾಗಬಲ್ಲಿ. ಆದರೆ ಇದು ಬಿಗಿಯಾದದ್ದೀಸೊ ನಿಜವೆ. ಯಾಕಂದರೆ ಪ್ರತಿಯೊಂದು ದ್ವಂದ್ವವು ನಮ್ಮ ಮನಸ್ಸಿನಲ್ಲಿ ಒಂದು ಬಗೆಯ ರಾಗ ದ್ವೇಷಗಳನ್ನು ಹುಟ್ಟಿಸುತ್ತದೆ. ನಮ್ಮ ಮನೋಧರ್ಮವು ಈ ದ್ವಂದ್ವಗಳಿಗೆ ಬಹಳ ಅನುಕೂಲವಾಗಿದೆ. ದ್ವಂದ್ವಗಳ ಪ್ರಕಾರಗಳು— (೧) ಹಸಿವು-ನೀರಡಿಕೆ, ಶೀತ-ಉಷ್ಣ, ಬಾಹ್ಯಕವೇದನೆ ಮತ್ತು ಸುಖ ಇವು ದೇಹದ

ಮೂಲಕವಾಗಿ ಮನಸ್ಸಿನಲ್ಲಿ ಮೂಡುವವು. (೨) ಜಯ ಪರಾಜಯ, ಸಾಫಲ್ಯ-ನಿಸ್ಫಲತೆ, ಸುದೈವ-ದುರ್ದೈವ, ಹರುಷ-ದುಃಖ, ಪ್ರೇಮತಿರಸ್ಕಾರ ಮುಂತಾದವುಗಳು ವಾಸನೆ ಮತ್ತು ಅನಿಸಿಕೆಗಳ ಮುಖಾಂತರ ಮನಸ್ಸನ್ನು ಸ್ಪರ್ಶಿಸುವವು. ಪಾಪ-ಪುಣ್ಯ, ಸಯುಕ್ತಿಕ-ಅಯುಕ್ತಿಕ, ಸರಿತಪ್ಪು ಇವು ನಿರ್ಣಯಾತ್ಮಕ ಬುದ್ಧಿಯ ಮೂಲಕವಾಗಿ ಮನಸಿಗೆ ಗೋಚರವಾಗುವವು.

ದೇವನು ಸರ್ವಾಂತರ್ಯಾಮಿಯಾಗಿದ್ದಾನೆಂಬ ಜ್ಞಾನದಿಂದಲೂ, ಈಶ್ವರನ ಜಾಗತಿಕಕಾರ್ಯೋದ್ದೇಶದಲ್ಲಿ ಇವೆಲ್ಲವುಗಳ ಅಗತ್ಯವಿದೆ ಎಂಬ ಜ್ಞಾನದಿಂದಲೂ ನಾವು ಇವುಗಳನ್ನು ಮೆಟ್ಟಿ,ನಿಲ್ಲಬಲ್ಲೆವು. ಭಕ್ತಿಯಿಂದಲೂ ಸೆದೆಯಬಲ್ಲೆವು. ಆದರೆ ಇಂಥ ಜ್ಞಾನ, ಇಂಥ ಭಕ್ತಿ, ಇಂಥ ಕರ್ಮ ಇವು ಆತ್ಮಸಮರ್ಪಣದ ಸಂಕಲ್ಪದಿಂದಲೂ ಅದರ ಆಚರಣೆಯಿಂದಲೂ ತಪ್ಪದೆ ನಲೆಗೊಳ್ಳುವವು.

ದ್ವಂದ್ವಗಳಿಗೆ ನಮ್ಮ ಅಹಂಬೋಧವು ತಳಬೇರಾಗಿದೆ. ಈ ಅಹಂಕಾರವು ನಮ್ಮ ಜೀವನದಲ್ಲಿ ಹಾಗು ಸಾಧನದಲ್ಲಿ ಮೂರು ಪ್ರಕಾರದಿಂದ ಕಾಣಿಸಿಕೊಳ್ಳುವದು. ರಾಜಸಿಕ, ತಾಮಸಿಕ, ಸಾತ್ವಿಕ. ರಜಸ್ಸಿಗೆ ವಾಸನೆಯೇ ಮೂಲ. ಫಲಾಕಾಂಕ್ಷೆಯೇ ಅದರ ಗುರಿ. ನಾವು ಇದರಿಂದ ಮುಕ್ತರಾಗಲಿಕ್ಕೆ ಬೇಕು. ಮಾಕರ್ಮಫಲಹೇತುರ್ಭೂಃ ತಮಸ್ಸಿನ ಮೂಲವು ದೌರ್ಬಲ್ಯ. ಸೋಲಭ್ಯ-ನಿಷ್ಕ್ರಿಯತೆಗಳೇ ಅದರ ಗುರಿ. ನಾವಿದನ್ನು ದಾಟಲಿಕ್ಕೇಬೇಕು. ಮಾತೆ ಸಂಗೋಸ್ತ್ವಕರ್ಮಣಿ. ಸತ್ತ್ವಕ್ಕೆ ಸುಖ ಮತ್ತು ತಿಳುವಳಿಕೆಗಳೇ ಮೂಲ. ಆದರೆ ಆ ತಿಳುವಳಿಕೆಗೆ ಅಪೂರ್ಣ ಮತ್ತು ಏಕದೇಶೀಯ ಅನುಭವಗಳೇ ಮೂಲವಾಗಿರುತ್ತವೆ. ಆದರೆ ಇವು ಮಾನವೀಯ ಉಚ್ಚಾಭಿಪ್ರಾಯಗಳೇನೋ ಆಹುದು. ಆದರೂ ದೇವನು ಆಜ್ಞೆ ಮಾಡಿದ ಆತ್ಮಸಮರ್ಪಣದ ತತ್ತ್ವಕ್ಕೆ ಇವು ಬಾಧಕಗಳಾಗಿವೆ. ಗೀತೆಯಲ್ಲಿ ಅರ್ಜುನನು ಕೃಷ್ಣನ ಆಜ್ಞೆಗೆ ಭಿನ್ನಾಭಿಪ್ರಾಯಗಳನ್ನು ತೋರಿಸಿದ್ದು ಈ ಸಾತ್ವಿಕತೆಯ ಫಲದಿಂದಲೇ. ಇದು ಮಾನವೀಯ ರೀತಿಯಿಂದ ಎಷ್ಟೋ ಉಚ್ಚತರದ್ದಾಗಿದ್ದರೂ ಪೂರ್ಣಯೋಗದ ಸಾಧಕರು ಇದನ್ನು ದಾಟಲಿಕ್ಕೆ ಬೇಕು. ಬುದ್ಧಿಯುಕ್ತೋ ಜಹಾತೀಹ ಉಭೇಸುಕೃತದುಷ್ಕೃತೇ

ಸಾಧಕ ಜೀವನದಲ್ಲಿ ರಾಜಸಿಕ ಅಹಂಕಾರವು ತಲೆದೋರಿದಾಗ ಗರ್ವದಿಂದ ಸಾಧಕನು ವಿಚಾರಮಾಡುವ ರೀತಿ ಹೇಗಂದರೆ— ನಾನೊಬ್ಬ

ದೊಡ್ಡ ಸಾಧಕನು. ನಾನು ಇಷ್ಟು ದೂರದವರೆಗೆ ಮುಂದುವರಿದಿದ್ದೇನೆ. ನಾನು ದೇವನ ಕೈಯೊಳಗಿನ ಮಹತ್ತ್ವದ ಯಂತ್ರವಾಗಿದ್ದೇನೆ.

ಈ ತರದ ವಿಚಾರಗಳಿಂದ ಯಾವದಾದರೂ ಒಂದು ಕಾರ್ಯವನ್ನು ದೇವನ ಕಾರ್ಯವೆಂದು ಕೈಕೊಂಡು ಸ್ವತಃ ದೇವನಿಗಿಂತ ತಾನೇ ಅದರಲ್ಲಿ ಹೆಚ್ಚು ಅಭಿರುಚಿಯುಳ್ಳವನಾಗಿ, ಹೆಚ್ಚು ತೊಂದರೆಗಳನ್ನು ಸಹಿಸಿಯೂ ಕೂಡ ಅದನು ಎಳೆದುಕೊಂಡು ಹೊರಡುವನು. ಆದರೆ ಈ ತರದ ರೀತಿಯು ನಮಗೆ ಬೇಕಾಗಿಲ್ಲ. ಸರ್ವರಲ್ಲಿ ಪರಮಾತ್ಮನಿದ್ದಾನೆಂಬ ಮಾತನ್ನು ಸದಾ ನೆನಸಿನಲ್ಲಿಟ್ಟು ವೈಯಕ್ತಿಕ ಆತುರತೆಗಳನ್ನು ಮೂಲೆಗೊತ್ತಿ ದೈವೀಪ್ರಕಾಶದ ಪೂರ್ಣ ಪ್ರಕಟನೆಗೆ ಸ್ಥಳ ಕೊಡಬೇಕು.

ತಮೋಗುಣದ ಕೇಡು ಎರಡು ಪ್ರಕಾರದ್ದು. ಸಾಧಕನು ಯಾವಾಗ್ಗೆ ತನ್ನೊಳಗಿನ ತಮಸ್ಸಿನಲ್ಲಿ ತನ್ಮಯನಾಗಿ —"ನಾನು ದುರ್ಬಲನು ಪಾಪಿಯು, ದುಃಖಿಯು, ಅಜ್ಞನು, ಕೆಲಸಕ್ಕೆ ಬಾರದವನು, ಅವನಿಗಿಂತ ಕಡಿಮೆ, ಇವನಿಗಿಂತ ಕಡಿಮೆ, ಅಧಮಾಧಮ ದೇವರು ನನ್ನನ್ನು ತಗೆದುಕೊಂಡು ಏನು ಮಾಡಿಯಾನು" ಮುಂತಾದುದಾಗಿ ವಿಚಾರ ಮಾಡುತ್ತಾನೆ ಆದರೆ ದೇವರು ತನ್ನ ಯಂತ್ರಗಳ ತಾತ್ಕಾಲಿಕ ಶಕ್ತಿ ಅಥವಾ ಆಶಕ್ತಿಗಳನ್ನು ಅವಲಂಬಿಸಿ ಕುಳಿತಿದ್ದರೆ, ಆತನಿಗೆ ಅಘಟಿತಘಟನೆಪಟು ವೆಂದು ಹೇಗೆ ಹೇಳಲಿಕ್ಕೆ ಬಂದೀತು? ಮೂಕಂಕರೋತಿವಾಚಾಲಂ—

ತಮೋಗುಣದ ಇನ್ನೊಂದು ತೊಡಕೇನಂದರೆ— ಸಾಧಕನು ನಿಷ್ಕ್ರಿಯಶಾಂತಿಯು ಸವಿಯನ್ನು ಒಮ್ಮೆ ನೋಡಿದನೆಂದರೆ ಅದನ್ನು ಕಳಕೊಳ್ಳುವದಕ್ಕೇ ಇಚ್ಛಿಸುವದಿಲ್ಲ. ಯಾವಾಗಲೂ ನಿಷ್ಕ್ರಿಯನಾಗಿ ಇರಬೇಕೆಂದು ಇಚ್ಛಿಸುತ್ತಾನೆ. ಆದರೆ ಸದಾ ನಿನ್ನ ನೆನಸಿನಲ್ಲಿರಬೇಕಾದದ್ದೇನಂದರೆ— ನೀನೂ ಕೂಡ ಬ್ರಹ್ಮಸಿದ್ಧೀ. ದೈವೀಶಕ್ತಿಯು ನಿನ್ನಲ್ಲಿ ಕೆಲಸ ಮಾಡುತ್ತ ಇದೆ. ಈಶ್ವರನ ಲೀಲೆಯಲ್ಲಿ ಕಂಡು ಬರುವ ಸರ್ವ ಸಮರ್ಥತೆ ಮತ್ತು ದಿವ್ಯಾನಂದಗಳನ್ನು ಪಡೆದುಕೊ. ದೇವನಿಗೆ ತಾನಾಗಲಿ, ನೀನಾಗಲಿ ನಿಷ್ಕ್ರಿಯನಾಗಿರಬೇಕೆಂಬ ಇಚ್ಛೆಯಿಲ್ಲ ಉಚ್ಛೇದೇಯುರಿಮೇ ಲೋಕಾ: ನ ಕುರ್ಯಾಂ ಕರ್ಮಚೇದಹಂ।

ಸತ್ವಗುಣದಿಂದ ಸಾಧಕ ಜೀವನದಲ್ಲಿ ಆಗುವ ಕೇಡು ಏನೆಂದರೆ— ಖಂಡಾನುಭವಗಳು, ಯೋಗಶಕ್ತಿಗಳು, ದೇವನ ಸದಾ ಸಾನ್ನಿಧ್ಯದ

ಆನಂದ ಮುಂತಾದವುಗಳ ಮೇಲೆ ಲುಬ್ಧನಾಗಿ ಸಾಧಕನು ಮತ್ತಾವ ದನ್ನೂ ಲಕ್ಷಿಸದೆ ಹೋಗುವನು. ಆದರೆ ನೆನಪಿನಲ್ಲಿರಲಿ— ಈ ಯೋಗವು ನಿನ್ನ ಸಲುವಾಗಿ ಅಲ್ಲ. ನೀವು ಹೇಳಿದ ವಸ್ತುಗಳೆಲ್ಲ ಸಿದ್ಧಿಯ ಭಾಗಗಳಾಗಿದ್ದರೂ ಅವೇ ನಿನ್ನ ಸಿದ್ಧಿಯ ಉದ್ದೇಶಗಳಲ್ಲ. ಆದರೆ ನೀನು ಮೊದಲೇ ನಿಶ್ಚಯಿಸಿರುವದೇನೆಂದರೆ— ದೇವನ ಮೇಲೆ ನೀನು ಯಾವ ಬಾಧ್ಯತೆಯನ್ನೂ ತೋರಿಸದೆ, ಅತನು ಸಹಜವಾಗಿ ಕೊಟ್ಟದ್ದನ್ನು ಮಾತ್ರ ಸ್ವೀಕರಿಸುವದಕ್ಕೆ ಕೃತಸಂಕಲ್ಪನಾಗಿರುವಿ.

ಇನ್ನು ಆನಂದದ ವಿಷಯವನ್ನು ತೆಗೆದುಕೊಂಡರೆ ನಿಸ್ವಾರ್ಥ ಆತ್ಮವು ದೇವನ ಇಚ್ಛೆಯ ಪ್ರಕಾರ ದೈವೀಸಾನ್ನಿಧ್ಯದ ಆನಂದವನ್ನು ಕೂಡ ಪರಿತ್ಯಜಿಸುವದು. ನೀನು ಅತ್ಯಂತ ಉನ್ನತವಾದ ಸಾತ್ವಿಕ ಅಹಂಕಾರದಿಂದಲೂ ಕೂಡ ಸ್ವತಂತ್ರನಾಗಬೇಕು. ಮುಮುಕ್ಷುತ್ವದ ಸೂಕ್ಷ್ಮ ಆಜ್ಞಾನದಿಂದಲೂ ಕೂಡ ಸ್ವತಂತ್ರನಾಗಬೇಕು. ಯಾವ ಆಸಕ್ತಿಯಿಲ್ಲದೆ ಸರ್ವಾನಂದಗಳನ್ನು ಸ್ವೀಕರಿಸಬೇಕು. ಆಗ ನೀನು ಗೀತೆಯಲ್ಲಿ ಹೇಳಿದ ಸಿದ್ಧ ಪುರುಷನಾಗುವಿ, ಪರಿಪೂರ್ಣ ಮಾನವನಾಗುವಿ. ಒಟ್ಟಿಗೆ ಈ ಯೋಗದಲ್ಲಿ ಮೂರು ಮೆಟ್ಟಿಲುಗಳು.— (೧) ಆತ್ಮಸಮರ್ಪಣದ ಸಂಕಲ್ಪವು (೨) ಆತ್ಮಜ್ಞಾನದ ಮೂಲಕವಾಗಿ ಅಧಾರಗಳಿಂದ ಬೇರ್ಪಟ್ಟು ನಿಲ್ಲುವದು. (೩) ದೇವನನ್ನು ಸರ್ವತ್ರದಲ್ಲಿ ಸರ್ವಚರಾಚರ ವಸ್ತುಗಳಲ್ಲಿ, ಸರ್ವಘಟನೆಗಳಲ್ಲಿ ಅನುಭವಿಸುವುದು. ಮತ್ತು ಕರ್ಮಫಲವನ್ನೂ ಕರ್ಮವನ್ನೂ ಕೂಡಿಯೇ ಅರ್ಪಿಸುವುದು. ಮತ್ತು ಅಹಂಕಾರದಿಂದಲೂ, ಆಸಕ್ತಿ ಮತ್ತು ದ್ವಂದ್ವಗಳಿಂದಲೂ ನೀವು ಸ್ವತಂತ್ರರಾಗುವುದು. ಇಷ್ಟಾದರೆ ನೀವು ನಿಮ್ಮ ಸತ್ತಾದಲ್ಲಿ ಶುದ್ಧರೂ, ಮುಕ್ತರೂ, ಸಿದ್ಧರೂ, ಆನಂದಪೂರ್ಣರೂ ಆಗುವಿರಿ. ಆದರೆ ನೀವು ಸಂಕಲ್ಪವನ್ನು ಮಾಡಿಬಿಟ್ಟೊಡನೆ ದೇವನ ಸರ್ವಸಮರ್ಥಸ್ವಾಭಾವಿಕಶಕ್ತಿಯು ಈ ಸಾಧನ ಸೋಪಾನ ಕ್ರಮವನ್ನು ತನ್ನಿಂದ ತಾನೆ ಮುಂದರಿಸುವದು. ಇಲ್ಲಿ ನಿಮ್ಮ ಮಟ್ಟಿಗೆ ಅಗತ್ಯವಾದ ಮಾತೆಂದರೆ ಇಷ್ಟೇ— ಅನುಮತಿ ಮತ್ತು ಸ್ಮೃತಿ.

ನಿಮ್ಮ ಒಳಗೆ ಮತ್ತು ಹೊರಗೆ ನಡೆಯುವ ಸರ್ವಸಂಗತಿಗಳನ್ನು ನಿಮ್ಮ ಸಾಧನದ್ದೇ ಒಂದು ಭಾಗವೆಂದು ತಿಳಿದು ಒಳ್ಳೆಯವರ ಸಲುವಾಗಿ ಅತುಂಪಡದೆ, ಕೆಟ್ಟವರ ಸಲುವಾಗಿ ಎದೆಗೆಡದೆ ಒಂದನ್ನು ಪಡೆಯಲಿಕ್ಕೂ, ಇನ್ನೊಂದನ್ನು ಹೊರದೂಡಲಿಕ್ಕೂ ಪ್ರಯತ್ನಿಸದೆ ಸಾವಧಾನದಿಂದ ಇರುವದೇ ಅನುಮತಿಯು. ಇದನ್ನು ಸಾಧಿಸುವದಕ್ಕೆ ನಿನಗೆ ಸದಾ ನಿಮ್ಮಗುರಿಯು ಸ್ಮೃತಿಪಥದಲ್ಲಿ ಉಳಿಯಬೇಕಾಗುವದು. ಇದಕ್ಕೆ ಧೀರತನವೂ, ಉತ್ಸಾಹವೂ ಅವಶ್ಯಬೇಕು. ವ್ಯಾಕುಲತೆಯು ಎಷ್ಟೇ ಸಮರ್ಥವಾಗಿರಬಹುದಾದರೂ ಈ ಯೋಗದಲ್ಲಿ ಅದು ಉಪಯೋಗದ್ದಲ್ಲ. ಉಪನಿಷತ್ತಿನಲ್ಲಿ ಬಣ್ಣಿಸಲ್ಪಟ್ಟ 'ಧೀರ' ರಾಗಲಿಕ್ಕೆಬೇಕು.

ಸ್ಮೃತಿಗೆ ಅಪ್ರಮತ್ತತೆಯ ಅಗತ್ಯವದೆ. ಅಲಕ್ಷ್ಯವುಂಟಾದರೆ ಗುಣಗಳ ದಾಳಿಯು ಆರಂಭವಾಗುವದರಿಂದ ಯೋಗಭ್ರಷ್ಟನಾಗಿ ಬಿಡುತ್ತಾನೆ. ಆದರೆ ಈ ಪ್ರಮಾದಗಳಿಗೆ ನೀನೇನು ಹೆದರಬೇಕಾಗಿಲ್ಲ. ನಡೆದಾಡುವ ಕೂಸು ಏಳುಬೀಳದೆ ನಿರ್ವಾಹವಿಲ್ಲ. ನಿತ್ಯ ಅನುಸ್ಮರಣದಿಂದ ಸರ್ವವಸ್ತುಗಳಲ್ಲಿಯೂ, ಸರ್ವಘಟನೆಗಳಲ್ಲಿಯೂ ದೇವನನ್ನ ಮರೆಯಲಾರದವನಾದರೆ ಆಗ ಅಪ್ರಮತ್ತತೆಯ ಜಗತ್ಯವು ತಪ್ಪಿಹೋಗುವದು. ಆದರೆ ಮೂಲದಲ್ಲಿಯೇ ಸಂಪೂರ್ಣಸಮರ್ಪಣದಿಂದ ಆರಂಭಿಸಿದ್ದರೆ ನಿನ್ನ ದಾರಿಯು ನಿಶ್ಚಿತವೂ, ಸುಲಭವೂ, ವೇಗವುಳ್ಳದ್ದೂ ಆಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ.

ಸನತ್ ಸುಜಾತೀಯವೆಂಬ ಪ್ರಾಚೀನ ಗ್ರಂಥದಲ್ಲಿ ಸಿದ್ಧಿಗೆ ನಾಲ್ಕು ಮಾತುಗಳ ಅವಶ್ಯಕತೆಯಿದೆಯೆಂದು ಹೇಳಿದೆ. ಅವು ಯಾವವೆಂದರೆ— ಶಾಸ್ತ್ರ, ಉತ್ಸಾಹ, ಗುರು, ಕಾಲ.

ಇವುಗಳಲ್ಲಿ ಶಾಸ್ತ್ರವೋ? ಇದು ವರೆಗೆ ನಾನು ಹೇಳಿದ್ದೇ ಶಾಸ್ತ್ರ. ಉತ್ಸಾಹವೋ? ಅದು ನಿನ್ನೊಳಗೇ ಇದೆ. ಹೊಂಗೆ ಹುಡುಕಬೇಕಾಗಿಲ್ಲ. ಅನುಮತಿಯೂ, ನಿತ್ಯ ಅನುಸ್ಮರಣವೂ ಆದರೆ ಅದಕ್ಕೆ ಸಾಕು. ಗುರುವೋ? ಸ್ವಯಂ ಭಗವಂತನು. ಕಾಲವೋ? ಅದು ನಿನ್ನ ಇದಿರಿಗೆ ಎಷ್ಟು ಬೇಕೋ ಅಷ್ಟು ಬಿದ್ದುಕೊಂಡಿದೆ. ಇನ್ನೇನು? ದೇವನು ಹೇಗೆ ಗುರುವಾಗುವನೆಂಬದು ನಿನಗೆ ಮೊದಲಿಗೆ ತಿಳಿಯಲಿಕ್ಕಿಲ್ಲ. ಆದರೆ ನಿನ್ನ ಸಮರ್ಪಣವು ಬೆಳೆಬೆಳೆದಂತೆ ನಿನ್ನ ಜೀವನದಲ್ಲಿ ನಡೆಯುವ ಸಣ್ಣಪುಟ್ಟ ಸಂಗತಿಗಳೆಲ್ಲ ನಿನ್ನ ಸಾಧನಕ್ಕೇ ಹೇಗೆ ಸಹಾಯಕವಾಗಿವೆ ಎಂಬದು ಗೊತ್ತಾಗುವದರಿಂದ ಈಶ್ವರನೇ ನಿನ್ನ ಗುರುಸ್ಥಾನವನ್ನು ಸ್ವೀಕರಿಸಿದ್ದಾನೆಂಬ ಮಾತು ನಿನಗೆ ಸ್ಪಷ್ಟವಾಗಿ ಗೋಚರಿಸುವದು. ನಿನ್ನ ಪೂರ್ಣತೆಗಳನ್ನೆಲ್ಲಾ ನೀಗಿಸಿ ಪರಿಪೂರ್ಣತೆಯನ್ನು ನೆಲೆಗೊಳಿಸುವದಕ್ಕೆ ದೇವಾದಿದೇವನ ಸರ್ವ ಸಮರ್ಥವಾದ ಮಹಾ ಪ್ರೇಮವೂ, ಮಹಾ

ಜ್ಞಾನವೂ ನಿನಗಾಗಿ ದ.ಡಿದು ನಿನ್ನ ಉನ್ನತಿಗೆ ಏರಿಸುತ್ತವೆಂಬುದು ಕಂಡುಬರುವದು ಈ ಕಾರ್ಯಕ್ಕಾಗಿ ಬೇಕಾಗುವ ಕಾಲವು ನಿನಗೆ ಬಹಳ ದೊಡ್ಡದಾಗಿ ಕಂಡರೂ ನೀನು ನಿರುತ್ಸಾಹಿಯಾಗಬೇಡ. ಯಾಕಂದರೆ ಸಹಜಕ್ರಮ ವಿಕಾಸದಿಂದ ಬಹು ಶತಮಾನಗಳಲ್ಲಿ ಸಾಧಿಸಬೇಕಾದ ಮಾತು ಕೆಲವೇ ವರ್ಷಗಳಲ್ಲಿ ಸಿದ್ಧಿಗೆ ಬರಬೇಕಾಗಿರುವದರಿಂದ ಕಾಲವಿಲಂಬಕ್ಕೆ ಅಧೀರನಾದರೆ ಹೇಗೆ ಸಾಗೀತು? ನಿನ್ನಲ್ಲಿ ಆಗಬೇಕಾದ ಬದಲಾವಣೆಯೇನು ಸಣ್ಣಪುಟ್ಟದಲ್ಲ. ಸಮಸ್ತ ಮಾನವ ಪ್ರಕೃತಿಯು ಬದಲಾಗಿ ನೇವ ಪ್ರಕೃತಿಯಾಗಬೇಕಾಗಿದೆ. ಅಲ್ಪ ಕಾಲದಲ್ಲಿಯೇ ಫಲವನ್ನು ಕೊಡುವ ಮಾನವ ಕಲ್ಪಿತ ಸಾಧನ ಮಾರ್ಗಗಳೆಷ್ಟೋ ಉಂಟು. ಅದರೆ ಅವು ಪೂರ್ಣ ಯೋಗಿಗೆ ಬೇಕಾಗಿರುವ ಸ್ಥಿತಿಯನ್ನು ತಂದುಕೊಡುವದಕ್ಕೆ ಸಮರ್ಥವಾದವುಗಳಲ್ಲ. ಅವು ಗೊತ್ತುಪಡಿಸಿದ ಒಂದು ಸ್ಥಾನದಿಂದ ಗೊತ್ತುಪಡಿಸಿದ ಮತ್ತೊಂದು ಸ್ಥಾನಕ್ಕೆ ನಿಶ್ಚಿತವಾಗಿ ಮುಟ್ಟುವ ಮಾರ್ಗಗಳಾಗಿವೆ. ಇವುಗಳ ಪ್ರಗತಿಯು ಸ್ಪಷ್ಟ ನಿಶ್ಚಿತವೆಂದು ಕಂಡು ಬರುವುದು ನಿಜವೇ. ಪೂರ್ಣ ಯೋಗದ ಸಾಧನ ಕ್ರಮದಲ್ಲಿ ಪ್ರಗತಿಯು ಒಮ್ಮೊಮ್ಮೆ ಗತಿಯಲ್ಲಿದ್ದಂತೆಯೂ, ಒಮ್ಮೊಮ್ಮೆ ಕುಂಠಿತವಾದಂತೆಯೂ, ಒಮ್ಮೊಮ್ಮೆ ಸಂಪೂರ್ಣವಾಗಿ ಲುಪ್ತವಾಗಿಯೇ ಹೋದಂತೆಯೂ ಕಂಡು ಬರಬಹುದಾದರೂ ಕೊನೆಗೆ ಸಂಪೂರ್ಣ ಸಿದ್ಧಿಗೆ ಬಂದು ಮುಟ್ಟುವುದು ನಿಶ್ಚಿತವೇ ಇದೆ. ಪೂರ್ಣ ಯೋಗದ ಸಾಧನವು ಮಹಾಸಾಗರದ ಪರ್ಯಟನವಿದ್ದಂತೆ. ಉಳಿದವುಗಳು ಕಾಲುನೆಯ ಮಾರ್ಗಗಳಿದ್ದಂತೆ. ಉಳಿದವುಗಳಲ್ಲಿ ಕಟ್ಟಿಟ್ಟ ಕೆಲವೇ ಫಲಗಳಿವೆ. ಆದರೆ ಇವರಲ್ಲಿ ಅನಂತ ಸಿದ್ಧಿಯಿದೆ. ಈ ಮಹಾಸಾಗರದಲ್ಲಿ ಹೋಗುವದಕ್ಕೆ ನಿನಗೆ ಏನೇನು ಬೇಕೆಂದರೆ ಒಂದು ಹಡಗ, ನೀರು ಕಡಿಯುವ ಗಾಲಿ, ದಿಕ್ಸು ತೋರಿಸುವ ಹೋಕಾಯಂತ್ರ, ಎಳೆದುಕೊಂಡು ಹೋಗುವ ಶಕ್ತಿ, ತಜ್ಞನಾದ ಒಬ್ಬ ಕಪ್ತಾನನು. ಬ್ರಹ್ಮವಿದ್ಯೆಯೇ ನಿನ್ನ ಹಡಗವು. ಶ್ರದ್ಧೆಯೇ ನೀರು ಕಡಿಯುವ ಚಕ್ರವು. ಆತ್ಮಸಮರ್ಪಣವೇ ಹೋಕಾಯಂತ್ರವು. ಅನಂತ ಕೋಟಿ ಬ್ರಹ್ಮಾಂಡಗಳನ್ನು ಹುಟ್ಟಿಸಿ ಆಳುವ ಮಹಾಶಕ್ತಿಯೇ ನಿನ್ನ ಹಡಗವನ್ನೆಳೆಯುವ ಪಾವರ್. ದೇವನೇ ನಿನ್ನ ಕಪ್ತಾನನು.

ಆದರೆ ದೇವನು ತನ್ನ ಕಾರ್ಯವನ್ನು ತನ್ನ ಸ್ವಕೀಯ ಮಾರ್ಗಗಳಿಂದ ಸ್ವಕೀಯ ಕಾಲಾನುಕ್ರಮದಲ್ಲಿ ಮಾಡುತ್ತಾನೆ. ಅವನ ದಾರಿ

ಯನ್ನು ನೋಡುತ್ತ ನಡೆ. ಅವನ ಕಾಲವನ್ನು ಕಾದುಕೊಂಡಿರು. ಶಾಸ್ತ್ರದ ಅಗತ್ಯವನ್ನು ಅರಿತುಕೋ. ಗುರುವಿನ ಗುರುತ್ವವನ್ನು ಸ್ವೀಕರಿಸುವ ಅಗತ್ಯವನ್ನು ಅರಿತುಕೋ. ಬರಿ ತರ್ಕಕ್ಕೆ ಮಹತ್ವ ಕೊಟ್ಟು ಮಾಯಾವಾದಗಳ ಅಸ್ಪಷ್ಟ ವಾದಗಳ ಮೇಲೆ ಸುಳ್ಳು ಜಂಬವನ್ನು ಕೊಚ್ಚಬೇಡ. ಕುಳ್ಳಿರಿಸಿ. ಅನುಭವದ ಕಡೆಗೆ ಲಕ್ಷವಿರಲಿ. ಪಾಂಡಿತ್ಯವು ತುಚ್ಛವಾದದ್ದು. ಅದರಿಂದ ಸಹಾಯಕ್ಕೆ ಬದಲು ವಿಘ್ನವೇ ಹೆಚ್ಚು. ನೀನು ಪೂರ್ಣ ಯೋಗದ ಮಾರ್ಗವನ್ನು ಸ್ವೀಕರಿಸಿದ ಮೇಲೆ ವ್ಯರ್ಥ ಪ್ರಶ್ನಜಾಲದಲ್ಲಿ ಕಾಲವನ್ನು ಕಳೆಯುವದಕ್ಕಿಂತ ಅನುಭವಕ್ಕೆ ನಿನ್ನ ಚಿತ್ತದ್ವಾರವನ್ನು ಮುಕ್ತರೀತಿಯಿಂದ ತೆರೆದಿಟ್ಟು ಧೀರನಾಗಿ ನಡೆ. ಈ ಮಾರ್ಗದಲ್ಲಿ ಮುಂದುವರಿಯಲು ನೀನು ಸಹಾಯಕರಿಂದ ಸಹಾಯವನ್ನು ತೆಗೆದುಕೊಳ್ಳುವದಕ್ಕೂ ನೀನೇನು ಗರ್ವ ಪಡಬೇಡ. ಅಲ್ಪಸ್ವಲ್ಪ ತಿಳಿದದ್ದಕ್ಕೆ ಹೆಚ್ಚು ಮಹತ್ವ ಕೊಡದೆ ಪೂರ್ಣ ಪ್ರಕಾಶದ ಸಂಪೂರ್ಣ ಅನುಭವಕ್ಕಾಗಿ ನಿರೀಕ್ಷಿಸು. ನಿನ್ನ ಒಳಗಿನಿಂದ ನಿನಗೆ ಸಹಾಯ ಮಾಡಬಲ್ಲ ಜಗದ್ಗುರುವಿನ ಮೇಲೆ ನಿನ್ನ ಭರವಸವಿರಲಿ.

ಇದೀಗಿನ ಅಧುನಿಕ ವಿಚಾರವಾತಾವರಣದಲ್ಲಿ ಬಹಳವಾಗಿ ಪ್ರಾಮುಖ್ಯತೆಗೆ ಬಂದಿರುವ ಅದ್ಭೈತವಾದ ಮತ್ತು ಮಾಯಾವಾದಗಳ ನೂತನ ವ್ಯಾಖ್ಯೆಯನ್ನು ಕುರಿತು ಸ್ವಲ್ಪಮಟ್ಟಿಗೆ ಹೇಳಬೇಕಾದ ಅಗತ್ಯವಿದೆ. ಯುರೋಪಿನ ತರ್ಕವಾದಿಗಳ ಅಜ್ಞೇಯವಾದದಲ್ಲಿ ಇಂದು ಅದ್ಭೈತವಾದವೂ ಮಾಯಾವಾದವೂ ಬೆರೆತು ಹೋಗಿರುವುದು ಗೊತ್ತಾದರೆ ಸ್ವಯಂ ಶಂಕರಾಚಾರ್ಯರು ಕೂಡ ಆಶ್ಚರ್ಯಪಡುವಂತೆ ಇದೆ. ಏಕದೇಶೀಯ ತೆಯ ತತ್ತ್ವಜ್ಞಾನಿಗಳು ಸತ್ಯದ ಅಂಶವನ್ನು ಮಾತ್ರ ಹೇಳುವರೆಂಬುದು ಮಾತ್ರ ನೆನಪಿನಲ್ಲಿರಲಿ. ದೇವನು ಜಗತ್ತನ್ನು ನಿರ್ಮಿಸಿದನೆಂಬುದು ತರ್ಕಶಾಸ್ತ್ರದ ಕಟ್ಟುನಿಟ್ಟಿನ ಅನುಮಾನ ಮತ್ತು ಸಿದ್ಧಾಂತಗಳಂತೆ ಇಲ್ಲ. ಸಂಗೀತದೊಳಗಿನ ಸ್ವರಸಂಯೋಜನವಂತೆ ಇದೆ. ಅನೇಕತ್ವದಲ್ಲಿ ಅಪಾರವಾದ ಸಮರಸತೆ ಇದೆ. ಅತನ ಸತ್ತೆಯು ಸರ್ವಸ್ವತಂತ್ರವಾಗಿದ್ದರೂ ಬಹುತ್ವದಲ್ಲಿಯೇ ಏಕತ್ವವಿದೆ. ಈ ಮಾತನ್ನು ತರ್ಕದಿಂದ ಸಿದ್ಧ ಮಾಡಿಕೊಡಲು ಶಕ್ಯವಿಲ್ಲ. ಸರ್ವಧರ್ಮಗಳ ಸತ್ಯವನ್ನು ಅಂಗೀಕರಿಸುವ ಧರ್ಮವು ಸರ್ವೋತ್ತಮ ಧರ್ಮವಾಗಿರುವಂತೆ ಸರ್ವತತ್ವಜ್ಞಾನಗಳ ಸತ್ಯವನ್ನು ಅಂಗೀಕರಿಸುವ ತತ್ವಜ್ಞಾನವೇ ಸರ್ವೋತ್ತಮ ತತ್ವಜ್ಞಾನವಾಗಿದೆ. ಅಂಥ ತತ್ವಜ್ಞಾನವು ಉಳಿದವುಗಳಿಗೆಲ್ಲ ತಕ್ಕ ತಕ್ಕ ಸ್ಥಾನವನ್ನು ಕೊಡುತ್ತದೆ. ಮಾಯಾ

ದಲ್ಲಿ ಇದ್ದನೆಂದು ಕಂಡುಬರುತ್ತದೆ. ಇದನ್ನೇ ಶ್ರೀಸಿದ್ಧಲಿಂಗ ಯತಿಗಳ ವಚನದಿಂದಲೂ ಶ್ರೀ ಮನ್ನಿರಂಜನ ವಂಶರತ್ನಾಕರ ಗ್ರಂಥದ ಆಧಾರದಿಂದಲೂ ತೋರಿಸಬಹುದು.

ಈಗ ಉಪಲಬ್ಧವಿರುವ ೧೨೭ ಪದಗಳ ಮೇಲಿಂದ ಶ್ರೀ ಅಲ್ಲಮಪ್ರಭುವಿಗೆ ನಿರಂಜನ, ನಿರ್ವಾಯ, ಮಾಯಾಕೋಲಾಹಲ, ಗುಹೇಶ್ವರ, ಗುಹೇಶ್ವರಪ್ರಭು, ಪ್ರಭುಲಿಂಗ, ಜಂಗಮಲಿಂಗ, ಅಲ್ಲಮ, ಅಲ್ಲಮೇಶ, ಅಲ್ಲಯ್ಯ, ಅಲ್ಲಮಪ್ರಭು, ಚನ್ನಪ್ರಭು, ಬಸವಪ್ರಭು, ಮಗಿಪ್ರಭು, ಮುಂತಾದ ಅನೇಕ ಪರ್ಯಾಯ ನಾಮಗಳಿದ್ದಂತೆ ಕಂಡುಬರುತ್ತದೆ. ಮತ್ತು ಅಚ್ಚಾದ ಪುಸ್ತಕದ ೨೦ ನೆಯ ಪುಟದಲ್ಲಿರುವ ೬೦ ನೆಯ ಪದದಲ್ಲಿ ಮಗಿಯ ನರೇಂದ್ರ ಕವಿಯು ಅಲ್ಲಮನೆಂದೂ, ಬಸವಪ್ರಭುವೆಂದೂ ಸಂಬೋಧಿಸಿದ್ದಾರೆ.

ಪದ— "ಜೋ ಜೋ ಎನ್ನಿ ಅಸಮ ಅಲ್ಲಮಗೆ । ಜೋ ಜೋ ಎನ್ನಿ ಬಸವಪ್ರಭುವಿಗೆ" ॥ ಇತ್ಯಾದಿ.

ಮತ್ತು ಬೇರೆ ಬೇರೆ ಭಕ್ತರ ಪ್ರಭುದೇವರ ಪದಗಳಲ್ಲಿ ೪೩ ನೆಯ ಪುಟದಲ್ಲಿರುವ ೭ ನೆಯ ಪದದಲ್ಲಿ ಬಸವಪ್ರಭುವೆಂದು ಉಲ್ಲೇಖಿಸಲ್ಪಟ್ಟಿದೆ. ಪದ— "ನಿರುಪಮನಿತ್ಯ ನಿರಂಜನ ಸಚ್ಚಿತ್ । ವರಬಸವಪ್ರಭುವಿನ ಧ್ಯಾನವಾಡೊ ಬಿಡದೆ" ॥೩॥ ಇದೇ ಪುಸ್ತಕದ ೪೧ ನೆಯ ಪುಟದಲ್ಲಿರುವ ೩ ನೆಯ ಪದದಲ್ಲಿ ತ್ರಿಪುರಾಂತಕ ಲಿಂಗನು ಸಹ ಬಸವಪ್ರಭುವೆಂದು ಸಂಬೋಧಿಸಿದ್ದಾನೆ. ಪದ— "ಆದಿಪ್ರಸಾದವ ಭೇದಿಸಬಲ್ಲದೆ। ನಮ್ಮ ತ್ರಿಪುರಾಂತಕ ಲಿಂಗದಲ್ಲಿ ಬಸವಪ್ರಭುವಿಗಲ್ಲದೆ" ॥೭॥

ಈ ಪುಸ್ತಕದಲ್ಲಿ ಮೇಲೆ ಕಾಣಿಸಿದ ಪರ್ಯಾಯ ನಾಮಗಳನ್ನು ಅನೇಕ ಪದಗಳಲ್ಲಿ ಉಪಯೋಗಿಸಿದ್ದಾಗಿದೆ. ಆದ್ದರಿಂದ ಮೇಲೆ ಬರೆದ ಕಾರಣಗಳ ಮೂಲಕ ಅಲ್ಲಮಪ್ರಭುವಿಗೆ ಅನೇಕ ಪರ್ಯಾಯ ನಾಮಗಳಿದ್ದವೆಂದೂ ಅವನೇ ಬಸವಪ್ರಭುವೆಂದೂ ಧಾರಾಳವಾಗಿ ಹೇಳಬಹುದು. ಇದೇ ವಿಷಯವನ್ನು ಶ್ರೀ ತೋಂಟದಾರ್ಯರ ವಚನಗಳ ದೃಷ್ಟಿಯಿಂದಲೂ ಮತ್ತು ಶ್ರೀ ಮನ್ನಿರಂಜನ ವಂಶರತ್ನಾಕರ ಗ್ರಂಥದ ದೃಷ್ಟಿಯಿಂದಲೂ ಶೋಧಿಸುವಾ. ಶ್ರೀ ತೋಂಟದಾರ್ಯರು ತಮ್ಮ ವಚನದಲ್ಲಿ (ಪುಟ. ೨. ವಚನ ೮) ತಮ್ಮ ವಂಶಾವಳಿಯನ್ನು ಕೊಟ್ಟಿರುತ್ತಾರೆ. ಇದೇ ವಂಶಾವಳಿಯನ್ನು ಶ್ರೀ ಮನ್ನಿರಂಜನ ವಂಶರತ್ನಾಕರ ಗ್ರಂಥವು ಸಮರ್ಥಿಸುತ್ತದೆ.

ವಂಶಾವಳಿಯು ವಿವರ (೧) ಅನಾದಿಗಣೇಶ, (೨) ಆದಿಗಣೇಶ, (೩) ನಿರ್ವಾಯ, (೪) ನಿರಂಜನ, (೫) ಜ್ಞಾನಾನಂದ, (೬) ಅತ್ಮಗಣೇಶ, (೭) ಅಧ್ಯಾತ್ಮಗಣೇಶ, (೮) ರುದ್ರಗಣೇಶ, (೯) ಬಸವಪ್ರಭು, (೧೦) ಆದಿಲಿಂಗೇಶ, (೧೧) ಚನ್ನವೀರೇಶ (೧೨) ಗೋಸಲದೇವ, (೧೩) ರಂಕ ರದೇವ, (೧೪) ದಿವ್ಯಲಿಂಗೇಶ, (೧೫) ಚನ್ನಬಸವೇಶ, (೧೬) ಸಿದ್ಧಲಿಂಗ ತೋಂಟದಾರ್ಯ.

ಈ ಪ್ರಕಾರ ವಂಶಾವಳಿಯು ಇದ್ದು ಇದರಲ್ಲಿ ಎಲ್ಲಿಯೂ ಅಲ್ಲಮಪ್ರಭುವೆಂದು ಉಲ್ಲೇಖವಿಲ್ಲ; ಮತ್ತು ೯ ನೇ ಪೀಠಸ್ಥರು ಬಸವಪ್ರಭುವೆಂದು ಉಲ್ಲೇಖವದೆ. ಮೇಲೆ ಬರೆದಂತೆ ಶ್ರೀ ಮನ್ನಿರಂಜನ ವಂಶರತ್ನಾಕರವು ಈ ವಂಶಾವಳಿಯನ್ನು ಸಮರ್ಥಿಸುತ್ತದೆ. ಮೇಲೆ ಕೊಟ್ಟ ವಂಶಾವಳಿಯಲ್ಲಿ ಶ್ರೀ ಅಲ್ಲಮಪ್ರಭುವಿನ ಹೆಸರು ಉಲ್ಲೇಖವಿಲ್ಲದ ಮೂಲಕ ಎರಡು ವಿಚಾರಗಳಿಗೆ ಆಸ್ಪದವಾಗಬಹುದು. (೧) ಅಲ್ಲಮನಿಗೂ ಈ ವಂಶಾವಳಿಗೂ ಏನೂ ಸಂಬಂಧವಿಂದೆ ಅವನು ಪ್ರತ್ಯೇಕವಾಗಿರಬೇಕೆಂಬದೊಂದು ವಿಚಾರ. ಅಥವಾ (೨) ಈ ವಂಶಾವಳಿಯಲ್ಲಿ ಅಲ್ಲಮಪ್ರಭುವಿದ್ದು ಅವನ ಪರ್ಯಾಯ ನಾಮವು ಸೇರಿಸಲ್ಪಟ್ಟಿರಬೇಕೆಂಬ ವಿಚಾರವು ಮತ್ತೊಂದು. ಈ ಎರಡು ವಿಚಾರಗಳಲ್ಲಿ ಮೊದಲನೇದ್ದು ತೀರ ಅಸಮಂಜಸವೂ, ಅಪಕ್ವವೂ ಮತ್ತು ತೀರ ಅಸಂಭವನೀಯವೂ ಆಗುವ ಕಾರಣ ಅದರ ಬಗ್ಗೆ ಇಲ್ಲಿ ವಿಸ್ತಾರವಾಗಿ ಚರ್ಚಿಸುವದು ಅನವಶ್ಯವು. ಆದ್ದರಿಂದ ಈ ವಂಶಾವಳಿಯಲ್ಲಿ ಅಲ್ಲಮಪ್ರಭುವಿನ ಪರ್ಯಾಯ ನಾಮವೇ ಅರ್ಥಾತ್ ಬಸವಪ್ರಭುವೆಂದು ಉಲ್ಲೇಖಿಸಲ್ಪಟ್ಟಿರಬೇಕೆಂದು ಅರ್ಥವಾಗುತ್ತದೆ. ಇನ್ನು ಅಲ್ಲಮಪ್ರಭುವೇ ೯ ನೆಯ ಪೀಠಸ್ಥನಾದ ಬಸವಪ್ರಭುವು ಆದದ್ದಾದರೆ ಅವನು ೧೫ ನೆಯ ಶತಮಾನದಲ್ಲಿರದೆ ೧೨ ನೆಯ ಶತಮಾನದಲ್ಲಿದ್ದನೆಂದು ಹೇಳಬಹುದು. ೧೬ ನೆಯ ಪೀಠಸ್ಥರಾದ ಸಿದ್ಧಲಿಂಗ ಯತಿಗಳು ೧೪೭೦ ರಲ್ಲಿ ಇದ್ದರೆಂದು ಕರ್ನಾಟಕ ಕವಿ ಚರಿತ್ರಕಾರರು ಕಂಡು ಹಿಡಿದಿದ್ದಾರೆ. ಮತ್ತು ಅವರ ಪರಮ ಗುರುವೂ ಮತ್ತು ೧೫ ನೆಯ ಪೀಠಸ್ಥನೂ ಆದ ಶಂಕರ ದೇವನು ೧೫೨೫ ರಲ್ಲಿ ಇದ್ದಿರಬೇಕೆಂದು ಶ. ಮೂ. ಬುದ್ಧಯ್ಯನವರು ತಮ್ಮ ೫ ನೆಯ ಪುಷ್ಪದ ಪ್ರಸ್ತಾವನೆಯಲ್ಲಿ ಹೇಳಿರುವರು. ಶ್ರೀ ಪ್ರಭುದೇವನು ೧೧೬೦ ರಲ್ಲಿ ಇದ್ದನೆಂದು ಕರ್ನಾಟಕ ಕವಿಚರಿತ್ರಕಾರರು ಹೇಳಿರುವರು. ಆದ್ದರಿಂದ ೯ ನೆಯ ಪೀಠಸ್ಥರಾದ ಬಸವಪ್ರಭುವು ಅಥವಾ ಅಲ್ಲಮಪ್ರಭುವು ೧೨ ನೆಯ ಶತಮಾನದಲ್ಲಿದ್ದಿರಬೇಕೆಂದು ತಿಳಿಯುತ್ತದೆ.

ಹಿಂದೆ ಹೇಳಿದಂತೆ ತ್ರಿಪುರಾಂತಕಲಿಂಗನು ಈ ಪುಸ್ತಕದ ೪೧ ನೆಯ ಪಾನಿನಲ್ಲಿರುವ ೩ ನೆಯ ಪದ್ಯದಲ್ಲಿ ಅಲ್ಲಮ ಪ್ರಭುವನ್ನು ಸ್ತುತಿಸಿದ್ದಾನೆ. ಈ ತ್ರಿಪುರಾಂತಕ ಲಿಂಗವು ಶರಣರ ಕಾಲದಲ್ಲಿ ಇದ್ದನೆಂದು ಕರ್ನಾಟಕ ಕವಿಚರಿತಕಾರರು ಅಭಿಪ್ರಾಯಪಡುತ್ತಾರೆ. ಶರಣರ ಕಾಲವೆಂದರೆ ಬಸವಾದಿ ಪ್ರಮಥರ ಕಾಲವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ, ಇದಲ್ಲದೆ ಅಲ್ಲಮನು ಬಸವಾದಿ ಪ್ರಮಥರಿಗೆ ಉಪದೇಶಮಾಡಿದ್ದು ಜಗತ್ಪ್ರಸಿದ್ಧವಿದೆ. ಇದೇ ಪುಸ್ತಕದ ೩೯ ನೆಯ ಪುಟದಲ್ಲಿರುವ ೭ ನೆಯ ಪದ್ಯದಲ್ಲಿ ಅಲ್ಲಮ ಪ್ರಭು ಬಸವಾದಿ ಪ್ರಮಥರ ಕಾಲದಲ್ಲಿ ಇದ್ದನೆಂಬ ಬಗ್ಗೆ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಈ ಯಾವತ್ತೂ ಕಾರಣಗಳ ಮೂಲಕ ಅವನು ೧೨ ನೆಯ ಶತಮಾನದಲ್ಲಿರಬೇಕೆಂದು ಅನುಮಾನವು ಬರುತ್ತದೆ. ಇನ್ನು ಅಲ್ಲಮನು ೧೨ ನೇ ಶತಮಾನದಲ್ಲಿದ್ದನೆಂದು ಗ್ರಹಿಸಿದರೆ ಮಗಿಯನರೇಂದ್ರನಿಗೆ ಅವನು ವೀರಶೈವ ದೀಕ್ಷೆಯನ್ನು ಮಾಡಿ ಲಿಂಗಧಾರಣವನ್ನು ಮಾಡಲಿಲ್ಲವೆಂದು ಪ್ರತ್ಯೇಕವಾಗಿ ಹೇಳಲಿಕ್ಕೆ ಬೇಡ. ಯಾಕಂದರೆ ಮಗಿಯನರೇಂದ್ರ, ಗುರುಬಸವ, ಚನ್ನಪ್ಪ ಈ ಮೂವರು ಕವಿಗಳು ಸಮಾನ ಕಾಲಿನವರು ಇದ್ದು ೧೫ ನೇ ಶತಮಾನದಲ್ಲಿದ್ದರೆಂದು ರಾವಸಾಹೇಬ ಹಳಕಟ್ಟಿಯವರು ಅಭಿಪ್ರಾಯಪಡುತ್ತಾರೆ. ಮತ್ತು ಅದು ನಿಜವಿದ್ದಂತೆ ಕಾಣಿಸುತ್ತದೆ. ಆದ್ದರಿಂದ ೧೨ ನೇ ಶತಮಾನದಲ್ಲಿದ್ದ ಅಲ್ಲಮನು ೧೫ ನೇ ಶತಮಾನದಲ್ಲಿದ್ದ ಮಗಿಯನರೇಂದ್ರನಿಗೆ ವೀರಶೈವ ದೀಕ್ಷೆಯನ್ನು ಮಾಡಿದನೆಂಬ ಮಾತು ತೀರ ಅಸಂಭವನೀಯವಾಗಿ ತೋರುತ್ತದೆ. ಇದಲ್ಲದೆ ಮಗಿಯನರೇಂದ್ರನ ಸಮಕಾಲೀನ ಕವಿಯಾದ ಚೆನ್ನಪ್ಪನು ಅದೇ ಪುಸ್ತಕದ ೨೪ ನೇ ಪುಟದಲ್ಲಿರುವ ೧ ನೇ ಪದ್ಯದಲ್ಲಿ "ವೀರಧೀರ ಕೃಷ್ಣೇಂದ್ರ ಸತಿಗೆ ವರಕೊಟ್ಟ ಪ್ರಭುವಿಗೆ" ಎಂದು ಸಂಬೋಧಿಸಿದ್ದರ ಮೇಲಿಂದ ಹನವಗಂಡಿಯ ದೇಸಾಯರ ಪೂರ್ವಜನಾದ ಕೃಷ್ಣೇಂದ್ರರಾಜನೆಂಬವನೊಬ್ಬನು ೧೨ ನೇ ಶತಮಾನದಲ್ಲಿದ್ದು ಅವನಿಗೆ ಅಲ್ಲಮನು ವೀರಶೈವದೀಕ್ಷೆಯನ್ನು ಮಾಡಿದನೆಂದು ಕೆಲವರ ಅಭಿಪ್ರಾಯವಿರುತ್ತದೆ.

ಇದಲ್ಲದೆ ಮಗಿಯನರೇಂದ್ರನು ತನ್ನ ಕಾಲದಲ್ಲಿ ತೇರದಾಳವು ಭೂಕೈಲಾಸವಾಗಿತ್ತೆಂದು ಅಂದಿದ್ದಾನೆ. ಅಲ್ಲಮನು ತೇರದಾಳದಲ್ಲಿ ನಿರ್ವಯಲವಾಗಿದ್ದು ಅವನ ತೋರಗದ್ದಿಗೆಯು ತೇರದಾಳದಲ್ಲಿರುತ್ತದೆ. ಇದರ ಮೇಲಿಂದಾದರೂ ಮಗಿಯನರೇಂದ್ರನ ಕಾಲಕ್ಕಿಂತ ಮೊದಲೇ ಅಲ್ಲಮನು

ನಿರ್ವಯಲವಾಗಿ ಅವನ ಪ್ರಭೆಯು ನಾಲ್ಕೂ ದಿಕ್ಕಿಗೂ ಪಸರಿಸಿ ತೇರದಾಳವು ೧೫ನೇ ಶತಮಾನದಲ್ಲಿ ಭೂಕೈಲಾಸವಾದರೂ ಆಗುವ ಸಂಭವವಿದೆ.

ಇದಲ್ಲದೆ ,ಮಗಿಯನರೇಂದ್ರ ಕವಿಯ ಹೆಸರು ಮಗಿಯಪ್ಪ ಎಂದು ಇದ್ದು ಈ ಹೆಸರು ಅಲ್ಲಮನ ಪರಿಯಾಯ ನಾಮವಾದ ಮಗಿಪ್ರಭು ಎಂಬ ಹೆಸರಿನ ಮೇಲಿಂದ ಬಂದಿತ್ತೆಂದು ಕೆಲವರ ಅಭಿಪ್ರಾಯವಿದೆ. ಮತ್ತು ಅಲ್ಲಮನಿಗೆ ಮಗಿಪ್ರಭು ಎಂಬ ಪರ್ಯಾಯ ನಾಮವು ತಾನು ತೇರದಾಳ ಗ್ರಾಮದಲ್ಲಿ ನಿರ್ವಯಲವಾಗುವ ಕಾಲಕ್ಕೆ ತನ್ನ ಕಮಂಡಲುವಾದ ಮಗಿಯನ್ನು ಕೆಳಗಿಟ್ಟನಂತರ ಬಂತೆಂದು ಕೆಲವರ ಅಭಿಪ್ರಾಯವಿದೆ. ಇದು ನಿಜವಿದ್ದಂತೆ ಕಾಣಿಸುತ್ತದೆ. ಆದ್ದರಿಂದ ಮಗಿಪ್ರಭು ನಿರ್ವಯಲವಾದ ನಂತರ ಮಗಿಯಪ್ಪನ ಜನನವಾಗಿರಬೇಕೆಂದು ಅನುಮಾನವಾಗುತ್ತದೆ. ಮೇಲೆ ಬರೆದ ಕಾರಣಗಳಿಂದ ಅಲ್ಲಮನು ಮಗಿಯನರೇಂದ್ರನಿಗೆ ವೀರಶೈವ ದೀಕ್ಷೆಯನ್ನು ಮಾಡಲಿಲ್ಲವೆಂದೂ ಮತ್ತು ಅವನು ೧೫ನೇ ಶತಮಾನದಲ್ಲಿ ಇದ್ದಿಲ್ಲವೆಂದೂ ಗ್ರಹಿಸಿದರೆ ತಪ್ಪಾಗಲಿಕ್ಕಿಲ್ಲ. ಇನ್ನು ಬಾಗಲಕೋಟೆ ತಾಲೂಕಿನಲ್ಲಿರುವ ಹಿರೇಸೂರ ಕಿರೇಸೂರ ಗ್ರಾಮಗಳಿಗೆ ಅಲ್ಲಮನು ಹೋದದ್ದು ಸಂಭವನೀಯವಾಗಿ ಕಂಡುಬರುವದಿಲ್ಲ. ಯಾಕಂದರೆ ಅವನು ಕೆಳದೀ ದೇಶದಲ್ಲಿದ್ದು ಅಲ್ಲಿಂದ ಗದಗ ತಾಲೂಕಿನಲ್ಲಿರುವ ಮುಳಗುಂದ ಕುರ್ತಕೋಟಿ ಮತ್ತು ಕಣಿವಿ ಗ್ರಾಮಗಳಿಗೆ ಬಂದು ಅಲ್ಲಿಯ ಭಕ್ತರನ್ನು ಉದ್ಧರಿಸುತ್ತ ಹಾಗೇ ಹುಕ್ಕೇರಿ ಸೀಮೆಗೆ ಹೋಗಿ ಅಲ್ಲಿಂದ ಹನಗಂಡಿಯ ಗ್ರಾಮಕ್ಕೆ ಹೋಗಿ ಅಲ್ಲಿಂದ ತೇರದಾಳಕ್ಕೆ ಹೋಗಿ ಅಲ್ಲಿ ನಿರ್ವಯಲವಾದನೆಂದು ಆಧಾರಗಳು ಸಿಗುತ್ತವೆ. ಹೀಗಿದ್ದು ಅವನು ದಾರಿಬಿಟ್ಟು ಬಾಗಲಕೋಟೆ ತಾಲೂಕಿನಲ್ಲಿರುವ ಹಿರೇಸೂರ ಕಿರೇಸೂರ ಗ್ರಾಮಗಳಿಗೆ ಹೋದಂತೆ ಉಲ್ಲೇಖವಿಲ್ಲ. ಆದ್ದರಿಂದ ಹುಕ್ಕೇರಿ ಸೀಮೆಗೂ ಮತ್ತು ಮುಳಗುಂದ ಕುರ್ತಕೋಟಿಗಳಿಗೂ ಮಧ್ಯದಲ್ಲಿರುವ ಹುಬ್ಬಳ್ಳಿ ತಾಲೂಕಿನಲ್ಲಿರುವ ಹಿರೇಸೂರ ಕಿರೇಸೂರ ಗ್ರಾಮಗಳ ಮೇಲೆ ಹಾಯ್ದು ಹೋಗಿರಬೇಕೆಂಬಂತೆ ಕಾಣಿಸುತ್ತದೆ. ಮತ್ತು ೫೯ನೇ ಪದದಮೇಲಿಂದ ಶ್ರೀ ಅಲ್ಲಮಪ್ರಭು ಸ್ವಾಮಿಗಳು ಗೋಕಾವಿಯ ಹತ್ತರಿರುವ ಗೂಗಿಯ ಕೊಳ್ಳಕ್ಕೆ ಹೋಗಿರಬಹುದೆಂದು ರಾವಸಾಹೇಬ ಹಳಕಟ್ಟಿಯವರು ತರ್ಕಿಸುತ್ತಾರೆ. ಆದರೆ ಈ ಪನವು ಅಲ್ಲಮನ ಪರವಾಗಿರದೆ ೧೫ನೇ ಶತಮಾನದಲ್ಲಿದ್ದ ದಿಗಂಬರೇಶನ ಪರವಾಗಿರುತ್ತದೆ. ಅವನು ಗೋಕಾವಿಯ ಹತ್ತರಿರುವ ಗೂಗಿಯಕೊಳ್ಳಕ್ಕೆ ಹೋಗಿರಬಹುದು.

ಇದಲ್ಲದೆ ಅದೇ ಪುಸ್ತಕದ ೩೭ ನೇ ಪುಟದಲ್ಲಿರುವ ೩ ನೆಯ ಪದ್ಯದಲ್ಲಿ ಉಲ್ಲೇಖಿಸಿದ "ಪ್ರಜ್ವಲಿಸಿತು ಪ್ರಭೆಪುಣ್ಯಾದ ಮಲ್ಲಾಡ" ಎಂಬದರ ಅರ್ಥವನ್ನು ರಾವಸಾಹೇಬರು ಇದು ಬಸವಪ್ರಭುವು ಕೆಳದೀ ನಾಡಿನಲ್ಲಿದ್ದ ದ್ದರ ಉಲ್ಲೇಖವಾಗಿರಬೇಕೆಂದು ಊಹಿಸಿರುತ್ತಾರೆ. ಬರೇ ಅರ್ಧಚರಣದಿಂದಲೇ ಹೀಗೆ ಅರ್ಥವಾಡಿದಂತೆ ಕಾಣಿಸುತ್ತದೆ. ಅದೇ ನುಡಿಯಲ್ಲಿ ಮುಂದೆ "ನಿಜ ಭಾಪುರಿ ನೊಗ್ಗೆ" ಎಂದು ಉಲ್ಲೇಖವಿರುವದರಿಂದ ಅವರು ಬರೇ ಕೆಳದೀ ನಾಡಿನಲ್ಲಿದ್ದದ್ದರ ಉಲ್ಲೇಖವಾಗಿರದೆ ಶಿಕಾರಪುರದ ತಾಲೂಕಿನಲ್ಲಿದ್ದ ಬಳ್ಳೀಗಾವಿ ಗ್ರಾಮದಲ್ಲಿ ಅವತರಿಸಿದ ಬಗ್ಗೆ ಉಲ್ಲೇಖವಾಗಿರಬೇಕು. ಪ್ರಸಿದ್ಧ ಮಾಡಿದ ಪುಸ್ತಕದಲ್ಲಿ ಅಲ್ಲಮಪ್ರಭುವಿನ ಬಗ್ಗೆ ಒಟ್ಟು ೧೨೭ ಪದಗಳಿದ್ದು ಅವುಗಳಲ್ಲಿ ೨೮ ಪದಗಳಲ್ಲಿ ಅಲ್ಲಮನು ತೇರದಾಳದಲ್ಲಿ ಬಂದು ನಿಂತು ಅಲ್ಲಿ ನಿರ್ವಯಲವಾದ ಬಗ್ಗೆ ಸ್ಪಷ್ಟ ಉಲ್ಲೇಖವಿದೆ.

ಮೇಲಿನ ಎಲ್ಲ ಕಾರಣಗಳ ಮೂಲಕ ಅಲ್ಲಮನಿಗೆ ಅನೇಕ ಪರ್ಯಾಯ ನಾಮಗಳಿದ್ದು, ಅವುಗಳಲ್ಲಿ ಬಸವಪ್ರಭು ಎಂಬುದು ಕೂಡ ಒಂದು ಪರ್ಯಾಯ ನಾಮವಾಗಿ ಅಲ್ಲಮನೇ ಬಸವಪ್ರಭು ಎಂಬ ಪರ್ಯಾಯ ನಾಮ ಧರಿಸಿ ಸಂಚರಿಸಿದನು. ಅವನು ೧೫ ನೇ ಶತವಾನದಲ್ಲಿರದೆ ೧೫ ನೇ ಶತವಾನದಲ್ಲಿದ್ದನು. ಅವನು ಮಗಿಯ ನರೇಂದ್ರನಿಗೆ ವೀರಶೈವ ದೀಕ್ಷೆಯನ್ನು ಮಾಡಲಿಲ್ಲ. ಅವನು ಬಾಗಲಕೋಟೆ ತಾಲೂಕಿನಲ್ಲಿದ್ದ ಹಿರೇಸೂರ ಕಿರೇಸೂರ ಗ್ರಾಮಗಳಿಗೆ ಹೋಗದೆ ಹುಬ್ಬಳ್ಳಿ ತಾಲೂಕಿನಲ್ಲಿದ್ದ ಹಿರೇಸೂರ ಕಿರೇಸೂರ ಗ್ರಾಮಗಳ ಮೇಲೆ ಹಾಯ್ದು ಹುಕ್ಕೇರಿ ಸೀಮೆಗೆ ಹೋದನು. ಗೋಕಾವಿಯ ಹತ್ತರಿರುವ ಗೂಗಿಯ ಕೊಪ್ಪಕ್ಕೆ ಹೋಗಲಿಲ್ಲ. ಮತ್ತು ೩೭ ನೇ ಪುಟದಲ್ಲಿರುವ ೩ ನೇ ಪದದ ಆಧಾರದಿಂದ ಅಲ್ಲಮನು ಶಿಕಾರಪೂರ ತಾಲೂಕಿನಲ್ಲಿರುವ ಬಳ್ಳೀಗಾವಿಯಲ್ಲಿ ಅವತರಿಸಿದನೆಂದು ಅನುಮಾನ ಮಾಡಿದರೆ ತಪ್ಪಾಗಲಿಕ್ಕಿಲ್ಲವೆಂದು ಅನಿಸುತ್ತದೆ. ಇದಲ್ಲದೆ ಈ ಮೂವರು ಕವಿಗಳ ಒಟ್ಟು ೩೩೦೦ ಪದಗಳಿದ್ದು ಅವುಗಳಲ್ಲಿ ಈಗ ಉಪಲಬ್ಧವಿರುವ ೧೨೭ ಪದಗಳಲ್ಲಿಯೇ ಇಷ್ಟು ಅನುಮಾನ ಮಾಡಲಿಕ್ಕೆ ಅವಕಾಶವಿದ್ದಲ್ಲಿ ಕಣ್ಮರೆಯಾದ ಉಳಿದ ಪದಗಳಲ್ಲಿ ಏನು ಹೊರಡುತ್ತವೆಂಬುವದನ್ನು ಶ್ರೀಅಲ್ಲಮನೇ ಬಲ್ಲನು.

ಶ್ರೀ. ಹುಂಡೇಕಾರರ ಈ ಅಭಿಪ್ರಾಯಕ್ಕೆ ರಾವಸಾಹೇಬ ಹಳಕಟ್ಟಿಯವರು ಅದೇ ಸಂಚಿಕೆಯ ೨೫೫ ನೇ ಪುಟದಲ್ಲಿ "ಆಕ್ಷೇಪ ನಿರಸನ"

ಎಂಬ ಶಿರೋಲೇಖದ ಕೆಳಗೆ ತಮ್ಮ ಉತ್ತರವನ್ನು ಪ್ರಕಟಿಸಿರುವರು. ಅದರ ಸಾರಾಂಶವುಃ— "ತೇರದಾಳದಲ್ಲಿ ಸಮಾಧಿಸ್ಥರಾದ ಶ್ರೀಬಸವ ಪ್ರಭು ಸ್ವಾಮಿಗಳವರ ಬಗ್ಗೆ ನಾವು ಶಿವಾನುಭವದ ೪ ನೇ ಸಂಚಿಕೆಯಲ್ಲಿ ವಿವರಿಸಿದ್ದು ನಮ್ಮ ವಾಚಕರ ಸ್ಮರಣೆಯಲ್ಲಿರಬಹುದು. ಅವರು ಮೂಲ ಅಲ್ಲಮಪ್ರಭುವಿನ ತರುವಾಯ ೧೫ ನೇ ಪಟ್ಟದವರಿದ್ದು ಅವರು ಮಾಡಿದ ಮಹತ್ಕೃತ್ಯಗಳನ್ನು ನಾವು ಅದರಲ್ಲಿ ವಿವರಿಸಿದ್ದೇವೆ. ಆದರೆ ಶ್ರೀಯುತ ಚನ್ನಪ್ಪ ಹುಂಡೇಕಾರ ಬಿ. ಎ., ಎಲ್. ಎಲ್. ಬಿ., ಇವರು ಶ್ರೀಬಸವಪ್ರಭು ಸ್ವಾಮಿಗಳವರು ಮೂಲ ಅಲ್ಲಮಪ್ರಭು ಸ್ವಾಮಿಗಳೆಂತಲೇ ತಿಳಿದು ಇದನ್ನು ಸಮರ್ಥಿಸಲಿಕ್ಕೆ ಅವರು ಹಿಂದಿನ ಲೇಖನವನ್ನು ಬರೆದಿದ್ದಾರೆ.

(೧) ಅವರು ತಮ್ಮ ಲೇಖದಲ್ಲಿ ಮೂಲ ಅಲ್ಲಮಪ್ರಭುದೇವರಿಗೆ ೧೫ ಪರ್ಯಾಯ ನಾಮಗಳಿರಬಹುದೆಂದು ತಿಳಿದು ಅವುಗಳನ್ನು ತಮ್ಮ ಲೇಖದಲ್ಲಿ ವಿವರಿಸಿದ್ದಾರೆ. ಆದರೆ ಅವುಗಳಲ್ಲಿರುವ ಮಗಿಪ್ರಭು ಮತ್ತು ಬಸವಪ್ರಭು ಈ ಹೆಸರುಗಳು ಮಾತ್ರ ಅಲ್ಲಮಪ್ರಭುವಿಗೆ ಇದ್ದ ಹಾಗೆ ಯಾವ ಗ್ರಂಥಗಳಲ್ಲಿಯೂ ತೋರಿ ಬರುವದಿಲ್ಲ. ಆದ್ದರಿಂದ ಈ ೧೫ ಹೆಸರುಗಳು ಅಲ್ಲಮಪ್ರಭುವಿನ ಪರ್ಯಾಯ ನಾಮಗಳಾಗಿರದೆ ಅವು ಮಗಿಪ್ರಭು ಅಥವಾ ಬಸವಪ್ರಭುವಿನ ಪರ್ಯಾಯ ನಾಮಗಳಾಗಿ ಏಕೆ ಇರಬಾರದು? ಇದಾದರೂ ಅಷ್ಟೇ ಸಂಭವನೀಯವಾಗಿದೆ. ತೇರದಾಳದಲ್ಲಿ ಸಮಾಧಿಸ್ಥರಾದ ಸ್ವಾಮಿಗಳಿಗೆ ಮಗಿಪ್ರಭು ಎಂಬ ಹೆಸರು ವಾಡಿಕೆಯಲ್ಲಿದೆ. ಈ ಹೆಸರೇ ಅಚ್ಚುಹಾಕಿದ ಪದ್ಯಗಳಲ್ಲಿ ಉಪಯೋಗವಾದದ್ದು ತೋರಿಬರುತ್ತದೆ. ಈ ಮಗಿಪ್ರಭುವು ಪೂರ್ವದ ಅಲ್ಲಮಪ್ರಭುವಿನ ಸೂತ್ರದವನಾದ್ದರಿಂದ, ಮೂಲ ಪೀಠಾಧಿಪತಿಗಳ ನಾಮನಿರ್ದೇಶದಿಂದ ಅವರನ್ನು ಪೂಜ್ಯಭಾವದಿಂದ ಸಂಬೋಧಿಸುವ ರೂಢಿಯನ್ನು ಈ ಪದ್ಯಗಳನ್ನು ರಚಿಸಿದ ಮಗಿಯ ನರೇಂದ್ರ, ಚನ್ನಪ್ರಭು ಇವರು ಅನುಸರಿಸಿರಬಹುದು. ಆದ್ದರಿಂದ ಶ್ರೀ. ಹುಂಡೇಕಾರ ಇವರು ಉಲ್ಲೇಖಿಸಿದ ಪರ್ಯಾಯ ನಾಮಗಳು ಅಲ್ಲಮಪ್ರಭುವಿನವರೆ ಅವರ ತರುವಾಯ ಪಟ್ಟಕ್ಕೆ ಬಂದ ಬಸವಪ್ರಭು ಅಥವಾ ಮಗಿಪ್ರಭು ಇವರವು ಇರಬಹುದು.

(೨) ಮೂಲ ಅಲ್ಲಮಪ್ರಭುವಿಗೆ ಬಸವಪ್ರಭು ಎಂಬ ಹೆಸರು ಉಪಯೋಗವಾದದ್ದು ಎಲ್ಲಿಯೂ ತೋರಿಬರುವದಿಲ್ಲ. ಈ ಬಸವಪ್ರಭು

ಶಬ್ದವು ಬಸವೇಶ್ವರನ ಹೆಸರಿರುತ್ತದೆ. ಬಸವೇಶ್ವರನಿಗೆ ಬಸವರಾಜ, ಬಸವಪ್ರಭು, ಬಸವದಂಡೇಶ ಎಂಬ ನಾಮಗಳಿವೆ. ಆದರೆ ಈಗಿನ ಪದ್ಯಗಳಲ್ಲಿ ಬಸವಪ್ರಭು ಸ್ವಾಮಿಗಳಿಗೆ ಅಲ್ಲಮನೆಂತಲೂ ಅಲ್ಲಲ್ಲಿ ನಾವು ನಿರ್ದೇಶವಿರುತ್ತದೆ. ಆದ್ದರಿಂದ ಹೀಗೆ ಬಸವಪ್ರಭು ಎಂಬ ಅಂಕಿತದಿಂದ ಕರೆಯಲ್ಪಟ್ಟ ಅಲ್ಲಮನು ಮೂಲ ಅಲ್ಲಮನಿರಲಿಕ್ಕಿಲ್ಲ.

(೩) ಮೂಲ ಅಲ್ಲಮನು ಐಕ್ಯವಾದ ಸ್ಥಳವು ಶ್ರೀಶೈಲವಿರುತ್ತದೆ. ಕಲ್ಯಾಣದಲ್ಲಿ ವಿರೋಧಿಗಳು ಉತ್ಪನ್ನವಾದ ಬಳಿಕ ಅವನೂ ಮಹಾದೇವಿ ಅಕ್ಕ ಮೊದಲಾದ ಶಿವಶರಣರೂ ಶ್ರೀಶೈಲಕ್ಕೆ ಹೋಗಿ ಕದಳಿಯ ಬನದಲ್ಲಿ ಐಕ್ಯಹೊಂದಿದರು. ಈ ಪ್ರಕಾರ ಎಲ್ಲ ವೀರಶೈವ ಗ್ರಂಥಗಳಲ್ಲಿ ಹೇಳಿರುತ್ತದೆ. ಆದರೆ ಅಲ್ಲಮಪ್ರಭುವು ತೇರದಾಳದಲ್ಲಿ ಐಕ್ಯಹೊಂದಿದ್ದು ಎಲ್ಲಿಯೂ ಉಲ್ಲೇಖವಿರುವದಿಲ್ಲ. ಆದ್ದರಿಂದ ತೇರದಾಳದಲ್ಲಿ ಸಮಾಧಿಸ್ಥರಾದ ಬಸವಪ್ರಭುವು ಅಲ್ಲಮಪ್ರಭುವಿನಿಂದ ಬೇರೆಯಾಗಿರಬೇಕು.

(೪) ತೋಂಟದಾರ್ಯರು ತಮ್ಮ ವಚನ ಗ್ರಂಥದಲ್ಲಿ ತಮ್ಮ ಪೂರ್ವ ಪೀಠಾಧಿಪತಿಗಳ ಹೆಸರನ್ನು ಹೇಳುವಾಗ ಬಸವಪ್ರಭು ಸ್ವಾಮಿಗಳು ಗಸೆಯವರಾಗಿ ಉಲ್ಲೇಖಿಸಿದ್ದಾರೆ. ಆದರೆ ಶೂನ್ಯಸಿಂಹಾಸನಕ್ಕೆ ಅಲ್ಲಮಪ್ರಭುವೇ ಮೂಲಿಗರಾಗಿದ್ದರಿಂದ ಬಸವಪ್ರಭು ಎಂದು ಅವರು ಇಲ್ಲಿ ಗಸೆಯವರಾಗಿದ್ದು ಹೇಳಲಿಕ್ಕೆ ಕಾರಣವೇನು? ಆದ್ದರಿಂದ ಇವನು ಮೂಲ ಅಲ್ಲಮನಾಗಿರದೆ ಅವರ ತರುವಾಯದವರೆಂದು ಸ್ಪಷ್ಟವಾಗುತ್ತದೆ.

(೫) ಮೂಲ ಅಲ್ಲಮ ಪ್ರಭುವಿನ ಗುರುಗಳ ಹೆಸರು ಅನುಪಿಷ ನೆಂದು ಪ್ರಸಿದ್ಧವದೆ. ಆದರೆ ತೋಂಟದಾರ್ಯರು ಕೊಟ್ಟ ವಂಶಾವಳಿಯಲ್ಲಿ ಬಸವಪ್ರಭುವಿನ ಗುರುಗಳ ಹೆಸರು ರುದ್ರಗಣೇಶನೆಂದು ಹೇಳಲ್ಪಟ್ಟಿದೆ. ಆದ್ದರಿಂದ ಈ ಬಸವಪ್ರಭುವೂ ಮೂಲ ಅಲ್ಲಮನೂ ಒಂದೇ ಯಾಗಿರಲಾರರು.

(೬) 'ಪ್ರಭುದೇವರ ಸ್ತೋತ್ರಸಂಗ್ರಹ' ಎಂಬ ಪುಸ್ತಕದಲ್ಲಿ ಬಸವಪ್ರಭುಗಳ ಚರಿತ್ರೆಯು ಕೊಡಲ್ಪಟ್ಟಿದೆ. ಈ ಚರಿತ್ರೆಯು ನನ್ನ ಹತ್ತಿರಿರುವ ನಿರಂಜನಪಂಚರತ್ನಾಕರವೆಂಬ ಗ್ರಂಥದಿಂದ ಎತ್ತಿ ಬರೆದದ್ದೆಂದು ಆ ಪುಸ್ತಕದ ಅವತರಣಿಕೆಯಲ್ಲಿ ಬರೆದಿದ್ದಾರೆ. ಆದರೆ ಈ ಚರಿತ್ರೆಯನ್ನು ಮೂಲ ಅಲ್ಲಮನ ಚರಿತ್ರೆಗೆ ಹೋಲಿಸಿದರೆ ಅವು ಎಷ್ಟು ಪರಸ್ಪರ ಭಿನ್ನವಾಗಿರುತ್ತವೆಂಬುದು ಯಾರಿಗಾದರೂ ತಿಳಿದು ಬರುವಂತಿದೆ.

ಈ ಚರಿತ್ರೆಗೂ ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳಲ್ಲಿ ಕಂಡು ಬರುವ ಮೂಲ ಅಲ್ಲಮಪ್ರಭುವಿನ ಚರಿತ್ರೆಗೂ ಎಷ್ಟು ಅಂತರವಿದೆಂಬುದು ಯಾರಿಗಾದರೂ ಸ್ಪಷ್ಟವಾಗದೆ ಇರಲಾರದು. ಆದ್ದರಿಂದ ಈ ಬಸವಪ್ರಭುವು ಮೂಲ ಅಲ್ಲಮನೆಂದು ತಿಳಿಯಲಿಕ್ಕೆ ಬರಲಾರದು. ಮೇಲ್ಕಂಡ ಸಂಗತಿಗಳ ಮೂಲಕ ತೇರದಾಳದಲ್ಲಿ ಐಕ್ಯಹೊಂದಿದ ಬಸವಪ್ರಭುಗಳು ಮೂಲ ಅಲ್ಲಮಪ್ರಭುವಾಗಿರಲಿಕ್ಕಿವೆಂದು ನಮಗೆ ತೋರುತ್ತದೆ. ಆದರೆ ಶಿವಮೂರ್ತಿ ಬುದ್ಧಯ್ಯನವರು ಹನಗಂಡಿ ದೇಸಾಯರಾದ ಮಗೆಪ್ಪ ದೇಸಾಯಿ, ಚನ್ನಪ್ಪ ಮತ್ತು ಗುರುಬಸವ ಇವರಿಂದ ರಚಿತವಾದ ೩೩೦೦ ಪದ್ಯಗಳಲ್ಲಿ ಈಗ ಉಪಲಬ್ಧವಾಗಿರುವ ೧೨೭ ಪದ್ಯಗಳನ್ನು ಮಾತ್ರ ಪ್ರಸಿದ್ಧಿಪಡಿಸಿದ್ದಾರೆ. ಆದರೆ ಈ ಎಲ್ಲ ಪದ್ಯಗಳು ಪ್ರಸಿದ್ಧವಾದ ಬಳಿಕ ಬಸವಪ್ರಭುಗಳ ವಿಷಯವಾಗಿ ಹೆಚ್ಚಿಗೆ ಸಂಗತಿಗಳು ಹೊರಬೀಳುವ ಸಂಭವವದೆ.

ಶ್ರೀ. ಎಮ್. ಆರ್. ಶ್ರೀನಿವಾಸಮೂರ್ತಿಯವರು ಶ್ರೀಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ೧೬ ವರೆಗಿನ ಪುಷ್ಪಗಳ ಬಗ್ಗೆ ಬೆಂಗಳೂರ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದಿಂದ ಪ್ರಕಟಿಸಲ್ಪಡುವ "ಪ್ರಬುದ್ಧ ಕರ್ನಾಟಕ"ದ ಕ್ರಿಸ್ತ ಶಕ ೧೯೩೧ ನೆಯ ಸಾಲಿನ ಪ್ರಥಮೋದ್ಭೂತ ಸಂವತ್ಸರದ ೧೨ನೇ ಸಂಪುಟದ ೪ನೆಯ ಕಾವ್ಯನ ಸಂಚಿಕೆಯಲ್ಲಿ 'ಕಾವ್ಯಾವಲೋಕನ' ಎಂಬ ಶಿರೋಲೇಖದ ಕೆಳಗೆ ವಿಮರ್ಶೆಯನ್ನು ಮಾಡಿರುವರು. ಅದರಲ್ಲಿ ಅವರು "ಈ ಗ್ರಂಥಗಳಿಂದಲೂ ಅವುಗಳಲ್ಲಿರುವ ಮುನ್ನುಡಿಗಳಿಂದಲೂ ಕೆಲವು ಚರ್ಚಾಸ್ಪದವಾದ ವಿಷಯಗಳು ಹೊರಬಿದ್ದಿವೆ. ಅವುಗಳಲ್ಲಿ ಮುಖ್ಯವಾದೆರಡನ್ನು ಇಲ್ಲಿ ಕಾಣಿಸಿದೆ. (೧) ಬಸವಪ್ರಭು, ಚನ್ನಪ್ರಭು ಮತ್ತು ಮುಗಿಪ್ರಭು ಎಂಬ ಉಪನಾಮಗಳು ಪ್ರಭುದೇವನಿಗುಂಟು. (೨) ಅಲ್ಲಮಪ್ರಭುವು ಐಕ್ಯವಾದ ಸ್ಥಳವು ಶ್ರೀಶೈಲವಿರದೆ ತೇರದಾಳವೆಂಬ ಗ್ರಾಮವಾಗಿರುತ್ತದೆ" ಎಂದು ಹೇಳಿ "ಈ ಚರ್ಚೆಯಲ್ಲಿ ನಾವು ಈಗ ಕೈಹಾಕಲು ಇಚ್ಛೆಪಡುವದಿಲ್ಲ.

ಆದರೆ ಈ ವಾದದ ರೀತಿಯು ಹೇಗಿರುವದೆಂಬದನ್ನು ಮಾತ್ರ ಒಂದೆರಡು ವಾಕ್ಯಗಳಲ್ಲಿ ವಾಚಕರ ಸೌಕರ್ಯಕ್ಕಾಗಿ ತಿಳಿಸುತ್ತೇವೆ. ತೇರದಾಳದಲ್ಲಿ ಬಸವಪ್ರಭು ಸ್ವಾಮಿಗಳ ಮಠವಿರುತ್ತದೆ. ಅದು ಶೂನ್ಯ ಸಿಂಹಾಸನ ಪರಂಪರೆಯಿಂದ ನಡೆದುಬಂದಿರುವದಾಗಿ ಹೇಳುತ್ತಾರೆ. ಆದಿ

ಅಲ್ಲಮನ ಚರಿತ್ರೆಯು ಶ್ರೀ ಮನ್ನಿರಂಜನ ವಂಶ ರತ್ನಾಕರದಲ್ಲಿ ವರ್ಣಿತವಾಗಿರುವದೆಂದು ಶ್ರೀಯುತ ಪುರಾಣಿಕರು ಪ್ರಭುದೇವರ ಸ್ತೋತ್ರಸಂಗ್ರಹದ ಅವತರಣಿಕೆಯಲ್ಲಿ ಹೇಳಿ ಆ ಭಾಗವನ್ನು ಉದ್ಧರಿಸಿದ್ದಾರೆ. ಆ ಚರಿತ್ರೆಯು ತೇರದಾಳದ ಮಠಾಧಿಪತಿಗಳಾಗಿದ್ದ ಬಸವಪ್ರಭು ಸ್ವಾಮಿಗಳದೆಂದೂ ಈ ಬಸವಪ್ರಭು ಸ್ವಾಮಿಗಳು ಮೂಲ ಅಲ್ಲಮನಲ್ಲವೆಂದೂ ಶ್ರೀಯುತ ಹಳಕಟ್ಟಿಯವರು ಅಭಿಪ್ರಾಯಪಡುತ್ತಾರೆ. ವಂಶರತ್ನಾಕರದಲ್ಲಿರುವ ಬಸವಪ್ರಭು ಚರಿತ್ರೆಗೂ ಪ್ರಭುಲಿಂಗಲೀಲಾದಿ ಗ್ರಂಥಗಳಲ್ಲಿ ಮೊರೆಯುವ ಅಲ್ಲಮನ ಚರಿತ್ರೆಗೂ ಏನೇನೂ ಸಂಬಂಧವಿಲ್ಲವೆಂಬುದನ್ನು ಪರಸ್ಪರ ಹೋಲಿಕೆಗಳಿಂದ ಹೇಳಬಹುದಾಗಿದೆ. ಎದುರು ಪಕ್ಷದವರು ಶ್ರೀಯುತ ಹಳಕಟ್ಟಿಯವರ ಅಭಿಪ್ರಾಯಗಳನ್ನು ಒಪ್ಪಿರುವಂತೆ ತೋರುವದಿಲ್ಲ. ಬಸವಪ್ರಭು ಇತ್ಯಾದಿ ನಾಮಗಳು ಯಾವ ಕಾಲದಲ್ಲಿ ಯಾವ ಕಾರಣಗಳಿಂದ ಬಂದಿರಬಹುದು? ಅವು ಕೀರ್ತನಕಾರರ ಅಂಕಿತಗಳಾಗಿರಬಹುದೇ? ತ್ರಿಪುರಾಂತಕ ಲಿಂಗನ ಕಾಲವು ಯಾವದು? ಅವನ ವಚನದಲ್ಲಿ ಬರುವ ಬಸವಪ್ರಭು ಯಾರು? ಅಲ್ಲಮಪ್ರಭುವಿನ ಸಾಂಪ್ರದಾಯದವರಾಗಿ ಅಲ್ಲಮಪ್ರಭುವಿನ ಮಹತ್ವವನ್ನು ತೇರದಾಳದ ಮಠಾಧಿಪತಿಗಳಲ್ಲಿಯೂ ಆರೋಪಿಸಿ ಕೀರ್ತನಕಾರರು ಕೆಲವು ಕೀರ್ತನೆಗಳನ್ನು ರಚಿಸಿರಬಹುದೇ? ಎಂಬಿವೇ ನೊದಲಾದ ಪ್ರಶ್ನೆಗಳು ಸಹಜವಾಗಿ ತಲೆದೋರುತ್ತವೆ. ಈ ವಿಷಯಗಳನ್ನು ಸಾಹಿತ್ಯಾಭಿಮಾನಿಗಳು ಚರ್ಚಿಸುವದು ಅವಶ್ಯಕ ಎಂದು ಅಂದಿರುವರು. ಇದರ ಮೇಲಿಂದ ನೋಡಲಾಗಿ ಈ ವಾದದ ರೀತಿಯು ಹೇಗಿರುವದೆಂಬದನ್ನು ಸಹಜವಾಗಿ ಮನಗಾಣಬಹುದು.

ಸದ್ಯಕ್ಕೆ ಈ ವಾದದಲ್ಲಿ ತಾವು ಬೀಳುವದಿಲ್ಲೆಂದು ಹೇಳಿ, ನಾವು ಪದ್ಧತಿಯಂತೆ ಅವರಿಗೆ ಕಳುಹಿಸಿದ ಶ್ರೀಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ೮, ೯, ೧೦, ೧೧, ೧೨ನೆಯ ಪುಷ್ಪಗಳನ್ನು ವಿಮರ್ಶಿಸದೆ ಪುನಃ ಕ್ರಿ. ಶ. ೧೯೩೪ನೆಯ ಇಸವಿಯಲ್ಲಿ ಮೈಸೂರ ವಿಶ್ವವಿದ್ಯಾಲಯದಿಂದ ಪ್ರಕಟಿಸಲ್ಪಟ್ಟ "ಪ್ರಭುಲಿಂಗ ಲೀಲೆಯ ಸಂಗ್ರಹ"ದ ಪೀಠಿಕೆಯ ೭೫ನೆಯ ಪುಟ ಪರಿಶಿಷ್ಟ I ಭಾಗ VI ಪ್ಯಾರಾ ೪ ರಲ್ಲಿ "ಸಾಂಗಲಿ ಸಂಸ್ಥಾನದ ತೇರದಾಳದಲ್ಲಿ ಪ್ರಭುದೇವರ ಗದ್ದುಗೆ ಇರುವದಾಗಿಯೂ ಅದೇ ಅತನ ಐಕ್ಯದ ಸ್ಥಲವಾಗಿರಬೇಕೆಂದೂ, ಶ್ರೀಯುತ ಧಾರವಾಡದ

ಬಿ. ಎಸ್. ಪುರಾಣಿಕರು ಶ್ರೀ ಪ್ರಭುದೇವರ ಸ್ತೋತ್ರಸಂಗ್ರಹದ ಅವತರಣಿಕೆಯಲ್ಲಿ ಹೇಳಿ ನಿರಂಜನವಂಶರತ್ನಾಕರದ ಆಧಾರವನ್ನು ತೋರಿಸಿದ್ದಾರೆ. ಆದರೆ ಇವರು ನಿರಂಜನವಂಶರತ್ನಾಕರದಿಂದ ಆಧಾರವಾಗಿ ಉದ್ಧರಿಸುವ ಭಾಗವು ಅಲ್ಲಮಪ್ರಭುವಿಗೆ ಸಂಬಂಧ ಪಟ್ಟದ್ದಲ್ಲ. ಅದು ಬಸವಪ್ರಭು ಸ್ವಾಮಿಗಳಿಗೆ ಸಂಬಂಧಪಟ್ಟದ್ದು. ಈ ಬಸವಪ್ರಭು ಸ್ವಾಮಿಗಳು ಮೂಲ ಅಲ್ಲಮಪ್ರಭುವಿನಿಂದ ೧೨ನೆಯ ಪಟ್ಟದವರೆಂದು ನಿ. ವ. ರ. ಪುಟ ೨೧ ರಲ್ಲಿ ಹೇಳಿದೆ. ಇಲ್ಲಿ ಬರುವ ಬಸವಪ್ರಭು ಚರಿತ್ರೆಗೂ ಚಾಮರಸಾದಿಗಳು ಹೇಳಿರುವ ಅಲ್ಲಮ ಪ್ರಭು ಚರಿತ್ರೆಗೂ ಯಾವ ಸಂಬಂಧವೂ ಇಲ್ಲವೆಂಬುದು ಗ್ರಂಥ ಪರಿಶೀಲನದಿಂದ ತಿಳಿದು ಬರುತ್ತದೆ.

"ಎರಡನೆಯದಾಗಿ ಅದೇ ನಿ. ವ. ರ. ದಲ್ಲಿ ಅಲ್ಲಿಯ ಪ್ರಭುವಿಚಾರವಾಗಿ (ಪುಟಗಳು ೪-೫) ಹೀಗೆ ಹೇಳಿದೆ. "ಆ ಮೇಲೆ ಕಲ್ಯಾಣದಿಂದ ಪ್ರಭುಸ್ವಾಮಿಗಳು ಶ್ರೀಶೈಲಕ್ಕೆ ದಯಮಾಡಿಸಿ ಕದಳಿಯ ಬನದೊಳಗಿರುವ ಮಠದಲ್ಲಿ ರಕ್ತಾಕ್ಷಿನಾಮಸಂವತ್ಸರದ ಪುಷ್ಯ ಶುದ್ಧ ಪಾಡ್ಯಮಿ ಸೋಮವಾರ ಉದಯ ೨೫ ಗಳಿಗೆಗೆ ತಮ್ಮ ಗುರೇಶ್ವರ ಲಿಂಗದಲ್ಲಿ ನಿರ್ವಯಲಾದರು. ಇವರ ಬಯಲಾದ ಮಠವು ಶ್ರೀಶೈಲ ಕದಳೀ ಬನದಲ್ಲಿ ಇರುವದು. ಪಾತಾಳಗಂಗೆಯ ತಟಿಯಲ್ಲಿ ಇರುವ ಗುಡ್ಡದ ಮೇಲೆ ನಿಂತು ನೋಡಿದರೆ ಈಗ ಕಾಣುತ್ತದೆ. ಅಲ್ಲಿ ಹೋಗುವೆವೆಂದು ಹೋದರೆ ದಾರಿ ಸಿಗುವದಿಲ್ಲ."

"ಮೂರನೆಯದಾಗಿ ಎಂಟನೆಯ ಪದ್ಯದ ಜ್ಞಾನಾನಂದ ಸ್ವಾಮಿಗಳು ಕಲ್ಯಾಣದಲ್ಲಿ ಹಿಂದೆ ಅಲ್ಲಮಪ್ರಭು ಶೂನ್ಯಸಿಂಹಾಸನವೇರಿದ ಸ್ಥಳದಲ್ಲಿ ಶೂನ್ಯಸಿಂಹಾಸನವನ್ನು ರಚಿಸಿ ಒಂದು ಮಠವನ್ನು ಕಟ್ಟಿಸಿದಂತೆ ನಿ. ವ. ರ. ಪುಟ ೧೯ ರಲ್ಲಿ ಹೇಳಿದೆ. ಆದುದರಿಂದ ೧೨ನೆಯ ಪಟ್ಟಕ್ಕೆ ಬಂದ ತೇರದಾಳದಲ್ಲಿ ಬಯಲಾದ ಬಸವಪ್ರಭು ಸ್ವಾಮಿಗಳು ಮೂಲ ಅಲ್ಲಮಪ್ರಭು ಆಗುವ ಸಂಭವವಿಲ್ಲವೆಂದು ಹೇಳಬೇಕಾಗುತ್ತದೆ." ಎಂದು ಹೇಳಿ ಚರ್ವಿತ ಚರ್ವಣ ಮಾಡಿರುವರು.

ಇನ್ನು ನಮ್ಮ ಅಭಿಪ್ರಾಯವಾದರೂ ಶ್ರೀಮದನಾದಿ ಅಲ್ಲಮಪ್ರಭುದೇವನು ತೇರದಾಳದಲ್ಲಿಯೇ ಐಕ್ಯವಾದದ್ದು ನಿಜವೆಂದು ತೋರುತ್ತದೆ. ಇದನ್ನು ನಾವು ಆಧಾರಗಳಿಂದ ಸಿದ್ಧ ಮಾಡಬಹುದು. ಆದರೆ ಈ ಮಾತು ಸದ್ಯಕ್ಕೆ ಸಮಯಭೇದದವರಿಗೆ ಮಾತ್ರ ಅಷ್ಟು ರುಚಿಸಲಿಕ್ಕಿಲ್ಲ.

ಉಳಿದ ಸಂಶೋಧಕ ಬುದ್ಧಿಯುಳ್ಳವರು ಅದನ್ನು ಒಪ್ಪಬಹುದು. ನಾವು ಹಿಂದಿನ ಪ್ರಕರಣದಲ್ಲಿ ಹೇಳಿದಂತೆ ಅನೇಕ ಚಿತ್ರವಿಚಿತ್ರ ಲೀಲೆಗಳನ್ನು ಮಾಡುತ್ತ ಅತ್ಯಾನಂದದಿಂದ ತೇರದಾಳದಲ್ಲಿರುತ್ತಿರಲು ಷಟ್‌ಸ್ಥಲ ಜ್ಞಾನವನ್ನು ಸಂಪಾದಿಸಿದ್ದರಿಂದ ನಿರಾಲಂಬ ಸ್ಥಿತಿಗೆ ಮುಟ್ಟಿದವನೂ, ವಿದ್ಯೆಯೇ ಹೆಂಡತಿ, ಸಂತೋಷವೇ ಮಗನು, ವೈರಾಗ್ಯವೇ ಬಂಧುವು, ಕ್ಷಮೆಯೇ ಪರಿವಾರವು, ಶಾಂತಿಯೇ ಸ್ನೇಹಭಾವ, ಭಕ್ತಿಯೇ ಮಾತೋಶ್ರೀಯು, ಸದಾಚಾರವೇ ತಂದೆಯು, ಶಿವನ ಮೇಲಿನ ವಿಶ್ವಾಸವೇ ತಂಗಿಯು, ನಿರಾಶೆ ಮತ್ತು ಅಹಿಂಸೆಗಳೇ ತೊತ್ತುಗಳು, ಧರ್ಮವೇ ವಾಹನವು, ಇಂದ್ರಿಯ ದಮನವೇ ತನ್ನ ಆಚಾರವು, ಉಳಿದ ಸದ್ಗುಣಗಳೇ ತನ್ನ ಮೊಮ್ಮಕ್ಕಳು ಮರಿಮಕ್ಕಳು, ಜ್ಞಾನವೇ ಶರೀರವು, ವಿಚಾರವೇ ಕ್ಷೇತ್ರವು, ಮುಕ್ತಿಯೇ ಅತನ ಸಾಮ್ರಾಜ್ಯವು ಎಂದು ನಿಶ್ಚಯಿಸಿದವನೂ ಮತ್ತು ಮಹಾಲಿಂಗ, ಕಪನಿ, ಕಮಂಡಲು, ದಂಡ, ಭಿಕ್ಷಾಪಾತ್ರೆ ಹಾಗೂ ಭಸ್ಮಪಾತ್ರೆ ಎಂಬ ಪಂಚ ಬಹಿರಂಗ ಮುದ್ರೆಗಳನ್ನು ಧರಿಸಿದವನೂ ಅಂತರಂಗದಲ್ಲಿ ಸಮತೆಯೇ ಕಂಫೆ, ಜ್ಞಾನವೇ ದಂಡ, ದಯವೇ ಕಮಂಡಲು, ವೈರಾಗ್ಯವೇ ಬಿಕ್ಷಾಪಾತ್ರೆಯು ಮತ್ತು ಕ್ಷಮೆಯೇ ಭಸ್ಮಪಾತ್ರೆ ಮುಂತಾದವುಗಳನ್ನು ಧರಿಸಿದಂಥವನೂ ಹಾಗೂ ಶ್ರೀಮದ್ವೀರಶೈವ ಷಟ್‌ಸ್ಥಲ ಚಕ್ರವರ್ತಿ, ಬ್ರಹ್ಮಾನಂದ, ಪರಶಿವಮೂರ್ತಿ, ವಿರಕ್ತ ಶಿಖಾಮಣಿ, ಮಾಯಾ ಕೋಲಾಹಲನಾದ ಶ್ರೀಪ್ರಭುದೇವನು ನಿರ್ವಯಲವಾಗುವನೆಂಬ ವಾರ್ತೆಯು ಅಲ್ಲಲ್ಲಿ ಹಬ್ಬಿತು.

ಅದರಂತೆ ನಿರಂಜನ ವಂಶರತ್ನಾಕರದಲ್ಲಿ "ಆಮೇಲೆ ತೇರದಾಳವೆಂಬ ಊರಿಗೆ ದಯವಾಡಿಸಿ, ಅಲ್ಲಿಯ ಭಕ್ತಗಣಂಗಳನ್ನು ಕರಿಸಿಕೊಂಡು ತಮ್ಮ ಶಿವಾನುಭವ ಚರಂತಿಕೆಯನ್ನು ಆದಿಲಿಂಗೇಶನೆಂಬ ಗಣವರರಿಗೆ ಮಾಡಿ ಅವರಿಗೆ ತಮ್ಮಯ ೭೨ ಬಿರುದುಗಳು ಗಣಸಮೂಹವಂ ಕೊಟ್ಟು ಕಳುಹಿಸಿ ಅನಂತರ ಅಲ್ಲಿಯ ಭಕ್ತರ ಭಕ್ತಿಯೊಳು ಸ್ವಲ್ಪ ದಿವಸವಿರ್ದು ಆ ಬಳಿಕ ಅಲ್ಲಿಯ ದೇವಭಕ್ತರ ಕರೆಸಿಕೊಂಡು ಅವರಿಗೆ ತಾವು ಕಾಯ ಸಹಿತವಾಗಿ ಈ ಸ್ಥಳದಿ ನಿರ್ವಯಲಾಗುವೆವು, ನಾಳೆನ ಉದಯಕ್ಕೆ ನೀವು ಸರ್ವರೂ ಬಾಹುದು" ಎಂದು ಆಜ್ಞಾಪಿಸಿದ್ದನ್ನು ನಾವು ಹಿಂದಿನ ಪ್ರಕರಣದಲ್ಲಿ ಹೇಳಿದ್ದು ವಾಚಕರ ಸ್ಮರಣದಲ್ಲಿರಬಹುದು. ಸಾರಾಂಶ, ಈ ಸುದ್ದಿಯನ್ನು ಕೇಳಿ ಸದ್ಯದ ಮುಂಬಯಿ

ಮದ್ರಾಸ ಸಿಜಾಮು ಇಲಾಖಾ ಮೈಸೂರ ಸಂಸ್ಥಾನ ಮುಂತಾದ ಸ್ಥಳಗಳಿಂದ ಅಸಂಖ್ಯ ಭಕ್ತ ಮಹೇಶ್ವರರು ಕೂಡಿದರು. ಅವರಲ್ಲಿ ಶ್ರೀಮಂತ ಸರದಾರ ರಾಜಾ ಲಖಮಗೌಡಾ ಬಸವಪ್ರಭು ಸರದೇಸಾಯಿ ಒಂಟಮುರಿ ಓ. ಆಯ್. ಇ. ಬಾರ್-ಅಟ್-ಲಾ, ಇವರ ಮೂಲ ಪುರುಷನಾದ ಪ್ರಭು ಬಸವಂತರಾಯನೂ ಹಾಗೂ ಮೆಹರ್ಬಾನ ಶ್ರೀಮಂತ ಹನಗಂಡಿ ದೇಸಾಯರ ಮೂಲಪುರುಷನಾದ ಕೃಷ್ಣಗೌಡನೂ ಓಡಿದು ಕಾಣಿಸುತ್ತಿದ್ದರು. ಈ ಪ್ರಕಾರವಾಗಿ ಅನೇಕ ಜನರು ಕೂಡಿದವರಲ್ಲಿ ಕೆಲವರು ಭಜನೆಮಾಡುತ್ತಲೂ, ಕೆಲವರು ಜಂಗಮ ದಾಸೋಹ ಮಾಡಿಸುತ್ತಲೂ, ಕೆಲವರು ಪುರಾಣ ಹೇಳುತ್ತಲೂ, ಕೆಲವರು ಶಿವಕೀರ್ತನೆಗಳನ್ನು ಹಾಡುತ್ತಲೂ, ಕೆಲವರು ಶ್ರೀ ಪ್ರಭುದೇವರ ಮಂಗಲ ನಾಮದ ಜಯ-ಘೋಷವನ್ನು ಮಾಡುತ್ತಲೂ ಐಕ್ಯಸಮಯದ ಮಾರ್ಗ ಪ್ರತೀಕ್ಷೆಯನ್ನು ಮಾಡುತ್ತ ಕುಳಿತಿರಲು, ಶ್ರೀಪ್ರಭುದೇವನು ತನ್ನ ಹತ್ತಿರವಿರುವ ಕರಿಬಸವ ದೇಶಿಕೇಂದ್ರ ಮತ್ತು ಚನ್ನಪ್ಪ ದೇವರು ಈ ಉಭಯತರನ್ನು ತನ್ನ ಹತ್ತಿರ ಕರೆದು ಕರಿಬಸವ ದೇಶಿಕೇಂದ್ರನಿಗೆ ಚನ್ನಪ್ಪನ ಮಗಳ ಪಾಣಿಗ್ರಹಣವನ್ನು ಮಾಡಿ ನೀನು ಗೃಹಸ್ಥಾಶ್ರಮಿಯಾಗಿ ಇಲ್ಲಿಯೇ ಇರು ಎಂದು ಆಜ್ಞಾಪಿಸಿದನು. ಮತ್ತು ಚನ್ನಪ್ಪನಿಗೆ ನಿನಗೇನು ಬೇಕು ಬೇಡೆಂದು ಆಜ್ಞಾಪಿಸಲು "ವರಮನ್ಯಂ ನ ಯಾಚೇ ಹಂ। ಶಿವಭಕ್ತಿಂ ವಿನಾಪ್ರಭೋ ॥ ತಾಮೇವ ಸುದೃಢಾಂ ದೇಹಿ। ಸ್ವೈವ ಮೇ ಪರಮಾಗತಿಃ ॥ ಎಂದರೆ ಹೇ ಪ್ರಭುವೇ ನಿನ್ನ ಭಕ್ತಿಯ ಹೊರ್ತು ಬೇರೊಂದು ಬೇಡವು, ಜನ್ಮ ಜನ್ಮಾಂತರದಲ್ಲಿ ನನಗೂ ನನ್ನ ಮುಂದಿನ ಸಂತತಿಯವರಿಗೂ ನಿನ್ನ ಪಾದಸೇವೆಯೇ ಘಟಿಸಲಿ, ಯಾಕಂದರೆ ಅದರಿಂದಲೇ ನನಗೆ ಪರಮಗತಿಯುಂಟು ಎಂದು ಬೇಡಿಕೊಳ್ಳಲು ಚನ್ನಪ್ಪನ ಎರಡೂ ಗಂಡು ಮಕ್ಕಳನ್ನು ಹತ್ತಿರ ಕರೆದು ಅವರ ಮಸ್ತಕಗಳ ಮೇಲೆ ತನ್ನ ಪರದ ಹಸ್ತಗಳನ್ನು ಇಟ್ಟು "ನಿಮಗೆ ಕಲ್ಯಾಣವಾಗಲಿ ಮತ್ತು ನಿಮ್ಮ ಮತ್ತು ನಿಮ್ಮ ಸಂತತಿಯವರ ಕಡೆಯಿಂದ ನನ್ನ ಪಾದಸೇವೆಯು ನಡೆಯಲಿ" ಎಂದು ಆಶೀರ್ವದಿಸಿದನು. ಆ ಮೇಲೆ ಅವರು ಸಾಷ್ಟಾಂಗವೆರಗಿ ಸ್ವಾಮಿಪಾದವು ದಯವಾಡಿಸಿದರೆ ತಮ್ಮಯ ಕುರುಹು ಏನಾದರೊಂದು ದಯಪಾಲಿಸಿದರೆ ಅದನ್ನು ನಾವು ಪೂಜಿಸಿ ನಮ್ಮ ವಂಶಪರಂಪರೆಯಾಗಿ ಕೃತಾರ್ಥರಾಗುವೆವು ಎಂದು ವಿನ್ನವಿಸಿಕೊಳ್ಳಲು, ತನ್ನ ಕೈಯೊಳಗಿನ ಕಮಂಡಲುವಾದ ಮಣಿಯನ್ನೂ ಪೆತ್ತ

ಪಾವುಗೆಗಳನ್ನೂ ನಿರಂಜನವಂಶರತ್ನಾಕರದಲ್ಲಿ ಹೇಳುವಂತೆ ದಯಪಾಲಿಸಿದನು. ಇಷ್ಟಾದ ಮೇಲೆ ಶ್ರೀಮಂತರಿಗೂ ಬಡವರಿಗೂ ಎಲ್ಲರಿಗೂ ದರ್ಶನಾಶೀರ್ವಾದ ಕೊಡುವಷ್ಟರಲ್ಲಿ ಒಮ್ಮಿಂದೊಮ್ಮೆ ಕೋಟಿ ಸೂರ್ಯರ ಪ್ರಕಾಶದಂತೆ ತೇಜವು ಪ್ರಕಟಿಸಿತು. ಅದರಿಂದ ಸ್ವಲ್ಪ ವೇಳೆಯು ವರೆಗೆ ಸರ್ವರು ದೃಷ್ಟಿರೂನ್ಯರಾದರು. ಆ ಪ್ರಕಾಶವು ಅಡಗಿದ ನಂತರ ನೋಡಲಾಗಿ ಶ್ರೀ ಪ್ರಭುದೇವನು ನಿರ್ವಯಲನಾಗಿದ್ದನು. ಈ ವಿಷಯವಾಗಿ ನಿರಂಜನವಂಶರತ್ನಾಕರದಲ್ಲಿ "ಉರಿಕರ್ಪೂರದಂತೆ" ನಿರ್ವಯಲಾದನೆಂದು ಹೇಳಿದೆ.

ನಿರ್ವಾಯ ಅಥವಾ ಐಕ್ಯ ಮತ್ತು ಮರಣ ಇವೆರಡರ ಭೇದವು ಹೀಗಿರುವದು. ಮರಣವೆಂದರೆ ಬ್ರಹ್ಮಸೃಷ್ಟಿಯಲ್ಲಿ ಉತ್ಪನ್ನನಾಗಿ ವಿಷ್ಣು ಸೃಷ್ಟಿಯಲ್ಲಿ ಜೋಪಾನವಾಗಿ, ಕಡೆಗೆ ರುದ್ರಸೃಷ್ಟಿಯಲ್ಲಿ ಲಯವಹೊಂದಿ ಪುನಃ ತನ್ನ ಪಾಪಾನು ಗುಣಗಳಿಂದ ಕ್ರಿಮಿಕೀಟಕ ಪತಂಗಾದಿ ಯೋನಿಗಳಲ್ಲಿ ಬಂದು, ಜನನ ಮರಣ ರೂಪವಾದ ಸಂಸಾರ ಚಕ್ರಗಳಲ್ಲಿ ಸಿಕ್ಕಿ, ಮೇಲಿಂದ ಮೇಲೆ ಕಷ್ಟಬಡುವಂಥ ಪ್ರಾಕೃತ ಮನುಷ್ಯನ ಅಂತ್ಯದ ಸ್ಥಿತಿಗೆ ಮರಣವೆಂದೆನ್ನುವರು. ಇದರಂತೆ ಗುರುಸೃಷ್ಟಿಯಲ್ಲಿ ಉತ್ಪನ್ನನಾಗಿ ಲಿಂಗಾಸೃಷ್ಟಿಯೊಳಗೆ ಲಿಂಗನಂದಾತಿಶಯದ ವೈಭವದಲ್ಲಿ ಬೆಳೆದು ಕಡೆಗೆ ಜಂಗಮಲಿಂಗದಲ್ಲಿ ನಿರ್ವಾಯನಾಗುವ (ಅಪ್ರಾಕೃತ) ವೀರಶೈವನಿಗೆ ಐಕ್ಯ, ಶಿವಾಧೀನ, ಶಿವೈಕ್ಯ, ಮತ್ತು ಲಿಂಗೈಕ್ಯವಾದನೆಂದು ಅನ್ನುವರು. ಇದು ಸರ್ವಸಾಧಾರಣವಾಗಿ ವೀರಶೈವರದಾಯಿತು. ಆದರೆ ಶ್ರೀ ಮದನಾದಿ ಅಲ್ಲಮಪ್ರಭುದೇವನು ದಿವ್ಯದೇಹಿಯಾಗಿದ್ದು ಅಯೋನಿಜನೆಂದು ಎಲ್ಲ ವೀರಶೈವ ಪ್ರಾಚೀನ ಮತ್ತು ಅರ್ವಾಚೀನ ಕವಿಗಳು ಹೊಗಳಿರುವರು. ಇದು ಅಲ್ಲದೆ ನಾವು ಮೇಲೆ ಹೇಳಿರುವಂತೆ ಶಿವಯೋಗಿಗಳು ನಿರ್ವಾಣಸಮಯದಲ್ಲಿ ತಮ್ಮ ದೇಹವನ್ನು ಉರಿಕರ್ಪೂರದಂತೆ ಯೋಗಸಾಮರ್ಥ್ಯದಿಂದ ಸುಡಬಲ್ಲರು. ಅದು ಹೀಗೆ ಯೋಗಶಾಸ್ತ್ರದ ನಿಯಮಾನುಸಾರವಾಗಿ ಶಿವಯೋಗಿಗಳ ನಿರ್ವಾಯವಾಗುವ ಸಮಯದಲ್ಲಿ ಆಗುವ ಅತ್ಯಂತ ಶ್ರೇಷ್ಠವಾದ ಸ್ಥಿತಿಯು. ಇದಕ್ಕೆ ಆಧಾರ "ಸಮಾನ ಜಯಾ ಜ್ವಲನಮ್" (ಪಾತಂಜಲಯೋಗಸೂತ್ರ ವಿಭೂತಿಪಾದ ೪೦) ಸೂತ್ರಾರ್ಥ— ಸಮಾನವಾಯುವನ್ನು ಸಂಯಮನದಿಂದ ಜಯಿಸಿದರೆ ಯೋಗಿಯು ಅಗ್ನಿಯಂತೆ ದೇದಿಪ್ಯಮಾನನಾಗಿ ಕಾಣುವನು.

ಇದಕ್ಕೆ ಭಾಷ್ಯ— "ಜಿತಸಮಾನಸ್ತೇಜಸ ಉಪಧ್ಮಾನಂ ಕೃತ್ವಾ ಜ್ವಲತಿ" ಭಾಷ್ಯಾರ್ಥ— ನಾಭಿಮಂಡಲದ ಹತ್ತಿರಿರುವ ಜಠರಾಗ್ನಿಯನ್ನು ಸುತ್ತಿಕೊಂಡಿರುವ ಸಮಾನ ವಾಯುವನ್ನು ಸಂಯಮನದಿಂದ ಗೆದ್ದಾದಾದರೆ ಜಠರಾಗ್ನಿಯ ತೇಜ ಬೆಳೆದು ಶಿವಯೋಗಿಯು ಅಗ್ನಿಯಂತೆ ಪ್ರದೀಪ್ತನಾಗುವನು; ಇಲ್ಲವೆ ಅಗ್ನಿಯ ತೇಜ ಬೆಳೆದು ಶಿವಯೋಗಿಯು ತನ್ನ ಶರೀರವನ್ನು ಪಾರ್ವತೀದೇವಿಯಂತ ಸುಟ್ಟುಬಿಡುವನು. ಇದರ ಮೇಲಿಂದ ನೋಡಲಾಗಿ ಯೋಗ ಸಾಮರ್ಥ್ಯದಿಂದ ನಿರ್ವಾಣ ಸಮಯದಲ್ಲಿ ಶಿವಯೋಗಿ ಮಹಾತ್ಮರು ಎಷ್ಟೋ ಪ್ರಸಂಗಗಳಲ್ಲಿ ತಮ್ಮೀ ನಶ್ವರವಾದ ದೇಹವನ್ನು ಯೋಗಾಗ್ನಿಗೆ ಸಮರ್ಪಿಸಿ ಬಿಡುವರು. ಇದಕ್ಕೆ ಪುರಾಣದೊಳಗಿನ ಉದಾಹರಣೆಯು ದಾಕ್ಷಾಯಣಿಯು ತನ್ನ ತಂದೆಯಾದ ದಕ್ಷಪ್ರಜಾಪತಿಯು ಯಜ್ಞದ ಕಾಲಕ್ಕೆ ಯೋಗಬಲದಿಂದ ತನ್ನ ದೇಹವನ್ನು ಭಸ್ಮೀಭೂತ ಮಾಡಿದಳು. (ಶಿವಗೀತ ಅಧ್ಯಾಯ ೭.)

ಇದಕ್ಕೆ ಅಧುನಿಕ ಉದಾಹರಣೆಯು ಬಂಗಾಲ ಪ್ರಾಂತದಲ್ಲಿಯ ಜೌನಪುರ ಜಿಲ್ಲೆಯೊಳಗಿನ ಪ್ರೇಮಪುರ ನಾಮಕ ಊರಲ್ಲಿ ಅಯೋಧ್ಯಾನಾಥನೆಂಬ ಒಬ್ಬ ಗೃಹಸ್ಥನಿಗೆ ಕ್ರಿಶ್ಚಿಶಕ ೧೮೪೦ ರಲ್ಲಿ ಹರಭಜನ್ನ ಈ ಹೆಸರಿನ ಒಬ್ಬ ಮಗನು ಜನಿಸಿದನು. ಅವನಿಗೆ ಪಹೊರಿ (ಪವನ+ಆಹಾರಿ) ಬಾಬಾ ಎಂದು ಜನರು ಕರೆಯುತ್ತಿದ್ದರು. ಅವನು ಕ್ರಿಸ್ತೀಶಕ ೧೯೧೯ ರಲ್ಲಿ (ಬಂಗಾಲಿ ಸವಂತ್ ೧೯೩೫ ಜೇಷ್ಠ ಶುದ್ಧ ಸಪ್ತಮಿಗೆ) ಯೋಗ ಸಾಮರ್ಥ್ಯದಿಂದ ತನ್ನ ಶರೀರವನ್ನು ಉರಿಕರ್ಪೂರದಂತೆ ಸುಟ್ಟುಬಿಟ್ಟನು. ಆ ವೇಳೆಯಲ್ಲಿ ಅತನ ಬಂಧುವಾದ ಬದರೀನಾರಾಯಣ ಮತ್ತು ಸೋದರಳಿಯನಾದ ಪ. ಭಗವತಾಚಾರ್ಯ (ಕಾಶಿಯೊಳಗಿನ ಕಾಲೇಜದ ಪ್ರೋಫೆಸರ) ಪಂಡಿತ ಜನಾರ್ದನ ಮುಂತಾದ ಐದಾರು ಜನರು ಹಾಜರಿದ್ದರಿಂದು "ಭಾರತನಾ ಸಂತಪುರುಷೊ" ಎಂಬ ಗುಜರಾಥೀ ಗ್ರಂಥದಲ್ಲಿ ಉಲ್ಲೇಖವಿದೆ. ಹೀಗೆ ವಸ್ತುಸ್ಥಿತಿಯು ಇರಲಿಕ್ಕೂ ಕರ್ನಾಟಕ ಕವಿ ಚರಿತೆಕಾರರು ತಮ್ಮ ಕವಿಚರಿತೆಯಲ್ಲಿ ಮಹಾದೇವಿಯಕ್ಕನಿಗೆ ನಿರ್ವಾಣಪ್ರಿಯ ಮಾರ್ಗವನ್ನು ಹೇಳಿ ಶ್ರೀಬಸವೇಶ್ವರನಕಿಂತಲೂ ಮುಂಚಿತವಾಗಿ ಸವಳೇವನದಲ್ಲಿ ಶ್ರೀಪ್ರಭುದೇವನು ಐಕ್ಯನಾದನೆಂದು ಕೆಲವು ವಚನಕಾರರು ವರ್ಣಿಸಿದ್ದಾರೆಂದು ಬರೆದಿದ್ದಾರೆ.

ಈ ವಚನಕಾರರೆಲ್ಲರೂ ಬಹಳ ಮಾಡಿ ಶ್ರೀಪ್ರಭುದೇವನ ಸಮಕಾಲದಲ್ಲಿ ಇದ್ದವರಲ್ಲ. ವಿರಕ್ತವರ್ಗದವರಲ್ಲಿ ಅಶಾಸ್ತ್ರೀಯವಾದ ಸಮಯಭೇದ ಉತ್ಪನ್ನವಾದ ಮೇಲೆ ಜನಿಸಿದವರು ಇರುವರು. ಇಂಥವರ ಗ್ರಂಥಗಳಲ್ಲಿ ಈಗ ರಾವಸಾಹೇಬ ಹಳಕಟ್ಟಿಯವರು ಅಚ್ಚುಹಾಕಿಸಿದ ಶೂನ್ಯಸಂಪಾದನೆಯ ಕರ್ತೃವಾದ ಸಿದ್ಧವೀರನೊಬ್ಬನು ಇರುವನು. ಆದೇನೊದಲಿಗೆ ಶಿವಗಣಪ್ರಸಾದಿ ಮಹಾದೇವಯ್ಯನೆಂಬವನೊಬ್ಬನು ಒಂದು ಶೂನ್ಯಸಂಪಾದನೆಯನ್ನು ಬರೆದನು. ಅದರಲ್ಲಿ ಸುಮಾರು ೧೦೦೦ ವಚನಗಳಿವೆ. ಅದರಲ್ಲಿ ಸಿದ್ಧರಾಮೇಶ್ವರ ಸಂಪಾದನೆಯು ಇದ್ದಿಲ್ಲ. ಹಿಂದುಗಡೆ ಗುಮ್ಮಳಾಪುರದ ಸಿದ್ಧಲಿಂಗದೇವನು "(೧೫)" ಈ ಸಂಪಾದನೆಯನ್ನು ಅದರಲ್ಲಿ ಸೇರಿಸಿ ಪೂರ್ತಿ ಮಾಡಿದನು. ಇದರಿಂದ ಅದರಲ್ಲಿ ಸುಮಾರು ೧೪೦ ವಚನಗಳು ಹೆಚ್ಚು ಸೇರಿದವು. ಆಮೇಲೆ ಕನ್ನಡ ಪ್ರಭುದೇವರ ಪುರಾಣದ ಕರ್ತೃವಾದ ಎಳೆಂದೂರ ಹರೀಶ್ವರ (೧೬೦೬) ನ ಗುರು ವೃಷಭಪುರ (ಗುಳೂರ) ದ ಅಗವಜ್ಞಾನಿ ಸಿದ್ಧವೀರೇಶನು ೩ ನೆಯ ಸಂಪಾದನೆಯನ್ನು ಬರೆದನು. ಇದರಲ್ಲಿ ಸುಮಾರು ೧೫೫೦ ವಚನಗಳು ಅವೆ. ಇವುಗಳಲ್ಲಿ ಬೇರೆ ಬೇರೆ ರಾಗಗಳ ಮೇಲೆ ಶಿವಶರಣರ ಮುಖದಿಂದ ಅನೇಕ ಹಾಡುಗಳು ಸೇರಿವೆ.

'ಕದಳೀ' ಈ ಶಬ್ದದ ಅರ್ಥವು ಬಾಳೆಯೆಂದಿದ್ದರೂ ಪ್ರಮಥರ ವಚನದೊಳಗಿನ 'ಕದಳೀ' ಶಬ್ದದ ನಿಜವಾದ ಅರ್ಥಗಳು ಜಂಗುಳಿ, ಗೊಂದಣಿ, ಸಂದಣಿ ಮುಂತಾದವು ಇರುತ್ತವೆಂದು ಅನೇಕ ಗ್ರಂಥಗಳಿಂದ ಕಂಡು ಬರುವದು. ವಚನಕಾರರು ಈ ಕದಳೀ ಶಬ್ದದ ಅರ್ಥವನ್ನು ಬೇರೆಯಾಗಿ ಮಾಡಿರುವರು. ಅದು ಹೇಗಂದರೆ— ಶ್ರೀ ಮನ್ನಿರಂಜನ ಜಗದ್ಗುರು ಗಂಥವಮಾಲೆಯ ೩ ನೆಯ ಪುಷ್ಪದ ೮ ನೇ ಪುಟದೊಳಗಿನ ೧೧೦ ನೇ ಶ್ಲೋಕವಾದ "ಪರಮಭಕ್ತರ ಸಲಹಿ। ಬರುತಕಾಯದ ಕದಳೀ। ಅರಮನೆಯ ಪೊಕ್ಕು। ಗುರುಗುಹೇಶ್ವರನೊಳಗೆ। ಬೆರೆದಾ ಪ್ರಭುದೇವ ಶರಣಾಗು"॥ ಎಂಬದರಲ್ಲಿ 'ಕಾಯ ಕದಳಿ' ಇದರ ಅರ್ಥವನ್ನು ಶರೀರ ರೂಪವಾದ ಕದಳೀ ಹೀಗೆ ಮಾಡಿರುವರು. ಹಡಪದ ಅಪ್ಪಣ್ಣನ ಪತ್ನಿಯಾದ ಲಿಂಗಮ್ಮನು ಕೂಡ ತನ್ನ ವಚನಗಳಲ್ಲಿ ಕಾಯಕದಳೀ ಎಂಬದರ ಅರ್ಥವನ್ನು ಶರೀರ ರೂಪವಾದ ಕದಳಿಯೆಂದೇ ಮಾಡಿರುವಳು. ಮಹಾದೇವಿ ಅಕ್ಕನ ಸಂಪಾದನೆ ವಚನ ೬೮ "ಕರ್ಮವೆಂಬ ಕದಳಿಯೆನಗೆ। ಕಾಯವೆಂಬ ಕದಳಿ ನಿನಗೆ। ಮಾಟವೆಂಬ ಕದಳಿ ಬಸವಣ್ಣಂಗೆ। ಭಾವವೆಂಬ ಕದಳಿ ಚನ್ನಬಸವಣ್ಣಂಗೆ। ಬಂದ ಬಂದ ಭಾವ ಸತಿಸಂದಿತ್ತು। ಎನ್ನಂಗದವಸಾನದ ಹೇಳಾ ಚನ್ನಮಲ್ಲಿಕಾರ್ಜುನಾ" ಈ ರೀತಿಯಾಗಿ ಇರುವದು. ಇದರಂತೆ ಸರ್ವಗಣಂಗಳ ನಿರ್ಣಯಲ ಪದಾಧಿಯ ಸಂಪಾದನೆಯಲ್ಲಿ ಶ್ರೀಪ್ರಭುದೇವನು ಗೋರಕ್ಷನಿಗೆ ಲಿಂಗಾಂಗ ಸಂಬಂಧವ ತೋರಿಸಿ ಅತನ ನಿರೋಪ ತೆಗೆದುಕೊಂಡು ಅಂದ ೧೧ ನೆಯ ವಚನದಲ್ಲಿ "ಕಾಯವೆಂಬ ಕದಳಿಯಹೊಕ್ಕು, ಪ್ರಾಣವೆಂಬ ಗಂಭೀರದೊಳಗೆ ಸಕಲೇಂದ್ರಿಯವೆಂಬ ಕೋಣೆ ಕೋಣೆಗಳಲ್ಲಿ ತಿರುಗಾಡುತ ಬರಲಾಗಿ ಮೇರು ಮಂದಿರದ ತ್ರಿಕೋಣೆಯಲ್ಲಿ ಬೆಳಗಾಯಿತ್ತು. ಗುಹೇಶ್ವರ ಲಿಂಗವೆಂಬುದು ರೂಪಾಯಿತ್ತು ಎಂದು ಇರುವದು. ಮತ್ತು ಅದೇ ಶ್ರೀ ಪ್ರಭುದೇವರ ೧೨ ನೇ ವಚನದಲ್ಲಿ "ಕಾಯವೆಂಬ ಮಹಾಕದಳಿಯ ಗೆಲಬಲ್ಲವರಾರನು ಕಾಣೆ, ಸಂಸಾರವೆಂಬ ಸಪ್ತ ಸಮುದ್ರವ ಬಳಸಿ ಬಂದಿಪ್ಪ, ಉಭಯವೆಂಬ ಮಹಾ ಅರಣ್ಯದೊಳು ಪಂಚೇಂದ್ರಿಯವೆಂಬ ವಿಷದ ಮಳೆ ಸುರಿಯುತ್ತಿಪ್ಪದು, ಕೋಪವೆಂಬ ಪೆರ್ಬುಲಿ ನೆರೆಯುತ್ತಿಪ್ಪದು, ಅಷ್ಟಮದಗಜಂಗಳು ಬೀದಿವರೆಯುತ್ತಿಪ್ಪವು, ಕಾಮುಸೆಂಬ ಕೂರಂಬಿನ ಸೋನೆ ಸುರಿಯುತ್ತಿಪ್ಪದು, ಮತ್ಸರವೆಂಬ ಮಹಾ ಸರ್ಪಂಗಳು ಕಿಡಿಯನುಗುಳುತ್ತಿರ್ಪವು, ಆಶೆಯೆಂಬ ಪಾಪಿಯ ಕೂಸು ಹಸಿಹಸಿದು ತಿನ್ನುತ್ತಿರ್ಪುದು, ತಾಪತ್ರಯವೆಂಬ ಕೆಂಡದ ಮಳೆ ಅಡಿಯಿಡಬಾರದು, ಅಹಂಕಾರವೆಂಬ ಗಿರಿಗಳು ಅಡ್ಡ ಬಿದ್ದಿಪ್ಪವು, ಪಂಚಭೂತಗಳೆಂಬ ಭೂತಂಗಳ ಭಯ ದಿಟ್ಟಿಸಬಾರದು, ಮಾಯವೆಂಬ ರಕ್ಕಸಿ ಹಸಿಯ ತಿನ್ನುತ್ತಿಪ್ಪಳು, ವಿಷಯವೆಂಬ ಕೂಪವ ಬಳಸಬಾರದು, ಮೋಹವೆಂಬ ಬಳ್ಳಿ ಕಾಲಕುತ್ತ ಬಾರದು, ಮೋಹವೆಂಬ ಮುಸೆದ ಆಯುಧವ ನೋಡಿ ನುಚ್ಚಬಾರದು, ಇಂತಪ್ಪ ಕದಳಿಯ ಹೋಗಲರಿಯದೆ ದೇವದಾನವ ಮಾನವರಿಲ್ಲರು ಮತಿಗೆಟ್ಟು, ಮರುಳಾಗಿ ಹೊರಬೆಗೆದು ಓಡಿದರು ಅಂಗಾಲ ಕಣ್ಣಿನವರು, ಪೈಯಿಲ್ಲ ಕಣ್ಣಿನವರು, ತಲೆಬಾಲಗೆಟ್ಟರು, ನಾನೀ ಕದಳಿಯ ಹೊಕ್ಕು ಹೊಯ್ದಾಡಿ ಮುಳ್ಳನೊಸೆಯುಟ್ಟಪೆ ಕನಸಿಯವರೆದು ಗೆಲಿದು ತರಿಸಿ ಗುಹೇಶ್ವರನೆಂಬ ಲಿಂಗದ ನಿಜಸಮಾಧಿಯಲ್ಲಿ ನಿಂದು ಪರವಶನಾಗಿ ನಿರಾಳಕ್ಕೆ ನಿರಾಳನಾಗಿದ್ದೆನಯ್ಯಾ" ಹೀಗೆ ಈ ಶರೀರರೂಪವಾದ ಕದಳೀ ಒಟ್ಟಿನ ವಿಸ್ತಾರವನ್ನು ಬಹು ಸುಂದರವಾಗಿ ವರ್ಣಿಸಿರುವನು. ಒಟ್ಟಿನ ಮೇಲೆ

ಈ ಶರೀರಕ್ಕೆ ಕದಳೀ ಬನದ ಉಪಮೆಯನ್ನು ಕೊಟ್ಟದ್ದು ವಾಚಕರು ಮನಗಂಡಿರಬಹುದು. ಆದ್ದರಿಂದ ಶ್ರೀ ದತ್ತಾತ್ರೇಯನು ಕೂಡ ನರಸೋಬಾನ ವಾಡಿ (ಸಂಸ್ಥಾನ ಕೊಲ್ಹಾಪುರ) ಯಲ್ಲಿ ಬಯಲಾದರೂ ಆತನು ಕದಳೀ ಬನದಲ್ಲಿ ಬಯಲಾವನೆಂದು ಗುರುಚರಿತ್ರೆಯ ಕಡೆಯ ಅಧ್ಯಾಯದಲ್ಲಿ ವರ್ಣಿಸಿರುವರು. ಇವೇ ಶರೀರಕ್ಕೆ ಅಲಂಕಾರಿಕ ಭಾಷೆಯಲ್ಲಿ ಅನೇಕ ಹೆಸರುಗಳನ್ನು ಅನೇಕ ಪೂರ್ವದ ಕವಿಗಳು ಕೊಟ್ಟಿರುವರು. ಉದಾಹರಣಾರ್ಥವಾಗಿ, ಸರ್ಪಭೂಷಣ ಶಿವಯೋಗಿಗಳು ತಮ್ಮ ಕೈವಲ್ಯ ಕಲ್ಪವಲ್ಲರೀ ನಾಮಕ ಗ್ರಂಥದ ನೀತಿ, ಕ್ರಿಯಾ, ಚರ್ಯಾ ಪ್ರತಿಪಾದನಸ್ಥಲದ ೧೮ ನೇ ಪದ್ಯದಲ್ಲಿ ಈ ಪಂಚಭೂತಾತ್ಮಕ ಶರೀರಕ್ಕೆ ಕಾಂತಾರದ ಉಪಮೆಯನ್ನು ಯೋಗಪ್ರತಿಪಾದನಸ್ಥಲದ ೧೧ ನೇ ಪದ್ಯದಲ್ಲಿ ಮಾನವನ ದೇಹಕ್ಕೆ ಶ್ರೀಶೈಲ ಗಿರಿಯ ಹೋಲಿಕೆಯನ್ನೂ ೩ ನೆಯ ಪದ್ಯದಲ್ಲಿ ಶರೀರಕ್ಕೆ ರಥದ ಉಪಮೆಯನ್ನೂ ಕೊಟ್ಟಿರುವರು. ಏವಂಚ ಶ್ರೀ ಮದನಾದಿ ಅಲ್ಲಮ ಪ್ರಭುದೇವನು ಶ್ರೀಶೈಲದಲ್ಲಿ ಕದಳಿಯ ಬನದಲ್ಲಿ ಐಕ್ಯವಾದನೆಂದರೆ ಶ್ರೀಶೈಲದಂಥ ಗಿರಿ ಗಂಭ್ಹೀರಗಳ ಕಡೆಗೆ ಹೋಗದೆ ಇದ್ದ ತಾವಿನಲ್ಲಿಯೇ ಶರೀರ ರೂಪವಾದ ಕದಳೀ ಬನದಲ್ಲಿ ಐಕ್ಯನಾಗಿರುವನು ಎಂದು ಆಗುವದು. ಇದರಲ್ಲಿ ತಿಲಮಾತ್ರವಾದರೂ ಸಂಶಯವಿಲ್ಲ. ಬಿಜ್ಜಳನ ವಧೆಯಾದನಂತರ ಶ್ರೀ ಚನ್ನಬಸವೇಶ್ವರಾದಿ ಕೆಲವು ಶಿವಶರಣರು ಮಾತ್ರ ದಂಡು ಬೆನ್ನು ಹತ್ತಿದ್ದರಿಂದ ಅನಿರ್ವಾಹ ಪಕ್ಷಕ್ಕೆ ಉಳವಿಯಂಥ ಘೋರಾರಣ್ಯದ ಕಡೆಗೆ ಹೋಗಿ ಅಂತರ್ಧಾನ ಹೊಂದಿರಬಹುದು. ಪ್ರಮುಖಾಗ್ರಣಿಯಾದ ಶ್ರೀ ಬಸವೇಶ್ವರ ಮಾಚಯ್ಯ ಸಿದ್ಧರಾಮಾದಿ ಅನೇಕ ಶಿವಶರಣರು ಸಂಗಮ (ತಾ. ಹುನಗುಂದ), ಹಿಪ್ಪರಗಿ (ಜಿ. ವಿಜಾಪುರ) ಸೊಲ್ಲಾಪುರ (ಸೊನ್ನಲಿಗಿ) ಮುಂತಾದ ಬೈಲು ಪ್ರದೇಶಗಳಲ್ಲಿ ನಿರಂಕುಶರಾಗಿ ಐಕ್ಯ ಹೊಂದಿರುವರು. ಕ್ರಿಸ್ತಿ ಶಕ ೧೩೨೨ ರಲ್ಲಿ ಸೋಮರಾಜನೆಂಬ ಒಬ್ಬ ವೀರಶೈವ ಕವಿಯು ತನ್ನ ಉದ್ಭಟ ಕಾವ್ಯದಲ್ಲಿ ಪ್ರಥಮಾಶ್ವಾಸದ ೧೦ ನೇ ಪದ್ಯದಲ್ಲಿ "ಶಿವನೆಂದುತ್ತಮ ಶೈವರಂಬುರುಹನೇತ್ರಂಗೆತ್ತು ತಾವಮ್ ವೈಷ್ಣವಂ। ಹರಿರನ್ನಪ್ರಿಯನೆಂದು ಭೂಮಿ ದಿವಿಜರ್ಕ್ಕೈನರ್ಜಿನಂಗೆತ್ತು ತ॥ ಮ್ಮನವನೆಂದರ್ಜಿಸಲೊಲ್ಬು ಸರ್ವಮುಖದಿಂದಂ ಪೂಜೆಗೊಂಡಾವಗಂ। ಸುವಿಲಾಸಂ ಬಡೆದೊಪ್ಪುವಲ್ಲಮನೆ ಜೆಚ್ಚಿರ್ಕೆನ್ನ ಚಿತ್ತಾಬ್ಜದೊಳ್" ॥ ಎಂದರೆ ಶ್ರೀ ಪ್ರಭುವಿನನ್ನು ಶೈವರು ಶಿವನೆಂತಲೂ ವೈಷ್ಣವರು ವಿಷ್ಣುವೆಂತಲೂ ಜೈನರು ಜಿನನೆಂತಲೂ

ಸರ್ವಮುಖವಾಗಿ ಪೂಜಿಸುತ್ತಿದ್ದರೆಂದು ಸ್ತುತಿಸಿರುವನು. ಇಂಥ ಶ್ರೀ ಪ್ರಭುದೇವನೊಬ್ಬನೇ ಮಾತ್ರ ಶ್ರೀಶೈಲ ಗಿರಿಯೊಳಗಿನ ಕದಳೀ ಬನದಲ್ಲಿ ಐಕ್ಯನಾದನೆಂಬುವದು ಹಾಸ್ಯಾಸ್ಪದವಾದ ಮಾತೇ ಸರಿ. ಈ ಮಿಥ್ಯಾರೋಪದಿಂದ ಶ್ರೀಪ್ರಭುದೇವನ ಯೋಗ್ಯತೆಯನ್ನು ಕಡಿಮೆ ಮಾಡಿದಂತೆ ಆಗುತ್ತದೆ. ಇದು ಅಲ್ಲದೆ ಇದರಿಂದ ವೀರಶೈವ ತತ್ವಕ್ಕೇನೇ ಕುಂದು ಬರುತ್ತದೆ. ಅದು ಹೇಗಂದರೆ— ಪೋಳಿಗೆ ಮಾರಯ್ಯಗಳ ಸಂಪಾದನೆ, ವಚನ ೨೭ರಲ್ಲಿ "ನಿನ್ನಂಗದಲ್ಲಿ ಗುರು ಕೊಟ್ಟ ಲಿಂಗವೆಂಬುದೊಂದು ಕುರುಹು ಇರುತ್ತಿರಲಿಕ್ಕೆ, ಆ ನಿಜಲಿಂಗಸಂಗನರಿಯದೆ ಸಂದಿಗೊಂದಿಯಲ್ಲಿ ಹೊಕ್ಕೆನೆಂಬ ಗೊಂದಣವೇತಕ್ಕೆ" ಎಂದೂ ಮತ್ತು ವಚನ ೩೮ರಲ್ಲಿ "ಇಷ್ಟದಲ್ಲಿ ನೋಟ ಜ್ಞಾನದಲ್ಲಿ ಕೂಟ ಏಕಾರ್ಥವಾದಲ್ಲಿ ಕಾಯವೆಂಬ ಕದಳಿಯ ಬಿಟ್ಟುದು" ಎಂದು ಪೋಳಿಗೆ ಮಾರಯ್ಯಗಳ ಪತ್ನಿ ಮಹಾದೇವಿಯಮ್ಮ ಅಂದಿರುವಳು. ಇದಕ್ಕೆ ಇನ್ನೊಂದು ದೃಷ್ಟಾಂತವು, ಮಹಾನುಭಾವಿಗಳಾದ ಬಸವಣ್ಣನವರು ಸಂಗಮಕ್ಕೆ ಬಂದು ಸಹಕುಟುಂಬ ಐಕ್ಯವಾಗಬೇಕೆಂಬ ಉದ್ದೇಶದಿಂದ ಕೃಷ್ಣಾ ನದಿಯ ಆಚೆಯಲ್ಲಿದ್ದ ತಂಗಡಿಗಿ ಗ್ರಾಮದೊಳಗಿದ್ದ ತಮ್ಮ ಧರ್ಮ ಪತ್ನಿಯವರಾದ ನೀಲಲೋಚನೆಯವರಿಗೆ ಸೇವಕನ ಕಡೆಯಿಂದ ಬರಹೇಳಕಳಿಸಿದರು. ಮಹಾನುಭಾವರ ಆಜ್ಞಾನುಸಾರವಾಗಿ ದೂತನು ತಂಗಡಿಗೆಗೆ ಹೋಗಿ ಅಮ್ಮನವರಿಗೆ ಬಿನ್ನವಿಸಿಕೊಳ್ಳಲು, ಶಿವಪೂಜಾ ಮಾಡುತಿರುವ ನೀಲಮ್ಮನವರು ತಮ್ಮ ಇಷ್ಟಲಿಂಗದಲ್ಲಿ ದೃಷ್ಟಿಯನ್ನು ಇಟ್ಟು ಶ್ರೀ ಸಂಗಮನಾಥನು ಅಲ್ಲಿಯೇ ಇರುವನು ಇಲ್ಲಿಲ್ಲವೇನು ಎಂದು ಉತ್ತರ ಕೊಟ್ಟು ತಮ್ಮ ಕರಸ್ಥಲ ಲಿಂಗದೊಳಗೆ ನಿರ್ವಯಲಾದರು. ಆ ದೂತನು ಮರಳಿ ಬಂದು ಬಸವಣ್ಣನವರಿಗೆ ಆವ ವೃತ್ತಾಂತವನ್ನು ನಿವೇದಿಸಲು ಅದು ಹೇಗೆಂದು ಬಸವಣ್ಣನವರು ಕೇಳಿದ್ದಕ್ಕೆ ಆ ಸೇವಕನು ತನ್ನ ಇಷ್ಟ ಲಿಂಗವನ್ನು ತೆಗೆದು ತೋರಿದನು. ಇದರಲ್ಲಿ ತಾನೂ ಬಯಲಾದನು. ಇದನ್ನು ಕಂಡು ಬಸವನು ಜ್ಯೋತಿಯನ್ನು ಪಟ್ಟು ರಂಗಮಧ್ಯದಲ್ಲಿ ನಿಂತು "ಹೇ ಗುರುಸಂಗಮೇಶ ಈ ಉಭಯ ತರ ಸ್ಥಿತಿಯು ಹೀಗಾದ ಮೇಲೆ ನಾನು ನಿನ್ನ ಸ್ಥಾವರಲಿಂಗದಲ್ಲಿ ಐಕ್ಯನಾಗುವದು ಗೌಣವು. ಆದ್ದರಿಂದ ನನ್ನನ್ನು ನೀನು ಜಂಗಮ ಲಿಂಗವು ನಿನಗಿ ನಿನ್ನೊಳಗೆ ಐಕ್ಯವಾಡಿಕೋ" ಎಂದು ಪ್ರಾರ್ಥಿಸಲು, ಅವನ ಇಚ್ಛಾನುಸಾರವಾಗಿ ಶ್ರೀ ಸಂಗಮನಾಥನು ಜಂಗಮರೂಪವನ್ನು ಧರಿಸಿ ಬಸವಣ್ಣನವರನ್ನು ಸಪುರಸ ಮಾಡಿಕೊಂಡನು. ಅದುದರಿಂದ ತೇರದಾಳ

ದಲ್ಲಿಯೇ ಶ್ರೀ ಮದನಾದಿ ಅಲ್ಲಮ ಪ್ರಭುದೇವರ ಐಕ್ಯಸ್ಥಾನವಿದ್ದದ್ದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದು ಅಲ್ಲದೆ ಇದಕ್ಕೆ ಇನ್ನೊಂದು ಪ್ರಬಲವಾದ ಕಾರಣವಾದರೂ ಉಂಟು. ಅದಾವದೆಂದರೆ— ತೇರದಾಳದಲ್ಲಿಯ ಶ್ರೀ ಪ್ರಭುದೇವರ ಬ್ರಹ್ಮಮಠಕ್ಕಿರುವ ಭೂದಾನ ಪತ್ರಗಳೂ, ಸನದ ಪತ್ರದೊಳಗಿನ ಶಬ್ದಗಳೂ, ಅದರಂತೆ ಆ ಬ್ರಹ್ಮಮಠದೊಳಗಿನ ಶ್ರೀ ಪ್ರಭುದೇವರ ಐಕ್ಯ ಸ್ಥಾನದ (ಶೂನ್ಯ ಸಿಂಹಾಸನದ) ಈ ವರೆಗೆ ಅವ್ಯಾಹತ ರೀತಿಯಿಂದ ಮತ್ತು ವೈಭವದಿಂದ ನಡೆದಂಥ ವಿಧಿಯುಕ್ತವಾದ ತ್ರಿಕಾಲ ಪೂಜೆಯೂ ಶ್ರೀಮಂತ ಒಂಟಮುರಿ ಮತ್ತು ಹನಗಂಡಿ ಸಂಸ್ಥಾನದೊಳಗಿನ ಸನದ ಸೂತ್ರಗಳೂ ಮತ್ತು ಕಾಗದಪತ್ರಗಳೂ, ಹಾಗು ಆ ಮನೆತನಗಳಲ್ಲಿ ಈ ಹೊತ್ತಿನ ವರೆಗೆ ನಡೆಯುತ್ತ ಬಂದ ಶ್ರೀ ಪ್ರಭುದೇವರ ವರ್ಚಸ್ಸೂ ಹಾಗೂ ವೈಭವವೂ ಮತ್ತು ತೇರದಾಳದಲ್ಲಿ ಮತ್ತು ಅದರ ಸುತ್ತು ಮುತ್ತಲು ಆದಂಥ ಶ್ರೀಗಳ ಅನೇಕ ಲೀಲೆಗಳೂ, ಐತಿಹಾಸಿಕ ಕುರುಹುಗಳೂ, ದಂತಕಥೆಗಳೂ ಮುಂತಾದ ಪುಗಳನ್ನು ನೋಡಲಾಗಿ ತೇರದಾಳದಲ್ಲಿ ಶ್ರೀ ಪ್ರಭುದೇವರು ಐಕ್ಯವಾದದ್ದು ನಿಃಸಂದೇಹವಾಗಿ ಸಿದ್ಧವಾಗುತ್ತದೆ. ಇದು ಅಲ್ಲದೆ ಶ್ರೀ ಪ್ರಭುದೇವನು ಶ್ರೀಶೈಲದಲ್ಲಿ ಅಕ್ಕಮಹಾದೇವಿಗೆ ನಿರ್ವಾಣ ಪ್ರಾಪ್ತಿಯ ಮಾರ್ಗವನ್ನು ಹೇಳಿ ಅವಳನ್ನು ಉದ್ಧರಿಸಿದ ಮೇಲೆ ಪುನಃ ಅನೇಕ ವೇಳೆ ಕಲ್ಯಾಣ ಮೊದಲಾದ ಸ್ಥಳಗಳಿಗೆ ಹೋಗಿ ಅಲ್ಲಿ ಅನೇಕ ಭಕ್ತರನ್ನು ಉದ್ಧಾರ ಮಾಡಿದ ಅನೇಕ ಉದಾಹರಣೆಗಳು ಚಾಮರಸನ ಪ್ರಭುಲಿಂಗಲೀಲಾದಿ ಎಷ್ಟೋ ಗ್ರಂಥಗಳಲ್ಲಿ ಸಿಕ್ಕುತ್ತವೆ. ಇನ್ನು ಮಾಯಾದೇವಿಯು ಕಾಮಾತುರತೆಯಿಂದ ಮದೋನ್ಮತ್ತಳಾಗಿ ಶ್ರೀ ಪ್ರಭುದೇವರನ್ನು ಆಲಿಂಗಿಸಲು ಉದ್ಯುಕ್ತಳಾಗಲು ಅವಳಿಗೆ ಸಾಕಾರವಾಗಿ ಕಂಡರೂ ಪ್ರಭುದೇವನು ಆ ಮಾಯಾ ದೇವಿಗೆ ವಶವಾಗಲಿಲ್ಲ. ಶರೀರ ಸಿದ್ಧಿಯನ್ನು ಪಡೆದು ಪ್ರಭು ದೇಹಿಯಾಗಿ ಗರ್ವಿಷ್ಠನಾಗಿರುವ ಗೋರಕ್ಷನಿಗೆ "ನಿಃಶಬ್ದಂ ಬ್ರಹ್ಮ ಮುಚ್ಯತೆ" ಈ ನ್ಯಾಯದಂತೆ ಖಡ್ಗದಿಂದ ಸಿನ್ನ ಶರೀರದ ಮೇಲೆ ಹೊಡೆಯಲು ಖಣ್ ಖಣ್ಣೆಂದು ಶಬ್ದ ಹೊರಟ ಕಾರಣ ಅದಕ್ಕೆ ಲಯ ವಿದೆಯೆಂದು ನಿಶ್ಚಯವಾಗಿ ತಿಳಿ. ಇದು ಶರೀರ ಸಿದ್ಧಿ ಅಲ್ಲವು. ಇದೇ ಖಡ್ಗದಿಂದ ನನ್ನನ್ನು ಹೊಡೆ" ಎಂದು ಆಜ್ಞಾಪಿಸಲು ಗೋರಕ್ಷನು ಪ್ರತ್ಯಕ್ಷ ಕಾಣುವಂಥ ಶ್ರೀ ಪ್ರಭುಮೂರ್ತಿಯನ್ನ ಎಷ್ಟು ಹೊಡೆದಾಗ್ಯೂ ಅದರಿಂದ ನಾದವು ಹೊರಡದೆ ಅವನಿಗೆ ಏನೂ ಬಾಧೆಯಾಗದೆ ಹಾಗೇ

ನಿಂತದ್ದು ಕಂಡು ಆಶ್ಚರ್ಯ ಚಕಿತನಾಗಿ ಆ ಗೋರಕ್ಷನು ಶರಣು ಹೋಗಿ ಶರೀರ ಸಿದ್ಧಿಯ ಸಂಪಾದನೆಗಾಗಿ ವೀರಶೈವ ಧರ್ಮದ ದೀಕ್ಷೆಯನ್ನು ಹೊಂದಿ ಮುಕ್ತನಾದ ಕಥೆಯು ಪ್ರಭುಲಿಂಗ ಲೀಲೆಯಲ್ಲಿ ಪ್ರಸಿದ್ಧವಿದೆ. ಇಂಥ ಸಿದ್ಧ ಪುರುಷನಿಗೆ ಶ್ರೀಶೈಲದೊಳಗಿನ ಕದಳೀ ವನದ ಅವಶ್ಯಕತೆಯೇ ಇದ್ದಿಲ್ಲ. ಅತಏವ ಮೇಲಿನ ವಿವೇಚನೆಗಳಿಂದ ನೋಡಲಾಗಿ ತೇರದಾಳದಲ್ಲಿ ಶ್ರೀ ಪ್ರಭುದೇವರ ಐಕ್ಯಸ್ಥಾನವಿದ್ದದ್ದು ನಿಜವೆಂದೇ ಕಂಡು ಬರುತ್ತದೆ. ಇನ್ನು ಅದೇ ಪ್ರಭುದೇವನು ಈತನೆಂಬುದು ಹೇಗೆ ತಿಳಿಯಬೇಕು, ಇವನೊಬ್ಬ ಬೇರೆ ಪ್ರಭುದೇವನು ಯಾಕಾಗಬಾರದು ಎಂದು ಯಾರಾದರು ವಿಚಾರಿಸಿದರೆ ಅವರಿಗೆ ಉತ್ತರ, ನಿರಂಜನ ವಂಶ ರತ್ನಾಕರದಲ್ಲಿ "ತೇರದಾಳದಲ್ಲಿ ಶ್ರೀ ಪ್ರಭುದೇವನು ನಿರ್ವಾಯವಾದ ನಂತರ ಆ ಸ್ಥಲದಲ್ಲಿ ಒಂದು ಮಠವನ್ನು ಕಟ್ಟಿಸಿ ಅದರಲ್ಲಿ ಶೂನ್ಯಪೀಠ (ಶೂನ್ಯಸಿಂಹಾಸನ) ಎಂಬ ಹೆಸರಿನ ಒಂದು ಗದ್ದುಗೆಯನ್ನು ಸ್ಥಾಪಿಸಿ ಅದರ ಮೇಲೆ ಶ್ರೀ ಪ್ರಭುದೇವನು ಕೊಟ್ಟ ಕೈಯೊಳಗಿನ ಕಮಂಡಲು ರೂಪವಾದ ಮಗೆಯನ್ನಿಟ್ಟು ಅದನ್ನು ಈ ವರೆಗೂ ಪೂಜಿಸುತ್ತಿರುವರು. ಮತ್ತು ಆ ಸ್ಥಲದಲ್ಲಿ ಅನೇಕ ಪೂಜೋತ್ಸವಗಳು ನಡೆಯುತ್ತಿರುವವು. ಅದರಿಂದ ಆ ಶ್ರೀ ಪ್ರಭುದೇವನಿಗೆ ಮುಗಿ ಪ್ರಭುಯೆಂದು ಹೆಸರು ಬಿದ್ದಿದೆ" ಎಂದು ಇದ್ದದ್ದನ್ನು ನಾವು ಹಿಂದೆಯೇ ವರ್ಣಿಸಿದ್ದೇವೆ. ಇದರ ಮೇಲಿಂದ ಚಾರುತರ ಸಮ್ಮೋಹನಾಂಗನೂ ಮದನಮರ್ದನನೂ, ಮಾಯಾ ವಿಲಾಸ ನಿರಸನ ಚತುರನೂ ಆದ ಅದೇ ಅನಾದಿ ಪ್ರಭುದೇವನು ಈತನು ಹೌದೆಂಬುದರಲ್ಲಿ ಸಂಶಯವಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇದು ಅಲ್ಲದೆ ಶ್ರೀಮತ್ಸಚ್ಚಿದಾನಂದ, ಘನನಿರಂಜ್ರಹ್ಮ, ಸಾಕ್ಷಾತ್ ಪರಶಿವ ಸ್ವರೂಪ ಹಾಗೂ ಶೂನ್ಯಸಿಂಹಾಸನಾಧೀಶನೆಂದು ಅನೇಕ ವೀರಶೈವ ಪುರಾತನ ಕವಿಗಳು ಯಾವ ಪ್ರಭುದೇವನನ್ನು ಸ್ತುತಿಸಿರುವರೋ, ಪಾಲ್ಕುರಿಕೆ ಸೋಮನಾಥ್ಯರು (೧೧೬೫) ತಿಲಗಿನಲ್ಲಿ ಪ್ರಭುಲಿಂಗ ಲೀಲಾ, ಪ್ರಭುದೇವರ ರಗಡ ಎಂಬ ಗ್ರಂಥಗಳಿಂದ ಯಾವ ಪ್ರಭುವಿನನ್ನು ಸ್ತುತಿಸಿರುವನೋ ಕ್ರಿಸ್ತಿ ಶಕ ೧೧೬೦ ರಲ್ಲಿ ಚಾಮರಸನೆಂಬ ಕವಿಯು ಪ್ರಭುಲಿಂಗ ಲೀಲೆಯೆಂಬ ಗ್ರಂಥದಿಂದ ಯಾವ ಪ್ರಭುದೇವನನ್ನು ಕೊಂಡಾಡಿರುವನೋ, ಪಿಡುಪರ್ತಿ ಸೋಮಕವಿಯೆಂಬವನು ಪ್ರಭುಲಿಂಗ ಲೀಲೆಯೆಂಬ ತೆಲಗು ಗ್ರಂಥದಿಂದ ಯಾವ ಪ್ರಭುದೇವನನ್ನು ಹೊಗಳಿರುವನೋ, ಮತ್ತು ಕ್ರಿಸ್ತಿ ಶಕ ೧೬೦೦ ರಲ್ಲಿ ಎಳೆಂದೂರ ಪರೀಶ್ವರನೆಂಬ

ವನು ಕನ್ನಡ ಪ್ರಭುದೇವರ ಪುರಾಣದಿಂದ ಯಾವ ಪ್ರಭುದೇವನನ್ನು ವರ್ಣಿಸಿರುವನೋ ಅದೇ ಪ್ರಭುವಿನ ಅದೇ ಲೀಲೆಗಳನ್ನು ಶ್ರೀಮಂತ ಹನಗಂಡಿ ದೇಸಾಯರ ಆಂಶಜನಾದ ಮುಗಿಯ ನರೇಂದ್ರ ಕವಿಯು ಕ್ರಿಸ್ತಿ ಶಕೆ ೧೪೩೦ ರ ಸುಮಾರಿನಲ್ಲಿ ೧೧೦೦ ಪದ್ಯಗಳಿಂದ ಹಾಡಿರುವನು. ಈ ಮುಗಿಯ ನರೇಂದ್ರ ಕವಿಗೆ ಕವಿತ್ವ ಪೇಳಿದ ಗುರುಬಸವ ಕವಿಯು ತನ್ನ ೧೧೦೦ ಪದ್ಯಗಳಿಂದ ಅದೇ ಪ್ರಭುವಿನನ್ನು ಕೊಂಡಾಡಿರುವನು. ಈ ಗುರುಬಸವನ ಸಪ್ತಕಾವ್ಯದ ಹೊರ್ತು ವಚನಸಾರ ಎಂಬದೊಂದು ಪದ್ಯ ರೂಪವಾದ ಗ್ರಂಥವಿರುವದು. ಈ ಪದ್ಯಗಳ ಮೇಲಿಂದ ಶ್ರೀ ಪ್ರಭುದೇವನು ತೇರದಾಳದಲ್ಲಿಯೇ ಬಯಲಾದದ್ದು ಸಿದ್ಧವಾಗುತ್ತದಲ್ಲದೆ ಶ್ರೀ ಪ್ರಭುದೇವನಿಗೆ ಆತನು ಚನ್ನನಿಗೆ ವಶವಾದದ್ದರಿಂದ ಚನ್ನಪ್ರಭು ಯೆಂದೂ, ಸರ್ವಾಂತರ್ಯಾಮಿಯಾಗಿರುವದರಿಂದ ಗುಹೇಶ್ವರ (ಕ್ಷೇತ್ರಜ್ಞ) ನೆಂದೂ, ಮಾಯೆಯನ್ನು ಗೆದ್ದದ್ದರಿಂದ ಅಲ್ಲಮನೆಂದೂ, ಶ್ರೀ ಬಸವೇಶ್ವರಾದಿ ಶಿವಶರಣರಿಗೆ ಕಲ್ಯಾಣಪಟ್ಟಣದಲ್ಲಿ ಎರಡೆಂಬತ್ತು ಕೋಟಿ ವಚನಗಳಿಂದ ತತ್ತ್ವೋಪದೇಶ ಮಾಡಿರುವನಾಗಿ ಬಸವ ಪ್ರಭುಯೆಂದೂ, ಮತ್ತು ತೇರದಾಳದಲ್ಲಿ ನಿರ್ವಾಯವಾಗುವ ಸಮಯಕ್ಕೆ ತನ್ನ ಕರಕಮಂಡಲುವಾದ ಮಗೆಯನ್ನು ಕೊಟ್ಟಿರುವದರಿಂದ ಮುಗಿ ಪ್ರಭುಯೆಂದೂ ಹೆಸರುಗಳು ಪ್ರಾಪ್ತವಾಗಿದ್ದು ಈ ಯಾವತ್ತೂ ಹೆಸರುಗಳು ಆ ಅನಾದಿ ಪ್ರಭುದೇವನವೆಂದು ಈ ಪದ್ಯಗಳಿಂದ ವಾಚಕರು ಸಹಜವಾಗಿ ಮನಗಾಣಬಹುದು. ಈ ಬಗ್ಗೆ ಸವಿಸ್ತಾರವಾದ ಸಂಗತಿಯನ್ನು ನಾವು ಹಿಂದಿನ ಪ್ರಕರಣದಲ್ಲಿ ಕೊಟ್ಟಿರುತ್ತೇವೆ. ಆ ಯಾವತ್ತೂ ಪದ್ಯಗಳು ಸದ್ಯಕ್ಕೆ ಉಪಲಬ್ಧವಿರದಿದ್ದರೂ ಸಿಕ್ಕಷ್ಟೇ ಪದಗಳನ್ನು ಶ್ರೀಮನ್ನಿರಂಜನ ಜಗದ್ಗುರು ಗ್ರಂಥಮಾಲೆಯ ಪುಷ್ಪಗಳಲ್ಲಿ ಪ್ರಸಿದ್ಧಿಸಿರುವೆವು. ಆ ಪದಗಳನ್ನು ವಾಚಕರು ಓದಬೇಕೆಂದು ನಾವು ಆಶಿಸುತ್ತೇವೆ. ಹಾಗೆ ಮಾಡಿದರೆ ಪ್ರಪಂಚದಲ್ಲೆಲ್ಲ ಪ್ರಸಿದ್ಧಿಯನ್ನು ಪಡೆದ ಶ್ರೀ ಪ್ರಭುದೇವನು ಮತ್ತು ತೇರದಾಳದಲ್ಲಿ ನಿರ್ವಾಯವಾದ ಶ್ರೀ ಪ್ರಭುದೇವನು ಈ ಎರಡೂ ವ್ಯಕ್ತಿಗಳು ಒಬ್ಬನೇ ಎಂಬುವದು ವಾಚಕರು ಮನಗಾಣಬಹುದು. ವಾಚಕರ ಅವಗಾಹನಕ್ಕಾಗಿ ಸ್ಥಲಸಂಕೋಚದ ಮೂಲಕ ಮುಗಿಯನರೇಂದ್ರ ಕವಿಯ ಒಂದೇ ಪದವನ್ನು ಇಲ್ಲಿ ಕೊಡುತ್ತೇವೆ. (ರಾಗ ಕನ್ನಡ ಕಾಂಬೋದಿ, ಏಕತಾಳ); ಮುದ್ದು ಮುಖದ ಮುಗಿಯ ಅಲ್ಲಮ ಆದಿ ಪ್ರಭುವೆ। ಸಿದ್ಧವಾಗಿ ಅವನಿಗೆ ಬೇಗ ಬಂದೆ ಪ್ರಭುವೆ ॥ಪಲ್ಲ॥ ಕರವೂರ ಸುಜ್ಞಾನಿ

ನಿರಹಂಕಾರರಿಗೊಲಿದೆ ಪ್ರಭುವೆ। ಭರದಿ ಬನವಾಸಿಗೆ ಬಂದು ನಿಂದೆ ಪ್ರಭುವೆ। ವರವಾಯಿ ಸೋಲಿಸಿ ಮುಂದಕ್ಕೆ ತೆರಳಿ ಪ್ರಭುವೆ। ಕರುಣವಿಟ್ಟಿಗೊಗ್ಗಿ ದೇವಗೆ ನೀನು ಪ್ರಭುವೆ ॥೧॥ ಅಲ್ಲಿಂದ ನೀನು ಸೊನ್ನಲಪುರಕೆ ಬಂದೆ ಪ್ರಭುವೆ। ಬಲ್ಲಿದ ಸಿದ್ಧರಾಮನ ಗರ್ವಕೆಡಿಸಿ ಪ್ರಭುವೆ। ಕಲ್ಯಾಣಹೊಕ್ಕು ಪ್ರಥಮರ ಕೂಡ ಮೆರೆದಿ ಪ್ರಭುವೆ। ಸುಲಭ ಬಸನೇಶಂಗೆ ಕೃಪೆಯುತ್ತ ಪ್ರಭುವೆ ॥೨॥ ಧರೆಗೆ ತ್ರಿದಳವಾದ ಪುರದಿ ನಿಂದೆ ಪ್ರಭುವೆ। ಪರಸಿಪನ್ನಂ ದೇಶಬಂದಿತು ಪ್ರಭುವೆ। ನರೇಂದ್ರ ಮುಗಿಯಗೆ ದಯದಿ ಸಲಹು ಪ್ರಭುವೆ। ದುರಿತ ದೋಷಂಗಳ ಪರಿಹರಿಸು ಪ್ರಭುವೆ ॥೩॥ ಇದರ ಮೇಲಿಂದ ನೋಡಲಾಗಿ ಕಲ್ಯಾಣದಲ್ಲಿ ಬಸವಾದಿ ಪ್ರಮಥರ ಕೂಡ ಇದ್ದಂಥ ಶ್ರೀಪ್ರಭುದೇವನೇ ತೇರದಾಳಕ್ಕೆ ಬಂದು ಅಲ್ಲಿಯೇ ಬಯಲಾದದ್ದು ನಿಜವಿರುತ್ತದೆ. ಮತ್ತು ಈ ಮುಗಿಯನರೇಂದ್ರ ಕವಿಯು ತನ್ನದೊಂದು ಪದ್ಯದಲ್ಲಿ "ಕಲಿಯುಗದೊಳು ತಾನು ದಲದಂಕನಾಗಿರ್ದು ಬಲುಶಾಸ್ತ್ರದೊಳಗೆಲ್ಲ ಒಲಪೆಯೊಳು ಗುರುಕರುಣವ ಪಡೆದಿದ್ದ ಸಲೆಪುರಾಣ ಚನ್ನಪ್ಪನ ಪದನದ ದಾಸಿ ನಾ " ಎಂದು ಶ್ರೀ ಚನ್ನಪ್ರಭು ಕವಿಯನ್ನು ಸ್ತುತಿಸಿರುವನು. ಈ ಚನ್ನ ಶ್ರೀಪ್ರಭು ಕವಿಯು ತನ್ನ ಒಂದು ಪದ್ಯದಲ್ಲಿ " ಕರಿಕಾಲಜೋಳಗೆ ಒಲಿದ ದೇವನು। ಕರುಣದಿಂದಲಿ ಬಂದನು। ವೀರಧೀರ ಕೃಷ್ಣೆಂದ್ರ ಸತಿಗೆ ವರವಕೊಟ್ಟ ಪ್ರಭುವಿಗೆ" ಎಂದು ಹೇಳಿರುವನು. ಅಂದರೆ ಕರಿಕಾಲಜೋಳನನ್ನು ಯಾವ ಪ್ರಭುದೇವನು ಉದ್ಧಾರ ಮಾಡಿದನೊ ಅದೇ ಪ್ರಭುದೇವನು ಹನಗಂಡಿ ದೇಸಾಯರ ಮೂಲ ಪುರುಷನಾದ ಕೃಷ್ಣ ಗೌಡನನ್ನು ಉದ್ಧರಿಸಿದಂತೆ ಹೇಳಿರುವನು. ಇದರ ಮೇಲಿಂದ ತೇರದಾಳದಲ್ಲಿ ಬಯಲಾದ ಪ್ರಭುದೇವನೇ ಕಲ್ಯಾಣದಲ್ಲಿ ಪ್ರಮಥರ ಕೂಡ ಇದ್ದದ್ದು ಸಹಜ ಸಿದ್ಧವಾಗುತ್ತದೆ. ಇದು ಅಲ್ಲದೆ ಮುಂಬಯಿ ಇಲಾಖೆಯ ಗ್ಯಾಝಿಟೆಯರ್ ಕರ್ನಾಟಕ ಪ್ರಕರಣ ೧೩, ಮಹತ್ವದ ಸ್ಥಳಗಳು, ಅಲತಗಿ, ಪುಟ ೪೩೭ ರಲ್ಲಿ "ಅಲತಗಿಯಿಂದ ಒಂದು ಮೈಲ ಅಂತರದ ಮೇಲೆ ಲಿಂಗಾಯತರ ಗುರುವಾದ ಅಲ್ಲಮಪ್ರಭುವಿನ ಗುಡಿಯು ಅದೆ. ಈ ದೇವರ ದರ್ಶನಕ್ಕೆ ಮುಖ್ಯವಾಗಿ ಲಿಂಗಾಯತರು ಮತ್ತು ಜೈನರು ಹೋಗುವರು. ಈ ವಿಷಯಕ್ಕೆ ಒಂದು ಕಥೆಯುಂಟು. ಅದು ಏನೆಂದರೆ— ಲಿಂಗಾಯತರ ಗುರುವಾದ ಪ್ರಭುವು ಬಸವನಿಂದ ಪ್ರಸಿದ್ಧಿ ಹೊಂದಿದ ಕಲ್ಯಾಣ ಪಟ್ಟಣದಿಂದ ಅಲತಗಿಗೆ ಬಂದನು. ಇವನ ಶಿಷ್ಯನಾದ ಅದಿಲಿಂಗನು ತನ್ನ ಗುರುವಿನ ಶೋಧಮಾಡುತ್ತ ಅವನ ಹಿಂದಿ

ನಿಂದ ಅಲತಗಿಯ ವರೆಗೆ ಬಂದನು. ಆದಾಗ್ಯೂ ಗುರುವಿನ ಶೋಧವಾಗಲಿಲ್ಲ. ಆಗ್ಗೆ ಪ್ರಭುದೇವನು ಜೀವಂತ ಸಮಾಧಿಯನ್ನು ಹೊಂದಿರಬೇಕೆಂದು ಆದಿಲಿಂಗನಿಗೆ ಅನಿಸಿತು. ತನ್ನ ಗುರುವಿನ ವಿಷಯವಾಗಿ ಭಕ್ತಿಯನ್ನು ತೋರಿಸುವದರ ಸಲುವಾಗಿ ಪ್ರಭುದೇವರ ಹೆಸರಿನಿಂದ ಅಲತಗಿಯಲ್ಲಿ ಒಂದು ಗುಡಿಯನ್ನ ಕಟ್ಟಿಸಿ ಅದರಲ್ಲಿ ಒಂದು ದೀಪಿಗೆಯನ್ನು ಹಚ್ಚಿದನು. ಆ ದೀವಿಗೆಯು ಈಗ್ಯೂ ಅಲ್ಲಿ ಉರಿಯುತ್ತಿರುವದು. ಮತ್ತು ಅದನ್ನು ಜನರು ಪೂಜಿಸುತ್ತಿರುವರು." ಹೀಗೆ ಹೇಳಿದೆ. ಇದರ ಮೇಲಿಂದ ಮೇಲೆ ಹೇಳಿದಂತೆ ಈ ಆದಿಲಿಂಗೇಶನಿಗೆ ಶ್ರೀ ಪ್ರಭುದೇವನು ತೇರದಾಳದಲ್ಲಿ ಅಧಿಕಾರ ಕೊಟ್ಟು ಎಲ್ಲ ಬಿರುದುಗಳೊಡನೆ ದಿಗ್ವಿಜಯದೆಶೆಯಿಂದ ಹೊರಗೆ ಕಳುಹಿಸಿರಲು ಆ ಆದಿಲಿಂಗನಿಗೆ ಅಲತಗಿಯ ಮುಕ್ಕಾವಿನಲ್ಲಿ ತನ್ನ ಗುರುವಾದ ಶ್ರೀ ಪ್ರಭುದೇವನು ತೇರದಾಳದಲ್ಲಿ ಬಯಲಾದದ್ದರ ವಾರ್ತೆಯು ಹತ್ತಿರಬಹುದು. ಮತ್ತು ಶ್ರೀ ಪ್ರಭುದೇವನಿಗೆ ದಿಗ್ವಿಜಯು ಸಾಕಾಗಿಯೇ ತಾನು ತೇರದಾಳದಲ್ಲಿ ಉಳಕೊಂಡದ್ದು ಮತ್ತು ಆ ಮೇಲೆ ತನ್ನ ಇಚ್ಛೆಯ ಮೇರೆಗೆ ಅಲ್ಲಿಯೇ ಬಯಲಾದದ್ದು ಸಿಜವಿರುತ್ತದೆ. ಈ ಆದಿಲಿಂಗನ ಗುರುವಾದ ಅಲ್ಲಮಪ್ರಭುವಿಗೆ ಬಸವಪ್ರಭುಯೆಂದು ತೋಂಟದಾರ್ಯನು ತನ್ನ ವಚನವಲ್ಲಿ ಹೇಳಿರುವನು. ಆದುದರಿಂದ ಅಲ್ಲಮಪ್ರಭುವೆಂದರೆ ಬಸವಪ್ರಭು, ಮತ್ತು ಬಸವಪ್ರಭುವೆಂದರೆ ಅಲ್ಲಮಪ್ರಭುವೆಂಬುವದು ಸಹಜ ಸಿದ್ಧವಾಗುವದು. ಇನ್ನು ಹಿಂದಿನ ಪ್ರಕರಣದಲ್ಲಿ ವರ್ಣನೆ ಮಾಡಿರುವಂತೆ ಮಂಗಸೂಳಿ, ಪಾರಿಹಾಳ, ಪ್ರಭುದೇವರ ಗುಡ್ಡ, ಚಿನ್ಮಡ, ಜಮಖಂಡಿ, ಜಂಬಿಗಿ, ಚಿಕ್ಕೋಡಿ, ಚಿಂಚಣಿಗಿ ಸಿದ್ಧಿಹಾಳ, ಮತ್ತು ಒಂಟಮುರಿ ಮುಂತಾದ ಊರಗಳಲ್ಲಿರುವ ಶ್ರೀ ಪ್ರಭುದೇವನ ದಿವ್ಯಸ್ಥಾನದ ಪೂಜಕರೂ ಹಾಗೂ ಸದ್ಭಕ್ತರೂ ಮೇಲಿಂದ ಮೇಲೆ ತೇರದಾಳಕ್ಕೆ ಬಂದು ದಂಡ ಖಂಡನಾದಿಗಳನ್ನು ಕೊಟ್ಟು ದರ್ಶನಾಶೀರ್ವಾದಗಳನ್ನು ತೆಗೆದುಕೊಂಡು ಈಗ್ಯೂ ಹೋಗುತ್ತಿರುವರು. ಇದರ ಮೇಲಿಂದಾದರೂ ತೇರದಾಳ ಸ್ಥಾನವು ಮುಖ್ಯವಾಗಿ ಶ್ರೀ ಪ್ರಭುದೇವರು ಅಲ್ಲಿಯೇ ಬಯಲಾದನೆಂಬದನ್ನು ವಾಚಕರು ಮನಗಾಣಬಹುದು. ಅದರಂತೆ ಶ್ರೀ ಪ್ರಭುದೇವನ ಷಟ್‌ಸ್ಥಲದ ವಚನಗಳಿಗೆ ಟೀಕೆಯನ್ನು ಬರೆದ ಮಹಾಲಿಂಗದೇವ (೧೪೨೫) ಮತ್ತು ಅತನ ಶಿಷ್ಯನಾದ ಕುಮಾರ ಬಂಕನಾಥ (೧೪೫೦) ಈ ಉಭಯತರ ಸಮಾಧಿಗಳು ಅನುಕ್ರಮವಾಗಿ ಮಹಾಲಿಂಗಪುರ, (ಸಂಸ್ಥಾನ ಮುಧೋಳ) ಮತ್ತು ರಾಯಭಾಗ (ಸಂಸ್ಥಾನ

ಕೊಲ್ಹಾಪೂರ) ಗಳಲ್ಲಿ ಇರುವವು. ಮಹಾಲಿಂಗಪುರ ತೇರದಾಳದಿಂದ ೫ ಮೈಲಿನ ಮೇಲೆ ಮತ್ತು ರಾಯಭಾಗವು ೧೫ ಮೈಲುಗಳ ಮೇಲೆ ಇರುತ್ತವೆ. ಇದರ ಮೇಲಿಂದಲೂ ತೇರದಾಳದಲ್ಲಿಯೇ ಶ್ರೀ ಪ್ರಭುದೇವನು ಐಕ್ಯನಾದನೆಂಬುವದು ಮನವರಿಕೆಯಾಗುವದು. ಇದು ಅಲ್ಲದೆ ತೇರದಾಳದ ಸುತ್ತ ಮುತ್ತಲು ೧೦೦ ಹರದಾರಿ ಪ್ರಮಾಣದ ವರೆಗೆ ಇರುವಂಥ ಎಷ್ಟೋ ಬ್ರಾಹ್ಮಣ, ಜೈನ, ಲಿಂಗಾಯತ ಮತ್ತು ಉಳಿದ ಹಿಂದೂ ಜನರ ಸಣ್ಣ ದೊಡ್ಡ ಮನೆತನಗಳಲ್ಲಿ ತೇರದಾಳದ ಶ್ರೀ ಪ್ರಭುಸ್ವಾಮಿಯು ಕುಲಸ್ವಾಮಿಯಾಗಿ ಪೂಜೆಗೊಂಬುತ್ತಿರುವನು ಮತ್ತು ಆ ಮನೆತನದವರು ತಮ್ಮ ಜಗುಲಿಗಳ ಮೇಲೆ ಶ್ರೀಪ್ರಭುದೇವರ ಹೆಸರಿನಿಂದ ಒಂದು ಹಿತ್ತಾಳೆಯ ಮಗಿಯನ್ನಿಟ್ಟು ಅದರ ಪೂಜೆಯನ್ನು ನಿತ್ಯ ಮಾಡಿಕೊಂಡು ವರ್ಷದೊಳಗೆ ಒಂದಾವರ್ತಿಯಾದರೂ ತೇರದಾಳಕ್ಕೆ ಬಂದು ದಂಡ ಖಂಡನಾದಿಗಳನ್ನು ಕೊಟ್ಟು ದರ್ಶನಾಶೀರ್ವಾದಗಳನ್ನು ತೆಗೆದುಕೊಂಡು ಹೋಗುತ್ತಿರುವರು. ಇವುಗಳಲ್ಲಿಯ ಎಷ್ಟೋ ಮನೆತನಗಳು ಪುರಾತನವೂ ಮತ್ತು ಇತಿಹಾಸ ಪ್ರಸಿದ್ಧವೂ ಆಗಿರುವವು. ಅವುಗಳಲ್ಲಿ ಶ್ರೀಮಂತ ಒಂಟಮುರಿ ಮತ್ತು ಹನಗಂಡಿ ಈ ಎರಡು ಮನೆತನಗಳ ವಿವರಣೆಯನ್ನು ನಾವು ಹಿಂದಿನ ಪ್ರಕರಣದಲ್ಲಿ ಸವಿಸ್ತಾರವಾಗಿ ವರ್ಣಿಸಿದ್ದೇವೆ. ಈ ಮಾತಿನ ವಿಚಾರವನ್ನು ವಾಚಕರು ಜನ್ನಾಗಿ ಮಾಡಿದರೆ ಶ್ರೀ ಪ್ರಭುದೇವರು ತೇರದಾಳದಲ್ಲಿ ಬಯಲಾದ ತರುವಾಯ ಅವನ ಹೆಸರಿನಿಂದ ಮಗೆಯನ್ನಿಟ್ಟು ಪೂಜಿಸುವ ರೂಢಿಯು ಈ ಮನೆತನಗಳಲ್ಲಿ ಇದ್ದದ್ದು ಮನಗಾಣಬಹುದು. ಅತ ಏವ ತೇರದಾಳದಲ್ಲಿ ಐಕ್ಯನಾದ ಶ್ರೀ ಪ್ರಭುದೇವನು ಮತ್ತು ಪುರಾಣಗಳಲ್ಲಿ ವರ್ಣಿಸಲ್ಪಟ್ಟ ಶ್ರೀ ಪ್ರಭುದೇವನು ಒಬ್ಬನೇ ಎಂದು ಹೇಳುವದರಲ್ಲಿ ಎಳ್ಳಷ್ಟಾದರೂ ಸಂಶಯವು ಬರುವದಿಲ್ಲ. ಆದುದರಿಂದ ಬಬಲೇಶ್ವರದ ಪುರಾತಿಕ ಸಿದ್ಧಮಲ್ಲಾರ್ಯನು ಒಂದು ಕಡೆ "ಸಿದ್ಧರಾಮನ ಪೊಳೆದು ಗುಡ್ಡರ। ಯುದ್ಧವನು ಜಯಿಸುತ್ತ ಘಣಿದೃಗ। ರದ್ದಣಿಗೆ ಸೊನ್ನಲಪುರವು ಬೇಯಲ್ಕೆ ಕೈಪೆಮಾಡಿ ॥ ಇದ್ದ ರೀತಿಯ ಪೇಳಿ ಲಿಂಗವ। ಬದ್ಧಿಸುಕರಾಮಂಗೆ ಗೊಗ್ಗಯ। ಗಪ್ಪೆಯಲಿ ಉಪದೇಶವಿತ್ತ ಮಗೇಶ ಶರಣೆಂಬೆ" ಎಂದು ಶ್ರೀಮದನಾದಿ ಅಲ್ಲಮಪ್ರಭುದೇವನಿಗೆ ಮಗೀಶನೆಂದು ಸಂಬೋಧಿಸಿದ್ದು ವಾಚಕರು ಕಾಣಬಹುದು. ಆದುದರಿಂದ ಮಗೀಶನೆಂದರೆ ಪ್ರಭುದೇವನೆಂಬುದು ಸಹಜ ಸಿದ್ಧವಾಗುತ್ತದೆ.

ನಿರಂಜನ ವಂಶರತ್ನಾಕರದಲ್ಲಿ ಹೇಳಿರುವಂತೆ ತೇರದಾಳದಲ್ಲಿ ಶ್ರೀ ಪ್ರಭುದೇವನು ಐಕ್ಯವಾಗುವ ಸಮಯದಲ್ಲಿ ತಮ್ಮ ಕೆಲವು ಕುರುಹು ಗಳನ್ನು ದಯಪಾಲಿಸಿದರೆ ಅವುಗಳನ್ನು ಪೂಜಿಸಿಕೊಂಡು ಇರುವೆವೆಂದು ಬೇಡಿಕೊಳ್ಳುವವರೊಳಗೆ ಶಿವಮೂರ್ತಿಪ್ಪನೆಂಬ ಒಬ್ಬ ವೀರಶೈವ ಸದ್ಭಕ್ತ ನಿದ್ದನು. ಆತನಿಗೆ ಶ್ರೀ ಪ್ರಭುದೇವನು ತನ್ನ ಎರಡೂ ಹಾವುಗೆಗಳನ್ನು ಕೊಟ್ಟನು. ಅವುಗಳನ್ನು ಪೂಜಿಸಿಕೊಂಡು ಇರುತ್ತಿರಲಾಗಿ ಕೆಲವು ವರ್ಷ ಗಳ ಮೇಲೆ ಪರಚಕ್ರಗಳ ಗೊಂದಲವೆದ್ದಿತು. ಅದಕ್ಕಂಜಿ ಅವನು ಆ ಹಾವುಗೆಗಳನ್ನು ಸಂಗಡ ತೆಗೆದುಕೊಂಡು ಸಹಕುಟುಂಬವಾಗಿ ಬೇರೂರಿಗೆ ನಡೆದನು. ದಾರಿಯಲ್ಲಿ ಒಂದು ನದಿಗೆ ಹೆಚ್ಚು ಪ್ರವಾಹ ಬಂದಿದ್ದರಿಂದ ಉಡಿಯೊಳಗೆ ಹಾವುಗೆಗಳನ್ನು ಕಟ್ಟಿಕೊಂಡು ನದಿಯನ್ನು ದಾಟುವಷ್ಟ ರಲ್ಲಿ ಆ ಹಾವುಗೆಗಳು ಜಾರಿ ನೀರಿನಲ್ಲಿ ಬಿದ್ದವು. ಗಾಬರಿಯಾಗಿ ತೆಗೆದುಕೊಳ್ಳುವಷ್ಟರಲ್ಲಿ ಅವುಗಳಲ್ಲಿ ಒಂದು ಕೈಗೆ ಸಿಕ್ಕಿತು. ಮತ್ತೊಂದು ಘಟಸರ್ಪವಾಗಿ ಹರಿದು ಹೋಯಿತಂತೆ. ಅದರಿಂದ ಆತನು ಭಯಭೀತ ನಾಗಿ ಉಳಿದ ಒಂದು ಹಾವುಗೆಯ ಮೇಲೆ ಇಷ್ಟಲಿಂಗದಂತೆ ಕಾಂತಿ ಯನ್ನು ಕೂಡ್ರಿಸಿ ಅದನ್ನೇ ನಿತ್ಯ ಪೂಜಿಸತೊಡಗಿದನು. ಹೀಗಿರುತ್ತಿ ರಲು ಕಾಲಾಂತರದಲ್ಲಿ ಆತನು ನೀಲಿಯ ಬಣ್ಣದ ವ್ಯವಹಾರದಲ್ಲಿ ವಿಶೇಷ ಲಾಭಹೊಂದಿ ಸಂತತಿ ಸಂಪತ್ತುಳ್ಳವನಾಗಿ ವಿಶೇಷ ಧನತೆಗೇರಿದನು. ಇತ್ತೀಚೆಗೆ ಕಾಲಮಾನಕ್ಕನುಸರಿಸಿ ಆ ಮನೆತನದವರು ದರಿದ್ರತನಕ್ಕೇಡಾಗಿ ಬೇರೆ ಕಡೆಗೆ ಹೋಗಿರುವರು. ಈ ಹಾವುಗೆಯು ೧೮ ಇಂಚು ಉದ್ದ ೬ ಇಂಚ ಅಗಲು ೪ ಇಂಚು ದಪ್ಪ ಇತ್ತು. ಅದನ್ನು ಕಣ್ಣಾರೆ ಕಂಡವರು ಈಗಲೂ ತೇರದಾಳದಲ್ಲಿ ಎಷ್ಟೋ ಜನರು ಜೀವಂತರಿರುವರು. ಆದರೆ ಈಗ್ಗೆ ಆ ಹಾವುಗೆಯು ಇಲ್ಲದಂತಾಗಿದೆ. ಇದರ ಮಹಿಮೆಯನ್ನು ಶ್ರೀ ಪ್ರಭುದೇವನೇ ಬಲ್ಲ. ಮೇಲಿನ ಎಲ್ಲ ವಿವೇಚನೆಗಳಿಂದ ನೋಡ ಲಾಗಿ ತೇರದಾಳದಲ್ಲಿಯೇ ಶ್ರೀ ಮದನಾದಿ ಅಲ್ಲಮಪ್ರಭುದೇವನು ಬಯ ಲಾದದ್ದರಲ್ಲಿ ಏನೂ ಸಂಶಯವಿಲ್ಲೆಂದು ವಾಚಕರು ಮನಗಾಣಬಹುದು.

ರಾವಸಾಹೇಬ ಹಳಕಟ್ಟಿಯವರ ಮೊದಲಿನ ಲೇಖಕ್ಕೆ ಶ್ರೀಯುತ ಹುಂಡೇಕಾರ ವಕೀಲರು ಕೊಟ್ಟ ಉತ್ತರಗಳನ್ನು ನೋಡಲಾಗಿ ರಾವ ಸಾಹೇಬ ಹಳಕಟ್ಟಿಯವರ ಯಾವತ್ತೂ ಸಂಶಯಗಳು ದೂರಾದಂತೆ ವಾಚಕರು ಕಾಣಬಹುದು. ಆ ಮೇಲೆ ರಾವಸಾಹೇಬ ಹಳಕಟ್ಟಿಯವರು

ತೆಗೆದ ಆಕ್ಷೇಪಣಗಳ ಮತ್ತು ಶ್ರೀನಿವಾಸಮೂರ್ತಿಯವರ ಸಂಶಯಗಳ ನಿರಸನವಾದರೂ ಈ ನನ್ನ ಲೇಖನದಿಂದ ಬಹು ಅಂಶದಿಂದ ಆಗಿರ ಬೇಕೆಂದು ನಾವು ನಂಬುತ್ತೇವೆ. ಆದರೂ ಒಂದೆರಡು ಸಂಶಯಗಳ ವಿಶೇಷ ಸ್ಪಷ್ಟೀಕರಣವನ್ನು ಮಾಡಿ ಈ ಲೇಖವನ್ನು ಮುಗಿಸುತ್ತೇವೆ. ರಾವಸಾಹೇಬ ಹಳಕಟ್ಟಿಯವರು ತಮ್ಮ ಆಕ್ಷೇಪಣೆಯಲ್ಲಿ "ಶ್ರೀಯುತ ಹುಂಡೇಕಾರರವರು ಕೊಟ್ಟ ಬಸವಪ್ರಭು ಮೊದಲಾದ ೧೫ ಹೆಸರುಗಳು ಅಲ್ಲಮಪ್ರಭುವಿನ ಪರ್ಯಾಯನಾಮಗಳಾಗಿರದೆ, ಅವು ಮಗಿ ಪ್ರಭು ಅಥವಾ ಬಸವಪ್ರಭುವಿನ ಪರ್ಯಾಯನಾಮಗಳು ಏಕೆ ಇರಬಾರದು? ಇದಾದರೂ ಅಷ್ಟೇ ಸಂಭವನೀಯವಾಗಿದೆ" ಎಂದೂ ಎರಡನೇ ಪ್ರಶ್ನೆ ದಲ್ಲಿ "ಈಗಿನ ಪದ್ಯಗಳಲ್ಲಿ ಬಸವಪ್ರಭುಸ್ವಾಮಿಗಳಿಗೆ ಅಲ್ಲಮನೆಂತಲೂ ಅಲ್ಲಲ್ಲಿ ನಾಮನಿರ್ದೇಶವಿರುತ್ತದೆ" ಎಂದೂ ಮತ್ತು ಅದರಂತೆ ಅಂತ್ಯ ಭಾಗದಲ್ಲಿ "ಹನಗಂಡಿ ದೇಸಾಯರಾದ ಮಗೆಪ್ಪ ದೇಸಾಯಿ, ಚನ್ನಪ್ಪ, ಮತ್ತು ಗರುಬಸವ ಇವರಿಂದ ರಚಿತವಾದ ೩೫೦೦ ಪದ್ಯಗಳಲ್ಲಿ ಈಗ ಉಪಲಬ್ಧವಾಗಿರುವ ೧೭೭ ಪದ್ಯಗಳನ್ನು ಮಾತ್ರ ಪ್ರಸಿದ್ಧಿಸಿದ್ದಾರೆ. ಆದರೆ ಈ ಎಲ್ಲ ಪದ್ಯಗಳು ಪ್ರಸಿದ್ಧವಾದ ಬಳಿಕ ಬಸವಪ್ರಭುಗಳ ವಿಷಯ ವಾಗಿ ಹೆಚ್ಚಿಗೆ ಸಂಗತಿಗಳು ಹೊರಬೀಳುವ ಸಂಭವನವಿದೆ" ಎಂದು ಹೇಳಿ "ಈ ಮಗಿ ಪ್ರಭುವು ಪೂರ್ವದ ಅಲ್ಲಮಪ್ರಭುವಿನ ಸೂತ್ರದವರಾ ದರಿಂದ ಮೂಲ ಪೀಠಾಧಿಪತಿಗಳ ನಾಮನಿರ್ದೇಶದಿಂದ ಆವರನ್ನು ಪೂಜ್ಯಭಾವದಿಂದ ಸಂಬೋಧಿಸುವ ರೂಢಿಯನ್ನು ಈ ಪದ್ಯಗಳನ್ನು ರಚಿ ಸಿದವರು ಅನುಸರಿಸಿರಬಹುದು," ಎಂಬದರ ಸಾರಾಂಶವನ್ನೇ ಶ್ರೀಯುತ ಎಸ್. ಆರ್. ಶ್ರೀನಿವಾಸಮೂರ್ತಿಯವರು ತಮ್ಮ ಲೇಖದಲ್ಲಿ "ಅಲ್ಲಮ ಪ್ರಭುವಿನ ಸಾಂಪ್ರದಾಯದವರಾಗಿ, ಅಲ್ಲಮಪ್ರಭುವಿನ ಮಹತ್ವವನ್ನು ತೇರದಾಳದ ಮಠಾಧಿಪತಿಗಳಲ್ಲಿಯೂ ಆರೋಪಿಸಿ ಕೀರ್ತನಕಾರರು ಕೆಲವು ಕೀರ್ತನೆಗಳನ್ನು ರಚಿಸಿರಬಹುದೇ" ಎಂದು ಬರೆದು ಸಂಶಯಗ್ರಸ್ತರಾ ಗಿರುವರು. ಆದರೆ ಮೂಲ ಮಠಾಧಿಪತಿಗಳ ಹೆಸರಿನಿಂದ ಅವರ ತರು ವಾಯಿನ ಪೀಠಸ್ಥರಿಗೆ ಸಂಬೋಧಿಸಿ ಸ್ತುತಿಸುವ ರೂಢಿಯು ವಿರಕ್ತರೊಳಗಿನ ಅತಿಪ್ರಾಚೀನವಾದ ಪದ್ಧತಿಯಾಗಿದೆ. ಈ ಸಮಯಭೇದವು ಆರಂಭವಾದಂದಿನಿಂದ ಅಂದರೆ ೧೮ ನೇ ಶತಮಾನದ ಪ್ರಾರಂಭದಿಂದ ಆರಂಭವಾದಂತೆ ಕಂಡುಬರುತ್ತದೆ. ಉದಾಹರಣೆ — ಮುರಿಗೇಶ, ಮಹಾಂತೇಶ, ಕುಮಾರೇಶ ಮತ್ತು ತೋಂ ಟದಾರ್ಯ ಇತ್ಯಾದಿ. ಮೂಲ ತೋಂಟದಾರ್ಯ (೧೪೭೦) ರ ಕಾಲದಲ್ಲಿ

ಇದು ಇದ್ದಿಲ್ಲವು. ಆದುದರಿಂದ ಗದುಗಿನ ಮಠಾಧಿಪತಿಗಳು ತಮ್ಮ ನಿರಂಜನ ವಂಶದ ದರ್ಪಣದಲ್ಲಿ "ಮೂಲ ತೊಂಟದಾರ್ಯರಿಗೆ ಆದಿಪ್ರಭು ವೆಂದು ಅನ್ನದೆ ದ್ವಿತೀಯ ಪ್ರಭುವಿನ ಅವತಾರವೆಂದು ಹೇಳಿರುವರು. ರಾವಸಾಹೇಬ ಹಳಕಟ್ಟಿಯವರು "ತೇರದಾಳದಲ್ಲಿ ಸಮಾಧಿಸ್ಥರಾದ ಸ್ವಾಮಿಗಳಿಗೆ ಮಗಿಪ್ರಭು ಎಂಬ ಹೆಸರು ವಾಡಿಕೆಯಲ್ಲಿ ಇದೆ" ಎಂದು ಬರೆದದ್ದು ತೀರ ತಪ್ಪು. ಅದು ಹಾಗಿರದೆ ತೇರದಾಳದಲ್ಲಿಯ ಬ್ರಹನ್ಮಠಕ್ಕೆ ಪ್ರಭುಸ್ವಾಮಿಗಳ ಮಠವೆಂತಲೂ ಹಾಗೂ ಅಲ್ಲಿ ಬಯಲಾದ ಸ್ವಾಮಿಗಳಿಗೆ ಪ್ರಭುಸ್ವಾಮಿಗಳೆಂತಲೂ ನಿಜವಾಗಿ ಈ ಹೊತ್ತಿಗೂ ಜನರು ಅನ್ನುವರು. ರಾವಸಾಹೇಬ ಹಳಕಟ್ಟಿಯವರು ನಿರಂಜನವಂಶರತ್ನಾಕರ ದೊಳಗಿನ ತೇರದಾಳದ ವಿಷಯವನ್ನು ಎತ್ತಿ "ಈ ಚರಿತ್ರೆಗೂ ಪ್ರಭುಲಿಂಗಲೀಲೆ ಮೊದಲಾದ ಗ್ರಂಥಗಳಲ್ಲಿ ಕಂಡುಬರುವ ಮೂಲ ಅಲ್ಲಮ ಪ್ರಭುವಿನ ಚರಿತ್ರೆಗೂ ಎಷ್ಟು ಅಂತರವಿದೆಂಬುದು ಯಾರಿಗಾದರೂ ಸ್ಪಷ್ಟವಾಗದೆ ಇರಲಾರದು" ಎಂದು ಹೇಳಿದ್ದನ್ನೇ ವಿ॥ ಶ್ರೀನಿವಾಸ ಮೂರ್ತಿಯವರು ತಮ್ಮ ಲೇಖನಗಳಲ್ಲಿ "ವಂಶರತ್ನಾಕರದಲ್ಲಿರುವ ಬಸವ ಪ್ರಭು ಚರಿತ್ರೆಗೂ ಪ್ರಭುಲಿಂಗ ಲೀಲಾದಿ ಗ್ರಂಥಗಳಲ್ಲಿ ದೊರೆಯುವ ಅಲ್ಲಮನ ಚರಿತ್ರೆಗೂ ಏನೇನೂ ಸಂಬಂಧವಿಲ್ಲವೆಂಬುದನ್ನು ಪರಸ್ಪರ ಹೋಲಿಕೆಗಳಿಂದ ಹೇಳಬಹುದಾಗಿದೆ" ಎಂದು ಅನುವಾದಿಸಿರುವರು. ಆದರೆ ಈ ಉಭಯತರ ಸಂಶಯಗಳನ್ನು ನಾವು ಮೇಲೆ ಹೇಳಿರುವ "ಮುದ್ದುಮುಖದ ಮಗಿಯ ಅಲ್ಲಮ" ಈ ಒಂದೇ ಪದ್ಯವು ದೂರ ವಾಡಲಿಕ್ಕೆ ಸಾಕಾಗಿದೆ. ಇನ್ನು ರಾವಸಾಹೇಬ ಹಳಕಟ್ಟಿಯವರು ಆಚ್ಚು ಹಾಕಿಸಿದ ನಿರಂಜನವಂಶರತ್ನಾಕರ ಗ್ರಂಥದ ೧೫ನೆಯ ಪುಟದಲ್ಲಿ "ಕ್ರಿ. ಶ. ೧೬೫೫ ರ ಸುಮಾರಿನಲ್ಲಿರುವ ಷಡಕ್ಷರಿ ಕವಿಯ ಹೇರನ್ನು" ಪುಟ ೬೦ ರಲ್ಲಿ "೧೮ ನೇ ಶತಮಾನದ ಪ್ರಾರಂಭಕ್ಕೆ ಸ್ಥಾಪಿಸಲ್ಪಟ್ಟಂಥ ಒಂಟಮುರಿ ಊರ ಹೆಸರನ್ನೂ" ಮತ್ತು ೧೮ ನೇ ಶತಮಾನದ ಆದಿಯಲ್ಲಿ ಉತ್ಪನ್ನವಾದ ಸಮಯಭೇದದ ಹೆಸರುಗಳನ್ನು ಹೇಳಿ ಅವುಗಳಲ್ಲಿ ಮುರಿಗಿ, ಕೆಂಪಿನ, ಸಂಪಾದನೆ ಮುಂತಾದವುಗಳ ಹೆಸರುಗಳನ್ನೂ ಕೊಟ್ಟಿರುವದರಿಂದ ಈ ನಿರಂಜನವಂಶರತ್ನಾಕರವೆಂಬ ಗ್ರಂಥವು ಬಹು ಅರ್ವಾಚೀನವೆಂದು ಕಂಡು ಬರುವದಲ್ಲದೆ ಈ ಗ್ರಂಥಕರ್ತನಿಗೆ ಎಳ್ಳಷ್ಟಾದರೂ ಐತಿಹಾಸಿಕ ಜ್ಞಾನವು ಇದ್ದಿಲ್ಲವೆಂದು ಮುಂದಿನ ಒಂದೇ ಉದಾಹರಣೆಯಿಂದ ಒಡೆದು ತೋರುವದು. ಅದು ಹೇಗಂದರೆ—ತೊಂಟದಾರ್ಯ

(೧೪೭೦) ನ ತರುವಾಯ ನಿರಕ್ಷರ ಬೋಳಬಸವ (೬೬ ವರ್ಷ, ಸಿದ್ಧವೀರ (೯೪ ವರ್ಷ), ಗುರುಸಿದ್ಧಸೇನಿಕೇಂದ್ರ (೧೦೦ ವರ್ಷ), ಗಗನದಾರ್ಯ (೯೯ ವರ್ಷ), ಮತ್ತು ಸಿದ್ಧವೀರ (೯೦ ವರ್ಷ), ಹೀಗೆ ಐದು ಜನರು ಅನುಕ್ರಮವಾಗಿ ಪರಂಪರೆಯಿಂದ ಶಾನ್ಯಪೀಠವನ್ನು ಅಲಂಕರಿಸಿದರೆಂದು ಹೇಳಿದೆ. ಅಂದರೆ ೧೪೭೦ ಕ್ಕೆ ಈ ವರ್ಷಗಳನ್ನು ಕೂಡಿಸಿದರೆ ೧೮೫೬ ಆಗುತ್ತದೆ. ಇದು ೨೦೦ ವರ್ಷಗಳ ಹಿಂದೆ ಆಗಿ ಹೋದ ಸಿದ್ಧವೀರನ ವರೆಗೆ ೧೮೫೬ ಆದಂತಾಯಿತು. ಇದರ ಮೇಲಿಂದ ನೋಡಲಾಗಿ ಇದು ಎಷ್ಟು ಅಸಮಂಜಸವೂ ಮತ್ತು ಅಪಕ್ವ ವಿಚಾರದ್ದೂ ಎಂದು ತಿಳಿಯದೆ ಇರಲಾರದು. ಇಷ್ಟರ ಮೇಲಿಂದ ಈ ಗ್ರಂಥದಲ್ಲಿ ಹೇಳಿದ್ದೆಲ್ಲ ಐತಿಹಾಸಿಕ ದೃಷ್ಟಿಯಿಂದ ಎಷ್ಟು ಗ್ರಾಹವಾದೀತೆಂಬದನ್ನು ವಾಚಕವೃಂದವೇ ವಿಚಾರಿಸತಕ್ಕದ್ದು. ನಾವು ಪ್ರಸಿದ್ಧಿಪಡಿಸಿದ ಪದಗಳು ೧೫ನೇ ಶತಮಾನದವು. ಮತ್ತು ಮಗಿಯನರೇಂದ್ರ, ಚನ್ನಶ್ರೀಪ್ರಭು, ಹಾಗೂ ಗುರುಬಸವ ಈ ಮೂವರು ೧೫ನೆಯ ಶತಮಾನದವರೆಂದು ರಾವಸಾಹೇಬ ಹಳಕಟ್ಟಿಯರೇ ತಮ್ಮ ಮೊದಲಿನ ವಿಮರ್ಶಾತ್ಮಕ ಲೇಖನದ ಪ್ರಾರಂಭದಲ್ಲಿ ಒಪ್ಪಿರುವರು. ಅಂದರೆ ಈ ಮೂವರು ಕವಿಗಳು ಪ್ರಭುಲಿಂಗಲೀಲೆಯ ಕರ್ತನಾದ ಚಾಮರಸನ ಸಮಕಾಲಿಕರು. ಒಟ್ಟಿನ ಮೇಲೆ ಶುದ್ಧ ವಿರಕ್ತ ಸಾಂಪ್ರದಾಯದ ಪ್ರವಾಹವು ಸಮಯ ಭೇದದಿಂದ ಕಲಕಾಗುವದಕ್ಕಿಂತ ಮುಂಚಿತವೇ ಈ ಕವಿಗಳು ಈ ಪದ್ಯಗಳನ್ನು ರಚಿಸಿರುವರು. ಮತ್ತು ಇದು ವರೆಗೆ ಮಗಿಯನರೇಂದ್ರನವು ೭೬, ಚನ್ನಶ್ರೀಭುವಿನವು ೧೬೦, ಮತ್ತು ಗುರುಬಸವನವು ೧೫ ಹಾಗೂ ಬೇರೆ ಭಕ್ತರವು ೪೬ ಹೀಗೆ ೨೯೭ ಪದ್ಯಗಳು ಪ್ರಕಟವಾಗಿರುವವು. ಅವುಗಳಲ್ಲಿ ಶ್ರೀಮದನಾದಿ ಅಲ್ಲಮ ಪ್ರಭುದೇವರಿಗೆ ೧ ಪ್ರಭು, ೨ ಅಲ್ಲಮಪ್ರಭು, ೩ ಬಸವಪ್ರಭು, ೪ ಚೆನ್ನ ಪ್ರಭು, ೫ ಮಗಿಯಪ್ರಭು, ೬ ಜಂಗಮಲಿಂಗ, ೭ ಮಗಿಯ ಅಲ್ಲಮ, ೮ ಮಾಯಾಕೋಳಾಹಳ, ೯ ಆದಿಲಿಂಗ, ೧೦ ಅಲ್ಲಮ, ೧೧ ಅಲ್ಲಯ್ಯ, ೧೨ ನಿರ್ಮಾಯ, ೧೩ ಗುಹೇಶ್ವರ, ೧೪ ನಿರಂಜನ, ೧೫ ಸೊಗ್ಗಯ, ೧೬ ತೇರದಾಳವಾಸ, ೧೭ ಬಸವ ಪ್ರಾಣೇಶ, ೧೮ ಬಸವ ಸಂಪ್ರೀತ, ೧೯ ಪಟ್ಟದೊಡೆಯ, ೨೦ ಮಗೀಶ, ೨೧ ಗೋಪ್ರಭು, ೨೨ ಬಸವಪತ್ನಿ ಮುಂತಾದ ಹೆಸರುಗಳು ಒಟ್ಟಿಗೆ ನಾಲ್ನೂರು ಸಾರಿಗಿಂತಲೂ ಹೆಚ್ಚಿಗೆ ಇರುವದನ್ನು ಓದುಗರು ಕಾಣಬಹುದು. ಆಕ್ಷೇಪನಿರಸನದ ೪ ನೇ ಪ್ರಶ್ನದಲ್ಲಿ "ತೊಂಟದಾರ್ಯರು ತಮ್ಮ ವಚನ ಗ್ರಂಥಗಳಲ್ಲಿ ತಮ್ಮ ಪೂರ್ವಾಶ್ರಾಧಿ

ಪತಿಗಳ ಹೆಸರನ್ನು ಹೇಳುವಾಗ ಬಸವಪ್ರಭುಸ್ವಾಮಿಗಳು ಕೆಸೆಯವರಾಗಿ ಉಲ್ಲೇಖಿಸಿದ್ದಾರೆ. ಆದರೆ ಶೂನ್ಯ ಸಿಂಹಾಸನಕ್ಕೆ ಅಲ್ಲಮಪ್ರಭುವೇ ಮೂಲಿಗನಾಗಿದ್ದರಿಂದ ಬಸವಪ್ರಭು ಎಂದು ಅವರು ಇಲ್ಲಿ ಕೆನೆಯವರಾಗಿದ್ದು ಹೇಳಲಿಕ್ಕೆ ಕಾರಣವೇನು," ಎಂದು ರಾವಸಾಹೇಬ ಹಳಕಟ್ಟಿಯವರು ಕೇಳಿರುವರು.

ತೋಂಟದಾರ್ಯರ ವಚನದಲ್ಲಿಯೂ ನಿರಂಜನವಂಶರತ್ನಾಕರಗ್ರಂಥದಲ್ಲಿಯೂ ಒಂದೇ ವಂಶಾವಳಿಯನ್ನು ಕೊಟ್ಟಂತೆ ಶ್ರೀಯುತ ಹುಂಡೇಕಾರ ವಕೀಲರು ತಮ್ಮ ಲೇಖದಲ್ಲಿ ಬರೆದದ್ದನ್ನು ರಾವಸಾಹೇಬ ಹಳಕಟ್ಟಿಯವರು ಒಪ್ಪಿರುವರು. ಒಪ್ಪಿಗೆ ಇಲ್ಲವಾಗಿದ್ದರೆ ತಮ್ಮ ಹತ್ತರಿರುವ ನಿರಂಜನ ವಂಶರತ್ನಾಕರದೊಳಗಿನ ವಂಶಾವಳಿಯನ್ನು ಪ್ರಸಿದ್ಧಪಡಿಸಬೇಕಾಗಿತ್ತು, ಅವನ್ನು ಸಹ ಮಾಡಿಲ್ಲ. ಇದರಂತೆಯೇ ನಿಜಾಚರಣೆ ಎಂಬ ಗ್ರಂಥದಲ್ಲಿಯೂ ಕೂಡ ಇದೇ ಗುರುಪರಂಪರೆಯನ್ನು ಹೇಳಿದೆ. ಈ ಗ್ರಂಥವು ರಬಕವಿಯಲ್ಲಿ ಅಚ್ಚಾಗಿದೆ. ಹೀಗಿರುತ್ತಿರಲು ಇತ್ತೀಚೆಗೆ ಅಚ್ಚಾದ ನಿರಂಜನವಂಶರತ್ನಾಕರದಲ್ಲಿ ಮಾತ್ರ ಅಲ್ಲಮ, ಚನ್ನಬಸವ, ಸಿದ್ಧರಾಮಾದಿಗಳ ಹೆಸರುಗಳನ್ನು ಹೇಳಿ ಆಮೇಲೆ ತೋಂಟದಾರ್ಯರ ವಚನದಲ್ಲಿರುವಂತೆ ಅನಾದಿಗಣೇಶ ಮೊದಲಾದವರ ಹೆಸರುಗಳನ್ನು ಹೇಳೋಣವಾಗಿದೆ. ಇದರ ಮರ್ಮವೇನೋ ತಿಳಿಯದು. ಶೂನ್ಯ ಸಿಂಹಾಸನಕ್ಕೆ ಅಲ್ಲಮನು ಮೂಲಪುರುಷನೆಂದು ತಿಳಿಸಿದ್ದಾರೆ. ಬಸವಪ್ರಭುವಿನ ಹಿಂದಿನ ೮ ಜನರ ಹೆಸರುಗಳು ಕೈಲಾಸದೊಳಗಿನ ಪ್ರಮಥರ ಹೆಸರುಗಳಿದ್ದಂತೆ ಕಂಡು ಬರುತ್ತದೆ. ಮತ್ತು ಈ ೮ ಹೆಸರುಗಳು ಬಸವಪ್ರಭುವಿನ ಮುಂದಿನ ಹೆಸರುಗಳಂತೆ ವಿರಕ್ತರೊಳಗೆ ಪ್ರಚಾರದಲ್ಲಿಲ್ಲವು. ಮತ್ತು ಈ ೮ ರಲ್ಲಿ ನಿರ್ವಾಯನೆಂಬ ಒಬ್ಬ ಗಣಾಧ್ಯಕ್ಷನು ಅಲ್ಲಮಪ್ರಭುವಾಗಿ ಭೂಲೋಕದಲ್ಲಿ ಅವತರಿಸಿದನೆಂದು ಹರಿಹರನು ತನ್ನ ಪ್ರಭುದೇವರ ರಗಳೆಯಲ್ಲಿ ಹೇಳಿರುವನು. ಆದುದರಿಂದ ಅಲ್ಲಮಪ್ರಭುವೆಂದರೆ ಬಸವಪ್ರಭು ಮತ್ತು ಬಸವಪ್ರಭುವೆಂದರೆ ಅಲ್ಲಮಪ್ರಭು ಹೀಗೆ ಹೇಳುವದರಲ್ಲಿ ಏನೂ ಸಂಶಯವಿಲ್ಲ. ಮೇಲಾಗಿ ಈ ವಿಷಯದಲ್ಲಿ ತೊಂಟದಾರ್ಯರ ವಚನಕ್ಕಿಂತಲೂ ಹೆಚ್ಚಿನ ಪ್ರಾಶಸ್ತ್ಯವು ಇತರ ಗ್ರಂಥಗಳಿಗೆ ಕೊಡಲಿಕ್ಕೆ ಬರಲಾರದು. ಶ್ರೀಯುತ ಎಸ್. ಆರ್. ಶ್ರೀನಿವಾಸಮೂರ್ತಿಗಳು "ಪ್ರಭುಲಿಂಗಲೀಲೆಯ ಸಂಗ್ರಹ"ದ ಪೀಠಿಕೆಯಲ್ಲಿ ಕವಿ, ಕಾವ್ಯ ಹಾಗು ಅದರಲ್ಲಿಯ ಮುಖ್ಯ ವಿಷಯಗಳ ಸಂಬಂಧವಾಗಿ ತಾರತಮ್ಯದಿಂದ ಕಾಲಮಾನ ಹಾಗು ಸ್ಥಾನಗಳನ್ನರಿತು ಜನರ

ಮನಸ್ಸನ್ನು ನೋಯಿಸದಂತೆ ಲಕ್ಷ್ಮೀಕುಮಾರ ವ್ಯಾಸಾದಿಗಳ ಕಾವ್ಯಗಳ ಕೂಡ ತುಲನೆಯನ್ನು ಮಾಡಿ ಕನ್ನಡಿಗರಿಗೆ ಬೋಧವಾಗುವಂತೆ ಹೆಚ್ಚಿಗೆ ವಿಸ್ತಾರಪೂರ್ವಕವಾಗಿ ಬರೆಯಬೇಕಾಗಿತ್ತು. ಹಾಗೇ ಮಾಡದೆ ಮುಖ್ಯವಾದ ವಿಷಯಗಳನ್ನು ಬಿಟ್ಟು ಮುಖ್ಯವಲ್ಲದವುಗಳ ಬಗ್ಗೆ ಹೆಚ್ಚಿಗೆ ಬರೆಯುವದೆಂದರೆ, ಭಾರತ ಗ್ರಂಥಕ್ಕೆ ಪ್ರಸ್ತಾವನೆಯನ್ನು ಬರೆಯುವವನು ಅದರಲ್ಲಿಯ ಉತ್ತಮವಾದ ರಸಗುಣಾದಿಗಳನ್ನು ಬಿಟ್ಟು, ದ್ರೌಪದಿಯು ಐದು ಮಂದಿ ಗಂಡಂದಿರಕೂಡ ಹೇಗೆ ವ್ಯವರಿಸುತ್ತಿದ್ದಳು, ಅಗಸ್ತ್ಯನು ಕುಂಭದಲ್ಲಿಯೂ ಪಾಗು ಕರ್ಣನು ಕಿವಿಯಲ್ಲಿಯೂ ಹೇಗೆ ಹುಟ್ಟಿದರು ಎಂಬವರ ಬಗ್ಗೆ ಹೆಚ್ಚಿಗೆ ವಿವೇಚಿಸುವಂಥ ಅವಿವೇಕಿಯಂತೆ ಹಾಸ್ಯಾಸ್ಪದವಾಗುವದು. ತುಂಬಿಯು ಕಮಲದ ಮಧುರವಾದ ಮಧುರಸಪಾನವನ್ನು ಮಾಡಿ ಮನ ಬಲ್ಲಂತೆ ಚರಿಸುವದನ್ನು ಕಣ್ಣಾರೆ ಕಂಡೂ, ಆ ರಸಾಸ್ವಾದವನ್ನರಿಯದ ಕಪ್ಪೆಯು ಅದೇ ಕಮಲದ ಬುಡದಲ್ಲಿರುವ ಕೆಸರಿನಲ್ಲಿಯೇ ಆನಂದ ಪಡುವಂತೆ ಈ ಲೇಖಕರ ಅಜ್ಞಾನ ದೃಷ್ಟಿಯು ತೋರುವದು. ಕಾವ್ಯದೊಳಗಿನ ಅಮೌಲ್ಯವಾದ ಗುಣಗಳನ್ನು ವರ್ಣಿಸುವದು ಗುಣಗ್ರಾಹಿಗಳಾದ ವಾಚ್ಯಮು ಪ್ರೇಮಿಗಳ ಕೆಲಸವು. ಇನ್ನು ಕಾವ್ಯಗಳಲ್ಲಿ ಇಲ್ಲದ ಸಂಗತಿಗಳ ಬಗ್ಗೆ ಚರ್ಚಿಸುವದೆಂದರೆ "ಅವ್ಯಾಪಾರೇಷು ವ್ಯಾಪಾರಃ" ವಾಗುವದು. ಇದರಲ್ಲಿ ಶ್ರೀಯುತ ಶ್ರೀನಿವಾಸಮೂರ್ತಿಗಳದಾದರೂ ಅದೇ ಹಾಡಾಗಿರುವದು. ಅದು ಹೇಗಂದರೆ— (೧) ಚಾಮರಸನು ತನ್ನ ಗ್ರಂಥದಲ್ಲೆಲ್ಲಿಯೂ ಶ್ರೀಪ್ರಭುವಿನ ಜೈಲಾದ ವಿಷಯಕ್ಕೆ ಹೇಳಿಲ್ಲವು. ಇದನ್ನು ಶ್ರೀಯುತ ಶ್ರೀನಿವಾಸಮೂರ್ತಿಗಳು ೩೭ ನೆಯ ಪುಟದಲ್ಲಿ ಒಪ್ಪಿ, ಪುನಃ ಅದರ ಬಗ್ಗೆಯೇ ಚರ್ಚಿಸುವದೂ, (೨) ಅಲ್ಲಮಪ್ರಭುವಿಗೆ ಅಲ್ಲಯ್ಯನೆಂದು ಬೇರೆ ಹೆಸರು ಚಾವರಸನು ಹೇಳದಿರುವದರಿಂದ ಅಲ್ಲಯ್ಯ ಈ ಹೆಸರು ಬೇರೊಬ್ಬ ಶಿವಶರಣರದು ಇರಬಹುದೆಂದೂ, (೩) ಚಾಮರಸನ ಕಾವ್ಯದಲ್ಲಿ ಅಕ್ಕಮಹಾದೇವಿಯು ಕುಮಾರಿ ಎಂದು ಇದ್ದದ್ದು ಅವಳ ಲಗ್ನವಾಗತ್ತೆಂದೂ ಹೇಳಿ ದುರ್ಬಲ ಪ್ರಮಾಣಗಳನ್ನು ಕೊಟ್ಟು ಅವುಗಳನ್ನು ಸಿದ್ಧಪಡಿಸಲಿಕ್ಕೆ ಯತ್ನಿಸಿರುವರು. ಅದು ಹೇಗೆ ಸಾಧ್ಯವು? ಬೇಕಾದರೆ ಇವುಗಳ ವಿಷಯವಾಗಿ ಐತಿಹಾಸಿಕ ದೃಷ್ಟಿಯಿಂದ ಸ್ವತಂತ್ರ ಗ್ರಂಥಗಳನ್ನು ಬರೆದು ಸಿದ್ಧವಾಡಬೇಕು. ಇದನ್ನು ಬಿಟ್ಟು ಸುರಿತ ಲೇಖಕರು ಹೀಗೆ ಮಾಡಿದವು ಒಳಿತಲ್ಲವು. ಒಟ್ಟಿನ ಮೇಲೆ ಪ್ರ. ಲಿ. ಸಂಗ್ರಹದ ಪೀಠಿಕೆಯಿಂದ "ಕವಡಿಚಾಫಾಯಿದಾನಾಹಿ, ಅಣಿ ಘಟಕೇಚಿ ಘುರಸತ ನಾಹಿ" ಎಂಬಂತೆಯಾಗಿದೆ.

ವೀರಶೈವ ಚಾರಿತ್ರ ರಕ್ಷಣ.

ಲೇಖಕ:— ಶ್ರೀಯುತ ಜೀರಿಗೆ ಬಸವಲಿಂಗಪ್ಪ, ಅರಳೀಪೇಟೆ ಬೆಂಗಳೂರ ಸಿಟಿ.

ಬಸವಾದಿ ಪ್ರಮಥರ ನಿಜತತ್ವಗಳೆಂಬ ಅವ್ಯತವಲ್ಲಿಗಳು ಈಚಿನ ಬಹಿಃಪ್ರಕಾಶಕಾಂಕ್ಷೆಗಳ ಕಲ್ಪಿತಗಳೆಂಬ ಮುಳ್ಳು ಗಿಡಗಳಿಂದ ಆವರಿಸಲ್ಪಟ್ಟು ಲಿಂಗಾಯತ ಮತದ ನಿಜಸ್ವರೂಪವು ಮಾಜಿ ಹೋಗಿ ಕೃತ್ರಿಮದ ಬಣ್ಣದಿಂದ ಕಲ್ಪಿತರೂಪವು ಬಂದಿರುತ್ತದೆ. ಇದು ಬಹಳ ಅನ್ಯಾಯವಾಗಿದೆ. ಬಸವಾದಿ ಎಲ್ಲರ ಶರಣರ ವಚನಗಳನ್ನು ಓದಿ ನೋಡಿದರೆ ಅವರು ಹೋದ ಮಾರ್ಗವೇ ಬೇರೆ, ಅವರ ನಂತರ ಡಾಂಭಿಕದಾಶೆಯಿಂದ ಈಚಿನವರು ಕಲ್ಪಿಸಿಕೊಳ್ಳುತ್ತ ಬಂದಿರುವ ಹಾದಿಯೇ ಬೇರೆಯಾಗಿರುತ್ತದೆ. ಬಸವಾದಿಗಳು ದೇಶದ ಸಮಾಜಗಳ ಸಂಕಟಗಳನ್ನು ನೋಡಿ ಮರುಕಬಟ್ಟು ಅದನ್ನು ನಿವಾರಿಸುವದಕ್ಕಾಗಿ ಅತ್ಯಂತ ದೇಹ ಚಿತ್ತ ಶ್ರಮಗಳಿಂದ ಸುಧಾರಣೆಯ ತತ್ವಗಳನ್ನು ಮಾಡಿ ಅದನ್ನು ಜನವರ್ಗಕ್ಕೆ ಕೊಟ್ಟು ತಾವು ನಡೆದು ತೋರಿಸಿ ಮಹೋಪಕಾರವನ್ನು ಮಾಡಿ ತಮ್ಮ ಮಣಿಹವನ್ನು ತೀರಿಸಿಕೊಂಡು ಇಹಲೋಕವನ್ನು ಬಿಟ್ಟು ಹೋದರು.

ಈಚಿನವರಿಗೆ ಆಗಿನ ಬಿಸಿ ತಪ್ಪಿ ಅಪ್ಪ ಮಾಡಿದ್ದು ಮಗನಿಗೆ ಸೊಪ್ಪಿನ ಸವಾನವೆಂಬ ಗಾದೆಯಂತೆ ಅಂತಃಕರಣ ದೃಷ್ಟಿ ತಪ್ಪಿ ಆಡಂಬರದ ದೃಷ್ಟಿಯುಂಟಾಗಿ ಅದು ಹಾಗಿದ್ದರೆ ಸರಿಯಲ್ಲ, ಹೀಗಿದ್ದರೆ ಸರಿ ಎಂದು ನಿಜವನ್ನು ಬದಲಾಯಿಸಿ ಓಲೆಕಂತಗಳು ಬಿಟ್ಟಿಯಾಗಿವ ಎಂದು ಕಲ್ಪನೆಗಳನ್ನು ಬರೆದು ಬಸವಾದಿ ಪ್ರಮಥರ ತತ್ವಗಳ ನಿಜಾಂಶಗಳನ್ನೂ, ಅವರ ವಿಷಯಕ ಚರಿತ್ರೆಯ ನಿಜಾಂಶಗಳನ್ನೂ ಮಾಜಿ ಚರಿತ್ರ ಭಗ್ನ ಮಾಡಿರುತ್ತಾರೆ. ಭಾರತ ರಾಷ್ಟ್ರದ ಚರಿತ್ರಕಾರರೇ, ಕರ್ನಾಟಕ ದೇಶದ ಚರಿತ್ರಕಾರರೇ, ಇವಕ್ಕೆ ಈಗ ನೀವು ಏನು ಮಾಡುತ್ತೀರಿ? ರುಚಿಕರವೋ, ರುಚಿಕರವಲ್ಲವೋ— ಚರಿತ್ರದ ನಿಜವುಳಿಯಬೇಕಲ್ಲವೇ? ಮುಂದಿನವರಿಗೆ ಹಿಂದಿನವರು ನಿಜವಾಗಿ ಹೇಗಿದ್ದರು, ಅವರ ನಡೆನುಡಿಗಳು ಹೇಗಿದ್ದವೆಂಬದನ್ನು ತಿಳಿದುಕೊಂಡರೆ ಅದು ಪ್ರಯೋಜನಕಾರಿಯಲ್ಲವೇ? ಹಿಂದಿನವರು ಒಂದು ವಿಧವಾಗಿದ್ದು, ಮುಂದಿನವರು ಒಂದು ವಿಧವಾಗಿ

ತಿಳಿದುಕೊಂಡರೆ ಅದು ಹಾನಿಕರವಲ್ಲವೆ? ಮೇಲಾಗಿ ನಿಜವು ಉಳಿಯಬೇಕಾದ ಜಗತ್ತಿನ ಸದ್ವಸ್ತುವಲ್ಲವೆ?

ಲಿಂಗಾಯತರೇ, ಲಿಂಗಾಯತ ಚರಿತ್ರೆಯ ಮೇಲೆ ಅಭಿಮಾನವುಳ್ಳ ಬ್ರಾಹ್ಮಣರೇ, ನೀವು ಚರಿತ್ರೆಯ ನಿಜವುಳಿಯುವದಕ್ಕೆ ನಿರ್ವಂಚನೆಯಿಂದ ಪ್ರಯತ್ನವಾಡಿರೆಂದು ನಾನು ಬೇಡಿಕೊಳ್ಳುತ್ತೇನೆ. ರುಚಿ ನೋಡಬೇಡಿರಿ. ನಿಜವನ್ನು ನೋಡಿರಿ. ಲಿಂಗಾಯತರು ಇನ್ನೂ ಮುಂದುವರಿದಿರುವದಿಲ್ಲ. ಬೆಳಕಿನ ಆಕಾಂಕ್ಷೆ ಇನ್ನೂ ಲಿಂಗಾಯತರಲ್ಲಿ ಹೋಗಿಲ್ಲ. ಇಂದಿನ ವಿಜ್ಞಾನ ವಿದ್ಯವನ್ನು ಪಡೆದ ಬ್ರಾಹ್ಮಣ ವಿದ್ವನ್ಮಣಿಗಳೇ ಲಿಂಗಾಯತ ಮತದ ನಿಜತತ್ವದ, ಲಿಂಗಾಯತರ ಮತದ ನಿಜ ಚರಿತ್ರೆಯ ರಕ್ಷಣೆಯನ್ನು ಮಾಡಬೇಕಾಗಿದೆ. ನಿಜಚರಿತ್ರೆಯೇ ಜಗತ್ತಿನ ರತ್ನವು. ನಿಜಚರಿತ್ರೆಯೇ ಜಗತ್ತಿನ ಚೈತನ್ಯವು. ನಿಜಚರಿತ್ರೆಯೇ ಜಗತ್ತಿನ ಸುಮಾರ್ಗಬೋಧಕವು. ನಿಜಚರಿತ್ರೆಯೇ ಜ್ಞಾನಪ್ರಸಾರಕವು. ನಿಜಚರಿತ್ರೆಯೇ ಹರ್ಷಪ್ರಸಾರಕವು. ನಿಜಚರಿತ್ರೆಯೇ ಚಿತ್ತ ಸ್ಥಿರೀಕರಣಸಾಮಗ್ರಿಯು. ನಿಜ, ಬಸವೇಶ್ವರನು ಬ್ರಾಹ್ಮಣ್ಯವನ್ನು ನಿರಾಕರಿಸಿದನು. ನಿಜ, ಬಸವೇಶ್ವರನು ಜನಿವಾರವನ್ನು ದೂರೀಕರಿಸಿದನು. ನಿಜ, ಬಸವೇಶ್ವರನು ಬ್ರಾಹ್ಮಣರ ಸೂತಕಗಳನ್ನು ನಿರಾಕರಿಸಿದನು. ನಿಜ, ಬಸವೇಶ್ವರನು ಬ್ರಾಹ್ಮಣರ ಜಾತಿಗಳನ್ನು ನಿರಾಕರಿಸಿದನು. ನಿಜ, ಬಸವೇಶ್ವರನು ವೇದಾದಿಗಳಿಗೆ ಸಾಧಾರಣ ಸ್ಥಲ ಕೊಟ್ಟನು. ನಿಜ, ಬಸವೇಶ್ವರನು ತನ್ನ ವಚನಗಳೆಂಬ ಹೊಸ ಮಾರ್ಗವನ್ನು ಕಲ್ಪಿಸಿದನು. ಬಸವಣ್ಣನು ತನಗೆ ತೋರಿದಂತೆ ತಾನು ಮಾಡಿದನು. ಅದು ಕೆಲವರ ದೃಷ್ಟಿಯಲ್ಲಿ ಒಳ್ಳೆಯದಾಗಿ ಕಾಣಬಹುದು. ಕೆಲವರ ದೃಷ್ಟಿಯಲ್ಲಿ ಕೆಟ್ಟದ್ದಾಗಿ ಕಾಣಬಹುದು. ಆದರೆ ಇದ್ದದ್ದನ್ನು ಜಗತ್ತಿಗೆ ತೋರಿಸಬೇಕಲ್ಲವೆ? ಬಸವಣ್ಣನ ತತ್ವಗಳೆಂಬ ಶಿಲೆಯ ಪಾತ್ರೆಗಳಿಗೆ ಚಿನ್ನದ ಲೇಪವೇತಕ್ಕೆ? ಬೆಳ್ಳಿಯ ಲೇಪವೇತಕ್ಕೆ? ಚಿನ್ನ, ಬೆಳ್ಳಿ ಒಂದು ವಿಧದಲ್ಲಿ ಶ್ರೇಷ್ಠವಾಗಿದ್ದರೆ, ಶಿಲೆಯು ಒಂದು ವಿಧದಲ್ಲಿ ಉತ್ಕೃಷ್ಟವಲ್ಲವೆ? ವಿಜ್ಞಾನ ಪಂಡಿತರಾದ ಬ್ರಾಹ್ಮಣರು ಈ ದೃಷ್ಟಿಯಿಂದ ಲಿಂಗಾಯತ ಮತದ ನಿಜ ಚರಿತ್ರೆಯನ್ನು ಹೊರಪಡಿಸಿದು ವಿಶ್ವಚಕ್ರದ ಮುಂದಿಟ್ಟು ಚರಿತ್ರ ರಕ್ಷಣೆಯನ್ನು ಮಾಡಬೇಕು. ಯಾರ ಮುಡಿಬಡಿತಗಳಿಗೂ ಭಯಪಡಬಾರದು.

ಲಿಂಗಾಯತ ನಿದ್ವಾಂಸರಾದರೂ ಇದೇ ದೃಷ್ಟಿಯಿಂದ ಕೆಲಸ ಮಾಡಬೇಕು. ಅನೇಕ ಸುಳ್ಳುಗಳು ನಮ್ಮ ಮತದಲ್ಲಿ ಕೆಲಕಾಲದಿಂದಲೂ

ಈ ವರೆಗೂ ಅವರಿಸಿ ಸತ್ಯವು ಮುಚ್ಚಿಹೋಗಿದೆ. ನಾವು ನಿಜವಾಗಿ ಎಂತವರೋ ಅಂತವರಾಗಿ ಕಾಣಿಸಿಕೊಳ್ಳಬೇಕೆಂಬುದು ನನ್ನ ಇಷ್ಟವು. ಮೊದಲು ಚರಿತ್ರೆಯನ್ನು ಉಳಿಸಿ, ಆ ನೇಲೆ ಯಾವ ಕೆಲಸ ಮಾಡಬೇಕಾದರೂ ಮಾಡೋಣ. ಇಲ್ಲದ್ದಕ್ಕೆ ಹೋಗಬಾರದು, ಇದ್ದದ್ದನ್ನು ಬಿಡಬಾರದು. ಅನೇಕ ಸುಳ್ಳುಗಳು ಈ ವರೆಗೂ ಅವರಿಸುತ್ತಾ ಬಂದದ್ದು ಹಾಗಿರಲಿ, ಈಗಲೂ ದ್ವಿಗುಣ ತ್ರಿಗುಣವಾಗಿ ಹಬ್ಬುತ್ತ ಅವೆ. ಪಾಪಸು ಕಳ್ಳಿಯಂತೆ ಮಳೆಯಿಲ್ಲದೇನೇ ಕರಲು ನೆಲದಲ್ಲಿಯೇ ಹಬ್ಬುತ್ತಲಿವೆ. ಈ ಪಾಪಸು ಕಳ್ಳಿಗಳನ್ನು ಜಾಗ್ರತೆ ಕಿತ್ತು ಹಾಕಬೇಕು. ನೂತನ ಗ್ರಂಥಗಳು ಹುಟ್ಟುತ್ತಲಿವೆ. ಹಿಂದಿನವರು ಬರೆದದ್ದರಲ್ಲಿ ಕೆಲವನ್ನು ತೆಗೆದು ಹಾಕಿ, ಕೆಲವನ್ನು ಹೊಸದಾಗಿ ಸೇರಿಸಿ, ಕೆಲವನ್ನು ಬದಲಾವಣೆ ಮಾಡಿ ವ್ಯಾಕರಣದ ಲೋಪ, ಆಗಮ, ಆದೇಶ ಎಂಬ ಸಂಧಿಗಳನ್ನು ನಡಿಸಿ ಹೊಸ ಕವಿತ್ವಗಳನ್ನು ಬರೆದು ಅದನ್ನು ಜನ ಸಾಮಾನ್ಯದಲ್ಲಿ ವಾಡನದ್ವಾರಂ ಪ್ರಚಾರಪಡಿಸುತ್ತಲಿರುವದರಿಂದ ಅತ್ಯಂತ ಹಾನಿಕರವಾಗಿರುವದೆಂದು ನನಗೆ ತೋರುತ್ತದೆ. ಇವುಗಳನ್ನೆಲ್ಲವನ್ನು ಸತ್ಯ ದೃಷ್ಟಿಯಿಂದ ಸಮಾಜದವರು ಶೋಧನೆ ಮಾಡಿ ಇದರಿಂದ ಆಗತಕ್ಕ ಕೆಟ್ಟ ಪರಿಣಾಮವನ್ನು ತಡೆದು ನಿಜರಕ್ಷಣೆಗೆ ಸಹಾಯಮಾಡಬೇಕೆಂದು ನಾನು ವಿನಯ ಪೂರ್ವಕವಾಗಿ ತಿಳಿದವರನ್ನು ಕೇಳಿಕೊಳ್ಳುತ್ತೇನೆ.

ಬಸವೇಶ್ವರನ ನಿಜ ವಿಚಾರವೇನು, ಬಸವೇಶ್ವರನಿಗಿಂತ ಮುಂಚೆ ಶೈವದ ಸ್ಥಿತಿ ಹೇಗಿತ್ತು, ಬಸವೇಶ್ವರನಿಗಿಂತ ಮೊದಲು ಷಟ್‌ಸ್ಥಲದ ಕುರುಹು ಏನಾದರೂ ತೋರುತ್ತವೆಯೋ, ವೀರಶೈವ ಶಬ್ದ ವಿಚಾರವೇನು, ಅದು ಬಸವೇಶ್ವರನಿಗಿಂತ ಮೊದಲು ತೋರಿಬರುತ್ತದೆಯೇ, ಲಿಂಗಿ ಶಬ್ದ ಪ್ರಯೋಗದ ಅರ್ಥವೇನು, ಆಗಮಗಳಲ್ಲಿ ಶೈವ ಸಂಬಂಧವಾದವುಗಳು ಯಾವಾಗ ಆದವು, ವೀರಶೈವ ಸಂಬಂಧವಾದವುಗಳು ಯಾವಾಗ ತಲೆದೋರಿದವು, ಅಲ್ಲಮಪ್ರಭುದೇವರು, ಚನ್ನಬಸವೇಶ್ವರ, ಸಿದ್ಧರಾಮೇಶ್ವರರೆಂಬ ವ್ಯಕ್ತಿತ್ರಯಗಳ ನಿಜ ವಿಚಾರವೇನು, ಬಸವೇಶ್ವರನು ಈ ಮೂವರನ್ನು ಪ್ರಥಮ ಗುರುಸ್ಥಾನಕ್ಕೆ ಸೇರಿಸಿದುದರಲ್ಲಿ ಯಾವ ಅದ್ವಿತೀಯ ಕಾರ್ಯವನ್ನು ಮಾಡಿದನು, ಇವರುಗಳ ವಿಚಾರದಲ್ಲಿ ಈಚಿನ ಗ್ರಂಥಗಳಲ್ಲಿ ಯಾವ ಅಚ್ಛಾದನೆಗಳು ಮಾಡಲ್ಪಟ್ಟವೆ, ಅಚ್ಛಾದನೆ ಮಾಡುವದರಲ್ಲಿ ಈಚಿನವರು ಏನು ಲೋಪವನ್ನು ಮಾಡಿದರು, ಬಸವಾದಿ ಶರಣರಿಗೆ ಇದ್ದಿಲ್ಲದ

ಆಡಂಬರದ ಅಭಿಮಾನವು ಈಚಿನವರಿಗೆ ಉಂಟಾಗಿ ಯಾವ ಕಲ್ಪಿತಗಳು ಮುಖದೋರಿದವು, ಇದರಿಂದ ನಿಜಕ್ಕೆ ಏನು ಲೋಪ ಬಂತು, ಬಸವಾದಿಗಳ ಯಾವ ಸರಳ ತತ್ವಗಳು ಹಾರಿಹೋಗಿ ಕ್ಲಿಷ್ಟ ವಿಧಾನಗಳು ಮುಖವಿಟ್ಟವು, ಇವೇ ಮೊದಲಾದ ವಿಚಾರಗಳನ್ನು ಮಾಡಿ ಹುಸಿಯನ್ನು ತೂರಿ ಹಾಕಿ ನಿಜವನ್ನು ಗಟ್ಟಿವಾಡಿ ತೋರಿಸಬೇಕಾದ ಮಹತ್ಕಾರ್ಯವು ಚಾರಿತ್ರಕಾರರ ಮೇಲೆ ಬಿದ್ದ ಭಾರವಾಗಿರುತ್ತದೆ.

ಲಿಂಗಾಯತರ ಮತಗ್ರಂಥವೆಂದರೆ ಬಸವಾದಿಗಳ ವಚನರಾಶಿಯೇ! ಅವುಗಳೆಲ್ಲವೂ ಸರಳವಾದ, ಉತ್ತೇಜಕವಾದ, ಅರ್ಥಗರ್ಭಿತವಾದ, ಲೋಕವ್ಯವಹಾರಜ್ಞಾನಪೂರಿತವಾದ ಅಚ್ಚ ಕನ್ನಡ ನುಡಿಯಲ್ಲಿ ಬರೆದಿರುವದರಿಂದ ಲಿಂಗಾಯತರ ಮತ ಭಾಷೆಯು ಕನ್ನಡವೆಂಬುದರಲ್ಲಿ ಯಾವ ಅಡ್ಡಿಯೂ ಇರುವದಿಲ್ಲ. ಆದದರಿಂದ ಲಿಂಗಾಯತರು ಕನ್ನಡಕ್ಕೆ ಹೆಚ್ಚು ಗಮನಕೊಡಬೇಕು. ಇದರಿಂದ ಲಿಂಗಾಯತರು ಸಂಸ್ಕೃತವನ್ನು ಓದಬಾರದೆಂಬ ಅಭಿಪ್ರಾಯವಲ್ಲ. ಜ್ಞಾನಾಭಿವೃದ್ಧಿಗೆ ಸಂಸ್ಕೃತ, ಇಂಗ್ಲಿಷ ಮೊದಲಾದ ಭಾಷೆಗಳನ್ನು ಓದಲೇಬೇಕು. ವಿದ್ಯಕ್ಕೆ ಬೇಕಾದುದೊಂದು, ಬೇಡವಾದುದೊಂದು ಇರುವದಿಲ್ಲ. ವಿದ್ಯವು ಯಾವ ಮುಖದಲ್ಲಿ ತೋರಿಸಿಕೊಂಡರೂ ಅದು ಗಣ್ಯವೇ. ಲಿಂಗಾಯತರ ಅನೇಕ ಗ್ರಂಥಗಳು ಕನ್ನಡದಿಂದ ಸಂಸ್ಕೃತಕ್ಕೆ ಹೋಗಿರುತ್ತವೆಯೇ ಹೊರತು, ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವದಿಲ್ಲ. ಪ್ರಭುಲಿಂಗಲೀಲೆಯು ಮೊದಲು ಕನ್ನಡದಲ್ಲಿ ಆಗಿ, ಆಮೇಲೆ ಸಂಸ್ಕೃತಕ್ಕೆ ಹೋಯಿತು. ವಿವೇಕಚಿಂತಾಮಣಿಯು ಮೊದಲು ಕನ್ನಡದಲ್ಲಿ ಆಗಿ, ಆಮೇಲೆ ಸಂಸ್ಕೃತಕ್ಕೆ ಹೋಯಿತು. ಬಸವ ಪುರಾಣವು ಮೊದಲು ಹರಿಹರ ರಗಳೆಯಲ್ಲಿ ಕನ್ನಡದಲ್ಲಿದ್ದು ತೆಲುಗಿಗೆ ಹೊರಟು, ಭೀಮಕವಿಯ ಬಸವ ಪುರಾಣದ ಕನ್ನಡಕ್ಕೆ ಬಂದು, ಆ ನಂತರ ಸಂಸ್ಕೃತಕ್ಕೆ ಹೋಯಿತು. ಷಟ್‌ಸ್ಥಲವು ಮೊದಲು ಕನ್ನಡ ವಚನದಲ್ಲಿ ಆಗಿ, ಆಮೇಲೆ ಸಂಸ್ಕೃತಕ್ಕೆ ಹೋಯಿತು. ಸಂಸ್ಕೃತವನ್ನು ಓದುವವರಲ್ಲಿ ಈ ಬಗ್ಗೆ ಲಿಂಗಾಯತ ನಿಜತತ್ವಗಳಿಗೆ ಹಾನಿ ತಪ್ಪುವಂತೆ ಕಾಣುತ್ತದೆ. ಇದು ಓದಿದವರ ಭ್ರಾಂತಿದೋಷವೇ ಹೊರತು, ಸಂಸ್ಕೃತದ ತಪ್ಪಲ್ಲ. ಸಂಸ್ಕೃತವನ್ನು ಓದುವವರು, ಲಿಂಗಾಯತ ಧರ್ಮದ ನಿಜತತ್ವವ ಅರಿಯದೇ ಸಂಸ್ಕೃತವನ್ನು ಓದಿ ಸುತ್ತಮುತ್ತಣ ಕೆಲವು ಪ್ರಕಾಶಗಳನ್ನು ಅವಲಂಬಿಸಿದುದರಿಂದ ಈ ಲೋಪ ಉಂಟಾಯಿತೇ

ಹೊರತು, ಮತ್ತೆ ಬೇರೆಯಲ್ಲ. ಅಂತು ಬಸವಾದಿ ಪ್ರಮಥರ ತತ್ವ ದೃಷ್ಟಿಯಿಂದ ನೋಡಿದರೆ, ಸಂಸ್ಕೃತವನ್ನು ಓದಿದುದರಿಂದ ಫಲವಾಗಲಿಲ್ಲ. ಅದರ ಬದಲಾಗಿ ಸಮಾಜದಲ್ಲಿ ಕಲ್ಪಿತಗಳು ಉತ್ಪನ್ನವಾಗಿ ಒಡಕುಗಳಿಗೆ ಅನಕಾರವಾಗಿ ಕೇಡುಂಟಾಯಿತು. ಇದು ಶೋಚನೀಯವಾದ ಸಂಗತಿಯಾಗಿರುತ್ತದೆ. ಇವನ್ನು ಸಂಸ್ಕೃತಾಭಿಮಾನಿಗಳು ಗಮನಕ್ಕೆ ತಂದು ತಿದ್ದುಪಾಟು ಮಾಡಿಕೊಂಡರೆ ಸಮಾಜಕ್ಕೆ ಅತ್ಯಂತ ಹಿತಕರವಾಗುವದೆಂದು ನಾನು ಸಂಪೂರ್ಣ ನಂಬುತ್ತೇನೆ.

ಎಲ್ಲ ಲಿಂಗಾಯತರೂ ನಿಜದ ಕಡೆಗೆ ಗಮನವನ್ನು ತಿರುಗಿಸಬೇಕು. ನಿಜವೆಂಬ ಧ್ವಜವನ್ನು ಎತ್ತಿ ಎಲ್ಲರೂ ಜಯಧ್ವನಿ ಮಾಡಬೇಕು. ಪುಸಿಯನ್ನು ಅತ್ತಿತ್ತ ತಳ್ಳಿ ದಿಶಾಂತವನ್ನು ಸೇರುವಂತೆ ತೂರಿಬಿಡಬೇಕು. ಬಸವಾದಿ ಶಿವಶರಣರ ವಚನಗಳನ್ನು ಲಿಂಗಾಯತ ಮತವೇದವೆಂದು ತಿಳಿದು ಸದಾ ವ್ಯಾಸಂಗವಾಡಬೇಕು.

ಪಾಶ್ಚಿಮಾತ್ಯರ ತತ್ವಶಾಸ್ತ್ರ.

ಆಧುನಿಕಕಾಲ ಕ್ರಿ. ಶ ೧೪೫೩ ರಿಂದ ೧೯೩೦.

(ಲೇಖಕ:- ಶ್ರೀಯುತ ವೀರಪ್ಪ ಯಗಟಿ ಬಿ. ಏ. ಎಲ್. ಎಲ್. ಬಿ. ಹಾವೇರಿ.)

(ಮುಂದೆ ಸಾಗಿದ್ದು.)

ಆಧುನಿಕ ತತ್ವಜ್ಞಾನವು ಸನಾತನ ಗ್ರೀಕರ ತತ್ವವಂತೆ ಬಹಿರಂಗಿಕ (*objective*) ವಾದದ್ದಲ್ಲ ಅಥವಾ ಮಧ್ಯವರ್ತಿಕಾಲದಂತೆ ತಾರ್ಕಿಕವಾದದ್ದೂ ಅಲ್ಲ. ಅದರೆ ಅಂತರಂಗಿಕ (*subjective*) ವಾದದ್ದು. ಈ ಕಾಲವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. (೧) ಜ್ಞಾನಾರ್ಜನೆಯ ಕಾಲ (೨) ಜ್ಞಾನೋದಯಕಾಲ (೩) ಜರ್ಮನ್ತತ್ವ (೪) ೧೯ನೇ ಶತಮಾನದ ತತ್ವ.

(೧) ಜ್ಞಾನಾರ್ಜನೆಯ ಕಾಲ ೧೪೫೩—೧೬೯೦. ರೋಮಪಟ್ಟಣದ ಧಾರ್ಮಿಕ ಕೇಂದ್ರವು ಸ್ಥಿರವಾಗಿ ಉಳಿಯಲಿಲ್ಲ. ವಿಟೆನ್‌ಬರ್ಗ, ಲಂಡನ್, ಜಿನಿವಾ ಪಟ್ಟಣಗಳು ಧಾರ್ಮಿಕ ಮತ್ತು ಜ್ಞಾನಾರ್ಜನೆಯ ಮುಖ್ಯ ಪಟ್ಟಣಗಳಾದವು. ಈ ಕಾಲವು ಅಧಿಭೌತಿಕ ವಿಷಯದ ಕಡೆಗೆ ಅಂದರೆ ಇಹಲೋಕದ ವಿಷಯದ ಕಡೆಗೂ ಮತ್ತು ಅಧ್ಯಾತ್ಮಿಕ ವಿಷಯದ ಕಡೆಗೂ ಲಕ್ಷವನ್ನು ಹಾಕಿತು. ವ್ಯಕ್ತಿಯು ಜಗತ್ತಿನ ಶೋಧೆಯನ್ನು ಪ್ರಾರಂಭಿಸಿದ್ದಲ್ಲದೆ ಜಗನ್ನಿರ್ಮಾಣಕನ ಶೋಧೆಯನ್ನೂ ಪ್ರಾರಂಭಿಸಿದನು. ಸನಾತನ ಗ್ರೀಕರ ಮತವು ಅಧಿಭೌತಿಕವೂ (*cosmo-centric*), ಮಧ್ಯವರ್ತಿಕಾಲದ ಮತವು ಅಧಿದೈವಿಕವೂ (*theo-centric*) ಅಧುನಿಕ ಕಾಲದ ಮತವು ಅಧ್ಯಾತ್ಮಿಕವೂ (*ego-centric*) ಆಗಿದೆ.

ನಿಕೋಲಾಸ ಕುಶಾನನ್ ಕ್ರಿ ಶ. ೧೪೦೧-೧೪೬೪ ಜರ್ಮನಿ ದೇಶದಲ್ಲಿ ಜನ್ಮ ತಾಳಿದನು. ಇವನು ಭೂಮಿಯು ತನ್ನ ಅಚ್ಚಿನ ಮೇಲೆ ತಿರುಗುತ್ತದೆಂದು ಕೊಪರ್ನಿಕಸನ ವಂಚಿತವಾಗಿಯೇ ಹೇಳಿದನು. ಸ್ಥಳವು ಮೇರೆಯಿಲ್ಲದ್ದೆಂತಲೂ ಕಾಲವು ಅನಂತವಾದದ್ದೆಂತಲೂ ಬ್ರೂನೋ ಎಂಬವನ ಮುಂಚಿತವಾಗಿಯೇ ಹೇಳಿದನು. ಜರ್ಮನಿಯು ನಕಾಶವನ್ನು ಇವನೇ ಮೊದಲು ತಯಾರಿಸಿದನು. ಕ್ರೈಸ್ತ ಚರ್ಚಿನ ಮೂಢ ನಂಬಿಕೆಯನ್ನೂ ಸೃಷ್ಟಿಯ ಕೃತಿಗಳನ್ನೂ ವಿವರಿಸುವದರಲ್ಲಿ ಜಾದು ವಿದ್ಯೆಯ ಉಪ

ಯೋಗಿಸುವಿಕೆಯನ್ನೂ ಇವನು ನಿಷೇಧಿಸಿದನು. ಇವನು ಜಗತ್ತು ಪರಮಾತ್ಮನ ಪ್ರತಿಬಿಂಬವೆಂದು ಹೇಳುತ್ತಾನೆ. ಮತ್ತು ಮನುಷ್ಯನು ಜಗತ್ತಿನ ಸ್ವರೂಪವೆಂದು ಹೇಳುತ್ತಾನೆ. ಇವನು ಜಗತ್ತು ಆತ್ಮದಿಂದ ಕೂಡಿರುವದೆಂದು ಹೇಳುತ್ತಾನೆ. ಇವನು ಭೌತಿಕ ಶಾಸ್ತ್ರವು ಊಹಾಮಾತ್ರವಾದದ್ದೆಂದು ಹೇಳುತ್ತಾನೆ. ಆದರೂ ಅದು ಇಹಪರಲೋಕಗಳ ಸಂಬಂಧವನ್ನು ಹೊರಪಡಿಸುತ್ತದೆಂದು ಹೇಳಿದನು.

ಪ್ಯಾರಾಸೆಲ್‌ಸಸ್. ಕ್ರಿ. ಶ. ೧೪೯೩—೧೫೪೧. ಸ್ವಿಟ್ಸರ್ಲಂಡದ ನಿವಾಸಿಯು. ರಸಾಯನ ಶಾಸ್ತ್ರಜ್ಞನು. ಜಗತ್ತು ಅಭಿವೃದ್ಧಿ ಹೊಂದತಕ್ಕ ವಸ್ತುವು. ಮನುಷ್ಯನು ಜಗತ್ಶಕ್ತಿಯ ಅಂಶನು. ಸೃಷ್ಟಿಯ ಶಕ್ತಿಯು ಮೂರು ರೂಪದಲ್ಲಿ ಪ್ರಕಟವಾಗಿದೆ. (೧) ಸ್ಥೂಲ (*terrestrial*), (೨) ಸೂಕ್ಷ್ಮ (*astral*), (೩) ಕಾರಣ (*spiritual*). ಮನುಷ್ಯ ಶರೀರವು ಸ್ಥೂಲ ಸೃಷ್ಟಿಯಿಂದ ಬಲವನ್ನು ದೊರಕಿಸುತ್ತದೆ. ಮನಸ್ಸು ನಕ್ಷತ್ರಗಳಿಂದ ಬಲವನ್ನು ಹೊಂದುತ್ತದೆ. ಆತ್ಮವು ಕ್ರೈಸ್ತನಲ್ಲಿಯ ಭಕ್ತಿಯಿಂದ ಬಲವನ್ನು ಹೊಂದುತ್ತದೆ.

ಜಿಯಾರಡಾನೊ ಬ್ರೂನೋ— ಕ್ರಿ. ಶ. ೧೫೫೪—೧೬೦೦. ಇಟಲಿ ನಿವಾಸಿಯು. ಪಾದ್ರಿಯು. ಧರ್ಮಲಂಡನೆಂಬ ಆರೋಪದಿಂದ ಇವನನ್ನು ಅಗ್ನಿಗೆ ಆಹುತಿಕೊಟ್ಟರು. ಇವನು ಹದಿನೈದು ವರುಷ ಸನ್ಯಾಸಿಯಾಗಿರುವಾಗ ಟ್ರಿಂಟ ಕೌನ್ಸಿಲ್ ಕೂಡಿತ್ತು. ಇಟಲಿಯಲ್ಲಿ ಪ್ರತಿಗಾವಿ ಸುಧಾರಣೆ ನಡೆದಿತ್ತು (*counter-Reformation*). ಬ್ರೂನೋನ ಪ್ರೇರಣೆಯು ಸ್ಪಿನೋಜಾ ಮತ್ತು ಲೀಬ್ನಿ ಇವರ ಮೇಲೆ ಆಯಿತು. ಬ್ರೂನೋನು ದೇವರು ಅನಂತನಾಗಿರುವದರಿಂದ ಜಗತ್ತೂ ಸಹ ಸ್ಥಳ, ಕಾಲಗಳಿಂದ ಅನಂತವಾಗಿದೆಯೆಂದು ಹೇಳಿದನು. ಇದರಿಂದ ಭೌತಿಕ ಶಾಸ್ತ್ರಕ್ಕೆ ಹೊಸ ವಿಚಾರವನ್ನು ಇವನು ಒದಗಿಸಿಕೊಟ್ಟನು. ಜಗತ್ತು ದೇವರ ಸ್ವರೂಪವೆಂದು ಇವನು ತಿಳಿದನು. ಧರ್ಮ, ತತ್ವಜ್ಞಾನ ಮತ್ತು ಸೌಂದರ್ಯಗಳು ಒಂದೇ ಎಂದು ಇವನು ತಿಳಿದನು. ದೇವರು ಜಗತ್ತಿನ ಆತ್ಮನೆಂತಲೂ ಜಗತ್ತು ದೇವರ ದೇಹವೆಂತಲೂ ತಿಳಿದನು. ದೇವರು ಒಬ್ಬನೇ ಇದ್ದು ಎಲ್ಲ ವಸ್ತುಗಳಲ್ಲಿ ಸೇರಿಕೊಂಡಿದ್ದಾನೆ. ಅವನು ಸರ್ವಾಂಯಾರ್ತಮಿಯು. ಜಗತ್ತಿನಲ್ಲಿ ತೋರುವ ಏಕತ್ವ ಮತ್ತು ಅನೇಕತ್ವಗಳು ನಿಜ ವಸ್ತುವಿನ ಎರಡು ವಿಧವಾದ ಸ್ವರೂಪಗಳಾಗಿವೆ.

(೨) ಜ್ಞಾನೋದಯಕಾಲದ ಪದಾರ್ಥವಿಜ್ಞಾನಿಗಳು. (*Natural scientists*). ಗ್ಯಾಲಿಲಿಯೋ. ಕ್ರಿ. ಶ. ೧೫೬೪—೧೬೪೨. ಇವನು ಇಟಲಿ ದೇಶದವನು. ಭೌತಿಕ ಶಾಸ್ತ್ರಜ್ಞಾನಿದ್ದವರಿಂದ ಇವನಿಗೆ ಕ್ರೈಸ್ತ ಪಾದ್ರಿಗಳ ವಿರೋಧವುಂಟಾಯಿತು. ಇವನು ಪಾಡುವಾ ಮತ್ತು ಪಿಜಾ ವಿಶ್ವವಿದ್ಯಾಲಯಗಳಲ್ಲಿ ಪ್ರೊಫೇಸರ (ಪಂಡಿತ) ನಾಗಿದ್ದನು. ಟಸ್ಕನಿ ರಾಜಾಸ್ಥಾನದಲ್ಲಿ ಗಣಿತ ಮತ್ತು ತತ್ವಶಾಸ್ತ್ರದ ಬೋಧಕನಾಗಿದ್ದನು. ಕೊಪರ್ನಿಕಸನಂತೆ ಭೂಮಿಯು ಸೂರ್ಯನ ಸುತ್ತಲೂ ತಿರುಗುವದೆಂದು ಗ್ರಹಿಸಿದನು. ಇವನು ಒಂದು ದೂರ್ಬೀನವನ್ನು (ದೂರದರ್ಶಕ ಯಂತ್ರಕವನ್ನು ರಚಿಸಿದನು. ಬೃಹಸ್ಪತಿಯ (*Jupitor*) ಉಪಗ್ರಹವನ್ನು ಶೋಧಿಸಿದನು. ಜಲಸಂಬಂಧವಾದ ತಕ್ಕಡಿಯನ್ನೂ (*Hydrostatic balance*), ಶೀತೋಷ್ಣವಾಪಕಯಂತ್ರ ಸೂಕ್ಷ್ಮದರ್ಶಕಯಂತ್ರವನ್ನೂ (*Microscope*) ರಚಿಸಿದನು. ತರ್ಕವು ಸರಿಯಾದ ವಿಚಾರ ಮಾಡಲು ಸಹಾಯಭೂತವಾಗಿರುವದಲ್ಲದೆ ಹೊಸ ವಿಚಾರವನ್ನು ಹುಟ್ಟಿಸಲಾರದೆಂದು ಇವನು ನಂಬಿದನು. ಕೆಲವು ಅನುಭವಗಳಿಂದ ಹೊಸ ಗೃಹೀತವನ್ನು ರಚಿಸಿದಾಗ ಹೊಸ ವಿಚಾರವು ಹೊರಪಡುತ್ತದೆ. ಭೌತಿಕ ಸೃಷ್ಟಿಯನ್ನು ವಿವರಿಸುವಾಗ ಅಧ್ಯಾತ್ಮಿಕ ಆಧಾರವನ್ನು ತೆಗೆದುಕೊಂಡರೆ ಸರಿಯಾಗದು. ದೇವರು ಸೂರ್ಯಚಂದ್ರರನ್ನು ತಿರುಗುವಂತೆ ಮಾಡುತ್ತಾನೆಂದರೆ ನಿಜವಾದ ಆಧಾರವನ್ನು ಕೊಟ್ಟಂತಾಗುವದಿಲ್ಲ. ಸೃಷ್ಟಿಯ ತಳಹದಿಯಾದ ವಸ್ತುವು ಚಲನೆಯು.

ಫ್ರಾನಿಸ್ಸ ಬೇಕನ್— ಕ್ರಿ. ಶ. ೧೫೬೧—೧೬೨೬. ಲಂಡನ್ ಪಟ್ಟಣದ ನಿವಾಸಿಯು. ಕೇಂಬ್ರಿಜ್ಜದಲ್ಲಿ ವಿದ್ಯಾಭ್ಯಾಸ ಮಾಡಿದನು. ವಕೀಲಿಯ ಉಪ್ಯೋಗವನ್ನು ವಹಿಸಿದನು. ಮೂವತ್ತೆರಡನೆಯ ವಯಸ್ಸಿನಲ್ಲಿ ಪಾರ್ಲಿಮೆಂಟ ಸಭೆಯಲ್ಲಿ ಪ್ರವೇಶಿಸಿದನು. ಐವತ್ತಾರನೆಯ ವಯಸ್ಸಿನಲ್ಲಿ ಲಾರ್ಡ ಚಾನ್ಸಲರನಾದನು. ಲಂಚ ತೆಗೆದುಕೊಂಡನೆಂಬ ಆರೋಪದಿಂದ ಅಧಿಕಾರವನ್ನು ಕಳೆದುಕೊಂಡನು. ಇವನು ಮಹಾ ಜ್ಞಾನಿಯೂ, ರಾಜಕಾರಣಪಟುವೂ ಆಗಿದ್ದನು. ತತ್ವಜ್ಞಾನವು ಸಮಾಜಸ್ಥಿತಿಯನ್ನು ಸುಧಾರಿಸತಕ್ಕದ್ದೂ, ಮನುಷ್ಯ ಜೀವನವನ್ನು ಉದಾತ್ತ ಮಾಡತಕ್ಕದ್ದೂ, ಸೃಷ್ಟಿಯನ್ನು ವಶಪಡಿಸಿಕೊಳ್ಳತಕ್ಕದ್ದೂ, ಆಗಿದೆ ಎಂದು ಇವನು ಹೇಳಿದನು. ಜ್ಞಾನಬಲವೇ ಬಲವು. ಶಾಸ್ತ್ರಿಕನ ಪದ್ಧತಿಯು ಜೇಡ ಹುಳದಂತೆ ತನ್ನೊ

ಳಗಿಂದ ಬಲೆಯನ್ನು ಹುಟ್ಟಿಸುವಂತೆಯಾಗಲಿ ಅಥವಾ ಇರುವೆಯಂತೆ ಆಹಾರವನ್ನು ಕೂಡಿ ಹಾಕುವಂತೆಯಾಗಲಿ ಇರದೆ ಜೇನು ಹುಳದಂತೆ ಪುಷ್ಪ ಗಂಧವನ್ನು ಕೂಡಿಸಿ ಜೇನು ತುಪ್ಪವಾಗಿ ಮಾಡುವಂತಿದೆಯೆಂದು ಇವನು ಹೇಳಿದನು. ಶಾಸ್ತ್ರವು ಯಾವತ್ತು ವ್ಯಷ್ಟಿ ವಸ್ತುಗಳ ಸತ್ಯದಿಂದ ಸಮಷ್ಟಿಯ ಸತ್ಯವನ್ನು ಕಂಡು ಹಿಡಿಯಬೇಕು. ಆದ್ದರಿಂದ ಶಾಸ್ತ್ರವು ಸಮಷ್ಟಿ ಪದ್ಧತಿ (*Induction*) ಮತ್ತು ಅನುಭವಗಳನ್ನು ಸಾಧನವಾಗಿಟ್ಟುಕೊಳ್ಳಬೇಕು. ಇವನು ನೋವವ್ ಅರ್ಗ್ಯಾನವ್ ಮುಂತಾದ ಪ್ರಸಿದ್ಧ ಗ್ರಂಥಗಳನ್ನು ಬರೆದಿದ್ದಾನೆ.

ಫಾಮಸ್‌ಹಾಬ್ಸ್— ೧೫೮೮—೧೬೭೯. ಇಂಗ್ಲಂಡದ ನಿವಾಸಿಯು ಇವನು ಬೇಕನ್ನನ ಸೆಕ್ರೆಟರಿಯಾಗಿದ್ದನು. ಆದರೆ ಅವನಂತೆ ವ್ಯವಹಾರಿಕ ರಾಜಕಾರಣ ಪಟುವಾಗಿರಲಿಲ್ಲ. ಗಣಿತ ಶಾಸ್ತ್ರದಲ್ಲಿ ಇವನ ಅಭಿರುಚಿಯು ಹೆಚ್ಚಾಯಿತು. ಇವನು ಮುಖ್ಯವಾಗಿ ಭೌತಿಕ ತತ್ವಜ್ಞನು. ಅಸ್ತಿತ್ವದಲ್ಲಿರುವದೆಲ್ಲವೂ ಭೌತಿಕವಸ್ತುವು. ಸಂಭವಿಸುವದೆಲ್ಲವೂ ಚಲನೆಯು (*Motion*) ಇವನು ಈ ಸಿದ್ಧಾಂತವನ್ನು ಭೌತಿಕ ಜಗತ್ತಿಗೆ ಹಚ್ಚುವದರಿಂದ ಭೌತಿಕವಾದಿಯೆಂದೂ, ಜ್ಞಾನಕ್ಷೇತ್ರದಲ್ಲಿ ಇದನ್ನು ಉಪಯೋಗಿಸುವದರಿಂದ ಇಂದ್ರಿಯ ಜ್ಞಾನ ವಿಶಿಷ್ಟವಾದಿಯೆಂದೂ, (*Sensationalist*) ಇಚ್ಛಾ ಶಕ್ತಿಗೆ ಪ್ರಯೋಗ ಮಾಡುವದರಿಂದ ನಿಶ್ಚಯವಾದಿಯೆಂದೂ, (*Determinist*) ನೀತಿ ಮತ್ತು ರಾಜಕಾರಣಗಳಿಗೆ ಪ್ರಯೋಗಮಾಡುವದರಿಂದ ಸಹಜ ಸ್ವಭಾವವಾದಿಯೆಂದೂ (*Naturalist*) ಕರೆಯಲ್ಪಡುತ್ತಾನೆ. ಅಧ್ಯಾತ್ಮಿಕ ವಿಷಯವನ್ನು ಇವನು ಮುಟ್ಟಲೇ ಇಲ್ಲ. ಯಾಕಂದರೆ ದೇವರು ಚಲನಾತ್ಮಕ ವಸ್ತುಗಳಲ್ಲಿ (*bodies in motion*) ಗಣನೆಯಾಗಿಲ್ಲ. ಪ್ರಕೃತಿ, ಮನಸ್ಸುಗಳು ಒಂದೇ ಸ್ವರೂಪವಾಗಿವೆ. ಆದರೆ ಪ್ರಕೃತಿ ಮತ್ತು ದೈವಗಳು ಪರಸ್ಪರ ವಿರೋಧ ಸ್ವರೂಪಗಳಾಗಿವೆ. ಗಣಿತವೇ ಸರ್ವಜ್ಞಾನಕ್ಕೆ ಆಧಾರವೆಂದು ಹೇಳಿದನು. ಶಾಸ್ತ್ರಿಕನ ಜಗತ್ತು ಕಾರಣ ಪರಿಣಾಮಗಳಿಂದ ಕೂಡಿದೆ. ಸೃಷ್ಟ ವಸ್ತುಗಳು ಭೌತಿಕ ಜಗತ್ತಿಗೆ ಸಂಬಂಧಪಟ್ಟವೆಂತಲೂ ಕೃತ್ರಿಮ ವಸ್ತುಗಳು ಸಮಾಜದ ಸಂಸ್ಥೆಗಳೆಂತಲೂ ಇವನ ಮತವು. ಮನುಷ್ಯನು ಎರಡಕ್ಕೂ ಸಂಬಂಧಿಸಿದ್ದಾನೆ ತತ್ವಸ್ಥಾನವು ಭೌತಿಕ ಶಾಸ್ತ್ರ, ಮಾನಸ ಶಾಸ್ತ್ರ, ರಾಜನೀತಿಶಾಸ್ತ್ರ ಎಂದು ಮೂರು ವಿಧವಾದದ್ದು ಎಂದು ಇವನು ಹೇಳಿದನು. ಸೃಷ್ಟಿ ಮತ್ತು ಕೃತ್ರಿಮ ವಸ್ತುಗಳ ಸ್ವರೂಪವನ್ನು ಚಲನೆಯು ವಿವರಿಸುತ್ತದೆ.

ಮಾನಸಶಾಸ್ತ್ರ — ಅರಿವು ಆತ್ಮವಾಗಿರದೆ ವಸ್ತುಗಳ ಚಲನೆಯಾಗಿದೆ. ಅರಿವಿನ ಸ್ವರೂಪಗಳಾದ ಇಂದ್ರಿಯ ಜನ್ಯಜ್ಞಾನ, ಪ್ರತ್ಯಕ್ಷ ಜ್ಞಾನ, ಬುದ್ಧಿಗಮ್ಯಜ್ಞಾನ ಮುಂತಾದವು ಮಿದುಳಿನ ಚಲನೆಗಳು ಅಥವಾ ನರಗಳಲ್ಲಿಯ ಸೂಕ್ಷ್ಮಾಣುಗಳ ಚಲನೆಗಳು. ನೆನಪು ಮತ್ತು ಕಲ್ಪನೆಗಳು ಶೈಶವಾದ ಇಂದ್ರಿಯ ಜನ್ಯಜ್ಞಾನಗಳಾಗಿವೆ. ಅನೇಕ ಇಂದ್ರಿಯ ಜನ್ಯಜ್ಞಾನಗಳ ಸಮೂಹವೇ ವಿಚಾರವಾಗಿದೆ. ಅನುಭವವು ಸಹವಾಸ ನಿಯಮದಿಂದ (*Laws of association*) ಬದ್ಧವಾದ ಇಂದ್ರಿಯ ಜನ್ಯಜ್ಞಾನಗಳ ಸಮೂಹವಾಗಿದೆ. ಮಾನಸಿಕ ಸ್ಥಿತಿಯು ಮಿದುಳಿನ ಚಲನೆಯಿಂದುಂಟಾಗುವದು. ಇದು ಹೊರಗಿನ ಚಲನೆಯ ಪರಿಣಾಮವು. ಬಾಹ್ಯ ಜಗತ್ತಿನಲ್ಲಿಯ ಚಲಿಸುವ ವಸ್ತುವು ಇಂದ್ರಿಯದ ಮೇಲೆ ಮುಪ್ಪು ಹಾಕುವದು. ಈ ಚಲನೆಯನ್ನು ನರಗಳು ಹೃದಯ ಮತ್ತು ಮಿದುಳಿಗೆ ತಲುಪಿಸುವವು. ಇದರಿಂದ ಮಿದುಳಿನಲ್ಲುಂಟಾದ ಪ್ರಗತಿಕ್ರಿಯೆಯೇ (*Reaction*) ಮಾನಸಿಕ ಸ್ಥಿತಿಯು. ಮಿದುಳಿನ ಬದಲಾವಣೆಗಳ ಅರಿವು ನಮಗಾಗುವದಲ್ಲದೆ ಬ್ಯಾಹ್ಯ ವಸ್ತುಗಳ ಚಲನೆಯ ಅರಿವು ನಮಗುಂಟಾಗುವದಿಲ್ಲ. ಬೆಳಕಿನ ಪ್ರತ್ಯಕ್ಷ ಜ್ಞಾನವು ಮಿದುಳಿನ ಬದಲಾವಣೆಯಿಂದಾಗುವದಲ್ಲದೆ ದೀಪದಿಂದಲ್ಲ. ವಸ್ತುಗಳ ಚಲನೆಯು ಹೊರ್ತು ನಮಗೆ ಬಾಹ್ಯವಾದ ವಸ್ತುವೇ ಇಲ್ಲ. ಬಾಹ್ಯಜಗತ್ತು ನಿಜವಾದದ್ದು ಆದರೆ ನಮಗೆ ಅದರ ಜ್ಞಾನವಿಲ್ಲ.

ಗಣಿತನಿಯಮವನ್ನು ರಾಜನೀತಿಗೆ ಅನ್ವಯಿಸಿದ್ದು— ಚಲನೆಯಲ್ಲಿರುವ ಪ್ರಾಕೃತಿಕ ವಸ್ತುಗಳು ಮಾನಸಿಕ ಸ್ಥಿತ್ಯಂತರವನ್ನುಂಟು ಮಾಡುವಂತೆಯೂ, ಚಲನೆಯಲ್ಲಿರುವ ಮಾನಸಿಕ ಸ್ಥಿತಿಗಳು ಮನುಷ್ಯನ ಅರಿವನ್ನುಂಟು ಮಾಡುವಂತೆಯೂ, ಮನುಷ್ಯ ವ್ಯಕ್ತಿಗಳು ರಾಜ್ಯ ಸಂಸ್ಥೆಯನ್ನುಂಟು ಮಾಡುವರು. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಆತ್ಮರಕ್ಷಣೆಯ ಭಾವವು ಸ್ವಭಾವ ಜನ್ಯವಾಗಿದೆ. ಎಲ್ಲ ರಾಜ್ಯ ಸಂಸ್ಥೆಗಳ ಉದ್ದೇಶವು ಆತ್ಮರಕ್ಷಣೆಯಾಗಿದೆ. ಸಮಾಜದಲ್ಲಿರುವಾಗಲೂ, ಸಮಾಜಬಾಹಿರವಾಗಿರುವಾಗಲೂ ಸ್ವಾರ್ಥವೇ ಮನುಷ್ಯನ ಮುಖ್ಯ ಹೇತುವು. ರಾಜ್ಯ ಸಂಸ್ಥೆಯುಂಟಾಗದ ಪೂರ್ವದಲ್ಲಿ ಜನರು ಪರಸ್ಪರ ದ್ವೇಷದಿಂದ ಕಲಹ ಮಾಡುತ್ತಿದ್ದರು. ಆದರೆ ಅದು ಆತ್ಮವಿನಾಶಕ ಕಾರ್ಯವಾಗಿತ್ತು. ಆದ್ದರಿಂದ ಜನರು ತಮ್ಮ ಹಿತಕ್ಕಾಗಿ ರಾಜ್ಯಸಂಸ್ಥೆಯನ್ನು ಮಾಡಿಕೊಂಡರು.

ಇದರಿಂದ ಶಾಂತತೆಯೂ ವ್ಯಕ್ತಿಯ ಹಿತವೂ ಸಾಧ್ಯವಾಯಿತು. ಜನರು ರಾಜನಿಗೆ ತಮ್ಮನ್ನಾಳುವ ಪೂರ್ಣ ಅಧಿಕಾರವನ್ನು ಕೊಟ್ಟದ್ದರಿಂದಲೇ ಜನರ ಹಕ್ಕು ಬಾಧ್ಯತೆಗಳ ಸುರಕ್ಷಣೆಗೆ ಕಾರಣವಾಯಿತು. ಸರ್ವರ ಇಚ್ಛೆಯೇ ರಾಜನ ಇಚ್ಛೆಯು ಪ್ರಜಾರಾಜ್ಯದಲ್ಲಿ ಪ್ರಜಾಪ್ರತಿನಿಧಿಗಳ ಇಚ್ಛೆಯು ಅಥವಾ ಮತವು ಪ್ರಜೆಗಳ ಮತದ ಪ್ರತಿಧ್ವನಿಯಾಗಿದೆ. ಯಾವ ವರೆಗೆ ರಾಜ್ಯ ಸಂಸ್ಥೆಯು ಜನರಲ್ಲಿ ತನ್ನ ಸತ್ತೆಯನ್ನು ಯೋಗ್ಯವಾಗಿ ಉಪಯೋಗಿಸುವದೋ ಆ ವರೆಗೆ ಜನರು ರಾಜ್ಯ ಸಂಸ್ಥೆಗೆ ವಿಧೇಯರಾಗಿರತಕ್ಕದ್ದು. ರಾಜ್ಯ ಸಂಸ್ಥೆಯ ಆಜ್ಞೆಯೆಲ್ಲವೂ ನ್ಯಾಯವಾದದ್ದು. ರಾಜ್ಯ ಸಂಸ್ಥೆಯು ಯಾವದನ್ನು ನಿಷೇಧ ಮಾಡುವದೋ ಅದು ಅನ್ಯಾಯವು. ರಾಜ್ಯ ಸಂಸ್ಥೆಯು ಧರ್ಮನೀತಿಗಳನ್ನು ಸಹ ನಿರ್ಣಯಿಸುವದು. ಕ್ರಾಂತಿಗಿಂತ ಅಥವಾ ಅನಾಯಕತ್ವಕ್ಕಿಂದ ಎಂತಹ ರಾಜ್ಯ ಸಂಸ್ಥೆಯಾದರೂ ಹಿತಕರವು. ೧ ನೇ ಚಾರ್ಲಸ್ ರಾಜನ ರಾಜ್ಯಭಾರವು ಇದಕ್ಕೆ ದೃಷ್ಟಾಂತವಾಗಿತ್ತು. ಕಲಹ ಮಾಡುವದೆಂದರೆ ಅನಾಗರಿಕತ್ವದ ಲಕ್ಷಣವು. ಕ್ಲಿಷ್ಟ ಚರ್ಚ ಅಥವಾ ಮತವು ರಾಜ್ಯ ಸಂಸ್ಥೆಗೆ ಅಧೀನವಾದದ್ದು. ಧರ್ಮವು ಮೂಢ ನಂಬಿಕೆಯಿಂದ ಕೂಡಿದೆ.

ಜ್ಞಾನೋದಯಕಾಲದ ಪದಾರ್ಥ ವಿಜ್ಞಾನ ಶಾಸ್ತ್ರವೂ ಮತ್ತು ಬುದ್ಧಿವಾದವೂ— ಈ ಕಾಲದ ಶಾಸ್ತ್ರಿಕರು ಜಗತ್ತಿನ ಸಶಾಸ್ತ್ರಿಕವಾದ ವಿವರಣೆಯನ್ನು ಮಾಡುವದು ಬಹಳ ಕಠಿಣವಾಗಿತ್ತು. ಯಾಕಂದರೆ ಇದರಿಂದ ಅವರು ಚರ್ಚದ ನಂಬಿಕೆಗೆ ವಿರೋಧಿಗಳಾಗುತ್ತಿದ್ದರು. ಆದರೆ ಬುದ್ಧಿವಾದಿಗಳು (*Rationalists*) ಭೌತಿಕ ಶಾಸ್ತ್ರವು ಗಣಿತ ಪ್ರಯೋಗದಿಂದ ಸಫಲವಾಗಿರುವಾಗ ತತ್ವಶಾಸ್ತ್ರದ ಸಮಸ್ಯೆಗಳನ್ನು ಸಹ ಗಣಿತ ಶಾಸ್ತ್ರದ ಆಧಾರದಿಂದ ಯಾಕೆ ನಿವಾರಣೆ ಮಾಡಬಾರದೆಂದು ಹೇಳಿದರು. ಇವರು ಸೃಷ್ಟಿ, ದೇವರು ಮನುಷ್ಯ ಶರೀರ ಮತ್ತು ಆತ್ಮಗಳ ವಿಷಯಕ್ಕೆ ಹೊಸ ಸಿದ್ಧಾಂತಗಳನ್ನು ಪ್ರತಿಪಾದಿಸಿದರು. ಈ ಕಾಲದ ಶಾಸ್ತ್ರದ ಸಂಶೋಧನೆಗಳು ಚರ್ಚಿನ ಅಧ್ಯಾತ್ಮಿಕ ನಂಬಿಕೆಗೆ ಅತ್ಯಂತ ವಿರೋಧವಾಗಿದ್ದವು. ಆದ್ದರಿಂದ ಹೊಸ ಶಾಸ್ತ್ರವು ಯಾಂತ್ರಿಕ ಜಗತ್ತನ್ನು ಸರ್ವಶಕ್ತನಾದ ದೇವರೊಂದಿಗೂ ಮತ್ತು ಯಾಂತ್ರಿಕ ಮನುಷ್ಯ ಶರೀರವನ್ನು ಸ್ವತಂತ್ರವಾದ ಆತ್ಮದೊಂದಿಗೂ ಸಮನ್ವಯ ಮಾಡುವ ಕಾರ್ಯವನ್ನು ಕಠಿಣವಾಗಿ ಮಾಡಿತು.

ಡೇಕಾರ್ಟ್ಸ್— ಕ್ರಿ. ಶ. ೧೫೯೬-೧೬೫೦. ಇವನು ಫ್ರಾನ್ಸ್ ದೇಶದವನು. ಇವನು ಜಗತ್ತಿನ ಉತ್ಪತ್ತಿ ಮತ್ತು ಸ್ಥಿತಿಯ ವಿಷಯವಾಗಿ ಒಂದು ಗ್ರಂಥವನ್ನು ಬರೆದನು. ಇದು ಕೆಲ ಅಂಶದಲ್ಲಿ ಕೋಪರ್ನಿಕಸನ ಸಿದ್ಧಾಂತವನ್ನು ಪುಷ್ಟೀಕರಿಸುತ್ತದೆ. ಆದರೆ ರೋಮುಪಟ್ಟಣದಲ್ಲಿ ಗ್ಯಾಲಿಲಿಯೋನನ್ನು ಚರ್ಚ ನಂಬಿಕೆಯ ವಿರೋಧವಾದ ವಿಚಾರಕ್ಕೆ ಶಿಕ್ಷಿಸಿದರೆಂಬ ಸುದ್ದಿಯನ್ನು ಕೇಳಿ ಈ ಗ್ರಂಥವನ್ನು ಇವನು ಮುದ್ರಿಸಲಿಲ್ಲ. ಇವನು ಶಾಲೆಯಲ್ಲಿರುವಾಗಲೇ ಗಣಿತದಲ್ಲಿ ಮೇಧಾವಿಯೆಂದು ಪ್ರಸಿದ್ಧನಾಗಿದ್ದನು. ಗಣಿತ ವಿದ್ಯೆಯಲ್ಲಿ (*analytical geometry*) ಎಂಬದನ್ನು ಹೊಸದಾಗಿ ಶೋಧಿಸಿದನು. ಭೌತಿಕ ಶಾಸ್ತ್ರದಲ್ಲಿ ಪ್ರಕಾಶದ ವಕ್ರೀಕರಣವನ್ನು, ಕಾಮನ ಬಿಲ್ಲಿನ ಕಾರಣವನ್ನೂ ಸರಿಯಾಗಿ ವಿವರಿಸಿದನು. ಗಾಳಿಯ ತೂಕವನ್ನು ಕಂಡು ಹಿಡಿದನು. ತನ್ನ ಆತ್ಮಕ್ಕೆ ನಿಸ್ಸಂಶಯವಾಗಿರುವದೇ ಸತ್ಯವೆಂದು ಹೇಳಿದನು. ಗಣಿತದಿಂದ ಯಾವತ್ತು ಜ್ಞಾನಕ್ಷೇತ್ರವೆಂದು ಕ್ರಮಗೊಳಿಸಬಹುದೆಂದು ಹೇಳಿದನು. ವ್ಯಷ್ಟಿಭೂತವಾದ ಅಭಿಪ್ರಾಯಗಳಿಂದ ಒಂದೇ ಒಂದು ತತ್ವವನ್ನು ಹೊರಡಿಸಬಹುದು. ಸತ್ಯವನ್ನು ಶೋಧಿಸಲು ಇವನು ಮೊದಲು ಸಂದೇಹ ಪದ್ಧತಿಯನ್ನು ಅನುಸರಿಸಿದನು. ನಿಷ್ಕಳಂಕವಾದ ಸತ್ಯವನ್ನು ಕಂಡು ಹಿಡಿಯಲು ಮಾತ್ರ ಸಂದೇಹ ಪದ್ಧತಿಯನ್ನು ಸಾಧನವಾಗಿ ಪ್ರಯೋಗಿಸುತ್ತಾನೆ. ಯಾವದೂ ಸ್ಥಿರವಲ್ಲವೆಂದು ಸಂದೇಹಪಡುವಾಗ ನಾನು ಸಂದೇಹ ಪಡುತ್ತೇನೆಂಬದು ನನಗೆ ನಿಶ್ಚಯವಾಗಿ ಗೊತ್ತುಂಟು. ಸಂದೇಹ ಪಡುವದೆಂದರೆ ವಿಚಾರ ಮಾಡುವದು. ಸಂದೇಹ ಪಡುವದರಲ್ಲಿ ನನ್ನ ಅರಿವಿನ ಇರುವಿಕೆಯು ನನಗೆ ಗೊತ್ತಾಗುವದು. ಆದರೆ ಸಂಶಯವಾದವು (*Skepticism*) ಎಲ್ಲ ಪಸ್ತುಗಳನ್ನು ಅಲ್ಲಗಳೆಯುವದು. ಆದ್ದರಿಂದ ಅದು ಆತ್ಮವಿರೋಧವಾಗಿದೆ. ನಮ್ಮ ವಿಚಾರಗಳಿಂದ ತಿಳಿಯುವದೇನಂದರೆ ವಿಚಾರ ಮಾಡತಕ್ಕ ನಾನು ಎಂಬ ವಸ್ತುವು ಇರುತ್ತದೆಂಬದು. (*Cogito ergo sum*)

ಆತ್ಮವಲ್ಲಿ ಸತ್ಯವಿದೆ. ಅಂತರಂಗವು ಸಹಜವಾದ ವಿಚಾರಗಳಲ್ಲಿ ದೇವರು ಪರಿಪೂರ್ಣವಾದವನೆಂಬ ವಿಚಾರವು ಒಂದಾಗಿದೆ. ನನ್ನ ಆತ್ಮದ ಇರುವಿಕೆಯು ನನಗೆ ಎಷ್ಟು ಸ್ಪಷ್ಟವಾಗಿ ಗೊತ್ತಿದೆಯೋ ಅಷ್ಟೇ ಸ್ಪಷ್ಟವಾಗಿ ದೇವರ ಇರುವಿಕೆಯಿದೆ. ಕೆಲವು ವಿಚಾರಗಳ ಗುಣಗಳು ಎಷ್ಟು ಸ್ಥಿರವಾಗಿವೆಯೆಂದರೆ ಆ ವಿಚಾರಗಳ ಬಗ್ಗೆ ಯೋಚಿಸಿದಾಗಲೆಲ್ಲ ಅವುಗಳ ಗುಣಗಳ ಬಗ್ಗೆ ನಾವು ಅವಶ್ಯವಾಗಿ ಯೋಚಿಸುತ್ತೇವೆ. ಹೇಗೆಂದರೆ ತ್ರಿಕೋ

ಣದ ಬಗ್ಗೆ ಯೋಚಿಸಿದಾಗ ಅದರ ಮೂರು ಕೋನಗಳು ಎರಡು ಸಮ ಕೋನಗಳಿಗೆ ಸರಿಯಾಗಿವೆಯೆಂದು ನಾವು ಅವಶ್ಯವಾಗಿ ಯೋಚಿಸುತ್ತೇವೆ.

ಪರಿಪೂರ್ಣ ವಸ್ತುವಿನ ಯೋಚನೆಯು ನನ್ನಲ್ಲಿದೆ. ಈ ಯೋಚನೆಗೆ ಒಂದು ಕಾರಣವಿರಲೇಬೇಕು. ಈ ಕಾರಣವೇ ದೇವರು. ಆತ್ಮನ ಅರಿವಿನ ವಿಚಾರದಿಂದ ಡೇಕಾರ್ಟ್ಸ್‌ನು ಉಳಿದ ವಿಚಾರಗಳ ಅಸ್ತಿತ್ವವನ್ನು ಹೊರಡಿಸಲು ಪ್ರಯತ್ನಿಸುತ್ತಾನೆ. ಪ್ರಕೃತಿಯ ಅಸ್ತಿತ್ವವು ದೇವರ ಅಸ್ತಿತ್ವದ ಮೇಲೆ ಅವಲಂಬಿಸಿದೆ. ದೇವರು ಇರದಿದ್ದರೆ ಬಾಹ್ಯ ಜಗತ್ತು ನಿರಾಧಾರವೂ ಅಸತ್ಯವೂ ಆಗುವದು. ಆತ್ಮವೂ ಬುದ್ಧಿಯೂ ಒಂದೇ ಎಂದು ಇವನು ಹೇಳುವದರಿಂದ ಇವನು ಬುದ್ಧಿವಾದದ ಸ್ಥಾಪಕನೆಂದು ಕರೆಯಲ್ಪಡುತ್ತಾನೆ. ದೇವರು ಮೂಲ ವಸ್ತುವು ಮತ್ತು ನಿರಾಲಂಬಿಯು. ಪ್ರಕೃತಿ ಮತ್ತು ಆತ್ಮಗಳು ದೇವರ ಮೇಲೆ ಅವಲಂಬಿಸಿವೆ. ಪ್ರಕೃತಿಯ ಮುಖ್ಯ ಗುಣವು ವ್ಯಾಪ್ತಿಯು (*Extension*). ಗುಣಗಳು ವಸ್ತುವಿನಲ್ಲಿ ವಾಸವಾಗಿಲ್ಲ. ಆದರೆ ಅವು ಇಂದ್ರಿಯ ಜ್ಞಾನದ ಪರಿಣಾಮವಾಗಿವೆ. ಸ್ಥಳ, ವ್ಯಾಪ್ತಿ ಮತ್ತು ಪ್ರಕೃತಿಗಳು ಒಂದೇ ಆಗಿವೆ. ಬರಿದಾದ ಸ್ಥಳವು ಇಲ್ಲವೇ ಇಲ್ಲ. ಪ್ರಕೃತಿಯು ಸ್ವಯಂ ಚಲನೆಯುಳ್ಳದ್ದಿರುವದಿಲ್ಲ. ಅದರ ಚಲನೆಯನ್ನುಂಟು ಮಾಡುವವನು ದೇವರಾಗಿದ್ದಾನೆ. ಪ್ರಕೃತಿಯು ಯಂತ್ರ ರೂಪವಾಗಿದ್ದು ದೇವರು ಯಂತ್ರ ರಚಿಸಿದವನೂ ಅದರ ನಿಯಮಕನೂ ಆಗಿದ್ದಾನೆ.

ಶಿವಯೋಗದ ನಿಜಸ್ವರೂಪು.

(ಲೇಖಕ:—ಓರ್ವ ವೀರಶೈವ.)

ನಮ್ಮ ಸಮಾಜದಲ್ಲಿ ಕೆಲವು ಅಜ್ಞ ಜನರು ಭೂತ ಪಿಶಾಚಾದಿಗಳನ್ನು ಬಿಡಿಸುವವರೂ, ಮಂತ್ರೋಚ್ಚಾಟನ ಮಾಡುವವರೂ, ಯಂತ್ರ ತಂತ್ರಗಳನ್ನು ಕಟ್ಟುವವರೂ, ಮಕ್ಕಳು ಮರಿಗಳಾಗುತ್ತವೆಂದು ಹೇಳುವವರೂ, ಜೋತಿಷ್ಯ ಹೇಳುವವರೂ ಶಿವಯೋಗಿಗಳೆಂದು ತಿಳಿದಿದ್ದಾರೆ. ಇದು ಶುದ್ಧ ತಪ್ಪು. ಹಾಗೆ ಮಾಡುವವರು ಶಿವಯೋಗಿಗಳಲ್ಲ; ಶಿವಯೋಗವು ಮಾಟಗಾರಿಕೆಯಲ್ಲ; ಮೋಡಿಯಲ್ಲ; ಜಾದುಗಾರಿಕೆಯಲ್ಲ; ಅಣಿಮಾದ್ಯಷ್ಟ ಸಿದ್ಧಿಗಳನ್ನು ಪಡೆಯುವದಲ್ಲ; ಇಂದ್ರಜಾಲ ಮಹೇಂದ್ರಜಾಲ

ವಲ್ಲ; ಪುಟೋತ್ಪಜನ ಮಾಯಾಜಾಲವಲ್ಲ; ಮೆಸ್‌ಮೆರಿಜಮ್, ಹಿಪ್ನಾಟಿಜಮ್ ಅಲ್ಲ. ಇಂಥ ಕಸರತ್ತುಗಳನ್ನು ಮಾಡುವವರು ಹೊಟ್ಟೆಗಾಗಿ ಜಗತ್ತಿಗೆ ಆಟ ತೋರಿಸುವ ಡೊಂಬರು. ಅಂಥವರ ಮಾತಿನಲ್ಲಿ ವಿಶ್ವಾಸ ಇಡುವದಾಗಲಿ ಅವರ ವಿಷಯದಲ್ಲಿ ಭಕ್ತಿಯನ್ನು ತೋರಿಸುವದಾಗಲಿ ಕೇವಲ ಮೂರ್ಖತನವೇ ಸರಿ.

ಸಕಳೇಶಮಾದರಸರೆಂಬ ಶಿವಶರಣರೊಬ್ಬರು ಹೀಗೆ ಹೇಳಿದ್ದಾರೆ. "ಗಿರಿಯ ಕರದಿಂದ ಎತ್ತಿದರೇನು? ಹರಿವ ವಾರಿಧಿಯ ಅಪೋಷಣವ ಮಾಡಿದರೇನು? ಗಗನ ಗಮನದಲ್ಲಿ ಸುಳಿದರೇನು? ಇವರೆಲ್ಲರು ಪವನ ಬಳಿಯ ಅಭ್ಯಾಸಿಗಳು. ಇಂತಹ ಮರ್ತ್ಯದ ಲೌಕಿಕರ ಮೆಚ್ಚ ನಮ್ಮ ಸಕಳೇಶ್ವರ ದೇವರು", ಈ ವಚನದ ತಾತ್ಪರ್ಯವಿಷ್ಟೇ. ಮನುಷ್ಯನು ಬೇಕಾದಂಥ ಕಸರತ್ತು ಅಥವಾ ಚಮತ್ಕಾರಿಕೆಯನ್ನು ತೋರಿಸಿದರೂ ಕೂಡ ಆತನು ಮರ್ತ್ಯಲೋಕದ ಮಾನವನೇ ವಿನಾ ಶಿವಲೋಕದ ಶರಣನಾಗಲಾರನು. ಉದಾಹರಣಾರ್ಥವಾಗಿ ಶ್ರೀ ಕೃಷ್ಣನು ಮಂದರ ಪರ್ವತವನ್ನು ಕರದಿಂದ ಎತ್ತಿ ಹಿಡಿದನು. ಅಗಸ್ತ್ಯಋಷಿಯು ಸಮುದ್ರದ ನೀರನ್ನು ಒಂದೇ ಕುಡಿತಕ್ಕೆ ಕುಡಿದುಬಿಟ್ಟನು. ವಿಷ್ಣುಬ್ರಹ್ಮಾದಿಗಳು ಗರುಡಹಂಸವಾಹನಗಳನ್ನೇರಿ ಆಕಾಶದಲ್ಲಿ ಸಂಚರಿಸಿದರು. ಇವರೆಲ್ಲರು ವಾಯು ಸಾಧನದಿಂದ ಅಂಥ ಸಾಮರ್ಥ್ಯವನ್ನು ಪಡೆದರು. ಇಂತಹ ಲೌಕಿಕರಿಗೆ ಪರಮಾತ್ಮನು ಮೆಚ್ಚಲಾರನೆಂಬುದೇ ನಮ್ಮ ಸಕಳೇಶ್ವರನ ಅಭಿಪ್ರಾಯವು. ನಾವು ದೇವರೆಂದು ಭಾವಿಸುವ ಬ್ರಹ್ಮ ವಿಷ್ಣು ಮೊದಲಾದವರು ಪವಾಡಮಾಡಿದ್ದರಿಂದ ಶರಣರ ಪಾಲಿಗೆ ಅವರು ಮರ್ತ್ಯರಾಗಿ ಕಾಣುತ್ತಿರುವಾಗ ಲೌಕಿಕದ ಮಾನವರು ಅಂತಹ ಕೆಲಸಗಳನ್ನು ಮಾಡಿದರೇನೆನ್ನಬೇಕು? ನೊಸಲಲ್ಲಿ ಉರಿಗಣ್ಣುಳ್ಳ ಸಿದ್ಧರಾಮಯೋಗಿಯು ಹಣೆಗಣ್ಣಿನ ಜ್ವಾಲೆಯನ್ನು ಕಾಲಕೆಳಗೆ ತುಳಿದು ಪ್ರಭುದೇವರು ಅವರ ಅಷ್ಟಸಿದ್ಧಿಯ ಗರ್ವವನ್ನು ತಗ್ಗಿಸಿರುವರಲ್ಲವೇ?

ಗರುಡಿಯಲ್ಲಿ ಸಾಧನ ಮಾಡಿದ ಸ್ಯಾಂಡೋನು ಪೋಟಾರ ತಡೆದು ನಿಲ್ಲಿಸಬಹುದು, ದೊಡ್ಡ ಬಂಡೆಗಲ್ಲನ್ನು ಎದೆಯ ಮೇಲೆ ಹೇರಿಕೊಳ್ಳಬಹುದು. ಎಷ್ಟೋ ಜನ ತಿರುಕರು ಹೊಟ್ಟೆಗಾಗಿ ಕಂದ ಪೀಡಾಸನ ಪಾಲಿ ಮುಂತಾದ ಕಷ್ಟತರವಾದ ಆಸನಗಳನ್ನು ಜನರಿಗೆ ಪ್ರದರ್ಶಿಸಿ ಆವರನ್ನು ಬೆರಗುಗೊಳಿಸುವದನ್ನು ನಾವು ಕಣ್ಣಾರೆ ಕಾಣುತ್ತೇವೆ. ಯಾವನೋ ಒಬ್ಬ ಮನುಷ್ಯನು ತನ್ನ ದೇಹಧರ್ಮದಂತೆ ನಡೆದು ೧೫೦ ವರ್ಷ

ಬಾಳಿದನಂತೆ! ಇಂತವರೆಲ್ಲ ಸಾಮಾನ್ಯ ಜೀವರುಗಳೆಂದೇ ನಮ್ಮ ಶಿವ ಶರಣರು ಹೇಳಿದ್ದಾರೆ. ಅಧುನಿಕ ಶಾಸ್ತ್ರೀಯ ಶೋಧ ನಮಗೆ ಬೇಕಾದಷ್ಟು ಕೌತುಕಗಳನ್ನುಂಟು ಮಾಡಿದರೂ ಅವು ಇಹಲೋಕದ ಉಪಜೀವನದ ಕಾರ್ಯಗಳೇ ಹೊರತು ಪಾರಮಾರ್ಥಿಕ ತತ್ವಗಳನೊಳಕೊಂಡಿಲ್ಲ. ನಮ್ಮ ಪುರಾಣಗಳಲ್ಲಿ ಕೆಲವು ಮಹನೀಯರ ಬಗ್ಗೆ ಪವಾಡಗಳನ್ನು ಕಲ್ಪಿಸಿದ್ದು ಸಾಮಾನ್ಯ ಜನರಲ್ಲಿ ಕೌತುಕವನ್ನು ಹುಟ್ಟಿಸುವದಕ್ಕಾಗಿಯೇ ವಿನಾ ಬೇರೆಯಲ್ಲ.

ನಮ್ಮ ಶಿವಯೋಗಿಗಳು ಶಿವಲೋಕದವರು, ಮರ್ತ್ಯರಲ್ಲ. ನಮ್ಮವರು ಸಾಧನ ಮಾಡಿದ್ದು ಅವಿದ್ಯೆಯಲ್ಲ; ವಿದ್ಯೆಯು. 'ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾವೃತ ಮಶ್ನುತೆ' ಎಂಬ ಉಪನಿಷತ್ ವಾಕ್ಯದಂತೆ ನಮ್ಮ ಶಿವಶರಣರು ಕರ್ಮಭಕ್ತಿಗಳೆಂಬ ವಿದ್ಯೆಗಳನ್ನು ಸಾಧಿಸಿ ಮೋಕ್ಷ ಸುಖವನ್ನು ಪಡೆದರಲ್ಲದೆ ಮೇಲೆ ಹೇಳಿದ ಸುಡಗಾಡಸಿದ್ಧರಾಟದಿಂದಲ್ಲ. ನಮ್ಮವರು ಕರ್ಮಯೋಗಿಗಳು ಮತ್ತು ಭಕ್ತಿಯೋಗಿಗಳು. ಕರ್ಮಯೋಗಿಗಳೆಂದರೆ ಜಗತ್ತಿನ ಸದ್ವ್ಯವಹಾರಗಳನ್ನು ಫಲಾಪೇಕ್ಷೆಯಿಲ್ಲದೆ ನಿಷ್ಕಾಮವು ಬುದ್ಧಿಯಿಂದ ಮಾಡುವದು. ಭಕ್ತಿಯೋಗವೆಂದರೆ ಗುರು ಕೊಟ್ಟ ಇಷ್ಟಲಿಂಗದಲ್ಲಿ ನಿರ್ಮಲವಾದ ಪ್ರೇಮವನ್ನಳವಡಿಸಿ ಪತಿವ್ರತೆಯಾದ ಸತಿಶಿರೋಮಣಿಯು ಪತಿಯೊಡನೆ ಕೂಡಿ ರಮಿಸುವಂತೆ ಲಿಂಗದ ಕಳೆಗಳನ್ನು ಹೆಚ್ಚಿಸುತ್ತ ಪರಮಾತ್ಮನಲ್ಲಿ ಪಾರವಶ್ಯತೆಯನ್ನು ಹೊಂದುವದು. ಕರ್ಮಯೋಗವು ಸಮಾಜ ಹಿತಕ್ಕೆ ಬೇಕು. ಭಕ್ತಿಯೋಗವು ಸ್ವಂತ ಹಿತಕ್ಕೆ ಬೇಕು.

ಮನುಷ್ಯನು ಸಮಾಜದ ಋಣಿಯಾದ್ದರಿಂದ ಅತನ ಮೇಲೆ ಸಮಾಜದ ಉಪಕಾರಗಳು ಅನೇಕವಾಗುತ್ತಿರುತ್ತವೆ. ಸಮಾಜದ ನಡೆನುಡಿ ರೀತಿ ಪದ್ಧತಿಗಳು ಅವನ ನಡವಳಿಕೆಯಲ್ಲಿ ತೊಡತೊಡಕಾಗಿ ಹೆಣೆಯಲ್ಪಟ್ಟಿರುತ್ತವೆ. ಆದುದರಿಂದ ಸಮಾಜದ ನಿರ್ಬಂಧನೆಗೊಳಗಾದ ಅತನು ಸದಾಚಾರಸಂಪನ್ನನಾಗಿ ಲೋಕಸಂಗ್ರಹ ಕಾರ್ಯಗಳನ್ನು ಮಾಡಲೇಬೇಕಾಗುತ್ತದೆ. ಇದೇ ನಾಗರಿಕನ ಜೀವನದ ರಹಸ್ಯವು. ನಮ್ಮ ಶಿವಶರಣರು ನೂರೆಂಟು ಕಾಯಕಗಳನ್ನು ಮಾಡಿ ಸಮಾಜದ ಸಾಂಪತ್ತಿಕ ಸ್ಥಿತಿಯನ್ನು ಬೆಳಸಿಕೊಂಡದ್ದಲ್ಲದೆ ಸಮಾಜ ಹಿತಕ್ಕಾಗಿ ಅರ್ಥಾತ್ ಗುರುಲಿಂಗಜಂಗಮದ ಸೇವೆಗಾಗಿ ತನು-ಮನ-ಧನಗಳನ್ನು ಸಮರ್ಪಿಸುತ್ತಿದ್ದರು. ಇದೇ ಶಿವಯೋಗವು.

ಸುಜ್ಞಾನ ಸಾರವು.

(ಶ್ರೀ ಶಿವಶರಣ—ಘನಮಠದಾರ್ಯರು)

[ಈ ಕೆಳಗಿನ ಲೇಖವು ಶ್ರೀ ಮಹಾ ಶಿವಶರಣ ಘನಮಠದಾರ್ಯರದು ಇರುತ್ತದೆ. ಈ ಮಹಾನುಭಾವರು ಒಂದು ನೂರು ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ ಮಹಾ ಸಾಧುಪುರುಷರೆಂದು ಹೆಸರ್ಗೊಂಡು ಅಸಂಖ್ಯ ಪದ್ಯಗಳನ್ನು ರಚಿಸಿದ್ದಾರೆ. ಈ ಪದ್ಯಗಳು ಇಲ್ಲಿ ಈಗಲೂ ಬಹು ಲೋಕಪ್ರಿಯವಾಗಿರುತ್ತವೆ. ಈ ಪ್ರಕಾರ ಈ ಮಹಾನುಭಾವರು ಕೇವಲ ಧಾರ್ಮಿಕ ಪುರುಷರಾಗಿರದೆ ಬಸವಾದಿ ಪ್ರಮಥರ ಮಾರ್ಗವನ್ನು ಚನ್ನಾಗಿ ಅರಿತುಕೊಂಡು ಅವರ ಕಾಯಕಗಳ ಆಚರಣೆಯನ್ನು ಅಕ್ಷರಶಃ ಪಾಲಿಸುವವರಾಗಿದ್ದರು. ಅವರು ಒಕ್ಕಲತನದ ಮೇಲೆ ಒಂದು ಬಹು ಅಮೂಲ್ಯವಾದ ಗ್ರಂಥವನ್ನು ಬರೆದಿದ್ದಾರೆ. ಈ ಗ್ರಂಥದಲ್ಲಿ ಅವರು ವೀರಶೈವ ಮತದ ವಿಶಾಲ ತತ್ವಗಳನ್ನು ಸಹ ಬಹು ಸುಬೋಧವಾಗಿ ವಿವರಿಸಿ ಅವರು "ಸುಜ್ಞಾನ" ಈ ವಿಷಯದ ಮೇಲೆ ಬರೆದ ವಿಚಾರಗಳು ಬಹು ಮಹತ್ವವಾದವುಗಳು ಇವೆ. ಅವುಗಳನ್ನು ಕೆಳಗೆ ನಾವು ಪ್ರಸಿದ್ಧಿಸಿದ್ದೇವೆ. ಈ ಲೇಖದ ಮೇಲಿಂದ ಶ್ರೀ ಘನಮಠದಾರ್ಯರು ವಚನಶಾಸ್ತ್ರದ ಮಹತ್ವವನ್ನು ಎಷ್ಟು ಚನ್ನಾಗಿ ಅರಿತವರಾಗಿದ್ದರೆಂಬುದು ಚನ್ನಾಗಿ ವ್ಯಕ್ತವಾಗುತ್ತದೆ. ಅವರು ಬರೆದ ಕಾಲದಲ್ಲಿ ಕನ್ನಡ ಅಚ್ಚುಕೂಟಗಳಿರಲಿಲ್ಲ ಹಾಗೂ ಅವರು ವಿಶೇಷನಾಗಿ ನಿಜಾಮು ಇಲಾಖೆಯಲ್ಲಿ ಇದ್ದವರು. ಆದ್ದರಿಂದ ಅವರ ಭಾಷೆಯಲ್ಲಿ ಈಗಿನ ಅಚ್ಚುಕಟ್ಟಾದ ನುಡಿಗಳಿರಲಿಕ್ಕಿಲ್ಲ. ಆದರೂ ಅವರು ತಮ್ಮ ವಿಚಾರಗಳನ್ನು ಬಹು ಮನೋವೇಧಕವಾಗಿ ವಿವರಿಸಿದ್ದನ್ನು ನೋಡಿದರೆ ನಾವು ಈ ಲೇಖನವನ್ನು ಪ್ರಸಿದ್ಧಿಸಿದ್ದಕ್ಕಾಗಿ ಪಾಚಕರು ಬೇಸರಗೊಳ್ಳಲಿಕ್ಕಿಲ್ಲೆಂದು ಭಾವಿಸಿದ್ದೇವೆ ———ಸಂಪಾದಕ]

ಈ ಕೃಷಿಜ್ಞಾನದಲ್ಲಿ ಸುಜ್ಞಾನವೇನು ಪ್ರಯೋಜನವೆಂದರೆ, ಈ ಪಾರಮಾರ್ಥ ಕೃಷಿಗೆ ಸುಜ್ಞಾನವೇ ಸಾಧನವು. "ಜ್ಞಾನೇನ ವಿನಾ ನಾಸ್ತಿ ಸಂಭಃ" ಎಂಬ ಶ್ರುತಿಯುಂಟಾಗಿ ಸದ್ಯೋಮುಕ್ತಿಯಾದ ಜ್ಞಾನಕೃಷಿಯಾವ ನಿಜಮೋಕ್ಷಕ್ಕೆ ಜ್ಞಾನವಿನಾ ಬೇರೊಂದು ಯೋಗವಿಲ್ಲವು. ಅದುಕಾರಣ ಸದಾಚಾರಿಗಳಿಗೆ ಸುಜ್ಞಾನವೇ ಬೇಕಾಗಿರುವದಾಗಿ ಸುಜ್ಞಾನ ಸಾರವನ್ನೇ ಹೇಳಬೇಕಾಯಿತು.

ಜ್ಞಾನೋತ್ಕೃಷ್ಟವರ್ಣನೆಯು— ಈ ಸುಜ್ಞಾನವೆಂಬುದು ಶಿವಜ್ಞಾನವು. ಶಿವಜ್ಞಾನವೆಂದರೂ ಬ್ರಹ್ಮಜ್ಞಾನವೆಂದರೂ ಆತ್ಮಜ್ಞಾನವೆಂದರೂ ಸ್ವಾತ್ಮಜ್ಞಾನವೆಂದರೂ ತತ್ವಜ್ಞಾನವೆಂದರೂ ಶಿವತತ್ವಜ್ಞಾನವೆಂದರೂ ಮಹಾಜ್ಞಾನವೆಂದರೂ ಏಕಪರ್ಯಾಯಾರ್ಥವು. ಆದರೆ "ಶಿವಜ್ಞಾನ ನ ಜಾನಾತಿ ಬ್ರಾಹ್ಮಣಃ ಶ್ವಪಚಾ ಧನುಃ" ಎಂದುಂಟಾಗಿ ಶಿವಜ್ಞಾನ ಹೀನರಾಗಿ ಉತ್ತಮ ಕುಲದಲ್ಲಿ ಹುಟ್ಟಿದವನಾದರೂ ಅಧಮನೆಂದು ಹೇಳಲ್ಪಟ್ಟಿದೆ. "ಬ್ರಹ್ಮಜ್ಞಾನೀ ಚ ಬ್ರಾಹ್ಮಣಃ" ಎಂಬ ಶ್ರುತಿಯುಂಟಾಗಿ ಪೂರ್ವದ ಋಷಿಗಳೆಲ್ಲರು ಕರ್ಮಾರ ಮಚ್ಚಿಗಾರ ಘೋರ ಕಬ್ಬಲಿಗ ನಾಯಿದ ಮೊದಲಾದ ಕುಲದಲ್ಲಿ ಹುಟ್ಟಿದವರಾದಾಗ್ಯೂ ಬ್ರಹ್ಮಜ್ಞಾನಿಗಳಾದುದರಿಂದ ಎಲ್ಲರು ಬ್ರಾಹ್ಮಣರಾಗಿ ವರ್ತಿಸಿದರು. ಈಗಲಾದರೂ ಆ ಋಷಿಗಳ ಗೋತ್ರದವರು ಬ್ರಾಹ್ಮಣರೆಂದು ಹೇಳಿಸಿಕೊಳ್ಳುತ್ತಾರೆ. ಇವರಾದರೂ ಬ್ರಹ್ಮಜ್ಞಾನಿಗಳಾದರೆ ಆ ವರ್ಣಕ್ಕೆ ಯೋಗ್ಯರಾಗುವರು. ಬ್ರಾಹ್ಮಣ ವರ್ಣಕ್ಕೆ ಬ್ರಹ್ಮಜ್ಞಾನವೇ ಮುಖ್ಯವು.

"ಜ್ಞಾನಾಗ್ನಿಃ ಸರ್ವ ಕರ್ಮಾಣಿ ಭಸ್ಮಸಾತ್ ಕುರುತೇರ್ಜುನ" ಎಂದು ಭಗವದ್ಗೀತೆಯಲ್ಲಿ ಹೇಳುತ್ತಿಹುದಾಗಿ ಮತ್ತು "ನಂಬೋ ಜ್ಞಾನವನ್ನೆ। ಕರ್ಮವೆಂಬ ಜಾಲದೊಳು ಶಿಲ್ಕಿ। ಹಂಬಲಿಸದಿರು ಮುಕ್ತಿಯಂಬೇರೆ ಬಯಸಿ ಮನುಜ॥" ಎಂದು ನಿಜಗುಣಾರ್ಯರ ವಾಕ್ಯವಿಹುದಾಗಿ ಈ ಸುಜ್ಞಾನವು ವೇದಾಂತಾದಿ ಉಪನಿಷತ್ವಾಕ್ಯಂಗಳಿಂದಲ್ಲದೆ, ತಲೆದೋರದಾಗಿ "ವೇದಾಂತಜನ್ಯ ತೇ ಜ್ಞಾನಂ ವಿದ್ಧೀತಿ ಪರಿಕೀರ್ತಿತೆ" "ವಿದ್ಯಾಯಾಂ ರಮತೇ ಯಸ್ಯ ವೀರ ಇತಿ ಬ್ರೂಯತೆ" ಎಂದುಂಟಾಗಿ ವೇದಾಂತದಿಂದುದ್ಭವಿಸಲ್ಪಟ್ಟ ಜ್ಞಾನವೇ ವೀರಶೈವ ಜ್ಞಾನವೆಂದು ಹೇಳಿ ಸುತ್ತಿಹುದಾಗಿ ವೀರಶೈವ ಸದ್ಭಕ್ತರು ವೇದಾಂತ ಸಾರವಾದ ಉಪನಿಷದ್ವಾಕ್ಯಂಗಳನ್ನು ನೋಡಬೇಕು. ಅಥವಾ ಉಪನಿಷದ್ವಾಕ್ಯಂಗಳ ಸಾರವನ್ನೆಲ್ಲಾ ತೆಗೆದು ಏಕ ಮುಹೂರ್ತದಲ್ಲಿ ತಿಳಿಯುವದಕ್ಕೆ ಆಬಾಲವೃದ್ಧರಿಗಾಯಾಸವಿಲ್ಲದ ಹಾಗೆ ಕನ್ನಡ ಬಾಷೆಯಿಂದ ದೇಶ ಭಾಷೆಯಂತೆ ಬೆಳುಗನ್ನಡವಾಗಿ ವಿವೇಕಚಿಂತಾಮಣಿ ಅನುಭವಸಾರ ಪರಮಾನುಭವ ಪಾರಮಾರ್ಥಪ್ರಕಾಶ ಗೀತೆ ಕೈವಲ್ಯಪದ್ಧತಿಗಳೆಂಬ ಷಟ್ಶಾಸ್ತ್ರಗಳನ್ನು ಮೋಕ್ಷ ಚಿಂತಾರತ್ನ ಸ್ವರೂಪವಾಗಿ ಸುಜ್ಞಾನ ದೀಪಿಕೆಯಂತೆ ರಚಿಸಿದ್ದಾರೆ. ಅವುಗಳು ಕನ್ನಡವೆಂದುಪೇಕ್ಷಿಸದೆ ನೋಡಬೇಕು.

ಆದ್ಯರ ವಚನಗಳು ಮತ್ತು ಜ್ಞಾನೋತ್ಕರ್ಷವಾದ ಪ್ರಬಲ ಶಾಸ್ತ್ರಗಳು ಕನ್ನಡದಿಂದಿದ್ದರೆ, ಅವುಗಳನ್ನು ಉಪೇಕ್ಷಿಸಲಾಗದು. ಯಾಕಂದರೆ, ಆದ್ಯರುಗಳಾದ ಬಸವಾದಿ ಪುರಾತನರು ವೇದಾದಿ ಸಕಲ ಶ್ರುತಿ ಸ್ಮೃತಿಗಳೆಲ್ಲ ತಮ್ಮ ಮನೆಯ ಮುಂದಿರುವ ಶುನಕಗಳಿಂದೋದಿಸಿದ ಸಮರ್ಥರಿಗೆ ಸಂಸ್ಕೃತವೇನಾಶ್ಚರ್ಯವು? ಅವರಿಗೆ ಸಂಸ್ಕೃತದಿಂದ ಹೇಳುವ ಸಾಮರ್ಥ್ಯವು ಇದ್ದಿಲ್ಲವೇ ಹ್ಯಾಗೆ? ಕನ್ನಡದಿಂದ ಹೇಳಿದಾಗ್ಯಾದರೂ ಒಂದೊಂದು ವಚನದಲ್ಲಿ ಕೋಟಿ ಕೋಟಿ ಶ್ರುತ್ಯಾಗಮ ಗ್ರಂಥಗಳ ಸಾರವು ಗೂಢವಾಗಿದೆ. ಆದರೆ ಬಸವರಾಜದೇವರಿಗೆ ಸಂಗಮೇಶ್ವರ ದೇವರು ವೇದಾಂತದೊಳ್ಗೋಪ್ಯವಾದ ನಿಜೈಕ್ಯ ಭಕ್ತಿಯನೆ ಪ್ರಕಟಿಸೆಂದು ಉಪದೇಶಿತ ಕಾರಣ ನಾಲ್ಕು ಲಕ್ಷ ಮೂವತ್ತಾರುಸಾವಿರ ವಚನಗಳಿಂದ ನಿಜೈಕ್ಯ ಭಕ್ತಿಯ ಚಾತುರ್ಯದ ತಾತ್ಪರ್ಯವನ್ನೇ ಲೋಕಹಿತಾರ್ಥವಾಗಿ ಕನ್ನಡದಲ್ಲಿ ಬೆಳುಗನ್ನಡ ತಿಳಿಗನ್ನಡವಾಗಿ ಬೋಧಿಸಿದರು.

ಬಸವಾದಿ ಪ್ರಭುದೇವರಂತ್ಯವಾದ ಏಳುನೂರೆಪ್ಪತ್ತು ಪ್ರಮಥಗಣಂಗಳು ಅರವತ್ತಮೂರು ಪುರಾತನರು ಮತ್ತು ನೂತನ ಪುರಾತನರುಗಳೆಲ್ಲರು ನಡೆದಂತೆ ನುಡಿದು ನುಡಿದಂತೆ ನಡೆದು ಭಕ್ತಿಜ್ಞಾನ ವೈರಾಗ್ಯವಿಡಿದಾಚರಿಸಿ ತೋರಿದ ವೀರಶೈವ ಜ್ಞಾನವೇ ವೇದಾಂತ ಜನ್ಯ ಜ್ಞಾನವಾಗಿ ಸುಜ್ಞಾನವೆನಿಸಿತ್ತು.

ಈ ಸುಜ್ಞಾನದಿಂದ ನಿಜಮೋಕ್ಷವಾಗುವದಲ್ಲದೆ ವೀರಶೈವ ಸುಜ್ಞಾನ ಹೀನವಾದ ಶ್ರುತಿ ವಿರಹಿತವಾಗಿ ಅನ್ಯ ಮತದವರು ಹೇಳುವಂಥ ಬಹು ಮುಖದ ಜ್ಞಾನವೆಲ್ಲ ಜಡಕರ್ಮದಿಂದ ಭಿನ್ನಜ್ಞಾನವಾಗಿ ಮೋಕ್ಷಕ್ಕೆ ಪ್ರಯೋಜನವಲ್ಲವು. ಮತ್ತು ಮೋಕ್ಷಾಪೇಕ್ಷೆಯುಳ್ಳವರು ಇದಲ್ಲದೆ ಲೌಕಿಕ ಭೋಗ ಭುಕ್ತ್ಯಪೇಕ್ಷೆಯುಳ್ಳವರು ಈ ಜ್ಞಾನವನ್ನೇ ದೃಢವಾಗಿ ನಂಬಬೇಕು. ಈ ಸುಜ್ಞಾನದಿಂದ ಸಕಲ ಕಾಮ್ಯಾರ್ಥಂಗಳು ಕಾಮಿಯಾದವನಿಗೆ ಸಂಭವಿಸುತ್ತಿಹವು. ನಿಷ್ಕಾಮಿಗೆ ನಿಜಮೋಕ್ಷ ಸಂಭವಿಸುವದು.

ಈ ಸುಜ್ಞಾನವೆಂಬುವದು ಗೋಚರವಾಗಿ ನಿದರ್ಶನಕ್ಕೆ ನಿಲ್ಲಬೇಕಾದರೆ, ಸಕಲ ಶಾಸ್ತ್ರಂಗಳ ಬಲವಿಲ್ಲದೇ ಘಟಿಸದಾಗಿ ಜಗದ ಜನರು ತಿಳಿಯಲೆಂದು ವೇದಾದಿ ಸಕಲ ಶಾಸ್ತ್ರಂಗಳ ಸಾರವೆಲ್ಲ ಸರ್ವರಿಗೆ ತಿಳಿದು ಕೃತಾರ್ಥರಾಗಲೆಂದು ನಿಜಗುಣ ಶಿವಯೋಗಿಗಳು ಕನ್ನಡದಿಂದ ರಚಿಸಿದ ಷಟ್ಶಾಸ್ತ್ರವನ್ನು ಮೊದಲು ನೋಡಬೇಕು. ತರುವಾಯದಲ್ಲಿ ಆದ್ಯರ

ವಚನಂಗಳ ನೋಡಿ ಪಟ್ಟಸ್ಥಲ ಬ್ರಹ್ಮಿಯಾಗಿ ಜ್ಞಾನ ಕ್ರಿಯೆಗಳಿಂದ ವರ್ತಿಸಬೇಕು. ಯಾಕಂದರೆ "ಗುರು ವಚನದಿಂದಧಿಕ ಸುಧೆಯುಂಟಿ" ಎಂದು ನಿಜಗುಣಾರಾಧ್ಯರು ಹೇಳಿದ್ದಾರೆ.

ಸುಜ್ಞಾನವೆಂಬುದು ಕೇವಲ ಶಿವತತ್ವದಂಶವು. ಅದು ಕಾರಣ ಅದಕ್ಕೆ ಶಿವಜ್ಞಾನವೆಂಬ ಹೆಸರಾಯಿತು. ಸುಜ್ಞಾನವೆಂಬುದು ಬಚ್ಚ ಬರಿಯ ಅಷ್ಟ ಪ್ರಕಾಶವು. ಈ ಪ್ರಕಾಶಕ್ಕೆ ಅನಂತ ಕೋಟಿ ಸೂರ್ಯ ಚಂದ್ರರುಗಳ ಪ್ರಕಾಶವು ಸಮಬಾರದು. ಈ ಪರಮ ಪ್ರಕಾಶರೂಪವಾದ ಶಿವಜ್ಞಾನವೆನಿಪ ಸುಜ್ಞಾನಕ್ಕೆ ಪರಂಜ್ಯೋತಿ ಎಂದೂ ನಿರುಪಾಧಿ ಜ್ಯೋತಿ ಎಂದೂ ಶ್ರುತಿಗಳು ಸಾರುತ್ತವೆ.

ಈ ಸುಜ್ಞಾನವೆಂಬ ಮೋಕ್ಷ ಚಿಂತಾರತ್ನವನ್ನು ವೇದಾದಿ ಸಕಲ ಶ್ರುತಿ ಸ್ಮೃತಿಗಳು ಹಲವು ರೀತಿಯಿಂದ ಬಣ್ಣಿಸುತ್ತಿಹವು. ಹ್ಯಾಗೆಂದರೆ, ಈ ಶಿವಜ್ಞಾನವು ದುರಿತ ಕಾನನವಗ್ನಿ। ಪರಿಭವ ಘನಚಂದ ಮರುತ। ಅಜ್ಞಾನ ತಿಮಿರ ತರಣಿ। ಮಾನಸ ಕುಲಗಿರಿ ವಜ್ರ। ಅನುತಾಪ ಸರಿಸಿಜ ಹಿಮವಿದೆಂದು॥ ಮತ್ತು, ಸಾರ ಸುಖದ ಸುಧಾವಾರಿದಿ ಸುಕೃತದ ಮೇರು ಮುಕ್ತಿಯ ಜನ್ಮಭೂಮಿ ಚಾರು ಸಿದ್ಧಿಗಳ ಮಂದಾರ ದಿರವಿನ ಮೂಲ ಕಾರಣವಿದೆಂದು ನಿಗಮುಂಗಳರಸುವವು, ಮುನಿ ಜನರು ಧ್ಯಾನಿಸುವರು, ಸುರೋರುಗರ ಜಾಣ್ಮೆಗೆ ಶಿಲುಕದು, ಜಗದಾಗು ಹೋಗೆನಿಪ ಸೃಷ್ಟಿ ಸ್ಥಿತಿ ಸಂಹಾರಾದಿ ಕಾರ್ಯಂಗಳೊಳು ಸಿಲುಕದೆ ವಿಲಕ್ಷಣವಾಗಿ ಅವಿರಳ ಸಾಕ್ಷಿ ಚೈತನ್ಯ ಸ್ವರೂಪವಾದ ಶಿವಲಿಂಗದಗಣಿತನಿಜವಿದೆಂದು, ಸಕಲ ವೇದಾದಿ ಶ್ರುತಿ ಸ್ಮೃತ್ಯರ್ಥಂಗಳು ಸರ್ವ ಶಾಸ್ತ್ರಾಗಮಂಗಳು ಜ್ಞಾನೋತ್ಕರ್ಷವನ್ನೇ ಬಣ್ಣಿಸುತ್ತಿಹವಾಗಿ "ಜ್ಞಾನಮಾನಂದಮವ್ಯಯಂ"॥ ಎಂದು "ಜ್ಞಾನೇನ ವಿನಾ ನಾನ್ಯ ಪಂಥಃ" ಎಂದು ಈ ಸುಜ್ಞಾನದ ವರ್ಣನೆಯುಂಟು. "ಆಹಾರ ಸಿದ್ರಾ ಭಯ ವೈಧುನಂ ಚ। ಸಮಾನ ಮೇತತ್ಪಶುಭಿರ್ನರಾಣಾಂ॥ ಜ್ಞಾನೀ ನರಾಣಾಂ ಅಧಿಕೋ ವಿಶೇಷಃ। ಜ್ಞಾನೇನ ಹೀನಃ ಪಶುಭಿಃ ಸಮಾನಃ॥ ಎಂಬ ಪ್ರಮಾಣಗಳುಂಟಾಗಿ ಸುಜ್ಞಾನ ಹೀನರಾದ ನರ ಸುರೋರುಗರೆಲ್ಲರು ಪಶುಗಳೆಂದೇ ಹೇಳತಕ್ಕದ್ದು.

ಈ ಸುಜ್ಞಾನೋತ್ಪತ್ತಿಗೆ ಮೊದಲು ಗುರುಕಾರುಣ್ಯವಿಲ್ಲದೆ ಸಿದ್ಧಿಸದಾಗಿ ಗುರುಕಾರುಣ್ಯದಿಂದ ಜೀವ ಸಂಬೋಧನವದರಿಂ ಮೇಲೆ ನೀತಿ ಕ್ರಿಯಾಚರಣೆ, ಆ ಬಳಿಕ ಶಿವಯೋಗ ಸಾಧನ, ಅದರಿಂ ಬಳಿಕ ಸುಜ್ಞಾನ

ಪರ್ಯಾರ್ಗವೆನಿಪ ನಿಜಾನಂದ ಜ್ಞಾನೈಶ್ವರ್ಯ ರೂಪವಾದ ಸದ್ಯೋ ಮುಕ್ತಿ ಎಂಬ ಶಿವೈಕ್ಯ ಸಂಪದ ನಿಜಮೋಕ್ಷವಹುದಾಗಿ "ನಂದೋ ಜ್ಞಾನವನ್ನೇ" ಎಂದು ಬಲ್ಲ ಮಹಾತ್ಮರು ಹೇಳಿದ್ದಾರೆ. ಮತ್ತು ಸಕಲ ಶಾಸ್ತ್ರಗಳಾದರೂ ಇದರಂತೆ ಬೋಧಿಸುತ್ತವೆ.

ಸುಜ್ಞಾನಸಾರದಲ್ಲಿಯ ಯತ್ನೀಕೃತವು.

॥ಶ್ಲೋಕ॥ ಲೋಕಸಿದ್ಧಿ ನಿರಾಪೇಕ್ಷಂ। ಜ್ಞಾನಸಿದ್ಧಿ ದಯಾಪರಃ॥ ಕಾಯಸಿದ್ಧೀ ಸದಾಚಾರಂ। ವಿದ್ಯಾಸಿದ್ಧಿ ನಿಗರ್ವತಾ॥ ಎಂದಲ್ಲಿ ಈ ಸುಜ್ಞಾನ ಕೃಷಿಯಲ್ಲಿ ಭಕ್ತದೇಹವೆಂಬ ಶಿವಕ್ಷೇತ್ರವನ್ನು ಶ್ರೀಗುರುವೆಂಬ ಕೃಷಿಕನು, ಕುಂಟೆಯ ಕಟ್ಟೆ ಹರಗಿ ಬಿತ್ತಬೇಕಾದರೆ, ಸತ್ಕ್ರಿಯೆ ಸದಾಚಾರಗಳ ವರ್ತನೆಯಿಂದ ಹಸನಾದ ಭೂಮಿಯಾದರೆ ಬಿತ್ತುವನಲ್ಲದೆ, ಕಲ್ಲುಮೊರಡಿಗಳೆನಿಪ ಕಾಡುಭೂಮಿಯಾದ ಜಾರಿ ಬೊಬ್ಬಲಿ ನಟ್ಟು ಬೆಳೆದ ಬೀಳುಭೂಮಿಯಿಂದ ಅನಾಚಾರಿಗಳ ಹೃದಯದಲ್ಲಿ ಮಾಂಗಲ್ಯ ಸ್ವರೂಪವಾದ ಶಂಕರ ಭಕ್ತಿಯೆಂಬ ಪ್ರಣವ ಬೀಜವನ್ನು ಬಿತ್ತುವನೇ? ಬಿತ್ತಲರಿಯನು. ಅದು ಕಾರಣ ಜೀವನೆಂಬ ರಾಜನು ಶರೀರವೆಂಬ ಕ್ಷೇತ್ರವನ್ನು ಶ್ರೀಗುರುವೆಂಬ ಬಾದಶಹ ರೈತನಿಗೆ ಸಮರ್ಪಿಸಿ ಕೌಲು ಕರಾರು ಕೊಟ್ಟಲ್ಲಿ, ಸಾಗುಮಾಡಿ, ಸುಜ್ಞಾನ ಬೀಜವ ಬಿತ್ತುವನಲ್ಲದೆ, ಸುಮ್ಮನೆ ತನ್ನ ವಶಕ್ಕೆ ಬಾರದ ಬೀಳು ಭೂಮಿಯಲ್ಲಿ ಬಿತ್ತಲರಿಯನು. ಈ ದೃಷ್ಟಾಂತದ ತಾತ್ಪರ್ಯವೇನೆಂದರೆ, ಮೋಕ್ಷಾಪೇಕ್ಷೆಯುಳ್ಳವರುಗಳು ಸುಜ್ಞಾನದ ಬೆಳೆಯನ್ನು ಮಾಡಿಕೊಳ್ಳಬೇಕಾದರೆ ಕೌಲು ಕರಾರು ಕೊಡಬೇಕೆಂಬುದೇ ಯತ್ನವು. ಯತ್ನಮಾಡಿ ಜ್ಞಾನವನ್ನು ಪಡೆದರೆ, ಮುಕ್ತರಾದಾರಲ್ಲದೆ, ಜ್ಞಾನ ಹೀನರಾಗಿ ಅಲ್ಪ ಸ್ವಲ್ಪ ಸತ್ಕ್ರಿಯೆಗಳಿಂದ ತನ್ಮಿಂದ ತಾನೇ ಮುಕ್ತಿಯಾದೀತೆಂದರೆ, ಆಗಬಹುದೆ? ಆಗಲರಿಯದು. ಸಾಕ್ಷಿ: "ಕರ್ಮಕೋಟಿಗಳಿಂದ ಮುಕ್ತಿಯಾಗುವದುಂಟಿ?॥" ಎಂಬ ಪದದಲ್ಲಿ ಸರ್ವಭೂಷಣ ಕವಿಗಳು ಹೇಳಿದ್ದಾರೆ. ಇದಲ್ಲದೆ, "ಕರ್ಮವೆಂಬ ಜಾಲ ದೊಳು ಸಿಲುಕಿ ಹಂಬಲಿಸದಿರು ಮುಕ್ತಿಯು। ಬೇರೆ ಬಯಸಿ ಮನುಜಾ॥ ನಂಬೋ ಜ್ಞಾನವನ್ನೆ॥" ಎಂಬ ಪದದಲ್ಲಿ ನಿಜಗುಣಾರ್ಯರು ಹೇಳಿದ್ದಾರೆ.

ಕೆಲವು ಸತ್ಕರ್ಮಯುತರಾದವರು ಜ್ಞಾನ ಹೀನರಾಗಿ ಅಂಬುವದೇನೆಂದರೆ ಮೋಕ್ಷಕ್ಕೆ ಯತ್ನವೇತಕ್ಕೆ ಬೇಕು, ಯತ್ನದಿಂದ ಸುಜ್ಞಾನಿಯಾಗಬೇಕಾದರೆ ಭಕ್ತಿಜ್ಞಾನ ವೈರಾಗ್ಯದಿಂದಾಚರಿಸಿ ಲೋಕದಂತಿರದೆ, ಲೋಕವಿರುದ್ಧನಾಗದೆ ನಡೆನುಡಿಗಳಲ್ಲಿ ಬಹು ಎಚ್ಚರದಿಂದ ವರ್ತಿಸಬೇಕಾಗುತ್ತದೆ. ಅದರಿ ಇಷ್ಟು ಪ್ರಯತ್ನವೇತಕೆ? ಹಿಂದೆ ಪ್ರಲ್ಪ ಸ್ವಲ್ಪ ಸತ್ಕರ್ಮಗಳಿಂದ ಶ್ವೇತಾದಿಗಳಿಗೆ ಮುಕ್ತಿಯೋಗವಿಲ್ಲವೆ? ಎಂದು ನಿಜಗುಣಾರಾಧ್ಯರು ಹೇಳಿದ ಒಂದು ಮಾತಿನಾಧಾರದಿಂದ ಸಮ್ಮತ ಮಾಡಿಕೊಂಡು ಯತ್ನಹೀನರಾಗುತ್ತಾರೆ. ಹೇಗೆಂದರೆ "ಶಲಬಜಾಯಿಲಾನೆ ಪಂದಿ ಮಲ ನಿರುಂಪಿ," ಹದ್ದು ಹಕ್ಕಿಗಳನ್ನು ಶಂಭುಲಿಂಗವಮರ ಕುಲಕೆ ಮಿಗಿಲೆನಿಸಿದನಾಗಿ ಎಂದು ನಿಜಗುಣಾರ್ಯರು ಹೇಳಲಿಲ್ಲವೇ? ಎಂದೆನ್ನುತ್ತಾರೆ. ಇದಕ್ಕುತ್ತರವೇನೆಂದರೆ, " ಸದರವಲ್ಲವೇ ತಿಳಿಯೆ ಸದರವಲ್ಲವೇ ಮದನವೈರಿತನ್ನವರ್ಗ ಪದುಳದಿಂದ ಕೊಡುವ ಮುಕ್ತಿ ಸದರವಲ್ಲವೆ" ಎಂದು ಪದದ ಪಲ್ಲವಿಯಲ್ಲಿ ನಿಜಗುಣಾರಾಧ್ಯರು ಹೇಳಿದ್ದಾರೆ. ಇದರ ಅಭಿಪ್ರಾಯವೇನೆಂದರೆ, ಈ ಶ್ವೇತಾದಿಗಳಾದರೂ ಹಿಂದೆ ಹೇಳಿದ ಮೃಗಪಕ್ಷಿಗಳಾದರೂ ಪರಶಿವಮೂರ್ತಿಗೆ ಸಾನ್ನಿಧ್ಯರಾಗಿ ಸುಜ್ಞಾನದಿಂದ ಶಿವನವರಾದ ಕಾರಣ ತನ್ನವರಿಗೆ ಕೊಡುವ ಮುಕ್ತಿ ಸುಲಭವೆಂದು ಹೇಳಿದ್ದಾರಲ್ಲದೆ ಈ ಲೋಕದ ಜಡಕರ್ಮಿಗಳು ಅಲ್ಪಸ್ವಲ್ಪ ಭಿನ್ನಕರ್ಮಗಳನ್ನು ಮಾಡಿ ನಿಜಯತ್ನವಿಲ್ಲದೆ ನಾವು ಮುಕ್ತರಾಗುವೆವೆಂದರೆ ಮುಕ್ತರಾಗುವದುಂಟೆ? ಇದಕ್ಕೆ ಜ್ಞಾನ ಸಾಧನದಿಂದ ಪ್ರಯತ್ನವಾಡಿ ಅಭಿನ್ನ ಕ್ರಿಯೆಗಳಿಂದ ಶ್ರೀ ವೀರಶೈವಾಚಾರ ವಿಡಿದು ನಿರಾಭಾರತ್ವದಿಂದ ಪರಿಪೂರ್ಣ ಮಹಾಜ್ಞಾನಿ ಎನಿಸಿ ಶಿವೈಕ್ಯವಂ ಪಡಿದರೆ ಬಂದೀತಲ್ಲದೆ, ಯತ್ನವಿಲ್ಲದೆ ಭವಹಿಂಗುವದುಂಟೆ?

ಬಹು ಜನ್ಮಕೃತೈಃ ಪುಣ್ಯೈಃ। ಪ್ರಕ್ಷೀಣೈಃ ಪಾಪ ಪಂಜರೈಃ॥ ಶುದ್ಧಾಂತಃಕರಣೋ ದೇಹಿ। ಪಿಂಡ ಶಬ್ದೇನ ಗೀಯತೆ॥ ಮತ್ತು॥ ಅನೇಕ ಜನ್ಮಸಂಪ್ರಾಪ್ತಿ। ಕರ್ಮಧ್ಯಾನ ಸಮಾಧಿಭಿಃ॥ ನರಾಣಾಂ ಕ್ಷೀಣ ಪಾಪಾನಾಂ। ಶಿವಭಕ್ತಿ ಪ್ರಜಾಯತೆ॥ ಎಂದುಂಟಾಗಿ ಸದ್ಭಕ್ತಿ ಸದಾಚಾರ ಸಮ್ಯಜ್ಞಾನಂಗಳು ಹುಟ್ಟಬೇಕಾದರೆ, ಹಿಂದೆ ಅನಂತ ಜನ್ಮಂಗಳಲ್ಲಿ ಎಸಗಿದ ಸುಕೃತದಿಂದ ಶಿವಭಕ್ತಿ ಹುಟ್ಟುತ್ತಿಹುದು. ಅದರಲ್ಲಿ ಯಾವ ಬೀಜವನ್ನು ಬಿತ್ತಿದರೆ ಆ ಫಲವಾಗುವಂತೆ ಕರ್ಮವನ್ನು ಮಾಡಿ ಕರ್ಮಸಂಬಂಧದ

ಪುಣ್ಯ ಸಂಗ್ರಹದಿಂದ ಕರ್ಮಫಲವೇ ಪ್ರಾಪ್ತಿಸುವದು. ನಿರಾಧಾರ ಪರವು ವೀರಶೈವ ಪಥವಿಡಿದು ಮಾಡಿದ ಅಭಿನ್ನ ಸತ್ಕ್ರಿಯೆಗಳಿಂದ ನಿಜ ಮೋಕ್ಷ ವಾಗುವದು. ಅದು ಕಾರಣ ಯತ್ನವಿಲ್ಲದೆ, ಯಾವ ಕಾರ್ಯವೂ ಫಲಿಸಲರಿಯದು ಸಾಕ್ಷಿ "ಉದ್ಯೋಗಿನಂ ಪುರುಷ ಸಿಂಹಮುಪೈತಿ ಲಕ್ಷ್ಮೀಃ ದೈವ ಪ್ರಧಾನ ಇತಿ ಕೆ ಪುರುಷಾವದಂತಿ॥ ದೈವಂ ವಿಹಾಯಕುರು ಪೌರುಷ ಮಾತ್ಮ. ಶಕ್ತ್ಯಾ ॥ ಯತ್ನೀಕೃತೆ ಯದಿ ನ ಸಿಧ್ಯತಿ ಕೋತ್ರ ದೋಷಃ॥ ಉದ್ಯೋಗವನ್ನು ಮಾಡುವ ಪುರುಷ ಶ್ರೇಷ್ಠನನ್ನು ಮೆಚ್ಚಿ ಪ್ರಸನ್ನಳಾಗಿ ಅವನ ವಶೀಕೃತಳಾಗುತ್ತಾಳೆ. ಇದಲ್ಲದೆ ಕೆಲವು ಪುರುಷರು ದೈವ ಪ್ರಧಾನವೆನ್ನುತ್ತಾರೆ. ಆ ಮಾತನ್ನು ನಂಬದೆ ತಮ್ಮಾತ್ಮಶಕ್ತಿ ಇದ್ದಷ್ಟು ಪೂರ್ತಿಗಾದರು ಪ್ರಯತ್ನ ಮಾಡೇನು, ಪಡೆದೇನು ಎಂಬ ಪರಾಕ್ರಮದಿಂದ ಪರಮಾತ್ಮನನ್ನು ಕುರಿತು ಧ್ಯಾನ ಪೂಜಾ ನಮಸ್ಕಾರ ಸ್ತೋತ್ರಾದಿಂಗಳಿಂದ ಒಲಿಸಿ ಭೋಗ ಭುಕ್ತಾಪೇಕ್ಷಿತರಾಗಿ ಸಕಲ ಪ್ರಯತ್ನಾದಿಗಳನ್ನು ಮಾಡಿ ಮಹದೈಶ್ವರ್ಯಗಳನ್ನು ಪಡೆಯಬೇಕು. ಮತ್ತು ಅಧಿಕಾರಿಗಳಾದರೆ ವೀರತ್ವದಿಂದ ವೀರ ಭಕ್ತಿಯನ್ನು ಮಾಡಿ ವೀರಶೈವಾಚಾರ ತತ್ಪರರಾಗಿ ನಿಜ ಮೋಕ್ಷವನ್ನು ಪಡೆಯಬೇಕು.

ಸುಜ್ಞಾನ ಸಂಪಾದನೆ.

ಸುಜ್ಞಾನದ ಲಕ್ಷಣವೆಂತೆಂದಡೆ, "ಅದಿದೆಂಬುದಖಿಳ ತತ್ವವ ನೇತಿಗಳೆದುಳಿದ ಸದಮಳ ಚಿದಾನಂದ ಪೂರ್ಣ ತಾನೆಂದು ಹೃದಯದೊಳು ನಂಬಿ ಬಹು ಮತವನೆಣಿಸದೆ ಮತ್ತೆ ಪದುಳದಿಂದಿರದೇ ಸಹಜ ಸುಜ್ಞಾನಿ" ಈ ಪ್ರಕಾರ ನಿಜಗುಣ ಶಿವಯೋಗಿಗಳು ಸುಜ್ಞಾನದ ಕುರುಹನ್ನು ಹೇಳಿದ್ದಾರೆ. ಅದು ಹ್ಯಾಗೆಂದರೆ, ತನಗೆ ಅಂತರ್ಬಾಹ್ಯದಲ್ಲಿ ಕರಣಾದಿ ಇಂದ್ರಿಯಂಗಳಿಗೆ ಸ್ಥೂಲ ಸೂಕ್ಷ್ಮ ರೂಪದಿಂದ ಎದುರಾಗಿ ಕಾಣಿಸುವ ಪಿಂಡ ಬ್ರಹ್ಮಾಂಡಗಳಲ್ಲಿರುವ ಸಕಲ ತತ್ವಗಳನ್ನು ಜಡರೂಪವೆಂದು ನೇತಿಗಳೆದು ತನಗೆದುರಾಗಿ ಕಾಣಿಸದೆ ಉಳಿದಿರುವ ತತ್ವವಾವುದುಂಟೋ ಆ ತತ್ವವೇ ತಾನೆಂದು ನಿಶ್ಚಯಿಸತಕ್ಕದ್ದು. ಅದರಿ ಆ ವಸ್ತುವು ನಿಜವಹುದೋ ಅಲ್ಲವೋ ಎಂಬ ಪರೀಕ್ಷೆಗೆ ಸತ್‌ಚಿತ್ ಅನಂದ ನಿತ್ಯ ಪರಿಪೂರ್ಣವೆಂಬ ಪಂಚ ಲಕ್ಷಣಗಳುಂಟು. ಆ ಪಂಚಲಕ್ಷಣಗಳುಳ್ಳದ್ದೇ ವಸ್ತುವಹುದೆಂದು ನಿರ್ಧರಿಸತಕ್ಕದ್ದು. ಈ ಪಂಚಲಕ್ಷಣಗಳ ಅಧಾರದ ಊಹೆಯಿಂದ ಅಪರೋಕ್ಷ ಜ್ಞಾನದಲ್ಲಿ ವಸ್ತು ನಿರ್ದೇಶವಾದಾಗಲೇ ಆ

ವಸ್ತುವೇ ಸತ್ ಚಿತ್ ಆನಂದ ಪರಿಪೂರ್ಣ ತಾನೆಂದು ಹೃದಯ ದೊಳು ನಂಬಿ, ಬಹಳವಾದ ಭಿನ್ನ ಜ್ಞಾನ ಮತಗಳನ್ನು ಗಣನೆಗೆ ತಾರದೆ, ವೇದ ಸಮ್ಮತವಾದ ಶಿವಮತದ ಸಕಲ ಶಿವಾಗಮಂಗಳಿಗ ನುಸಾರವಾಗಿ ಆದ್ಯರ ವಚನಾನುಭಾವವಿಡಿದು, ಆಚರಿಸುತ್ತ ಆನಂದ ಮಯನಾಗಿ ಪೂರ್ಣ ತಾನಾಗಿ ಏಕಾತ್ಮನಾಗಿ ತನಗನ್ಯವೇನೇನು ತೋರದೆ ಸರ್ವ ಸಮತಾಭಾವಿಯಾಗಿ ಅಣು ರೇಣು ತೃಣಗಳಲ್ಲಾದರೂ ತನ್ನನೇ ಕಾಣುತ್ತ ಇರುವದೇ ಸಹಜ ಸುಜ್ಞಾನವು. ಈ ಮಹಾ ಜ್ಞಾನವೇ ನಿರಾಭಾರಿ ವೀರಶೈವಾಚಾರಸ್ಥಿತಿ ಎಂದೆನಿಸುತ್ತದೆ. ಸಾಕ್ಷೀ—"ನ ಕರ್ಮಣಾ ನ ತಪಸಾ। ನ ಜಪೇನ ಸಮಾಧಿಭಿಃ॥ ಅವಾಯ ಶಿವಮಾರ್ಗೇಽಸ್ಮಿನ್। ಭಕ್ತಿರೇಕಾ ಪ್ರದರ್ಶ್ಯತೆ॥ ಮತ್ತು ॥ ನ ಯೋಗೋ ನ ತಪೋನಾರ್ಚನೋ। ಕ್ರಮೆ ಕೋಪಿ ನ ವಿದ್ಯತೆ॥ ಅಪೋಯ ಶಿವ ಮಾರ್ಗೇಽಸ್ಮಿನ್। ಭಕ್ತಿರೇಕ ಪ್ರದರ್ಶ್ಯತೆ॥ ಇಂತೆಂಬ ಶ್ರುತಿ ವಾಕ್ಯ ಪ್ರಮಾಣದಿಂದ ಪೂರ್ಣ ನಂದನಾಗಿರ್ಪುದೆ ಸುಜ್ಞಾನವೆನಿಸುವದು. ಇದುವೇ ಜೀವನ್ಮುಕ್ತಿ ಲಕ್ಷಣವು.

ಈ ಸುಜ್ಞಾನವು ತನಗೆ ಗೋಚರಿಸಿ ದೃಢವಾಗಬೇಕಾದರೆ, ಜಗ ದುಪಕಾರಿಗಳಾದ ನಿಜಗುಣ ಶಿವಯೋಗಿಗಳಿಂದ ರಚಿಸಲ್ಪಟ್ಟ ಅನು ಭವಸಾರದ ಅರ್ಥಾನ್ವಯವನ್ನು ಚನ್ನಾಗಿ ತಿಳಿದರೆ ಆ ಗ್ರಂಥದ ಎರಡನೇ ಅಧ್ಯಾಯದಲ್ಲಿ ವಸ್ತುನಿರ್ದೇಶವಾಗುವದು. ಮತ್ತು ಪರಮಾನುಭವ ಬೋಧೆಯ ಪ್ರಥಮದ ಮೂರು ಅಧ್ಯಾಯಗಳಲ್ಲಿ ತತ್ವಜ್ಞಾನದ ಬಲಿಕೆ ಯಾಗುವದು. ಗೀತೆಯಲ್ಲಿ ಸಕಲ ತತ್ವಾದಿಗಳುದಯವು. ಮತ್ತು ಪಂಚೀ ಕರಣಗಳ ಕಾರುಹು ಸಪ್ತ ಭೂಮಿಕೆ ಎಂಬ ಜೀವನ್ಮುಕ್ತಿಯ ಸಪ್ತ ವಿಧ ಸ್ಥಿತಿಗಳು, ಹೃದ್ಯೋದ್ಯವಾಗುವವು. ಪಾರಮಾರ್ಥ ಪ್ರಕಾಶದಲ್ಲಿ ಸಕಲಯೋಗ ಲಕ್ಷಣಗಳು ಮಂತ್ರ ಜಪಾನುಷ್ಠಾನದ ಕ್ರಮಗಳು ಸಮಸ್ತ ಸಿದ್ಧಿಗಳು ತಿಳಿಯಲ್ಪಡುವವು. ವಿವೇಕ ಚಿಂತಾಮಣಿಯಲ್ಲಿ ಸಕಲ ಲಕ್ಷಣ ಗಳು ಸಕಲಾಗಮಂಗಳು ವೀರಶೈವ ನಿರಾಭಾರಿ ವೀರಶೈವ ಲಕ್ಷಣಗಳು ಮತ್ತು ಬ್ರಹ್ಮಾಂಡದ ಸಕಲ ಲಕ್ಷಣಗಳು ಮನನವಾಗುವವು. ಕೈವಲ್ಯ ಪದ್ಧತಿಯಲ್ಲಿ ಜ್ಞಾನಸಿದ್ಧಿ ಜೀವನ್ಮುಕ್ತಿ ಸ್ಥಿತಿಯನ್ನು ನಿರ್ಧರಗೊಳಿಸುವದು. ಈ ರೀತಿಯಿಂದ ಸುಜ್ಞಾನೋದಯಕ್ಕೆ ಸಕಲ ಶ್ರುತಿ ಸ್ಮೃತಿ ವೇದಾಗಮ ಸಮ್ಮತವಾದ ಸಾರ ತರದ ಪ್ರಬಲ ಶಾಸ್ತ್ರಗಳಿರಲಾಗಿ ಅವುಗಳ ಸಾರ ವನ್ನು ಸುಜ್ಞಾನ ಪ್ರಕರಣದಲ್ಲಿ ಬರೆಯಬೇಕೆಂಬ ಪ್ರಯೋಜನವಿಲ್ಲ.

ಅದಾಗ್ಯೂ ನಿಜಗುಣಯೋಗಿಗಳ ಷಟ್‌ಶಾಸ್ತ್ರಂಗಳ ಸಾರವನ್ನೆಲ್ಲಾ ಸಂಪ್ರದಕ್ಕೆ ತಂದು ಸುಲಭದಿಂದ ತಿಳಿಯುವ ಹಾಗೆ ಬರೆದರೂ ಉತ್ತಮವೇ ಸರಿ.

ಈ ನಿಜಗುಣಯೋಗಿಗಳ ಷಟ್ಶಾಸ್ತ್ರಂಗಳನಾದರೂ ಸಹಜವಾಗಿ ಅರ್ಥ ಮಾಡಿ ಇದ್ದಕಿದ್ದ ಹಾಗೆ ಅರ್ಥ ಮಾಡಿ ತಿಳಿಯಲರಿಯದೆ ವಾಗ್ಬ್ರಹ್ಮತ್ವದ ಚಾಪಲ್ಯದ ಮಾತು ಕಲಿತು ತಮ್ಮ ದುರ್ಗುಣವನ್ನು ಮರೆಸಿ ಕೊಂಬುವದಕ್ಕೆ ತಮ್ಮ ತಮ್ಮ ದುರ್ವರ್ತನೆಗೆ ಸರಿಯಾಗಿ ವಿಪರೀತಾರ್ಥದಿಂದ ಸಮ್ಮತ ಮಾಡಿಕೊಳ್ಳುತ್ತಾರೆ. ಹೇಗಂದರೆ, "ನನ್ನ ಮನೆಗೆ ನಾನೇ ದಾಸ, ಬೆಕ್ಕಿಗಿಡೋ ಪೆಂಗಿ ನಾಮ" ಎಂಬ ಸೂಳೆಯರ ಗಾದೆಯಂತೆ ಶ್ರುತ್ಯಾಗಮಂಗಳಿಗೆ ವಿರೋಧವಾಗಿ ತಮ್ಮಿಚ್ಛೆಯಾಗಿ ತಮ್ಮ ಮನ ಬಂದ ಪರಿಯಲ್ಲಿ ಅರ್ಥ ಮಾಡಿ ಶಾಸ್ತ್ರ ಕೆಡಿಸುತ್ತಾರೆ. ಮತ್ತು ಸೂಳೆಯರ ಸಭೆಯಲ್ಲಿ ಕುಂಟೆದಾಸನೇ ಪಂಡಿತನೆಂಬಂತೆ, ಮೂರ್ಖಜನರ ಸಭೆಯಲ್ಲಿ ವಿಪರೀತಾರ್ಥವ ಹೇಳಿ ಮರುಳು ಗೊಳಿಸುವರು. ಈ ವಾಗ್ಬ್ರಹ್ಮಿಗಳಾದ ಶುಷ್ಕ ವೇದಾಂತಿಗಳು "ಹುಲ್ಲು ಕಿಚ್ಚು ಹೊಲೆಯರ ಮೇಳದಂತೆ ನಡಿ ಒಂದು ಪರಿ, ನಡೆ ಒಂದು ಪರಿ, ಪರ ಒಂದು ಪರಿ, ಅರ್ಥ ಒಂದು ಪರಿಯಾಗಿರ್ಪುದು" ಹೇಗಂದರೆ ಹೊಲೆಯರ ಮೇಳದಲ್ಲಿ ಡೊಳ್ಳೊಂದು ಕಡೆಗೆ ಕೊಳಲೊಂದು ಕಡೆಗೆ ನರ್ತನ ಒತ್ತಟ್ಟಿಗೆ ಪದ ಒತ್ತಟ್ಟಿಗೆ ಆಳಿಯ ಒತ್ತಟ್ಟಿಗೆ ಹೀಗಾಗಿ ತಾಳ ಕೂಡದೆ ಮೇಳ ಕೂಡದೆ, ನರ್ತನ ವಾಡುವಲ್ಲಿ ಸಂಗೀತ ಬಲ್ಲವರ ಮುಂದೆ ಹಾಸ್ಯವಲ್ಲವೇ? ಹೀಗೆ ವಾಗ್ಬ್ರಹ್ಮಜ್ಞಾನದಲ್ಲಿ ಮೇಳವಿಲ್ಲವು. ಇವರಿಗೆ ಶುಷ್ಕ ವೇದಾಂತಿಗಳೆಂಬ ಹೆಸರು.

ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರಗಳು ಶಿವಾಗಮಂಗಳ ಪುಂಜವು. ಪರಮ ವೀರಶೈವಾಚಾರ ಸ್ಥಿತಿಗೆ ಜ್ಞಾನದರ್ಪಣವು. ಹೀಗಿದ್ದು ಆದ್ಯರ ವಚನಕ್ಕನುಸಾರವಾಗಿಪ್ಪ ದಿವ್ಯಜ್ಞಾನಮಯವಾದ ಮೋಕ್ಷ ಚಿಂತಾರತ್ನವಾಗಿ ಮುಮುಕ್ಷು ಜನರ ಕರ ದೀಪಿಕೆಯಾಗಿ ಒಪ್ಪಲ್ಪಟ್ಟ ಪ್ರಬಲ ಶಾಸ್ತ್ರಗಳರ್ಥವನ್ನು ಕೆಡಿಸಿ ಅನರ್ಥ ಮಾಡಿ ದುರ್ಬೋಧೆಯನ್ನು ಬೋಧಿಸುವ ಶುಷ್ಕರನ್ನು ನಂಬಲಾಗದು. ಮತ್ತು ಆದ್ಯರ ವಚನಕ್ಕನುಸಾರವಾಗಿ ಶಿವಾಗಮಂಗಳನುಮತವಾಗಿ ಶ್ರುತಿ ಸ್ಮೃತಿಗಳಂ ಮೇಳೈಸಿ ವಚನ ಗಳರ್ಥಾನುಭವದಂತೆ, ಅರ್ಥೈಸಿ ಶಿಷ್ಯನ ಸಂಕಲ್ಪಾದಿಗಳಂ ನಿರಸನ ದ್ವಾರದಿಂ ಕಳೆದು ಶಿಷ್ಯ ಸಂತಾಪ ಹರಣ ಮಾಡಿ ಗುರುತ್ವಾಭಿಮಾನ

ರಹಿತನಪ್ಪಾತನೇ ಶ್ರೀಗುರುವೆಂದರಿದು, ಇಂತಪ್ಪ ಸದ್ಗುರುಗಳಿಂದ ನಿಜ ಗುಣ ಶಾಸ್ತ್ರದರ್ಥಂಗಳ ಕೇಳಿ ತಿಳಿಯಬೇಕು. ಇದಲ್ಲದೆ ಶಿಷ್ಯವಿತ್ತಾರ ಹಾರಕರಾದ ದುರಭಿಮಾನಿಗಳ ಮುಖದಿಂದ ಕೇಳಲಾಗದು. ಏಕೆಂದಡೆ ನಡೆನುಡಿಗಳಲ್ಲಿ ತಾನೇ ಶುದ್ಧನಲ್ಲದಿದ್ದರೆ, ಶಿಷ್ಯರನ್ನು ಪರಿಶುದ್ಧ ಮಾಡುವ ಪರಿ ಎಂತು? ಇವರು ದುರ್ಬೋಧೆಯಂ ಬೋಧಿಸುವರಲ್ಲದೆ, ಸದ್ಬೋಧೆಯಂ ಬೋಧಿಸಲರಿಯದು.

ಬುದ್ಧಿಯನ್ನು ಹೇಳುವದಕ್ಕೆ ಆದ್ಯರುಗಳ ವಚನ ಉಂಟು. "ಉಪ್ಪರಿಗೆ ಸುವಡೆಮಗೆ ಶಿವನ ಮಂತ್ರ ಉಂಟಿಲ್ಲೆ" ಎಂದು ವೈರಾಗ್ಯ ಷಡಕ್ಷರಿ ದೇವರ ವಚನ ಉಂಟಾಗಿ ಜಗದೋಪಕಾರ ನಿಮಿತ್ಯದಿಂದ ಸಕಲಾಗಮಂಗಳ ಸಾರವೆಲ್ಲಾ ಏಕ ಮುಹೂರ್ತದಲ್ಲಿ ತಿಳಿಯುಂತೆ ಒಂದೊಂದು ವಚನದಲ್ಲಿ ಕೋಟಿ ಕೋಟಿ ಗ್ರಂಥಂಗಳ ಸಾರವನ್ನೇ ಸಂಗ್ರಹಿಸಿ ಅನೇಕ ಶ್ರುತಿ ಸ್ಮೃತಿಗಳ ದುಷ್ಪಧಾರಿಷ್ಟ್ಯಾದಿಗಳಿಂದ ಪರಿಪೂರ್ಣ ಜ್ಞಾನವು ಸ್ಥಿರವಾಗುವಂತೆ, ಪಾರಮಾರ್ಥದ ನಿಜವನ್ನೇ ಗಟ್ಟಿ ಗೊಳಿಸಿ, ಸುಲಿದ ಬಾಳೆಯ ಹಣ್ಣಿನಂತೆ ಆಯಾಸವಿಲ್ಲದೆ, ಕೇಳಿದ ಮಾತ್ರದಲ್ಲಿಯೇ ಜ್ಞಾನೋದಯವಾಗುವ ಹಾಗೆ ಪರಮಾರಾಧ್ಯರಾದ ಬಸವಾದಿ ಪುರಾತನರು ಹೇಳಿದ ವಚನಗಳನಂತವುಂಟು. ಅಂತಪ್ಪ "ಶ್ರೀಗುರು ವಚನೋಪದೇಶವ ನಾಲಿಸಿದಾಗಳಾಹುದು ನರರಿಗೆ ಮುಕುತಿ" ಎಂದು ಮತ್ತು "ಶ್ರೀಗುರು ವಚನದಿಂದಧಿಕ ಸುಧೆಯುಂಟಿ?" ಎಂದು ನಿಜಗುಣ ವಾಕ್ಯ ಉಂಟಾಗಿ ಜಗದಾರಾಧ್ಯರಾದ ಬಸವಾದಿ ಪುರಾತನರ ವಚನಾನುಭಾವವನ್ನು ವಿಶ್ವಾಸಿಸಿಕೊಂಡು ಸಕಲ ತತ್ವಂಗಳ ವಿಚಾರವನ್ನು ತಿಳಿದು ಶ್ರೀ ವೀರಶೈವಾಚಾರ ವಾರ್ಗಸ್ಥಿತಿಯೊಳ್ ಜ್ಞಾನಕ್ರಿಯೆಗಳೊಂದಾಗಿ ಜಡನಾಗದೆ ಉದಡನಾಗದೆ, ಪಿಂಡಾದಿ ಜ್ಞಾನಶೂನ್ಯಾಂತವಾದ ನೂರಾ ಒಂದು ಸ್ಥಲದಾಚರಣೆ ಅಂಗಗೊಂಡು ಭಕ್ತಾದಿ ಐಕ್ಯಾಂತವಾದ ಷಟ್‌ಸ್ಥಲವಾರ್ಗದಲ್ಲಿ ಪ್ರವರ್ತಿಸುತೆ, ನಡೆನುಡಿ ಸಿದ್ಧಾಂತವಾಗಿ ಅಂತರಂಗದ ಮಹಾಜ್ಞಾನವನ್ನೇ ಬಹಿರಂಗದಲ್ಲಿ ಕ್ರಿಯಾರೂಪಕ್ಕೆ ತಂದು ಮತ್ತು ಬಹಿರಂಗದ ಸಮಸ್ತ ಕ್ರಿಯೆಗಳನ್ನೆಲ್ಲಾ ಅಂತರಂಗದ ಮಹಾಜ್ಞಾನದಲ್ಲಿ ಸಂಬಂಧಿಸಿ ಲೋಕಾಚಾರ ವರ್ತನವಾದ ಷಟ್ಕೃಷಿ ಲೋಕವ್ಯವಹಾರಂಗಳಲ್ಲಾದರೂ ಸತ್ಯ ಸದಾಚಾರವಿಡಿದು ಸತ್ಯಾಯಕವೆಂದೆನಿಸಿ ಗುರುಮಾರ್ಗಾಚಾರವಾಗಿ ಮಾರ್ಗಕ್ರಿಯೆ ಮೀರಿದ ಕ್ರಿಯೆಗಳಿಂದೆ ವ್ಯವಹರಿಸುತ್ತ ಲೌಕಿಕರಂತೆ ಇರದೆ, ಭಕ್ತಿ ದಾಸೋಹ ಮುಂದುಗೊಂಡು ಸಕಲ ಕಾರ್ಯಂಗಳನೆಲ್ಲ ಜ್ಞಾನ

ಪದಿಂದ ಗುರುಲಿಂಗಜಂಗಮ ದಾಸೋಹ ಮುಖಾಂತರವಾಗಿ ಸಾಗಿ ಪರಮ ಜ್ಞಾನಿಗಳೆನಿಸಿ ಪ್ರಪಂಚದಲ್ಲಿದ್ದರೂ ಲೋಕಾತೀತವಾದವನ್ನು ತೊರೆದು ನಿವೃತ್ತಿ ಮುಖದಿಂದ ನಿಷ್ಪ್ರಪಂಚಿಗಳಾಗಿ ಸುಜ್ಞಾನದಿಂದ ಪತ್ಯಾಭಿವನ್ನು ಅಂತರ್ಧ್ಯಾನ ಬಹಿಃಕ್ರಿಯೆಗಳಲ್ಲಿ ಸರಿಯಾಗಿ ಮಾಡುತ್ತಿರಬೇಕು. ಹೇಗಂದರೆ "ಶರೀರವೆಂದೊಂಬುವ ಹೊಲನ ಹಸನ ಮಾಡಿ ಪರತತ್ವ ಬೆಳೆಯನ್ನು ಬೆಳೆದುಣ್ಣಿರೋ" ಎಂದು ಸಪ್ಪಣ್ಣ ಶಾಸ್ತ್ರಿಗಳು ಹೇಳಿದ್ದಾರೆ. ಇದಲ್ಲದೆ, ಅನಂತ ಶಿವಕವಿಗಳು ಮತ್ತು ಪೂರ್ವ ಪುರಾತನರು ಬಸವಾದಿ ಪ್ರಮಥರು ನೂತನ ಪುರಾತನರು ಸುಜ್ಞಾನ ಕೃಷಿಗನುಸಾರವಾಗಿ ಪಾರಮಾರ್ಥ ಕೃಷಿವಚನಗಳಲ್ಲಿ ತಮ್ಮ ನಿಜದರವಿನ ನೆರೆಯನ್ನು ಸೂಚಿಸಿದ್ದಾರೆ. ಕೆಲವರು ಪದರೂಪವಾಗಿ ಹೇಳಿದ್ದಾರೆ.

ಆದ್ಯರ ವಚನದಂತೆ ನಡೆ ನುಡಿ ಸಿದ್ಧಾಂತಕ್ಕೆ ಪ್ರಾಮಾಣ್ಯವಾಗಿ ಗುರುವಚನಂಗಳಾದ ಜಗದ್ಗುರು ಬಸವಾದಿ ಪುರಾತನರ ವಚನಂಗಳನ್ನು ಕೇಳಿ ತಿಳಿದು ಆಚರಿಸಿದರೆ, ವೀರಶೈವಾಚಾರ ತತ್ಪರರಾಗಿ ಪರಿಪೂರ್ಣ ಭಾವದಿಂದ ಸುಜ್ಞಾನ ಸಂಪನ್ನರಾಗಿ ನಿಜೈಕ್ಯ ಸಂಪದವನ್ನು ಪಡೆದು ನಿಜಾನಂದದಲ್ಲಿ ಪರಮುಕ್ತರಾಗುವದಕ್ಕೆ ಸಂಶಯವಿಲ್ಲವು.

ಮನುಷ್ಯ ಮಾತ್ರ ಯಾವತ್ತಂಲ್ಲಿ ಜ್ಞಾನಾಂಕುರವು ಇದ್ದದ್ದೇ ಸರಿ. ಆ ಜ್ಞಾನ ಸಸಿಯನ್ನು ವರ್ಧನ ಮಾಡಬೇಕಾದರೆ ದುರ್ಗುಣವೆಂಬ ಕಸವ ತೆಗೆದು ಸತ್ಕ್ರಿಯೆ ಎಂಬ ವಡ್ಡಿ ಕಟ್ಟಿ ಚತುರ್ವಿಧ ಭಕ್ತಿ ಎಂಬ ಜೌಕು ಮಡಿಗಳ ಮಾಡಿ ಸದ್ವಿವೇಕವೆಂಬ ನೀರನುಣಿಸಿ ಸಮತೆ ಸ್ವೀಕರಣೆ ಎಂಬ ಗೊಬ್ಬರವನಿಟ್ಟು ದುರ್ವಿವೇಕವೆಂಬ ಉದ ಪರುಗಳು ಮುಟ್ಟದಂತೆ ಸತ್ಸಂಗವೆಂಬ ಜೇಲಿಯನಿಕ್ಕಿ ಸಸಿಯ ಸಲಹಿದರೆ ಪಸುರಾಗಿ ಪಲ್ಲೈಸಿ ಸುಜ್ಞಾನವೆಂಬ ಹೂವಾಗಿ ಮಹಾಜ್ಞಾನವೆಂಬ ಹಣ್ಣಾಗಿ ಪರಿಪೂರ್ಣ ಜ್ಞಾನವೆಂಬ ತೊಟ್ಟು ಬಟ್ಟು ಆನಂದವೆಂಬ ರಸ ಒಸರುತ್ತಿರ್ಪುದು. ಇದಕ್ಕೆ ಸಾಕ್ಷಿ, ವಚನ— "ಬೆಳಿನ ಭೂಮಿಯೊಳಿಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು ಎಚ್ಚರಲೀಯದು. ಎನ್ನವ ಗುಣವೆಂಬ ಕಸವ ಕಿತ್ತ ಸಲಪಯ್ಯ ಲಿಂಗ ತಂದೆ. ಸುಳಿವೆಗೆದು ಬೆಳೆಸು ಕೂಡಲಸಂಗಮದೇವಾ" ಎಂದು ಬಸವರಾಜದೇವರು ಜ್ಞಾನ ಸಸಿಯನ್ನು ವರ್ಧನ ಮಾಡಬೇಕೆಂದು ಲೌಕಿಕರು ಗುರೂಪಾವಸ್ಥೆಯ ಮಾಡುವ ರೀತಿಯನ್ನು ಸೂಚಿಸುವದಕ್ಕಾಗಿ ನುಡಿದುಕೊಂಡಿದ್ದಾರೆ.

ವೃತ್ತಿ ಜ್ಞಾನವು ಸಕಲ ಪ್ರಾಣಿಗಳಲ್ಲಿ ತಕ್ಕ ಮಟ್ಟಿಗೆ ಇದ್ದದ್ದು. ಆ ಜ್ಞಾನವು ಸ್ಥಿರಚರ ಪ್ರಾಣಿಗಳಲ್ಲಿ ಪರೆ ಪಶ್ಯಂತಿ ಮಧ್ಯಮೆ ವೈಖರಿ ಎಂದು ನಾಲ್ಕು ಪ್ರಕಾರ ಬೇರೆ ಬೇರೆಯಾಗಿ ವೃಕ್ಷಾದಿಗಳಲ್ಲಿ ಪರೆ ಎನಿಸಿ ಪಕ್ಷಾದಿಗಳಲ್ಲಿ ಪಶ್ಯಂತಿ ಎನಿಸಿ ಪಶುವಾದಿಗಳಲ್ಲಿ ಮಧ್ಯಮೆಯಾಗಿ ಮನುಷ್ಯರುಗಳಲ್ಲಿ ವೈಖರಿಯಾಗಿ ತಾಲವ್ಯ ದಂತವ್ಯ ಮೂಲವ್ಯದಿಂದ ಅಕ್ಷರಾತ್ಮಕ ರೂಪವಾಗಿರ್ದು ಸಕಲವೆಲ್ಲವನು ಅರಿದು, ಅದರ ಅರ್ಥ ತಿಳಿಯುವಂತೆ ನುಡಿದು ಅದರಂತೆ ಬರೆದು ಮತ್ತೂ ಹೇಳಿ ಕೇಳಿ ಮಾಡಿ ತೋರಿಸುವ ಸರ್ವ ಲಕ್ಷಣ ಸಂಪನ್ನತ್ವವಿರ್ದು ಅನುಭಾವ ಮುಖಾಂತರದಲ್ಲಿ ಪ್ರತ್ಯಕ್ಷ ಮಾಡಿಕೊಡುತ್ತ ಇರ್ಪುದು. ಆ ವೈಖರಿಯು ಆಯಾಯ ಪ್ರಾಣಿಗಳಿಗೆ ತಕ್ಕ ತಕ್ಕ ಹಾಗೆ ಅದರದರ ಸ್ವಭಾವದಿಂದ ಜೀವನೋಪಾಯಕ್ಕೆ ಆಹಾರವನ್ನೇ ತಿಂದುಕೊಂಡು ಪರಿಣಾಮಿಸುವಷ್ಟಕ್ಕೆ ಪ್ರವೃತ್ತಿಯಾಗಿ ವೃತ್ತಿಜ್ಞಾನವೆಂದು ಹೇಳಿಸಿಕೊಂಬುವುದು. ಆದರೆ ಮನುಷ್ಯರಲ್ಲಿ ಮಾತ್ರ ವಿಚಿತ್ರ ವೈಖರ್ಯಾದಿ ಚಾತುರ್ಯದಿಂದ ಅಜ್ಞಾನವು ತಾನು ತನ್ನರಿವು ಶಿವತ್ವವು ಬೇರೆ ಎಂಬ ತ್ರಿಪುಟಿರೂಪವಾಗಿ ಭಿನ್ನ ಜ್ಞಾನವೆನಿಸಿಕೊಂಡು ಜ್ಞಾತೃ ಜ್ಞಾನ ಜ್ಞೇಯವೆಂಬ ಪೆಸರಂ ಪಡೆದು ಆವಾವ ಕಾರ್ಯವನ್ನಾದರೂ ಸಾಧಿಸಿ ಕೊಡುವದಕ್ಕೆ ತಾನೇ ಮುಖ್ಯ ಸಾಧನವಾಗಿದೆ.

ಆ ವೃತ್ತಿಜ್ಞಾನವು ಆಹಾರವ್ಯವಹಾರಂಗಳ ಪೂರ್ತಿಗೆ ಎಷ್ಟು ಚಾತುರ್ಯವಾಗಿ ಕಂಡ ಕಾಲಕ್ಕೂ ಜೀವನ ಸಂರಕ್ಷಣೋಪಾಯಕ್ಕೆ ಉಪಯೋಗವಾಗುವದಲ್ಲದೆ ಸುಜ್ಞಾನವಾಗಲರಿಯದು. ತನ್ನ ತಾನರಿಯದ ಕಾರಣ ಅಜ್ಞಾನವೆನಿಸುವದು. ಆ ಭಿನ್ನ ಜ್ಞಾನವಾದರೂ ಸುಜ್ಞಾನದಂಶವಾದ ಕಾರಣ ವಿಚಿತ್ರ ವೈಖರ್ಯಾದಿ ವಾಚ್ಯರೂಪದಿಂದಿರ್ದು ಅಕ್ಷರಾತ್ಮಕವಾಗಿ ಸಕಲವೆಲ್ಲವನು ಅರುಹಿ ಕೊಡುವಲ್ಲಿ ಪ್ರಕಾಶ ರೂಪವಾಗಿರ್ದ ಕಾರಣ ಮನುಷ್ಯರಲ್ಲಿ ಮಾತ್ರ ಆ ವೃತ್ತಿಜ್ಞಾನವನ್ನೇ ಪ್ರವೃತ್ತಿ ಎಂದು ಹೇಳಬೇಕಾಯಿತು.

ಸುಜ್ಞಾನವೆಂಬುದು ಈ ವೃತ್ತಿಜ್ಞಾನಕ್ಕೆ ವಿಲಕ್ಷಣವಾಗಿ ತೇಜೋಮಯವಾಗಿ ಪರಂಜ್ಯೋತಿ ಸ್ವರೂಪವಾಗಿ ನಿರುಪಾಧಿಕ ಜ್ಯೋತಿ ಎನಿಸಿ ಅಜ್ಞಾನವೆಂಬ ಮಾಯಾಂಧಕಾರವನು ಸಂಹರಿಸಿ, ಮಹಾ ಪ್ರಭೆಯಿಂದ ತನ್ನ ನಿಜವನರುಹಿಸಿಕೊಡುವಲ್ಲಿ ನಿತ್ಯಾನಿತ್ಯ ವಸ್ತು ವಿವೇಕ ಇಹಪರ

ಫಲಭೋಗ ವಿರಾಗ ಶಮೆ ದಮೆ ತಿತೀಕ್ಷೆ ಉಪರತಿ ಶ್ರದ್ಧೆ ಸಮಾಧಿಗಳೆಂಬ ಸಮಾಧಿ ಷಟ್ಸಂಪತ್ತು ಮುಮುಕ್ಷುತ್ವವೆಂಬ ಸ್ಥಿತಿಯ ಸ್ಥಾಪಿಸುವಂತೆ ಮಾಡಿಕೊಟ್ಟು ಸರ್ವಜ್ಞತ್ವವಾಗಿ ಸುಜ್ಞಾನವೆನಿಸಿತ್ತು. ಆದರೆ ಆ ಅಜ್ಞಾನದಲ್ಲಿ ಅನಂತ ಪ್ರಕಾರದ ಭೇದಂಗಳುಂಟು. ಅವುಗಳೆಲ್ಲ ಸುಜ್ಞಾನಕ್ಕೆ ದೂರಾಗಿ ಕಾಣಬರುತ್ತಿಹವು. ಹ್ಯಾಗೆಂದರೆ, ಶ್ವಾನಜ್ಞಾನ, ಗಜಜ್ಞಾನ, ಕುಕ್ಕುಟಜ್ಞಾನ, ಮರ್ಕಟಜ್ಞಾನ, ವಿಹಂಗಮಜ್ಞಾನ ಮೊದಲಾದವು ಜ್ಞಾನಂಗಳು ಅಹುದಾದಾಗ್ಯೂ ಮತ್ಸ್ಯ ಕೂರ್ಮ ಗಾರ್ದಭಾದಿ ವ್ಯಗ್ರ ಪಶು ಪಕ್ಷಿ ಜಲಜಂತುಗಳಲ್ಲಿ ಆಶ್ಚರ್ಯರೂಪದಿಂದ ಇದ್ದಾಗ್ಯಾದರೂ ಅವುಗಳೆಲ್ಲ ಅಜ್ಞಾನವೇ ಹೊರತು ಸುಜ್ಞಾನವಾಗಲರಿಯವು.

ಈ ಸುಜ್ಞಾನವೆಂಬುದು ಬಹಿರಂತರಂಗದಲ್ಲಿ ಒಳಹೊರಗೆ ಒಂದಾಗಿ ಸಕಲೇಂದ್ರಿಯ ಸಮಸ್ತ ಕರಣಾದಿಗಳ ಮುಖಂಗಳಿಗೆ ತಾನೇ ನೇತ್ರವಾಗಿರ್ದು ತನಗಾವ ಮೇರೆ ಇಲ್ಲದೆ, ಸಕಲವೆಲ್ಲವನು ಅರಿವಲ್ಲಿ ಅಣುವಿಗಣುವಾಗಿ ಮಹತ್ತಿಗೆ ಮಹತ್ತಾಗಿ ಅಣೋರಣೀಯಾನ್ ಮಹತೋ ಮಹೀಯಾನ್ ಎಂಬ ಶ್ರುತಿಪ್ರಮಾಣದಿಂದ ಸಕಲಚರಾಚರಂಗಳಲ್ಲಿ ವ್ಯಾಪಕವಾಗಿರ್ದು ಜಗತ್ಪರಿಪೂರ್ಣವಾಗಿ ಜಗದ್ವಿಲಕ್ಷಣವಾಗಿ ಪಂಚಭೂತಂಗಳ ತತ್ವ ಸಮುದಾಯಕ್ಕೆ ಅವಿರಳವಾಗಿ ಹೊಂದಿ ಹೊಂದದ ಹಾಗಿರ್ದು ಸಕಲವೆಲ್ಲಕ್ಕೂ ತಾನೇ ಸಾಕ್ಷಿರೂಪನಾಗಿರ್ದು ತಾನೊಂದರಿಂದರುಹಿಸಿಕೊಳ್ಳದೆ ತಾನೇ ತನ್ನಯ ಮತ್ತು ತನಗೆದುರಾದ ಸಮಸ್ತ ಜಡಾಜಡ ತತ್ವಂಗಳ ನರಿಯಬಹುದಾದುದರಿಂದ ನಿಜದರುಹೆನಿಸಿ ಅರುಹಿನೊಳಿನಿತಾದರೂ ಮರವೆ ಇಲ್ಲದುದರಿಂದ ಮಹಾಜ್ಞಾನವೆಂದು ಹೇಳಿಸಿಕೊಂಬುತ್ತಿಹುದು.

ಅರಿವೇ ಸಮಸ್ತ ಪ್ರಾಣಿಗಳಲ್ಲಿ ಪರಿಪೂರ್ಣವಾಗಿರ್ದು ಅವರವರಿಗವರಂತೆಯಾಗಿ, ಆಯಾಯ ಘಟಂಗಳಲ್ಲಿ ಅದರದರಂತೆಯಾಗ್ಯಾದರೂ ತಾನು ವಿಲಕ್ಷಣವಾಗಿದೆ. ವೃತ್ತಿ— "ಅರಿವೇ ಸಮಸ್ತ ವಿಷಯಾಗಮ ಮುಖ್ಯವದೇ ವಿಮುಕ್ತಿದಂ। ಪೊರಗಣವೇದಾಚರಣೆ ಭಾವಿಪೊಡೇಂ ವ್ಯರ್ಥಾ। ಜರಿವುದು ಬುದ್ಧಿಯೇ ಶರಣರೆಂತಿಹರೆಂಬುದ ನೋಲ್ದು ನೋಡದೆ। ಬರುತನದುಕ್ತಿ ಚಾಪಲದ ಗಾರವದಿಂ ಫಲವೇನು ಶಿವಾ ಫವಾ॥" ಎಂದುಂಟಾಗಿ ಮತ್ತು "ಅರಿವೇ ಬರೆಯರಿವೆನಿನ್ನ ತೆರನರಿಯೆ ಮುಕ್ತಿಯಹುದು ನಿಶ್ಚಯವಂತೆ॥ ಅರಿವೆಬರೆಯರಿವೆ॥ ಎಂಬ ಪದ್ಯದಲ್ಲಿ ನಿಜಗುಣಾರಾಧ್ಯರು ಜ್ಞಾನೋತ್ಕರ್ಷವನ್ನು ಬಣ್ಣಿಸಿದ್ದಾರೆ.

"ಯಥಾಬೀಜಂ ತಥಾಂಕುರಂ" ಎಂದ ಹಾಗೆ ಈ ಸುಜ್ಞಾನವು ಸ್ಫಟಿಕದ ಘಟದಂತೆ, ನಿರ್ಮಲವಾಗಿರ್ದ ಜಲದಂತೆ ಯಾವ ವರ್ಣದಲ್ಲಿ ಕಲಿಸಿದರೂ ಆ ವರ್ಣವಾಗಿ ಒಪ್ಪುವಂತೆ, ಮನೋವರ್ತನವಿದ್ದಹಾಗೆ. ಸಕಾಮಿಗಳಿಗೆ ಸಕಾಮವಾಗಿ ಭಿನ್ನಜ್ಞಾನವೆನಿಸಿ, ನಿಷ್ಕಾಮಿಗಳಲ್ಲಿ ಸಹಜ ಸುಜ್ಞಾನವಾಗಿ ಶಿವತತ್ವ ಸ್ವರೂಪವಾಗಿರ್ಪುದು.

ಪರಶಿವ ಮೂರ್ತಿಯ ನಿಜವನರಿಯಬೇಕೆಂದು ಬೇರೆ ಬೇರೆ ಭಿನ್ನ ಕರ್ಮಿಗಳು ಅಯಾಯ ಮತದ ಶಾಸ್ತ್ರಾನುಸಾರದಂತೆ, ಭಿನ್ನ ಜ್ಞಾನ ಕರ್ಮಗಳಿಂದ ಯೋಗ ದಾನ ಜಪ ನೀತಿ ಯೋಗ ಪೂಜಾದಿಗಳು ಮೊದಲಾದ ಕರ್ಮಗಳಿಂದ ಶಿವನ ನಿಜವನರಿದೆನಂದರೆ, ಆ ನಿಜವು ಸಾಧ್ಯವಾಗದು. ಆ ಭಿನ್ನ ಕರ್ಮಂಗಳಲ್ಲಾದರೂ ಪೂರ್ವ ಭಾಗದ ಶಾಸ್ತ್ರ ಪ್ರಮಾಣದಂತೆ ಅದರದರ ತಕ್ಕಮಟ್ಟಿಗೆ ಫಲ ಪದಂಗಳ ಕೊಟ್ಟು ಶಿವನು ಮರೆಯಾಗಿರ್ದನಲ್ಲದೆ, ಸುಜ್ಞಾನಿಗಳಿಗೆ ಕರತಳಾಮಳಕವಾಗಿ, ಪ್ರತ್ಯಕ್ಷವಾದಂತೆ ಬಹು ಮತದ ಭಿನ್ನ ಕರ್ಮಿಗಳಿಗೆ, ಪ್ರತ್ಯಕ್ಷವಾಗಲರಿಯನು. ಆದು ಕಾರಣ "ಜ್ಞಾನೇನ ವಿನಾ ನಾನ್ಯಃ ಪಂಥಃ" ಎಂಬ ಶ್ರುತಿಗನುಸಾರವಾಗಿ "ನಂಬೋ ಜ್ಞಾನವನ್ನೇ" ಎಂದು ನಿಜಗುಣ ಶಿವಯೋಗಿಗಳು ಹೇಳಿದ್ದಾರೆ. ಆದಾಗ್ಯೂ ಜ್ಞಾನದಲ್ಲಿ ಕಾಲಜ್ಞಾನ ಖಂಡಜ್ಞಾನ ಶಾಸ್ತ್ರಜ್ಞಾನ, ಅಕ್ಷರ ಜ್ಞಾನ ಪದಾರ್ಥಜ್ಞಾನ, ಮೊದಲಾದ ಅನಂತಜ್ಞಾನಭೇದಗಳುಂಟು. ಆದರೆ, ವೀರಶೈವ ಸುಜ್ಞಾನಕ್ಕೆ ಸಮವಾದಾವೆ? ಆಗಲರಿಯವು.

ಕೆಲ ಕೆಲವು ಭಿನ್ನ ಜ್ಞಾನದ ಅಲ್ಪ ಮತದವರಿಗೆ ಕಿಂಚಿಜ್ಞತ್ವದಿಂದ ಅಷ್ಟಕ್ಕಷ್ಟೆಯಾಗಿ ಅಲ್ಪಜ್ಞಾನವಾಗಿರುತ್ತಿಹುದು. ಅನರಿಂದ ಮುಕ್ತಿಯಾಗಲಾರದು. ಅಥವಾ ಕರ್ಮದಿಂದ ಮುಕ್ತಿಯಾಗುವದೆಂದು ಯಾವ ಶಾಸ್ತ್ರಗಳಲ್ಲಾದರೂ ಹೇಳಿರುವದಿಲ್ಲ. ಕರ್ಮದಿಂದ ಫಲಪದಂಗಳುಂಟಲ್ಲದೆ ನಿಜ ಮೋಕ್ಷವಿಲ್ಲವು. ಸಾಕ್ಷಿ "ಶೀತ ಗೃಹೀತ ವಾನರ ಗಣಂ ಜ್ವಲಿತಾನಲ ಕಾಂಕ್ಷೆಯಿಂ ಪ್ರಯಃ। ತ್ಯಕ್ತ ತುರವಾಗಿ ಮಿಂಚು ಪುಳುವಂ ಪರಿಕಲ್ಪಿಸುವಂತೆ ವೀರಶೈ। ವೇತರ ಧರ್ಮ ಮಾರ್ಗವಿಡಿದೂರ್ಜಿತಮುಸ್ಸ ವಿಶಿಷ್ಟ ಮುಕ್ತಿ ಸೌ। ಖ್ಯಾತಿಶಯಾಭಿರಾಮ ಪದಂ ಬಿಡದೈದುವರ್ ಶಿವಾಧವಾ॥ ಎಂದು ವಾಯಿದೇವ ಪ್ರಭುಗಳು ಹೇಳಿದ್ದಾರೆ. ಮತ್ತು ಕೋಟಿ ಜನ್ಮಾಂತರಂಗಳಿಗೆ ಆದ ಮೋಕ್ಷಾಪೇಕ್ಷೆಯಿಂದ ವೀರಶೈನೇತರ ಧರ್ಮ ಮಾರ್ಗದಿಂದಾಚರಿಸಿ ಕೋಟಲೆಗೊಳ್ಳುತ್ತಿಹರು. "ಏಕೇನ ಜನ್ಮ ಮುಕ್ತಿ

ರ್ವೀರಾಣಾಂ ತು ಮಹೇಶ್ವರಿ"॥ ಎಂಬಾಗಮ ವಾಕ್ಯ ಉಂಟು. ಮತ್ತು "ಅನ್ಯೈರೈವಂತು ತತ್ಸರ್ವಂ। ಫಲವಲ್ಪ ಕ್ರಿಯಾ ಬಹು ಫಲಂ ವೀರಶೈವಂತು ತ್ವಾಂಕರೀ"॥ ಎಂಬಾಗಮ ಉಂಟು. ಮತ್ತು "ಬಹು ವಿಧ ದುಃಖ ಸಾಧ್ಯವಹ ಮುಕ್ತಿ ಪದಂ ಭವಕೋಟಿಯಲ್ಲಿನಿ। ರ್ವಹಿಸುವದಕ್ಕೆ ಕೋಟಲೆಗೊಳ್ಳುತ್ತಿಹರೊಯ್ಯನೆ ಜನ್ಮ ಒಂದರೊಳ್। ವಿಹಿತ ಸುಪೈಕ ಸಾಧ್ಯವಹ ಮುಕ್ತಿ ಪದಂ ದೊರೆಕೊಂಡೊಡೊಲ್ಲೆನೆಂದಿಹುದಿದು ಪಾಪ ಶೇಷದ ಫಲಪೈಸೆ ವಿಚಾರವದೇಂ ಶಿವಾಧವಾ" ಎಂದುಂಟಾಗಿ, ಸುಜ್ಞಾನ ಒಂದಿಲ್ಲದೆ ಎನೇನು ಪ್ರಯತ್ನಂಗಳ ಮಾಡಿದರೂ ಅಜ್ಞಾನಿಗಳಾಗಿ ಕೆಟ್ಟು ಹೋಗುತ್ತಿಹರು. ಸುಜ್ಞಾನ ಉದಯವಾದ ಮಾತ್ರದಲ್ಲಿಯೇ ಸ್ವಪ್ನದಲ್ಲಿ ಕಂಡ ಅನಂತ ದುಃಖಂಗಳೆಲ್ಲಾ ಎಚ್ಚರವಾದಲ್ಲಿ ಇಲ್ಲದಾದಂತೆ, ಅನಂತ ಕೋಟಿ ಭವಬಂಧನಾದಿ ದುಃಖಂಗಳೆಲ್ಲ ತನ್ನ ತಾ ತಿಳಿದ ಮಾತ್ರದಲ್ಲಿಯೇ ನಾಶವಾಗುತ್ತಿರುವ ಈ ಸುಜ್ಞಾನವನ್ನು ಶಿವಾಂಶೀಭೂತರಾದ ಸತ್ಯ ಸದ್ಭಕ್ತ ಜ್ಞಾನಿಗಳಿಗೆ ಕಾಣಬಹುದು. ಉಳಿದ ಅನ್ಯಮತಸ್ಥರಿಗೆ ಅಶಕ್ಯವಾಗಿರ್ಪುದು.

"ಅಧಮಂ ತು ಕುಲಾಚಾರಂ। ಶೃತ್ಯಾಚಾರಂತು ಮಧ್ಯಮಂ॥ ಉತ್ತಮಂ ಜ್ಞಾನವಾಚಾರಂ। ಸ್ವೇಚ್ಛಾಚಾರಂ ಮಹಾತ್ಮನಾಂ"॥ ಎಂದು ಶಿವಜ್ಞಾನಿಗಳಾದ ಶರಣರು ಸ್ವತಂತ್ರ ಶೀಲರಾಗಿ, ಅಜ್ಞಾನವನ್ನೇ ಕ್ರಿಯಾರೂಪದಿಂದ ಬಹಿರಂಗದ ಕಾಯಕವ ಮಾಡಿಕೊಂಡು ಸಕಲ ಮಹತ್ವಾತಿಶಯವನ್ನು ಪೆರೆವುತ್ತ ಅನಂತ ರೀತಿಯ ಕಾಯಕಗಳಿಂದ "ದಾಸೋಹಂ ಸ್ವಯಂ ಶಿವಃ" ಎಂಬ ಪ್ರಮಾಣದಂತೆ ಶಿವದಾಸೋಹಿಗಳಾಗಿರುತ್ತಿಹರು. ಅಪೆಂತೆಂದಡೆ, ಕಟ್ಟಿಗೆಯನ್ನು ಮಾರಿ ಪೊಡಿಯು ನುಲಿಯ ಹೊಸೆದು ಬಿದ್ದಕ್ಕಿಯನಾಯ್ದು ಪೊಡೆ ಹುಲ್ಲ ತರುತ್ತ ಸುಂಕದ ಗುತ್ತಿಗೆಯ ಮಾಡುತ್ತ ಹಾಸ್ಯವನಾಡುತ್ತ ಕೋಡಗವನಾಡಿಸುತ್ತ ಧಕ್ಕೆಯ ಬಾರಿಸುತ್ತ ಬುದ್ದಿಲಿಯ ಮಾಡುತ್ತ ಕೆರವ ಹೊಲಿಯುತ್ತ ಕೈಕೂಲಿ ಮಾಡುತ್ತ ಕೃಷಿಯ ಮಾಡುತ್ತ ಅಸಿಯ ಮಾಡುತ್ತ ವಾಣಿಜ್ಯಾದಿ ವ್ಯಾಪಾರ ಮಾಡುತ್ತ ರಾಜ್ಯವನಾಳುತ್ತ ಮಂತ್ರಿ ಪಟ್ಟವನಾಳುತ್ತ ನೇಯುತ್ತ ಪಶುಗಳ ಕಾಯುತ್ತ ಕೊಟ್ಟಣವ ಕುಟ್ಟುತ್ತ ಕೊಡ ನೀರು ಹೊರುತ್ತ ಈ ಪ್ರಕಾರವಾದ ಅನಂತ ಕೃತ್ಯಾದಿಗಳಿಂದ ಭಕ್ತಿ ಸತ್ಪಥ ಮಾರ್ಗವಾಗಿ ಸತ್ಯ ಶುದ್ಧ ಕಾಯಕವೆಂದು ಶಿವ ಮಹಿಮಾತಿಶಯವನ್ನು ಮರೆಯುತ್ತ ಶಿವಭಕ್ತಿ ಪ್ರಭಾವದುನ್ನತಿಯಂ ಪಸರಿಸುತ್ತ ಕೊಡುವಾತ ಕೊಂಬಾತ ಶಿವನೆಂಬ

ಭಾವದಿಂದ ಪರಿಪೂರ್ಣ ಜ್ಞಾನವೆನಿಪ ಸುಜ್ಞಾನವನ್ನೇ ಸತ್ಯಾಯಕವಾಗಿ ಆಚರಿಸಿದರಲ್ಲದೆ. ಭವಿಗಳಂತೆ ದೇಹೋಪಾಧಿಯಿಂದ ಘಟರಕ್ಷಣಾರ್ಥಕ್ಕಾಗಿ ದುರಾಶೆಯಿಂದ ಅಜ್ಞಾನಿಗಳಾಗಿ. ಭವಭವಾಂತರದಲ್ಲಿ ತಿರುಗುತ್ತಿರುವ ಸಂಸಾರವನ್ನು ಶರಣರು ಮಾಡಲಿಲ್ಲ.

ಆ ಶರಣರ ಕಾಯಕವೇ ಪಾರಮಾರ್ಥ ಜ್ಞಾನ ಸತ್ಯಾಯಕವಾದ ಕಾರಣ ಈ ಲೋಕದ ಸಚ್ಛಕ್ತ ಸದಾಚಾರಗಳಿಗೆ ಮುಕ್ತಿ ಸೋಪಾನವಾಗಿ ಅವರ ಚಾರಿತ್ರಂಗಳೇ ಮೋಕ್ಷ ಮಾರ್ಗಕ್ಕೆ ದೀವಿಗೆಯಾಗಿ, ಅವರು ನುಡಿದ ವಚನಂಗಳೇ ಮಂತ್ರಮಯವಾಗಿ ಅವರು ಮೆಟ್ಟಿದ ಭೂಮಿಯೇ ಪುಣ್ಯಕ್ಷೇತ್ರವಾಗಿ ಅವರು ಮಿಂದ ಉದಕಂಗಳೇ ಎಂಭತ್ತೆಂಟು ಕೋಟಿ ಪುಣ್ಯತೀರ್ಥಂಗಳಾಗಿ ಅವರ ಸತಿಯರೇ ಮಹಾಜ್ಞಾನ ಶಕ್ತಿಯರಾಗಿ ಅವರ ಸುತರೇ ಮಹಾ ವೀರಗಣರಾಗಿ ಕೊಡುವಲ್ಲಿ ಕೊಂಬಲ್ಲಿ ನಡೆವಲ್ಲಿ ನುಡಿವಲ್ಲಿ ಸರ್ವದರಲ್ಲಿ ಸುಜ್ಞಾನವನ್ನೇ ಪ್ರಕಟಿಸುತ್ತ ಶಿವಹೃದಯರಾದ ಕಾರಣ ಸಕಲ ಕಾರ್ಯಂಗಳಲ್ಲಿ ಶಿವಾಜ್ಞೆ ಎನುತ ಶಿವಜ್ಞಾನ ಸಾರಾಯರಾದ ಕಾರಣ ಶಿವಜ್ಞಾನವನ್ನೇ ಸ್ಥಾಪಿಸುತ್ತ ಸ್ಫಟಿಕದೊಳಗಣ ದೀಪದಂತೆ ಒಳಹೊರಗೆ ಜ್ಞಾನಮಯರಾಗಿ ಕಾಣಬರುತ್ತಿಹರು. "ಸ್ವಯಮೇವ ಭವೇದ್ವೀಹಿ। ಸ್ವಯ ಮೇವ ವಿಲೀಯತೆ ॥ ವೃಕ್ಷೋತ್ಪತ್ತಿ ಬೀಜಾನಾಂ । ತದ್ವೃಕ್ಷಂ ಲೀಯತೆ ಪುನಃ ॥ ಎಂದುಂಟಾಗಿ ಮತ್ತು "ರುದ್ರ ಲೋಕ ಗಮಿಷ್ಯತೆ॥" ಎಂಬ ವಾಕ್ಯ ಪ್ರಮಾಣದಂತೆ ಸಕಲ ಜನ ಹಿತೋಪಕಾರಾರ್ಥವಾಗಿ ಲೋಕ ಪಾವನ ಕಾರ್ಯ ಸಮರ್ಥತ್ವದಿಂದ ರುದ್ರಲೋಕದಿಂದ ಭೂಲೋಕಕ್ಕೆ ಅವತರಿಸಿ ಸಕಲರಿಗೂ ಸನ್ಮಾರ್ಗ ಸದ್ಬೋಧೆಯಂ ಬೋಧಿಸಿ ಬೋಧಿಸಿದಂತೆ ಈ ಲೋಕದ ಭಕ್ತರಿಗೆ ನಡೆನುಡಿ ಸಿದ್ಧಾಂತವಾಗುವ ಹಾಗೆ ತಾವು ಅದರಂತೆ ಆಚರಿಸಿ ತೋರಿಸಿ ಸಂಸಾರದಲ್ಲಿರ್ದರೂ ನಿಃಸಂಸಾರಿಗಳಾಗಿ ಷಟ್ಕೃಷಿ ಲೋಕ ವ್ಯವಹಾರಂಗಳ ಮಾಡಿದಾಗ್ಯಾದರೂ ಭಕ್ತಿ ಸತ್ಯಾಯಕವೆಂದೆನಿಸಿ ಮಾಡಿ ನೀಡಿ ದೃಷ್ಟ ಧಾರಿಷ್ಟ್ಯಾದಿಗಳಿಂದ ತಾವಾಚರಿಸಿ ಇದರಂತೆ ಮಾಡಿ ಸಮಸ್ತರೂ ಮುಕ್ತರಾಗಲೆಂದು ತೋರಿಕೊಟ್ಟು ಮತ್ತನಂತ ರೀತಿಯಿಂದ ಅವರವರ ಪಾಪ ಕರ್ಮಂಗಳಂ ಪರಿಹರಿಸಿ ಲೋಕಪಾವನ ಮಾಡಿ ಪುನಃ ತಮ್ಮ ನಿಜದೊಳ್ಪಿರೆದು ಶಿವಲೋಕವನೈದುತಿಹರು.

ಈಗಲಾದರೂ ಜ್ಞಾನ ಕಲಾತ್ಮಕರಾದ ಸುಜ್ಞಾನಿಗಳೆಂದೆನಿಸಲ್ಪಟ್ಟ ಶ್ರೀ ವೀರಶೈವಾಚಾರ ಸಚ್ಛಕ್ತರು ಆದ್ಯರ ವಚನ ಪ್ರಮಾಣದಂತೆ ಜ್ಞಾನ

ಮಯರಾಗಿ ಆಚರಿಸಿ ನಡೆನುಡಿ ಸಿದ್ಧಾಂತರಾಗಿ ಮಹಾಜ್ಞಾನವೇ ಕ್ರಿಯೆಯಾಗಿ ಸಹಜಾನಂದದಿಂದ ಲೌಕಿಕರೊಡನೆ ಕೂಡಿ ಲೌಕಿಕ ವರ್ತನದಿಂದಿದ್ದರೂ ಮಾಯಾ ಮೋಹದಿಂದ ಜಡ ಸಂಸಾರಿಗಳಾಗದೆ ನಿರ್ಮೋಹದಿಂದ ಕಮಲ ಪತ್ರದಂತೆ ತಾವು ಸಂಸಾರದೊಳಗಿದ್ದರೂ ಜ್ಞಾನ ಸಾಮರ್ಥ್ಯದ ಬಲದಿಂದ ತನ್ಮೊಳಗೆ ಸಂಸಾರವಿಲ್ಲದಂತೆ ಮಹಾ ಜಾಗ್ರತರಾಗಿ "ಜ್ಞಾನೀ ಸರ್ವತ್ರ ಲೋಚನಃ" ಎಂಬ ಹಾಗೆ ತಾವು ಸರ್ವ ಕಾರ್ಯಂಗಳಲ್ಲಿ ಜ್ಞಾನವನ್ನೇ ಮುಂದುಗೊಂಡು ಆಚರಿಸಬೇಕು.

ಸುಜ್ಞಾನಿಗಳಾದ ಜ್ಞಾನ ಕಲಾತ್ಮರು ಲೌಕಿಕರ ಮಧ್ಯದಲ್ಲಿರ್ದು ತಾವು ಲೌಕಿಕರಂತೆ ವರ್ತಿಸಬೇಕಾದರೆ ತಾವು ಪರಿಪೂರ್ಣ ಜ್ಞಾನಿಗಳಾಗಿ ಜಗತ್ತೆಲ್ಲ ಏಕರೂಪಾಗಿ ಏಕಾತ್ಮರಾಗಿ ತಾಸೋರ್ವನಲ್ಲದೆ ತನಗೆ ದೂರಾಗಿ ಜ್ಞಾನ ದೃಷ್ಟಿಗೆ ಇನ್ನೊಂದೇನೂ ತೋರದಾಗಿ ಕಂಡರೂ ಪರಮ ಜ್ಞಾನಿಯಾದ ಪೂರ್ಣನೆನಿಪ ಶಿವಾದ್ವೈತನಾವ ಪರಿಪೂರ್ಣ ಬ್ರಹ್ಮಿಯಾದ ನಿರಾಭಾರಿ ವೀರಶೈವಾವಧೂತನ ಅಂತರಂಗದ ಪೂರ್ಣ ಜ್ಞಾನ ಸ್ಥಿತಿ ಹೇಗಿರಬೇಕೆಂದರೆ ಶ್ರುತಿ ಸಾಕ್ಷಿ "ನೈವ ಶುದ್ಧಿರ್ನ ಚ ಶುದ್ಧಿರ್ನೈವ ವಂದಿತ ವಂದಿತಃ ॥ ನ ಪೂಜ್ಯ ಪೂಜಕ ವಿಧಿ । ನ ಚ ಶಿಷ್ಯೋನ್ನ ಗುರುಃ ಶಿವೆ ॥ ನ ಮಾತಾ ನ ಪಿತಾ ಭಾರ್ಯಾ । ನ ಚಾಂಡಾಲೋ ನ ಭೂಸುರಃ ॥ ನ ಗೌರ್ನ ಶುನಕೋ ಹಸ್ತಿ । ಗಾರ್ದಭೋ ವಾಪಿ ಭೇದತಃ ॥ ಉತ್ತಮಂ ಮಧ್ಯಮಂ ನೀಚಂ ಅನ್ಯೋನ್ಯ ಮಧಿಕಂ ಸಮಂ ॥ ವೀರ ಶೈವಾವಧೂತಶ್ಚ । ನಮೋವಾಖಿಲಂ ಶಿವೆ ॥ ಎಂಬ ಶ್ರುತಿ ಪ್ರಮಾಣದಂತೆ ಅಂತರ್ಜ್ಞಾನವುಳ್ಳಾತನಾಗಿ ಬಹಿರಂಗದ ವರ್ತನದಲ್ಲಿ ಅದ್ವೈತಮಂ ಪ್ರಕಟಿಸದೆ ಸತ್ಕ್ರಿಯಾ ಸಮ್ಯಜ್ಞಾನದಿಂದ ವರ್ತಿಸುತ್ತ ಲೌಕಿಕರ ಮಧ್ಯದಲ್ಲಿರ್ದು ಲೋಕಾಚಾರದ ಸಚ್ಛಕ್ತರುಗಳಿಗೆ ಪೂರ್ವಕ್ರಿಯೆಗಳಿಂದಾಚರಿಸುವ ಮಾರ್ಗವನ್ನು ತಾನೇ ನಡೆದು ತೋರಿಸಬೇಕಾದಲ್ಲಿ ಸರ್ವತ್ರ ಸತ್ಕ್ರಿಯಾಚಾರದಿಂದ ನಡೆದು ತೋರಿಸಬೇಕಲ್ಲದೆ ಅಂತರಂಗದ ಅದ್ವೈತ ವರ್ತನವನ್ನು ಬಹಿರಂಗದ ಕ್ರಿಯೆಗಳಲ್ಲಿ ಬಳಸಬಾರದು. ಜ್ಞಾನಿಗಳೆಂಬ ಮಹಾ ಪುರುಷರೇ ಸದಾಚಾರ ಸತ್ಕ್ರಿಯೆಗಳಿಂದ ವರ್ತಿಸದಿದ್ದರೆ ಲೌಕಿಕರು ಅನಾಚಾರಿಗಳಾಗಿ ಕೆಟ್ಟ ಹೋದಾರೆಂಬ ಕಾರುಣ್ಯದಿಂದ ಅಂತ ಜ್ಞಾನದ ಜ್ಞಾನವರ್ತನೆಯಲ್ಲಿ ಜ್ಞಾನದೃಷ್ಟಿಯಿಂದ ಸರ್ವ ಜೀವದಯಾಸಾರಿಯಾಗಿ ತನ್ನನು ಪರಿಪೂರ್ಣನಾಗಿ ಕಂಡಾಗ್ಯಾದರೂ ಬಹಿರಂಗದ ವರ್ತನೆಯಲ್ಲಿ ಸತ್ಕ್ರಿಯೆಯಿಂದ ಅಜೀವಿಸತಕ್ಕದ್ದಾಗಿದೆ.

"ಬಳಸದಿರದ್ವೈತವನು ಬಾಹ್ಯದಲ್ಲಿ ನಿನ್ನೊಳಗೇಕೋ ಭಾವಿಸಿ ಯೊಡಗೂಡು । ತಿಳಿದು ಸಮಯ ನಿಷ್ಠೆಗಲಿ ವೇದವಿದ ಭಕ್ತಿಗಳನಗಲದಿರು" ಎಂದು ನಿಜಗುಣ ಶಿವಯೋಗಿಗಳ ವಾಕ್ಯ ಉಂಟಾಗಿ ಎಷ್ಟು ಪೂರ್ಣ ಸ್ಥಿತಿಯು ಬಂದಾಗ್ಯಾದರೂ ಜ್ಞಾನದಲ್ಲದ್ವೈತವಲ್ಲದೆ ಜಡಭೂತ ಕಾಯ ವರ್ತನೆಯ ಕ್ರಿಯೆಗಳಲ್ಲದ್ವೈತ ಉಂಟೇ? ಇಲ್ಲವು. "ಗುಪ್ತೋ ಮುಕ್ತ ಪ್ರಕಟೋ ಭ್ರಷ್ಟ" ಎಂಬ ಪ್ರಮಾಣ ಉಂಟಾಗಿ ಅದ್ವೈತವನ್ನು ಜ್ಞಾನದಲ್ಲಿಟ್ಟು ಗುಪ್ತವಾಗಿದ್ದರೆ ಮುಕ್ತನೇ ಅಹುದು. ಆ ಅದ್ವೈತವನ್ನು ಪ್ರಕಟಿಸಿ ಬಹಿರಂಗದ ಕ್ರಮಗಳಲ್ಲಿ ಬಳಸಿದರೆ ಭ್ರಷ್ಟನೇ ಅಹುದು. ಇದು ಸರ್ವರಿಗೂ ಪ್ರತ್ಯಕ್ಷ ಪ್ರಮಾಣವಾಗಿ ಕಾಣಿಸುತ್ತಿಹುದು. ಹೇಗಂದರೆ ಪರುಗಳಂತೆ ವಾಯು ವರ್ತನವಿಲ್ಲದೆ ದುರಾಚಾರಿಯಾಗಿ ಅಕ್ಕ ತಂಗಿ, ತಾಯಿ, ಅಯಿ, ಅತ್ತೆ, ಅತ್ತಿಗೆ, ನಾದಿನಿ, ಸೊಸೆ ಎನ್ನದೆ ಮತ್ತು ಉತ್ತಮ ಮಧ್ಯಮ ನೀಚ ಚಾಂಡಾಲಾದಿ ಜಾತಿಯ ಸ್ತ್ರೀಯರೆನ್ನದೆ ಕಾಮಾತುರನಾಗಿ ದನಗಳಂತೆ ಕಂಡ ಕಂಡ ಸ್ತ್ರೀಯರನ್ನು ಭೋಗಿಸುತ್ತಿರುವ ಅಧಮ ಅನಾಚಾರಿಗಳಿಗೆ ಎಷ್ಟು ಪೂರ್ಣದ ಮಾತಗಳನ್ನಾಡಿದಾಗ್ಯಾದರೂ ಭ್ರಷ್ಟರೆಂದಾರಲ್ಲದೆ ಜ್ಞಾನಿಗಳಹುದೆಂದು ಮೆಚ್ಚಬಹುದೇ? ಮೆಚ್ಚಲರಿಯರು. ಮತ್ತು ಪಿಶಾಚಿಗಳಂತೆ ಬತ್ತಲೆ ಇದ್ದು ಸ್ಮಶಾನದ ಅರಿವೆಯನುಟ್ಟು ತಿಪ್ಪೆಯೊಳು ಹೊರಳಾಡಿ ರಾಕ್ಷಸಾಹಾರವಾದ ಸುರೆ ಮಾಂಸಗಳಂ ಭುಂಜಿಸುತ್ತ ಭಂಗಿ ದತ್ತೂರಿ ಅಫು ಗಾಂಜಿ ಮೊದಲಾದ ಅಮಲಿನಲ್ಲಿ ಕಣ್ಣು ಮುಚ್ಚುತ್ತಲಿರುವ ಮಾದಿಗಾಚಾರದ ಮೂಳ ಹೊಲೆಯರ ವರ್ತನವು ಅದ್ವೈತವೆನಬಹುದೆ? ಈ ದುರ್ವ್ಯಸನಿಗಳಾದ ಅಜ್ಞಾನಿಗಳಿಗೆ ಯಾರಾದರೂ ಮೆಚ್ಚಾರೆ? ಮೆಚ್ಚಲರಿಯರು. ಇದಲ್ಲದೆ ಬಾಲಕರಂತೆ ಮಲವ ಭುಂಜಿಸುತ್ತ ಮೂತ್ರದೊಳು ಹೊರಳಾಡುತ್ತ ಮಾನಾಪಮಾನವ ಹಂಗಿಲ್ಲದೆ ಬತ್ತಲೆ ಇರುತ ಜ್ಞಾನ ಹೀನರಾಗಿ ವರ್ತಿಸುವ ದುರಾಚಾರಿಗಳಿಗೆ ಯಾರಾದರೂ ಸುಜ್ಞಾನಿಗಳೆಂದಾರೇ? ಎನ್ನಲರಿಯರು. ಮತ್ತು ವಿಟ ಪುರುಷರಂತೆ ಸ್ತ್ರೀಲಂಪಟಿಗಳಾಗಿ ಚಾತುರ್ಯದ ಜ್ಞಾನದ ಮಾತುಗಳನ್ನಾಡಿ ಮರುಳುಗೊಳಿಸಿ ಸ್ತ್ರೀಯರಿಗುಪದೇಶ ಮಾಡುವೆವೆಂದು ಏಕಾಂತ ವಾಸಕ್ಕೊಯ್ದು ತನು, ಮನ, ಧನವ ಗುರುವಿಗೆ ಸಮರ್ಪಿಸಬೇಕೆಂದು ಹೇಳಿ ಆ ಸ್ತ್ರೀಯರಂ ಭೋಗಿಸಿ ಆ ಸವಿಯಿಂದ ಪರಸ್ತ್ರೀಗಮನದ ಲಂಪಟವು ತಲೆಗೇರಿ ಅನ್ಯ ಸ್ತ್ರೀಗಮನ ಅನ್ಯ ದ್ರವ್ಯಾಪಹಾರಿಗಳಾಗಿ ಬ್ರಹ್ಮಜ್ಞಾನದ ಭ್ರಷ್ಟ ಹೊಲೆ ಮಾದಿಗರಿಗೆ ಯಾರು ಮೆಚ್ಚಬೇಕು? ಆದರೆ ಆ ಜೀವನ್ಮುಕ್ತನ ಸ್ಥಿತಿಯು ಪಶುವಿನಂತೆ ಪೈಶಾಚಿಗಳಂತೆ ಬಾಲಕರಂತೆ ವಿಟ ಪುರುಷರಂತೆ ಇರುವದೆಂದು ನಿಜಗುಣಾದ್ಯರು ಹೇಳಿದ್ದಾರೆ. ಈ ವೈತ್ಯರ್ಥವು ಈ ಜಿಹ್ವಾಲಂಪಟ ಗುಹ್ಯಾಲಂಪಟ ಪುರುಷ ಕಾಮಾಂಧ ಹೊಲೆಯರಾದ ಅಜ್ಞಾನಿಗಳಿಗೆ ಸಹಜವಾಗುವದೆ? ಹೇಗಂದರೆ ವಿಟಬಾಲೋನ್ಮತ್ತ ಪಿಶಾಚಿ ಪಶುಗಳ ಸ್ಥಿತಿಗಳಲ್ಲಿ ಒಂದೊಂದು ಮಹಾಜ್ಞಾನ ಲಕ್ಷಣದ ಚಿಹ್ನ ಉಂಟು. ಆ ಜ್ಞಾನ ಲಕ್ಷಣವಿಂದ ಸರ್ವಜ್ಞನಾಗಿ ಸಕಲ ಜಗತ್ಪೂಜ್ಯನಾಗಿ ವರ್ತಿಸಬೇಕಲ್ಲದೆ ಅಜ್ಞಾನ ದುರ್ವರ್ತನದಿಂದ ಆಚರಿಸುವದು ಅಧಮಾಚಾರವೇ ಹೊರತು ಜ್ಞಾನಾಚಾರವಾಗಲರಿಯದು. ಈ ಅನಾಚಾರಿಗಳಿಗೆ ಅದ್ವೈತ ಮತದ ಆರೂಢಜ್ಞಾನಿಗಳೆಂದು ಯಾರೂ ತಿಳಿಯಬಾರದು. ಇದು ಶಿವಾದ್ವೈತ ಮಾರ್ಗವಲ್ಲವು. ಇದು ಪ್ರೇಂಚ ದೇಶದ ಸನ್ಯಾಸಿಗಳಿಂದ ಹುಟ್ಟಿದ ಮಾದಿಗಾಚರಣೆ ಎಂದು ಸ್ಪಷ್ಟವಾಗಿ ತಿಳಿಯಬೇಕು. ಜ್ಞಾನದಲ್ಲಿ ಅದ್ವೈತವಲ್ಲದೆ ಕ್ರಿಯೆಯಲ್ಲಿ ಅದ್ವೈತ ಉಂಟೆ? ಸಹಜಾರ್ಥವ ಕೆಡಿಸಿ ಅನರ್ಥ ಮಾಡಿದ ಕಾರಣ ಹೀಗಾಗಿ ಕೆಟ್ಟು ಭ್ರಷ್ಟರಾದರಲ್ಲದೆ ಭ್ರಷ್ಟರಿಗೆ ಗತಿಯುಂಟೆ? "ಭ್ರಷ್ಟಸ್ಯ ಕಾ ವಾ ಗತಿಃ" ಎಂಬ ಪ್ರಮಾಣವಿಹುದು.

ಮನೆಗಳಿಗೆ ಮೇರೆ, ಹೊಲಗಳಿಗೆ ಮೇರೆ, ಕುಲಗಳಿಗೆ ಮೇರೆ, ಮತಗಳಿಗೆ ಮೇರೆ, ಶಾಸ್ತ್ರಗಳಿಗೆ ಮೇರೆ, ನಡೆಯಲ್ಲಿ ಮೇರೆ, ನುಡಿಯಲ್ಲಿ ಮೇರೆಗಳುಂಟು. ಇದಲ್ಲದೆ, ಪೃಥ್ವಿಗೆ ಮೇರೆ, ಆಕಾಶಕ್ಕೆ ಮೇರೆ, ಸಮುದ್ರಾದಿ ಉದಕಂಗಳಿಗೆ ಮೇರೆ, ವಾಯು ಅಗ್ನಿಗಳಿಗೆ ಮೇರೆಯುಂಟು. ಸೂರ್ಯ-ಚಂದ್ರ-ನಕ್ಷತ್ರಂಗಳಿಗಾದರೂ ಮೇರೆಯುಂಟು. ಇವುಗಳು ಮೇರೆ ತಪ್ಪಿದಾಗಲೆ ಪ್ರಳಯವೇ ಹೊರತು ಪರಿಣಾಮವಿಲ್ಲವು.

ಜ್ಞಾನಿಯಾದ ಮೇಲೆ ಕುಂದುನಡೆಯದಿರಬೇಕು. ಸಾಕ್ಷಿ "ನಿಂದಿಸಿ ನುಡಿಯದಿರಾರನು ಮನಸಿಗೆ ಬಂದಂತೆ ನಡೆಯದಿರಿಹದಲ್ಲಿ ಕುಂದುನಡೆಯದಿರು ಕಾಮಾದಿಗಳ ಜಯಸೆಂದು ಕೈವಿಡಿದನುಗ್ರಹಿಸುವ" ಎಂದು ನಿಜಗುಣ ವಾಕ್ಯ ಉಂಟಾಗಿ, ಲೋಕಾಪವಾದದಲ್ಲಿ ಭೀತಿ ಇರಬೇಕು. ಯಾಕಂದರೆ ಅಪವಾದ ಬಂದ ಮೇಲೆ ಹೋಗಲರಿಯದು. ಇವಕ್ಕೆ ಇಂದ್ರ ಚಂದ್ರರ ಕುಂದೇ ಸಾಕ್ಷಿ. ಮತ್ತು "ಪಡೆದಪವಾದದಿಂ ಮರಣ ಪಿನ್ನಂಟಿ" ಎಂಬ ವಾಕ್ಯ ಉಂಟು. ಮತ್ತು ಜ್ಞಾನಿಯಾದ ಮೇಲೆ "ಎಲ್ಲರೊಡನೆ ವೈರವಿಲ್ಲದೇ ಇರ್ಪುದೇ ಚಂದ" ಎಂದ ಹಾಗೆ ಸರ್ವತ್ರ ಸರ್ವರಿಗೂ ಹಿತಕಾರಿಯಾಗಿ ಲೋಕೋಪಕಾರಿ ಎನಿಸುತ್ತ ವರ್ತಿಸಬೇಕು.

ಜ್ಞಾನಿಯಾದವರು ಕುಟುಂಬ ಉದ್ಧವರಾಗಿದ್ದರೆ, ಒಹಿರಂಗದ ವರ್ತನೆಯಲ್ಲಿ ಏಕಕುಟುಂಬಿಗಳಾಗಿ ವರ್ತಿಸಿದಾಗ್ಯಾದರೂ ಅಂತರಂಗದ ಮಹಾ ಜ್ಞಾನದಲ್ಲಿ ತಾವು ವಿಶ್ವಕುಟುಂಬಿಗಳೆಂದೇ ತಿಳಿದಿರಬೇಕು. ತನ್ನ ಕೈಯಿಂದಾದಷ್ಟು ಸಹಾಯದಿಂದ ಸರ್ವರಿಗೂ ಹಿತವನ್ನು ಮಾಡುತಿರಬೇಕು. ಲೌಕಿಕರೆದುರಿನೆ ತನ್ನಂತರಂಗದ ಸಹಜ ಜ್ಞಾನಸ್ಥಿತಿಯನ್ನು ಪ್ರಕಟಿಸದೆ ಗುಪ್ತಜ್ಞಾನಿಗಳಾಗಿ ಸತ್ಕ್ರಿಯೆ ಸದಾಚಾರಂಗಳ ಪ್ರಕಟಿಸಬೇಕು. ಯಾತಕ್ಕೆಂದರೆ, "ನಿಜವನಾಡಲು ನಾದು ನೀಚಾತ್ಮರೊಲು" ಎಂದು ತೆಲಗಿನಲ್ಲಿ ಒಬ್ಬ ಪರಮ ಜ್ಞಾನಿಗಳು ಹೇಳಿದ್ದಾರೆ.

ಜ್ಞಾನಿಗಳು ಸತ್ಯವಂತರಾಗಬೇಕಲ್ಲದೆ, ಅಸತ್ಯಕ್ಕೆ ಮೈಗೊಡಬಾರದು. ಜ್ಞಾನಿಗಳಾದವರಲ್ಲಿ ಅಸತ್ಯ ವರ್ತನವಿಲ್ಲದಿದ್ದರೂ ಲೌಕಿಕರ ಭಿಡೆಯಿಂದ ತಾವು ಅಸತ್ಯವನುಡಿದರೆ ಜ್ಞಾನಿಗಳಾದರೂ ಅಜ್ಞಾನಿಗಳೆನಿಸುವರು. ಅಸತ್ಯವು ಅನರ್ಥಕ್ಕೆ ಸಾಧನವದೆ. ಸಾಕ್ಷಿ "ಉತ್ತರಿಯು ಸುರಿಯುದಿರೆ, ಹೆತ್ತವ್ವ ಪೊರೆಯದಿರೆ, ಸತ್ಯವಂತರು ಹುಸಿದರೆ ಮರ್ತ್ಯಕ್ಕೆ ಅತ್ತಳಕೊತ್ತಾವು ಸರ್ವಜ್ಞ" ಎಂದು ಸರ್ವಜ್ಞ ಜ್ಞಾನಿಗಳ ವಾಕ್ಯ ಉಂಟು.

ಪರಮಸುಜ್ಞಾನಿಗಳಾದ ದಿವ್ಯಜ್ಞಾನಿಗಳಾದವರು ಈ ಲೋಕದಲ್ಲಿ ಲೌಕಿಕರಂತೆ, ಲೋಕಾಚಾರದ ಕೃಷಿ ಮೊದಲಾದ ಷಟ್ಕೃಷಿ ಲೋಕ ವ್ಯವಹಾರದಿಂದ ಸಂಸಾರದೊಳಗಿದ್ದರೂ ತಮ್ಮ ಮಹಾಜ್ಞಾನದಲ್ಲಿ ಭಕ್ತಿ ಜ್ಞಾನ ವೈರಾಗ್ಯದ ಬಲದಿಂದ ನಿಃಸಂಸಾರಿಗಳಂತೆ ನಿರ್ಲೇಪಿಗಳಾಗಿರಬೇಕು.

ಸಂಸಾರದೊಳಗಿದ್ದು ಕಮಲ ಪತ್ರದಂತೆ, ನಿಃಸಂಸಾರಿಯಾಗಿರಬೇಕಾದರೆ ಸರ್ವ ಜ್ಞಾನಿಗಳಾದ ಪರಮ ಜ್ಞಾನಿಗಳಿಗೆ ಸುಲಭವು. ಅಲ್ಪ ಜ್ಞಾನಿಗಳಿಗೆ ದುರ್ಲಭವಾಗಿರುವದು. ಸಾಕ್ಷಿ "ಜಾಣನು ಲೌಕಿಕ ಪಾರಮಾರ್ಥವೆರಡನು ಮಾಣದೆ ಕೂಡಿ ನಡಿಸುತಿಹನಿಂತು" ಎಂಬ ನಿಜಗುಣಾರ್ಯರ ಪದವೇ ಸಾಕ್ಷಿಯಾಗಿದೆ.

ಈ ಗ್ರಂಥವು ಭೋಗ ಮೋಕ್ಷಗಳಿರಡರ ವಿಷಯದಲ್ಲಿ ಅನಂತ ರೀತಿಯ ಸದ್ಭೋಧೆಯನ್ನು ಬೋಧಿಸುವದಾಗಿ ಪ್ರಬಲವೇ ಹೊರ್ತು ಅಬಲವಲ್ಲವು. ಇದರಲ್ಲಿ ನೀತಿ ಕ್ರಿಯಾಚಾರ ಸತ್ಯಸದಾಚಾರ ಸುಜ್ಞಾನ ಜ್ಞಾನಾಚಾರ ವಿಷಯದಲ್ಲಿ ವೇದಾದಿ ಶ್ರುತಿ ಸಮ್ಮತವಾಗಿ ಜಗತ್ಪ್ರಖ್ಯಾತವಾದ ಪ್ರಬಲಶಾಸ್ತ್ರಂಗಳೆನಿಸಲ್ಪಟ್ಟ ನಿಜಗುಣ ಶಿವಯೋಗಿಗಳ ಷಟ್‌ಶಾಸ್ತ್ರಗಳ ವಾಕ್ಯಗಳ ದೃಷ್ಟಾಂತಂಗಳಿಂದ ಮತ್ತು ಶ್ರುತಿ ಸ್ಮೃತಿ ಆಗಮ ಪುರಾಣಂಗಳ ಗ್ರಂಥ ಸಾಕ್ಷಿಗಳನ್ನು ಕೊಟ್ಟು, ಸದ್ಭೋಧೆಯನ್ನು ಬೋಧಿಸುತ್ತಿರುವದರಿಂದ ಪ್ರಬಲವೆಂದು ತಿಳಿಯತಕ್ಕದ್ದು.

ಪ್ರಾಣಲಿಂಗಾನುಸಂಧಾನ.

(ಲೇಖಕ:— ಶರಣಸೇವಕ ಬಸವನ ಬಳಗ)

[ಶ್ರೀ ಚೆನ್ನಬಸವೇಶನು ಬಸವೇಶ್ವರನಿಗೆ ತನ್ನ ಪ್ರಾಣಲಿಂಗದ ಅನುಭವವನ್ನು ಅರುಹಿದ್ದು.]

ಬಸವೇಶ ನೀನೆನ್ನ ಕರದಿತ್ತ ಲಿಂಗವನು।
ಅಸಮತರ ಭಕ್ತಿಯಿಂ ಪೂಜಿಸುತ್ತಿರಲಾನು ॥ ೧ ॥

ಕೊರಡ-ಕೊರಡಿಗೆ ತಿಕ್ಕಿ ಬೆಂಕಿ ಹೊರಡುವ ತೆರದಿ।
ಪರತರದ ಲಿಂಗಮುಂ ಮನದೃಷ್ಟಿಗಳ್ಕಥಿಸೆ ॥ ೨ ॥

ಎನ್ನಂತರಂಗದೊಳಗೊಮ್ಮೆ ಝಗ್ಗನೆ ಜ್ಯೋತಿ।
ರನ್ನ ದೀವಿಗೆಯಂತೆ ಬೆಳಕ ಕೆಡವಲು ಜವದಿ ॥ ೩ ॥

ಆಗ ನನ್ನ ಜ್ಞಾನ ಕತ್ತಲೆಯು ತಾ ಪರಿದು।
ಬೇಗದಿಂ ಸುಜ್ಞಾನ ದೀಪ ಹೊಳೆದಂತಾಗೆ ॥ ೪ ॥

ಒಳಗಿನೀ ಬೆಳಕೆನ್ನ ಹೊರಮೂಡಿ ಪೊಗದಲ್ಲಿ।
ಕಳೆವೆತ್ತು ತೋರುತಿರೆ ಜನವೆಲ್ಲ ಬೆರಗಾಗಿ ॥ ೫ ॥

ಎನ್ನನ್ನು ಬಹು ಭಕ್ತಿಭಾವದಿಂ ನೋಡುತಲಿ।
ಎನ್ನ ನಡುವಳಿಯಂತೆ ತಾವೆಲ್ಲ ನಡೆಯುತಲಿ ॥ ೬ ॥

ಎನ್ನಲ್ಲಿ ಗೌರವವ ಹೆಚ್ಚಾಗಿ ಬೆಳಸಿದರು।
ಎನ್ನನ್ನು ತಲೆಯು ಮೇಲ್ಪೊತ್ತು ಕುಣಿದಾಡಿದರು ॥ ೭ ॥

ಆ ಲಿಂಗದುಪಕಾರವನ್ನೆಂತು ನಾ ಮರೆವೆ।
ನಾಲಿಗೆಯು ಬಣ್ಣಿಸಲ್ಕರಿದದರ ಮಹಿಮೆಯನು ॥ ೮ ॥

ಲಿಂಗವೇ ಶಿವನೆಂದು ನಾನೆ ಭಕ್ತನು ಯೆಂದು।
ಸಿಂಗರದಿ ಮನದಲ್ಲಿ ನಂಬಿ ನಾ ಸಾಗಿರಲು ॥ ೯ ॥

ಗುರುವು ನೀ ನನಗೆಂಬ ಭಾವ ತಾ ಬಲಿದಿರಲು।
ಕರದಿಷ್ಟ ಲಿಂಗದೋಳ್ಭಕ್ತಿ ಕರಿಗೊಂಡಿರಲು ॥ ೧೦ ॥

ಎನ್ನಂತರಂಗದಿಂದರಿವು ಜಾಗ್ರತವಾಗಿ।
ಎನ್ನ ಶ್ರೀಗುರುವಾಗಿ ಸೇಳ್ದುದೀ ಪರಿಯಲ್ಲಿ ॥ ೧೧ ॥

"ನಿನ್ನ ಬಾಹ್ಯದ ಲಿಂಗಕಿಪ್ಪೇಕೆ ಮನ್ನಣೆಯು।
ಚೆನ್ನ ನಿನ್ನಯ ಪ್ರಾಣವೇ ಲಿಂಗವಾಗಿಹುದು ॥ ೧೨ ॥

ಮನದೊಳಗೆ ಜನಿಯಿಸಿರುವೀ ವಾಣಿಯಂ ಕೇಳಿ ।
ಜನಿತ ಹರ್ಷದಿ ದೃಷ್ಟಿ ಯೆನ್ನೊಳಗೆ ನಾನಿರಿಸಿ ॥ ೧೩ ॥

ಅರಿವೆ ನೀ ಗುರುವೆಂದು ಭಕುತಿಯಿಂ ಕುಂಬಿಟ್ಟೆ ।
ಪರಮ ಪ್ರಾಣವೆ ಲಿಂಗವೆಂದು ನಾ ಪೊಡವಟ್ಟೆ ॥ ೧೪ ॥

ಅರಿವು ಗುರುವಾಗಿರಲು ಪ್ರಾಣಲಿಂಗಾಗಿರಲು ।
ಹೊರಗೆ ನೀ ಗುರುವೇಕೆ? ಬಾಹ್ಯ ಲಿಂಗವದೇಕೆ? ॥ ೧೫ ॥

ಇಂತೆಂಬ ಸಂಶಯಪಿಶಾಚಿ ಯೆನ್ನಯ ಮನವ ।
ಸಂತತಂ ನೋಯಿಸಲು ನಾನದಕೆ ವಶನಾದೆ ॥ ೧೬ ॥

ಎನ್ನ ಗುರು ಶ್ರೀ ಬಸವನೆಂಬುದಂ ನಾ ಮರತೆ ।
ಜೆನ್ನ ಕೂಡಲಸಂಗಲಿಂಗವೆಂಬುದ ಮರೆತೆ ॥ ೧೭ ॥

ಬಸವ ಮಾನವನಲ್ಲೆ? ಲಿಂಗ ತಾ ಶಿಲೆಯಲ್ಲೆ? ।
ವಿಸುಪುದೆಂಬೀ ಭಕ್ತಿಯ ಜ್ಞಾನಕುರುಹಲ್ಲೆ? ॥ ೧೮ ॥

ಎನ್ನೊಳಗೆ ಸತ್ಯವಿರಲನ್ಯರನು ನಾ ನಂಬಿ ।
ಇನ್ನೆಗಂ ಕೆಟ್ಟಿನಕಟಾ ಯೆಂದು ಬಹು ನೊಂದೆ ॥ ೧೯ ॥

ಬಸವ ನಿನ್ನೊಳಗೆನ್ನ ಗುರುಭಕ್ತಿ ಲಯವಾಯ್ತು ।
ಎಸೆವ ಲಿಂಗದಿ ಭಕ್ತಿಭಾವನೆಗೆ ಯಳಿವಾಯ್ತು ॥ ೨೦ ॥

ಭಾವನೆಯ ನೆರೆ ತೂರಿ ಬುದ್ಧಿಯಂ ಬೆಂಬತ್ತಿ ।
ಸಾವಕಾಶದಿ ನಾನು ಸಾಗಿರಲು ಬಸವೇಶ ॥ ೨೧ ॥

ಎನ್ನ ಮನ ಸಂಶಯತರಂಗದಿಂ ತುಂಬಿಹುದು ।
ಎನ್ನ ತರ್ಕವಿತರ್ಕ ಚನ್ನದಿಂ ಸಾಗಿಹುದು ॥ ೨೨ ॥

ವಾದದೋಲ್ಬಹುಕುಶಲ ನಾನಾದೆ ಚಚ್ಚರದಿ ।
ವಾದದಲಿ ನಾ ಗೆದ್ದೆ ಬಹು ಶಾಸ್ತ್ರಿ ಪಂಡಿತರ ॥ ೨೩ ॥

ಎನ್ನೊಳಗಹಂಭಾವ ಬೆಳೆಯಿತಾಕ್ಷಣದಲ್ಲಿ ।
ನನ್ನಿಷ್ಟಲಿಂಗಪೂಜಾಫಲಕೆ ಕೊನೆಯಾಯ್ತು ॥ ೨೪ ॥

ಎನಗಾಗ ತೊಂದರೆಗಳೊಂದೊಂದೆ ಕಾಡಿದವು ।
ಮನವು ಚಿಂತಾತುರಗಳಿಂ ನೊಂದು ಬೆಂದಿಹುದು ॥ ೨೫ ॥

ಎಣ್ಣೆಯಿಲ್ಲದ ದೀಪ ಕಣ್ಣಿಯಿಲ್ಲದ ದೇಹ ।
ಹಣ್ಣಿಯಿಲ್ಲದ ರುಚಿಯು ಕಾಷ್ಠವಿಲ್ಲದ ಅಗ್ನಿ ॥ ೨೬ ॥

ಯಂದದೋಳಿನ್ನ ಜ್ಞಾನದ ಜ್ಯೋತಿ ಮುಸಕಾಯ್ತು ।
ಅಂದಿನಿಂದೆನ್ನ ಮೊದಲಿನ ಕಾಂತಿಗಳಿವಾಯ್ತು ॥ ೨೭ ॥

ನಾನೊಬ್ಬ ಸಾಮಾನ್ಯಜೀವಿಯೆಂದುಂ ಜನವು ।
ಹೀನದೃಷ್ಟಿಯೊಳೆನ್ನ ಕಾಣುತಿರಲಾಗೆನ್ನ ॥ ೨೮ ॥

ಎದೆಯು ಕೈಕಾಲುಗಳು ಗದಗದನೆ ನಡುಗಿದವು ।
ಬಿದಿ ಯೆನಗೆ ಕಾಡುವದೆ ಯೆಂದಾನು ತಳಮಳದಿ ॥ ೨೯ ॥

ಬಸವೇಶ ನಿನ್ನನ್ನು ನೆನೆನೆನಿಸಿ ನಾನತ್ತ ।
ವಿಸುಪ ಲಿಂಗವ ಸ್ಮರಿಸಿ ಮತ್ತೊಮ್ಮೆ ನಾನತ್ತೆ ॥ ೩೦ ॥

ಹೀಗಿರಲು ಬಸವೇಶ ನೀನೆನ್ನ ಕನಸಿನೊಳು ।
ಬೇಗದಿಂ ಬಂದೆನಗೆಯಿಂತೆಂದೆ ಪ್ರೇಮದೊಳು ॥ ೩೧ ॥

" ಚಿಂತೆಯಂ ಬಿಡು ಚನ್ನ ಸಂತೈಸುವೆನು ನಿನ್ನ ।
ಕಂತುಹರಗರಿವಾಯ್ತು ನಿನ್ನ ಮನದನುತಾಪ ॥ ೩೨ ॥

ನಿಜವಾದ ಕರದಿಷ್ಟಲಿಂಗಮಂ ನೀ ತೊರೆದು ।
ಭಜಿಸಿರ್ಪೆ ಪ್ರಾಣಲಿಂಗದ ಕಳೆಯನೊಂದನ್ನೆ ॥ ೩೩ ॥

ಆದರಿಂದ ನಿನಗಿಂತ ಕಷ್ಟ ತಾನೊದಗಿಹುದು ।
ಇದನರಿದು ನೀನಿನ್ನ ಗುರುಲಿಂಗದೋಲ್ಬಕುತಿ ॥ ೩೪ ॥

ಇರಿಸಿ ಪ್ರಾಣದಿ ಲಿಂಗಸಂಧಾನಮಂ ಮಾಡು ।
ಪರವಸ್ತುವಿನ ಕೃಪೆಯು ದೊರೆಯುವದು ಮತ್ತೊಮ್ಮೆ ॥ ೩೫ ॥

ಜ್ಞಾನಜ್ಯೋತಿಗೆ ಭಕ್ತಿರಸತೈಲ ತಾ ಬೇಕು ।
ನೀನು ಭಕ್ತಿಯ ಬಿಡಲು ಜ್ಞಾನ ತಾನಳವಡದು ॥ ೩೬ ॥

ಜ್ಞಾನಪ್ರಾಪ್ತಿಗೆ ಭಕ್ತಿ ಬೇಕೆಂಬುದನ್ನರಿದು ।
ಜ್ಞಾನವಂತನೆ ಭಕ್ತಿಯಂ ಮಾಡೊ ನೀನಿನ್ನು " ॥ ೩೭ ॥

ಬಸವೇಶ ತಾ ಕನಸಿನೋಲ್ಪೇಳ್ದೀ ನುಡಿಯ ।
ಹೊಸಹುರುಪಿನಿಂ ನಾನು ಪಾಲಿಸಲು ಜವದಲ್ಲಿ ॥ ೩೮ ॥

ಕಳೆದ ಎನ್ನಯ ಕಾಂತಿ ತಿಳಿಯಾಗಿ ನಿಂದಿತ್ತು ।
ಅಳಿದೆನ್ನ ಗೌರವವು ಮರಳಿ ತಾ ಸುತ್ತಿತ್ತು ॥ ೩೯ ॥

ಇಷ್ಟಲಿಂಗದ ಭಕ್ತಿರಸತೈಲದಿಂದೆನ್ನ ।
ಅಷ್ಟಸೌಭಾಗ್ಯಯುತ ಪ್ರಾಣಲಿಂಗದ ಜ್ಯೋತಿ ॥ ೪೦ ॥

ಜಗಜಗಿಸಿ ಬೆಳಗೆ ಮನವೇಕಾಗ್ರವಾಯಿತ್ತು ।
ಸೊಗದಿಂದ ಶಾಂತಿಗುಣಸೈರಣೆಯು ಹುಟ್ಟಿತ್ತು ॥ ೪೧ ॥
ಅಣಿವಾದಿಸಿದ್ಧಿಗಳಿನಗೆ ವಶವಾಗೆ ।
ಘನಯೋಗಮಾರ್ಗಸಾಧನೆ ತಾನೆ ಕೈಸೇರೆ ॥ ೪೨ ॥
ನಾನು ಹಾವಾಡಿಗನೊ ಮಾಂತ್ರಿಕನೊ ಡಾಂಭಿಕನೊ ।
ಯಾನಾಡ ಸುಡಗಾಡಸಿದ್ಧನೋಯೆಂಬಂತೆ ॥ ೪೩ ॥
ನೂರೆಂಟುಪಾವಾಡಗಳ ಮಿಕ್ಕಿ ನಾಗೆಯ್ದಿ ।
ಪಾರಮಾರ್ಥದ ಸೀಮೆ ಮೀರಿತೆಂದಾನರಿದೆ ॥ ೪೪ ॥
ಪರಮತದ ವಾದಿಗಳ ಗೆದ್ದು ದೀಕ್ಷೆಯ ಕೊಟ್ಟ ।
ಪರಮಪರತರ ವೀರಶೈವರಂ ನಾಗೆಯ್ದೆ ॥ ೪೫ ॥
ಚಿಕ್ಕದಣ್ಣಾಯಕರ ಸರಿಯಾರು ಇಹರೆಂದು ।
ಅಕ್ಕರದಿ ಜನರಾಡಿಕೊಳುತಿರಲು ನಾನುಬ್ಬಿ ॥ ೪೬ ॥
ಪರಬೊಮ್ಮ ನಾನಾದೆನೆಂದು ಹಿರಿಹಿರಿ ಹಿಗ್ಗಿ ।
ಮರೆದು ಮೈಮರೆದಿರ್ದೆ ಇಷ್ಟಪ್ರಾಣಗಳರವ ॥ ೪೭ ॥
ಅನಿತರೋಳೆನ್ನ ಗರ್ವವ ಕುಗ್ಗುಬಡೆವಂಥ ।
ಘನಮೂರ್ತಿ ಪ್ರಭುವರ್ಯ ಬಂದೆನ್ನ ವಾದದಲಿ ॥ ೪೮ ॥
ಗೆದ್ದು ನೀರಿಳಿಸಿದಾ ಕ್ಷಣದಲ್ಲಿ ನನ್ನೆದೆಯು ।
ಗದ್ದದನೆ ತಾ ನಡುಗಿ ಹವ್ಮದಂ ತಾ ಪೋಗಿ ॥ ೪೯ ॥
ಸೊಕ್ಕಿದಾನೆಯ ಮದವು ಅಂಕುಶದ ಹೊಡತದಿಂ ।
ದಿಕ್ಕೆಟ್ಟು ಪೋಪಂತೆ ಎನ್ನ ಬುದ್ಧಿಯ ಗರ್ವ ॥ ೫೦ ॥
ಆ ಮಹಾಪ್ರಭುರಾಯನಮಳಜ್ಞಾನಾಂಕುಶದಿ ।
ಭೂಮಿಯೋಳಿಲ್ಲಿಸಿಸಿತಾಕ್ಷಣದಿ ಸೋಜಿಗವು! ॥ ೫೧ ॥
ಸಿದ್ಧಪುರುಷರು ಅವರು ಜನ್ಮದಿಂ ಜ್ಞಾನಿಗಳು ।
ಶುದ್ಧಮತಿಗಳು ಅವರ ಪಾದಕ್ಕೆ ನಾ ಸರಿಯೆ ॥ ೫೨ ॥
ಜಂಗಮವು ಸುಜ್ಞಾನನಿಧಿಯೆಂಬುದಂ ನಾನು ।
ಲಿಂಗಮೂರುತಿ ಪ್ರಭುವ ನೆರೆ ನೋಡಿ ಮನಗಂಡೆ ॥ ೫೩ ॥
ಬಸವೇಶ ನೀನವರ ಮುಖದಿಂದೆ ದಯವಿಟ್ಟು ।
ಅಸಮತರ ಭಾವಲಿಂಗದ ಕುರುಪನರುಹಯ್ಯ ॥ ೫೪ ॥

ನಾಸ್ತಿಕತ್ವದ ದುಷ್ಪರಿಣಾಮಗಳು.

(ಲೇಖಕ:— ಆಸ್ತಿಕ.)

ಈ ಜಗತ್ತಿನಲ್ಲಿ ಚಾರ್ವಾಕರು ನಾಸ್ತಿಕರು ಮೊದಲಾದ ಕೆಲವು ಪಂಥದವರು ದೇವರು ಇದ್ದಾನೆಂಬ ಮಾತನ್ನು ಒಪ್ಪುವದಿಲ್ಲ. 'ಭಸ್ಮೀ ಭೂತಸ್ಯ ದೇಹಸ್ಯ ಪುನರಾಗಮನಂ ಕುತಃ' "ಋಣಂ ಕೃತ್ವಾ ಘೃತಂ ಪಿಬೇತ್" ಎಂಬ ಯಥೇಷ್ಟ ವೃತ್ತಿಯ ತತ್ವಗಳಿಂದ ನಾಸ್ತಿಕ ಮತವು ತುಂಬಿಕೊಂಡಿರುವದರಿಂದ ಇವರಲ್ಲಿ ಆಸುರೀ ಪ್ರವೃತ್ತಿಯೇ ಎದ್ದು ಕಾಣುವದಲ್ಲದೆ ಅಂತಃಕರಣ ಪ್ರವೃತ್ತಿಯು ಲೋಪವಾಗಿರುತ್ತದೆ

ನಾಸ್ತಿಕರು ಒಪ್ಪದೆ ಇರತಕ್ಕ ವಿಷಯಗಳು ಪ್ರಾಮುಖ್ಯವಾಗಿ ಆರು ಇರುತ್ತವೆ. ಅವು ಯಾವುವೆಂದರೆ:— (೧) ದೇವರ ಅಸ್ತಿತ್ವದ ನಿರಾಕರಣೆ (೨) ಜೀವಾತ್ಮನ ಅಸ್ತಿತ್ವದ ನಿರಾಕರಣೆ (೩) ಆತ್ಮನ ಅಮರತ್ವದ ನಿರಾಕರಣೆ (೪) ಮಾನವೀ ಶಕ್ತಿಗೆ ಮೀರಿದ ಬುದ್ಧಿ ಶಕ್ತಿಯ ನಿರಾಕರಣೆ (೫) ವಿಶ್ವದಲ್ಲಿದ್ದ ಚೈತನ್ಯದ ನಿರಾಕರಣೆ (೬) ಆಧ್ಯಾತ್ಮ ಜಗತ್ತಿನ ಸತ್ಯತೆಯ ನಿರಾಕರಣೆ.

ಮಾನವನ ಉದ್ಧಾರಕ್ಕೂ ಸುಖಕ್ಕೂ ಪ್ರಗತಿಗೂ ಆಸ್ತಿಕವಾದವು ಅನುಕೂಲವಾಗಿದ್ದರೆ ನಾಸ್ತಿಕವಾದವು ಪ್ರತಿಕೂಲವಾಗಿದೆ. ತಂದೆಯೇ ಇಲ್ಲೆನ್ನವ ಅನಾಥ ಕೂಸಿನಂತೆ ದೇವರೇ ಇಲ್ಲೆನ್ನುವ ನಾಸ್ತಿಕರು ಅಧ್ಯಾತ್ಮಿಕಾನಂದಕ್ಕೆ ಎರವಾಗಿಬಿಟ್ಟಿದ್ದಾರೆ. ದೇವರಿದ್ದಾನೆಂಬುದೇ ನಾಸ್ತಿಕರಿಗೆ ಮೂಢಭಾವನೆಯಂತೆ ಕಾಣುತ್ತದೆ. ಆ ವಿಚಾರದಲ್ಲಿಯೇ ಅವರು ತಮ್ಮ ಜಾಣತನವನ್ನು ಹೊಗಳಿಕೊಳ್ಳುತ್ತಿದ್ದಾರೆ. ಆದರೆ ದೈವೀ ಭಾವ ರಾಹಿತ್ಯತೆಯಿಂದ ತಮ್ಮ ಸಿಜಾನಂದ ರಹಸ್ಯದ ರಸವೇ ಬತ್ತಿ ಹೋಗಿರುವದೆಂಬ ಮಾತನ್ನು ಮರೆತಿದ್ದಾರೆ. ಆಸ್ತಿಕರ ಮತದಲ್ಲಿ ನಾಸ್ತಿಕವಾದವು ಘೋರ ಪಾಪವೆಂದೆಸಿಸಲ್ಪಡುತ್ತದೆ. ಅದು ವಿಶ್ವವನ್ನೇ ಅಧೋಗತಿಗೆ ಒಯ್ಯುವಂತಹದು. ಅದು ಮನುಷ್ಯನನ್ನು ಹೀನಾವಸ್ಥೆಗೆಳಿಸುವದು. ನಾಸ್ತಿಕನು

ಏನೋ ಪ್ರಸಂಗವಶಾತ್ ಭೂಮಿಗೆ ಜಾರಿ ಬಿದ್ದ ಪರದೇಶಿ ಕೂಸಾಗಿದ್ದಾನೆ. ಅವನು ಚೈತನ್ಯಶೂನ್ಯನಾಗಿದ್ದಾನೆ. ಅವನ ಅಸ್ತಿತ್ವಕ್ಕೆಪ್ಪ ಮಾತ್ರವೂ ಬೆಲೆಯಿಲ್ಲ. ಅತನು ನಿರ್ಜೀವಾಂಧಕಾರಗಳ ಮೂರ್ತಿಯಾಗಿರುವನು. ಯಾವಾಗ ಒಡೆದು ಹೋದೀತೋ ಎಂಬ ನೇಮುವಿಲ್ಲದ ನೀರಿನ ಗುಳ್ಳೆಯಂತೆ ಅವನ ಜನ್ಮವಿರುವದು. ಐಹಿಕ ಸುಖೋಪಭೋಗವೇ ನಾಸ್ತಿಕನ ಇಡಿಗಂಟು. ಪಾರಮಾರ್ಥಿಕ ಕ್ಷೇತ್ರಕ್ಕೆ ಅತನು ದೂರಸ್ಥನು. ಅತನ ಧರ್ಮವು ರೆಕ್ಕೆಯಿಲ್ಲದ ಪಕ್ಷಿಯುಂತಿರುವದು. ಆ ಪಕ್ಷಿಯು ಭೂಮಿಯ ಮೇಲೆ ಸಂಚರಿಸುತ್ತಿರುವದೇನೋ ನಿಜ. ಆದರೆ ಆಕಾಶದಲ್ಲಿ ಹಾರಾಡಿ ಆನಂದ ಹೊಂದುವ ಪುಣ್ಯವು ಅದರ ಹಣೆಯಲ್ಲಿ ಬರೆದಿಲ್ಲ. ನಾಸ್ತಿಕನಿಗೆ ದೇವರ ಸುತ್ತು ಬಿದ್ದಿರುವ ಆಧ್ಯಾತ್ಮಿಕ ಪ್ರಕಾಶವೂ ಅತ್ಯೋದ್ಧಾರದ ಕಲ್ಪನೆಯೂ ಶೂನ್ಯವಾಗಿವೆ. ತಿನ್ನು, ಕುಡಿ, ಯಥೇಚ್ಛವಾಗಿ ನಡೆ ಎಂಬ ಎಪಿಕ್ಯುರಿಯನ್ ತತ್ವಗಳೇ ಅತನ ಪ್ರತಿನಿತ್ಯದ ಆಚಾರಗಳು.

ಇದಕ್ಕೆ ವಿಪರೀತವಾಗಿ ಆಸ್ತಿಕನ ಪರಿಸ್ಥಿತಿಯೇ ಬೇರೆ. ಆಸ್ತಿಕನು ದೇವರ ವಿಷಯವಾಗಿಯೂ ಮಾನವ ಪ್ರಾಣಿಗಳ ವಿಷಯವಾಗಿಯೂ ಪ್ರೇಮಭರಿತನಾಗಿರುವನು. ದೇವರು ತಂದೆಯೆಂದೂ ಮಾನವರು ಬಂಧುಗಳೆಂದೂ ಭಾವಿಸುವನು. ಎಲ್ಲ ಸದ್ಗುಣಶಾಲಿಗಳಾದ ಜನರೊಡನೆ ಕೂಡಿ ಪರಮಾತ್ಮನ ಸೇವಾ ಕಾರ್ಯವನ್ನು ಮುಂದುವರಿಸಲು ಅತನು ಹೆಣಗಾಡುವನು. ಅತನ ಗೌರವವೂ ಯೋಗ್ಯತೆಯೂ ಅಧಿಕವಾದವುಗಳು. ಅವನ ಚೇತನಾಶಕ್ತಿಯು ಅಪಾರವಾದುದು. ಜಗತ್ತಿನ ಉತ್ಕ್ರಾಂತಿಯಿಂದ ಪರವಸ್ತುವಿನ ಪ್ರಕಾಶವನ್ನು ಬೆಳಗುವಂತೆ ಮಾಡುವ ಧೀರನವನು. ಅತನು ದೇವರಿಗಿಂತ ಕಿಂಚಿತ್ ಕಡಿಮೆಯಾದರೂ ಸಾಕ್ಷಾತ್ ದೇವರೆಂದು ತಿಳಿದರೂ ವಿಶೇಷ ತಪ್ಪಾಗದು. ಆಸ್ತಿಕತ್ವವೇ ಪರಮಾತ್ಮನ ಸಂದೇಶವು. ನಾಸ್ತಿಕತ್ವವು ಪಿಶಾಚಿಯ ಸಂದೇಶವು. ಜಗತ್ತಿಗೆ ಏನಾದರೂ ಕಲ್ಯಾಣ ಮಾಡಿದವರೂ ಮಾಡುವವರೂ ವಿಶೇಷತಃ ಆಸ್ತಿಕರೇ ಹೆಚ್ಚಾಗಿದ್ದಾರೆ. ಭೌತಿಕ ಪ್ರಿಯರಾದ ನಾಸ್ತಿಕರು ಸಹ ಸಾಮಾಜಿಕ ಹಾಗೂ ಆದಿ ಭೌತಿಕ ದೃಷ್ಟಿಯಿಂದ ಲೋಕಕ್ಕೆ ಕೆಲಮಟ್ಟಿಗೆ ಉಪಕಾರಗಳನ್ನು ಮಾಡಿರಬಹುದು. ಆದರೆ ಮಾನವ ಜೀವನಕ್ಕೆ ಅತ್ಯವಶ್ಯವಾದ ಆಧ್ಯಾತ್ಮಿಕ ಜೀವಾ

ವನ್ನೇ ಅವರು ಹುರಿದುಬಿಟ್ಟಿರುವದರಿಂದ ಅವರು ಮಾಡಿರುವ ಸ್ತುತ್ಯ ಕಾರ್ಯಗಳಿಗಾದರೂ ಅಷ್ಟೊಂದು ಪ್ರಶಸ್ತಿಯುಂಟಾಗಲಾರದು. ಮನುಷ್ಯನಿಗೆ ಅಸ್ತಿತ್ವವಿದ್ದಂತೆ ದೇವರಿಗೂ ಅಸ್ತಿತ್ವವುಂಟು. ದೇವರು ಇಲ್ಲೆನ್ನುವ ಮನುಷ್ಯನಿಗೆ ಸ್ವತಃ ನಾಸ್ತಿಕತ್ವವುಂಟಾಗಬೇಕಾದೀತು.

ವಿಶ್ವಬಂಧುತ್ವ.

(ಲೇಖಕರು. ಒಬ್ಬ ಸಮಾಜಸೇವಕ.)

ಅಯಂ ನಿಜಃ ಪರೋ ವೇತಿ ಗಣನಾ ಲಘು ಚೇತಸಾಂ।
ಉದಾರಚರಿತಾನಾಂ ತು ವಸುಧೈವ ಕುಟುಂಬಕಂ ॥

ಸಣ್ಣ ಮನಸ್ಸಿನವರು ಇದು ನನ್ನದು ಅದು ಅನ್ಯರದು ಎಂದು ಎಣಿಕೆ ಹಾಕುತ್ತಾರೆ. ದೊಡ್ಡ ಮನಸ್ಸಿನವರು ಇಡೀ ವಿಶ್ವವೇ ನಮ್ಮದೆಂಬ ಭಾವದಿಂದ ಆಚರಿಸುತ್ತಾರೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ ಸಂಗನ ಶರಣರೇ ಉದಾರಿಗಳು. ಜಗತ್ತಿಗೆಲ್ಲ ಒಬ್ಬನೇ ದೇವರೆಂತಲೂ ನಾವೆಲ್ಲ ಅತನ ಮಕ್ಕಳೆಂತಲೂ ಪರಸ್ಪರ ಬಂಧುಗಳೆಂತಲೂ ಅನೇಕ ಧರ್ಮಗಳು ತಮ್ಮ ಉದಾರ ತತ್ವಗಳನ್ನು ಸಾರುತ್ತಿರುವವಷ್ಟೇ. ಆದರೆ ನಿಜವಾಗಿ ನೋಡಿದರೆ ಆ ಧರ್ಮಗಳು ಆಚರಣೆಯ ಪ್ರಶ್ನೆ ಬಂದಾಗ ನಾ ಹೆಚ್ಚು ನೀ ಹೆಚ್ಚು ಎಂದು ಹೊಡೆದಾಡುತ್ತಿರುತ್ತವೆ. ಜಗತ್ತಿನವರೆಲ್ಲರೂ ನಮ್ಮ ಬಂಧುಗಳೆಂಬ ಭಾವನೆಯು ಆಚಾರದಲ್ಲಿ ಅಳವಟ್ಟಿದ್ದರೆ ಜಗತ್ತು ಒಳ್ಳೇ ಸುಖಶಾಂತಿಯಿಂದ ಜೀವಿಸಬಹುದಾಗಿದ್ದಿತು. ಆದರೆ ಆ ಮಾತು ಕ್ರಿಯೆಯಲ್ಲಿರದೆ ಮಾತಿನಲ್ಲಿ ಮಾತ್ರ ಇರುವದರಿಂದ ಪರಸ್ಪರರಲ್ಲಿ ಯುದ್ಧ, ಹೋರಾಟ, ಸ್ಪರ್ಧೆ, ಅಶಾಂತಿಗಳು ಬೆಳೆದು ಜಗತ್ತಿನ ಜೀವನ ಸ್ವಾರಸ್ಯವೇ ಹೇಳಹೆಸರಿಲ್ಲದಂತಾಗಿದೆ.

ಜಗತ್ತಿನ ಎಲ್ಲ ಧರ್ಮಗ್ರಂಥಗಳನ್ನು ನಿಚಾರಿಸಿದರೂ ಅವುಗಳಲ್ಲಿ ವಿಶ್ವ ಬಂಧುತ್ವದ ಉದಾರ ತತ್ವವಿರುವದೇನೋ ನಿಜ ಆದರೆ ವ್ಯವಹಾರದಲ್ಲಿ

ಅವು ತೋರಿಸುವ ಕ್ರಿಯೆಯೇ ಬೇರೆ. ನಮ್ಮ ಕುಲದೇವರಷ್ಟೇ ನಮಗೆ ಮಾತ್ರ ಧರ್ಮದ ಸತ್ಯಾಂಶವನ್ನು ಹೇಳಿಕೊಡುವರೇ ಹೊರತು ಪರ ಧರ್ಮಿಗಳಿಗೆ ಆ ಧಾರ್ಮಿಕ ರಹಸ್ಯವು ತಿಳಿಯಲಾರದೆಂದು ನಾವು ನಂಬಿದ್ದೇವೆ. ದಿವ್ಯವಾದ ಅಧ್ಯಾತ್ಮಿಕ ಜ್ಯೋತಿಯು ನಮ್ಮ ಋಷಿಗಳಲ್ಲಿಯೂ ಯೋಗಿಗಳಲ್ಲಿಯೂ ಧರ್ಮ ಗುರುಗಳಲ್ಲಿಯೂ ಮಾತ್ರ ಮನೆ ಮಾಡಿಕೊಂಡಿರುವದಲ್ಲದೆ ಉಳಿದ ನಾಧು ಸಜ್ಜನರಲ್ಲಿ ಅದರ ಗಂಧವು ಕೂಡ ಇಲ್ಲವೆಂಬುದು ನಮ್ಮಗಳ ತಿಳುವಳಿಕೆ. ನಮ್ಮ ಧರ್ಮ ಗ್ರಂಥಗಳು ಮಾತ್ರ ನಿಜವಾದ ಅಧ್ಯಾತ್ಮಿಕ ಜ್ಞಾನವನ್ನು ಪ್ರತಿಪಾದಿಸತಕ್ಕವುಗಳೆಂದೂ ಉಳಿದವರ ಧರ್ಮಗ್ರಂಥಗಳು ಅಸತ್ಯಗಳಿಂದ ತುಂಬಿಕೊಂಡಿರುವವೆಂದೂ ನಮ್ಮ ಗ್ರಹಿಕೆ. ನಮ್ಮ ಧರ್ಮ ಗುರುಗಳು ಹೇಳಿಕೊಟ್ಟ ಮಾರ್ಗವೇ ಮೋಕ್ಷಕ್ಕೆ ಸಾಧನವಾಗಿರುವದೆಂದೂ ಇತರ ಧರ್ಮ ಗುರುಗಳು ಹೇಳುವದು ಅಧೋಗತಿಗೊಯ್ಯುವದೆಂದೂ ನಮ್ಮ ಕ್ಷುದ್ರ ಭಾವನೆಯು.

ಈ ತರಹದ ಸಂಕುಚಿತ ವಿಚಾರಗಳ ಮೂಲಕ ಪರಸ್ಪರ ಧರ್ಮದವರಲ್ಲಿ ವಿಶ್ವಬಂಧುತ್ವದ ಆಚಾರಗಳು ತಲೆದೋರುವದು ಕಷ್ಟಕರವಾಗಿದೆ. ನಿಜವಾಗಿ ನೋಡಿದರೆ ಪರಮಾತ್ಮನ ಕಣ್ಣಿನಲ್ಲಿ ಎಲ್ಲರೂ ಸರಿ ಸಮಾನರು. ಅವನಿಗೆ ಒಂದು ಧರ್ಮವು ಹೆಚ್ಚಲ್ಲ, ಇನ್ನೊಂದು ಧರ್ಮವು ಕಡಿಮೆಯಲ್ಲ. ಎಲ್ಲ ದೇಶ ಭಾಷೆಗಳ ಜನರಿಗೂ ಆತನು ತಂದೆಯಾಗಿದ್ದಾನೆ. ಎಲ್ಲರೂ ಆತನ ಮಕ್ಕಳು. ಆತನ ದಯಾಗುಣವೂ ಕ್ಷಮಾಗುಣವೂ ದೇಶಕಾಲಗಳಿಂದ ಮರ್ಯಾದಿತವಾಗಿರದೆ ವಿಶ್ವವ್ಯಾಪಕವಾಗಿವೆ. ಒಂದೇ ಒಂದು ಧರ್ಮಗ್ರಂಥವು ಆತನ ಎಲ್ಲ ಸತ್ಯಾಂಶವನ್ನು ಸಂಪೂರ್ಣವಾಗಿ ಹೊರಪಡಿಸಲಾರದು. ಋಷಿಗಳೂ ಗುರುಗಳೂ ಯೋಗಿಗಳೂ ಎಲ್ಲ ಸೀಮೆಗಳಲ್ಲಿಯೂ ಅವತರಿಸಿದ್ದಾರೆ. ತನ್ನದೇ ಸತ್ಯವೆಂದೂ ಉಳಿದವುಗಳು ಮಿಥ್ಯವೆಂದೂ ಹೇಳಿಕೊಳ್ಳಲಿಕ್ಕೆ ಯಾವ ಧರ್ಮಕ್ಕೂ ಅಧಿಕಾರವಿಲ್ಲ. ಆದುದರಿಂದ ಜನಗಳು ಕ್ಷುದ್ರವಾದ ಸಂಕುಚಿತ ವಿಚಾರಗಳನ್ನು ಬದಿಗಿಟ್ಟು ಉದಾರ ಹೃದಯವುಳ್ಳವರಾದರೆ ಧಾರ್ಮಿಕ ವಿಶ್ವ ಬಂಧುತ್ವವೂ ಪ್ರೇಮವೂ ಪರಸ್ಪರರಲ್ಲಿ ಬೆಳೆದು ಅವರು ಸುಖಶಾಂತಿಯಿಂದ ಜೀವಿಸಲು ಅನುವಾಗುವದು.

ಈಗ ಜಗತ್ತಿನಲ್ಲಿ ಕಂಡು ಬರುವ ಯಾವದೇ ಧರ್ಮವಾಗಲಿ ಉಳಿದ ಧರ್ಮದವರನ್ನು ತನ್ನ ಬಂಧುಗಳಂತೆ ಕಾಣುತ್ತಿರುವದಿಲ್ಲ. ಕ್ರಿಶ್ಚಿಯನ್ನರು ಉಳಿದ ಹಿಂದೂ, ಮುಸಲ್ಮಾನ, ಬೌದ್ಧ ಧರ್ಮದವರನ್ನು ತಮ್ಮ ಬಂಧುಗಳೆಂದು ಭಾವಿಸುವವಿಲ್ಲ. ಹಿಂದೂ ಧರ್ಮದವರು ಮುಸಲ್ಮಾನರನ್ನು ತಮ್ಮ ಬಂಧುಗಳೆಂದು ತಿಳಿಯುವದಿಲ್ಲ. ಅದರಂತೆ ಮುಸಲ್ಮಾನರಾದರೂ ಅನ್ಯಮತೀಯರನ್ನು ತಮ್ಮ ಬಂಧು ವರ್ಗಕ್ಕೆ ಸೇರಿಸುವದಿಲ್ಲ. ಒಂದೇ ಧರ್ಮವನ್ನವಲಂಬಿಸುವ ಎರಡು ರಾಷ್ಟ್ರಗಳು ಬಂಧು ಭಾವವನ್ನು ತ್ಯಜಿಸಿ ವೈರಭಾವವನ್ನು ತಾಳಿ ಪರಸ್ಪರ ಹೋರಾಡುವವು. ಹಿಂದೂ ಧರ್ಮದಲ್ಲಿಯೂ ಕೂಡ ಅಸ್ಪೃಶ್ಯರನ್ನು ತಮ್ಮ ಬಂಧುಗಳಂತೆ ಕಾಣಲು ಜನರು ಹೆದರುತ್ತಾರೆ. ಹೀಗೆ ಎಷ್ಟೋ ಮತಮತಾಂತರಗಳಲ್ಲಿ ಸಹ ಬಂಧುಭಾವವಡಗಿ ವೈರಭಾವವೇ ಹೆಚ್ಚಾಗಿ ಕಂಡು ಬರುತ್ತಿದೆ. ಎಷ್ಟೋ ಧರ್ಮಗಳು ಜಗತ್ತಿನಲ್ಲಿರುವ ಉಳಿದ ಧರ್ಮಗಳು ಹಾಳಾಗಿ ತನ್ನದೊಂದೇ ಧರ್ಮವು ಸ್ಥಿರವಾಗಿ ಉಳಿಯಬೇಕೆಂದು ಹರಿಕೆಯನ್ನು ಕೋರುತ್ತಲಿವೆ.

ಯಾವ ಧರ್ಮವೂ ನಿರ್ದುಷ್ಟವಾದುದಲ್ಲ. ಆದರಲ್ಲಿ ಒಂದಿಲ್ಲೊಂದು ಕುಂದುಕೊರತೆಯು ಇದ್ದೇ ಇರುತ್ತದೆ. ಸಾವಿರಾರು ವರ್ಷಗಳಿಂದ ಜನತೆಯ ಸಂಸ್ಕೃತಿ ಸುಧಾರಣೆಗಳನ್ನು ಬೆಳೆಯಿಸಿದ ಧರ್ಮದಲ್ಲಿಯೂ ಕೂಡ ಒಂದಿಲ್ಲೊಂದು ತಪ್ಪು ಸಿಕ್ಕೇ ಸಿಗುವದು. ಈಗ ಸದ್ಯಕ್ಕೆ ನಾವು ಅನ್ಯ ಧರ್ಮಗಳ ನಿಂದೆ ಮಾಡುವದು ಅನುಚಿತವಾದುದು. ಅವುಗಳೊಳಗಿನ ಉತ್ತಮ ಹಾಗೂ ಉದಾತ್ತವಾದ ತತ್ವಗಳನ್ನು ಸಹೃದಯರಾಗಿ ಪರಿಶೀಲಿಸಲಿಕ್ಕೆ ನಾವು ಕಲಿಯಬೇಕು. ಸಹಾನುಭೂತಿಯಿಂದ ಅವುಗಳನ್ನು ನಾವು ಗ್ರಹಿಸಬೇಕು. ಖಡ್ಗವನ್ನು ಹಿರಿದಾಗಲಿ, ವೈರವನ್ನು ಬೆಳೆಯಿಸಿಯಾಗಲಿ, ಬುದ್ಧಿ ಬಲದಿಂದ ಅನ್ಯಮತಗಳನ್ನು ಖಂಡಿಸಿಯಾಗಲಿ ನಮ್ಮ ಮತವನ್ನು ಪ್ರಸಾರಗೊಳಿಸುವದು ನಾಗರಿಕತನದ ನಿಯಮಕ್ಕೆ ವಿರೋಧವಾಗಿದೆ. ಅದರೆ ನಮ್ಮ ಧರ್ಮ ತತ್ವಗಳ ಸತ್ಯ, ಸೌಂದರ್ಯ, ಪವಿತ್ರತೆ, ಪ್ರೇಮ, ಗ್ರಂಥಗಳ ಪ್ರಾಶಸ್ತ್ಯ ಇವುಗಳನ್ನು ಪ್ರಚಾರಗೊಳಿಸುವದು ಸ್ತುತ್ಯವಾದ ಉಪಾಯವು. ಈ ರೀತಿಯಾಗಿ ಮತ ಪ್ರಸಾರ ಮಾಡಿದರೆ ಅದು ಜನರ ಮನಸ್ಸಿನಲ್ಲಿ ನಟ್ಟು, ಯುದ್ಧ

ಹೋರಾಟಗಳಿಗೆ ಅವಕಾಶವಿಲ್ಲದಂತಾಗುವದು. ಪರಸ್ಪರರಲ್ಲಿ ದ್ವೇಷ ಸೂಯಗಳೂ ಧರ್ಮಲಂಡತೆಯೂ ನಿರ್ಮೂಲವಾಗುವವು.

ಈಗ ಹಿಂದೂ ಜನರಲ್ಲಿ ಸಂಘಟನೆಯನ್ನು ಮಾಡಬೇಕೆಂದು ನಮ್ಮ ಮುಂದಾಳುಗಳು ಪ್ರಯತ್ನಸುತ್ತಿರುವರಷ್ಟೇ. ಆ ಸಂಘಟನೆಗೆ ಉದಾರವಾದ ವಿಶ್ವ ಬಂಧುತ್ವದ ವಿಚಾರಗಳು ಅತ್ಯಾವಶ್ಯಕವಾಗಿ ಬೇಕು. ಪರಸ್ಪರ ಮತಪಂಥಗಳಲ್ಲಿ ಸಹಾನುಭೂತಿಯನ್ನೂ ಪ್ರೇಮವನ್ನೂ ವ್ಯಕ್ತಗೊಳಿಸಿದರೆ ಸಾಕು. ಸಂಘಟನೆಗೆ ಒಳ್ಳೇ ಬೆಂಬಲವು ದೊರೆತಂತಾಗುವದು. ನಮ್ಮನಮ್ಮೊಳಗೆ ನಾವು ಬಂಧುತ್ವವನ್ನು ಪ್ರಸ್ಥಾಪಿಸಲು ಅಸಮರ್ಥರಾದರೆ ವಿಶ್ವಬಂಧುತ್ವವನ್ನು ನೆಲೆಗೊಳಿಸುವದು ಶಕ್ಯವಾಗುವದೇ ?

ತಿರದೊಳಗಾನುತ ಶಿಂಧುವಿ।
ನೊರೆಯಲಿ ಇರಿಸಿದರು ಬೇಗ ಹಂ ಅಜರಾಗ ॥ ೫೩ ॥

ತಡವೇತಕೆ ಕೇಳಿರೆಲ್ಲರು।
ಕಡೆಯಲ್ಕನು ವಾಗಿರೆಂದು ಗಡಬಡಿಸುತ್ತಂ ॥
ಜಡಧಿಯೊಳಿರಿಸಲು ಮೆಲ್ಲನೆ।
ಹೊಡೆಯುರಿಯುತ ಹೊಕ್ಕುದಾಗ ಕಡಲನು ಬೇಗದಿ ॥ ೫೪ ॥

ಇನ್ನೇನ ಗೈವೆವೆನುತೆ।
ಪನ್ನಗಧರನನ್ನು ಕೇಳಿ ಫಣಿಶಿರಮಣಿಯಾಂ।
ತಿನ್ನಿದೆಕೋ ಎನಲು ಶೀಘ್ರದಿ।
ಬಿನ್ನಾಣದೊಳೊದಗಿ ಇತ್ತ ಭುಜಗನಸುತ್ತ ॥ ೫೫ ॥

ಮುತ್ತಿ ಒಪ್ಪಿಡಿಯೆ ಶಿರವನು।
ಸುತ್ತುತಲಿರೆ ಬಾಲ ಭಯವೇನ್ಹತ್ತದೆ ಮನದೋ ॥
ಅತ್ತತ್ತರಗೊಳ್ಳದೆ ತಂದರು।
ಸುತ್ತಿದರದ ಸುರಗಿಯಂತೆ ಇತ್ತಿರನಿಂತೆ ॥ ೫೬ ॥

ಗಿರಿಗಾಗ ಹರಿಯ ಬಿಗಿದಿ।
ನ್ನೆರುಪಿರಿ ಪಿರಿದಾದ ಕಜ್ಜಂದಿರವೆಂದೆನಲಾ ॥
ಶಿರವಿಡಿಯಲು ಸುರರಲ್ಲದೆ।
ಸರಿಯಾರಿಹರೆಂದ ನಗುತಾ ಹರಿ ಮಾಯೆಲಿ ತಾ ॥ ೫೭ ॥

ನುಡಿಗೇಳಿ ಕಿಡಿಯನುಗುಳುತ।
ಪಡಪಡ ಪಡಿಯಾರು ನಮಗೆ ಬಿಡು ಮುಖವೆನ್ನುತ ॥
ಜಡ ಭಾವದಿಂದಾ ದೈತ್ಯರು।
ಪಡಬಡ ಗುಟ್ಟುತ ತಲೆಯ ಪಿಡಿದರೆ ಕಡೆಯ ॥ ೫೮ ॥

ಬಲು ಭಾರ ಬಾಲವೆನ್ನುತ।
ಹಲು ಗಿರಿಯುತಲಾಗ ಸತ್ವಗ್ಗಳೆಯನ ತಾಳುತ ॥
ಮಲ ಹರನ ಮನದಿ ಧ್ಯಾನಿಸುತ।
ತಳೆದರು ಸುಮನಸರು ನಿಂತು, ಬಲುಗೈ ಯಾಂತು ॥ ೫೯ ॥

ವನಧಿಯೊಳು ಜನಿಸಿತಾಗಳು।
ಘನತರ ಗೌರವದ ವಸ್ತು ಸ್ವರ್ಗ ಪ್ರಶಸ್ತು ॥

ಎನಲೆಲ್ಲ ಯಾರಿಗೆಂಪೆನೆ ।
ತನಗಿದು ನನಗೆನುತ ಕುದುಕೆ ತೆಗೆದರು ಹುಡುಕಿ ॥ ೫೯ ॥

ವನಜಾಂಬಕನೊಲಿದು ಸರ್ವವ ।
ನನುವಿಸರಿಗೆ ಅಧಿಕಗೊಳಿಸಲ್ ಕನಲುತ ದುರ್ಜಯ ॥
ರುರವಣಿಸಲಾಗ ವಿನಯದಿ ।
ಸನುಮತಿಸಿದ ಶೌರಿ ನಿಮಗೆ ಸುಧೆಯಿದೆ ಒಳಗೆ ॥ ೬೦ ॥

ಎಲೆಲೆ ಏಳೇಳರೆನ್ನುತ ।
ಬಲು ಚಳಕದಿ ಬಳಸಿ ಹಿಡಿದು ಬೊಬ್ಬೆಯನಿಕ್ಕುತ ॥
ಇಳೆಯದುರಲೆಳೆದು ಕಡೆದರು ।
ತಳಪಳನುರೆ ಕುದಿದುದಬ್ಧಿ ತರುಣಿ ದಶಬ್ಧಿ ॥ ೬೧ ॥

ಬರಲೆನುತ ಬೆಳ್ಳಗಿರಪಲೆ ।
ಕರಗುತ ಕಪ್ಪುವ ತೆರದಲಿ ಕಡಲೊಪ್ಪಿರೆದು ॥
ರ್ಧರದ ಭಯಂಕರ ದುರಗನು ।
ಸೊರಗುತ ಸೋಜಿಗದ ವಿಷವ ಕಾರಲ್‌ಕಾವ ॥ ೬೨ ॥

ಸುರಗಿರಿಯೊ ಸತ್ಯ ಲೋಕವೋ ।
ತೆರಳಿರೋ ವೈಕುಂಠಕ್ಕೆಂದು ಹರಿದರು ಗರಳವು ॥
ಭರದೊಳು ತಾಗುತ ಸಕಲರ ।
ಉರುಳಿಸುತಲೆ ಉರಿದು ಬರುತೆ ಜನವನು ಸುಡುತೆ ॥ ೬೩ ॥

ಬರಬರಲು ಮುಂದೆ ಬಾಯ್ಬಿಡು ।
ತರಿದರು ತಮಗೆ ಅಯ್ಯೋ ಪೊರೆವರಿಲ್ಲ ॥
ಧರೆಗಗನ ಧಗಧಗಿಸುತಿದೆ ।
ಹರಿಯಜರೇನಾದರೆಂದು ಹೊರಳಿದರಂದು ॥ ೬೪ ॥

ಗದಗದಿಸಿ ಗರುಡ ಯಾನನು ।
ಇದು ಏನದ್ಭುತವೊ ಎನುತ ಹೆದರುತ ಮನದೊಳು ॥
ಪದನೇನು ಅಧಿಕ ಅಭವನ ।
ಪದಯುಗವ ಸ್ಮರಿಸಿ ನಿಂದು ಪೊರೆ ನೀನೆಂದು ॥ ೬೫ ॥

ಅನುಪಮನೆ ಅಖಿಳ ಜಗಕಿದು ।
ಕೊನೆಗಾಲದ ಕಡಲಿನಂತೆ ಕಡೆಸೊದಲಿಲ್ಲದ ॥

ಘನ ವಿಷದಿ ತನುವು ಕಂದಿತು ।
ನೆನೆದೆವು ಈಗ ಭಯವು ಇನ್ನುಳಿಯದು ದೇವ ॥ ೬೬ ॥

ಪದ್ಮಜನು ಪದ್ಮನಾಭನು ।
ಸಿರ್ಧರದಲಿ ನುತಿಸಲಿಂತು ಅದ್ರಿಜಾಧವ ತಾ ॥
ಒದ್ದು ತಾ ಓಹೋ ನಿಲಿ ನಿಲಿ ।
ಗೆದ್ದಿರಿ ಗೆಲುವಾಯಿತಿನ್ನು ನನ್ನನೇ ಮುನ್ನು ॥ ೬೭ ॥

ಹೆದರಿಸಿತು ಹೆಚ್ಚಿಗೆಯಲಿದು ।
ಗದಗದಿಸುತ ಹೋದೆನಿದರ ಹದನದು ಬೇ ॥
ರೆಂದದುಭುತದಿ ದಹಿಪ ವಿಷವನು ।
ಸುಧೆಯಂದದಿ ಸೇವಿಸಿದನು ಪದರದೆ ತಾನು ॥ ೬೮ ॥

ಎಲೆಲೆ ಬಲು ಮೂಢರಾದೆವು ।
ಮಲಹರ ಸಲಿಸಿದನು ತಾನೆ ಗೆಲುವೆಂತಹುದು ॥
ಬಲು ಲೋಕವೊಳಗೆ ಬೇವುದೋ ।
ಅಳಿವನೋ ಹರನೆನುತ ಅಲ್ಲಿ ಹಲುಬಿದರೆಲ್ಲ ॥ ೬೯ ॥

ಶಿವನಾಣೆ ಶಿಂಧು ವಿಷವನು ।
ಸವಿಯುದಿರೆಂದೆನುತ ಕರವ ಕವಳಿಕೆಯಾಂತಿ ॥
ಧವನಳಿವ ಧರ್ಮವೆಯೆನು ।
ತವಚಿದಳಗಜಾತಿಗಳವ ಬದುಕುವನಾವ ॥ ೭೦ ॥

ಕಲಹಂಸ ಗಮನೆ ಕೇಳಿದು ।
ಫಲಿತವು ತನಗಹುದುಳಯಲ್ಮಿಳೆಯನೆ ನಾನೀ
ಗಳದಲೆ ನಿಲಿಸುವೆ ಗರಳವ ।
ಕಳವಳಗೊಳಬೇಡವೆಂದ ಹರನೊಲವಿಂದ ॥ ೭೧ ॥

ಇದು ಭೂಷಣಾಯ್ತು ವಿಷ್ಣಾದಿ ।
ಗಳುರೆ ನುತಿಸುತ್ತ ಇದರ ಪದನೇನೆನಲು ॥
ಮುದವಾಂತು ಮುನ್ನಲೆಲ್ಲವ ।
ಸದು ಹೃದಯನು ಪೇಳ್ದನಂದು ಸತ್ಪವಿದೆಂದು ॥ ೭೨ ॥

ಅಂಬುಧಿ ಮಥನದಿ ಶಂಭುವು ।
ಜಂಬೂಫಲ ವರ್ಣವನಾಂತನೆಂಬುದು ಜಗ ನಾ ॥
ನೆಂಬೆನೆ ಎನಲು ಅಂಬಿಕೆ ।
ಗಂಬುಜ ಸಹ ನೇತ್ರ ನುಡಿದ ಶಿವೆ ನೀ ಪಡೆದ ॥ ೭೩ ॥

ವರ ಕುವರ ಕರಿ ಮುಖಾದನು ।
ತರುಣಿಯೆ ನಿನ್ನಂಗ ತಮುದ ಪರಿ ಕರಿದಿರಲು ॥
ಜರಿಯದೆ ಜಗದೊಳಗೆಂದಿದ ।
ಮರೆಸಲು ವಿಷಮಹಿಮೆಯಾಂತೆ ಗಳದೊಳು ಕಾಂತೆ ॥ ೭೪ ॥

ಈಶನಸುತ ಇಂತಿರುತಿರೆ ।
ಲೇಸನು ಲೋಕದರಿಗಿಂತು ಸೂಸುವೆನೆಂದೆ ॥
ದೂಷಿಸದಿರುವರೆ ಸಕಲರು ।
ಆಶೆಲಿ ಶ್ರೀವರ್ಣವಾಂತನೆಂಬರು ಕಾಂತ ॥ ೭೫ ॥

ಅಹುದಹುದು ಆಶೆ ಹೆಣ್ಣಿನ ।
ಮಹಿಮೆಯೆ ಮದಮುಖದಿ ನಿಂತು ತೋರುವ ಭ್ರಾಂತು ॥
ಸಹಜ ಸರ್ವಜ್ಞನೊಳಗಿದು ।
ಇಹುದೆಂಬುದೆ ನಿನ್ನ ಮೋಸ ಕಡೆಗಾಭಾಸ ॥ ೭೬ ॥

ಆಸೆ ಮೋಸೇನು ಇರದಿರೆ ।
ದೋಷದ ಮಾನಿನಿಯ ಧರ್ಮಸತಿಯಳ ವಂಚಿಸಿ ॥
ನೀ ಶಿರದೊಳಿಡಲು ನಿಜಕಿದು ।
ಲೇಸೆಂಬರೆ ಲಲನೆ ಗಂಗೆ ಬಿಟ್ಟಯೊ ಹ್ಯಾಂಗೆ ॥ ೭೭ ॥

ಬಿಡಲಹುದೆ ಮಡದಿ ಜಾಹ್ನವಿ ।
ಒಡೆಯನ ವಾಮಾಂಗ ವಿಡಿದು ತಡೆಯದೆ ಫಲಪದವ ॥
ಕೊಡುತಿರುವಳೆಂದು ಪೊಡವಿಲಿ ।
ನುಡಿಯಲು ಬಡಿವಾರವಿನಿತೆ ಪಿತಗತಿ ಮರೆತೆ ॥ ೭೮ ॥

ಗತಿಯೇನು ಗುರುವರಲ್ಲವೆ ।
ಕೃತಹದಿ ಕಬ್ಬಿಗರ ಕುಲದಾಸತಿ ನಿನುಗಹುದೆ ॥

ಮತಿಹೀನರಾವು ಮನಸಿಲಿ ।
ಖತಿಗೊಳದೆ ಕರುಣಿಸೀಗ ನಿಜದನುರಾಗ ॥ ೭೯ ॥

ನಿಜವೆನಲುಗಜರಲೊಲ್ಲೆವು ।
ಭಜನೆಯ ಬಹುಬಳಗನನುಗೆ ಭಕ್ತಿಯೆಸಲುಗೆ ॥
ಅಜನೇನು ಕುಜನರೇಸಿದು ।
ತ್ರಿಜಗವ ರಕ್ಷಿಪುದೇ ಧರ್ಮ ತಿಳಿಯಿದುಮರ್ಮ ॥ ೮೦ ॥

ವಾದಿಸುತ ಹೊಲಬು ತಪ್ಪುವ ।
ಭೇದದ ಭಯಕೇಕೆ ನನಗೆ ನೀ ದಯಾನಿಧಿಸಂ ॥
ವಾದವ ಬಿಸುಟಿನು ವರ್ಣದ ।
ಆದಿಯನು ಕೇಳುವೆನು ದೇವ ತಿಳಿಸಿರಿ ಭಾವ ॥ ೮೧ ॥

ಕೇಳು ಏನವನು ಕಾವಿನಿ ।
ಪೇಳುವೆ ತಳುವದಲ್ಲಿ ಅದರ ಮೂಲವನೆಲ್ಲವ ॥
ಪೇಳಿಯಾಕಿನ್ನ ವಂದಕ ।
ರೋಲೈಸಲು ಒಪಗುತಿಹರು ಪ್ರಮುಖಾಗ್ರಜರು ॥ ೮೨ ॥

ವರದೀಪ್ಯವಾನವಾಂತಿದು ।
ಕರಿದಾಗಲ್ ಕಾರಣವೇಂ ಎನೆ ಪೇಳ್ದ ಭವ ॥
ಕರಕಷ್ಟದಂಷ್ಟ್ರವದನದಿ ।
ಸುರಿಯಲ್ಕಿಂತಾಯ್ತು ತರಳೆ ಸರಿಸವೆ ಹೆರಳೆ ॥ ೮೩ ॥

ಮರಿಯಂತೆಹಾರಿ ಮತ್ತರ ।
ನಂಕುನಾಡಿಸಿ ನಮ್ಮಕೊರಳ ಕರಿಯೆಂತಾಯಿತು ॥
ಪರಮಾರ್ಥ ಸಿದ್ಧಿ ತಾಳಿದ ।
ಪರಿಯಿದು ಬಸವಪ್ರಸಾದ ತಿಳಿಯಲು ಭೇದ ॥ ೮೪ ॥

ಇರವಿಲ್ಲಿ ಇರ್ದುದಾದೊಡೆ ।
ಉರಗನ ವಿಷಸೋಂಕಿನಂತೆ ಉರುಳುವರೆಂದೆ ॥
ಅರಿವಿನ್ನ ಆತ್ಮದಲ್ಲಿಯೆ ।
ಪರಿಕಿಪಟಗೆ ಬೇರೆ ಮುಖ್ಯಕರದಾಧಿಕ್ಯ ॥ ೮೫ ॥

ನೀಲಕಂಠನಿತ್ತು ಪೇಳಲು ।
ತಿಲಿಸಿ ಅಧಿಕೋತ್ಸವದೊಳು ಅನಿಮಿಷರಾಗ ॥

ಮೂಲಬಸವಾಕ್ಷರೆಂತೆನೆ ।
ಭಾಳಾಕ್ಷನುಸುರ್ದಭಜಿಸಿ ಬಲು ಸುಖವೆನಿಸಿ ॥ ೮೬ ॥

ಏನೆಂಬೆನಿದರ ಎಳೆಯ ।
ನಾನುಸುರಲಳವೆ ನಿತ್ಯ ಅದ್ವೈತಸ್ವರೂಪವ ॥
ಮೌನಿಗಳ ಮಾನಸಾಗ್ರದಿ ।
ಭಾನುವಿನೋಳ್ಬೆಳಗುತಿಹುದ ಬಣ್ಣಿಸಲರಿದಾ ॥ ೮೭ ॥

ತಾನಧಿಕನಹುದು ತನಗೆಯು ।
ಮಾನಸಮಾರ್ತಾಂಡನಂತೆ ತಾನೆ ನಿಂತೆ ॥
ನ್ಯೂನೇನಿಲ್ಲದ ನಿಜವಿದು ।
ಆನನದಂತಿಹುದು ಕಳೆಗೆ ಕಾಂತಿಯ ಬೆಳಗೆ ॥ ೮೮ ॥

"ಬ" ಎನೆ ಸತ್ವದ ಬತ್ತಿಯು ।
"ಸ" ಎನೆ ತೈಲಿದುವೆ ಚಿತ್ತಸಹಿತಾರ್ಥದೊಳು ॥
"ವ" ಎನೆ ಹೊಳೆವ ಜ್ಯೋತಿಯಿದ ।
ರಾಯತದೊಳು ರವಿಸೆ ಮುಕ್ತಿಪಣತೆಯೆ ಭಕ್ತಿ ॥ ೮೯ ॥

ಬಲುಕಂಟಕಗಳಿವು ಭಾಗ್ಯದ ।
ಫಲವಾಂತಿದು ಭಕ್ತಿಯಿಂದ ಒಲಿಸಿದರಾಪೊಡೆ ॥
ಪೊಳಲೊಳಗೆ ಪೂಜ್ಯರಹರು ।
ಗೆಲುವರು ಭವಬಾಧೆಯಿಂದ ಗೆದ್ದರೆ ಚಂದ ॥ ೯೦ ॥

ಇದು ಮೂಲ ಪ್ರಣವದೊಂದಿಲಿ ।
ಉದಿಸಿತು ಉಳುವಾಕ್ಷರೊಂದೆ ಅಧಿಕವ ತಾಳೆ ॥
ಅದು ತನ್ನ ಸ್ವಸ್ವರೂಪವ ।
ಬೆದಕಲ್ತಿದು ಭಸಿತಮಯದಿ ಬಸವಾಯತದಿ ॥ ೯೧ ॥

ಉದಯಿಸಿತು ಊರ್ಧ್ವರೇತ ।
ಸ್ಪಿದು ಕಪ್ಪಾಂತಿರುವುದಿದರ ಪದುಳದ ನಾವಾ ॥
ಭ್ಯುದಯದಿ ಪರಿಸಲದೆಂತೆನೆ ।
ಸದರವೆ ಸದೆಬಡಿಕರಿಂಗೆ ಸಹಜವೊ ಹ್ಯಾಗೆ ॥ ೯೨ ॥

ಅರಿದಹುದು ಅಮಮ ಅದೊಡೆ ।
ಒರೆವೆನು ನಾನಲ್ಲದಿದನು ಅರಿವಿನ ಮರೆಯ ॥
ಸುರರರಿಯದಿರ್ದ ಸುಂದರ ।
ಕರಿಬಸವ ಎನಲು ಜೋಫೆ ದುರಿತಕೆ ವೇಫೆ ॥ ೯೩ ॥

ಸುರರಾಗ ಹರುಷದಾಳುತ ।
ಕರಿಬಸವನ ನುತಿಸಲೊಡನೆ ಪರಿಹರವಾದುದು ॥
ಕರ್ಕಷ್ಟಕರ್ಮದಾದಿ, ದಿವಿ ।
ಜರುಗಿಸೆ ಜಲಜಾಪ್ತನಂತೆ ಶುಭಕರವಾಂತೆ ॥ ೯೪ ॥

ಜಯ ಜಯತು ಎನುತೆಲ್ಲರು ।
ಭಯಪೂರಿತ ಭಕ್ತಿಯಿಂದ ಭಜಿಸುತ್ತಿರಲಾ ॥
ದಯಭರಿತನಾಗಿ ಶಂಕರ ।
ಸ್ವಯಕೈಲಾಸಕೆಂದು ತೆರಳಿದನಂದು ॥ ೯೫ ॥

ಭಜಿಸುವರ ಭಕ್ತಿಭಾವದ ।
ಗಜಬಿಜಿ ಗೌಸಣಿಗೆ ಹರಿಯಲ್ ತ್ರಿಜಗಜೈನವು ॥
ನಿಜರೂಪವ ತಾಳಿ ಬಂದಿರೆ ।
ಮರುಭಾಪೆನೆ ಮಲ್ಲಪುರಂದಿ ಪೊಗಳಿದ ಮುದದಿ ॥ ೯೬ ॥

ಮೊದಲಾದನು ಮರುಳಾರ್ಯರ ।
ಸದನದಿ ಸಪ್ತಿಂಡವೆಂದು ತದನಂತರದೊಳು ॥
ಅದನುಳಿದು ಅಧಿಕವೆನ್ನುತ ।
ಇದು ತಾಳಿದ ಲೀಲೆ ಚಂದ ಯತಿ ಮೊದಲಿಂದ ॥ ೯೭ ॥

ಇವನನುಗ್ರಹವು ಇರುತಿರೆ !
ತವ ಧನ್ಯನೆ ತಪ್ಪದೆನುತ ತವಕದಿ ಸತತ ॥
ಭುವನದಿ ಬಲುಮೆಯನಾಂತರು ।
ಶಿವನೆಂಬಿಪುದೆ ಶಿಷ್ಟವೆಂದು ಗುರುದಯವಿಂದು ॥ ೯೮ ॥

ಎನಗಾಗಲೆಲ್ಲ ಕಾಲದಿ ।
ಮನದೊಳ್ ಭಜಿಸುತಲಿ ಮುರಳೀನೊರೆಯುದೆ ನಿತ್ಯ ॥

ಘನಗುರುವೆ ಸತ್ಯವೆನ್ನುತ ।
ತನುಮನಧನ ಕರ್ತೃವೆಂದೆ ನಂಬುಗೆಯೊಂದೆ ॥ ೯೯ ॥

ಜನರಿಷ್ಟ ಧರ್ಮನಿಷ್ಠೆಯು ।
ಸನುಮತಿ ಸಹಜಾತ್ಮ ಸತ್ಯಾಭ್ಯುದಯಾಂ ॥
ತನಿತು ಗುಣವುಳ್ಳ ವಂಶದು ।
ಅನುಪಮಾರಾಧ್ಯಗೋತ್ರ ಪೊದಲೆ ಪವಿತ್ರ ॥ ೧೦೦ ॥

ಗುಣವೇನು ಕುಲವದೇನಿದು ।
ಅಣುವಿನ ಸಮವರಿಯಬೇಕು ಎಣಿಸದೆ ತಾನೆ ॥
ಗಣಿಸಲು ತಾ ತಕ್ಕುದು ಎನೆ ।
ಮಣಿದುಸುರುವೆ ಮಾನ್ಯರಿಂಗೆ ಅಣುಗನ ಹಾಂಗೆ ॥ ೧೦೧ ॥

ಜನನಿ ಜನಕಾತ್ಮಜಂಗೆಯು ।
ಘನಗುರುಪಹುದೆನುತ ಶಾಸ್ತ್ರಸನುಮತಿಯಿರಲಾ ॥
ಅನುವಿನಲಿ ಅವರ ಏಳ್ಗೆಯ ।
ಮನದೊರಿದನೆಲ್ಲ ಮನ್ನಿಸಿರೆಲ್ಲ ॥ ೧೦೨ ॥

ಇಳೆಯೊಳು ಹೇಳಲ್ ಕೇಳಲ್ ।
ತಿಳಿಯಲ್ ಪಠಿಸಲ್ ಮೇಣರ್ಥವನುರೆ ಅರಿಯಲ್ ॥
ಸುಲಭದಿ ಶುಭವೆಂಬೆಲ್ಲವು ।
ತಳುವದೆ ತಾ ಬಹುದು ಸಿದ್ಧ ಕುಹಕಿಗಬದ್ಧ ॥ ೧೦೩ ॥

ಇದು ಭಕ್ತಿಭಾವದವರಿಗೆ ।
ಇದು ತತ್ವದವರಿಗೆ ಮುಖ್ಯಸದನೊಪ್ಪುದು ॥
ಇದುವೆ ಜಗದಾದಿ ಬೀಜವು ।
ಇದನರಿಯಲ್ಕುವನೆ ಧನ್ಯ ಭಜಿಸಲು ಪುಣ್ಯ ॥ ೧೦೪ ॥

ಬರುತಿಹುದು ಭಂಗವಿಲ್ಲವು ।
ಹರಕರುಣವು ಅಧಿಕವಹುದು ಮರೆದಾದರುತಾ ॥
ಕರಿಬಸವನ ನೆನೆಯಲು ಕಷ್ಟವು ।
ಪರಿದೋಹುದು ಪರಿಕಿಸಿಂತು ಗುರುಬಲವಾಂತು ॥ ೧೦೫ ॥

ಭಾವಃ— ಈ ವಚನದಲ್ಲಿ ವಚನಕಾರನು ದಾಸೋಹದ ಮಹತ್ವವನ್ನು ವಿವರಿಸಿರುವನು. ದಾಸೋಹಿಯೇ ಶ್ರೇಷ್ಠನು, ಅತನೇ ವಿದ್ವಾಂಸನು ಅತನೇ ಜ್ಞಾನಿಯು, ಅತನೇ ಷಟ್‌ಸ್ಥಲ ಜ್ಞಾನಿಯು ಎಂದು ಅವನನ್ನು ಹೊಗಳಿರುವನು. ದಾಸೋಹ ಮಾಡಲರಿಯದವನು ಅಹಂಕಾರಿಯು, ಅಜ್ಞಾನಿಯು. ಅವನು ಯಾವ ಕೆಲಸಕ್ಕೂ ಬಾರದವನು ಎಂದು ವಚನಕಾರನು ಅವನನ್ನು ಹಳಿದಿದ್ದಾನೆ.

ಪ್ರಸಾದ.

ವಿವರಣೆ:— ಮುಂದಿನ ವಚನಗಳಲ್ಲಿ ವಚನಕಾರನು ಪ್ರಸಾದದ ಸ್ವರೂಪವನ್ನು ಹೇಳುತ್ತಿದ್ದಾನೆ. ಪ್ರಸಾದವೆಂದರೆ ಭೋಗ್ಯವಸ್ತುಗಳನ್ನು ಪರಮಾತ್ಮನಿಗೆ ಅರ್ಪಿಸಿ ಅವುಗಳನ್ನು ಸೇವಿಸುವದೇ ಇರುತ್ತದೆ. ಈ ಬಗೆಯಾಗಿ ಆಚರಿಸುವದೇ ವೀರಶೈವನ ಧರ್ಮವಾಗಿದೆ. ಆದರೆ ಅವನ ಅರ್ಪಣದ ರೀತಿಯು ಮಾತ್ರ ವಿಶಿಷ್ಟತೆರನಾಗಿರುವದು. ಅವನು ಲಿಂಗ ಧಾರಿಯಾದ್ದರಿಂದ ಅವನು ಮಂತ್ರಮಯನಾಗಿರುತ್ತಾನೆ. ಈ ಮಂತ್ರ ಶಕ್ತಿಯು ಅವನ ಶರೀರವನ್ನೆಲ್ಲ ಆವರಿಸಿಕೊಂಡಿರುತ್ತದೆ. ಈ ಶಕ್ತಿಯು ಅವನ ಆಯಾ ಚಕ್ರಗಳಿರುವ ಸ್ಥಾನಗಳಲ್ಲಿ ಲಿಂಗರೂಪಾಗಿ ಅವನಲ್ಲಿ ಸ್ಥಾಪ್ಯಗೊಂಡಿರುತ್ತದೆ. ಮನುಷ್ಯನು ತಾನು ಅನುಭವಿಸುವ ವಸ್ತುಗಳನ್ನು ಈ ಲಿಂಗಗಳಿಗೆ ಅರ್ಪಿಸಿ ಭೋಗಿಸಬೇಕು. ಹೀಗೆ ಅರ್ಪಿಸಲ್ಪಟ್ಟದ್ದು ಪವಿತ್ರವಾಗಿರುತ್ತದೆ. ಇಲ್ಲದಿದ್ದರೆ ಅದು ಕಿಲ್ಬಿಷವು. ಷಟ್‌ಸ್ಥಲ ಜ್ಞಾನಿಯು ಈ ಹದವನ್ನು ಅರಿತು ವರ್ತಿಸಬೇಕು. ಆದರೆ ಇದು ಅವನ ಶಿವಾನುಭವಕ್ಕೆ ಮಾತ್ರ ಗೋಚರಿಸತಕ್ಕ ವಿಷಯವಾಗಿರುತ್ತದೆ.

ವಚನ:— ೧೦೦. ಲಿಂಗವಂತಂಗೆ ಲಿಂಗವು ಮಾಡಿದ ಪದವಿಯನು ಲಿಂಗವಂತರೇ ಬಲ್ಲರು. ಕೇವಲ ಸಾಕ್ಷಾತ್ ಪರವಸ್ತುವನು ಕರಸ್ಥಲಕ್ಕೆ ಬಿಜಯಂಗೈಸಿಕೊಟ್ಟನಾಗಿ ಸಾಲೋಕ್ಯಪದ. ಅಂಗದ ಮೇಲೆ ನಿರಂತರ ಪೂಜೆಗೊಳ್ಳುತ್ತಿಹನಾಗಿ ಸಾಮೀಪ್ಯಪದ. ಸದ್ಭಕ್ತಿರೂಪನ ಮಾಡಿದನಾಗಿ ಸಾರೂಪ್ಯಪದ. ಪ್ರಾಣಲಿಂಗವ ಮಾಡಿ ಅವಿನಾಭಾವವ ಮಾಡಿದನಾಗಿ ಸಾಯುಜ್ಯಪದ. ಲಿಂಗಮಧ್ಯೇ ಶರಣ, ಶರಣಮಧ್ಯೇ ಲಿಂಗವೆಂದುದಾಗಿ ಸರ್ವ ಭೋಗಂಗಳು ಸಹವಾಗಿ ಭೋಗಿಸಿ ಪ್ರಸಾದವನಿಕ್ಕಿ ಸಲಹಿದನು. ಸದ್ಯಸ್ಮುಕ್ತನಾದೆನು. ಸರ್ವಾಂಗವು ಲಿಂಗ. ಈ ತಾತ್ಪರ್ಯದ ಮರ್ಮವ ಲೋಕದ ಜೀವರೆತ್ತ ಬಲ್ಲರು? ಬಲ್ಲಡೆ ಲಿಂಗಾನುಭಾವಿಗಳು ಬಲ್ಲರಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ವಚನಕಾರನು ಈ ವಚನದಲ್ಲಿ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದಗಳು ಲಿಂಗವಂತನಿಗೆ ಹ್ಯಾಗೆ ಲಭಿಸುತ್ತವೆಂಬದನ್ನು ಹೇಳಿರುವನು. ಈ ನಾಲ್ಕೂ ಪದಗಳು ಅವನಲ್ಲಿ ನೆಲೆಗೊಂಡಿರ

ವನೆ ಇಷ್ಟಲಿಂಗವನ್ನು ಹಸ್ತದಲ್ಲಿ ಧರಿಸಿ ಆಲೋಕಿಸುವವನಾದ್ದರಿಂದ ಸಾಲೋಕ್ಯಪದವು, ಆ ಲಿಂಗವನ್ನು ಅನೇಕ ಸಾಧನೆಗಳಿಂದ ಪೂಜಿಸುವವನಾದ್ದರಿಂದ ಸಾಮೀಪ್ಯಪದವು, ಹೀಗೆ ಪೂಜಿಸುತ್ತ ತನ್ನ ಭಕ್ತಿಯ ಮೂಲಕ ತನ್ನಲ್ಲಿ ಲಿಂಗವನ್ನು ಹಿಡಿದಿಳಿಯುವವನಾದ್ದರಿಂದ ಸಾರೂಪ್ಯಪದವು, ಕಡೆಗೆ ಆ ಲಿಂಗವನ್ನು ತನ್ನಲ್ಲಿ ಒಕ್ಕಡಿಸಿಕೊಂಡು ಅದರಲ್ಲಿ ಬೆರೆಯುವವನಾದ್ದರಿಂದ ಸಾಯುಜ್ಯಪದವು ಹೀಗೆ ಈ ಎಲ್ಲ ಪದಗಳೂ ಅವನಲ್ಲಿ ಪ್ರಾಪ್ತವಾಗುವವು. ಹೀಗೆ ಲಿಂಗದಲ್ಲಿ ಬೆರೆತುಕೊಂಡವನಾದ್ದರಿಂದ ಲಿಂಗದಲ್ಲಿ ಶರಣ, ಶರಣನಲ್ಲಿ ಲಿಂಗ ಎನ್ನುವ ಬಗೆಯು ಪ್ರಾಪ್ತವಾಗುವದು. ಈ ಸ್ಥಿತಿಯಲ್ಲಿ ಶರಣನ ಭೋಗಗಳು ಲಿಂಗಕ್ಕೆ ಸಲ್ಲುವವು. ಮತ್ತು ಲಿಂಗದ ಭೋಗವು ಶರಣನಿಗೆ ಸಲ್ಲುವದು. ಇದೇ ಪ್ರಸಾದವೆನಿಸಿಕೊಳ್ಳುವದು. ಈ ಪ್ರಸಾದದ ಮರ್ಮವನ್ನು ಲೋಕದ ಜಡಜೀವಿಗಳು ತಿಳಿಯಲಾರರು.

ವಚನ:— ೧೦೧. ಬ್ರಹ್ಮಸೃಷ್ಟಿ ಪಂಚಭೂತ ಸಮ್ಮಿಶ್ರದಿಂದಾದ ಕಾಯವು ಭೂತಕಾಯವು. ವಾಯು ಪ್ರಾಣ, ಉತ್ಪತ್ತಿ ಸ್ಥಿತಿಲಯ ಕಾರಣ ಕಾಯವು. ಈ ಪರಿಯ ಉತ್ಪತ್ತಿಯು ದೇವದಾನವಮಾನವರಿಗೆಯೂ ಒಂದೇ ಪರಿ ಶ್ರೀಗುರುವಿನ ಸೃಷ್ಟಿಯಿಂದಲೂ ಮಹಾ ಪ್ರಸಾದದಿಂದಲೂ ಮಹಾಮಂತ್ರ ಸಮ್ಮಿಶ್ರದಿಂದಾದ ಕಾಯವು ಪ್ರಸಾದ ಕಾಯವು, ಮಹಾಮಂತ್ರ ಪಿಂಡವು, ಭಕ್ತಿಕಾಯವು. ಲಿಂಗಪ್ರಾಣಿಗೆ ಉತ್ಪತ್ತಿಸ್ಥಿತಿಲಯವಿಲ್ಲ, ಸತ್ಯನು ಸದ್ಯೋನ್ಮುಕ್ತನು. ಈ ಪರಿಯು ಶ್ರೀಗುರುಕಾರುಣ್ಯವ ಪಡೆದ ಮಹಾತ್ಮರಿಗೆ ಒಂದೇ ಪರಿ. ಶ್ರೀಗುರುವಿನ ಕಾರುಣ್ಯವ ಪರಿ, ಶಿವಭಕ್ತನ ಇರವಿನ ಪರಿ. ಇಂತುಟಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ. ನಿಮ್ಮ ಶರಣರಿಗೆ ಲೋಕದ ಮಾನವರು ಸರಿ ಎಂದರೆ ನಾಯಕ ನರಕ ತಪ್ಪದು.

ಭಾವ:— ಈ ವಚನದಲ್ಲಿ ವಚನಕಾರನು ಪಂಚಭೂತದಿಂದಾದ ಕಾಯ ಮತ್ತು ಮಂತ್ರಮಯ ಕಾಯ ಇವುಗಳಲ್ಲಿಯ ಭೇದವನ್ನು ವಿವರಿಸಿ ನುಡಿದಿರುವನು. ಪಂಚಭೂತದಿಂದಾದ ಕಾಯವು ಬ್ರಹ್ಮಸೃಷ್ಟಿ ಎಂದೆನಿಸಿಕೊಳ್ಳುತ್ತದೆ. ಇದು ದೇವದಾನವ ಮಾನವರಲ್ಲಿ ಉಂಟು. ಆದರೆ ಶ್ರೀಗುರುವಿನ ಮಂತ್ರಶಕ್ತಿಯಿಂದಾದ ಕಾಯವು ಪ್ರಸಾದ ಕಾಯವೆನಿಸಿಕೊಳ್ಳುತ್ತದೆ. ಇದು ಮಂತ್ರಪಿಂಡವು. ಭಕ್ತಿಕಾಯವು ಇದಕ್ಕೆ ಉತ್ಪತ್ತಿ, ಸ್ಥಿತಿ, ಲಯಗಳೆಂಬುವು ಇಲ್ಲ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಃ— ೧೦೨. ಆದಿಲಿಂಗ ಅನಾದಿಶರಣನೆಂಬುದು ತನ್ನಿಂದ ತಾನಾಯಿತ್ತು ಕೇಳಿರಣ್ಣಾ. ಆದಿಕಾಯ ಅನಾದಿಪ್ರಾಣ ಈ ಉಭಯದ ಭೇದವ ತಿಳಿದು ವಿಚಾರಿಸಿ ನೋಡಿರಣ್ಣಾ. ಅಂತು ಅನಾದಿಯ ಪ್ರಸಾದ ಆದಿಗೆ ಸಲುವುದು. ಅಪೆಂತೆಂದರೆ ಅನಾದಿ ಜಂಗಮಪ್ಪೆವ । ಆದಿಲಿಂಗಸ್ಥ ಲಂಭವೇತ್ । ಅನಾದಿಶ್ಚ ವಿರೋಧೇನ । ಉಚ್ಛಿಷ್ಟಂತು ಕಿಲ್ಬಿಷಂ । ಇಂತೆಂದುದಾಗಿ ಪ್ರಾಣಪ್ರಸಾದ ವಿರೋಧವಾಗಿ ಪಿಂಡಪ್ರಸಾದವ ಕೊಂಡಡೆ ಕೊಂಡುದು ಕಿಲ್ಬಿಷ ಕೂಡಲಸಂಗಮದೇವಾ.

ಭಾವಃ— ಇದರಲ್ಲಿ ವಚನಕಾರನು ಲಿಂಗ ಮತ್ತು ಶರಣ, ಕಾರ್ಯ ಮತ್ತು ಜೀವ ಇವುಗಳಲ್ಲಿಯ ತಾರತಮ್ಯವನ್ನು ಬೇರೊಂದು ರೀತಿಯಿಂದ ಹೇಳಿದ್ದಾನೆ. ಲಿಂಗವೆಂಬುದು ಗುರುವಿನಿಂದಾದದ್ದು. ಆದ್ದರಿಂದ ಅದಕ್ಕೆ ಆದಿ ಇದೆ. ಆದರೆ ಶರಣನು ಲಿಂಗಮಯನಾದ್ದರಿಂದ ಅವನು ಅನಾದಿ ಎಂದೆನಿಸಿಕೊಳ್ಳುತ್ತಾನೆ. ಕಾಯಕ್ಕೆ ಮೂಲವಿರುವ ಕಾರಣ ಅದು ಆದಿಯು. ಆದರೆ ಅವನ ಪ್ರಾಣವು ಎಂದಿನಿಂದಲೂ ಇರುವದರಿಂದ ಅದು ಅನಾದಿಯು. ಕಾರಣ ಆದಿಯು ಇದ್ದದ್ದಕ್ಕೆ ಅನಾದಿಯ ಪ್ರಸಾದವು ಸಲ್ಲುವದು. ಆದರೆ ಆದಿಯ ಪ್ರಸಾದವು ಅನಾದಿಗೆ ಸಲ್ಲದು. ಆದಿಯು ಇದ್ದದ್ದೇ ಪಿಂಡ ಪ್ರಸಾದವು, ಅನಾದಿಯಾಗಿರುವದೇ ಪ್ರಾಣ ಪ್ರಸಾದವು. ಇವುಗಳಲ್ಲಿ ಪ್ರಾಣ ಪ್ರಸಾದವೇ ಶ್ರೇಷ್ಠತರವಾದದ್ದು. ಈ ಪ್ರಸಾದವನ್ನು ಪಡೆದು ಅದರ ಅನುಭವದಲ್ಲಿಯೇ ಶರಣನು ಸುಖಿಯಾಗಿ ಮೋಕ್ಷವನ್ನು ಹೊಂದತಕ್ಕದ್ದು.

ವಚನಃ— ೧೦೩. ಎನ್ನ ಕರಸ್ಥಲದ ಲಿಂಗಕ್ಕೆ ಬಂದ ಪದಾರ್ಥಂಗಳನರ್ಪಿಸುವೆನೆ? ಅರ್ಪಿಸಲಮ್ಮಿ. ಆದೇನು ಕಾರಣವೆಂದರೆ, ಎನ್ನ ಕಂಗಳು ಕಂಡವಾಗಿ, ಎನ್ನಶ್ರೋತ್ರಗಳು ಕೇಳಿದವಾಗಿ, ಎನ್ನ ಕೈಗಳು ಮುಟ್ಟಿದವಾಗಿ, ಎನ್ನ ನಾಸಿಕ ವಾಸಿಸಿತ್ತಾಗಿ, ಎನ್ನ ಜಿಹ್ವೆ ರುಚಿಸಿತ್ತಾಗಿ, ಇಂತಪ್ಪ ಎನ್ನ ಅಂಜಿಕೆಯ ನಿಮ್ಮ ಶರಣರು ಬಿಡಿಸಿದರಾಗಿ, ಅದೆಂತೆಂದರೆ, ಎನ್ನ ಶ್ರೋತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ನೇತ್ರದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ತ್ವಕ್ಕಿನಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ಜಿಹ್ವೆಯಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಎನ್ನ ನಾಸಿಕದಲ್ಲಿ ನಿಮ್ಮ ಸಾಹಿತ್ಯವ ಮಾಡಿದರಾಗಿ, ಅಲ್ಲಲ್ಲಿ ಅರ್ಪಿತಂಗಳಾಗುತ್ತಿರ್ದವಾಗಿ, ಇನ್ನಂಜೆನಂಜೆನುರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಈ ವರೆಗೆ ಹೇಳಿದಂತೆ ಲಿಂಗಕ್ಕೆ ಅರ್ಪಣಮಾಡುವದು ಅಶಕ್ಯವೆಂದು ಅನೇಕರು ಭಾವಿಸುವದುಂಟು. ಯಾಕಂದರೆ ಭೋಗವಸ್ತುಗಳು ಮನುಷ್ಯನ ಇಂದ್ರಿಯಗಳನ್ನು ಮೊದಲು ಮುಟ್ಟುತ್ತಿರುವದರಿಂದ ಅವುಗಳನ್ನು ಅತ್ಯಂತ ಪವಿತ್ರವಾದ ಪರಮಾತ್ಮನಿಗೆ ಕೊಡುವದು ಹೇಗೆ? ಕೊಟ್ಟುವ್ದಾದರೆ, ಅಯೋಗ್ಯ ವಸ್ತುವನ್ನು ಕೊಟ್ಟಂತಾಗುವದೆಂದು ಅನ್ನುವದುಂಟು. ಆದರೆ ವಂತ್ರನುಯನಾದ ಲಿಂಗವಂತನಿಗೆ ಇದು ಅನ್ವಯಿಸುವದಿಲ್ಲ. ಯಾಕಂದರೆ ಅವನ ಇಂದ್ರಿಯಗಳಲ್ಲೆಲ್ಲ ಪರಮಾತ್ಮನ ಕಳೆಯಾದ ಲಿಂಗ ಶಕ್ತಿಯು ವಿಹರಿಸುವದರಿಂದ ಅವನಲ್ಲಿ ಇಂಥ ಅಪವಿತ್ರತೆಯು ಇರಲಾರದೆಂದು ವಚನಕಾರನ ಮತವು.

ವಚನಃ—೧೦೪. ಸತ್ಕ್ರಿಯಿಂದ ಸಕಲ ಪದಾರ್ಥಂಗಳು ಭಾಜನ ತೀವಿ ತನ್ನ ಲಿಂಗಕ್ಕೆ ಕೊಟ್ಟಲ್ಲದೆ ಕೊಳ್ಳೆನೆಂಬ ಅಚ್ಚಪ್ರಸಾದಿಗಳಿಗೆ ಹುಸಿ ಹೊದ್ದಿತಲ್ಲಾ. ಪೃಥ್ವಿಯಪ್ಪು, ತೇಜ, ವಾಯು, ಆಕಾಶ, ಕತ್ತಲೆ, ಬಿಸಿಲು, ಬೆಳದಿಂಗಳು ಮುಂತಾದ ಪದಾರ್ಥಂಗಳು ತನ್ನಂಗವ ಸೋಂಕಿ ಅಲ್ಲಿ ಅರ್ಪಿತವೆಂದು ಕೊಳ್ಳಬಾರದು. ಅನರ್ಪಿತವೆಂದು ಕಳೆಯಬಾರದು. ಇದು ಕಾರಣವದಂತಿರಲಿ. ಆವ ವೇಳೆಯಲ್ಲಿ ಆವ ಠಾವಿನಲ್ಲಿ ತನಗೆ ಬೇಕಾದ ಪದಾರ್ಥಂಗಳನು ತನ್ನ ಪ್ರಾಣಲಿಂಗ ವಿರಹಿತನಾಗಿ ಉಂಡೊಡೆ ಭವದುಃಖವನುಂಬುದು ತಪ್ಪದಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಅರ್ಪಣದ ರೀತಿಯನ್ನು ವಚನಕಾರನು ಇಲ್ಲಿ ಹೇಳುತ್ತಾನೆ. ಅದರಲ್ಲಿ ಅರ್ಪಿತ ಅನರ್ಪಿತವೆಂಬುವಿಲ್ಲ. ಈ ಬಗೆಯ ರೀತಿಯು ಹೊಳಿದ ಸಂಗಡಲೇ ಅಲ್ಲಿ ಪ್ರಸಾದವು ಒದಗಲಾರದು. ಪ್ರಾಣದಲ್ಲಿ ಲಿಂಗವಿರುವದರಿಂದ ಅವುಗಳ ವ್ಯಾಪಾರಗಳು ಸಮರಸವಾಗಿ ನಡೆಯುವದರಿಂದ ಪ್ರಸಾದವು ಹುಸಿಯಾಗಲಾರದೆಂದು ವಚನಕಾರನ ಮುಖ್ಯ ಅಭಿಪ್ರಾಯವಿದೆ.

ವಚನಃ— ೧೦೫. ಧರ್ಮದೊಳಗೆ ಶಿವಧರ್ಮವೇ ಧರ್ಮವೆಂದರಿದೆನಾಗಿ, ಧರ್ಮಸಾಧ್ಯವಾಯಿತ್ತಿನಗೆ. ಗುರುಲಿಂಗಜಂಗಮವ ಪಡೆದೆನಾಗಿ, ಅರ್ಥಸಾಧ್ಯವಾಯಿತ್ತಿನಗೆ. ಶರಣಸತಿ ಲಿಂಗಪತಿ ಎಂದರಿದೆನಾಗಿ, ಕಾಮ ಸಾಧ್ಯವಾಯಿತ್ತಿನಗೆ. ಮಹಾಪ್ರಸಾದವ ನಂಬುಗೊಂಡು ಧರಿಸಿದೆನಾಗಿ, ಮೋಕ್ಷಸಾಧ್ಯವಾಯಿತ್ತಿನಗೆ. ಇಂತೀ ಧರ್ಮಾರ್ಥಕಾಮಮೋಕ್ಷಂಗಳೆಂಬ ಚತುರ್ವಿಧಫಲವೆನಗಾಯಿತ್ತು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಯಾವನು ಪ್ರಸಾದಗ್ರಾಹಿಯಾಗಿ ವರ್ತಿಸುತ್ತಾನೋ ಅವನು ಧರ್ಮಾರ್ಥ ಕಾಮಮೋಕ್ಷಗಳ ಶ್ರೇಷ್ಠ ಪರಿಣಾಮಗಳ ಅನುಭವವನ್ನು ಪಡೆದು ಸುಖಿಸುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ. ಲಿಂಗಿಯಾದವನು ಶಿವಧರ್ಮವೇ ನಿಜವಾದ ಧರ್ಮವೆಂಬ ವಿಶ್ವಾಸಭಾವವನ್ನು ತಾಳಿರುತ್ತಾನೆ. ಗುರುಲಿಂಗಜಂಗಮವನ್ನು ತನ್ನ ತನು, ಮನ, ಧನಗಳಲ್ಲಿ ಸಮರ್ಪಿಸಿಕೊಂಡು ವ್ಯವಹರಿಸುತ್ತಾನೆ. ಶರಣಸತಿ ಲಿಂಗಪತಿ ಎಂಬ ಭಾವವನ್ನು ಹೊಂದಿರುತ್ತಾನೆ. ಮತ್ತು ಲಿಂಗದೊಳಗೆ ಬೆರೆದು ಲಿಂಗದ ಸುಖದಲ್ಲಿ ಓಲಾಡುತ್ತಾನೆ. ಹೀಗೆ ಈ ನಾಲ್ಕೂ ಕ್ರಿಯೆಗಳಲ್ಲಿ ದೃಢಭಾವವುಳ್ಳವನಾದ್ದರಿಂದ ಧರ್ಮಾರ್ಥ ಕಾಮಮೋಕ್ಷಗಳೆಂಬ ಚತುರ್ವಿಧ ಫಲಗಳನ್ನು ಪಡೆದು ತನ್ನ ಜೀವಿತದ ಸಾರ್ಥಕತೆಯನ್ನುಂಟುಮಾಡಿಕೊಳ್ಳುತ್ತಾನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ಗುರುಲಿಂಗ ಜಂಗಮ.

ವಿವರಣೆಃ— ಅರ್ಪಣವನ್ನು ಮಾಡಿ ಪ್ರಸಾದವನ್ನು ಭೋಗಿಸುವದನ್ನು ಗುರುಲಿಂಗ ಜಂಗಮದ ಮುಖಾಂತರವಾಗಿ ಜರಗಿಸಬೇಕೆಂದು ಷಟ್‌ಸ್ಥಲ ಶಾಸ್ತ್ರವು ಹೇಳುತ್ತಿದೆ. ಈ ರೀತಿಯನ್ನು ವಚನಕಾರನು ಮುಂದಿನ ವಚನಗಳಲ್ಲಿ ಹೇಳಿದ್ದಾನೆ. ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳೆಂಬವಿದ್ದು ಅವುಗಳಲ್ಲಿ ಅನುಕ್ರಮವಾಗಿ ಗುರುಲಿಂಗ ಜಂಗಮಗಳು ಸ್ಥಾಪ್ಯವಾಗಿರುತ್ತವೆ. ಇವುಗಳಿಗೆ ಭಕ್ತನು ತನ್ನ ಉಪಭೋಗ್ಯವಸ್ತುಗಳನ್ನು ಅರ್ಪಣಮಾಡತಕ್ಕದ್ದು. ಈ ವಸ್ತುಗಳೆಂದರೆ ತನು, ಮನ, ಧನಗಳೇ ಇವೆ. ಇವಗಳನ್ನು ಭಕ್ತನು ಗುರುಲಿಂಗ ಜಂಗಮಕ್ಕೆ ನಿವೇದಿಸಿ ಪ್ರಸಾದ ರೂಪವಾಗಿ ಅವುಗಳನ್ನು ಗ್ರಹಿಸತಕ್ಕದ್ದು. ಇದರಿಂದ ಮನುಷ್ಯನ ಇಂದ್ರಿಯಗಳೆಲ್ಲ ಶುದ್ಧವಾಗುವವು. ಇದರಿಂದ ಭಕ್ತನ ಪ್ರಗತಿಯು ಉಂಟಾಗುವದೆಂಬ ಭಾವವು ಮುಂದಿನ ವಚನಗಳಲ್ಲಿ ನಿವೇದಿಸಲ್ಪಟ್ಟಿದೆ.

ವಚನಃ— ೧೦೬. ಅರ್ಪಿತದನುವನು, ಪ್ರಸಾದದ ಮುಹಿಮೆಯನು, ಅರಿಗೆಯೂ ಅರಿಯಬಾರದು ನೋಡಾ. ಬ್ರಹ್ಮ ವಿಷ್ಣು ದೇವಾದಿದೇವತೆಗಳಿಗೆಯೂ ಅರಿಯಬಾರದು ನೋಡಾ. ಋಷಿ ಜನಂಗಳಿಗೆಯೂ ಅರಿಯಬಾರದು, ದೇವದಾನವ ಮಾನವರಿಗೆಯೂ ಅರಿಯಬಾರದು, ಕಿಂಚಿತ್ತರಿದಡೆಯೂ ಅರ್ಪಿಸಬಾರದು ಕಿಂಚಿತ್ತರ್ಪಿಸಿದಡೆಯೂ ಪ್ರಸಾದವ ಪಡೆಯಬಾರದು ಕಿಂಚಿತ್‌ಪ್ರಸಾದ ಪಡದಡೆಯೂ ಆ ಪ್ರಸಾದವ ಭೋಗಿಸಿ ಮುಕ್ತರಾಗಬಾರದು. ಅದೆಂತೆಂದರೆ ತನುವ ಗುರುವಿಂಗರ್ಪಿಸಿ ಗುರುಪ್ರಸಾದವ ಪಡೆಯಲರಿಯರು ನೋಡಾ. ಮನವ ಲಿಂಗಕ್ಕರ್ಪಿಸಿ ಲಿಂಗಪ್ರಸಾದವ ಪಡೆಯಲರಿಯರು ನೋಡಾ. ಧನವ ಜಂಗಮಕ್ಕರ್ಪಿಸಿ ಜಂಗಮ ಪ್ರಸಾದವ ಪಡೆಯಲರಿಯರು ನೋಡಾ. ತನುಮನಧನವನು ಗುರುಲಿಂಗ ಜಂಗಮಕ್ಕೆ ಕೊಟ್ಟು, ಆ ತ್ರಿವಿಧಲಿಂಗವ ಏಕೀಕರಿಸಿ ಭಾವಸ್ಥಾನದಲ್ಲಿ ಧರಿಸಿ ಪರಿಣಾಮ ಪದಾರ್ಥವ – ನರ್ಪಿಸಿ ಭಾವಲಿಂಗ ಪ್ರಸಾದವ ಪಡೆಯಲರಿಯರು ನೋಡಾ. ಆ ಮಹಾಭಾವಲಿಂಗಮಂ ಮನೋಮಧ್ಯದಲ್ಲಿರಿಸಿ ಸಕಲ ನಿಷ್ಕಲ ದ್ರವ್ಯಂಗಳನರ್ಪಿಸಿ ಮನೋಮಯ ಲಿಂಗ ಪ್ರಸಾದಮಂ ಪಡೆಯಲರಿಯರು ನೋಡಾ. ಮನೋಮಯ

ಲಿಂಗಮೂರ್ತಿಯ ತಂದು ಶ್ರೋತ್ರದ ಬಾಗಿಲಲ್ಲಿ ಕುಳ್ಳಿರಿಸಿ ಘಂಟಾದಿ ನಾದಂಗಳಂ ಸವಿರ್ಪಿಸಿ ಶಬ್ದಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿಲಿಂಗಮಂ ತಂದು ತ್ವಕ್ಕಿನ ಬಾಗಿಲಲ್ಲಿ ಕುಳ್ಳಿರಿಸಿ ಕಠಿಣಾದಿ ಸ್ಪರ್ಶನಂಗಳಂ ಸವಿರ್ಪಿಸಿ ಸ್ಪರ್ಶನ ಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿಲಿಂಗಮಂ ತಂದು ನೇತ್ರದ ಬಾಗಿಲಲ್ಲಿ ಕುಳ್ಳಿರಿಸಿ ಶ್ವೇತಾದಿವರ್ಣಂಗಳಂ ಅರ್ಪಿಸಿ ವರ್ಣ ಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿ ಲಿಂಗಮಂ ಜಿಹ್ವೆಯ ಬಾಗಿಲಲ್ಲಿ ಕುಳ್ಳಿರಿಸಿ ಮಧುರಾದಿ ರಸಂಗಳನರ್ಪಿಸಿ, ರಸಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿ ಲಿಂಗಮಂ ಘ್ರಾಣದ ಬಾಗಿಲಲ್ಲಿ ಕುಳ್ಳಿರಿಸಿ ಗಂಧಾದಿ ಪರಿಮಳಂಗಳನರ್ಪಿಸಿ ಗಂಧಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯಮೂರ್ತಿಲಿಂಗಮಂ ತಂದು ವಾಙ್ಮೂರ್ತಿಯಂ ಮಾಡಿ ಸತ್ಯಸುಭಾಷೆಗಳನರ್ಪಿಸಿ ವಚನ ಪ್ರಸಾದಮಂ ಪಡೆಯಲರಿಯರು ನೋಡಾ. ಇಂತಿಪ್ಪ ಏಕಾದಶಸ್ಥಾನದಲ್ಲಿ ಏಕಾದಶಾರ್ಪಣವಂ ಮಾಡಿ ಪ್ರಸಾದಮಂ ಪಡೆಯಲರಿಯದ ಕಾರಣ ಪ್ರಸಾದ ಭೋಗದಿಂದಪ್ಪ ಕೇವಲ ಮುಕ್ತಿ ಯಾರಿಗೆಯೂ ಸಂಭವಿಸದು. ಇದು ಕಾರಣ ಇಂತಪ್ಪ ಮಹಾ ಪ್ರಸಾದಸ್ಥಳಕುಳವನು ನಿಮ್ಮ ಪ್ರಸಾದಿ ಚನ್ನಬಸವಣ್ಣಂಗೊಬ್ಬಂಗಲ್ಲದೆ ಮತ್ತಾರಿಗೆಯೂ ಅರಿಯಬಾರದಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ಮನುಷ್ಯನಿಗೆ ಸ್ಥೂಲ ಸೂಕ್ಷ್ಮ, ಶರೀರಗಳೂ ಪಂಚೇಂದ್ರಿಯಗಳೂ, ತನು, ಮನ, ಧನಗಳೂ ಇದ್ದು ಇವುಗಳನ್ನು ಲಿಂಗಕ್ಕೆ ಅರ್ಪಿಸಿ, ಪರಿಶುದ್ಧನಾಗಿ ವರ್ತಿಸುವ ರೀತಿಯನ್ನು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಃ— ೧೦೬. ಗುರುಸ್ವರೂಪನಾಗಿ ಮಹಾಸ್ಥಾನದಲ್ಲಿರುತಿರ್ದೆ, ಲಿಂಗಸ್ವರೂಪನಾಗಿ ಭ್ರೂಮಧ್ಯದಲ್ಲಿರುತಿರ್ದೆ, ಜಂಗಮಸ್ವರೂಪನಾಗಿ ಹೃದಯಕಮಲಮಧ್ಯದಲ್ಲಿರುತಿರ್ದೆ, ಈ ಪರಿಯಲ್ಲಿ ಅಂತರಂಗದಲ್ಲಿ ಭರಿತನಾಗಿರ್ದೆಯಯ್ಯ! ಬಹಿರಂಗದಲ್ಲಿ ಶ್ರೀಗುರುಲಿಂಗವಾಗಿ ದೀಕ್ಷಿಸಿ ರಕ್ಷಿಸಿದೆ. ಶಿವಲಿಂಗವಾಗಿ ಕರಸ್ಥಲದಲ್ಲಿ ಪೂಜೆಗೊಂಡು ರಕ್ಷಿಸಿದೆ. ಜಂಗಮಲಿಂಗವಾಗಿ ಉಭಯಗುಣಂಗಳೆಲ್ಲವ ಕಳೆದು ಶೀಕ್ಷಿಸಿ ರಕ್ಷಿಸಿದೆ. ಈ ತ್ರಿವಿಧವು ಒಂದೇ ಸ್ವರೂಪವಾಗಿ ಎನ್ನಂತರಂಗ ಬಹಿರಂಗಭರಿತನಾಗಿ ಪ್ರಸಾದವ ಕರುಣಿಸಿ ಮುಕ್ತನ ಮಾಡಿದಿರಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ಲಿಂಗವು ಗುರುಲಿಂಗ ಜಂಗಮರೂಪಾಗಿ ಮನುಷ್ಯನಲ್ಲಿ ವಾಸಿಸುತ್ತದೆ. ದೀಕ್ಷಾ ಕಾಲದಲ್ಲಿ ಗುರುವು ಹಸ್ತ ಮಸ್ತಕ ಸಂಯೋಗವನ್ನು ಮಾಡಿ ಬ್ರಹ್ಮರಂಧ್ರದಲ್ಲಿ ಮೊದಲು ಅದನ್ನು ಸ್ಥಾಪಿಸುತ್ತಾನೆ. ಮುಂದೆ ಅಂಗರೂಪಾಗಿ ಭ್ರೂಮಧ್ಯದಲ್ಲಿ ವಾಸಿಸುತ್ತಾನೆ. ಅಲ್ಲಿಯ ಲಿಂಗಧ್ಯಾನದ ಮೂಲಕ ಮಹಾಲಿಂಗವು ಚೈತನ್ಯಗೊಳ್ಳುತ್ತದೆ. ಮುಂದೆ ಜಂಗಮ ರೂಪಾಗಿ ಅದು ಹೃದಯ ಸ್ಥಾನದಲ್ಲಿ ವಾಸಿಸುತ್ತದೆ. ಹೀಗೆ ಸ್ಥಾಪ್ಯವಾದ ಕೂಡಲೆ ಲಿಂಗವು ಇಂದ್ರಿಯಂಗಳಲ್ಲೆಲ್ಲ ಚರಿಸಿ ಅಂತರಂಗ ಬಹಿರಂಗ ಭರಿತವಾಗುತ್ತದೆ. ಇದರಿಂದ ಅವಗುಣಂಗಳೆಲ್ಲ ಕೆಟ್ಟು ಹೋಗುವವು. ಮತ್ತು ಭಕ್ತನು ಪ್ರಸಾದ ಶರೀರಿಯಾಗಿ ಮೋಕ್ಷವನ್ನು ಹೊಂದುವನೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

ವಚನಃ— ೧೦೭. ಪ್ರಕೃತಿವಿಡಿದಿಹುದು ಪ್ರಾಣ, ಪ್ರಾಣವಿಡಿದಿಹುದು ಮಜ್ಞಾನ, ಜ್ಞಾನವಿಡಿದಿಹುದು ಗುರುಲಿಂಗಜಂಗಮ. ಇಂತೀ ಪ್ರಸಾದ ಸಗುಣವೆಂದು ಹಿಡಿದು, ನಿರ್ಗುಣವೆಂದು ಬಿಡುವ ವ್ರತಗೇಡಿಗಳ ತೋರದಿರು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಷಟ್ಸ್ಥಲ ಶಾಸ್ತ್ರದ ಪ್ರಕಾರ ಲಿಂಗಿಯಲ್ಲಿ ಸಮರಸಾಚಾರವೇ ವಿಹಿತವಾಗಿರುತ್ತದೆ. ಅವನಲ್ಲಿ ಭಿನ್ನಾಚಾರವಿಲ್ಲ. ಸಗುಣ ನಿರ್ಗುಣವೆಂಬ ಭೇದಭಾವವಿಲ್ಲ. ಒಂದನ್ನು ಹಿಡಿದು ಮತ್ತೊಂದನ್ನು ಬಿಡುವುದೆಂಬುದಿಲ್ಲ. ಅವೆರಡೂ ಒಂದನ್ನೊಂದು ಬಿಟ್ಟು ವ್ಯವಹರಿಸಲಾರವು. ಆದ್ದರಿಂದ ಸಗುಣವನ್ನು ನಿರ್ಗುಣಕ್ಕೆ ಅರ್ಪಿಸಿ ಪ್ರಸಾದವನ್ನು ಪಡೆಯಬೇಕೆಂಬ ಭಾವವು ಇದರಲ್ಲಿ ಗರ್ಭಿತವಾಗಿದೆ.

ವಚನಃ— ೧೦೯. ಅಗ್ನಿ ಮುಟ್ಟಲು ತೃಣವು ಅಗ್ನಿಯಪ್ಪುದು ತಪ್ಪದಯ್ಯ. ಶ್ರೀಗುರು ಪ್ರಸಾದವಂಗವ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪದು ತಪ್ಪದಯ್ಯಾ. ಲಿಂಗಪ್ರಸಾದ ಮನ ಸೋಂಕಿದಲ್ಲಿ ಮನ ಲಿಂಗವಪ್ಪದು ತಪ್ಪದಯ್ಯಾ. ಜಂಗಮ ಪ್ರಸಾದ ಅರಿವ ಸೋಂಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದವಪ್ಪದು ತಪ್ಪದಯ್ಯಾ. ಶಿವ ಶಿವಾ ಮಹಾಪ್ರಸಾದದ ಮಹಿಮೆಯ ನೇನೆಂದುಪಮಿಸಬಹುದಯ್ಯಾ? ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ, ಪ್ರಸಾದವೇ ಪರಾತ್ಪರ, ಪ್ರಸಾದವೇ ಪರಮಾನಂದ, ಪ್ರಸಾದವೇ ಪರಮಾಮೃತ, ಪ್ರಸಾದವೇ ಪರಮಜ್ಞಾನ, ಪ್ರಸಾದವೇ

ಜ್ಞಾನಾತೀತ, ಪ್ರಸಾದವೇ ನಿತ್ಯ ಪರಿಪೂರ್ಣ, ಇಂತಪ್ಪ ಪ್ರಸಾದವ ಕೊಂಡು ನಾನು ಬದುಕಿದೆನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪ್ರಸಾದವನ್ನು ಹೊಂದಿದ ಕೂಡಲೆ ತೃಣವು ಅಗ್ನಿಯನ್ನು ಮುಟ್ಟಿದ್ದಾನರೆ ಹ್ಯಾಗೆ ಅದು ತನ್ನ ಮೊದಲಿನ ಗುಣವನ್ನು ಬಿಟ್ಟು ಪ್ರಕಾಶವಾನವಾಗುತ್ತದೋ ಹಾಗೆ ಮನುಷ್ಯನು ಪ್ರಕಾಶಮಯನಾಗುವನು, ಅಂದರೆ ಭಕ್ತನು ಪ್ರಸಾದದಿಂದ ಗುರುವಾಗುವನು. ಲಿಂಗವಾಗುವನು, ಜಂಗಮವಾಗುವನು. ತನು ಸೋಂಕಿದ ಕೂಡಲೆ ಅವನು ಗುರುವಾಗುವನು. ಮನ ಸೋಂಕಿದ ಕೂಡಲೆ ಅವನು ಲಿಂಗವಾಗುವನು. ಅರಿವು ಸೋಂಕಿದ ಕೂಡಲೆ ಅವನು ಜಂಗಮವಾಗುವನು. ಹೀಗೆ ಪ್ರಸಾದದ ಮಹಿಮೆ ಇದೆ ಎಂದು ವಚನಕಾರನು ಅದನ್ನು ಇಲ್ಲಿ ಬಣ್ಣಿಸಿರುವನು.

ವಚನಃ— ೧೧೦. ಲಿಂಗವನರಿತು ಲಿಂಗಾರ್ಚನೆಯ ಮಾಡಿ, ಗುರುಲಿಂಗ ಜಂಗಮಕ್ಕೆ ತನುಮನಧನವ ಸವಿಸಿ ಲಿಂಗವಲ್ಲದನ್ಯವನರಿಯದಿರ್ಪ ಮಹಾ ಮಹಿಮನ ನಿಲವು ಸರ್ವಾಂಗ ಲಿಂಗಮೂರ್ತಿ. ಆತನ ನುಡಿಯೇ ವೇದ, ನಡೆಯೇ ಆಗಮ, ಮಾಡಿತ್ತೇ ಶಾಸ್ತ್ರ, ಹೇಳಿತ್ತೇ ಪುರಾಣ, ಆತನಿದ್ದುದೇ ದೇವಲೋಕ, ಆತನ ದರ್ಶನ ಸ್ಪರ್ಶನದಿಂದ ಪಾಪ ಕ್ಷಯ, ಆತನ ಪಾದತೀರ್ಥ ಪ್ರಸಾದದಿಂದ ದೇವದಾನವ ಮಾನವರೆಲ್ಲರೂ ಜೀವನ್ಮುಕ್ತರು. ಆ ಮಹಾ ಮಹಿಮನ ಶ್ರುತ ದೃಷ್ಟಾನುಮಾನದಿಂದ ವಿಚಾರಿಸಿ ನೋಡಿದರೆ ಬಸವರಾಜದೇವರು ಮೊದಲಾದ ಪುರಾತನರ ಚಾರಿತ್ರವು ಹಿಂಗಲ್ಲದೆ, ಲಿಂಗವನರಿಯದೆ, ಲಿಂಗಾರ್ಚನೆಯ ಮಾಡದೆ, ಗುರುಲಿಂಗ ಜಂಗಮಕ್ಕೆ ತನು, ಮನ, ಧನವ ಸವಿಸದೆ ಇನ್ನು ಅವನಾನೊಬ್ಬನು ವೇದಾದಿ ಅಷ್ಟಾದಶ ಪುರಾಣಂಗಳನೋದಿ ಹೇಳಿ ಕೇಳಿದಡೇನೊ, ಗಿಳಿಯೋದಿದಂತೆ? ಸರ್ವಸಂಗ ಪರಿತ್ಯಾಗವ ಮಾಡಿ ಅರಣ್ಯದಲ್ಲಿ ಚರಿಸಿದಡೇನೋ ವನಚರ ವ್ಯಾಧರುಗಳಂತೆ? ಅಶನವ ಬಿಟ್ಟರೇನೋ ಪರಾಕಿಯಂತೆ? ವಿಷಯವ ಬಿಟ್ಟರೇನೊ ಅಶಕ್ತ ನಪುಂಸಕನಂತೆ? ನಿದ್ರೆಯ ಬಿಟ್ಟರೇನೊ ಜಾರಜೋರರಂತೆ? ಸಾಮರ್ಥ್ಯ ಪುರುಷನೆಂದು ಪೇಚರತ್ವದಲ್ಲಿ ಬಂದರೇನೋ ಪಕ್ಷಿಗಳಂತೆ? ಜಲದಲ್ಲಿ ಚರಿಸಿದಡೇನು ಮತ್ಸ್ಯಾದಿಗಳಂತೆ? ಭೂಪ್ರದಕ್ಷಿಣ ಬಂದಡೇನು ಮೃಗಾದಿಗಳಂತೆ? ದಾನಾದಿಗಳ ಕೊಟ್ಟರೇನು ಕ್ಷತ್ರಿಯರಂತೆ? ಅದೆಂತೆಂದಡೆ, ಶಿವನ ವಾಕ್ಯ "ಪಯೋಹಾರೇತು ಮಾರ್ಜಾರಃ ನಗ್ನೋಮುಗ್ಧಃ ಪಿಶಾಚವತ್।

ನಿತ್ಯ ಸ್ನಾನಶ್ಚಕಾಕಶ್ಚವಾಲ್ಮೀಕಿಸರ್ಪ ಜಾತಯಃ॥ ತೃಣಂಭಕ್ಷ್ಯಂತಿ ಪಶವಃ ವನವಾಸೀ ಮೃಗಸ್ತಥಾ। ಯೆನ ಜೈತಾನಿ ಕಾರ್ಯಾಣಿ ನ ಕರೊತಿಹಿಪಾರ್ವತಿ ಎಂದುದಾಗಿ ಅವ ಸಿದ್ಧಿಗಳಿಂದಲೂ ಫಲವಿಲ್ಲ; ಇಂತೀ ಏನನೋದಿ ಏನ ಕೇಳಿ ಏನ ಹೇಳಿಯೂ ಫಲವಿಲ್ಲ. ಇವು ಭಕ್ತಿಯೊಳಗಲ್ಲ. ಮುಕ್ತಿಗೆ ಸಲ್ಲವು. ಇದನರಿದು ಅವನಾನೊಬ್ಬನು ಲಿಂಗವರಿತು ಲಿಂಗಾರ್ಚನೆಯಂ ಮಾಡಿ, ಗುರುಲಿಂಗಜಂಗಮಕ್ಕೆ ತನುಮನಧನವ ಸವಿಸಿದಡೆ ಅದೇ ಚಿಲ್ವ ಭಕ್ತಿ, ಅದೇ ಚೆಲ್ವ ಮುಕ್ತಿ, ಅದೇ ಸರ್ವಸಿದ್ಧಿ, ಅದೇ ಸರ್ವಕಾರಣವಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪ್ರಸಾದದ ಮಹತ್ವವನ್ನು ವಚನಕಾರನು ಹೇಳಿದ್ದಾನೆ. ಅದರ ಮಹತ್ವವು ಬರೇ ಯೋಗಾಭ್ಯಾಸಕ್ಕಿಂತಲೂ ಬಹಳ ಹೆಚ್ಚಿನದು. ಯೋಗಾಭ್ಯಾಸದಿಂದ ಅನೇಕ ಮಹತ್ವಗಳನ್ನು ಮಾಡಬಹುದು. ಅದರೂ ಇಂಥವನಗಿಂತಲೂ ಪ್ರಸಾದಿಯು ಶ್ರೇಷ್ಠನಾಗಿದ್ದಾನೆ. ಯಾಕಂದರೆ ಇವನು ಮೋಕ್ಷಕ್ಕೆ ಸಲ್ಲುತ್ತಾನೆ.

ವಚನಃ— ೧೧೧. ಅಂಗಯ್ಯ ಲಿಂಗಕ್ಕೆ ಹಿಂಗದೆ ಮಜ್ಜನಕ್ಕೆರೆಯಿರೋ. ಅರ್ಪಿತ ಮುಖಂಗಳಲ್ಲಿ ಅರ್ಪಿಸುವಿರಿ. ಅರ್ಪಿತ ಸವಿಯಿತೋ, ಲಿಂಗ ಸವಿಯಿತೋ? ಕರ್ಮಣಾ ಮನಸಾ ವಾ ಗುರೂಣಾಂ ಭಕ್ತವತ್ಸಲ। ಶರೀರಮರ್ಥಪ್ರಾಣಂಚ। ಸದ್ಗುರುಭ್ಯೋ ನಿವೇದಯೇತ್. ತನು ಅರ್ಪಿತ ಗುರುವಿಗೆ ಮನವರ್ಪಿತ ಲಿಂಗಕ್ಕೆ ಧನವರ್ಪಿತ ಜಂಗಮಕ್ಕೆ ಇಂತೀ ತ್ರಿವಿಧವನರ್ಪಿಸಿದ ಅರ್ಪಣೆಯನು ಮರಳಿ ಆಸೆಗೈದನಾದಡೆ ನರಕದಲ್ಲಿಕ್ಕುವ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪ್ರಸಾದವನ್ನು ಅರ್ಪಿಸುವಲ್ಲಿ ಲಿಂಗ ಮತ್ತು ಅರ್ಪಣ ಇವುಗಳಲ್ಲಿ ಸಮರಸಭಾವವಿರುತ್ತದೆ. ಈ ರೀತಿಯಾಗಿ ಗುರುಲಿಂಗ ಜಂಗಮಕ್ಕೆ ತನು ಮನ ಧನಗಳನ್ನು ಅರ್ಪಿಸಬೇಕು. ಅದರೆ ಹೀಗೆ ಅರ್ಪಿಸುವಲ್ಲಿ ಕೆಲವು ರಹಿತನಾಗಿರಬೇಕು.

ವಚನಃ— ೧೧೨. ಲಿಂಗಪ್ರಸಾದದಲ್ಲಿ ಸುಯಿಧಾನಿಯಾಗದವರಲ್ಲಿ ಜಂಗಮವೆಂದು ಪ್ರಸಾದವ ಕೊಳ್ಳಲಾಗದು. ಅದೇನು ಕಾರಣವೆಂದರೆ ತಾನುಂಬುವುದು ಎಂಜಲು. ಪರರಿಗಿಕ್ಕುವದು ಪ್ರಸಾದವೇ? ಬಿಡುಬಿಡು, ಸುಡುಸುಡು. ಈ ಕಷ್ಟದ ನುಡಿಯ ಕೇಳಲಾಗದು. ಪರುಷ ನಿರ್ಮಲವಾ

ವಲ್ಲದೆ, ಅದು ಲೋಹದ ದುರ್ಗುಣವ ಕೆಡಿಸಲರಿಯದು. ಜಂಗಮ ನಾಗಿಯಲ್ಲದೆ ತಾ ಭಕ್ತನಾಗಲರಿಯ. ಮಡಿಯರ್ಧ, ಮೈಲಿಗೆಯರ್ಧ ವಾದರೆ ಕೆಡಹಿ ನಾಯಕ ನರಕದಲ್ಲಿಕ್ಕದೆ ಬಿಡುವನೆ ನಮ್ಮ ಉರಿಲಿಂಗ ಪಿದ್ದಿಪ್ರಿಯವಿಶ್ವೇಶ್ವರಾ?

ಭಾವಃ— ಪ್ರಸಾದದಲ್ಲಿ ಗುರುಪ್ರಸಾದ, ಲಿಂಗಪ್ರಸಾದ, ಜಂಗಮ ಪ್ರಸಾದವೆಂದು ತ್ರಿವಿಧಗಳುಂಟು. ಜಂಗಮವು ಲಿಂಗಪ್ರಸಾದದಲ್ಲಿ ಪರಿಣಾಮಿಯಾಗಬೇಕು. ಅಂದರೆ ಮಾತ್ರ ಜಂಗಮಪ್ರಸಾದವು ಸಲ್ಲುವದು. ಇಲ್ಲದಿದ್ದರೆ ಅದು ಎಂಜಲು ಮಾತ್ರವೇ ಹೊರ್ತು ಪವಿತ್ರವಾದುದಲ್ಲ. ಹೀಗೆ ಪವಿತ್ರವಾದುದನ್ನು ಭಕ್ತನು ಸೇವಿಸಿದ್ದಾದರೆ ಆವನಲ್ಲಿ ಜಂಗಮವು ನೆಲೆಗೊಂಡು ನಿಜಭಕ್ತನೆನಿಸಿಕೊಳ್ಳುವನು.

ವಚನಃ— ೧೧೩. ಲಿಂಗದೊಡನೆ ಸಹಭೋಜನವ ಮಾಡುವ ಸದ್ಭಕ್ತನ ಆಚರಣೆ-ಕ್ರಿಯೆಗಳೆಂತುಟಯ್ಯಾ ಎಂದರೆ ಲಿಂಗಜಂಗಮದ ಕುಂದು ನಿಂದೆಯಂ ಕೇಳಲಾಗದು. ಕೇಳಿದಡೆ ಆ ನಿಂದಕನಂ ಕೊಲುವುದು. ಕೊಲಲಾರದಿರ್ದಡೆ ತನ್ನ ತಾನಿರಿದುಕೊಂಡು ಸಾವುದು. ಸಾಯಲಾರದಿರ್ದೊಡೆ ಅವನ ಬಯ್ವುದು. ತನ್ನ ಅರ್ಥಪ್ರಾಣಾಭಿಮಾನವು ಶಿವಾರ್ಪಣವಾಯಿತ್ತೆಂದು ಮನದಲ್ಲಿ ಸಂತೋಷವ ತಾಳಿದಡೆ ಪ್ರಸಾದವುಂಟು, ಇಂತಲ್ಲದೆ ಮನದಲ್ಲಿ ನೋವ ತಾಳಿದಡೆ ಆಚಾರಭ್ರಷ್ಟನು. ಎನ್ನ ಮನೆ, ಎನ್ನ ಧನ, ಎನ್ನ ಸತಿಯೆಂಬನ್ನಕ್ಕರ ಅವನು ಭವಿಯ ಸಮಾನ. ಭಕ್ತನಲ್ಲ, ಪ್ರಸಾದಿಯಲ್ಲ, ಶೀಲವಂತನಲ್ಲ. ಅವಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪಾದತೀರ್ಥವಿಲ್ಲ, ಪ್ರಸಾದ ಮುನ್ನವೇ ಇಲ್ಲ. ಅವಗೆ ಕುಂಭೀಪಾತಕ ನಾಯಕ ನರಕ ತಪ್ಪದು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪ್ರಸಾದವನ್ನು ಅನುಭವಿಸುವಂಥ ಲಿಂಗಾನುಭಾವಿಯು ಗುರುಲಿಂಗಜಂಗಮದ ನಿಂದೆಯನ್ನು ಕೇಳಲಾಗದು. ಅವನು ಧೈರ್ಯಶಾಲಿಯಾಗಿರತಕ್ಕದ್ದು, ಪ್ರಸಾದನಿಂದಕರನ್ನು ಸಂಹರಿಸಲು ಹಿಂಜರಿಯಕೂಡದು. ಹೀಗೆ ಸಂಹರಿಸಲಾರದಿದ್ದಡೆ, ತನ್ನನ್ನೇ ಇರಿದುಕೊಂಡು ಸಾಯುವುದು. ಇಂಥವರಿಗೆ ಪ್ರಸಾದವಿದೆ. ಇಲ್ಲದಿದ್ದರೆ ಅವರು ಆಚಾರಭ್ರಷ್ಟರು ಎಂದು ಹೇಳಿರುವನು.

ವಚನಃ— ೧೧೪. ವಿಶ್ವಾಸವೇ ಭಕ್ತಿ, ಗುರುಲಿಂಗಜಂಗಮ ಒಂದೆಂದರಿವುದೇ ಜ್ಞಾನ, ತ್ರಿವಿಧದಲ್ಲಿ ನಿರ್ವಂಚನೆಯೇ ವೈರಾಗ್ಯ, ಪ್ರಸಾ

ದವೇ ಮುಕ್ತಿ. ಇದು ಸತ್ಯ ಶಿವ ಬಲ್ಲ ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ವಿಶ್ವಾಸವುಳ್ಳವನಾಗಿರಬೇಕು. ಗುರುಲಿಂಗ ಜಂಗಮಗಳು ಒಂದೇ ಎಂದು ಅರಿಯಬೇಕು. ಅವುಗಳಲ್ಲಿ ನಿರ್ವಂಚಕನಾಗಿ ವ್ಯವಹರಿಸಬೇಕು. ಇದೇ ವೈರಾಗ್ಯವು. ಅವುಗಳ ಪ್ರಸಾದಸೇವನೆಯೇ ಮುಕ್ತಿ. ಇದು ಸತ್ಯವೆಂದು ವಚನಕಾರನು ಇಲ್ಲಿ ಹೇಳುತ್ತಾನೆ.

ಕರಣಾರ್ಪಣ.

ವಿವರಣೆ— ಗುರುಲಿಂಗ ಜಂಗಮದಲ್ಲಿ ಸಮರಸವಾದವನಲ್ಲಿ ಲಿಂಗವು ನೆಲೆಗೊಳ್ಳುವದು. ಈ ಸ್ಥಿತಿಯಲ್ಲಿ ಅವನ ಷಡಿಂದ್ರಿಯ ವಿಷಯಗಳು ಆಯಾ ಇಂದ್ರಿಯಗಳ ಮುಖಾಂತರವಾಗಿ ಆಯಾ ಲಿಂಗಗಳಿಗೆ ಅರ್ಪಿತವಾಗುತ್ತವೆ. ಹೀಗೆ ಅರ್ಪಿತವಾಗಿ ಅನುಭವಿಸಿದ್ದಾದರೆ ಲೌಕಿಕೇ ಚ್ಛೆಗಳು ಉಳಿಯುವು. ಸಹಜಸುಖವೆಂಬುದು ನೆಲೆಗೊಳ್ಳುವದು. ಹಾಗೂ ಷಟ್‌ಸ್ಥಲಗಳು ಅವನಲ್ಲಿ ಪರಿಪೂರ್ಣತೆಯನ್ನು ಹೊಂದುವವು.

ವಚನ— ೧೧೫. ಪೃಥ್ವಿಯಂಗ ಚಿತ್ತ ಹಸ್ತ ನಾಸಿಕ ಮುಖ ಗಂಧ ಪದಾರ್ಥ ಆಚಾರಲಿಂಗಕರ್ಪಿತ, ಭಕ್ತ. ಅಪ್ಪುವಂಗ ಬುದ್ಧಿ ಹಸ್ತ ಜಿಹ್ವೆ ಮುಖ ರುಚಿ ಪದಾರ್ಥ ಗುರುಲಿಂಗಕರ್ಪಿತ, ಮಹೇಶ್ವರ. ಅನಲನಂಗ ನಿರಹಂಕಾರ ಹಸ್ತ ನೇತ್ರ ಮುಖ ರೂಪು ಪದಾರ್ಥ ಶಿವಲಿಂಗ ಕರ್ಪಿತ, ಪ್ರಸಾದಿ. ಪವನನಂಗ, ತ್ವಕ್ಕು ಮುಖ, ಸ್ಪರ್ಶ ಪದಾರ್ಥ ಜಂಗಮಲಿಂಗಕರ್ಪಿತ, ಪ್ರಾಣಲಿಂಗಿ. ವ್ಯೋಮಾಂಗ ಜ್ಞಾನಹಸ್ತ ಶ್ರೋತ್ರ ಮುಖ ಶಬ್ದ ಪದಾರ್ಥ ಪ್ರಸಾದಲಿಂಗಕರ್ಪಿತ, ಶರಣ. ಹೃದಯಾಂಗ ಭಾವ ಹಸ್ತ, ಊರ್ಧ್ವಮುಖ, ಪರಿಣಾಮ ಪದಾರ್ಥ, ಮಹಾಲಿಂಗಕರ್ಪಿತ, ಐಕ್ಯ. ಇಂತೀ ಷಟ್‌ಸ್ಥಲವಳವಟ್ಟಾತನು ಪರಶಕ್ತಿ ಸ್ವರೂಪನು ಆತನು ನಿಜ ಶಿವಯೋಗಸಂಪನ್ನನು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ— ಗಂಧ, ರುಚಿ, ರೂಪು, ಸ್ಪರ್ಶ, ಶಬ್ದ, ಮತ್ತು ಪರಿಣಾಮಗಳು ಮನುಷ್ಯನಿಗೆ ತಟ್ಟುತ್ತವೆ. ಅವು ತಟ್ಟಿದ ಹಾಗೆ ಅವುಗಳಲ್ಲಿ ಲೋಲುಪನಾಗದೆ ಅವುಗಳನ್ನು ಲಿಂಗಗಳಿಗೆ ಅರ್ಪಿಸಿ ಅನುಭವಿಸಬೇಕು. ಈ ಅರ್ಪಣವನ್ನು ನಾಸಿಕಮುಖವಾದ ಆಚಾರಲಿಂಗ, ಜಿಹ್ವಾಮುಖವಾದ ಗುರುಲಿಂಗ, ನೇತ್ರಮುಖವಾದ ಶಿವಲಿಂಗ, ತ್ವಕ್ಕುಮುಖವಾದ ಜಂಗಮಲಿಂಗ, ಶ್ರೋತ್ರಮುಖವಾದ ಪ್ರಸಾದಲಿಂಗ, ಊರ್ಧ್ವಮುಖವಾದ ಮಹಾಲಿಂಗ ಇವುಗಳಿಗೆ ಮಾಡಬೇಕು. ಹೀಗೆ ಅರ್ಪಣ ಮಾಡುವಲ್ಲಿ ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಭಾವ ಇವುಗಳ ಕ್ರಿಯೆಗಳಿಂದಲೇ ಆದು ಆಗಬೇಕು. ಹೀಗೆ ಮಾಡಿದ್ದಾದರೆ ಪಂಚ ಭೂತಗಳಿಂದ ಆದ ಶರೀರವು ನಷ್ಟವಾಗಿ ಷಟ್‌ಸ್ಥಲಗಳು ಅವನಲ್ಲಿ ನೆಲೆಗೊಳ್ಳುತ್ತವೆ. ಹೀಗೆ ಆಚರಿಸುವವನೇ ಶಿವಯೋಗಿಯು ಎಂದು ವಚನಕಾರನು ಹೇಳಿದ್ದಾನೆ.

ವಚನ— ೧೧೬. ನೇತ್ರದಲ್ಲಿ ಷಡುವರ್ಣ ಸಂಬಂಧವಹ ಪವಿತ್ರ ಅಪವಿತ್ರವನರಿದು ಮಹತ್ಪವಿತ್ರವ ಮಾಡಿ ನೇತ್ರದ ಕೈಯ್ಯಲ್ಲಿ ಲಿಂಗನೇತ್ರಕ್ಕೆ ಅರ್ಪಿಸಿ ಸುಳಿವಲ್ಲಿ ನೇತ್ರೋದಕವು. ಶ್ರೋತ್ರದಲ್ಲಿ ಶಬ್ದ ಕುರಬ್ದವ ನರಿದು ಮಹಾಶಬ್ದದಲ್ಲಿ ವರ್ತಿಸಿ ಶ್ರೋತ್ರದ ಕೈಯಲ್ಲಿ ಲಿಂಗಶ್ರೋತ್ರಕ್ಕೆ ಅರ್ಪಿಸುವಲ್ಲಿ ಶ್ರೋತ್ರೋದಕವು. ಘ್ರಾಣದಿಂದ ಸುಗಂಧ ದುರ್ಗಂಧವನರಿದು ಮಹಾಗಂಧವ ಮಾಡಿ ಘ್ರಾಣದ ಕೈಯ್ಯಲ್ಲಿ ಲಿಂಗ ಘ್ರಾಣಕ್ಕರ್ಪಿಸುವಲ್ಲಿ ಘ್ರಾಣೋದಕವು. ಜಿಹ್ವೆಯಿಂದ ಮಧುರ ಅಮ್ಲ ಲವಣ ತಿಕ್ತ ಕಟು ಕಷಾಯವೆಂಬ ಷಡ್ರುಚಿಯನರಿದು ಮಹಾ ರುಚಿಯ ಮಾಡಿ ಜಿಹ್ವೆಯ ಕೈಯ್ಯಲ್ಲಿ ಲಿಂಗ ಜಿಹ್ವೆಗರ್ಪಿಸುವಲ್ಲಿ ಜಿಹ್ವೋದಕವು ಸ್ಪರ್ಶನದಿಂದ ಸುಶೀತೋಷ್ಣವನರಿದು ಇಚ್ಛೆಯ ಕಾಲವನರಿದು ಮಹಾ ಸ್ಪರ್ಶನವ ಮಾಡಿ ಸ್ಪರ್ಶನದ ಕೈಯ್ಯಲ್ಲಿ ಲಿಂಗಸ್ಪರ್ಶನಕ್ಕರ್ಪಿಸುವಲ್ಲಿ ಸ್ಪರ್ಶನೋದಕವು. ಸದ್ಭಕ್ತಿಯಿಂದ ಪಾದಾರ್ಚನೆಯ ಮಾಡುವಲ್ಲಿ ಪಾದೋದಕವು. ಸ್ನೇಹದಿಂದ ಮಜ್ಜನಕ್ಕೆರೆವಲ್ಲಿ ಮಜ್ಜನೋದಕವು. ಆರೋಗಣೆಯಲ್ಲಿ ಅರ್ಪಿಸಿದುದು ಅರ್ಪಿತೋದಕವು. ಆರೋಗಣೆಯ ಮೇಲೆ ಹಸ್ತಕ್ಕೆರೆದುದು ಹಸ್ತೋದಕವು. ಗುರುಲಿಂಗ ಶಿವಲಿಂಗ ಜಂಗಮಲಿಂಗ ಒಂದೇ ಎಂದರಿದು ಸರ್ವಕ್ರಿಯಾ ಕರ್ಮವೆಲ್ಲ ಸಂಬಂಧವ ಮಾಡಿ ಪ್ರಯೋಗಿಸುವುದು ಸತ್ಯೋದಕವು. ಈ ದಶೋದಕದ ಕ್ರಮವರಿದು ವರ್ತಿಸುವುದು ಅಗಮಾಚಾರ, ಕ್ರಿಯಾ ಸಂಪತ್ತು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ— ಈ ವಚನವು ಕ್ರಿಯಾ ವಿಷಯಕವಾಗಿರುವದು. ಅರ್ಪಣವನ್ನು ಪೂಜಾ ಕಾಲದಲ್ಲಿ ಹೇಗೆ ಮಾಡಬೇಕೆಂಬದನ್ನು ಇಲ್ಲಿ ವಚನಕಾರನು ವಿವರಿಸಿದ್ದಾನೆ. ಉದಕದ ಮುಖಾಂತರ ಅರ್ಪಣ ಮಾಡುವ ವಿಧವು ಇದರಲ್ಲಿ ಹೇಳಲ್ಪಟ್ಟಿದೆ. ಈ ಉದಕವು ಪೂಜಾ ಕಾಲದಲ್ಲಿ ಹತ್ತು ವಿಧವಾಗುತ್ತದೆ. ಈ ವಿಧಗಳು ಯಾವವೆಂದರೆ, ನೇತ್ರೋದಕ ಶ್ರೋತ್ರೋದಕ, ಘ್ರಾಣೋದಕ, ಜಿಹ್ವೋದಕ, ಸ್ಪರ್ಶನೋದಕ, ಪಾದೋದಕ, ಮಜ್ಜನೋದಕ, ಅರ್ಪಿತೋದಕ, ಹಸ್ತೋದಕ, ಸತ್ಯೋದಕ ಎಂದು ಇವೆ.

ವಚನ— ೧೧೭. ಸ್ತನಾಮೃತವ ಸೇವಿಸುವ ಶಿಶು ಸಕ್ಕರೆಯ ಸಿಬ್ಬಿಸುವುದೇ? ಪರುಷ ದೊರೆಕೊಂಡ ಪುರುಷನು ಜಲಗರವ ತೊಳೆಯ ಲಿಚ್ಛಿಸುವನೇ? ಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛಿಸುವನೇ? ಇವರು ಮೂವರಿಗನ್ಯಾವುದೂ ಇಚ್ಛೆ ಇಲ್ಲ. ರುಚಿ ಪದಾರ್ಥವಿದ್ದಂತೆ ಇದ್ದ ಪರಿಯು ಸಹಜ ಸುಖವಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಉಚ್ಚ ಧ್ಯೇಯವುಳ್ಳವನು ಕಿರಿದಾದುದನ್ನು ಬಯಸನು. ಕಿರಿದಾದುದನ್ನು ತನ್ನ ಮೇಲ್ಗೆಗಾಗಿ ಉಪಯೋಗಿಸುವನೇ ಹೊರ್ತು ಅದರೊಳಗಿರುವದಿಲ್ಲ. ಇದೇ ಅವನ ಸಹಜ ಸುಖವಾಗಿದೆ.

ವಚನಃ— ೧೧೮. ಅಸುರಿನ ಭಕ್ತಿಯ ಜಡರುಗಳು ಬೇಸತ್ತು ಜಂಗಮಕ್ಕೆರಗಿ ಪಾದಪ್ರಕ್ಷಾಲನವಂ ಮಾಡಿ ಪಾದೋದಕವ ಧರಿಸುತ್ತಿಪ್ಪರು. ಅವುದು ಕ್ರಮವೆಂದರೆಯರು. ಅರಿವರೆ ಪಾದೋದಕ. ಅರಿಯದಿದ್ದರೆ ಜರಿ ನೀರೆಂದರಿಯರು. ಅರಿದರಿದು ಬರುದೊರೆಪೋದರು ಮಾನವರೆಲ್ಲರು. ಅರಿವು ಸಾಮಾನ್ಯವೆ? ಅಂದೆಂತೆಂದರೆ, ಶಿವಾತ್ಮಕ ಪದದ್ವಂದ್ವಂ। ಪ್ರಕ್ಷಾಲನ ಜಲಂ ನರಾಃ। ಏ ಪಿಬಂತಿ ಪುನಸ್ತಸ್ಯ। ನ ಪಿಬಂತಿ ಕದಾಚನ। ಇಂತೆಂದುದಾಗಿ ಇದ ಕೇಳಿ ನಂಬುವುದು. ನಂಬದಿರ್ದಡೆ ಮುಂದೆ ಭವ ಘೋರ ನರಕ ತಪ್ಪದು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಉಚ್ಚ ನೀಚ ಭಾವವು ಮನಸಿದ್ದಂತೆ ಇರುತ್ತದೆ. ಪಾದೋದಕದ ರೀತಿಯು ಹೀಗೆಯೇ ಇದೆ. ನಂಬಿದರೆ ಅದು ಪಾದೋದಕವೆನಿಸಿಕೊಳ್ಳುವದು. ಅದೊಂದು ಶ್ರೇಷ್ಠ ವಸ್ತುವು. ನಂಬದಿದ್ದರೆ ಅದು ಬರೀ ನೀರು. ನಂಬದೆ ಪಾದೋದಕವನ್ನು ಕೊಂಡರೆ ನಾಯಕ ನರಕ ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಃ— ೧೧೯. ಅರಿಷಡ್ವರ್ಗದುರವಣೆಗೊಳಗಾಗನಾಗಿ ಭಕ್ತ ಕಾಯನಾದ. ಪಂಚೇಂದ್ರಿಯಂಗಳ ಬಳಸನಾಗಿ ಗುರು ಭಕ್ತನಾದ. ಸಪ್ತ ಧಾತುವಿನ ಗುಣವಿಡಿಯನಾಗಿ ಸಮಯಾಚಾರಿಯಾದ. ಅಷ್ಟ ಮದಗಜದ ಬಟ್ಟೆಯ ಮೆಟ್ಟನಾಗಿ ಆಚಾರವಂತನಾದ. ಕರ್ಮಕಾಂಡದಲ್ಲಿ ಬಳಿಸಲ್ಲನಾಗಿ ಸತ್ಯ ನಿತ್ಯ ನಿರ್ಮಳನಾದ. ಜ್ಞಾನಕಾಂಡದಲ್ಲಿ ಹೂಣು ಹೊಕ್ಕನಾಗಿ ಭಕ್ತಿಯೆಂಬಚ್ಚಾದ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಯ್ಯನು.

ಭಾವಃ— ಮನುಷ್ಯನನ್ನು ಅರಿಷಡ್ವರ್ಗಗಳು, ಪಂಚೇಂದ್ರಿಯಗಳು, ಅಷ್ಟಮದಗಳು, ನಾನಾ ಬಗೆಯ ಕರ್ಮಗಳು ಸುತ್ತಿ ಬಳಲಿಸುತ್ತವೆ. ಆದರೆ ಶರಣನು ಇವುಗಳ ಹಿಡಿತಕ್ಕೆ ಒಳಗಾಗದೆ, ಜ್ಞಾನದಲ್ಲಿ ಸುಳಿಯುತ್ತಾನೆ. ಮತ್ತು ಭಕ್ತಿಯಲ್ಲಿ ನೆಲೆಯೂರಿರುತ್ತಾನೆಂದು ಇಲ್ಲಿ ವಚನಕಾರನು ಹೇಳಿದ್ದಾನೆ.

ಜಾತಿಭೇದ.

ವಿವರಣೆಃ— ವೀರಶೈವರಲ್ಲಿ ಜಾತಿ ಭೇದವಿಲ್ಲ. ಈ ಅಭಿಪ್ರಾಯವನ್ನು ಎಲ್ಲ ವಚನಕಾರರು ತಮ್ಮ ವಚನಗಳಲ್ಲಿ ಸಮರ್ಥಿಸುವದುಂಟು. ಅವರಲ್ಲಿ ಈ ಬಗ್ಗೆ ಯಾವ ಬಗೆಯ ಮತಭೇದವು ಇರುವದಿಲ್ಲ. ಉರಿಲಿಂಗ ಪೆದ್ದಿಯು ಈ ವಿಷಯದ ಬಗ್ಗೆ ಕೆಳಗಿನ ವಚನಗಳಲ್ಲಿ ಅನೇಕ ಆಧಾರಗಳೊಡನೆ ಹೇಳಿರುವನು.

ವಚನಃ— ೧೨೦. ವಶಿಷ್ಠಗೋತ್ರದಲ್ಲಿ ಹುಟ್ಟಿದವನು ವಶಿಷ್ಠ ಗೋತ್ರನೆಂಬಂತೆ, ಭಾರದ್ವಾಜಗೋತ್ರದಲ್ಲಿ ಹುಟ್ಟಿದವನು ಭಾರದ್ವಾಜ ಗೋತ್ರದವನೆಂಬಂತೆ, ಕಾಶ್ಯಪ ಗೋತ್ರದಲ್ಲಿ ಹುಟ್ಟಿದವನು ಕಾಶ್ಯಪ ಗೋತ್ರದವನೆಂಬಂತೆ, ವಿಶ್ವಾಮಿತ್ರ ಗೋತ್ರದಲ್ಲಿ ಹುಟ್ಟಿದವನು ವಿಶ್ವಾಮಿತ್ರ ಗೋತ್ರದವನೆಂಬಂತೆ, ಆ ಪರಿ ಆವಾವ ಗೋತ್ರದಲ್ಲಿ ಆವಾವ ಋಷಿಗಳ ವಂಶದಲ್ಲಿ ಜನಿಸಿದವರನು ಆ ಗೋತ್ರ, ಆ ಸಂತತಿ, ಆ ಸುತನು ಎಂಬುದು ಉಪಚರ್ಯವೇ? ಅಸತ್ಯವೇ ಹೇಳಿರಣ್ಣಾ? ಅದು ತಾತ್ಪರ್ಯ, ಅದು ಸತ್ಯ. ಆ ಪರಿ ಬ್ರಾಹ್ಮಣನ ಮಗ ಬ್ರಾಹ್ಮಣನು; ಕ್ಷತ್ರಿಯನ ಮಗ ಕ್ಷತ್ರಿಯನು; ವೈಶ್ಯನ ಮಗ ವೈಶ್ಯನು; ಶೂದ್ರನ ಮಗ ಶೂದ್ರನು; ಆ ಪರಿ ತಪ್ಪದು. ದಿಟದಿಟ ವಿಚಾರಿಸಿ ನೋಡಿರೇ. ಅದು ಹೇಗೆಂದರೆ! ಶ್ರುತಿ ॥ಶ್ಲೋ॥ "ಮಹಾ ಬ್ರಾಹ್ಮಣ ವಿಶಾನಂ" ಎಂದುದಾಗಿ ಮತ್ತಂ। "ವಿರೂಪಾಕ್ಷಂ ದ್ವಿಜೋತ್ತಮಂ" ಎಂದುದಾಗಿ ಮಹಾಬ್ರಾಹ್ಮಣನೇ ಮಹಾದೇವನು. ಇದಕ್ಕೆ ಮತ್ತೆ ಶಿವರಹಸ್ಯದಲ್ಲಿ ॥ ಗುರುದೇವೊ ಮಹಾದೇವೋ ಗುರು ದೇವಸ್ಸದಾಶಿವಃ। ಗುರುದೇವಃ ಶಿವಂ ತತ್ವಂ ತಸ್ಮೈ ಶ್ರೀಗುರವೆ ನಮಃ ಎಂದುದಾಗಿ, ಮಹಾದೇವನೇ ಶ್ರೀಗುರು ಕಾಣರಣ್ಣಾ! ಆ ಶ್ರೀಗುರು ಎನ ಕರಕಮಲದಲ್ಲಿ ಉದ್ಭವಿಸಿದ ತಳ್ಳಿಹ್ಯನೇ ಮಹಾ ಬ್ರಾಹ್ಮಣನು ಇಂತೆಂಬುದು ಹುಸಿಯಲ್ಲ. ಜಾತಿ ಅಜಾತಿ ಎಂದು ಅಷ್ಟಾದಶಜಾತಿಯೊಳಗೆ ಇಕ್ಕಲಾಗದು. ಅಷ್ಟಾದಶ ಜಾತಿಯೊಳಗೊಂದೂ ಭಾವಿಸಲಾಗದು. ಆ ಮಹಿಮನೇ ಸತ್ಕುಲಜನು. ಇದಕ್ಕೆ ಮತ್ತಂ "ಬ್ರಹ್ಮಚರತಿ ಬ್ರಾಹ್ಮಣಃ" ಎಂದುದಾಗಿ ಆ ಮಹಾಮಹಿಮನು ಬ್ರಹ್ಮವ ಆಚರಿಸುವ ನಾತ ಬ್ರಾಹ್ಮಣ. ಮತ್ತಂ ಕೂರ್ಮ ಪುರಾಣದಲ್ಲಿ ॥ "ಸ ಏವ ಭಸ್ಮ

ಜ್ಯೋತಿಃ" ಎಂದುದಾಗಿ ವಿಭೂತಿಯ ಧರಿಸಿಪ್ಪವನಾಗಿ ಆ ಮಹಾತ್ಮನೇ ಜ್ಯೋತಿರ್ಲಿಂಗವು. ಮತ್ತಂ ಶಿವಧರ್ಮದಲ್ಲಿ "ರುದ್ರಾಕ್ಷಂ ಧಾರಯನ್ನಿತ್ಯಂ ರುದ್ರಸ್ಸಾಕ್ಷಾದಿವ ಸ್ಮೃತಃ" ಎಂದುದಾಗಿ ರುದ್ರಾಕ್ಷಿಯಂ ಧರಿಸಿಪ್ಪನಾಗಿ ಆ ಮಹಾಮಹಿಮನೇ ರುದ್ರನು. ಮತ್ತಂ ಕಾಳಿಕಾಗಮದಲ್ಲಿ "ತಸ್ಮಾನ್ನೋದಾಪ್ಯ ಶಾಸ್ತ್ರಾಣಿ ಮಂತ್ರ ಪಂಚಾಕ್ಷರೀ ತಥಾ" ಎಂದುದಾಗಿ ಶ್ರೀಪಂಚಾಕ್ಷರಿಯ ಜಪಿಸುವನಾಗಿ ಆ ಮಹಾಮಹಿಮನೇ ವೇದವಿತ್ತು, ಶಾಸ್ತ್ರಜ್ಞನು. ಮತ್ತಂ ಲೈಂಗ್ಯೆ ॥ಶ್ಲೋ॥ ಮೂಢನಾವೂಷ್ಯಯುಕ್ತಾನಾಂ ಪಾಪಿನಾಂ ಚಾಭಿಚಾರಿಣಾಂ ॥ ಯಮಲೋಕೋ ನ ವಿದ್ಯತೆ ಸದಾ ಲೈಂಗ ಧಾರಣಾತ್ ॥ ಎಂದುದಾಗಿ ಲಿಂಗವ ಧರಿಸಿಪ್ಪನಾಗಿ ಆ ಮಹಾಮಹಿಮನೇ ಲಿಂಗದೇಹಿ, ಲಿಂಗಕಾಯನು, ಲಿಂಗಪ್ರಾಣನು. ಶಿವಲಿಂಗಾರ್ಚನೆಯಂ ಮಾಡುವನಾಗಿ ಆ ಮಹಾಮಹಿಮನೇ ಶಿವನು. ಮತ್ತಂ, ಆದಿತ್ಯ ಪುರಾಣೇ "ಅಕೃತ್ವಾ ಪೂಜನಂ ಶಂಭೋಃ ಯೋ ಭುಂಕ್ತೆ ಪಾಪಕೃದ್ದ್ವಿಜಃ। ಕುಣಪಂ ಚ ಮಲಂ ಚೈವ ಸವಶ್ನಾತಿ ದಿನೇ ದಿನೇ" ಎಂದುದಾಗಿ ಶಿವ ಲಿಂಗಕ್ಕೆ ಅರ್ಪಿಸದೆ ಕೊಳ್ಳನಾಗಿ ಆ ಮಹಾ ಮಹಿಮನೇ ರುದ್ರನು. ಮತ್ತಂ ಶಾಂಕರ ಸಂಹಿತೆಯಲ್ಲಿ ॥ಶ್ಲೋ॥ ತಿಲಶೋಡಶಭಾಗಂ ತು ತೃಣಾಗ್ರಾಂಬು ಕಣೋಪಮಂ। ಪಾದೋದಕ ಪ್ರಸಾದಾನಾಂ ಸೇವನಾ ನ್ಮೋಕ್ಷವಾಪ್ನುಯಾತ್ ॥ ಎಂದುದಾಗಿ ಪಾದೋದಕ ಪ್ರಸಾದವಂ ಕೊಂಬನಾಗಿ ಆ ಮಹಾತ್ಮನು ತಾನೇ ಲಿಂಗೈಕ್ಯನು. ಇನ್ನು ನಾನಾ ವೇದ ಶಾಸ್ತ್ರ ಪುರಾಣಾಗಮಂಗಳ ಸಮ್ಮತ ದೃಷ್ಟ ವಾಕ್ಯಂಗಳನು ವಿಚಾರಿಸಿ ನೋಡಿದರೆಯೂ ಶಿವಭಕ್ತನೇ ಕುಲಜನು. ಶಿವಭಕ್ತನೇ ಉತ್ತಮನು. ಇಂಥಾ ಶಿವಭಕ್ತನನು ಜಾತಿ ವಿಜಾತಿ ಎಂದು ಭಾವಿಸಿದರೆ, ಮರ್ತ್ಯ ನೆಂದು ಭಾವಿಸಿದರೆ, ನರಕ ತಪ್ಪದು. ವಶಿಷ್ಠ ಪುರಾಣದಲ್ಲಿ ಕೇಳಿರೇ ॥ಶ್ಲೋ॥ ಮರ್ತ್ಯವನ್ಮನುತೆ ಯಸ್ತು ಶಿವನಿಷ್ಠಂ ದ್ವಿಜಂ ನರಃ। ಕುಂಭೀ ಪಾಕೇಷು ಪತತಿ ನರಕೆ ಕಾಲಮುಕ್ಷಯಂ ॥ ಎಂದುದಾಗಿ ಇದು ಕಾರಣ ಅಷ್ಟಾದಶ ವಿದ್ಯಂಗಳನು ವಿಚಾರಿಸಿ ತಿಳಿದು ನೋಡಿದರೆ ಋಷಿ ಪುತ್ರನ ಋಷಿ ಎಂಬಂತೆ ಶ್ರೀಗುರು ಪುತ್ರನನು ಶ್ರೀಗುರು ಎಂಬುದಯ್ಯಾ. ಆ ಮಹಾಮಹಿಮನ ದರ್ಶನವ ಮಾಡಿ ಪಾದೋದಕ ಪ್ರಸಾದವ ಕೊಂಡು ಮುಕ್ತರಪ್ಪದಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ವಚನಕಾರನು ಯಾರಲ್ಲಿ ಯಾವನು ಹುಟ್ಟಿರುವನೋ ಅವನು ಅವರ ಮಗನೆನ್ನುವದು ಸತ್ಯವು ಎಂದು ಹೇಳಿ, ವೀರಶೈವನು ಗುರುವಿನಲ್ಲಿ ಹುಟ್ಟಿರುವನಾದ್ದರಿಂದ ಅವನು ಗುರುವಿನ ಮಗನಾಗುವನು. ಇಂಥವನನ್ನು ಹದಿನೆಂಟು ಜಾತಿಗಳಲ್ಲಿ ಒಂದು ಜಾತಿಯವನೆಂದು ಭಾವಿಸ ಬಾರದು.. ಅವನು ಶ್ರೇಷ್ಠ ಕುಲದವನು. ಅವನು ಲಿಂಗದೇಹಿಯಾದ್ದರಿಂದ ಅವನು ಮಹಿಮನೆಂದು ತಿಳಿಯಬೇಕು. ಅವನ ಪಾದೋಕವನ್ನು ಸ್ವೀಕ ಸಬೇಕೆಂದು ಇಲ್ಲಿ ಹೇಳಿರುವನು.

ವಚನ:— ೧೩೧. ಶಿವಶಿವಾ ಭಕ್ತಿ ಹೀನನ ಒಟ್ಟೆಯಲ್ಲಿ ಕಂಡು ನೆಟ್ಟನೆ ಶಿವಭಕ್ತ ಜೋಹಾರ ಎಂದಡೆ, ಸುರಾಪಾನದಲ್ಲಿ ಮಜ್ಜನ ಮಾಡಿದಂತಾಯಿತ್ತು ಅವನ ಶಿವಪೂಜೆ. ಕಟ್ಟಿದ ಕರೆಯನೊಡೆದಂತಾಯಿತ್ತವನ ಶಿವಪೂಜೆ. ಅಮೇಧ್ಯವ ಭುಂಜಿಸಿದಂತಾಯಿತ್ತು ಅವನ ಶಿವ ಪೂಜೆ. ಹೇರೊಳಗಣ ಹುಳವ ಕೋಳಿ ಕೆದರಿದಂತಾಯಿತ್ತದವನ ಶಿವ ಪೂಜೆ. ಒಣಗಿದೆಲುವ ಸೊಣಗ ಕಡಿದು ತನ್ನ ರಕ್ತವ ತಾನೇ ಭುಂಜಿಸಿ ದಂತಾಯಿತ್ತವನ ಶಿವಪೂಜೆ. ಅವನ ಸರ್ವಾಂಗವು ಪಾಕುಳಿದ ಕುಳಿಯಂತಾ ಯಿತ್ತು, ಕನ್ನಡಿಯ ಮೇಲೆ ಉದ್ದುರುಳಿದಂತಾಯಿತ್ತವನ ಶಿವಪೂಜೆ. ಆರೆಯ ಮೇಲೆ ಆಡು ಹಿಕ್ಕೆಯನಿಟ್ಟಂತಾಯಿತ್ತು ಅವನ ಶಿವಪೂಜೆ. ಲೋಳಿಸರದ ಮೇಲೆ ಬಂಡಿ ಹರಿದಂತಾಯಿತ್ತವನ ಶಿವಪೂಜೆ. ಅದೆಂತೆಂದಡೆ, ವಿಷ್ಣು ಪುರಾಣೆ ॥ಶ್ಲೋ॥ ಬ್ರಹ್ಮಬೀಜ ತೃಣಂ ನಾಸ್ತಿ ಕೇಶವೋ ಅಧಿದೇವತಾ ಗುರುಭ್ರಷ್ಟಶ್ಚ ಚಾಂಡಾಲೋ ವಿಪ್ರಶ್ಚಾನೋಪಿ ಜಾಯತೆ॥ ಬ್ರಾಹ್ಮಣಂ ದರ್ಶನಂ ಚೈವ ಪಾಪಪಂಜರಮೇವ ಚ। ಬ್ರಾಹ್ಮಣಂ ವಂದನಂ ಚೈವ ಕೋಟಿ ಜನ್ಮಸು ಸೂಕರಃ ॥ ಎಂದುದಾಗಿ ರೇಣುಕಾದೇವಿಯ ಮಗನೇ ಬ್ರಾಹ್ಮಣನು. ಮಾತಂಗಿಯ ಮಗನೇ ಹೊಲೆಯನು. ಇವರಿಬ್ಬರೂ ಜಮದಗ್ನಿಗೆ ಹುಟ್ಟಿದರಾಗಿ. ಇವಕ್ಕೆ ಸಾಕ್ಷಿ, ಭಾರದ್ವಾಜ ವಿಶ್ವಾಮಿತ್ರ ಅಗಸ್ತ್ಯ ನಾರದ ಕೌಂಡಿಲ್ಯ ಈಯೈವರು ಸಾಕ್ಷಿಯುಲ್ಲಿ ನಿಮ್ಮೊಳಗೆ ನೀವು ಸಂವಾದವ ಬೇಡೆಂದು ವಿಭಾಗವಂ ಮಾಡಿಕೊಟ್ಟ ವಿವರಮಂ ಕೇಳಿರಣ್ಣಾ! ಗ್ರಾಮದೊಳಗಣ ಸೀಮೆಯ ಗೃಹವನೇ ಹೊಲೆಯರಿಗೆ ಕೊಟ್ಟರು. ಸತ್ತ ಹಸುವ ನೆಳದುಕೊಂಡು ಹೋಪವಂನೇ ಹೊಲೆಯರ ಮಾಡಿದರು ಜೀವದ ಹಸುವ ಹದಿನೆಂಟು ಜಾತಿಯ ವಂಚದಡಿಯಲ್ಲಿ ನುಸಿದು ಗೋದಾನ ಮುಖದಲ್ಲಿ ಕೊಂಡು ಹೋಹರನೇ ಬ್ರಾಹ್ಮಣರ ಮಾಡಿದರು.

ಇನ್ನು ನಿಮಗೂ ತಮಗೂ ಸೊಮ್ಮು ಸಂಬಂಧವಿಲ್ಲವೆಂದು ಕಂಡಾಗ ತೊಲಗುವಂತೆ ಸಂಭೋಳಿಯೆಂಬ ನಾವಾಂಕಿತವಂ ಕೊಟ್ಟು ತೊಲಿ ಪತ್ರವುಂ ಬರೆದರಾಗಿ. ಇದನರಿಯದಿದ್ದರಿ ಇನ್ನು ಕೇಳಿರಣ್ಣಾ. ನಳ ಚಕ್ರವರ್ತಿರಾಯನು ಪಿಂಡ ಪಿತೃ ಕಾರ್ಯವ ಮಾಡುವಲ್ಲಿ ಹೊನ್ನ ಗೋವಂ ತಂದು ಬಿನ್ನಾಣದಲ್ಲಿ ದಾನವ ಕೊಟ್ಟಲ್ಲಿ ಹೊಲೆಯರು ನಾಡಕೂಟ ವಕೂಡಿ ಆಸ್ಥಲ ತಾರ್ಕಣೆಯಲ್ಲಿ ಪೂರ್ವಸಾಧನ ಸಂಬಂಧದಿಂದ ನ್ಯಾಯವ ನಾಡಿ ಇತ್ತಂಡವ ಹಂಚಿಕೊಂಡ ವಿವರವ ಕೇಳಿರಣ್ಣಾ. ಕೊಂಬು ಕೊಳಗನೇ ತೆಗೆದು ಏಳುನೂರೆಪ್ಪತ್ತು ತೂಕ ಚಿನ್ನವ ಹಂಚಿಕೊಂಡು ಉಳಿದ ಕೊಂಬು ಕೊಳಗವ ವಿಪ್ರರು ಎತ್ತಿಕೊಂಡರಾಗಿ, ಈ ಹೊನ್ನು ಗೋವನಳಿದು ತಿಂಬ ಕುನ್ನಿಗಳ ಕಂಡು ಕೇಳಿಯೂ ಅರಿದು ಮರೆದು ಉತ್ತಮ ಕುಲ ದ್ವಿಜರೆಂದು ಅಲ್ಲಿ ಉಪದೇಶವಂ ಕೊಂಡು ನಮಸ್ಕರಿಸುವ ಅಜ್ಞಾನಿ ಹೊಲೆಯರ ನಾನೇನೆಂಬೆನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಭಾವಃ— ಭಕ್ತಿಯುಳ್ಳವನೇ ಶ್ರೇಷ್ಠನು. ಅವನ ಪೂಜೆಯೇ ನಿಜವಾದ ಪೂಜೆಯು. ಭಕ್ತಿ ಹೀನನ ಪೂಜೆಯು ಯಾತಕ್ಕೂ ಬಾರದೆಂದು ವಚನಕಾರನು ಬಹು ದೃಢವಾಗಿ ಇಲ್ಲಿ ಹೇಳಿರುವನು. ಇಲ್ಲಿ ಬ್ರಾಹ್ಮಣರ ಕರ್ಮಗಳು ಮತ್ತು ನಿಜಭಕ್ತರ ಕರ್ಮಗಳು ಇವುಗಳಲ್ಲಿರುವ ತಾರತಮ್ಯವನ್ನು ಅನೇಕ ಪುರಾಣೋಕ್ತಿಗಳಿಂದ ವಿವರಿಸಿ ಹೇಳಿರುವನು.

ಏಕಭುಕ್ತೋಪವಾಸಾದಿಗಳು.

ವಿವರಣೆಃ— ವೀರಶೈವನಿಗೆ ಒಪ್ಪತ್ತು ಉಣ್ಣುವದು ಉಪವಾಸ ಮಾಡುವದು ಇಂಥ ಕ್ರಿಯೆಗಳು ಸಲ್ಲವು. ಯಾಕಂದರೆ ಅವನ ಕ್ರಿಯಾ ಕರ್ಮಗಳು ಭಿನ್ನಾಚಾರಿಗಳಿಂದ ತೀರ ಬೇರೆ ವಿಧವಾಗಿರುತ್ತವೆ. ಅವನು ಲಿಂಗ ದೇಹಿಯು. ಆದ್ದರಿಂದ ಇಂಥವನ ಕ್ರಿಯೆಗಳಲ್ಲಿ ಲಿಂಗಾಂಗಸಮರಸ ಭಾವವಿರುತ್ತದೆ. ಇವನು ಪ್ರಸಾದವನ್ನು ಸ್ವೀಕರಿಸಿ ಲಿಂಗಭೋಗೋಪ ಭೋಗಿಯಾಗಿರಬೇಕು.

ವಚನಃ— ೧೩೨. ಪ್ರಾಣಲಿಂಗಿ ಸಂಬಂಧಿಯಾದ ಲಿಂಗವಂತನು ಏಕಭುಕ್ತ ಉಪವಾಸಂಗಳನ್ನು ಮಾಡಲಾಗದು. ಅದೇನುಕಾರಣವೆಂದಡೆ, ದೇವರಾರೋಗಣೆ ತಪ್ಪುವದಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳು ತಪ್ಪುವದಾಗಿ, ಆಗಮ ಮಾರ್ಗವು ತಪ್ಪುವದಾಗಿ, ಶ್ರೀಗುರು ವಿನಾಜ್ಞೆಯು ತಪ್ಪುವದಾಗಿ, ತನಗೆ ಮುಂದೆ ಪ್ರಸಾದವಿಲ್ಲವಾಗಿ, ಮುಕ್ತಿ ಇಲ್ಲ, ದೋಷಕಾರಿಯಪ್ಪನು ಕೇಳಿರಣ್ಣಾ. ಅದೆಂತೆಂದಡೆ, ॥ಶ್ಲೋ॥ ಪ್ರಾಣಲಿಂಗ ಸಮಾಯುಕ್ತಸ್ಯೈಕಭುಕ್ತೋಪವಾಸಿನಃ। ಪ್ರಸಾದ ನಿಷ್ಫಲಂ ಜೈವ ರೌರವಂ ನರಕಂ ವ್ರಜೇತ್ ॥ ಎಂದುದಾಗಿ ಇದು ಕಾರಣ ನಿತ್ಯ ನೈಮಿತ್ತಿಕ ಪಂಚಪರ್ವತಿಥಿಗಳಲ್ಲಿ ಅವ ದಿನದಲ್ಲಿಯೂ ಎಂದೆಂದೂ ಅಷ್ಟ ವಿಧಾರ್ಚನೆ ಷೋಡಶೋಪಚಾರವೇ ಕರ್ತವ್ಯ ನೋಡಾ. ದೇವರಾರೋಗಣೆಯಂ ಮಾಡಿಸಿ ಪ್ರಸನ್ನತ್ವವಂ ಪಡೆದು ಪ್ರಸಾದವುಂ ಧರಿಸಿ ಮುಕ್ತರಪ್ಪರಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪ್ರಾಣಲಿಂಗಿಯಾದವನು ಜಪ ಏಕಭುಕ್ತ ಉಪವಾಸಗಳನ್ನು ಮಾಡಕೂಡದು. ಯಾಕಂದರೆ ಇದರಿಂದ ಅವನಿಗೆ ಪ್ರಸಾದವು ತಪ್ಪುವದು. ಪ್ರಸಾದವು ತಪ್ಪಿದಲ್ಲಿ ತನ್ನಲ್ಲಿರುವ ಆಚಾರಲಿಂಗ, ಗುರು ಲಿಂಗ ಮೊದಲಾದ ಲಿಂಗಗಳಲ್ಲಿ ಜಾಗ್ರತಿಯಿಲ್ಲದಂತೆ ಮಾಡುವ ಕಾರ್ಯವೂ ತಪ್ಪುವದು. ಇದು ಆಗಮ ಮಾರ್ಗವಲ್ಲ, ಗುರುವಾಜ್ಞೆಯಲ್ಲ. ಎಂಥ ಪರ್ವತಿಥಿಗಳಲ್ಲಿಯೂ ಕೂಡ ಅಷ್ಟವಿಧಾರ್ಚನೆ ಷೋಡಶೋಪಚಾರಗಳನ್ನು ಮಾಡಬೇಕಾದುದು ಅವಶ್ಯವು. ಅದರೆ ಏಕಭುಕ್ತೋಪವಾಸಾದಿಗಳನ್ನು ಮಾಡಿದ್ದಾದರೆ ಪ್ರಸಾದವು ತಪ್ಪಿ ಹೋಗುವದು. ಆದ್ದರಿಂದ ಈ ಬಗೆಯ ಭಿನ್ನಕ್ರಿಯಾಚರಣೆಯು ವೀರಶೈವರಿಗೆ ಸಲ್ಲದ್ದು ಎಂದು ವಚನಕಾರನ ಮುಖ್ಯ ಅಭಿಪ್ರಾಯವು.

ವಿಭೂತಿಯ ಮಹತ್ವ.

ವಚನಃ— ೧೨೩. ಅನಾದಿ ಶಾಶ್ವತಂ ನಿತ್ಯಂ ಚೈತನ್ಯಂ ಚಿತ್ಸ್ವರೂಪಕಂ। ಚಿದಂಗ ವೃಷಭಾಕಾರಂ ಚಿದ್ಭಸ್ಮ ಲಿಂಗಧಾರಣಂ॥ ಪ್ರಥಮ ಗೂಢಸಿನರ್ವಾಮಂ ದ್ವಿತೀಯಂ ಚಿತ್ಸ್ವರೂಪಕಂ। ತೃತೀಯಂ ಚಿದ್ವಿಲಾಸಂ ಚ ಚತುರ್ಥಂ ಭಸ್ಮಧಾರಣಾತ್ ॥೧॥ ರೋಮ ರೋಮೆ ಭವೇತ್ ಶಿವಂ ಸ್ವಕಾರ್ಯಮುಚ್ಯತೆ ಲಿಂಗಂ ವಿಭೂತಿಧೂಳನಾದ್ಭವೇತ್ ॥೨॥ ಎಂದುದಾಗಿ ಬಸವಾ ಬಸವಾ ಎನುತಿಪ್ಪವರೆಲ್ಲರು ಬಸವನ ಘನವನಾರು ಅರಿಯರಲ್ಲಾ. ಅನಾದಿ ಪರಶಿವನಲ್ಲಿ ಅಂತರ್ಗತವಾಗಿರ್ದ ಮಹಾ ಪ್ರಕಾಶವೇ ಬಹಿಷ್ಕರಿಸಿ ಚಿತ್ತು ಎನಿಸಿತ್ತು. ಆ ಚಿತ್ತು ಚಿದಂಗ ಬಸವ. ಆ ಚಿದಂಗ ಬಸವನಿಂದುದಯಿಸಿದ ಚಿದ್ವಿಭೂತಿಯನೊಲಿದು ಧರಿಸಿದ ಶರಣರೆಲ್ಲರೂ ಜ್ಯೋತಿರ್ಮಯ ಲಿಂಗವಪ್ಪುದು ತಪ್ಪದು ಕಾಣಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಅನಾದಿ ಪರಶಿವನಲ್ಲಿ ಅಂತರ್ಗತವಾದ ಮಹಾ ಪ್ರಕಾಶವೇ ಚಿತ್ ಎನಿಸಿಕೊಂಡಿತ್ತು. ಈ ಚಿತ್ತಿನ ಅಂಗಸ್ವರೂಪವೇ ಚಿದ್ವಿಭೂತಿಯು. ಈ ವಿಭೂತಿಯ ಮೂಲಕವಾಗಿಯೇ ಲಿಂಗ ಪ್ರಕಾಶವು ಭಕ್ತನಲ್ಲಿ ಬೆಳಗುವದು.

ಮಂತ್ರ.

ವಿವರಣೆಃ— ಷಟ್‌ಸ್ಥಲ ಶಾಸ್ತ್ರದಲ್ಲಿ ಪಂಚಾಕ್ಷರಿಯ ಮಹತ್ವವು ವಿಶೇಷವಾಗಿದೆ. ಅದರ ಉಲ್ಲೇಖವು ವಚನ ಗ್ರಂಥಗಳಲ್ಲಿ ಮೇಲಿಂದ ಮೇಲೆ ಬರುತ್ತದೆ. ಆದರೆ ಅದರ ಮರ್ಮವನ್ನು ವಚನಕಾರರು ಬಹಿರಂಗಗೊಳಿಸಲು ಇಷ್ಟ ಪಡುವದಿಲ್ಲ. ಅದನ್ನು ಅವರು ಗೂಢವಾಗಿಟ್ಟುಕೊಂಡಿರುತ್ತಾರೆ. ಗುರುಮುಖದಿಂದಲೇ ಅದನ್ನು ಅರಿಯಬೇಕೆಂದು ಅವರ ಅಭಿಪ್ರಾಯವಿರುತ್ತದೆ. ಆದ್ದರಿಂದ ಪಂಚಾಕ್ಷರಿಯ ವಿವರಣೆ ಮಾಡುವಲ್ಲಿ ವಚನಕಾರರು ಸಾಮಾನ್ಯವಾಗಿ ಅದರ ಮಹತ್ವವನ್ನು ಮಾತ್ರ ವಿವರಿಸುವದುಂಟು. ಅಂತರ್ಗತ ವಿಷಯಗಳನ್ನು ಹೇಳುವದಿಲ್ಲ.

ವಚನಃ— ೧೨೪. ನಿರಾಳದ ಅಷ್ಟದಳಕಮಲದೊಳಗೆ ನಿರಂಜನ ಚೌಕ ಮಧ್ಯನೋಡಾ! ಇದರ ಬೀಜಾಕ್ಷರದ ಭೇದವನರಿಯೆ, ನಿರಂಜನ ಪ್ರಣವ, ಅವಾಚ್ಯ ಪ್ರಣವ, ಕಲಾಪ್ರಣವ, ಆದಿಪ್ರಣವ, ಅನಾದಿ ಪ್ರಣವ, ಅಕಾರಪ್ರಣವ, ಉಕಾರಪ್ರಣವ, ಮಕಾರಪ್ರಣವ, ಜ್ಯೋತಿ ಪ್ರಣವ, ಅಖಂಡಜ್ಯೋತಿಪ್ರಣವ, ಅಖಂಡಮಹಾಜ್ಯೋತಿಪ್ರಣವ, ಗೋಳಾಕಾಕಾರಪ್ರಣವ, ಅಖಂಡಗೋಳಕಾಕಾರಪ್ರಣವ, ಅಖಂಡಮಹಾ ಗೋಳಕಾಕಾರಪ್ರಣವ, ಇಂತೀ ನಿರಾಳದ ಅಷ್ಟದಳ ಕಮಲದೊಳಗೆ ನಿರಂಜನ ಚೌಕಮಧ್ಯ ನೋಡಾ! ಇದರ ಬೀಜಾಕ್ಷರದ ಭೇದವನೆನಗೆ ಕರುಣಿಸಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಇಲ್ಲಿ ವಚನಕಾರರು ಪ್ರಣವಗಳ ಅನೇಕ ವಿಧಗಳನ್ನು ಹೇಳಿರುವನು. ಅವುಗಳ ಸ್ವರೂಪವನ್ನು ಅವನು ತಿಳಿಸದೆ ಗುಪ್ತವಾಗಿಟ್ಟಿರುವನು. ಇಂಥ ವಿಷಯಗಳನ್ನು ಗುರುಮುಖದಿಂದಲೇ ಅರಿಯಬೇಕೆಂದು ಅತನನ್ನು ಬೇಡಿಕೊಳ್ಳುತ್ತಾನೆ.

ವಚನಃ— ೧೨೫. ಶ್ರೀಪಂಚಾಕ್ಷರಿಯೇ ಸರ್ವ ಮಂತ್ರವೆಲ್ಲಕ್ಕೆ ಉತ್ಪತ್ತಿ ಸ್ಥಿತಿಲಯಸ್ಥಾನ, ಸರ್ವ ಕಾರಣಕ್ಕೆ ಮೂಲ. ಅದೆಂತೆಂದಡೆ ಸಪ್ತಕೋಟಿ ಮಹಾ ಮಂತ್ರಂ ಉಪಮಂತ್ರಸ್ಯನೇಕಧಾ। ಪಂಚಾಕ್ಷರೀ ಪ್ರಲೀಯಂತೆ। ಘನಸ್ತತ್ತ್ವೆವ ನಿರ್ಗತಃ। ತಸ್ಮಾತ್ವೇದಾಶ್ಚ ಶಾಸ್ತ್ರಾಣಿ। ಮಂತ್ರೆ ಪಂಚಾಕ್ಷರೀ ಸ್ಥಿತಾ। ಎಂದುದಾಗಿ, ಇದುಕಾರಣ ಶ್ರೀ ಪಂಚಾ

ಕ್ಷರಿಯುಳ್ಳ ಸದ್ಭಕ್ತನೇ ವೇದವಿತ್ತು. ಆ ಸದ್ಭಕ್ತನೇ ಶಾಸ್ತ್ರವಾನ್ ಆ ಮಹಾ ಮಹಿಮನೇ ಪುರಾಣಿಕನು, ಆಗಮಿಕನು, ಆತನೇ ಸರ್ವಜ್ಞನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಮಂತ್ರದ ಅರ್ಥವನ್ನು ತಿಳಿಯಬೇಕು. ಅದನ್ನು ಬರೇ ಜಪಿಸುವದರಿಂದ ಏನೂ ಪರಿಣಾಮವಾಗಲಾರದು. ಆದರೆ ಅರ್ಥವನ್ನು ತಿಳಿದು ಆಚರಿಸಿದ್ದಾದರೆ, ಅವನು ಮಹಿಮನಾಗುವನು. ಮತ್ತು ಎಲ್ಲ ಶಾಸ್ತ್ರಗಳಲ್ಲಿ ಬಲ್ಲಿದನೂ ಆಗುವನು.

ವಚನಃ— ೧೩೬. ಓಂಕಾರವೆಂಬ ವೃಕ್ಷದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಅಥರ್ವಣವೇದಗಳೆಂಬ ನಾಲ್ಕು ಶಾಖೆಗಳು ವೇದಾಂಗಗಳೆಂಬ ಉಪಶಾಖೆಗಳು ಶಾಸ್ತ್ರಂಗಳೆಂಬ ಅಂಕುರಪಲ್ಲವಗಳು ಪುರಾಣಂಗಳೆಂಬ ಪುಷ್ಪಗಳು ಆಗಮುಂಗಳೆಂಬ ಕಾಯಿ ಬಲಿದು ಶ್ರೀ ಪಂಚಾಕ್ಷರಿ ಎಂಬ ಮಧುರಸ ಹೆಣ್ಣುಗಳು. ಆಗಣಿತ ಫಲವನು ಅನಂತಕಾಲ ಭೋಗಿಸಲು ಮತ್ತು ಜಿಹ್ವೆಯೊಳಗೆ ಬಂದಿರಲು ಭೋಗಿಸಿ ಸುಖಿಯಹುದಲ್ಲದೆ ಇತರ ವಿದ್ಯಂಗಳೆಂಬ ಸಸಿಯ ಸಾಕಿ ಸಲಹಲುಂಟೇ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

ಭಾವಃ— ಈ ವಚನದಲ್ಲಿ ಪಂಚಾಕ್ಷರಿಯ ಮಹತ್ವವನ್ನು ಹೇಳುವನು. ಪಂಚಾಕ್ಷರಿಯನ್ನು ತಿಳಿಯುವದೆಂದರೆ ಮಧುರವಾದ ಹಣ್ಣಿನ ರಸವನ್ನು ಆಸ್ವಾದಿಸಿದಂತೆಯೇ ಸರಿ. ಈ ಆಸ್ವಾದನೆಯ ಸುಖವು ಎಂದಿಗೂ ಹೊಗಲಾರದು. ಇದೇ ನಿಜವಾದ ಸುಖವು.

ವಚನಃ— ೧೩೭. ಓಂ ನಮಃ ಶಿವಾಯ ಎಂಬುದೇ ತಂದೆ, ಓಂ ನಮಃ ಶಿವಾಯ ಎಂಬುದೇ ಋಷಿ, ಓಂ ನಮಃ ಶಿವಾಯ ಎಂಬುದೇ ಅಧಿದೇವತೆ. ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎಂದೆನಲು ಸದ್ಯೋಸ್ಮುಕ್ತಿ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಪಂಚಾಕ್ಷರೀ ಮಂತ್ರವೇ ನಿಜವಾದ ದೇವತೆಯು ಅದರಲ್ಲಿ ಎಲ್ಲ ದೇವತೆಗಳು ಅಡಗಿರುವವು. ಅದರ ಮೂಲಕವಾಗಿ ಮುಕ್ತಿಯು ಲಭಿಸುವದು.

ಶಿವಾನುಭವ.

ವರ್ಷ ೧೦] ಫೇಬ್ರುವಾರಿ. ೧೯೩೬ [ಸಂಚಿಕೆ ೫.

ಶೂನ್ಯಸಂಪಾದನೆಯ ರಹಸ್ಯ.

(ಲೇಖಕರು:— ಮಿ॥ ಬ್ಯಾಳಿ ಕಲ್ಯಾಣಪ್ಪನವರು ಬಿ. ಏ.)

ಮೋಳಿಗೆಯ ಮಾರಯ್ಯಗಳ ಸಂಪಾದನೆ.

ಕಂದ. ಹೊನ್ನಿನ ಜಾಳಿಗೆಗಳ ಬಸ
ವಣ್ಣಂ ನಿರ್ಧನಿಕರೆಂದು ಇರಿಸಲ್ಕಾ ಮಾ।
ರಣ್ಣಂ ತಾನದ ಜರೆಯುತೆ
ಚಿನ್ನದ ದಂಡಗಳ ಗಣಕೆಯಿತ್ತುದನುಸುರ್ವೆಂ।

ಮೋಳಿಗೆಯ ಮಾರಯ್ಯನೆಂಬ ಶಿವಶರಣನ ಮನೆಯಲ್ಲಿ ಬಸವಣ್ಣನವರು ಶಿವಾರ್ಚನೆ ಶಿವ ಪ್ರಸಾದಗಳನ್ನು ತೀರಿಸಿ ಆತನ ಮಡದಿಗೆ ಗೊತ್ತಾಗದಂತೆ ಎರಡು ಜಾಳಿಗೆ ಹೊನ್ನನ್ನು ಮುಚ್ಚಿಟ್ಟು ಹೊರಟು ಹೋದರು. ಮಾರಯ್ಯನವರು ಮನೆಗೆ ಬಂದು ಎರಡು ಜಾಳಿಗೆ ಹೊನ್ನನ್ನು ನೋಡಿ ಅದು ಬಸವಣ್ಣನವರ ಲಟಪಿಂದರಿಂದು ಅದನ್ನು ಮನೆಯಲ್ಲಿಟ್ಟುಕೊಳ್ಳದೆ ಜಂಗಮ ಮೂರ್ತಿಗಳಿಗೆ ದಾನ ಮಾಡಿಬಿಟ್ಟರು. ಆ ಬಳಿಕ ಮಾರಯ್ಯ ತಂದೆಗಳು ಒಂದು ಲಕ್ಷ ತೊಂಭತ್ತಾರು ಸಾವಿರ ಮಹಾ ಗಣಂಗಳಿಗೆ ವಿನ್ಯಹ ಮಾಡಿ ಪ್ರಸಾದವನ್ನಣಬಡಿಸಿ ಅವರಿಗೆ ಒಂದೊಂದು ಕಟ್ಟಿಗೆಯ ತುಂಡನ್ನು ಭಿಕ್ಷೆಯಾಗಿ ಕೊಟ್ಟರು. ಅದನ್ನು ಗಣಂಗಳು ಸುವರ್ಣಕ್ಕಿಂತಲೂ ಅಧಿಕವಾಗಿ ಭಾವಿಸಿದರು. ಈ ಕಥೆಯು ಈ ಸಂಪಾದನೆಯಲ್ಲಿ ಪ್ರಸ್ತುತವಾಗಿರುವದರಿಂದ ಇದಕ್ಕೆ "ಮೋಳಿಗೆಯ ಮಾರಯ್ಯಗಳ ಸಂಪಾದನೆ" ಎಂಬ ಹೆಸರು ಕೊಡಲ್ಪಟ್ಟಿದೆ.

ಸೋಳಿಗೆಯ ಮಾರಿ ತಂದೆಗಳು ಸೊವಲು ಕಾಶ್ಮೀರ ದೇಶದ ರಾಜರಾಗಿದ್ದರು. ಅವರು ಬಸವೇಶ್ವರನ ಭಕ್ತಿಯ ಮಹಿಮೆಯನ್ನು ಕೇಳಿ ತಮ್ಮ ದೇಶಾಧಿಪತ್ಯವನ್ನು ಪರಿತ್ಯಜಿಸಿ ತಮ್ಮ ಸತಿಯಳಾದ ಮಹಾದೇವಿಯಮ್ಮನೊಡನೆ ಕಲ್ಯಾಣ ಪಟ್ಟಣಕ್ಕೆ ಬಂದು ಕಟ್ಟಿಗೆಯ ಹೊರೆಯನ್ನು ಹೊತ್ತು ಮಾರಿ ಒಂದ ಹಣದಿಂದ ಗುರುಲಿಂಗ ಜಂಗಮ ದಾಸೋಹ ಮಾಡುವ ಪವಿತ್ರ ಕಾಯಕವನ್ನು ಕೈಕೊಂಡಿದ್ದರು. ಬಸವಣ್ಣನವರ ಅರಮನೆಯಲ್ಲಿ ಮಿಷ್ಟಾನ್ನಭೋಜನ ಮಾಡಿದ ಗಣಂಗಳು ಸೋಳಿಗೆಯ ಮಾರಯ್ಯಗಳ ಮನೆಯಲ್ಲಿ ಅಂಬಲಿಯ ಸವಿಯನ್ನು ನೋಡದೆ ಹಾಗೆಯೇ ಹೋಗುತ್ತಿರಲಿಲ್ಲ. ಆ ಗಣಂಗಳು ಬಸವಣ್ಣನವರಿದುರಿಗೆ ಮಾರಯ್ಯನವರ ಅಂಬಲಿಯ ಸವಿಯನ್ನು ಬಹು ಪರಿಯಾಗಿ ಕೊಂಡಾಡುತ್ತಿದ್ದರು.

ಹೀಗಿರಲು ಒಂದಾನೊಂದು ದಿವಸ ಬಸವಣ್ಣನವರು ಅಂಥ ಸದ್ಭಕ್ತನ ಮನೆಯ ಪ್ರಸಾದವನ್ನು ಸ್ವೀಕರಿಸಿದರೆ ಸಮಸ್ತ ಪಾಪಗಳು ಕ್ಷಯವಾಗುವವೆಂದು ಭಾವಿಸಿ ಅವರ ಮನೆಗೆ ಭಕ್ತನ ವೇಷದಿಂದ ಬಿಜಯಂಗೈದರು. ಆ ಕಾಲಕ್ಕೆ ಮಾರಯ್ಯ ತಂದೆಗಳು ಸೋಳಿಗೆಯ ಕಾಯಕಕ್ಕೆ ಹೊರಗೆ ಹೋಗಿದ್ದರು. ಮನೆಯೊಳಗೆ ಅವರ ಮಡದಿಯವರೊಬ್ಬರೇ ಇದ್ದರು. ಅವರು ಬಸವಣ್ಣನವರ ಪಾದಾರ್ಚನೆಗೆ ಅಗ್ಗವಣಿಯನ್ನು ಕೊಟ್ಟು ಲಿಂಗಾರ್ಚನೆಯನ್ನು ಮಾಡಿಸಿ ಮಾಡಿದ ಅಡಿಗೆಯನ್ನು ನೀಡಲು ಬಸವಣ್ಣನವರು ಲಿಂಗಾರ್ಪಿತವ ಮಾಡಿ ತಾವು ತಂದಿದ್ದ ಎರಡು ಜಾಳಿಗೆ ಹೊನ್ನನ್ನು ಮಜ್ಜನ ಸಾಲೆಯ ಮರೆಗಿಟ್ಟು ಹೊರಟು ಹೋದರು.

ಕೆಲವು ಹೊತ್ತಿನ ಮೇಲೆ ಮಾರಯ್ಯ ತಂದೆಗಳು ಮನೆಗೆ ಬಂದು ಲಿಂಗಾರ್ಚನೆ ಮಾಡುವ ಕಾಲಕ್ಕೆ ಆ ಹೊನ್ನನ್ನು ನೋಡಿ ಮನೆಗೆ ಯಾರು ಬಂದಿದ್ದರೆಂದು ಹೆಂಡತಿಯನ್ನು ಕೇಳಿದರು. ಆಗ ಅಕೆಯು ಒಬ್ಬ ಭಕ್ತರು ಬಂದು ಲಿಂಗಾರ್ಚನೆಯನ್ನು ಮಾಡಿಕೊಂಡು ಹೋದರೆಂದುಸುರಿದಳು. ಆ ಮೇಲೆ ಸೋಳಿಗೆಯ ಮಾರಯ್ಯಗಳು ಬಸವಣ್ಣನು ನಾವು ಬಡವರೆಂದು ಈ ಹೊನ್ನನ್ನು ಇಲ್ಲಿರಿಸಿ ಹೋಗಿದ್ದಾನೆಂದು ತಿಳಿದು ಸಿಟ್ಟಾಗಿ ನುಡಿದುದೇನಂದರೆ— "ಗುರುಲಿಂಗ ಜಂಗಮಕ್ಕೆ ತನುಮನ ಧನಗಳನ್ನು ನಿರ್ವಂಚನೆಯಿಂದೀಯಬೇಕು. ಜನರು ನೆಚ್ಚಬೇಕೆಂದು

ಮೃಡನ ಭಕ್ತರಿಗೆ ಸಂಪತ್ತನ್ನು ಕೊಡಬಹುದೇ? ಅಹುದೆನಿಸಿಕೊಂಡಿಹೆನೆಂಬ ಧಾರುಣಿಯ ಜೋರರಿಗೆ ಎಲ್ಲಿಹುದೋ ನಿಜಭಕ್ತಿ ನಿಃಕಳಂಕ ಮಲ್ಲಿಕಾರ್ಜುನಾ"

ಅನಂತರ ಮಾರಯ್ಯನವರು ಆ ಧನವನ್ನು ಇಬ್ಬರು ಜಂಗಮ ಮೂರ್ತಿಗಳಿಗೆ ಸಮರ್ಪಿಸಿ ಬಸವಣ್ಣನವರ ಮನೆಗೆ ಹೋಗಿ ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ಬಿನ್ನಹ ಮಾಡಿ ಕರೆತಂದು ಅವರ ಇಷ್ಟಾನುಸಾರವಾಗಿ ಪದಾರ್ಥಗಳನುಣಬಡಿಸಿ ತಾವು ತಂದ ಕಟ್ಟಿಗೆಯ ಹೊರೆಯ ಮೇಲೆ ಪಾದೋದಕವನ್ನು ಸಿಂಪಡಿಸಿ ಅವುಗಳನ್ನು ಸುವರ್ಣ ದಂಡಗಳನ್ನು ಮಾಡಿ ಎಲ್ಲ ಜಂಗಮ ದೇವರುಗಳಿಗೆ ಒಂದೊಂದನ್ನು ಕೊಡಲು ಇವರು ಬಸವಣ್ಣನವರ ಬಳಿಗೆ ಹೋಗಿ ಇದನ್ನು ನಿವೇದಿಸಲು ಅವರು "ಮಾರಯ್ಯನವರು ಇಂತಹ ನಿರಾಶಾ ಮಹಾತ್ಮರೆಂದರಿಯದೆ ಕೆಟ್ಟೆನಲಾ" ಎಂದು ಹಳಹಳಿಬಟ್ಟು ನುಡಿದುದೇನಂದರೆ "ಧನದಲ್ಲಿ ಶುಚಿ ಪ್ರಾಣದಲ್ಲಿ ನಿರ್ಭಯ ಇದಾರಿಂಗಳವಡುವುದಯ್ಯಾ? ನಿಧಾನವು ತಪ್ಪಿಬಂದರೆ ಒಲ್ಲೆನೆಂಬವರಿಲ್ಲ. ಪ್ರಮಾದವಶದಿಂ ಬಂದರೆ ಹುಸಿಯದಂತವರಿಲ್ಲ. ನಿರಾಶ ನಿರ್ಭಯ ಕೂಡಲಸಂಗಮದೇವಾ ನೀನೊಲಿದ ಶರಣರು." ಇದಲ್ಲದೆ "ಮನೆಯ ನೋಡಾ ಬಡವರು. ಮನವ ನೋಡಾ ಧೀರರು. ಸೋಂಕಿಲ್ಲದ ರುಚಿಗಳು. ಸರ್ವಾಂಗಧೀರರು. ಪಸಾರವ ನೋಡಿದೊಡೇನೂ ಇಲ್ಲ. ಸಮಯೋಚಿತಕ್ಕೆ ಸಕಲ ಪದಾರ್ಥಂಗಳ ತಂದೀವರು. ಕೂಡಲಸಂಗಮದೇವಾ ನಿಮ್ಮ ಶರಣ ಸೋಳಿಗೆಯ ಮಾರಯ್ಯ ಸರ್ವಾಂಗ ಧೀರ ನೋಡಾ."

ಅನಂತರ ಚನ್ನಬಸವಣ್ಣನವರು ಹೊಲಿ ಹದಿನೆಂಟು ಜಾತಿಗೆ ಕೊತ್ತಾದ ಲಕ್ಷ್ಮಿಯನ್ನು ಶಿವಶರಣರ ಮನೆಯಲ್ಲಿರಿಸಬಹುದೇ? ಎಂದು ಬಸವಣ್ಣನವರನ್ನು ಕುರಿತು ಹೀಗೆ ಮಾತನಾಡಿದರು. "ಬಸವಣ್ಣಾ, ಹಸಿವು ತೃಷೆಗಳನ್ನು ಮರೆದ, ಅರಿಷಡ್ವರ್ಗಗಳನ್ನು ಹುರಿದ ಅಪ್ಪಮದಗಳನ್ನು ಸೀಳಿದ ಮಹಾಮಹಿಮ ಸೋಳಿಗೆಯ ಮಾರಯ್ಯ ತಂದೆಗಳಿಗೆ ಆಶೆಯಾವಿಷವ ತೋರಿಸಬಹುದೇ? ಅಯ್ಯಾ, ಇಂತಹ ಮಹಾಶರಣರ ಮನೆಯಲ್ಲಿ ಜಗದ ಹಾದರಗಿತ್ತಿಯಾವ ಭೋಗಲಕ್ಷ್ಮಿಯು ತಂದಿರಿಸಬಹುದೇ? ಹದಿನೆಂಟು ಜಾತಿಯ ಮನೆಯಲ್ಲಿ ತೊತ್ತಾಗಿ ಹುಟ್ಟಿ ಬೆಳೆದ ಶಿವದ್ರೋಹಿಯಾದ ಲಕ್ಷ್ಮಿಯನ್ನು ಲಿಂಗವಂತರ ಮನೆಯ ಹೊಗಿಸುವರೇ? ಇದಕ್ಕೆ ನಮ್ಮ ಕೂಡಲ ಚೆನ್ನಸಂಗಮದೇವ ಮೆಚ್ಚುವನೇ?"

ಈ ಮಾತನ್ನು ಕೇಳಿ ಮೋಳಿಗೆಯ ಮಾರಯ್ಯಗಳು ಅರವು ಮರೆಯಿಂದ ಮಾಡುವ ಭಕ್ತಿಸ್ಥಿರವಲ್ಲವೆಂದೂ ಅರಿದವಂಗಾದ ಬಸವಣ್ಣನವರಿಗೆ ಅರಿಕೆಯು ನಾರು ಹೇಳಬೇಕೆಂದೂ ಈ ರೀತಿಯಾಗಿ ವಿಶದಪಡಿಸಿದರು. "ಬಯಲು ಬತ್ತಲೆಯಾದರೆ ಹೊದಿಸುವವರಿನ್ನಾರು? ಏರಿ ನೀರು ಕುಡಿದರೆ ಬಿಡಿಸುವವರಿನ್ನಾರು? ಮಹಾಮೇರು ನಡೆದು ಬಂದರೆ ಪಥಕೆಂಬು ಕೊಡುವವರಾರು? ಅರಿದವನು ಮರೆದನಾದಡೆ ಅರಿಕೆಯ ಹೇಳುವವರಾರು? ನಿಮ್ಮ ನಿಜವ ನೀವೇಬಲ್ಲಿರಿ. ನಾನಂಜುವೆ ನಿಃಕಳಂಕ ಮಲ್ಲಿಕಾರ್ಜುನಾ."

ಆಗ ಬಸವಣ್ಣನವರು ನಿರಹಂಭಾವದಿಂದ ನುಡಿದುದೇನಂದರೆ "ಅಯ್ಯಾ, ನಾನು ಸಕಲ ಪದಾರ್ಥಂಗಳ ಕೊಟ್ಟು ಭಕ್ತನಾದವನಲ್ಲ. ಆದರೆ ನಿಮ್ಮ ಮನವ ನಿಮಗರ್ಪಿಸಿ ಶುದ್ಧನಾಗಿರ್ಪೆ ನೋಡಾ. ಅರ್ಥ ಪ್ರಾಣಾಭಿಮಾನಗಳನ್ನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಆದಿರುದ್ರನ ಮಗಳು ಆದಿಶಕ್ತಿ. ಆದಿಶಕ್ತಿಯ ಮಗ ವಿಷ್ಣು. ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಎನ್ನ ಮನದೊಡೆಯ ಮಹಾದೇವ, ನಿಮ್ಮ ಮನವ ನಿಮಗೊಪ್ಪಿಸಿ ನಾನು ಶುದ್ಧ ಕಾಣಾ ಕೂಡಲ ಸಂಗಮದೇವಾ."

ಈ ಮಾತನ್ನು ಕೇಳಿ ಮೋಳಿಗೆಯ ಮಾರಿತಂದೆಗಳು ಆನಂದಭರಿತರಾಗಿ ಬಸವಣ್ಣನವರ ಸ್ತೋತ್ರವನ್ನು ಹೀಗೆ ಮಾಡಿದರು. "ಎನ್ನ ಚಿತ್ತಕ್ಕೆ ನಕಾರವಾಗಿ ಬಂದೆಯಯ್ಯ ಬಸವಣ್ಣಾ. ಎನ್ನ ಬುದ್ಧಿಗೆ ಮಕಾರವಾಗಿ ಬಂದೆಯಯ್ಯ ಬಸವಣ್ಣಾ. ಎನ್ನ ಅಹಂಕಾರಕ್ಕೆ ಶಿಕಾರವಾಗಿ ಬಂದೆಯಯ್ಯ ಬಸವಣ್ಣಾ. ಎನ್ನ ಮನಕ್ಕೆ ವಕಾರವಾಗಿ ಬಂದೆಯಯ್ಯ ಬಸವಣ್ಣಾ. ಎನ್ನ ಜ್ಞಾನಕ್ಕೆ ಯಕಾರವಾಗಿ ಬಂದೆಯಯ್ಯ ಬಸವಣ್ಣಾ. ಎನ್ನ ಮತಿಗೆ ಓಂಕಾರವಾಗಿ ಬಂದೆಯಯ್ಯ ಬಸವಣ್ಣಾ. ಇಂತಪ್ಪ ಪ್ರಣವ ಪಂಚಾಕ್ಷರ ಮಂತ್ರವೇ ನೀನಾಗಿ ತನ್ನ ಮಠಕ್ಕೆ ತಾನೇ ಬಂದು ವಸ್ತುವಸಿತ್ತೊಡೆ ಅದನ್ನು ನಾನು ನಿಃಕಳಂಗ ಮಲ್ಲಿಕಾರ್ಜುನನ ಭಕ್ತರಿಗಿತ್ತು ಬದುಕಿದೆನಯ್ಯ ಬಸವಣ್ಣಾ."

ಆಬಳಿಕ ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮಯ್ಯಗಳು ಕೆಲ ಹೊತ್ತು ಮಾರಯ್ಯನವರೊಂದಿಗೆ ಶಿವಾನುಭವ ಗೋಷ್ಠಿಯ ಮಾಡಿ

ತಮ್ಮ ತಮ್ಮ ಗೃಹಂಗಳಿಗೆ ಬಿಜಯಂಗೈದರು. ಕೆಲವು ವರ್ಷಗಳು ಗತಿಸಲು ಕಲ್ಯಾಣ ಪಟ್ಟಣಕ್ಕೆ ಮಹಾಸಂಕಟವು ಪ್ರಾಪ್ತವಾಗಿ ಅನೇಕ ಶರಣರು ಅಲ್ಲಲ್ಲಿಗೆ ಹೋಗಿ ಶಿವೈಕ್ಯರಾದರು. ಮಾರಯ್ಯನವರು ಎಂದಿನಂತೆ ಕಲ್ಯಾಣ ಪಟ್ಟಣದಲ್ಲಿಯೇ ಕಟ್ಟಿಗೆಯ ಕಾಯಕವನ್ನು ಹಾಗೆಯೇ ಸಾಗಿಸಿದ್ದರು. ಬಸವಾದಿ ಪ್ರಮಥರ ಲಿಂಗೈಕ್ಯದ ಸುದ್ದಿಯನ್ನು ಕೇಳಿ ತಾವೂ ಯಾವಾಗ ಲಿಂಗೈಕ್ಯರಾದೇವೆಂಬ ಹಂಬಲವು ಅವರಲ್ಲಿ ಹೆಚ್ಚಾಗಿ ಬೆಳೆಯಿತು. ಆಗ ಅವರು ನುಡಿದುದೇನಂದರೆ "ಊರ ಸುಟ್ಟು ಸೂರೆ ಮಾಡುವಲ್ಲಿ ಅರಿಗಾರು ಇಲ್ಲ. ಬಸವಣ್ಣ ಸಂಗಮಕ್ಕೆ, ಚನ್ನಬಸವಣ್ಣ ಉಳುವಿಗೆ, ಪ್ರಭು ಕದಳಿಗೆ, ಮಿಕ್ಕಾದ ಪ್ರಮಥರೆಲ್ಲರೂ ತಮ್ಮ ತಮ್ಮ ಲಕ್ಷಕ್ಕೆ ಬಂದಲ್ಲಿಗೆ ಹೋಗಿ ಮುಕ್ತಿಯನ್ನೈದಿದರು. ಎನಗೊಂದು ಬಟ್ಟೆಯ ಹೇಳಾ. ಶಿವಭಕ್ತರ ಮನೆಗೆ ಕಟ್ಟಿಗೆ ಮಾರಬೇಕೆಂದು ನೀವು ಹಾಕಿ ಕೊಟ್ಟ ಕಾಯಕದ ಕೆಲಸವು ಇನ್ನೆಷ್ಟು ದಿನ ಹೇಳಾ ನಿಃಕಳಂಕಮಲ್ಲಿಕಾರ್ಜುನಾ."

ಮತ್ತು "ನಾನು ಕಾಯಸಮಾಧಿಯನೊಲ್ಲೆ. ಜೀವ ನೆನಹು ಸಮಾಧಿಯನೊಲ್ಲೆ. ಕೈಲಾಸವೆಂಬ ಭವಸಾಗರವನೊಲ್ಲೆ. ನೀನೆನ್ನನು ಅಲ್ಲಲ್ಲಿಗೆಳಿಯದೆ ನಿನ್ನಲ್ಲಿಯೇ ಕೂಟಸ್ಥನ ಮಾಡಾ ನಿಃಕಳಂಕ ಮಲ್ಲಿಕಾರ್ಜುನಾ. ನಿನ್ನರುವಿನ ಬಾಗಿಲವ ತೆರೆದೊಮ್ಮೆ ತೋರಾ." ಮತ್ತು "ನಿನ್ನನರಿವುದಕ್ಕೆ ಹೊನ್ನು ಹೆಣ್ಣು ಮಣ್ಣೆಂಬುದ ತೊರೆಯಬೇಕು. ಈ ಮೂರರ ಹಂಗು ಹರಿದವಂಗಲ್ಲದೆ ನಿನ್ನ ಚರಣದ ಬಾಗಿಲ ಬಾಗಳವನೇರಬಾರದು ನೋಡಾ ನಿಃಕಳಂಕಮಲ್ಲಿಕಾರ್ಜುನಾ."

ಈ ಮಾತನ್ನು ಕೇಳಿ ಮಾರಯ್ಯ ತಂದೆಗಳ ಪುಣ್ಯಾಂಗನೆಯಾದ ಮಹಾದೇವಿಯಮ್ಮನು ಗಂಡು ಹೆಣ್ಣೆಂಬ ಭಿನ್ನಭಾವದಿಂದ ನುಡಿದುದನ್ನು ಧಿಕ್ಕರಿಸಿ ಪತಿಯನ್ನು ಕುರಿತು ಬಹು ಸ್ವಾರಸ್ಯವಾಗಿ ಮಾತನಾಡಿದಳು.

ಮಹಾದೇವಿಯಮ್ಮನ ಉದ್ಗಾರ.

"ಅದೇತಕಯ್ಯ, ಶಿವನೊಳಗೆ ಕೂಟಸ್ಥನಾದಿಹೆನೆಂಬ ಬಲು ಬೇಟ? ಹೆಣ್ಣನ್ನು ತೊರೆಯುವದು ಸತ್ಯಭಕ್ತಿಯ ಆಟವಲ್ಲ. ಮುನ್ನ ನೀನಾರಿಂದಾದೆ ಹೇಳಾ? ಆ ಭಾವವನರಿದು ನಿನ್ನ ನೀನೇ ತಿಳಿ. ಅದೇ ನಿಜಭಕ್ತಿ. ಕಾಷ್ಠವ ಸುವರ್ಣವ ಮಾಡಿದೆನೆಂಬ ಮಾಟವು ಭಕ್ತಿಯೇ? ನಿಮ್ಮ

ಅರುವಿಂಗೆ ಇದಿರಿನಲ್ಲಿ ಕೂಡಿಹೆನೆಂಬ ಭಿನ್ನಭಾವವುಂಟೆ? ನಿಮ್ಮ ಕೂಟಕ್ಕೆ ಎನ್ನ ನಾಚಿಕೆಯ ಬಿಡಿಸಿದ ತೆರನ ತಿಳಿದುಕೊಳ್ಳಿ. ಶಕ್ತಿಯ ಮಾತೆಂದು ಧಿಕ್ಕರಿಸಬೇಡಿ. ಹೊರಗೆ ಕೂಡಿಹೆನೆಂಬುದು ನಿಮ್ಮ ಅರುವಿಂಗೆ ಹಾನಿ. ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ ನಿಮ್ಮ ಶರಣರ ನೆಲೆಯ ನೀವೇ ನೋಡಿಕೊಳ್ಳಿ."

ಇವಲ್ಲದೆ ಇದ್ದಲ್ಲಿಯೇ ಮೋಕ್ಷವಿರಲು ಇತರ ಶರಣರಂತೆ ಅಲ್ಲಲ್ಲಿ ಮೋಕ್ಷವನ್ನರಸುವದೇಕೆಂದು ಪತಿಗೆ ಈಪ್ರಕಾರ ಉಸುರಿದರು. "ಪರಮೇಶ್ವರನಿರಲು ಹೇಮವನರಸುವರೇ ಅಯ್ಯ? ಸ್ವಯಂ ಜ್ಯೋತಿಯಿರಲು ದೀಪವನರಸುವರೇ ಅಯ್ಯ? ನೀವು ಅಲ್ಲಿ ಇಲ್ಲಿ ಕೂಡಿಹೆನೆಂಬ ದಂದುಗವೇಕಯ್ಯಾ? ಕಣ್ಣಿದ್ದು ಕುರುಡರಂತಾದಿರಲ್ಲ? ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನನು ಬಳಿಯಲ್ಲಿರಲು ಬೇರೆ ಸ್ಥಾನವೇಕೆ ಹೇಳಾ ಎಲೆ ಅಯ್ಯಾ."

ಇವಲ್ಲದೆ "ನಿನ್ನಂಗದಲ್ಲಿ ಗುರು ಕೊಟ್ಟ ಲಿಂಗವೆಂಬ ಕುರುಹು ಇರುತ್ತಿರಲು ಆ ನಿಜಲಿಂಗದ ಸಂಗವನರಿಯದೆ ಸಂದಿಗೊಂದಿಯಲ್ಲಿ ಹೊಕ್ಕಿಹೆನೆಂಬ ಗೊಂದಣವೇತಕ್ಕೆ? ತಾ ನಿಂದಲ್ಲಿ ಕೆಡಹಿದ ಒಡವೆಯ ಬಿಟ್ಟು ಅಜೆಯಲಿ ನೆನೆದು ಅರಸಲುಂಟೆ? ನೀ ನಿಂದ ನಿಜವ ನಿಂದಲ್ಲಿಯೇ ತಿಳಿದುಕೋ. ನಿನ್ನಂಗವೇ ಕೈಲಾಸವು. ಆ ಲಿಂಗದ ಕೂಟವೇ ನಿರ್ವಾಣವು ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ"

ಹೀಗೆಂದು ಮಹಾದೇವಿಯಮ್ಮನು ನುಡಿಯಲು ಮೋಳಿಗೆಯ ಮಾರಿತಂದೆಗಳು ನುಡಿದುದೇನಂದರೆ "ಭಕ್ತಿಯುಳ್ಳನ್ನಕ್ಕ ಇಷ್ಟಲಿಂಗದ ಹಂಗುಬೇಕು. ಆತ್ಮವುಳ್ಳನ್ನಕ್ಕ ಅರಿವೆಂಬುದ ವಿಚಾರಿಸಬೇಕು. ನಾ ಮರ್ತ್ಯನಾದ ಕಾರಣ ಜಗತ್ತು ಕರ್ಕಶವಾಗಿದೆ. ಇದು ಕಾರಣ ಕೈಲಾಸವೆಂಬ ಬಟ್ಟೆಯನರಸಬೇಕು. ಎನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಎನ್ನ ಮನಕ್ಕೆ ಎನ್ನ ಮುಕ್ತ್ಯಂಗನೆ ಎನ್ನ ನಿಶ್ಚಯಕ್ಕೆ ಒಂದು ಗೊತ್ತು ತೋರಾ. ನಿಃಕಳಂಕ ಮಲ್ಲಿಕಾರ್ಜುನನು ಎಲ್ಲಿಹನು ಪೇಳಾ."

ಇದನ್ನು ಕೇಳಿ ಮಹಾದೇವಿಯಮ್ಮನು ಹೇಳಿದುದೇನಂದರೆ "ಕಾಲಿರಲು ತಲೆ ನಡೆಯುವದುಂಟೆ ಅಯ್ಯ? ಕಣ್ಣಿಲ್ಲದೆ ಕರ್ಣ ನೋಡಿದುದುಂಟೆ ಅಯ್ಯಾ? ಬಾಯಿ ಇರಲು ಮೂಗು ಉಂಡುದುಂಟೆ ಅಯ್ಯ? ತಾಯಿ

ಇಲ್ಲದೆ ಮಕ್ಕಳು ಬಂದ ತೆರನುಂಟೆ ಅಯ್ಯ? ನಿಮ್ಮ ಸೇವೆಯ ತೊತ್ತಿನ ಅನುಭಾವವ ಕೇಳಲೇತಕ್ಕೆ? ನಿಮ್ಮಲ್ಲಿ ಎನ್ನ ಭಾವ ಲೇಪ. ಮಹಾಘನ ಲಿಂಗಸ್ವರೂಪ ನೀವಾವ ಕಾರಣ ಎನಗೆ ಸ್ವಾತಂತ್ರ್ಯವುಂಟೆ?• ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀಜಾತಿ ನಿಮ್ಮ ಶ್ರೀಪಾದದಲ್ಲಿ ಅಡಗಿತ್ತು."

ಈ ಮಾತಿಗೆ ಮಾರಯ್ಯನವರು "ತಲೆ ಇಲ್ಲದೆ ಕಾಲು ನಡೆಯಬಲ್ಲುದೆ? ಕುಕ್ಷಿ ಇಲ್ಲದೆ ಬಾಯಿಯುಣಬಲ್ಲುದೆ? ಆತ್ಮನಿಲ್ಲದೆ ಕರಚರಣಾದಿಗಳಿಗೆ ಏತರ ಹೊಲಬು? ನಿನ್ನ ಭಕ್ತಿಯ ಬೆಳೆಯೇ ಎನ್ನ ಸತ್ಯದ ಹಾದಿ. ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ ಎನ್ನ ಸುಖದುಃಖ ನಿನ್ನ ಸುಖದುಃಖ ಅನ್ಯವಿಲ್ಲ." ಎಂದು ನುಡಿದರು.

ಅದಕ್ಕೆ ಮಹಾದೇವಿಯಮ್ಮನು ಪತಿಯನ್ನು ಕುರಿತು "ಆತ್ಮಕ್ಕೆ ಅರುಹಾದುದನರಿಯದೆ ಕೈಲಾಸವೆಂಬ ಸೂತ್ರಕ್ಕೆ ಮನ ಸೋತಿರಲ್ಲ? ಅಂಧಕನ ಕೈಯ್ಯ ರತ್ನದಂತಾದಿರಲ್ಲ? ಪಂಗುಳನ ಕೈಯ್ಯ ಶಸ್ತ್ರದಂತೆ ಆದಿರಲ್ಲ? ತಾನಿದ್ದಲ್ಲಿಯೇ ನಿಜಕೂಟ. ತಿಳಿದಲ್ಲಿಯೇ ನಿರಂಗ. ಇಷ್ಟದಲ್ಲಿ ನೋಟ, ಜ್ಞಾನದಲ್ಲಿ ಕೂಟ ಇವು ಏಕಾರ್ಥವಾದಲ್ಲಿ ಕಾಯವೆಂಬ ಕದಳಿಯ ಬಿಟ್ಟುದು. ಭಾವವೆಂಬ ಕುರುಹ ಮರೆದುದು. ಕಾಯಕ್ಕೆ ಕೈಲಾಸವೆಂಬುದಿಲ್ಲ. ಭಾವಕ್ಕೆ ಒಯಲೆಂಬುದಿಲ್ಲ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ." ಎಂದು ಮಾತನಾಡಿದರು.

ಇದಲ್ಲದೆ "ಗುರುವನರಿದು ಲಿಂಗವನರಿವರುಂಟು. ಲಿಂಗವನರಿದು ಪಂಚಾಚಾರವನರಿವರುಂಟು. ಪಂಚಾಚಾರವನರಿದು ಜಂಗಮವನರಿವರುಂಟು. ಆ ಜಂಗಮವನರಿವಲ್ಲಿ ಷಟ್‌ಸ್ಥಲಸಂಬಂಧವಾಯಿತ್ತು. ಇದನ್ನರಿತವಂಗೆ ಇಹಪರವೆಂಬ ಭಿನ್ನಭಾವವಿಲ್ಲ. ಕಾಯವುಳ್ಳನ್ನಕ್ಕ ಲಿಂಗಪೂಜೆ ಆತ್ಮವುಳ್ಳನ್ನಕ್ಕ ಅರುವಿನ ವಿಚಾರ, ಪುರುಷ ನೀ ಸತಿ ನಾನೆಂಬಲ್ಲಿ ಉಭಯ ಬೀಜ. ನಾ ನೀನೆಂಬನ್ನಕ್ಕ ಲಿಂಗವು ಅಂಗದಲ್ಲಿಯೇ ನಿರಂಗವಾಗಬೇಕು. ಅದುದರಿಂದ ಕಾಯವೆರಿಸಿ ಕೈಲಾಸಕ್ಕೆ ಹೋದಿಹೆನೆಂಬುದು ಮತವಲ್ಲ. ಘನಲಿಂಗ ಕರಸ್ಥಲದಲ್ಲಿಪ್ಪ ಅನುವನರಿಯದೆ ಕೈಲಾಸಕ್ಕೆ ಹಂಬಲಿಸುವನೀ? ಆತ್ಮನಿಶ್ಚಯವಾದಲ್ಲಿಯೇ ಕೈಲಾಸ. ಮಮತ್ವವಾದಲ್ಲಿಯೇ ಮರ್ತ್ಯ

ದೊಳಗು ಎನ್ನಯ್ಯಪ್ರಿಯ ಇಮ್ಮಡಿನಿಃಕಳಂಕ ಮಲ್ಲಿಕಾರ್ಜುನಾ " ಎಂದು ನುಡಿದರು.

ಮತ್ತೆ "ಸುವ್ಯಾನಸುಬುದ್ಧಿ ಭಕ್ತಿಸ್ಥಲ. ಮುಲಾಮುಲ ಮಹೇಶ್ವರಸ್ಥಲ. ಅಜ್ಞಾನ ಸುಜ್ಞಾನ ಪ್ರಸಾದಿಸ್ಥಲ. ಉಭಯ ಕೂಟಸ್ಥವೆಂಬುದ ಪರಿಹರಿಸಿದಲ್ಲಿ ಪ್ರಾಣಲಿಂಗಿಸ್ಥಲ. ಸ್ತುತಿ-ನಿಂದ್ಯಾದಿಗಳಲ್ಲಿ ಒಡಲಳಿದು ನಿಂದುದು ಶರಣಸ್ಥಲ. ಇಂತೀ ಭೇದವನರಿದು ಪರುಷಪಾಷಾಣದಂತೆ ಭಿನ್ನಭಾವವಿಲ್ಲದೆ ಏಕವಾದಲ್ಲಿ ಐಕ್ಯಸ್ಥಲ. ಅದು ಎನ್ನ ನಿನ್ನ ಕೂಟದ ಸುಖದಂತೆ. ಇದನ್ನು ಚನ್ನಾಗಿ ತಿಳಿದು ನೋಡಿಕೊಳ್ಳಿ. ಅಲ್ಲಿ ಇಲ್ಲಿ ಎಂಬ ಗೆಲ್ಲಗುಳಿತನ ಬೇಡ ಎನ್ನಯ್ಯಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ ಎಂದು ಸುರಿದರು.

ಇನಿಯಳ ಇನಿದಾದ ನುಡಿ ಕೇಳಿ ಮೋಳಿಗೆಯ ಮಾರಯ್ಯ ತಂಜಿಗಳು ಸಂತುಷ್ಟರಾಗಿ ಅವಳ ಮಾತಿನ ಮೇಲೆ ವಿಶ್ವಾಸವಿಟ್ಟು ಕರಸ್ಥಲದ ಇಷ್ಟಲಿಂಗದಲ್ಲಿಯೇ ನಿಷ್ಠೆಯನ್ನರಿಸಿ ಯಾವ ಕಡೆಗೂ ಹೋಗದೆ ಕೆಲದಿನಗಳ ಮೇಲೆ ಕಲ್ಯಾಣ ಪಟ್ಟಣದಲ್ಲಿಯೇ ಬಯಲಾದರು.

ಈ ಸಂಪಾದನೆಯಿಂದ ನಮಗೆ ತಿಳಿದು ಬರುವ ಮುಖ್ಯ ಸಂಗತಿಗಳಾವವೆಂದರೆ:— ಮೋಳಿಗೆಯಮಾರಯ್ಯನವರು ಕಾಶ್ಮೀರದ ಅರಸರಾಗಿದ್ದರು. ಆ ರಾಜ್ಯಭೋಗವನ್ನು ತೊರೆದು ಶರಣ ಸಂಗವೇ ಮಿಗಿಲೆಂದು ಭಾವಿಸಿ ಸಪತ್ನೀಕರಾಗಿ ಕಲ್ಯಾಣ ಪಟ್ಟಣದಲ್ಲಿ ಕಟ್ಟಿಗೆ ಮಾರುವ ಕಾಯಕವನ್ನು ಕೈಕೊಂಡದ್ದು ಅತ್ಯಂತ ಮಹತ್ವದ್ದು. ಕಾಯಕವು ನಮ್ಮ ಶರಣರ ವಿಶಿಷ್ಟ ಗುಣವು. ಒಂದು ವೇಳೆ ರಾಜರು ಕಾಲವಶದಿಂದ ಕಟ್ಟಿಗೆಯನ್ನು ಹೊತ್ತು ಮಾರುವ ಪ್ರಸಂಗ ಬರಬಹುದು. ಆದರೆ ಸ್ವತಃ ರಾಜರು ಶರಣರ ಸಹವಾಸಕ್ಕೆಳಸಿ ಕಟ್ಟಿಗೆ ಹೊತ್ತು ಮಾರುವ ಕೆಲಸವನ್ನು ಆನಂದದಿಂದ ಕೈಕೊಂಡ ಉದಾಹರಣೆಗಳು ಬಹು ವಿರಳ. ವಿದ್ಯಾರ್ಥಿದೆಶೆಯಲ್ಲಿದ್ದಾಗ ರಾಜಪುತ್ರರೇನೋ ಗುರುಕುಲಗಳಲ್ಲಿ ಸೇವಾಕಾರ್ಯಗಳನ್ನು ಮಾಡುತ್ತಿದ್ದರಂತೆ. ಆದರೆ ನಮ್ಮ ಶರಣರ ಶಿವಾನುಭವ ಮಂಟಪದಲ್ಲಿ ರಾಜ್ಯವನ್ನಾಳುವ ಭೂಪಾಲರೂ ದೊಡ್ಡ ದೊಡ್ಡ ಪಂಡಿತರೂ ಕೂಡ ಯಾವ ಸಂಕೋಚವಿಲ್ಲದೆ ಸಣ್ಣಪುಟ್ಟ ಕಾಯಕಗಳನ್ನು ಮಾಡುತ್ತಿದ್ದುದು ಮನನೀಯವಾಗಿದೆ.

ಈ ಸಂಪಾದನೆಯಿಂದ ನೆನಸಿದತಕ್ಕ ೨ ನೆಯ ಸಂಗತಿಯೆಂದರೆ ಮಾರಯ್ಯನವರ ನಿರಾಶಾಗುಣವು. ಬಡವರಾಗಿ ಜೀವಿಸುವ ಮಾರಯ್ಯನವರ ಮನೆಯಲ್ಲಿ ಬಸವಣ್ಣನವರು ಹೊನ್ನಿನ ಚೀಲಗಳನ್ನಿರಿಸಿರಲು ಅವರು ಅದನ್ನು ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳದೆ ಜಂಗಮ ಮೂರ್ತಿಗಳಿಗೆ ದಾನ ಮಾಡಿ ಬಿಟ್ಟರು. ತಾನಾಗಿಯೇ ಬಂದ ಸುಖವನ್ನು ನೆರಿಪಿಂಗಿದವರುಂಟೇ ಜಗದಲ್ಲಿ? ಆದರೆ ರಾಜ್ಯವನ್ನೇ ತ್ಯಾಗಮಾಡಿ ಬಂದ ನಮ್ಮ ಯೋಗಿಗಳಿಗೆ ಭೋಗದಾಶೆಯುಂಟಾದೀತೇ? ಈ ಜಗತ್ತಿನಲ್ಲಿ ಪಾಪದ ಭೀತಿಯಿಲ್ಲದೆ ಪರರ ದುಡ್ಡನ್ನು ಸೆಳೆಯುವ ಉಪಾಯಗಳು ನಾನಾ ಪ್ರಕಾರದವಿರುವವು. ಆದರೆ ತಾನಾಗಿಯೇ ಬಂದ ಸಂಪತ್ತನ್ನು ದೂರೀಕರಿಸುವವರು ಬಹು ವಿರಳ. "ಬಂಗಾರ ಕಬ್ಬಿಣವು ಹಿರಿಕಿರಿದು ಸಮಗೊಂಡ ಲಿಂಗವಾಂತೇಶ್ವರ ಜಗತ್ಪುತ್ರಗೆ ಹರಗೆ। ಜಯಮಂಗಳಂ ನಿತ್ಯ ಶುಭಮಂಗಳಂ॥" ಎಂಬೀ ಬಾಲಲೀಲಾಮಹಾಂತಸ್ವಾಮಿಗಳು ಹಾಡಿದ ತತ್ವವು ನಮ್ಮ ಮಾರಯ್ಯನವರ ಆಚರಣೆಯಲ್ಲಿ ಚನ್ನಾಗಿ ಅಳವಟ್ಟಿದ್ದಿತು.

ಈ ಸಂಪಾದನೆಯಿಂದ ೬ನೆಯ ಸಂಗತಿಯೆಂದರೆ ಮಾರಯ್ಯನವರ ಪುಣ್ಯಾಂಗನೆಯಾದ ಮಹಾದೇವಿಯಮ್ಮನವರ ದಿವ್ಯವಾದ ಉದಾಹರಗಳು. ಅವರು ತಮ್ಮ ಪತಿಗೆ ಇದ್ದಲ್ಲಿಯೇ ಕೈಲಾಸವುಂಟು, ಕರಸ್ಥಳದ ಲಿಂಗದಲ್ಲಿಯೇ ಮನಮಗ್ನವಾಗಿರುವದು ಕೈಲಾಸವು, ಬೇರೆ ಕೈಲಾಸವೆಂಬುವದಿಲ್ಲ. ಇತರ ಶರಣರಂತೆ ಸಂಗಮ, ಉಳವಿ, ಕದಳಿ ಮೊದಲಾದ ಸ್ಥಳಗಳಿಗೆ ಹೋಗುವದು ವ್ಯರ್ಥ ಎಂಬ ತತ್ವಗಳನ್ನು ಒಳ್ಳೆ ರಸಿಕತನದಿಂದ ಪ್ರತಿಪಾದಿಸಿದ್ದುದನ್ನು ನೋಡಿದರೆ ನಮ್ಮ ಶರಣರ ಸತ್ನಿಯರಂದರೂ ಮಹಾ ತತ್ವಜ್ಞಾನಿಗಳಾಗಿದ್ದರೆಂದು ಸ್ಪಷ್ಟವಾಗಿ ತೋರುವದು. ಮಹಾದೇವಿಯಮ್ಮನು ಅಂಥ ದಿವ್ಯಜ್ಞಾನಿಯಾಗಿರದಿದ್ದರೆ ರಾಜ್ಯಭೋಗವನ್ನು ತೊರೆದು ಪತಿಯ ಜೊನ್ನಹತ್ತಿ ಕಲ್ಯಾಣ ಪಟ್ಟಣಕ್ಕೆ ಬಂದು ಬಡತನದಿಂದ ಸಂಸಾರ ಮಾಡುತ್ತಿರಲಿಲ್ಲ. ಹಿಂದಕ್ಕೆ ಋಷಿ ಪತ್ನಿಯರು ತಮ್ಮ ಪತಿಗಳೊಡನೆ ಅತ್ಯಾನಾತ್ಮ ವಿವೇಚನೆಯನ್ನು ಮಾಡುತ್ತಿದ್ದರೆಂದು ನಾವು ಕೇಳುತ್ತೇವೆ. ಆದರೆ ವೈತ್ರೇಯಿ ಗಾರ್ಗಿ ಮೊದಲಾದ ಸ್ವಲ್ಪ ಉದಾಹರಣೆಗಳು ಮಾತ್ರ ನಮಗೆ ಕಂಡುಬರುವವು. ಆದರೆ ಶಿವಾನುಭವ ಮಂಟಪದಲ್ಲಿ ಆಧ್ಯಾತ್ಮ ವಿಷಯದ ಬಗ್ಗೆ ಸಂವಾದ ಮಾಡಿದಂಥ ನಮ್ಮ ಶಿವಶರಣೆಯರು ಅನೇಕರಾಗಿ ಹೋದರು.

ಶ್ರೀಯುತ ಪುರಾಣೇಕರ ಆಕ್ಷೇಪಣೆಗಳಿಗೆ ಉತ್ತರ.

(ಶ್ರೀಯುತ ಎಸ್. ಆರ್. ಶ್ರೀನಿವಾಸ ಮೂರ್ತಿ ಬಿ ಏ
ಬೆಂಗಳೂರು)

ನನ್ನ ಮಿತ್ರರಾದ ಶ್ರೀಯುತ ಬಿ. ಎಂ. ಪುರಾಣೇಕರು ಶಿವಾನುಭವ ದ್ವೈಮಾಸಿಕ ಪತ್ರಿಕೆಯ ಡಿಸೆಂಬರ ೧೯೩೫ ನೆಯ ಸಂಚಿಕೆಯಲ್ಲಿ "ತೇರದಾಳದಲ್ಲಿ ಶ್ರೀಪ್ರಭುದೇವರ ಐಕ್ಯ" ಎಂಬ ಲೇಖನವನ್ನು ಬರೆಯುತ್ತ, "ಪ್ರಭುಲಿಂಗಲೀಲೆಯ ಸಂಗ್ರಹ" ದಲ್ಲಿ ನಾನು ಬರೆದಿರುವ ಪೀಠಿಕೆಯ ವಿಚಾರವನ್ನೆತ್ತಿ ಕೆಲವು ಟೀಕೆಗಳನ್ನು ಮಾಡಿದ್ದಾರೆ. ನಾನು ಬರೆದಿರುವುದರಲ್ಲಿ ತಪ್ಪುಗಳನ್ನು ತೋರಿಸಿ ತಿದ್ದುವುದಂ ಅಧಿಕಾರ ಎಲ್ಲರಿಗೂ ಇದೆ. ಇದರಲ್ಲಿಯೂ ನನ್ನ ಮಿತ್ರರೂ ನನಗೆ ಸೌಂವಾಸ್ಪದರೂ ಆದ ಶ್ರೀಯುತ ಪುರಾಣೆಕರಿಗೆ ಹೆಚ್ಚಾಗಿಯೇ ಇದೆ. ಆದರೆ ಹೀಗೆ ತಪ್ಪುಗಳನ್ನು ತೋರಿಸಿಕೊಡುವುದರಲ್ಲಿ ನಾನು ಯಾವುದನ್ನು ಹೇಳಿದ್ದೇನೆ? ಏಕೆ ಹೇಳಿದ್ದೇನೆ? ಯಾವುದನ್ನು ಪ್ರತಿಪಾದನೆ ಮಾಡಿದ್ದೇನೆ? ಎನ್ನುವುದನ್ನೆಲ್ಲ ಯಥಾವತ್ತಾಗಿ ತೋರಿಸುವುದು ಧರ್ಮ; ಹಾಗೆ ಮಾಡದೆ ಇಲ್ಲದ ದೋಷಗಳನ್ನು ಹೊರಿಸುವುದು ಧರ್ಮವಲ್ಲ.

ಪುಟ ೩೨೭ ರಲ್ಲಿ ಶ್ರೀಯುತ ಪುರಾಣೇಕರು ಹೀಗೆ ಬರೆದಿದ್ದಾರೆ. "ಇನ್ನು ಕಾವ್ಯಗಳಲ್ಲಿ ಇಲ್ಲದ ಸಂಗತಿಗಳ ಬಗ್ಗೆ ಚರ್ಚಿಸುವುದೆಂದರೆ 'ಅವ್ಯಾಪಾರೇಷು ವ್ಯಾಪಾರಃ' ವಾಗುವುದು. ಇದರಲ್ಲಿ ಶ್ರೀಯುತ ಶ್ರೀನಿವಾಸಮೂರ್ತಿಗಳದಾದರೂ ಅದೇ ಹಾಡಾಗಿರುವುದು. ಅದು ಹೇಗೆಂದರೆ (೧) ಚಾಮರಸನು ತನ್ನ ಗ್ರಂಥದಲ್ಲೆಲ್ಲಿಯೂ ಶ್ರೀ ಪ್ರಭುವಿನ ಬೈಲಾದ ವಿಷಯಕ್ಕೆ ಹೇಳಿಲ್ಲವು. ಇದನ್ನು ಶ್ರೀಯುತ ಶ್ರೀನಿವಾಸಮೂರ್ತಿಗಳು ೩೭ನೇ ಪುಟದಲ್ಲಿ ಒಪ್ಪಿ, ಪುನಃ ಅದರ ಬಗ್ಗೆಯೇ ಚರ್ಚಿಸುವುದೂ, (೨) ಅಲ್ಲಮಪ್ರಭುವಿಗೆ ಅಲ್ಲಯ್ಯನೆಂದು ಬೇರೆ ಹೆಸರು ಚಾಮರಸನು ಹೇಳದಿರುವುದರಿಂದ ಅಲ್ಲಯ್ಯ ಈ ಹೆಸರು ಬೇರೊಬ್ಬ ಶಿವಶರಣರದು ಇರಬಹುದೆಂದೂ, (೩) ಚಾಮರಸನ ಕಾವ್ಯದಲ್ಲಿ ಅಕ್ಕನಮಹಾದೇವಿಯು ಕುಮಾರಿ ಎಂದು ಇದ್ದದ್ದು ಅವಳ ಲಗ್ನವಾಗಿತ್ತೆಂದು ಹೇಳಿ ದುರ್ಬಲ

ಪ್ರಮಾಣಗಳನ್ನು ಕೊಟ್ಟು ಅವುಗಳನ್ನು ಸಿದ್ಧಪಡಿಸಲಿಕ್ಕೆ ಯತ್ನಿಸಿರುವರು. ಅದು ಹೇಗೆ ಸಾಧ್ಯವು? ಬೇಕಾದರೆ ಇವುಗಳ ವಿಷಯವಾಗಿ ಐತಿಹಾಸಿಕ ದೃಷ್ಟಿಯಿಂದ ಸ್ವತಂತ್ರ ಗ್ರಂಥಗಳನ್ನು ಬರೆದು ಸಿದ್ಧಮಾಡಬೇಕು. ಇವನ್ನು ಬಿಟ್ಟು ಸುರಿತ ಲೇಖಕರು ಹೀಗೆ ಮಾಡುವುದು ಒಳ್ಳೆಯಲ್ಲವು. ಒಬ್ಬನ ಮೇಲೆ ಪ್ರ. ಲೀ. ಸಂಗ್ರಹದ ಪೀಠಿಕೆಯಿಂದ 'ಕಸಡಿ ಚಾಫಾಯಿ ದಾನಾಹಿ, ಆಣಾ ಘಟಕೇಜ ಘಸಂತ ನಾಹಿ' ಎಂಬಂತೆಯಾಗಿದೆ"

ಮೇಲೆ ಉದ್ಧರಿಸಿರುವ ಭಾಗದಲ್ಲಿ ಮೂರು ಅಂಶಗಳಿಗೆ ಇವುಗಳ ವಿಚಾರದಲ್ಲಿ ನಾನು ಹೇಳಬೇಕಾದ ಸಮಾಧಾನಗಳು ಕೆಲವಿವೆ.

(೧) ಶ್ರೀ ಪ್ರಭುವಿನ ಬಯಲಾದ ವಿಷಯ— ಚಾಮರಸನು ಪ್ರಭು ಬಯಲಾದ ವಿಷಯವನ್ನು ಹೇಳಿಲ್ಲ ಎನ್ನುವುದನ್ನು ನಾನು ತಿಳಿಸಿ ಪುಟ ೩೭ ರಲ್ಲಿ ಅಡಿ ಟಿಪ್ಪಣಿ ೪೮ ರಲ್ಲಿ ಹೀಗೆ ಬರೆದಿದ್ದೇನೆ "ಅಲ್ಲಮಪ್ರಭು ಲಿಂಗೈಕ್ಯನಾದ ಸಮಾಚಾರವನ್ನು ಚಾಮರಸನು ಹೇಳಿಲ್ಲ. ಅತನು ಬಯಲಾದ ಸ್ಥಳ ಶ್ರೀಪರ್ವತವೆಂದೂ ತೇರದಾಳವೆಂದೂ ಬಳ್ಳಿಗಾವೆಯೆಂದೂ ತಾಳಗುಂದವೆಂದೂ ಭಿನ್ನಾಭಿಪ್ರಾಯಗಳಿವೆ. ಪರಿಶಿಷ್ಟ I (VI) ನೋಡಿ" ಹೀಗೆ ಬರೆದು ಪರಿಶಿಷ್ಟದಲ್ಲಿ ಗ್ರಂಥಾಂತರಗಳಲ್ಲಿ ಹೇಳಿರುವುದನ್ನು ತಿಳಿಸಿದ್ದೇನೆ; ಆ ಗ್ರಂಥಗಳ ಹೆಸರುಗಳನ್ನೂ ತಿಳಿಸಿದ್ದೇನೆ. ಈ ಬಗ್ಗೆ ಚರ್ಚೆ ಮಾಡಿ ನನ್ನ ತೀರ್ಮಾನವನ್ನೇನೂ ಹೇಳಿಲ್ಲ. ಚಾಮರಸನು ಹೇಳಿರುವುದನ್ನು ನಾನು ಒಪ್ಪಿರುವನೆಂದು ಹೇಳುವುದು ಸರಿಯಲ್ಲ. ಪ್ರಭುವಿನ ಚರಿತ್ರೆಯನ್ನು ಪ್ರಸ್ತಾಪ ಮಾಡುವಾಗ ಬಯಲಾದ ಸ್ಥಳದ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿರುವುದೆಂದು ವಾಚಕರ ಸೌಕರ್ಯಕ್ಕಾಗಿ ತಿಳಿಸುವುದು ಹೇಗೆ ತಪ್ಪಾಗುವುದೋ ಶ್ರೀಯುತರು ಹೇಳಬೇಕು. (೨) ಅಲ್ಲಯ್ಯನ ವಿಚಾರ— ಇದನ್ನು ಶ್ರೀಯುತ ಪುರಾಣೇಕರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಪುಟ ೧೪ ರಲ್ಲಿ "ಪ್ರಭುಲಿಂಗಲೀಲೆ ಅಲ್ಲಮನ ಚರಿತ್ರೆಯಾಗಿದೆ" ಎಂದು ಹೇಳಿ ಅದೇ ಪುಟದ ಅಡಿಟಿಪ್ಪಣಿ ೨ ರಲ್ಲಿ "ಶಿವಶರಣನಾದ ಅಲ್ಲಯ್ಯನೆಂಬವನು ಬೇರೆ ಇದ್ದಾನೆ. ಇವನ ವಿಚಾರ ಶಿ. ಕ. ಸಾ. ಕಥೆಗಳಲ್ಲಿವೆ" ಎಂದು ತಿಳಿಸಿದ್ದೇನೆ. ಅಲ್ಲಮ, ಅಲ್ಲಮಪ್ರಭು, ಅಲ್ಲಯ್ಯ ಎಂದು ಮುಂತಾಗಿ ಹೆಸರುಗಳು ಒರುವಾಗ ನಮಗೆಲ್ಲ ಪರಿಚಿತನಾದ ಪೂಜ್ಯನಾದ ಪ್ರಭುದೇವರೆಂದು (ಸಾಮಾನ್ಯವಾಗಿ) ಅರ್ಥವಾಗುವದು ಸಹಜ. ಆದರೆ ಒಂದೇ ಹೆಸರಿನ

ರಣರು ಬೇರೆ ಬೇರೆ ಇರುತ್ತಾರೆ. ಸುಪ್ರಸಿದ್ಧನಾದ ಅಲ್ಲಮನ ಜೊತೆಗೆ ಅಷ್ಟೊಂದು ಪ್ರಸಿದ್ಧನಲ್ಲದ ಅಲ್ಲಯ್ಯನೆಂಬ ಶರಣನ ಹೆಸರು ಬೆರಕೆಯಾಗಿ ವಾಚಕರಿಗೆ ಸಂದೇಹ ಬರಬಾರದೆಂದು ಅಡಿಟಿಪ್ಪಣಿಯಲ್ಲಿ ಎಚ್ಚರಿಕೆ ಕೂಡ ಆಯಿತು. ಅಲ್ಲಮಪ್ರಭು ಅಲ್ಲದೆ ಅಲ್ಲಯ್ಯ ಎಂಬ ಶರಣ ಬೇರೆ ಇದ್ದಾನೆ.

ಅವನ ಕಥೆ ಶಿವಕಥಾ ಸಾಗರದಲ್ಲಿ ಹೀಗಿದೆ: ಅಲ್ಲಯ್ಯನೆಂಬ ಶರಣರು ವಿಭೂತಿ ರುದ್ರಾಕ್ಷ ಮೊದಲಾದ ಆತ್ಮಾವರಣದಲ್ಲಿ ಸಾವಧಾನವಾಗಿರುತ್ತ ದಿನದಿನವೂ ಕೈಲಾಸಕ್ಕೆ ಹೋಗಿ ಶಿವನ ಕೂಡ ಏಕಾಂತವ ಮಾಡಿ ಬರುತ್ತಿರಲು; ಮತ್ತೊಂದು ದಿವಸ ಎಂದಿನಂತೆ ಶಿವನ ಬಳಿಗೆ ಹೋಗಿ ಮಾತಾಡಲು ಶಿವನು ಸುಮ್ಮಗಿರಲು; ಆಗ ನಮ್ಮಲ್ಲಿ ಮಹಾದೇವನು ಏನು ತಪ್ಪು ಕಂಡನೋ ಆದ ಕಾರಣ ಮಾತಾಡಲಿಲ್ಲವೆಂದು ತಮ್ಮ ಪ್ರಾಣವಂ ಬಿಡುತ್ತಿರಲು; ಎಲೆ ಅಲ್ಲಯ್ಯ! ನಿಮ್ಮ ನಿಷ್ಠೆಯ ನೋಡುವರೆ ಸುಮ್ಮನಿರ್ದೆವಲ್ಲದೆ ಮತ್ತೊಂದಿಲ್ಲವೆಂದು ತಪ್ಪೊಳಿಂಬಿಟ್ಟು ಕೊಂಡರು".

ಇದರಿಂದ ಶ್ರೀಯುತರು ಅಲ್ಲಯ್ಯ, ಅಲ್ಲಮ ಎಂದು ಬರುವುದನ್ನೆಲ್ಲ ಮೂಲ ಅಲ್ಲಮಪ್ರಭುವೆಂದು ಭ್ರಮಿಸಬಾರದು. ಇನ್ನೂ ಒಂದು ಉದಾಹರಣೆಯನ್ನು ಕೊಡುತ್ತೇನೆ. "ಬಿಟ್ಟ ಮಂಡೆಯ ಅಲ್ಲಮಪ್ರಭು" ಎಂಬ ಶರಣ ಇನ್ನೊಬ್ಬನಿದ್ದಾನೆ. ವೀರಶೈವಾಮೃತ ಮಹಾಪುರಣ ಎಂಟನೆಯ ಕಾಂಡ ಎಂಟನೆಯ ಸಂಧಿ ೨೭ನೆಯ ಪದ್ಯದಲ್ಲಿ ಈತನ ವಿಚಾರವನ್ನು ಶ್ರೀಯುತರು ಓದಿ ತಿಳಿದುಕೊಳ್ಳಬಹುದು. ಮತ್ತೊಂದು ಉದಾಹರಣೆಯನ್ನು ತೆಗೆದುಕೊಳ್ಳೋಣ. 'ಗುಹೇಶ್ವರನಲ್ಲಯ್ಯ' ಎಂಬ ಅಂಕಿತ, ವಚನಗಳಲ್ಲಿ ಬಂದರೆ ಸಾಮಾನ್ಯವಾಗಿ ಮೂಲ ಅಲ್ಲಮ ಪ್ರಭುವಿನ ಕಡೆಗೆ ನಮ್ಮ ದೃಷ್ಟಿ ಹೋಗುವದು ಸಹಜ. ಆದರೆ ಗ್ರಂಥಗಳನ್ನು ಪರಿಶೀಲಿಸಿದರೆ ಈ ಅಂಕಿತ ಗಾಣದ ಕಣ್ಣಪ್ಪನದೆಂದು ತಿಳಿಯುತ್ತದೆ. ವಚನ ಶಾಸ್ತ್ರಸಾರವನ್ನು ಶಿವಯೋಗಮಂದಿರದಲ್ಲಿರುವ "ಸರ್ವ ಪುರಾತನರ ವಚನ" ಎಂಬ ಗ್ರಂಥವನ್ನು ನೋಡಿದರೆ ಈ ವಿಷಯ ಮಂದಟ್ಟಾಗುತ್ತದೆ. ಆದುದರಿಂದ ಒಂದೇ ಹೆಸರಿನ ಶರಣರನ್ನು ವಿಂಗಡಿಸುವದರಲ್ಲಿ ಬಹಳ ಎಚ್ಚರಿಕೆ ಬೇಕಾದೀತು.

(೨) ಅಕ್ಕ ಮಹಾದೇವಿಯ ವಿಚಾರ:— ಪ್ರಭುಲಿಂಗಲೀಲೆಯಲ್ಲಿ ಬಸವಣ್ಣನವರ ವಿಚಾರ, ಅಕ್ಕ ಮಹಾದೇವಿಯ ವಿಚಾರ ಮುಂತಾದವು ಬರುತ್ತವೆ. ಬಸವಣ್ಣನವರ ಮತ್ತು ಅಕ್ಕ ಮಹಾದೇವಿಯರ ವಿಚಾರ

ಗಳಲ್ಲಿ ಸಂಪೂರ್ಣವಾದ ಬೇರೆ ಸ್ವತಂತ್ರ ಗ್ರಂಥಗಳೂ ಇವೆ. ಬಸವಣ್ಣನವರ ವಿಚಾರದಲ್ಲಿ ಬಸವ ಪುರಾಣಾದಿಗಳು ಪ್ರಸಿದ್ಧವಾಗುವವು. ಅಕ್ಕ ಮಹಾದೇವಿಯ ವಿಚಾರದಲ್ಲಿ ಮಹದೇವಿಯಕ್ಕನ ರಗಳೆ ಮತ್ತು ಮಹದೇವಿಯಕ್ಕನ ಪುರಾಣ ಪ್ರಸಿದ್ಧವಾದುವು. ಪ್ರಭುಲಿಂಗಲೀಲೆಯಲ್ಲಿ ಬರುವ ಬಸವಣ್ಣನವರ ಮತ್ತು ಅಕ್ಕ ಮಹಾದೇವಿಯರ ಭಾಗಗಳನ್ನು ಹಾವಮರಸನು ಹೇಳಿದಂತೆ ಬರೆಯುವಾಗ ಪುಟ ೨೭ ಅಡಿ ಟಿಪ್ಪಣಿ ೩೫ ರಲ್ಲಿ "ಬಸವಣ್ಣನವರು, ಮಹದೇವಿಯಕ್ಕ ಮುಂತಾದವರ ಜನ್ಮ ಕಾರಣಗಳು ವೀರಶೈವ ಗ್ರಂಥಗಳಲ್ಲಿ ಒಂದೇ ರೀತಿಯಾಗಿಲ್ಲ" ಎಂದು ಸೂಚಿಸಿದ್ದೇನೆ. ಮುಂದೆ ಬರುವ ಕಥೆಯ ವ್ಯತ್ಯಾಸಗಳನ್ನು ಅಲ್ಲಲ್ಲಿ ಅಡಿ ಟಿಪ್ಪಣಿಗಳಲ್ಲಿ ಹೇಳಿದ್ದೇನೆ. ಹೀಗೆಯೇ ಪುಟ ೨೭ ಅಡಿ ಟಿಪ್ಪಣಿ ೩೭ ರಲ್ಲಿ "ಮಹದೇವಿಯಕ್ಕ ಮತ್ತು ಕೌಶಿಕ ಇವರಿಗೆ ವಿವಾಹವಾಯಿತೇ? ಎಂಬದನ್ನು ಹಾವಮರಸನು ಹೇಳಿಲ್ಲ. ಈ ವಿಚಾರದಲ್ಲಿ ಗ್ರಂಥಗಳಲ್ಲಿ ಏಕಾಭಿಪ್ರಾಯವಿಲ್ಲ. ಪರಿಶಿಷ್ಟ I (IV) ನೋಡಿ" ಎಂದು ಹೇಳಿ ಪರಿಶಿಷ್ಟದಲ್ಲಿ ಗ್ರಂಥಗಳಲ್ಲಿರುವುದನ್ನು ತಿಳಿಸಿದ್ದೇನೆ. ಈ ಗ್ರಂಥಗಳೆಲ್ಲ ವೀರಶೈವ ಗ್ರಂಥಗಳೇ. ನಾನು ಇವುಗಳನ್ನೆಲ್ಲ ಇಟ್ಟುಕೊಂಡು ಚರ್ಚೆ ಮಾಡಿಯೂ ಇಲ್ಲ. ಯಾವುದನ್ನೂ ಸಿದ್ಧ ಮಾಡಿಯೂ ಇಲ್ಲ. ಬೇಕಾದವರು ಪೀಠಿಕೆಯನ್ನೂ ಪರಿಶಿಷ್ಟವನ್ನೂ ನೋಡಬಹುದು.

ಪುರಾತನ ಗ್ರಂಥವನ್ನು ಪರಿಷ್ಕರಿಸಿ ಪೀಠಿಕೆಯೊಂದಿಗೆ ಪ್ರಕಟಿಸುವಾಗ ಕಥೆಗೆ ಮೂಲವು ಯಾವುದಿರಬಹುದು? ಇದೇ ವಿಚಾರವನ್ನು ಹೇಳಿರುವ ಇತರ ಗ್ರಂಥಗಳಲ್ಲಿ ಯಾವ ವ್ಯತ್ಯಾಸಗಳಿರಬಹುದು? ಎಲ್ಲೆಲ್ಲಿ ಭಿನ್ನಾಭಿಪ್ರಾಯಗಳು ಬಂದಿವೆ? ಎಂಬವನ್ನೆಲ್ಲ ತೋರಿಸಿ ವಿದ್ಯಾರ್ಥಿಗಳಾಗಲಿ ಸಾಮಾನ್ಯ ಸಾಹಿತಿಗಳಾಗಲಿ ವ್ಯಾಸಂಗ ಮಾಡುವದಕ್ಕೆ ಅನುಕೂಲಿಸುವಂತೆ ಪ್ರಕಟಿಸುವದು ಪದ್ಧತಿಯೆನ್ನುವುದು ಇತರ ಭಾಷೆಗಳಲ್ಲಿನ ಇಂಥ ಗ್ರಂಥಗಳನ್ನು ನೋಡುವುದರಿಂದ ತಿಳಿಯಬಹುದು. ನಾನು ಮಾಡಿರುವುದು ಅಷ್ಟೇ ಅಲ್ಲದೆ ಗ್ರಂಥಗಳಲ್ಲಿ ಇಲ್ಲದ್ದನ್ನು ಹೇಳುವುದನ್ನಾಗಲಿ, ನನ್ನ ಮನಸ್ಸಿಗೆ ಬಂದಂತೆ ಸಿದ್ಧಾಂತ ಮಾಡುವುದನ್ನಾಗಲಿ ಮಾಡಿಲ್ಲ.

ಪ್ರಭು ದೇವರು ಐಕ್ಯವಾದ ಸ್ಥಳದ ವಿಚಾರದಲ್ಲಿ ಶ್ರೀಯುತರು ತಮ್ಮ ಲೇಖನಗಳನ್ನು ಮುಗಿಸಿದ ಮೇಲೆ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ.

———

ಕಲ್ಯಾಣ ಪಟ್ಟಣ.

(ಲೇ:– ಶ್ರೀಯುತ ವೀರಭದ್ರಪ್ಪ ಬಸಪ್ಪ ಹಾಲಭಾವಿ. ಬಿ. ಎ. ಎಲ್. ಎಲ್. ಬಿ ಪ್ಲೀಡರ್ ಫಸ್ಟ್‌ಕ್ಲಾಸ ಸಬ್‌ಜಜ್ಜ ಧಾರವಾಡ.)

ಬಹಳ ದಿವಸಗಳಿಂದ ನನಗೆ ಕಲ್ಯಾಣ ಪಟ್ಟಣವನ್ನ ನೋಡುವ ಕುತೂಹಲವಿತ್ತು. ಒಬ್ಬಿಂಟಿಗನಾಗಿ ಪ್ರವಾಸ ಮಾಡುವದು ತ್ರಾಸದಾಯಕವು. ನನಗಂತೂ ಬಹುತರ ಅಶಕ್ಯವು. ನನ್ನ ಮಿತ್ರರಾದ ಶ್ರೀ. ರಾ. ಬುದ್ಧಯ್ಯ ಸ್ವಾಮಿ ಪುರಾಣಿಕ ಇವರು ಸೊಲ್ಲಾಪುರಕ್ಕೆ ಗೃಹಕೃತ್ಯದ ಸಲುವಾಗಿ ಹೋಗಬೇಕಾಯಿತು. ಅವರನ್ನು ಕೇಳಲಾಗಿ ಮುಂದ ಕಲ್ಯಾಣವನ್ನು ನೋಡಲಿಕ್ಕೆ ಬರುತ್ತೇವೆಂದು ಅವರು ಒಪ್ಪಿಕೊಂಡರು. ನಾವಿಬ್ಬರೂ ಕೂಡಿ ಸೊಲ್ಲಾಪುರಕ್ಕೆ ಹೋಗಿ ಅಲ್ಲಿಯ ಪವಿತ್ರ ಐತಿಹಾಸಿಕ ಸ್ಥಾನಗಳಾದ ಶ್ರೀ ಸಿದ್ಧರಾಮೇಶ್ವರನ ದೇವಾಲಯ, ಅವನಿಗೆ ಶ್ರೀ ಮಲ್ಲಿಕಾರ್ಜುನ ಮತ್ತು ಶ್ರೀಮದಲ್ಲಮ ಪ್ರಭುದೇವರು ದರ್ಶನಕೊಟ್ಟ ಸ್ಥಳಗಳು, ಶ್ರೀ ರೇವಣಸಿದ್ಧೇಶ್ವರನ ದೇವಾಲಯ, ಸೊನ್ನಲಿಗೆಯಲ್ಲಿ ಸಿದ್ಧರಾಮೇಶ್ವರನ ತಾಯಿಯಾದ ಸುಗ್ಗಲದೇವಿಯನ್ನು ರೇವಣಸಿದ್ಧೇಶ್ವರನು ಕಂಡು ಆಕೆಯ ಗರ್ಭಕ್ಕೆ ನಮಸ್ಕರಿಸಿ ಆಕೆಯಿಂದ ಸಿದ್ಧರಾಮೇಶ್ವರನು ಹುಟ್ಟುವದನ್ನು ಅರುಹಿದ ಸ್ಥಾನ, ಮುಂತಾದವುಗಳನ್ನು ನೋಡಿ ಸೊಲ್ಲಾಪುರದಲ್ಲಿ ವಾಸಿಸುವ ನಾಲ್ವತ್ತವಾಡ ಶ್ರೀ ಶಿವಶರಣ ವೀರಪ್ಪಯ್ಯನವರ ಸುಪುತ್ರಿಯರಾದ ಶರಣಮ್ಮನವರ ದರ್ಶನವನ್ನು ತೆಗೆದುಕೊಂಡೆವು. ಮರುದಿವಸ ರೇಲ್ವೆಯ ಮಾರ್ಗವಾಗಿ ಕಲಬುರ್ಗಿಗೆ ಹೋಗಿ ಶ್ರೀ ಶರಣ ಬಸವೇಶ್ವರನ ದರ್ಶನ ತೆಗೆದುಕೊಂಡು ಗದ್ದುಗೆಮಠದಲ್ಲಿ ಸ್ಥಾಪಿಸಿರುವ ಶ್ರೀಮದ್ವೀರಶೈವ ಬಸವರಾಜ ಫ್ರೀ ಬೋರ್ಡಿಂಗ ಮುಂತಾದ ಸಂಸ್ಥೆಗಳನ್ನು ಸಂದರ್ಶಿಸಿದೆವು. ಅಲ್ಲಿಯ ವೀರಶೈವ ತರುಣ ಸಂಘದವರ ವಿನಂತಿಯ ಮೇರೆಗೆ 'ವೀರಶೈವ ಮತತತ್ವ ಮತ್ತು 'ಭಕ್ತಿ' ಈ ವಿಷಯಗಳ ಮೇಲೆ ಗದ್ದಿಗಿ ಮಠದಲ್ಲಿ ಶೀ. ರಾ. ಬುದ್ಧಯ್ಯ ಸ್ವಾಮಿಗಳು ರಾತ್ರಿ ೮ ರಿಂದ ೧೦ ಘಂಟೆಯ ವರೆಗೆ ಕೂಡಿದ ಜನರ ಮೇಲೆ ಒಳ್ಳೇ ಪರಿಣಾಮವಾಗುವಂತೆ ಉಪದೇಶ ಮಾಡಿದರು. ಮರುದಿವಸ ಸರ್ವಿಸ ಮೊಟಾರದಿಂದ ಕಲ್ಯಾಣಕ್ಕೆ ಹೋದೆವು. ಈ ಸರ್ವಿಸ ಮೊಟಾರದ

ಒಡೆಯರು ಗದಗಿನ ರಾ ರಾ. ಭೂಮರಡ್ಡಿ ಬಸಪ್ಪನವರು. ಆ ಭಾಗದಲ್ಲಿ ಕೆಲವು ಮಾರ್ಗಗಳ ಮೇಲೆ ಇವರ ಒಂದೇ ಮೋಟರ ಸರ್ವಿಸ ಇರುವದು. ಕಲ್ಯಾಣದಲ್ಲಿ ಯಾತ್ರಿಕರಿಗೆ ಇಳಕೊಳ್ಳಲಿಕ್ಕೆ ಅನುಕೂಲತೆಯೇ ಇರುವದಿಲ್ಲ. ರಾ. ಭೂಮರಡ್ಡಿ ಬಸಪ್ಪನವರ ಪುತ್ರರಾದ ರಾ. ತೋಟಪ್ಪನವರೂ ಮತ್ತು ಹುಮನಾಬಾದದಲ್ಲಿರುವ ಇದೇ ಮೋಟರ ಸರ್ವಿಸದ ವ್ಯವಸ್ಥಾಪಕರಾದ ಮೆಣಸಿನಕಾಯಿ ಪರಪ್ಪನವರೂ ನಮಗೆ ಕಲ್ಯಾಣದಲ್ಲಿ ಇಳಕೊಳ್ಳುವ ಮತ್ತು ಅಲ್ಲಿಯ ಎಲ್ಲ ಸ್ಥಳಗಳನ್ನು ತೋರಿಸುವ ವ್ಯವಸ್ಥೆಯನ್ನು ಮಾಡಿ ನಮಗೆ ಬಹಳೇ ಉಪಕಾರ ಮಾಡಿದರು.

ಕಲ್ಯಾಣ ಪಟ್ಟಣವು ಸೊಲ್ಲಾಪುರಕ್ಕೆ ೮೨ ಮೈಲುಗಳ ಮತ್ತು ಕಲಬುರ್ಗಿಯಿಂದ ಉತ್ತರಕ್ಕೆ ೫೮ ಮೈಲುಗಳ ಅಂತರದಲ್ಲಿದೆ. ಈ ಪಟ್ಟಣಕ್ಕೆ ಈ ಎರಡೂ ಮಾರ್ಗಗಳಿಂದ ಸರ್ವಿಸ ಮೋಟಾರದಲ್ಲಿ ಪ್ರಯಾಣ ಮಾಡಲು ಅನುಕೂಲವಿದೆ. ಇದು ನಿಜಾಮರಾಜ್ಯದೊಳಗಿನ ಒಂದು ಜಹಾಗಿರಿಯ ಮುಖ್ಯ ಸ್ಥಳವಿದೆ. ಈ ಜಹಾಗಿರಿಯ ಮುಖ್ಯಸ್ಥರಿಗೆ ನವಾಬರೆನ್ನುತ್ತಾರೆ. ಅವರ ಹೆಸರು ಮೈದಿ ಹುಸೇನಖಾನ. ಇವರಿಗೆ ಜಮಾಲುದ್ದೀನಖಾನನೆಂಬ ಒಬ್ಬ ತಮ್ಮನಿದ್ದಾನೆ. ಜಹಾಗೀರಿನ ಆಡಳಿತವು ಈಗ ನಿಜಾಮ ಸರಕಾರದ ಕೈಕೆಳಗಿದೆ. ಇದರ ವಾರ್ಷಿಕ ಉತ್ಪನ್ನವು ಸುಮಾರು ೩॥ ಲಕ್ಷ ರೂಪಾಯಿ. ಇಲ್ಲಿಯ ಈಗಿನ ಜನವಸ್ತಿಯು ಸುಮಾರು ೨೦ ಸಾವಿರ ಇದ್ದು ಇದರಲ್ಲಿ ತುರುಕರ ಸಂಖ್ಯೆಯೇ ಹೆಚ್ಚಿರುವದು. ಉಳಿದಿದ್ದರಲ್ಲಿ ಲಿಂಗಾಯತರ ಸಂಖ್ಯೆಯು ಅರ್ಧದಷ್ಟು ಇದೆ.

ಪಟ್ಟಣದ ಅರ್ಧದಷ್ಟು ಭಾಗವು ಮೇಲಿಂದ ಮೇಲೆ ಒದಗಿದ ಪ್ಲೇಗಿನ ಹಾವಳಿಯಿಂದ ಹಾಳು ಬಿದ್ದು ಬಿಟ್ಟಿದೆ. ಇದರ ಸುತ್ತಲಿರುವ ಪೂರ್ವಕಾಲದ ಕುರುಹುಗಳ ಮೇಲಿಂದ ಶ್ರೀ ಬಸವೇಶ್ವರನ ಕಾಲದಲ್ಲಿ ಇದರ ವಿಸ್ತಾರವು ೩೬ ಚೌರಸ ಮೈಲು ಇದ್ದಿತೆಂಬುದು ನಿಜವೆಂದು ಕಾಣುತ್ತದೆ. ಇದರ ಈಗಿನ ಸ್ಥಿತಿಯನ್ನು ನೋಡಲಾಗಿ ಇದು ಸಮಾಜ ಸುಧಾರಣೆಯಲ್ಲಿಯೂ ಮತ್ತು ವಿದ್ಯೆಯಲ್ಲಿಯೂ ಬಹಳೇ ಹಿಂದುಳಿದಂತೆ ಕಾಣಿಸುತ್ತದೆ.

ಇಲ್ಲಿಯ ಮುಖ್ಯ ಉದ್ಯೋಗವು ಕಣಗಳನ್ನು ನೇಯುವುದಿದು ಸುಮಾರು ೫೦೦೦ ಮಗ್ಗಗಳಿವೆ. ಈ ಪಟ್ಟಣದ ಸುತ್ತು ಮುತ್ತು ಮುರಡಿ

ಭೂಮಿ ವಿಶೇಷವಿದ್ದದರಿಂದ ಒಕ್ಕತನವು ಹೆಚ್ಚಾಗಿ ನಡೆಯುವದಿಲ್ಲ. ಐತಿಹಾಸಿಕ ನೋಡತಕ್ಕಂಥ ಸ್ಥಳಗಳು ಅನೇಕ ಇರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ—

ಬಿಜ್ಜಳರಾಜನ ಕಾಲದ ಊರೊಳಗಿನ ಕಿಲ್ಲೆಯು ನೆಲಸಮವಾಗಿದೆ. ಅತನ ತರುವಾಯ ಈ ಪ್ರಾಂತವನ್ನು ಆಳಿದ ರಾಜರು ಕಟ್ಟಿಸಿದ ಕೋಟೆಯು ಪಟ್ಟಣದ ಉತ್ತರ ದಿಕ್ಕಿಗೆ ಊರ ಸಮೀಪದಲ್ಲಿಯೇ ಇರುವುದು. ಅದು ಈಗಲೂ ಒಳ್ಳೆಯ ಸ್ಥಿತಿಯಲ್ಲಿದ್ದು ನವಾಬರ ವಾಸಸ್ಥಳವೂ ಮತ್ತು ಈ ಜಹಾಗೀರಿನ ಮುಖ್ಯ ಕಚೇರಿಯ ಸ್ಥಳವೂ ಆಗಿರುತ್ತದೆ.

ಪಟ್ಟಣದ ಮಧ್ಯದಲ್ಲಿ ಶ್ರೀ ಬಸವೇಶನ ದೇವಸ್ಥಾನವಿದ್ದು ಅಲ್ಲಿ ದ್ವಿಕಾಲ ಪೂಜೆಯನ್ನು ಬಾಳೆಹಳ್ಳಿಯ ಶಾಖೆಗೆ ಸೇರಿದ ಶ್ರೀ ವಿರುಪಾಕ್ಷ ಸ್ವಾಮಿಯೆಂಬ ಪಟ್ಟಾಧಿಕಾರಿಗಳು ಮಾಡುತ್ತಿರುವರು. ಅಲ್ಲಿಂದ ಉತ್ತರಕ್ಕೆ ಸ್ವಲ್ಪ ಅಂತರದ ಮೇಲೆ ಬಸವೇಶ್ವರನ ಪರುಷಗಟ್ಟೆಯ ಸ್ಥಾನವಿದ್ದು ಆ ಕಟ್ಟೆಯು ಈಗ ನಾಶವಾಗಿ ಅಲ್ಲಿ ಕಟಕರು ಒಂದು ಹೊಸ ಕಟ್ಟೆಯನ್ನು ಕಟ್ಟಿಸಿಕೊಂಡು ಅದರ ಮೇಲೆ ಮಾಂಸ ಮಾರುವ ಉದ್ಯೋಗವನ್ನು ಸಾಗಿಸಿರುತ್ತಾರೆ. ಈ ಕಟ್ಟೆಯ ತುರುಕರು ಈಗಲೂ ಇದು ಬಸವಣ್ಣನವರ ಕಟ್ಟೆಯೆಂದೇ ಹೇಳುತ್ತಾರೆ. ಇದರ ಸಮೀಪದಲ್ಲಿಯೇ ಬಸವೇಶ್ವರನ ಕಾಲದ ಕರಿಮಲ್ಲಿಗೆಯ ಕಂಟಿ ಇದ್ದುದನ್ನು ಈಗಲೂ ಜನರು ಹೇಳುತ್ತಾರೆ.

ಈ ಪಟ್ಟಣಕ್ಕೆ ದಕ್ಷಿಣಕ್ಕೆ ೨ ಮೈಲುಗಳ ಮೇಲೆ ತ್ರಿಪುರಾಂತವೆಂಬ ಒಂದು ಸಣ್ಣ ಹಳ್ಳಿಯು ಇರುವುದು. ಅದರ ಪಶ್ಚಿಮಕ್ಕೆ ಪಕ್ಕದಲ್ಲಿಯೇ ಸುಮಾರು ೪ ಮೈಲು ಸುತ್ತಳತೆಯುಳ್ಳ ತ್ರಿಪುರಾಂತಕವೆಂಬ ಹೆಸರಿನ ಕೆರೆಯು ನೀರಿನಿಂದ ತುಂಬಿರುವುದು. ಈ ಕೆರೆಯ ನೀರನ್ನೇ ೭—೮ ಮೈಲುಗಳ ವರೆಗಿನ ಭೂಮಿಯ ಸಾಗುವಳಿಗೆ ಉಪಯೋಗಿಸುತ್ತಾರೆ. ಈ ಕೆರೆಯ ಪಶ್ಚಿಮ ದಂಡೆಯ ಮೇಲೆ ಅತಿ ವಿಶಾಲವಾದ ಪಕ್ಷಿಯ ಬನವಿದ್ದು ಅದರ ಮಧ್ಯದಲ್ಲಿ ಶ್ರೀ ರೇವಣಸಿದ್ದೇಶ್ವರರ ಮಕ್ಕಳಾದ ಶ್ರೀ ಘನಲಿಂಗ ರುದ್ರಮುನಿಗಳ ಗವಿಯು ಇರುವುದು. ಇದರ ಮುಂಭಾಗದಲ್ಲಿ ೭ ಕಮಾನುಗಳುಳ್ಳ ೭ ಅಂಕಣಗಳಿದ್ದು ಮಧ್ಯದಲ್ಲಿ ೫೦ ಅಡಿಗಳಷ್ಟು ವಿಸ್ತಾರವಾದ ಗವಿಯು ಇರುವದು. ಈ ಗವಿಯಲ್ಲಿ ಒಂದು ಲಿಂಗವಿದೆ. ಮುಂಭಾಗದಲ್ಲಿ ದಕ್ಷಿಣ ದಿಕ್ಕಿನ ಕೊನೆಯಲ್ಲಿ ಶ್ರೀ ರುದ್ರಮುನಿಗಳ ಶಿಷ್ಯ

ರಾದ ಶ್ರೀ ವೀರೇಶ್ವರ ಗದ್ದುಗೆ ಇದೆ. ದೇವಾಲಯದ ಮುಂದೆಯೇ ೧೦-೧೨ ದೊಡ್ಡ ಹುಣಸಿ ಮರಗಳಿದ್ದು ಅವುಗಳ ಮಧ್ಯದಲ್ಲಿ ಒಂದು ಸೀ ಸೀರಿನ ಬಾವಿ ಇರುತ್ತದೆ. ಈ ದೇವಸ್ಥಾನದ ಪೂಜೆಯು ತ್ರಿಪುರಾಂತದ ಭಕ್ತರ ಸಹಾಯದಿಂದ ನಡೆಯುತ್ತಿದೆ. ಈ ಗವಿಯ ಹಿಂಭಾದಲ್ಲಿ ಶ್ರೀ ಬಸವೇಶ್ವರನ ಅನುಭವ ಮಂಟಪವಿದ್ದು ಅದು ಈಗ ನೆಲಸಮವಾಗಿದೆಯೆಂದು ಹೇಳುತ್ತಾರೆ.

ಕೆರೆಯ ಉತ್ತರ ದಂಡೆಯಮೇಲೆ ಒಂದು ಪುರಾತನ ವಿಶಾಲವಾದ ಧರ್ಮಶಾಲೆ ಇದೆ. ಅದರ ಸಮೀಪದಲ್ಲಿಯೇ ಅಕ್ಕನಾಗಮ್ಮನ ಗವಿಯು ಇರುವುದು. ಈ ಗವಿಯ ಮಹಾದ್ವಾರವು ಉತ್ತರಕ್ಕಿದ್ದು ಅದರ ಎದುರಿಗೆ ೫೫ ಅಂಕಣಗಳ ಪಡಸಾಲೆ ಇರುವುದು. ಗವಿಯ ಒಳಗೆ ಹೋಗುವ ಬಾಗಿಲವು ಪಶ್ಚಿಮ ದಿಕ್ಕಿಗಿದೆ. ಬಾಗಿಲದ ಅಳತೆಯು ಒಬ್ಬ ಮನುಷ್ಯನು ಮಾತ್ರ ಕುಳಿತುಕೊಂಡು ಹೋಗುವಷ್ಟಿದೆ. ಒಳಗೆ ಗವಿಯು ದಕ್ಷಿಣ ದಿಕ್ಕಿಗೆ ಸಾಗಿ ಮುಂದೆ ಮತ್ತೆ ಪಶ್ಚಿಮಕ್ಕೆ ತಿರುಗಿರುತ್ತದೆ. ಅಲ್ಲಿ ಮಧ್ಯದಲ್ಲಿ ಒಂದು ಲಿಂಗವಿದ್ದು ಲಿಂಗದ ಎರಡೂ ಮಗ್ಗಲಿಗೆ ಪಾರ್ವತಿ ಸಮೇತವಾದ ಈಶ್ವರನ ಕಲ್ಲಿನ ಮೂರ್ತಿಯು ಇರುವುದು. ಈ ಗವಿಯಲ್ಲಿಯ ಯಾವ ಮೂರ್ತಿಗಳಿಗೂ ಪೂಜೆಯು ನಡೆಯುವಂತೆ ಕಾಣುವುದಿಲ್ಲ. ಗವಿಯ ತುಂಬೆಲ್ಲ ಕತ್ತಲೆ ಇದ್ದು ಕಣ್ಣು ಕಸ್ಪಡಿಗಳ ವಾಸಸ್ಥಾನವಾಗಿದೆ. ದೀಪದ ಸಹಾಯವಿಲ್ಲದೆ ಒಳಗೆ ಹೋಗಲು ಸಾಧ್ಯವಿಲ್ಲ.

ತ್ರಿಪುರಾಂತಕನ ಕರೆಯ ವಾಯವ್ಯ ದಿಕ್ಕಿಗೆ ಶ್ರೀ ಮಡಿವಾಳ ಮಾಚಿದೇವನ ೯ ಅಂಕಣಗಳ ಗುಡಿಯಿದೆ. ಗುಡಿಯು ಸುತ್ತಲೂ ಹೊಂಡವಿದೆ. ಹೊಂಡದ ತುಂಬೆಲ್ಲ ಸಹಸ್ರ ದಳದ ಬಿಳೀ ಕಮಲದ ಬಳ್ಳಿಗಳಿವೆ. ಗುಡಿಯಲ್ಲಿ ಒಂದೇ ಪಾನ ಬಟ್ಟಲದಲ್ಲಿ ಎರಡು ಲಿಂಗಗಳಿದ್ದು ಅವು ಗುರು ಶಿಷ್ಯರವು ಎಂದು ಹೇಳುತ್ತಾರೆ. ಗುಡಿಯ ಮುಂದಿನ ಅಂಗಳದಲ್ಲಿ ಒಂದು ಬಾವಿಯಿದ್ದು ಅಲ್ಲಿಯೇ ಮಾಚಿದೇವನು ಶರಣರ ಬಟ್ಟೆಗಳನ್ನು ತೊಳೆಯುತ್ತಿದ್ದನೆಂದು ಹೇಳುತ್ತಾರೆ.

ಈ ಗುಡಿಯ ಈಶಾನಕ್ಕೆ ಗದ್ದುಗಿಮಠವೆಂಬ ಶ್ರೀ ಅಲ್ಲಮಪ್ರಭುವಿನ ಮಠವಿದೆ. ಇಲ್ಲಿ ಒಬ್ಬ ವಿರಕ್ತ ಮೂರ್ತಿಗಳಿರುತ್ತಾರೆ. ಇದಕ್ಕೆ ಸ್ಥಿರಚರವಾದ ಯಾವ ಆಸ್ತಿಯೂ ಇರುವದಿಲ್ಲ. ಇಲ್ಲಿ ನಿತ್ಯ ಪೂಜೆಯು ನಡೆಯುತ್ತಿರುತ್ತದೆ. ಇದರ ಆಗ್ನೇಯಕ್ಕಿರುವ ಮರಡಿಯ ಮೇಲೆ ಶ್ರೀ ಬಸ

ಸೇಶ್ವರನ ಅರಮನೆಯಿತ್ತೆಂದು ಹೇಳುತ್ತಾರೆ. ಅದರ ಕೆಳಬದಿಗೆ ಗಂಜೀ ಕೆರೆಯ ಸ್ಥಾನವಿದೆ. ಬಸವೇಶ್ವರನ ಕಾಲದಲ್ಲಿ ಲಕ್ಷವ ಮೇಲೆ ತೊಂಬತ್ತಾರು ಸಾವಿರ ಗಣಂಗಳ ಸಲುವಾಗಿ ಮಾಡಿದ ಜೋನವನ್ನು ಬಸಿದ ನೀರು ಬಂದು ಇಲ್ಲಿ ನಿಲ್ಲುತ್ತಿದುದರಿಂದ ಇದಕ್ಕೆ ಗಂಜೀಕೆರೆಯೆಂದು ಕರೆಯುತ್ತಿದ್ದರೆಂದು ಹೇಳುತ್ತಾರೆ. ಕಲ್ಯಾಣದ ಪೂರ್ವ ದಿಕ್ಕಿಗೆ ಸುಮಾರು ೧೨ ಮೈಲು ಅಂತರದ ಮೇಲೆ ಶ್ರೀ ಪೋಳಗಿ ಮಾರಯ್ಯನ ಗವಿಯು ಈಗ್ಯೂ ಒಳ್ಳೇ ಸ್ಥಿತಿಯಲ್ಲಿದೆ. ಅದರ ಹತ್ತರ ಒಂದು ಹಳೇ ಹೆಸರು ಗೊತ್ತಿಲ್ಲದ ದೊಡ್ಡ ಮರವಿದೆ. ಇದು ಮಾರಯ್ಯನು ತಂದಿಟ್ಟ ಕಟ್ಟಿಗೆಯ ಹೊರೆಯು ಚಿಗಿತು ಬೆಳೆದಿರುವದೆಂದು ಜನರು ಹೇಳುತ್ತಾರೆ.

ಈ ಪಟ್ಟಣದ ಪೂರ್ವ ಭಾಗದಲ್ಲಿ ಪೀರ ಪಾಚ್ಛಾನ ಬಂಗ್ಲೆಯೆಂದು ಒಂದು ವಿಶಾಲವಾದ ಮುಸಲ್ಮಾನ ಸತ್ಪುರುಷನ ಗೋರಿಯು ಸ್ಥಾನವಿದೆ. ಇದರ ವಿಷಯವಾಗಿ ಜನರು ಹೇಳುವದೇನಂದರೆ—

"ಕಲ್ಯಾಣ ಪ್ರಾಂತವು ಇಂತರ ದೌಲಾ ಎಂಬ ಫಕೀರನಿಗೆ ಜಹಾಗೀರು ದೊರೆಯಿತು. ಈತನ ಗುರು ನಿಲಂಗಿ ಎಂಬ ನ್ಯಾವುದ ವೀರಪಾಚ್ಛಾ ಎಂಬವನು ಈತನ ಗೋರಿಯನ್ನು ಕಲ್ಯಾಣದ ಶಿವಾನುಭವ ಮಂಟಪದ ಕಲ್ಲುಗಳಿಂದ ಮಾಡಿದ ಮಂಟಪದಲ್ಲಿ ಮಾಡಬೇಕೆಂದು ಇಂತರ ದೌಲಾ ಫಕೀರನು ಯೋಚಿಸಿ ಅದರಂತೆ ಮಂಟಪವನ್ನು ಮಾಡಿಸಿದನು. ಪೀರ ಪಾಚ್ಛಾನು ನಿಲಂಗಿಯಲ್ಲಿ ತೀರಲು ಅವನ ದೇಹವನ್ನು ಕಲ್ಯಾಣಕ್ಕೆ ತರುವಾಗ ದಾರಿಯಲ್ಲಿ ಅದನ್ನಿಟ್ಟು ಅದನ್ನು ತರುವವರು ನವಾಜ ಮಾಡಿ ನೋಡುವಷ್ಟರಲ್ಲಿ ಪಿಂಜರದಲ್ಲಿ ಪೀರಪಾಚ್ಛಾನ ಶರೀರವು ಇಲ್ಲದಂತಾಗಿ ಅದರ ಬದಲಾಗಿ ಒಂದು ಜತಿ ಅವಿಗಿ, ಒಂದು ಬೆತ್ತ, ಒಂದು ಕಾವಿಯ ಕಪನಿ ಕಂಡವು. ಮತ್ತು ಇತ್ತ ಕಲ್ಯಾಣದಲ್ಲಿ ಇಂತರ ದೌಲಾನಿಗೆ ಅವಿಗಿ, ಬೆತ್ತ, ಕಾವಿಯ ಕಪನಿಗಳನ್ನೇ ಗೋರಿಯಲ್ಲಿಟ್ಟು ಕಬರಸ್ಥಾನವನ್ನು ಮಾಡೆಂದು ಸ್ವಪ್ನ ಬಿತ್ತು. ಅದರಂತೆ ಆತನು ಮಾಡಿದನು.

ಮಂಟಪವು ಳಳ ಕಂಬಗಳುಳ್ಳದ್ದಿದ್ದು ಕಬರಸ್ಥಾನದ ಮೇಲೆ ಕಾವಿಯ ಬಟ್ಟೆಯನ್ನೇ ಹಾಕಿರುತ್ತಾರೆ. ಇದರ ಪೂರ್ವಕ್ಕೆ ಇಂತರ ದೌಲಾನ ಕಬರಸ್ಥಾನವಿದ್ದು ಅದಕ್ಕೂ ಕಾವಿಯ ಬಟ್ಟೆಯನ್ನೇ ಹೊದಿಸಿರುತ್ತಾರೆ. ಇದೇ ಅವಾರದಲ್ಲಿಯೇ ಇಂತರ ದೌಲಾನಾ ವಂಶಜರ ಅನೇಕ ಕಬರ

ಸ್ಥಾನಗಳಿದ್ದು ಮಧ್ಯದಲ್ಲಿ ಒಂದು ವಿಶಾಲವಾದ ಮುಸೀದಿಯಿದೆ. ಪೀರ ಪಾಚ್ಛಾನ ಗೋರಿಯ ಮುಂಭಾಗದ ಫರಿಸಿಯ ಮಧ್ಯದಲ್ಲಿ ಒಂದು ದೊಡ್ಡ ಹಳೇ ಕನ್ನಡ ಶಿಲಾಲಿಪಿಯ ಕಲ್ಲನ್ನು ಕೂಡ್ರಿಸಿರುವರು. ಈ ಶಿಲಾಲಿಪಿಯು ಈಗ ಬಹಳ ಸವೆದು ಹೋಗಿರುವುದರಿಂದ ಅಕ್ಷರಗಳು ಸ್ಪಷ್ಟ ಕಾಣುವಂತಿಲ್ಲ.

ಹಳೇ ಕಟ್ಟಡಗಳ ಸಂರಕ್ಷಣೆಯ ಕಾಯದೆಯು ಬ್ರಿಟಿಷ್ ಇಂಡಿಯಾದಲ್ಲಿ ಅಮಲಿನಲ್ಲಿ ಇರುವಂತೆ ನಿಜಾಮ ಇಲಾಖೆಯಲ್ಲಿ ಅಂಥ ಕಾಯದೆಯು ಇದ್ದರೆ ಆ ಖಾತೆಯವರು ಆ ಕಾಯದೆಯನ್ನು ಈ ಕಟ್ಟಡಗಳಿಗೆ ಅನ್ವಯಿಸುವಂತೆ ಮಾಡಿದರೆ ವೀರಶೈವರಿಗೆ ಮಹದುಪಕಾರ ಮಾಡಿದಂತಾಗುವುದು.

ಕಲ್ಯಾಣಕ್ಕೆ ಮುಟ್ಟಬೇಕಾದರೆ ಪುಣೆಯಿಂದ ಕಲಬುರ್ಗಿಗೆ ಹೋಗುವ ದೊಡ್ಡ ಮಾರ್ಗದಿಂದ ಕಲ್ಯಾಣದಿಂದ ಸುಮಾರು ೬ ಮೈಲಿನ ಮೇಲೆ ದಾರಿಯು ಒಡೆಯುತ್ತದೆ. ಈ ೬ ಮೈಲು ದಾರಿಯು ಕಾಡುದಾರಿ ಇರುವದರಿಂದ ಪ್ರವಾಸಕ್ಕೆ ತೊಂದರೆಯಾಗುತ್ತದೆ. ಈ ದಾರಿಯನ್ನು ಸರಕಾರದವರು ಸರಿಯಾಗಿ ಮಾಡಿದರೆ ಪ್ರವಾಸಿಕರಿಗೆ ಬಹಳ ಅನುಕೂಲವಾಗುವದು.

———

ವೀರಶೈವ ಕ್ಷೇತ್ರಗಳು.

ಲೇಖಾಂಕ ೨.

(ರೇವಣಸಿದ್ಧೇಶ್ವರ ಬೆಟ್ಟ, ದನುಗೂರು, ಶಂಭುಲಿಂಗನ ಬೆಟ್ಟ, ಪ್ರಭುಲಿಂಗನ ಬೆಟ್ಟ, ಯಳಂದೂರು, ಸೋಸಲೆ.

ಈ ಕ್ಷೇತ್ರಗಳ ವರ್ಣನೆ.)

(ಲೇಖಕರು:- ಕೀರ್ತನಕೇಸರಿ, ಕವಿರತ್ನ, ಕೀರ್ತನ ವಿಚಕ್ಷಣ. ಕೀರ್ತನಶಿರೋಮಣಿ ಶಿವಕೀರ್ತನ ಕವಿರಾಜ ಬಿ. ಶಿವಮೂರ್ತಿ ಶಾಸ್ತ್ರಿ, ಹುಲ್ಲುಂಟಿ ಮಠ ತುಮಕೂರು.)

ಶಿವಾನುಭವದ ಸಂ. ೯ ಸಂ. ೪ ರಲ್ಲಿ "ವೀರಶೈವ ಕ್ಷೇತ್ರಗಳು" ಎಂಬ ತಲೆಬರೆಹವಿಂದ ನಾನೊಂದು ಲೇಖನವನ್ನು ಪ್ರಕಟಿಸಿದ್ದೆ. ಆಗ ನಾನು ಉತ್ತರ ಕರ್ನಾಟಕದ ಗಡಿನಾಡಿನಲ್ಲಿ ಸಂಚರಿಸುವಾಗ ಆ ಕ್ಷೇತ್ರಗಳ ವಿಚಾರವನ್ನು ಸಂಗ್ರಹಿಸಿದ್ದೆ. ಈಗ ಕರ್ನಾಟಕದ ದಕ್ಷಿಣಾಭಾಗದಲ್ಲಿ ಸಂಚರಿಸುವಾಗ ನಾ ಕಂಡ ಕೆಲವು ಕ್ಷೇತ್ರಗಳ ವಿಚಾರವನ್ನು ಶಿವಾನುಭವ ವಾಚಕರ ಸಲುವಾಗಿ ಈ ಮುಂದೆ ಸಂಗ್ರಹಿಸಿ ಪ್ರಕಟಿಸಿರುವೆನು.

ರೇವಣಸಿದ್ಧೇಶ್ವರನ ಬೆಟ್ಟ.

ವೀರಶೈವ ಧರ್ಮದಲ್ಲಿ ಆಗಿ ಹೋದ ಮಹಾ ಮಹಾ ವಿಭೂತಿಗಳಲ್ಲಿ ಶ್ರೀ ರೇವಣಸಿದ್ಧೇಶ್ವರನು ಒಬ್ಬನಾಗಿದ್ದಾನೆ ಶಿರಿವಾಳದ ಶಿಲಾಶಾಸನವು ಹೊರಬಿದ್ದ ಮೇಲೆ ಈತನ ಚರಿತ್ರೆಯ ಮೇಲೆ ಇತಿಹಾಸದ ಬೆಳಕು ಬಿದ್ದಂತಾಗಿದೆ.

ಶ್ರೀ ರೇಣುಕಾಚಾರ್ಯನೂ ರೇವಣಸಿದ್ಧನೂ ಒರ್ವನೇ ಎಂದು ಹಲವು ವೀರಶೈವ ಗ್ರಂಥಕಾರರು ಹೇಳಿದ್ದಾರೆ. ರೇವಣಸಿದ್ಧರೆಂಬ ಹಲವು ಮಂದಿ ಪ್ರಸಿದ್ಧ ಪುರುಷರು ವೀರಶೈವ ಚರಿತ್ರೆಯಲ್ಲಿ ಆಗಿ ಹೋಗಿದ್ದಾರೆಂದು ತೋರಿಬರುತ್ತದೆ. ರೇವಣಸಿದ್ಧೇಶ್ವರನಿಗಿಂತಲೂ ಭಿನ್ನನಾದ ರೇಣುಕಾಚಾರ್ಯನೆಂಬೊಬ್ಬನು ಆಗಿಹೋಗಿರಬಹುದೆಂಬುದಕ್ಕೂ ಆಧಾರಗಳಿವೆ.

ಈ ವಿಚಾರವನ್ನು ದೀರ್ಘವಾಗಿ ಚರ್ಚಿಸಲಿಕ್ಕೆ ಮತ್ತೊಂದು ಸಮಯವನ್ನು ಸಾಧಿಸಬೇಕಾಗಿದೆ.

ಭರತಖಂಡದಲ್ಲಿ ಶ್ರೀ ರೇವಣಸಿದ್ಧನ ಸಂಬಂಧವಾದ ಕ್ಷೇತ್ರಗಳು ಬಹಳವಾಗಿವೆ. ಶಿವಾನುಭವದಲ್ಲಿಯೇ ಈ ಹಿಂದೆ ರೇವಣಸಿದ್ಧನ ಸಂಬಂಧವಾದ ಹಲವು ಕ್ಷೇತ್ರಗಳ ವರ್ಣನೆಗಳು ಬಂದಿವೆ.

ಸುಮಾರು ೭೫೦ ವರ್ಷಗಳ ಹಿಂದೆ ಬಾಳೆಹಳ್ಳಿ ಮಠವನ್ನು ಸ್ಥಾಪಿಸಿದ ದಿಗಂಬರ ಮುಕ್ತಿಮುನಿ ಸ್ವಾಮಿಯ ಗುರುವಾದ ರುದ್ರಮುನಿಸ್ವಾಮಿಯ (ಇವನು ಬಸವೇಶ್ವರನ ಶಿಷ್ಯನಾಗಿದ್ದನೆಂದು ತೋರುತ್ತದೆ.) ತಂದೆಯಾದ ರೇವಣಸಿದ್ಧೇಶ್ವರನೇ ಈ ಹೆಸರಿನಲ್ಲಿ ಪ್ರಸಿದ್ಧರಾದವರಲ್ಲಿ ಅಗ್ರಗಣ್ಯನೆಂದೂ, ಮಹಿಮಾಶಾಲಿಯೆಂದೂ, ವೀರಶೈವ ಮತಪ್ರಚಾರಕನೆಂದೂ ಹಲವು ಕ್ಷೇತ್ರಗಳಲ್ಲಿ ತನ್ನ ಮಹಿಮೆಯನ್ನು ಪ್ರಕಟಿಸಿದವನೆಂದೂ ಹೇಳಬಹುದಾಗಿದೆ.

ಬೆಂಗಳೂರಿನಿಂದ ಮೈಸೂರಿಗೆ ಹೋಗುವ ರೈಲು ರಸ್ತೆಯಲ್ಲಿ ಕ್ಲೋಸ ಪೇಟೆ ಎಂಬ ಸ್ಟೇಷನ್ ಒಂದು ಸಿಕ್ಕುತ್ತದೆ. ಇಲ್ಲಿಂದ ೮ ಮೈಲು ದೂರದಲ್ಲಿ (ಕಾನ್‌ಕಾನ್ ಹಳ್ಳಿ ಮಾರ್ಗ) ರೇವಣಸಿದ್ಧೇಶ್ವರನ ಬೆಟ್ಟವೆಂಬ ವೀರಶೈವ ಕ್ಷೇತ್ರವೊಂದಿದೆ.

ಇಲ್ಲಿಗೆ ಪ್ರತಿವರ್ಷವೂ ಅಸಂಖ್ಯ ಭಕ್ತರು ಬಂದು ಹೋಗುತ್ತಾರೆ. ವೀರಶೈವರೇ ಅಲ್ಲದೆ ಭಾವಿಕರಾದ ಎಲ್ಲ ಹಿಂದುಗಳೂ ಈ ಸುಕ್ಷೇತ್ರಕ್ಕೆ ಯಾತ್ರೆಗೆ ಬಂದು ಹೋಗುತ್ತಿದ್ದಾರೆ. ಇಲ್ಲಿ ಭೂತ-ಪಿಶಾಚಿಗಳ ಬಾಧೆ ಪರಿಹಾರವಾಗುತ್ತದೆಂದು ಬಹು ಜನರು ನಂಬಿದ್ದಾರೆ. ಹಲವರಿಗೆ ಸುಖವೂ ಆಗಿದೆ.

ಇಲ್ಲಿಗೆ ಬಂದು ಹೋಗಲು ಪ್ರಯಾಣ ಸೌಕರ್ಯವೂ ಚನ್ನಾಗಿದೆ. ಕ್ಲೋಸಪೇಟೆಯಿಂದ ಇಲ್ಲಿಗೆ ಬರುವ ವರೆಗೆ ಗಾಡಿಗಳೂ ಮೋಟರುಗಳೂ ಸಿಕ್ಕುತ್ತವೆ. ಬೆಟ್ಟವು ಕಾಡುಪ್ರದೇಶದಲ್ಲಿರುವುದರಿಂದ ಯಾತ್ರಿಕರು ಸಾಮಾನುಗಳನ್ನು ಕ್ಲೋಸ ಪೇಟೆಯಿಂದಲೇ ತರುವುದೊಳ್ಳೆಯದು.

ಬೆಟ್ಟದ ಬುಡವಲ್ಲಿ ಬಾಳೆಹಳ್ಳಿ ಸಂಸ್ಥಾನಮಠದ ಶಾಖಾಮಠವೊಂದಿದೆ. ಅಲ್ಲಿ ಪಟ್ಟದಸ್ವಾಮಿಗಳೊಬ್ಬರಿದ್ದಾರೆ. ಯಾತ್ರಿಕರಿಗೆ ಮಠದಲ್ಲಿ

ಅಡಿಗೆ ವಗೈರೆ ಮಾಡಿಕೊಳ್ಳಲಿಕ್ಕೆ ಅನುಕೂಲವಿದೆ. ಶ್ರೀಗಳು ತಕ್ಕಮಟ್ಟಿಗೆ ಅನುಕೂಲ ಕಲ್ಪಿಸಿಕೊಡುತ್ತಾರೆ. ಇಲ್ಲಿ ಯಥಾಶಕ್ತಿ ದಾಸೋಹವೂ ನಡೆಯುತ್ತದೆ.

ಶ್ರೀ ರೇವಣಸಿದ್ಧೇಶ್ವರ ಬೆಟ್ಟವಿರುವ ಪ್ರದೇಶವು ಸುಂದರವಾಗಿಯೂ ಪ್ರಶಾಂತವಾಗಿಯೂ ಇದೆ. ಈ ಬೆಟ್ಟದ ಸುತ್ತಮುತ್ತಲೂ ಮತ್ತೆ ಕೆಲವು ಬೆಟ್ಟ ಗುಡ್ಡಗಳಿವೆ. ಅರ್ಕಾವತೀ ನದಿಯು ಇಲ್ಲಿಗೆ ಅನತಿ ದೂರದಲ್ಲಿ ಹರಿಯುತ್ತಿದೆ.

ಬೆಟ್ಟದ ಬುಡದಲ್ಲಿ ರೇವಾಂಬೆ ಎಂಬ ಸ್ತ್ರೀ ವಿಗ್ರಹವಿದೆ. ಈಕೆ ಮುಂಗಳವಾಡದ ಮಾಯಾದೇವಿಯ ಮಗಳು. ಇವಳು ರೇವಣಸಿದ್ಧನವರ ಪುತ್ರಿಯೆಂದು ಪುರಾಣಗಳು ಹೇಳುತ್ತವೆ.

ಬೆಟ್ಟವು ಲಿಂಗಾಕಾರವಾಗಿದೆ. ವಿಶೇಷವಾಗಿ ಗಿಡಮರಗಳಿಲ್ಲ. ಬೆಟ್ಟಕ್ಕೆ ಹತ್ತಲಿಕ್ಕೆ ಮೆಟ್ಟಿಲುಗಳಿವೆ. ಕೆಲವು ಕಡೆ ಬೆಟ್ಟವು ಕಡಿದಾಗಿದೆ. ಅಲ್ಲಿ ಸರಕಾರದವರು ಯಾತ್ರಿಕರಿಗೆ ಅಪಾಯವಾಗದ ಹಾಗೆ ಕಬ್ಬಿಣದ ಕಂಬಿಗಳನ್ನು ಹಾಕಿಸಿದ್ದಾರೆ.

ಭೀಮೇಶ್ವರ ದೇವಾಲಯ.

ಬೆಟ್ಟವನ್ನು ಹತ್ತಿದರೆ ನಮಗೆ ಮೊದಲು ಭೀಮೇಶ್ವರನ ದೇವಾಲಯ ಸಿಕ್ಕುತ್ತದೆ. ಇಲ್ಲಿ ಮನೋಹರವಾದ ದೊಣೆಯೊಂದಿದೆ. § ಇಲ್ಲಿ ಯಾತ್ರಿಕರಿಗೆ ಅಡಿಗೆ ಮೊದಲಾದವುಗಳಿಗೆ ಅನುಕೂಲವಿದೆ. ಇಲ್ಲಿ ವೀರಶೈವ ಅರ್ಚಕರಿದ್ದಾರೆ.

ದೇವಾಲಯದಲ್ಲಿ ಭೀಮೇಶ್ವರ ಲಿಂಗವಿದೆ. ಮರುಳಸಿದ್ಧೇಶ್ವರನೆಂಬ ಮತ್ತೊಂದು ಲಿಂಗವಿದೆ. ಮತ್ತು ಕೆಲವು ಉಪದೇವತೆಗಳಿವೆ.

ಇಲ್ಲಿಂದ ಮೇಲೆ ಹತ್ತಿಹೋದರೆ ಬೆಟ್ಟದ ಮೇಲ್ಭಾಗದಲ್ಲಿ ಎರಡು ಗೋಪುರಯುಕ್ತ ಮಂಟಪಗಳಿವೆ. ಇವನ್ನು ಜನರು ೧ ರುದ್ರಮುನಿ ಸ್ವಾಮಿಯ ಗುಡಿ. ೨ ಸಿದ್ಧರಾಮೇಶ್ವರ ಗುಡಿ ಎಂದು ಕರೆಯುತ್ತಾರೆ. ಈ ಎರಡು ಪುಟ್ಟಗುಡಿಗಳಲ್ಲಿ ದೇವರುಗಳು ಮಾತ್ರವಿಲ್ಲ. ಈ ಮಹಾ

§ ಟಿಪ್ಪಣಿಯೆಂದರೆ, ಬೆಟ್ಟಗಳಲ್ಲಿ ಸ್ವಾಭಾವಿಕವಾಗಿ ಆಗಿರುವ ನೀರಿನ ಕೊಳ್ಳ.

ತ್ಯರು ಪದವಿಟ್ಟು ಹೋದ ಗುರುತುಗಳು ಮಾತ್ರವಿವೆ. ದೂರದಿಂದ ಬೆಟ್ಟವನ್ನು ನೋಡುವವರಿಗೆ ಈ ಗೋಪುರಗಳಿರಡೂ ಬಸವನ ಕೋಡುಗಳಂತೆ ಕಾಣುತ್ತವೆ. ಈ ಬೆಟ್ಟದ ಮೇಲ್ಭಾಗದಲ್ಲಿ ನಿಂತು ನೋಡಿದರೆ ಸುತ್ತಮುತ್ತಣ ಪ್ರದೇಶವು ಬಹಳ ರಮಣೀಯವಾಗಿ ಕಾಣುತ್ತದೆ. ಇಲ್ಲಿಂದ ಬೆಟ್ಟದ ಮತ್ತೊಂದು ಪಾರ್ಶ್ವಕ್ಕೆ ಇಳಿದು ಹೋದರೆ ಅಲ್ಲಿ ರೇವಣಸಿದ್ಧೇಶ್ವರನ ತಪೋಭೂಮಿಯಾದ ಗವಿ ಸಿಕ್ಕುತ್ತದೆ. ಇದುವೇ ಯಾತ್ರಿಕರು ದರ್ಶಿಸಬೇಕಾದ ಮುಖ್ಯ ಸ್ಥಳ.

ರೇವಣಸಿದ್ಧ ಗವಿ.

ಈ ಗವಿ ಅತ್ಯಂತ ಶ್ಲಾಘನೀಯವಾಗಿದೆ. ಇಲ್ಲಿ ಮತ್ತೊಂದು ದೊಣೆಯಿದೆ. ಇದರಲ್ಲಿನ ನೀರು ಪಾನಯೋಗ್ಯವಾಗಿವೆ. ಯಾತ್ರಿಕರು ಇಲ್ಲಿ ಭಕ್ತಿಯಿಂದ ಪಾನ ಮಾಡುತ್ತಾರೆ. ಈ ದೊಣೆಯೆಂಬ ಸರೋವರದ ಮೇಲ್ಭಾಗದಲ್ಲಿಯೇ ರೇವಣಸಿದ್ಧನ ಗವಿಯಿದೆ.

ಈ ಗವಿ ತಪಸ್ವಿಗಳಿಗುಚಿತವಾಗಿದೆ. ಎಂತಹ ನಾಸ್ತಿಕನಿಗೂ ಭಕ್ತಿಯನ್ನುಂಟುಮಾಡುವಂತಿದೆ. ಈ ಸ್ಥಳದ ಮಹತ್ವ. ಇಲ್ಲಿ ಶಿವಸಮಾಧಿಯಲ್ಲಿ ಕುಳಿತ ರೇವಣಸಿದ್ಧಸ್ವಾಮಿಯ ಮೂರ್ತಿಯೊಂದಿದೆ. ಈ ವಿಗ್ರಹವು ಪಂಚಲೋಹಗಳಿಂದ ನಿರ್ಮಿತವಾದಂತೆ ಕಾಣುತ್ತದೆ. ಶಾಂತರಸವುಳ್ಳ ಮುಖಮುದ್ರೆಯಿಂದ ಯುಕ್ತವಾಗಿವೆ. ಜಟಾ ಮುಕುಟರಾರಾಜಿತವಾಗಿದೆ. ಅಂತು ಭವ್ಯ ವಿಗ್ರಹ. ಯಾತ್ರಿಕರು ಈ ಮೂರ್ತಿಯ ದರ್ಶನದಿಂದ ತೃಪ್ತರಾಗುತ್ತಾರೆ.

ಜಾತ್ರೆ ವಿಚಾರ.

ಪ್ರತಿವರ್ಷವೂ ಈ ಕ್ಷೇತ್ರದಲ್ಲಿ ವೈಶಾಖ ಶುದ್ಧ ಹುಣ್ಣಿಮೆಯಿನ ರಥೋತ್ಸವವಾಗುತ್ತದೆ. ಆಗ ಸಾವಿರಗಟ್ಟಲೆ ಜನರು ಸೇರುತ್ತಾರೆಂದೂ ವ್ಯಾಪಾರಾದಿಗಳೂ ಚನ್ನಾಗಿ ನಡೆಯುತ್ತವೆಂದೂ ತಿಳಿದುಬರುತ್ತದೆ.

ಸಾರಾಂಶ:- ಈ ರೇವಣಸಿದ್ಧೇಶ್ವರ ಬೆಟ್ಟವು ಪ್ರತಿಯೊಬ್ಬ ಭಾವಿಕನಿಗೂ ತತ್ತ್ವಾಪಿ ಲಿಂಗವಂತನಿಗೂ ದರ್ಶನೀಯವಾಗಿದೆ. ಈಚಗೆ ಪಂಚಾಚಾರ್ಯರ ಚಳುವಳಿ ಪ್ರಾರಂಭವಾದಮೇಲೆ ಕೆಲವರು ಈ ಬೆಟ್ಟವನ್ನು "ರೇಣುಕಗಿರಿ" ಎಂಬ ಸಂಸ್ಕೃತ ನಾಮದಿಂದ ಕರೆಯಲು ಪ್ರಾರಂಭಿಸಿದಂತೆ ತೋರುತ್ತದೆ. ಶ್ರೀ ರೇವಣಸಿದ್ಧನು ಇಲ್ಲಿಗೆ ಎಂದೂ ಬಾರನೆಂದೂ

ಇಲ್ಲಿ ಅವನು ನಡೆಸಿದ ಕಾರ್ಯಗಳೇನೆಂದೂ ಸಂಶೋಧಕ ದೃಷ್ಟಿಯಿಂದ ಹುಡುಕತಕ್ಕದ್ದು ಲಿಂಗಾಂಗೀ ವಿದ್ವಾಂಸರ ಕರ್ತವ್ಯವಾಗಿದೆ.

ಸೋಸಲೆ.

ವೀರಶೈವ ಸಾಹಿತ್ಯಪ್ರಪಂಚದಲ್ಲಿ ವಿಖ್ಯಾತರಾದ ಪಂಡಿತರಲ್ಲಿ ಸೋಸಲೆ ರೇವಣಾರಾಧ್ಯನೊಬ್ಬನೆನಿಸಿದ್ದಾನೆ. ಇವನಿಗೆ ಕವಿರೇಣುಕಾಚಾರ್ಯ ಎಂಬ ಹೆಸರೂ ಪ್ರಸಿದ್ಧವಾಗಿದೆ. ಇವನು ಕ್ರಿ. ಶ. ೧೬೩೭ರ ಸುಮಾರಿನಲ್ಲಿದ್ದನೆಂದು ಕನ್ನಡ ಕವಿಚರಿತ್ರಕಾರರು ನಿರ್ಧರಿಸಿದ್ದಾರೆ. ಇವನು ಶ್ರೀ ರೇಣುಕಾಚಾರ್ಯನ ವಂಶಪರಂಪರೆಯವನೆಂದೂ ಇವನ ಹಿರಿಯರು ಮಹಾ ವಿದ್ವಾಂಸರಾಗಿದ್ದಾರೆಂದೂ, ವೀರಮಾಹೇಶ್ವರನೆಂದೂ ತಿಳಿದುಬರುತ್ತದೆ.

ಈ ವಿದ್ಯಾನಿಧಿಯು ಪಿತಾಮಹ ವೀರಣಾರ್ಯನು.

೧. ಶಿವಮಹಿಮ್ನಸ್ತವ
೨. ಸಿದ್ಧಾಂತ ಶಿಖಾಮಣಿ.
೩. ಸದ್ಗುರು ರಗಳೆ.
೪. ದಶಗ್ರಂಥಿ.

ಎಂಬ ಗ್ರಂಥಗಳಿಗೆ ವ್ಯಾಖ್ಯಾನ ಬರೆದಂತೆ ತಿಳಿದುಬರುತ್ತದೆ. ಇವನ ವಂಶೀಯನೂ ಪ್ರಾಚೀನನೂ ಆದ ವಿಶ್ವನಾಥಾಚಾರ್ಯನು ದಶಗ್ರಂಥಿ ಎಂಬ ಸಂಸ್ಕೃತ ಗ್ರಂಥ ಬರೆದಿದ್ದಾನೆ.

ಸೋಸಲೆ ರೇವಣಾರಾಧ್ಯನು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಹಲವು ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ,

೧. ಜೋಳ ರೇಣುಕ ಸಂವಾದ.
೨. ರಾಜಯೋಗ ತಾರಾವಳಿ.
೩. ಶ್ರೀ ರುದ್ರ ಭಾಷ್ಯ
೪. ಶಾಂತಮೂರ್ತಿ ಪ್ರಕಾಶಿಕಾ
೫. ಸ್ವಸ್ವರೂಪ ಪ್ರಕಾಶಿಕಾ
೬. ಪರಮಾತ್ಮ ಪ್ರಕಾಶಿಕಾ
೭. ಅಂತಃಕರಣ ಪ್ರಕಾಶಿಕಾ
೮. ಶಾರೀರ ಪ್ರಕಾಶಿಕಾ

೯. ನಿಜದೀಪ್ತಿ ಪ್ರಕಾಶಿಕಾ
೧೦. ಪರಮುಕ್ತಿ ಪ್ರಕಾಶಿಕಾ

ಎಂಬವುಗಳು ಮಾತ್ರ ದೃಗ್ಗೋಚರವಾಗಿವೆ. ಈ ಮಹಾನುಭಾವ ರೇವಣಾರಾಧ್ಯನು ಹುಟ್ಟಿ ಬೆಳೆದ ಸ್ಥಳ ಸೋಸಲೆ ಎಂಬ ಗ್ರಾಮ.

ಸೋಸಲೆ.

ಮೈಸೂರು ಜಿಲ್ಲೆಯಲ್ಲಿ ಕಾವೇರಿ ಕಪಿನೀ ನದಿಗಳ ಸಂಗಮ ಸ್ಥಳವಾದ ತಿರುಮಕೂಡಲು ನರಸೀಪುರಕ್ಕೆ ಮೂರು ಮೈಲಿನ ದೂರದಲ್ಲಿ "ಸೋಸಲೆ" ಎಂಬ ಊರಿದೆ. ಇದು ಕಾವೇರಿ ನದೀ ತೀರದಲ್ಲಿದೆ. ಈ ಊರಿನ ಸುತ್ತಲೂ ಭತ್ತದ ಗದ್ದೆಗಳು ರಮಣೀಯವಾಗಿವೆ. ಇಲ್ಲಿ ಶ್ರೀ ವ್ಯಾಸರಾಯ ಸ್ವಾಮಿಗಳ ಪ್ರಸಿದ್ಧವಾದ ಮಠವೊಂದಿದೆ.

ಮಹಾಪಂಡಿತನೂ ಉಭಯ ಭಾಷಾಕೋವಿದನೂ ಕವಿಶ್ರೇಷ್ಠನೂ ಆದ ರೇವಣಾರಾಧ್ಯನ ಜನ್ಮಸ್ಥಳದಲ್ಲಿ ಅವನ ಸ್ಮಾರಕಗಳೇನಾದರೂ ಇರಬಹುದೆಂಬ ಆಶೆಯಿಂದ ನಾನು ಅಲ್ಲಿಗೆ ಹೋದೆನು. ನನ್ನ ನಿರೀಕ್ಷಣೆ ಮಾತ್ರ ಅಲ್ಲಿ ಸಫಲವಾಗಲಿಲ್ಲ

ಸೋಸಲೆಯನ್ನೆಲ್ಲಾ ಶೋಧಿಸಿ ನೋಡಿದ್ದಾಯ್ತು. ಅಲ್ಲಿ ರೇವಣಾರಾಧ್ಯನ ಬಗ್ಗೆ ಯಾವ ಗುರುತೂ ಸಿಕ್ಕಲಿಲ್ಲ.

ಗುಬ್ಬಿಯಲ್ಲಿ ಮಲ್ಲಣಾರ್ಯನಿದ್ದ ಬಗ್ಗೆ ಗೂಳೂರಿನಲ್ಲಿ ಸಿದ್ಧವೀರಾಚಾರ್ಯ ಮೊದಲಾದ ಕವಿಗಳಿದ್ದ ಬಗ್ಗೆ ಹೇಗೆ ಅಲ್ಲಿನ ಜನರಿಗೆ ವಿಸ್ಮೃತಿಯುಂಟಾಗಿದೆಯೋ ಈ ಸ್ಥಳಗಳಲ್ಲಿ ಈ ಕವಿಗಳ ನಿವಾಸಸ್ಥಾನ ಮೊದಲಾದವುಗಳು ಹೇಗೆ ಲುಪ್ತವಾಗಿವೆಯೋ ಸೋಸಲೆಯ ಸ್ಥಿತಿಯೂ ಹೀಗೆಯೇ ಎಂದು ಹೇಳಿಕೊಂಡು ಮುಂದೆ ಹೊರಟೆನು. ಒಂದು ಕಾಲದಲ್ಲಿ ಇಲ್ಲಿ ವೀರಶೈವರು ಪ್ರಬಲರಾಗಿದ್ದರೆಂಬುದಕ್ಕೆ ಇಲ್ಲಿ ಕೆಲವು ಗುರುತುಗಳಿವೆ.

ದನುಗೂರು.

ವೀರಶೈವ ಸಾಹಿತ್ಯ ಚರಿತ್ರೆಯಲ್ಲಿ ಅಪದೃಶ ಕವಿಯೆಂದು ಹೆಸರಾಗಿರುವ ಷಡಕ್ಷರದೇವನ ಹೆಸರನ್ನು ಕೇಳದವರು ವಿರಳ. ಇವನು

ಉಭಯ ಕವಿತಾವಿಶಾರದನೆಂದೂ ಕವಿಶಾರ್ದೂಲನೆಂದೂ ವಿಖ್ಯಾತನಾಗಿದ್ದಾನೆ. ಇವನು ಕನ್ನಡ ಸಂಸ್ಕೃತ ಭಾಷೆಗಳಲ್ಲಿ

೧. ಕವಿಕರ್ಣರಸಾಯನ
೨. ಶಿವಾಧಿಕ್ಯ ರತ್ನಾವಳಿ
೩. ಭಕ್ತಾಧಿಕ್ಯ ರತ್ನಾವಳಿ
೪. ವೀರಭದ್ರ ದಂಡಕ
೫. ಶಿವಸ್ತವ ಪೂಜಾ ಸ್ತೋತ್ರ
೬. ರಾಜಶೇಖರ ವಿಳಾಸ
೭. ಶಬರಶಂಕರ ವಿಳಾಸ
೮. ವೃಷಭೇಂದ್ರ ವಿಜಯ

ಎಂಬ ಗ್ರಂಥಗಳನ್ನು ವೀರಭದ್ರೋದಾಹರಣ ಗದ್ಯ ಮಾತಿನ ಮಾಲಿಕೆ, ತೋಂಟದಾರ್ಯಸ್ತವ, ಲಿಂಗಾಷ್ಟಕ, ನೀಲಾಂಬಿಕಾಷ್ಟಕ, ಬಸವೇಶ್ವರಾಷ್ಟಕ ಇತ್ಯಾದಿ ಕವಿತೆಗಳನ್ನು ಬರೆದು ಪ್ರಸಿದ್ಧನಾಗಿದ್ದಾನೆ

ಈತನು ತನ್ನ ಗ್ರಂಥಗಳಲ್ಲಿ ತಾನು ದನುಗೂರುವಿನ ಮಠಾಧಿಪನೆಂದು ಹೇಳಿಕೊಂಡಿದ್ದಾನೆ. ಈತನ ಕಾವ್ಯಗಳಲ್ಲಿ ಅಪಾರವಾದ ಮನುತೆಯುಳ್ಳ ನನಗೆ ಈ ದನುಗೂರನ್ನು ನೋಡಬೇಕೆಂಬಾಶೆ ಬಹುದಿನಗಳಿಂದ ಬಾಧಿಸುತ್ತಿತ್ತು. ಆ ಬಯಕೆಯೇ ನನ್ನನ್ನು ಕರೆದೊಯ್ದಿತು.

ದನುಗೂರಿಗೆ ಸಂಸ್ಕೃತದಲ್ಲಿ 'ಧನ್ವಪುರಿ' ಎಂಬುದಾಗಿ ಹೆಸರು. ಇದು ಮೈಸೂರು ಜಿಲ್ಲೆಯಲ್ಲಿ ಮಳವಳ್ಳಿ ತಾಲೂಕಿನಲ್ಲಿ ಮಳವಳ್ಳಿಗೆ ೮ ಮೈಲು ದೂರದಲ್ಲಿದೆ. ಇಲ್ಲಿಗೆ (ದನುಗೂರಿಗೆ) ಕಾವೇರೀ ಪುಣ್ಯ ನದಿಯು ೪ ಮೈಲು ದೂರದಲ್ಲಿ ಮಾತ್ರವಿದೆ. ತನಗೆ ಸಮೀಪಗತವಾದ ಕಾವೇರಿಯನ್ನು ಷಡಕ್ಷರದೇವನು ತನ್ನ ಗ್ರಂಥಗಳಲ್ಲಿ ಬಹಳವಾಗಿ ವರ್ಣಿಸಿದಂತೆ ಕಾಣುತ್ತದೆ.

ದನುಗೂರು ಈಗ ಒಂದು ಚಿಕ್ಕ ಹಳ್ಳಿಯಾಗಿದೆ. ಕವಿ ಷಡಕ್ಷರನ ಕಾಲದಲ್ಲಿ ದೊಡ್ಡ ಊರಾಗಿತ್ತೆಂದು ಹೇಳಬಹುದು. ಇಲ್ಲಿ ಪ್ರಾಚೀನ ಕಾಲದ ಸ್ಮಾರಕಗಳು ಬಹಳವಾಗಿವೆ. ಅವನ್ನು ಮುಂದೆ ಸಂಗ್ರಹವಾಗಿ ವಿವರಿಸಿದೆ.

ದನುಗೂರು ಪಟ್ಟದ ಮಠ:— ಶ್ರೀಷಡಕ್ಷರದೇವನಿದ್ದ ಮಠಕ್ಕೆ ಪಟ್ಟದ ಗುರುಮಠವೆಂದು ಹೆಸರು. ಇದು ದನುಗೂರು ಕೆರೆಯ ಪಕ್ಕದಲ್ಲಿದೆ. ಕವಿಯ ಕಾಲದ ಭವ್ಯವಾದ ಕಲ್ಲಿನ ಮಠದ ಬಹುಭಾಗ ಬಿದ್ದು ಹೋಗಿದೆ. ಆ ಪ್ರಾಚೀನ ಮಠದ ನೆಲಗಟ್ಟು ಮಾತ್ರವಿದೆ. ಕಲ್ಲು ಕಂಭಗಳು ನೆಲದಲ್ಲಿ ಬಿದ್ದಿವೆ. ಈ ಅವಶೇಷಗಳ ಮೇಲಿಂದ ಮಠವು ಹಿಂದೆ ವೈಭವದಿಂದಿದ್ದಿತೆನ್ನಬಹುದು. ಈಗ ಹೊಸದಾಗಿ ಹೆಂಚಿನ ಮಠವನ್ನು ಹಳೆಯ ಮಠಕ್ಕೆ ಹೊಂದಿಸಿ ಕಟ್ಟಿಕೊಂಡಿದ್ದಾರೆ. ಸುತ್ತಾರದಿಂದ ಈ ಮಠಕ್ಕೆ ೧೪ ಎಕರೆ ಹೊಲವನ್ನು ಮಾನ್ಯವಾಗಿ ಕೊಟ್ಟಿದ್ದಾರೆ.

ಈ ದನುಗೂರು ಮಠದಲ್ಲಿ ವೀರಭದ್ರ ದೇವರಿದೆ. ಇದು ಬಾಳೆಹಳ್ಳಿ ಮಠಕ್ಕೆ ಶಾಖಾ ಮಠವೆಂಬುದಕ್ಕೆ ಈ ಮೂರ್ತಿ ಸಾಕ್ಷಿ. ಈ ಮಠದಲ್ಲಿ ಷಡಕ್ಷರ ಕವಿ ಶಿವ ಪೂಜೆಗೆ ಕುಳಿತುಕೊಳ್ಳುತ್ತಿದ್ದ ಗವಿಯೊಂದಿದೆ. ಈ ಮಠದಲ್ಲಿ ಷಡಕ್ಷರದೇವನ ಗುರುಪರಂಪರೆಯವರಾದ ಉದ್ದಾನ ಸ್ವಾಮಿ, ಅನ್ನದಾನಸ್ವಾಮಿ, ರೇವಣಸಿದ್ಧದೇಶಿಕ, ಚಿಕ್ಕವೀರ ದೇಶಿಕರೆಂಬ ನಾಲ್ವರ ಗದ್ದಿಗೆಗಳಿವೆ. ಈ ನಾಲ್ವರ ಹೆಸರನ್ನು ನಾವು ರಾಜಶೇಖರ ವಿಳಾಸದ ಪೀಠಿಕಾ ಪ್ರಕರಣದಲ್ಲಿ ಕಾಣಬಹುದು.

ಈ ಮಠದಲ್ಲಿಯೇ ಮೊದಲು ಒಂದು ಶಿವಲಿಂಗ ದೇವಾಲಯವಿತ್ತೆಂದು ಹೇಳುತ್ತಾರೆ. ಅದಕ್ಕೆ ಸಾಕ್ಷಿಯಾಗಿ ಈಗಲೂ ಹಾಳು ಬಿದ್ದಿರುವ ಮಠದ ಭಾಗದಲ್ಲಿ ಲಿಂಗ ಪೀಠವೊಂದು ಬಿದ್ದಿದೆ. ಈ ಶಿವ ದೇವರಿಗೆ ಶಿವಲಿಂಗೇಶ್ವರನೆಂಬ ಹೆಸರಿತ್ತೆಂದು ಹೇಳುತ್ತಾರೆ. ಈ ಶಿವ ದೇವಾಲಯವು ಪೂರ್ವದ ಮಠದ ಆವರಣದಲ್ಲಿ ಪೂರ್ವಾಭಿಮುಖವಾಗಿತ್ತು. ಇದರ ಮುಂದಿನ ವೃಷಭನ ಮಂಟಪವು ಈಗಲೂ ಪಶ್ಚಿಮಾಭಿಮುಖವಾಗಿ ಈಗಿನ ಮಠದ ಆವರಣದಲ್ಲಿ ಸೇರಿದೆ.

ಷಡಕ್ಷರ ಕವಿಯು ತನ್ನ ರಾಜಶೇಖರ ವಿಳಾಸ ಶಬರಶಂಕರ ವಿಳಾಸ ಮತ್ತು ವೃಷಭೇಂದ್ರ ವಿಜಯಗಳ ಪ್ರತಿಯೊಂದು ಆಶ್ವಾಸದ ಪ್ರಾರಂಭದಲ್ಲಿಯೂ "ಪಾಲಿಸೆಮ್ಮನುರೆ ಶಿವಲಿಂಗಂ" ಎಂಬ ಶಿವಲಿಂಗಾಂಕಿತವಾದ ತಂದ ಪದ್ಯವನ್ನು ಬರೆದಿದ್ದಾನೆ. ಈ ಅಂಕಿತವು ಪ್ರಾಯೇಣ ಈ ಕವಿಯ ಮಠದಲ್ಲಿಯೇ ಇದ್ದ ಶಿವಲಿಂಗೇಶ್ವರನೆಂಬ ಸ್ಥಾವರಲಿಂಗದ ಅಂಕಿತವಾಗಿರಬಹುದೆಂದು ನನ್ನ ಭಾವನೆ

ಈಗ ಈ ಮಠವಲ್ಲಿ ಶ್ರೀರುದ್ರಮುನಿ ಶಿವಾಚಾರ್ಯರೆಂಬ ಸ್ವಾಮಿಗಳೊಬ್ಬರಿದ್ದಾರೆ. ಇವರು ಷಡಕ್ಷರದೇವನ ಶಿಷ್ಯ ಪರಂಪರೆಗೆ ಸೇರಿದ ಪಟ್ಟದ ಸ್ವಾಮಿಗಳು. ಈ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿವೆಯೆಂದು ಶ್ರೀಗಳು ಹೇಳುತ್ತಾರೆ. ಪೂರ್ವದ ಮಠದ ಬಾಗಿಲು ಪೂರ್ವದಿಕ್ಕಿಗಿತ್ತು. ಈಗಿನ ಮಠವ ದ್ವಾರವು ದಕ್ಷಿಣಾಭಿಮುಖವಾಗಿದೆ.

ಗೌರೀಶ್ವರ ದೇವಾಲಯಃ— ಕವಿಯ ಮಠದ ಮುಂಭಾಗದ ಕೆರೆಯ ಮತ್ತೊಂದು ಪಾರ್ಶ್ವದಲ್ಲಿ ಈ ದೇವಾಲಯವಿದೆ. ಈ ಊರಿನಲ್ಲಿ ಇದೇ ಉತ್ತಮ ದೇವಾಲಯ. ಕಲಾ ದೃಷ್ಟಿಯಿಂದಲೂ ಶ್ರೇಷ್ಠವಾಗಿದೆ. ಈ ಮನೋಹರವಾದ ಶಿವ ದೇವಾಲಯವು ಈಗ ಜೀರ್ಣವಾಗಿ ಹೋಗಿದೆ. ಇಲ್ಲಿ ಒಂದು ಕನ್ನಡ ಶಿಲಾಲಿಪಿಯಿದೆ.

ವೀರಭದ್ರ ದೇವಾಲಯಃ- ಪೂರ್ವದಲ್ಲಿ ಈ ಗುಡಿಯು ಬಹಳ ವೈಭವದಲ್ಲಿತ್ತೆಂದು ತೋರುತ್ತದೆ. ಈಗ ಈ ದೇವಾಲಯವೂ ಶಿಥಿಲವಾಗಿದೆ. ಇವುಗಳಲ್ಲದೆ ಪೂರುತಿ ಗುಡಿ, ಬಸವೇಶ ಗುಡಿ, ಉಪ್ಪರಿಗೆ ಬಸವಣ್ಣನ ಗುಡಿ, ಗಣಪತಿ ಗುಡಿ ಇತ್ಯಾದಿ ಕೆಲವು ದೇವಾಲಯಗಳೂ ಶಿಥಿಲವಾಗಿವೆ.

ಈಗ ದನಗೂರಿನಲ್ಲಿ ನಾಲ್ಕೇ ನಾಲ್ಕು ಲಿಂಗವಂತರ ಮನೆಗಳಿವೆ. ಮುಸಲ್ಮಾನರ ಮನೆಗಳು ಮಾತ್ರ ಊರ ತುಂಬಿವೆ. ಇದೊಂದು ದೈವಲೀಲೆ.

ಅಳಸಳ್ಳಿ ಗವಿಃ- ದನಗೂರಿಗೆ ಒಂದು ಮೈಲಿ ದೂರದಲ್ಲಿ ಅಳಸಳ್ಳಿ ಎಂಬ ಗ್ರಾಮವೊಂದಿದೆ. ಇಲ್ಲಿ ಅಳಸಳ್ಳಿ ಗುಡ್ಡವೆಂಬ ಕಿರುಪೆಟ್ಟವೊಂದಿದೆ. ಇದನ್ನು ಷಡಕ್ಷರ ಗುಡ್ಡವೆಂದೂ ಹೇಳುತ್ತಾರೆ. ಇಲ್ಲಿ ಒಂದು ಗವಿಯಿದೆ. ಈಚಿಗೆ ಅಲ್ಲಿಂದು ಮಠವನ್ನು ಕಟ್ಟಿದ್ದಾರೆ. ಇಲ್ಲಿ ಸ್ವಾಮಿಗಳೊಬ್ಬರು ದಾಸೋಹ ನಡೆಸುತ್ತಿದ್ದಾರೆ. § ಈ ಗವಿ ಇರುವ ಮಠವು ದನುಗೂರು ಷಡಕ್ಷರ ದೇವನ ಮಠಕ್ಕೆ ಸೇರಿದೆ. ಷಡಕ್ಷರ ಕವಿಯು ಇಲ್ಲಿ ತಪಸ್ಸು ಮಾಡುತ್ತಿದ್ದನೆಂದೂ, ಗ್ರಂಥಗಳನ್ನು ಬರೆಯುತ್ತಿದ್ದನೆಂದೂ ಜನರು ಪರಂಪರಾಗತವಾಗಿ ಹೇಳಿಕೊಂಡು ಬರುತ್ತಿದ್ದಾರೆ. ದನುಗೂರಲ್ಲಿ ಯಾಗಲೀ ಇಲ್ಲಾಗಲೀ ನನ್ನ ಕಣ್ಣಿಗೆ ಶಿಲಾಲಿಪಿಗಳಾವೂ ಬೀಳಲಿಲ್ಲ.

§ ಟಪ್ಪಣಿಃ- ಶ್ರೀ ಬಸವಪ್ಪ ದೇವರೆಂಬು ವಿರಕ್ತ ಮುನಿರ್ಗಳು ಗವಿಯು ಮಠದಲ್ಲಿ ದಾಸೋಹ ಮಾಡುತ್ತಿದ್ದಾರೆ.

ಯಳಂದೂರು.

ಮೈಸೂರು ಜಿಲ್ಲೆಯ ದಕ್ಷಿಣದಲ್ಲಿ ಯಳಂದೂರು ಎಂಬ ತಾಲೂಕು ಸ್ಥಳವಿದೆ. ಇದು ಕೈ॥ ದಿವಾನ್ ಪೂರ್ಣಯ್ಯನವರ ಜಹಗೀರಿಯಾಗಿದೆ. ತುರುಷ್ಕರಾಹು ಮುಖದಿಂದ ಮೈಸೂರು ಸಿಂಹಾಸನವನ್ನು ಪೂರ್ವದ ಅರಸು ಮನೆತನಕ್ಕೆ ಹಿಂದಿರುಗಿ ಬರುವಂತೆ ಸಾಹಸ ಮಾಡಿದವರೀ ಪೂರ್ಣಯ್ಯನವರು. ಆ ಉಪಕಾರ ಸ್ಮರಣೆಗಾಗಿ ಈ ತಾಲೂಕನ್ನು ಮೈಸೂರು ಅರಮನೆಯವರು (ಯಳಂದೂರು ತಾಲೂಕನ್ನು) ಜಹಗೀರನ್ನಾಗಿ ಪೂರ್ಣಯ್ಯನವರ ಮನೆತನಕ್ಕೆ ಬಿಟ್ಟುಕೊಟ್ಟಿದ್ದಾರೆ. ಈ ಯಳಂದೂರು ಮೈಸೂರಿಗೆ ಸುಮಾರು ೪೫ ಮೈಲಿ ದೂರದಲ್ಲಿದೆ. ಈ ಊರಿನ ಮಧ್ಯೆ ಸುವರ್ಣಾವತೀ ನದಿ ಹರಿಯುತ್ತದೆ.

ಶ್ರೀ ಷಡಕ್ಷರ ದೇವನ ಕಾಲದಲ್ಲಿ (ಕ್ರಿ. ಶ. ೧೬೫೫) ಈ ಯಳಂದೂರಿನಲ್ಲಿ ಮುದ್ದು ರಾಜನೆಂಬ ಅರಸನಿದ್ದನೆಂದೂ ಅವನಿಗೆ ಈ ಕವಿ ಗುರುವಾಗಿದ್ದನೆಂದೂ ತಿಳಿದು ಬರುತ್ತದೆ. ಅಲ್ಲದೆ ಶ್ರೀ ಷಡಕ್ಷರ ಕವಿಯ ಸಮಾಧಿಯೂ ಇಲ್ಲಿಯೇ ಇದೆ.

ಶ್ರೀ ಗೌರೀಶ್ವರ ದೇವಾಲಯಃ- ಇವನ್ನು ಮುದ್ದು ರಾಜನೇ ಕಟ್ಟಿಸಿದನೆಂದು ಹೇಳುತ್ತಾರೆ. ಈ ದೇವಾಲಯವು ನೋಡತಕ್ಕದ್ದಾಗಿದೆ. ದೇವಾಲಯದ ಮಹಾದ್ವಾರವು ಕಲಾಭರಿತವಾಗಿದೆ. ಇಲ್ಲಿ ಒಂದು ಶಿಲಾಲಿಪಿಯಿದೆ. ಇದನ್ನು ಷಡಕ್ಷರ ಕವಿಯೇ ಬರೆದನೆಂದು ಪ್ರತೀತಿಯಿದೆ. ಇದರ ಶೈಲಿ ಈ ಕವಿಯ ಕಾವ್ಯ ಶೈಲಿಯನ್ನು ಹೋಲುತ್ತದೆ.

ಷಡಕ್ಷರ ದೇವನ ಸಮಾಧಿಃ- ಈ ಮಹಾಕವಿಯು ಸಮಾಧಿಸ್ಥನಾದ ಸ್ಥಳವನ್ನು ನಾವು ಇಲ್ಲಿ ಕಾಣಬಹುದು. ಸಮಾಧಿಯ ಮೇಲಣ ಮಂಟಪವು ಈಗ ಶಿಥಿಲವಾಗಿದೆ. ಈ ಸ್ಥಲವನ್ನು ಜನರು " ದನಗೂರು ದೇವರ ಮಠ " ಎಂದು ಕರೆಯುತ್ತಾರೆ. ವೀರಶೈವ ಪ್ರಸಂಚಕ್ಕೆ ಪ್ರೇತ್ರವೆನಿಸಿದ ಈ ಸ್ಥಳವು ಇಂದು ಅವ್ಯವಸ್ಥೆಗೆ ಈಡಾಗಿದೆ. ಈಗ ಈ ಮಠದ ಪ್ರದೇಶವು ವೀರಶೈವೇತರರ ಹಸ್ತಗತವಾಗಿದೆ. ವಿಷಾದ ವಾರ್ತೆ.

ನಾನಿಲ್ಲಿಗೆ ಹೋದಾಗ ಈ ಸ್ಥಳವನ್ನು ವೀರಶೈವರು ನ್ಯಾಯವಾದ ಮಾರ್ಗದಿಂದ ಪಡಪಡಿಸಿಕೊಂಡು ಇದನ್ನು ಉತ್ತಮ ಸ್ಥಿತಿಯಲ್ಲಿಡಬೇಕೆಂದು ಅಲ್ಲಿನ ವೀರಶೈವರಿಗೆ ಹೇಳಿ ಬಂದಿದ್ದೇನೆ. ಅವರು ಪ್ರಯತ್ನ ಮಾಡಿದರೆ ಅದು ಸಾಧ್ಯವೂ ಆಗುತ್ತದೆ.

ಈ ಯಳಂದೂರಿಗೆ ಮೂರು ಮೈಲಿ ದೂರದಲ್ಲಿರುವ ಯರಗಂಬಳ್ಳಿ ಎನ್ನುವ ಗ್ರಾಮದಲ್ಲಿ ಷಡಕ್ಷರ ದೇವನ ಮೂರ್ತಿವೊಂದಿದೆಯೆಂದೂ ಅದೂ ಈಗ ಪಾಳು ಬಿದ್ದಿದೆಯೆಂದೂ ತಿಳಿದು ಬರುತ್ತದೆ.

ಹೀಗೆ ಯಳಂದೂರು ಶ್ರೀ ಷಡಕ್ಷರ ಕವಿಯ ಸಮಾಧಿಯನ್ನುಳ್ಳುದರಿಂದ ವೀರಶೈವ ಕ್ಷೇತ್ರ ಪಂಙ್ತಿಗೆ ಸೇರಲರ್ಹವಾಗಿದೆ. ಇದಕ್ಕೆ ಸಂಸ್ಕೃತದಲ್ಲಿ "ಬಾಲೇಂದು ಪುರ" ಎಂದೂ ಕರೆಯುತ್ತಾರೆ. ವೀರಶೈವ ಸಂಸ್ಕೃತಿಯಲ್ಲಿಯೂ ಷಡಕ್ಷರ ಕವಿಯಲ್ಲಿಯೂ ಪ್ರೀತಿಯುಳ್ಳ ವ್ಯಕ್ತಿಯು ಒಮ್ಮೆಯಾದರೂ ಈ ಸ್ಥಳಗಳನ್ನು ನೋಡುವುದವಶ್ಯಕ.

ಪ್ರಭುಲಿಂಗನಬೆಟ್ಟ.

ಯಳಂದೂರಿಗೆ ನಾಲ್ಕಾರು ಮೈಲಿ ದೂರದಲ್ಲಿ ಪ್ರಭುಲಿಂಗನಬೆಟ್ಟ ಎಂಬ ದಿವ್ಯಸ್ಥಳವೊಂದಿದೆ. ಇದು ಕಾವೇರೀ ನದಿ ತೀರದಲ್ಲಿಯೇ ಇದೆ.

ವೀರಶೈವ ಪ್ರಪಂಚಕ್ಕೆ ಪರಮಪೂಜ್ಯನಾದ ಶ್ರೀ ಅಲ್ಲಮ ಪ್ರಭುವು ಕೆಲವು ಕಾಲ ಈ ಬೆಟ್ಟದಲ್ಲಿ ತಪಸ್ಸು ಮಾಡಿದನೆಂದೂ ಅದರಿಂದಲೇ ಈ ಬೆಟ್ಟಕ್ಕೆ ಪ್ರಭುಲಿಂಗನ ಬೆಟ್ಟವೆಂದು ಹೆಸರಾಯಿತೆಂದೂ ಹೇಳುತ್ತಾರೆ.

ಈ ಬೆಟ್ಟದಲ್ಲಿ ತಪಸ್ಸಿಗೆ ಅನುಕೂಲವಾದ ಗವಿಗಳನೇಕವಿವೆ. ಬೆಟ್ಟದ ಮೇಲೆ ಪ್ರಭುಲಿಂಗೇಶ್ವರನೆಂಬ ಶಿವಾಲಯವಿದೆ. ಇಲ್ಲಿಂದ ಒಂದು ಮೈಲಿ ದೂರದಲ್ಲಿ ಸುಪ್ರಸಿದ್ಧವಾದ ಶಂಭುಲಿಂಗನ ಬೆಟ್ಟವಿದೆ.

ಶಂಭುಲಿಂಗನಬೆಟ್ಟ.

ಶ್ರೀ ನಿಜಗುಣಶಿವಯೋಗಿಯ ಹೆಸರನ್ನ ಕೇಳದವರು ಕನ್ನಡಿಗರಲ್ಲಿ ವಿರಳ. ವೇದಾಂತಿಗಳಿಗಂತೂ ಇವನು ಪ್ರಾಣಸ್ವರೂಪ. ಕೀರ್ತನಕಾರರಿಗೆ ಇವನು ಮೂಲಾಧಾರ. ವಿದ್ವಾಂಸರಿಗೆ ಈತನ ಗ್ರಂಥಗಳು ಪರಮ ಪ್ರಮಾಣ. ಕನ್ನಡ ಸಾಹಿತ್ಯದಲ್ಲಿ ಮೊಟ್ಟಮೊದಲು ಹಾಡುಗಬ್ಬವನ್ನು ಬರೆದವನು ನಿಜಗುಣ ಶಿವಯೋಗಿ. ಕನ್ನಡದಲ್ಲಿ ವಸ್ತುಕೋಶ ಬರೆದವನೂ ಈತನೇ. ವೇದಾಂತ ಗ್ರಂಥಗಳನ್ನು ಬರೆದವನೂ ಈ ಕವಿ ಸಾರ್ವಭೌಮನೇ ಆಗಿದ್ದಾನೆ. ಶ್ರೀನಿಜಗುಣಶಿವಯೋಗಿಯು ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ಗ್ರಂಥ ನಿರ್ಮಾಣ ಮಾಡಿದ್ದಾನೆ.

೧. ಕೈವಲ್ಯ ಪದ್ಧತಿ.
೨. ವಿವೇಕ ಚಿಂತಾಮಣಿ.
೩. ಅನುಭವಸಾರ.
೪. ಅನುಭವಗೀತೆ.
೫. ಅನುಭಾವ ಬೋಧೆ.
೬. ಪರಮಾರ್ಥ ಪ್ರಕಾಶಿಕೆ.
೭. ಪುರಾತನರ ತ್ರಿವಿಧಿ.

ಎಂಬ ಈ ಮಹಾತ್ಮನ ಗ್ರಂಥಗಳು ಲೋಕಪೂಜ್ಯವಾಗಿವೆ. ಸಂಸ್ಕೃತದಲ್ಲಿಯೂ ಈತನು.

೧. ಆತ್ಮತರ್ಕ ಚಿಂತಾಮಣಿ.
೨. ದರ್ಶನಸಾರ.

ಎಂಬೆರಡು ಗ್ರಂಥಗಳನ್ನು ಬರೆದಿದ್ದಾನೆಂದು ಪ್ರತೀತಿಯಿದೆ. ಈ ಸಕ್ಕದದ ಹೊತ್ತಿಗೆಗಳು ಮಾತ್ರ ನಮ್ಮ ಹಸ್ತಗತವಾಗಿಲ್ಲ.

ಇಂತಹ ಮಹಾ ಕವಿಯೂ ಮಹಾ ದಾರ್ಶನಿಕನೂ ಶಿವಯೋಗಿ ಶ್ರೇಷ್ಠನೂ ಆದ ಶ್ರೀ ನಿಜಗುಣಶಿವಯೋಗಿಯ ತಪೋಭೂಮಿಯೇ ಶಂಭುಲಿಂಗನ ಬೆಟ್ಟ. ಈ ಕಾರಣದಿಂದ ನಾನು ವೀರಶೈವ ಕ್ಷೇತ್ರವೆಂಬ ಭಾವನೆಯಿಂದ ಈ ಸ್ಥಳವನ್ನು ನೋಡಲಿಕ್ಕೆ ಹೋದೆನು.

ಮೈಸೂರಿನಿಂದ ಚಾಮರಾಜನಗರದ ಮಾರ್ಗವಾಗಿ ಕೊಳ್ಳೇಗಾಲಕ್ಕೆ ಹೋಗುವ ರಾಜಮಾರ್ಗದಲ್ಲಿ (ಕೊಳ್ಳೇಗಾಲಕ್ಕೆ ೬ ಮೈಲಿ ದೂರದಲ್ಲಿ) ಶಂಭುಲಿಂಗನ ಬೆಟ್ಟವಿದೆ. ಇದು ಚಿಲಕವಾಡಿ ಎಂಬ ಗ್ರಾಮಕ್ಕೆ ಸಮೀಪದಲ್ಲಿರುವುದರಿಂದ ಇದಕ್ಕೆ ಚಿಲಕವಾಡಿ ಬೆಟ್ಟವೆಂದೂ ಜನರು ಕರೆಯುತ್ತಾರೆ. ಇದು ನಿಜವಾಗಿಯೂ ಬಹು ಚಿಕ್ಕ ಗುಡ್ಡವಾಗಿದೆ. ಪೊಂಬಾಯಿನ ಎಳಂತಸ್ತಿನ ಮನೆಯಷ್ಟು ಇದು ಎತ್ತರವಾಗಿಲ್ಲವೆನ್ನಬಹುದು. ಪುಣೆಯ ಪರ್ವತೀ ಗುಡ್ಡಕ್ಕಿಂತ ಇದನ್ನು ಚಿಕ್ಕದೆಂದೂ ಹೇಳಬಹುದು.

ಈ ಶಂಭುಲಿಂಗನ ಬೆಟ್ಟವು ಚಿಕ್ಕದಾದರೂ ಸುಂದರವಾಗಿದೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬ ಗಾದೆಯ ಮಾತು ಈ ಬೆಟ್ಟಕ್ಕೆ ಚೆನ್ನಾಗಿ ಒಪ್ಪುತ್ತದೆ. ಈ ಬೆಟ್ಟದ ಸುತ್ತಮುತ್ತಣ ಪ್ರಕೃತಿಯು ರಮಣೀಯವಾಗಿದೆ. ಬೆಟ್ಟದ ಮೇಲೆ ನಿಂತು ನೋಡುವ ನೋಟವು ಹೃದಯಂಗಮವಾಗಿದೆ.

ಯುಂಗವುವಾಗಿರುತ್ತದೆ. ಈ ಬೆಟ್ಟದಲ್ಲಿ ಮುಂದೆ ಹೇಳುವ ಮಹತ್ವವ ಸ್ಥಳಗಳಿವೆ. ಬೆಟ್ಟದ ಬುಡದಲ್ಲಿರುವ ಸೀನೀರಿನ ಸರೋವರವು ಮನೋಹರವಾಗಿದೆ. ಇದರ ಸುತ್ತಣ ಹೂಗಿಡಗಳು ಇದರ ರಮಣೀಯತೆಯನ್ನು ಹೆಚ್ಚಿಸಿವೆ. ವರ್ಷಕ್ಕೊಮ್ಮೆ ಇಲ್ಲಿ ಜಾತ್ರೆ ನಡೆಯುತ್ತದೆ.

ಶಂಭುಲಿಂಗನ ಗುಡಿಃ— ಶ್ರೀ. ನಿಜಗುಣಶಿವಯೋಗಿಗಳು ತಮ್ಮ ಗ್ರಂಥಗಳನ್ನೆಲ್ಲಾ "ಶಂಭುಲಿಂಗ" ಎಂಬ ಅಂಕಿತದಲ್ಲಿ ಮಾಡಿದ್ದಾರೆ. ಈ ಶಂಭುಲಿಂಗ ದೇವಾಲಯವು ಬೆಟ್ಟದ ಬುಡದಲ್ಲಿದೆ. ಈ ದೇವಾಲಯವು ವಿಶಾಲವಾಗಿಯೂ ಪ್ರಶಾಂತವಾಗಿಯೂ ಇದೆ. ಈ ಲಿಂಗವು ಮಾತ್ರ ಸ್ವಯಂಭುವಾಗಿದೆ. ಇಲ್ಲಿಗೆ ದಿನವೂ ಯಾತ್ರಿಕರು ಬಂದುಹೋಗುತ್ತಾರೆ. ಇಲ್ಲಿ ವೀರಶೈವರಾದ ಅರ್ಚಕರಿದ್ದಾರೆ. ಇವರನ್ನು ತಮ್ಮ ಡಿಗಳೆಂದು ಕರೆಯುತ್ತಾರೆ. ಇವರು ಲಿಂಗವನ್ನೂ ಯಜ್ಞೋಪವೀತವನ್ನೂ ಧರಿಸುತ್ತಾರೆ. ಈ ದೇವಾಲಯವು ದಕ್ಷಿಣಾಭಿಮುಖವಾಗಿದೆ. ಅಲ್ಲದೆ ಈ ಗುಡಿಗೆ ಪೂರ್ವದ ಬಾಗಿಲೊಂದೂ ಇದೆ. ಇದೇ ಕ್ಷೇತ್ರಾಧಿದೇವತೆ.

ಕಲ್ಯಾಣ ಮಂಟಪಃ— ದೇವಾಲಯದ ಮೇಲುಭಾಗದಲ್ಲಿ ಈ ಕಲ್ಲು ಮಂಟಪವಿದೆ. ಪ್ರಯಾಣಿಕರಿಗೆ ಇಳಕೊಳ್ಳುವಿಕ್ಕೆ ಅನುಕೂಲವಾಗಿದೆ. ಈ ಮಂಟಪದ ಕಂಬಗಳಮೇಲೆ ಹಲವು ವೀರಶೈವ ತಪಸ್ವಿಗಳ ಚಿತ್ರಗಳನ್ನು ಕೆತ್ತಿದ್ದಾರೆ.

ನಿಜಗುಣ ಗವಿಃ— ನಿಜಗುಣಶಿವಯೋಗಿ ತಪಸ್ಸು ಮಾಡುತ್ತಿದ್ದದು ಈ ಗವಿಯಲ್ಲಿಯೇ ಎಂದು ಹೇಳುತ್ತಾರೆ. ಇದು ಅತ್ಯಂತ ದರ್ಶನೀಯವಾಗಿದೆ. ಈಗ ಇದನ್ನು ಉತ್ತಮ ಸ್ಥಿತಿಯಲ್ಲಿಟ್ಟಿದ್ದಾರೆ.

ಷಡಕ್ಷರ ಗವಿಃ— ಶ್ರೀ. ನಿಜಗುಣಶಿವಯೋಗಿಯ ಸಮಕಾಲೀನನೂ ಮಹಾನುಭಾವನೂ ವೈರಾಗ್ಯ ಪ್ರಧಾನವಾದ ಹಾಡುಗಳನ್ನು ಹಾಡಿದವನೂ ಆದ ಮುಪ್ಪಿನ ಷಡಕ್ಷರ ಸ್ವಾಮಿಯು ಈ ಗವಿಯಲ್ಲಿ ತಪಸ್ಸು ಮಾಡಿದನೆಂದು ಹೇಳುತ್ತಾರೆ. ಈಗಲೂ ಇಲ್ಲಿ ಒಬ್ಬ ಶರಣರು ತಪಸ್ಸು ಮಾಡಿದ್ದಾರೆ. ನಿಜಗುಣ ಗವಿಯಂತೆಯೇ ದರ್ಶನಾರ್ಹವಾಗಿದೆ. ಹಾಗೂ ಸುವ್ಯವಸ್ಥಿತವಾಗಿದೆ.

ದಾಸೋಹದ ಮಠಃ— ಇದೊಂದು ಲಿಂಗವಂತರ ಮಠ. ಬೆಟ್ಟದ ಕೆಳಭಾಗದಲ್ಲಿದೆ. ಇಲ್ಲಿ ಯಾತ್ರಿಕರಿಗೆ ವಾಸಕ್ಕೆ ಅನುಕೂಲವಾಗಿದೆ. ಈ

ಮಠದ ಸ್ವಾಮಿಗಳ ಗದ್ದಿಗೆಗಳು ಕೆಲವು ಕೆಳಭಾಗದಲ್ಲಿವೆ. ಇದರಲ್ಲಿ ನಿಜಗುಣ ಸಮಾಧಿಯೂ ಇದೆ ಎನ್ನುತ್ತಾರೆ. ಆದರೆ ಈ ಮಾತನ್ನು ಚೆನ್ನಾಗಿ ಪರಿಶೀಲಿಸಬೇಕಾಗಿದೆ. ಈ ಬೆಟ್ಟದಲ್ಲಿ ದುರ್ಗಿಯ ಗುಡಿಯೊಂದು ಇದೆ. ದಾಸೋಹಮಠವನ್ನು ಭಿಕ್ಷದ ಮಠವೆಂದೂ ಕರೆಯುತ್ತಾರೆ.

ವೀರಭದ್ರ ದೇವಾಲಯಃ— ಇದು ವಿಶಾಲವಾದ ಗುಡಿ. ಶಂಭುಲಿಂಗನ ಗುಡಿಯಷ್ಟೇ ಪ್ರಾಚೀನವೆಂದು ಕಾಣುತ್ತದೆ. ಮೂರ್ತಿ ಭವ್ಯವಾಗಿದೆ. ಶಂಭುಲಿಂಗನ ಗುಡಿ ಪಕ್ಕದಲ್ಲಿದೆ.

(ಶಿವಂಭೂಯಾತ್ರೆ.)

ಶ್ರೀ.

ಘನಮಠದಾರ್ಯರ ಧಾರ್ಮಿಕ ವಿಚಾರಗಳು.

[ಶ್ರೀ. ಘನಮಠದಾರ್ಯರು ಸುಮಾರು ೧೨೦ ವರ್ಷಗಳ ಹಿಂದೆ ಬಹು ಪ್ರಖ್ಯಾತ ಧಾರ್ಮಿಕ ಪುರುಷರಾಗಿ ಹೋದರು. ಅವರು ಪುರಾತನ ಕಾಲದಿಂದಲೂ ವೀರಶೈವರಲ್ಲಿ ನಡೆದುಬಂದ ಪದ್ಧತಿಗನುಸಾರವಾಗಿ ಧರ್ಮಗ್ರಂಥಗಳನ್ನು ಪರಿಶೀಲಿಸಿದವರಾಗಿ ಅವುಗಳ ತತ್ವಗಳನ್ನು ತಮ್ಮ ಆಚರಣೆಯಲ್ಲಿ ತಂದುಕೊಂಡವರಾಗಿದ್ದರು. ಇಂಥವರ ವಿಚಾರಗಳನ್ನು ಅರಿಯುವದು ಬಹು ಮಹತ್ವಪಾದದ್ದು. ಶಿವಾನುಭವದ ಜ್ಞಾನವನ್ನು ಮುಂದುವರಿಸುವ ಪೂರ್ವ ಪದ್ಧತಿಯು ಈಗ ವೀರಶೈವ ಸಮಾಜದಲ್ಲಿ ಲೋಪವಾಗಹತ್ತಿದೆ. ಅಥವಾ ಇಲ್ಲೆಂದರೂ ಸಲ್ಲುವದು. ವೀರಶೈವರು ತಮ್ಮ ಸಂಸ್ಕೃತಿಗೆ ಹೊರತಾದ ಪಾಶ್ಚಾತ್ಯವನ್ನು ಹೆಚ್ಚಾಗಿ ಅಭ್ಯಾಸ ಮಾಡುವ ಪ್ರವೃತ್ತಿಯು ಈಗ ಹೆಚ್ಚಾಗಿದ್ದದ್ದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಈ ಸ್ಥಿತಿಯಲ್ಲಿ ಶ್ರೀ. ಘನಮಠದಾರ್ಯರಂಥ ಮಹಾನುಭಾವರ ವಿಚಾರಗಳನ್ನು ಅರಿಯುವದು ಮಹತ್ವದ್ದಾಗಿದೆ.

ಶ್ರೀ. ಘನಮಠದಾರ್ಯರು (೧) ಷಟ್‌ಸ್ಥಲ. (೨) ಕಾಯಕಗಳು. (೩) ಮತ್ತು ಪಾರಮಾರ್ಥ ಈ ವಿಷಯಗಳ ಸಂಬಂಧವಾಗಿ ಬಹು ಮಾರ್ಮಿಕ ವಿಚಾರಗಳನ್ನು ತಮ್ಮ "ಕೃಷಿಜ್ಞಾನ ಪ್ರದೀಪಿಕೆ" ಎಂಬ ಗ್ರಂಥದಲ್ಲಿ ಪ್ರಕಟಿಸಿರುತ್ತಾರೆ. ಅವುಗಳನ್ನೇ ನಾವು ಶಿವಾನುಭವದ ವಾಚಕರಿ ದುರಿಗೆ ಇಲ್ಲಿ ಇಟ್ಟಿದ್ದೇವೆ ..... ಸಂಪಾದಕ.]

ಷಟ್‌ಸ್ಥಲ.

ಸಹಜ ಸದ್ಭಕ್ತರಾಚರಣೆಯಾದ ಷಟ್‌ಸ್ಥಲದ ವರ್ತನೆಯು ಎಂತೆಂದೊಡೆ ಗುರುಲಿಂಗಜಂಗಮದಲ್ಲಿ ಭೇದವಿಲ್ಲದೆ ತ್ರಿವಿಧಮೂರ್ತಿಗಳೊಂದೇ ಎಂದು ಗುರುಲಿಂಗದ ಮುಖವೇ ಜಂಗಮವೆಂದು ನಿಸ್ಸಂಶಯದಿಂದ ಸುವರ್ಣ ವಸನಾನ್ನ ಮೊದಲಾದ ಸಮಸ್ತ ಭೋಗಪದಾರ್ಥಗಳನ್ನೆಲ್ಲ ಸದ್ಭಕ್ತಿಪೂರ್ವಕದಿಂದ ಚನ್ನಾಗಿ ಸಮರ್ಪಿಸಿ ವೀರಶೈವಾಗಮಂಗಳಲ್ಲಿ ಹೇಳಿದ ಸದ್ವೀರಮಾಹೇಶ್ವರ ಕುರುಹಂ ಕಂಡು ಶರಣಾಗತನಾಗುವದೇ ಭಕ್ತಿ ಲಕ್ಷಣವು ಆ ಆಚರಣೆಯಲ್ಲಿ ಆಚರಿಸುತಿರ್ಪ ಸಹಜ ಸದ್ಭಕ್ತನಾಚರಣೆಯೇ ಭಕ್ತಸ್ಥಲವೆನಿಸುವದು.

ಈ ಭಕ್ತಸ್ಥಲವು ನಿಜವಾದ ಆ ಸದ್ಭಕ್ತಗೆ ಮುಂದಿನ ಐದು ಸ್ಥಲವು ತನ್ನಿಂದ ತಾನೇ ಸಾಧ್ಯವಾಗುವವು. ಹೇಗಂದರೆ ಸಾಕ್ಷಿ "ಪರವಧುವಂ ಪರದ್ರವಿಣಮಂ ಪರಹಿಂಸೆಯನ್ಮೈದೆ ದೂರದಿಂ। ಪರಿಹರಿಸಿ ಸ್ವದೇಶಿಕ ನಿರೂಪಿತಮಪ್ಪ ಷಡರ್ಥ ಸಂಗ್ರಹಾ। ಚರಣೆಯೊಳೇಕಲಿಂಗ ನಿಜನಿಷ್ಠೆ ಸಮಾಹಿತವಾದಡಂತದೇ ಪರಮ ಮಹೇಶ್ವರ ಸ್ಥಲದ ಲಕ್ಷಣ ವೃತ್ತಿಪದಂ ಶಿವಾಧವಾ" ಎಂಬ ವಾಯಿದೇವ ಪ್ರಭುಗಳ ವಾಕ್ಯದ ಅನ್ವಯವು ಹೇಗೆಂದರೆ, ಸಹಜ ಸದ್ಭಕ್ತರ ವರ್ತನೆಯಲ್ಲಿ ಪರಸತಿ, ಪರಾರ್ಥ, ಪರ ಹಿಂಸೆಗಳಂ ಬಿಟ್ಟು ಸದ್ಗುರುನಾಥನುಪದೇಶಕ್ರಮದಂತೆ, ಷಡರ್ಥ ಸಂಗ್ರಹಾಚರಣೆಯಲ್ಲಿ, "ಏಕಮೂರ್ತಿಸ್ತ್ರಯೋ ಭಾಗಂ ಗುರುಲಿಂಗಂ ತು ಜಂಗಮಂ॥ ಜಂಗಮಂ ಗುರುಲಿಂಗಂ ಚ। ತ್ರಿವಿಧಂ ಲಿಂಗಮುಚ್ಯತೆ॥" ಎಂಬಾಗಮ ಪ್ರಮಾಣದಂತೆ, ಏಕಲಿಂಗನಿಜನಿಷ್ಠೆಯಲ್ಲಿ ಕೂಡಿದ ಭಕ್ತ ಸ್ಥಲದಾಚರಣೆಯಲ್ಲಿ ಮಹೇಶ್ವರ ಸ್ಥಲವಡಗಿಸ್ಪುದು. ಸದ್ಭಕ್ತರಲ್ಲಿ ಅನ್ಯ ಸ್ತ್ರೀಯರ ವ್ಯಸನ, ಅನ್ಯ ದ್ರವ್ಯ ಕಾಂಕ್ಷೆ, ಅನ್ಯ ಪ್ರಾಣ ಹಿಂಸೆ, ಅನ್ಯ ದೈವದ ಭಜನೆಗಳಂ ತಿರಸ್ಕರಿಸುತ್ತ ಸದ್ಗುಣಗಳಿಂದ ಲೋಕೋಪಕಾರಿ

ಗಳಾಗಿ ವರ್ತಿಸಬೇಕೆಂಬಾಶೆಯುಂಟಾಗಿ, ಜಗದೋಪಕಾರಿಗಳಾಗಿರುತ್ತ ದುಷ್ಟರಾದ ದುರ್ಜನರಂ ತಿರಸ್ಕರಿಸಿ, ಹಿಡಿದಾಚಾರಮಂ ಬಿಡದೆ ನಡಿಸ ಬೇಕೆಂಬ ಛಲದ ನೈಷ್ಠೆಯಲ್ಲಿ ಪಂಚಾಚಾರವೇ ಪ್ರಾಣವಾಗಿ ವರ್ತಿಸುವ ವೀರಮಾಹೇಶ್ವರಾಚಾರ್ಯ ಸ್ಥಿತಿಯೇ ಮಹೇಶ್ವರ ಸ್ಥಲವೆನಿಸುವದು.

ಆ ಮಹೇಶ್ವರ ಸ್ಥಲದಲ್ಲಿ ಪ್ರಸಾದಿ ಸ್ಥಲವಡಗಿಸ್ಪುದು. ಹೇಗಂದರೆ ಮಹೇಶ್ವರ ಸ್ಥಲದಾಚರಣೆಯು ನಿಜವಾಗಿ ಸಕಲ ಪದಾರ್ಥಂಗಳನ್ನು ಅಂತರಂಗ ಬಹಿರಂಗವಲ್ಲಿ ಜ್ಞಾನಕ್ರಿಯಾರೂಪ ಸಕಲ ಭೋಗೋಪ ಭೋಗಂಗಳನೆಲ್ಲ ಲಿಂಗವಿರಹಿತವಾಗಿ ಅಣುಮಾತ್ರವಾದರೂ ಕೊಳ್ಳದೆ, ಸಕಲವೆಲ್ಲವನು ಲಿಂಗಕ್ಕರ್ಪಿಸಿ ಲಿಂಗ ಭೋಗೋಪಭೋಗಿಯಾಗಿರ್ದಲ್ಲಿ ಆ ಭಕ್ತನೇ ಅನಾದಿ ಪ್ರಸಾದಿ ಎನಿಸಿಕೊಂಬುವನು.

ಆ ಪ್ರಸಾದಿಯ ಸ್ಥಲದಲ್ಲಿ ಪ್ರಾಣಲಿಂಗಿಸ್ಥಲವಡಗಿಸ್ಪುದು ಹೇಗೆಂದರೆ "ಪರಿಪೂರ್ಣ ಪ್ರಸನ್ನೇತಿ" ಎಂದುಂಟಾಗಿ, ತಾನು ಪೂರ್ಣಪ್ರಸಾದ ಕಾಯ ನಾದಲ್ಲಿ ಲಿಂಗ ಬೇರೆ ತಾ ಬೇರೆಂಬ ಭಿನ್ನತ್ವವಿಲ್ಲ. ಸರ್ವಾಂಗ ಲಿಂಗಮ ಯವಾಗಿ, ವಾಯುಪ್ರಾಣವಳಿದು, ಲಿಂಗಪ್ರಾಣವಾಗಿರ್ಪಲ್ಲಿ, ಆ ಭಕ್ತನೇ ಪ್ರಾಣಲಿಂಗಿ ಎನಿಸಿರ್ಪನು.

ಪ್ರಾಣಲಿಂಗಿ ಸ್ಥಲದಲ್ಲಿ ಶರಣಸ್ಥಲವಡಗಿಸ್ಪುದು ಹೇಗಂದರೆ ಪಂ ಚೇಂದ್ರಿಯ ಸಕಲ ಸುಖಭೋಗಂಗಳನೆಲ್ಲ ಲಿಂಗಕ್ಕೆ ಕೊಟ್ಟು ಭೋಗಿ ಸುವಲ್ಲಿ, ಶರಣಸತಿ ಲಿಂಗಪತಿ ಭಾವದಿಂದ ನಿರ್ವಂಚಕ ನಿರಭಿಮಾನ ದಿಂದ ಲಿಂಗ ಭೋಗದಲ್ಲಿ ತೆರೆ ಮರೆ ಇಲ್ಲದೆ ಪರಮ ಪತಿವ್ರತಾಂಗ ನೆಯು ತನ್ನಂಗ ಸುಖವನ್ನು ಪುರುಷಂಗಿತ್ತು ಮಮಕಾರದಿಂದಪ್ಪಿದಲ್ಲಿ ನಿಜವಲ್ಲಭನಂಗ ಭೋಗದ ಸರ್ವ ಸುಖವು ತನುಗುಪಭೋಗದಾನಂದ ವಾಗುವಂತೆ ಶರಣ ಲಿಂಗಭೋಗೋಪಭೋಗದ ಪರಿ ಇಪ್ಪುದಾಗಿ ಈ ರೀತಿಯಿಂದ ಸಕಲ ಸುಖಭೋಗಂಗಳನ್ನೆಲ್ಲ ಸರ್ವೇಂದ್ರಿಯ ಮುಖ ಗಳಿಂದ ವೀರಶೈವಾಗಮೋಚಿತ ಕ್ರಮದಿಂದ ಅರ್ಪಿಸುತ್ತ ಲಿಂಗದ ಸರ್ವಾ ನಂದವೇ ತನಗೆ ಪ್ರಸಾದ ಭೋಗವಾಗಿ ಸರ್ವಾಂಗಲಿಂಗಮಯನಾಗಿ ವರ್ತಿಸುವ ಭಕ್ತನೇ ಶರಣನೆನಿಸಿರ್ಪನು.

ಶರಣ ಸ್ಥಲದಲ್ಲಿ ಐಕ್ಯಸ್ಥಲವಡಗಿಸ್ಪುದು ಹೇಗೆಂದರೆ ತನಗವಸಾನ ಭೂಮಿಯೇ ಶಿವಲಿಂಗ ಆ ಶಿವಲಿಂಗಕ್ಕವಸಾನಭೂಮಿಯೇ ತಾನಾಗಿ, ಸಕಲ

ಪ್ರಪಂಚ ರಚನಾ ಕ್ರಿಯೆಯಂ ನೆರೆ ಬಿಟ್ಟು, ಅಷ್ಟವಿಧಾರ್ಚನ ಷೋಡ ಶೋಪಚಾರ ಕ್ರಿಯೆಗಳನೆಲ್ಲವ ನಷ್ಟವ ಮಾಡಿ, ನಿರ್ಭಾವ ಸ್ವರೂಪ ನಾಗಿ, ಶಿವಿ ಕರ್ಪೂರ ಸಂಯೋಗದಂತೆ, ಸ್ವಯಂಜ್ಯೋತಿ ಸ್ವರೂಪನಾಗಿ, ಲಿಂಗದೊಳ್ ಬೆರೆದು, ಲಿಂಗಾಂಗಸಾಮರಸ್ಯನಾಗಿರ್ಪಲ್ಲಿ ಆ ಭಕ್ತನೇ ಐಕ್ಯನಾಗಿರ್ಪನು.

ಈ ಷಟ್‌ಸ್ಥಲ ಜ್ಞಾನ ಪೂರ್ಣನಾದ ಸದ್ಭಕ್ತನ ಸಹಜ ಭಕ್ತಿಯ ನಿಲವ ತಿಳಿಯಬೇಕಾದರೆ, ಬಹುಜ್ಞಾನಾರ್ಜಿತ ಪುಣ್ಯದಿಂದಲ್ಲದೆ ತಿಳಿಯದು. "ಏಕೇನ ಜನ್ಮ ಸಂಪ್ರಾಪ್ಯ। ಕರ್ಮಜ್ಞಾನ ಸಮಾಧಿಭಿಃ॥ ನರಾಣಾಂ ಕ್ಷೀಣ ಪಾಪಾನಾಂ। ಶಿವಭಕ್ತಿ ಪ್ರಜಾಯತೆ" ಎಂದು ಮತ್ತು "ದುರ್ಲಭಂ ನರ ಜನ್ಮಾನಿ। ವಿವೇಕಮತಿ ದುರ್ಲಭಂ ದುರ್ಲಭ ಶಿವಭ ಕ್ತಾನಾಂ। ಜ್ಞಾನೀ ತ್ರೈಲೋಕ್ಯ ದುರ್ಲಭಂ" ಎಂದುಂಟಾಗಿ, ಈ ಶಿವ ಸದ್ಭಕ್ತಿಯು ಪ್ರಾಪ್ತಿಸಬೇಕಾದರೆ, ಬಹು ಜನ್ಮದ ಸುಕೃತದಿಂದಲ್ಲದೆ ಪ್ರಾಪ್ತಿಸದು.

ಕಾಯಕ.

ಸದ್ಭಕ್ತರಾದವರು ಸತ್ಯ ಶುದ್ಧ ಕಾಯಕದಿಂದ ಮಾಡಿ ನೀಡಿ ಮುಕ್ತ ರಾಗಬೇಕು. ಈ ಸತ್ಯ ಶುದ್ಧ ಕಾಯಕವೇ ಕೈಲಾಸವೆಂದರಿಯದೇ, ಕೆಲವು ಕೆಲವು ಭಿನ್ನವ್ರತ ನೇಮಾಚಾರದಿಂದಾಚರಿಸಿ, ಪೂರ್ಣ ಭಕ್ತಿಗೆ ವಿಲಕ್ಷಣರಾಗಿ, ಕೈಲಾಸಾದಿ ಚತುರ್ವಿಧ ಫಲಗಳ ಧರ್ಮಾಚಾರ ಪದ ಗಳಾದ ಧರ್ಮಾದಿ ಮೋಕ್ಷಾಂತ್ಯವಾದ ಚತುರ್ವಿಧ ಫಲಂಗಳ ಪಡೆವ ಭಿನ್ನ ಭ್ರಾಂತರಾಗಿರ್ದವರು ಕೈಲಸಾದಲ್ಲಿರ್ದರೂ ಭಿನ್ನ ಭವಿತ್ವವೇ ಮುಂದುಗೊಂಡಿರ್ದ ಕಾರಣ ಆ ಕೈಲಾಸದಲ್ಲಿರ್ದರೂ ಶಿವನ ಸಾನ್ನಿಧ್ಯವಿಲ್ಲದೆ ಭವ ಹಿಂಗದೇ ಇರ್ಪರು. ಅದು ಹೇಗಂದರೆ ಒಬ್ಬಾನೊಬ್ಬ ರಾಜನ ಪಟ್ಟಣದಲ್ಲಿ ಒಬ್ಬ ದರಿದ್ರನು ನೆಲೆಗೊಂಡಿರ್ದರೂ ರಾಜ ಬಹು ಮಾನ ವಿಲ್ಲದೆ ರಾಜ ಸಂಗ ಸಮರಸವಿಲ್ಲದೆ ದಾರಿದ್ರ್ಯವನ್ನನುಭವಿಸುತ್ತಲಿರ್ದಂತೆ, ಷಟ್‌ಸ್ಥಲ ಜ್ಞಾನಹೀನರಾಗಿದ್ದವರು ಕೈಲಾಸದಲ್ಲಿರ್ದರೂ ನಿಜಸುಖ ಸಾಧ್ಯವಾಗದೆ ಭವ ದುಃಖಿಗಳಾಗಿಯೇ ಇರ್ಪರು.

ಷಟ್‌ಸ್ಥಲ ಜ್ಞಾನ ಸಂಬಂಧವಾದ ಸದ್ಭಕ್ತಗಣಂಗಳು ಈ ಲೋಕ ದಲ್ಲಿರ್ದರೂ, ಪರಶಿವನ ಚಿದಾನಂದ ಮೂರ್ತಿಗಳು ಆ ಲೋಕದಲ್ಲಿ ರ್ದರೂ ಪರಶಿವನ ಸ್ವಯಾನಂದ ಮೂರ್ತಿಗಳು "ಭಾಸತೇ ರಾಜ ಪುತ್ರ ವತ್" ಎಂಬಂತೆ ರಾಜನಿಗೆ ಮಗನಾಗಿ ಪುಟ್ಟಿದಲ್ಲಿ ಲೋಕದ ಭಿನ್ನಾ ತ್ಮರಿಗೆ ರಾಜಭಯ ರಾಜಮಾನ್ಯಗಳುಂಟಲ್ಲದೆ ರಾಜಕುಮಾರನಿಗೆ ರಾಜ ಭಯಾದಿಗಳುಂಟೇ? ಹಾಗೆ ಸದ್ಭಕ್ತರು ಶಿವನಿಗೆ ಕಾಯಕಗಳಿಂದ ಸಲುಗಿ ಗರಾಗಿರುವದರಿಂದ ಭಯವಿಲ್ಲದೆ ಸ್ವತಂತ್ರರಾಗಿ ಸ್ವಲೀಲಾನಂದ ಭಕ್ತಿ ಕಾಯಕವನಾಚರಿಸುತ್ತಿರ್ಪರು.

ಇಂಥ ಸದ್ಭಕ್ತನಿಪ್ಪ ಲೋಕವೇ ಕೈಲಾಸ. ಆತನಿರ್ದಲ್ಲಿರುವದೇ ಸಾಲೋಕ್ಯ ಪದವು. ಆತನ ಸವಿೂಪದಲ್ಲಿರ್ದ ಸೇವಕರಾದವರೇ ಸಾವಿೂಪ್ಯ ಪದಸ್ಥರು. ಆ ಭಕ್ತನಾಚರಣೆಯುಳ್ಳವರೇ ಸಾರೂಪ್ಯ ಪದಸ್ಥರು. ಆ ಸದ್ಭಕ್ತನ ಸಾಮರಸ್ಯಾನಂದ ಗೋಷ್ಠಿಯಲ್ಲಿಪ್ಪವರೇ ಸಾಯುಜ್ಯಪದಸ್ಥರು. ಇದನರಿಯದೆ, ಧರ್ಮಾರ್ಥ ಕಾಮಮೋಕ್ಷಂಗಳಂ ಬಯಸಿ, ಕರ್ಮ ನಿಷ್ಠರಾಗಿರ್ದವರು ಭವಿಗಳೆನಿಸುವರು. ಕಾಯಕಗಳನ್ನವಲಂಬಿಸಿರ್ದವರು ಭಕ್ತರೆನಿಸುವರು. ಸಾಕ್ಷಿ "ಕೈಲಾಸಾದಿ ಪದೇಷ್ವಾಶಾ। ಯಸ್ತಸ್ಯ ಭವಿ ನೋ ಭವೇತ್॥ ಭವಿ ಶೈವಪದಂ ಸರ್ವಂ। ತದ್ಗಣೋ ಭವಿನೋ ಗಣಾಃ"॥ ಎಂದುಂಟಾಗಿ, ಧರ್ಮದಿಂದ ಅರ್ಥ. ಅರ್ಥಪ್ರಯೋಜನವಾದುದೇ ಕಾಮ. ಕಾಮುಕಲ್ಲಿ ಜ್ಞಾನೋದಯದಿಂದ ಮೋಕ್ಷಾಪೇಕ್ಷೆ ಅದು ಕಾರಣ ಈ ಚತುರ್ವಿಧ ಫಲಪದತ್ವಂಗಳನಿಚ್ಛಿಸದೆ ಶಿವದಿಂದಿರ್ಪುದೇ ಧರ್ಮ. ಆ ಶಿವಕಾಯಕ ಧರ್ಮ ಭಕ್ತಿಯಿಂದ ಪಾರಮಾರ್ಥ ಜ್ಞಾನಿಯಾಗಿರ್ಪುದೇ ಅರ್ಥ ಕಾಮಾದಿ ಅಂತಷಡ್ವರ್ಗಂಗಳಿಗೆ ವಿಲಕ್ಷಣ ಬ್ರಹ್ಮವನಿಪ್ಪಿ ನಿರ್ವಾಣಿ ಯಾಗಿಪ್ಪೆನೆಂಬಾಪೇಕ್ಷೆಯೇ ಕಾಮ. ಸ್ವಸ್ವರೂಪ ಸಾಕ್ಷಾತ್ಕಾರದಿಂದಾ ಭಕ್ತನ ಸಾಮರಸ್ಯನೇ ಮೋಕ್ಷ. ಈ ಪ್ರಕಾರವಾದ ಆಚರಣೆಯಿಂದ ಪುರ್ದೇ ಸದ್ಭಕ್ತಿಯೆನಿಸುವದು.

ಪಾರಮಾರ್ಥ.

"ಪಿಂಡ ಬ್ರಹ್ಮಾಂಡಯೋರೈಕ್ಯಂ" ಎಂಬ ಶ್ರುತಿ ಪ್ರಮಾಣ ಉಟ್ಟಾಗಿ ತನ್ನಂಗದೊಳಗಜಾಂಡವೆಲ್ಲವಂ ಕಂಡ ಪರಿ ಎಂತೆಂದರೆ, ಪಾದಂಗಳೇ

ಪಾತಾಳಂಗಳು. ಕಟಿಯಿಂದ ಕಂಠ ಪರ್ಯಂತರ ಮರ್ತ್ಯಲೋಕವು. ಮಸ್ತಕವೇ ಸ್ವರ್ಗವೆಂದೆನಿಸುವದು. ಅಷ್ಟವುದವೇ ದಿಗ್ದಂತಿಗಳು. ತಲೆಯ ಚಿಪ್ಪೆಂಬುದೇ ಊರ್ಧ್ವಕಟಾಹ. ಪಾದತಳವೇ ಅಧೋಕಟಾಹವೆನಿಸುವದು. ಕಠಿಣ ದ್ರವ್ಯಾದಿಗಳೈದು ಭೂತಂಗಳು. ವದನ ಗುಣಂಗಳೇ ಸ್ವರ್ಗ ನರಕಂಗಳು. ವಾಮಭಾಗದ ನೇತ್ರವೇ ಚಂದ್ರ. ದಕ್ಷಿಣ ಭಾಗದ ನೇತ್ರವೇ ಸೂರ್ಯನು. ಉಸುರಿಡೆಯೂಟವೇ ವಾಯು. ಏಳು ಧಾತುಗಳೇ ಸಪ್ತದ್ವೀಪಂಗಳು. ದೇಹಾದ್ಯಂತವಾಗಿರುವ ಸಮಸ್ತ ಕೇಶಂಗಳೇ ತರುಲತೆಗಳು. ಏಳಾವರ್ತಿಯೇ ಸಪ್ತಸಮುದ್ರಂಗಳು. ಗ್ರಂಥಿಗಳೆಲ್ಲವೂ ಗುಡ್ಡ ಬೆಟ್ಟಂಗಳು. ಸುಳಿಯುತ್ತಿಹ ಸಕಲ ಕರಣಾದಿಗಳೇ ಸಮಸ್ತ ಖಗಮೃಗಾದಿಗಳು. ಪುಣ್ಯ ಪಾಪಂಗಳೇ ದನುಜ ದಿವಿಜರು. ಜನನವೇ ಸೃಷ್ಟಿ. ಮರಣವೇ ಲಯವೆಂದೆನಿಸುವದು. ಅಜ್ಞಾನವೆಂಬುದೇ ಕಾರ್ಗತ್ತಲು. ಅರಿವೇ ಬೆಳಕು. ನಿದ್ರೆಯೇ ರಾತ್ರಿ. ಜಾಗ್ರವೇ ಹಗಲು. ದುಃಖವೇ ಇಹ. ಸುಖವೇ ಪರ. ಜನಸೀಜನಕರೇ ಪಾರ್ವತೀಪರಮೇಶ್ವರರುಗಳು. ಮುಖವೇ ಮೂಡಲು. ಬೆನ್ನೇ ಪಡುವಲು. ಎಡವೇ ಉತ್ತರ ದಿಕ್ಕು. ಬಲವೇ ದಕ್ಷಿಣ ದಿಕ್ಕು. ಜ್ಞಾನೇಂದ್ರಿಯ ಸಮುದಾಯವೇ ಸುಜನರು. ಕರ್ಮೇಂದ್ರಿಯ ಪ್ರಸರವೇ ಖಲಜನರು. ಸಮಸ್ತ ರೋಗಂಗಳೇ ಉತ್ಪಾತಂಗಳು. ಮನವೇ ದೊರೆಯು. ಉಳಿದ ಕರಣಂಗಳೇ ಜನರು. ಅಶುಚಿಯೇ ಶೂದ್ರತ್ವವು. ಆಚಾರವೇ ಬ್ರಾಹ್ಮಣ್ಯ. ಅಶನವೇ ಸುಗ್ಗಿ. ಹೊಟ್ಟೆಯೇ ಹಗೆ. ದಶಮಲವೇ ಕಸವು. ಪುಸಿಯೇ ಹೊಲೆತನ. ಸಿರಿ ದಾರಿದ್ರ್ಯಂಗಳೇ ಸುಭಿಕ್ಷ ದುರ್ಭಿಕ್ಷಂಗಳು. ಸತ್ವ ರಜ ತಮಾದಿ ತ್ರಿವಿಧ ಗುಣಗಳೇ ತ್ರೈಮೂರ್ತಿಗಳು. ಐದು ಅವಸ್ಥೆಗಳೇ ಪಂಚಕೃತ್ಯಂಗಳು. ಉದಿಯೇ ಸೃಷ್ಟಿ. ಮಾರಾಗ್ನಿ ಮುಖ್ಯವೇ ದಾವಾಗ್ನಿ ಮೊದಲಾದ ಪಂಚಾಗ್ನಿಗಳು. ಶೀತೋಷ್ಣಂಗಳೇ ಚಳಿ ಬಿಸಿಲು. ಆರಯ್ಯೆ ಸಿರಿಯೇ ಪಡೃತುಗಳು. ಮೈಬೆವರೇ ವೃಷ್ಟಿಯು. ಆಧಾರ ಮೊದಲಾದ ದಶವಿಧ ಚಕ್ರಂಗಳೇ ಕ್ಷೇತ್ರಂಗಳು. ಈಡಾದಿ ನಾಡಿಗಳೇ ತೀರ್ಥಂಗಳು. ಮಿಕ್ಕ ನಾಡಿಗಳೇ ತಟಿಣಿಗಳು. ಬಾಲ್ಯಾದಿಗಳೇ ಮೂಜಗಂಗಳು. ಸಿರವೇ ಮೇರು. ಆ ಸಿರದೊಳ್ ಸೇರಿ ಸುಸ್ಥಿರವಾದ ಸುಷುಮ್ನವೇ ರಜತ ಶೃಂಗವು. ಅಲ್ಲಿಪ್ಪ ಜೀವನೇ ಶಿವನು. ಇತ್ಯಾದಿ ಬ್ರಹ್ಮಾಂಡದ ಅಖಿಲ ಲಕ್ಷಣಗಳನ್ನು ಪರಿಕಿಸುತ ತನ್ನಯ ಶರೀರದೊಳು ಕಂಡು, ನುತ್ತಿ ಘನಮತಾದಿಗಳ ಒಳಹೊರಗೆ ತುಂಬಿರ್ದ ಗಗನದೋಪಾದಿಯೊಳು,

ಶರೀರ ಕೋಟಿಗಳ ನುಂಗಿರುತಿರ್ದ ಬ್ರಹ್ಮಾಂಡದೊಳ ಹೊರಗೆ ಇನಿತಾದರೂ ತೆರಹಿಲ್ಲದೆ, ಇಡಿಕಿರಿದಾಗಿ ತೋರುತ್ತಿರ್ದ ಚಿದ್ಘನ ಶೇಷಭೂಷಣ ಪ್ರಭು ಪದದ್ವಯ ಬ್ರಹ್ಮವದು ಪರಿಪೂರ್ಣವೆನಿಸಿಪ್ಪುದು.

ಪರಿಪೂರ್ಣ ಬ್ರಹ್ಮದಲ್ಲಿ ಇಂತನಂತ ಬ್ರಹ್ಮಾಂಡಂಗಳಂತೆ ಅನಂತ ಪಿಂಡಾಂಡಗಳುಂಟು. ಅವುಗಳಲ್ಲಿ ಜಡಪಿಂಡಗಳಾದರೆ ಶಿವತತ್ವಕ್ಕೆ ಕಾರಣವಲ್ಲಾಗಿ, ಈ ಬ್ರಹ್ಮಾಂಡದಲ್ಲಿ ಕೆಲವು ಭೂಮಿಗಳು ಕಲ್ಲು ಮೊರಡಿಗಳಾಗಿ, ಏನೇನೂ ಫಲಿಸದೆ, ಭೂತ ಪ್ರೇತ ಪಿಶಾಚಾದಿ ನಿಶಾಚರ ಪ್ರಾಣಿಗಳು ಮತ್ತು ಕ್ರೂರ ಮೃಗ ಪಶುಗಳ ವಾಸಸ್ಥಾನವಾದ ದುರಾರಣ್ಯದಂತಾಗಿ ಕೆಟ್ಟು ಹೋಗುತ್ತಿಹವು. ಹೇಗಂದರೆ, ಸಕಲ ದುರ್ಗುಣಂಗಳ ಸಮುದಾಯದಿಂದ ತುಂಬಿದ ಅಜ್ಞಾನಾಂಧಕಾರ ಭರಿತವಾದ ಖಲ ಜನರ ಶರೀರವೆಂಬ ಜಡಪಿಂಡಂಗಳೇ ದುರಾರಣ್ಯವೆನಿಸಿಪ್ಪುವು.

ಪುಣ್ಯಮಯರಾದ ಸದ್ಗುಣ ಸದಾಚಾರ ಸುಜ್ಞಾನ ಸದ್ಭಕ್ತರೆನಿಪ ಜ್ಞಾನ ಕಲಾತ್ಮರ ಹೃದಯವು ಜ್ಞಾನ ಸೂರ್ಯಪ್ರಭಾಮಯವಾಗಿರುವದರಿಂದ, ಚಿತ್ಪಿಂಡವೆಂಬ ಪುಣ್ಯ ಭೂಮಿ ಎನಿಸಿ, ಸಮಸ್ತೋತ್ತಮ ಧಾನ್ಯಾದಿ ಸಕಲ ಫಲ ಪದಾರ್ಥಂಗಳನ್ನು ಬೆಳೆಸತಕ್ಕ ದಿವ್ಯ ಕ್ಷೇತ್ರ, ಉದ್ಯಾನವನ, ಪುಣ್ಯವನ, ಪುಷ್ಪವನ, ಬಿಲ್ವವನ, ಕದಳೀಚೂತವನ, ಲಿಂಬಿ ದ್ರಾಕ್ಷೆವನಗಳೆಂಬ ಪೆಸರಂ ಪಡೆದು ಲಿಂಗಕ್ಷೇತ್ರಂಗಳೆನಿಸಿರ್ಪ ಚಿತ್ಪಿಂಡಂಗಳಲ್ಲಿ ಆದಿಪಿಂಡ ಮಧ್ಯಪಿಂಡ ಚಿತ್ಪಿಂಡವೆಂಬ ಪಿಂಡತ್ರಯ ಭೇದಂಗಳುಂಟು. ಅವುಗಳಲ್ಲಿ ಸಕಲ ತತ್ವಂಗಳಂ ಕೂಡಿರ್ದುದೇ ಆದಿಪಿಂಡ. ಈ ಪಿಂಡವು ಮನುಷ್ಯರುಗಳಲ್ಲಿ ಜ್ಞಾನ ಕಲಾತ್ಮರು ಧರಿಸಿದ ಪಿಂಡವು ಸಕಲ ನಿಃಕಲ ತತ್ವಂಗಳೊಡನೇ ಕೂಡಿರ್ದುದಿ ಮಧ್ಯಪಿಂಡವು. ಇದು ಬಸವಾದಿ ಪುರಾತನರು ಧರಿಸಿದ ಪಿಂಡವು. ಕೇವಲ ನಿಃಕಲತತ್ವವಾದದ್ದೇ ಚಿತ್ಪಿಂಡವು. ಇದು ನೂರಾಪೊಂದು ಪಿರಕ್ತರು ಧರಿಸಿದ ಪಿಂಡವು.

ಈ ತ್ರಿವಿಧ ಭೇದವಾದ ಜ್ಞಾನಪಿಂಡಂಗಳಲ್ಲಿ ಶಿವತತ್ವ ಜ್ಞಾನವೆಂಬ ಪಾರಮಾರ್ಥ ಬೆಳೆಯಾದ ಕೃಷಿಗೆ ಮುಖ್ಯವಾದ ಮಹಾಕ್ಷೇತ್ರವಾಗಿ ಪುಷ್ಪವಾಟ ಎನಿಸಿ, ಪುಣ್ಯ ಭೂಮಿ ಎನಿಸಿ, ಹೊಲಗದ್ದೆ ಕ್ಷೇತ್ರಂಗಳೆನಿಸಿ, ಸಪ್ತಫಲ ಪ್ರದರಾಗಿ, ತೋಂಟದಾರ್ಯರೆನಿಪ ಪರಶಿವಮೂರ್ತಿಯ ವಾಸಸ್ಥಾನವಾದ ಚಿದ್ ಬ್ರಹ್ಮಾಂಡವೆಂಬ ದಿವ್ಯತೋಂಟದೊಳ್ ಪರಿ

ಶೋಭಿಸುತ್ತಿರ್ಪ, ಬ್ರಹ್ಮಕ್ಷೇತ್ರವೆನಿಪ, ಸಹಸ್ರದಳ ಕಮಲ ಪುಷ್ಪವನದ ಮಧ್ಯಭಾಗದಲ್ಲಿ, ಪಶ್ಚಿಮ ಚಕ್ರವೆಂಬ ಲೌಕಿಯ ಮಠಂಗಳಲ್ಲಿ, ಆಣಾ ಚಕ್ರವೆಂಬ ಸಿಂಹಾಸನದ ಮೇಲೆ ನಿಃಕಲತತ್ವವೆಂಬ ನಿರಂಜನ ಜಂಗಮ ವೆನಿಪ ತೋಂಟದ ಸಿದ್ಧೇಶ್ವರ ದೇವರೆನಿಸಿರ್ಪ ಪರಶಿವಮೂರ್ತಿಗಳ ನಿಜಾನಂದ ನಿಳಯವಾದ ಭಕ್ತಹೃನ್ಮಂದಿರವೆಂಬ ದಿವ್ಯಕ್ಷೇತ್ರವು ಶ್ರೀಗುರು ವೆಂಬ ಒಕ್ಕಲುಮಗನ ವಶವಾಗಿರ್ಪುದು.

ಆ ಶ್ರೀಗುರುದೇವನೆಂಬ ಪಾರಮಾರ್ಥ ಕೃಷಿಕನೇ ಬ್ರಹ್ಮಾಂಡಂಗಳ ನಂತಕ್ಕೆಲ್ಲ ತಾನೇ ಕರ್ತುವಾದ ಕಾರಣ ಈ ಲೋಕದ ಕೃಷಿಕರಿಗೆ ಬಾದಶಹ ರೈತರೆಂಬ ಪೆಸರಾಯಿತು. ಪಾರಮಾರ್ಥ ಕೃಷಿಕನಾದ ಶ್ರೀಗುರುದೇವನೆಂಬ ಪರಶಿವಮೂರ್ತಿಹಲಾಯುಧಂಗೆ, ಬ್ರಹ್ಮೇಂದ್ರಾದಿ ದೇವತಾ ಸಾರ್ವಭೌಮರಾದ ರಾಜಾಧಿರಾಜರೆಲ್ಲರು, ಮತ್ತು ಕಿನ್ನರ ಗರುಡ ಗಂಧರ್ವ ಉರಗ ಮಯೂರ ವಿದ್ಯಾಧರಾಪ್ಸರ ಕುಲದ ರಾಜ ಶ್ರೇಷ್ಠರೆಲ್ಲರು ಸೇವಕರಾಗಿರ್ಪರು.

ಈ ಲೋಕವಲ್ಲಿ ಸದ್ಗುಣ ಸನ್ಮಾರ್ಗದಾಚರಣೆಯುಳ್ಳವರಾದ ಕೃಷಿ ಜ್ಞಾನ ಪರಿಣತರಾದ ಕೃಷಿ ಕೃತ್ಯ ಜಾತುರ್ಯ ಧುರೀಣರಾದ ಲೌಕಿಕ ಕೃಷಿಕರೆಂಬ ರೈತ ಜನರೇ ಭೂಲೋಕಕ್ಕೆ ಬಾದಶಹರಾದ ಕಾರಣ ಈ ಲೋಕದ ಸಮಸ್ತ ರಾಜರೆಲ್ಲರು ಬಾದಶಹ ರೈತರ ಸೇವಕರಲ್ಲದೆ ರಾಜರೆಂಬವರೆಲ್ಲರು ಸ್ವತಂತ್ರ ಅಧಿಕಾರಿಗಳಲ್ಲ. ರೈತ ಜನರಲ್ಲಿ ಗಂಭೀರತನದ ಸದ್ಬುದ್ಧಿಯುಳ್ಳ ಸರ್ವ ಜೀವದಯಾಪಾರಿಗಳಾದ ಲೋಕಹಿತಕಾರಿಗಳೆನಿಸಿ ಸರ್ವ ಕಲ್ಯಾಣಗುಣ ಸಮುದಾಯದ ಸದ್ಗುಣದ ಪಂಚರೇ ಈ ಲೋಕದಲ್ಲಿ ಸ್ವತಂತ್ರಾಧಿಕಾರಿಗಳು. ಅವರ ಅಪ್ಪಣೆಯಂತೆ ಸಮಸ್ತರಾಜರೆಲ್ಲರು ವರ್ತಿಸತಕ್ಕದ್ದು.

ಬ್ರಹ್ಮಾಂಡವೆಂಬ ಸುಕ್ಷೇತ್ರಕ್ಕೆ ಅಧಿಕಾರಿಯಾದ ಪರಶಿವಲಿಂಗವೆಂಬ ಹಲಾಯುಧನು ಶ್ರೀಗುರುದೇವನೆಂಬ ಒಕ್ಕಲಿಗನಾಗಿ ಬಂದು ಭಕ್ತ ಹೃತ್ಕಮಲವೆಂಬ ಭೂಮಿಯನ್ನು ಹಿಡಿದು, ಜ್ಞಾನಾಚರಣೆ ಎಂಬ ಕುಂಟೆಯ ಕಟ್ಟಿ ಹರಗಿ, ಹಸನ ಮಾಡಿ, ಶಿವೈಕ್ಯ ಭಕ್ತಿ ಎಂಬ ಮೂಲ ಪ್ರಣವ ಪಂಚಾಕ್ಷರವೆಂಬ ಜಗದಾದಿ ಬೀಜವನ್ನು ಬಿತ್ತಿ ಸಚ್ಚಿದಾನಂದ ಪರಿಪೂರ್ಣ ಪ್ರಸಾದವೆಂಬ ಖಂಡಿತ ಫಲ ಪದಾರ್ಥದ ಫಸರಾಶಿಯಂ ಪಡೆದುಂಡು, ಪಾರಮಾರ್ಥವೆಂಬ ಮಹದೈಶ್ವರ್ಯ ಸಂಪನ್ನನಾಗಿ, ವಿಶ್ವ

ಕುಟುಂಬಿಯಾಗಿರ್ದಪನು. ಸಾಕ್ಷಿ ಪದ "ಗುರುವು ಎಂಬೋ ಒಕ್ಕಲ ಮಗ ತನ್ನ। ಶರೀರವೆಂಬೋ ಭೂಮಿಯ ಹಿಡಿದು। ಹರಗಿ ಬಿತ್ತಿ ಹಸನ ಮಾಡಿದನು। ಶ್ರೀಗುರುರಾಯ ಹಸನವಾದ ಪರಿ ಎನಸ್ಹೇಳಿದನು ॥ಪಲ್ಲ॥ ಜಾಲಿ ಬೊಬ್ಬಲಿ ಬೆಳದೈತಣ್ಣ। ಬಾಳ ಹುಲ್ಲು ತುಂಬೈತಣ್ಣ। ಮೇಲೆ ದೊಡ್ಡ ನೇಗಿಲ ಕಟ್ಟಿದನು ॥ ಶ್ರೀಗುರುರಾಯ : ಬೀಳು ಭೂಮಿಯ ಹಸನವ ಮಾಡಿದನು ॥೧॥ ಎಂಟು ಎತ್ತು ಬಿಟ್ಟಾನಣ್ಣ। ಒಂಟ ಕೋಣನ ಕಟ್ಯಾನಣ್ಣ। ಕುಂಟಿ ಕಟ್ಟಿ ನೆಟ್ಟ ಹರಗಿದನು ॥ ಶ್ರೀಗುರುರಾಯ ॥ ಬಂಟ ನಮ್ಮ ಭಾವರೇರನ್ಹೇ ಶ್ರೀಗುರುರಾಯ ॥೨॥ ಮೂರು ಬೀಜವ ಬಿತ್ತಿದನಣ್ಣ। ಮೇರೆದಪ್ಪಿ ಬೆಳೆದ ಮೊಳಕಿ ॥ ತೋರಿದ್ಹಾಂಗ ಕೊಯ್ದು ಹಾಕಿದನು। ಶ್ರೀಗುರುರಾಯ ॥ ತೂರಿ ಒಮ್ಮೆ ರಾಶಿ ಮಾಡಿದನೊ। ಶ್ರೀಗುರುರಾಯ ॥೩॥ ಮತ್ತೆ ಬಿತ್ತಲು ಬೀಜಿಲ್ಲಣ್ಣ। ಭತ್ತ ತುಂಬಲು ಗುನ್ನಿಲ್ಲಣ್ಣ। ಎತ್ತ ನೋಡಲು ಬತ್ತ ತುಂಬೈತೆ ಶ್ರೀಗುರುರಾಯ ॥ ಚಿತ್ತಜ ವೈರಿ ಸಂಗವೇಶನು ಶ್ರೀಗುರುರಾಯ ॥೪॥ ಹೊಲದಾಗ ಒಂದ್ಹಕ್ಕಿಲ್ಲಣ್ಣ। ತಿಳಿದು ನೋಡಿದರೇನಿಲ್ಲಣ್ಣ। ಹಕ್ಕಿ ಹಿಡಿದು ತಾನೇ ಸಲಹಿದನೋ ಶ್ರೀಗುರುರಾಯ। ಹಕ್ಕಿ ಹಿಡಿದು ಸಲಹಿದನಣ್ಣ। ಬದುಕೆಂದೆನಗೆ ಕೊಟ್ಟಾನಣ್ಣ। ಕರ್ತನಿಂದ ಬಡತಾನ್ಹಿಂಗೀತೊ ಶ್ರೀಗುರುರಾಯ ॥ ಕರ್ತು ನಮ್ಮ ಕೂಡಲ ಸಂಗನು। ಶ್ರೀಗುರುರಾಯ ॥೫॥ ಈ ಪದದ ಅನ್ವಯ ಭಾವದಂತೆ ಅಂತರಂಗದ ಪಾರಮಾರ್ಥ ಕೃಷಿಯಿಂದ ಜ್ಞಾನದ ಬೆಳೆಯನ್ನು ಮಾಡಿಕೊಂಡು, ಆ ಮಹಾಜ್ಞಾನವನ್ನೇ ಬಹಿರಂಗ ಕ್ರಿಯೆಗಳಲ್ಲಿ ಸತ್ಕಾಯಕವ ಮಾಡಿ, ಸಂಬಂಧಿಸಿಕೊಂಡು, ಲೋಕಾಚಾರದ ಲೌಕಿಕ ಕೃಷಿಯ ಕಾಯಕವನ್ನು ಮಾಡುವಲ್ಲಿ ಪಾಲ್ಕುರಿಕೆ ಸೋಮನಾರಾಧ್ಯರು, ಏಲೇಶ್ವರದ ಕೇತಯ್ಯಗಳು ಲಿಂಗಧಾರಣ ಬಸವಗಳ ಕಟ್ಟಿ ಲಿಂಗಮುದ್ರೆಯ ಭೂಮಿಯ ಮಾಡಿ, ಕೃಷಿಯ ಕಾಯಕವ ನಡಿಸಿದರು. "ಗೃಹ ಕ್ಷೇತ್ರಂ ಚ ಧಾನ್ಯಾನಿ। ಗೋಕುಲಾನಿ ಧನಾನಿಗಾಃ। ಏತಲ್ಲಿಂಗಾಂಕಿತೇನ ಕೃತ್ವಾ। ಶಿವಭಕ್ತಿ ಸಮಾಚರೇತ್ ॥" ಎಂಬ ಆಗಮ ಪ್ರಮಾಣದಿಂದ ನಡೆದು ನುಡಿದು, ನಡೆ-ನುಡಿಯೊಂದಾಗಿ. ಆಚರಿಸಿದುದೇ ಚಿತ್ಪಿಂಡವೆನಿಸುವದು.

ಅಮುಗಿದೇವ.

ಲೇಖಕ:— ರಾ॥ ಸಾ॥ ಪಿ. ಜಿ. ಹಳಕಟ್ಟಿ. ವಿಜಾಪುರ.

ಪುರಾತನ ಕಾಲದಲ್ಲಿ ರಚಿಸಲ್ಪಟ್ಟ ವಚನಗಳಲ್ಲಿ ಒಂದು ಬಗೆಯ ತೇಜಸ್ಸು ಮತ್ತು ಸ್ಫೂರ್ತಿಯು ಇರುವದಾಗಿ ಕಂಡುಬರುತ್ತದೆ. ಇದು ಆಯಾವಚನಕಾರರು ತಮ್ಮ ಶಿವಾನುಭವ ವಾಕ್ಯಗಳನ್ನು ನಡೆಯಲ್ಲಿ ತೋರಿಸಿದ್ದರ ಕುರುಹೆಂತಲೇ ಹೇಳಬೇಕು. ಅನೇಕ ವಚನಗಳಲ್ಲಿ ಸ್ಥಿರ ಬುದ್ಧಿ, ಸ್ಥೈರ್ಯ, ಧೈರ್ಯಾದಿಗಳು ಪ್ರತಿಬಿಂಬಿತವಾಗಿರುತ್ತವೆ. ಇದು ತಮ್ಮ ಜೀವಿತ ಕಾಲದಲ್ಲಿ ಬಂದೊದಗಿದ ಅನೇಕ ಕಷ್ಟಗಳನ್ನು ಅತಿಸಾಹಸದಿಂದ ನಿವಾರಣೆ ಮಾಡುತ್ತಿರುವ ಸಮಯದಲ್ಲಿ ಹೊರಹೊರಟ ಉದ್ಗಾರಗಳೋ ಏನೋ ಎಂಬಂತೆ ಭಾಸವಾಗುತ್ತದೆ.

ಆದುದರಿಂದ ವಚನಕಾರರ ಚರಿತ್ರೆಗಳನ್ನು ಸಂಶೋಧಿಸುವದು ಅತಿ ಮಹತ್ವದ್ದೆಂದು ತೋರಿ ಬರದೆ ಇರಲಾರದು. ಇವರ ಚರಿತ್ರೆಗಳನ್ನು ನಾವು ಇನ್ನೂ ನಮ್ಮಲ್ಲಿ ಉಪಲಬ್ಧವಿರುವ ಪುರಾಣಗಳು, ಸಾಂಗತ್ಯಗಳು, ರಗಳೆಗಳು, ಇವುಗಳಲ್ಲಿ ಕಂಡುಕೊಳ್ಳಬಹುದಾಗಿದೆ. ಇವುಗಳನ್ನೆಲ್ಲ ಒತ್ತಟ್ಟಿಗೆ ಸಂಗ್ರಹಿಸಿ ಆ ವಚನಕಾರರ ಚರಿತ್ರೆಗಳ ಮೇಲೆ ಏನಾದರೂ ಪ್ರಕಾಶವು ಬೀಳುತ್ತದೋ ಹೇಗೆಂಬುದನ್ನು ನಾವು ನಿರೀಕ್ಷಿಸಬೇಕು. ಅಲ್ಲದೆ ವಚನಕಾರರು ವಾಸವಾಗಿದ್ದ ಗ್ರಾಮುಗಳಾವವೆಂಬದನ್ನು ಸಹ ಕಂಡು ಹಿಡಿದು ಅಲ್ಲಿಗೆ ಹೋಗಿ ಅಲ್ಲಿ ಉಪಲಬ್ಧವಿರುವ ಅವರ ಐತಿಹ್ಯಗಳನ್ನು ಮತ್ತು ಜನರ ಹೇಳಿಕೆಗಳನ್ನು ಸಹ ಸಂಶೋಧಿಸಬೇಕು. ಅಲ್ಲದೆ ಅಲ್ಲಿ ಯಾವವಾದರೂ ಶಿಲಾಶಾಸನಗಳಿದ್ದರೆ ಅವುಗಳನ್ನು ನೋಡಬೇಕು. ಹೀಗೆ ನಾವು ಪರೀಕ್ಷಿಸಿ ವಚನಕಾರರ ಚರಿತ್ರೆಗಳ ಮೇಲೆ ಯಾವ ಬಗೆಯ ಪ್ರಕಾಶವು ಬೀಳುತ್ತದೆಂಬದನ್ನು ನಿರೀಕ್ಷಿಸಬೇಕು. ಅಲ್ಲದೆ ಅವರು ಬರೆದ ಗ್ರಂಥಗಳನ್ನು ಸಹ ಚನ್ನಾಗಿ ಪರಿಶೀಲಿಸಬೇಕು. ಅವುಗಳಲ್ಲಿ ಯಾವ ಬಗೆಯ ವಿಚಾರಗಳು ಮತ್ತು ಉದ್ಗಾರಗಳು ಹೊರಡುತ್ತವೆಂಬದನ್ನು ಕಂಡುಕೊಳ್ಳಬೇಕು. ಹೀಗೆ ವಚನಕಾರರ ಚರಿತ್ರೆಗಳನ್ನು ಸಂಶೋಧಿಸಿದಲ್ಲಿ ವೀರಶೈವರ ಧಾರ್ಮಿಕ ಇತಿಹಾಸದ ಮೇಲೂ ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಇತಿಹಾಸದ ಮೇಲೂ ವಿಶೇಷ ಪ್ರಕಾಶವು ಬೀಳಬಹುದೆಂದು ತೋರುತ್ತದೆ.

ಈ ದೃಷ್ಟಿಯಿಂದ ನಾನು ವೀರಶೈವರ ಹಿಂದಿನ ಧಾರ್ಮಿಕ ಮಹಾಪುರುಷರ ಚರಿತ್ರೆಗಳಿದ್ದ ಗ್ರಂಥಗಳನ್ನು ಸಂಶೋಧಿಸುವಲ್ಲಿ ಅಮುಗಿದೇವನೆಂಬ ವಚನಕಾರನ ಬಗ್ಗೆ ವಿವರಣೆಗಳು ಕೆಲವು ಗ್ರಂಥಗಳಲ್ಲಿರುವದು ಕಂಡು ಬಂದಿತು. ಅವುಗಳನ್ನು ನಾನು ಇಲ್ಲಿ ವಿವರಿಸುತ್ತೇನೆ. ಅಮುಗಿದೇವನ ಉಲ್ಲೇಖವಿದ್ದ ಶಿಲಾಶಾಸನವು ದೊರೆತದ್ದರಿಂದ ಅವನ ಚರಿತ್ರೆಗೆ ಮಹತ್ವ ಕೊಡಬೇಕಾಗಿದೆ. ಈ ಶಿಲಾಶಾಸನದ ವಿಷಯವಾಗಿ ನಾನು ಶಿವಾನುಭವ ಪತ್ರಿಕೆಯ ೯ನೇ ಸಂಪುಟ ೬ನೇ ಸಂಚಿಕೆಯಲ್ಲಿ ಒಂದು ವಿಸ್ತೃತ ಲೇಖನವನ್ನು ಬರೆದದ್ದು ವಾಚಕರ ಸ್ಮರಣೆಯಲ್ಲಿರಬಹುದು. ಈ ಶಾಸನವು ಕ್ರಿ. ಶ. ೧೨೦೦ನೇ ಇಸ್ವಿಯದು ಆದೆ. ಅವನ ಬಗ್ಗೆ ಈ ಶಿಲಾಶಾಸನದಲ್ಲಿ ಬಂದ ಉಲ್ಲೇಖಗಳ ಮೇಲಿಂದ ಅವನು ವೀರಶೈವನಾಗಿದ್ದನೆಂತಲೂ ಸೊಲ್ಲಾಪುರದ ಸಮೀಪದಲ್ಲಿದ್ದ ಪುಳುಜ ಎಂಬ ಗ್ರಾಮದಲ್ಲಿದ್ದನೆಂತಲೂ ವಿಟೆ ಎಂಬ ಗ್ರಾಮವನ್ನು ಅವನಿಗೆ ದೇವಗಿರಿಯ ಪ್ರಸಿದ್ಧ ಯಾದವ ರಾಜನಾದ ಸಿಂಘಣನು ಉಂಬಳಿ ಹಾಕಿ ಕೊಟ್ಟಿದ್ದನೆಂತಲೂ ಇವನು ಕುರುಬ ಸಮಾಜದವರು ಅತ್ಯಂತವಾಗಿ ಮನ್ನಣೆ ಕೊಡುತ್ತಿದ್ದ ಅಮಾಕಸಿದ್ಧನು ಇರಬಹುದೆಂತೂ ಇದರಲ್ಲಿ ವಿವರಿಸಿದ್ದೇನೆ.

ಆದರೆ ನಮಗೆ ಈಗ ದೊರೆದ ಪುರಾತನ ಗ್ರಂಥಗಳಲ್ಲಿ ಅಮುಗಿದೇವನ ಚರಿತ್ರೆಯು ಉಪಲಬ್ಧವಿರುತ್ತದೆ. ಅವುಗಳನ್ನು ನಾವು ನೋಡಿದಲ್ಲಿ ಈ ವಚನಕಾರನು ಅಮಾಕಸಿದ್ಧನೆಂದು ತಿಳಿಯುವ ಸಂದೇಹಾಸ್ಪದವೆಂದು ತೋರಹತ್ತುತ್ತದೆ. ಇದನ್ನು ನಾನು ಒಹಿರಂಗಪಡಿಸದೆ ಇದ್ದಾದರೆ ಸಂಶೋಧಕರಿಗೆ ತಪ್ಪು ದಾರಿಯನ್ನು ತೋರಿಸಿದಂತಾಗುವದೆಂದು ತಿಳಿದು ಅವುಗಳನ್ನೆಲ್ಲ ನಾನು ಇಲ್ಲಿ ವಿವರಿಸುತ್ತೇವೆ. ಅವು ವಾಚಕರಿಗೆ ಬೋಧಪ್ರದವಾಗಲಾರದೆ ಇರವು.

ಅಮುಗಿದೇವನ ಚರಿತ್ರೆಗಳು (೧) ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ[೧] ಎಂಬ ಗ್ರಂಥದಲ್ಲಿ ಬಂದಿರುತ್ತದೆ. (೨) ಅಮುಗಿ

೧ ಈ ಗ್ರಂಥವನ್ನು ಬಾಗಲಕೋಟೆಯ ವೀ॥ ಮುರಿಗಯ್ಯ ಜಂಗಿನ ಇವರು ತಿಳಿಸಿರುವರು.

ದೇವನ ರಗಳೆಯೆಂತಲೂ ಒಂದು ರಗಳೆಯು ಉಪಲಬ್ಧವಿದೆ. (೩) ಈತನ ಒಂದು ಸಾಂಗತ್ಯವೂ ಕೂಡ ಉಪಲಬ್ಧವಿದೆ. ಇದರಲ್ಲಿ ೭ ಸಂಧಿಗಳು ಇದ್ದು ಒಟ್ಟು ೮೪೩ ಸಾಂಗತ್ಯ ಪದ್ಯಗಳು ಇವೆ. ಆದರೆ ಅಮುಗಿದೇವನು ಇದರಲ್ಲಿ ಅವುಗಿ ದೇವಯ್ಯ ಎಂದು ಕರೆಯಲ್ಪಟ್ಟಿದ್ದಾನೆ. ಈ ಚರಿತ್ರೆಗಳ ಅಂಶಗಳನ್ನು ನಾನು ಇಲ್ಲಿ ಅನುಕ್ರಮವಾಗಿ ಕೊಡುತ್ತೇನೆ.

ಭೈರವೇಶ್ವರನ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ.

ಇದರಲ್ಲಿ ಬಂದ ಕಥೆಯನ್ನೇ ಗ್ರಂಥಕಾರನು ವಿವರಿಸಿದಂತೆ ಇದ್ದ ಕ್ಕಿದ್ದ ಹಾಗೆ ನಾನು ಕೆಳಗೆ ಕೊಡುತ್ತೇನೆ.

ಅಮುಗಿದೇವನ ಚರಿತ್ರೆ.

"ಸೊನ್ನಲಪುರದಲ್ಲಿ ಅಮುಗಿದೇವನ ಸತಿ ವರದಾನಿಯಮ್ಮನು ಸಹವಾಗಿ ಸತಿಪತಿಗಳು ನೇಗೆಯ ಕಾಯಕವಂ ಮಾಡಿ ಜಂಗಮ ದಾಸೋಹವಂ ಮಾಡುತ್ತಿರಲು ಬಳಿಕಲೊಂದು ದಿನ ಸಿದ್ಧರಾಮಯ್ಯನು ಕಪಿಲ ಸಿದ್ಧ ಮಲ್ಲಿಕಾರ್ಜುನನ ಪರ್ವವ ಮಾಡುವದಕ್ಕೆ ಎಂದು ಹತ್ತು ಕೊಳಗ ಬತ್ತವಂ ಕುಟ್ಟುವುದಕ್ಕೆ ಬಿಟ್ಟಿಯ ಕೊಟ್ಟಣವ ಅಮುಗಿದೇವಯ್ಯಗಳ ಮನೆಗೆ ಕಳುಹಲು ಅಮುಗಿದೇವಯ್ಯನು ಸ್ಥಾವರ ಲಿಂಗವ ಪೂಜಿಸುವವಗೆ ನಾವೇಕೆ ಕೊಟ್ಟಣವ ಕುಟ್ಟಿಹೆವೆನಲು ಬತ್ತವನು ಬಿಟ್ಟಿಯ ಕೊಟ್ಟಣಕ್ಕೆ ತಂದವರು ಬಲುಮೆಯಿಂದ ಸುರಿವಿ ಪೋಗಲಾಗ ತಿಪ್ಪಿಗೆ ಚಲ್ಲಲದಂ ರಾಯ ಕೇಳಿ ನನಗೆ ರೋಮಗಳೆಲ್ಲ ಲಿಂಗಾಂಗಳಾಗಿರಲು ನನಗಿಂತೆಂದು ನುಡಿವರೇ? ನಮ್ಮೂರೊಳಗಿರಜೇಡವೆನಲಾಗ ಅಮುಗಿದೇವಯ್ಯಂ ತಮ್ಮ ಮನೆಯಲ್ಲಿರ್ದ ನೇಗೆಯ ಮುಟ್ಟು ಭಾಂಡಭಾಜನದವಸ ಗೃಹಸಾಧನಗಳನೆಲ್ಲ ಮೂರು ಹೊರೆಯ ಕಟ್ಟ ಸತಿಪತಿಗಳು ಎರಡು ಹೊರೆಯಂ ಹೊತ್ತುಕೊಂಡು ಹೋಗುವಾಗ ಒಂದು ಹೊರೆ ಉಳಿಯಲಾಗ ಸತಿ ಇದಂ ಆರು ಹೊತ್ತು ತರುವರೆಂದು ಪತಿಯ ಕೇಳಲು ಶಿವನು ತಾನೇ ಹೊತ್ತುಕೊಂಡು ಬರುವನು. ಬಾರದಿದ್ದಡೆ ಆತನಿಗೆ ಹೊರಿಸಿದ ಹೊರೆ ಆತನಲ್ಲಿ ಇರಲಿ ಎನಲಾಗ ಕಪಿಲಸಿದ್ಧ ಮಲ್ಲಿಕಾರ್ಜುನ

೨ ಶ್ರೀ ಜಗದ್ಗುರು ಹುಬ್ಬಳ್ಳಿ ಮೂರುಸಾವಿರ ಸ್ವಾಮಿಗಳವರು ೧೦೧ ರಗಳೆ ಎಂಬ ಹೆಸರಿನ ತಾಡವಾಲೆಯ ಗ್ರಂಥವನ್ನು ಕಳಿಸಿದ್ದು ಅದರಲ್ಲಿ ಈ ರಗಳೆಯು ಬಂದಿದೆ. ಇದರಲ್ಲಿ ಹರಿಹರನ ನುತ್ತ ಇನ್ನು ಅನೇಕ ಕವಿಗಳ ರಗಳೆಗಳು ಇವೆ.

ತಾನೇ ಹೊತ್ತು ತಂದು ಮುಂದು ಗಾವುದದಲ್ಲಿದ್ದ ಶಿವಪುರದಲ್ಲಿ ಇರಿಸಿದಲ್ಲಿ ಅಮುಗಿದೇವಯ್ಯಗಳಿರಲು ಇತ್ತಲು ಸಿದ್ಧರಾಮೇಶ್ವರನು ಕಪಿಲ ಸಿದ್ಧಮಲ್ಲಿಕಾರ್ಜುನಂಗೆ ಎಣ್ಣೆ ಮಜ್ಜನವ ಮಾಡುವಾಗ ತಲೆಯಂ ಮುಟ್ಟಿ ಬೇಡ, ನೋವುತಿದೆ ರಾಮಯ್ಯ ಎನಲು ಸತ್ಯಲೋಕದಿಂದತ್ತಲಿರ್ದ ಮುಕುಟಕ್ಕೆ ತಾಗಿದುದೇನೋ? ಯಾತಕ್ಕೆ ತಾಗಿದುದೇನೋ? ಯಾತಕ್ಕೆ ನೊಂದಿತೆನಲು ಅಮುಗಿದೇವರ ಹೊರೆ ಬಿಟ್ಟದಂತಾಯಿತ್ತು. ತಾನು ಬಿಟ್ಟು ಹೋಗುವಾಗ ಒಂದು ಹೊರೆಯ ನನಗೆ ಕೊಟ್ಟು ಹೋದನು. ಭಕ್ತರ ಸಂಸಾರವೆನಗೆ ಭಾರವಾಗಿ ನೋವುತಿದೆನಲು ಆಗ ರಾಮಯ್ಯನು ನಿಮ್ಮ ಶಿರದಲ್ಲಿರ್ದ ಚಂದ್ರ ಗಂಗೆ ಶೇಷ ಮೊದಲಾದವರು ನೊಂದ ಬೆವರಿಂದ ನೊಸಲ ಕಣ್ಣು ನೊಂದಿತೆ ಅಯ್ಯ? ಅಂದು ನಂಬಿಣ್ಣನ ಹಡಪವಂ ಹೊತ್ತಿರಿಸಿ ಬಾಣನ ಬಾಗಿಲಂ ಕಾದಿರಿ, ಪಿಟ್ಟೆವ್ವೆಗಾಳಾಗಿ ಕಟ್ಟಿಗೆ ಮಣ್ಣ ಹೊತ್ತಿರಿ, ಚಂದಯ್ಯಗೆ ನುಲಿಯ ಹೊಸೆದು ನೀರು ಕುಜ್ಜರಿಯುಗೆ ಹೊತ್ತಂದು ನೋವಾದುದಿಲ್ಲ, ಎಂದು ಮರುಗಿ ಅಮುಗಿದೇವಯ್ಯನ ಮಹಿಮೆಗೆ ರಾಮಯ್ಯ ಬೆರಗಾಗಿ ಕರೆಯ ಬರಲು ಬಂದಲ್ಲಿ ಬಾರೆವು ಹಿಂದಕ್ಕೆ ಬರುವವರಲ್ಲ ಎನಲು, ರಾಮಯ್ಯಂ ಕೈಲಾಸಕ್ಕೆ ಪೋಗಿ ಶಿವನಿಗೆ ಪೇಳಲು ಶಿವನು ನಿನ್ನೂರಲ್ಲಿ ಮುನಿದರೆ ನನ್ನೂರಿಗೆ ಬರಲಿ ಎಂದು ನಂದೀಶ್ವರ ವೀರಭದ್ರೇಶ್ವರ ಮೊದಲಾದ ಗಣಂಗಳನು ಕಳುಹಿ ಅಮುಗಿದೇವಯ್ಯಗಳ ಕರಿಸುವೆವು ಎನಲಾಗಲತ್ತ ಅಮುಗಿದೇವಯ್ಯಗಳು ಶಿವಪುರದಲ್ಲಿ ದಾಸೋಹವ ಮಾಡುತ್ತಿರಲು ಚರಮೂರ್ತಿಗಳು ಬಂದು ಕೈಲಾಸಕ್ಕೆ ಬಾರೆನಲು ನಾವು ಒಲ್ಲೆವೆನಲು, ಶಿವನ ನೆನೆವುದರಿಂದ ನೋಡುವುದೊಳ್ಳಿತಲ್ಲವೇ ಬಾರಯ್ಯ ಎನಲು, ಭಕ್ತಿ ಇಲ್ಲದವನು ಶಿವನ ನೆನೆದಡೆ ಭವ ಹಿಂಗುವದೇ? ಜ್ಯೋತಿಯ ನೆನೆದಡೆ ಕತ್ತಲೆ ಹರಿಯಿತೇ? ಪೃಷ್ಟನ್ನವ ನೆನೆದಡೆ ಹೊಟ್ಟೆ ತುಂಬಿತೇ? ರಂಭೆಯ ನೆನೆದಡೆ ಕಾಮವಡಗಿತೇ? ಸಮರಸ ಭಕ್ತಿ ಇಲ್ಲದವ ಲಿಂಗವ ನೆನೆದಡಾಗದು, ನಿರ್ಧರಿಸಿದಡಾಗದು ಎಂದು ಮರ್ತ್ಯವೇ ಕೈಲಾಸವೆಂದು ಸದ್ಗುರು ಸೋಮನಾಥನೆಂಬ ತಮ್ಮಿಷ್ಟಲಿಂಗದಲ್ಲಿ ಇಹಪರ ಲೋಕಂಗಳುಂಟೆಂದು ತನ್ನ ಲಿಂಗದಲ್ಲಿ ನಿರವಯರಾದರು."

ಮೇಲೆ ವಿವರಿಸಿದ ಸಂಗತಿಗಳ ಮೇಲಿಂದ ಅಮುಗಿ ದೇವನು ಸಿದ್ಧರಾಮೇಶ್ವರನ ಸಮಕಾಲೀನನಾಗಿ ಸೊನ್ನಲಾಪುರದಲ್ಲಿ ಅಂದರೆ

ಊಗಿನ ಸೊಲ್ಲಾಪುರದಲ್ಲಿ ಇರುತ್ತಿದ್ದನು. ಅವನ ಹೆಂಡತಿಯ ಹೆಸರು ವರದಾನಿಯಮ್ಮನು. ಅವರು ಇಷ್ಟಲಿಂಗದಲ್ಲಿ ಅತ್ಯಂತ ಭಕ್ತಿಯುಳ್ಳವರಾಗಿ ನೇಗೆಯ ಕಾಯಕವನ್ನು ಮಾಡುತ್ತ ಜೀವಿಸುತ್ತಿದ್ದರು. ಅವರು ಸ್ಥಾವರಲಿಂಗ ಪೂಜಕನಾದ ಸಿದ್ಧರಾಮೇಶ್ವರನ ಸೇವೆಯನ್ನು ಒಂದು ಸಮಯದಲ್ಲಿ ಮಾಡಲೊಪ್ಪದ್ದರಿಂದ ಮನಸ್ತಾಪ ಉಂಟಾಗಲು ಅಮುಗಿದೇವನು ಸೊನ್ನಲಾಪುರವನ್ನೇ ಬಿಟ್ಟುಕೊಟ್ಟು ಶಿವಪುರ ಎಂಬಲ್ಲಿ ಇರತೊಡಗಿದನು. ಮುಂದೆ ಸಿದ್ಧರಾಮನು ಪಶ್ಚಾತ್ತಾಪಪಟ್ಟು ಅಮುಗಿ ದೇವನಿದ್ದಲ್ಲಿಗೆ ಹೋಗಿ ಸೊನ್ನಲಾಪುರಕ್ಕೆ ತಿರುಗಿ ಬರಲು ಹೇಳಲು ಅವನು ಅದಕ್ಕೆ ಒಪ್ಪಲಿಲ್ಲ. ಶಿವನು ಸಹ ಕರೆಯ ಕಳುಹಿಸಿದರೂ ಕೈಲಾಸಕ್ಕೆ ಹೋಗಲಿಲ್ಲ. ಕಡೆಗೆ ಉಭಯ ದಂಪತಿಗಳು ಮರ್ತ್ಯವೇ ಕೈಲಾಸವೆಂದು ತಿಳಿದು ತಮ್ಮ ಕಾಯಕವನ್ನೇ ನಡೆಯಿಸುತ್ತ ಸದ್ಗುರು ಸೋಮನಾಥನೆಂಬ ತಮ್ಮ ಇಷ್ಟಲಿಂಗದಲ್ಲಿ ಬಯಲಾದರು.

ಮೇಲ್ಕಂಡ ಅವತರಣಿಕೆಯಲ್ಲಿ ಚರಿತ್ರೆಕಾರನು ಒಂದು ವಚನವನ್ನು ಕೊಟ್ಟಿದ್ದನ್ನು ವಾಚಕರು ಕಾಣಬಹುದು. ಅದು "ಭಕ್ತಿ ಇಲ್ಲದವನು" ಎಂಬ ಶಬ್ದಗಳಿಂದ "ನಿರ್ಧರಿಸಿದಡಾಗದು." ಎಂಬ ಶಬ್ದಗಳ ವರೆಗೆ ಇದೆ. ನಮಗೆ ದೊರೆದ ಅಮುಗಿದೇವನ ಕೆಲವು ವಚನಗಳಲ್ಲಿ ಈ ವಚನವು ಉಪಲಬ್ಧವಿದೆ. ಇದನ್ನು ನಾವು ಶಿವಾನುಭವದ ೯ನೇ ಸಂಪುಟದಲ್ಲಿ ಪುಟ ೪೧೮ ಇದರಲ್ಲಿ ಕೊಟ್ಟಿದ್ದೇವೆ. ಅದು ಕೆಳಗೆ ಬರೆದ ಮೇರೆಗೆ ಇದೆ. "ಶಿವನ ನೆನೆದರೆ ಭವಹರಿವುದೆಂಬ ವಿವರಗೇಡಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದರೆ ಜ್ಯೋತಿಯ ನೆನೆದರೆ ಕತ್ತಲೆ ಹರಿವುದೇ? ವೃಷ್ಟಾನ್ನವ ನೆನೆದರೆ ಹೊಟ್ಟೆ ತುಂಬುವುದೇ? ರಂಭೆಯ ನೆನೆದರೆ ಕಾಮದ ಕಳವಳ ಹಿಂಗುವುದೇ? ನೆನೆದಡಾಗದು. ನಿಜದಲ್ಲಿ ನಿಂದು ನಿರ್ಧರಿಸದನ್ನಕ್ಕ ಸದ್ಗುರುಸಿದ್ಧ ಸೋಮನಾಥನೆಂಬ ಲಿಂಗವ ನೆನೆಯಬಾರದು.

ಅಮುಗಿ ದೇವನ ರಗಳೆ.

ಹರಿಹರನ ರಗಳೆಗಳಿಂದು ನಮಗೆ ಶ್ರೀ ಜಗದ್ಗುರು ಮೂರುಸಾವಿರ ಸ್ವಾಮಿಗಳವರು ಕಳಿಸಿಕೊಟ್ಟ ತಾಡವಾಲೆ ಗ್ರಂಥದಲ್ಲಿ ಅಮುಗಿ ದೇವಯ್ಯಗಳ ರಗಳೆ ಎಂಬ ರಗಳೆಯು ದೊರೆಯುತ್ತದೆ. ಆದರೆ ಇದನ್ನು ನೋಡಿ

ದಲ್ಲಿ ಇದು ಹರಿಹರನಿಂದ ರಚಿತವಾದುದಲ್ಲವೆಂದು ತರ್ಕಿಸಲೇ ಸೋತ್ತಾಗುವಂತಿದೆ. ಈ ರಗಳೆಯ ಆರಂಭದಲ್ಲಿಯೂ ಕೊನೆಯಲ್ಲಿಯೂ ಹರಿಹರನ ರಗಳೆಗಳಲ್ಲಿ ಕಂಡುಬರುವ ಹಂಪೆಯ ವಿರೂಪಾಕ್ಷನ ಸ್ತುತಿ ಪರ ಪದ್ಯಗಳು ಯಾವೂ ಇರುವದಿಲ್ಲ. ಆದರೆ ಅಂತ್ಯದಲ್ಲಿ "ಪ್ರಸನ್ನ ಶಂಕರಲಿಂಗಾ" ಎಂಬ ಮುದ್ರಿಕೆಯುಕ್ತ ರಗಳೆಯ ಓಳಿಯು ಬಂದಿರುತ್ತದೆ. ಇದರ ಮೇಲಿಂದ ಈ ರಗಳೆಯು ಹರಿಹರನದಿರದೆ ಬೇರೊಬ್ಬ ಕವಿಯದಿರುತ್ತದೆಂಬದು ಸ್ಪಷ್ಟವಾಗುತ್ತದೆ. ರಗಳೆಯಲ್ಲಿಯ ಕವಿತ್ವ ಪ್ರತಿಭೆಯೂ ವರ್ಣನಾಯುಕ್ತ ಭಾಗಗಳೂ ಹರಿಹರನ ರಗಳೆಗಳ ಯೋಗ್ಯತೆಗೆ ಸ್ವಲ್ಪಾದರೂ ಸರಿಗಟ್ಟಲಾರವು. ಆದರೂ ಕವಿಯು ಅಮುಗಿ ದೇವನ ಚರಿತ್ರೆಯನ್ನು ಬಹು ಸುಲಭವಾಗಿಯೂ ಸಂಶ್ಲಿಷ್ಟವಾಗಿಯೂ ವಿವರಿಸಲು ಯತ್ನಿಸಿದ್ದಾನೆ. ಅಲ್ಲಲ್ಲಿ ಹರಿಹರನ ಅನುಕರಣ ಮಾಡಲೂ ಯತ್ನಿಸಿದ್ದಾನೆ. ಇದರಲ್ಲಿ ಬಂದ ಕಥಾ ಭಾಗವು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಬಂದ ಕಥೆಗಿಂತಲೂ ಕೆಲವು ಸಂದರ್ಭಗಳಲ್ಲಿ ಭಿನ್ನವಾಗಿರುತ್ತದೆ. ಇದರಲ್ಲಿ ವರ್ಣಿಸಲ್ಪಟ್ಟ ವಿವರಗಳೇನೆಂದರೆ:-

ಅಮುಗಿದೇವನು ಸೊನ್ನಲಾಪುರದಲ್ಲಿ ಇರುತ್ತಿದ್ದನು. ಅವನ ಸತಿಯ ಹೆಸರು ವರದಾನಿಯು. ಅವನು ವೀರಶೈವ ವಿಚಕ್ಷಣನೂ ವಿಮಲ ಲಕ್ಷಣನೂ ಆಗಿ ಇಷ್ಟಲಿಂಗಾರ್ಚನೆಯಲ್ಲದೆ ಹೆರರನ್ನು ಆರಾಧಿಸನು. ಕೇವಲ ಇಷ್ಟಲಿಂಗದಲ್ಲಿ ಭಕ್ತಿಯುಳ್ಳವನೂ ವೀರಮಾಹೇಶ್ವರನೂ ವೀರ ಶೈವ ವ್ರಾಣಿಯೂ ಆಗಿ ಅಲ್ಲಿ ವಾಸಿಸುತ್ತಿದ್ದನು. ಅವನು ದುಗ್ಗಳೆಯ ರಮಣ ಮಾಡುವ ಕಾಯಕ ಅಂದರೆ ನೇಗೆಯ ಕಾಯಕವನ್ನು ಕಪ್ಪಿ ಕೊಂಡವನಾಗಿದ್ದನು. ಅವನ ಕರಸ್ಥಲದರಸನು ಅಂದರೆ ಇಷ್ಟ ದೇವತೆಯು ಗುರುಚನ್ನಸೋಮಯ್ಯನೆಂದು ಇದರಲ್ಲಿ ಹೇಳಲ್ಪಟ್ಟಿದೆ. ಹೀಗಿರುತ್ತಿರಲು ಒಂದಾನೊಂದು ದಿನ ಸೊನ್ನಲಾಪುರದ ಸಿದ್ಧರಾಮ ವಿಭುವು ಕಪಿಲಸಿದ್ಧಮಲ್ಲೇಶ್ವರನಿಗೆ ಕ್ಷೇತ್ರ ಪೂಜೆಯ ಮಾಳ್ಪೆನೆಂದು ಮನದಲ್ಲಿ ನೆನೆದು ಅದಕ್ಕೋಸ್ಕರ ಅವನ ಸೇವಕರು ಅಮುಗಿ ದೇವಗಳ ಸಿಳಯದ ಮುಂದೆ ಹತ್ತು ಕೊಳಗ ಭತ್ತವನು ಕುಟ್ಟಲು ಇಟ್ಟು ಹೋದರು. ಆದರೆ ಅಮುಗಿ ದೇವನು ಸ್ಥಾವರಲಿಂಗ ಪೂಜಕನ ಸೇವೆ ಮಾಡಲಾರೆನೆಂದು ಭತ್ತವನ್ನು ಕುಟ್ಟದೆ ಬಿಸುಡುವನು. ಆಗ ಸಿದ್ಧರಾಮನು ನಾನು ಸರ್ವಾಂಗಲಿಂಗಿ, ಎನಗೊಂದು ಲಿಂಗವೇ, ಸರ್ವನಯನಪ್ಪ ಎನಗೆ

ಬೇರೆ ಲಿಂಗಾಂಗವೇ, ಎಂದು ಕೆರಳುವನು. ಅದಕ್ಕೆ ಅಮುಗಿ ದೇವನು ಸೊನ್ನಲಾಪುರವನ್ನು ಬಿಟ್ಟು ಹೋಗಬೇಕೆಂದು ನಿಶ್ಚಯಿಸಿ ತನ್ನ ನೇಗೆಯ ಮುಟ್ಟುಗಳನ್ನೆಲ್ಲ ಮೂರು ಗಂಟುಗಳಾಗಿ ಕಟ್ಟಿ ಅವುಗಳಲ್ಲಿ ಒಂದನ್ನು ತಾನು, ಮತ್ತೊಂದನ್ನು ತನ್ನ ಹೆಂಡತಿಯು ಹೀಗೆ ಹೊತ್ತುಕೊಂಡು ಉಭಯತರು ಕಲ್ಯಾಣಕ್ಕೆ ಬರುವರು. ಮೂರನೆಯ ಗಂಟನ್ನು ಕಪಿಲಸಿದ್ಧಮಲ್ಲಿಕಾರ್ಜುನನೇ ಹೊತ್ತುಕೊಂಡು ಅಮುಗಿ ದೇವಯ್ಯನಿದ್ದಲ್ಲಿಗೆ ತಂದು ಮುಟ್ಟಿಸುವನು.

ಮರುದಿನ ಸಿದ್ಧರಾಮನು ಕಪಿಲಸಿದ್ಧನಿಗೆ ತೈಲಾಭ್ಯಂಗನ ಸ್ನಾನ ಮಾಡಿಸುವಲ್ಲಿ ಕಪಿಲಸಿದ್ಧನು ತನ್ನ ಗೋಣು ನೋಯುತ್ತಿದೆ, ಕೈ ಹಚ್ಚಬೇಡೆಂದು ಸಿದ್ಧರಾಮನಿಗೆ ಹೇಳಲು ಸಿದ್ಧರಾಮನು ಇದರ ಕಾರಣವೇನೆಂದು ಕೇಳಲು ಕಪಿಲಸಿದ್ಧಮಲ್ಲಿಕಾರ್ಜುನನು ಅಮುಗಿ ದೇವನ ಹೊರೆಯನ್ನು ಹೊತ್ತುಕೊಂಡು ಹೋಗುವಲ್ಲಿ ಅದರ ಭಾರದಿಂದ ಗೋಣು ನೋಯುತ್ತದೆ, ಈ ನೋವಿಗೆ ನೀನೇ ಕಾರಣನೆಂದು ಸಿದ್ಧರಾಮನಿಗೆ ಹೇಳಿದನು. ಸಿದ್ಧರಾಮನು ಪಶ್ಚಾತ್ತಾಪಬಟ್ಟು ಅಮುಗಿ ದೇವನನ್ನು ಕರೆತರಲು ಕಲ್ಯಾಣಕ್ಕೆ ಹೋಗುವನು. ಆದರೆ ಅಮುಗಿದೇವನು ನೀನು ಲಿಂಗಿಯಲ್ಲ, ನಿನ್ನ ಪಟ್ಟಣಕ್ಕೆ ಬಾರೆನೆಂದು ಹೇಳಲು ಸಿದ್ಧರಾಮನು ತಿರುಗಿ ಸೊನ್ನಲಾಪುರಕ್ಕೆ ಬಂದು ಕಪಿಲಸಿದ್ಧಮಲ್ಲಿಕಾರ್ಜುನನಿಗೆ ಈ ವಿಷಯವನ್ನು ನಿವೇದಿಸಿಕೊಳ್ಳುವೆನು. ಆಗ ಕಪಿಲಸಿದ್ಧಮಲ್ಲಿಕಾರ್ಜುನನು ಜಂಗಮರೂಪ ತಾಳಿ ಸಿದ್ಧರಾಮನಿಗೆ ಲಿಂಗಧಾರಣೆಯನ್ನು ಮಾಡಲು ಆ ಮೇಲೆ ಅಮುಗಿ ದೇವನನ್ನು ಸಿದ್ಧರಾಮನು ಕಾಣಲಿಕ್ಕೆ ಹೋಗುವನು ಆಗ ಅಮುಗಿ ದೇವನು ಸಿದ್ಧರಾಮನನ್ನು ಬಹು ಪ್ರೀತಿಯಿಂದ ಸತ್ಕರಿಸುವನು. ಪರಮಾತ್ಮನು ಅಮುಗಿದೇವನ ವರ್ತನೆಗೆ ಪ್ರೀತನಾಗಿ ಪುಷ್ಪಕವಿಮಾನದಿಂದ ಕೈಲಾಸಕ್ಕೆ ಅವನನ್ನು ಬರಮಾಡಿಕೊಳ್ಳುವನು. ಹೀಗೆ ಕಥಾಸಂದರ್ಭವು ಇದೆ.

ಇದರಲ್ಲಿ ಅಮುಗಿ ದೇವನ ಹೆಂಡತಿಯು ವರದಾನಿ ಎಂತಲೂ ಅವನ ಇಷ್ಟದೇವತೆಯು ಚನ್ನಸೋಮಯ್ಯನೆಂತಲೂ ನೇಗಿಯ ಕಾಯಕವನ್ನೇ ಅವನು ಮಾಡುತ್ತ ಸೊನ್ನಲಾಪುರದಲ್ಲಿ ಇದ್ದನೆಂತಲೂ ಕಡೆಗೆ ಅವನ ಮೂಲಕವಾಗಿಯೇ ಸಿದ್ಧರಾಮನು ಕಪಿಲಸಿದ್ಧಮಲ್ಲಿಕಾರ್ಜುನನಿಂದ ವೀರಶೈವ ದೀಕ್ಷೆಯನ್ನು ಹೊಂದಿದನೆಂತಲೂ ತಿಳಿದು ಬರುತ್ತದೆ.

ಆವುಗಿದೇವಯ್ಯಗಳ ಸಾಂಗತ್ಯ.

ಆವುಗಿದೇವಯ್ಯಗಳ ಸಾಂಗತ್ಯ ಎಂಬುದೊಂದು ತಾಡವಾಲೆ ಗ್ರಂಥವಿದೆ. ಇದರಲ್ಲಿ ನಾವು ಹಿಂದೆ ವಿವರಿಸಿದಂತೆ ಲಲಂ ಪದ್ಯಗಳು ಇದ್ದು ಕಥಾ ಭಾಗದ ಮೇಲಿಂದ "ಆವುಗಿದೇವಯ್ಯ" ಮತ್ತು "ಅಮುಗಿದೇವಯ್ಯ" ಇವರಿಬ್ಬರೂ ಒಂದೇ ಎಂದು ತೋರಿಬರುತ್ತದೆ. ಈ ಆವುಗಿದೇವಯ್ಯಗಳ ಸಾಂಗತ್ಯ ಗ್ರಂಥದ ಬಗ್ಗೆ ಶ್ರೀಯುತ ಭೀಮಾಚಾರ್ಯ ಒಡವಿ (ಕಾವ್ಯರತ್ನ) ಎಮ್.ಎಸ್ಸರ ತುಮ್ಮಿನಕಟ್ಟಿ ಇವರು ಬರೆದ ಒಂದು ಲೇಖವು ೧೯೩೮ನೇ ವರ್ಷದ ಶಿವಾನುಭವದ ಸಪ್ಟಂಬರ ತಿಂಗಳದ ಸಂಚಿಕೆಯಲ್ಲಿ ಬಂದಿರುತ್ತದೆ. ಅದನ್ನು ವಾಚಕರು ಅವಶ್ಯವಾಗಿ ನೋಡಬೇಕು. ಈ ಕಾವ್ಯವನ್ನು ಸುತ್ತೂರು ಸಿಂಹಾಸನಧೀಶ ಕಪ್ಪಿನ। ಮುಕ್ತಿದಾಯಕ ನಂಜೇಶ್ವರನಾಹಸ್ತದಿ ಜನಿಸಿದ ಭೃತ್ಯ ಶಿವಾನಂದ। ವಿಸ್ತರಿಸಿದ ನಿಜ ಕಥೆಯ॥ ಕಲ್ಲೋಸರವೆ ಕಡಿದೊಣಗಿ ಬಿದ್ದಿಹ ಮರ। ಘುಲ್ಲೈಸವೆ ಕೊಯಿ-ಕೊಯಿದು। ಪುಲ್ಲೆಲ್ಲ ಜಿಗುರವೆ ಶಿವಲಿಂಗಾರಾಧ್ಯನ। ಸೊಲ್ಲಿನ ಕೃತಿಯ ರಚನೆಗೆ॥ ಎಂದು ಇದ್ದ ಇದರ ಮೇಲಿಂದ ಶಿವಲಿಂಗ ಎಂಬ ಕವಿಯು ಈ ಗ್ರಂಥವನ್ನು ರಚಿಸಿರುವದಾಗಿ ತಿಳಿದು ಬರುತ್ತದೆ. ಈ ಸಾಂಗತ್ಯವನ್ನು ಬರೆದ ಓಲೆಯ ಪ್ರತಿಯಲ್ಲಿ ಹಳಗನ್ನಡ ರ,ಳ ಅಕ್ಷರಗಳು ಕಾಣುವದರಿಂದ ಇದು ಪ್ರಾಚೀನವಾಗಿರಬಹುದೆಂದು ಶ್ರೀಯುತ ಭೀಮಾಚಾರ್ಯ ಒಡವಿ ಇವರು ಅಭಿಪ್ರಾಯ ಪಡುತ್ತಾರೆ. ಇದರಿಂದ ಕಂಡು ಬರುವ ಸಂಗತಿಗಳೇನೆಂದರೆ—

ಸೊನ್ನಲಾಪುರ ಗ್ರಾಮದೊಳಗೆ ಸಿದ್ಧರಾಮನೆಂಬ ಅರಸನು ಆಳುತ್ತಿದ್ದನು. ಅವನಲ್ಲಿ ದಂಡಿನ ಬಲವು ಅಧಿಕವಾಗಿದ್ದದ್ದನ್ನು ಲಾಕಡೀಶದ ದೊರೆಯು ತಿಳಿದು ಇವನ ಸೊಕ್ಕು ಮುರಿಯಬೇಕೆಂದು ಸಮಸ್ತ ದೇಶಗಳ ಅರಸರನ್ನು ಕೂಡಿಕೊಂಡು ಸಿದ್ಧರಾಮನೊಡನೆ ಯುದ್ಧಕ್ಕೆ ಬರುವನು. ಎರಡು ಸಾರೆ ಯುದ್ಧವಾಗಿ ಸಿದ್ಧರಾಮನೇ ಅವುಗಳಲ್ಲಿ ಗೆಲ್ಲುವನು. ಸೊನ್ನಲಾಪುರದಲ್ಲಿ ಆವುಗಿದೇವಯ್ಯನೆಂಬ ಶಿವಭಕ್ತನಿರುತ್ತಿದ್ದನು. ಅವನಿಗೆ ರುದ್ರಾಣಿ ಎಂಬ ಹೆಂಡತಿ ಇದ್ದಳು. ಸಿದ್ಧರಾಮನು ಹರ ದೇವಾಲಯವನ್ನು ಕಟ್ಟಿಸಿ ಪುರಜನರಿಗೆಲ್ಲ ಧಾನ್ಯದ ಕೊಟ್ಟಣವನ್ನು ಕುಟ್ಟಿಸಲಿಕ್ಕೆ ಹಾಕಿದನು. ಅದರಂತೆ ಆವುಗಿದೇವಯ್ಯನ ಮನೆಗೂ ಬತ್ತವನ್ನು ಹಾಕಿಸಲು ಈತನು ನರರ ಸೇವೆಗೆ ಈ ದೇಹವನ್ನು ಬಳಲಿಸ

ಲಾರೆನೆಂದು ಹೇಳಿದನು. ಸಿದ್ಧರಾಮಪ್ರಭುವು ಇದನ್ನು ಕೇಳಿ ಮುನಿಯಲು ಅವುಗಿದೇವಯ್ಯನು ಕಲ್ಯಾಣಕ್ಕೆ ಹೊರಟನು. ಅವನು ತನ್ನ ನೇಗಿಯ ಸಾಮಾನುಗಳನ್ನೆಲ್ಲ ಮೂರು ಹೊರೆ ಮಾಡಿ ಅವುಗಳಲ್ಲಿ ಎರಡು ಹೊರೆಗಳನ್ನು ತಾವು ಗಂಡಹೆಂಡರು ತೆಗೆದುಕೊಂಡು ಹೊರಟರು. ಇನ್ನೊಂದನ್ನು ಶಿವನಿಂದ ತರಿಸಿಕೊಂಡನು. ಆಗ ಈಶ್ವರನೇ ಅವುಗಿದೇವಯ್ಯನ ವೇಷದಿಂದ ಸೊನ್ನಲಾಪುರದಲ್ಲಿ ಇರಹತ್ತಿದನಂತೆ. ಇದು ಸಿದ್ಧರಾಮನಿಗೆ ತಿಳಿದು ಪಶ್ಚಾತ್ತಾಪಪಟ್ಟು ಅವನು ತನ್ನ ಬಲಸಹಿತ ಕಲ್ಯಾಣಕ್ಕೆ ಹೋಗಿ ಅವುಗಿದೇವಯ್ಯನನ್ನು ಕಂಡು ಶರಣಾಗತನಾಗುವನು. ಆಗ ಅವುಗಿದೇವಯ್ಯನು ಸಿದ್ಧರಾಮನಿಗೆ ಜ್ಞಾನ ಬಂದಿತೆಂದು ಸಂತೋಷಪಟ್ಟು ಅತನಿಗೆ ಬುದ್ಧಿವಾದವನ್ನು ಹೇಳುವನು. ಮುಂದೆ ಹೆಂಡತಿ ಸಹಿತ ಅವನು ಶಿವನ ದೇಹದಲ್ಲಿ ಐಕ್ಯನಾಗುವನು ಎಂದು ಈ ಸಾಂಗತ್ಯದಲ್ಲಿ ವಿವರಣೆಗಳು ಬಂದಿರುತ್ತವೆ. ಈ ವಿವರಣೆಯನ್ನು ಕೊಡುವಲ್ಲಿ ಶ್ರೀ. ಘೇವಾಚಾರ್ಯರು ತಮ್ಮ ಲೇಖದಲ್ಲಿ ಬಹುಭಾಗ ಬಿಟ್ಟಿರಬಹುದೆಂದು ನಮಗೆ ತೋರುತ್ತದೆ.

ಚರಿತ್ರೆಯ ಬಗ್ಗೆ ಅನುಮಾನಗಳು.

ಈ ಪ್ರಕಾರ ವೀರಶೈವ ಗ್ರಂಥಗಳಲ್ಲಿ ಅವುಗಿದೇವನ ವೃತ್ತಾಂತಗಳು ದೊರೆಯುತ್ತವೆ. ಈತನೇ ಪುಳುಜ ಗ್ರಾಮದಲ್ಲಿಯ ಶಿಲಾಲೇಖದಲ್ಲಿ ಉಲ್ಲೇಖಿಸಲ್ಪಟ್ಟ ಅವುಗಿದೇವನೇ ಹ್ಯಾಗೆ ಎಂಬ ಪ್ರಶ್ನೆಯು ಈಗ ಉದ್ಭವಿಸುತ್ತದೆ. ಅವರಿಬ್ಬರೂ ಒಂದೇ ಎಂದು ಗ್ರಹಿಸದಲ್ಲಿ ಕೆಳಗೆ ಕಾಣಿಸಿದ ಸಂಗತಿಗಳು ನಿಜವೆಂದು ನಾವು ನಂಬಬೇಕಾಗುತ್ತದೆ.

(೧) ಅವುಗಿದೇವನು ಮೊದಲು ಸೊಲ್ಲಾಪುರದಲ್ಲಿ ನೇಗಿಯ ಕಾಯಕವನ್ನು ಮಾಡುತ್ತ ಇದ್ದನು. ಆಗ ಅಲ್ಲಿ ಸಿದ್ಧರಾಮನು ಸಹ ಇದ್ದದದರಿಂದ ಇದು ೧೧೫೫ ರ ಸುಮಾರಿನಲ್ಲಿ ಇರಬಹುದು. ಅವುಗಿದೇವನ ಇಷ್ಟ ದೇವತೆಯು ಪುಳುಜ ಗ್ರಾಮದ ಸಿದ್ಧಸೋಮನಾಥನು. ಈ ದೇವಾಲಯಕ್ಕೆ ಸಿಂಘಣರಾಜನು ಭೂಮಿಯನ್ನು ದಾನ ಕೊಟ್ಟಿದ್ದರಿಂದ ಇದು ಆ ಕಾಲಕ್ಕೆ ಬಹು ಪ್ರಸಿದ್ಧ ಸ್ಥಾನವಾಗಿರಬೇಕು. ಮುಂದೆ ಅವುಗಿದೇವನಿಗೂ ಸಿದ್ಧರಾಮನಿಗೂ ಕೆಲವೊಂದು ಕಾರಣಕ್ಕೋಸ್ಕರ ಮನಸ್ತಾಪ ಉಂಟಾದ್ದರಿಂದ ಅವುಗಿದೇವನು ಸೊಲ್ಲಾಪುರವನ್ನು ಬಿಟ್ಟು ಕಲ್ಯಾಣದಲ್ಲಿ ಬಂದು ಬಸವೇಶ್ವರನ ಶಿವಾನುಭವ ಮಂಟಪದಲ್ಲಿ ಸೇರ್ಪಡೆಯಾದನು. ಆಕಾಲದಿಂದ ಅಲ್ಲಿ ನಡೆದ ವಾಗ್ವಾದಗಳಲ್ಲಿ ಅವುಗಿದೇವನ ಉಲ್ಲೇಖವು ಮೇಲಿಂದ ಮೇಲೆ ಬರುತ್ತದೆ. ಮುಂದೆ ಕಲ್ಯಾಣದಲ್ಲಿ ಕ್ರಾಂತಿಯು ಉದ್ಭವಿಸಲಾಗಿ ಅಲ್ಲಿಯ ಶಿವಶರಣರು ಕಲ್ಯಾಣವನ್ನು ಬಿಟ್ಟು ಬೇರೆ ಬೇರೆ ಸ್ಥಳಗಳಿಗೆ ಚದರಿ ಹೋದರು. ಈ ಪರಿಸ್ಥಿತಿಯಲ್ಲಿ ಅವುಗಿ ದೇವನು ತನ್ನ ಮೂಲಸ್ಥಾನವಾದ ಸೊಲ್ಲಾಪುರಕ್ಕೆ ಹೋಗದೆ ತನ್ನ ಇಷ್ಟ ದೇವತೆಯ ಸ್ಥಾನವಾದ ಪುಳುಜ ಗ್ರಾಮದಲ್ಲಿ ಬಂದು ಇರಹತ್ತಿದನು. ಹೀಗೆ ಅಲ್ಲಿ ಅವನು ವಾಸವಾಡುತ್ತಿರುವಾಗ್ಗೆ ಸಿಂಘಣ ನೃಪಾಲನು ಅಲ್ಲಿಗೆ ಬರಲು ನೃಪಾಲನು ಅವನಿಗೆ ಒಂದು ಗ್ರಾಮವನ್ನು ಉಂಬಳಿಹಾಕಿಕೊಟ್ಟನು. ಆದರೆ ಈ ಶಿಲಾಶಾಸನವು ೧೨೦೦ ನೇ ಇಸ್ವಿಯದು ಇರುವದರಿಂದ ಆಗ ಅವುಗಿದೇವನು ಬಹು ಮುಪ್ಪಿನವನಾಗಿರಬೇಕು. ಅಂದರೆ ಅವನ ವಯಸ್ಸು ಆಗ ೮೦ ವರ್ಷವಿರಬೇಕು. ಅಲ್ಲಿಯೇ ಲಿಂಗೈಕ್ಯನಾಗಿರಬೇಕು. ಹೀಗೆ ಅವುಗಿದೇವನ ಚರಿತ್ರೆಯನ್ನು ನಾವು ಕಲ್ಪಿಸಿದ್ದಾದರೆ ಇದು ನಂಬಲು ಅರ್ಹವೋ ಹ್ಯಾಗೆ ಎಂಬ ವಿಷಯವನ್ನು ನಾವು ಸಂಶೋಧಕರ ಕಡೆಗೆ ಬಿಟ್ಟುಕೊಡುತ್ತೇವೆ.

ಮೇಲ್ಕಂಡ ವಿವರಣೆಯು ನಂಬಲು ಅರ್ಹವಿರದಿದ್ದರೆ,

(೨) ಬಸವೇಶ್ವರನ ಕಾಲದಲ್ಲಿಯ ಅವುಗಿದೇವನು ಬೇರೆ ಮತ್ತು ಸಿಂಘಣನ ಕಾಲದ ಅವುಗಿ ದೇವನು ಬೇರೆ ಎಂದು ನಾವು ಗ್ರಹಿಸಬೇಕಾಗುತ್ತದೆ. ಮತ್ತು ಈ ಉಭಯತರು ಪುಳುಜ ಗ್ರಾಮದ ಸಿದ್ಧಸೋಮನಾಥನ ಭಕ್ತರಾಗಿದ್ದರು ಈ ಉಭಯತರು ವಿದ್ವಾಂಸರಾಗಿದ್ದು ಆ ಕಾಲಕ್ಕೆ ಬಹು ಮನ್ನಣೆಯನ್ನು ಹೊಂದಿದವರಾಗಿದ್ದರು. ಈ ಚರಿತ್ರೆಯೂ ಕೂಡ ಸಂಭವನೀಯವಿರುತ್ತದೆ.

ಈ ಎರಡು ಅನುಮಾನಗಳಲ್ಲಿ ಯಾವದು ನಿಜವೆಂಬುದನ್ನು ಗೊತ್ತು ಪಡಿಸಬೇಕಾದರೆ ನಾವು ಅವುಗಿದೇವನ ವಿಷಯವಾಗಿ ಗ್ರಂಥಗಳಲ್ಲಿಯೂ ಪುಳುಜಗ್ರಾಮದ ಸುತ್ತು ಮುತ್ತಲಿನ ಪ್ರದೇಶಗಳಲ್ಲಿಯೂ ಇನ್ನೂ ಹೆಚ್ಚಿಗೆ ಶೋಧಿಸಬೇಕು.

ನಾವು ಇಷ್ಟರ ಮಟ್ಟಿಗೆ ಹೇಳಿ ಸದ್ಯಕ್ಕೆ ಈ ಲೇಖನವನ್ನು ಪೂರ್ತಿ ಮಾಳಿಸುತ್ತೇವೆ.

ಹಿಂದೂ ಸಮಾಜದಲ್ಲಿ ಸಂಘಟನೆ.

ಲೇಖಕ:- ಓರ್ವ ವೀರಶೈವ.

(೧) ಸಾಂಸ್ಕೃತಿಕ ಸಂಘಟನೆ.

ಹಿಂದೂ ಮಹಾಸಭೆಯ ಮುಖ್ಯ ಉದ್ದೇಶವು ಹಿಂದೂ ಜನರಲ್ಲಿ ಸಂಘಟನೆಯನ್ನುಂಟು ಮಾಡುವದಾಗಿರುತ್ತದೆ. ನಾವು ಆ ಮಹಾ ಸಭೆಯಲ್ಲಿ ಭಾಗಿಗಳಾಗಬೇಕೋ ಹ್ಯಾಗೆ ಎಂಬ ಪ್ರಶ್ನೆದ ಅವಗಾಹನೆಗಾಗಿ ಕೆಲವು ಸಂಗತಿಗಳನ್ನು ವಿಶದಪಡಿಸುವದು ಯುಕ್ತವಾಗಿ ತೋರಿದ್ದರಿಂದ ನನ್ನ ಅಲ್ಪ ಮತಿಗೆ ತಿಳಿದಷ್ಟು ಇಲ್ಲಿ ಪ್ರಯತ್ನಿಸುತ್ತಿದ್ದೇನೆ. ಸುಜ್ಞರು ಅವುಗಳಲ್ಲಿ ಯುಕ್ತವಾದವುಗಳನ್ನು ಗ್ರಹಿಸಬಹುದು. ಯುಕ್ತ ಕಾಣದಿದ್ದಲ್ಲಿ ತಿಳಿಸಿ ಹೇಳಬಹುದು.

ಹಿಂದೂ ಸಂಘಟನೆಯ ಪ್ರಶ್ನೆಯು ಒಂದು ಭಾಷೆ ಜಾತಿ, ಪಕ್ಷ ಅಥವಾ ಪ್ರಾಂತಕ್ಕೆ ಸಂಬಂಧಿಸದೆ ಇಡೀ ಭರತಖಂಡದ ಹಿಂದುಗಳಿಗೆ ಸಂಬಂಧಿಸಿದ್ದಾಗಿದೆ. ಆದುದರಿಂದ ಹಿಂದುಗಳಲ್ಲಿ ಸಂಘಟನೆಯು ಹೇಗಾಗಬೇಕು, ಹಿಂದೂ ಸಂಘಟನೆಯ ಸಾಮಾನ್ಯ ನಿಯಮಗಳಾವವು, ಹಿಂದೂ ಸಂಘಟನೆಯ ಬಗ್ಗೆ ಜನರ ಮನಸ್ಸಿನಲ್ಲಿ ಮೂಡಿರುವ ತಪ್ಪು ತಿಳುವಳಿಕೆಗಳಾವವು, ಹಿಂದೂ ಸಂಘಟನೆಯಲ್ಲಿ ವಿಶೇಷತಃ ವೀರಶೈವರ ಸ್ಥಾನವಾವುದು, ಈ ವಿಷಯಗಳನ್ನು ಕುರಿತು ಪ್ರತಿಪಾದಿಸುವದು ಅಗತ್ಯವಾಗಿದೆ. ಮೊದಲು ಹಿಂದುಗಳಲ್ಲಿ ಸಂಘಟನೆಯು ಹೇಗಾಗಬೇಕೆಂಬ ವಿಷಯವನ್ನು ಕುರಿತು ಆಲೋಚಿಸೋಣ.

ಹಿಂದುಗಳಲ್ಲಿ ಸಂಘಟನೆಯು ಹೇಗಾಗಬೇಕು?

ಕೆಲವರು ಹೇಗೆ ಅಭಿಪ್ರಾಯಪಡುವರು, "ಹಿಂದೂ ಎಂಬದು ಕ್ರೈಸ್ತ ಮುಸಲ್ಮಾನ ಸಮಾಜಗಳಂತೆ ಒಂದೇ ಸಮಾಜವಲ್ಲ. ಅನೇಕ ಭಿನ್ನ ಭಿನ್ನ ಸಮಾಜಗಳಿಂದ ಕೂಡಿದ ದೊಡ್ಡದೊಂದು ಸಮಾಜವು. ಇದರಲ್ಲಿ ಭಿನ್ನ ಭಿನ್ನ ಮತ ಪಂಥಗಳುಂಟು. ಬೇರೆ ಬೇರೆ ಭಾಷೆಗಳನ್ನಾಡುವವರಿದ್ದಾರೆ. ಆಯಾಯ ಪ್ರಾಂತದ ಹಿಂದುಗಳ ವೈಶಿಷ್ಟ್ಯ ಆಕಾಂಕ್ಷೆಗಳೇ

ಬೇರೆ. ಸಾಮಾಜಿಕ ರಾಜಕೀಯ ದೃಷ್ಟಿಯಿಂದ ಅನೇಕ ಭಿನ್ನ ಭಿನ್ನಾಭಿಪ್ರಾಯಗಳುಳ್ಳ ಪಕ್ಷ ಪಂಗಡಗಳುಂಟು.

ವೈದಿಕ ಧರ್ಮದಲ್ಲಿ ಸ್ಥೂಲವಾನದಿಂದ ಸಾಂಪ್ರದಾಯಿಕ ಪ್ರಾಗತಿಕ ಮತಗಳೆಂಬೆರಡು ಭೇದಗಳಿರುವವು. ಸಾಂಪ್ರದಾಯಿಕರು ಅಥವಾ ಸನಾತನಿಗಳು ಬಹು ದಿವಸಗಳಿಂದ ರೂಢವಾಗಿರುವ ಆಚಾರ ವಿಚಾರಗಳನ್ನು ವ್ಯತ್ಯಾಸಗೊಳಿಸಬಾರದೆಂದು ಒಂದು ಕಡೆಗೆ ಹಟ ಹಿಡಿದರೆ ಇನ್ನೊಂದು ಕಡೆಗೆ ಪ್ರಾಗತಿಕರು ಮೂಢವಾದ ರೂಢಾಚಾರಗಳನ್ನು ಕಿತ್ತೊಗೆದು ಲೋಕಹಿತದ ಹಾಗೂ ರಾಷ್ಟ್ರೋನ್ನತಿಯ ಕಾರ್ಯಗಳನ್ನು ಪ್ರಚಾರದಲ್ಲಿ ತರಬೇಕೆಂದು ಸಾರುತ್ತಿರುವರು. ಉದಾಹರಣಾರ್ಥವಾಗಿ ಅಸ್ಪೃಶ್ಯತಾ ನಿವಾರಣೆಯ ಪ್ರಶ್ನೆಯು ಸದ್ಯಕ್ಕೆ ಉಭಯಪಕ್ಷಗಳಲ್ಲಿ ದೊಡ್ಡದೊಂದು ಗೊಂದಲವನ್ನೇ ಎಬ್ಬಿಸಿದೆ. ಇಂಥ ಪ್ರಸಂಗದಲ್ಲಿ ಸಂಘಟನೆಯು ಹೇಗಾಗಬೇಕು? ಸೂಕ್ಷ್ಮ ದೃಷ್ಟಿಯಿಂದ ವಿಚಾರಿಸಲು ವೈದಿಕ ಧರ್ಮದಲ್ಲಿ ಸ್ಮಾರ್ತ, ವೈಷ್ಣವ, ಶೈವ, ವೀರಶೈವ, ಶಾಕ್ತ, ಸೌರ, ಗಾಣಪತ್ಯ ಇತ್ಯಾದಿ ಹತ್ತೆಂಟು ಮತಗಳಿರುವವು. ಇದಲ್ಲದೆ ಅವುಗಳೊಳಗೆ ನೂರಾಯೆಂಟು ಜಾತಿಗಳಿರುವವು. ಅವುಗಳಲ್ಲಿ ಐಕ್ಯತೆಯು ನೆಲೆಗೊಳ್ಳಲು ಶಕ್ಯವೇ? ಐಕ್ಯತೆಯಾಗದೆ ಸಂಘಟನೆಯು ಶಕ್ಯವೇ? ಇದಲ್ಲದೆ ರಾಜಕೀಯ ದೃಷ್ಟಿಯಿಂದ ವಿಚಾರಿಸಲಾಗಿ ಹಿಂದುಗಳಲ್ಲಿ ಕಾಂಗ್ರೆಸ ಪಕ್ಷ, ಬ್ರಾಹ್ಮಣೇತರ ಪಕ್ಷ, ಸಮಾಜ ಸುಧಾರಕ ಪಕ್ಷ, ಸೌಮ್ಯ ಪಕ್ಷ, ಉಗ್ರ ಪಕ್ಷ ಇತ್ಯಾದಿ ಪಕ್ಷಗಳು ಸಂಘಟನೆಗೆ ವಿಘ್ನ ಮಾಡಲಿಕ್ಕಿಲ್ಲವೇ? ಅಂದಮೇಲೆ ಹಿಂದುಗಳಲ್ಲಿ ಸಂಘಟನೆಯು ಸಾಧ್ಯವೆ?

ಮೇಲಿನ ಎಲ್ಲ ಪ್ರಶ್ನೆಗಳನ್ನು ವಿಚಾರಿಸಿ ನೋಡಲಾಗಿ ಯಾರಿಗಾದರೂ ಸಂಘಟನೆಯು ಅಸಾಧ್ಯವೆಂದೇ ಸಹಜವಾಗಿ ಹೊಳೆಯುವದು. ಆದರೆ ಅಸಾಧ್ಯವೆಂದು ತಿಳಿದು ಕೈ ಬಿಡಲಿಕ್ಕೆ ಬರುವಂತಿಲ್ಲ. ಅಸಾಧ್ಯವಾದದ್ದನ್ನು ಸಾಧ್ಯಮಾಡಬೇಕಾಗಿದೆ. ಅನೇಕತ್ವಗಳಲ್ಲಿ ಏಕತ್ವವನ್ನು ಹುಡುಕಿ ತೆಗೆಯಬೇಕಾದರೆ ಹಿಂದುಗಳೆಲ್ಲರೂ ಒಂದೇ ಎಂಬ ಭಾವವನ್ನು ಸ್ಥಿರಗೊಳಿಸಬೇಕಾಗಿದೆ ನಾವೆಲ್ಲರೂ ಹಿಂದೂ ಧರ್ಮ ಮಾತೆಯ ಮಕ್ಕಳು, ಪರಸ್ಪರ ಬಂಧುಬಾಂಧವರು ಎಂಬ ವಿಚಾರವನ್ನು ಎಲ್ಲ ಹಿಂದುಗಳ ಮನಸ್ಸಿನಲ್ಲಿ ನೆಲೆಗೊಳಿಸಬೇಕಾಗಿದೆ. ನಮ್ಮ ಕೈಕಾಲು, ಕಣ್ಣು, ಕಿವಿ, ಮೂಗು ಮೊದಲಾದ ಅವಯವಗಳು ಭಿನ್ನವಾದಾಗ್ಯೂ ದೇಹವೆಂಬ ಒಂದೇ ಭಾಗಕ್ಕೆ ಸಂಬಂಧಪಟ್ಟಿರುವದಿಲ್ಲವೇ? ಎಲೆ, ಹೂ, ಕಾಯಿ,

ಹಣ್ಣು, ಟೊಂಗೆ ಮುಂತಾದವುಗಳು ಭಿನ್ನವಾದಾಗ್ಯೂ ಗಿಡವೆಂಬ ಮುಖ್ಯ ವಸ್ತುವಿಗೆ ಅವು ಸಂಬಂಧಪಟ್ಟಿಲ್ಲವೇ? ಅದೇ ಮೇರೆಗೆ ನಮ್ಮಲ್ಲಿ ನೆಲೆಗೊಂಡ ವಿವಿಧ ಮತಪಂಥಗಳೂ ಪಕ್ಷಗಳೂ ನಿಜವಾಗಿ ಹಿಂದೂ ಸಮಾಜದಲ್ಲಿಯೇ ಸಮಾವೇಶವಾಗುತ್ತವೆ. *There is unity in diversity* ಎಂಬ ತತ್ವವು ನಮ್ಮ ಹಿಂದೂ ಸಮಾಜಕ್ಕೂ ಸಮನ್ವಯಿಸುವದು.

ತತ್ವವೇನೋ ಹೇಳಲಿಕ್ಕೆ ಬಹು ಸುಲಭ. ಆದರೆ ಅವನ್ನು ಆಚರಣೆಯಲ್ಲಿ ತರಲಿಕ್ಕೆ ಹೋದಾಗ ವಿಘ್ನಗಳು ಪರಂಪರೆಯಾಗಿ ಬಂದು ನಮ್ಮ ಮುಂದೆ ನಿಲ್ಲುವವು. ಸಂಘಟನೆಯ ಪ್ರಶ್ನೆಯು ತಾತ್ವಿಕ ದೃಷ್ಟಿಯಿಂದ ಹೇಳಿಬಿಡುವ ಸುಲಭವಾದ ಮಾತಲ್ಲ. ಆಚರಣೆಯಲ್ಲಿ ತೋರಿಸುವ ದುಸ್ತರವಾದ ಕೆಲಸವಾಗಿರುವದು.

ಈಗ ನಮ್ಮ ಮುಂದೆ ಸಂಘಟನೆಗೆ ಅನುಕೂಲವಾದ ಎರಡು ಮುಖ್ಯವಾದ ವಿಷಯಗಳಿರುವವು. ಅವು ಯಾವವೆಂದರೆ (೧) ರಾಜಕೀಯ (೨) ಸಾಂಸ್ಕೃತಿಕ. ರಾಜಕೀಯ ದೃಷ್ಟಿಯಿಂದ ಸಂಘಟನೆ ಯಾಗುವದೋ, ಸಾಂಸ್ಕೃತಿಕ ದೃಷ್ಟಿಯಿಂದ ಸಂಘಟನೆಯಾಗುವದೋ, ಎಂಬದನ್ನು ನಾವು ಲಕ್ಷಪೂರ್ವಕವಾಗಿ ವಿಚಾರಿಸಬೇಕಾಗಿದೆ. ರಾಜಕೀಯ ದೃಷ್ಟಿಯಿಂದ ಸಂಘಟನೆಯ ವಿಷಯವಾಗಿ ನನಗೆ ಹೊಳೆದದ್ದನ್ನು ಮುಂದಿಟ್ಟಿದ್ದೇನೆ.

ಪರರಾಷ್ಟ್ರಗಳಲ್ಲಿ ಭಿನ್ನ ಭಿನ್ನ ರಾಜಕೀಯ ಪ್ರಶ್ನೆಗಳಿದ್ದರೂ ಅವುಗಳಲ್ಲಿ ಕ್ರಮಬದ್ಧತೆಯೂ ವಿಶಿಷ್ಟ ಉಚ್ಚಹೇತುಗಳನ್ನೊಳಕೊಂಡ ಪಕ್ಷಗಳೂ ವ್ಯಕ್ತವಾಗುತ್ತವೆ. ಅವರು ಈ ಪದ್ಧತಿಯನ್ನು ಸಾಗಿಸಿಕೊಂಡು ಹೋಗಲು ನುರಿತವರೂ ಸಮರ್ಥರೂ ಆಗಿರುತ್ತಾರೆ. ಆದರೆ ನಮ್ಮ ಹಿಂದೂ ಸಮಾಜದಲ್ಲಿ ತಲೆಗೊಬ್ಬರು ಹಿರಿಯರು. ಸ್ವಾರ್ಥಸಾಧನೆಗಾಗಿ ತಮ್ಮ ಸಮಾಜವನ್ನೂ ರಾಷ್ಟ್ರವನ್ನೂ ಮಣ್ಣುಗೂಡಿಸುವವರೇ ಬಹು ಜನರು. ರಾಜಕಾರಣದಲ್ಲಿಯಾದರೂ ನಮ್ಮ ಜನಹಿತ, ಸಮಾಜಹಿತ, ರಾಷ್ಟ್ರಹಿತ, ಇವುಗಳ ಕಡೆಗೆ ಲಕ್ಷ ಕೊಡುವದಕ್ಕಿಂತಲೂ ಅವುಗಳ ಹೆಸರಿನಿಂದ ನಮ್ಮ ಪ್ರತಿಷ್ಠೆ, ನಮ್ಮ ಸ್ವಾರ್ಥ, ನಮ್ಮ ಗೌರವವನ್ನು ಹೆಚ್ಚಿಸಿಕೊಳ್ಳಲಿಕ್ಕೆ ಹವಣಿಸುವವರೇ ಸಂಸ್ಥೆಗಳಲ್ಲಿ ತುಂಬಹತ್ತಿರುತ್ತಾರೆ. ಇದಕ್ಕೆ ಮುನಸಿಪಾಲ್ಟಿ, ಲೋಕಲ್‌ಬೋರ್ಡ, ಕಾಯಿದೆ ಕೌನ್ಸಿಲ್‌ಗಳೇ ಸಾಕ್ಷಿಯಾಗಿವೆ.

"ನಮಗೆ ಮುಂದೆ ಸ್ವರಾಜ್ಯ ದೊರೆತರೆ ನಾವು ನಮ್ಮನಮ್ಮೊಳಗೆ ಬಡಿದಾಡಿ ಸಾಯುವವರೇ ಹೊರತು ಆದನ್ನು ಭದ್ರವಾಗಿ ಕಾಪಾಡಿಕೊಂಡು ಹೋಗಲಾರೆವೆಂದು" ಕೆಲವರು ಅಭಿಪ್ರಾಯಪಡುವರು. ಯಾಕಂದರೆ ನಮ್ಮ ರಕ್ತನಾಳಗಳಲ್ಲಿ ಈಗಿನ ರಾಜ್ಯಕರ್ತೃತ್ವದ ವಿಚಾರಗಳು ಪಾಶ್ಚಾತ್ಯರಂತೆ ಇನ್ನೂ ಚನ್ನಾಗಿ ಬೇರೂರಿಲ್ಲ. ಬಹುಜನ ಅಶಿಕ್ಷಿತರು ಇನ್ನೂ ಅಜ್ಞಾನಾಂಧಕಾರದಲ್ಲಿಯೇ ಮುಳುಗಿರುವದು. ಆದರಿಂದ ಸುಶಿಕ್ಷಿತರು ಹೆಚ್ಚಾಗಿ ಸ್ವಾರ್ಥಿಗಳಾಗಿರುವರೇ ಹೊರತು ಸಮಾಜ ಹಿತೈಷಿಗಳಾಗಲಿ ರಾಷ್ಟ್ರ ಹಿತೈಷಿಗಳಾಗಲಿ ಆಗಿರುವದಿಲ್ಲ. ಏನೋ ಕೈ ಬೆರಳುಗಳಿಂದ ಎಣಿಸುವಷ್ಟು ಸುಶಿಕ್ಷಿತರು ಈಗಿನ ಪರಿಸ್ಥಿತಿಯಲ್ಲಿ ರಾಜ್ಯಕಾರಣದ ದೃಷ್ಟಿಯಿಂದ ಹಿಂದೂ ಸಮಾಜದಲ್ಲಿ ಸಂಘಟನೆಯನ್ನುಂಟುಮಾಡಿಯಾರೆಂದು ನನಗೆ ಭರವಸೆ ಎನಿಸದು. ಕಾರಣ ನಮ್ಮ ಹಿಂದೂ ಸಮಾಜದಲ್ಲಿ ಸಂಘಟನೆಯಾಗಬೇಕಾದರೆ ಸಾಂಸ್ಕೃತಿಕ ದೃಷ್ಟಿಯಿಂದಲೇ ಹೊರತು ರಾಜಕಾರಣ ದೃಷ್ಟಿಯಿಂದ ಸಧ್ಯಕ್ಕೆ ಆಗುವದು ಬಹು ಕಠಿಣವಾಗಿರುತ್ತದೆ.

ನಮ್ಮ ಹಿಂದೂ ಸಮಾಜದಲ್ಲಿ ಕಾಲಕಾಲಕ್ಕೆ ಕ್ರಾಂತಿಗಳಾಗುತ್ತ ಬಂದಿವೆ. ಆಯಾಯ ಕಾಲಕ್ಕೆ ಸಂಘಟನೆಗಳಾಗದ ವಿನಾ ಆ ಕ್ರಾಂತಿಗಳಿಗೆಂದೂ ಬಲಬರುತ್ತಿದ್ದಿಲ್ಲ. ಆದರೆ ಆ ಸಂಘಟನೆಗಳು ರಾಜಕೀಯ ಸ್ವರೂಪದವಾಗಿರದೆ ಆರಂಭದಲ್ಲಿ ಸಾಮಾಜಿಕ ಸುಧಾರಣೆಯನ್ನೇ ತಮ್ಮ ಉದ್ದೇಶವಾಗಿಟ್ಟುಕೊಂಡು ಸಮಾಜವನ್ನು ಸಂಘಟಿತ ಮಾಡಿದವು. ಮುಂದೆ ಇದರಿಂದ ರಾಜಕೀಯ ಕ್ರಾಂತಿಗಳಾದವು. ಜನತೆಯ ಆಚಾರ ವಿಚಾರಗಳನ್ನೇ ಕಾಲಪರಿಸ್ಥಿತಿಗೆ ಸರಿಯಾಗಿ ಒಳ್ಳೆಯದರ ಕಡೆಗೆ ತಿರುಗಿಸುವದೇ ಸಾಂಸ್ಕೃತಿಕ ಸುಧಾರಣೆ ಎನಿಸುತ್ತದೆ. ಇದು ಜನರಿಗೂ ಬೇಕಾಗುತ್ತದೆ. ಭಗವಾನ್ ಬುದ್ಧ ದೇವನು ವೈದಿಕ ಧರ್ಮದಲ್ಲಿ ಜನ್ಮ ತಾಳಿದ್ದರೂ ಹಿಂಸಾಯುಕ್ತವಾದ ಯಜ್ಞಯಾಗಾದಿಗಳನ್ನು ಕಿತ್ತೊಗೆಯಬೇಕೆಂಬ ಮುಖ್ಯ ಧ್ಯೇಯ ತಾಳಿದನು. ಇದರಿಂದ ದೊಡ್ಡ ಸಾಮಾಜಿಕ ಕ್ರಾಂತಿಯಾಗಿ ಎಂಥ ಎಂಥ ವೈಭವಶಾಲೀ ಅರಸರಾಗಿ ಹೋದರೆಂಬುದು ಇತಿಹಾಸ ಪ್ರಸಿದ್ಧವದೆ. ಜೈನ ಧರ್ಮವಾದರೂ ವೈದಿಕ ಧರ್ಮದಲ್ಲಿರುವ ಅತಿಕ್ರಮಣವನ್ನು ಬಗ್ಗುಬಡಿದು ಸಾಮಾಜಿಕ ಕ್ರಾಂತಿಯನ್ನು ಮಾಡಿತು. ಇದರಿಂದ ಜೈನರು ರಾಜ್ಯಸಿಂಹಾಸನಾರೂಢರಾದರು. ಬಸವೇಶ್ವರನ ಪಂಥವಾದರೂ ಕಾಯಕ ಗುಣಗಳಿಗೆ ಮಹತ್ವಕೊಟ್ಟು ಜಾತಿಬಂಧನಗಳನ್ನು

ಹೊರ ದೂಡಿ ಸಮಾಜದಲ್ಲಿ ಸಂಘಟನೆ ಮಾಡಿತು. ಆಗಿನ ರಾಜ್ಯಾಧಿಕಾರಿಗಳು ಅದನ್ನು ಆಗ ನಷ್ಟಗೊಳಿಸಲು ಪ್ರಯತ್ನಿಸಿದರು. ಆದರೆ ಕಡೆಗೆ ತಾವೇ ನಷ್ಟರಾದರು.

ಈ ಮೇರೆಗೆ ಅಯಾಯ ಮತಪಂಥಗಳು ಜನತೆಯ ಸಾಂಸ್ಕೃತಿಕ ಸುಧಾರಣೆಗಾಗಿ ಪ್ರಯತ್ನಿಸಿದವು. ಆ ದೃಷ್ಟಿಯಿಂದಲೇ ಸಂಘಟನೆಯಾಗಲು ಶಕ್ಯವಾಯಿತು. ಅದಕ್ಕೆ ನಿಸ್ವಾರ್ಥಿಗಳಾದ ವಿಭೂತಿಗಳು ಹುರಿಯಾಳಾಗಿ ನಿಲ್ಲಬೇಕು. ಅಂದರೆ ಸಾಮಾನ್ಯರು ಆ ವಿಭೂತಿಗಳು ಹಾಕಿಕೊಟ್ಟ ಉದಾಹರಣೆಯನ್ನು ಹಿಂಬಾಲಿಸುವರು. ಆ ಮೂಲಕ ಸಂಘಟನೆಯು ಭದ್ರವಾಗಿ ಚಿರಕಾಲ ಬಾಳುವದು. ಸಾಂಸ್ಕೃತಿಕ ಸುಧಾರಣೆಯು ಸೊದಲು ಸಾಮುದಾಯಕ ರೀತಿಯಲ್ಲಿ ನಡೆಯದೆ ಒಬ್ಬ ಅಸಾಧಾರಣ ವ್ಯಕ್ತಿಯ ಅವತಾರದಿಂದಲೇ ನಡೆಯುವದೆಂದು ನಮ್ಮಲ್ಲಿ ತಿಳುವಳಿಕೆಯಿದೆ. ಆದರೆ ಅಂಥ ದಿವ್ಯ ವ್ಯಕ್ತಿಯ ಅವತಾರ ನಿರೀಕ್ಷಣೆಮಾಡುವದು ನಮ್ಮ ಸದ್ಯದ ಕೆಲಸವಲ್ಲ. ನಮ್ಮ ಮನಸ್ಸನ್ನು ನಾವು ಸಿದ್ಧಗೊಳಿಸಿ ಎಲ್ಲ ಪಂಥಗಳಲ್ಲಿ ಶ್ರೇಷ್ಠವಾದ ಹಾಗು ಸರ್ವ ಸಾಧಾರಣವಾದ ಆಚಾರವಿಚಾರಗಳನ್ನು ಏಕೀಕರಿಸಿ ಸಂಘಟನೆ ಮಾಡಲು ಪ್ರಯತ್ನಿಸಬೇಕು. ಅಷ್ಟರಲ್ಲಿ ಒಬ್ಬ ವಿಭೂತಿಯು ಉದಯವಾಗಿ ಅವುಗಳಲ್ಲಿ ಕ್ರಮಬದ್ಧತೆಯನ್ನುಂಟುಮಾಡಿ ಜನತೆಯಲ್ಲಿ ಕ್ರಾಂತಿಯನ್ನುಂಟುಮಾಡುವನು. ಆಗ ಹಿಂದೂ ಸಮಾಜವು ಒಂದಾಗುವದು ಖಂಡಿತವೇ.

(೨) ಹಿಂದೂ ಸಂಘಟನೆಯ ಬಗ್ಗೆ ಕೆಲವು ಆಕ್ಷೇಪಗಳು.

ಕೆಲವರು ಹಿಂದೂ ಸಂಘಟನೆಯ ಬಗ್ಗೆ ಬಹು ಸಂಶಯವುಳ್ಳವರೂ ಭಯಭೀತರೂ ಆಗಿದ್ದಾರೆ. ಅವರು ಹಿಂದುಗಳಲ್ಲಿ ಸಂಘಟನೆಯೇ ಬೇಡವೆಂಬದನ್ನು ಕುರಿತು ಕೆಲವು ಆಕ್ಷೇಪಗಳನ್ನು ಮುಂದು ಮಾಡುತ್ತಿರುವರು. ಅವುಗಳಲ್ಲಿ ಮೊದಲನೆಯ ಆಕ್ಷೇಪವೆಂದರೆ:—"ಹಿಂದೂ ಸಂಘಟನೆಯ ಉದ್ದೇಶವು ಮುಸಲ್ಮಾನರನ್ನು ಬಗ್ಗುಬಡಿಯುವದಕ್ಕಾಗಿಯೇ ಇರುತ್ತದೆ. ಇದರಿಂದ ರಾಷ್ಟ್ರದೊಳಗೆ ಹಿಂದೂ ಮುಸಲ್ಮಾನರಲ್ಲಿ ಮತ್ತಿಷ್ಟು ವೈರಭಾವವು ಬೆಳೆಯುವದು. ಹಿಂದೂ ಮುಸಲ್ಮಾನರಲ್ಲಿ ಐಕ್ಯತೆಯನ್ನುಂಟುಮಾಡಬೇಕೆಂದು ನಮ್ಮ ರಾಷ್ಟ್ರದ ಮುಂದಾಳುಗಳು ಪ್ರಯತ್ನಿಸುವಾಗ ನಡುವೆ ಇದೊಂದು ವಿಪರೀತ ನಾಟಕವನ್ನು ಹೂಡಿ ಹಿಂದೂ ಮುಸಲ್ಮಾನರಲ್ಲಿ ಅನೈಕ್ಯತೆಯನ್ನು ಬೆಳೆಸಿದಂತಾಗುವದು."

ಈ ಆಕ್ಷೇಪವು ದೋಷಯುಕ್ತವಾದುದು. ಒಂದು ಮನೆಯಲ್ಲಿ ಅಣ್ಣತಮ್ಮಂದಿರು ಒಬ್ಬರಿಗೊಬ್ಬರು ಹೊಡೆದಾಡುವದನ್ನು ಬಿಟ್ಟು ಪ್ರೇಮದಿಂದಲೂ ಐಕ್ಯದಿಂದಲೂ ಇರಲಿಕ್ಕೆ ಪ್ರಯತ್ನಿಸಿದರೆ ನೆರಮನೆಯ ಜೀರೊಬ್ಬ ಗೃಹಸ್ಥನು ಅದನ್ನು ನೋಡಿ ಸಟ್ಟುಗೇಳುವದು ಹುಚ್ಚುತನವು. ನೆರೆಯವನು ಸಭ್ಯನಾಗಿದ್ದರೆ ಅವರ ಒಕ್ಕಟ್ಟಿನಿಂದ ಅವನಿಗೇನೂ ಬಾಧಕವಿಲ್ಲ. ಒಂದು ವೇಳೆ ಅತನು ಆ ಅಣ್ಣತಮ್ಮಂದಿರ ಅನೈಕ್ಯತೆಯ ದುರುಪಯೋಗವನ್ನು ಹೊಂದಿ ತನ್ನ ಸ್ವಾರ್ಥವನ್ನು ಸಾಧಿಸುತ್ತಿದ್ದರೆ ಅತನ ದುಷ್ಟತನವನ್ನು ತಗ್ಗಿಸಲಿಕ್ಕೆ ಆ ಅಣ್ಣತಮ್ಮಂದಿರು ಒಕ್ಕಟ್ಟಿನಿಂದಿರುವದು ಬಹು ಲೇಸು. ಅದೇ ಮೇರೆಗೆ ಮುಸಲ್ಮಾನರು ಹಿಂದುಗಳಲ್ಲಿ ಪರಸ್ಪರ ಐಕ್ಯತೆಯುಂಟಾಗುವದನ್ನು ನೋಡಿ ಸಂತೋಷಪಡುವದು ಸಭ್ಯತನದ ಲಕ್ಷಣವು. ಆದರೆ ಹಿಂದುಗಳ ಅನೈಕ್ಯತೆಯ ದುರುಪಯೋಗ ಮಾಡಿಕೊಂಡು ಅವರು ಹಿಂದುಗಳ ಮೇಲೆ ಬಲಾತ್ಕಾರ, ಅತ್ಯಾಚಾರ, ಅನಾಚಾರ ಮುಂತಾದ ಹೇಯ ಕೆಲಸಗಳನ್ನು ಮಾಡುತ್ತಿದ್ದರೆ ಅವುಗಳನ್ನು ಹಿಂದುಗಳೆಲ್ಲರೂ ಒಕ್ಕಟ್ಟಿನಿಂದಲೂ ಧೈರ್ಯದಿಂದಲೂ ನಿವಾರಿಸುವದು ಆದ್ಯ ಕರ್ತವ್ಯವಾಗಿದೆ. ಒಮ್ಮೆ ಕೌರವ ಪಾಂಡವರಲ್ಲಿ ಜಗಳ ನಡೆದ ಕಾಲಕ್ಕೆ ಧರ್ಮರಾಯನು ಹೀಗೆ ಹೇಳಿದ್ದಾನೆ. "ಮನೆಯ ಜಗಳಕ್ಕೆ ನಾವೈವರು ಒತ್ತಟ್ಟಿಗೆ ಕೌರವರು ನೂರುಮಂದಿ ಒತ್ತಟ್ಟಿಗೆ, ಹೊರಗಿನ ಜಗಳಕ್ಕೆ ನಾವು ನೂರಾಐದು ಮಂದಿ ಒತ್ತಟ್ಟಿಗೆ" ಈ ಮಾತು ಹಿಂದೂ ಮುಸಲ್ಮಾನರಿಗೂ ಸಮನ್ವಯಿಸುವದು.

ಮುಸಲ್ಮಾನರಿಂದ ಹಿಂದುಗಳಿಗೇನಾದರೂ ಅಂಥ ಅನಾಹುತ ಪ್ರಸಂಗಗಳು ಸಂಭವಿಸಿದರೆ ಹಿಂದುಗಳೆಲ್ಲರೂ ಕೂಡಿ ತಮ್ಮ ಧರ್ಮ ಪಾವಿತ್ರತೆ ಗೌರವ ಅಧಿಕಾರಗಳನ್ನು ಕಾಪಾಡಿಕೊಳ್ಳಲು ಮುಸಲ್ಮಾನರ ವಿರುದ್ಧ ನಿಲ್ಲಬೇಕಾಗುವದು. ಅದರಂತೆಯೇ ಹಿಂದುಗಳಿಂದ ಮುಸಲ್ಮಾನರಿಗೇನಾದರೂ ಕೆಡಕು ಸಂಭವಿಸಿದರೆ ಅವರಾದರೂ ಹಿಂದುಗಳನ್ನೆದುರಿಸುವದು ಧರ್ಮವೇ ಆಗಿದೆ. ಅದೇ ಮೇರೆಗೆ ಹಿಂದೂ ಮುಸಲ್ಮಾನರಿಬ್ಬರೂ ಅನ್ಯರಿಂದ ತೊಂದರೆಗಳುಂಟಾಗುತ್ತಿದ್ದರೆ ಉಭಯತರೂ ಬಂಧುಗಳಾಗಿ ಆ ತೊಂದರೆಗಳನ್ನು ನೀಗಿಕೊಳ್ಳಲೇಬೇಕಾಗುತ್ತದೆ. ಈ ದೃಷ್ಟಿಯಿಂದವಿಚಾರಿಸಲು ಹಿಂದೂ ಸಂಘಟನೆಯಿಂದ ಹಿಂದೂ ಮುಸಲ್ಮಾನರಲ್ಲಿ ಅನೈಕ್ಯತೆಯುಂಟಾಗಲು ಅಸ್ಪದವೇ ಇಲ್ಲ. ಹಿಂದುಗಳಲ್ಲಿ ಸಹ ಒಂದು ಮತತೆಯುಂಟಾಗಲು ಅಸ್ಪದವೇ ಇಲ್ಲ.

ದವರು ಇನ್ನೊಂದು ಮತಕ್ಕೆ ನಿಂದ್ಯವನ್ನಾಡಿದರೆ ಅದನ್ನು ನಿಷೇಧಿಸುವದೂ ಧರ್ಮನೇ ಆಗಿದೆ.

ಎರಡನೆಯ ಆಕ್ಷೇಪವೆಂದರೆ:— "ಹಿಂದೂ ಸಂಘಟನೆಯು ಉದ್ದೇಶವು ಹಿಂದುಗಳಲ್ಲಿ ಬಹುಕಾಲದಿಂದ ರೂಢವಾಗಿರುವ ಸಾಂಪ್ರದಾಯಗಳನ್ನೆಲ್ಲ ಕಿತ್ತಿ ಹಾಕಿ ಹೊಲೆ ಹದಿನೆಂಟು ಜಾತಿಗಳನ್ನೆಲ್ಲ ಒಂದು ಮಾಡಿ ಅವುಗಳನ್ನು ಒಂದೇ ಸಾಮಾನ್ಯ ಧರ್ಮಕ್ಕೆ ಅಧೀನ ಮಾಡಿ ಪರಸ್ಪರರಲ್ಲಿ ಊಟ ಉಡಿಗೆ ಹೆಣ್ಣು ಗಂಡು ಪೂಜೆ ಪುನಸ್ಕಾರ ಮುಂತಾದವುಗಳು ನಡೆಯುವಂತೆ ಮಾಡುವದಿರುತ್ತದೆ." ಈ ಆಕ್ಷೇಪವಾದರೂ ತಪ್ಪಾದುದೆಂದೇ ಹೇಳಬೇಕಾಗುತ್ತದೆ. ಯಾಕಂದರೆ ಸಂಘಟನೆ ಮಾಡುವವರು ಸಾಧ್ಯವಲ್ಲದ ಕೆಲಸಗಳನ್ನುಂಟುಮಾಡಬೇಕೆಂಬ ಇಚ್ಛೆಯುಳ್ಳವರಾಗಿಲ್ಲ.

ಹಿಂದೂ ಮತ ಪಂಥಗಳಲ್ಲಿ ನೆಲಿಸಿದ ಸಾಂಪ್ರದಾಯಗಳೆಲ್ಲವೂ ಸಾಧುವಾದವುಗಳೆಂದು ಹೇಳಲಿಕ್ಕಾಗುವದಿಲ್ಲ. ಅವುಗಳಲ್ಲಿ ಎಷ್ಟೋ ಸಾಂಪ್ರದಾಯಗಳು ಸಾರ್ವಜನಿಕ ಹಾಗೂ ರಾಷ್ಟ್ರಹಿತದ ದೃಷ್ಟಿಯಿಂದ ಕೆಡಬೆಕಾಗಿರುತ್ತವೆ ಅಂಥವುಗಳನ್ನು ಕಿತ್ತೊಗೆದರೆ ತಪ್ಪೇನು? ಆ ದುಷ್ಟ ಸಾಂಪ್ರದಾಯಗಳು ಇದ್ದಕ್ಕಿದ್ದ ಹಾಗೆಯೇ ಇರಬೇಕೆಂದು ನಾವೇಕೆ ಆಗ್ರಹತೊಡಬೇಕು? ಉದಾಹರಣಾರ್ಥವಾಗಿ ನಾವು ಅಸ್ಪೃಶ್ಯರ ಕೂಡ ಕೂಡಿ ಅನ್ನಪಾನ ಶರೀರಸಂಬಂಧ ಪೂಜಾನಮಸ್ಕಾರಾದಿಗಳನ್ನು ಮಾಡುವದು ಒಂದು ವೇಳೆ ಬೇಡ. ಆದರೆ ಅಸ್ಪೃಶ್ಯರನ್ನು ಮುಟ್ಟಬಾರದೇಕೆ? ಉಳಿದ ಹಿಂದುಗಳು ಪರಸ್ಪರ ವ್ಯವಹರಿಸುವಂತೆ ಅವರೊಡನೇಕೆ ವ್ಯವಹರಿಸಬಾರದು? ಅವರನ್ನು ಮುಟ್ಟಬಾರದೆಂಬದಕ್ಕೆ ಕೆಲವರು ಸುಲಭವಾದ ಕಾರಣಗಳನ್ನು ಹೇಳಬಹುದು. ಕೆಲವರು ಮುಟ್ಟಬೇಕೆಂಬುವದಕ್ಕೆ ಅಷ್ಟೇ ಸಬಲ ಕಾರಣಗಳನ್ನು ಹೇಳಬಹುದು. ಅಂದರೆ ಹಿಂದೂ ಜನಾಂಗದ ಹಿತದ ದೃಷ್ಟಿಯಿಂದ ಮತ್ತು ಅದು ಇಡೀ ರಾಷ್ಟ್ರದ ಪ್ರಶ್ನೆಯಾಗಿರುವದರಿಂದ ನಮ್ಮ ಇತರ ಬಂಧುಗಳಂತೆ ಅವರೊಡನೆ ವ್ಯವಹರಿಸಿ ನಮ್ಮ ಅತ್ಯಲ್ಪವಾದ ಔದಾರ್ಯವನ್ನೇಕೆ ತೋರಿಸಬಾರದು? ಅದೇನೂ ಅಸಾಧ್ಯವಾದ ಮಾತಲ್ಲ.

ಇದರಂತೆಯೇ ಕ್ಷುಲ್ಲಕವಾದ ಇನ್ನೂ ಅನೇಕ ಸಾಂಪ್ರದಾಯಗಳನ್ನು ಸಾಮಾನ್ಯಹಿತದ ದೃಷ್ಟಿಯಿಂದ ದೂರೀಕರಿಸಿ ಪರಸ್ಪರರು ಕೂಡಿಕೊಂಡು ವ್ಯವಹರಿಸಲು ಸಾಧ್ಯವದೆ. ಅಸಾಧ್ಯ ಕೆಲಸಕ್ಕೆ ಕೈಹಾಕಿ ಅರಾಜಕತೆ

ಯನ್ನೆಬ್ಬಿಸಬಾರದೇನೋ ನಿಜ. ಆದರೆ ಸಾಧ್ಯವಾದುದನ್ನು ಮಾಡಲೇಬೇಕು. ಆದುದರಿಂದ ಹಿಂದುಗಳೆಲ್ಲರೂ ತಮ್ಮ ಮತಪಂಥಗಳನ್ನು ಬಿಟ್ಟು ಒಂದೇ ಧರ್ಮಕ್ಕೆ ಸೇರಬೇಕಾಗುತ್ತದೆಂದು ಯಾರೂ ತಿಳಿದು ಭಯಪಡಬಾರದು. ಒಂದೇ ಧರ್ಮವನ್ನು ಮಾಡುವದು ಸದ್ಯಕ್ಕೆ ಸಾಧ್ಯವಿಲ್ಲ. ಹಿಂದೂ ಸಂಘಟನೆಯ ಧ್ಯೇಯವು ಸಾಧ್ಯವಾದ ದುಷ್ಟಸಾಂಪ್ರದಾಯಗಳನ್ನು ನೀಗಿ ಎಲ್ಲ ಮತಪಂಥಗಳಲ್ಲಿರುವ ಶಿಷ್ಟವಾದ ಸಾಂಪ್ರದಾಯಗಳನ್ನೇಕೀಕರಿಸಿ ಅವುಗಳನ್ನು ಹಿಂದುಗಳೆಲ್ಲರೂ ಅನುಸರಿಸುವಂತೆ ಮಾಡುವದಾಗಿರುತ್ತದೆ.

ಮೂರನೆಯ ಆಕ್ಷೇಪವೆಂದರೆ— "ಹಿಂದೂ ಸಂಘಟನೆಯ ಧ್ಯೇಯವು ಹಿಂದುಗಳು ತಮ್ಮೊಳಗೆ ಬಹುಮತವನ್ನು ಮಾಡಿಸುವದೇ ಇದೆ. ರಾಜಕೀಯ ವಿಷಯಗಳ ಬಗ್ಗೆ ಅಲ್ಪ ಸಂಖ್ಯಾಕ ಸಮಾಜಗಳ ಹಿತಕ್ಕೆ ಪೆಟ್ಟನ್ನು ತಗಲಿಸಿದಂತಾಗುವದು. ಈ ಆಕ್ಷೇಪವಾದರೂ ತಪ್ಪಾದುದೇ. ಯಾಕಂದರೆ ಅಲ್ಪ ಸಂಖ್ಯಾಕರ ಹಿತಚಿಂತನೆಯನ್ನು ಮೊದಲು ಮಾಡಿ ನಂತರ ಬಹು ಸಂಖ್ಯಾಕ ಸಮಾಜದ ಹಿತಾಹಿತಗಳ ಬಗ್ಗೆ ಯೋಚಿಸುವದು ನವ್ಯ ಕರ್ತವ್ಯವು.

ಒಂದು ದೊಡ್ಡ ಮನೆತನದಲ್ಲಿ ರೊಟ್ಟಿ ಚಟ್ಣಿಯೇ ಸಿಗಲಿ ಅಣ್ಣ ತಮ್ಮಂದಿರು ಕೂಡಿಕೊಂಡಿದ್ದರೆ ಆ ಮನೆತನಕ್ಕೆ ಗೌರವವೂ ವರ್ಚಸ್ಸೂ ಬರುವದು. ಆ ಮನೆಯವರಿಗೆ ಜನರು ಅಂಜಿ ನಡೆಯುವರು. ಆದರೆ ಸ್ವಾರ್ಥಕ್ಕಾಗಿ ಹೊಡೆದಾಡಿ ಅವರು ಬೇರೆಯಾದರೆ ಅವರ ಗೌರವವೇ ನಾಶವಾಗಿ ಅವರನ್ನು ಯಾರೂ ಲಕ್ಷಿಸುವದಿಲ್ಲ. ಆದುದರಿಂದ ಸ್ವಾರ್ಥನಾಶನೆಗಿಂತ ಕೂಡಿಕೊಂಡಿರುವುದೇ ಮೇಲು. ಕೂಡಿಕೊಂಡು ಅಲ್ಪಸಂಖ್ಯಾಕ ಸಮಾಜದವರಿಗೆ ಔದಾರ್ಯ ತೋರಿಸುವದು ಹಿಂದೂ ಸಂಘಟನೆಗೆ ಭೂಷಣವೇ ಸರಿ. ಆದುದರಿಂದ ಹಿಂದೂ ಸಂಘಟನೆಯ ಧ್ಯೇಯವು ಸ್ವಾರ್ಥಸಾಧನೆಗಾಗಿ ಇರಲಾರದು. ಎಲ್ಲ ಮತಪಂಥಗಳು ಪ್ರೇಮದಿಂದ ಕೂಡಿಕೊಂಡಿರುವದಕ್ಕಾಗಿ ಇರುತ್ತದೆ.

ನಾಲ್ಕನೆಯ ಆಕ್ಷೇಪವೆಂದರೆ— ಹಿಂದೂ ಸಂಘಟನೆಯವರು ಮತಾಂತರ ಹೊಂದಿದ ಜನರನ್ನು ಶುದ್ಧೀ ಸಂಸ್ಕಾರದಿಂದ ತಿರುಗಿ ತಮ್ಮ ಧರ್ಮದಲ್ಲಿ ಸೇರಿಸಿಕೊಳ್ಳಬೇಕೆಂಬ ಘೋರಣವುಳ್ಳವರಾಗಿದ್ದಾರೆ. ಇದರಿಂದ

ಕ್ರಿಸ್ತೀ ಮುಸಲ್ಮಾನ ಮತಗಳಿಗೆ ಮನಸ್ಸಾಪನಾಗದಿರದು. ಈ ಆಕ್ಷೇಪವು ಯುಕ್ತವಾದುದೆಂದು ಹೇಳಲಾಗುವದಿಲ್ಲ. ಯಾಕಂದರೆ ಮನುಷ್ಯನಿಗೆ ತನಗೆ ಯುಕ್ತ ಕಂಡ ಬೇಕಾದ ಧರ್ಮದಲ್ಲಿ ಸೇರಲು ಸ್ವಾತಂತ್ರ್ಯವಿರುವದಷ್ಟೇ. ಅದರೆ ಆ ವ್ಯಕ್ತಿಯನ್ನು ಬಲಾತ್ಕಾರದಿಂದಾಗಲೀ, ಆಶೆ ಹಚ್ಚಿಯಾಗಲೀ, ಅವನಿಗೇನಾದರೂ ಅಪತ್ತನ್ನುಂಟುಮಾಡಿಯಾಗಲಿ ಮತಾಂತರ ಮಾಡಿಸುವದು ಪಾಪವು. ಅದರೆ ಯೋಗ್ಯವಾದ ಮತತತ್ವಗಳ ಪ್ರಸಾರ ಮಾಡಿ ಜನರು ತಾವಾಗಿಯೇ ಆ ಮತವನ್ನಂಗೀಕರಿಸುತ್ತೇವೆಂದು ಬಂದರೆ ಅವರನ್ನು ವಿಚಾರಮಾಡಿ ಸೇರಿಸಿಕೊಳ್ಳುವದು ಧರ್ಮವಾಗಿದೆ.

ಆ ಪ್ರಕಾರ ಹಿಂದುಗಳಲ್ಲಿ ಅನೇಕರು ತಮ್ಮ ತಮ್ಮೊಳಗೆ ಮತಾಂತರ ಹೊಂದಿರುವರು. ಎಷ್ಟೋ ಜನ ಜೈನರು, ಬ್ರಾಹ್ಮಣರು, ಹಾಲು ಮತದವರು ಹಿಂದಕ್ಕೆ ವೀರಶೈವರಾಗಿದ್ದಾರೆ. ಜೈನರು ಬ್ರಾಹ್ಮಣರಾಗಿರುವರು. ಬ್ರಾಹ್ಮಣರು ಜೈನ ಮತದಲ್ಲಿ ಸೇರಿರುವರು. ಹೀಗಿರುವಾಗ ಮತಾಂತರ ಹೊಂದಿದ ನಮ್ಮ ಬಂಧುಗಳು ತಿರುಗಿ ನಮ್ಮ ಧರ್ಮದಲ್ಲಿ ಬಂದರೆ ಉಳಿದ ಧರ್ಮದವರಿಗೆ ಮನಸ್ಸಾಪವಾಗುವ ಕಾರಣವಿಲ್ಲ. ಒತ್ತಾಯದಿಂದ ಮತಾಂತರ ಮಾಡದಿದ್ದರೆ ತೀರಿತು.

ಸದಿಚ್ಛೆಯಿಂದ ಹಿಂದುಗಳು ಮತಾಂತರ ಹೊಂದಿದರೆ ಸೈರಿಸುವದು ಧರ್ಮವು. ಅದರೆ ಅಜ್ಞಾನ, ದುರಾಶೆ ಬಲಾತ್ಕಾರಗಳ ಮೂಲಕ ಮತಾಂತರ ಹೊಂದಿದ್ದರೆ ಅಂಥವರನ್ನು ತಿರುಗಿ ಸಾಧುಮಾರ್ಗದಿಂದ ಹಿಂದೂ ಧರ್ಮದಲ್ಲಿ ಸೇರಿಸುವದೇನೂ ಅಪರಾಧವಲ್ಲ. ಹಿಂದೂ ಧರ್ಮದೊಳಗಿನ ಅಯಾಯ ಮತಗಳು ತಮ್ಮ ಉಚ್ಚ ತತ್ವಗಳ ಬಲದಿಂದ ಮತಭ್ರಷ್ಟರನ್ನೂ ಅನ್ಯಮತೀಯರನ್ನೂ ಶುದ್ಧೀಕರಣ ಮಾಡಿ ತಮ್ಮ ಮತದಲ್ಲಿ ಸೇರಿಸಿಕೊಳ್ಳಲು ಯಾವ ಪ್ರತ್ಯವಾಯವೂ ಇಲ್ಲ. ಒಂದು ವೇಳೆ ಶುದ್ಧೀಕರಣವನ್ನು ಬಿಟ್ಟರೆ ಮಹಾ ಅಪರಾಧವಾಗುತ್ತದೆ. ಯಾಕಂದರೆ ಹಿಂದಕ್ಕೆ ೬೦ ಕೋಟಿ ಇದ್ದ ಹಿಂದುಗಳ ಸಂಖ್ಯೆಯು ಈಗ ೨೨ ಕೋಟಿಗೆ ಬಂದಿದೆ. ಇನ್ನು ಮುಂದೆ ಹತ್ತೆಂಟು ಕೋಟಿಗೆಲ್ಲಿ ಬರುವದೋ ಸಂಶಯವಿದೆ. ಅದುದರಿಂದ ಅನ್ಯಮತೀಯರನ್ನು ಹಿಂದುಮತದಲ್ಲಿ ಸೇರಿಸುವದೊತ್ತಟ್ಟಿಗಿರಲಿ, ನಮ್ಮ ಮತಬಾಂಧವರು ನಮ್ಮ ಕೈಬಿಟ್ಟು ಹೋಗದಂತೆ ನೋಡಿಕೊಳ್ಳುವದು ಪ್ರತಿಯೊಬ್ಬ ಹಿಂದೂ ಮತಸ್ಥನ ಪ್ರಾಮುಖ್ಯವಾದ ಕರ್ತವ್ಯವಾಗಿದೆ.

(೩) ಹಿಂದೂ ಸಂಘಟನೆಯಲ್ಲಿ ವೀರಶೈವರ ಸ್ಥಾನವು.

ವೀರಶೈವ ಮತವು ಹಿಂದೂ ಧರ್ಮದ ಒಂದು ಅಂಗವಾಗಿರುವದಷ್ಟೇ. ಹಿಂದೂ ಸಂಘಟನೆಯು ಉದ್ದೇಶವು ಅಯಾಯ ಮತಗಳಲ್ಲಿರುವ ಉದಾತ್ತ ಹಾಗೂ ಉದಾರವಾದ ತತ್ವಗಳನ್ನು ಒತ್ತಟ್ಟಿಗೆ ಸೇರಿಸಿ ಹಿಂದುಗಳೆಲ್ಲರೂ ಅವುಗಳನ್ನನುಸರಿಸಬೇಕೆಂದಿದ್ದರೆ ಕರ್ನಾಟಕದಲ್ಲಿ ನಮ್ಮ ವೀರಶೈವ ಮತವು ಹಿಂದೂ ಸಂಘಟನೆಗೆ ತನ್ನ ಪಾಲಿನ ಬಹು ಭಾಗವನ್ನು ಸಲ್ಲಿಸಲು ಸಿದ್ಧವಾಗಿಯೇ ಇದೆ. ಸ್ವಲ್ಪ ಸೂಕ್ಷ್ಮ ರೀತಿಯಿಂದ ವಿಚಾರಿಸಿದರೆ ವೀರಶೈವ ಮತವು ಸಂಘಟನೆಗೆ ಒಳ್ಳೆ ಅನುಕೂಲವಾದ ಹಾಗೂ ಪೋಷಕವಾದ ಅಂಗವಾಗಿರುವದೆಂದು ನಿರ್ವಿವಾದವಾಗಿ ಹೇಳಬಹುದು. ವೀರಶೈವ ಸಂಸ್ಕೃತಿ ಸುಧಾರಣೆಗಳೆಲ್ಲ ಲಿಂಗ ಈ ವಿಷಯವಾಗಿ ಇರುವ ದಿವ್ಯ ತತ್ವಗಳ ಮೇಲೆ ಅವಲಂಬಿಸಿವೆ. ಭಕ್ತಿಮಾರ್ಗದಿಂದ ಜನಸಾಮಾನ್ಯರಲ್ಲಿ ಐಕ್ಯತೆಯನ್ನು ಬೆಳಸಲಿಕ್ಕೆ ಈ ವೀರಶೈವ ಪದ್ಧತಿಯು ಒಳ್ಳೆ ಚಕಾರೋಪಾಯವಾಗಿದೆ. ಇದರಿಂದ ಸಮಾಜದಲ್ಲಿ ಎಂಥ ಬಂಧುರವಾದ ಸುವ್ಯವಸ್ಥೆಯು ನಡೆದಿರುವದೆಂಬದನ್ನು ಇಲ್ಲಿ ಅಲೋಚಿಸೋಣ.

"ಲಿಂಗಧಾರಕರೆಲ್ಲರೂ ಸರಿಸಮಾನರು. ಅವರಲ್ಲಿ ಜಾತಿಭೇದವನ್ನೆಣಿಸಕೂಡದು" ಎಂದು ವೀರಶೈವ ತತ್ವವಿರುವದು. ಜಾತಿಭೇದವನ್ನು ಹೊಡೆದು ಹಾಕಿ ಎಲ್ಲರನ್ನು ಒಂದು ಗೂಡಿಸಲು ಇದು ಒಳ್ಳೇ ಸುಗಮವಾದ ಹಾಗೂ ಉತ್ತಮವಾದ ಉಪಾಯವಾಗಿರುವದು. ಲಿಂಗಧಾರೀ ಸ್ತ್ರೀ ಪುರುಷರು ಆತ್ಮೋದ್ಧಾರ ಮಾಡಿಕೊಳ್ಳಲು ಸಮಾನಾಧಿಕಾರಿಗಳಾಗಿರುವದರಿಂದ ಪುರುಷ ಹೆಚ್ಚು ಸ್ತ್ರೀ ಕಡಿಮೆ ಎಂಬ ಸಂಕುಚಿತ ವಿಚಾರಕ್ಕೆ ಅಸ್ಪದವೇ ಇಲ್ಲ. ನಮ್ಮವರು ಭಕ್ತಿ ಎಂಬ ಉಚ್ಚ ತತ್ವವನ್ನು ಎಲ್ಲ ಜಾತಿಗಳ ಸಾಮಾನ್ಯ ಧರ್ಮವನ್ನಾಗಿ ಮಾಡಿದರು. ಆ ಭಕ್ತಿಯ ಕುರುಹೇ ಲಿಂಗವು. ಬಹು ಸಂಖ್ಯಾಕರಾದ ಸಾಮಾನ್ಯ ಜನರಲ್ಲಿ ಕರ್ಮ ಜ್ಞಾನಗಳಿಗಿಂತಲೂ ಭಕ್ತಿ ಭಾವನೆಯೇ ಅಧಿಕವಾಗಿರುತ್ತದೆ. ಆ ಭಕ್ತಿಗೆ ಒಂದು ಮೂರ್ತ ಸ್ವರೂಪವನ್ನು ತಂದು ಕೊಟ್ಟರೆ ಸಾಮಾನ್ಯರು ಹೆಚ್ಚು ಆನಂದವನ್ನು ಪಡೆಯುವರು.

ಈ ಭಕ್ತಿ ಪಂಥದಿಂದ ನಮ್ಮವರು ವರ್ಣಾಶ್ರಮ ಧರ್ಮಗಳನ್ನು ಹೊಡೆದೋಡಿಸಿದರು. "ವಿಪ್ರ ನೊದಲು ಅಂತ್ಯಜ ಕಡೆಯಾಗಿ ಶಿವಭಕ್ತ ಕೊಡೆದೋಡಿಸಿದರು.

ರಾವವರನ್ನೆಲ್ಲ ಒಂದೇ ಎಂಬೆ. ಹಾರುವ ಮೊದಲು ತ್ವಪಜ ಕಡೆಯಾಗಿ ಭವಿಗಳಾದವರನ್ನೆಲ್ಲ ಒಂದೇ ಎಂಬೆ ಕೂಡಲ ಸಂಗಮದೇವಾ" ಎಂದು ಬಸವಣ್ಣನವರು ಹೇಳಿರುವದನ್ನು ನೋಡಿದರೆ ವೀರಶೈವರಲ್ಲಿ ಶಿವಕುಲ ಅರ್ಥಾತ್ ಸಜ್ಜನರ ಸಮೂಹ, ಭವಿಕುಲ ಅರ್ಥಾತ್ ದುರ್ಜನರ ಸಮೂಹ ಎಂಬಿರಡೇ ಭಾಗಗಳಿರುವವೆಂದು ತಿಳಿಯುವದು. ಲಿಂಗಧಾರಿಗಳೆಲ್ಲ ಸಜ್ಜನರಾಗಿರತಕ್ಕದ್ದು. ಸಜ್ಜನರಾದ ಎಷ್ಟೋ ಅನ್ಯಮತೀಯರು ಹಿಂದಕ್ಕೆ ಲಿಂಗಾಯತರಾದರು. ಅಂಥವರಲ್ಲಿ ಪರಸ್ಪರ ಶರೀರ ಸಂಬಂಧಗಳಾಗದಿದ್ದರೂ ಊಟೋಪಚಾರಗಳೂ ಸಮಾಜ ಕಾರ್ಯಗಳೂ ಸಂಘಟಿತವಾಗಿ ಈಗಲೂ ನಡೆದಿರುತ್ತವೆ.

ಸಮುದಾಯಕ್ಕೆ ಸಂಬಂಧಿಸಿದ ಗುಡಿಗುಂಡಾರಗಳಿಗಿಂತಲೂ ವ್ಯಕ್ತಿಗತವಾದ ಇಷ್ಟಲಿಂಗವು ಭಕ್ತಿಯ ದೃಷ್ಟಿಯಿಂದ ಹೆಚ್ಚು ಅನುಕೂಲವು. ಗುಡಿಗಳಲ್ಲಿರುವ ದೇವರುಗಳ ದರ್ಶನ ಲಾಭವು ಅನೇಕರಿಗೆ ದುರ್ಲಭ. ನಮ್ಮ ದೇಹದ ಮೇಲಿನ ಲಿಂಗ ದರ್ಶನವು ನಮಗೆ ಬೇಕಾದ ಹಾಗೆ ಸುಲಭ. ಗುಡಿಯ ದೇವರ ಪೂಜೆ ಮಾಡುವದು ಮತ್ತಿಷ್ಟು ದುರ್ಲಭ. ಬೇರೆ ಬೇರೆ ಗುಡಿಗಳಲ್ಲಿ ಬೇರೆ ಬೇರೆ ದೇವರುಗಳಿರುವದರಿಂದ ಭಕ್ತಿಯು ಹರಿದು ಹಂಚಿ ಹೋಗುವದು. ಇಷ್ಟ ಲಿಂಗವು ಒಂದೇ ಇರುವದರಿಂದ ಭಕ್ತಿಯು ಏಕಾಗ್ರವಾಗುವದು. ಪರಸ್ಥಳಕ್ಕೆ ಹೋದರೆ ನಮ್ಮ ದೇವರಗುಡಿಯ ದರ್ಶನವು ತಪ್ಪಬಹುದು. ಆದರೆ ಇಷ್ಟ ಲಿಂಗವು ನಾವು ಹೋದಲ್ಲೆಲ್ಲ ನಮ್ಮ ಮೈಮೇಲೆಯೇ ಇರುವದು. ಗುಡಿಗಳಲ್ಲಿ ಪೂಜೆ ಮಾಡಬೇಕಾದರೆ ಪೂಜಾರಿಗಳ ಕಾಟ ಮತ್ತು ಅನೇಕ ನಿರ್ಬಂಧಗಳು. ನಮ್ಮ ಲಿಂಗ ಪೂಜೆಗೆ ಯಾವ ನಿರ್ಬಂಧವೂ ಇಲ್ಲ. ಆದುದರಿಂದ ಲಿಂಗವೇ ಸರ್ವರಿಗೆ ಭಕ್ತಿಯನ್ನು ಬೆಳೆಯಿಸಲು ಒಳ್ಳೇ ಅನುಕೂಲ. ಆಮೂಲಕ ಸಂಘಟನೆಯನ್ನು ಮಾಡಲು ಹೆಚ್ಚು ನೆಟ್ಟಗೆ.

'ದೇಹವೇ ದೇಗಲು ಪ್ರಾಣವೇ ಲಿಂಗ' ಎಂದು ನಮ್ಮ ಆದ್ಯರು ಹೇಳಿರುವರು. ಆದುದರಿಂದ ಲಿಂಗವೆಂದರೆ ಇಂತಹ ಹೆಸರಿನ ದೇವರೇ ಎಂದು ಯಾರೂ ತಿಳಿಯಕೂಡದು. ಅದು ಪರವಸ್ತುವಿನ ಚಿಹ್ನವಾಗಿದೆ. ಅದಕ್ಕೆ ಇಷ್ಟಲಿಂಗವೆಂಬ ಹೆಸರು. ಅಂದರೆ ಜನರು ತಮಗೆ ಇಷ್ಟವಾದ ದೇವರನ್ನು ಅದರ ಮೇಲೆ ಆರೋಪಿಸಿ ಪೂಜಿಸಲು ಬೇಕಾದಷ್ಟು ಅವಕಾಶವಿದೆ. ಲಿಂಗವೆಂಬುದು ಲಿಂಗಾಯತರಿಗಷ್ಟೇ ಸಂಬಂಧಪಟ್ಟ

ದಲ್ಲ. ಅದು ಬಹು ವ್ಯಾಪಕವಾದುದು. ಆಸ್ತಿಕ ಬುದ್ಧಿಯುಳ್ಳವರಿಗೆಲ್ಲ ಲಿಂಗವು ಬೇಕೇಬೇಕು.

ವೈಷ್ಣವರು ಲಿಂಗವನ್ನು ವಿಷ್ಣುವೆಂದೂ ಶಾಕ್ತರು ಶಕ್ತಿ ಎಂದೂ, ಶೈವರು ಶಿವನೆಂದೂ, ಬೌದ್ಧರು ಬುದ್ಧನೆಂದೂ, ಜೈನರು ಜಿನನೆಂದೂ, ನಾಸ್ತಿಕರು ಪಂಚಭೂತವೆಂದೂ ಆರಾಧಿಸಿ ಆನಂದಪಡಬಹುದು. ತಮ್ಮ ತಮ್ಮ ಧರ್ಮ ಗುರುಗಳೇ ದೀಕ್ಷಾದಿ ವಿಧಾನಗಳಿಂದ ಲಿಂಗಮೂರ್ತಿಯಲ್ಲಿ ಪ್ರಾಣ ಪ್ರತಿಷ್ಠೆಯನ್ನು ಮಾಡಿ ಅದನ್ನು ತಮ್ಮ ಭಕ್ತಾದಿಗಳಿಗೆ ಧಾರಣ ಮಾಡಬಹುದು. ಈ ಲಿಂಗ ಭಕ್ತಿಯ ಸಂಸ್ಕಾರವನ್ನು ಎಲ್ಲ ಮತಪಂಥದವರು ಸರ್ವ ಸಾಮಾನ್ಯ ಧರ್ಮವನ್ನಾಗಿಟ್ಟುಕೊಂಡು ವ್ಯವಹರಿಸಿದರೆ ಹಿಂದುಗಳಲ್ಲಿ ಒಳ್ಳೆ ಬಂಧುರವಾದ ಸಂಘಟನೆಯಾಗುವದೆಂಬದರಲ್ಲಿ ಸಂದೇಹವಿಲ್ಲ.

ಲಿಂಗಧಾರಣೆಯು ಭಕ್ತಿ ಪಂಥವನ್ನೊಳಕೊಂಡಿರುವುದರಿಂದ ಅದರ ತಳಹದಿಯ ಮೇಲೆ ಸಂಘಟನೆಯನ್ನು ಕಟ್ಟುವದರ ಸಾಮಾನವಾದ ಉಪಾಯವು ಬೇರೊಂದಿಲ್ಲ. ಹಿಂದುಸ್ಥಾನವು ಧರ್ಮಭೂಮಿಯಾಗಿರುವದರಿಂದ ಪಾರಮಾರ್ಥಿಕ ದೃಷ್ಟಿಯಿಂದುಂಟಾದ ಸಂಘಟನೆಯು ಬಂಧುರವಾದಷ್ಟು ಬೇರಾವ ಐಹಿಕ ಉಪಾಯಗಳಿಂದಲೂ ಆಗಲಾರದು.

ನಾವು ಸೂಕ್ಷ್ಮವಾಗಿ ವಿಚಾರಿಸಿದರೆ ರಾಜಕಾರಣವು ಸರ್ವಸಾಧಾರಣ ಧರ್ಮವಾಗಲಾರದು. ಬೇರಾಗುವ ಲೌಕಿಕ ಸುಧಾರಣೆಯು ಸಂಘಟನೆಯನ್ನು ಬಂಧುರಮಾಡಲಾರದು. ಕರ್ಮಯೋಗ ಜ್ಞಾನಯೋಗಾದಿಗಳು ಗಡುಚಾದ ಮಾರ್ಗಗಳಾದುದರಿಂದ ಸಂಘಟನೆಗೆ ಅವುಗಳೇನೂ ಸಹಾಯಕಗಳಾಗಲಾರವು. ಆದರೆ ಭಕ್ತಿ ಪಂಥವು ಪಂಡಿತ ಪಾಮರರಿಗೆಲ್ಲರಿಗೂ ಅನುಕೂಲ. ಆದರೆ ನಿರಾಕಾರ ಭಕ್ತಿಯಿಂದೇನೂ ಪ್ರಯೋಜನವಿಲ್ಲ. ಸಾಮಾನ್ಯರು ಹಸುಮಕ್ಕಳಂತೆ ಸಾಕಾರವನ್ನವಲಂಬಿಸಿಕೊಂಡು ಜೀವಿಸಿ ಒಂದು ತರಹದ ಸಾವಧಾನವನ್ನು ಪಡೆಯತಕ್ಕವರು. ಆದುದರಿಂದ ಸಾಕಾರಭಕ್ತಿಯ ಮುಖಾಂತರ ಸಂಘಟನೆಯನ್ನು ಪ್ರಚಾರಗೊಳಿಸುವದು ಎಲ್ಲರಿಗೂ ವಿಹಿತವಾದುದು. ಸಾಕಾರವು ಎಂತಹದೇ ಇರಲಿ, ಅದು ಎಲ್ಲರಿಗೂ ಬೇಕು. ಬೇರೆ ಬೇರೆ ಆಕಾರದ್ದಿರುವದಕ್ಕಿಂತಲೂ ಒಂದೇ ಆಕಾರದ ಮೂರ್ತಿ ಇದ್ದರೆ ಹೆಚ್ಚು ಅನುಕೂಲ.

ಸಾಕಾರ ಭಕ್ತಿಯನ್ನು ಪ್ರಚುರಗೊಳಿಸಬೇಕೆಂದರೆ, ಯಾವ ಮೂರ್ತಿಯ ಆರಾಧನೆ ಮಾಡಬೇಕೆಂಬ ವಾಗ್ವಾದ ಹುಟ್ಟಬಹುದು. ಕೆಲವರು ಶಿವ, ವಿಷ್ಣು, ಮಾರುತಿ, ಶಕ್ತಿ, ನಂದಿ, ನಾಗ ಮೊದಲಾದ ಭಿನ್ನ ಭಿನ್ನ ವಿಗ್ರಹಗಳನ್ನು ಆರಾಧಿಸಬೇಕೆಂದು ಹೇಳಬಹುದು. ಆದರೆ ಈ ದೇವರುಗಳೆಲ್ಲ ಗುಡಿಗಳಲ್ಲಿ ನಿರ್ಬಂಧನೆಗಳಿಂದ ಸಾಮುದಾಯಕವಾಗಿ ಪೂಜಿಸಲ್ಪಡಲು ತಕ್ಕವುಗಳೇ ಹೊರತು ವ್ಯಕ್ತಿಗತವಾಗಿ ಸ್ವತಂತ್ರದಿಂದ ಪೂಜಿಸಲು ಅನುಕೂಲವಾದಂಥವುಗಳಲ್ಲ. ಧರ್ಮವು ಸಾಮುದಾಯಕವಾಗಿರುವದಕ್ಕಿಂತ ವ್ಯಕ್ತಿಗತವಾಗಿರುವದು ಹೆಚ್ಚು ಲೇಸು. ವ್ಯಕ್ತಿಗಳು ಪ್ರೇರಿತರಾಗಿ ಆತ್ಮಬಲವನ್ನು ಬೆಳೆಯಿಸಿಕೊಂಡು ಸಮಾಜದ ಘಟಕಗಳಾದರೆ ಮತ್ತಿಷ್ಟು ಲೇಸು. ಇಷ್ಟಲಿಂಗ ಪೂಜೆಯು ವ್ಯಕ್ತಿಗತವಾಗಿದ್ದರೂ ವ್ಯವಹಾರಿಕ ದೃಷ್ಟಿಯಿಂದ ಸಮಾಜ ಸ್ವರೂಪವನ್ನು ಹೊಂದಿದೆ.

ಕೊರಳಲ್ಲಿ ಲಿಂಗ ಧರಿಸಿದವನು ಮಾಡುವ ಕಾಯಕಗಳೆಲ್ಲ ಪವಿತ್ರವಾದವುಗಳೆಂದೇ ನಮ್ಮವರು ತಿಳಿಯುವರು. ಲಿಂಗಧಾರಿಯಾದ ಬ್ರಾಹ್ಮಣನು ವೇದವನೋದಿದರೇನು? ಆತನು ಹೆಚ್ಚಿನವನಲ್ಲ. ಲಿಂಗಧಾರಿಯಾದ ಒಬ್ಬ ಅಂತ್ಯಜನು ಮೊಚ್ಚೆಯನ್ನು ಹೊಲಿದರೇನು? ಆತನು ಕೀಳನಲ್ಲ. ಒಂದು ಸಮಾಜವು ಸರ್ವಾಂಗ ಸುಂದರವಾಗಿ ಬಾಳಬೇಕಾದರೆ ನಾನಾ ತರಹದ ವಿದ್ಯಾ ಉದ್ಯೋಗ ಕಲಾಕೌಶಲ್ಯಗಳು ಬೇಕೇ ಬೇಕು. ಅವುಗಳಲ್ಲಿ ತಾರತಮ್ಯಗಳನ್ನೆಣಿಸಬಾರದೆಂದು ವೀರಶೈವ ತತ್ವವು ಸಾರುತ್ತದೆ. ಹಿಂದುಗಳೆಲ್ಲರೂ ಲಿಂಗಧಾರಿಗಳಾದರೆ ಪರಮಾತ್ಮನ ಶಿರದಿಂದ ಹುಟ್ಟಿದ ಬ್ರಾಹ್ಮಣರು ಶ್ರೇಷ್ಠರೆಂಬ, ಆತನ ಪಾದದಿಂದ ಜನಿಸಿದ ಶೂದ್ರರು ಕನಿಷ್ಠರೆಂಬ ಸಂಕುಚಿತ ವಿಚಾರಗಳು ಲಯವಾಗಿ ಹೋಗುವವು.

ಬಸವಾದಿ ಪ್ರಮಥರ ಕಾಲಕ್ಕೆ ಡೋಹರ ಕಕ್ಕಯ್ಯ, ಮಾದರ ಹರಳಯ್ಯ, ಮೇದಾರಕೇತಯ್ಯ, ಮಡಿವಾಳ ಮಾಚಯ್ಯ ಹಡಪದ ಅಪ್ಪಣ್ಣ, ಮೋಳಿಗೆಯ ಮಾರಯ್ಯ, ನುಲಿಯ ಚಂದಯ್ಯ ಮೊದಲಾದ ಶಿವಶರಣರು ನಾನಾ ಕಾಯಕಗಳನ್ನು ಕೈಕೊಂಡಿದ್ದರೂ ಮಹಾ ತತ್ವವೇತ್ತರಾಗಿದ್ದರು. ಒಂದೇ ಮನೆಯವರಂತೆ ಕೂಡಿಕೊಂಡಿದ್ದು ಶಿವಾನುಭವದ ಸಾರವನ್ನು ಸುರಿಯುತ್ತಿದ್ದರು. ಇದೇ ಅಲ್ಲವೇ ನಿಜವಾದ ಸಂಘಟನೆಯು? ನಮ್ಮ ಹಿಂದೂ ಸಂಘಟನೆಯಾದರೂ ಈ ಮಾದರಿಯುದಾಗಿರಬೇಕು.

ಶಿವಶರಣರಂತೆ ಈಗಿನ ಸುಶಿಕ್ಷಿತರು ನಾಚಿಕೆ ಸಣ್ಣ ಪುಟ್ಟ ಕಾಯಕಕಸಬುಗಳನ್ನು ಮಾಡಿದರೆ ಅವರ ಯೋಗ್ಯತೆಗೇನೂ ಭಂಗ ಬರಲಾರದು. ಮೇಲಾಗಿ ನಿರುದ್ಯೋಗದ ಪ್ರಶ್ನೆಯನ್ನು ಬಿಡಿಸಿದ ಪುಣ್ಯವು ಅವರ ಪಾಲಿಗೆ ಬರುವದು. ಜಾತಿಯ ಪರಂಪರಾಗತ ಉದ್ಯೋಗವೆಂಬ ಹುಚ್ಚಿಗೆ ಬೀಳದೆ ವಿಶಾಲವಾದ ಜಗತ್ತಿನಲ್ಲಿ ತನಗೆ ಇಷ್ಟ ತೋರಿದ ಬೇಕಾದದ್ದೊಂದು ಉದ್ಯೋಗವನ್ನು ಕೈಕೊಂಡು ಜೀವಿಸಬೇಕು. ಅದು ಕಡಿಮೆ ಎಂದು ತಿಳಿಯಬಾರದು. ಅದರಿಂದ ಸ್ವಲ್ಪೇ ಗಳಿಕೆಯಾಗುವದೆಂದು ಚಿಂತಿಸಬಾರದು. ಬಹಳ ಗಳಿಸುವ ಉದ್ಯೋಗವೇ ಯಾವಾಗಲೂ ಶ್ರೇಷ್ಠವೆಂದು ಹೇಳಲಿಕ್ಕಾಗದು. ತಮ್ಮ ದೈವಕ್ಕಾಗಲಿ, ಪ್ರಯತ್ನಕ್ಕಾಗಲಿ ಸಿಕ್ಕ ಉದ್ಯೋಗವೇ ಮಹಾ ಪ್ರಸಾದ. ಹೆಚ್ಚಿನ ಆಶೆಯಿಂದ ತೊಳಲುವದು ನಿರರ್ಥಕವಾದುದು. "ಅಂಗದ ಮೇಲೆ ಲಿಂಗವಿಪ್ಪತನ ಕಾಯಕವಾವುದೆಂದು ಬೆಸಗೊಂಡೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಕೂಡಲಸಂಗಮದೇವಾ ತಲೆದಂಡ ತಲೆದಂಡ" ಎಂಬುದಾಗಿ ಬಸವಣ್ಣನವರು ಲಿಂಗಧಾರಣೆಯಲ್ಲಿ ಕಾಯಕದ ಕುಂದನ್ನು ಅಡಿಗಿಸಿಬಿಟ್ಟಿರುವರು.

ಒಟ್ಟಿನ ಮೇಲೆ ವೀರಶೈವರು ಹಿಂದೂ ಸಂಘಟನೆಗೆ ಸಲ್ಲಿಸಬಹುದಾದ ಸಂದೇಶಗಳು ಪ್ರಾಮುಖ್ಯವಾಗಿ ಎರಡು ಇದ್ದಂತಾಯಿತು. (೧) ಲಿಂಗಧಾರಣ (೨) ನಾನಾ ತರಹದ ಕಾಯಕಗಳನ್ನು ಮಾಡುವದು. ಮೊದಲನೆಯದು ಪಾರಮಾರ್ಥಿಕ ದೃಷ್ಟಿಯಿಂದ ಬೇಕು. ಎರಡನೆಯದು ಲೌಕಿಕ ದೃಷ್ಟಿಯಿಂದ ಬೇಕು. ಎರಡನೆಯದು ಲೌಕಿಕವಾದರೂ ಪಾರಮಾರ್ಥದ ಸೂತ್ರವನ್ನೊಳಕೊಂಡಿದೆ. ಕರ್ನಾಟಕದ ವೀರಶೈವರು ಹಿಂದೂ ಸಂಘಟನೆಗೆ ಇವೆರಡು ಪ್ರಾಮುಖ್ಯವಾದ ಸಂದೇಶಗಳನ್ನು ಕಳಿಸಿಕೊಡುತ್ತಾರೆ. ಇವೇನೂ ಸ್ವಮತಾಭಿಮಾನದಿಂದ ಹೇಳತಕ್ಕ ಮಾತುಗಳಲ್ಲ. ಇವು ಯುಕ್ತ ಕಂಡರೆ ಸುಜ್ಞರು ಗ್ರಹಿಸಬಹುದು.

ಪ್ರಭುಲಿಂಗ ಲೀಲೆಯ ಸಂಗ್ರಹದ ವಿಮರ್ಶೆ.

(ಸಂಪಾದಕ.)

ಚಾಮರಸನ ಪ್ರಭುಲಿಂಗಲೀಲೆಯು ವೀರಶೈವ ವಾಙ್ಮಯದಲ್ಲಿ ಒಂದು ಮಹತ್ವದ ಗ್ರಂಥವಾಗಿದೆ. ಇದು ಸುಲಭವಾಗಿ ಸರಳವಾಗಿ ವೀರಶೈವ ಮತತತ್ವಗಳನ್ನು ವಿವರಿಸುವ ಗ್ರಂಥವಾದುದರಿಂದ ಇದು ಜನರ ಮೆಚ್ಚಿಗೆಗೆ ಪಾತ್ರವಾಗಿದೆ. ತಮಿಳು ತೆಲಗು ಭಾಷೆಗಳಲ್ಲಿಯೂ ಕೂಡ ಇದು ಪರಿವರ್ತನೆ ಹೊಂದಿದೆ. ಇಂಥ ಗ್ರಂಥವನ್ನು ಮೈಸೂರ ವಿಶ್ವವಿದ್ಯಾಲಯದವರು ಸುಂದರವಾಗಿ ಅಚ್ಚು ಹಾಕಿಸಿದ್ದಕ್ಕೆ ವೀರಶೈವ ಸಮಾಜವು ಅವರಿಗೆ ಋಣಿಯಾಗಿದೆ.

ಈ ಗ್ರಂಥದ ಸಂಪಾದಕರು ಶ್ರೀ. ಎಮ್. ಎಸ್. ಬಸವಲಿಂಗಯ್ಯ ಎಮ್. ಎ. ಬಿ. ಎಲ್. ಮತ್ತು ಶ್ರೀ ಎಮ್. ಆರ್. ಶ್ರೀನಿವಾಸ ಮೂರ್ತಿ ಬಿ. ಏ. ಇವರು ಇದ್ದು ಶ್ರೀಯುತ ಬಿ. ಎಮ್. ಶ್ರೀಕಂಠಯ್ಯನವರು ಇದಕ್ಕೆ ಒಂದು ಮುನ್ನುಡಿಯನ್ನೂ ಶ್ರೀಯುತ ಶ್ರೀನಿವಾಸ ಮೂರ್ತಿಗಳು ೬೫ ಪುಟಗಳುಳ್ಳ ಒಂದು ವಿಸ್ತೃತ ಪೀಠಿಕೆಯನ್ನೂ ಬರೆದಿರುವರು. ಇದರಲ್ಲಿ ಅವರು ಚಾಮರಸನ ಜೀವನಚರಿತ್ರೆ ಅಲ್ಲಮ ಪ್ರಭುವಿನ ಧಾರ್ಮಿಕ ವಿಚಾರಗಳು, ಕಾವ್ಯದ ವಿಮರ್ಶೆ, ಇವೇ ಮೊದಲಾದ ಉಪಯುಕ್ತ ವಿಷಯಗಳು ಬಂದಿರುವವು. ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ತಿಳಿಯಬೇಕೆನ್ನುವವರು ಈ ಪೀಠಿಕೆಯನ್ನು ಅವಶ್ಯವಾಗಿ ಓದಬೇಕು. ಅಲ್ಲದೆ ಈ ಗ್ರಂಥದಲ್ಲಿ ಹರಿಹರನಿಂದ ರಚಿತವಾದ ಪ್ರಭುದೇವರ ರಗಳೆ, ಮತ್ತು ಅಂತ್ಯದಲ್ಲಿ ಟಿಪ್ಪಣಿಗಳನ್ನೂ ಶಬ್ದಕೋಶವನ್ನೂ ಸಹ ಕೊಟ್ಟಿರುವರು. ಅಲ್ಲದೆ ಆರಂಭದಲ್ಲಿ ಬನವಾಸಿಯ ಮಧುಕೇಶ್ವರ ದೇವಾಲಯದ ಚಿತ್ರವನ್ನೂ ಅಚ್ಚು ಹಾಕಿಸಿರುತ್ತಾರೆ.

ಈ ಪ್ರಕಾರ ನಾಡಿನ ಸಂಸ್ಕೃತಿಯನ್ನು ಪೋಷಿಸುವ ಗ್ರಂಥಗಳನ್ನು ಸಂಶೋಧಿಸುವದೂ ಪ್ರಕಟಿಸುವದೂ ಆಯಾ ಕ್ಲಾಸುಗಳಿಗೆ ಅವುಗಳನ್ನು ಪಠ್ಯಪುಸ್ತಕಗಳಾಗಿ ನಿಯಮಿಸುವದೂ ವಿಶ್ವವಿದ್ಯಾಲಯದ ಕಾರ್ಯಗ

ಳಲ್ಲಿ ಬಹು ಮಹತ್ವದವಾಗಿವೆ. ಈ ಉದ್ದೇಶಗಳನ್ನಿಟ್ಟುಕೊಂಡು ಮೈಸೂರು ವಿಶ್ವವಿದ್ಯಾಲಯದವರು ಈ ಗ್ರಂಥವನ್ನು ಪ್ರಕಟಿಸಿದ್ದು ಅಭಿನಂದನೀಯವಾಗಿದೆ.

ವೀರಶೈವ ವಾಙ್ಮಯದ ಇತಿಹಾಸದಲ್ಲಿ ಬೇರೆಬೇರೆ ಕಾಲಗಳಲ್ಲಿ ವಾಙ್ಮಯಾಭಿವೃದ್ಧಿಯಬಗ್ಗೆ ವಿಶೇಷ ಚಟುವಟಿಕೆಗಳು ಉತ್ಪನ್ನವಾಗುತ್ತ ಬಂದಿವೆ. ಇಂಥ ಕಾಲಗಳಲ್ಲಿ ಚಾಮರಸನ ಕಾಲವಾದರೂ ಒಂದಾಗಿದೆ. ಅವನ ಕಾಲಕ್ಕೆ ಅನೇಕ ಧಾರ್ಮಿಕ ಮಹಾ ಪುರುಷರೂ ಗ್ರಂಥಕಾರರೂ ರಾಜಕೀಯ ವ್ಯಕ್ತಿಗಳೂ ಆಗಿಹೋದರು. ಇದು ಹದಿನೈದನೆಯ ಶತವಾನದ ಮಧ್ಯಕಾಲದಲ್ಲಿ. ವಿಜಯನಗರದ ಅರಸರುಗಳ ಕಾಲದಲ್ಲಿ ಆಗ ಉಂಟಾದ ಮಹತ್ವದ ಗ್ರಂಥಗಳಲ್ಲಿ ಪ್ರಭುಲಿಂಗಲೀಲೆಯು ಒಂದಾಗಿದೆ. ಆದರ ಕರ್ತೃವಾದ ಚಾಮರಸನು ಮೊದಲಿನಿಂದಲೂ ವೀರಶೈವನಾಗಿದ್ದನೆಂದು ಶ್ರೀಯುತ ಶ್ರೀನಿವಾಸ ಮೂರ್ತಿಗಳು ಇದರಲ್ಲಿ ಅಭಿಪ್ರಾಯಪಟ್ಟಿರುತ್ತಾರೆ. ಅವನಿಗೆ ಅನ್ಯಮತ ಕೋಲಾಹಲ, ವೀರಶೈವ ಆಚಾರ ಮಾರ್ಗ ಸಾರೋದ್ಧಾರ ಎಂಬ ಬಿರುದುಗಳಿದ್ದವೆಂತಲೂ ತಿಳಿದು ಬರುತ್ತದೆ.

ಚಾಮರಸನು ಈ ಗ್ರಂಥವನ್ನು ಬರೆದಿದ್ದು ಅಲ್ಲಮನ ಮಹತ್ಕಾರ್ಯಗಳನ್ನು ವರ್ಣಿಸುವ ಸಲುವಾಗಿ. ಈ ಮಹಾ ಪುರುಷನ ವಿಷಯವಾಗಿ ಸಂಪಾದಕರು ಬಹು ಪೂಜ್ಯ ಭಾವನೆಯನ್ನು ತಾಳಿ ಅವನ ಬಗ್ಗೆ ಪೀಠಿಕೆಯಲ್ಲಿ ಬಹು ವಿಸ್ತಾರವಾಗಿ ಬರೆದಿರುತ್ತಾರೆ. ಅದನ್ನು ವಾಚಕರು ಅವಶ್ಯವಾಗಿ ಪರಿಶೀಲಿಸಬೇಕು. ನಿಜವಾಗಿ ಅಲ್ಲಮ ಪ್ರಭುವು ವೀರಶೈವ ಶಿವಶರಣರಲ್ಲಿ ಅತ್ಯಂತ ಜ್ಞಾನಿಯೂ ಮಹತ್‌ಪುರುಷನೂ ಆಗಿದ್ದನು. ಅವನು ರಚಿಸಿದ ವಚನಗಳಲ್ಲಿ ಅತ್ಯಂತ ಉಚ್ಚ ಮತ್ತು ದೀರ್ಘ ವಿಚಾರಗಳು ಪ್ರತಿಬಿಂಬಿತವಾಗಿರುತ್ತವೆ. ಬಸವಣ್ಣನವರ ವಚನಗಳಲ್ಲಿ ಮಾಧುರ್ಯವೂ ಕೋಮಲತೆಯೂ ಸಂಪೂರ್ಣ ಭಕ್ತಿಭಾವವೂ ತುಂಬಿತುಳುಕುತ್ತಿದ್ದರೆ ಅಲ್ಲಮ ಪ್ರಭುವಿನ ವಚನಗಳಲ್ಲಿ ಗಂಭೀರವಾದ ಪ್ರಗಲ್ಭವಾದ ವಿಚಾರಗಳು ತುಂಬಿರುತ್ತವೆ. ಅಲ್ಲಮ ಪ್ರಭುವು ಕೇವಲ ಜ್ಞಾನಿಮಾತ್ರನಾಗಿರಲಿಲ್ಲ. ಅವನು ಬೋಧಕನೂ ಆಗಿದ್ದನು. ಅವನು ಬಸವೇಶ್ವರನ ಕಾಲದಲ್ಲಿ ದೇಶದಲ್ಲೆಲ್ಲ ಸಂಚರಿಸಿ ಜನರಿಗೆ ಬೋಧಿಸುತ್ತ ಸಂಚಾರಮಾಡಿದನು. ಅವನು ಹೀಗೆ ಸಂಚಾರ ಮಾಡಿದ ವಿವರಗಳೆಲ್ಲ ಈ ಪ್ರಭುಲಿಂಗಲೀಲೆಯ

ಗ್ರಂಥದಲ್ಲಿ ಬಂದಿವೆ. ಬಸವೇಶ್ವರನು ಅಲ್ಲಮನಂತೆ ಕಲ್ಯಾಣವನ್ನು ಬಿಟ್ಟು ದೇಶದಲ್ಲೆಲ್ಲ ಬೋಧವಮಾಡುತ್ತ ಸಂಚರಿಸಿದ್ದು ತೋರಿಬರುವದಿಲ್ಲ. ಅವನ್ನು ಕಲ್ಯಾಣ ಪಟ್ಟಣದಲ್ಲಿಯೇ ಇದ್ದುಕೊಂಡು ಶಿವಾನುಭವಮಂಟಪವನ್ನು ಸ್ಥಾಪಿಸಿ ಶಿವಾನುಭವದ ತತ್ವಗಳನ್ನು ದೃಢಪಡಿಸುವದರಲ್ಲಿ ತೊಡಗಿದ್ದನು. ಆದರೆ ಪ್ರಭುದೇವನು ಇಡೀ ದೇಶದಲ್ಲಿ ಪ್ರಸಾರ ಕಾರ್ಯ ಮಾಡಿದನು. ಇದು ಅವನ ವೈಶಿಷ್ಟ್ಯವಾಗಿದೆ. ಅವನು ತನ್ನ ಸಂಚಾರದಲ್ಲಿ ಮುಕ್ತಾಯಕ್ಕನಂಥ ದುಃಖಿತರನ್ನು ಕಂಡರೆ ಅವರಿಗೆ ಸಮಾಧಾನ ಪಡಿಸುವನು. ಸಿದ್ಧರಾಮನಂಥ ಗರ್ವಾಂಧರನ್ನು ಹಣ್ಣಿಗೆ ತರುವನು. ಗೊಗ್ಗಯ್ಯನಂಥ ತೋಟಿಗನಿಗೆ ಪಾರಮಾರ್ಥದ ನಡತೆಯನ್ನು ತಿಳಿಸುವನು. ಈ ಬಗೆಯ ಲೋಕೋದ್ಧಾರ ಕಾರ್ಯವಮಾಡುತ್ತ ಅಲ್ಲಮನು ಸಂಚರಿಸಿದನು.

ಶ್ರೀಯುತ ಶ್ರೀನಿವಾಸಮೂರ್ತಿಗಳು ತಮ್ಮ ಈ ಪೀಠಿಕೆಯಲ್ಲಿ ಕರ್ನಾಟಕದ ದೇಶದಲ್ಲಿ ವೀರಶೈವ ಮತೋದ್ಧಾರ ಕೇಂದ್ರಗಳು ಉತ್ತರದಲ್ಲಿ ಸೊನ್ನಲಾಪುರ, ಮಧ್ಯದಲ್ಲಿ ಕಲ್ಯಾಣಪಟ್ಟಣ, ದಕ್ಷಿಣದಲ್ಲಿ ಬಳ್ಳಿಗಾವೆ, ಇವು ಇದ್ದುವೆಂದು ಅಭಿಪ್ರಾಯಪಟ್ಟಿರುವರು. ಈ ಪಟ್ಟಣಗಳಲ್ಲಿ ಅನೇಕ ಧಾರ್ಮಿಕ ಪುರುಷರು ಹುಟ್ಟಿದ್ದು ನಿಜವು. ಆದರೆ ಪ್ರಥಮ ಕೇಂದ್ರವು ಜಯಸಿಂಗನ ರಾಜಧಾನಿಯಾದ ಹೊಟ್ಟಲಕೆರೆಯಾಗಿದ್ದಿತೆಂದು ತೋರುತ್ತದೆ. ಈ ಪಟ್ಟಣದಲ್ಲಿಯೂ ಅದರ ಸಮೀಪದ ಪ್ರದೇಶದಲ್ಲಿಯೂ ದೇವರ ದಾಸಿಮಯ್ಯ, ಶಂಕರದಾಸಿಮಯ್ಯ, ಕೆಂಭಾವಿ ಭೋಗಣ್ಣ, ಮಡಿವಾಳ ಮಾಚಿದೇವ ಮೊದಲಾದವರು ಬಸವಣ್ಣನ ಪೂರ್ವದಲ್ಲಿ ಉದ್ಭವಿಸಿ ಒಂದು ಧಾರ್ಮಿಕ ಕ್ರಾಂತಿಯನ್ನುಂಟು ಮಾಡಿದ ಹಾಗೆ ತೋರುತ್ತದೆ. ಶ್ರೀ ನಿವಾಸಮೂರ್ತಿಗಳು ಹೇಳಿದಂತೆ ಇದೇ ಕಾಲದಲ್ಲಿ ದಕ್ಷಿಣದಲ್ಲಿ ಬನವಸೆ, ಬಳ್ಳಿಗಾವಿ ಈ ಪ್ರದೇಶದಲ್ಲಿ ಪ್ರಭುದೇವ, ಮಹಾದೇವಿಯಕ್ಕ, ಏಕಾಂತದ ರಾಮಯ್ಯ ಆದಯ್ಯ ಮುಂತಾದ ಶಿವಶರಣರು ಉದ್ಭವಿಸಿ, ದೇಶದಲ್ಲಿ ಜಾಗ್ರತೆಯನ್ನುಂಟು ಮಾಡಿದರು. ಹೀಗೆ ದೇಶದಲ್ಲಿ ಚಟುವಟಿಕೆಗಳು ಏಳಲು, ಬಸವೇಶ್ವರನು ಇದೇ ಸಮಯದಲ್ಲಿ ಉದ್ಭವಿಸಿ ಕಲ್ಯಾಣಕ್ಕೆ ಬಂದು ಈ ಕ್ರಾಂತಿಗೆ ಒಂದು ವ್ಯವಸ್ಥಿತ ಸ್ವರೂಪನ್ನು ಕೊಟ್ಟನು. ಅವನ ಕಾಲದಲ್ಲಿ ಕಲ್ಯಾಣವೇ ಮತೋದ್ಧಾರ ಕಾರ್ಯದಲ್ಲಿ ಮಹತ್ವದ ಕೇಂದ್ರವಾಯಿತು. ಆದ್ದರಿಂದ ಕಲ್ಯಾಣವು ಧರ್ಮ

ಜಾಗ್ರತಿಯ ಕಿಸೇ ಕೇಂದ್ರವೆನ್ನಬಹುದು. ಆದರೆ ಮುಂದೆ ಕಲ್ಯಾಣ ಪಟ್ಟಣವು ಹಾಳಾದ ಬಳಿಕ, ವೀರಶೈವ ಮತೋದ್ಧಾರ ಕೇಂದ್ರವು ವಿಜಯನಗರವಾಯಿತೆಂದು ತೋರುತ್ತದೆ. ಅಲ್ಲಿ ಪಾನುರಸ, ಜಕ್ಕಣ್ಣ ಲಕ್ಕಣ್ಣ ಮೊದಲಾದ ಮತೋದ್ಧಾರಕರು ಉತ್ಪನ್ನರಾದರು. ಮುಂದೆ ವಿಜಯನಗರವು ಹಾಳಾದ ಬಳಿಕ ಈ ಕೇಂದ್ರವು ಕೆಳದಿ ಅಥವಾ ಬಿದನೂರ ಪಟ್ಟಣಗಳಿಗೆ ಬಂದಿತೆಂದು ಹೇಳಬಹುದು. ಈ ಪ್ರಕಾರ ಧಾರ್ಮಿಕ ಚಟುವಟಿಕೆಗಳು ಕಾಲಕಾಲಕ್ಕೆ ಉತ್ಪನ್ನವಾದವು. ಆದರೆ ಆಯಾ ಕಾಲಗಳಲ್ಲಿ ಧರ್ಮದ ಸ್ವರೂಪು ಮತ್ತು ಅದರಲ್ಲಿಯ ವಿಚಾರಗಳು ಮತ್ತು ಪದ್ಧತಿಗಳು ಕೆಲಮಟ್ಟಿಗೆ ಮಾರ್ಪಾಡುಗಳನ್ನು ಹೊಂದುತ್ತ ಬಂದ ಹಾಗೆ ತೋರಿ ಬರುತ್ತದೆ. ಹೊಟ್ಟಲಕೆರೆಯ ರಾಜಧಾನಿಯಲ್ಲಿ ಉಂಟಾದ ಧಾರ್ಮಿಕ ವಿಚಾರಗಳು ಕಲ್ಯಾಣಪಟ್ಟಣದ 'ಮಂಟಪ' ದಲ್ಲಿ ಮಾರ್ಪಾಡುಗಳನ್ನು ಹೊಂದಿದವು. ಮುಂದೆ ಧಾರ್ಮಿಕ ವರ್ಗಗಳು ಪ್ರಬಲವಾದ ಹಾಗೆ ಸಮಾಜದ ಸ್ವರೂಪು ವಿಜಯನಗರ ಮತ್ತು ಕೆಳದಿ ಈ ಕೇಂದ್ರಗಳಲ್ಲಿ ಮತ್ತಿಷ್ಟು ಬದಲಾವಣೆ ಹೊಂದಿತು. ಆದರೆ ಈ ಎಲ್ಲ ಕಾಲಗಳಲ್ಲಿ ಉತ್ಪನ್ನವಾದ ಕ್ರಾಂತಿಗಳಲ್ಲಿ ಬಸವೇಶ್ವರನ ಕಾಲದಲ್ಲಿ ಉತ್ಪನ್ನವಾದ ಧರ್ಮದ ಸ್ವರೂಪು ಮತ್ತು ವಾಙ್ಮಯವು ಹೆಚ್ಚಿಗೆ ತೇಜಃಪುಂಜವೂ, ಉದಾತ್ತವೂ ಆಗಿತ್ತೆಂಬದು ನಿಃಸಂದೇಹವಾದದ್ದು.

ಅಲ್ಲಮನ ಚರಿತ್ರೆಯು ವಿಷಯವಾಗಿ ಶ್ರೀಯುತ ಶ್ರೀನಿವಾಸಮೂರ್ತಿಗಳು ತಮ್ಮ ಈ ಉಪೋದ್ಘಾತದಲ್ಲಿ ವಿಶೇಷವಾಗಿ ಚರ್ಚಿಸಿರುವರು. ಶಿವಶರಣರ ಕಥೆಗಳು ಕಾಲಕಾಲಕ್ಕೆ ಮಾರ್ಪಾಡುಗಳನ್ನು ಹೊಂದುತ್ತಲೇ ಬಂದಿವೆ. ಅವುಗಳ ನಿಜಾಂಶವನ್ನು ಕಂಡುಹಿಡಿಯುವದು ದುಸ್ತರವು. ಇದು ಪ್ರಭುದೇವರ ವಿಷಯವಾಗಿಯೂ ಸಂಭವಿಸಿರುತ್ತದೆ. ಈ ಸ್ಥಿತಿಯಲ್ಲಿ ಪುರಾತನ ಕಾಲದ ಗ್ರಂಥಗಳಲ್ಲಿ ಇರತಕ್ಕ ಚರಿತ್ರೆಗಳಿಗೆ ನಾವು ಮಹತ್ವಕೊಡಬೇಕಾದುದು ಯೋಗ್ಯವು. ಆದ್ದರಿಂದ ಹರಿಹರದೇವನು ಅಲ್ಲಮನ ರಗಳೆಯಲ್ಲಿ ಕಾಣಿಸಿದ ವಿಷಯಗಳಿಗೆ ನಾವು ಮಹತ್ವವನ್ನು ಕೊಡಲೇ ಬೇಕಾಗಿದೆ. ಅಲ್ಲಮನು ಆರಂಭದಲ್ಲಿ ಒಬ್ಬ ಸಾಧಾರಣ ಲೌಕಿಕನಂತೆ ವರ್ತಿಸಿ ಆ ಮೇಲೆ ವೈರಾಗ್ಯಶಾಲಿಯಾಗಿ ಮಹತ್ತರ ಕಾರ್ಯ ಮಾಡಿದ್ದಾದರೆ ಅವನು ಮಾಡಿದ ಕಾರ್ಯಗಳ ಮಹತ್ವಕ್ಕೆ ಏನೂ ಕುಂದು ಬರಲಾರದು. ಹರಿಹರನು ವರ್ಣಿಸಿದ ವಿಷಯಗಳು ತಪ್ಪೆಂದು

ಸ್ಪಷ್ಟವಾಗಿ ಆಧಾರಗಳು ದೊರೆಯುವ ತನಕ ಅವು ಸತ್ಯವಾದುವೆಂದು ನಂಬುವದರಲ್ಲಿ ಯಾವ ತಪ್ಪು ಇರುವದಿಲ್ಲೆಂದು ನನಗೆ ತೋರುತ್ತದೆ.

ಶ್ರೀಯುತ ಶ್ರೀನಿವಾಸಮೂರ್ತಿಗಳು ವೀರಶೈವ ಧರ್ಮದ ತತ್ವಗಳ ವಿಷಯವಾಗಿ ವಿಸ್ತಾರವಾಗಿ ಈ ಪೀಠಿಕೆಯಲ್ಲಿ ವಿವರಿಸಿರುವರು. ಅವುಗಳನ್ನು ವಾಚಕರು ಅವಶ್ಯವಾಗಿ ಓದಿ ತಿಳಿಯಬೇಕೆಂದು ನಾವು ಸೂಚಿಸುತ್ತೇವೆ.

ಈ ಗ್ರಂಥದಲ್ಲಿ ಪ್ರಭುಲಿಂಗಲೀಲೆಯ ಕಾವ್ಯದ ಸಾರವು ೧೩೦ ಪುಟಗಳಲ್ಲಿ ಸುವ್ಯವಸ್ಥಿತವಾಗಿ ಸುಬೋಧವಾಗಿ ಹೇಳಲ್ಪಟ್ಟಿದೆ. ಇದರಿಂದ ಒಂದು ದೊಡ್ಡ ಕಾವ್ಯವನ್ನು ಓದುವ ಭಾರವು ಓದುಗರಿಗೆ ಕಡಿಮೆಯಾಗಿದೆ. ಇದರಲ್ಲಿ ಮೂಲ ಕಾವ್ಯದಂತೆ ೧೫ ಗತಿಗಳು ಇವೆ. ಮೂಲಕಾವ್ಯದ ಒಂದು ಮೂರಾಂಶ ಭಾಗವು ಮಾತ್ರ ಈ ಪುಸ್ತಕದಲ್ಲಿ ಬಂದರೂ ಅದರಲ್ಲಿ ಅಸ್ಪಷ್ಟತೆಯು ಏನೂ ಉಂಟಾಗಿರುವದಿಲ್ಲ.

ಗ್ರಂಥದ ಮುದ್ರಣವೂ ಬಾಯಿಂಡೂ ಸುಂದರವಾಗಿವೆ. ೧೭೫ ಪುಟಗಳುಳ್ಳ ಈ ಗ್ರಂಥದ ಬೆಲೆ ೧ ರೂಪಾಯಿ ಮಾತ್ರವಿದೆ. ಈ ಪುಸ್ತಕವು ಶಾಲೆ-ಕಾಲೇಜುಗಳಲ್ಲಿ ಪಠ್ಯಪುಸ್ತಕವನ್ನಾಗಿ, ಉಪಯೋಗಿಸಲು ಯೋಗ್ಯವಾಗಿದೆ.

ಉರಿಲಿಂಗಪೆದ್ದಿಯ ವೃತ್ತಾಂತ.

(ಲೇಖಕರು:- ಫ. ಗು. ಹಳಕಟ್ಟಿ ವಿಜಾಪುರ)

ಉರಿಲಿಂಗಪೆದ್ದಿಯ ವಚನಗಳು ಶಿವಾನುಭವದ ಈ ತಿಂಗಳ ಸಂಚಿಕೆಯಲ್ಲಿ ಪೂರ್ಣವಾಗಿರುತ್ತವೆ. ಅವನ ವಚನಗಳಲ್ಲಿ ಒಂದು ವೈಶಿಷ್ಟ್ಯವಿದೆ. ಅವನ ಪ್ರತಿಯೊಂದು ವಚನದಲ್ಲಿ ವೇದಾಗಮ, ಪುರಾಣ, ಉಪನಿಷತ್, ಮೊದಲಾದ ಸಂಸ್ಕೃತಗ್ರಂಥದೊಳಗಿನ ಅವತರಣಗಳು ಹೇರಳವಾಗಿರುವದನ್ನು ವಾಚಕರು ಕಾಣಬಹುದು. ಇವನಷ್ಟು ವಿಪುಲವಾಗಿ ಪುರಾತನ ಆಧಾರ ಗ್ರಂಥಗಳನ್ನು ತೆಗೆದುಕೊಂಡು ತತ್ವಸಮರ್ಥನ ಮಾಡಿದವರು ವಚನಕಾರರಲ್ಲಿ ಬಹು ವಿರಳ. ಉರಿಲಿಂಗಪೆದ್ದಿಯು ಪುರಾತನ ಕಾಲದಿಂದ ನಡೆದುಬಂದ ಪದ್ಧತಿಗೂ ಶಿವಶರಣರ ಮಾರ್ಗಕ್ಕೂ ಭೇದವಿಲ್ಲೆಂದು ತೋರಿಸಲು ತನ್ನ ವಚನಗಳಲ್ಲಿ ಪ್ರಯತ್ನಿಸಿರುವದು ಸ್ಪಷ್ಟವಾಗಿರುತ್ತದೆ. ಈ ಕಾರಣಕ್ಕೋಸ್ಕರ ಉರಿಲಿಂಗಪೆದ್ದಿಯ ವಚನಗಳಿಗೆ ವಚನವಾಙ್ಮಯದಲ್ಲಿ ಒಂದು ವಿಶಿಷ್ಟಸ್ಥಾನವು ಉಂಟಾಗಿರುತ್ತದೆ.

ಉರಿಲಿಂಗಪೆದ್ದಿಯು ಬಸವಾದಿ ಪ್ರಮಥರ ಕಾಲದಲ್ಲಿ ಪ್ರಸಾರಹೊಂದಿದ ಧರ್ಮತತ್ವಗಳನ್ನೇ ತನ್ನ ವಚನಗಳಲ್ಲಿ ನಿರೂಪಿಸಿರುವನು ಅವರ ಮಾರ್ಗಕ್ಕೂ ಈ ವಚನಕಾರನ ಮಾರ್ಗಕ್ಕೂ ಏನೂ ಭಿನ್ನತೆ ಇರುವದಿಲ್ಲ. ಶಿವಶರಣರ ಉದಾತ್ತ ಮತ್ತು ಉದಾರ ಭಾವವುಳ್ಳ ಅಭಿಪ್ರಾಯಗಳು ಉರಿಲಿಂಗಪೆದ್ದಿಯ ವಚನಗಳಲ್ಲಿ ಬಹು ಸ್ಪಷ್ಟವಾಗಿ ಬಂದಿವೆ. ಅವನ ವಚನಗಳು ವಾಚಕರಿಗೆ ಸ್ವಲ್ಪ ಉದ್ದವಾಗಿ ತೋರಬಹುದು. ಆದರೆ ಅವನು ಕೈಕೊಂಡ ನಿರೂಪಣಾ ಪದ್ಧತಿಯ ಮೂಲಕ ಹೀಗಾಗುವದು ಸ್ವಾಭಾವಿಕವೇ ಇರುತ್ತದೆ. ಆದರೂ ಅದರಲ್ಲಿ ಓಜಸ್ಸೂ, ಸ್ಫೂರ್ತಿಯೂ ಸ್ವಲ್ಪಾದರೂ ಕಡಿಮೆ ಇರುವದಿಲ್ಲ. ಅವನ ವಚನಗಳಲ್ಲಿ ವಕ್ತೃತ್ವದ ಪ್ರವಾಹವು ತುಂಬಿಹರಿಯುತ್ತಲಿರುತ್ತದೆ. ಈ ರೀತಿಯು ಘನಲಿಂಗನ ವಚನಗಳಲ್ಲಿಯೂ ತೋರಿಬರುವದುಂಟು. ಆದರೆ ಉರಿಲಿಂಗಪೆದ್ದಿಯ ವಚನಗಳಲ್ಲಿ ಬಸವಾದಿ ಶಿವಶರಣರ ವಚನಗಳಲ್ಲಿರುವಂತೆ ಮಾಧುರ್ಯವೂ ಸ್ವಭಾವೋಕ್ತಿಯೂ ಬಹು ಸ್ಪಷ್ಟರೀತಿಯಿಂದ ಕಂಗೊಳಿಸುತ್ತವೆ. ಘನಲಿಂಗನು ಗಡುಚಾದ ದೊಡ್ಡ ದೊಡ್ಡ ವಚನಗಳನ್ನು ಹಾಕಿ ಗಾಂಭೀರ್ಯವನ್ನು ತನ್ನ ವಚನಗಳಲ್ಲಿ ಉಂಟುಮಾಡಿರುವನು.

ಆದರೆ ಕನ್ನಡದ ಬಿಡಿನುಡಿಗಳುಳ್ಳ ಉರಿಲಿಂಗಪೆದ್ದಿಯ ವಚನಗಳು ಸಂಸ್ಕೃತದಲ್ಲಿ ಹೆಣೆದುಕೊಂಡು ಹೆಚ್ಚು ಹೃದಯಂಗಮವಾಗಿರುವವು.

ಈ ರೀತಿಯಾಗಿ ವಚನಗಳನ್ನು ರಚಿಸಿದ ಉರಿಲಿಂಗಪೆದ್ದಿಯು ಯಾರು ಮತ್ತು ಎಲ್ಲಿಯವನು ಎಂಬದನ್ನು ತಿಳಿದುಕೊಳ್ಳುವ ಅಭಿಲಾಷೆ ಹುಟ್ಟುವದು ಸ್ವಭಾವಿಕವದೆ. ಅವನ ವಿಷಯವಾಗಿ ಗ್ರಂಥಗಳಲ್ಲಿ ನಮಗೆ ದೊರೆದ ಕೆಲವು ಸಂಗತಿಗಳನ್ನು ನಾವು ಇಲ್ಲಿ ಕೊಡುತ್ತೇವೆ. ಹಾಗೆಯೇ ನಮಗೆ ದೊರೆದ ಕೆಲವು ಐತಿಹ್ಯಗಳನ್ನೂ ಇಲ್ಲಿ ಉಲ್ಲೇಖಿಸುತ್ತೇವೆ. ಅವುಗಳ ಮೇಲಿಂದ ವಚನಕಾರನ ಚರಿತ್ರೆಯಮೇಲೆ ಯಾವ ಪ್ರಕಾಶವು ಬೀಳುತ್ತದೆಂಬದನ್ನು ಕಂಡುಹಿಡಿಯುವ ಭಾರವನ್ನು ನಾವು ಸಂಶೋಧಕರ ಕಡೆಗೆ ಬಿಟ್ಟುಕೊಡುತ್ತೇವೆ.

ಉರಿಲಿಂಗಪೆದ್ದಿಯು ಉರಿಲಿಂಗದೇವನೆಂಬ ಇನ್ನೊಬ್ಬ ಶಿವಶರಣನಿಗೆ ಶಿಷ್ಯನಾಗಿದ್ದನೆಂದು ತಿಳಿದುಬರುತ್ತದೆ. ಉರಿಲಿಂಗದೇವನು ಕೂಡ ಒಬ್ಬ ಬಹು ಪ್ರಸಿದ್ಧನಾದ ಪುರಾತನ ವಚನಕಾರನಿರುವನು. ಇವನ ಅನೇಕ ವಚನಗಳು ವಚನಶಾಸ್ತ್ರಸಾರ ಗ್ರಂಥದಲ್ಲಿ ಕೊಡಲ್ಪಟ್ಟಿವೆ. ಅವನ ವಚನಗಳಾದರೂ ಬಹು ಸುಂದರವಾದವುಗಳು. ಈ ಉಭಯ ಗುರು-ಶಿಷ್ಯರ ಚರಿತ್ರೆಗಳು ಪರಸ್ಪರ ಸಂಬಂಧಪಟ್ಟಿರುವದರಿಂದ ಅವೆರಡನ್ನೂ ನಾವು ಇಲ್ಲಿ ಕೊಡುತ್ತೇವೆ. ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಾಕರದಲ್ಲಿ ಕೊಡಲ್ಪಟ್ಟ ಚರಿತ್ರಗಳನ್ನೇ ನಾವು ಇಲ್ಲಿ ಕೊಟ್ಟಿದ್ದೇವೆ.

ಉರಿಲಿಂಗದೇವ.

ಉರಿಲಿಂಗ ದೇವನು ಆರಾಧ್ಯ ಸಂತತಿಯವನಾಗಿ ಲಿಂಗ ದೀಕ್ಷೆಯನ್ನು ಹೊಂದಿ, "ಅವಸಿಕಂದಾರ" ಎಂಬ ಪುರದಲ್ಲಿ ಇರುತ್ತಿದ್ದನು. ಅವನು "ಐದನೆಯ ಗುರಸ್ಥಲ"ಕ್ಕೆ ಯೋಗ್ಯನಾಗಿ, ದೀಕ್ಷೆಯನ್ನು ಮಾಡುತ್ತ ಶಿವಲಿಂಗಾರ್ಚನೆಯಲ್ಲಿ ನಿಷ್ಠಾಪರನಾಗಿರುತ್ತಿದ್ದನು. ಅವನ ನಿಷ್ಠೆಯಲ್ಲಿ 'ಶರಣ ಸತಿ, ಲಿಂಗ ಪತಿ' ಎಂಬ ಭಾವವು ಅತ್ಯಂತವಾಗಿ ಮೂಡಿಕೊಂಡಿತ್ತು. ಆದ್ದರಿಂದ ಅವನು ಲಿಂಗ ಪೂಜೆಯನ್ನು ಪ್ರಾರಂಭಿಸಿ, ಅದು ಮುಗಿಯುವ ತನಕ ತಾನು ಸ್ತ್ರೀರೂಪಾಗಿ ಲಿಂಗವು ಪುರುಷ ರೂಪಾಗಿ ಪೂಜಾದಿ ಕ್ರಿಯೆಗಳನ್ನು ಗುಪ್ತವಾಗಿ ಜರುಗಿಸುತ್ತಿದ್ದನು. ಅವನ ಲಿಂಗ ಪೂಜಾ ಕಾಲದಲ್ಲಿ ಹುಲಿ, ಕರಡಿ, ಸಿಂಹ, ಸಿಡಿಲು, ಉರಗ, ಕಿಚ್ಚು ಎದ್ದು

ಬಂದರೂ ಕೂಡ ಚಿತ್ತಚಂಚಲನಾಗದೆ, ಅದರಲ್ಲಿಯೇ ಮಗ್ನನಾಗಿರುತ್ತಿದ್ದನು. ಒಂದು ಕಾಲದಲ್ಲಿ ಒಂದು ನದೀತಟಾಕದಲ್ಲಿ ಉರಿಲಿಂಗದೇವನು ಒಂದು ಚಪ್ಪರವನ್ನು ಹಾಕಿಸಿ, ಲಿಂಗವನರ್ಚಿಸುವಲ್ಲಿ ಪ್ರೇಮರತು ಪರವಶನಾಗಿರಲು, ಜೈನರು ಈತನ ಲಿಂಗನಿಷ್ಠೆಯನ್ನು ನೋಡಬೇಕೆಂದು ಆ ಚಪ್ಪರಕ್ಕೆ ಕಿಚ್ಚನ್ನು ಇಕ್ಕಿದರು. ಆಗ ದಳ್ಳುರಿಯು ಹತ್ತಿ ಉರಿಯುತ್ತ ಬರಲು ಉರಿಲಿಂಗದೇವನು ಅತ್ತಿತ್ತ ನೋಡದೆ, ಶಿವ ಧ್ಯಾನದಲ್ಲಿ ನಿಶ್ಚಿತನಾಗಿರಲು, ಸುತ್ತಲೂ ಬಂದ ಕಿಚ್ಚು ತಾನೇ ನೊಂದಲು ಜೈನರು ಅದನ್ನು ಕಂಡು ಅಪರಾಧವೆಮ್ಮದೆಂದು ಅವನನ್ನು ಸ್ತುತಿಸಲು ಅವನು ಅವರಿಗೆ ಅಭಯವನ್ನಿತ್ತು ಸಲಹಿದನು. ಈ ಪ್ರಕಾರ ಉರಿಲಿಂಗದೇವನ ಒಂದು ಕಥೆಯು ಇದೆ.

ಉರಿಲಿಂಗಪೆದ್ದಿ.

ಉರಿಲಿಂಗಪೆದ್ದಿಯ ಚರಿತ್ರೆಯು ಭೈರವೇಶ್ವರ ಕಾವ್ಯದ ಕಥಾಸೂತ್ರದಲ್ಲಿರುವದನ್ನೇ ಶಬ್ದಶಃ ಕೆಳಗೆ ಕೊಡುತ್ತೇವೆ.

"ಅವಸಿಕಂದಾರ ಎಂಬ ಪಟ್ಟಣದಲ್ಲಿ ಉರಿಲಿಂಗದೇವರೆಂಬ ಆಚಾರ್ಯರು ವೀರಶೈವಾಚಾರ ಮತಕ್ಕೆ ಗುರುವಾಗಿರುತ್ತಾ ಭಕ್ತ ಜನಕ್ಕೆ ಉಪದೇಶಮುಂ ಮಾಡುತ್ತಾ ಇಪ್ಪತ್ತೊಂದು ಗುರುಸಾಂಪ್ರದಾಯಕ್ಕೆ ಯೋಗ್ಯರಾಗಿ ನಂದವಾಡದಲ್ಲಿ ಸೂರಯ್ಯನೆಂಬ ಭಕ್ತನಿಗೆ ಉಪದೇಶಮುಂ ಮಾಡುವಲ್ಲಿ, ಪಂಚಕಳಶ ದೀಕ್ಷಾಮಂಟಪ ರಂಗವೋಲೆ ಮುಖ್ಯವಾದ ಭಕ್ತ ಸಂಭ್ರಮದಿಂದ ದೀಕ್ಷೆಯುಂ ಮಾಡುತ್ತಿರಲು, ಇತ್ತ ಪೆದ್ದಣ್ಣನೆಂಬವನಿರ್ದು ರಾತ್ರಿಯಲ್ಲಿ ಕಳವಿಗೆ ಪೋಪೆನೆಂದು ಪೋಗಿ ಮಾಳಿಗೆಯನೇರಿ, ಉರಿಲಿಂಗದೇವರು ಉಪದೇಶವ ಮಾಡುವದಕ್ಕೆ ಮುನ್ನ ಅವರು ಶಿವಪೂಜೆಯುಂ ಮಾಡುವಲ್ಲಿ ಆರು ಕಾಣಬಾರದೆಂದು ಬಾಗಿಲವನಿಕ್ಕಿಸಿ, ಅಷ್ಟವಿಧ ಪೂಜೆ, ಷೋಡಶೋಪಚಾರವ ಮಾಡುವಲ್ಲಿ 'ಶರಣ ಸತಿ ಲಿಂಗ ಪತಿ' ಎಂಬ ಭಾವದಿಂದ ಲಿಂಗ ಪುರುಷರೂಪಾಗಿ, ಶರಣ ತಾನು ಸತಿರೂಪಾಗಿ ಪೂಜೆಯುಂ ಮಾಡುವಲ್ಲಿ, ಉರಿಲಿಂಗದೇವನೇ ತಾನು ಚಲುವನು, ಉರಿಲಿಂಗದೇವನೇ ಗರುವನು, ಉರಿಲಿಂಗದೇವನೇ ಪಿರಿಯನು ಎಂದು ಆಲಿಂಗನವ ಮಾಡಿ, ಕಾಮವು ಲಿಂಗದೇವ, ಕಾಮಿನಿ ನಾನು, ಎರಡು ಗುರಿ ಒಂದಾಗುವಂತೆ ಸರಸಿಸುಗೆಯ ಮಾಡು ಕಂಡಾ

ಕಾವು, ನೀನು ಬಿಲ್ಲುಗಾರನಾಗಿ ಸರಳಿರಡು ಒಂದಪ್ಪುದೆಂದು ಕಂಡಾ
ಕಾವು, ಎನಗೆಯೂ ಉರಿಲಿಂಗದೇವಗೆಯೂ ತೊಟ್ಟಿಸೆಯೆ ಅಸು ಒಂದಾ
ದೊಡೆ ಬಲ್ಲಾಳು ನೀನಹೆ ಎಲೋ ಕಾವು, ಎಂದು ಲಿಂಗಪೂಜೆಯಲ್ಲಿ
ದಶಾವಸ್ಥೆಯಿಂದ ಇಂತಪ್ಪ ವಚನವುಂ ಪಾಡಿ ಶಿವಪೂಜೆಯ ಮುಗಿದು
ದೀಕ್ಷಾ ಮಂಟಪಕ್ಕೆ ಬರುವದರೊಳಗೆ ಮಾಳಿಗೆಯ ಮೇಲೇರಿ ಬೆಳಕಿಂಡಿ
ಯಿಂದ ನೋಡಿ ಅವರು ದೀಕ್ಷೆಯ ಮಾಡುವ ಕ್ರಮವನ್ನೆಲ್ಲ ಮೇಲಿಂದ
ನೋಡಿ ಉರಿಲಿಂಗ ದೇವರಿಗೆ ಶಿಷ್ಯರು ನಮಿಸುವುದ ತಾ ಕಂಡು ಛರ
ಣೆಂದು ಮಾಳಿಗೆಯನಿಳಿದು ಪೋಗಿ ಬೆಳಗಾಗಲು ಪೆದ್ದಣ್ಣನು ಉರಿಲಿಂಗ
ದೇವರ ಮನೆಗೆ ಅವರು ತರಹೇಳದೆ ತಾನೇ ಬಂದು ಹೊರೆ ಹುಲ್ಲು
ಕಟ್ಟಿಗೆಯ ಒಂದು ಹೊರೆ ದಿನಂಪ್ರತಿಯಲ್ಲಿ ಹಾಕುತ್ತಿರಲು ಕೆಲವು ದಿನದ
ಮೇಲೆ "ಏನು ಬೇಕು ಬೆಲೆಯ ತೆಗೆದುಕೋ" ಎನಲು, ಅವನು ಎನಗೆ ಲಿಂಗ
ವಿಲ್ಲೆಂದು ಬರಬೇಡ ಎಂಬುತಾರೆ ಎಂಬುದಂ ತಿಳಿದು, ಮತ್ತೊಂದು
ದಿನಂ ಕಟ್ಟಿಗೆಯ ತರಲು, ಏನು ಬೇಕೆಂದು ಕೇಳಲು, ಎಲೆ ಸ್ವಾಮಿ ಎನಗೆ
ಲಿಂಗವ ಧರಿಸಿ ನಂದಿವಾಡದ ಸುರೇಶ ಭಕ್ತಂಗೆ ದೀಕ್ಷೆಯ ಮಾಡಿದಂತೆ
ಮಾಡೆಂದು ಪೇಳಲು ಅದು ಹೇಗೆಂದು ಉರಿಲಿಂಗದೇವರು ಕೇಳಲು
ತಾ ಕಂಡುದ ಪೇಳಲು, ಅವರು ಸುಮ್ಮನಿರಲು, ನಿತ್ಯದಲ್ಲಿ ಹುಲ್ಲುಕಟ್ಟಿ
ಗೆಯುಂ ತರುತ್ತಿರಲು ಲಿಂಗವ ಧರಿಸಿ ಎಂದೊಡೆ ಅವರು ಸುಮ್ಮನಿರಲು
ಮತ್ತೊಂದು ದಿನ ಪೆದ್ದಣ್ಣನು ಉರಿಲಿಂಗದೇವರ ಹಿಂದುಗೊಂಡು ಪೋಗಿ
ಮತ್ತೆಯೂ ಕೊಡಿ ಎಂದು ಬೇಡಲು, ಅವರು ಎಲ್ಲಿ ಪೋದಲ್ಲಿಯೂ ಬರು
ತಾನೆ, ಇವನ ಕಾಟವ ಕಳೆಯಬೇಕೆಂದು ಒಂದು ಕಲ್ಲು ಕೈಯಲ್ಲಿ ಪಿಡಿದು
ಕೊಂಡು 'ಗೆಜಾದಗಿಡಿಚ' ಎಂದು ಬೈದು ಕಲ್ಲು ಕೊಡಲು ಅದಂ ತೆಗೆದು
ಕೊಂಡು 'ಗೆಜಾದಗಿಡಿಚ ಜಾದಗಿಡಿಚ' ಎಂದು ಅದೇ ಗುರುಮಂತ್ರ
ವೆಂದು ಜಪಿಸುತ್ತಿರಲು ಅದು ಪೆದ್ದಣ್ಣನ ಭಾವದ ಬಲುಮೆಯಿಂದ
ಜ್ಯೋತಿರ್ಮಯ ಲಿಂಗವಾಯಿತ್ತು. ಬಳಿಕಾ ಗುರುಸೇವೆಯುಂ ಮಾಡು
ತ್ತಿರಲು ಇತ್ತ ನಂದರಾಜನು ಕೆರೆಯುಂ ತೆಗಿಸುವಾಗ ಎಷ್ಟುದ್ದವಗಿದರೂ
ನೀರೇಳದಿರಲು ಶಿಲ್ಪಿಯ ಬಲ್ಲವನು ನಡುವಣ ತೆಗೆದರೆ ನೀರು ಬಂದೀ
ತೆಂದು ನಂದರಾಜಗೆ ಪೇಳಲು ಅವರು ಈ ಕಲ್ಲು ಉರಿಲಿಂಗದೇವರು
ನೋಡಿದಲ್ಲದೆ ಬಾರದೆಂದು ನಂದರಾಜನು ಗುರು ಶಿಷ್ಯರಿಬ್ಬರನು ಕರಿಸಿ
ತೋರಲು ಆಗ ಪೆದ್ದಣ್ಣನು ತನ್ನ ಲಿಂಗವ ಜಾದಗಿಡಿಚ ಎನಲು ಆ
ಕಲ್ಲಮೇಲೆ ಲಿಂಗ ಕುಳಿತು ಗೆಜಾದಗಿಡಿಚ ಎನಲು ಆ ಕಲ್ಲ ಕಿತ್ತುಹಾಕಿತ್ತು.

ಆಗ ಕೆರೆಗೆ ನೀರು ಬಂದವು. ನಂದರಾಜ ನಮಿಸಿ ಕಳುಹಿದನು. ಬಳಿಕಾ ಉರಿಲಿಂಗದೇವರು ಪೆದ್ದಣ್ಣನ ಮಹಿಮೆಯ ಕಂಡು ಈತ ಗುರುಭಕ್ತ ನೆಂದರಿದು ತಾವು ಮುನ್ನಿತ್ತ ಕಲ್ಲ ಜ್ಯೋತಿರ್ಮಯ ಲಿಂಗವಾದುದ ಕಂಡು ಉರಿಲಿಂಗಪೆದ್ದಯ್ಯನೆಂಬ ಪೆಸರನೇ ಇಟ್ಟು ನಿಜೋಪದೇಶವಂ ಕೊಟ್ಟು ಭಕ್ತರ ಭಾವದಲ್ಲಿ ಶಿವ ನೆಲೆ ಗೊಂಬುದು ಸತ್ಯವೆಂದು ಅಗ ಮವ ನೋಡಿ "ಯಥಾ ಭಾವಸ್ತಥಾ ಸಿದ್ಧಿಃ" ಎಂದು ಉರಿಲಿಂಗದೇವರು ತವಗ್ಯಾಜ್ಞಾರ್ಯ ಪೀಠಕ್ಕೆ ಪಟ್ಟವಂ ಕಟ್ಟಿ ಗುರುಸಾಂಪ್ರದಾಯವ ನಡಿಸಿ ನಲು ಪೆದ್ದಣ್ಣಯ್ಯನು ಶಿವಭಕ್ತಿ ಅನುಗ್ರಹವನು ಕೊಟ್ಟು ಆಚರಿಸುತ್ತ ಕೆಲಂಬು ಕಾಲವಿರ್ದು ಮರ್ತ್ಯದ ಮಾಣಿಪ ತೀರಲು ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರನೆಂಬ ತಮ್ಮಿಷ್ಟಲಿಂಗದಲ್ಲಿ ಬೆರೆದು ನಿರ್ವಯಲಾದರು."

ಮೇಲ್ಕಂಡ ಚರಿತ್ರೆಯಿಂದ ಉರಿಲಿಂಗಪೆದ್ದಿಯು ಆರಂಭದಲ್ಲಿ ಎಂಥ ಮನುಷ್ಯನಿದ್ದನು ಮತ್ತು ಕಡೆಗೆ ಎಂಥ ಉಚ್ಚ ಪದವಿಯನ್ನು ಹೊಂದಿ ದನು ಎಂಬುದನ್ನು ನೋಡಿದಲ್ಲಿ ಯಾರಾದರೂ ಕೂಡ ಚಕಿತರಾಗು ವಂತೆ ಇದೆ. ಆರಂಭದಲ್ಲಿ ಇವನು ಕಳವು ಮಾಡುತ್ತಲಿದ್ದು ಒಬ್ಬ ಮಹಾತ್ಮನ ಸಾನ್ನಿಧ್ಯದಿಂದ ತನ್ನ ದುರ್ಗುಣಗಳನ್ನು ಬಿಟ್ಟು ಅವನ ಸೇವೆ ಯಲ್ಲಿ ನಿರತನಾದನು. ಕಡೆಗೆ ಅವನ ಕಡೆಯಿಂದ ದೀಕ್ಷೆಯನ್ನು ಹೊಂದಿ ದನು ಇಷ್ಟೇ ಅಲ್ಲ, ಅವನು ಆಚಾರ್ಯ ಪೀಠವನ್ನು ಸಹ ಏರಲು ಅರ್ಹತೆಯನ್ನು ಪಡೆದನು. ಈ ಸ್ಥಿತಿಯನ್ನು ಹೊಂದಲಿಕ್ಕೆ ಅವನ ವಿಶೇಷ ಪಾಂಡಿತ್ಯವೇ ಕಾರಣವಾಗಿರಬೇಕು ಎಂಬದನ್ನು ನಾವು ಅವನ ವಚನಗಳ ಮೂಲಕ ಊಹಿಸಬೇಕಾದುದಾಗಿರುವದು.

ಆದರೆ ನಾನು ಮುಂದೆ ವಿವರಿಸುವ ವಿಷಯಗಳನ್ನು ವಾಚಕರು ಅವಲೋಚಿಸಿದರೆ ಅವರಿಗೆ ಮತ್ತಿಷ್ಟು ಆಶ್ಚರ್ಯವಾಗದೆ ಇರದು. ಅದೇ ನೆಂದರೆ,

ನಾಲ್ಕಾರು ತಿಂಗಳುಗಳ ಹಿಂದೆ ಒಬ್ಬ ಮನುಷ್ಯನು ತಾನು ಕಲ್ಯಾಣ ಸೀಮೆಯವನೆಂದು ಹೇಳಿ ನನಗ ವಿಜಾಪುರದಲ್ಲಿ ಬೆಟ್ಟಿಯಾದನು. ಶಿವಾನುಭವ ಪತ್ರಿಕೆಯಲ್ಲಿ ಉರಿಲಿಂಗಪೆದ್ದಿಯ ವಚನಗಳನ್ನು ನಾನು ಪ್ರಸಿದ್ಧಿಸುತ್ತಿರುವದನ್ನು ಕೇಳಿ ಅವನು ನನಗೆ ಕಾಣಲಿಕ್ಕೆ ಬಂದದ್ದು ತಿಳಿಯಿತು. ಅವನು ನನಗೆ, ತಾನು ಉರಿಲಿಂಗಪೆದ್ದಿಯ ಮತಾಧಿಕಾರಿ ಎಂದು ಹೇಳಿದನು. ಆಗ ಅವನ ಬಗ್ಗೆ ನಾನು ವಿಚಾರ ಮಾಡು

ತ್ತಿರಲು ಅವನು ಅಸ್ಪೃಶ್ಯನೆಂದು ತಿಳಿದು ಬಂದಿತು. ಉರಿಲಿಂಗಪೆದ್ದಿಯ ಮಠಗಳು ಈಗ ನಾಲ್ಕು ಇದ್ದು ಅವೆಲ್ಲವೂ ಅಸ್ಪೃಶ್ಯರವೆಂದು ನನಗೆ ತಿಳಿಯಿತು. ಅವು ಕಲ್ಯಾಣ, ಸೇಡಮುನಿಂದ ಹದಿನೈದು ಮೈಲುಗಳ ಮೇಲಿರುವ ಕೊರಳಿ, ಭಲ್ಕಿ ಮತ್ತು ಬೇವಿನ ಚಿಂಚೋಳಿ ಎಂಬ ಗ್ರಾಮುಗಳಲ್ಲಿ ಇರುತ್ತವೆ. ಉರಿಲಿಂಗಪೆದ್ದಿಯ ಸಮಾಧಿಯು ಕಲ್ಯಾಣದಲ್ಲಿ ಇದ್ದು ಅದು ಉರಿಲಿಂಗಪೆದ್ದಿಯ ಮಠವಲ್ಲಿಯೇ ಇದೆ. ಇವರ ಮಠಾಧಿಕಾರಿಯೇ ನೆನಗೆ ಭೆಟ್ಟಿಯಾದವನು. ಆದರೆ ಅವನಿಗೆ ಉರಿಲಿಂಗಪೆದ್ದಿಯ ವಿಷಯವಾಗಿ ಹೆಚ್ಚಿಗೆ ಯಾವ ಮಾಹಿತಿಯು ಇರಲಿಲ್ಲ. ಈ ನಾಲ್ಕೂ ಮಠಗಳಲ್ಲಿಯವರು ಲಿಂಗಧಾರಿಗಳಾಗಿದ್ದು ಪೂರ್ಣ ಶಿವಾಚಾರಿಗಳಾಗಿ ವರ್ತಿಸುತ್ತಾರೆ. ನನ್ನನ್ನು ಕಂಡವನು ವಾಡಿಕೆಯಾಗಿ ಈಗ ತಾಂಡೂರದ ಸಮೀಪದಲ್ಲಿರುವ ಮುಲ್ಲರಡ್ಡಿಪಲಿ ಎಂಬ ಗ್ರಾಮದಲ್ಲಿರುತ್ತಿದ್ದು ಅವನ ಹೆಸರು ರಾಮುಲಿಂಗಯ್ಯ ಶಿವಜಂಗಮ ಎಂದು ಇರುತ್ತದೆ. ಮೇಲ್ಕಂಡ ಗ್ರಾಮುಗಳಲ್ಲಿ ಈಗ ಉರಿಲಿಂಗಪೆದ್ದಿ ಮಠಗಳು ಇವೆಯೇ ಹ್ಯಾಗೆ ಎಂಬದನ್ನು ನಾನು ಬೇರೆ ರೀತಿಯಿಂದ ಶೋಧಿಸಲು ಅವು ಇದ್ದ ಹಾಗೆ ವಿಶ್ವಸನೀಯವಾಗಿ ನನಗೆ ತಿಳಿದು ಬಂದಿರುತ್ತದೆ.

ಈ ಪ್ರಕಾರ ಒಬ್ಬ ಮಹಾತ್ಮನಾದ ಮತ್ತು ಅತ್ಯಂತ ಪ್ರಸಿದ್ಧನಾದ ವಚನಕಾರನ ಚರಿತ್ರೆಯ ಮೇಲೆ ಯಾವ ಬಗೆಯ ಪ್ರಕಾಶವು ಬೀಳುತ್ತದೆಂಬವನ್ನು ನಾವು ವಿಚಾರಮಾಡಿದಲ್ಲಿ ಬಸವೇಶ್ವರನ ಕಾಲದಲ್ಲಿ ಎಲ್ಲ ಬಗೆಯ ಜನರ ಮೇಲೆ ಎಂಥ ಕ್ರಾಂತಿಕಾರಕ ಅದ್ಭುತ ಪರಿಣಾಮಗಳಾದವೆಂಬದನ್ನು ನಾವು ಇದರಿಂದ ಚನ್ನಾಗಿ ಊಹಿಸಬಹುದಾಗಿದೆ.

ಅನೇಕರು ಕಲ್ಯಾಣ ಪಟ್ಟಣವನ್ನು ನೋಡಿ ಬಂದಿರುವರು. ಅವರ ಅನೇಕ ಲೇಖಗಳು ಶಿವಾನುಭವ ಪತ್ರಿಕೆಯಲ್ಲಿ ಪ್ರಸಿದ್ಧವಾಗಿವೆ. ಆದರೆ ಉರಿಲಿಂಗಪೆದ್ದಿಯ ಮಠವನ್ನು ಯಾರೂ ಉಲ್ಲೇಖಿಸಿದ್ದು ಕಂಡು ಬರುವದಿಲ್ಲ. ಅದೊಂದು ಅಸ್ಪೃಶ್ಯರ ಮಠವೆಂದು ಅಲ್ಲಿ ಅಪ್ರಸಿದ್ಧಸ್ಥಿತಿಯಲ್ಲಿ ಇರಬಹುದು. ಆದರೆ ಈ ವಚನಕಾರನ ಯೋಗ್ಯತೆಯು ವಚನ ವಾಙ್ಮಯದಲ್ಲಿ ಅತ್ಯಂತ ಶ್ರೇಷ್ಠ ತರಗತಿಯದು ಇದೆ. ಅವನು ವೀರಶೈವ ಮತದ ತತ್ವಗಳನ್ನು ಪ್ರಸಾರ ಪಡಿಸುವಲ್ಲಿ ಬೇರೆ ವಚನಕಾರರಿಂದ ಭಿನ್ನವಾದ ಹೊಸಹಾದಿಯನ್ನು ಹಿಡಿದಿರುವನು. ಇಂಥ ಮಹಾತ್ಮನ ಸಮಾಧಿ ಸ್ಥಳವನ್ನು ಸರಿಯಾಗಿ ಕಾಯ್ದಿರಿಸಿ ಅದಕ್ಕೆ ಮನ್ನಣೆ ಕೊಡುವದು ವೀರಶೈವ ಸಮಾಜದ ಆದ್ಯ ಕರ್ತವ್ಯವಾಗಿರುತ್ತದೆ.

ಉರಿಲಿಂಗಪೆದ್ದಿಯ ಚರಿತ್ರೆ.

ಮೇಲ್ಕಂಡ ಸಂಗತಿಗಳ ಮೇಲಿಂದ ಗುರುಲಿಂಗಪೆದ್ದಿಯ ಚರಿತ್ರೆಯು ಯಾವದಿರಬಹುದೆಂಬದನ್ನು ಈಗ ನಾವು ಊಹಿಸತಕ್ಕದ್ದಾಗಿದೆ. ನಾವು ಕೆಳಗೆ ಕಾಣಿಸುವ ವಿವರಣೆಗಳು ಸಂಭವನೀಯವೋ ಹ್ಯಾಗೆ ಎಂಬದನ್ನು ವಾಚಕರು ವಿಚಾರ ಮಾಡಿ ನೋಡಬೇಕೆಂದು ನಾವು ಸೂಚಿಸುತ್ತೇವೆ.

ಉರಿಲಿಂಗಪೆದ್ದಿಯು ತೆಲಗು ಸೀಮೆಯಲ್ಲಿಯ ಅವಸಿಕಂದಾರ ಎಂಬ ಪಟ್ಟಣದವನು. ಅವನು ಕೀಳ ಜಾತಿಯವನು. ಬಹುಶಃ ಅಸ್ಪೃಶ್ಯನಾಗಿರಬೇಕು. ಹುಲ್ಲು ಕಟ್ಟಿಗೆಯನ್ನು ಹೊತ್ತು ತಂದು ಮಾರುವ ಉದ್ಯೋಗದವನಾಗಿರಬೇಕು. ಆದರೆ ಅವನು ತನ್ನ ಈ ಉದ್ಯೋಗವನ್ನು ಬಿಟ್ಟು ಕಳವು ಮಾಡುವಲ್ಲಿಯೇ ಕಾಲಕಳೆಯುತ್ತಿದ್ದನು. ಆದೇ ಗ್ರಾಮದಲಿ ಉರಿಲಿಂಗ ದೇವನೆಂಬ ಒಬ್ಬ ಮಹಾ ಶಿವಶರಣನು ವಾಸಿಸುತ್ತಿದ್ದನು. ಅವನು ಆರಾಧ್ಯನು, ಗುರುಸ್ಥಳದವನು, ಉಪದೇಶವನ್ನು ಮಾಡುತ್ತ ದೀಕ್ಷಾದಿ ಕಾರ್ಯಗಳನ್ನು ನಡಿಸುತ್ತಿದ್ದನು. ಒಂದು ದಿನ ಉರಿಲಿಂಗಪೆದ್ದಿಯು ಕಳವು ಮಾಡಲು ಹೋದಾಗ್ಗೆ ಉರಿಲಿಂಗ ದೇವನ ಭಕ್ತಿಯುಕ್ತ ಲಿಂಗಾರ್ಚನಾದಿ ಕಾರ್ಯಗಳನ್ನು ಅಕಸ್ಮಾತ್ತಾಗಿ ನೋಡಿ ಅವನಲ್ಲಿ ಭಕ್ತಿಯು ಉಬ್ಬವಿಸಲುತನ್ನ ಕೆಡಕು ವೃತ್ತಿಯನ್ನು ಬಿಟ್ಟುಕೊಟ್ಟು ಉರಿಲಿಂಗ ದೇವನ ಸೇವೆಯಲ್ಲಿ ತತ್ಪರನಾದನು. ಆದರೆ ಅವನು ಕೀಳ ಕುಲದವನಾದ್ದರಿಂದ ಮೊದಲು ದೀಕ್ಷೆಯನ್ನು ಕೊಟ್ಟಂತೆ ತೋರಲಿಲ್ಲ. ಆದರೆ ಮುಂದೆ ಅವನ ಭಕ್ತಿಯನ್ನು ನೋಡಿ ಉರಿಲಿಂಗ ದೇವನು ಅವನಿಗೆ ದೀಕ್ಷೆಯನ್ನು ಮಾಡಿದನು. ಇದಾದ ಬಳಿಕ ಉರಿಲಿಂಗಪೆದ್ದಿಯು ಅನೇಕ ಗ್ರಂಥಗಳನ್ನು ಓದಿ ಅತ್ಯಂತ ಪಾಂಡಿತ್ಯವನ್ನು ಸಂಪಾದಿಸಿರಬೇಕು. ಮತ್ತು ಅವನ ಗುರುವು ಉರಿಲಿಂಗ ದೇವನು ತೀರಿಕೊಂಡ ಬಳಿಕ ಅವನ ಸ್ಥಾನದಲ್ಲಿಯೇ ಪಟ್ಟಾಧಿಕಾರವನ್ನು ಪೊಂದಿರಬೇಕು. ಈ ಪ್ರಕಾರ ಸಂಭವಿಸಿದ ಹಾಗೆ ತೋರುತ್ತದೆ.

ಹೀಗೆ ಪಟ್ಟವಾದ ಬಳಿಕ ಉರಿಲಿಂಗಪೆದ್ದಿಯು ಕಲ್ಯಾಣಕ್ಕೆ ಬಂದು ವಾಸಿಸಿದನೆಂದು ತೋರುತ್ತದೆ. ಯಾಕಂದರೆ ಅವನ ಸಮಾಧಿಯು ಅಲ್ಲಿ ಈಗಲೂ ಇದೆ. ಕಲ್ಯಾಣ ಪಟ್ಟಣವು ಪೂರ್ಣವಾಗಿ ಹಾಳಾಗುವ ಪೂರ್ವದಲ್ಲಿ ಅಥವಾ ಬಸವೇಶ್ವರನ ಕಾಲದಲ್ಲಿ ಅವನು ಕಲ್ಯಾಣಕ್ಕೆ ಬಂದಿರ

ಬೇಕು. ಬಿಜ್ಜಳನ ತರುವಾಯ ೫೦—೬೦ ವರ್ಷ ಕಲಚೂರ್ಯರ ರಾಜ್ಯವು ಅಸ್ತಿತ್ವದಲ್ಲಿ ಇತ್ತು. ಈ ಅವಧಿಯಲ್ಲಿ ಒಂದಾನೊಂದು ಕಾಲದಲ್ಲಿ ಉರಿಲಿಂಗ ಪೆದ್ದಿಯು ಕಲ್ಯಾಣಕ್ಕೆ ಬಂದಿರಬಹುದು. ಯಾಕಂದರೆ ಕಲ್ಯಾಣವು ಪೂರ್ಣವಾಗಿ ಹಾಳಾದ ಬಳಿಕ ಅವನು ಅಲ್ಲಿಗೆ ಬರುವ ಸಂಭವವಿಲ್ಲ. ಅಂತು ಉರಿಲಿಂಗಪೆದ್ದಿಯು ಬಸವೇಶ್ವರನ ಕಾಲದವನು ಎಂದು ಹೇಳಬಹುದು.

ಉರಿಲಿಂಗಪೆದ್ದಿಯಂಥ ಕೀಳಜಾತಿಯವನು ವೀರಶೈವರಲ್ಲಿ ಬಹು ಮಹತ್ವದ ಸಮಾಜವಾದ ಆರಾಧ್ಯ ಪಂಗಡಕ್ಕೆ ಹೊಂದಿದ ಗುರುವಿನ ಅಧಿಕಾರ ಸ್ಥಾನವನ್ನು ಅಲಂಕರಿಸಬೇಕಾದರೆ ಶಿವಶರಣರ ವಿಶಾಲವಾದ ತತ್ವಗಳು ಅವನಿದ್ದ ಕಾಲದಲ್ಲಿ ಇನ್ನೂ ಪ್ರಚುರತೆಯಲ್ಲಿ ಇರಬೇಕು. ಆದರೆ ಕೆಲವು ಕಾಲದ ಮೇಲೆ ಜಾತಿಭೇದದ ವಿಚಾರಗಳು ಸಮಾಜದಲ್ಲಿ ಉತ್ಪನ್ನವಾಗಲು ಉರಿಲಿಂಗಪೆದ್ದಿಯು ಮತಾಧಿಪತಿಯಾದ್ದರಿಂದ ಮುಂದೆ ಅಸ್ಪೃಶ್ಯರ ಮತವೆಂದು ಅದು ಅಪ್ರಸಿದ್ಧವಾಗಿ ಉಳಿದಂತೆ ತೋರುತ್ತದೆ. ಆದರೂ ಈ ನಾಲ್ಕೂ ಮಠಗಳು ವೀರಶೈವರ ಆರಾಧ್ಯ ಮಠಗಳೇ ಇರುತ್ತವೆ.

ಉರಿಲಿಂಗಪೆದ್ದಿಯು ಈ ಚಿತ್ತವೇಧಕವಾದ ಚರಿತ್ರೆಯಿಂದ ಅವನು ಹರಳಯ್ಯ, ಕಕ್ಕಯ್ಯ, ಚನ್ನಯ್ಯ, ಮೊದಲಾದ ಶಿವಶರಣಗೆ ಸಮಾನನಾಗಿರುವನೆಂದು ಕಂಡು ಬರುವದು. ಇವನ ಉಚ್ಚತರ ವಚನಗಳನ್ನು ಉದಹರಿಸದೆ ಇದ್ದ ಯಾವ ವಚನ ಸಂಗ್ರಹಕಾರನು ವಚನ ವಾಙ್ಮಯದಲ್ಲಿ ದೊರಕುವದಿಲ್ಲ. ಇಷ್ಟು ಈ ಮಹಾತ್ಮನ ಯೋಗ್ಯತೆಯು ಇರುತ್ತದೆ.

ಬ್ರಹ್ಮಪಕ್ಷಿ.

೧

ಆದಿಯನಾದಿಯ ಆಜೆಗೆ ಆಜೆಗೆ,
ನಾದಬಿಂದುಕಳೆಯಾಜೆಗೆ ಆಜೆಗೆ,
ನೋಟಕು ನಿಲುಕದ, ನುಡಿಗೂ ಸಿಲುಕದ,
ಮಾಟದ ಆಜೆಯ ಮಾಟಕು ಉಲುಕದ,
"ಏನೇನಿಲ್ಲಿಂ" ಬುವ ಆ ಪಕ್ಕಿ
ತಾನೇ ತಾನಾಗಿದ್ದಿತು ಉಕ್ಕಿ!

೨

ಬೊಮ್ಮವಕ್ಕಿಯದು ಎಂತೋ ಏನೋ,
ಸುಮ್ಮನಿರದೆ ಸಲ್ಲೀಲೆಗೆ ಏನೋ,
ಹೊಟ್ಟೆವಂದು ತಾ ತನ್ನ ಬಗೆಯೊಳೀ,
ಇಟ್ಟಿತು ಅನೇಕ ತತ್ತಿತತ್ತಿಗಳ!
ಒಂದೊಂದರೊಳೇ ಅಗಣಿತ ತತ್ತಿ!
ಕುಂದದೊಳಗಿಹುದು ಜೀವದ ಜ್ಯೋತಿ!

೩

ಗಣನೆಗೆ ಮೀರಿಹ ತತ್ತಿಗಳಿಡುತಲಿ,
ಅನಿಶವು ಅವುಗಳ ಮೇಲ್ಕಾಯುತಲಿ,
ಮುಗಿಯದ ಪ್ರೇಮದ ಕಾವನು ಕೊಡುತಲಿ,
ಒಗೆಯಿಸುತಿವೆ ತನ್ನೋಲಿಹ ಮರಿಗಳ!
ಎರಕದ ಕಾಪಿಗೆ ಜೀವವು ಹಿಗ್ಗಿ
ಹೊರಬರಲೆಳಸುದು ಮೇಲಕೆ ನುಗ್ಗಿ!

೪

ತತ್ತಿಯ ಒಳಗಣ ಎನಿತೊ ತತ್ತಿಗಳು
ಮುತ್ತಿದ ಭಾವದ ಭರದ ಕುತ್ತಿನಲಿ

ಕೆಳಕೆಳಗಿಳಿಯಲು, ಪ್ರೇಮದ ಬಿಸುಪನು
ತಲುಪಲವಕೆ ತಡವಹುದೆನಿತೋ ದಿನ।

ಕುತ್ತನು ಮೆಟ್ಟುತ ಮೆಲಕ್ಕೆದ್ದ
ತಪ್ತಿಗೆ ಕಾವದು ಸಿಗುವದು ಸಿದ್ಧ!

೫

ಕಾಪಿನ ಬೆಳಕಲಿ ಒಳಗಣ ಜೀವವು
ಆ ಪಕ್ಕಿಯ ಬೆಳಗುವ ಚಿದ್ರೂಪವ
ದಿಟ್ಟಿಸಿ, ನಲಿಯುತಲುಲಿಯಲು ಹಾರಲು
ಘಟ್ಟನೆ ಹೊರಬಹುದವ ತಾ ಸೇರಲು!

ಈ ಪರಿ ತತ್ತಿಗಳಿಲ್ಲವ ನೊಡೆದು
ಆ ಪಕ್ಕಿಯು, ಜೀವವು ಸೇರುವದು!

೬

ಬೊಮ್ಮವಕ್ಕಿಯದು, ಅನಂತಕಾಲದಿ
ಬೊಮ್ಮವರಿಗಳನು ಪುಟ್ಟಿಸೆ, ಚಿತ್ತದಿ
ಮೆರೆಯುವ ಬ್ರಹ್ಮಾಂಡವ ತಾನಿಕ್ಕುತ
ಸುರಿಪುದು ಕಾವಿನ ಧಾರೆಯು ಸಂತತ!

ಬೊಮ್ಮನ ಮರಿಯಾಗುವ ಜೀವ
ನೆಮ್ಮಲುಬೇಕಾ ಬಗ್ಗವ!

ಆನಂದ ಭೈರವಿ ಆದಿತಾಳ.

ಜಗದೇಕ ವೀರನೆ ನಿನ್ನ ಬಣ್ಣಿಸಲೆಂತಹುದು। ರಗಪತಿ ¶ ವಾಗ್ಮಗು
ನ್ನತವಾಗಿರಲು ನಾನೀ। ಜಗದೊಳು ನುತಿಸಲೆಂತೆನ್ನಮತಿ ನಿನ್ನದಾಗಿ।
ಬಗೆದೋರಲುಸುರುವೆನು ಮುನ್ನ ಅರ್ಚಿಸಿದಂಥ। ಖಗರಾಡ್ಧ್ವಜರಿಂಗಗ
ಣಿತ ಭಾಗ್ಯನ। ನಿಗಮಾಗಮಂಗಳ್ನುತಿಸುವ ಶಕ್ತಿಯು। ಜಗಪಾಲನ ಜಗ
ಸೃಷ್ಟಿಯ ಮಾಲ್ಪಗ್ಗಳೆಯುದ ಸಿದ್ಧಿಯು। ಮಿಗಿಲಾಗುರೆ ದಿಗ್ವಲಯಾಧಿಪ
ರೋಲ್ಮೈಪಸ। ಮಗ್ರಾಗ್ರಣಿಗಳ ಮಾಡಿದಡಂದು ಬ್ರಹ್ಮಸುರ। ನಗರಿಯ
ನುಗ್ಗೊತ್ತುವ ನುನದೇಳ್ಗಿಯ ದನುಜರಂತರವ। ಬಗೆಯದೆ ಒರೆವೆನು
ಕರುಣಿಸಲಾಗಳೆ ಮು। ನಿಗಳ ಭಂಗಿಸಿ ವನವಾಸಕೆ ಆ ದಿವಿಜರ। ನಾಗಿ
ಸುತನುವರದಲಿ ಸುರರಾಜನ ಮರ್ದಿಸಿ ಘನವಸ್ತುವನೆಲ್ಲವ ಪುರಿಗೇರಿ
ಸಿಕೊ। ನೆನೆಘಗಕಂಜದೆ ಸ್ತ್ರೀಯರ ಪಿಡಿದಂತಿರದಲೆ ಆ; ಮಘವಾನನ
ಶಿಕ್ಷಿಸುತಿರುತಿರೆ ತ್ರಿದಶರು ಪೋಗಿ ಪದ್ಮಜನವರೆಯಲಿ ದೂರಲ್ಕಂಡು
ಕಮು। ಲಗರ್ಭನ ಮುಂದುಸುರಲ್ಬೇಗ ನಿನ್ನ ಮುಂದಿರದೆ। ಡೆಗೈತಂದೆಲ್ಲ
ದೂರಿ ಹೊಂದಿಸುತಲಿ ನುತಿಸಿದ। ರಾಗ ಶಾಶ್ವತನೆ ಸಲಹೆಂದೊರಲಿಂದ
ರಂ। ದಗಾಧಗರಳೊಳಿಸುತಲಿರೆ ಉಳುಹಿದೆಯೋ ದೇವ। ಈಗ ಮುಮು
ವಿಪತ್ತಿದು ಬಲುಹು ಯಮ್ಮನುದ್ಧರಿ। ಸಗ್ಗದ ಕರುಣಾರ್ಣವ ನಿನ್ನನು
ಮರೆ ಹೊಕ್ಕೆವು। ಈಗಲು ಕೃಪೆ ಮಾಡಿಯೆ ದನುಜರ ಗೆಲ್ವ ಉಪಾ। ಯ
ಗಳ್ನಿನೆಯೆಂದೆನುತಿಹ ಅನಿಮಿಷ ಶ್ರೇಷ್ಠರಿ। ಗಗಜಾ ರಮಣನೆ ಅಭಯವ
ನಿತ್ತು ತ್ರೈಪುರ। ದ ಘನನನು ಮುರಿಪೊಡೆ ಅನುವಾದೆಯೊ ಕೇ। ಳ್ಗಗನ
ಜೂಟ ನಾಂ ಪೊಗಳಲ್ಯರಿವೈ ॥ ೧ ॥

ವಾರಿಜೋದ್ಭವನ ವರದಿಂದ ನಿರಾಚರರಿಗಿಪ್ಪ। ಸೇರಿತಧಿಕ ಬಲ
ವೆಂದ ಶೌರಿಗೆ ಅದಿತಿ ಬಾಲರ। ಪೊರೆಯಬೇಕೆಂದು ನಿನ್ನಯ ನುಡಿಯ
ಕೇಳುತೆರಗಿ। ದರು ದಯ ಬಂದ ಈ ಹದನೆ ನಮಗ। ಪಾರ ಸುಖವು
ಸೇರಿತು ಎಂದಾ ದ್ವಿಜರೋಲ್ಮೈಸುತ। ಪರಮಾತ್ಮನೆಂದು ಜಂಭಾರಿ ಸತ್ತಿ
ಗೆಯ ಪಿಡಿಯಲು ರತ್ನದ। ಹಾರ ವಲಯಾಖಂಡದ ದಿಕ್ಪಾಲರು।
ಚೌರಿಗಲ್ಬೀಪಲ್ಕೀ ಧರಣಿಯೆ ರಥ ಚಂದ್ರ। ಸೂರ್ಯರೇ ಗಾಲಿಗಳ್ನಿಗಮಾಗಮ
ಗಳೆ। ತುರಂಗವು ಚಾರು ರಥದ ಸಾರಥಿ ಕೇಸ್ಸರಿಮುಖ। ಮೇರುಚಾಪ

¶ ಪಾಗಳಿಗೆ =ಪರಸ್ವತಿಗೆ

ನಾರಾಯಣ ಬಾಣವು । ಭೂರಿ ಭೂತ ಗಣ ವಾರ್ಬಲ ಕರಿಮುಖ ಕೇಣಿಗೊಂಡು ಸೇನಾಧಿಪತಿತ್ವದಿ ವೀ । ರ್ದರ ಶಿಕ್ಷಿಪ ಭವ್ಯಗಣದ ವೈಯಾರದೊಳೊಪ್ಪುತ । ರುದ್ರಮುಂದು ಪ್ರಮಥಾಳಿಗಳೆಡಬಲ ಒಪ್ಪು । ತಿರಲು ಜಯಭೇರಿ ಮುಖ್ಯ ವಾದ್ಯದ ಬಲು ರವ । ಧರೆ ಗೀಳಿಡೆ ಶಂಕರ ವೃಷಭನೊಡನೆ ಕೈಲಾ । ಗುರೆಯಿಂದಲಿ ಬಿಜಯುಂಗೈಯೆ ಜಯಲೋಲ ಜಾಹ್ನವೀ ರಮಣ ನಿನಗೆ ಸರಿ । ಯಾರೆನ್ನುತ ಪ್ರಣಾಮವು ರಭಸಂಗೊಡೆ ವಾರಹರನೆ ರಥವೇರುತ । ಕರದಲಿ ಭಾರಿ ಬಿಲ್ಲಿಡಿದು ಜೇಗೈಯಲು ಇ । ವರಾರು ಕದನಗೈತಂದಪರಾಗಲಿ ಕೋಳುಗೊಂಬೆ । ಹರಹರಿಗಳಾಗೆ ಭಯವೇನು ಏತಕೇ ತಡವೇ । ಳರೆಂಬ ಖಿಳರಾಳಿನೊಳಗೆ ಬಹುದಾಳಿ ಬರಲು ರಣಧೀರ । ಭೈರವನು ಮುಂಗುಡಿಯಲ್ಲಿ ತಡೆ । ದಾರು ಭಟಿಸೆ ಕೋಳಾಹಳ ವಾರ್ತೆಯ ಕೇಳುತಲ । ಸುರರ ಪಡೆ ಮುಸುಂಕೆ ಕಲ್ಮೇಘ ದಂತೆ । ವರುಷದ ತೆರ ಶರವಿರೆ ಮೀರಿತೆಂದು ಧನುವಿಗೆ ವಾರ್ಗಣಿ ರೌದ್ರಿಯ ಕರದಲಿ ಹೂಡಿದೆಯೈ ನೀನು ॥ ೨ ॥

ನೋಡಿ ನಿಂದವು ನೇತ್ರಗಳು ಸಾವಿರ ವರುಷಾಗೆ । ಕಂದಿ ಹರಿಯ ಜರ ಮೊರೆಗಳು ತಪಿಸುತಲಿ । ಖೇಡ (ದ?) ರಾದರು ಸುಮನಸಾದಿಗಳು ಅಷ್ಟರೊಳು । ಕೂಡಿ ತೋರಿತು ತ್ರಿಪುರ ಕೀಲುಗಳು ಅದ ಕಂಡು । ರುಂಡ ವಾಲಾಧರನೆ ಕೋದಂಡ ನಾರಿಯ ಸೇದಿ । ಬಿಡಲು ಅರ್ಭಟಿಸುತಾಗ । ಕಿಡಿ ಬಾಯೊಳುದುರೆ ಬಡಬನಂತೆಯು ಆ ತಾರಕ ಪುತ್ರರ ಪುರಕೆ । ನೀಡಿ ತುದಿನಾಲಗೆಯನು ಹೊರಗೊಳಗು ಇರ್ಪ । ಕಡು ವೀರರೊಡಲೊಳಾಗತಿ ರುಧಿರವನುರೆ । ತೋಡುತ ಕರುಳನು ಬಾಯೊಳೊಗಿಸಿ ಹವ್ಮೀರರ ಬಿಡವಟ್ಟೈಸಿ ಹಿಡಿದು ಹೋ । ಳ್ಮಾಡುತ ಮಿದುಳನು ನೀಡಿ ಭೂತಗಳ್ಗೀಡಿರಿಯುತ ಬಂದೊಡೆ ತಿವಿದು । ವೈಡೋರೆಗಳಿದು ನೀರೊಡೆ ನೆತ್ತರ್ತಲೆಯೋಡಿನೋಳ್ಮಡಿಸುತ । ಕಾಡಿ ಕೊಂದು ಪಾಳ್ಮಾಡೆ ನಗರ ಜನರೋಡಿ ಅಳ್ದರೆದುರೋಡಿ ಬಿಟ್ಟರಸು । ನೋಡಿ ಕೋಪ ಝಾಡಿಯುತ್ತ ಒಡಲು ಹುರಿಗೂಡಿ ಮನವು ಭಯ । ಬೇಡಿರೆಂದು ಭಾಳಾಂಬಕನೆದುರಡಹಾಯಿದು ಬಂದ ದಿಂಡೆಯರ ಕಂಡು ಹುರಿಮುರಿದೋಡಿಸೆ ಅಮರರ ಕಂಡು ಗಾಢ ಶಿವಿ ನೇತ್ರವಟ್ಟಿ ಅದನಾಡಲೇನು । ಗಾಢಾಂಧ ದಿನಪಗೇನ್ವಾಡೆ ಪುರಗಳ್ಸುಡಲಾರು ತಡೆವರಿನ್ನೇನು ಗತಿಯು ಹೊಯ್ದಾಡಿ ತವ್ಮೊಳಗೆ । ಬೇಡ ಹಡನ ವೈರವು ಮದನಾರಿಗೆ ಈಡೆ ಮದಡು ರಕ್ಕಸರೆನ್ನುತ ಸುಟ್ಟೂದಿ

ಗಳಾದರು ಗ । ರುಡ ಯಾನವುರ್ವಂತಾದರ್ಬುತಿಸಿ ಸುಖಿಯಾದರೆಂಬ ನುಡಿ ಈ ಧರೆಯೊಳು ಮಲ್ಲನಪುರ ವಾಸಿಯೋಳ್ಕೂಡಿ ನುಡಿಸಿದೆಯೊ ಸೋಮೆಕಟ್ಟೆ ಗುರುದೇವನೆ ॥ ವೃಡ ನೀನಲ್ಲದುಳಿದರಿಂದೇನು ಅಹುದೊ ದಯ । ವಾಡಿ ಕರುಣಿಸೈ ಭಜಕರ ಬಂಧು ॥ ೩ ॥

ಅಲಿಸ ಬಹುದಾದೊಡೆ ಅಭಯಂಗೊಡು । ಮೂಲ ಪ್ರಣವ ಮೂಲಿಗ ವಂದಿವಂದ್ಯ ವಿಶಾಲ ಮಹಿಮ ಶಾಂಭವಿ ಸುಖಲೋಲನೆ ಬಾಲನ ಬಿನ್ನಪವ ॥ ಪ ॥

ತಾನಲ್ಲದ ಜಡ ಭೌತಿಕ ತನುವಿದ ನಾನೆನ್ನುತ ಕರುಣಾಳ ವಿಷಯ ವಿಡಿ । ದೇನುಂಟಿಲ್ಲವನೆಸಗುತೆ ತತ್ಪಲ ಯೋನಿಗಳೊಳು ತೊಳಲಿ ॥ ಕಾನನದಲಿ ಕಾರ್ಗತ್ತಲೆ ಕವಿದಂಧ ನಿಕಾಯವಿದರೊಳು । ಭ್ರಮೆಗೊಡಲು ಶ್ವಾನ ಹೊಂದಿ ಶತಸಾವಿರ ಜನ್ಮಕೆ ತಾಳೆಯಳತಟಹುದೈ ॥ ೧ ॥

ಮಾನ ಸವಿದು ಮಾಯೆಯ ಕೈಯೊಳಗಣ ವೀಣೆಯಂತೆ ಸಂಸೃತಿಯೊಡಗೂಡುತ । ಸಾನುರಾಗ ಸಮ್ಮತಿ ಗತಿಲಯ ದುರಿತಾನುಬಂಧವಿಡಿದು । ಗಾನಗರಳ ಸಾಹಿತ್ಯವೆನಿಸಿ ಭವಕೇಣಿಯಾಂತು ಪಾಶಾಷ್ಟದಿಯಲಿ ಬಿನ್ನಾಣದೋರಿ ಬಿರಿದಾನುತಿದಿಕೊ ಕ್ಲೇಶಾನು ಮಥದೊಳೊಂದಿ ॥ ೨ ॥

ಹೀನ ವೃತ್ತಿ ಬೇಡೆಂದರೆ ಜಗದೊಳು ಅಣವಾದಿ ಮಲದ್ವಂಗು ಬಿಡದು । ಬಿಡೆ ಮಾಣಗೊಡದು ಆಶೆಯು, ಅದು ಬಿಟ್ಟರು ಮಾನಗರ್ವ ಬಿಡದೈ । ವೀನು ಗಾಣದೊಳು ಸಿಲುಕುವಂತೆ ಮಿಥ್ಯಾನುಭವದ ಬಯಕೆಯೊಳತಿ ದುಃಖವೆ ತಾನೆ ಒದಗಿ ತಪ್ಪಿಸಿಕೊಳಗೊಡದಿನ್ನೇನು ವಿಧಿಯ ಕೃತಿಯೊ ॥ ೩ ॥

ಏನು ಮಾಡಲಹುದಿನ್ನು ಇವಕೆ ಸುಖಗಾಣದ್ಪೋಯ್ತು ಕನಸಿನೊಳಾದರೂ ಶಿವ ನೀನೆ ಗತಿಯು ನಿರ್ಬಲನಹವರಿಗಿನ್ನೇನು ಹದನು ತಿಳುಪೈ । ಜೀನ ಬೋಟ ಜಕ್ಕುಲಿಗ ಕರಾಳರ ಶ್ರೇಣಿಯುಳಿದು ಆರಧ್ವತಿಳುಪೈ । ದೊಳತಿಶಯವೇನು ಅದರೊಳಾಸಕ್ತನಾಗಲಘುತಾನೆ ಕೆಡುತಲಿಹುದೈ ॥ ೪ ॥

ದಾನ ಯೋಗ ಜಪತಪ ನಿಯಮಾರ್ಚನೆ, ನ್ಯೂನವಿರದ ಸತ್ಕರ್ಮಗಳವು ಅಜ್ಞಾನ ತಮದ ಸೊಡರಂತೆಸೆವಖಿಳವದೇನು ಭಗಣ ಫಲವೈ

ಕಾಣಲರಿದು ಕಂಡರೂ ದಿಟವಾಗದು ಜ್ಞಾನಕಮಲ ವಿಕಸಿತವಹ ಪರಿ
ಯಂತೇನ ಮಾಡೆ ಜಡ ನೀನು ಒಲಿಯಲಜಡಹುದು ಭಾನುನಯನ ॥ ೫ ॥

ಜ್ಞಾನವೆನಲು ಜ್ಞಾಪಕದರಿವೆಂಬುದಕೇನು ಸಾಕ್ಷಿ ತತ್ಪದ ತ್ವಂಪದ
ಉಭಯಾನು ಬಂಧಿ ಭಾವದ ಬನೆ ಅಂಜನೆ ತಾನೆ ಆತ್ಮಸ್ಥಿತಿ ನೈ । ಧೇನು
ವಿನೊಳು ದಿವ್ಯಾವೃತವಿಹ ಪರಿ ತಾನೆ ನಿಜದ ನಿರ್ಮಲ ಪದಭಕ್ತಿ ನಿಧಾನ
ವದುವೆ ಸೋಹಂ ಸುಖ ಸಿದ್ಧಿ ಪ್ರಧಾನ ಕರ್ತೃ ನೀನೈ ॥ ೬ ॥

ಧ್ಯಾನ ಸಿನ್ನ ಧಾರಣವದು ಕಾರಣ ನೀನು ನಾನು ಎನ್ನಲು
ಭಿನ್ನಾಂಶವದೇನು ಇಲ್ಲ ಸತಿಪತಿರತಿಕೇಳಿಯೊಳೇನು ಭೇದವೈಸೆ ॥ ಸ್ವಾನು
ಭವ ಸುಖ ಭಾವನೆ ಅಗಣಿತಲೀನವಾಗಿ ಲಿಂಗಾಂಗ ನಿಜೈಕ್ಯನು ಮಾನ
ವಿರದ ಚಿತ್ಪರವಾಣುವೆ ನೀನೆ ಮಹತ್ಪೂರ್ಣೈ ॥ ೭ ॥

ಏನನೆಂಬೆ ಎಲ್ಲವ ನಿನಗೊಪ್ಪಿಸಿ ತಾನು ತಾವರೆಯ ಪತ್ರದಂತೆ
ಇರಲೇನು ರೂಪು ರುಚಿಯೇನು ತೃಪ್ತಿ ಬಳಿಕೇನು ಅವನೆ ನೀನೈಜ ॥
ನಿಬಂಧನೆಯ ಪೊಗಳಿ ಶ್ರುತಿಯು ಸನ್ಮಾನವೆತ್ತು ಸುಪ್ರಸನ್ನೆ ಇಹಪರಿ
ನಿನ್ನೇನು ಎನಲಿ ಸಹಜಾನುಭವಕೆ ನೀನಾನೆ ಎಂಬ ಹದನೈ ॥ ೮ ॥

ಅನು ಎಂಬ ಹಮ್ಮಳಿವ ಅಕಾರವೆ ತಾನೆ ಶಕ್ತಿ ಭಕ್ತಿಗೆ ಅದು
ಬೀಜವು । ಊಣಯಿರದ ಉನ್ಮನೆ ಉಚಿತಾಕ್ಷರವೇನೊ ಸಗುಣ ಬ್ರಹ್ಮೈ ।
ಮಾನವಾಂತ ಮಹಿಮಾದಿಕ ವರ್ಣವದೇನು ಸವಿಯೊ ಮಾಮಾ ಎನು
ತೆಲ್ಲರು ಏನು ಎನದೆ ಬೈಚಿಟ್ಟರದನು ಗುರು ತಾನೆ ಬಲ್ಲನೆಂದು ॥ ೯ ॥

ನೀನೆ ಒಲಿದ ಹದನಿದು ನಿರ್ಮಲ ಪದ ತಾನೆ ನೀಲತೋಯದಮ
ಧ್ಯಸ್ಥಿತ ಕೋಣೆಯೊಳಗೆ ಕಲಹಂಸಗೂಡಿ ನಿರ್ವಾಣವೈದುತಿರಲು ॥ ಕೇಣ
ವಿರದ ಬೆಳಗೆದ್ದು ನಭದೊಳದು ಲೀನವಾಗೆ ನಿಜದೊಳು ತಾನಾದ ಸು
ಮ್ಮಾನ ವಿಷಯ ಸುಖಶಂಧಿ ರುಚಿಗೆ ವಿಗಿಲೇನು ಇಲ್ಲ ತಿಳಿಯೈ ॥ ೧೦ ॥

ತನ್ನ ತಾಲು ಮೂಲದಿ ದ್ವಾದಶಜೆರಳುನ್ನತದಲಿ ಉದ್ಭವದುರಿ
ಲಿಂಗವು ಭಿನ್ನವಿರದೆ ಬೇರೆನಿಸದತುಳಸುಖವನ್ನೆ ತೀವಿಕೊಂಡು ॥ ಚನ್ನೆ
ಯರುಗಳಾರುತಿಯ ಸೊಡರಿನುತ್ಪನ್ನ ಕಾಂತಿ ಕಳೆ ಬೆಳೆಯನುಳಿದು ಬಾವನ್ನ
ಗೂಡಿ ಬಯಲಾಗುಳಿದಾಗಸ ನಿನ್ನ ರೂಪು ನಿಜವೈ ॥ ೧೧ ॥

ನೀನೆ ನಿರ್ಮಲನು ನಿತ್ಯಸುಖಿಯು ನಿರ್ವಾಯನೆಂದು ನಿಜಮುಂ
ತ್ಪದೊಳರೆ ಜಗವೇನು ಜಂಝುಡಿದು ಏನು ಇದರೊಳಗೇನು ಎಂಬ

ಬುದ್ಧಿ ತಾನೆ ಪುಟಿಸಿ ತಾತ್ವಿಕದೊಳು ಸಂವಿತ್ತನೆ ಅತ್ಯತದ್ಗತ ಅಮಲೈಕ್ಯ
ದೊಳೇ ನೀನರಿಯದಿಪ್ಪರ ಜೇರಿನಿಸದನೂನ ತೃಪ್ತಿ ನಿನಗೈ ॥ ೧೨ ॥

ಮಾನವಾಂಶ ಮಧ್ಯಮ ಪದಭಕ್ತಿಯೊಳೇನು ಎನಲು ತನುಮನಧನ
ನಿನ್ನಧೀನವಹುದು ದಯಮಾಡು ನೀನು ಭಜಕಾನನಮಣಿಮುಕುರ ಏನು
ಏಕೆ ಸುಮ್ಮನೆ ಇಹೆ ಭಕ್ತಾಧೀನನೆಂಬ ಬಿರುದ್ಹೋಯ್ತೆ ಈಗ ದಯಗಾ
ಣದಿರಲು ನಾನೇಕೆ ನನಗೆ ನೀನೇಕೆ ನಿಜದಗೊಡವೇತಕ್ಕಿನ್ನು ಬರಿದೆ ॥ ೧೩ ॥

ನೀನು ನಿನ್ನ ಸುಖಸಹಿತ ಇರಲ್ಕರಿದೇನು ಭವದಯಾಂಭ್ರಿಯ ನಿಜ
ಭಕ್ತಿನಿದಾನವಿಧಿ ಕೊ ತದ್ಗೃಹವಿದೆ ಎನ್ನಾಜ್ಞೇಯದೊಳುನ್ನತದಿ ॥ ಬಾನ
ಮುಖ್ಯ ನವವಿಧ ಭಕ್ಷ್ಯಗರ್ಭರಿವಾಣದಲ್ಲಿ ತುಂಬಿದ ಪರಾಯಿನ್ನೇನು ಮಂತ್ರದ
ಧೀನ ನೀನೆ ನಿನ್ನಾಯತಹುದು ಎನಗೈ ॥ ೧೪ ॥

ಕ್ಷೋಣಿಯೊಳಗೆ ಮಲ್ಲನಪುರಹೃದಯಾಬ್ಜನು ಸಂಗತವಿರುತಲಿ
ಸ್ನೇನಪೂರ್ವ ದಯಗಾಣಿಸಯ್ಯ ಮಹಪದಿನಪ ತೇಜ॥ ಶಾನೆ ಬೇಡ ಶಾಶ್ವತ
ಸುಖಪೊಂದನೆ ನಾನು ಕೇಳೆ ಕೇಳಲು ಬಯಕೆನ್ನದೆ ಪೂಗು ಎನುತ
ಸುಮ್ಮಾನದಳಿದು ಗುರು ನೀನೆ ನಿತ್ಯನೆನಿಸೈ ॥ ೧೫ ॥

ಶ್ರೀಸುಖಾನಂದಾಬ್ಧಿ ಶಾಶ್ವತ ಭಾಸವಾನ ಮಾನಸಾಂತ ।
ನಾಶರಹಿತ ನಮಾಮಿ ಭಕ್ತೋಲ್ಲಾಸ ಫಣಿಭೂಷ ॥ ಪ ॥

ದೋಷತಿಮಿರಪತಂಗಗಿರಿಕುಲವಾಸ ವಾಸವಾರ್ಚಿತಾಂಘ್ರಿ
ದೇಶಸುಭಾಸಮೇಳನದ ಅಭಿಲಾಷೆಗಭಯುಗೊಂಡು ॥ ೧ ॥

ಫಾಲನಯನಕಪಾಲಡಮರುಗಶೂಲಹಸ್ತಸುನೀಲಕಂಧರ
ಮೂಲಶಿರ ಶಿರಮೂಲ ಚಂದಿರ ಜಾಹ್ನವೀಧರನೆ॥
ಕೇಲಪುರನಿರ್ಮೂಲ ಕಾಲಕಾಲ ನಿಗಮವಿಶಾಲ ಮುನಿಕುಲ
ಶೀಲಚಿದ್ಘನರೂಪಭಸಿತ ಕಲಾಪ ನಿಜದೋರು ॥ ೨ ॥

ಆರುವರ್ಗದ ಘೋರತನುನನು ಮೀರಿತೋರುವ ಕಾರಣಾಂಗದ
ನೀರ ನೀ ಮೈದೋರು ನಿರುಪಮ ನಿತ್ಯ ಎನುಗೊಲಿದು ॥
ಮಾರಮರ್ದನ ಮಂತ್ರವಾಚ್ಯ ವಿಚಾರವಾಚಕ ದೂರದೂರದ
ಲಾರಿಗೆಯು ಇಷ್ಟಾರ್ಥವೀವ ಉದಾರಿ ಸರ್ವಜ್ಞ ॥ ೩ ॥

ಕಾವಕರುಣಿಯದಾವ ದೇವರದೇವ ನೀ ಜಗಪಾವನಾತ್ಮಕ
ಭಾವಗಮ್ಯ ಪಂಕಾರು ಭಜಕೋದ್ಧಾರಿ ಭವಹರನೆ ॥
ಓ ವಧುಪ್ರಿಯ ಅ ವ, ಶ, ಷ, ಸಂಭಾವನಾಧಿಪ ಅಷ್ಟದಳಗತಜೀವ
ಜೀವಜ್ಯೋತಿರಾಮಯ ಮೂರ್ತಿ ದಯವಾಗು ॥ ೪ ॥

ದಕ್ಷಮುಖದಧ್ಯಕ್ಷ ಶಿಕ್ಷಾಪೇಕ್ಷ ಗಣಕುಲಪಕ್ಷ ಪರತರ
ದುಕ್ಷಯಾನಗಜಾಜಿನಾಂಬರ ಅಕ್ಷಯಾತ್ಮಕನೇ ॥
ಕುಕ್ಷಿಯೊಳು ಈರೇಳು ಭುವನವ ರಕ್ಷಿಸುವ ಪರಮಾತ್ಮನಿನ್ನನು
ಈಕ್ಷಿಸಲ್ಕಳವಲ್ಲವೈ ಲಕ್ಷಾರ್ಧ ದಿನಮಣಿಯ ॥ ೫ ॥

ಬೋಧಮಯ ನೀನಾದ ಕಥನದಿ ಆದುದೈ ಉಪದೇಶ ಜಗದೊಳ
ಭೇದ ಭೇದ್ಯವೆಯಾಗಿ ಸೋಹಂ ಎಂದು ನಿಜತತ್ವ ॥
ಬೋಧಿಸುತ ಫಲಗೊಂಡು ಬ್ರಹ್ಮದ ಆದಿ ಅಂತ್ಯವದಾದ ನಿಷ್ಕಲ
ನಾದ ಗುರುವಾಗೆ ವಂದಿಸಲಾದೆ ಕೃಪೆಯಾಗು ॥ ೬ ॥

ರಾಮಣೀಯಕವಾದ ಶೈವೋದ್ಭಾಮತನು ಬಲಗೊಂಡು ಮಲ್ಲನ
ನಾಮಪುರದೊಳಗಾಪ್ತುಲಾ ಸುತ್ರಾಮ ವಂದ್ಯ ಪದ
ವ್ಯೋಮ ಭೂತಾತೀತ ಮುಕುತಿ ಸ್ತೋಮ ಸೋಮೆಕಟ್ಟಿ ಈಶನ
ನೇಮ ಸಿದ್ಧಿಯೊಳಾಗದೆ ನಿಸ್ಸೀಮ ನಿಜ ಸ್ತುತಿಯು ॥ ೭ ॥

ಸಾಮ ಗಾನಲೋಲ ಶಂಕರ ಪಾಹಿ ಸಾಮಗಾನಲೋಲ
ಸಾಮಜನನ ಪಿತ ಸೋಮಾಂಗನೆ ನಿತ್ಯ ಪ್ರೇಮಗೊಡೆನಗೆ ನೀ ॥
ಅಂಧಕಾಸುರ ಭಂಜನ ಬಂಧುರ ಭವ ಸಿಂಧು ಬಡಬಾನಲನ
ಇಂದುಶೇಖರ ಸುಂದರ ಜಾಹ್ನವೀಧರನೆಂದು ನುತಿಸುವಾನಂದವ
ಪಾಲಿಸು ॥ ೧ ॥

ಹರಿಹರಿಣಾಕರನೆ ಕರಕರಕೋಟಿ ಮಿರುಪತೈಜ ಸಮಾನೆ
ಹರಿ ಗಿರಿ ವಾಸನೆ ಹರಿ ಪುತ್ರ ನಾಶನೆ ವರಮೌನಿನುತನೆ ನೀ
ಪೊರೆದಂತೆ ಸಲಹೆನ್ನ ॥ ೨ ॥
ಅಜಹರಿಗಳವಡದ ನಿನ್ನನು ಈತು ಭಜಿಸಲಾದುದೇ ಮೋದ
ತ್ರಿಜಗದ ಒಡೆತನ ವಿಜಯ ವಿತ್ತವದೆಲ್ಲ ನಿಜ ಭಕ್ತರ ವಶವೆಂಬ
ನಿಜದಿ ನಾ ಸ್ತುತಿಸುವೆ ॥ ೩ ॥

ಕಾಮರೂಪಿಗಳಾದ ದಾನವ ಶಿರಸ್ತೋಮದೊಳರಗಳಿದ
ಭೀಮ ಭರ್ಗ ಶುಭನಾಮ ಸೋಮೆಕಟ್ಟಿ ಧಾಮ ಮಲ್ಲನ ಪುರ
ನೇಮಕ ಗೆರೆವೆ ನೀ ॥ ೪ ॥

ರಾಗ ಪಂತುವರಾಳಿ. ಆದಿತಾಳ.

ನಮೋನಮೋ ಎನ್ನುತ ನಮಿಸುತಲಿರ್ಪೆನು
ಕ್ರಮು ಗುರುವಿನ ಶ್ರೀಪಾದದಲಿ ॥
ತಮದುರಿತವ ಪರಿಹರಿಸುವ ದ್ಯುಮಣಿಯ
ಸಮದ ವಿರಕ್ತನ ಚರಣದಲಿ ॥ ೧ ॥

ನಿಗಮ ಶಾಸ್ತ್ರಗಳು ಅಗಣಿತ ಕಲಿ ಕೊಡೂ
ಜಗದ್ವಾಸನೆ ಬಗೆಯಾಂತಿಹುದು ॥
ಒಗುಮಿಗೆ ಭಕ್ತಿಯನಗಲದೆ ಇರ್ಪೊಡೆ
ಜಗದೀಶ್ವರ ಗತಿ ಮೆಚ್ಚು ಇದು ॥ ೨ ॥

ಸಂಕಲ್ಪವು ಸಿದ್ಧಿಗಳೆಂಬಿವುಗಳ
ಭೊಂಕನುಳಿದು ಮನ ಕೊಂಕದಲೆ ॥
ಅಂಕರಹಿತಶಶಾಂಕನ ತೇಜದಿ
ಶಂಕೆಯ ಮರೆದುರೆ ಶಾಂತಿಯಲಿ ॥ ೩ ॥

ಯಾಗದಾನಜಪನೀತಿಯು
ಯೋಗದ ಭೇದವು ಪೂಜೆಯು ಫಲವಿರಲಿ ॥
ಈಗ ನಿಜದಿ ನಿರ್ಮಲನಾಗದೆಯಿರೆ
ರೋಗಿ ಭೋಗಿ ಬರಿ ಕರ್ಮದಲಿ ॥ ೪ ॥

ನಾನೇ ಬ್ರಹ್ಮವು ಎನಲಹಂಕಾರವು
ನಾನಲ್ಲೆನಲದು ದೀನತ್ವ ॥
ನೀನೆ ಸಗುಣ ನಿಶ್ಚಿಂತನು ಎನಲು
ತಾನೇ ಸಾಧ್ಯವು ನಿಜತತ್ವ ॥ ೫ ॥

ಆಲಿಯ ನಿಲ್ಲಿಸಿ ಗಾಳಿಯ ಗೆಲ್ವುದು
ಮೇಲೆ ಮನಸು ಮನೆ ಗೂಡುವದು ॥
ಜಾಲ ಮೂಲ ಕಳೆದ್ಹೋಗಲು ಮಾಜದೆ
ಲೋಲ ಚಿತ್ತು ನಿಜ ಬೆಳಗುವುದು ॥ ೬ ॥

ಭಕ್ತಿಯಿಲ್ಲದಿರೆ ಮುಕ್ತಿಯು ದೊರಕದು
ಸತ್ಯವಾಕ್ಯ ಸಟಿಯಲ್ಲವಿದು ॥
ಯುಕ್ತಿ ಶಕ್ತಿ ಗತ್ತತ್ತ ವಿೂರಿ ಸದ್ಭಕ್ತರ
ಭಕ್ತಿಯೊಳಿರುತಿಹುದು ॥ ೭ ॥

ಸುಟ್ಟು ದುರಿತವನು ದಿಟ್ಟನಾದ ಬಳಿಕೆಷ್ಟು ದಿವಸ ಏತಕೆ ಮರೆವೆ ॥
ಭ್ರಷ್ಟನಾಗದತಿ ಕಟ್ಟು ಭವಕೆ ಹಿಪ್ಪೆಟ್ಟದಂತೆ ಸಾಧಿಸು ನಿಜವ ॥ ೮ ॥

ಸೋಮೆಕಟ್ಟೆಯ ನಾಮಕರ್ತ ಚಿದ್ಭೋಮಕಾಯ ಸದ್ಗುರುವರನು ॥
ಈ ಮುಲ್ಲನಪುರ ನೇಮಕ ಮನದಭಿರಾಮನಾಗಿರೆ ಒರೆದಿದನು ॥ ೯ ॥

ರಾಗ. ದೇಶಿ. ತೊರೆಆದಿತಾಳ.

ಕಂಡೆನು ಗುರುವರನ ಕರುಣಾಸಾಗರನ ॥ ಪ ॥
ಕಂಡೆ ಪೂರ್ವದಿ ನರಕದಂಡಲೆಯೊಳು ಸಿಲ್ಕಿ
ದ್ದಿಂಡು ಜೀವಿಗಳ ಶಿವ ಮಂಡಲಕೊಯ್ದ ನೀತ ॥ ೧ ॥
ಹಿಂದೆ ಪಾಳಾದುದ ಇಂದುವಸತಿಯ ಮಾಡ
ಲೆಂದು ಕಾಲನು ಇರೆ ಮಂದಹಾಸದಿ ಬಂದ ॥ ೨ ॥
ಕಾಲ ಕೋಪದಿ ಶಿವನ ಓಲೈಪ ಜನರನ್ನು
ಕಾಲಗೆಡಿಪ ಸುದ್ದಿ ಕೇಳಿದಾಕ್ಷಣಬಂದ ॥ ೩ ॥
ಭೂತಳದೊಳು ನಿಂತು ಖ್ಯಾತಿ ಮಂತ್ರದೊಳು, ಪು
ನೀತರ ಮಾಡಲು ಈತ ಬಂದೈದಾನೆ ॥ ೪ ॥
ಮರೆಯ ಮಾಯದ ತೆರೆ ಹರಿದು ಹಾಕುತ ನಿಜ
ದರಿವ ಸಾಧಿಸುವಂಥ ಗುರುತ ತೋರುವನೀತ ॥ ೫ ॥

ಶಿವಾನುಭವ ಗ್ರಂಥಮಾಲಾ ನಂ. ೪೩

ಉರಿಲಿಂಗಪೆದ್ದಿಯ ವಚನಗಳು.

ಸಂಪಾದಕರು
ರಾ॥ ಸಾ॥ ಫ. ಗು. ಹಳಕಟ್ಟಿ
ಬಿ. ಏ, ಎಲ್. ಎಲ್. ಬಿ.
ವಿಜಾಪುರ.

ಬೆಲೆ ೧ ರೂಪಾಯಿ.

ಪ್ರಸ್ತಾವನೆ.

ಉರಿಲಿಂಗಪೆದ್ದಿಯ ವಚನಗಳು ಒತ್ತಟ್ಟಿಗೆ ಎಲ್ಲಿಯೂ ದೊರೆಯುವದಿಲ್ಲ. ಆದರೆ ಆತನ ವಚನಗಳನ್ನು ಅನೇಕ ಸಂಗ್ರಹಕಾರರು ತಮ್ಮ ಗ್ರಂಥಗಳಲ್ಲಿ ಹೇರಳವಾಗಿ ಉದಹರಿಸಿರುವರು. ಅಂಥ ವಚನಗಳನ್ನು ನಾನು ಬೇರೆಯಾಗಿ ಆರಿಸಿ ತೆಗೆದು ಅವುಗಳನ್ನು ವಿಷಯಾನುಸಾರವಾಗಿ ವ್ಯವಸ್ಥೆಗೊಳಿಸಿ ಈ ಗ್ರಂಥವನ್ನು ರಚಿಸಿದ್ದೇನೆ. ಈ ಗ್ರಂಥದಲ್ಲಿ ಸಂಸ್ಕೃತ ಆಧಾರ ಶ್ಲೋಕಗಳು ಬಹಳವಾಗಿ ಬಂದಿರುತ್ತವೆ. ಅವೆಲ್ಲವೂ ಬಹುತರ ಅಶುದ್ಧವಾಗಿವೆ. ಅವುಗಳನ್ನು ಶುದ್ಧ ಪಡಿಸುವದು ಬಹು ಕಷ್ಟಕರವಾದ ಕೆಲಸವು. ಇದನ್ನು ವಾಚಕರು ಗ್ರಹಿಸಿ, ಈ ದೋಷವನ್ನು ಕ್ಷಮಿಸುವರೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಪ್ರತಿಯೊಂದು ವಚನದ ಭಾವವನ್ನು ಅದರ ಕೆಳಗೆಯೇ ಕೊಟ್ಟಿರುತ್ತೇನೆ. ಈ ಗ್ರಂಥದ ಮಹತ್ವವನ್ನು ವಾಚಕರು ಅರಿತುಕೊಂಡು, ಅದನ್ನು ಆದರಿಸುವರೆಂದು ನಂಬಿದ್ದೇನೆ.

ವಿಜಾಪುರ.
೧೬-೨-೩೬.

ಫ. ಗು. ಹಳಕಟ್ಟಿ.
ಸಂಪಾದಕ.

ವಚನ:— ೧೨೪. ಓಂನಮಃ ಶಿವಾಯ ಎಂಬುದೇ ಆಚಾರಲಿಂಗ ಓಂನಮಃಶಿವಾಯ ಎಂಬುದೇ ಗುರುಲಿಂಗ, ಓಂನಮಃಶಿವಾಯ ಎಂಬುದೇ ಶಿವಲಿಂಗ, ಓಂನಮಃಶಿವಾಯ ಎಂಬುದೇ ಚರಲಿಂಗ, ಓಂನಮಃಶಿವಾಯ ಎಂಬುದೇ ಪ್ರಸಾದಲಿಂಗ, ಓಂನಮಃಶಿವಾಯ ಎಂಬುದೇ ಮಹಾಲಿಂಗ, ಓಂನಮಃಶಿವಾಯ ಎಂದೆನಲು ಪರಶಿವನು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವ:— ಷಟ್‌ಸ್ಥಲ ಜ್ಞಾನವು ಅತ್ಯಂತ ಮಹತ್ವರವಾದದ್ದು. ಇದು ಪಂಚಾಕ್ಷರಿಯ ಜ್ಞಾನದ ಮೂಲಕ ದೃಢಪಡುವದು. ಭಕ್ತನಲ್ಲಿರುವ ಎಲ್ಲ ಲಿಂಗಗಳು ಪಂಚಾಕ್ಷರಿಯ ಸ್ವರೂಪದವೇ ಇರುತ್ತವೆ. ಅದನ್ನು ಧ್ಯಾನಿಸುವದರಿಂದ ಆಯಾ ಲಿಂಗಗಳು ವ್ಯಕ್ತವಾಗುವವು.

ವಚನ:— ೧೨೯. "ಸದ್ಗುರು ಶಿವಲಿಂಗಂಚ ಜಂಗಮಂಚ ಪ್ರಸಾದಕಂ। ಚತುರ್ವಿಧಂ ಷಡಕ್ಷರಂ ಮಂತ್ರಂ ಸಾಕ್ಷಾತ್ ಪರಶಿವಃ" ಓಂನಮ:ಶಿವಾಯ, ಓಂನಮಃಶಿವಾಯ ಎನ್ನದಿರ್ದೊಡೆ ಬಂಧನ. ಓಂನಮಃಶಿವಾಯ ಎಂದೊಡೆ ಮೋಕ್ಷ. "ಷಡಕ್ಷರ ಜಪಂ ನಾಸ್ತಿ ಸವೇಷಾ" ಬಂಧನಂ ತಥಾ। ತನ್ಮಂತ್ರ ಜಪತೋ ಭಕ್ತಃ ಸದ್ಯೋಸ್ಯೋಕ್ಷ ನ ಸಂಶಯಃ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಯ್ಯ ಬಂಧ ಮೋಕ್ಷ ತಾನೇ ಓಂನಮಃಶಿವಾಯ.

ಭಾವ:— ಇಲ್ಲಿ ಪಂಚಾಕ್ಷರಿಯ ಮಹತ್ವವನ್ನು ಪುನಃ ವಿವರಿಸಿರುವನು. ಅದರಿಂದ ಬಂಧನವು ದೂರಾಗಿ ಮೋಕ್ಷವು ಪಟಿಸುವದು.

ವಚನ:— ೧೩೦. ಶ್ರೀ ಮಹಾ ಪಂಚಾಕ್ಷರಿಯೇ ಸರ್ವ ಮಂತ್ರವೆಲ್ಲಕ್ಕೆಯೂ ಉತ್ಪತ್ತಿ ಸ್ಥಿತಿ ಲಯ ಸ್ಥಾನ. ಸರ್ವ ಕಾರಣವೆಲ್ಲಕ್ಕೆಯೂ ಮೂಲವು ಶ್ರೀಪಂಚಾಕ್ಷರಿ. ಅದಂತೆಂದಡೆ ॥ ಕಾಮಿಕಾಗಮೇ ॥ ಶ್ಲೋ ॥ ಸಪ್ತಕೋಟಿ ಮಹಾಮಂತ್ರಾ ಉಪಮಂತ್ರಾಸ್ತ್ವನೇಕಧಾ। ಪಂಚಾಕ್ಷರ್ಯಾಂ ಪ್ರಲೀಯಂತೆ ಪುನಸ್ತತ್ರವಿನಿರ್ಗತಾಃ ॥ ತಸ್ಮಿನ್ಸ್ಯೇಷಾಶ್ಚ ಶಾಸ್ತ್ರಾಣಿ ಮಂತ್ರ ಪಂಚಾಕ್ಷರೀ ತಥಾ। ಎಂದುದಾಗಿ ಇದು ಕಾರಣ ಶ್ರೀಪಂಚಾಕ್ಷರಿಯು ಸದ್ಭಕ್ತನೇ ವೇದವಿತ್ತು, ಆ ಸದ್ಭಕ್ತನೇ ಶಾಸ್ತ್ರವಾನ್, ಆ ಮಹಾಮಹಿಮನೇ ಪುರಾಣಕನು, ಆ ಮಹಾಮಹಿಮನೇ ಆಗಮಿಕನು, ಆ ಮಹಾಮಹಿಮನೇ ಸರ್ವಜ್ಞನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಎಲ್ಲ ಮಂತ್ರಗಳು ಪಂಚಾಕ್ಷರಿಯಿಂದಲೇ ಹುಟ್ಟಿವೆ. ಪಂಚಾಕ್ಷರಿಯುಳ್ಳವನೇ ನಿಜವಾದ ಭಕ್ತನು. ಅವನೇ ವೇದಜ್ಞನು, ಮಹಿಮನು, ಸರ್ವಜ್ಞನು ಎಂದು ಇಲ್ಲಿ ವಚನಕಾರನು ಹೇಳುತ್ತಾನೆ.

ವಚನಃ— ೧೩೧. ವೇದವಾವುದು ವೇದ್ಯನಾವುದು ಎಂಬುದನರಿತು ನಿಂದಾತನೇ ಕೃತಾರ್ಥನು, ವೇದವಿತ್ತು. ವೇದ್ಯನಿಂತಹನೆಂದರಿದು ವೇದಿಸಿದರು ನಮ್ಮ ಪುರಾತನರು. ಓಂನಮಃಶಿವಾಯ ಎಂಬ ಮಂತ್ರ ವೇದ್ಯರು ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಯ್ಯನ ಶರಣರು.

ಭಾವಃ— ನಿಜವಾದ ಶರಣರು ಪಂಚಾಕ್ಷರಿಯನ್ನು ಬಲ್ಲವರಿರುತ್ತಾರೆ. ಅವರೇ ಕೃತಾರ್ಥರು ನಿಜವಾದ ವೇದವಿತ್ತುಗಳು ಎಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಃ— ೧೩೨. ಓಂ ನಮಃಶಿವಾಯ ಎಂಬುದೇ ಮಂತ್ರ. ಓಂ ನಮಃಶಿವಾಯ ಎಂಬುದೇ ತಂತ್ರ, ಓಂನಮಃಶಿವಾಯ ಎಂಬುದೇ ಯಂತ್ರ, ಓಂನಮಃಶಿವಾಯ ಎಂಬುದೇ ವಶ್ಯ. ಇದು ಕಾರಣ ಓಂ ನಮಃಶಿವಾಯ ಎಂಬುದೇ ಸಕಲಸಿದ್ಧಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಪಂಚಾಕ್ಷರವೇ ನಿಜವಾದ ಮಂತ್ರ, ತಂತ್ರ, ಯಂತ್ರ, ವಶ್ಯವಿದೆ. ಇದರಿಂದಲೇ ಸಕಲ ಸಿದ್ಧಿ ಎಂದು ಹೇಳಿರುವನು.

ವಚನಃ— ೧೩೩. ಓಂನಮಃಶಿವಾಯ ಎಂಬುದೇ ವೇದ, ಓಂ ನಮಃಶಿವಾಯ ಎಂಬುದೇ ಶಾಸ್ತ್ರ, ಓಂನಮಃಶಿವಾಯ ಎಂಬುದೇ ಆಗಮ, ಓಂನಮಃಶಿವಾಯ ಎಂಬುದೇ ಪುರಾಣ, ಓಂನಮಃಶಿವಾಯ ಎಂಬುದೇ ಸಕಲ ಕಳೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಈ ಪಂಚಾಕ್ಷರಿಯೇ ವೇದ ಶಾಸ್ತ್ರಾಗಮಂಗಳು. ಅದೇ ಸಕಲ ಕಳೆ ಎಂದು ಹೇಳಿರುವನು.

ವಚನಃ— ೧೩೪. ಶ್ರೀ ಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದಿಂದ ಉಪಮನ್ಯುವಿಂಗೆ ಶಿವಜ್ಞಾನ ಸಿದ್ಧಿಸಿತ್ತು. ಶ್ರೀ ಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದ ಸಾಧನದಿಂದ ವಶಿಷ್ಠ, ವಾಮದೇವ ಮೊದಲಾದ ಸಮಸ್ತ ಋಷಿಗಳಿಗೆ ಹಿರಿದಪ್ಪ ಪಾಪದೋಷವು ಪರಿಹರಿಸಿತ್ತು. ಶ್ರೀ ಮತ್ಪಂಚಾಕ್ಷರಿಯ ಉಚ್ಚರಣದ ವಿಶ್ವಾಸದ ಸಾಧನದಿಂದ ಬ್ರಹ್ಮ ವಿಷ್ಣ್ವಾದಿ

ಗಳಿಗೆ ಜಗತ್ಸೃಷ್ಟಿರಕ್ಷಾಪತಿತ್ವ ಸಾಧ್ಯವಾಯಿತ್ತು. ಆದೆಂತೆಂದಡೆ, ಬ್ರಹ್ಮಾಂಡ ಪುರಾಣದಲ್ಲಿ ॥ಶ್ಲೋ॥ ಉಪಮನ್ಯುಃ ಪುರಾ ಯೋಗೀ ಮಂತ್ರೇಣಾನೇನ ಸಿದ್ಧಿವಾನ್, ಲಬ್ಧವಾನ್ಪರಮೇಶಾನಾಚ್ಛೈವಾತ್ಪ್ರವರ್ತ್ಯತಾಂ। ಮತ್ತಂ॥ ವಿಷ್ಣು ಪುರಾಣದಲ್ಲಿ ॥ಶ್ಲೋ॥ ವಶಿಷ್ಠವಾಮದೇವಾದ್ಯಮೂ ನಪೋ ಮುಕ್ತ ಕಿಲ್ಬಿಷಾಃ। ಮಂತ್ರೇಣಾನೇನ ಸಂಸಿದ್ಧಾ ಮಹಾತೇಜಸ್ವಿನೋ ಭವನ್। ಎಂದುದಾಗಿ, ಮತ್ತಂ ಕೂರ್ಮ ಪುರಾಣದಲ್ಲಿ ॥ಶ್ಲೋ॥ ಬ್ರಹ್ಮಾದೀನಾಂಚ ದೇವಾನಾಂ ಜಗತ್ಸೃಷ್ಟ್ಯರ್ಥಕಾರಣಂ। ಮಂತ್ರಸ್ಯ ಸ್ಯೈವಮಾಹಾತ್ಮ್ಯಾತ್ತಾವಮರ್ಥ್ಯ ಮುಪಜಾಯತೆ ಎಂದುದಾಗಿ ಇಂತಪ್ಪ ಪುರಾಣವಾಕ್ಯಂಗಳನರಿದು ವಿಪ್ರರೆಲ್ಲರು ಶ್ರೀ ಪಂಚಾಕ್ಷರಿಯ ಜಪಿಸಿರೋ, ಜಪಿಸಿರೋ! ಮಂತ್ರಂಗಸುಂಟೆಂದು ಕೆಡಬೇಡಿ ಕೇಡಬೇಡಿ. ಮಕೆಯದಿರಿ ಮಹತ್ತಪ್ಪ ಪದವಿಯ ಪಡೆವೊಡೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರ ದೇವರ ದಿವ್ಯ ನಾಮವನು.

ಭಾವಃ— ಮಹತ್ತರವಾದ ಮೋಕ್ಷ ಪದವಿಯನ್ನು ಹೊಂದ ಬೇಕಾದರೆ ಪರಮಾತ್ಮನ ದಿವ್ಯ ನಾಮವನ್ನು ಪಂಚಾಕ್ಷರಿಯ ಮೂಲಕ ವಿಶ್ವಾಸಪೂರ್ವಕವಾಗಿ ಉಚ್ಚರಿಸಬೇಕು. ಹೀಗೆ ಈ ಮಂತ್ರವನ್ನು ಉಚ್ಚರಿಸಿ ವಶಿಷ್ಠ, ವಾಮದೇವಾದಿ ಋಷಿಗಳೂ ಬ್ರಹ್ಮ ವಿಷ್ಣ್ವಾದಿ ದೇವತೆಗಳೂ ಶ್ರೇಷ್ಠ ಪದವಿಯಗಳನ್ನು ಹೊಂದಿದ್ದರ ಉದಾಹರಣೆಗಳನ್ನು ಇಲ್ಲಿ ಕೊಟ್ಟಿರುವನು.

ವಚನಃ— ೧೩೫. ಓಂನಮಃಶಿವಾಯ ಓಂನಮಃಶಿವಾಯ ಎನ್ನದಿದ್ದರೆ ಬಂಧನ. ಓಂನಮಃಶಿವಾಯ ಓಂನಮಃಶಿವಾಯ ಎಂದರೆ ಮೋಕ್ಷ. ಷಡಕ್ಷರೀ ಜಪಂ ನಾಸ್ತಿ ಸರ್ವೇಷಾಂ ಬಂಧನಂ ತಥಾ। ತಸ್ಮಾತ್ಸ ಜಪತೋ ಭಕ್ತ್ಯಾ ಸದ್ಯೋ ಮೋಕ್ಷಂ ನ ಸಂಶಯಃ ಎಂದುದಾಗಿ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಯ್ಯ ನಂದ ಮೋಕ್ಷವು ಓಂನಮಃಶಿವಾಯ

ಭಾವಃ— ಪಂಚಾಕ್ಷರೀ ಮಂತ್ರ ಜಪದಿಂದ ಮೋಕ್ಷವು, ಮತ್ತು ಅದನ್ನು ಜಪಿಸದೆ ಇರುವದರಿಂದ ಬಂಧನವು. ಎಂದು ಹೇಳಿ ಇದರ ಸಮರ್ಥನಕ್ಕಾಗಿ ಉಕ್ತಿಗಳನ್ನು ಉದಹರಿಸಿರುವನು.

ವಚನಃ— ೧೩೬. ಅಗ್ರಜನಾಗಲಿ, ಜಂತ್ಯಜನಾಗಲಿ, ಮೂರ್ಖನಾಗಲಿ, ಪಂಡಿತನಾಗಲಿ, ಪಿಡಿದುವುದು ಪಂಚಾಕ್ಷರಿಯ. ಜಪದಿಂದ

ರುದ್ರನಪ್ಪದು ತಪ್ಪದು. ಅದೆಂತೆಂದಡೆ ಶೈಂಗ್ಯೆ, ಅಗ್ರಜೋ ಅಂತ್ಯಜೋ ವಾಪಿ ಮೂರ್ಖೋ ವಾ ಪಂಡಿತೋಪಿ ವಾ ಜಪೇತ್ಪಂಚಾಕ್ಷರೀ ಮಂತ್ರಂ ಸ ರುದ್ರೋ ನಾತ್ರಸಂಶಯಃ. ಇದಕ್ಕೆ ಶಪಥವ ಮಾಡಿದೆನು ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

ಭಾವಃ— ಪಂಚಾಕ್ಷರಿಯನ್ನು ಯಾವನು ವಿಶ್ವಾಸಪೂರ್ವಕವಾಗಿ ಜಪಿಸುತ್ತಾನೋ ಅವನು ರುದ್ರನಾಗುವನೆಂದು ಹೇಳಿ ಅದಕ್ಕೋಸ್ಕರ ವಚನಕಾರನು ಒಂದು ಉಕ್ತಿಯನ್ನು ಉದಹರಿಸಿರುವನು. ಈ ಮಂತ್ರವನ್ನು ಎಂಥ ಜಾತಿಯವನಾದರೂ ಜಪಿಸಿ ಶ್ರೇಷ್ಠಪದವನ್ನು ಹೊಂದಬಹುದೆಂದು ಹೇಳಿರುವನು.

ರುದ್ರಾಕ್ಷಿ.

ವಿವರಣೆಃ— ರುದ್ರಾಕ್ಷಿಯು ಈಶ್ವರನ ಚಿನ್ಹವಾಗಿದೆ. ಅದನ್ನು ವೀರಶೈವನು ತನ್ನ ದೇಹದಮೇಲೆ ಧರಿಸತಕ್ಕದ್ದೆಂದು ವಚನಕಾರನು ಮುಂದಿನ ವಚನಗಳಲ್ಲಿ ಹೇಳಿರುವನು.

ವಚನಃ— ೧೩೭. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಪಂಚಬ್ರಹ್ಮವೊದಲಾದ ಪಂಚಮುಖದ ರುದ್ರಾಕ್ಷಿಯ ಹಸ್ತ, ಬಾಹು, ಕರ್ಣ, ಕಂಠ, ಉರುಮಸ್ತಕಂಗಳಲ್ಲಿ ಧರಿಸಿಪ್ಪಾತನೇ ರುದ್ರನು. ಆ ಸದ್ಭಕ್ತನ ದರ್ಶನ ಸ್ಪರ್ಶನವ ಮಾಡಿದವರಿಗೆ ಭವರೋಗ ದುರಿತ ಮುಟ್ಟಲಮ್ಮವು ನೋಡಾ ಶ್ರುತಿ. ॥ ಅತ ಏವ ರುದ್ರಾಕ್ಷಧಾರಣಾದೇವ ರುದ್ರಃ ಎಂದುದಾಗಿ ರುದ್ರಪದವಿಯನೀವ ರುದ್ರಾಕ್ಷಿಯ ಧರಿಸಿಪ್ಪ ಶಿವಭಕ್ತಂಗೆ ಶರಣೆಂಬೆನಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಕೆಲವು ರುದ್ರಾಕ್ಷಿಗಳಿಗೆ ಪಂಚಮುಖಗಳಿರುವವು. ಈ ಮುಖಗಳು ಪಂಚಬ್ರಹ್ಮದ ಗುರ್ತುಗಳಾಗಿವೆ. ಇಂಥ ರುದ್ರಾಕ್ಷಿಗಳನ್ನು ಧರಿಸಿದರೆ ಭವರೋಗವು ಭಕ್ತನನ್ನು ಹೊದ್ದಲಾರದೆಂದು ಇಲ್ಲಿ ಹೇಳಿರುವನು.

ವಚನಃ—೧೩೮. ಘನಕ್ಕೆ ಘನ ಮಹಿಮೆಯ ಪಡೆವರೆ ಶ್ರೀರುದ್ರಾಕ್ಷಿಯನೆ ಧರಿಸುವುದು. ರುದ್ರಾಕ್ಷಿಯ ಧರಿಸಿಪ್ಪಾತನು ಮರ್ತ್ಯನಲ್ಲ ನೋಡಿರೇ. ಪಟ್ಟಿಮದಲ್ಲಿ ಒಂದು, ತಿಖಿಯಲ್ಲಿ ಮೂರು, ತಿಖಿಯಲ್ಲಿ ಮೂವತ್ತಾರು, ನಳದಲ್ಲಿ ಮೂವತ್ತೆರಡು, ಕರ್ಣದ್ವಯದಲ್ಲಿ ಎರಡು, ಹಾರದಲ್ಲಿ ನೂರೆಂಟು, ತೋಳುಗಳಲ್ಲಿ ಹದಿನಾರು ಹದಿನಾರು, ಕರಗಳಲ್ಲಿ ಹನ್ನೆರಡು ಹನ್ನೆರಡು ಉರದಲ್ಲಿ ಐವತ್ತು, ಜಪದಲ್ಲಿ ಇಪ್ಪತ್ತೈದೆಂಟು, ಈ ಕ್ರಮುವನರಿದು ರುದ್ರಾಕ್ಷಿಯ ಧರಿಸಿದಾತನೇ ರುದ್ರನು. ಆತನೇ ಸದ್ಯೋನ್ಮುಕ್ತನು. ಆತನೇ ಇಹಲೋಕ ಪೂಜ್ಯನು. ಆತನ ದರ್ಶನ ಸ್ಪರ್ಶನದಿಂದಲಾನು ನಿತ್ಯ ಮುಕ್ತನಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ವಚನಕಾರನು ಈ ವಚನದಲ್ಲಿ ರುದ್ರಾಕ್ಷಿಯನ್ನು ಶರೀರದ ಯಾವ ಯಾವ ಭಾಗಗಳಲ್ಲಿ ಎಷ್ಟೆಷ್ಟು ಧರಿಸಬೇಕೆಂಬುದನ್ನು ವಿಶದ ಪಡಿಸಿರುವನು. ಹೀಗೆ ಧರಿಸುವವನು ಸೋಪ್ಪನನ್ನೈದುವನೆಂದು ಇಲ್ಲಿ ಹೇಳಿದ್ದಾನೆ.

ವಚನಃ—೧೩೯. ಸದ್ಯೋಜಾತ ವಾಮದೇವ ಮೊದಲಾದ ಪಂಚ ಮುಖವೇ ಸಂಚಮುಖದ ರುದ್ರಾಕ್ಷಿ. ಆ ರುದ್ರಾಕ್ಷಿಯ ಹಸ್ತ ತೋಳು ಉರ ಕಂಠ ಕರ್ಣ ಮಸ್ತಕದಲ್ಲಿ ಧರಿಸಿಪ್ಪ ಶಿವಭಕ್ತನೇ ರುದ್ರನು. ಆತನ ದರ್ಶನ ಸ್ಪರ್ಶನದಿಂದ ಭವರೋಗ ದುರಿತವಿರಲವ್ಮವು ನೋಡಾ. "ಅಥ ಏವ ರುದ್ರಾಕ್ಷಿಧಾರಣಾತ್ ರುದ್ರೋಭವತಿ" ಇಂತೆಂದುದಾಗಿ ರುದ್ರಾಕ್ಷಿ ಧರಿಸಿಪ್ಪ ಶರಣರಿಗೆ ಶರಣೆಂಬೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ಇಲ್ಲಿ ರುದ್ರಾಕ್ಷಿಯ ಮಹತ್ವವನ್ನು ವಚನಕಾರನು ವಿವರಿಸಿರುವನು.

ವಚನಃ— ೧೪೦. ಘನಕ್ಕೆ ಘನಮಹಿಮೆಯ ಪಡೆವರೆ ರುದ್ರಾಕ್ಷಿಯ ಧರಿಸಿಪ್ಪ ಸದ್ಭಕ್ತನು ಮನುಜನಲ್ಲ, ನೋಡಿರೇ. ಮುನ್ನಲೊಬ್ಬ ವ್ಯಾಧನು ಶ್ವಾನನ ಕೊರಳಲ್ಲಿ ರುದ್ರಾಕ್ಷಿಯ ಕಟ್ಟಲು, ಆ ಶ್ವಾನ ರುದ್ರಲೋಕವನ್ಹೈದಿತ್ತೆಂಬುದಕ್ಕೆ ಶಿವಧರ್ಮ ಪುರಾಣ ಪ್ರಸಿದ್ಧ ನೋಡಿರೇ. ॥ ರುದ್ರಾಕ್ಷ ಕಂಠಮಾಶ್ರಿತ್ಯ ಶ್ವಾನೋಪಿ ಮ್ರಿಯತೆ ಯದಿ ॥ ಸೋಪಿ ರುದ್ರತ್ವಮಾಪ್ನೋತಿ ಕಿಂ ಪುನರ್ಮಾನುಷಾದಯಃ ॥ ಎಂದುದಾಗಿ ಮತ್ತೆ ಶಿಖಾಯಾಂ ಧಾರಯೇದೇಕಂ ಶಿರಸಿ ತ್ರೀಣಿ ಧಾರಯೇತ್। ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ ಏಕೈಕಂ ಕರ್ಣಯೋರ್ದ್ವಯಂ । ದ್ವಾತ್ರಿಂಶತ್ಪಂಚಮಾಲಾಯಾಂ ಪಂಚಾಶನ್ಮಾಲಿಕಾಂ ಹೃದಿ। ಬಾಹ್ವೋಶ್ಚ ಷೋಡಶೈವ ದ್ವಾದಶೈವ ಪ್ರಕೋಷ್ಠಕೆ । ಅಷ್ಟೋತ್ತರ ಶತಂ ಮಾಲಾ ರುದ್ರಾಕ್ಷೈರುಪವೀತಕಂ । ಪದೇ ಪದೇಶ್ವಮೇಧಸ್ಯ ಫಲಂ ಪ್ರಾಪ್ನೋತಿ ಶಾಶ್ವತಂ ॥ ಎಂದುದಾಗಿ ಶಿಖಿಯಲ್ಲಿ ಒಂದು, ಶಿರಸ್ಸಿನಲ್ಲಿ ಮೂರು, ಮಂಡೆಯ ಸುತ್ತಲು ಮೂವತ್ತಾರು, ಎರಡು ಕಿವಿಗಳಲ್ಲಿ ಒಂದೊಂದು, ಕೊರಳಲ್ಲಿ ಮೂವತ್ತೆರಡು, ಹೃದಯದಲ್ಲಿ ಐವತ್ತು, ಎರಡು ತೋಳುಗಳಲ್ಲಿ ಹದಿನಾರು ಹದಿನಾರು, ಎರಡು ಮುಂಗೈಗಳಲ್ಲಿ ಹನ್ನೆರಡು ಹನ್ನೆರಡು, ಯಜ್ಞೋಪವೀತವಾಗಿ ನೂರೆಂಟು ಮಣಿಗಳಿಂದ ಅಕ್ಷಮಾಲೆಯಂ ಮಾಡಿ ಧರಿಸುವುದು. ಈ ರೀತಿಯಲ್ಲಿ ಧರಿಸಿದಾತನು ಹೆಜ್ಜೆ ಹೆಜ್ಜೆಯಲ್ಲಿ ಅಶ್ವಮೇಧಯಾಗದ ಫಲ

ವನ್ನೈದುವನು. ಸಂಶಯವಿಲ್ಲಾಗಿ ಇಂತಪ್ಪ ಮಹಾಮಹಿಮನು ಇಹಲೋಕ ಪೂಜ್ಯನು, ಪರಲೋಕ ಪೂಜ್ಯನು. ಆ ಸದ್ಭಕ್ತನ ದರ್ಶನ ಸ್ಪರ್ಶನದಿಂದ ಪಾಪಕ್ಷಯವಪ್ಪುದು. ಈ ಕ್ರಮವನರಿಯದೆ ರುದ್ರಾಕ್ಷಿಯ ಧರಿಸಿದಡೆ ಕತ್ತೆ ರುದ್ರಾಕ್ಷಿಯ ಹೊತ್ತ ಬಂದಂತೆ ಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಇಲ್ಲಿ ವಚನಕಾರನು ರುದ್ರಾಕ್ಷಿಯ ಮಹಿಮೆಯನ್ನು ವರ್ಣಿಸಿ ಅದನ್ನು ಶರೀರದ ಯಾವ ಯಾವ ಭಾಗಗಳಲ್ಲಿ ಎಷ್ಟು ಎಷ್ಟು ಧರಿಸಬೇಕೆಂಬುದನ್ನು ಹೇಳಿರುವನು.

ಮೋಕ್ಷ.

ವಿವರಣೆ— ಮುಂದಿನ ವಚನಗಳಲ್ಲಿ ಲಿಂಗಾಂಗಿಯು ಮೋಕ್ಷವನ್ನು ಹೊಂದುವ ರೀತಿಯನ್ನು ಹೇಳಿದ್ದಾನೆ. ಅವನು ತನ್ನ ಆಚರಣೆ, ಮತ್ತು ರೀತಿ ನಡತೆಗಳಿಂದ ತನ್ನಲ್ಲಿ ಲಿಂಗದ ಕಳೆಯನ್ನು ಬರಮಾಡಿಕೊಳ್ಳತಕ್ಕವನು. ಉಚ್ಚ ವಿಚಾರ ಆಚಾರಗಳ ಆವಿರ್ಭಾವವೇ ಈ ಲಿಂಗದ ಕಳೆಯ ಉತ್ಪಾದನೆಯ ಕುರುಹು ಎಂದು ಹೇಳಬಹುದು. ಪರಮಾತ್ಮನು ತನ್ನಿಂದ ಬಿಟ್ಟು ಬೇರೆ ಇಲ್ಲ. ಆದ್ದರಿಂದ ಅವನನ್ನು ತನ್ನಲ್ಲಿಯೇ ಹುಡುಕಬೇಕು ಮತ್ತು ಕಾಣಬೇಕು. ಅವನು ತನ್ನಲ್ಲಿ ಯಾವಾಗಲೂ ಗೂಢ ಸ್ಥಿತಿಯಲ್ಲಿರುತ್ತಾನೆ. ಈ ಸ್ಥಿತಿಯಲ್ಲಿದ್ದ ಪರಮಾತ್ಮನನ್ನು ತನ್ನಲ್ಲಿ ಪ್ರಕಟಗೊಳಿಸಬೇಕು. ಹೀಗೆ ಪ್ರಕಟ ಮಾಡುವದೇ ಮನುಷ್ಯನ ಪ್ರಗತಿ ಎಂದೆನಿಸಿಕೊಳ್ಳುತ್ತದೆ. ಹೀಗೆ ಲಿಂಗವು ಕ್ರಮೇಣ ಪ್ರಕಟಗೊಳ್ಳುತ್ತ ಹೋದ ಹಾಗೆ ಶರೀರದ ಭೋಗಗಳೇ ಲಿಂಗಕ್ಕೆ ಪೂಜಾ ಸಾಧನಗಳಾಗುತ್ತವೆ. ಈ ಸ್ಥಿತಿಯಲ್ಲಿ ಅಂಗ ಲಿಂಗ ಎಂಬ ಭೇದ ಭಾವವು ಉಳಿಯಲಾರದು. ಅವುಗಳಲ್ಲಿ ಸಾಮರಸ್ಯತ್ವವು ಉಂಟಾಗಹತ್ತುತ್ತದೆ. ಈ ಸಾಮರಸ್ಯ ಸ್ಥಿತಿಯೇ ಮೋಕ್ಷವೆಂದೆನಿಸಿಕೊಳ್ಳುತ್ತದೆ. ಈ ವಿಚಾರಗಳು ಈಗಿನ ವಚನಗಳಲ್ಲಿ ಬಂದಿವೆ.

ವಚನಃ— ೧೪೧. ಎನ್ನ ಮನಸ್ಸು ಮತ್ತೊಂದ ನೆನೆಯಲರಿಯದು, ನೀವು ನೆನಹು ರೂಪಾಗಿ ಎನ್ನ ಮನವ ಗ್ರಹಿಸಿದಿರಾಗಿ, ಆ ಮನಸ್ಸು ನಿಮ್ಮನವ ಗ್ರಹಿಸಿತ್ತಾಗಿ ಎನ್ನ ವಾಕ್ಕು ಮತ್ತೊಂದ ನುಡಿಯಲರಿಯದು, ನೀವು ಮಹಾಮಂತ್ರ ರೂಪಾಗಿ, ಎನ್ನ ವಾಕ್ಕನವಗ್ರಹಿಸಿದಿರಾಗಿ, ಆ ವಾಕ್ಕು ನಿಮ್ಮನವ ಗ್ರಹಿಸಿತ್ತಾಗಿ, ಎನ್ನ ಕಾಯ ಮತ್ತೊಂದ ಭೋಗಿಸಲರಿಯದು, ನೀವು ಪ್ರಸಾದ ರೂಪಾಗಿ ಎನ್ನ ಕಾಯವನವಗ್ರಹಿಸಿದಿರಾಗಿ, ಆ ಕಾಯ ನಿಮ್ಮನವಗ್ರಹಿಸಿತ್ತಾಗಿ ಎನ್ನ ಮನೋವಾಕ್ಕಾಯದ ಅಂತರಂಗ ಬಹಿರಂಗ ಸರ್ವಾಂಗವು ಇತರ ದೇವತೆಗಳ ವಾಙ್ಮನಕ್ಕತೀತವನವಗ್ರಹಿಸಿತ್ತಾಗಿ, ಎನ್ನ ಮನೋವಾಕ್ಕಾಯದ ಸ್ಥಿತಿ ಗತಿ ನೀನೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಪರಮಾತ್ಮನು ನೆನಹು ರೂಪಾಗಿ ಮನಸ್ಸನ್ನು ಅವಗ್ರಹಿಸಿದ ಕಾರಣ ಮನಸ್ಸು ಪರಮಾತ್ಮನನ್ನು ಬಿಟ್ಟು ಮತ್ತೊಂದನ್ನು ನೆನೆಯಲರಿಯದು. ಹಾಗೆಯೇ ವಾಕ್ಯಿನಲ್ಲಿ ಮಂತ್ರ ತುಂಬಿದ್ದರಿಂದ ವಾಕ್ಕು ಆ ಮಂತ್ರವನ್ನು ಬಿಟ್ಟು ಮತ್ತೊಂದನ್ನು ನುಡಿಯಲರಿಯದು. ಶರೀರದಲ್ಲಿ ಪ್ರಸಾದವು ತುಂಬಿದ್ದರಿಂದ ಅವನ್ನು ಬಿಟ್ಟು ಕಾಯವು ಮತ್ತೊಂದನ್ನು ಭೋಗಿಸಲರಿಯದು. ಹೀಗೆ ಮನಸ್ಸು, ವಾಕ್ಕು ಮತ್ತು ಕಾಯ ಇವುಗಳೆಲ್ಲವೂ ನೀನೇಯಾಗಿರುತ್ತೀ ಎಂದು ಪರಮಾತ್ಮನನ್ನು ಕುರಿತು ವಚನಕಾರನು ಇಲ್ಲಿ ಹೇಳಿಕೊಳ್ಳುತ್ತಾನೆ.

ವಚನಃ— ೧೪೨. ಎನ್ನಂಗದಲ್ಲಿ ನಿನಗೆ ಮಜ್ಜನ, ಎನ್ನ ಲಲಾಟದಲ್ಲಿ ನಿನಗೆ ಗಂಧಾಕ್ಷತೆ, ಎನ್ನ ತುರುಬಿನಲ್ಲಿ ನಿನಗೆ ಕುಸುಮ ಪೂಜೆ, ಎನ್ನ ನೇತ್ರದಲ್ಲಿ ನಿನಗೆ ನಾನಾ ರೂಪು ವಿಚಿತ್ರ ವಿನೋದ, ಎನ್ನ ಶ್ರೋತ್ರದಲ್ಲಿ ನಿನಗೆ ಪಂಚ ಮಹಾ ವಾದ್ಯ ಕೇಳೆರೇ. ಎನ್ನ ನಾಸಿಕದಲ್ಲಿ ನಿನಗೆ ಸುಗಂಧ ಧೂಪ ಪರಿಮಳ, ಎನ್ನ ಜಿಹ್ವೆಯಲ್ಲಿ ನಿನಗೆ ಷಡ್ರಸಾನ್ನ ನೈವೇದ್ಯ, ಎನ್ನ ತ್ವಕ್ಕಿನಲ್ಲಿ ನಿನಗೆ ವಸ್ತ್ರಾಭರಣ ಅಲಂಕಾರ ಪೂಜೆ, ಎನ್ನ ಸಚ್ಚಿದಾನಂದವೆಂಬ ಸೆಜ್ಜೆ ಗೃಹದಲ್ಲಿ ನೀನು ಪ್ರವರ್ತನಂಗೈದು ನೆರೆದಿಪ್ಪೆಯಾಗಿ, ನೀ ನಾನೆಂಬೆರಡಳಿದು ತಾನು ತಾನಾದ ಘನವನೇನೆಂಬೆನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಪ್ರಸಾದ ಕಾಯನಾದ ಲಿಂಗಾಂಗಿಯ ಪೂಜಾವಿಧವನ್ನು ಇಲ್ಲಿ ವಚನಕಾರನು ವರ್ಣಿಸಿದ್ದಾನೆ. ಮನುಷ್ಯನು ಆನಂದಪಡುವ ವಸ್ತುಗಳನ್ನೆಲ್ಲ ಅವನು ಪ್ರಸಾದ ರೂಪಾಗಿ ಪರಿಗ್ರಹಿಸುವದರಿಂದ ಅವೆಲ್ಲವೂ ಪರಮಾತ್ಮನ ಪೂಜೆಯ ಕ್ರಿಯೆಗಳಂತೆ ಪರಿಣಮಿಸುವವೆಂದು ವಚನಕಾರನು ಇಲ್ಲಿ ವಿವರಿಸಿರುವನು.

ವಚನಃ— ೧೪೩. ಸಾಲೋಕ್ಯವೆಂದೇನು ಅಂಗದ ಮೇಲೆ ಲಿಂಗ ಸಂಬಂಧಿಯಾಗಿರುತ್ತಿರಲು? ಸಾಮಿಪ್ಯವೆಂದೇನು ಗುರುಲಿಂಗ ಜಂಗಮದ ದಾಸೋಹದ ಸನ್ನಿಧಿಯೊಳಿರುತ್ತಿರಲು? ಸಾರೂಪ್ಯವೆಂದೇನು ಅನವರತ ಅರ್ಚನೆಯೊಳಿರುತ್ತಿರಲು? ಸಾಯುಜ್ಯವೆಂದೇನು ಚತುರ್ದಶ ಭುವನವ ಒಳಕೊಂಡ ಮಹಾಘನವ ಮನವನಗವಿಸಿ ನೆನೆಯುತ್ತಿರಲು? ಇಂತೀ ಚತುರ್ವಿಧಪದವೆಂದೇನು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಮೋಕ್ಷ ಪದದಲ್ಲಿ ಸಾಲೋಕ್ಯ ಸಾಮಿಪ್ಯ, ಸಾರೂಪ್ಯ, ಸಾಯುಜ್ಯಗಳೆಂದು ನಾಲ್ಕು ವಿಧಗಳನ್ನು ಮಾಡುವದುಂಟು. ಈ ವಿಧಗಳೆಲ್ಲವು ಲಿಂಗಾಂಗಿಯ ವರ್ತನೆಯಲ್ಲಿ ಹ್ಯಾಗೆ ಉಂಟಾಗುತ್ತವೆಂಬದನ್ನು ವಚನಕಾರನು ಇಲ್ಲಿ ಹೇಳಿದ್ದಾನೆ. ಅಂಗಲಿಂಗ ಸಂಬಂಧವು ಸಾಲೋಕ್ಯಪದವೆಂತಲೂ, ದಾಸೋಹ ಪದವು ಸಾಮಿಪ್ಯವೆಂತಲೂ, ಅನವರತ ಅರ್ಚನೆ ಮಾಡುವದು ಸಾರೂಪ್ಯಪದವೆಂತಲೂ, ಮಹಾಘನ ವಸ್ತುವಾದ ಲಿಂಗವು ಮನವನವಗವಿಸಿದ್ದು ಸಾಯುಜ್ಯಪದವೆಂತಲೂ ವಚನಕಾರನು ಇಲ್ಲಿ ಹೇಳಿರುವನು.

ವಚನಃ— ೧೪೪. ಎನ್ನ ಸರ್ವಾಂಗದಲ್ಲಿ ಲಿಂಗವೈದಾನೆ, ಅಯ್ಯಾನೆ. ಎನ್ನ ಮನವರಿಯದೆ ಕೆಟ್ಟಿಕೆಟ್ಟಿನಯ್ಯ. ಎನ್ನಂತರಂಗ ಬಹಿರಂಗದಲ್ಲಿ ಲಿಂಗವೈದಾನೆ ಮನವರಿಯದೆ ಕೆಟ್ಟಿಕೆಟ್ಟಿ. ವಿಶ್ವಾಸದಿಂದ ಗ್ರಹಿಸಲೊಲ್ಲದೆ ಕೆಟ್ಟಿಕೆಟ್ಟಿನಯ್ಯಾ. ಈ ಮನ ವಿಶ್ವಾಸದಿಂದ ಗ್ರಹಿಸಿದೊಡೆ ಸತ್ಯನಹೆ ನಿತ್ಯನಹೆ ಮುಕ್ತನಹೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ತಮ್ಮಲ್ಲಿಯೇ ಲಿಂಗವಿದೆಂದು ಸಾಮಾನ್ಯ ಜನರು ನಂಬುವದಿಲ್ಲ. ಇದರಿಂದ ಅವರು ಕೆಡುವರು. ಆದರೆ ವಿಶ್ವಾಸಭಾವವುಳ್ಳವರಾಗಿ ಅವರು ಹೀಗೆ ನಂಬಿದಲ್ಲಿ ಸಾಯುಜ್ಯ ಪದವನ್ನು ಅವರು ನಿಜವಾಗಿ ಹೊಂದುವರೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಃ— ೧೪೫. ಶಿವ ಶಿವಾ ನೀನೆನ್ನ ಮನವ ನೋಡಿಹೆನೆಂಬೆ. ಎನ್ನ ಗುಣಾವಗುಣವ ಹಿಡಿದಿಹೆನೆಂಬೆ. ಮನವಾರು, ನೀನಾರು ಎಂಬುದನರಿಯಾ? ನೀನರಿಯದಿರ್ದೊಡೆ ನಾನರಿಯೆನೆ? ನಾನರಿಯದಿರ್ದೊಡೆ ನೀನರಿಯಾ? ಎಂದೆನಗೆ ನೀನು ಪ್ರಾಣ ಲಿಂಗವಾದೆ, ಅಂದೇ ನಾನು ಲಿಂಗ ಪ್ರಾಣಿಯಾದೆನು. ಇನ್ನು ಮನಸ್ಸಿನ್ನಾರದು ಹೇಳಾ? ಇದು ಕಾರಣ ದ್ವಂದ್ವ ಕರ್ಮ ಮುನ್ನವೇ ನಾಸ್ತಿ ಶ್ರೀಗುರುಲಿಂಗ ಜಂಗಮ ಪ್ರಸಾದ. ವೇದಶಾಸ್ತ್ರಾಗಮ ಪುರಾಣಂಗಳು ಈಸುವ ಬಲ್ಲುದ ನಾ ತೋರಲೇಕಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ?

ಭಾವಃ— ಭಕ್ತನಿಗೆ ದ್ವಂದ್ವ ಕರ್ಮಗಳೆಂಬುವಿಲ್ಲ. ಪರಮಾತ್ಮನು ಭಕ್ತನಲ್ಲಿ ಪ್ರಾಣಲಿಂಗವಾದೊಡನೆ, ಭಕ್ತನೂ ಲಿಂಗ ಪ್ರಾಣಿಯಾಗುವನು.

ಹೀಗೆ ಲಿಂಗಪ್ರಾಣಿಯಾದೊಡನೆ ಗುಣ, ಅವಗುಣ, ಅರಿವು, ಅಜ್ಞಾನ ಎಂದು ಮೊದಲಾಗಿ ಭೇದ ಭಾವಗಳಿರಲಾರವು.

ವಚನಃ— ೧೪೬. ಪಾಪ ನನ್ನದೇ ಪುಣ್ಯ ನಿನ್ನದೇ ಅಯ್ಯ? ದ್ವಂದ್ವ ಕರ್ಮ ಎನಗೆ ಬೇಕಾದ ಪರಿ ಎಂತಯ್ಯ? ವಿಚಾರವಾದ ಬಳಿಕ ನಾನು ಲಿಂಗ ಪ್ರಾಣಿ, ನೀನು ಭಕ್ತಕಾಯನು. ಇದು ಕಾರಣ ದ್ವಂದ್ವ ಕರ್ಮ ಮುನ್ನವೇ ನಾಸ್ತಿ. ಇನ್ನು ಭಾವಭೇದವೆಂದಡೆ ನಗೆಗೆಡೆಯಪ್ಪುದು. ಹೆಚ್ಚು ಕುಂದು ಎನ್ನದಲ್ಲ, ನಿನ್ನದಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಭಕ್ತನ ಸಮರಸಾಚಾರದ ವಿವರವನ್ನು ವಚನಕಾರನು ಬಹು ಸುಂದರವಾಗಿ ಇಲ್ಲಿ ಹೇಳಿದ್ದಾನೆ. ಪಾಪ, ಪುಣ್ಯಗಳೆರಡೂ ಮುಕ್ತನ ಸ್ಥಿತಿಯಲ್ಲಿ ಲಯವಾಗಿ ಹೋಗುವವು.

ವಚನಃ— ೧೪೭. ಎನ್ನ ಗತಿ ನಿನ್ನ ಗತಿ, ಎನ್ನ ಕೇಳಿಕೆ ನಿನ್ನಕೇಳಿಕೆ, ಎನ್ನ ನೋಟ ನಿನ್ನ ನೋಟ, ಎನ್ನಂಗಸ್ಪರ್ಶನ ನಿನ್ನಂಗಸ್ಪರ್ಶನ, ಎನ್ನ ಸುಖ ಭೋಗವೆಲ್ಲ ನಿನ್ನ ಸುಖಭೋಗ, ಎನ್ನೊಳಗೆ ನೀನು ನಿನ್ನೊಳಗೆ ನಾನು, ಎನ್ನ ಪ್ರಾಣ ನೀನು ನಿನ್ನ ಪ್ರಾಣ ನಾನಾದ ಕಾರಣ ಎನ್ನ ಸೋಂಕಿತ್ತೆಲ್ಲ ನಿನ್ನ ಪೂಜೆಯಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

ಭಾವಃ— ವಚನಕಾರನು ಸಮರಸಾಚಾರದ ವರ್ತನೆಯನ್ನು ವರ್ಣಿಸಿರುವನು.

ವಚನಃ— ೧೪೮. ಎನಗೆ ನೀನು ಪ್ರಾಣ, ನಿನಗೆ ನಾನು ಪ್ರಾಣ ಇನ್ನೇನೋ ಇನ್ನೇನೋ? ಹಂಗಿಲ್ಲ ಹರಿವಿಲ್ಲ, ಮತ್ತೇನು ಪ್ರಪಂಚಿಲ್ಲವಾಗಿ. ನೀ ನಡಿಸಿದಂತೆ ನಡೆದೆ, ನೀ ನುಡಿಸಿದಂತೆ ನುಡಿದೆ. ನೀ ನೋಡಿಸಿದಂತೆ ನೋಡಿದೆ. ನೀನಾಡಿಸಿದಂತೆ ಯಾಡಿದೆ ನೀ ಮಾಡಿಸಿದಂತೆ ಮಾಡಿದೆ. ಈ ಪುಣ್ಯಪಾಪ ಸುಖದುಃಖಾತ್ಮಕನು ನೀನೆಯಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

ಭಾವಃ— ಭಕ್ತ ಮತ್ತು ಲಿಂಗ ಇವುಗಳಲ್ಲಿ ಏಕಾತ್ಮ ಭಾವವು ಉಂಟಾದ್ದರಿಂದ ಪರಮಾತ್ಮನು ಆಡಿಸಿದಂತೆ ಆತ್ಮನು ಆಡುವನೆಂದು ವಚನಕಾರನು ಇಲ್ಲಿ ಹೇಳಿದ್ದಾನೆ.

ವಚನಃ— ೧೨೯. ಎನ್ನೊಳಗೆ ನೀನು ಪ್ರವೇಶ, ನಿನ್ನೊಳಗೆ ನಾನು ಪ್ರವೇಶ. ದೇವ ನಿನಲ್ಲದಿಲ್ಲ, ಭಕ್ತ ನಾನಲ್ಲದಿಲ್ಲ ಈ ಪರಿಯಲ್ಲಿ ಮಾಡುವರಿನ್ನಾರು ಹೇಳಾ? ಎನಗೆ ನೀನೆ ಗತಿ, ನಿನಗೆ ನಾನೇ ಗತಿ ಇನ್ನೆಂಕೆ ಜನನಿಕೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ?

ಫಾನಃ— ವಚನಕಾರನು ಪರಿಪೂರ್ಣಾವಸ್ಥೆಯನ್ನು ಇಲ್ಲಿ ವಿವರಿಸಿರುವನು.

ನಿಜಮರೀಚಿ ಕೋಟಿ ರವಿಯ ರುಚಿಯ ನಿಳುಪಲಿರ್ದನಲ್ಲಿ
ಸುರನದೀ ವಿರಾಜಮಾನ ಜೂಟನೊಪ್ಪುತಿರ್ದನಲ್ಲಿ ।
ಗರಳ ಧರನು ಪರಶುಹರನು ತ್ರಿಪುರಹರನು ಒಪ್ಪುತಲ್ಲಿ
ತ್ರಿಂಬಕತ್ರಯಂ ನಭಃ ಪುರಾರಿಯೊಪ್ಪುತಿರ್ದನಲ್ಲಿ
ನಂಬಿ ನೆನೆಯಲಿಂಬುಗೊಂಬ ಶಂಭುವೊಪ್ಪುತಿರ್ದನಲ್ಲಿ
ದೇವಗಣ ಸಹಸ್ರದೊಳಗೆ ಭಾಳನಯನನೊಪ್ಪುತಿರ್ದ
ದೇವನೆಮ್ಮ ಹಂಪೆಯರಸ ವಿರೂಪಾಕ್ಷನೊಪ್ಪುತಿರ್ದ

ಕಂದ ॥ ಧರೆಹೊಗಳೆ ಕೃಪೆಯೊಳಾಹಾ ।
ಪರಿವಳಗೆಯ ವೈಜಕವ್ವೆಯಂ ಪೆರೆದಭವಂ ।
ಕರುಣಿಸುಗೆ ಭಕ್ತಿ ಸುಖಮುಂ ।
ಹರುಷಂ ಮಿಗಿಲೆಸೆವ ಹಂಪೆಯ ವಿರೂಪಾಕ್ಷಂ ॥

—(ವೈಜಕವ್ವೆಯ ರಗಳೆ ಸಮಾಪ್ತಂ.)—

ಕೆಂಭಾವಿ ಭೋಗಣ್ಣಗಳ ರಗಳೆ.

ಕಂದ ॥ ಅಂಬಿಕೆಯರಸಂ ನಾಟ್ಯಾ ।
ಡಂಬರ ಮುಖನೆಮ್ಮ ಹಂಪೆಯ ವಿರೂಪಾಕ್ಷಂ ।
ಸಾಂಬಂ ಧಾರುಣಿ ಪೊಗಳಲ್ ।
ಕೆಂಭಾವಿಯ ಭೋಗತಂದೆಯಂ ನೆರೆ ಪೊರೆದಂ ॥

ರಗಳೆ

ವಸುಧಾ ತಳಕ್ಕೆ ರಂಜಿಪುದೊಂದು ಶಿವಪುರಂ ।
ಕುಸುಮ-ಶರ ಪುರ ಕಾಲಹರನ ನಚ್ಚಿನ ಪುರಂ
ಹರ ಭಕ್ತಿ ರಾಗ ರಸಕೂಪವೆಂಬಂತಿರಲ್
ಧರೆಗೆ ಕೆಂಭಾವಿ ಎಂಬಾ ನಾಮ ಒಪ್ಪಿರಲ್
ಅಲ್ಲಿಪ್ಪನೋರ್ವ ಭಕ್ತಂ ಜಂಗಮ ಪ್ರೇಮಿ
ಸಲ್ಲಲಿತನುತ್ತಮಂ ನಿರ್ದೋಷಿ ನಿಃಕಾಮಿ
ತನ್ನ ಪೆಸರಾ ಪುರಕೆ ಭೋಗಣ್ಣನೆಂದೆಸೆದು
ತನ್ನ ಶಿವಭಕ್ತಿ ಹರಚರಣಕ್ಕೆ ಕುಡಿವರಿದು
ಪಲ್ಲವಿಸಿ ಪೂತು ಫಲವಾಗುತಿರಲೊಪ್ಪುವಂ
ಎಲ್ಲ ತೆರದಿಂ ಶಿವನ ಪದಯುಗವನಪ್ಪುವಂ
ಶಿವಭಕ್ತರೊಳಗೆ ಜಾತಿಯ ವಿಚಾರಿಸುದಿಲ್ಲ
ಶಿವಭಕ್ತರೊಳಗೆ ಭೇದವ ಕಲ್ಪಿಸುವುದಿಲ್ಲ
ಭಕ್ತರಂ ಕೊಂಡಾಡುತಿರ್ಪನಾನಂದದಿಂ
ಭಕ್ತರ್ಗೆ ಬೆಸಗೈವುತಿರ್ಪನುತ್ಸಾಹದಿಂ

ಇಂತು ಪಲವುಂ ಕಾಲವಿರುತಿರ್ಪ ಸಮಯದೊಳ್
ಸಂತತಂ ಶಿವಭಕ್ತಿ ಸಂದಣಿಪ ಛಂದದೊಳ್
ಒಂದು ದಿವಸಂ ಭೋಗತಂದೆ ಸುಖದಿಂದಿರಲ್
ಇಂದುಧರನೊಂದು ವೇಷಂ ಪೊತ್ತು ಬರುತಿರಲ್

ಹೆಗಲ ಮಿಣಿ ಕೆಯ್ಯ ಸಂಬಳ ಗೋಲಿನೀರ್ವರಂ
ಸೊಗಯಿಪ ವಿಭೂತಿ ರುದ್ರಾಕ್ಷಿಯ ಕೃಪಾಕರಂ
ಪಿರಿಯ ವೇಷಂಗೊಂಡು ಮನೆಯ ಮುಂದಂ ಸುಳಿಯೆ
ಶರಣನ ಮನಂ ನೋಡಲೆಂದು ಮುದದಿಂ ಸುಳಿಯೆ.

ಬಂದು ಭೋಗಣ್ಣನ್ಯೆತಂದು ಮಿಗೆ ಸೈಗೆಡಿಮ
ಮಂದೈಸೆ ಪುಳಕಂಗಳೊಪ್ಪೆ ಪದಮಂ ಪಿಡಿದು
ಕೆಲಬಲದ ವಿಪ್ರರ್ ನೆರೆದು ನೋಡುತಿರೆ
ಉಲಿದೆದ್ದು ತಮತಮಗೆ ಕೌತುಕಂಗೊಂಡುಮಿರೆ
ಕೈಗೊಟ್ಟು ಹರುಷದಿಂ ಮನೆಗೆ ನಡೆತಂದು
ವೈಗರೆದು ಕುಗ್ಗಿ ಭಯ ಭಕ್ತಿಯಿಂದಂ ನಿಂದು
ಉನ್ನತಾಸನಮನಿತ್ತಾನಂದಮಂ ತಳೆದು
ಪನ್ನಗಾಭರಣನ ಪದದ್ವಯಮುಮಂ ತೊಳೆದು
ಪಾದೋದಕಂಗಳಂ ಕಣ್ಗಳೊಳಗೊತ್ತುತಂ
ಆದಂ ಮಿಗೆ ತನ್ನ ಹೃದಯದೊಳ್ ಸಾರ್ಚುತಂ
ದೇವಾರ್ಚನೆ ಮಾಡಲಾರೋಗಣೆಗೆ ಕೊಟ್ಟು
ಭಾವಿಸುತ್ತೆರಗೆ ಭಯಭಕ್ತಿಯುಂ ಮುಂದಿಟ್ಟು
ಅವರ ಪ್ರಸಾದಮುಂ ಸಾದರಂ ಮಿಗೆ ಕೊಂಡು
ಶಿವಭಕ್ತಿಯೊಳಗೆ ನೆರೆ ಸಂತಸಮನೆಡೆಗೊಂಡು

ಇತ್ತಲಾ ಊರ ಮಟ್ಟಿಯ ಮುರುಕ್ಷಳ್ ನೆರೆದು
ಚಿತ್ತಜಾರಿಯನರಿಯದಜ್ಞರೆಲ್ಲರ್ ನೆರೆದು
ಸಡಗರಂ ಮಿಗೆ ಚಂದಿಮರಸನಲ್ಲಿಗೆ ಬಂದು
ಕಡು ಮೂರ್ಖರೆಲ್ಲರುಂ ಸಂಭ್ರಮಿಸುತಂ ನಿಂದು
ಕೇಳರಸ ನಿಮ್ಮೂರೊಳಿರಲಾಗದೆಮಗೆಲ್ಲ
ಊಳಿಗಂ ಪಿರಿದರಸ ನಿಮ್ಮಾಜ್ಞೆ ಇನಿತಿಲ್ಲ
ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮೀರಿ
ತಮ್ಮ ಭಕ್ತಾಚಾರವೆಗ್ಗಳಂ ತಲೆಗೇರಿ
ಹೊಲೆಗಲಸಿ ನೆಲೆಗೆಟ್ಟ ಛಲ ಉಡುಗಿ ಕುಲವಳಿದು
ಹೊಲೆಯನೆನ್ನದೆ ಪಿರಿಯ ಭಕ್ತನೆಂದರಿದರಿದು
ತಂದಿಂತು ಮನೆಯೊಳಗೆ ಗೋಜಾಗತಂ ಮಾಡಿ

ಸಂದ ವಿಪ್ರರ ಕರ್ಮವೆಲ್ಲವುಂ ಪುಸಿವಮಾಡಿ
ಹೊಲೆಯುಸಂ ಮುಂದಿಟ್ಟು ಕೊಂಡ್ಯೆದನೆಲೆ ದೇವ
ಕುಲವೆಲ್ಲ ನಿರ್ಮೂಲವಾದುದಿಂದೆಲೆ ದೇವ
ಅತನಂ ಕರೆಯಿಪುದು ಪೊರಮಡಿಪುದಲ್ಲದೊಡೆ
ಅತನಿರಲಾವೆಲ್ಲ ಪೋದಪ್ಪೆವಲ್ಲದೊಡೆ

ಎನೆ ಚಂದಿಮರಸನಾ ಜಡರ ಮಾತಂ ಕೇಳ್ದು
ಮನದೊಳಗೆ ಮುಳಿವುತಂ ಕಡುಗೋಪಮಂ ತಾಳ್ದು
ಚಾರರಂ ಕಳುಹಿ ಭೋಗಣ್ಣನಂ ಕರೆಯಿಸಲ್
ವಾರಾರಿಯಣುಗನೈತಂದಲ್ಲಿ ರಂಜಿಸಲ್
ಬೆಳ ಬೆಳಪ ಭಸಿತದಿಂ ತೊಳತೊಳಪಪಲ್ಗಳಿಂ
ನಳ ನಳಿಪ ಕಾಂತಿಯಿಂ ಥಳ ಥಳಿಪ ಕಣ್ಗಳಿಂ
ಲೆಕ್ಕಿಸದೆ ಕೈಕೊಳ್ಳದಕ್ಕರಿಂ ಬಂದಿರಲ್
ಮುಕ್ಕಣ್ಣನವತಾರವೆಂಬಂತೆ ನಿಂದಿರಲ್

ಏನಯ್ಯ ಪುರದೊಳಗೆ ಕೃತ್ಯಮುಂ ಮಾಪ್ಪರೇ
ಏನಾದೊಡಂ ಪೊಲೆಯರಂ ಪುಗಿಸಿ ಬಾಳ್ವರೇ
ಮನೆಯೊಳಗನಾವಿಕರ ಪುಗಿಸುವರೆ ಭೋಗಯ್ಯ
ಮನವಾರೆ ನಿಮ್ಮುದಾಚರವೇ ಭೋಗಯ್ಯ

ಎನೆ ಪೊಲೆಯನಂ ಪುಗಿಸಲಿಲ್ಲ ಮನೆಯೊಳಗರಸ
ನಿನಗೆ ತಿಳಿವಿಲ್ಲ ತಿಳಿವಿಲ್ಲದೊಡೆ ಕೇಳರಸ
ನಾರಾಯಣ ಕ್ರಮಿಕರಂ ಪುಗಿಸಿದೆನೆ ಮನೆಗೆ
ಸೂರಿಭಟ್ಟರ ನೈದೆ ಪುಗಿಸಿದೆನೆ ಮನೆಯೊಳಗೆ
ಕೃಷ್ಣಪೆದ್ದಿಗಳನೊಮ್ಮೆಯು ಕರೆದು ಬಲ್ಲೆನೇ
ವಿಷ್ಣುಭಟ್ಟರನೊಮ್ಮೆಯುಂ ಸೋಂಕಿ ಬಲ್ಲೆನೇ
ಶಿವನನರಿಯದ ಹೊಲೆಯರಂ ಹೊಗಿಸೆ ನಾನರಸ
ಶಿವಭಕ್ತನಂ ಪುಗಿಸಿದೇಂ ತಪ್ಪೆ ಹೇಳರಸ
ಎಂದ ಮಾತಂ ಕೇಳ್ದು ವಿಪ್ರರುಂ ಹೊಲೆಯರೇ
ಚಂದವಾಯಿತು ಮಟ್ಟಿಯಿಟ್ಟರುಂ ಹೊಲೆಯರೇ
ಇಂತಪ್ಪ ಸಿತಗರೆಮ್ಮೂರೊಳಗಿರಲ್ವೇಡ

ಇಂತಪ್ಪರಂ ಕಂಡೊಡಂಜುವೆನಿರಲ್ವೇಡ
ಪೋಗೆಂದು ಚಂದಿಮರಸಂ ಜರಿದು ನುಡಿವುತಿರೆ
ಭೋಗಣ್ಣನಂ ಲಿಂಗವಂತನಂ ಜರಿವುತಿರೆ

ಕಡು ಮಾನಿ ಶಾಂತನುಂ ನುಡಿಯುಂ ಮನಂಗೊಂಡು
ತಡವಿಲ್ಲದೂರಿಂದೆ ಪೊರಮಡಲ್ ನಡೆಗೊಂಡು
ಒಂದಡಿಯಸಿಡೆ ಪುರದ ಲಿಂಗ ಒಡನುಬ್ಬುತಿರೆ
ಮುಂದಡಿಯಸಿಡೆ ಪುರದ ಲಿಂಗ ಒಡನೇಳುತಿರೆ
ನಡೆಯೆ ನಡೆದವು ಪುರದ ಲಿಂಗಂಗಳೊಂದಾಗಿ
ಒಡನೊಡನೆ ಭೋಗಣ್ಣನೆಡಬಲದೊಳೊಂದಾಗಿ
ಅವನಿ ಸೋಂಕದ ತೆರದಿ ಪಾಯು ಮೆಯ್ಯಾಂತು ಬರೆ
ತಮತಮಗೆ ತರುನಿಕರವೆಲ್ಲ ನೆಳಲಾಗಿ ಬರೆ
ತರುಫಲದಿನೊಸರ್ವ ರಸ ಶೀತಮುಜ್ಜನವಾಗೆ
ಮರದಿಂದಲುದುರ್ವ ಹೂ ಪತ್ರೆ ಪುಷ್ಪಗಳಾಗೆ
ಎಳಸುತಿರೆ ಲಿಂಗ ತತಿಗಳ್ ನಡೆದವೀ ತೆರದಿ
ಇಳೆಯೊಳುರುಳ್ದವು ಕಾಶಿಗೈದುವ ತೆರದಿ
ಜಂಗಮವೆ ಲಿಂಗಕ್ಕೆ ಲಿಂಗವಾ ಜಂಗಮಕೆ
ಲಿಂಗ ಜಂಗಮವೆಂಬುದವಿಭೇದವೀ ಜಗಕೆ
ಎಂಬಂತೆ ಭೋಗಣ್ಣನೊಡನೊಡನೆ ಬರುತಮಿರೆ
ಕೆಂಭಾವಿಯೊಳಗುಳ್ಳ ಶಿವಲಿಂಗವೆಯ್ದೆ ಬರೆ
ಬಂದು ಲಿಂಗದ ಬಳಯಲೊಂದು ತರು ನೆಳಲಾಗೆ
ಬಂದುದಾ ಲಿಂಗದಾರವೆಯೆಂಬ ಜೆಲ್ವಾಗೆ
ಸತ್ಯ ಶರಣಂ ಲಿಂಗಕುಳದೊಳಗೆ ಬರುತಿರ್ದ
ನಿತ್ಯ ಲಿಂಗಾರ್ಚನೆಗೆ ಜಾಣನುಂ ಬರುತಿರ್ದ
ಭಕ್ತಿಯ ಫಳಂಗಳಂ ಸೇವಿಸುವ ಮಾಳ್ಕೆಯಿಂ
ಮುಕ್ತಿ ಇಂಡೆಗಳ ಪೋಣಿಸುತಿರ್ಪ ಮಾಳ್ಕೆಯಿಂ
ಶಿವಲಿಂಗ ಕುಳಮರರೆ ಭೋಗಣ್ಣನೀಕ್ಷಿಸುತೆ
ತವೆ ಮರುಗಿ ದೂರಿಸುತೆ ಕಂಪಿಸುತೆ ಚಿಂತಿಸುತೆ

ದೇವಿಯರನಗಲಿ ಇಂತೆನ್ನೊಡನೆ ಬರ್ಪರೇ
ದೇವಿಯಾಲಿಂಗನವನುಳಿದು ನಡೆತರ್ಪರೇ

ಚಳಿಗಾಳಿ ಬಿಸಿಲಿವಂ ನೋಡಲೈತಪ್ಪರೇ
ಇಳೆಗೆ ಪೊಸತಿಂಗೆ ಪೊಸತಂ ಮಾಡಿ ನೋಳ್ಪರೇ
ಎಂದು ಶಿವಲಿಂಗಂಗಳಂ ಸಂತವಿಡುತಿರಲ್
ಛಂದದಿಂ ಶಿವಭಕ್ತಿ ಸಂದಣಿಸುತಿರುತಿರಲ್
ಬಲದ ಲಿಂಗಂಗಳಂ ಬಲದ ಕರದೊಳಗೊಪ್ಪಿ
ಕೆಲದ ಲಿಂಗಂಗಳಂ ಕೆಲದ ಕೆಯ್ಯೊಳಗಪ್ಪಿ
ಮುಂದಿರ್ದ ಲಿಂಗವನುರಸ್ಥಲದೊಳೊಲಿದಪ್ಪಿ
ಪಿಂದಿರ್ದ ಲಿಂಗಂಗಳಂ ಬೆನ್ನೊಳೊಲಿದಪ್ಪಿ
ಆಲೋಕನದೊಳಿರ್ದವಂ ಕಂಗಳಿಂದಪ್ಪಿ
ಮೇಲಿರ್ದ ಲಿಂಗಂಗಳುತ್ತಮಾಂಗದೊಳಪ್ಪಿ
ಸುತ್ತಿರ್ದ ಲಿಂಗಮುಂ ಸುಳಿಸುಳಿದು ತಳ್ಕೈಸಿ
ಮುತ್ತಿರ್ದ ಲಿಂಗಮುಂ ಮುರಿಮುರಿದು ಮೇಳೈಸಿ
ಭಾಳದೊಳಗೊತ್ತುತುಂ ಕಂಗಳೊಳಗೊತ್ತುತುಂ
ತೋಳೊಳಂ ಕೊಳ್ಳುತೆ ಕಪೋಳದೊಳಗೊತ್ತುತುಂ
ಎಲೆಯುದುರಿ ಬಿಸಲಾಗೆ ಮೆಯ್ಯೊಡ್ಡಿ ನೆಳಲಾಗೆ
ನಲಿನಲಿದು ತಳರ್ಗಳಿಂ ತಳಿವಿಡಿದ ತೆಂನಾಗೆ
ಸುಜನ ಜನವಂದ್ಯ ಭೋಗಣ್ಣನತಿ ಹರುಷದಿಂ
ತ್ರಿಜಗದೇಕೈಕ ಲಿಂಗಂಗಳನುರಾಗದಿಂ
ಪೂಜೆಗೆಯ್ಯುತೆ ಭಕುತಿಯಾನಂದ ವೇಷದಿಂ
ಮಾಜಹರನರ್ಚನೆಯ ಮಾಡೆ ಸಂತೋಷದಿಂ
ಇಂತು ಶಿವಲಿಂಗಂಗಳಂ ಸಂತವಿಡುತಿರಲ್
ಸಂತತಂ ಶಿವಭಕ್ತಿ ಬೋಳ್ಪೈಸುತಿರುತಿರಲ್

ಇತ್ತಲಾ ಕೆಂಭಾವಿಯೊಳಗೆ ವಿಪ್ರರ್ನೆರೆದು
ಸುತ್ತಲುಂ ನೇಮಮುಂ ಮಾಡಲೆಂದೈತಂದು
ಶಿವನಿಳಯದೊಳಗೆ ಬರೆ ಪೀಠಂಗಳಿರೆ ಕಂಡು
ಶಿವಶಿವಾ ಎನುತೆ ಮನದೊಳ್ ಕೌತುಕಂಗೊಂಡು
ಚಂದಿಮರಸನ ಸವಿೂಪಕ್ಕೆಲ್ಲರುಂ ಬಂದು
ಸಿಂದು ಪೇಳುತ್ತಲಿರ್ದರ್ ಕೌತುಕಮನಂದು
ದೇವಾಲಯುಂಗಳೊಳ್ ಬರಿಯ ಪೀಠಂಗಳಿವೆ

ಭೂವಲಯದೊಳಗೆ ಇದರಿಂದದ್ಭುತಗಳೊಳವೆ
ಭೋಗಣ್ಣನೊಡನೆ ಪೋದವು ಲಿಂಗತತಿಯೆಲ್ಲ
ರಾಗದಿಂದೊಡನೊಕ್ಕಲಾದವಳ್ತಿಯೊಳಿಲ್ಲ
ಕರೆಮು ಬಿಜಯಂಗೈಸಿ ತರ್ಪುದಾ ಭಕ್ತನಂ
ಹರನ ಪುರಹರನ ಘನ ಸಾಮರ್ಥ್ಯಯುಕ್ತನಂ
ಧರೆಯೊಳಗೆ ಕಟ್ಟಧಿಕ ಶಿವಲಿಂಗವಂತನಂ
ಹರಿಯಜರ್ಗರಿದೆನಿಪ ಘನಲಿಂಗವಂತನಂ
ಸಕಲ ಋಷಿಗಳ್ ಬೇಳ್ಪ ಪುಣ್ಯಾಗ್ರಗಣ್ಯನಂ
ಸಕಲ ಲಿಂಗದ ನಡುವೆ ಬಾಳ್ವ ಭೋಗಣ್ಣನಂ
ತಾರದಿರ್ದೊಡೆ ಧರಣಿಯೊರ್ಗುಡಿಪುದೆಲೆಯರಸಾ
ತಾರದೊಡೆ ವಾರಾಶಿ ಮೇರೆದಪ್ಪುದರಸಾ

ಎಂದು ನುಡಿಯಲ್ ಚಂದಿಮರಸನಾಗಂ ಕೇಳ್ದು
ಮುಂದಮತಿಯಾದೆನೆನುತಂ ಚಿಂತೆಯಂ ತಾಳ್ದು
ಪರಿಜನಂ ಪುರಜನಂ ಶರಣಸಂತತಿವೆರಸಿ
ವಾರನಾರಿಯರ್ಕಳಶ ಕನ್ನಡಿ ತಳಿರ್ವೆರಸಿ
ಮುರುಜದಾವುಜದ ಕಿರುಘಟೆಯ ಕೇಳಿಕೆವೆರಸಿ
ಕರಡೆ ಕೌಸಾಳ ಶಂಖಪ್ರಣಾದಂವೆರಸಿ
ಎತ್ತಿರ್ದ ವೃಷಧ್ವಜಂ ನಭದೊಳಾಡುತ್ತಿರಲ್
ಸುತ್ತಿ ಕೇಳಿಸುವ ನಾದಂ ಕೊರ್ವಿ ಪಸರಿಸಲ್
ಪೊರಮಟ್ಟುದಲ್ಲಲ್ಲಿ ಸಂಭ್ರಮಂ ಕೈಗಣ್ಮೆ
ಮೆರೆವ ನಾನಾ ವಾದ್ಯಾರಭಸಂಗಳುಂ ಪೊಣ್ಮೆ
ನಡೆದುದಾ ಗಿರಿಸುತೆಯ ಮನೆಯ ನಿಬ್ಬಣದಂತೆ
ನಡೆದುದಾ ಶಿವಲಿಂಗ ಯಾತ್ರಾ ನಿಕರದಂತೆ
ಬರುತಿರ್ದು ದೂರದಿಂ ಭೋಗಣ್ಣನಂ ಕಂಡು
ಸಾರ ಶಿವಲಿಂಗಂಗಳೊಳಗಿಪ್ಪಿನಂ ಕಂಡು
ಶಿವಲಿಂಗ ಸಾಮ್ರಾಜ್ಯ ಪರಮ ಸುಖಿಯಂ ಕಂಡು
ಶಿವಲಿಂಗ ಸಂಸಾರ ಲೋಲುಪ್ತನಂ ಕಂಡು
ಭಕ್ತಿ ಸುಖದೊಳ್ ಬೆರಸಿ ನೆಲಸಿರ್ಪನಂ ಕಂಡು
ಮುಕ್ತಿಯುಂ ಮುಂಡಾಡುತೊಸೆದಿಪ್ಪನಂ ಕಂಡು

ಶಿವನನೊಚ್ಚತವಾಗಿ ಕೈಕೊಂಡನಂ ಕಂಡು
ತೆರಹಿಲ್ಲದಿರ್ಪ ಲಿಂಗದ ಬೀಡನೀಕ್ಷಿಸುತೆ
ಪೊರಗೆ ನಿಂದಿರ್ದು ದೂರದೊಳೆಲ್ಲ ಶಿವಧೀಡುತೆ

ಶಿವನನರಿಯದ ಪಾತಕರ್ಗೆ ಕರುಣಿಪುದಯ್ಯ
ಭವನನರಿಯದ ಭಾಗ್ಯಹೀನರ್ಗೆ ದಮ್ಮಯ್ಯ
ಕರುಣಿಸುವುದೆಮಗೆ ಕಾರುಣ್ಯನಿಧಿ ಭೋಗಣ್ಣ
ನರಕದೊಳ್ ಬಿದ್ದವರನೆತ್ತುವುದು ಭೋಗಣ್ಣ
ಮುಂದರಿಯದಜ್ಞರಿಗೆ ಬುದ್ಧಿಗೊಡು ಭೋಗಣ್ಣ
ಸಂದಣಿಸಿದೆಮ್ಮ ಮಾಯವಂ ನೀಗಣ್ಣ
ಅನುಪಮೈಶ್ವರ್ಯ ಶಿವಲಿಂಗ ನಿಧಿ ಭೋಗಣ್ಣ
ಘನ ಘನ ಮಹಾಲಿಂಗ ನಿಧಿ ಭೋಗಣ್ಣ
ಎಂದು ಬಾಯಳಿವ ಕಿಂಕರ್ವಾಣಮಂ ಕೇಳ್ದು
ಇಂದುಧರನಣುಗಸತಿ ಕಾರುಣ್ಯಮಂ ತಾಳ್ದು
ದೇವರಂ ದೇವಿಯರನೊಂದು ಮಾಡುವೆನೆನುತೆ
ದೇವಿಯರನಿಂತಗಲ್ದಿರಬಾರದೆಂದೆನುತೆ
ತಿರುಗಿದಂ ಶಿವಲಿಂಗ ಸಹಿತಲಾ ಭೋಗಣ್ಣ
ಉರವಣಿಸಿ ಬರತಿರ್ದನಕ್ಕರಿಂ ಭೋಗಣ್ಣ
ಎನಗೆ ತನಗೆಂಬಂತೆ ಮುಂಚಿದವು ಶಿವಲಿಂಗ
ಅನುರಾಗದಿಂದೆ ಸಂಭ್ರಮಿಸಿದವು ಶಿವಲಿಂಗ
ಆಲ್ಲಿ ಭಕ್ತಂ ಬಂದನೆಂಬ ಸಂತೋಷದಿಂ
ಅಲ್ಲಲ್ಲಿ ಪರಿಪರಿಯಲಾನಂದ ವೇಷದಿಂ
ಭರದೊಳರಿಯದೆ ನಿಜಸ್ಥಾನಂಗಳಂ ಮರೆದು
ಪರಮ ಸುಖವೇರುತುರವಣಿಸುತಂ ಹೊಳೆಹೊಳೆದು
ಭೋಗಣ್ಣನಂ ಮೆರೆಯಿಸಲ್ಕೆ ಕುರುಹೆಂಬಂತೆ
ರಾಗದಿಂ ಸ್ಥಾನ ಪಲ್ಲಟಮುವಾದಂತೆ
ಪಿರಿಯ ಪೀಠಂಗಳೊಳ್ ಸೂಕ್ಷ್ಮ ಶಿವಲಿಂಗವಿರೆ
ನೆರೆದು ಕಿರಿಯವರಲ್ಲಿ ಪಿರಿಯ ಶಿವಲಿಂಗವಿರೆ
ಶರಣ ಸಂಕುಳದ ಕೇಳಿಕೆಯ ವಾದ್ಯಂ ಮೆರೆಯೆ
ಶರಣನ ಮನದೊಳಿರ್ದ ಮುಳಿಸೆಂಬ ತೆರೆ ಸರಿಯೆ

ಆನಂದಜಲಪೆ ಕೈನೀರಾಗಿ ಸುರಿವುತಿರೆ
ನಾನಾ ಶಿವೋತ್ಸವಂ ಅಕ್ಕರಿಂ ಪೆಚ್ಚುತಿರೆ
ಶಿವಶಕ್ತಿ ವೈವಾಹವಾದುದಾ ಪುರದೊಳಗೆ
ಶಿವಭಕ್ತಿ ಸಂಪದಂ ಬೆಳೆದುದಾ ಪುರದೊಳಗೆ

ಆಗಳೆರಗಿದವು ಪೂವಿನ ಮಳೆಗಳಂತಲ್ಲಿ
ರಾಗದಿಂ ದುಂದುಭಿಧ್ವಾನ ಉನ್ಮದವಲ್ಲಿ
ಬಂದುದೊಂದತಿಶಯದ ಪುಷ್ಪಕಂ ಸಭದಿಂದೆ
ಸಂದಣಿಪ ನವರತ್ನಖಚಿತ ವಿಭ್ರಮದಿಂದೆ
ಆ ವಿಮಾನದ ನಡುವೆ ಭೋಗಣ್ಣನೊಪ್ಪಿದಂ
ಭೂವಳಯದೊಳು ಜೋದ್ಯವೆನೆ ಶರಣನೊಪ್ಪಿದಂ
ನಂಬಲರಿಯದ ಪೂರ್ವ ಕುಲವೆಲ್ಲ ನೋಡುತಿರೆ
ಡಂಬಳಿದು ಶರಣನಂ ಕೊಂಡಾಡಿ ನಲಿಯುತಿರೆ
ಚಂದಿಮರಸಂ ನೋಡಿ ಕೌತುಕಂ ಬಡುತವಿರೆ
ನಿಂದು ಭಕ್ತರ್ಮಸಗಿ ಕೆಯ್ಯೆತ್ತಿ ಕುಣಿವುತಿರೆ
ಚಂದ ಚಂದದ ವಾದ್ಯ ಮೇಳೈಸಿ ಪೆಚ್ಚುತಿರೆ
ನೆಗೆದುದು ವಿಮಾನವಾ ಗಗನವಳಯಕ್ಕಾಗಿ
ನೆಗೆದುದತ್ತತ್ತಲಾ ದೇವಲೋಕಕ್ಕಾಗಿ
ಬಂದು ನಂದೀಶ್ವರನ ಬಾಗಿಲೊಳ್ ನಿಂದಿರ್ದು
ಇಂದುಧರನೋಲಗಕ್ಕತುಳ ಸುಖದಿಂ ಸಾರ್ದು
ಮೆಯ್ಯಕ್ಕಿ ಮೆಯ್ಯಕ್ಕಿ ಸುಖವಿಡಿದು ಪೊಡಮಟ್ಟು
ಕೆಯ್ಯೆತ್ತಿ ಕೆಯ್ಯೆತ್ತಿ ನಿಂದಿರ್ದು ಪೊಡಮಟ್ಟು
ಪಟ್ಟಿರ್ದ ಭೋಗಣ್ಣನಂ ಕಂಡು ಶಂಕರಂ
ನಿಷ್ಠೆವಂತನ ನೋಡಿ ನೋಡಿ ಶಶಿಶೇಖರಂ
ತನಿನೇಹದಿಂಪಪ್ಪಿ ಮನದಕ್ಕರೆಡೆಗೊಂಡು
ಮನಸಿಜಹರಂ ನೋಡಿ ಕರುಣಸುಧೆ ಎಡೆಗೊಂಡು
ಶಿವಭಕ್ತರಿಂತು ನಂಬಿದರುಂಟೆ ನಂದೀಶ
ಶಿವಲಿಂಗ ಸೊಬಗರನ್ನಿಂತುಂಟೆ ನಂದೀಶ
ಎಂದು ಕೊಂಡಾಡುತುಂ ಸಾರೂಪ್ಯಪದವಿತ್ತು
ನಿಂದಿರ್ದ ಗಣಕುಲದ ಭರಭಾರಮುಂ ಸೊತ್ತು

ನತ ಸುರಾಸುರರಾಜಚರಣನಿಂತೊಪ್ಪಿದಂ
ಅತಿಶಯದ ಶೈವಪದ ಸಾಮರ್ಥ್ಯನೊಪ್ಪಿದಂ
ನಂಬಿರ್ದ ಶರಣರೊಡನೊಕ್ಕಲಿಂತೊಪ್ಪಿದಂ
ಅಂಬರಸ್ಥಿರ ಕೇಶಪಾಶನಿಂತೊಪ್ಪಿದಂ
ಸುರರಾಜ ರಾಜರಾಜಾಭರಣನೊಪ್ಪಿದಂ
ಪುರಕಾಲ ಕಾಮುವನದಾವಾಗ್ನಿಯೊಪ್ಪಿದಂ
ದೇವಗತಿ ದೇವಮತಿ ದೇವಪತಿಯೊಪ್ಪಿದಂ
ದೇವ ಹಂಪೆಯ ವಿರೂಪಾಕ್ಷನಿಂತೊಪ್ಪಿದಂ

ಕಂದ ॥ ಶ್ರೀ ಗೌರೀವಲ್ಲಭನೆಮ
ಗೀಗೆ ಸದಾ ತನ್ನ ಚರಣ ಭಕ್ತಿಯ ನೊಲವಿಂ ।
ರಾಗಂ ಮಿಗೆ ಕೆಂಭಾವಿಯ
ಭೋಗಣ್ಣನ ಕಂದನೆಂದು ಹಂಪೆಯ ದೇವಂ ॥

ಕೇಶಿರಾಜ ದಣ್ಣಾಯಕರ ರಗಳೆ.

ಕಂದ ॥ ತುರುಗಿದ ಪೊಸ ಕೆಂಜೆಡೆಗಳ ।
ವಿರುಗುವ ಶಶಿಕಳೆಯ ಹಂಪೆಯ ವಿರೂಪಾಕ್ಷಂ ।
ಕರೆಗೊರಲಂ ಬಿಸುಗಣ್ಣಂ ।
ಮೆರೆದಂ ವಿಭುಕೇಶಿರಾಜದಣ್ಣಾಯಕರಂ ॥

ರಗಳೆ

ಉತ್ತರ ದಿಶಾಭಾಗದೊಳಸೊಂದು ಶಿವಪುರಂ
ಬಿತ್ತರಿಸಲೆನ್ನಳವೆ ಮಿಗೆ ರಂಜಿಪುದು ಕರಂ
ಭಕ್ತಿಯನೊಳಗುವಾಡಿ ಕೊಂಡಗುಳಿಯಂತೆಸೆದು
ಯುಕ್ತವೆನೆ ಕೊಂಡಗುಳಿಯೆಂಬ ಪೆಸರಿಂದೆಸೆದು
ಇರ್ಪ ಪುರದೊಳಗೋರ್ವ ಸದ್ಭಕ್ತನೊಪ್ಪುವಂ
ಸರ್ವಭೂಷಣನ ಭಕ್ತಿಯ ಬರವನಪ್ಪುವಂ
ತನ್ನ ನಾಮಂ ಕೇಶಿರಾಜನೆಂಬುದು ದಿಟಂ
ತನ್ನ ಶಿವಭಕ್ತಿಯುರವಣೆ ಧರಣಿಗುತ್ಕಟಂ
ಶ್ರೀ ವಿರೂಪಾಕ್ಷದೇವರ್ತಮಗೆ ಗುರುವಾಗಿ
ಭಾವಿಸುತಿರ್ಪನವರಂಘ್ರಿಯಂ ದೃಢವಾಗಿ
ಪ್ರಾಣನಾಥಂ ತನಗೆ ಸೋಮನಾಥಂ ನೋಡ
ಜಾಣರತ ನಿಜವರಿತು ಬಿಡನರ್ಚಿಪಂ ನೋಡಿ
ಬುದ್ಧಿವಂತಂ ಸುರಾಸುರ ಗುರುಗಳಳವಲ್ಲ
ಶುದ್ಧಿವಾನಗ್ನಿ ಜಲವಾಯು ಗಳಿಗಳವಲ್ಲ

ಇಂತಪ್ಪ ಕೇಶಿರಾಜಯ್ಯಂಗಳೊಪ್ಪದೊಳ್
ಕಂತುಹರನಂ ಪೊಗಳಲನುವಾಗಿ ಚಿತ್ತದೊಳ್
ಪುಳಕಂಗಳೊಡನೊಡನೆ ಬೆಮರ ಬಿಂದುಗಳೊಗೆಯೆ
ಇಳಿವ ಗದ್ಗದದೊಡನೆ ಕಂಪನಂ ಮಿಗೆ ನೆಗೆಯೆ
ಆನಂದ ಜಲದೊಡನೆ ಅಟ್ಟಹಾಸಂ ನಿಮಿರೆ

ಏನೆಂಪೆನುಬ್ಬರದ ಭಕ್ತಿ ಚಿತ್ತಮನಡರೆ
ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಉಚ್ಚರಿ ಮಿಗಲ್ಕೆ ಪೇಳ್ವಂ ಶಿವಾನಾಥಂಗೆ
ಪಂಚಾಕ್ಷರಾನುಬಂಧಂ ಛಂದವನುವಾಗೆ
ಪಂಚಮುಖ ನಾನುದಭಿಧಾನ ಬುದ್ಧಿಯದಾಗೆ
ಶಿವ ವಾಕ್ಯ ಶಬ್ದ ಶುದ್ಧಿ ವ್ಯಾಕರಣ ಮಾಗೆ
ಶಿವಭಕ್ತಿ ವೃತ್ತಕ್ಕಲಂಕಾರದಂತಾಗೆ
ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಜೋದ್ಯಪೆನೆ ಶಂಕರ ಸ್ತೋತ್ರದೊಳೆ ಬಾಳುತಂ

ಇರಲಿತ್ತಲಾ ಕಲ್ಯಾಣ ಪುರದೊಳಗೆ
ಧರಣೀಶ ಪೇರ್ಮಾಡಿನಾಯನೋಲಗದೊಳಗೆ
ಹರುಷದಿಂ ಸಿಂಹಾಸನಾರೂಢನಾಗಿರ್ದು
ಪರಿಪರಿಯ ಮಂತ್ರಿಗಳ ಪೊಗವನೀಕ್ಷಿಸುತಿರ್ದು
ತನ್ನಯ ಮನಕ್ಕೆರಗುವನರೋರ್ವರಿಲ್ಲದಿರೆ
ತನ್ನಯ ಚಿತ್ತಕ್ಕೆ ತಕ್ಕನುಕೂಲರಿಲ್ಲದಿರೆ
ಬಂದಸೋಲಗದೊಳಗೆ ಪಿರಿಯರ ಪೋಗಂ ನೋಡಿ
ಬಂದ ಬಂದಗ್ರಹಾರದ ವಿಪ್ರರಂ ನೋಡಿ
ನಿಮ್ಮೂರ್ಗಳೊಳ್ ಬುದ್ಧಿವಂತರಪ್ಪವರೊಳರೆ
ಸುಮ್ಮಾನಿಗಳ್ ಕೋವಿದರ್ ನೀತಿವಿದರೊಳರೆ
ಎನೆ ಕೊಂಡಗೂಳಿಯ ಮಹಾಜನಂಗಳ್ ಕೇಳ್ದು
ಮನಮೊಸೆದು ನುಡಿದರತ್ಯುತ್ಸಾಹಮಂದಾಳ್ದು
ದೇವ ಎಮ್ಮಯ ಪುರದೊಳೋರ್ವ ಸಜ್ಜನರುಂಟು
ಭಾವಜ್ಞರತಿಸಿಯತರನುಪಮಾಸ್ಪದರುಂಟು
ಅವರ ನಾಮಂ ಕೇಶಿರಾಜನೆಂಬುದು ಧರೆಗೆ
ಅವರ ಶೀಲಂ ವಿಚಿತ್ರ ಸೊಗಯಿಪುದು ನಿಮಗೆ

ಎನೆ ನೃಪಂ ಹಾರರಂ ಕಳುಪಿಯವರಂ ಕರಿಸಿ
ಮನಸೊಲ್ದು ಹರುಷದಿಂದುಚಿತಾಸನದೊಳಿರಿಸಿ
ನವರತ್ನ ಖಚಿತ ನವ್ಯಾಭರಣವಂ ತೊಡಿಸಿ